ಜಯಂತಿ

ಕೊಳೆತ ಕೊಳವೆ :

❋

ಬಂದ ನೀರನೆಲ್ಲ ಬರಿದೆ ಒಳಗೊಳ್ಳುತ್ತ
ನಿಂದಲಿಯೆ ನಿಂದು ನೀ ಏತಕೆ ಕೊಳೆವೆ ಕೊಳವೇ!
ಹರಿವೆವೆಂಬ ಕಿರುದೊರೆಗಳ ತಿಳಿನೀರ ತಡೆತಡೆದು
ಹಡಿಕಿನೀರನು ಮಾಡಿ ಒಡಲ ತುಂಬುವೆ ನೀನದೇತಕಾಗಿ
ಜಗವ ಬದುಕಿಸುವ ಜಲವ ಕೊಳೆಯಿಸಿ,
ಜೀವಕುಲವ ಕೊಲ್ಲುವ ಮದ್ದ್ಯನಾಗಿಸಿ
ಮಾರ್ಪಡಿಸುವುದರಲ್ಲಿ ನಿನಗಾವ ಹೆಮ್ಮೆ, ಏನು ಹಿಗ್ಗು ?
ಪಡೆಪಡೆ ಹರಿಹಿಂಗದ ಕಾಲ್ಗಳನು,
ಬಿಡುಬಿಡು ಒಡಲೊಳು ತಡೆದ ನೀರನ್ನು !
ಹರಿವ ನೀರು ಹಸನೆಂಬುದನರಿಯೆಯಾ ?
ಹಸನಾದ ನೀರನುಂಡು ಹೊಸಪೊಸ ಬೆಳಸನು ಪಡೆದು
ಬುವಿಗೆ ಕವಳವನೀವುವು ಹೊಲ-ನೆಲಗಳು!
ತಿಳಿಯ ನೀರನು ಕುಡಿದು ಅಲರ ಗೊಂಚಲ ಹೊತ್ತು
ಬುವಿಯ ಸಿಂಗರಿಸಲಿವೆ ಹೂದೋಟಗಳು!
ನಿನ್ನ ಘನತೆಯ ಕಂಡು ತಲೆದೂಗುವ ತಾನು
ಲೋಗರ ಯೋಗಕ್ಷೇಮ ಬಯಸುವ ಕೆಳೆಯ ಕಾಲರಾಯ!

—ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ನಮ್ಮ ನಾಡಿನ ಜನರ ನೈತಿಕ ಅಧಃಪಾತ (ಸಂಪಾದಕೀಯ)
ಸಂಪಾದಕರು ೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
' ಕಾಲಭೈರವ ' ....

ಅನಾಗರಿಕರು (ಒಂದು ಜೀವನಕಥೆ)
' ಅಶ್ವತ್ಥ ' ಬನಾರಸ ೫

ಪ್ರವಾಸಿಕರ ಸ್ವರ್ಗ–ಹವಾಯಿ ದ್ವೀಪಗಳು (ಪ್ರದೇಶ ಪರಿಚಯ)
ಯು. ಎಸ್. ಐ. ಸರ್ವಿಸ್, ನವದಿಲ್ಲಿ ೧೪

ಶ್ರದ್ಧೆ (ಕವನ)
ಸೌ. ಪಾರ್ವತಿದೇವಿ ಹೆಗಡೆ, ವಿಜಾಪುರ ೧೬

ಇದೊ ಮಲಗಿದೆ ಸಾಗರ (ಕವನ)
ಶ್ರೀ. ' ರಂಜನ ' ಭಟ್ಟ ಮದ್ರಾಸ್ ೧೬

ಮಾಡಿದ್ದುಣ್ಣೋ ಮಾರಾಯಾ (ತರಂಗರೂಪಕ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೧೭

ಶ್ರೀ. ಜೋತಿ ಮಾರ್ಕಾಂಡರಾಯರು (ಸಂದರ್ಶನಾತ್ಮಕ ಪರಿಚಯ)
ಶ್ರೀ. ಗೋವಿಂದಮೂರ್ತಿ ದೇಸಾಯಿ ಬಿ.ಎ. (ಆನರ್ಸ್) ಧಾರವಾಡ ೨೨

ಏಳು ಬೀಳು (ಕವನ)
ಶ್ರೀ. ಬಿ. ಬಿ. ಹಿಂಗಮಿರೆ ಬಿ. ಎ. ಅಧಣಿ ೨೫

ಸಂಬಂಧ ಸಮಸ್ಯೆ (ಸಣ್ಣಕಥೆ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೨೬

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ (ಹಸುಳೆ ಮತ್ತು ಸೂಳೆ)
ಶ್ರೀ. ಎಸ್. ಆರ್. ಪಾಡಿ, ಕಲ್ಲಕಟ್ಟ ೩೦

ಪುಸ್ತಕ ವಿಮರ್ಶೆ (' ಸಾಡೇಸಾತ ' ಮತ್ತು ' ಮೈಲಿಗಲ್ಲು ')
ಶ್ರೀ. ಸಿ. ಎಸ್. ಕುಲಕರ್ಣಿ ಎಂ. ಎ. ಮತ್ತು 'ಭಾರತೀಶ' ೩೪

ಸಾದರ ಸ್ವೀಕಾರ (ಹೊದಿಕೆಯ ಒಳಪುಟದಲ್ಲಿ)

ಜಯಂತಿ

ಸಂಪುಟ ೩೫] [ಸಂಚಿಕೆ ೧

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪ ಡೆ ಯ ಬ ಹು ದಾ ದ
ಮಾಸಪತ್ರಿಕೆ

❖

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

❖

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

❖

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

❖

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ನಾಡಜನತೆಯ ನೈತಿಕ ಅಧಃಪಾತ

ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆತೊಡನೆ, ನಾವೆಲ್ಲರೂ ಸುಖ-ಸಮಾಧಾನಗಳಿಂದ ಬದುಕಬಹುದೆಂದು, ಬಹುಜನರು ಭರವಸೆಯನ್ನು ತಳೆದಿದ್ದರು. ಆದರಲ್ಲಿಯೂ ಮಹಾತ್ಮಾಗಾಂಧಿಯವರ ಆದರ್ಶರಾಜ್ಯ ರಾಮರಾಜ್ಯವಾಗಿದ್ದುದರಿಂದಲೂ, ಅವರ ಅನುಯಾಯಿಗಳೆಂದು ಹೇಳಿಕೊಳ್ಳುವವರ ಕೈಯಲ್ಲಿಯೇ ಶಾಸನಸೂತ್ರಗಳು ಬಂದುದರಿಂದಲೂ, ಭಾರತರಾಷ್ಟ್ರ ಇನ್ನು ಮೇಲೆ ಶಾಂತಿಸುಖಗಳ ಆಗರವಾಗುವುದೆಂದು ನಂಬಿಕೊಂಡಿದ್ದವರು ಎಷ್ಟೋ ಜನರು. ಆದರೆ ಆ ಜನರ ನಂಬಿಕೆ-ಭರವಸೆಗಳಿಗೆ ಇಂದು ದೊರೆತ ಫಲವು ಯಾವುದು ?

ಭಾರತವು ಒಂದು ರಾಷ್ಟ್ರವೆಂದು ಪರಿಗಣಿತವಾಗುತ್ತಿದ್ದರೂ, ಇಲ್ಲಿಯ ಇಮ್ಮೊಗದ ರಾಜಕೀಯ ವ್ಯವಸ್ಥೆ, ಜನತೆಯಲ್ಲಿ ನಿರಾಶೆ-ಅತೃಪ್ತಿಗಳನ್ನು ಹುಟ್ಟಿಸುತ್ತ ನಡೆದಿದೆ. ಭಾರತದ ವಿಭಾಗಗಳಾಗಿ ವಿಶಿಷ್ಟರೀತಿಯ ಪ್ರತ್ಯೇಕ ಸ್ವಾತಂತ್ರ್ಯವನ್ನು ಕಾಯ್ದಿರಿಸಿಕೊಂಡಿರುವ ಬೇರೆಬೇರೆ ರಾಜ್ಯಗಳಲ್ಲಿಯ ಸರಕಾರಗಳ ಆಡಳಿತ, ಈ ನಿರಾಶೆ-ಅತೃಪ್ತಿಗಳನ್ನು ಹೆಚ್ಚಿಸುವುದಕ್ಕೆ ಕಾರಣವಾಗಿದೆ. ದಿಲ್ಲಿಯ ಕೇಂದ್ರಸರಕಾರ, ರಾಜ್ಯಗಳಲ್ಲಿ ಏನಾದರೂ ಒಳ್ಳೆಯದನ್ನು ಮಾಡಬೇಕೆಂದು ಹವಣಿಸಿದರೂ, ರಾಜ್ಯಸರಕಾರಗಳ ಘಟನಾತ್ಮಕ ಅಧಿಕಾರ ಆದಕ್ಕೆ ಅಡ್ಡಿ-ಆಡಚಣೆಗಳನ್ನು ಒಡ್ಡುತ್ತಲಿದೆ.

ಜನತೆಯ ಕಲ್ಯಾಣವನ್ನೇ ಇಂದಿನ ರಾಜ್ಯಸರಕಾರಗಳು ತಮ್ಮ ನಿಜವಾದ ಆದರ್ಶವನ್ನಾಗಿ ಇರಿಸಿಕೊಂಡಿದ್ದರೆ, ಈ ಸರಕಾರಗಳ ಪ್ರಜಾಕಲ್ಯಾಣಸಾಧಕಕಾರ್ಯಗಳೂ, ಕೇಂದ್ರಸರಕಾರದ ಪ್ರಜಾಹಿತಕಾರಕ ಚಟುವಟಿಕೆಗಳೂ ಒಂದಕ್ಕೊಂದು ಪೋಷಕವಾಗಿ, ಪ್ರಜೆಗಳ ಹಿತವು ಸ್ವಲ್ಪಮಟ್ಟಿಗಾದರೂ ಸಾಧಿಸಬಹುದಾಗಿತ್ತು. ಆದರೆ ಸರಕಾರದ ಘಟಕವಾಗಿರುವ ವ್ಯಕ್ತಿಗಳು, ಗುಂಪುಗೂಡಿ ಮಾತನಾಡುವಾಗ ಪ್ರಜಾಕಲ್ಯಾಣದ ಬಗೆಗೇ ಮಾತಿನ ಮಳೆಸುರಿಸಿ, ವೈಯಕ್ತಿಕವಾಗಿ ಕಾರ್ಯಮಾಡಬೇಕಾದ ಸಂದರ್ಭ ಬಂದಾಗ, ಪ್ರಜೆಗಳ ಅಸ್ತಿತ್ವವನ್ನು ಮರೆತು ಬಿಟ್ಟು, ಕೇವಲ ಸ್ವಾರ್ಥಸಾಧಕ ಕಾರ್ಯಗಳಿಗೇ ಮನಸ್ಸನ್ನು ಕೊಟ್ಟುಬಿಟ್ಟರೆ, ಅಂತಹ ಘಟಕಗಳಿಂದಲೇ ನಿರ್ಮಾಣಗೊಂಡ ಸರಕಾರದಿಂದ ಪ್ರಜೆಗಳ ಕಲ್ಯಾಣವು ಸಾಧಿಸುವ ಬಗೆಯೆಂತು ? ದೊರೆತ ಅಧಿಕಾರದ ಬಲದಿಂದ, ಪ್ರಜೆಗಳನ್ನು ಹರಿದು ತಿನ್ನುವ ಕಾರ್ಯಕ್ಕೆ ತೊಡಗಿದರೆ, ಅಂತಹ ವ್ಯಕ್ತಿಯನ್ನೂ ಸರಕಾರವನ್ನೂ ಪ್ರಜಾಸಂಕುಲ ನಿಷ್ಠೆಯಿಂದ ಹೇಗೆ ಕಂಡೀತು ? ತಮ್ಮ ನಾಯಕರೆನಿಸಿಕೊಳ್ಳುವವರೇ ಸ್ವಾರ್ಥಸಾಧನೆಗಾಗಿ ಬೇಕುಬೇಕಾದಂತಹ ಅನ್ಯಾಯ ಅಧರ್ಮಗಳನ್ನು ಮಾಡುವುದನ್ನು ಕಣ್ಣಾರೆ ಕಂಡ ಪ್ರಜಾಜನವಾದರೂ ಏಕೆ ಸುಮ್ಮಗಿರುವುದು ? ಅದೂ ತನ್ನ ಸುಖ-ಸ್ವಾರ್ಥಗಳಿಗಾಗಿ ಅನ್ಯಾಯ-ಅಧರ್ಮಗಳ ದಾರಿಯನ್ನು ಪುರಸ್ಕರಿಸುವುದು. ಇದರಿಂದ, ಪಾಶವಬಲವು ನಿರ್ಬಲತೆಯಿರುವಲ್ಲಿ ಅನ್ಯಾಯ-ಅತ್ಯಾಚಾರಗಳನ್ನು ನಡೆಸುವುದು.

ಇಂದು ನಮ್ಮ ಸರಕಾರಗಳಲ್ಲಿರುವ ಅನೇಕ ವ್ಯಕ್ತಿಗಳ ಸ್ವಾರ್ಥ ಅವರನ್ನು ಕುರುಡರನ್ನಾಗಿ ಮಾಡಿಬಿಟ್ಟಿದೆ. ಅವರು ತಾವು ಶಾಶ್ವತವಾಗಿ ಜೀವಿಸುವೆವೆಂದು ಭಾವಿಸಿರುವಂತೆ ಕಾಣುತ್ತದೆ. ಆದುದರಿಂದಲೇ ತಮ್ಮ ಕೈಯಲ್ಲಿರುವ ಅಧಿಕಾರಸೂತ್ರ ಇನ್ನೊಬ್ಬರ ಕೈಗೆ ಹೋಗಬಾರದೆಂಬುದೇ ಅವರ ಹಗಲಿರುಳಿನ ಯೋಚನೆಯಾಗಿದೆ. ಹೋದೀತೆಂಬ ಭೀತಿ, ಅವರ ನೀತಿ-ನ್ಯಾಯಗಳ ಮಾರ್ಗವನ್ನೇ ಕಟ್ಟುಮಾಡಿ ಬಿಟ್ಟಿದೆ. ಆಡಳಿತದ ಅಧಿಕಾರವನ್ನು ತಮ್ಮ ಕೈಯಲ್ಲಿಯೆ ಉಳಿಸಿಕೊಳ್ಳಬೇಕೆಂದು, ವ್ಯಕ್ತಿಗಳಿಂದು, ಲೋಕಕಲ್ಯಾಣದ ಧರ್ಮ-ನೀತಿಗಳಿಗೆ ವಿರೋಧವೆನಿಸುವಂತಹ ಯಾವ ಹೀನಕಾರ್ಯಗಳನ್ನೂ ಮಾಡಲು ಹಿಂಜರಿಯದವರಾಗಿದ್ದಾರೆ.

ನಮ್ಮ ಮೈಸೂರು ರಾಜ್ಯದವರು ಹಿಂದುಳಿದವರು ಮುಂದುವರಿದವರು— ಎಂಬುವನ್ನು ನಿಂಗಡಿಸಿ ತೋರಿಸಲಿಕ್ಕಾಗಿ ಮಾಡಿದ ಕಟ್ಟಳೆಯು, ಮೇಲೆ ವಿವರಿಸಿದಂತಹ ವ್ಯಕ್ತಿಗಳ ಸ್ವಾರ್ಥಕ್ಕೊಂದು ಅತ್ಯುತ್ತಮವಾದ ಉದಾಹರಣೆಯಾಗಿದೆ. ಈ ಕಟ್ಟಳೆಯನ್ನು ಪುರಸ್ಕರಿಸುವವರು ವರ್ತಮಾನಕಾಲದ ವೈಯಕ್ತಿಕ ಸ್ವಾರ್ಥವನ್ನು ಮಾತ್ರ ಬಗೆದಿರುವರಲ್ಲದೆ, ನಾಡಿನ ಜನತೆಯ ಭವಿಷ್ಯದ ಅಭ್ಯುದಯದ ವಿಚಾರವನ್ನೇ ಮಾಡಿರುವುದಿಲ್ಲ. ಮುಂದುವರಿದವರನ್ನು ಸರಕಾರದ ಅಧಿಕಾರ-ಶಿಕ್ಷಣಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಬಹಿಷ್ಕರಿಸಿ, ನಿಜವಾಗಿಯೂ ಹಿಂದೆ ಉಳಿದವರನ್ನು ಮುಂದುವರಿಯದಂತೆ ಮಾಡಿ, ತಮ್ಮ ಕೈಯಲ್ಲಿಯೆ ಕೊನೆಯವರೆಗೂ ಆಡಳಿತದ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದು ಹೊಂಚು ಹಾಕಿರುವ ಇವರು, ಚಿರಜೀವಿಗಳೇ? ಹುಟ್ಟಿದವನು ಸಾಯಲೇಬೇಕು. ಸಾವು ಇವರ ಅಧಿಕಾರವನ್ನು ಉಳಿಸಲಾರದು; ಇಷ್ಟೇ ಅಲ್ಲ, "ಜನತಾದ್ರೋಹಿ" "ರಾಷ್ಟ್ರದ್ರೋಹಿ" ಎಂಬ ಅಪಕೀರ್ತಿಯ ಬಿರುದು ಇವರಿಗೆ ಕಟ್ಟಟ್ಟ ಮಾತು.

ಜನಸಮಾಜದಲ್ಲಿ ವರ್ಗಗಳನ್ನು ಕಲ್ಪಿಸುವುದೇ ಆದಲ್ಲಿ, ದ್ವೇಷ-ಮತ್ಸರಗಳನ್ನು ಹರಡಿ ಸ್ವಾರ್ಥಸಾಧಿಸಬೇಕೆಂಬ ದುರುದ್ದೇಶ ವಿರಬಾರದು; ವಿಷಮತೆಯನ್ನು ಸಮತೆಯ ಕಡೆಗೆ ಒಯ್ಯುವಂತಹ ವಿಧಾಯಕ ಸದುದ್ದೇಶವಿರಬೇಕು. ಸಮಾಜದಲ್ಲಿ ವೈಷಮ್ಯವನ್ನು ಹುಟ್ಟಿಸಿರುವ ಮುಖ್ಯವಸ್ತುವೆಂದರೆ ಸಂಪತ್ತು. ಶಿಕ್ಷಣ-ಸಂಸ್ಕೃತಿಗಳು ಈ ವೈಷಮ್ಯ ನಿರ್ಮಿತಿಗೆ ಗೌಣಕಾರಣಗಳೆಂದು ಹೇಳಬಹುದು; ಇಷ್ಟೆ ಏಕೆ, ನಿಜವಾದ ಶಿಕ್ಷಣಸಂಸ್ಕೃತಿಗಳು ಈ ವಿಷಮತೆಯನ್ನು ಕಡಮೆಮಾಡುವ ಸಾಧನಗಳಾಗಿಯೂ ನಿಲ್ಲಬಹುದು. ಸಂಪತ್ತಿನ ವೈಷಮ್ಯ ಮಾತ್ರ ಸಮಾಜದಲ್ಲಿ ಎಂದೂ ಸಮತೆಯನ್ನು ತರಲಾರದು. ನಮ್ಮ ಸರಕಾರ, ಹಿಂದುಳಿದವರು—ಮುಂದುವರಿದವರು—ಎಂಬುದನ್ನು ನಿರ್ಣಯಿಸುವಾಗ, ಇವರ ವಿಚಾರಮಾಡಿದೆಯೇ?

ಸಂಸ್ಕೃತಿ–ಶಿಕ್ಷಣಗಳು ಹೆಚ್ಚು-ಕಡಮೆಯ ಪ್ರಮಾಣದಲ್ಲಿ ನಮ್ಮ ನಾಡಿನ ಎಲ್ಲ ಜಾತಿಯ ಜನರಲ್ಲಿಯೂ ಕಂಡುಬರುವುವು. ಆದರೆ ಸಂಪತ್ತು ಮಾತ್ರ ಎಲ್ಲ ಜಾತಿಗಳವರಲ್ಲಿಯೂ— ಹೆಚ್ಚು ಕಡಮೆ ಪ್ರಮಾಣದಲ್ಲಾದರೂ— ಇದೆಯೆಂದು ಹೇಳಲು ಬರುವಂತಿಲ್ಲ. ಎಲ್ಲ ಜಾತಿಯ ಸಿರಿವಂತರೂ ಒಂದೆಜಾತಿಯವರಾಗುವರು; ಹಾಗೆ ಎಲ್ಲ ಜಾತಿಯ ಶಿಕ್ಷಣವಂತರೂ ಸಂಸ್ಕೃತಿಶಾಲಿಗಳೂ ಒಂದೆ ಜಾತಿಯವರಾಗಲಾರರು. ಭಾವನೆ ಅಭಿರುಚಿಗಳ ವ್ಯತ್ಯಾಸದ ಮೂಲಕ, ಈ ಜನರಲ್ಲಿ ಒಂದಿಲ್ಲೊಂದು ಬಗೆಯ ವರ್ಗಗಳು ನಿರ್ಮಾಣವಾಗುವುದು ಸ್ವಾಭಾವಿಕ. ಸಿರಿವಂತರಿಗೆ ಮಾತ್ರ ಸಂಪತ್ತು ಎಂಬುದೊಂದೇ ಸಾಮಾನ್ಯ ಧರ್ಮವಾಗುವುದರಿಂದ, ಅವರಲ್ಲಿ ಒಂದು ಬಗೆಯ ಐಕ್ಯ ತಲೆದೋರುವುದು. ಸಂಪತ್ತಿಗೆ ಸಮಾಜದಲ್ಲಿ ಒಂದು ವಿಶಿಷ್ಟ ಶಕ್ತಿ-ಸ್ವರೂಪ ಇದ್ದೇ ಇದೆ ಅಂತಹ ಸಂಪತ್ತಿದ್ದ ವ್ಯಕ್ತಿಗಳ ಐಕ್ಯ ಇನ್ನೂ ಹೆಚ್ಚಿನ ಪ್ರಮಾಣವನ್ನು ಪಡೆಯುವುದು. ಈ ಶಕ್ತಿ ಶಿಕ್ಷಣ-ಸಂಸ್ಕೃತಿಗಳನ್ನೂ ಆಳತೊಡಗುವುದು. ಇದರಲ್ಲಿಯ ಯಾವುದಾದರೂ ಭಾಗ ತನಗೆ ತೊಂದರೆ ಕೊಡಬಹುದೆಂದು ತೋರಿದರೆ, ಅದನ್ನು ತನ್ನ ಶಕ್ತಿಯಿಂದ ಸಹಜವಾಗಿ ಹುಡಿಗೂಡಿಸಿಬಿಡಲು ಸಿದ್ಧವಾಗುವುದು; ಸಮರ್ಥವಾಗುವುದು.

ನಮ್ಮ ಮೈಸೂರುಸರಕಾರಕ್ಕೆ ಸಮಾಜದಲ್ಲಿಯ ವಿಷಮತೆಯನ್ನು ಹೊಡೋಡಿಸಬೇಕೆಂಬ ನಿಜವಾದ ಸದ್ಬುದ್ಧಿಯಿದ್ದು ದಾದರೆ, ಜನರ ಆರ್ಥಿಕಸ್ಥಿತಿಯನ್ನು ನೋಡಿ ವರ್ಗಗಳನ್ನು ನಿರ್ಮಿಸಬೇಕಾಗಿತ್ತು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರಾದರೂ, ಶಿಕ್ಷಣ–ಸಂಸ್ಕೃತಿ ಸಂಪಾದನೆಗೂ ಹೊಟ್ಟೆಯ ಹಸಿವಿಗೂ ಬಾಯಿಬಾಯಿ ಬಿಡುವ ಜನರು ಆ ಜಾತಿಯವರಲ್ಲಿ ೧೦೦ ಕ್ಕೆ ೯೦ರಷ್ಟು ಜನರಿರುವರು. ಬ್ರಾಹ್ಮಣನಲ್ಲದ ಜಾತಿಗಳಲ್ಲಿ ಹುಟ್ಟಿದವರಾದರೂ, ಅನೇಕ ಜಾತಿಗಳಲ್ಲಿ ಸುಶಿಕ್ಷಿತರಾದ, ಹೊಟ್ಟೆತುಂಬ ಉಣ್ಣುವ ತಿನ್ನುವ ಜನರು ಬೇಕಾದಷ್ಟು ಇರುವರು. ಸರಕಾರದ ಕರ್ತವ್ಯವೇನು? ಹೊಟ್ಟೆಗಿಲ್ಲದವರಿಗೆ ಅನ್ನದ ದಾರಿಯನ್ನು ಕಲ್ಪಿಸಿಕೊಟ್ಟು ಬದುಕಿಸುವುದೋ— ಅಥವಾ ಯಾವುದೋ ಕಲ್ಪಿತ ಕಾರಣದಿಂದ, ತಮಗೆ ಬೇಡವಾಗಿದ್ದ ಜಾತಿಯವರನ್ನು ಕೂಳುಗೇಡುಮಾಡಿ ಕೊಲ್ಲುವುದೋ?

ಅಧಿಕಾರಮೋಹದ ಇಂದಿನ ಸರಕಾರದ ವ್ಯಕ್ತಿಗಳಿಗೆ, ಇಂದು ಒಂದು ಜಾತಿ ಬೇಡವಾದೀತು; ನಾಳೆ ಇನ್ನೊಂದು ಜಾತಿ ಬೇಡವಾದೀತು. ತಮ್ಮ ಸ್ವೈರಪ್ರವೃತ್ತಿಯನ್ನು ತಡೆಯಲು ಜಾಗೃತರಾಗಿ ಮುಂದೆ ಬರುವ ಅಲ್ಪಸಂಖ್ಯಾಕ ಜಾತಿಗಳು, ಇದೇ ಬಗೆಯ ಅನ್ಯಾನ್ನಗತಿಕ ದುರವಸ್ಥೆಗೆ ಈಡಾಗಬಹುದು. ಸದ್ಯ ಹಿಂದುಳಿದ ವರ್ಗದಲ್ಲಿ ಪರಿಗಣಿತವಾಗಿರುವ ಅಲ್ಪಸಂಖ್ಯಾಕ ಜಾತಿಗಳು, ತಾವು ಈ ಮೊದಲು ಇದ್ದ ಸ್ಥಿತಿಯಲ್ಲಿಯೇ ಉಳಿಯಲು ಸಿದ್ಧರಾದರೆ ಮಾತ್ರ, ಸರಕಾರ ಅವರನ್ನು ಸಹಾನುಭೂತಿಯಿಂದ ನೋಡುವ ನಾಟಕವನ್ನು ನಡೆಸೀತು. ಆದನ್ನು ಬಿಟ್ಟು ಪ್ರಜಾಪ್ರಭುತ್ವತತ್ತ್ವದ ಜಾಗೃತಿಯಿಂದ ಹಕ್ಕುಗಳನ್ನು ಕೇಳಲು ಮುಂದುವರಿದರೆ, ಇಂದು ಮುಂದುವರಿದವರಿಸಿಕೊಂಡವರಿಗೆ ಬೊರೆತ ಕಪಾಳವೋಕ್ಷ ಅವರಿಗೂ ದೊರೆತೀತು. ಇದನ್ನರಿತು ನಮ್ಮ ನಾಡಿನ ಜನತೆ, ಈ ಹಿಂದುಳಿದವರ ಕಟ್ಟಳೆಯ ವಿಚಾರದಲ್ಲಿ ಮುನ್ನೊಡಿ ನಡೆಯಬೇಕು. ಅವನ್ನು ಬಿಟ್ಟು ವರ್ತಮಾನ ಆಮಿಷವ ಭ್ರಮೆಯಿಂದ ಆ ಕಟ್ಟಳೆಯನ್ನು ಎತ್ತಿಹಿಡಿದರೆ, ಅದೊಂದು ನಮ್ಮ ನಾಡಿಗರ ನೈತಿಕ ಅಧಃಪಾತವೇ ಸರಿ!

— ಸಂಪಾದಕ

ಹೊಸ ವರ್ಷ ಪ್ರಾರಂಭವಾಯಿತು.
ಈ ವರ್ಷ ಜಯಂತಿಯ
ಚಂದಾದಾರರ ಬಳಗ ಬೆಳೆಯಲಿ!

ನಾ ಡ ನ ಡೆ

ಈ ಸಲದ ಕನ್ನಡ ಸಾಹಿತ್ಯಸಮ್ಮೇಳನ

ಬೀದರ್ ಜಿಲ್ಲೆಯ ಕಲ್ಯಾಣ ನಗರದಲ್ಲಿ, ಕಳೆದ ಬೇಸಗೆಯಲ್ಲಿ ಸೇರಲಿದ್ದ ಕನ್ನಡ ಸಾಹಿತ್ಯಸಮ್ಮೇಳನವು, ಹಟಾತ್ತಾಗಿ ಮುಂದುವರಿದ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಮುಂದುವರಿಯಲು ಅಂತಹ ವಿಶೇಷಕಾರಣಗಳೇನು ಒದಗಿದುವೆಂಬುದು, ಇದು ವರೆಗೂ ನಮ್ಮ ಜನರಿಗೆ ಕುತೂಹಲದ ಪ್ರಶ್ನೆಯಾಗಿಯೆ ಉಳಿದಿದೆ.

ನಮ್ಮ ನಾಡಿನಲ್ಲಿ ಬರು-ಬರುತ್ತ ಸಾರ್ವಜನಿಕ ಜೀವನದೇ ಉಪೇಕ್ಷೆ-ಔದಾಸೀನ್ಯಗಳಿಂದ ತುಂಬಿರುವುದು ವಿಷಾದದ ಸಂಗತಿಯಾಗಿದೆ. ಪರಕೀಯರ ಆಡಳಿತವಿರುವಾಗ ಭರದಿಂದ ಕಾರ್ಯ ಮಾಡುತ್ತಿದ್ದ ಸಾಂಸ್ಕೃತಿಕ—ಸಾಮಾಜಿಕ ಸಂಸ್ಥೆಗಳೆಲ್ಲ, ಇಂದು ತೀರ ಮುರುಕುಳಿ ಸ್ಥಿತಿಯಲ್ಲಿ ನಿಂತುಕೊಂಡಿವೆ—ಅಲ್ಲ—ಬಿದ್ದುಕೊಂಡಿವೆ. ಉತ್ತರ ಕರ್ನಾಟಕದಲ್ಲಿಯ ತೀರ ಹಳೆಯ ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಚಟುವಟಿಕೆಗಳೊಂದೂ ಕಣ್ಣಿಗೆ ಕಾಣದಂತಾಗಿವೆ! ಇದರಂತೆಯೆ ನಮ್ಮ ನಾಡಿನಲ್ಲಿಯ ಬೇರೆ ಸಂಘ-ಸಂಸ್ಥೆಗಳ ಅವಸ್ಥೆ.

ಹಿಂದಿನ ಕಾಲದಲ್ಲಿ ಸರಕಾರದ ಸಹಾಯಧನದ ಮೇಲೆ ಹೆಚ್ಚಾಗಿ ಕೈಯೂರದೆ, ಕೇವಲ ಜನತೆಯ ನೆರವಿನಿಂದಲೇ ಈ ಸಂಘ-ಸಂಸ್ಥೆಗಳು ನಡೆಯುತ್ತಿದ್ದುವು. ಇಂದು ಸರಕಾರ ಜನತೆಯದೇ ಆದುದರಿಂದ, ಅದರ ಮುಖಾಂತರವಾಗಿಯೇ ಎಲ್ಲ ಚಟುವಟಿಕೆಗಳು ನಡೆಯಬೇಕೆಂದು ನಮ್ಮ ಜನ ಭಾವಿಸಿದೆಯೋ ಏನೋ! ಮೊದಲಿನಂತೆ ಸಂಘ-ಸಂಸ್ಥೆಗಳತ್ತ ತಮ್ಮ ಕೊಡುಗೈಯನ್ನು ಮುಂದೆ ಮಾಡದು. ಇತ್ತ ಜನತೆಯದೇ ಎಂದು ಹೇಳಿಸಿಕೊಳ್ಳುವ ನಮ್ಮ ಮೈಸೂರು ಸರಕಾರಕ್ಕೆ, ಈ ಸಂಘ-ಸಂಸ್ಥೆಗಳ ಅಸ್ತಿತ್ವದ ಆವಶ್ಯಕತೆಯೇ ಎನಿಸುವುದಿಲ್ಲವೇನೋ!

ಇದ್ದುದರಲ್ಲಿಯೇ ಸರಕಾರದ ನೆರವನ್ನು ಪಡೆದು ನಡೆಯುವ ಸಂಸ್ಥೆಯೆಂದರೆ ಕನ್ನಡ ಸಾಹಿತ್ಯ ಪರಿಷತ್ತು. ಇಂದಿನ ಸಾಕ್ಷರತೆ ಹೆಚ್ಚಿದ ಸ್ಪೈರಪ್ರವೃತ್ತಿಯ ಯುಗದಲ್ಲಿ, ನಮ್ಮ ಸಾಹಿತ್ಯಪರಿಷತ್ತಿನಿಂದ ವಿಧಾಯಕ ಚಟುವಟಿಕೆಗಳು ಅವಿಚ್ಛಿನ್ನವಾಗಿ ನಡೆಯಬೇಕಾಗಿದೆ. ಪರಿಷತ್ತು ಇಂದು ನಿಸ್ಪೃಹವೃತ್ತಿಯಿಂದ—ನಿರ್ದಾಕ್ಷಿಣ್ಯವಾಗಿ—ಮಾರ್ಗದರ್ಶನ ಮಾಡದೆ ಹೋದರೆ, ನಮ್ಮ ಆಧುನಿಕ ಸಾಹಿತ್ಯ ಎಂತೆಂತಹ ಕಂದರ-ಕೊಳ್ಳಗಳ ದಾರಿಯನ್ನು ಹಿಡಿಯುವುದೋ ತಿಳಿಯದಂತಾಗಿದೆ.

ವರುಷ-ವರುಷವೂ ಸೇರುವ ಕನ್ನಡ ಸಾಹಿತ್ಯಸಮ್ಮೇಳನ, ಕ. ಸಾ. ಪರಿಷತ್ತಿನ ಸಾಹಿತ್ಯಿಕ ಮಾರ್ಗದರ್ಶಕ ಚಟುವಟಿಕೆಯ ಒಂದು ಮಹತ್ತ್ವದ ಅಂಗ. ಕಲ್ಯಾಣದಲ್ಲಿ ಕೂಡದೆ ಇದ್ದ ಸಾಹಿತ್ಯ ಸಮ್ಮೇಲನ, ಇನ್ನು ಮೇಲೆ ಎಲ್ಲಿ—ಯಾವಾಗ ಕೂಡಲಿದೆಯೆಂಬುದರ ನಿಶ್ಚಿತ ನಿರ್ಣಯವೂ ಆದಂತಿಲ್ಲ. ಸರಕಾರದ ನೆರವನ್ನು ಪಡೆಯದೆ ಒದ್ದಾಡುತ್ತಿರುವ ಸಂಘ-ಸಂಸ್ಥೆಗಳಲ್ಲಿ ಕಂಡುಬರುತ್ತಿರುವ ಉಪೇಕ್ಷೆ-ಉದಾಸೀನತೆಗಳು, ಸಾಕಷ್ಟು ಸರಕಾರದ ನೆರವನ್ನು ಪಡೆಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇರಬೇಕಾದ ಕಾರಣವಿಲ್ಲ. ಆದುದರಿಂದ ಪರಿಷತ್ತಿನ ಕಾರ್ಯಕ್ರಮದ ಪಟ್ಟಿಯಂತೆ ಸಾಹಿತ್ಯ ಸಮ್ಮೇಳನ ನಡೆಯಲೇ ಬೇಕಾಗಿತ್ತು. ಬೇರೆಯ ಕಡೆಗೆ ಅಸಾಧ್ಯವೆನಿಸಿದರೆ, ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ತಾನೆ ಹೊಣೆಹೊತ್ತು, ತಾನಿರುವ ನಗರದಲ್ಲಿಯೆ ನಡೆಯಿಸಬೇಕಲ್ಲದೆ, ಸಮ್ಮೇಳನದ ಅಧಿವೇಶನವನ್ನು ಮುಂದೆ ದೂಡಬಾರದು; ನಿಲ್ಲಿಸಿಯೂ ಬಿಡಬಾರದು.

ಸಾಕ್ಷರತೆ ಮತ್ತು ಮನಸ್ಸಂಸ್ಕೃತಿ

ಭಾರತದ ತುಂಬ ನೋಡಿದಲ್ಲೆಲ್ಲ ಸಾಕ್ಷರತೆಯನ್ನು ಹೆಚ್ಚಿಸ ಬೇಕೆಂಬ ಪ್ರಯತ್ನಗಳು ರಭಸದಿಂದ ನಡೆದಿವೆ. ಕೇಂದ್ರಸರಕಾರವೂ ರಾಜ್ಯಸರಕಾರಗಳೂ ಇದಕ್ಕಾಗಿ ಹಣದ ಬೆಟ್ಟವನ್ನೇ ಕರಗಿಸಲು ಸಿದ್ಧವಾಗಿವೆ. ಆದರೆ, ಸಾಕ್ಷರತೆಯ ಶಸ್ತ್ರವನ್ನು ಜನರ ಕೈಯಲ್ಲಿ ಕೊಡುವಾಗ, ಅದರ ಸದುಪಯೋಗವಾಗುವಂತಹ ಸುಸಂಸ್ಕೃತ ಮನಸ್ಸನ್ನು ಸಿದ್ಧಗೊಳಿಸುವ ಅಗತ್ಯದ ಕಡೆಗೂ ನಮ್ಮ ಸಾಕ್ಷರತೆಯ ಅಭಿಮಾನಿಗಳು ಲಕ್ಷ್ಯಕೊಡಬೇಕು.

ಹೊಸಕಾಲದಲ್ಲಿ ಬಯಸಬೇಕಾಗಿರುವ ಮಾನವವ್ಯಕ್ತಿಗೆ ಸಾಕ್ಷರತೆಯೊಂದು ಉಪಯುಕ್ತ ಸಾಧನವೆಂಬ ಮಾತನ್ನು ನಾವೂ ಒಪ್ಪುತ್ತೇವೆ. ಆದರೆ ಸಾಕ್ಷರತೆಯೆಂಬುದು ನಮ್ಮ ದೇಶದಲ್ಲಿ ಮಾನವನ ಜೀವನದ ಆದರ್ಶವನ್ನೇ ತಪ್ಪಿಸುತ್ತಿದೆ; ಅವನನ್ನು ಕರ್ಮವ್ಯಭಿಚಾರಿಯನ್ನಾಗಿ ಮಾಡುತ್ತಿದೆ. ಏಕೆಂದರೆ ಇಂದು ಸಾಕ್ಷರರ ಕಣ್ಣಿದುರು ಇರುವ ಗುರಿಯೆಂದರೆ, ಕುರ್ಚಿಯ ಮೇಲೆ ಕುಳಿತು—ದೇಹಶ್ರಮವಿಲ್ಲದೆ—ಮಾಡುವ ಸರಕಾರೀ ನೌಕರಿ. ಸಾಕ್ಷರತೆಯಿಂದು ನಮ್ಮ ಪರಂಪರಾಗತ ಉದ್ಯಮ-ವ್ಯವಸಾಯಗಳಿಂದ ಜನತೆಯನ್ನು ವಿಮುಖಗೊಳಿಸುತ್ತಲಿದೆ. ಈ ಉದ್ಯಮ-ಗೇಡಿಗಳಾದ ಸಾಕ್ಷರರಲ್ಲಿ—ಪರಿಮಿತವಾಗಿರುವ—ಸರಕಾರೀ ನೌಕರಿಗಳ ಬಗೆಗೆ ಮೇಲಾಟ ನಡೆದು, ಸಮಾಜದಲ್ಲಿ ಅಸಮಾಧಾನ ಆಟ ಪಾಡುವುದಲ್ಲದೆ, ನಿರುದ್ಯೋಗಿಗಳ ಸಂಖ್ಯೆಯೂ ಬೆಳೆದು ನಿಲ್ಲಬಹುದಾಗಿದೆ.

ಸಾಕ್ಷರತೆ ನಮ್ಮನ್ನು ಒಂದು ಬಗೆಯ ಆಧುನಿಕ ನಾಗರಿಕತೆಯ ಸಾಗರದಲ್ಲಿ ಜಿಲ್ಲುವುದು. ಈ ನಾಗರಿಕತೆ ನಮ್ಮ ಹೊರಗಿನ ವೇಷ-ಭೂಷಣಗಳನ್ನು ತಿದ್ದಬಹುದಲ್ಲದೆ, ರಾಷ್ಟ್ರದ ಸುಖ-ಸಮಾಧಾನಗಳಿಗೆ ಆವಶ್ಯಕವಾದ ಹೃದಯ-ಮನಸ್ಸುಗಳನ್ನು ಖಂಡಿತ ತಿದ್ದಲಾರದು. ತಿದ್ದಲಾರದಿಷ್ಟೇ ಅಲ್ಲ; ಅವುಗಳನ್ನು ಇನ್ನಿಷ್ಟು ವಿಕೃತಗೊಳಿಸುವುದು. ಇಂತಹ ಸಾಕ್ಷರರು ಮೈಮಣಿಸಿ ದುಡಿಯಲು ಸಿದ್ಧರಾಗರು; ಸುಲಭವಿದಿಂದ ಸರಕಾರೀ ನೌಕರಿಗಳನ್ನು ದೊರಕಿಸಿದವರೂ, ಸಜ್ಜನ ಭಾವನೆಯಿಂದ—ಪ್ರಾಮಾಣಿಕರಾಗಿ—ಕಾರ್ಯವನ್ನು ಮಾಡರು.

ಆಧುನಿಕ ನಾಗರಿಕತೆ ವ್ಯಕ್ತಿಯನ್ನು ಯಾವಾಗಲೂ ಅತೃಪ್ತಿಯಲ್ಲಿ ಇಟ್ಟಿರುವಂತಹದು. ಆದುದರಿಂದ ಆತನಿಗೆ ತನ್ನ ಸ್ವಾಭಾವಿಕ ಸಂಪಾದನೆಯಲ್ಲಿ ತಣಿವು ಮೊರೆಯುವುದಿಲ್ಲ. ಆತನ ಕೃತ್ರಿಮ ರೀತಿಯ ಸಂಪಾದನೆ ಸರಕಾರದ ಸುವ್ಯವಸ್ಥೆಯನ್ನು ಕೆಡಿಸಿಬಿಡುವುದು.

ಆದುದರಿಂದಲೇ ನಮ್ಮ ಸರಕಾರಗಳು ಸಾಕ್ಷರತೆಯ ವಿಷಯಕವಾಗಿ ನಮ್ಮ ಜನರಲ್ಲಿ ನೆಲೆಯೂರಿದ ಹಳೆಯ ಭಾವನೆಯನ್ನು ಹೊಡೆದೋಡಿಸುವ ಕಾರ್ಯವನ್ನು ಮೊದಲು ಮಾಡಬೇಕು. ಈ ಕಾರ್ಯವೆಂದರೆ ಜನತೆಯ ಮನಸ್ಸು ಹೃದಯಗಳನ್ನು ಹದಗೊಳಿಸಿ, ಅಲ್ಲಿ ನಿಜವಾದ ಮಾನವೀಯ ಭಾವದ ಬೆಳಕನ್ನು ಚೆಲ್ಲುವುದು. ಈ ಕಾರ್ಯ ನಡೆದಾಗಲೇ ನಮ್ಮ ರಾಷ್ಟ್ರಕ್ಕೆ ಅಭ್ಯುದಯದ ಕಾಲವು ಸಮೀಪಿಸೀತು.

ಗೌರವಲಾಲಸೆ—ಮೆರವಣಿಗೆಯ ಮನೋವೃತ್ತಿ !

ನಮ್ಮ ಸಾಕ್ಷರಜನತೆಯ ಮನಸ್ಸು-ಹೃದಯಗಳನ್ನು ಹೆಚ್ಚಾಗಿ ವಿಕೃತಗೊಳಿಸುತ್ತಿರುವವರೆಂದರೆ, ಇಂದಿನ ನಮ್ಮ ಪ್ರಜಾ-ಪ್ರಭುತ್ವವನ್ನು ನಡೆಯಿಸುತ್ತಿರುವ ನಾಯಕರು ಮತ್ತು ಅಧಿಕಾರಿಗಳು. ಇವರು ಗೌರವಲಾಲಸೆ, ಮೆರವಣಿಗೆಯ ಆಶೆ—ಇವುಗಳನ್ನು ಬಿಟ್ಟು ಸೇವಾಬುದ್ಧಿಯ ತ್ಯಾಗಜೀವನಕ್ಕೆ ಸಿದ್ಧರಾಗದೆ ಹೋದರೆ, ನಮ್ಮ ಸಾಕ್ಷರಜನತೆಯ ಮುಖವು ಇನ್ನೊಂದು ಕಡೆಗೆ ತಿರುಗಲು ಸಾಧ್ಯವೇ ಇಲ್ಲ. ನಮ್ಮ ಪ್ರತಿಯೊಬ್ಬ ಸಾಕ್ಷರನ ಮನದೆದುರೂ ಈ ಗೌರವ-ಮೆರವಣಿಗೆಗಳು ಬಂದು ನಿಂತು, ಬೆರಳಾಡಿಸಿ ಎಡಿಸುವುವು. ಇವುಗಳನ್ನೇ ಆತ ಬಯಸಿ ಬೆನ್ನು ಹತ್ತಿ ರಾಷ್ಟ್ರಕ್ಕೆ ಅತ್ಯಂತ ಆವಶ್ಯಕವಾಗಿರುವ ಬೇರೆ ಕರ್ಮಗಳನ್ನು ಅವನು ಬಿಟ್ಟುಬಿಡುವನು. ಈಗಾಗಲೇ ಇದರ ದುಷ್ಪರಿಣಾಮವನ್ನು ನಮ್ಮ ರಾಷ್ಟ್ರದ ಜೀವ-ಜೀವಾಳವಾದ ಹಳ್ಳಿಗಳು ಸಾಕಷ್ಟು ಅನುಭವಿಸುತ್ತಿವೆ.

ಇಂದು ನಮ್ಮ ನಾಡಿನಲ್ಲಿ ಸರಕಾರದ ಅಧಿಕಾರ-ನೌಕರಿಗಳ ಹೊರತು, ಮಿಕ್ಕ ಯಾವ ಉದ್ಯಮ-ವ್ಯವಸಾಯಗಳಿಗೂ ಗೌರವವಿಲ್ಲ; ಮನ್ನಣೆ-ಮೆರವಣಿಗೆಗಳಿಲ್ಲ. ಎಂತಲೇ ಹಳ್ಳಿಯ ಜನರಿಂದು ಯಾವುದೋ ಬಿಸಿಲುಗುದುರೆಯ ಬೆನ್ನು ಹತ್ತಿ, ತಮ್ಮ ಉದ್ಯೋಗ ವ್ಯವಸಾಯಗಳಿಂದ ಚ್ಯುತರಾಗುತ್ತ ಹೊರಟಿದ್ದಾರೆ. ಇದು ಒಳ್ಳೆಯ ಲಕ್ಷಣವೇನೂ ಅಲ್ಲ ಆದುದರಿಂದ ಈಗ ನಮ್ಮ ಸರಕಾರೀ ಅಧಿಕಾರಿಗಳು ತಮ್ಮ ಗೌರವಲಾಲಸೆಯನ್ನೂ ಮೆರೆವಣಿಗೆಯ ಆಶೆಯನ್ನೂ ಬಿಟ್ಟು, ರಾಷ್ಟ್ರಕ್ಕೆ ಅಗತ್ಯವಾದ ಪ್ರತಿಯೊಬ್ಬನ ಕರ್ಮವೂ ತಮ್ಮ ಕರ್ಮದಿಂದ ಯಾವ ರೀತಿಯಿಂದಲೂ ಕಡಮೆಯದಲ್ಲವೆಂಬುದನ್ನು, ಜನತೆಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಹೀಗೆ ಮಾಡಿಕೊಡದೆ ಹೋದಲ್ಲಿ, ನಮ್ಮ ರಾಷ್ಟ್ರದ ಸಾಕ್ಷರತೆ ನಮ್ಮ ಹಳ್ಳಿಗಳಲ್ಲಿ ಒಬ್ಬ ಬಡಿಗನನ್ನೂ ಉಳಿಸಲಾರದು; ಒಬ್ಬ ಕಮ್ಮಾರನನ್ನೂ ಉಳಿಸಲಾರದು. ಭೂಮಿಯಿದ್ದೂ ಬಿತ್ತುವ ಒಕ್ಕಲಿಗರೂ, ಬೆಳೆಮಾಡುವ ಕೂಲಿಯವರೂ ಕಣ್ಣಿಗೆ ಕಾಣದಂತಾಗಬಹುದು.

ಸಮತೆಯೆಂಬುದು ನಿಜವಾದ ಸಮತಾಬುದ್ಧಿಯಿಂದ ರೂಪುಗೊಳ್ಳುವುದಲ್ಲದೆ, ಬರೀ ಬಾಯಿ ಬುರುಡೆಯ ವ್ಯಾಖ್ಯಾನ ಪ್ರವಚನಗಳಿಂದ ರೂಪುಗೊಳ್ಳಲಾರದು. ಈ ಮಾತನ್ನು ನಮ್ಮ ರಾಜಕೀಯ ನಾಯಕರೂ, ಸರಕಾರೀ ಅಧಿಕಾರಿಗಳೂ ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕು.

ಹಿಂದುಳಿದ ಜಾತಿಯವರ ಹಲುಬು

ಭಾರತೀಯ ಸಮಾಜದಲ್ಲಿ ಪತಿತರೆಂದು ಪರಿಗಣಿತರಾದ ಹರಿಜನರನ್ನು ಮೇಲೆ ಎತ್ತುವ ಕಾರ್ಯವನ್ನು, ಇಂದಿನ ಭಾರತೀಯ ಸರಕಾರಗಳೆಲ್ಲವೂ ಕೈಕೊಂಡಿವೆ. ಭಾರತೀಯ ಸಮಾಜವು ಹಲವು ಕಾಲದಿಂದ ಮಾಡುತ್ತ ಬಂದಿದ್ದ ಅಪರಾಧದ ಪರಿಹಾರವೇನೋ ಎಂಬಂತೆ, ಇಂದು ಹರಿಜನರಿಗೆ ಸರ್ವತೋಮುಖವಾದ ಜೀವನಸೌಕರ್ಯಗಳು ದೊರೆಯುತ್ತಲಿವೆ. ಆದರೆ ಹರಿಜನರಷ್ಟೇ ಪತಿತರೂ, ಹತ್ತಿಕ್ಕಲ್ಪಟ್ಟವರೂ, ಹಿಂದುಳಿದವರೂ ಇರುವ ಜಾತಿಗಳ ಜನರು ನಮ್ಮ ದೇಶದಲ್ಲಿ ಸಾಕಷ್ಟಿರುವರು.

ಹರಿಜನರ ಉದ್ಧಾರದ ಅಗತ್ಯನಿರುವಂತೆ ಈ ಬೇರೆ ಪತಿತ ಜಾತಿಗಳ ಜನರ ಉದ್ಧಾರಕಾರ್ಯವೂ ಅತ್ಯಗತ್ಯವಾಗಿದೆ. ಮುಂಬಯಿ ಸರಕಾರವು ಈ ಪತಿತ ಜಾತಿಗಳವರನ್ನು 'ಪರಿಶಿಷ್ಟ ಜನಾಂಗ' ಎಂದು ಹೆಸರಿಟ್ಟು, ಇವರ ಉದ್ಧಾರದ ಕಡೆಗೂ ತನ್ನ ಲಕ್ಷ್ಯವನ್ನು ಹರಿಸಿತ್ತು. ಎಂತಲೇ ಮೊದಲು ಮುಂಬಯಿ ರಾಜ್ಯಕ್ಕೆ ಸೇರಿದ ಕರ್ನಾಟಕ ಪ್ರದೇಶದಲ್ಲಿ, ಬೇರೆ ಬೇರೆ ನಗರ-ಪಟ್ಟಣಗಳಲ್ಲಿ ಈ ಜಾತಿಗಳ ವಿದ್ಯಾರ್ಥಿಗಳಿಗಾಗಿ ಪುಕ್ಕಟೆ ವಸತಿಗೃಹಗಳನ್ನು ನಡೆಯಿಸಿಕೊಂಡು ಬಂದಿತ್ತು. ಅಂತಹ ವಸತಿಗೃಹಗಳು, ಉತ್ತರ ಕರ್ನಾಟಕದಲ್ಲಿ ಇದುವರೆಗೂ ಬದುಕಿಕೊಂಡು ಬಂದಿವೆ.

ಮೈಸೂರು ಸರಕಾರದವರು ಹೊಸತಾಗಿ ಮಾಡಿದ ಕಟ್ಟಳೆಯ ಮೇರೆಗೆ, 'ಪರಿಶಿಷ್ಟ ಜನಾಂಗ' ಎಂಬ ವಿಭಾಗವು ನಷ್ಟವಾಗಿ, ಈ ವಿಭಾಗದಲ್ಲಿ ಸೇರಿಕೊಳ್ಳುವ ಜಾತಿಗಳವರೂ ಹಿಂದುಳಿದವರ ವರ್ಗದಲ್ಲಿ ಸೇರಿಕೊಂಡು ಬಿಟ್ಟಿದ್ದಾರೆ. ಆದುದರಿಂದ ಇದುವರೆಗೆ ನಡೆದುಕೊಂಡು ಬಂದಿದ್ದ 'ಪರಿಶಿಷ್ಟ ಜನಾಂಗ'ದ ವಸತಿಗೃಹಗಳನ್ನು ಇನ್ನು ಹೇಗೆ ನಡೆಸಿಕೊಂಡು ಹೋಗಬೇಕೆಂಬುದು ಒಂದು ಶಾಸನಿಕ ಸಮಸ್ಯೆಯಾಗಿ ಕಾಡಬಹುದಾಗಿದೆ.

ಇದುವರೆಗೆ ಈ ವಿದ್ಯಾರ್ಥಿವಸತಿಗೃಹಗಳಲ್ಲಿ ಕೆಲವೊಂದು ವಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ದೊರೆಯುತ್ತಿತ್ತು. ಈಗ ಬಾಹ್ಮಣರು ಹರಿಜನರು ಇವರನ್ನು ಬಿಟ್ಟು ಮಿಕ್ಕ ಜಾತಿಗಳವರೆಲ್ಲರೂ ಹಿಂದುಳಿದವರ ಗುಂಪಿಗೆ ಸೇರಿಕೊಂಡು ಬಿಟ್ಟಿದ್ದಾರೆ. ಹೀಗಿರುವಾಗ 'ಪರಿಶಿಷ್ಟ ಜನಾಂಗ'ದವರಿಗಾಗಿ ಇರುವ ವಸತಿಗೃಹಗಳನ್ನು ನಿಲ್ಲಿಸಿಬಿಡಬೇಕು ಒಂದು; ಇಲ್ಲವೆ ಅವುಗಳನ್ನು ಹಿಂದುಳಿದವರ ವಸತಿಗೃಹಗಳೆಂದು ಹೆಸರಿಟ್ಟು ನಡೆಯಿಸಬೇಕು ಒಂದು. ನಿಲ್ಲಿಸಿಬಿಟ್ಟರೆ, ನಿಜವಾಗಿಯೂ ಹಿಂದುಳಿದವರ ಜಾತಿಗಳ ಜನರಿಗೆ ಒಂದು ದೊಡ್ಡ ಹಾನಿ; ಮುಂದುವರಿಸಿದರೆ, ಎಲ್ಲ ಹಿಂದುಳಿದವರಿಗೂ ಆ ಪುಕ್ಕಟೆ ವಸತಿಗೃಹದಲ್ಲಿ ಅವಕಾಶ ಕಲ್ಪಿಸಿಕೊಡಬೇಕಾಗುವುದು. ಇದರಿಂದ, ದೊರೆಯಬೇಕಾದ ಜಾತಿಗಳವರಿಗೆ ನೆರವು ದೊರೆಯದೆ, ಇನ್ನಾರಿಗೋ ಅದು ಹೆಚ್ಚಾಗಿ

(ಹಿಂದಿನ ಪುಟ ನೋಡಿರಿ)

★ ಅನಾಗರಿಕರು ★

[ಒಂದು ಜೀವನಕಥೆ]

"ಅಶ್ವತ್ಥ"

ಎಲ್ಲಿ ಸೌಂದರ್ಯ ಆರೋಗ್ಯಗಳಿವೆ, ಎಲ್ಲಿ ಬಲವಾದ ಸಮಾಜಿಕ ಸಂಘಟನೆಯಿದೆ, ಯಾರು ಒಂದು ನೀತಿಯ ಕಟ್ಟು-ಕಟ್ಟಳೆಗಳಲ್ಲಿ ನಡೆಯುತ್ತಾರೆ, ಯಾರಿಗೆ ತ್ಯಾಗದ ಕಲ್ಪನೆಯಿದೆ—ಅಂತಹ ನಾಗಾಜನರನ್ನು ಅನಾಗರಿಕರೆಂದು ಗಣಿಸಬಹುದೇ ನಾವು? ಅಂತಹ ಜನರ ಮೇಲೆ ಪಶುತನದ ಒತ್ತಾಯ ಮಾಡಲು ಮುಂದುವರಿದ ಸೈನಿಕರ ನಾಗರಿಕತನಕ್ಕೆ ನಾವು ಏನೆಂದು ಹೇಳಬೇಕು ?

೧

ನನ್ನ ಘೂರ್ಕಾ ರೆಜಿಮೆಂಟ್ ಕೊಹಿಮಾದಲ್ಲಿದ್ದಾಗ, ಒಂದು ದಿನ ನನಗೂ ಷಿಕಾರಿಯ ಮೇಲೆ ಮನಸ್ಸಾಯಿತು. ಪತ್‌ಕಾಯ್ ಸಾಲಿನ ನಾಗಾ ಬೆಟ್ಟಗಳಲ್ಲಿ, ಶಿವಪುರಿಯ ಸುತ್ತ ಸೊಗಸಾದ ಬೇಟೆ ಸಿಕ್ಕುವುದೆಂದು ನಮ್ಮ 'ಕ್ಲಬ್'ನಲ್ಲಿ ಹಲವು ಬಾರಿ ಕೇಳಿದ್ದು ಅದನ್ನೇ ಆರಿಸಿಕೊಂಡೆ. ಲೆಫ್ಟಿನೆಂಟ್ ಥಾಪಾನಿಗೆ ಹೇಳಿಬಿಟ್ಟರೆ ಎಲ್ಲವೂ ನಡೆದು ಬಿಡುವ ಭರವಸೆಯಿದ್ದು ಆತನಿಗೆ ಹೇಳಿಕಳುಹಿಸಿದೆ. ಥಾಪಾ ಎರಡನೆಯ ಯುದ್ಧದ ಬರ್ಮಾರಂಗದಲ್ಲಿ ಭಾಗವಹಿಸಿ, ಸಿಂಗಪುರದಿಂದ ಕೊಹಿಮಾದವರೆಗೂ ಕಾಡು-ಮೇಡುಗಳಲ್ಲಿ ಹಿಂದೆ ಮುಂದೆ ಅಲೆದಾಡಿದ್ದ. ಕೊಹಿಮಾವ ಸುತ್ತುಮುತ್ತಿನ ಗುಡ್ಡ ಗಾಡಂತೂ ಅವನಿಗೆ ಬಹಳ ಚೆನ್ನಾಗಿ ಪರಿಚಯದ್ದಾಗಿತ್ತು. ಮೇಲಾಗಿ ಅವನಿಗೆ ಷಿಕಾರಿಯೆಂದರೆ ಎಷ್ಟು ಉತ್ಸಾಹವೆನ್ನುವುದು ಅವನ ರಜೆಯ ಅರ್ಜಿಗಳಿಂದ ಗೊತ್ತಾಗಿದ್ದಿತು. ಥಾಪಾ ಪ್ರಸಿದ್ಧ ಗುರಿಗಾರನೆಂದು— Crack shot ಅನ್ನುತ್ತಾರಲ್ಲ ಹಾಗೆ—ಹೆಸರು ಪಡೆದಿದ್ದ. ಎಷ್ಟೋ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಹೊಂದಿದ್ದನೆಂದೂ ತಿಳಿದಿದ್ದೆ.

ಥಾಪಾನ ದಿಟ್ಟ ಆಕಾರ ಬಾಗಿಲಿನಲ್ಲಿ ಕಾಣಿಸಿಕೊಂಡತು. ಒಳಗೆ ಕಾಲಿಟ್ಟವನೆ ಸೆಟೆದು ನಿಂತು, ಹೆಜ್ಜೆ ಜೋಡಿಸಿ ಬಡಿದು, ಸೈನ್ಯದ ಸಲ್ಯೂಟ್ ಮಾಡಿದ. ಅವನನ್ನು ನೋಡುವುದೆ ಒಂದು ಸಂತೋಷ; ಅಂಥ ಸೊಗಸಾದ ಯೋಧ. ಅವನ ಮುಖದ ಮೇಲಿನ ಮೂರು ಗಾಯದ ಕರೆಗಳು, ಉಬ್ಬಿದ ಎದೆಯ ಮೇಲಿದ್ದ ಎರಡು ಸಾಲು ರಿಬ್ಬನ್ ಮತ್ತು ನಾಲ್ಕಾರು 'ಮೆಡಲು'ಗಳು, ಅವನ ಕೆಚ್ಚಿದೆಯ ಕಟ್ಟಾಳುತನಕ್ಕೆ, ಕಷ್ಟ ಸಹಿಷ್ಣುತೆಗೆ, ಸ್ವಾಮಿನಿಷ್ಠೆಗೆ, ಯುದ್ಧ ಸಾಹಸಕ್ಕೆ ಸಾಕ್ಷಿಯಾಗಿದ್ದುವು. ಕೆಲಸ ಜರುರುಕು, ಎಷ್ಟೋ ಅಷ್ಟೇ ಮಾತು, ಸ್ವಭಾವ ಗಂಭೀರ, ಮುಖದ ಮೇಲೆ ಯಾವ ಭಾವವೂ ಕಾಣಿಸದು— Poker face ಅನ್ನುವ ಹಾಗೆ—, ಒಟ್ಟಿನಲ್ಲಿ ಒಪ್ಪಬೇಕಾದಂಥ ಬಯಸಬೇಕಾದಂಥ ಸೈನ್ಯದ ಅಧಿಕಾರಿ. ಬಹಳ ಕಠಿಣ, ಕ್ರೂರನೇ ಎಂದು ಅವನ ಕೆಳಗಿನವರು ಅಂದುಕೊಳ್ಳುತ್ತಿದ್ದರಂತೆ. ಅಲ್ಲದೆ 'ಹೆಂಡ, ಹೆಣ್ಣು' ಎಂದರೆ ಹಾಗೇ ಎನ್ನುವ ಅಪವಾದವೂ ಅವನಿಗೆ ಇದ್ದಿತು. ಆದರೇನು, ಯಾವ ದೂರೂ ನನ್ನೆದುರಿಗೆ ಬಂದಿರಲಿಲ್ಲ; ಇಷ್ಟಕ್ಕೂ ಯಾರನ್ನು ತಾನೆ ಪರಿಪೂರ್ಣರಾಗಿರುತ್ತಾರೆ ?

ಥಾಪಾನಿಗೆ ಕುರ್ಚಿಯನ್ನು ತೋರಿಸುತ್ತ ನನ್ನ ನಿರ್ಧಾರವನ್ನು ತಿಳಿಸಿದೆ. "ಆಗಲಿ ಸರ್, ಏರ್ಪಾಡು ಮಾಡ್ತೀನಿ" ಅವನು ಕುರ್ಚಿಯನ್ನು ಒರಗಿ ನಿಂತುಕೊಂಡೇ ಹೇಳಿದ.

"ನೀವೂ ಬರಬೇಕಲ್ಲ ?"

"ಆಗಲಿ ಸರ್ !" ಸ್ವಲ್ಪ ಯೋಚಿಸುತ್ತ ಹೇಳಿದಂತೆ ಕಂಡಿತು.

ಹೊರಡುವ ದಿನವನ್ನು ಗೊತ್ತುಮಾಡಿದೆವು.

ಹೀಗೇ ನಾವು ಒಂದು ಸಂಜೆ 'ಜೀಪ್' ಮತ್ತು ಎರಡು ಟ್ರಕ್‌ಗಳಲ್ಲಿ, ಶಿವಪುರಿಯ ಮುಂದಿನ ಸಣ್ಣ ಬಯಲಿನಲ್ಲಿ ಬಂದು ಇಳಿದದ್ದು. ಬರುವಾಗ ಥಾಪಾನೇ ನಮ್ಮ ಜೀಪ್ ನಡೆಸುತ್ತಿದ್ದ. ಯುದ್ಧಕಾಲದಲ್ಲಿ ಮಾಡಿ ಕೆಟ್ಟುಹೋಗಿದ್ದ ರಸ್ತೆಯಲ್ಲಿ ಅದರ ವೇಗ ಕಡಿಮೆಯಾಗಿದ್ದುದು, ನಾನು ಸುತ್ತುಮುತ್ತ ನೋಡುವುದಕ್ಕೆ ಹೆಚ್ಚು ಸಹಾಯವಾಗಿತ್ತು. ಪತ್‌ಕಾಯ್ ಪರ್ವತಶ್ರೇಣಿಯ ನಾಗಾ ಬೆಟ್ಟಗಳು, ನಮ್ಮ ಪಶ್ಚಿಮ ಘಟ್ಟವನ್ನೇ ನೆನಪಿಗೆ ತರುತ್ತಿದ್ದುವು. ಅದೇ ಎತ್ತರವಾದ ಬೆಟ್ಟ ಸಾಲು, ಕಡಿದಾದ ಮೈ, ದಟ್ಟವಾದ ಹಸಿರು; ಸ್ವಲ್ಪ ಸ್ವಲ್ಪ ದೂರದಲ್ಲೇ ನೊರೆನೊರೆಯಾಗಿ ಧುಮುಕಿ ಇಳಿಯುವ ತಿಳಿನೀರಿನ ಝರಿಗಳು; ಒಂದು ಕಡೆ ಚೌಕಳಿ ಬರೆವ ಹೊಲಗದ್ದೆಗಳನ್ನೊಳಗೊಂಡ ಪಾತಾಳ ಕಣಿವೆಯಾದರೆ, ಇನ್ನೊಂದು ಕಡೆ ದುರ್ಗಮವಾಗಿ ಗಗನಕ್ಕೇರಿದ ಬೆಟ್ಟದ ಗೋಡೆ; ನೀರಿನಿಂದ ಅಭಿಷೇಕವಾಗಿ ಮುಹೋನ್ನತ ಸಾಲಿಗ್ರಾಮ ಶಿವಲಿಂಗಗಳಂತೆ ಕಪ್ಪಾಗಿ ನುಣುಪಾಗಿ ಎದ್ದುನಿಂತು ಎಲ್ಲೆಲ್ಲೂ ಕಾಣಿಸಿಕೊಳ್ಳುವ ಬಂಡೆಗಳು; ನಮ್ಮ ಮಟ್ಟದ ಮೇಲೂ ಕೆಳಗೂ ಸಾಲು ಸಾಲಾಗಿ ಹಾರದಂತೆ ರೆಕ್ಕೆ ಬಡಿದು ಹಾರಾಡುವ ಬೆಳ್ಳಕ್ಕಿಗಳು; ಅಲ್ಲೊಂದು ಇಲ್ಲೊಂದು ಹಾಡುತ್ತ ತೇಲುವ ಹದ್ದುಗಳು; ಅಲ್ಲಲ್ಲೇ ದಾರಿಯನ್ನು ಹಾಯ್ದು ಬಣ್ಣ ಬಣ್ಣದ ಹೂಲ, ಸರಿ, ಒಂದೊಂದು ಕಾಡುಹಂದೆ, ಬೆಟ್ಟದ ಮೇಕೆ, ಜಿಂಕೆ ಮೊದಲಾಗಿ; ಈ ರಂಗಮಂಟಪಕ್ಕೆ ಛಾವಣಿಯಾಗಿ ತಿಳಿನೀಲಿಯ ಆಕಾಶ, ಈ ಪ್ರಕೃತಿದೇವಿಯ ಉಸಿರಾಗಿ ಬೆಟ್ಟದ ತಂಗಾಳಿ,—ಎಲ್ಲವೂ ನಮ್ಮ ಮಲೆನಾಡಿನಂತೆಯೇ. ಯಾಕೆ, ಅದಕ್ಕೂ ಒಂದು ಕೈ ಮೇಲೇ. ನಾವು ತಂಗಲಿದ್ದ ಶಿವ-

ಪುರಿಯ ಜಾಗ ಈ ವಾತಾವರಣಕ್ಕೆ ಭೂಷಣವಾಗಿದ್ದಂತೆ ರಮಣೀಯವಾಗಿದ್ದಿತು. ಅದು ಮಲೆಯ ಮುಡಿಲಿನಲ್ಲೇ ಮಲಗಿದ್ದ ಮುದ್ದಾದ ಹಳ್ಳಿ. ನಾವು ಡೇರೆ ಹೊಡೆಯುತ್ತಿದ್ದ ಜಾಗಕ್ಕೆ ಸ್ವಲ್ಪ ಮೂರನಲ್ಲಿ ದಿಣ್ಣೆಯ ಮೇಲೆ ಹರಡಿಕೊಂಡಿದ್ದ ಹಳ್ಳಿಯ ಹುಲ್ಲು ಗುಡಿಸಿಲಿನ ಗುಂಪು, ಸಂಜೆಯ ಬೆಳಕಿನಲ್ಲಿ ಬುಗುಡಿಯ ಆರತಿಯಂತೆ ಕಾಣುತ್ತಿತ್ತು. ನಮಗೆ ಸ್ವಲ್ಪ ಕೆಳಗೆ ಬಾಗಿ ಹರಿಯುತ್ತಿದ್ದ ದಯಾಂಗ್ ಹೊಳೆ, ಈ ಆರತಿಯನ್ನು ಹಿಡಿದು ನಿಂತಿದ್ದ ನುಲಿ ಹೆಣ್ಣಿಗೆ ಡಾಬಿನಂತೆ ಒಪ್ಪುತ್ತಿತ್ತು. ಈ ತೊರೆಯು ಕೊರೆದಿದ್ದ ಭಾಗವನ್ನು ಬಿಟ್ಟರೆ ಸುತ್ತಲೂ ಬೆಟ್ಟವೆ; ಸಹಜವಾದ ದುರ್ಗದಂತೆಯೇ ಇತ್ತು. ನೋಟವನ್ನು ಹೊರಳಿಸುತ್ತ ಕಣ್ಣುಗಳನ್ನು ಅಗಲಿಸಿ ಈ ಚೆಲುವನ್ನು ತುಂಬಿಕೊಂಡೆ; ಎದೆಯುಬ್ಬುವಂತೆ ಉಸಿರೆಳೆಯುತ್ತ ನಿರ್ಮಲವಾದ ಹರ್ಷವನ್ನು ತುಂಬಿಕೊಂಡೆ.

ನಮ್ಮ ಬೀಡಿನ ಸಿದ್ಧತೆಗಳು ನಡೆಯುತ್ತಿದ್ದಾಗ, ಥಾಪಾ ಮತ್ತು ನಾನು ಸುತ್ತಮುತ್ತ ತಿರಿಗಾಡಿಕೊಂಡು ಬರಲು ಹೊರಟೆವು. ಅವನ ಷರಾಯಿಯ ಹಿಂದುಜೇಬಿನಲ್ಲಿ ಸಿಕ್ಕಿಸಿದ್ದ ಎರಡು ಪಿಸ್ತೂಲುಗಳನ್ನೂ, ಅವನ ಭುಜದಿಂದ ಡವಾಲಿಯಂತೆ ಇಳಿಬಿದ್ದ ತೋಟಾಸಡವನ್ನೂ ನೋಡುತ್ತ "ಇವರ ಆವಶ್ಯಕತೆ ಏನು?" ಎಂದು ಕೇಳಿದೆ. ಅವನು "ಇರಲಿ ಸರ್, ತಲೆಬೇಟೆ ಆಡೋ ಕಾಡುಜನ, ಮೃಗ—ಜೇಳೋದಕ್ಕೆಲ್ಲ" ಎನ್ನುತ್ತ ಹೆಜ್ಜೆಯಿಟ್ಟ. ನಮ್ಮ ಹಿಂದೆ ಥಾಪಾನ ಹಳ್ಳಿಯ ನೆಚ್ಚಿನ ಸೇವಕ ಚೌಧರಿಯೂ ತುಪಾಕಿಯನ್ನು ಹೊತ್ತು ಬಂದ. ಚೌಧರಿ ಆ ಭಾಗಕ್ಕೆ ಸೇರಿದ್ದವನು. ಅವನಿಗೆ ಆ ಪ್ರದೇಶವೂ ಜನವೂ ಚೆನ್ನಾಗಿ ಗೊತ್ತಿತ್ತಲ್ಲದೆ, ಆ ನಾಗಾ ಜನರ ಗ್ರಾಮ್ಯಭಾಷೆಯೂ ಬರುತ್ತಿತ್ತು. ದ್ವಿಭಾಷಿಯೂ ದಾರಿ ತೋರಿಸುವವನೂ ಅವನೇ.

ನಾವು ನಮ್ಮ ಮುಂದಿನ ಬಯಲನ್ನು ದಾಟುತ್ತ ಅದರ ಮಧ್ಯೆ ದೆಲ್ಲಿದ್ದ ಕಲ್ಲುಕಂಬದ ಬಳಿ ಸ್ವಲ್ಪ ನಿಂತೆವು. ಅದು ನಮ್ಮ ಕಡೆಯ ಗರುಡಗಂಬದಂತೆಯೇ ಇತ್ತು; ಆದರೆ ಬೊಳಾಗಿತ್ತು. ಇದಕ್ಕೆ ಇದಿರಾಗಿ ಬಯಲಿನ ಅಂಚಿನಲ್ಲಿ ಕಲ್ಲಿನ ಗುಡಿ—ದೊಡ್ಡ ಗೂಡಿನಂತೆ. ಅಲ್ಲಿ ಕಲ್ಲಿನ ಮೇಲೆ ಕಿರೀಟ ಧರಿಸಿದ್ದ ನಾಲ್ಕು ಮುಖಗಳು ಕೆತ್ತಲ್ಪಟ್ಟಿದ್ದುವು. ಗೂಡಿನ ಮುಂದೆ ಅಗಲವಾದ ಬಲಿಪೀಠ. ಈ ವಿಗ್ರಹಗಳು ಪೂಜಾರ್ಹವಾದ ಪಿತೃದೇವತೆಗಳವೆಂದು ಥಾಪಾನಿಂದ ತಿಳಿದುಕೊಂಡೆ. ಇನ್ನು ಕೆಲವು ನಾಗಾ ಗುಂಪುಗಳಲ್ಲಿ ನಾಗಪ್ರತಿಮೆ, ಲಿಂಗ ಇವುಗಳ ಗುಡಿಗಳೂ ಇರುವಂತೆ. ಹಳ್ಳಿಯ ದೇವತೆಗಳೋ, ಪಿತೃಗಳೋ ಆ ಹಳ್ಳಿಯ ಸುಖ-ದುಃಖಗಳಿಗೆಲ್ಲ ಕಾರಣರು; ಅವರಿಗೆ ಪೂಜೆ ನುತ್ತು ಅಲ್ಲಿಯ ಮಂತ್ರವಾದಿಯ ಸಲಹೆಯ ಪ್ರಕಾರ, ಸಂದರ್ಭಾನುಸಾರವಾಗಿ ಬಗೆ ಬಗೆಯ ಬಲಿ. ಸಾಮಾನ್ಯ ಬಲಿಗೆ ನಿಲ್ಲದ ಘೋರ ಸಾಂಕ್ರಾಮಿಕ, ಕ್ಷಾಮ ಮುಂತಾದ ದೊಡ್ಡ ವಿಪತ್ತುಗಳ ಸಂದರ್ಭಗಳಲ್ಲಿ ನರಬಲಿಯೂ ಕೂಡ ನಡೆಯಬಹುದಂತೆ.

ಈ ಗುಡಿಯ ಪಕ್ಕದಲ್ಲಿ ಇನ್ನೊಂದು ಚಿಕ್ಕ ಗೂಡು. ಅದರಲ್ಲಿ ಕಲ್ಲಿನ ಮೇಲೆ ಮಸಕು-ಮಸಕಾಗಿ ಕೆತ್ತಿದ್ದ ಹೆಣ್ಣು ವಿಗ್ರಹ. ಸೊಂಟದ ಮೇಟು ಕಚ್ಚೆಯ ಉರಿಪೆ, ಕತ್ತಿನ ಮಣಿಯ ಸರ, ತಲೆಗೂದಲಿನ ಗಂಟಿಗೆ ಸಿಕ್ಕಿಸಿದ ದೊಡ್ಡ ಹೂ, ಇವಿಷ್ಟೇ ಆ ಕೆತ್ತನೆಯಲ್ಲಿ ಕಾಣುತ್ತಿದ್ದ ಉಡುಗೆ ತೊಡುಗೆ—ಆಭರಣ-ಅಲಂಕಾರ.

"ಇದು ಯಾವ ವಿಗ್ರಹ?" ನಾನು ಚೌಧರಿಯ ಕಡೆಗೆ ನೋಡಿದೆ.

"ಈ ಕಡೇ ನಾಗಾ ಹುಡುಗೀದು ಇದ್ದ ಹಾಗಿದೆ, ಯಾವ ದೇವರೋ ಕಾಣೆ ಸಾಹೇಬ!" ಅದನ್ನು ದಿಟ್ಟಿಸುತ್ತ ಅನುಮಾನದಿಂದ ಹೇಳಿದ.

"ಹೊಸದು, ಹಳ್ಳಿಯ ಬೇವತೆ ಯಾವುದೋ ಸ್ಥಾಪನೆಯಾಗಿರಬೇಕು" ಥಾಪಾ ಊಹಿಸಿದ.

"ಇರಬಹುದೇನೋ. ಮನುಷ್ಯ ತನ್ನ ಹಾಗೇ ತಾನೇ ದೇವರನ್ನೂ ಚಿತ್ರಿಸೋದು" ನಾನು ಪೂರ್ತಿಮಾಡಿ ಅದನ್ನು ಮರೆತೆ. ಮುಂದೆ ಸರಿದು ಸೊಟ್ಟ ಕಾಲುದಾರಿಯನ್ನು ಸೇರಿ ಹಳ್ಳಿಗೆ ತಿರುಗಿ ಹತ್ತಲು ಮೊದಲುಮಾಡಿದೆವು.

ನಮ್ಮ ಮುಂದೆ ನೂರು ಅಡಿ ದೂರದಲ್ಲಿ ಒಬ್ಬ ಮುದುಕನೂ ನಮ್ಮಂತೆಯೇ ಹಳ್ಳಿಗೆ ಹೋಗುತ್ತಿದ್ದ. ನಾವು ಬಯಲನ್ನು ದಾಟಲು ಹೊರಟಾಗಲೇ ಇವನು ಚಿಕ್ಕಗೂಡಿನ ಬಳಿಯಲ್ಲಿ ಒರಗಿ ಕುಳಿತಿದ್ದುದು ದೂರದಿಂದ ಕಂಡಿದ್ದಿತು. ವಿಚಿತ್ರವೆಂದರೆ—ಅಳುವ ಸ್ವರವೂ ಇವನಿಂದ ಕೇಳಿಬರುತ್ತಿತ್ತು. ಆದರೆ ಆಗ ಅದು ಅಷ್ಟು ನನ್ನ ಗಮನಕ್ಕೆ ಬಂದಿರಲಿಲ್ಲವೆಂದು ಹೇಳಬೇಕು. ಅವನು ಎತ್ತರವಾದ ವ್ಯಕ್ತಿ; ಬೆನ್ನು ಬಗ್ಗಿತ್ತು. ಶರೀರ ಕೃಶವಾಗಿ ಚರ್ಮ ಸುಕ್ಕುಬಿದ್ದಿತ್ತು. ತಲೆಯ ಬಿಳಿಗೂದಲು ಬೊಂತೆ ಬೊಂತೆಯಾಗಿ ಹುಲ್ಲು ಮೆದೆಯಂತೆ ಕಾಣುತ್ತಿತ್ತು. ಬಿಳಿಯ ಗಡ್ಡವೂ ಭುಜದ ಮೇಲಿಂದ ಇಣಕುತ್ತಿತ್ತು. ಕರಿಯ ಉಡಿದಾರಕ್ಕೆ ಕಟ್ಟಿದ ಕೆಂಪು ಲಂಗೋಟಿಯೊಂದೇ ಅವನ ಉಡುಪು. ನಾವು ನೋಡುತ್ತಿದ್ದಂತೆಯೇ, ಬೆತ್ತಲೆಯಾದ ಕೆಲವು ಸಣ್ಣ ಹುಡುಗರು ಮುದುಕನಿಗೆ ಇದಿರಾಗಿ ಬಂದು ಅವನನ್ನು ಸುತ್ತುಗಟ್ಟಿ ಕುಣಿಯುತ್ತ ನಗುತ್ತ, ಏನನ್ನೋ ಕೂಗಿಕೊಳ್ಳುತ್ತ, ಅವನ ಮೇಲೆ ಮಣ್ಣೆರಚಿದರು; ಅವನನ್ನು ಹಿಂಬಾಲಿಸಿದರು. ಆದರೆ ಅವನು ಅವರನ್ನು ಗಮನಕ್ಕೇ ತಂದುಕೊಳ್ಳದೆ ಮುಂದೆ ಮುಂದೆ ನಿದಾನವಾಗಿ ಹೆಜ್ಜೆಯಿಡುತ್ತಿದ್ದ.

"ಏನಂತ ಕೂಗ್ತಾರೆ?" ಚೌಧರಿಯನ್ನು ಕೇಳಿದೆ.

"ಹುಚ್ಚಜ್ಜ—ಅಂತ ಹಾಸ್ಯಮಾಡ್ತಾರೆ. ಹುಚ್ಚನೇ ಇರಬೇಕು."

ಈಗ ಮುದುಕನ ತಲೆಯ ಕಡೆಗೆ ಸಣ್ಣ ಕಲ್ಲಿನೇಟು ಬಿದ್ದುದು ನನಗೆ ಕಂಡಿತು. ಅವನು ಕೈಗಳನ್ನೆತ್ತಿ ಅದನ್ನು ತಡೆದ.

"ಏ! ಏಯ್!" ಹುಡುಗರನ್ನು ಗದರಿಸುವಂತೆ ನಾನು ಗಟ್ಟಿಯಾಗಿ ಕೂಗಿದೆ.

ನಾವು ತಿರುವನ್ನು ದಾಟಿದಾಗ, ಹುಡುಗರು ನಮ್ಮ ಕಡೆಗೆ ನೋಡಿ ಏನೋ ಕಿರಿಚುತ್ತ ಓಟಕಿತ್ತರು. ಮುದುಕ ಹಿಂತಿರುಗಿದ. ಇಳಿ ಬೆಳಕಿಗೆ ಅಡ್ಡವಾಗಿ ಹೊಳಕ್ಕೈಯೊಡ್ಡಿ ಕ್ಷಣಕಾಲ ನಮ್ಮನ್ನು ದಿಟ್ಟಿಸಿ

ನೋಡಿದೆ. ಮರುಕ್ಷಣದಲ್ಲಿ ತಟ್ಟನೆ ಬಗ್ಗಿ ಕಲ್ಲೊಂದನ್ನು ತೆಗೆದು ಕೊಂಡು ನಮ್ಮ ಕಡೆಗೆ ಬಲವಾಗಿ ಬೀರಿ ಹಿಂತಿರುಗಿ ಓಡಿಹೋದ.

"ಹಾ !" ಚೌಧರಿಯಿಂದ.

"ಆ !" ಥಾಪಾನಿಂದ.

ನಾನು ಆಶ್ಚರ್ಯದಿಂದ ಎಚ್ಚೆತ್ತುಕೊಳ್ಳುವುದರೊಳಗಾಗಿ, ಕಲ್ಲಿನ ಪೆಟ್ಟು ತಗಲಿ ನನ್ನ ಮಿಲಿಟರಿ ಟೋಪಿ ಹಾರಿಹೋಗಿತ್ತು. ಚೌಧರಿ ಮುದುಕನ ಕಡೆಗೆ ತುಪಾಕಿಯನ್ನು ತಿರಿಗಿಸಿದ್ದ. ಥಾಪಾ ಮುಂದೆ ಧಾವಿಸುತ್ತಿದ್ದ. ನಕಾಲದಲ್ಲಿ ಚೌಧರಿಯನ್ನು ಕೈಸನ್ನೆಯಿಂದ ತಡೆದು ಥಾಪಾನನ್ನು ಹಿಂಬಕ್ಕೆ ಕೂಗಿದೆ. ಅದೇ ಸಮಯದಲ್ಲಿ ನಮ್ಮ ಹಿಂದೆ ಕಿಲಕಿಲವ ನಗು ಕೇಳಿಬಂದಿತು. ಹಿಂತಿರುಗಿದೆ. ನಮ್ಮ ಹಿಂದೆ ದಾರಿ ಯಲ್ಲಿ ಕೆಳಗಡೆ ನೂರಡಿಯ ದೂರದಲ್ಲಿ, ನನ್ನ ಟೋಪಿ ಬಿದ್ದಿಡೆಯಲ್ಲಿ ಎರಡು ಹೆಣ್ಣುಗಳು ಗಡಿಗೆಗಳನ್ನು ಹೊತ್ತು ಹತ್ತಿಬರುತ್ತಿದ್ದುದು ಕಂಡಿತು. ಆಗ ತಾನೆ ಅವರು ಮರದ ಸುರೆಯನ್ನು ಪಾಟ ಮುಂದೆ ಬಂದಿದ್ದರು. ಚೌಧರಿ ಟೋಪಿಗಾಗಿ ಹೋದ. ನಾನು ದಾರಿಯಲ್ಲಿ ಸರಿದು ನಿಂತು ಆ ಯುವತಿಯರನ್ನು ನೋಡುತ್ತಿದ್ದೆ. ಮುಂದಿನವಳು ಬಯಲಿನ ಆ ಗೂಡಿನಲ್ಲಿದ್ದ ವಿಗ್ರಹದಂತೆಯೇ ಇದ್ದಳೆನ್ನಬೇಕು. ಅದೇ ಸೊಂಟದ ತುಂಡು ಅರಿವೆ, ಕೊರಳಿನಲ್ಲಿ ಮಣಿ ಕಪ್ಪೆಚಿಪ್ಪುಗಳ ವದಕ, ಕಟ್ಟಿದ ಮುಡಿಗೆ ಸಿಕ್ಕಿಸಿದ ಬಿಳಿಯ ದೊಡ್ಡ ಹೂವು. ಹಿಂದಿನವಳೂ ಇವಳಂತೆಯೇ—ಎದೆಯ ಮೇಲೆ ಬಿಗಿದಿದ್ದ ಬಟ್ಟೆಯ ಪಟ್ಟಿಯೊಂದನ್ನು ಬಿಟ್ಟರೆ ಇಬ್ಬರೂ ಕಡೆದ ಪ್ರತಿಮೆಗಳಂತಿದ್ದರು. ನನಗೆ ಬೇಲೂರಿನ ಶಿಲಾಬಾಲಿಕೆಯರ ನೆನಪಾಯಿತು. ಒಂದು ವ್ಯತ್ಯಾಸವೆಂದರೆ ಆ ಶಿಲಾ ಬಾಲಿಕೆಯರ ಅನಾವಶ್ಯಕವಾದ ಆಭರಣ ಈ ಯುವತಿಯರನ್ನು ಮುಚ್ಚದಿದ್ದು, ಇವರು ನಿರಾಭರಣ ಸುಂದರಿಯರಾಗಿದ್ದರು. ಚಿನ್ನದ ಬಣ್ಣದ ಮೈಗಳ ಮೇಲೆ ಸಂಜೆಯ ಹೊಂಬೆಳಕು ಬಿದ್ದಿದ್ದುದು ಚಿನ್ನಕ್ಕೆ ಪೊರಗು ಕೊಟ್ಟಂತಾಗಿತ್ತು. ತಲೆಯ ಮೇಲೆ ಭಾರವಾದ ಕೆಂಪು ಗಡಿಗೆ ಯನ್ನು ಹೊತ್ತು, ಬಲಗೈಯನ್ನು ಅದಕ್ಕೆ ಸೋಕಿಸಿ, ಸೊಂಟದ ಮೇಲಿದ್ದ ಇನ್ನೊಂದು ಗಡಿಗೆಯನ್ನು ಎಡಗೈಯಿಂದ ಬಳಸಿ ಹಿಡಿದು ಬೆಟ್ಟದ ಹಾದಿಯನ್ನು ಹತ್ತುತ್ತಿದ್ದ ಅವರ ಭಂಗಿಯನ್ನು ನೋಡುತ್ತ ಭ್ರಾಂತನೇ ಆಗಿ ನಿಂತಿದ್ದೆ. ಅವರೇನು ಅಂದುಕೊಂಡರೋ ! ನಮ್ಮನ್ನು ಹಾಯ್ದಾಗ ಅವರ ಕುಡಿನೋಟ ನಮ್ಮ ಕಡೆಗೆ ಹೊರಳಿತ್ತು. ನಸುನಗೆ ಮೊಗಗಳಲ್ಲಿ ಮಿನುಗುತ್ತಿತ್ತು. ಅವರು ಸ್ವಲ್ಪ ದೂರ ಮುಂದೆ ಹೋದಮೇಲೆ ನಾವು ನಿದಾನವಾಗಿ ಹಿಂಬಾಲಿಸಿದೆವು.

ಹಳ್ಳಿಯ ಹತ್ತಿರ ಬಂದಾಗ ಗುಡ್ಡದ ಗಿಡ್ಡ ದನಗಳ ಮುಂದೆ ಯೊಂದು ಸ್ವಲ್ಪ ಧೂಳೆಬ್ಬಿಸುತ್ತ ನಮ್ಮ ದಾರಿಗೆ ಬಂದಿತು. ಅದರ ಜೊತೆಯಲ್ಲಿ ಆಡುಗಳೂ ಒಂದು ನಾಯಿಯೂ ಇದ್ದುವು. ಎಲ್ಲವೂ ಹೊಟ್ಟೆಯ ತುಂಬ ಪೈರು ಪುಷ್ಟಿಯಾಗಿದ್ದುವು. ದನಗಳ ಕೊರಳಿನ ಕಬ್ಬಿಣದ ಗಂಟೆಗಳ ಶಬ್ದ, ಅದರ ಹೊಳಲು ಕೇಳಲು ತುಂಬ ಹಿತ. ಈ ಮುಂದೆಯ ಹಿಂದೇ ಗೊಲ್ಲ. ಅವನೂ ಬರಿಯ ಕೌಪೀನಧಾರಿಯೇ. ಎಡಗೈಯಲ್ಲಿ ಒಂದು ದೊಣ್ಣೆ, ಬಲದಲ್ಲಿ ಕೊಳಲು. ಇವನ ಮೈಕಟ್ಟು, ನಾನು ನೋಡಿದ್ದ ಅಪೋಲೋ ಚಿತ್ರಗಳನ್ನು ನೆನಪಿಗೆ ತಂದಿತು. ಈ ಗುಂಪಿಗೂ ದಾರಿ ಕೊಟ್ಟೆವು.

ತೊಪ್ಪೆ, ಹಿಕ್ಕೆ, ಗಂಜಲ, ಸುರಿದ ನೀರು, ಕೊಚ್ಚಿ, ಹೊಲಸು, ಕಸ-ಕಡ್ಡಿಗಳು ಇವು ಬೇಕಾದಷ್ಟು ಕಾಣುತ್ತಿದ್ದವು, ಹಳ್ಳಿಯ ವಿಶಿಷ್ಟ ಮಿಶ್ರವಾಸನೆಯಿಂದ ಕೂಡಿ ಬೀದಿ ಎನ್ನಿಸಿಕೊಂಡಿದ್ದ ಜಾಗದಲ್ಲಿ ಕಾಲಿ-ಟ್ಟಾಗ, ಚೌಧರಿ ಮುಂದೆ ಒಂದು ಪೆಜ್ಜೆ ಹೋಗುತ್ತ ಏನನ್ನೋ ಗಟ್ಟಿ ಯಾಗಿ ಕೂಗಿ ಹೇಳುತ್ತಿದ್ದ. ನಾವು ಶತ್ರುಗಳಲ್ಲವೆಂದು ಇರಬಹುದು, ನಮ್ಮ ಅಧಿಕಾರದ ಬಿರುದು-ಬಾವಲಿಗಳೂ ಕೇಳಿಸುತ್ತಿದ್ದುವು. ಹಳ್ಳಿಯ ವರೆಲ್ಲ—ಹೆಣ್ಣು, ಗಂಡು, ಮುದಿ, ಮಗು ಮುಂತಾಗಿ—ಬಂದು ತಮ್ಮ ಮುಂಡು ಗುಡಿಸಿಲುಗಳ ಮುಂದೆ ಬಂದು ನಿಲ್ಲುತ್ತ ನಮ್ಮನ್ನು ದಿಟ್ಟಿಸಿ ನೋಡುತ್ತಿದ್ದರು, ಕೈಸನ್ನೆ ಬಾಯಿಸನ್ನೆ ಮಾಡುತ್ತ ಆವೇಶದಿಂದ ತಮ್ಮೊಳಗೇ ಪಿಸುಗುಟ್ಟುತ್ತಿದ್ದರು, ಮತ್ತು ಹಲ್ಲುಗಳನ್ನು ಬಿಟ್ಟು ನಗುತ್ತಲೂ ಇದ್ದರು. ಕೆಲವು ಗಂಡಸರ ಕೈಗಳಲ್ಲಿ ಬಲ್ಲು ಬತ್ತಳಿಕೆ ಗಳೂ, ಶೂಲ, ಕೊಡಲಿ, ಮಚ್ಚುಕತ್ತಿಗಳೂ ಕಂಡುವು. ಎಲ್ಲರೂ ವೃಢವಾದ ಅಂದವಾದ ಮೈಕಟ್ಟಿನವರೇ. ನಾವು ಕಂಡಿದ್ದ ಯುವತಿ ಯುವಕರಂತೆ ವಿಶೇಷ ಸೌಂದರ್ಯದಿಂದ ಕೂಡಿದವರೂ ಬೇಕಾದಷ್ಟು ಜನರಿದ್ದರು. ಉಡುಪೂ ಅದೇ ರೀತಿ. ಆಭರಣವೂ ಸ್ವಲ್ಪ ವ್ಯತ್ಯಾಸ ದಿಂದ ಅಂತೆಯೇ. ಇವರನ್ನೆಲ್ಲ ನೋಡಿದ ನೀಲೆ, ಎದೆಯ ಪಟ್ಟಿ ಮಮವೆಯಾವಳಿಗೆ ಮಾತ್ರವೆಂದು ತೀರ್ಮಾನಿಸಿಕೊಂಡೆ.

ಚೌಧರಿ ಒಬ್ಬನೊಡನೆ ವಿಚಾರಿಸಿ, ಮುಖಂಡನ ಮನೆಯ ಮುಂದೆ ನಿಂತು ಆತನನ್ನು ಕರೆದ. ಅವನಿಗೆ ಸುಮಾರು ನೂಪತ್ತೈದು ವಯಸ್ಸಿರಬೇಕೆಂದು ಊಹಿಸಿದೆ. ಇತರರಂತೆಯೇ ಇದ್ದ. ಮುಂದೆ ಬಂದು ಕೈಮುಗಿದು ಅಸ್ಸಾಮಿ ಭಾಷೆಯಲ್ಲಿ ಮಾತನಾಡಿಸಿದಾಗ ನನಗೆ ಆಶ್ಚರ್ಯವಾಯಿತು. ಮುಂದೆ ಗೊತ್ತಾದಂತೆ ಅವನು ಸ್ವಲ್ಪ ಕಾಲ ಆ ಪ್ರದೇಶದಲ್ಲಿದ್ದ ಮಿಷನರಿಗಳ ಸಹವಾಸದಲ್ಲಿದ್ದು, ಅವರಿಂದ ಆ ಭಾಷೆಯನ್ನು ಕಲಿತಿದ್ದನಂತೆ. ಆ ವರ್ಷವೋ ಮುಂದಿನವರಲ್ಲೋ ಬೆಳಿ ಜೆನ್ನಾಗಿ ಆಗದೆ ಮಂತ್ರವಾದಿ ಅಂದನಂತೆ; 'ಅದು ಮಿಷನರಿಗಳ ಸಹ ವಾಸದಿಂದ' ಅಂತ. ಅಂದಿನಿಂದ ಊರಿನವರು ಯಾರೂ ಅವರ ಬಳಿ ಹೋಗದಂತೆ ಕಟ್ಟಾಗಿ, ಅವರು ಅಲ್ಲಿಂದ ಹೊರಟು ಹೋದರಂತೆ. ನನಗೂ ಅಸ್ಸಾಮಿ ಬರುತ್ತಿದ್ದುದು ಅನುಕೂಲವಾಯಿತು. ಆತ ಕೂಗಿ ಹೇಳಿ ದೊಡ್ಡ ಹುಲಿಯ ಚರ್ಮವನ್ನು ತರಿಸಿ, ತನ್ನ ಗುಡಿಸಿಲಿನ ಮುಂದೆ ಹಾಕಿಸಿ ಕುಳಿತುಕೊಳ್ಳಬೇಕೆಂದು ಆಹ್ವಾನಿಸಿದ. ನಾವು ಕುಳಿತ ಶಾಸ್ತ್ರವಾಯಿತು, ನಾವು ಬಂದಿದ್ದ ಉದ್ದೇಶವನ್ನು ತಿಳಿಸಿ, ನಮ್ಮಿಂದ ಯಾವ ಬಾಧೆಯೂ ತಟ್ಟದೆಂದು ಭರವಸೆಕೊಟ್ಟು, ನಮ್ಮ ಬೇಟೆಗೆ ಸಹಾಯವಾಗದಂತೆ ಕೆಲವು ಜನರನ್ನು ಒದಗಿಸಿಕೊಡಬೇಕೆಂದು ತಿಳಿಸಿ, ಅವನು ಒಪ್ಪಿದ ಮೇಲೆ ಎದ್ದು ಹಳ್ಳಿಯಲ್ಲಿ ಸುತ್ತಾಡಿದೆವು. ಕಡೆಯ ಗುಡಿಸಿಲಿನ ಬಳಿಗೆ ಬರುವವರೆಗೂ ವಿಶೇಷವೇನೂ ನಮ್ಮನ್ನು ಆಕರ್ಷಿ ಸಲಿಲ್ಲ. ಆದರೆ ಅಲ್ಲಿ ಒಂದು ಗುಂಪು ಸೇರಿದ್ದಿತು. ಜನರು ದಾರಿ ಬಿಟ್ಟ ಕಡೆಯಲ್ಲಿ ನಾನು ಇಣುಕಿ ನೋಡಿದೆ. ಮಗುವೊಂದನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹೆಂಗುಸೊಬ್ಬಳು ಅಲ್ಲೇ ಕುಳಿ

ತಿದ್ದಳು. ಅವಳ ಮುಂದೆ ಗುಡಿಸಿಲಿನ ಬಾಗಿಲಿನಲ್ಲಿ ಆಡಿನ ಗಡ್ಡ, ವೈಬೂದಿ, ರುದ್ರಾಕ್ಷಿಯ ಸರಗಳ ಮುಡುಕನೊಬ್ಬ ಕುಳಿತುಕೊಂಡು, ಸೊಪ್ಪು-ಮೂಳೆಗಳನ್ನು ಮಗುವಿನ ಮೇಲೆ ಆಡಿಸುತ್ತ ಮಂತ್ರಪಠಿಸುತ್ತಿದ್ದ. ಹಳ್ಳಿಯ ಮಂತ್ರವಾದಿಯೆನ್ನುವುದರಲ್ಲಿ ಸಂದೇಹವಿರಲಿಲ್ಲ. ನನಗೆ ತಿಳಿದು ಬಂದಂತೆ ಹಳ್ಳಿಯಲ್ಲಿ—ಮುಖಂಡನ ಅಧಿಕಾರ ಪ್ರಭಾವಗಳನ್ನು ಬಿಟ್ಟರೆ—ಮಂತ್ರವಾದಿಯದೇ ಬಹಳ. ಒಂದೊಂದು ವೇಳೆ ಮುಖಂಡನನ್ನೂ ನೀರಿಸಬಲ್ಲ ಶಕ್ತಿ ಇವನಿಗಿದೆ. ಹಳ್ಳಿಯಲ್ಲಿ ಏನೇ ನಡೆಯಲಿ ನಡೆಯದಿರಲಿ—ಒಂದು ದನ ಸತ್ತಿತು, ಒಬ್ಬನಿಗೆ ಹೊಟ್ಟೆ ನೋವು, ಒಬ್ಬಳು ಹೆತ್ತಳು, ಇನ್ನೊಬ್ಬಳು ಗರ್ಭಿಣಿಯಾಗಲಿಲ್ಲ, ಏನೋ, ಶಕುನವಾಯಿತು, ನದಿ ಬತ್ತಿತು, ಪೈರು ಕಡಿನೆ, ಕ್ಷಾಮ, ರೋಗ—ಹೀಗೆ ಕೇವಲ ಸಣ್ಣದರಿಂದ ಕೇವಲ ದೊಡ್ಡದರವರೆಗೂ ಕಾರಣವನ್ನೂ ಫಲಾಫಲಗಳನ್ನೂ ತಿಳಿಸುವವನು ಅವನೇ. ಮಂತ್ರ ಪೂಜೆ, ಬಲಿ ಇವುಗಳಿಂದ ಏನನ್ನಾಗಲೀ ಸರಿಪಡಿಸಬಲ್ಲವನೂ ಅವನೇ. ಇವನನ್ನು ಕೇಳಿಯೇ ವ್ಯಕ್ತಿಯ ವಿಷಯವಾಗಲೀ ಸಮಾಜದಲ್ಲಾಗಲೀ ನಡೆಯಬೇಕು. ಈ ನಾಗಾ ಜನರ ಪ್ರಸಿದ್ಧ 'ತಲೆಯ ಬೇಟೆ' ಪ್ರಸಂಗವನ್ನು ನಿರ್ಧರಿಸುವಾಗಲೂ ಅವನ ಅನುಮತಿಯೂ ಸಹಾಯವೂ ಬೇಕು. ಅವನು ಒಳ್ಳೆಯದನ್ನು ಮಾಡುವವನು ಮಾತ್ರವೇ ಅಲ್ಲ; ದೆವ್ವ-ಪಿಶಾಚಿಗಳನ್ನು ವಶಪಡಿಸಿಕೊಂಡಿದ್ದು ಬೇಡದವರಿಗೆ ವಿಪರೀತ ಕೆಡುಕನ್ನೂ ಮಾಡಬಲ್ಲ, ಯಾಕೆ, ಸಾವನ್ನೇ ತರಬಲ್ಲನೆಂಬ ಹೆದರಿಕೆ ಎಲ್ಲರಿಗೂ ಉಂಟು. ಒಬ್ಬರ ಪಕ್ಷವಹಿಸಿ ಇನ್ನೊಬ್ಬರಿಗೂ ಗಂಡಾಂತರವನ್ನುಂಟು ಮಾಡಬಲ್ಲ. ಅವನ ಅಧಿಕಾರ, ಶಕ್ತಿ ಇಲ್ಲಿಗೇ ಮುಗಿಯಲಿಲ್ಲ. ಈ ಜನರಲ್ಲಿ ತಪ್ಪಿಗೆ ಕ್ರೂರ ಶಿಕ್ಷೆಯೂ ಪಾಪಕ್ಕೆ ಘೋರವಾದ ಪ್ರಾಯಶ್ಚಿತ್ತವೂ ಉಂಟು--ನಾಗರಿಕರು ನಂಬಲಾಗದಂಥವು. 'ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಪ್ರಾಣಕ್ಕೆ ಪ್ರಾಣ' ಎನ್ನುವ ಜನ. ಕಠಿಣವಾದ ಅತಿ ಶಿಸ್ತಿನ ಕಾನೂನು ಕಟ್ಟಲೆಗಳಿವೆ. ಕಳ್ಳತನಕ್ಕೆ ಕೈಯನ್ನೇ ಕತ್ತರಿಸಬಹುದು; ಪಿತೃದೇವತೆಗಳ ನಿಂದೆಗೆ ನಾಲಿಗೆಯನ್ನೇ ಸೀಳಬಹುದು; ಕುಲವನೊಡನೆ ಹೆಂಗಸು ಕೆಟ್ಟರೆ ಇಬ್ಬರಿಗೂ ಬರೆಗಳು ಬೀಳಬಹುದು, ಅಲ್ಲದೆ ತಪ್ಪಿತಸ್ಥ ಹೆಣ್ಣಿನ ತಂದೆಗೋ ಗಂಡನಿಗೋ ಹತ್ತರಿಂದ ಇಪ್ಪತ್ತೈದು ಹಸು, ಐವತ್ತರಿಂದ ನೂರು ಎಡುಗಳವರೆಗೂ ಕೊಡಬೇಕಾಗುವುದು. ಹೆಂಗಸು ಬಲವಂತಕ್ಕೆ ಸಿಕ್ಕಿ ಹೊರಗಿನವನಿಂದ ಕೆಟ್ಟಳೆಂದರೆ ಅವಳು ಕುಲದಿಂದ ಹೊರಗಾಗುತ್ತಾಳೆ; ಈ ಬಾಳಿನ ಹಿಂಸೆ ಆತ್ಮಹತ್ಯಕ್ಕೇ ದೂಡಬಹುದು. ಇನ್ನು ಅವಳು ತಾನಾಗಿ ಸರನಿಂದ ಕೆಟ್ಟಳೆಂದರೆ ಅವಳು ಜೀವಕಳೆದುಕೊಂಡಂತೆಯೇ. ಅವಳನ್ನು ಚಿತ್ರಹಿಂಸೆಗೆ ಗುರಿಮಾಡಬಹುದು, ಏನು ಬೇಕಾದರೂ ಮಾಡಬಹುದು. ಹೀಗೇ ಇನ್ನೂ ಇತರ ಶಿಕ್ಷೆಗಳು. ಇವರ ಶಾಸನ ಗುಂಪುಗುಂಪಿಗೆ ಬೇರೆ ಬೇರೆಯಾಗಿರುತ್ತದೆ. ಶಿಕ್ಷೆ ಪ್ರಾಯಶ್ಚಿತ್ತಗಳನ್ನು ಶಾಸನ ಶಾಸ್ತ್ರಗಳ ಪ್ರಕಾರ ತೀರ್ಮಾನಿಸುವವರು ಹಳ್ಳಿಯ ಹಿರಿಯರು; ಅದರಲ್ಲೂ ಮುಖಂಡನ ಅಧಿಕಾರವೇ ಬಹಳ. ಹೀಗಿದ್ದರೂ ಅನೇಕ ಪಾಪ ಪ್ರಾಯಶ್ಚಿತ್ತಗಳ ತೀರ್ಮಾನಗಳಲ್ಲಿ, ಅದರಲ್ಲಿಯೂ ವಿಶೇಷ ಸಂದರ್ಭಗಳಲ್ಲಿ, ಮಂತ್ರವಾದಿಯ ಸಲಹೆಯನ್ನು ಕೋರಲೆ ಆಗುವಂತೆಯೇ ಇಲ್ಲ. ಇಲ್ಲಿ ಅವನ ಭಾಗ ದೊಡ್ಡದೇ ಅಲ್ಲದೆ ಅವನ ತೀರ್ಮಾನವೇ ಕಡೆಯದಾಗಬಹುದು. ಹೀಗೆ, ಮಂತ್ರವಾದಿಯ ಸ್ಥಾನ-ಮಾನಗಳು.

ಹೀಗೆ ಏನೇನನ್ನೋ ಮಾತನಾಡುತ್ತ ಕ್ಯಾಂಪಿಗೆ ಹಿಂದಿರುಗಿದೆವು. ಅಷ್ಟು ಹೊತ್ತಿಗೆ ಅಲ್ಲಿಯ ವ್ಯವಸ್ಥೆಯೆಲ್ಲ ಆಗಿ ಬಿಸಿಬಿಸಿ ಟೀ ನಮಗಾಗಿ ಕಾಯುತ್ತಿತ್ತು. ನಾವು ತಲ್ಪಿದ ಸ್ವಲ್ಪ ಹೊತ್ತಿಗಾಗಲೇ ಹಳ್ಳಿಯ ಮುಖಂಡ ಮೀನು, ಆಡಿನ ಮಾಂಸ, ಹಾಲು, ಜೇನುತುಪ್ಪ, ಕಾಡು ದ್ರಾಕ್ಷಿ ಮುಂತಾಗಿ ಏನೇನನ್ನೋ ಇಬ್ಬರ ಮೇಲೆ ಹೊರಿಸಿಕೊಂಡು ಬಂದು ಕೊಟ್ಟು, ನಮ್ಮೊಡನೆ ಅಷ್ಟು ಮಾತಾಡಿ, ನಮ್ಮ ಅನುಕೂಲ ಅನನುಕೂಲಗಳನ್ನು ವಿಚಾರಿಸಿಕೊಂಡು ಹೋದ. ಹೋಗುವವನೊಡನೆ ಥಾಪಾ ನಾಲ್ಕು ಹೆಜ್ಜೆ ನಡೆದು ಏನನ್ನೋ ಗುಸುಗುಟ್ಟಿದ. ಮುಖಂಡ ತಲೆಯಾಡಿಸುತ್ತ "ಇಲ್ಲ, ಸಾಹೇಬ್, ಅದು ಮಾತ್ರ ಆಗೋದಿಲ್ಲ" ಎಂದು ಅಂದಂತೆ ನನಗೆ ಸ್ಪಷ್ಟವಾಗಿ ಕೇಳಿಸಿತು. ಇನ್ನೆರಡು ಹೆಜ್ಜೆ ಹೋಗಿ ಥಾಪಾ ಹಿಂದಿರುಗಿದ. ಆ ರಾತ್ರಿ ಊಟಮಾಡಿ, ಒಂದು ಬಟ್ಟಲು ವೈನ್ ಹೆಚ್ಚಾಗಿಯೇ ಕುಡಿದು, ಥಾಪಾ ಮತ್ತು ಚೌಧರಿಯೊಡನೆ ಆ ಪ್ರದೇಶದ ವಿಷಯಗಳನ್ನೆಷ್ಟನ್ನೋ ಮಾತಾಡಿ ಮಲಗುವಾಗ, ಶುಕ್ಲಪಕ್ಷದ ದ್ವಾದಶಿಯ ಚಂದ್ರ ಬೆಟ್ಟದ ಹಿಂಪೆ ಇಳಿಯುತ್ತಿದ್ದ. ಥಾಪಾ ರಾತ್ರಿಯಲ್ಲಿ ಬಲವಾದ ಕಾವಲಿಗೆ ಏರ್ಪಾಡು ಮಾಡಿದ್ದ.

೨

ಬೇಟೆ ಬಹಳ ಯಶಸ್ವಿಯಾಗಿ ನಡೆಯಿತೆಂದು ಹೇಳಲೇಬೇಕಾಗಿಲ್ಲ. ವಿವರಗಳು ನೀವು ಕೇಳಿರುವ ಇತರ ಬೇಟೆಗಳಂತೆಯೇ ಅನ್ನಿ. ನಾವು ಗುಂಡಿಕ್ಕಿದ ಕಾಡು ಪಾರಿವಾಳ, ಕ್ರೌಂಚ, ಗಿಡುಗ, ಬೆಳ್ಳಕ್ಕಿ, ಬಾತುಗಳಿಗೆ ಲೆಕ್ಕವೇ ಇಲ್ಲ; ನಾಲ್ಕಾರು ನವಿಲುಗಳನ್ನೂ ಹಿಡಿದೆವು; ಅಪೆಜ್ಜೋ ಮೊಲಗಳು ಜಿಂಕೆಗಳು ನಿತ್ಯವೂ ಸತ್ತುವು. ಅನೇಕ ನರಿತೋಳಗಳನ್ನು ನಾಶಪಡಿಸಿದೆವು. ಒಂದು ಚಿರತೆ, ಒಂದು ಹುಲಿಯನ್ನೂ ಬೇಟೆಯಾಡಿದೆವು. ಇಲ್ಲಿ ಥಾಪಾ ಹುಲಿಯ ಗವಿಯ ಮುಂದೆಯೇ ನಿಂತು ಅದನ್ನು ಕೆಣಕಿ, ಅದು ರೋಷಾವೇಶದಿಂದ ಮೇಲೆ ಬೀಳಲು ಬಂದಾಗ ಕೊಂದ ಪ್ರಕರಣ ವಿಶೇಷ. ಆ ವೀರ ದೃಶ್ಯವನ್ನು ನೆನೆದರೆ ಈಗಲೂ ನನಗೆ ರೋಮಾಂಚವಾಗುತ್ತದೆ.

ನಮ್ಮ ಬೇಟೆಯ ಫಲದಿಂದ ಹಳ್ಳಿಗೆ ಹಳ್ಳಿಯೇ ತಣಿದಿರಬೇಕು. ಹತ್ತರಪಲ್ಲಿ ಎಂಟು ಹಕ್ಕಿಗಳೆಲ್ಲ ಹಳ್ಳಿಯವರಿಗೇ. ಬಾಕಿ ಪ್ರಾಣಿಗಳ ಮಾಂಸವೂ ಅವರಿಗೇ ಮೀಸಲು. ಸುಲಿದ ಚರ್ಮ ಮಾತ್ರ ನಮ್ಮ ಸುಂಕ. ಹೀಗಾಗಿ ಎರಡು ದಿನಗಳಲ್ಲಿ ನಮಗೂ ಹಳ್ಳಿಯವರಿಗೂ ವಿಶೇಷ ಸೌಹಾರ್ದ ಬೆಳೆಯಿತು. ಮೊದಲನೆಯ ರಾತ್ರಿಯಂತೆ ಮುಖಂಡನು ನಿತ್ಯವೂ ಬಂದು ನಮ್ಮ ಅನುಕೂಲ ಅನನುಕೂಲಗಳನ್ನು ವಿಚಾರಿಸುತ್ತಿದ್ದ. ಹಾಗೇ ಏನಾದರೂ ಬೇರೆಯ ಮಾತೂ ಬರುತ್ತಿತ್ತು.

ಬೆಳಗ್ಗೆ ಮುಂಜೆಯೇ ಎದ್ದು ಬೆಡ್ ಟೀ ಮುಗಿಸಿ ನದಿಯ ಕಡೆಗೆ ಹೋಗಿ, ಈಜುಹೊಡೆದು, ಆರು ಗಂಟೆಗಾಗಲೇ ಹಿಂತಿರುಗಿ, ಬೇಟೆಗೆ ಬಟ್ಟೆ ತೊಟ್ಟು, ಡೇರೆಯ ಮುಂದೆ ಎಳೆಯ ಬೆಳಕಿನಲ್ಲಿ ಫೋಟೊ

ಹಜರಿ, ಅಲ್ಲ 'ಮೋಟಾ ಹಜರಿ' ಅನ್ನಿ. ಬೇಟೆಯ ದನಿವಿಗೆ ಬೇಕಾಗಿತ್ತಲ್ಲ. ಬೆಟ್ಟದ ಮೇಲೆ ಬೆಳಕು ಬಂದಾಗ ತಿಂಡಿ ಕಾಫಿಗಳ ದಪ್ಪ ಚೀಲ, ಬಿಲ್ಲು, ಬಾಣ, ಭಲ್ಲೆ, ತುಪಾಕಿ ಕತ್ತಿ ಕೊಡಲಿ ಮುಂತಾಗಿ ಆಯುಧ-ಉಪಕರಣಗಳನ್ನು ಹೊತ್ತ ನಮ್ಮ ಪರಿವಾರದೊಂದಿಗೆ ಹೊರಡುತ್ತಿದ್ದೆವು. ದಿನವೆಲ್ಲ ಬೇಟೆಯಾಡಿ ಸಂಜೆಗೆ ಹಿಂದಿರುಗಿದ ಮೇಲೆ ಮತ್ತೊಮ್ಮೆ ಬೆಟ್ಟದ ಝರಿಯಲ್ಲಿ ಸೊಗಸಾಪ ಈಸು. ದಿನದ ಆಯಾಸವೆಲ್ಲ ಪರಿಹಾರವಾಗುತ್ತಿತ್ತು. ಡೇರೆಯ ಮುಂದೆ ಸಂಜೆಯ ಬೆಳಕು-ತಂಗಾಳಿಗಳಲ್ಲಿ ಕುಳಿತಾಗ, ಹೊಪ್ಪೆ 'ಹೆವಿ ಟೀ'ಗಾಗಿ ಹಾತೊರೆಯುತ್ತಿತ್ತು. ಕಲ್ಲು ತಿಂದು ಕರಗಿಸಿಕೊಳ್ಳುವ ಜಾಗ, ಉದ್ಯೋಗ! ನಾನು, ಥಾಪಾ ಇಬ್ಬರೂ ಟೀ ಕುಡಿಯುತ್ತ, ದೂರದಲ್ಲಿ ಬೆಳಕಿನ ಮುಂದೆ, ಬೆಟ್ಟದ ಹಾದಿಯ ಮೇಲೆ, ಹಳ್ಳಿಗೆ ಹೋಗುತ್ತಿದ್ದ ಎಷ್ಟೋ ಮುಂದೆಗಳು, ಗೊಲ್ಲರು, ನೀರಿನ ಹೆಣ್ಣುಗಳು, ಮಕ್ಕಳು— ಈ ನಾಲಿನ ಚಿತ್ರವನ್ನು ನೋಡಿ ಆನಂದಿಸುತ್ತಿದ್ದೆವು. ಈ ಚಿತ್ರದಲ್ಲಿ ನಾವು ಮೊದಲನೆಯ ದಿನ ಕಂಡ ಹುಚ್ಚು ಮುದುಕನೂ ಖಂಡಿತವಾಗಿ ಇರುತ್ತಿದ್ದ. ರಾತ್ರಿ ಮುಖಂಡನೊಡನೆ ಮಾತನಾಡುತ್ತ ವಿಶೇಷ ಊಟ ಎಷ್ಟೋ ಹೊತ್ತು. ಇದಕ್ಕೆ ಹೊಪ್ಪೆ ಎಲ್ಲಿರುತ್ತಿತ್ತೋ ನಾನು ಹೇಳಲಾರೆ. ಇದರ ಮೇಲೆ ಯಥೇಚ್ಛವಾಗಿ ಮದ್ಯ. ದಿಂಬಿಗೆ ತಲೆ ಕೊಡುವುದೇ ತಡ, ಎಚ್ಚರವಿಲ್ಲದೆ ಕನಸಿಲ್ಲದೆ ದಿವ್ಯಮೌನದಂತೆ—ಪೆಣ ದಂತೆ—ಬಿದ್ದಿರುತ್ತಿದ್ದೆ. ಈ ದಿನಚರಿ ಮೂರು ದಿನ ನಡೆಯಿತು.

ಎಂದಿನಂತೆ ನಾಲ್ಕನೆಯ ಸಂಜೆಯೂ ಡೇರೆಯ ಮುಂದೆ ಕುಳಿತಿದ್ದೆವು. ಬಯಲಿನ ಗಾಳಿ ಬೀಸಿದಾಗ ನನಗೆ ನರಳಿದ ಶಬ್ದ ಕೇಳಿ ಬಂದಂತಾಯಿತು. ಬರಿಯ ಭ್ರಮೆಯಿದ್ದರೂ ಇರಬಹುದು. ಅಂತೂ ಆ ದಿಕ್ಕಿಗೆ ದೃಷ್ಟಿ ಹೊರಳಿಸಿದೆ. ಬಯಲಿನಾಚೆ ಚಿಕ್ಕ ಗೂಡಿನ ಬಳಿಯಲ್ಲಿ ಆ ಹುಚ್ಚು ಮುದುಕ ಇನ್ನೂ ಕುಳಿತಿದ್ದ. ನಾನು ನೋಡುತ್ತಿದ್ದ ಹಾಗೆಯೇ ಅವನು ಎದ್ದು ನಡೆದು, ಸಂಜೆಯ ಚಿತ್ರಸಾಲಿಗೆ ಸೇರಿಕೊಂಡ. ಇಷ್ಟು ದಿನ ಇವನನ್ನು ಕಾಣುತ್ತಿದ್ದುದು ಸಂಜೆಯಲ್ಲಿ ಮಾತ್ರವಲ್ಲ; ಪ್ರತಿ ಬೆಳಗ್ಗೆಯೂ ಡೇರೆಯ ಮುಂದೆ ನಮ್ಮ ಫೋಟೊ ಹಜರಿ ನಡೆಯುತ್ತಿದ್ದಾಗ, ಬೆಟ್ಟದ ಮೇಲಿನಿಂದ ಬೆಳಕು ಬಿದ್ದಂತೆ, ಇವನ ಬಿಳಿಗೂದಲುಗಡ್ಡದ ಆಕಾರ. ಹಳ್ಳಿಯಿಂದ ಇಳಿದು ಬರುತ್ತಿದ್ದ; ಚಿಕ್ಕ ಗೂಡನ್ನು ಸೇರುತ್ತಿದ್ದ. ನವು ಬೇಟೆಯಿಂದ ಹಿಂದಿರುಗಿದಾಗಲೂ ಅಲ್ಲೇ ಕಾಣುತ್ತಿದ್ದ. ದಿನವನ್ನೆಲ್ಲ ಅಲ್ಲೇ ಕಳೆಯುತ್ತಿದ್ದನೋ ಏನೋ, ಎಂಬ ಯೋಚನೆ ಬಂದಿತು. ಹಾಗೇಕೆ ಮಾಡುತ್ತಿದ್ದ, ಹಾಗಾದರೆ? ಏನಾದರೂ ವಿಶೇಷವಿರಬಹುದೆ? ಅಥವಾ ಬರಿಯ ಹುಚ್ಚೋ? ನನ್ನ ಕುತೂಹಲ ಕೆರಳಿತು. ಥಾಪಾನೊಡನೆ ವಿಷಯವನ್ನೆತ್ತಿದಾಗ, ಅವನು ಹುಚ್ಚನೆಂದೇ ತೀರ್ಮಾನ ಹೇಳಿದ. ಆದರೆ ನನಗೇನೋ ಸಮಾಧಾನ ವಾಗಲಿಲ್ಲ. ಮುಖಂಡನೊಡನೆ ಮಾತೆತ್ತಬೇಕೆಂದು ನಿರ್ಧರಿಸಿಕೊಂಡು ಅವನ ವಾಡಿಕೆಯ ಬರುವಿಕೆಯನ್ನು ಸ್ವಲ್ಪ ಆತುರದಿಂದಲೇ ನಿರೀಕ್ಷಿಸುತ್ತಿದೆ.

ಅವನು ಎಂದಿಗಿಂತ ಕೊಂಚ ಹೊತ್ತಾಗಿಯೇ ಬಂದ. ನಮ್ಮ ಊಟ ಆಗ ತಾನೆ ಮೊದಲಾಗಿತ್ತು. ಸ್ವಲ್ಪ ಹೊತ್ತು ಆ ದಿನದ ಬೇಟೆಯ ಮಾತುಕತೆ ಆದಮೇಲೆ ಮನಸ್ಸಿನಲ್ಲಿದ್ದ ವಿಷಯಕ್ಕೆ ಬಂದೆ:

"ಖಾಸಿ, ಆ ಹುಚ್ಚು ಮುದುಕ ಯಾರು?—ದಿನವೂ ಬೆಳಗ್ಗೆ ಸಂಜೆ ಈ ಬಯಲಿಗೆ ಬರ್ತಾನಲ್ಲ?"

ಅಲ್ಲಿಯವರೆಗೆ ಏನೋ ವಿನೋದದ ಮಾತು ನಡೆಯುತ್ತಿತ್ತು. ಅವನೂ ನಗುತ್ತಿದ್ದ. ನನ್ನ ಪ್ರಶ್ನೆ ಕೇಳಿಸಿದೊಡನೆ, ಗಂಭೀರವಾದ ವೃಷ್ಟಿ ಮೃದುವಾದಂತೆ ಕಂಡಿತು.

"ಸಾಹೇಬ್, ಅವನು ನಮ್ಮ ಬಾಬಾ—"

"ಬಾಬಾನೇ!" ನನಗೆ ಆಶ್ಚರ್ಯವಾಯಿತು. ಮನೆಯ ಮಾತು-ಅವನ ಹೆಂಡತಿ, ಮಕ್ಕಳು, ಮೂವ, ಭಾವ, ಮನೆ, ದನ ಏನೇನನ್ನೋ ತಿಳಿಸಿದ್ದರೂ, ಈ ಸುದ್ದಿಯನ್ನು ಅವನು ಹೇಳಿರಲಿಲ್ಲ.

"ಹುಂ; ಅವನು ಹುಚ್ಚ ಅನ್ನೋ ಹಾಗೂ ಇಲ್ಲ; ಯಾರಿಗೂ ಏನೂ ಕೆಡಕು ಮಾಡೋದಿಲ್ಲ. ಹುಚ್ಚನಲ್ಲ ಅನ್ನೋ ಹಾಗೂ ಇಲ್ಲ; ಒಂದು ಬಗೆ ಮುಂಕಾಗಿಬಿಟ್ಟಿದ್ದಾನೆ. ಅವನಿಗೆ ಊರೂ ಬೇಡ, ಯಾರೂ ಬೇಡ, ಏನೂ ಬೇಡ. ದಿನವೆಲ್ಲ ಈ ಬಯಲಿನಲ್ಲೇ— ಆ ಚಿಕ್ಕ ಗುಡಿ ನೋಡಿದೀರಲ್ಲ, ಅಲ್ಲಿ, ಅದರ ಬಳೀಲೇ— ಕಳೀತಾನೆ. ಒಂದೊಂದು ದಿನ ಕತ್ತಲಾದರೂ ಮನೆಗೆ ಬರೋದಿಲ್ಲ. ನಾವೇ ಹುಡುಕಿಕೊಂಡು ಬಂದು ಕರೆದುಕೊಂಡು ಹೋಗಬೇಕು— 'ಕಾಡುಜಂತು ಪಾಲಾದಾನು' ಅಂತ. ಅನ್ನ ಯಾವಾಗಲೋ ಒಂದಿಷ್ಟು ತಿಂದರೆ ತಿಂದ, ಇಲ್ಲದೆ ಇದ್ದರೆ ಇಲ್ಲನೇ ಇಲ್ಲ. ಹೇಗೆ ಬದುಕಿದಾನೋ ಅನ್ನಿಸುತ್ತೆ.... .....ಸಾಹೇಬ್, ಅವನು ನೆಟ್ಟಗಿದ್ದಾಗ ಒಂದು ದಿನ ಕಣ್ಣೀರು ಹಾಕಿದೋನಲ್ಲ; ಈಗ ಗುಳುಗುಳು ಅಂತ ಅಳ್ತಾಲೇ ಇರ್ತಾನೆ" ಚಿಂತೆಯಿಂದ ಸ್ವಲ್ಪ ಸುಮ್ಮನಾದ.

"ಓ, ಅದೇ ನಾನೂ ಕೇಳ್ತಾ ಇದ್ದದ್ದು, ಮತ್ತೆ. ಯಾಕೆ ಹಾಗೆ ಅಳ್ತಾನೆ? ಆ ಗುಡಿ ಹತ್ತಿರನೇ ಯಾಕೆ ಇರ್ತಾನೆ? ಬರಿ ಅಭ್ಯಾಸದ ಜಾಗವೋ?"

"ಇಲ್ಲ. ಅಭ್ಯಾಸವಲ್ಲ. ಅದು ನನ್ನ ತಂಗಿಯ ಗುಡಿ."

"ಏನು? ನಿನ್ನ ತಂಗೀದೆ? ನಿಂಗೆ ಒಬ್ಬಳು ತಂಗಿ ಇದ್ದಳೆ?"

"ಹುಂ ಸಾಹೇಬ್. ಅಂಥೋಳನ್ನ ನಾನು ಈ ವರೆಗೂ ನೋಡಿಲ್ಲ, ನೋಡೋದೂ ಇಲ್ಲ. ರತ್ನದಂಥ ಹುಡುಗಿ. ಕೈತೊಳೆದು ಮುಟ್ಟ ಬೇಕು ಅಂಥ ರೂಪು, ಆಕಾರ. ಊರಿಗೆ ಊರೇ ಹೊಗಳಿ ಮೋಹಿಸಿತ್ತು. ಗುಣವೂ ಅದಕ್ಕೆ ತಕ್ಕಂತೆಯೇ ಇತ್ತು. ನಮ್ಮ ಬಾಬಾನಿಗೆ ಅವಳೇ ಪ್ರಾಣದ ಹಾಗಿದ್ದಳು. ಚಿಕ್ಕ ವಯಸ್ಸಿನಲ್ಲೇ ನಮ್ಮ ತಾಯಿ ತೀರಿಹೋಗಿದ್ದು, ಅವನೇ ತಂದೆ ತಾಯಿ ಎರಡೂ ಆಗಿದ್ದ. ತೊಡೆಯಿಂದ ಕೆಳಗೆ ಇಳಿಸದೆ ಅದರ ಮೇಲೇ ಬೆಳೆಸಿದ— ಅನ್ನಬಹುದು. ಅವಳನ್ನು ಬಿಟ್ಟು ಅವನು ಬದುಕಿರೋದೂ ಒಂದು ಆಶ್ಚರ್ಯವೆ. ಗಟ್ಟಿಯಾದ ಗಂಡಸು; ತನ್ನ ಪ್ರಾಣ ತಾನೇ ತಗೊಂಡಿಲ್ಲ ಅಷ್ಟೆ."

"ಅಂದರೆ ಹುಡುಗಿ ಎಲ್ಲಿ ಹೋದಳು?"

"ಎಲ್ಲಿಗಾದರೂ ಹೋಗೋ ಅಂಥವಳೇ ಸಾಹೇಬ್? ಅಲ್ಲ. ಈಗ ಪವಿತ್ರಳಾಗಿ ದೇವತೆಯಾಗಿದ್ದಾಳೆ."

"ದೇವತೆ?"

"ಹುಂ ದೇವತೆ. ಊರಿಗೆ ಊರನ್ನೇ ಕಾಪಾಡಿದ ದೇವತೆ. ಅದಕ್ಕೇ ನಾವು ಅವಳಿಗೆ ಗುಡಿ ಕಟ್ಟಿದೀವಿ."

"ಅದು ಹೇಗೆ ಕಾಪಾಡಿದಳು ಅಂತರೆ ?" ಮುದುಕನ ಮೇಲಿದ್ದ ನನ್ನ ಮನಸ್ಸು ಹುಡುಗಿಯ ವಿಷಯಕ್ಕೆ ತಿರುಗಿತು. ಈ ಮೂಢ ಜನರು, ಆ ಮಂತ್ರವಾದಿ—ಇವರ ಮಧ್ಯೆ ಯಾವುದೋ ಉಪಶಮನಕ್ಕಾಗಿ ಬಲಿ ಯಾವಳೋ ಎನ್ನಿಸಿತು.

"ಸಾಹೇಬ್, ಅದು ನಡೆದು ಆಗಲೇ ಹತ್ತು ಹನ್ನೊಂದು ವರ್ಷ ಆಯ್ತು. ಆಗ ಯುದ್ಧ ನಡೀತಾ ಇತ್ತು. ನಮ್ಮ ಊರಿನ ಈ ಕೆಳ ಗಡೆ ದಾರೀಲಿ— ನೀವು ಬಂದಿರಲ್ಲ, ಅದರಲ್ಲಿ— ಉತ್ತರದಿಂದ ದಕ್ಷಿ ಣಕ್ಕೋ ದಕ್ಷಿಣದಿಂದ ಉತ್ತರಕ್ಕೋ ಸೈನ್ಯ ಲಾರಿಗಳಲ್ಲಿ, ಮೋಟಾರು ಗಳಲ್ಲಿ ಇನ್ನೂ ಯಾವ-ಯಾವುವರಲ್ಲೋ— ಸಂಗೆ ಹೆಸರುಗಳೇ ಗೊತ್ತಿಲ್ಲ— ಸಾಗುತ್ತ ಇರುತ್ತಿತ್ತು ಆಗಾಗ. ಒಂದು ದಿನ ಎರಡು ಮೂರು ಲಾರಿ ಜನ ಹೋದರೆ, ಇನ್ನೊಂದು ಎರಡು ದಿನದಲ್ಲಿ ಅವರ ಹಿಂದೆ ಸಾಲು ಸಾಲಾಗಿ ಮೈಲಿ ಮೈಲಿಯುದ್ದ ಸೈನ್ಯ ನಡೆದು ಹೋಗ್ತಾ ಇತ್ತು. ಒಂದೊಂದು ದಿನ ಕೆಲವರು ಇಲ್ಲೇ— ನೀನಿರೋ ಜಾಗದಲ್ಲೇ— ತಂಗ್ತಾರೂ ಇದ್ದರು.

ಚೈತ್ರಮಾಸದಲ್ಲಿ ಒಂದು ಮಧ್ಯಾನ್ನ, ನಿಮ್ಮ ಹಾಗೇ ಹತ್ತು ಹನ್ನೆರಡು ಜನ ಊರಿನ ಬಳಿ ಉಳಿದುಕೊಂಡರು. ಅವರ ಜೀಪ್-ಲಾರಿಗಳು, ಮೇಲಿನ ದಾರಿಯಲ್ಲೇ ಊರಿಗೆ ಸ್ವಲ್ಪ ದೂರದಲ್ಲಿದ್ದುವು. ಒಬ್ಬಿಬ್ಬರು ಊರಿನೊಳಕ್ಕೆ ಬಂದಿದ್ದರು. ಆಗ ನಮ್ಮ ಬಾಬಾನೇ ಊರಿಗೆ ಮುಖಂಡನಾಗಿದ್ದ. ನಿಮಗೆ ನಾವು ಮಾಡಿದಂತೆಯೇ ಉಪ ಚಾರ-ಸದಾಯಗಳಿಗೆ ಅಚ್ಚುಕಟ್ಟಾಗಿ ಏರ್ಪಡಿಸಿದ್ದ. ಸಾಮಾನೆಲ್ಲ ವನ್ನೂ ನಾನೇ ಒದಗಿಸಿದ್ದೆ. ಸಂಜೆಯವರೆಗೂ ಎಲ್ಲವೂ ಜೆನ್ನಾಗಿತ್ತು. ಈಗ ನಾವು ನೀವು ಇರುವಂತೆ ಸ್ನೇಹದಿಂದಲೇ ನಡೆದುಕೊಂಡೆವು. ಅಸರೆ ಸೂರ್ಯ ಮುಳುಗುವ ಸಮಯದಲ್ಲಿ ಒಂದು ಗಲಭೆಯ ಪ್ರಸಂಗ ನಡೆದು, ನಮ್ಮ ಅವರ ನಡುವೆ ಹಗೆತನವೇ ಹುಟ್ಟಿ ಹೋಗೆಯಾಡಿತು.

ಆ ಹೊತ್ತಿನಲ್ಲಿ ನನ್ನ ತಂಗಿ ಹೊಳೆಯಿಂದ ನೀರಿನ ಗಡಿಗೆ ಹೊತ್ತು ಬರುತ್ತಿದ್ದಳಂತೆ—ನೀವು ನಮ್ಮ ಹೆಣ್ಣುಗಳನ್ನು ನೋಡಿಲ್ಲವೇ, ಹಾಗೇ. ಆಗ ಅವಳಿಗೆ ಇನ್ನೂ ಮದುವೆ ನಿಶ್ಚಯವಾಗಿತ್ತೇ ಹೊರತು ಆಗಿರಲಿಲ್ಲ. ಅಲ್ಲೇ ದಾರಿಯನ್ನು ದಾಟುತ್ತಿದ್ದ ಸೈನ್ಯದವನು—ಅಧಿ ಕಾರಿಯಂತೆ—ಒಬ್ಬ ಅವಳನ್ನು 'ನೀರು ಹನಿಸು' ಅಂತ ಬೇಡಿದನಂತೆ. ನಮ್ಮ ಹುಡುಗಿಯರಿಗೆ ಗಂಡುಸಿನ ಭಯವಿಲ್ಲ— ನಮ್ಮ ತಿಸ್ತು ಅಷ್ಟು ಕಠಿಣ. ತಂಗಿ ತಲೆಯ ಗಡಿಗೇನ ಕೈಗೆ ಇಳಿಸಿಕೊಂಡು ಹನಿಸಿದಳು. ಅವನು ತೃಪ್ತನಾಗಿ ಹೋಗಬೇಡವೆ ? 'ಒಂದು ಮುತ್ತು ಕೊಡು' ಎಂದು ಅವಳ ಸುತ್ತ ಕೈಹಾಕಿದ. ಅವಳು ಒಪ್ಪಲಿಲ್ಲ, ಅವನು ಬಿಡ ಲಿಲ್ಲ. ಹೊಯ್ದಾಟದಲ್ಲಿ ಗಡಿಗೆ ಬಿದ್ದು ಒಡೆಯಿತು. ಅವನು ಅವಳನ್ನು ಬಾಚಿ ತಬ್ಬಿದ್ದ. ಅವಳು ಅವನ ಕೆನ್ನೆಗೆ ಅಪ್ಪಳಿಸಿದಳು; ಮುಖವನ್ನು ಪರಚಿದಳು; ಗಟ್ಟಿಯಾಗಿ ಕೂಗಿಕೊಂಡಳು. ಅವಳ ಅವೃಷ್ಟ ಜೆನ್ನಾ ಗಿತ್ತು. ನಮ್ಮ ಭೀಮನಾಗ— ನನ್ನ ಒಡನಾಡಿ, ಅವಳಿಗೆ ನಿಶ್ಚಯ ವಾಗಿದ್ದ ಗೊಲ್ಲ— ಆಗ ತಾನೆ ತನ್ನ ಮಂದೆಯ ಜತೆ ಹಳ್ಳಿಯೊಳಕ್ಕೆ ಬರ್ತಾ ಇದ್ದ. ಭೀಮನಾಗನೆಂದರೆ ಭೀಮನಂತೇ; ಊರಿನಲ್ಲೇ ಹೆಸ ರಾದ ಶೂರ. ಬಿಲ್ಲುವಿದ್ಯೆ, ಕುಸ್ತಿ, ಬೇಟೆಗಳಲ್ಲಿ ಅವನ ಹೆಸರೇ ಮೊದಲು. ಲಕ್ಷಣವಾಗಿಯೂ ಇದ್ದ. ಮೇಲಾಗಿ ದೊಡ್ಡ ಮಂದೆಯ ಒಡೆಯ. ಹುಡುಗತನದಿಂದಲೂ ಜಯಂತಿಯನ್ನು ಒಲಿಸಿಕೊಂಡಿದ್ದ. ಬಾಬಾನ ಒಪ್ಪಿಗೆಯೂ ಇತ್ತು. ಅದೇ ವೈಶಾಖದಲ್ಲಿ ಅವರಿಗೆ ಶೋಭನ ವಾಗೋದಿತ್ತು. ಜಯಂತಿಯ— ಅದೇ ನನ್ನ ತಂಗಿಯ ಹೆಸರು— ಕೂಗು ಕೇಳಿ ನಾಗ ಹಿಂತಿರುಗಿ ಹಾರಿದ. ಅವಳಿಂದ ಆ ದುಷ್ಟನ್ನ ಕಿತ್ತ. ಇಬ್ಬರಿಗೂ ಹೋರಾಟವಾಯಿತು. ಒಬ್ಬೊಬ್ಬರ ಮೇಲೆ ಉರುಳಾಡಿ ಹೊಡೆದಾಡಿದರು. ದುಷ್ಟನೂ ಗಟ್ಟಿಗನೇ. ಆದರೆ ನಾಗನ ಮುಂದೆ ಅವನ ಕೈ ಸಾಗಲಿಲ್ಲ. ಅವನ ಮೈ ಹುಣ್ಣು ಹುಣ್ಣಾಯಿತು, ಮೂಗು ಬಾಯಿಂದ ರಕ್ತ ಕಿತ್ತುಕೊಂಡಿತು. ಅವನು ಬದುಕಿದ್ದೇ ಹೆಚ್ಚು. ಅವನನ್ನು ಅಲ್ಲೇ ಬಿಟ್ಟು ನಾಗ ಜಯಂತಿ ಇಬ್ಬರೂ ಹಳ್ಳಿಗೆ ಬಂದರು. ನಾಗನಿಗೆ ತಲೆಯ ಮೇಲೆ ಒಂದು ಗಾಯವಾಗಿ ರಕ್ತ ಸೋರ್ತಾ ಇತ್ತು. ಜಯಂತಿಯ ಮುಖದ ಮೇಲೆ ಉಗುರಿನ ಗೆರೆ ಒಂದು ಕೆಂಪಗೆ ಕಾಣು ತ್ತಿತ್ತು. ಈ ಜಗಳದ ವಿಷಯ ನಿಮಿಷದಲ್ಲಿ ಊರಿನಲ್ಲೆಲ್ಲ ಪರಡಿತು. ನಮಗೆಲ್ಲ— ಅವರಲ್ಲಿಯೂ ಬಾಬಾನಿಗೆ— ದುಷ್ಟನ ನಡತೆ ಕೋಪ ವನ್ನು ತಂದಿತು; ಹಾಗೇ ಭೀಮನಾಗನ ವಿಜಯ ಹೆಮ್ಮೆಯನ್ನುಂಟು ಮಾಡಿತು. ಬಾಬಾ 'ನಿನ್ನ ಮುಂದಿನ ಹೆಂಡತಿಯನ್ನು ರಕ್ಷಿಸಿಕೊಂಡೆ' ಎಂದು ಅವನ ಬೆನ್ನು ತಟ್ಟಿದ; ಆದರೆ ಕಾದಿದ್ದ ಆಪತ್ತನ್ನು ನಾವೇನು ಕಂಡಿದ್ದೆವು ?" ಖಾಸಿ ಕೊಂಚ ತಡೆದ.

ಥಾಪಾ ಊಟವನ್ನು ಮುಗಿಸಿ ಏಳುತ್ತಿದ್ದ. ನನ್ನ ತುತ್ತು ಸಾಗಿಯೇ ಇರಲಿಲ್ಲ. ನಾನು ಥಾಪಾನಿಗೆ "ಕುಳಿತುಕೊಳ್ಳಿ, ಕತೆ ಸ್ವಾರಸ್ಯವಾಗಿಲ್ಲವೆ ? ಇಂಥಾದ್ದನ್ನೆಲ್ಲ ನಾವು ತಿಳಿಯೋದು ಅಗತ್ಯ" ಎಂದೆ. ಅವನು ಮತ್ತೆ ಕುಳಿತು ಇನ್ನಷ್ಟು ಮದ್ಯ ಬಗ್ಗಿಸಿದ. "ಆಪತ್ತು ಏನು ಬಂತು ?" ಖಾಸಿಯನ್ನು ಕೇಳಿದೆ. ಅವನು ಮುಂದುವರಿಸಿದ.

"ನಾವು ನಾಗನನ್ನು ಎತ್ತಿಕೊಂಡು ಊರಿನಲ್ಲಿ ಮೆರವಣಿಗೆ ಹೊರಡುವುದರಲ್ಲಿದ್ದೆವು. ಅಷ್ಟರಲ್ಲೇ ಅನೇಕ ಗುಂಡುಗಳ ಶಬ್ದ ಕೇಳಿ ಸಿತು. ಇನ್ನೊಂದು ಗಳಿಗೆಯಲ್ಲಿ ಬೆಟ್ಟದ ಕಡಿದು ನೆಲದ ಮೇಲೇ ನುಗ್ಗಿ ಎರಡು ಮುಚ್ಚಿದ ಲಾರಿಗಳು ಊರಿನ ಬಳಿಗೆ ಬಂದುವು. ಬಾಣ-ಬಿರುಸುಗಳ ಹಾಗೆ ಆಕಾಶದಲ್ಲಿ ಗುಂಡಿನ ಜೆಲ್ಲಾಟ ಕಂಡಿತು. ಜನ ರೆಲ್ಲ ಭಯದಿಂದ ಗುಡಿಸಿಲುಗಳನ್ನು ಹೊಕ್ಕರು. ಊರೆಲ್ಲ ಮೊಳಗು ವಂತೆ ದೊಡ್ಡ ಧ್ವನಿ ಕೇಳಿಸಿತು : "ಮುಖಂಡ ಒಬ್ಬನೇ ಈಗಲೇ ಇಲ್ಲಿ ಬರಬೇಕು ! ಇಲ್ಲದಿದ್ದರೆ ಹಳ್ಳಿನೇ ಕ್ಷಣದಲ್ಲಿ ಸುಟ್ಟು ಹಾಕ್ತೇವಿ !" ನಾನೂ ಭೀಮನೂ ಬಾಬಾನಿಗೆ ಹೋಗಬಾರದೆಂದು ಸೂಚನೆ ಕೊಟ್ಟು ಯುದ್ಧಕ್ಕೆ ಸಿದ್ಧರಾಗಬೇಕೆಂದು ಹೇಳಿದೆವು. ಅವನು ಒಪ್ಪಲಿಲ್ಲ. ನನ್ನೊಬ್ಬನಿಂದ ಹಳ್ಳಿಗೆ ಒಳ್ಳೆಯದಾದರೆ ಯಾಕಾಗಬಾರದು ಎಂದು ಒಬ್ಬನೇ ಹೊರಟೇ ಬಿಟ್ಟ.

ಅವನು ಹಿಂದಿರುಗುವವರೆಗೂ ನಾವು ಮುಳ್ಳಿನ ಮೇಲಿದ್ದೆವು. ಆದರೆ ಅವನು ತಂದದ್ದು ಸಿಡಿಲಿನಂಥ ಸಮಾಚಾರ. ಪೆಟ್ಟು ತಿಂದಿದ್ದ ಅಧಿಕಾರಿ ರೋಷಾವೇಶದಿಂದ ಮಾತಾಡಿದನಂತೆ. 'ನಿನ್ನ ಗರ್ವ ಇಳಿ

ಸ್ತೀನಿ, ಬುದ್ಧಿ ಕಲಿಸ್ತೀನಿ!' ಎಂದು ಹೆದರಿಸಿ, ಜಯಂತೀನ ತನಗೆ ಒಪ್ಪಿಸಬೇಕೆಂದು ಅಪ್ಪಣೆ ಮಾಡಿದನಂತೆ. ಬಾಬಾ ಏರುತ್ತಿದ್ದ ಸಿಟ್ಟನ್ನು ತಡೆದುಕೊಂಡು 'ಈ ವಿಷಯ ಹಳ್ಳಿಯ ಹಿರಿಯರಿಗೆ ಸೇರಿದ್ದು. ಅವರೊಡನೆ ಆಲೋಚಿಸಬೇಕು. ಕಾಲ ಕೊಡಿ' ಅಂದನಂತೆ. ಮಗಳನ್ನು ಒಪ್ಪಿಸೋ ಯೋಚನೆ ಅವನ ಮನಸ್ಸಿಗೇ ಬರಲಿಲ್ಲ. ಆದರೆ ಜಗಳವಾಗ ಬೇಕಾದರೆ ನಮಗೆ ಕೊಂಚ ಕಾಲ ಸಿಕ್ಕಲಿ ಅಂತ ಆಡಿದ. 'ಯಾವಾಗ ಸಭೆ ಸೇರಿಸಿ ನಿರ್ಧರಿಸ್ತೀಯೆ?' ಎಂದು ಅಧಿಕಾರಿ ಕೇಳಿದಾಗ ಬಾಬಾ 'ನಾಳೆ ಬೆಳಗ್ಗೆ' ಅಂದನಂತೆ. ಅಧಿಕಾರಿ ಒಪ್ಪಲಿಲ್ಲ. ಕಡೆಗೆ 'ನೀವು ಯಾವಾಗಲಾದರೂ ಸೇರಿ ಏನಾದರೂ ಮಾಡಿ. ನಾಳೆ ಬೆಳಗ್ಗೆ ಆರು ಗಂಟೆಯ ಹೊತ್ತಿಗೆ ಹುಡುಗೀನ ಒಪ್ಪಿಸದಿದ್ದರೆ ನಿಮ್ಮ ಹಳ್ಳೀನ ಧ್ವಂಸ ಮಾಡ್ತೀನಿ. ಒಂದು ಪಿಳ್ಳೆ ಬದುಕಗೊಡೋದಿಲ್ಲ, ತಿಳೀತೆ? ಈ ಹಳ್ಳಿಯಂಥ ನೂರು ಹಳ್ಳೀನ ನೆಲಸಮ ಮಾಡೋದಕ್ಕೆ ತಕ್ಕಷ್ಟು ಮದ್ದು ಗುಂಡು ನಮ್ಮಲ್ಲಿವೆ. ಸೈನಿಕರೂ ಇದಾರೆ. ನಿಮ್ಮ ಬಿಲ್ಲು, ಬಾಣ, ಕತ್ತಿ, ಕೊಡಲಿ ಆಟ ಏನೂ ನಡೆಯೋದಿಲ್ಲ. ಎಲ್ಲ ನಾಶಮಾಗ್ತೀರಿ—ಒಬ್ಬಳು ಗರ್ಲಿಷ್ಮಳಿಗಾಗಿ. ಜೋಕೆ! ಇದೇ ನಿಂಗೆ ಎಚ್ಚರ. ನಾವು ಇಲ್ಲೇ ದೊಡ್ಡ ದಾರೀಲಿ ಇರ್ತೀನಿ' ಎಂದು ಹೇಳಿ ಲಾರಿಗಳು ಹಿಂತಿರುಗೋ ಹಾಗೆ ಅಪ್ಪಣೆಮಾಡಿದನಂತೆ.

ವಿಷಯ ನಮಗೆಲ್ಲ ತಿಳಿದ ಮೇಲೆ ಹಳ್ಳಿ ಯುದ್ಧಾನ್ನೇ ಆರಿಸಿ ಕೊಂಡಿತು ಅಂತ ಹೇಳಬೇಕೆ? ಏನೇ ಬರಲಿ, ಕುಲದ ಹೆಣ್ಣನ್ನು ಪರರ ಅಪ್ಪಣೆಯಂತೆ ಅವರ ವಶಮಾಡಿ ಬದುಕೋ ಜನರಲ್ಲ ನಾವು. ಆ ಮದ್ದು-ಗುಂಡುಗಳ ಪ್ರಭಾವದ ಮೇಲೆ ನಮ್ಮ ನಿಸ್ಸಾಹಾಯಕತೆ ತಿಳಿದಿದ್ದರೂ, ಮಂತ್ರವಾದಿ 'ಹಳ್ಳಿಗೆ ಕೇಡಿಲ್ಲ' ಎಂದು ಹೇಳಿದ್ದು ಉತ್ಸಾಹವನ್ನು ಕೊಟ್ಟಿತ್ತು. ಬಾಬಾನ ಮುಂದಾಳುತನದಲ್ಲಿ ಸಿದ್ಧತೆಗಳು ನಡೆದವು. ವ್ಯೂಹರಚನೆ, ಒಬ್ಬೊಬ್ಬರ ಸ್ಥಳ ಎಲ್ಲವೂ ಗೊತ್ತು ಪಡಿಸಲ್ಪಟ್ಟು, ಬೆಳಗ್ಗೆ ಐದು ಗಂಟೆಗೆ ಸಿಲ್ಲುವ ರೀತಿಯ 'ರಿಹರ್ಸಾಲ್' ಆಯಿತು. ಭೀಮನಾಗ ಬಾಬಾನ ಬಲಗೈಯಾಗಿ ಅವನಿಗೆ ಎರಡನೆಯವನಾಗಿ ನಿಂತ. ಹೆಂಗುಸರು ಮಕ್ಕಳು ಸೂರ್ಯೋದಯಕ್ಕೆ ಸ್ವಲ್ಪ ಮುಂದಾಗಿ ಕಾಡನ್ನು ಸೇರಿಕೊಳ್ಳಬೇಕೆಂದೂ ಅವರ ಜೊಗಾವಲಿಗೆ ಇಪ್ಪತ್ತು ಆಳು ಆಯುಧಗಳೊಡನೆ ಹೋಗಬೇಕೆಂದೂ ನಿರ್ಧರವಾಯಿತು. ಆ ಗುಂಪಿನ ನಾಯಕತ್ವ ನನಗಾದಾಗ, ನನಗಾಪ ಅಸಮಾಧಾನ ಅಷ್ಟಿಷ್ಟಲ್ಲ. ಗೊಣಗಿದೆ. ಆದರೆ ಬಾಬಾನ ವೃಷ್ಟಿ ತಣ್ಣಗಾಗಿಸಿತು. 'ಕುಲದ ಒಳ್ಳೇದಕ್ಕೇ ಮುಖಂಡ ಮಾಡೋದೆಲ್ಲ; ಅದನ್ನು ವಿರೋಧಿಸೋದಕ್ಕೆ ಯಾರಿಗೂ ಅಧಿಕಾರವಿಲ್ಲ' ಎಂದ. ನಾನು ತೆಪ್ಪಗಾಗಿ ಆಪ ಆಕಾಭಂಗವನ್ನು ನುಂಗಿಕೊಂಡೆ.

ಹಳ್ಳಿಯ ತೀರ್ಮಾನ, ನಮ್ಮ ಗಡಿಬಿಡಿ ಇವನ್ನು ನೋಡುತ್ತ ಯೋಚಿಸಿ, ಜಯಂತಿ ಬಾಬಾನಿಗೆ, 'ಬಾಬಾ, ಒಬ್ಬಳಿಗೋಸ್ಕರ ನಮ್ಮ ಕುಲವೇ ಹಾಳಾಗಿ ಹೋಗೋದು ಸರಿಯೆ? ನಾನು ಅವರಲ್ಲಿಗೆ ಹೋದರೆ....' ಎನ್ನುವಲ್ಲೇ ಅವನು ಬಾಯಿಹಾಕಿ 'ಪುಟ್ಟಿ, ನಿಂಗೇನೂ ತಿಳಿಯೋದಿಲ್ಲ. ಇದು ನಮ್ಮ ಮರ್ಯಾದೆಯ ಕರ್ತವ್ಯ. ಸುಮ್ಮನಿರು' ಎಂದು ತಲೆಸವರಿದ.

ಚಂದ್ರ ನೆತ್ತಿಯಮೇಲೆ ಬಂದಾಗ, ಊರು ಸಿದ್ಧತೆಮಾಡಿಕೊಂಡು ಮಲಗಿದ್ದಂತಿತ್ತು. ನಮ್ಮ ಗುಡಿಸಲಿನಲ್ಲಿ ಮಾತ್ರ ಎಚ್ಚರವಾಗಿದ್ದೆವು. ಭೀಮನಾಗನೂ ಅಲ್ಲೇ ಇದ್ದ, ಜಯಂತಿಯನ್ನು ಒಂದು ವಿಧವಾಗಿ ನೋಡುತ್ತಿದ್ದ. ನಾನು ಬಾಬಾ ಏನೋ ನೆಪಮಾಡಿಕೊಂಡು ಗುಡಿಸಿಲಿನ ಹೊರಗೆ ಬಂದೆವು. ಅವಳೊಡನೆ ಒಂದು ಕ್ಷಣವಿದ್ದು ಅವನೂ ಹೊರಗೆ ಬಂದು ನನ್ನ ಕೈಹಿಡಿದುಕೊಂಡ. ಒಬ್ಬರನ್ನೊಬ್ಬರು ತಬ್ಬಿಕೊಂಡೆವು. ಆಮೇಲೆ ಅವನು ತನ್ನ ಗುಡಿಸಿಲಿಗೆ ಹೊರಟುಹೋದ. ನಾವೂ ಒಳಗೆ ಹೋಗಿ ಮಲಗಿದೆವು. ಆಗಲೇ ಜಯಂತಿ ಹಿಂದಿನ ತನ್ನ ಕೋಣೆಗೆ ಹೋಗಿದ್ದಳು.

ನಂಗೆ ತಬ್ಬಿನೆ ಎಚ್ಚರವಾಯ್ತು. ಬಾಬಾ ಆಗಲೇ ಎದ್ದು ಹೋಗಿದ್ದ. ಹೊರಗೆ ಹೋದೆ. ಚಂದ್ರ ಮುಳುಗುತ್ತಿದ್ದ. ಊರಿನ ಜನ ನೆರಳುಗಳಂತೆ ಸದ್ದಿಲ್ಲದೆ ಓಡಾಡುತ್ತಿದ್ದುದು ಕಾಣಿಸಿತು. ನನ್ನ ಭಾಗದ ಕೆಲಸವನ್ನು ನೆನೆಸಿಕೊಂಡೆ. ಜಯಂತಿಯನ್ನು ಕೂಡಿ ಊರಿನ ಪೂರ್ವಭಾಗಕ್ಕೆ ಹೋಗಬೇಕಾಗಿತ್ತು. ಅವಳನ್ನು ಎಬ್ಬಿಸೋವಕ್ಕೆ ಬತ್ತಿ ಹಚ್ಚಿಸಿಕೊಂಡು ಅವಳ ಕೋಣೆಗೆ ಹೋದೆ. ಅವಳು ಅಲ್ಲಿರಲಿಲ್ಲ! ಇದೇಸು, ಈಗಾಗಲೇ ಗುಂಪಿಗೆ ಹೋದಳಿ? ನನ್ನ ಜೊತೆ ಹೋಗೋದು ಗೊತ್ತಾಗಿತ್ತಲ್ಲ. ಏನಾದರೂ ಬಾಬಾನ ಜತೆ ಹೋಗಿದಾಳೋ? ಅಕ್ಕಪಕ್ಕದ ಗುಡಿಸಿಲಿನಲ್ಲಿ ವಿಚಾರಿಸಿ ಬಾಬಾನನ್ನು ಹುಡುಕಿಕೊಂಡು ಹೋದೆ. ಅವನು ಒಂದು ಗುಂಪಿನ ಮಧ್ಯದಲ್ಲಿದ್ದ. ಜನರು ರಸ್ತೆಯ ಕಡೆ ದೃಷ್ಟಿಸುತ್ತ ಆವೇಶದಿಂದ ಗುಸುಗುಟ್ಟುತ್ತಿದ್ದರು: 'ನಿಜ, ಹೊರಟೇ ಹೋಗಿದಾರೆ! ಅಲ್ಲಿ ನೋಡಿ ಸರಿಯಾಗಿ' ಯಾರೋ ಅಂದರು. ನಾನೂ ಇಳಿಯುತ್ತಿದ್ದ ಚಂದ್ರನ ಮಬ್ಬೆಳಕಿನಲ್ಲಿ ಕಷ್ಟಪಟ್ಟು ದೃಷ್ಟಿಸಿದೆ. ನಿಜ! ಲಾರಿಗಳು ಜೊರಟು ಹೋಗಿದ್ದುವು! 'ಇದೇನೋ ಮೋಸ ಇರಬಹುದು. ಹೋದರು ಅಂತ ನಂಬಬೇಡಿ—ಇನ್ನೂ ಬೆಳಕಾಗಲಿ' ಬಾಬಾ ಹೇಳುತ್ತಿದ್ದ. ಬಾಬಾನಿಗೆ ಜಯಂತಿಯ ವಿಷಯ ತಿಳಿದಿರಲಿಲ್ಲ. 'ಹುಡುಕಿನೋಡು, ಬಂದು ಹೇಳು. ಹೆಂಗುಸರು ಹೊರಡೋದು ಸ್ವಲ್ಪ ತಡೆಯಲಿ' ಅಂದ. ನಾನು ಹೆಂಗುಸರು ತಲೆಯಬೇಕಾಗಿದ್ದಲ್ಲಿಗೆ ಹೋದೆ. ಜಯಂತಿ ಅಲ್ಲೂ ಇರಲಿಲ್ಲ. ಅಲ್ಲಿ ಇದ್ದೋರಿಗೆ ಬಾಬಾನ ಅಪ್ಪಣೆ ತಿಳಿಸಿ, ಹಳ್ಳಿಯಲ್ಲೆಲ್ಲ ಎಷ್ಟೋ ಹೊತ್ತು ಸುತ್ತಾಡಿ ಹುಡುಕಿದೆ. ಬೆಳಕು ಹರಿಯುತ್ತಿತ್ತು. ಎಲ್ಲರೂ ಇದ್ದರು, ಅವಳು ಮಾತ್ರ ಇಲ್ಲ! ನನಗೆ ಕಳವಳವಾಯ್ತು. ಬಾಬಾ, ಭೀಮನಾಗ ಇವರಿಗೆ ಇನ್ನೊಂದು ಸಾರಿಯೂ ತಿಳಿಸಿದಾಗ ಅವರಿಗೂ ಗಾಬರಿಯಾಯ್ತು. ಒಬ್ಬರ ಮುಖವನ್ನು ಒಬ್ಬರು ಸುಮ್ಮನೆ ನೋಡಿಕೊಂಡೆವು. ತಕ್ಷಣವೇ ಬಾಬಾ ನಾಲ್ಕು ಗುಂಪನ್ನು ಮಾಡಿ ಅವಳನ್ನು ಹುಡುಕೋವಕ್ಕೆ ಕಳಿಸಿದ. ನಾನೂ ನಾಗನೂ ಒಂದು ಗುಂಪಿನಲ್ಲಿದ್ದೆವು.

ಹುಡುಕಿದೆವು, ಹುಡುಕಿದೆವು— ಸದ್ದಿಲ್ಲದೆ. ಮಬ್ಬುಗತ್ತಲೆಯಲ್ಲಿ. ಮೆಲ್ಲಮೆಲ್ಲಗೆ ಲಾರಿಗಳಿದ್ದ ಕಡೆಗೆ ಸಾಗುತ್ತಿದ್ದೆವು. ಕಡೆಗೆ ಸಿಕ್ಕಿದಳು! ಅಯ್ಯೋ! ಅಲ್ಲಿ! ಅವಳ ಅವಸ್ಥೆ! ರಸ್ತೆಯ ಪಕ್ಕದ ಪೊದೆಯ ಬಳಿ, ಹುಲ್ಲಿನ ಮೇಲೆ ಬಿದ್ದಿದ್ದಳು! ಅಬ್ಬಾ! ಎಂಥ ನೋಟ! ಕಣ್ಣು ನುಚ್ಚಿದ್ದಳು. ಬಟ್ಟೆಯೆಲ್ಲ ಹರಿದು ಹೋಗಿತ್ತು,

ರಕ್ತದ ಕಲೆಯಾಗಿತ್ತು, ಮುಖ ಎದೆಗಳ ಮೇಲೆಲ್ಲ ಗೀರು, ಸಣ್ಣ ಗಾಯಗಳು! ತುಟಿಯ ಮೇಲಿನ ಒಂದು ಗಾಯದಲ್ಲಿ ರಕ್ತ ಹೆಪ್ಪು ಗಟ್ಟಿತ್ತು. ತಲೆಗೆದರಿ ಅಸ್ತವ್ಯಸ್ತವಾಗಿತ್ತು. ನಾಗ ನಾನು ತಟ್ಟನೆ ಮುಂಡಿಯೂರಿ ಕೂತು ಅವಳ ಕೈಹಿಡಿದೆವು. ಇನ್ನೂ ಬೆಚ್ಚಗಿತ್ತು. 'ಅಯ್ಯೋ ಜಯಂತಿ! ಏನು ಮಾಡಿಬಿಟ್ಟೆ!' ಎಂದು ಕೂಗಿಕೊಂಡೇ ಬಿಟ್ಟೆ. ನಾಗನ ಎದೆ ಉಬ್ಬುಬ್ಬಿ ಇಳಿಯುತ್ತಿತ್ತು. ಕಣ್ಣು ಕೆಂಡ ಕಾರುತ್ತಿತ್ತು. ಆ ನೀಚರು ನಿಜವಾಗಿಯೂ ಹೊರಟುಹೋಗಿದ್ದರು.

ಅವಳನ್ನು ಹೊತ್ತು ತಂದಾಗ ನೋಡಿದ ಬಾಬಾ ಅವಳ ಬಳಿ ಕಲ್ಲಿನ ಪ್ರತಿಮೆಯಂತೆ ಕೂತು ಬಿಟ್ಟ. ಅವಳಿಗೆ ಬೇರೆಯ ಬಟ್ಟೆ ಹೊದಿಸಿ, ಎಷ್ಟೋ ಹೊತ್ತು ಶೈತ್ಯೋಪಚಾರ ಮಾಡಿದ ಮೇಲೆ ಅವಳು ಕಣ್ಣು ಬಿಟ್ಟಳು, ಸುತ್ತ ನೋಡಿದಳು, ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡು ಬಿಟ್ಟಳು. ಈ ವರೆಗೆ ಬೆಳಕಾಗಿತ್ತು. ಶತ್ರುಗಳ ಸುಳಿವಿರಲಿಲ್ಲ. ಊರಿನ ಗಮನವೆಲ್ಲ ಜಯಂತಿಯ ಕಡೆಗೆ ತಿರುಗಿತು. ಮುಂದೆ ಅವಳ ಗತಿಯೇನು?—ಅಂತ ಕನಿಕರಪಡುತ್ತ, ಏನೇನನ್ನೋ ಊಹಿಸಿ ತಳಮಳಗೊಳ್ಳುತ್ತಿದ್ದ ನನ್ನ ಮನಸ್ಸಿನಂತೇ ಇನ್ನೂ ಎಷ್ಟು ಇದ್ದುವೋ'' ಆಗ ಖಾಸಿ ಉದ್ದವಾಗಿ ನಿಟ್ಟುಸಿರನ್ನು ಬಿಟ್ಟು ಸುಮ್ಮನಾವ.

ಥಾಪಾ ಈಗ ಏಳಲಿಲ್ಲ. ಇನ್ನೊಂದು ಬಟ್ಟಲು ಮದ್ಯವನ್ನು ಬಗ್ಗಿಸಿಕೊಂಡ. ನನ್ನ ಊಟದ ಕೈ ಆರಿಹೋಗಿತ್ತು.

"ಛೆ, ಪಾಪ! ಎಂಥ ಹೆಣ್ಣು!....ಆ ಮೇಲೆ? ಏನಾಯ್ತು?'' ನಾನು ತಿವಿದು ಕೇಳಬೇಕಾಯಿತು.

"ಆ ಮೇಲೆ ಏನು ಸಾಹೇಬ್. ಆಗೋದೇ ಆಯ್ತು. ಹುಂ. ಅವತ್ತೇ ಮಧ್ಯಾನ್ಹ ಸಭೆ ಸೇರಿತು, ಆ ನಿರ್ಭಾಗ್ಯಳ ವಿಷಯ ನಿರ್ಧರಿಸೋದಕ್ಕೆ. ಅಲ್ಲಿ ಊರಿಗೆ ಊರೇ ಸೇರಿತ್ತು. ಗುಜುಗುಜು ಹೇಳ ತೀರದು. ಹಿರಿಯರು ಮುಂತ್ರವಾದಿ ಇವರು ತಮ್ಮೊಳಗೇ ಮಾತಾಡಿ ಕೋತಾ ಒಂದು ಕಡೆ ಕೂತಿದ್ದರು. ಬಾಬಾ ಅವರ ಮಧ್ಯೆ ಇದ್ದ; ಮಾತಾಡ್ತಾ ಇರಲಿಲ್ಲ. ನನ್ನ ತಂಗಿ ಅವರ ಮುಂದೆ ಸ್ವಲ್ಪ ದೂರದಲ್ಲಿ ನಿಂತಿದ್ದಳು. ನಾಗ ಅವಳಿಗೆ ಸಮೀಸದಲ್ಲೇ ಗುಂಪಿನ ಜತೆ ಇದ್ದ. ಹೊತ್ತಾದ ಹಾಗೆ ಗುಜುಗುಜು ಹೆಚ್ಚಾಗಿ ಯಾರೋ 'ಇವಳು ಊರಿನ ತೀರ್ಮಾನಕ್ಕೆ ವಿರುದ್ಧವಾಗಿ ನಡೆದು ಊರಿಗೇ ಅಪಮಾನ ತಂದಿದಾಳೆ, ತಕ್ಕ ಶಿಕ್ಷೆ ಮಾಡಬೇಕು' ಎಂದರು. ಇನ್ನೊಬ್ಬ 'ಮುಂತ್ರವಾದಿ ಹೇಳಿದಾರೆ, ಸುಟ್ಟೇ ಅವಳನ್ನು ಶುದ್ಧಿ ಮಾಡಬೇಕಂತೆ. ಇಲ್ಲದಿದ್ದರೆ ಕುಲಕ್ಕೇ ದೊಡ್ಡ ಕೆಡುಕು ಖಂಡಿತವಂತೆ. ಈಗಾಗಲೇ ಬೆಳಿಗ್ಗೆ ಗಬ್ಬದ ಹಸು ಸತ್ತಿದೆ. ಇನ್ನೂ ಏನೇನು ಆಗುತ್ತೋ. ಪಿತೃದೇವತೆಗಳು ಬಹಳ ಸಿಟ್ಟಾಗಿದ್ದಾರಂತೆ' ಎಂದು ಸೇರಿಸಿದ. 'ಸಾಕು, ನುಚ್ಚಿ ಬಾಯ! ಯಾರಿಗೋಸ್ಕರ ಮಾಡಿದ್ದಾಳೆ ಗೊತ್ತಿಲ್ಸಿ— ಊರಿಗಾಗಿ ಅಂತ! ತಾನಾಗಿ ಬಯಸಿ ಮಾಡಿದ್ದೇ? ಸುಡೋರು ಮುಂದೆ ಬರಲಿ, ಮಾಡ್ತೀನಿ ಶಾಸ್ತಿ!' ಭೀಮನಾಗ ರೇಗಿದ. ಅವಳ ಪರವಾಗಿ ವಿರೋಧವಾಗಿ ವಾಗ್ವಾದ ಹತ್ತಿಕೊಂಡಿತು. ಇನ್ನೂ ಅನೇಕರು ಸೇರಿಕೊಂಡರು. ಗೊಂದಲವಾಯ್ತು. ಆಗ ಬಾಬಾ 'ಸದ್ದು! ಇದರ ತೀರ್ಮಾನ ನಮಗೆ ಬಿಡಿ. ನಿಮಗೇನೂ ಅಧಿಕಾರವಿಲ್ಲ. ಸುಮ್ಮನಿರಿ! ಇಲ್ಲದಿದ್ದರೆ ಶಿಕ್ಷೆ ವಿಧಿಸ್ತೀನಿ' ಎಂದು ಕೂಗಿದ. ಕೂಡಲೇ ಜನದ ಕೂಗಾಟ ಸಣ್ಣ ಗುಜುಗುಜುಗೆ ಇಳೀತು.

ಎಷ್ಟೋ ಹೊತ್ತಿನ ಮೇಲೆ ಬಾಬಾ ತೀರ್ಮಾನ ಹೇಳೋದಕ್ಕೆ ಎದ್ದ. ಜನರು ತುಟಿ ಪಿಟಿಕ್ ಅನ್ನದೆ ಅವನನ್ನೇ ಎವೆಯಿಕ್ಕದೆ ನೋಡುತ್ತ ನ್ಯೆಯೆಲ್ಲ ಕೆವಿಯಾಗಿಸಿದ್ದರು. ಆದರೆ ಅವನ ತುಟಿ ಅಲುಗಿತೇ ಹೊರತು ಮಾತೇ ಹೊರಡಲಿಲ್ಲ. ಉಗುಳು ನುಂಗುತ್ತಲೇ ನಿಂತುಬಿಟ್ಟ. ಬಾಬಾ ನನ್ನು ಇಂಥ ನಿಸ್ಸಹಾಯ ಸ್ಥಿತಿಯಲ್ಲಿ ನೋಡಿದ್ದು ಇದೇ ಮೊದಲು. ನಿಮಿಷಗಳು ಕಳೆದುವು. ಇನ್ನೂ ಅದೇ ಮೂಕ ನೋಟ. ಕಡೆಗೆ ಮಾತಾಡಿದಳು ಜಯಂತಿಯೇ; 'ಬಾಬಾ, ಹೇಳೋದೇನಿದೆ? ಯಾರಿಗೆ ಗೊತ್ತಿಲ್ಲ? ನನಗೇನಿದೆ ಇನ್ನು ಮುಂದೆ? ಇಷ್ಟು ಕುಲ ಗೆಟ್ಟ ನನ್ನ ಪಾಪ ಸುಟ್ಟಲ್ಲದೆ ಹೋದೀತೆ? ಹಾಗಲ್ಲದೆ ಪಿತೃಗಳು ಶಾಂತರಾದಾರೇ? ನಾನು ಸಿದ್ಧವಾಗಿದೀನಿ' ಎಂದಾಗ ನಾವೆಲ್ಲ ದಂಗು ಬಡಿದು ಹೋದೆವು. ಬಾಬಾ ನುಗ್ಗುವ ಕಣ್ಣೀರನ್ನು ತಡೆಹಿಡಿದುಕೊಳ್ಳುತ್ತ ಕಟ್ಟದ ಗಂಟಲಿನಲ್ಲಿ 'ಅದೇ ತೀರ್ಮಾನ' ಎಂದು ತೊದಲಿ ಮುಖ ತಿರುಗಿಸಿಕೊಂಡು ಬಿಟ್ಟ. ಅರೆಕ್ಷಣ ನಿಶ್ಶಬ್ದ. ಎಲ್ಲರ ಮುಖವೂ ಮೃದು. ಅನೇಕರು—ಅದರಲ್ಲೂ ಹೆಂಗುಸರು— ಕಣ್ಣೀರನ್ನು ಬೆರಳಿನಿಂದ ಒರೆಸಿಕೊಳ್ಳುತ್ತಿದ್ದರು. ಮುಂದಿನ ಕ್ಷಣದಲ್ಲಿ ಭೀಮನಾಗ ಮುಂದೆ ಬಂದ: 'ಶುದ್ಧ ಅನ್ಯಾಯದ ತೀರ್ಮಾನ! ನಿರ್ದಯತೆ ಅಂದರೆ ಇದಕ್ಕಿಂತ ಹೆಚ್ಚಿಲ್ಲ. ಕೃತಜ್ಞತೆ ಕನಿಕರ ಯಾವುದೂ ಬೇಡನೇ? ನಾನು ಇದಕ್ಕೆ ಒಪ್ಪೋದಿಲ್ಲ. ಇವಳನ್ನು ರಕ್ಷಿಸಿಕೋತೀನಿ. ಆದದ್ದಾಗಲಿ!' ಎಂದು ಆರ್ಭಟಿಸಿ ಅವಳ ಪಕ್ಕಕ್ಕೆ ಸರಿದುಕೊಂಡ. ಇಂಥ ವಿರೋಧಾನ ಊರು ಕಂಡೇ ಇರಲಿಲ್ಲ. ಆಶ್ಚರ್ಯದ ಮೇಲೆ ಆಶ್ಚರ್ಯ! ಜಯಂತಿ 'ಇದರಿಂದ ಏನು ಪ್ರಯೋಜನ? ಆಗೋದು ತಪ್ಪೋದಿಲ್ಲ. ಸುಮ್ಮನೆ ಒಬ್ಬರ ಬದಲು ಇಬ್ಬರು ಶಿಕ್ಷೆ ಅನುಭವಿಸೋದೆ? ಬೇಡ' ಎಂದು ಕಣ್ಣೀರು ತಂದಳು. ನಾಗ 'ಉಹುಂ, ಎಲ್ಲಾದರೂ ಒಟ್ಟಿಗೆ ಹೋಗೋಣ, ಇರೋಣ' ಎಂದ. ಬಾಬಾ ಅವನ ಕಡೆಗೆ ತಿರುಗಿದ. ನಾಲಗೆ ಬಂದಿತ್ತು. 'ಭೀಮನಾಗ, ನೀನೇನು ಹೇಳ್ತಾ ಇದೀ ಮಾಡ್ತಾ ಇದೀ ಅಂತ ನಿಂಗೆ ಗೊತ್ತಿಲ್ಲ. ಊರಿನ ತೀರ್ಮಾನಕ್ಕೆ ವಿರುದ್ಧವಾಗಿ ನಡೆಯೋದು ಯಾರಿಗೂ ಸಾಧ್ಯವಿಲ್ಲ. ಬೇಡ' ಎಂದು ನೃದುವಾಗಿ ಹೇಳಿದ. ಭೀಮ ಒಪ್ಪಲಿಲ್ಲ. ಕಠಿಣವಾಗಿ ಎಚ್ಚರಿಸಿದಾಗಲೂ ಜಗ್ಗಲಿಲ್ಲ. ಕಡೆಗೆ ಬಾಬಾ 'ಹಾಗಾದರೆ ಶಿಕ್ಷೆ ವಿಧಿಸಲೇ ಬೇಕು. ಇವನನ್ನು ಎಳೆದುಕೊಂಡು ಹೋಗಿ! ಇವನ ಗುಡಿಸಿಲಿನ ಕಂಬಕ್ಕೇ ಭದ್ರವಾಗಿ ಕಟ್ಟಿ ಹಾಕಿ—ಬಿಡಿಸಿಕೊಳ್ಳದ ಹಾಗೆ. ನನ್ನ ಅಪ್ಪಣೆಯಿಲ್ಲದೆ ಯಾರೂ ಬಿಡುಗಡೆ ಮಾಡಕೂಡದು. ನಾಳೆ ವಿಚಾರಣೆ ಮಾಡೋಣ' ಎಂದು ಕೆಲವು ಹೆಸರನ್ನು ಹೇಳಿದ. ಹತ್ತಾರು ಜನರು ಭೀಮನ ಮೇಲೆ ಬಿದ್ದು ಹುಚ್ಚನಹಾಗಿದ್ದವನನ್ನೊಡನೆ ಹೋರಾಡಿ ಎಳೆದುಕೊಂಡು ಹೋದರು. ಗುಂಪು ಸ್ವಲ್ಪ ಸ್ವಲ್ಪವಾಗಿ ಚೆದರಿತು.

ಬಾಬಾ ಇಷ್ಟೊಂದು ಕಠಿಣವಾಗಿ ನಡೆದುಕೋತಾನೆ ಅಂದುಕೊಂಡಿರಲಿಲ್ಲ. ಅವನು ಒಬ್ಬನೇ ಆದಾಗ 'ಬಾಬಾ, ಬಹಳ ಕ್ರೂರ

ವಾಯಿತು ಅಂತ ಅನ್ನಿಸುತ್ತೆ' ಎಂದು ಅಂಜುತ್ತ ಹೇಳಿದೆ. ಅವನು ಒಂದು ಗಳಿಗೆ ಸುಮ್ಮನೆ ನನ್ನ ಮುಖನೋಡಿ 'ಈ ನನ್ನ ಎದೆ ಕುದೀತಾ ಇಲ್ಲವೆ ? ಹಾಗೇಂತ ಮಗಳ ಮೇಲಿನ ಮೋಹದಿಂದ ಕುಲಕ್ಕೆ ಕೆಡು ಆದರೆ ಆಗಲಿ ಅನ್ನೋ ಹಾಗೆ ನಡೆದುಕೊಳ್ಳೋದೆ—ಮುಖಿಂಡ ಅನ್ನಿಸಿ ಕೊಂಡು ಶಾಸನದ ಅಧಿಕಾರ ಹೊತ್ತ ನಾನು ?' ಎಂದ. ಮುಂದೆ ಮಾತು ಹೊರಡದಾಯ್ತು. ಸುಮ್ಮನೆ ಅವಳ ಮೈದಡವಿದ.''

ಖಾಸಿ ಸ್ವಲ್ಪ ಸುಮ್ಮನಿದ್ದು ಪೂರ್ತಿಮಾಡಿದೆ. ನನಗೆ ಬೈಬಲ್ಲಿನ ಮ್ಯಾಗ್ಡಲೀನಳ ಕತೆ ನೆನಪಿಗೆ ಬಂದಿತು. ಆ ಜ್ಯೂಗಳ ಶಾಸನದಲ್ಲೂ ಹೆಂಗುಸು ಕೆಟ್ಟರೆ ಕಲ್ಲುಹೊಡೆದು ಕೊಲ್ಲಬೇಕೆಂದಿತ್ತಲ್ಲ. ಶಿಕ್ಷೆಯೆನ್ನಿಸಿ ಕೊಳ್ಳದೆ ಇದ್ದರೂ ನಮ್ಮಲ್ಲಿ 'ಸಹಗಮನ' ಒಪ್ಪಿಗೆಯಿಂದಲೋ ಬಲ ವಂತದಿಂದಲೋ ನಡೆಯುತ್ತಿದ್ದುದೂ ಮನಸ್ಸಿಗೆ ಬಂದಿತು. "ಹುಂ, ಅದೇ ರಾತ್ರಿ—ಇಂಥಾದ್ದೇ ಚೈತ್ರ ಹುಣ್ಣಿಮೆ ರಾತ್ರಿ—ನನ್ನ ತಂಗಿ ಭಸ್ಮ ಆದಳು. ಇದೇ ಕಂಬಕ್ಕೆ ಕಟ್ಟಿ ಕಟ್ಟಿಗೆ ಒಟ್ಟಿದ್ದರಂತೆ'' ಎಂದು ಗರುಡಗಂಬದ ಕಡೆಗೆ ಕೈಮಾಡಿದ. ನಾನೂ ಅತ್ತ ಕಡೆ ನೋಡಿದೆ, ಮೇಲೆ ಬಂದಿದ್ದ ಚಂದ್ರನನ್ನು ನೋಡಿದೆ. ಶಾಂತವಾದ ನಿಶ್ಯಬ್ದವಾದ, ತಂಪಾದ ವಾತಾವರಣ, ಮನಸ್ಸಿಗೆ ತಟ್ಟಿತು. ಹಾಗೇ ಆ ಹಿಂದಿನ ದುರ್ದಿನದ ದೃಶ್ಯವನ್ನೂ ಮನಸ್ಸು ಕಲ್ಪಿಸಿ ಕೊಂಡಿತು. ಮುಗಿದಿರದಿದ್ದ ಊಟವನ್ನು ಅತ್ತ ಒತ್ತರಿಸಿದೆ. ಥಾಪಾ ನಿಂದಲೂ ನಿಟ್ಟುಸಿರು ಬಂದಿತು.

" ಛಿ, ಎಂಥ ದುರಂತ ! ನಂಬಿಕೆಗೆ ಎಂಥ ಆಹುತಿ ! ಅವಳು ನಿಜವಾಗಿಯೂ ದೇವತೆಯೇ '' ನಾನು ಮೌನವನ್ನು ಮುರಿದೆ.

" ಅವನ್ನೇ ಮಂತ್ರವಾದಿಯೂ ಹೇಳಿದ. ಆ ವರ್ಷ ಆದಂಥ ಸುಭಿಕ್ಷ ನಾವು ಕಂಡೇ ಇರಲಿಲ್ಲ. ಅವಳೇ ಪರಿಶುದ್ಧಳಾಗಿ ದೇವತೆ ಆಗಿ ಕೊಟ್ಟಳು ಅಂತ ಹೇಳಿದ. ಅವಳ ನಿಗ್ರಹಾನೂ ಪ್ರತಿಷ್ಠೆಮಾಡಿದೆವು— ತಾವು ನೋಡಿದೀರಲ್ಲ ಅದು. ನಮ್ಮ ಬಾಬಾ ಅವನ್ನೇ ಜಯಂತಿ ಅಂತ ತಿಳಿದುಕೊಂಡಿದಾನೆ.''

" ಪಾಪ, ಅವನು ಹುಚ್ಚನಾಗಿರೋದೇನು ಹೆಚ್ಚಲ್ಲ.''

" ಆ ಹುಣ್ಣಿಮೆ ದಿನದಿಂದಲೇ ಮುಂಕಾಗಿದಾನೆ. ಕೆಲವು ದಿನ ದಲ್ಲೇ ನನ್ನ ಮೇಲೆ ನಾಯಕತ್ವದ ಜವಾಬ್ದಾರಿ ಹಾಕಿಬಿಟ್ಟ. ಎಲ್ಲ ಬಿಟ್ಟ. ಆ ವಿಗ್ರಹದ ಬಳಿ ಕೂತಿರೋದೊಂದೇ ಅವನ ಕೆಲಸ.

" ಆ ಭೀಮನಾಗನ ವಿಚಾರಣೆ ಏನಾಯ್ತು ?'' ಈ ನಾಟಕದ ಮೂರನೆಯ ಪಾತ್ರ ಮನಸ್ಸಿಗೆ ಬಂದಿತು.

" ಆಗಲೇ ಇಲ್ಲ ಸಾಹೇಬ್. ಮಧ್ಯರಾತ್ರಿಯ ಹೊತ್ತಿನಲ್ಲಿ ಬಾಬಾ ಅವನನ್ನು ಬಿಡುಗಡೆ ಮಾಡುವಂತೆ ನಂಗೆ ಹೇಳಿದ. ಹೋಗಿ ನೋಡಿದರೆ ಅವನ ಗುಡಿಸಿಲು ಕುಸಿದು ಬಿದ್ದಿತ್ತು; ಅವನನ್ನು ಕಟ್ಟಿದ್ದ ಕಂಬ ಮುರಿದಿತ್ತು. ಅವನು ಎಲ್ಲೂ ಕಾಣಲಿಲ್ಲ. ಬೆಳಗ್ಗೆ ಗರುಡ ಗಂಬದ ಬಳಿ ಎರಡು ಅಸ್ತಿ ಸಿಕ್ಕಿದುವು.... ಬಹಳ ಹೊತ್ತಾಯ್ತು ಸಾಹೆಬ್ '' ಮುಖಿಂಡ ಎದ್ದು ನಿಂತ. ಇನ್ನು ನಾನು ಕೇಳಬೇಕಾದದ್ದು ಏನೂ ಇರಲಿಲ್ಲ. ಥಾಪಾನನ್ನು ಕುರಿತು " ಇಂಥ ದುರಂತಗಳು ನಮ್ಮ ಸೈನಿಕರಿಂದ ಮುಂದೆಂದೂ ಆಗದ ಹಾಗೆ ನೋಡಿಕೊಳ್ಳಬೇಕು. ಈ ಜನರ ವಿಚಾರವನ್ನು ಸರಕಾರಕ್ಕೆ ತಿಳಿಸಿ, ಆದಷ್ಟು ಬೇಗ ನಮ್ಮ ನಾಗರಿಕ ಕಾನೂನೇ ಈ ಪ್ರದೇಶಗಳಲ್ಲೂ ನಡೆಯುವಂತೆ ಏರ್ಪಡಿಸಬೇಕು'' ಎಂದು ಇಂಗ್ಲಿಷ್‌ನಲ್ಲಿ ಹೇಳುತ್ತ ಮೇಲೆದ್ದೆ. ಥಾಪಾನೂ ತಟ್ಟನೆದ್ದು ತನ್ನ ಡೇರೆಗೆ ಹೋದ. ಮುಖಿಂಡನನ್ನು ಕಳುಹಿಸಿ ನಾನೂ ಮಲಗಲು ಹೋದೆ.

ನಿದ್ದೆಹತ್ತಲಿಲ್ಲ. ಕತೆಯ ದೃಶ್ಯಗಳು ಒಂದೊಂದಾಗಿ ಒಟ್ಟೊಟ್ಟಾಗಿ ಮುಂದೆ ಬರುತ್ತಿದ್ದುವು. ನಾನು ಅದರಲ್ಲಿ ಮುಳುಗಿ ಹೋಗಿದ್ದೆ. ರಪ್ ! ಗುಂಡಿನ ಶಬ್ದ !ಹತ್ತಿರದಲ್ಲಿ, ಪಕ್ಕದ ಡೇರೆಯಲ್ಲಿ ! ತಟ್ಟನೆದ್ದು ಓಡಿಹೋದೆ. ಥಾಪಾನ ಡೇರೆಯಲ್ಲಿ ದೀಪ ಉರಿಯುತ್ತಿತ್ತು, ಅವನು ಕೆಳಗೆ ಬಿದ್ದಿದ್ದ. ಎದೆಯಿಂದ ರಕ್ತ ಹರಿಯುತ್ತಿತ್ತು. ಬಲಗೈಯಲ್ಲಿ ಪಿಸ್ತೂಲು ಹೊಗೆಯಾಡುತ್ತಲೇ ಇತ್ತು. ಕ್ಯಾಂಪಿನವರೆಲ್ಲ ಓಡಿ ಬಂದರು. ಥಾಪಾನನ್ನು ಮುಟ್ಟಿ ನೋಡಿದೆ. ಆದರೆ ಆಗಿಹೋಗಿತ್ತು—ಅವನ ಬಾಳು.

ಬೇಟೆ ಅಷ್ಟಕ್ಕೇ ನಿಂತಿತೆಂದು ಹೇಳಬೇಕಾಗಿಲ್ಲ. ಮಾರನೆಯ ದಿನವೇ ಹೆಣಮೊಂದಿಗೆ ಕೊಹಿಮಾಕ್ಕೆ ಹಿಂದಿರುಗಿದೆವು. ಸಂಸ್ಕಾರವೆಲ್ಲ ಆದಮೇಲೆ ಒಂದು ದಿನ ಥಾಪಾನ ನೆಚ್ಚಿನ ಹಳೆಯ ಸೇವಕ ಚೌಧರಿಯನ್ನು ಕರೆಸಿದೆ.

" ಹಿಂದೆ ಎಂದಾದರೂ ಥಾಪಾ ಶಿವಪುರಿಯ ಬಳಿ ತಂಗಿದ್ದನೆ ?'' ನನ್ನ ಪ್ರಶ್ನೆ.

" ಹುಂ, ಹತ್ತು ಹನ್ನೊಂದು ವರ್ಷದ ಹಿಂದೆ ಉಳಿದಿದ್ದೆವು ಸಾಹೇಬ್.''

" ಆಗ ಏನಾದರೂ ವಿಶೇಷ ನಡೀತೇ ?''

" ಆಂ.... ಹುಂ. ಏನೋ ಒಂದು ಸಣ್ಣ ಜಗಳ ಆಯ್ತು '' ಯೋಚಿಸುತ್ತ ಹೇಳಿದ. ಹೆಚ್ಚಿಗೆ ಹೇಳಲಿಲ್ಲ. ನನಗೆ ಬೇಕಾಗಿಯೂ ಇರಲಿಲ್ಲ.

ಪ್ರವಾಸಿಗರ ಸ್ವರ್ಗ-ಹವಾಯಿ ದ್ವೀಪಗಳು

(ಪ್ರದೇಶ ಪರಿಚಯ)*

ಹವಾಯಿ ದ್ವೀಪಗಳ ಪ್ರದೇಶ ಇಂದು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಆಧಿಪತ್ಯಕ್ಕೆ ಒಳಪಟ್ಟಿದೆಯಾದರೂ, ಅಲ್ಲಿ ನೆಲೆಯೂರಿದ ಜನತೆಯಲ್ಲಿ ಅನೇಕ ಕುಲ, ಸಂಪ್ರದಾಯ, ಬುಡಕಟ್ಟುಗಳಿಗೆ ಸೇರಿದ ಜನರಿದ್ದಾರೆ. ಅವರೆಲ್ಲರೂ ಒಂದೆ ಮನಸ್ಸಿನವರಾಗಿ, ಪರಸ್ಪರ ಸಹಕಾರದಿಂದ ಬಾಳುತ್ತಿರುವುದು ಈ ಪ್ರದೇಶದ ವೈಶಿಷ್ಟ್ಯವಾಗಿದೆ.

ಕಳೆದ ಶತಮಾನದಲ್ಲಿ ಪುಷ್ಪೋದ್ಯಾನಗಳ ಮತ್ತು ಸುವರ್ಣ ರೇಖಿತ ಸಮುದ್ರದಂಡೆಗಳ ಬೀಡಾಗಿದ್ದ ಹವಾಯಿ ದ್ವೀಪಗಳನ್ನು ಇಂದು ಕೈಗಾರಿಕೆಗಳ ಮತ್ತು ಸಮುದ್ರ ಸಾಗಾಟಿಕೆಗಳ ನೆಲವೀಡನ್ನಾಗಿ ಪರಿವರ್ತಿಸಲಾಗಿದೆ. ಒಂದು ರೀತಿಯಲ್ಲಿ "ಪೆಸಫಿಕ್ ಸಾಗರದ ಪಥಕೇಂದ್ರ" ಎಂಬ ಅದರ ಹೆಸರು ಸಾರ್ಥಕವೆನಿಸಿದೆ.

ಅಮೇರಿಕದ ಈ ಪ್ರದೇಶ ಸಂಸ್ಥಾನಸ್ಥಾನಕ್ಕೆ ಏರುತ್ತಿರುವಂತೆ ಅಲ್ಲಿ ಹೊಸ ಹೊಸ ನಿರ್ಮಾಣಗಳು ಏಳುತ್ತಿವೆ. ಕೈಗಾರಿಕೆಯ ಉತ್ಕರ್ಷ ಕಂಡುಬರುತ್ತಿದೆ. ಸಾಗರೋತ್ತರ ವ್ಯಾಪಾರ ವಿಸ್ತರಿಸುತ್ತಿದೆ. ಈ ದ್ವೀಪದ ಆದಾಯದಲ್ಲಿ ಮುಖ್ಯಭಾಗ ಪ್ರವಾಸಿಗರಿಂದ ಲಭಿಸುತ್ತಿದ್ದು, ನೈತ್ಯಾನಂದಕರ ದೃಶ್ಯಾವಳಿಗಳಿಂದ ಅತ್ಯಂತ ಆಕರ್ಷಕವಾದ ಪ್ರದೇಶವಾಗಿದೆ. ಉಷ್ಣವಲಯದ ಸೌಂದರ್ಯದಿಂದಲೂ ಹಿತಕರವಾದ ವಾತಾವರಣದಿಂದಲೂ ಚಿತ್ತಾಪಹರಣಕ್ಕೆ ಒಳಗಾದ ಅನೇಕ ಮಂದಿ ವಿಹಾರಾರ್ಥಿಗಳು, ಹವಾಯಿ ದ್ವೀಪಗಳಲ್ಲೇ ಬೀಡು ಬಿಟ್ಟು, ಅದರ ಅರ್ಥವ್ಯವಸ್ಥೆಯ ವಿಸ್ತರಣದಲ್ಲಿ ಭಾಗವಹಿಸುತ್ತಿದ್ದಾರೆ.

ತಮ್ಮದೇ ನೃತ್ಯಗಳಿಂದಲೂ ಮೃದುವಾದ ಸಂಗೀತದಿಂದಲೂ ಕೂಡಿದ ಸ್ನೇಹಪರ ಜನರ ನಿವಾಸವಾಗಿದ್ದು ಸಂಪರ್ಕದೂರವಾಗಿದ್ದ ಈ ದ್ವೀಪಗಳು, ಅನೇಕ ಮಾನವಕುಲಗಳು ಹಿತವಾಗಿ ಬೆರೆತು ಕೆಲಸಮಾಡುವ ಮಿಶ್ರಪ್ರದೇಶವಾಗಿ ಹೇಗೆ ಪರಿವರ್ತಿತವಾಗಿದೆ ಎಂಬುದು, ಸಮಾಜದ ಅಭಿವೃದ್ಧಿ ಹಾಗೂ ಪ್ರಪಂಚ ಭ್ರಾತೃತ್ವದ ಒಂದು ರೋಮಾಂಚಕ ಉದಾಹರಣೆಯಾಗಿದೆ. ಪ್ರಪಂಚದ ಇನ್ನಾವ ಎಡೆಯಲ್ಲೂ ಇಷ್ಟೊಂದು ವಿವಿಧ ಕುಲಗಳವರು ಇಷ್ಟೊಂದು ಯಶಸ್ವಿಯಾಗಿ ಅಲ್ಪ ಅವಧಿಯಲ್ಲಿ ಬೆರೆತಿಲ್ಲ— ಎಂಬುದು, ಸಮಾಜ ವಿಜ್ಞಾನಿಗಳ ಅಭಿಪ್ರಾಯ.

ಹವಾಯಿಯ ಮೂಲನಿವಾಸಿಗಳು ವಲಸೆಗಾರ ಪಾಲಿನೇಷಿಯನ್ನರ ಸಂತಾನ. ೧೭೭೮ರಲ್ಲಿ ಇಂಗ್ಲಿಷ್ ಪ್ರಪಂಚಶೋಧಕ ಕ್ಯಾಪ್ಟನ್ ಜೇಮ್ಸ್ ಕುಕ್ ಇಲ್ಲಿ ಇಳಿವುದಕ್ಕೆ ಶತಶತಮಾನ ಮುಂಚೆಯೇ ಇಲ್ಲಿಗೆ ಬಂದ ಜನ ಇವರು. ಮೊದಮೊದಲಲ್ಲಿ ಪಾಲಿನೇಷಿಯದ ಮುಖ್ಯರು ಇಲ್ಲಿಯ ದೊಡ್ಡ ದ್ವೀಪಗಳಲ್ಲಿ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಅನಂತರ ೧೭೯೫ರಲ್ಲಿ ಹವಾಯಿ ದ್ವೀಪದ 'ಕಾಮೇ ಹಮಹ' ಎಂಬ ಯೋಧರಾಜನೊಬ್ಬ, ತನ್ನ ಪರಮಾಧಿಕಾರದ ಪ್ರತಿಷ್ಠಾಪನೆಗಾಗಿ, ಉಳಿದ ಬಹುಪಾಲು ದ್ವೀಪಗಳನ್ನು ಗೆದ್ದು, ರಾಜಪ್ರಭುತ್ವವನ್ನು ಸ್ಥಾಪಿಸಿದ.

೧೮೨೦ರಲ್ಲಿ ಕ್ರೈಸ್ತಪ್ರಚಾರಕರು ಇಲ್ಲಿಗೆ ಬಂದು, ಅಮೇರಿಕದ ಸಂಯುಕ್ತ ಸಂಸ್ಥಾನಗಳ ಈಶಾನ್ಯದಲ್ಲಿ ತಾವು ಸ್ಥಾಪಿಸಿದ ನ್ಯೂ ಇಂಗ್ಲೆಂಡಿನ ಸಮಾಜವ್ಯವಸ್ಥೆಯಂತಹ ಸಾಂಸ್ಕೃತಿಕ ಜೀವನ-ಮಾದರಿಯನ್ನೇ ಇಲ್ಲೂ ಸ್ಥಾಪಿಸಿದರು. ೧೮೫೦ರಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬಿನ ವ್ಯವಸಾಯ ಆರಂಭವಾಯಿತು. ವ್ಯವಸಾಯದಲ್ಲಿ ದುಡಿಯಲು ಹೆಚ್ಚುಹೆಚ್ಚಾಗಿ ಕೆಲಸಗಾರರು ಬೇಕಾದರು. ಪೂರ್ವದ ಮತ್ತು ಪಶ್ಚಿಮದ ದೇಶಗಳಿಂದ ದೊಡ್ಡ ಪ್ರಮಾಣದಲ್ಲಿ ವಲಸೆಗಾರರು ಇಲ್ಲಿಗೆ ಆಕರ್ಷಿತರಾದರು. ಸುಸಂಘಟಿತವಾದ ಜನ-ಸ್ತೋಮದ ರಚನೆಯಲ್ಲಿ ಅವರೆಲ್ಲ ಒಗ್ಗೂಡಿದರು. ಅವರ ಪ್ರಯತ್ನಗಳ ಫಲವಾಗಿ ತೋಟಗಳು ಬೆಳೆದುವು. ತತ್ಫಲವಾಗಿ ಈಗ ಈ ದ್ವೀಪಗಳಲ್ಲಿ ವರ್ಷವೊಂದಕ್ಕೆ ದಶಲಕ್ಷಕ್ಕೂ ಹೆಚ್ಚು ಕಚ್ಚಾ ಸಕ್ಕರೆ ಉತ್ಪತ್ತಿಯಾಗುತ್ತಿದೆ.

ಹವಾಯಿಯ ಅರ್ಥವ್ಯವಸ್ಥೆಯಲ್ಲಿ ಮುಖ್ಯಸ್ಥಾನ ಪಡೆಯುವ **ಅನಾನಸ್** ಕೈಗಾರಿಕೆ, ಅನೇಕ ಮಂದಿ ವಲಸೆಗಾರರನ್ನು ಆಕರ್ಷಿಸಿತು. ಪ್ರಕೃತ ಪ್ರಪಂಚದ **ಅನಾನಸ್** ಉತ್ಪತ್ತಿಯ ಮುಕ್ಕಾಲು ಭಾಗ ಇಲ್ಲಿಯದು. ೧೯೦೦ರಲ್ಲಿ ಮೊಟ್ಟಮೊದಲ ಬಾರಿಗೆ ಡಬ್ಬಿಗಳಲ್ಲಿ ತುಂಬಿ ಮಾರುವ ಸಲುವಾಗಿ, ಅನಾನಸ್ ಗಿಡಗಳನ್ನು ಓಹಾವು ದ್ವೀಪದಲ್ಲಿ ನೆಡಲಾಯಿತು. ಮೊಟ್ಟಮೊದಲು ಅನಾನಸ್ ತುಂಬಿದ ಡಬ್ಬಿ, ಮೂರು ವರ್ಷಗಳ ನಂತರ ಸಿದ್ಧವಾಯಿತು.

೧೮೯೪ರಲ್ಲಿ ಸ್ಥಾಪಿತವಾದ ಹವಾಯಿ ಗಣರಾಜ್ಯದ ಕೇಳಿಕೆಯಂತೆ, ಈ ದ್ವೀಪಗಳನ್ನು ೧೮೯೮ರಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲಾಯಿತು. ಎರಡು ವರ್ಷಗಳ ನಂತರ ಈ ದ್ವೀಪಗಳು ಅಮೇರಿಕದ ಅಂಗಭಾಗವಾಗಿ ಮಾರ್ಪಟ್ಟು, ಅವುಗಳ ಜನ ಸಂಯುಕ್ತ ಸಂಸ್ಥಾನಗಳ ಪ್ರಜೆಗಳಾದರು. ಸಾನ್ ಫ್ರಾನ್ಸಿಸ್ಕೊ ನಗರಕ್ಕೆ ೨೦೦೦ ನೌಕಾಮೈಲಿಗಳ ದೂರದಲ್ಲಿರುವ

* ಯು. ಎಸ್. ಐ. ಸರ್ವಿಸಿನವರಿಂದ ಬರೆದುಬಂದ ಲೇಖನ.

—ಸಂ. ಜ.

ಹವಾಯಿ ದ್ವೀಪಗಳು, ಇತ್ತೀಚಿನ ವರ್ಷಗಳಲ್ಲಿ—ವಿಮಾನಯಾನ ಬೆಳವಣಿಗೆಯ ಫಲವಾಗಿ— ಅಮೇರಿಕದ ಮೂಲಭೂಮಿಗೆ ಹೆಚ್ಚು ಸಮೀಪವಾಗಿವೆ. ತತ್ಫಲವಾಗಿ ಸಾಮಾನ್ಯವಾಗಿ ರಾಜಧಾನಿ ಹೊನಲೂಲೂವಿನಲ್ಲಿ ಜೀವನ ವಿಧಾನದ ಸಾಂಸ್ಕೃತಿಕ ಲಕ್ಷಣಗಳು ಬಹುಮಟ್ಟಿಗೆ ಅಮೇರಿಕದ ಇತರ ಅನೇಕ ನಗರಗಳನ್ನೇ ಹೋಲುತ್ತವೆ.

೧೯ನೆಯ ಶತಮಾನದ ಮಧ್ಯಭಾಗದಲ್ಲಿ ತೋಟಗಾರಿಕೆಯ ಯುಗ ಆರಂಭವಾದೊಡನೆಯೇ ಕಾರ್ಮಿಕರು ಬೇಕೆಂಬ ಕೇಳಿಕೆಗೆ ಉತ್ತರವಾಗಿ ಜಪಾನ, ಫಿಲಿಪೈನ್ ದ್ವೀಪಸ್ತೋಮ, ಚೀನಾ, ಪೋರ್ತುಗಲ್, ಕೋರಿಯ, ಪೂರ್ಟರೀಕೋ, ಸ್ಪೈನ್, ಜರ್ಮನಿ, ಪೆಸಫಿಕ್ ದ್ವೀಪಗಳು ಮತ್ತು ರಷ್ಯಗಳಿಂದ ಜನರು ಬರತೊಡಗಿದರು. ಪ್ರಜಾ ಸತ್ತೆಯ ಪ್ರಭಾವವೂ ನಿಕಟಜೀವನವೂ ಕುಲಗಳ ಮತ್ತು ಮತ ಗಳ ಆಡ್ಡಗೋಡೆಗಳನ್ನು ನಿವಾರಿಸಿವೆ; ಕೆಲವು ತಂಡಗಳು ತಮ್ಮ ಪೂರ್ವಜರಿಗೆ ಪ್ರಿಯವೆನಿಸಿದ್ದ ಅನೇಕ ಕಟ್ಟಳೆಗಳನ್ನೂ ಸಾಂಪ್ರ ದಾಯಿಕವಾದ ಆಚಾರಗಳನ್ನೂ ಉಳಿಸಿಕೊಂಡಿವೆ ಹವಾಯಿಯ ಪ್ರತಿಯೊಂದು ಸಮಾಜದಲ್ಲೂ ಕ್ರೈಸ್ತ ಚರ್ಚುಗಳೂ ಬೌದ್ಧ ಮತ್ತು ಷಿಂಟೋ ದೇವಾಲಯಗಳೂ ಅಕ್ಕಪಕ್ಕಗಳಲ್ಲಿ ನಿಂತಿವೆ. ವರ್ಷಂಪ್ರತಿ ಜಪಾನೀಯ ಜೆರಿ ಬ್ಲಾಸಂ ಸಮಾರಂಭದಲ್ಲೂ, ಚೀನೀಯರ ನಾರ್ಸಿ ಸಸ್ ಸಮಾರಂಭದಲ್ಲೂ ಎಲ್ಲಾ ಕುಲಗಳ ಸಹಸ್ರಾರು ಜನರು ಭಾಗ ವಹಿಸುತ್ತಾರೆ

ನೌಕಾನೆಲೆ **ಪರ್ಲ್ ಹಾರ್ಬರ್** ಮತ್ತು ಅನೇಕ ವೈಮಾನಿಕ ಕ್ಷೇತ್ರಗಳನ್ನು ಹೊಂದಿ, ಪೆಸಫಿಕ್‌ನಲ್ಲಿ ಅಮೇರಿಕದ ಪ್ರಮುಖ ರಕ್ಷಣಾ ನೆಲೆಯಾಗಿರುವ ಹವಾಯಿಯಲ್ಲಿ, ಸೈನಿಕರು ದೊಡ್ಡ ಸಂಖ್ಯೆ ಯಲ್ಲಿವ್ದಾರೆ ಪೆಸಫಿಕ ನೌಕಾಸಮುದಾಯದ ಆಡಳಿತದ ಮತ್ತು ಸರಪರಾಜಿನ ಮುಖ್ಯ ಕೇಂದ್ರ ಪರ್ಲ್‌ಹಾರ್ಬರಿನಲ್ಲಿದೆ. ಪೆಸಫಿಕ್ ಸಾಗರವನ್ನು ದಾಟಿ ಹಾರುವ ವಿಮಾನಗಳು ಈ ದ್ವೀಪಗಳನ್ನು ನಿಲು ಗಡೆಯ ಒಂದು ಸ್ಥಳವನ್ನಾಗಿ ಬಳಸಿಕೊಳ್ಳುತ್ತವೆ.

ಹವಾಯಿಯ ವ್ಯಾಪಾರ ಇಂದು ಉನ್ನತಮಟ್ಟದಲ್ಲಿ ಇರುವು ದಕ್ಕೆ ತಜ್ಞರು ಅನೇಕ ಕಾರಣಗಳನ್ನು ಕೊಡುತ್ತಾರೆ. ಪೂರ್ವ-ಪಶ್ಚಿಮಗಳನ್ನು ಸೇರಿಸುವ ಕೊಂಡಿಯಂತೆ ಈ ದ್ವೀಪಗಳು ಪೆಸಫಿಕ್ ಸಾಗರದ ಮಧ್ಯದಲ್ಲಿ ಇರುವುದರ ಜೊತೆಗೆ, ಇಲ್ಲಿಯ ಜನತೆಯ ಶ್ರಮ ಸಹಿಷ್ಣುತೆಯ ಗುಣಗಳೂ ಮತ್ತು ಅವರ ಕುಲವೈವಿಧ್ಯಗಳೂ ಈ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣವಾಗಿವೆ— ಎಂದು ತಜ್ಞರು ನಂಬಿದ್ದಾರೆ.

ಮತ್ತೊಂದು ಕಾರಣ ವರ್ಷದುದ್ದಕ್ಕೂ ಇರುವ ಹಿತಕರವಾದ ಸಮಶೀತೋಷ್ಣವಾದ ಹವಾಗುಣ. ತತ್ಫಲಿಣಾಮವಾಗಿ ಹವಾಯಿ ವಾಸಕ್ಕೆ ಉತ್ತಮ ಪ್ರದೇಶವಾಗಿದೆಯಲ್ಲದೆ, ಫಲವತ್ತಾದ ಪ್ರದೇಶ ವಾಗಿದೆ. ಬೇಸಗೆಯಲ್ಲೂ, ಚಳಿಗಾಲದಲ್ಲೂ ಅನಾನಸ್ ಮತ್ತು ಸಕ್ಕರೆಯ ತೋಟಗಳಲ್ಲಿ ಕೆಲಸ ನಡೆಯುತ್ತದೆ. ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ ವರ್ಷವೆಲ್ಲ ಅನುಕೂಲವಿದೆ. ಈ ದ್ವೀಪ ಗಳು ಸಾಗರದ ಮಧ್ಯಪ್ರದೇಶದಲ್ಲಿ ಇರುವುದರಿಂದ, ವ್ಯಾಪಾರಕ್ಕೂ ಅನುಕೂಲವಿದೆ.

ವರ್ಷವೊಂದಕ್ಕೆ ಸಾವಿರ ಹಡಗುಗಳು ಹೊನಲೂಲು ಬಂದರ ವನ್ನು ಮುಟ್ಟುತ್ತವೆ. ಇವು ದ್ವೀಪಗಳಿಗೆ ಬೇಕಾದ ಆಹಾರ ವಸ್ತು ಗಳನ್ನು ಮತ್ತು ಇತರ ಸರಪರಾಜುಗಳನ್ನು ಹೊತ್ತು ತರುವ ಜೊತೆಗೆ, ಈ ದ್ವೀಪಗಳ ಉತ್ಪತ್ತಿಗಳನ್ನು ಕೊಂಡೊಯ್ಯುತ್ತವೆ. ಹವಾಯಿ ಯಲ್ಲಿ ವಿಮಾನಸಂಚಾರವೂ ಅಧಿಕ.

ಒಮ್ಮೆ ಅಮೂಲ್ಯವಾದ ಖನಿಜಗಳಾವುವೂ ಈ ದ್ವೀಪಗಳಲ್ಲಿ ಇಲ್ಲವೆಂದು ಭಾವಿಸಲಾಗಿತ್ತು; ಆದರೆ ಇತ್ತೀಚೆಗೆ ಟೈಟೇನಿಯಂ ಮತ್ತು ಬಾಕ್ಸೈಟ್‌ಗಳನ್ನು ಪತ್ತೆ ಮಾಡಲಾಗಿದೆ. ಸಿಲಿಕೇಟ್ ಹೆಚ್ಚಾಗಿರುವ ಲಾವಾಬೂದಿ ಮತ್ತು ಕಲ್ಲುಗಳಿಂದ ಮನೆಗಳನ್ನು ನಿರ್ಮಿಸಲಾಗುತ್ತದೆ. ಹವಾಯಿಯಲ್ಲಿ ಮರಮಟ್ಟುಗಳು ಯಥೇಚ್ಛ. ಉಷ್ಣವಲಯದ ಗಟ್ಟಿ ಮರಗಳೂ, ಯೂಕಲಿಪ್ಟಸ್, ರೆಡ್‌ವುಡ್ ಇಂತಹ ಮೃದುವಾದ ಕಟ್ಟಡ ನಿರ್ಮಾಣದ ಮರಗಳೂ ದೊರಕುತ್ತವೆ.

ಅನೇಕ ವರ್ಷಗಳ ಪರ್ಯಂತರ ವ್ಯಾಪಸಾಯಿಕ ಚಟುವಟಿಕೆ ಗಳೆಲ್ಲ ಕೆಲವೇ ಕುಟುಂಬಗಳ ಕೈಯಲ್ಲಿದ್ದುವು. ಅವರು ಈಗಲೂ, ವಿಶೇಷತಃ ಅನಾನಸ್ ಮತ್ತು ಸಕ್ಕರೆ ಉದ್ಯಮಗಳನ್ನು ನಡೆಸು ತ್ತಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಅನೇಕ ಸಣ್ಣ ಸಂಸ್ಥೆಗಳನ್ನು ಬೇರೆ ಬೇರೆ ಕುಲಗಳವರೂ ಸ್ಥಾಪಿಸಿ ನಡೆಸುತ್ತಿದ್ದಾರೆ.

ಇಂದಿನ ಅಭಿವೃದ್ಧಿ ಚಟುವಟಿಕೆಯಲ್ಲಿ ಭಾಗವಹಿಸು ತ್ತಿರುವವರಲ್ಲಿ ಒಬ್ಬರು **ಹೆನ್ರಿ ಜೇ ಕೈಸರ್**. ಅಮೆರಿಕದ ಪ್ರಖ್ಯಾತ ಕೈಗಾರಿಕೆಯ ಉದ್ಯಮಿಯಾದ ಅವರು, ವಿಹಾರಾರ್ಥವಾಗಿ ಹವಾಯಿಗೆ ಹೋದವರು; ಅದನ್ನೇ ತನ್ನ ಬೀಡನ್ನಾಗಿ ಮಾಡಿ ಕೊಳ್ಳುವ ನಿರ್ಧಾರ ಮಾಡಿದರು. ಹವಾಯಿಯ ಮಾದರಿಯ ಹಳ್ಳಿ ಯೊಂದನ್ನು ವಾಸಕ್ಕಾಗಿಯೂ ವಿಹಾರಕೇಂದ್ರವಾಗಿಯೂ ಇವರು ನಿರ್ಮಿಸಿದ್ದಾರೆ. ಈ ಹಳ್ಳಿ ಪೂರ್ಣವಾದಾಗ ಅದರಲ್ಲಿ ೮೦೦ ಮಂದಿ ಇರುವರು.

ಹವಾಯಿ ಹೊಸ ಹೊಸ ಕೈಗಾರಿಕೆಗಳನ್ನು ಹುಡುಕುತ್ತಿದೆ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಈಗ ಭಾರಿ ಸಾಗಾಣಿಕೆಯ ವೆಚ್ಚ ವನ್ನು ತೆತ್ತು, ಬಹು ನಿಧಾನವಾಗಿ ಅಮೆರಿಕದ ಭೂಖಂಡದಿಂದ ಪಡೆಯಬೇಕಾಗಿರುವ ವಸ್ತುಗಳನ್ನು ಇಲ್ಲಿಯೇ ತಯಾರಿಸಬಲ್ಲ ಸಣ್ಣ ಕಾರ್ಖಾನೆಗಳಿಗೆ ಹವಾಯಿ ಪ್ರಾಮುಖ್ಯವನ್ನು ನೀಡಿದೆ. ಇದಕ್ಕೆ ಒಂದು ಉದಾಹರಣೆ ಎಂದರೆ: ಉಡುಪಿನ ಕೈಗಾರಿಕೆ. ಕ್ರೀಡಾ ಉಡುಪುಗಳಿಗೆ ಪಾಲಿನೀಷಿಯಾ ಮಾದರಿಯ ವಿನ್ಯಾಸಗಳಿಗೆ ಆದ್ಯ ಗಮನ ಕೊಡಲಾಗಿದೆ. ಅಮೆರಿಕಾ ಭೂಖಂಡದ ಸಂಸ್ಥೆಯೊಂದು ಇಲ್ಲಿ ತೈಲಶುದ್ಧೀಕರಣ ಯಂತ್ರಸ್ತೋಮವೊಂದನ್ನು ನಿರ್ಮಿಸುತ್ತಿದೆ.

ಹೊಸ ವ್ಯಾಪಾರಗಳನ್ನು, ಬಂಡವಾಳವನ್ನು ಆಕರ್ಷಿಸುತ್ತಿರುವ ಹವಾಯಿಯ ವಾಣಿಜ್ಯಸಂಘದ ವರ್ತಕ ಮಂಡಳಿಯವರ ಹವಾಯಿಯನ್ನು ಕುರಿತು ದ್ವಿಮುಖಚಿತ್ರವನ್ನು ನೀಡಿದ್ದಾರೆ ಹವಾಯಿ ವಿರಾಮದ ಭೂಮಿ, ಯಥಾರ್ಥವಾದ "ಉಷ್ಣವಲಯದ ಸ್ವರ್ಗ" ಇದು ಇವರು ಚಿತ್ರಿಸುವ ಒಂದು ಮುಖ! ಈ ದ್ವೀಪಗಳ ಸಂಪೂರ್ಣವಾಗಿ ಅಮೆರಿಕದ ಸಮಾಜ; ಇಲ್ಲಿ ಆಧುನಿಕ ಸೌಕರ್ಯ ಗಳಿವೆ. ಆಧುನಿಕ ವ್ಯಾಪಾರದ ವಿಧಾನಗಳು ಬಳಕೆಯಲ್ಲಿವೆ. ಹವಾಯಿ ಸಂಸ್ಥಾನಸ್ಥಾನಕ್ಕೆ ಎಷ್ಟು ಶೀಘ್ರಗತಿಯಿಂದ ಸಾಗುತ್ತಿದೆಯೋ ಅಷ್ಟೇ ವೇಗದಲ್ಲಿ ಆಧುನಿಕ ಸೌಕರ್ಯಗಳೂ ಮತ್ತು ವ್ಯಾಪಾರ ವಿಧಾನಗಳೂ ಬೆಳೆಯುತ್ತಿವೆ—ಇದು ಅವರು ಚಿತ್ರಿಸುವ **ಎರಡನೆಯ ಮುಖ.**

ಶ್ರದ್ಧೆ

ಸೌ. ಪಾರ್ವತಿದೇವಿ ಹೆಗಡೆ, ಬಿಜಾಪುರ

೧

ಶ್ರದ್ಧೆಯೇ ಬಲ ನಮಗೆ ಸಾಧನೆಯೆ ಸಂಪತ್ತು ।
ಶ್ರೀಕೃಪೆಯೆ ಸಕಲ ಸೌಭಾಗ್ಯವೆಮಗೆ ॥
ಹೃದಯ ಶುದ್ಧಿಯೆ ಪರಮ ಆರೋಗ್ಯ ಭಾಗ್ಯವಲೆ ।
ಭಗವಂತನಿಚ್ಛೆಯೇ ರಕ್ಷೆಯೆಮಗೆ ॥

೨

ಏನು ಸಿದ್ಧಿಯು ? ಎಲ್ಲಿ ? ಎಂದು ನಮಗದು ಲಭ್ಯ ? ।
ದಿತಿಯ ಸಂತಾನಕ್ಕೆ ಮುಕ್ತಿಯುಂಟೆ ? ॥
ಖರ್ವ ಸಂಖ್ಯಾ ಲೋಕಕುಂಟೆ ಅಮೃತಾನಂದ ? ।
ಅಮೃತತ್ವ ಕನ್ನಡಿಯೊಳಿರುವ ಗಂಟೆ ? ॥

೩

ಆತುರವು ನಮಗಿಲ್ಲ ದೈವದಿಚ್ಛೆಗಧೀನ ।
ಇರುವುದೆಲ್ಲದಕೂನು ಅದಿತಿ ಮಾತೆ ॥
ಸಂಶಯವು ನಮಗಿಲ್ಲ ವೈರಾಗ್ಯವಿಲ್ಲಿಲ್ಲ ।
ಪರಮ ಶುಭ ಆರ್ಷಕುಲ ತಂದವಾರ್ತೆ ॥

೪

ಸಾಗುವೆವು ದಣಿವಿರದೆ ಬೇಸರದೆ ಬೆಟ್ಟಗಳ ।
ಹಳ್ಳಗಳ ಕೊಳ್ಳಗಳನೆಲ್ಲ ದಾಟಿ ॥
ಗುರುವಿನಡಿಯಲಿ ಅಡಿಯ ಹಾಕುತ್ತ ಹುಮ್ಮಸದಿ ।
ತಳ್ಳುವೆವು ದೌರ್ಬಲ್ಯವನು ಆಚೆ ನಿಂಟಿ.

೫

ಸತ್ಯದೈಶ್ವರ್ಯಕ್ಕೆ ಒಲಿದ ನಮ್ಮನು ಯಾವ ।
ಲೋಭಕೆಳಗೆಳೆಯುವುದು ? ಯಾವ ಬಯಕೆ—
ನಮ್ಮ ಸೆರೆಹಿಡಿದೀತು ? ಅಚ್ಯುತಕೆ ಚ್ಯುತಿ ಎಲ್ಲಿ ? ।
ದೇವರಶ್ಮಿಯ ತೊಡವು ಇಹುದು ಹಯಕೆ ! ॥

ಇದೊ ಮಲಗಿದೆ ಸಾಗರ!

ಡಾ. "ಠಂಜನ"ಭಟ್ಟ, ಮದರಾಸು

ಇದೊ ಮಲಗಿದೆ ಸಾಗರ, ಎದ್ದಿರೆ ಬಲುಭೀಕರ—
ನವರಸಗಳ ಆಗರ, ಚಿಂತೆಯಲೆಗಳ ಸಾಗರ !
ಪ್ರೇಮಚಂದಿರ ಎದುರು ನಿಂತಿರೆ, ಕ್ಷುಬ್ಧವಾಯಿತು ಸಾಗರ,
ಅಂಬೆಗಾಲನು ಬಾಚಿ ನೆಗೆಯಿತು ತಾಯ ಮಳಲಿನ ಮೈಯನು.

ಆಗ ಹಿಗ್ಗಿತು, ನಗೆಯು ಉಕ್ಕಿತು
ಮತ್ತೆ ಯಾಕೋ ಬೆಂತರ
ಚಿಂತೆಯಲೆಗಳು ಮನಸ ಕಡೆದಿರೆ
ಮತ್ತೆ ಮಣಿಯಿತು ಸಾಗರ.
ಒಮ್ಮೆ ಅತ್ತಿತೆ, ಒಮ್ಮೆ ನಕ್ಕಿದೆ
ತೃಪ್ತಿಕಾಣದೆ ಅಗ್ನಿಯು—
ದಿಕ್ಕು ದಿಕ್ಕಿಗೆ ಕೈಯಚಾಚಿದೆ
ಕುಡಿಯ ಬಯಸಿತೆ ಆಗಸ ?
ಎದ್ದು ನಿಂತರೆ ಆರು ತಡೆವರು,
ಹರಿವ ದಿಕ್ಕೇ ಮುಳುಗಿರೆ ?
ಕಾಲಭೈರವ, ಪ್ರಳಯರುದ್ರವು—
ಮುನಿದರಿದು ಬಲುಭೀಕರ

*　　*　　*

ಏತಕಾದರೂ ಮಲಗಿದೆ, ದಿನದಿನವೂ ನುಣಿದಿದೆ—
ಏತಕೇತಕೆ ಮಳಲಿನಾಟವು
ಹೇಳಬಲ್ಲೆಯ ಒಗಟನು ?
ಇದೊ ನಡೆದಿದೆ ನಿತ್ಯವಿಲ್ಲಿ
ಮಳಲಿನಲ್ಲಿ ಮಣಿತದಾಟ
ಅನಂತದೆಮರು ತಳೆಯುತೇನೋ
ಸಾಗರವೂ ವೇಷವ ?

★ ಮಾಡಿದ್ದುಣ್ಣೋ ಮಾರಾಯಾ ! ★

[ವರ್ತಮಾನ ಸಂಸಾರವೊಂದರ ವಾಸ್ತವಚಿತ್ರ]*

ಲೇ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ.

ಪಾತ್ರವಿವರಣೆ :

ಆನಂದ (ಪಿ. ಡಬ್ಲ್ಯೂ. ಖಾತೆಯಲ್ಲಿಯ ಒಬ್ಬ ಅಧಿಕಾರಿ)
ಹೇಮಾ (ಆನಂದನ ಕೈಹಿಡಿದವಳು)
ಚಂದು (ಹೇಮಾ-ಆನಂದರ ಸುಪುತ್ರ)
ಯೆಲ್ಲವ್ವ (ಆನಂದನ ಮನೆಯ ಒಕ್ಕಲಿಗಿತ್ತಿ)
ಪಂಚಪ್ಪ (ಪಿ. ಡಬ್ಲ್ಯೂ. ಡಿ. ಕಾಂಟ್ರ್ಯಾಕ್ಟರ್)

[ಆನಂದನ ಮನೆ. ಚಂದು ಸಾಟಿಯ ಮೇಲೆ ಲೆಕ್ಕಗಳನ್ನು ಬಿಡಿಸುತ್ತ ಕುಳಿತಿದ್ದಾನೆ. ಒಂದು ಸಂಬ್ಯೆಗೆ ನಾಲ್ಕರಿಂದ ಗುಣಿಸಿ ಬರೆಯುತ್ತಿದ್ದಾನೆ. ಆಗಾಗ ಗಟ್ಟಿಯಾಗಿ ನಾಲ್ಕರ ಮಗ್ಗಿಯನ್ನು ಹೇಳುತ್ತ ಬೇರಿಜು ಮಾಡುತ್ತಾನೆ.]

ಪಂಚಪ್ಪ:— (ಪ್ರವೇಶಿಸಿ) ಸಾಹೇಬರು ಇಲ್ಲೇನಪಾ ಹುಡುಗಾ?

ಚಂದು:— ನಾ ಇದ್ದೀನಲ್ಲಾ ! ಏನುಬೇಕು ನಿಮಗ ?

ಪಂಚಪ್ಪ:— ನನಗ ಸಾಹೇಬರು ಬೇಕು. ಅವರಿಲ್ಲೇನು ಮನಿಯೊಳಗ ?

ಚಂದು:— ಇಲ್ಲ. ನಾ ಸಾಹೇಬರ ಮಗ.... ನಾ ಅಂವಗ ದಾದಾ ಅಂತೀನಿ.... ಮತ್ತ—ಹೇಮಾ—

ಪಂಚಪ್ಪ:— ಹೇಮಾ ಯಾರು ?

ಚಂದು:— ನಮ್ಮ ವೈನಿ ?....

ಪಂಚಪ್ಪ:— ವೈನಿ ಅಂದರ ಯಾರು ?

ಚಂದು:— ನಮ್ಮ ತಾಯಿ !.... ದಾದಾಗ ಆಕಿ ' ಅಂದೂ ' ಅಂತಾಳ—

ಪಂಚಪ್ಪ:— ಅಂದೂ ? ಏನಮ ? ' ಅಂದೂ ' ಅಂದರ ?

ಚಂದು:— ಉಂಹುಂ— ನಮ್ಮ ಅಪ್ಪನ ಹೆಸರಮ ! 'ಅಂದು' ಅಂದರ....ಆನಂದ ! ಮತ್ತ ನಮ್ಮ ಯೆಲ್ಲು— ಕೆಲಸಾ ಮಾಡಾಕಿ ಇದ್ದಾಳಲ್ಲಾ ? ಆಕಿ 'ಅಪ್ಪಾಸರ' ಅಂತಾಳ, ಮತ್ತ ಬ್ಯಾರೆಯವರೆಲ್ಲಾ ' ಸಾಹೇಬರs ! ' ಅಂತಾರ.

ಪಂಚಪ್ಪ:— ಇರಲಿ. ಒಳಗ್ಯಾರೂ ಇಲ್ಲೇನು ?

ಚಂದು:— ಯೆಲ್ಲಿ ಇದ್ದಾಳಲ್ಲಾ !

ಪಂಚಪ್ಪ:— ಆಕೆನ್ನ ಕರಿ ಹೊರಗ.

ಚಂದು:— ಯಾರು ಬಂದಾರ ಅಂತ ಹೇಳಬೇಕು ?

ಪಂಚಪ್ಪ:— ಚೊಚ್ಚೊ ! ಒಬ್ಬರು ಬಂದಾರ, ಬಾ ಅಂತ ಕರಿಯೊ !

ಚಂದು:— ಹುಂ.... ನೀವು ಇಲ್ಲೇ ಕೂಡ್ರಿ....

ಪಂಚಪ್ಪ:— ಕೂಡ್ತೀನಿ, ಹೋಗು. (ಚಂದು ಹೋಗುತ್ತಾನೆ.) ಏನು ಚಲಾಪ್ ಅದ ಈ ಹುಡುಗ ! ನಮ್ಮ ಹುಡುಗರೂ ಅವ....ಅದಕ್ಕೂ ಅದೃಷ್ಟಬೇಕು.

(ಚಂದು ಯೆಲ್ಲುವಿನೊಡನೆ ಬರುತ್ತಾನೆ.)

ಚಂದು:— ಇಕಾ, ಬಂದ್ಲು ನೋಡ್ರಿ....

ಪಂಚಪ್ಪ:— ಸಾಹೇಬರು ಇಲ್ಲೇನು ಮನಿಯೊಳಗ ?

ಯೆಲ್ಲು:— ಇಲ್ರಿ, ಆದರ ಬರೋ ಹೊತ್ತು ಆಗೈತ್ರಿ. ಅವರು ಬರದಿದ್ದರೂ, ಅವ್ವಾ ಅವರಾದರೂ ಬರ್ತಾರ್ರಿ.

ಚಂದು:— (ಪಂಚಪ್ಪ ಅನುಮಾನಿಸುವುದನ್ನು ನೋಡಿ) ಕೂಡ್ರಿ, ದಾದಾ ಈಗ ಬರ್ತಾನ; ಅಂವ ಬರದಿದ್ದರೂ, ವೈನಿ ಆದರೂ ಬರ್ತಾಳ.... ನಾ ಇದ್ದೀನಿ ಕೂಡ್ರಿ.

(ಪಂಚಪ್ಪ ಕೂಡುತ್ತಾನೆ. ಯೆಲ್ಲು ತನ್ನ ಕೆಲಸಕ್ಕೆ ಹೋಗುತ್ತಾಳೆ.)

ಪಂಚಪ್ಪ:— ಏನು ಕಲೀತೀಯಪಾ, ತಮ್ಮಾ ?

ಚಂದು:— ಸಾಲಿಕಲೀತೀನಿ.

ಪಂಚಪ್ಪ:— ಹೌದಪಾ, ಯಾನ ಕ್ಲಾಸಿನೊಳಗಿದ್ದೀ ?

ಚಂದು:— (ಎರಡು ಬೆರಳುಗಳನ್ನು ತೋರಿಸಿ) ಇವು ಎಷ್ಟು?

ಪಂಚಪ್ಪ:— ಎರಡು !— ಇಂಗ್ಲಿಷೋ ಏನು ಕನಡೋ ?

ಚಂದು:— ಎರಡು ವರ್ಷ ಆಗ್ತಾವಲ್ಲಾ— ಆದ ಮ್ಯಾಲ ಇಂಗ್ಲೀಷ್ ಸಾಲಿಗೆ ಹೋಗ್ತೀನಿ ನಾನೂ....!

ಪಂಚಪ್ಪ:— ಮತ್ತ ಹಿಂದೀ ಕಲಿಯೂದಿಲ್ಲೇನು ?

ಚಂದು:— ನನಗೀಗ, ಹಿಂದೀ ಮಾತು ಬರ್ತಾವ. ' ಗಲ್ಲೀಕಾ ಚೋರ್ ' ಸಿನೇಮಾ ನೋಡೀರೇನು ನೀವು ?

* ಧಾರವಾಡ ಬಾಸುಲಿಕಟ್ಟೆಯಿಂದ ಬಿತ್ತರಗೊಂಡ ತರಂಗರೂಪಕವಿದು.
ಲೇ.

ಪಂಚಪ್ಪ:— ಇಲ್ಲವಾ, ನಾ ನೋಡಿಲ್ಲ.

ಚಂದು:— ಅದರಾಗ ಅಂವ ಕಳ್ಳಾಗಿರ್ತಾನಲ್ಲಾ—

ಪಂಚಪ್ಪ:— ಹುಂ.....

ಚಂದು:— ಅಂವ....ಇನ್ನೊಬ್ಬ ಇರ್ತಾನಲ್ಲಾ....

ಪಂಚಪ್ಪ:— ಹುಂ.....

ಚಂದು:— ಅವನ ಅಂಗೀ ಹಿಡಿದು (ಪಂಚಪ್ಪನ ಕೋಟನ್ನು ಹಿಡಿದು, ಬಲಗೈಯಲ್ಲಿ ಪೇನ್ಸಿಲ್ ಬಾಕಿನಂತೆ ತಿನಿಯುವ ರೀತಿಯಲ್ಲಿ ತೋರಿಸಿ) 'ಹರಾಮ್ ಖೋರ್, ಜಾನಸೇ ಮಾರ್‌ಡಾಲೂಂಗಾ' ಅಂತಾನಲ್ಲಾ.....

ಪಂಚಪ್ಪ:— ಹುಂ.....

ಚಂದು:— ಅದು ಬತ್ತಿಡವ ನನಗ.

ಪಂಚಪ್ಪ:— ಒಳ್ಳೇದಿ ಕಲ್ತೀದಿ ಹೆಂಗಾರ! ಅದರ ಅರ್ಥ ಗೊತ್ತದಯೇನು ನಿನಗ ?

ಚಂದು:— ಅಂದರೇನು, ಕೊಂದುಬಿಡೋನು..... ಸತ್ತವರು ಹ್ಯಾಂಗ ಮಲಕೊಂಡಿರ್ತಾರ ತೋರಿಸಲಿ ನಿಮಗ? ನನಗದು ಭಾಳ ಛೆಲೋ ಬರ್ತದ.

ಪಂಚಪ್ಪ:— ಬ್ಯಾಡ, ಬ್ಯಾಡ, ನನಗ್ಗೊತ್ತದ.....

ಚಂದು:— ನೀವು ಎಂದಿರ ಸತ್ತಿದ್ದಿರಿ ?

ಪಂಚಪ್ಪ:— ಸತ್ತಿದ್ದರ ಸತ್ತೇ ಹೋಗ್ತಿದ್ದೆ; ಸತ್ತವರು ಬದಕ್ತಾರೇನು ಮತ್ತ ?

ಚಂದು:— ಯಾಕ ಬದುಕೋದಿಲ್ಲ ? ನಾಟಕದಾಗ ಸಾಯ್ತಾರಲ್ಲ!

ಪಂಚಪ್ಪ:— ಹುಂ.....

ಚಂದು:— ಅವರೆಲ್ಲಾ ಬದಕ್ತಾರ.....

ಪಂಚಪ್ಪ:— ಅವರು ಖರೇ ಸಾಯೋದಿಲ್ಲ, ಅಂತ ಬದಕ್ತಾರ.

ಚಂದು:— ನಮ್ಮ ವೈನಿ ಇದ್ದಾಳಲ್ಲ....ಆಕಿ....ಒಂದು ನಾಟಕದಾಗ ಸತ್ತಿದ್ಲು !.....ಅಲ್ಲೆ.....ಬೆಳಗಾಂವಿಯೊಳಗ ಥೇಟರದೊಳಗ ನಾಟಕಾಗಿತ್ತಲ್ಲಾ.

ಪಂಚಪ್ಪ:— ಹುಂ.....

ಚಂದು:— ಆಗ ಸತ್ತಿದ್ಲು ನಾಟಕದಾಗ.....

ಪಂಚಪ್ಪ:— ಹೆಂಗಾರ ನಿಮ್ಮ ವೈನಿ ನಾಟಕದೊಳಗ ಪಾರ್ಟು ಮಾಡ್ತಾರೇನು ?

ಚಂದು:— ಓ, ಹೋ ! ಮಾಡ್ತಾಳಲ್ಲ ಯಾವಾಗರೆ !— ನಾವು ಬೆಳಗಾಂವಿಯೊಳಗಿದ್ವಾಗ.....

ಪಂಚಪ್ಪ:— ಮತ್ತ ಹಾಡ್ತಾರೇನು ನಿಮ್ಮ ವೈನಿ ? ತಂಬೂರಿ, ತಬಲಾ ಕಾಣಸ್ತಾವಲ್ಲ ?—!

ಚಂದು:— (ಬೇಸರದಿಂದ) ಹುಂ....ಯಾವಾಗ ನೋಡಿದರೂ ಆವಾಗ ಹಾಡಿಕೋತ ಕೂತು ಬಿಡ್ತಾಳ. ನನಗ ಸಾಲಿಗೆ ಹೋಗೋದಿರ್ತದ; ಅಡಗೀನೂ ಮಾಡೋದಿಲ್ಲ....!

ಪಂಚಪ್ಪ:— ನಿಮ್ಮ ದಾದಾನ ಮುಂದ ಹೇಳಬೇಕು.... !

ಚಂದು:—ಅಂವ ಏನು ಮಾಡ್ತಾನ ? ಒಮ್ಮೆ ದಾದಾ ಬೈದಿದ್ದ; ವೈನಿ ಹೋಗೇಬಿಟ್ಟದ್ಲು....!

ಪಂಚಪ್ಪ:— ಎಲ್ಲೆ ?

ಚಂದು:— ಎಲ್ಲೋ್ಯೇ ಹೋಗಿದ್ಲು. ಎಂಟು ದಿವಸದ ಮ್ಯಾಲ ತಿರಿಗಿ ಬಂದ್ಲು.

ಪಂಚಪ್ಪ:— ಛೆಲೋ ಹಾಡ್ತಾರೇನು ನಿಮ್ಮ ವೈನಿ ?

ಚಂದು:— ತಂಬೂರಿ ಹಿಡಕೊಂಡು (ಅಣಕಿಸುವ ಸ್ವರದಲ್ಲಿ) 'ಆ್ಯಂಽಽಽ' ಅಂತಾಳ ಅತು, ಎಷ್ಟೊತ್ತಾದರೂ ಏಳೋದೇ ಇಲ್ಲ. ಈಗ ಹೋಗ್ಯಾಳಲ್ಲ !.... ನನಗ ಸಾಲಿಗೆ ಹೋಗಬೇಕಾಗೇದ....ತಡಾ ಆದರ ನಮ್ಮ ಟೀಚರ್ ಹೊಡಿತಾರ.... ಈಗ ಎಷ್ಟು ಹೊಡೀತರಿ ?

ಪಂಚಪ್ಪ:—(ಕೈಯಲ್ಲಿಯ ಗಡಿಯಾರ ನೋಡಿ) ಒಂಭತ್ತೂವರಿ; ನಿಮ್ಮ ಆ ಗಡಿಯಾರ ಕೆಟ್ಟಿಡದೇನು ?

ಚಂದು:— ಕೆಟ್ಟಿಲ್ಲ. ದಾದಾ ಬಂದ್‌ಮಾಡಿ ಇಟ್ಟಾನ.

ಪಂಚಪ್ಪ:— ಯಾಕ ?

ಚಂದು— ವೈನಿ ಯಾವ ಕೆಲಸಾನೂ ಹೊತ್ತಿಗೆ ಮಾಡೋದಿಲ್ಲ ಅಂತ !.... ಅಕಾ, ವೈನಿ ಬಂದ್ಲು ನೋಡ್ರಿ....!

ಪಂಚಪ್ಪ:— ನಮಸ್ಕಾರ. (ಹೇಮಾ ಬರುತ್ತಾಳೆ.)

ಹೇಮಾ:— ನಮಸ್ತೆ !

ಚಂದು:— ವೈನಿ, ನನಗ ಸಾಲಿಗೆ ಹೊತ್ತಾತು, ಸಾನಾಮಾಡಿಸಿ ಊಟಕ್ಕ ಠಾಕವ್ವಾ....

ಹೇಮಾ:— ಯೆಲ್ಲಿಗೆ ಹೇಳು, ಆಕಿ ಸ್ನಾನಾಮಾಡಿಸತಾಳ ! ಏ ಯೆಲ್ಲೂ....!

ಯೆಲ್ಲು:— (ಹೊರಗೆ ಬಂದು) ಯಾಕೆವ್ವಾ ?

ಹೇಮಾ:— ಇಂವಗ ಸ್ನಾನಾಮಾಡಿಸು !....

ಚಂದು:— ಮತ್ತ ಊಟಕ್ಕ ? ಅಡಿಗೆಲ್ಲಾ ಆಗೇದ ?

ಹೇಮಾ:— ನೀ ಸ್ನಾನಾನಾಡಿ ಬರೋದರೊಳಗಿ ನಾ ತಾಟು ಬಡಿಸಿ ಇಟ್ಟಿರ್ತೀನಿ, ಹೋಗು....

ಚಂದು:— ನೋಡು ಮತ್ತ.... !

(ಯೆಲ್ಲು ಚಂದೂನನ್ನು ಒಳಗೆ ಕರೆದೊಯ್ಯುವಳು)

ಪಂಚಪ್ಪ:— ನಾ ಇಲ್ಲಿಯ ಬಿಲ್ಡಿಂಗ್ ಕಂಟ್ರಾಕ್ಟರ್. ಪಂಚಪ್ಪ ಅಂತಾರ್ರಿ ನನಗ—ಸಾಹೇಬರ್ನ ಖಾಸಗೀ ಭೆಟ್ಟಿ ಆಗೋದಿತ್ತು. ಅದಕ್ಕs ಬಂದಿದ್ದಿನ್ರಿ....!

ಹೇಮಾ:— ಅವರು ಒಂದು ಕಾಮುಗಾರೀ ತಪಾಸಣಿಗೆ ಹೋಗ್ಯಾರ; ಲಗು ಬರ್ತಿನಿ ಅಂದಾರ! (ನೆನಸಿಸಿಕೊಂಡು) ನಿಮ್ಮನ್ನ ಎಲ್ಲೋ ನೋಡಿದ್ದೆ ನಾನು....ಎಲ್ಲೆ ?....

ಪಂಚಪ್ಪ:— ಸಾಹೇಬರು ಈ ಊರಿಗೆ ಪರ್ಮಾಗಿ ಬಂದ ದಿವಸ, ನಾ ಒಂದು ಪಾರ್ಟಿ ಕೊಟ್ಟಿದ್ದೆನ್ರಿ; ಅದಕ್ಕ ತಾವೂ ಬಂದಿದ್ದಿರಿ, ಈಗ

ತಮ್ಮ ಧ್ಯಾನದೊಳಗ ಬಂದಿರಬಹುದು. ಆವೊತ್ತು ತಾವು, ನೀಲೀ ಬಣ್ಣದ ನೈಲಾನ್ ಉಟ್ಟುಕೊಂಡು ಬಂದಿದ್ದಿರಿ! ನನಗಿನ್ನೂ ಲಕ್ಷದೊಳಗ ಅದsರಿ!

ಹೇಮಾ:— ಓ! ಇವನ್ನೂ ನೋಡ್ತಿರ್ತೀರೇನು ನೀವು?

ಪಂಚಪ್ಪ:—ಇಲ್ಲರಿ, ತಾವು ಅಂದ ಬಹಳ ಚೆಂದಕಂಡಿರಿ....ಗೈರ್ ಸಮಜ್ ಮಾಡಿಕೊಳ್ಳಬಾರದು!.....

ಹೇಮಾ:— ಇರಲಿ. ಈಗ ಅವರು ಮನಿಯೊಳಗ ಇಲ್ಲ, ಅವರಿದ್ದಾಗ ಬರ್ರಿ!

ಪಂಚಪ್ಪ:— ನಾ ಸಾಹೇಬರ ಕಡೆಗೆ ಆಗಾಗs ಬರ್ತಿರ್ತೀನ್ರಿ; ಆದರ ಅದು ಆಫಿಸಿನೊಳಗರಿ! ನನ್ನ ಮ್ಯಾಲ ಭಾರೀ ಮರ್ಜಿರಿ ಸಾಹೇಬರದು. ಇಂದ ಮನಿಯೊಳಗs ಭೆಟ್ಟಿ ಆಗಬೇಕಾದ—ಅಗದೀ ಖಾಸಗೀ ಕೆಲಸಿತ್ರೆೀ.... ಅದಕ್ಕs ಬಂದೇನ್ರಿ.

ಹೇಮಾ:— ನೀವು ಬಂದು ಬಹಳ ಹೊತ್ತಾತೇನು?

ಪಂಚಪ್ಪ:— ಇಲ್ರಿ. ಒಂದು ಹತ್ತು ಮಿನೀಟು ಆಗಿರಬಹುದು. ನಿಮ್ಮ ಹುಡುಗ!— ಭಾರೀ ಬ್ರೇನ್ ನೋಡ್ರಿ! ಹುಡುಗನ ಏಜೇನು (age); ಅವನ ಮಾತಿಗೆ ನಾ ಅಂತೂ Struck with wonder ಆದೆನ್ರಿ!

ಹೇಮಾ:— ಹೊಸತಾಗಿ ಐದ್ಹತ್ತು ಮಿನಿಟು ಹಾಂಗನಿಸ್ತsವ. ಈ ಅಭಿಪ್ರಾಯ ಕೊಸೀವರೆಗೂ ಉಳಿವರ ಒಳ್ಳೇದು!

ಪಂಚಪ್ಪ:— ಛೇ, ಅದ್ಯಾಕರೀ; ಅಂವ ಸಾಹೇಬರ್ಹಾಂಗ ಜೀನಿಯಸ್ ಆಗ್ತಾನ ಬಿಡ್ರಿ. ನನಗೂ ಗಾಣೇದ್ದು ಬಹಳ ಷೋಕ್ ರಿ. ಒಮ್ಮೆ ತಮ್ಮ ಮ್ಯುಜಿಕ್ ನಮ್ಮ ಮನಿಯೊಳಗ ಆಗಲ್ರಿ. ನಾ ಸಾಹೇಬರಿಗೆ ಬೆಗ್ (beg) ಮಾಡ್ತೀನ್ರಿ....

ಹೇಮಾ:— ಹಾಡುವವಳು ನಾನೋ ಅವರೊ? ಅದಿರಲಿ ಅವರಂತೂ ಈಗ ಮನೆಯೊಳಗಿಲ್ಲ. ನನ್ನ ಮುಂದ ಹೇಳೋ ಹಾಂಗೇನಾದರೂ ಇದ್ದರ ಹೇಳ್ರಿ. ಅವರು ಬಂದಮ್ಯಾಲ ನಾನು ಅವರ ಕಿವೀ ಮ್ಯಾಲ ಹಾಕ್ತೇನಿ— ನಿಮ್ಮ ಮಾತನ್ನ!

ಪಂಚಪ್ಪ:— ಸಾಹೇಬರು ನನ್ನದೊಂದು ಕೆಲಸಾ ಮಾಡಿ ಕೊಟ್ಟು ನನ್ನ ಮ್ಯಾಲ ಬಹಳ ಉಪಕಾರ ಮಾಡ್ಯಾರ್ರಿ. ಆ ಬರ್ಡನ್, ನಾ ಏನು ಕೊಟ್ಟರೂ ಕಡಿಮಿ ಆಗೋ ಹಾಂಗಿಲ್ರಿ. (ಜೇಬಿನೊಳಗಿಂದ ನೋಟಿನ ಒಂದು ಪುಡಿಕೆಯನ್ನು ಹೊರತೆಗೆದು) ಇದು ನನ್ನ ಕೈಲಾವದ್ದು! ತಮ್ಮ ಕೈಯೊಳಗ ಕೊಟ್ರೇನು, ಸಾಹೇಬರ ಕೈಯೊಳಗ ಕೊಟ್ರೇನು? ಒಂದು ಸಾವಿರ ರೂಪಾಯಿ ಅನ್ನsರಿ!

ಹೇಮಾ:— (ಆಶ್ಚರ್ಯದಿಂದ) ಏನು? ಇಷ್ಟೊಂದು ರೂಪಾಯಿ

ಪಂಚಪ್ಪ:— ಹೌದರಿ! ಅವರು ಮಾಡಿಕೊಟ್ಟ ಕೆಲಸಾನೂ ಹಾಂನs ಭಾರೀ ಅದsರಿ. ನನ್ನ—ದೊಡ್ಡ ಪೇಚಿನೊಳಗಿಂದ ಸೇವ್ (Save) ಮಾಡಿದರ್ರಿ. ಈಗ ನಾ ಕೊಡಬೇಕು ಅಂತ ತಂದದ್ದು ಏನೂ ಅಲ್ರಿ—ಅವರ ಉಪಕಾರ ಯಾವ kind ದಿಂದಾದರೂ ಮುಟ್ಟಸಬೇಕು ಅಂತ ತಂದೀನ್ರೀ! ಇನ್ನ ಇದರಮ್ಯಾಲ ನನ್ನ ಮಾಸ್ಟರೀ (Mastery) ಇಲ್ರಿ. ಇದರ ಮಾಲಕರು ಇನ್ನು ತಾವsರಿ. ತಮ್ಮ ಕೈಯೊಳಗ ಕೊಟ್ಟರೂ ಸಾಹೇಬರಿಗೇ ಮುಟ್ಟದ್ಹಾಂಗರಿ....

ಹೇಮಾ:— ಪಗಾರಲ್ಲದೆ ಇಷ್ಟು ದುಡ್ಡು ಸಂಪಾದಿಸ್ತಾರ. ನನ್ನ ಕೈಗೆ ಒಂದು ರೂಪಾಯಿ ಹಚ್ಚಿದರ ಇಟ್ಟಾಣಿ! ಎಲ್ಲಾ "ರಮಿಗೆ" ಒಯಿದು ಸುರುವುತಾರ.

ಪಂಚಪ್ಪ:—ಅಂದರ ಬ್ಯಾರೆ ಏನಾsರೆ ಒಂದು ಸಂಬಂಧಗಿಂಬಂಧ ಇಟ್ಟುಗೊಂಡಾರೇನ್ರಿ ಬಾಯೀರs?

ಹೇಮಾ:— ಥುಃ, 'ರಮಿ' ಗೊತ್ತಿಲ್ಲೇನು ನಿಮಗ? ಕ್ಲಬ್ಬಿನೊಳಗ ಆಡ್ತಾರಲ್ಲ!

ಪಂಚಪ್ಪ:— ಓಹೊ! ಅದನs. ಹೌದು ಬಿಡ್ರಿ. ನಾನೂ ನೋಡೀನ್ರಿ. ಜಾಬಾದ್ ಆಡವರ್ರಿ ಮತ್ತ ಇವರೂ. ಆಡವೊಲ್ಲರ್ಯಾಕ ಬಿಡ್ರಿ, ಗಳಸ್ತಾರ, ಆಡ್ತಾರ! ನೀವಂತೀರಲ್ರಿ ಬಾಯೀರ, ದೊಡ್ಡ ಮಂದಿ ಆದರೂ ಅಂದರ, ಇಂತಾವೇನsರ ನಾದ ಇರೋನsರಿ! 'ರಮಾ'— ಇಲ್ಲದಿದ್ದರ 'ರಮಿ'! ಹೋಗಲಿ ಬಿಡ್ರಿ. ಅದರ ಕಿತಾಪತಿ ನಮ್ಮ ಬಡವರಿಗ್ಯಾಕರಿ? ಇವನ್ನ ತಾವು ಹತ್ತರಿಡ್ರಿ. ಸಾಹೇಬರು ಬಂದಮ್ಯಾಲ, ಅವರಿಗೆ ಸಾವಿರಂತ ಹೇಳ್ರಿ, ಬೇಕಾದರ ಐನೂರು ಅಂತ ಹೇಳ್ರಿ! ಕಡೀಗೆ ಏನೂ ಹೇಳದಿದ್ದರೂ ನನ್ನದೇನೂ ಅಪ್ಪೋಜಿಶನ್ (Opposition) ಇಲ್ರಿ! ಯಾವ ಜಾಗಕ್ಕ ಮುಟ್ಟಬೇಕೋ ಆ ಜಾಗಕ್ಕ ಮುಟ್ಟತಾವ, ಸಾಕರಿ. I enjoy ತೊಗೊಳ್ರಿ ಬಾಯೀ-ಸಾಹೇಬ್; dont worry ರಿ.

ಹೇಮಾ:— ಆ ಕೋಚದ ಮ್ಯಾಲ ಇಡ್ರಿ. ಇವನ್ನ ಇಸಗೊಂಡ ಬ್ಯಕ್ಕ ಅವರು ಸಿಟ್ಟಗೆದ್ದರ, ನಿಮ್ಮ ಮ್ಯಾಲ ಹೇಳಿಬಿಡ್ತೀನಿ.

ಪಂಚಪ್ಪ:— ಬೇಲಾಷಕ್ ಹೇಳ್ರಿ. I am prepared myself ಇಲ್ಲಿ ಇಡ್ತೀನ್ರಿ ಇವನ್ನ ತಗದಿಡ್ರಿ. ನಾ ಬರ್ತೀನಿ ಬಾಯಿ ಸಾಹೇಬ್!

ಹೇಮಾ:—ನಮಸ್ತೆ! ಅವರು ಬಂದಮ್ಯಾಲ ಅವರನ್ನು ಕಾಣ್ರಿ; 'ನಾ ಬಾಯೀಸಾಹೇಬರ ಕಡೆ ಮುಟ್ಟಸೋದು ಮುಟ್ಟಸೀನಿ' ಅಂತ ಇಷ್ಟೇ ಹೇಳ್ರಿ—ಇಸ್ಕs ಕೊಟ್ಟೀನಿ ಅಷ್ಟೇ ಕೊಟ್ಟೀನಿ ಅಂತೇನೂ ಹೇಳಬ್ಯಾಡ್ರಿ. ನಾ ಎಲ್ಲಾ ಹೇಳೋದು ಹೇಳ್ತೀನಿ.

ಪಂಚಪ್ಪ:— ಹಾಂಗs ಮಾಡ್ರಿ. ತಮ್ಮ Music ಮಾತ್ರ ನಮ್ಮಲ್ಲೆ ಒಮ್ಮೆ ಆಗಬೇಕರಿ. ನಾ ಅರೆಂಜ್ ಮಾಡ್ತಿನ್ರಿ.... ಷೋಕ್ ಸೇರಿ!....

ಹೇಮಾ:— ನೋಡೋಣ— ಅದಕ್ಕೇನು!....

(ಚಂದು ಬರುತ್ತಾನೆ)

ಚಂದು:— ಅದು ಏನು?

ಹೇಮಾ:— ಅವರ ಆಫೀಸಿನ ಕಾಗದ!

ಚಂದು:— ಮತ್ತ ಇಂಥಾ ಛೆಲೋ ಅರಿವಿಯೊಳಗ ಯಾಕ ಕಟ್ಯಾರ ?

ಹೇಮಾ:— ಅವು ಅಂಥಾ ಮಹತ್ವದುವವ !

ಚಂದು:— ನಾ ನೋಡ್ತಿನಿ.

ಹೇಮಾ:— ಅವು-ನೀ ನೋಡೋನಲ್ಲ. ಹೋಗು, ಅಭ್ಯಾಸ ಮಾಡ್ತಾ ಕೂಡು !

ಚಂದು:— ನನಗ ಸಾಲಿಗೆ ಹೊತ್ತಾಗೇದ, ಊಟಕ್ಕ ಹಾಕು ಹೆಂಗಾರ.

ಹೇಮಾ:— ಹೊತ್ತಾಗಿದ್ದರ, ಏನಾರೇ ತಿಂದು ಹೋಗು, ಮಧ್ಯಾನ್ಹ ಸೂಟಿಗೆ ಬಾ; ಊಟಾಮಾಡು !

ಚಂದು:— ನಾ ದಿನಾದಿನಾ ಸೂಟ್ಯಾಗ ಬರೋದಿಲ್ಲ ಹೋಗು. ನನ್ನ ಕಾಲು ನೊಯ್ತಾವ. ನನಗ ಈಗ ಊಟಬೇಕು !

ಹೇಮಾ:— ಇದು ನೋಡು, ನಾ ಇವಕ್ಕ ಬಂದೀನಿ. ಇನ್ನ ಮ್ಯಾಲ ಅಡಿಗಿ ಅಂದರ, ಒಂದು ತಾಸು ಬೇಕಾಗ್ತತದ. ಬ್ರೆಡ್ಡು ಹಾಲು ಕೊಡ್ತೀನಿ, ತಿಂದುಹೋಗು; ಮ್ಯಾಲ ಬೇಕಾದರ ಎಂಟಾಣೆ.... ನೀ ಬೇಕಾದ್ದು ತೊಗೊಂಡು ತಿನ್ನು !

ಚಂದು:— ನನಗ ಒಂದು ರೂಪಾಯಿ ಬೇಕು.

ಹೇಮಾ:— ರೂಪಾಯಿ ಏನು ಮಾಡ್ತೀ ?

ಚಂದು:— ನಾ ಏನಾದರೂ ಮಾಡ್ತೀನಿ, ರೂಪಾಯಿ ಕೊಟ್ಟರಕ್ಕ ಹೋಗಾಂವ ನಾ; ಇಲ್ಲದಿದ್ದರ ನಾ ಸಾಲಿಗೇ ಹೋಗೋದಿಲ್ಲ, ಹೋಗು!

ಹೇಮಾ:— ಕೊಡ್ತೀನಿ, ಆತ್ಯೋ ಇಲ್ಲೋ ?

ಚಂದು:— ಕೊಡು ಹೆಂಗಾರ, ಈಗ ಕೈಯಾಗಕ್ಕ ಬೇಕು ನನಗ !

ಹೇಮಾ:— (ತನ್ನ ವ್ಯಾನಿಟಿ ಬ್ಯಾಗಿನೊಳಗಿಂದ ಒಂದು ರೂಪಾಯಿ ತೆಗೆದು) ಇದು ಹಿಡಿ !

ಚಂದು:— ನಡಿ ಹೆಂಗಾರ. ಬ್ರೆಡ್ಡು, ಹಾಲು ಕೊಡು. ಮತ್ತ ನನಗ ಕೆನಿ ಬೇಕು....

ಹೇಮಾ:— ಯೆಲ್ಲವ್ವಗ ಹೇಳ್ತೀನಿ. ಆಕೆಲ್ಲಾ ಕೊಡ್ತಾಳ !

ಚಂದು:— ಹೇಳು ಹೆಂಗಾರ.

ಹೇಮಾ:— ಏ ಯೆಲ್ಲವ್ವಾ, ಯೆಲ್ಲೂ....

ಯೆಲ್ಲು:— ಬಂದ್ನೆವಾ....

ಹೇಮಾ:— ಇಂವಗ ಆ ಕಪಾಟಿನೊಳಗಿನ ಬ್ರೆಡ್ಡು—ಹಾಲು ಕೊಡು....

ಚಂದು:— ಬರೆ ಹಾಲಲ್ಲ, ಕೆನಿಬೇಕು.

ಹೇಮಾ:— ಆಗಲಿ, ಕೆನೀ ಹಾಕಿಕೊಡು !

ಯೆಲ್ಲು:— ಹೂನೆವ್ವಾ.... ಬಾಯಮಾ !

(ಯೆಲ್ಲವ್ವ ಚಂದೂನನ್ನು ಕರೆದುಕೊಂಡು ಹೋಗುತ್ತಾಳೆ.)

* * * * *

(ಹೇಮಾ ತಾನು ಪಾತ್ರವಹಿಸಲಿರುವ ಒಂದು ನಾಟಕದೊಳಗಿನ ಹಾಡನ್ನು ಹೇಳುತ್ತ ಕುಳಿತಿದ್ದಾಳೆ. ಆನಂದ ಬರುತ್ತಾನೆ.)

ಹೇಮಾ:— (ತಂಬೂರಿಯ ಮೇಲೆ) "ಜೀವನಸಫಲತೆ ಅರಿಯದೆ ಮಾನವ ಕಾತರಪಡುತಿಹನು !
ವಿಫಲತೆಯ ಹಾದಿಯಲಿ ಸಾಗಿ ತಾ-ಸಫಲತೆ ಬಯಸುವನು!!"

ಆನಂದ:— (ಪ್ರವೇಶಿಸಿ) ಯಾರಾದರೂ ಬಂದಿದ್ದರೇನು ?

ಹೇಮಾ:— (ಹಾಡುನಿಲ್ಲಿಸಿ) ಯಾರು ಬರುವವರಿದ್ದರು ?

ಆನಂದ:— ಬಹಳ ಜನ ಬರುವವರಿದ್ದರು—

ಹೇಮಾ:— ಬಹಳ ಜನ ಏನೂ ಬಂದಿಲ್ಲ.

ಆನಂದ:— ಒಬ್ಬರಾದರೂ ಬಂದಿದ್ದರೇನು ?

ಹೇಮಾ:— ಬಂದಿದ್ದರು-

ಆನಂದ:— ಯಾರವರು ?

ಹೇಮಾ:— ನನಗೇನು ಗೊತ್ತು ? ಯಾರೋ ಪಂಚಪ್ಪ ಅಂತ, ಬಂದಿದ್ದರು.

ಆನಂದ:— ಅವರಕ್ಕ ಬೇಕಾಗಿತ್ತು ನನಗ.

ಹೇಮಾ:— ಊಂ....

ಆನಂದ:— ಏನಾದರೂ ಹೇಳಿದರೇನು ?

ಹೇಮಾ:— ಬಹಳ ಬಹಳ ಹೇಳಿದರು.

ಆನಂದ:— ಬಹಳ ಹೇಳೋ ಕಾರಣ ?

ಹೇಮಾ:— ಹಾಂಗೆಲ್ಲಾ ಮಾಡ್ತೀರಿ- ಅಂತ !

ಆನಂದ:— ಏನು ಹೇಳಿದರರೇ ಏನು ? ಹೇಳಬಾರದ ?

ಹೇಮಾ:— ನೀವು ಮಾಡ್ತಿರೋದನ್ನೆಲ್ಲಾ ಹೇಳಿದರು; ಬಂದ ದುಡ್ಡೆಲ್ಲಾ 'ರನಿಗೆ' ಇಡ್ತೀರಿ— ಅಂತ ಹೇಳಿದರು. ಇನ್ನೇನು ಹೇಳಬೇಕು ? ಸಾಕಾಗಲಿಲ್ಲೇನು ?

ಆನಂದ:— ಏನು ಅಧಿಕಪ್ರಸಂಗಿ ಇದ್ದಾನಾ ಮನುಷ್ಯ ! ನಿನ್ನ ಮುಂದೆ ಹೇಳೋ ಕಾರಣೇನಿತ್ತು ?

ಹೇಮಾ:— ಹೇಳಿದ್ದು ಒಳ್ಳೇದಕ್ಕ ಆತ್ಯ. ನನಗ ತಿಳಿದಷ್ಟರೆ ತಿಳೀತು.

ಆನಂದ:— ತಿಳಿದು ಏನು ಮಾಡೋ ಆಕಿದ್ದೀ ನೀನು ?

ಹೇಮಾ:— ಏನು ಮಾಡಾಕಿದ್ದೇನೊ, ತೋರಿಸ್ತೀನಿ.

ಆನಂದ:— ಇನ್ನೇನದ ಹೊಸಾದು ತೋರಿಸೋದು ! ಇಲ್ಲೀವರೆಗೆ ಸಾಕಷ್ಟು ನೋಡಿ ಆಗೇದ ! ಸಣ್ಣಾಕಿದ್ದಾಗ ಕುಣಿಯೋದು ಅಂತ ಕುಣಿದಿ, ಮದಿವ್ಯಾದ ಮ್ಯಾಲ ಹಾಡು ಅಂತ ಕುಣಿದಿ. ಈಗ ನಾಟಕ ಅಂತ ಕುಣೀತಿದಿ ! ನೀನು ಕುಣಿದ್ದಾಂಗೆಲ್ಲಾ ನಾನು ಢೋಲ್ ಬಜಾಯಿಸಬೇಕು— ಯಾಕಂದರ, ಆರ್ಟಿಸ್ಟ್ ಹೆಂಡತೀ ಗಂಡಲ್ಲಕ್ಕ ನಾನು ! ಅದಿರಿಲಿ, ಅಂವ ಕೊಟ್ಟುಹೋದ ರೂಪಾಯಿ ಎಲ್ಲವ ?

ಹೇಮಾ:— ಅಲ್ಲೇ ಬಿದ್ದಾವ ನೋಡ್ರಿ.... ನಾ ಏನವಕ್ಕ ಕೈ ಹಚ್ಚಿಲ್ಲ.

ಆನಂದ:— ಹೀಂಗs ಒಗದುಬಿಡಬೇಕೇನವನ್ನ ? ತೆಗದಿಡ ಬಾರದು ? ಯಾರ ಕೈಗsರೆ ಬಿದ್ದರ ?

ಹೇಮಾ:— ತೆಗದಿಡಲಿಕ್ಕೆ ನನಗೇನು ಸಿಗೋದದ ಅದರಾಗ ? ಎಲ್ಲಾ ಒಯಿದು ಆ 'ರವಿ' ಹೆಣಕ್ಕ ಬಡಿದು ಬರ್ರಿ.

ಆನಂದ:— (ನೋಟನ್ನೆಣಿಸಿ, ಆಶ್ಚರ್ಯಗೊಂಡು) ಅಲ್ಲss, ನಾಲ್ಕುನೂರsss ಅವ ಅಲ್ಲ— ಇವು ?

ಹೇಮಾ:— ನಾಲ್ಕು ನೂರು ಹ್ಯಾಂಗಿರ್ತಾವ ? ಐದು ನೂರವ....

ಆನಂದ:— ಸಾವಿರ ಇರಲಿಕ್ಕೆ ಬೇಕು.

ಹೇಮಾ:— ಹೇಳಿದನೇನವ, ಲುಚ್ಚಾ ?

ಆನಂದ:— ಮ್ಯಾಲ ಅವನsss ಲುಚ್ಚಾ ಏನು? ಅಂವ ಕೊಟ್ಟದ್ದು ಸಾವಿರ, ಇಲ್ಲಿರೋದು ನಾಲ್ಕು ನೂರು— ಉಳಿದದ್ದೂ ಎಲ್ಲಿ ಹೋದುವು?

ಹೇಮಾ:— ಐದು ನೂರು ನನಗ ಬೇಕಾಗಿದ್ದುವು. ನಾ ತಕ್ಕೊಂಡೀನಿ. ಇನ್ನ ನೂರು ನನಗ್ಗೊತ್ತಿಲ್ಲ ನಿಮ್ಮಾಣೆಂದರೂ ನನಗ್ಗೊತ್ತಿಲ್ಲ.

ಆನಂದ:— ಸುಳ್ಳ ! ಒಪ್ಪಿಕೊಂಡರೂ ಪೂರಾ ಒಪ್ಪಿಕೊಳ್ಳೋ ಹಾಂಗಿಲ್ಲ. ಹೋಗಲಿ, ಆ ನೂರರದು ಆ ನ್ಯಾಯ ವಿಚಾರಮಾಡೋಣ. ಈ ಐದು ನೂರರೇ ಯಾಕ ತೊಗೊಂಡಿ ?

ಹೇಮಾ:— ನಿಮ್ಮೊಬ್ಬರದsss ಹೆಕ್ಕವ ಏನವರ ನ್ಯಾಯ ?

ಆನಂದ:— ನಾ ಕೊಟ್ಟರ ನಿನಗ ಅವ. ಇಲ್ಲದಿದ್ದರಿಲ್ಲ....

ಹೇಮಾ:— ಯಾಕ ? ಇವತ್ತ ನಾಲಿಗ್ಗೆ ಬಹಳ ಜೋರು ಬಂದsದ ? ನಾಯೇನವನ್ನ ಕೋಡೋಡಿಲ್ಲ. ನನಗ ಬಳಿ ಮಾಡಿಸ ಬೇಕಾಗೇದ; ಪತ್ತಲಾನೂ ತೊಗೋಬೇಕಾಗೇದ. ನಾಟಕದ ಹೊತ್ತಿಗೆ ನನಗ ಇವೆಲ್ಲಾ ಬೇಕು.

ಆನಂದ:— ನಾಟಕದೊಳಗ ಈ ವಸ್ತಾ ಇಟಗೊಂಡು, ನೀ ಇನ್ನೊಬ್ಬನ ಹೇಣ್ತಿ ಆಗಾಕೇನು ?

ಹೇಮಾ:— ನೀವು ಇಲ್ಲದ್ದೊಂದು ಇಂಥಾ ಅಸಹ್ಯ ಅಸಹ್ಯ ಮಾತಾಡಬ್ಯಾಡ್ರಿ.

ಆನಂದ:— ಹೋಗಲಿ, ಆ ಹಣಕೊಡು ಮೊದಲ, ಅರು ನೂರನ್ನೂ ತಂದಿಡಬೇಕು ನನ್ನ ಮುಂದ....

ಹೇಮಾ:— ಅರು ನೂರಲ್ಲ, ಐದು ನೂರು !

ಆನಂದ:—ಮತ್ತ ಸುಳ್ಳಾಡಬ್ಯಾಡ. ಅರು ನೂರು ತೊಗೊಂಡು ಐನೂರು ಅಂತ ಸಾಧಿಸ್ತೀಯೇನು ?

ಹೇಮಾ:— ಆ ನೂರು ರೂಪಾಯವ್ವು ನನಗೇನೂ ಗೊತ್ತಿಲ್ಲ. ಚಂದೂ ತೊಗೊಂಡಾನೋ ಏನು ಮತ್ತ ? ಆಗsss ನಾ ಒಳಗ ಹೋದಾಗ ಅವನsss ಇದ್ದ.

ಆನಂದ:— ಛೆಲೋ ಆತ್ಯ. ನೀ ಐದು ನೂರು; ಚಂದು ನೂರು !

ಹೇಮಾ:— ಮತ್ತು ನೀವು.... ನಾಲ್ಕು ನೂರು !

ಆನಂದ:— ನೀನು ಆ ದುಡ್ಡೆಲ್ಲಾ ಇನ್ನ ಫ್ಯಾಶನ್ನಕ್ಕ ಹಾಳು ಮಾಡು !

ಹೇಮಾ:— ನೀವು 'ರವಿ'ಗೆ ಬಡೀರಿ....

ಆನಂದ:— ನಾ ಳಿಳಿಸ್ತೀನಿ, ಬೇಕಾದ್ದು ಮಾಡ್ತೀನಿ !

ಹೇಮಾ:— ಳಿಳಿಸೋದು ನಿಮ್ಮೊಬ್ಬರಿಗಾಗೇ ಅಲ್ಲ. ನಾವೂ ಅದರೊಳಗ ಪಾಲುಗಾರರಿದ್ದೀವಿ—

ಆನಂದ:— ಮೊದಲು ಆ ನೋಟು ನನ್ನ ಮುಂದ ತಂದಿಡು.

ಹೇಮಾ:— ನಾ ಇಡೋದಿಲ್ಲ....

ಆನಂದ:— ಇಡಲಿಕ್ಕೇ ಬೇಕು....

ಹೇಮಾ:— ನಾ ಮನೀಬಿಟ್ಟsss ಹೋಗ್ತೀನಿ.

ಆನಂದ:— ಪೀಡಾ ಹೋತ್ಯ್ಯ.... ನಿನಗ ನಾ ಇಷ್ಟೊಂದು ಸಲಿಗಿಕೊಟ್ಟದ್ದsss ತಪ್ಪಾತ್ಯ. ಈಗ ಪೆಜ್ಜಿ ಹೆಜ್ಜಿಗೆ ನಾ ಅವನ್ನ ಅನುಭೋಗಿಸಬೇಕಾಗೇದ. ಮದಿವ್ಯಾದ ನರ್ಸದೊಳಗsss ಹೆಂಡರ್ನ ಮಣಿಸಿದರsss ಅವರು ಮಣೀತಾರ. ನಾ ಅಲ್ಲೇ ತಪ್ಪಿದೆ....

ಹೇಮಾ:— (ಕಿಟಕಿಯಲ್ಲಿಂದ ಪೋಲಿಸ್‌ನವನನ್ನು ಕಂಡು ಗಾಬರಿಗೊಂಡು) ಅಯ್ಯೋ ! ಅದು ನೋಡ್ರಿ ಪೋಲೀಸ್, ನಮ್ಮ ಮನೀಗೇ ಬರ್ತಾ ಇದ್ದಾನ.... ಗೇಟನೊಳಗsss ಬಂದ....

ಆನಂದ:—ಅಯ್ಯಯ್ಯೋ ! ಆ್ಯಂಟೀ ಕರೆಸ್ಯನ್ನೀನವ ಇರಬೇಕು. ಹ್ಯಾಂಗ ಮಾಡಬೇಕೆನ್ನ....ಬಂತು ಮೈಮ್ಯಾಲ ! ಏನsss ! ಈ ನಾಲ್ಕು ನೂರು ಒಳಗಿಟ್ಟು ಬಿಡು.... ಲಗೂ.... ಅವ ಬರೋದರೊಳಗsss.... ಹಿಡಿ.... ಹುಂ.... ಹುಂ....

ಹೇಮಾ:— ಒಳಗೆಲ್ಲಿಡಲಿ ? ಮನೀ ತಪಾಸ್ ಮಾಡಿದರ ?....

ಆನಂದ:— ನಿಕ್ಷ ಝುಂಪರಿನೊಳಗsss ಸೇರಿಸಿಕೊಂಡು ಬಿಡು. ಹುಂ....

ಹೇಮಾ:— ನುಂಚಿನವೂ ಅಲ್ಲೆ ಅವ....

ಆನಂದ:— ಸೇಫ್ ಜಾಗಾ !....ಇವೂ ಅಲ್ಲಿಗೇ ಹೋಗಲಿ.

ಪೋಲೀಸ್:— ರಾಯರsss, ರಾವ್‌ಸಾಹೇಬ್....

ಆನಂದ:— (ಬಾಗಿಲನ್ನು ತೆರೆದು) ಓ, ಪೋಲೀಸ್ ! ಬರ್ರಿ.

ಪೋಲೀಸ್:— ನಿಮ್ಮ ಹುಡುಗನ ಹೆಸರು ಚಂದು ಹೌದಲ್ಲೊ?

ಆನಂದ:— ಹೌದು. ಯಾಕ ? ಏನಾತ್ಯ ?

ಪೋಲೀಸ್:— ನೂರು ರೂಪಾಯಿಗಳ ನೋಟು ತೊಗೊಂಡು ಚಪಾದಂಗಡಿಗೆ ಬಂದಿದ್ದ.... ನಾ ಅಲ್ಲೇ ಇದ್ದೆ— ಒಯಿದು ಪೋಲೀಸ್ ಸ್ಟೇಶನ್‌ನೊಳಗ ಕೂಡಿಸೀನಿ— ಇನ್‌ಸ್ಪೆಕ್ಟರ್ ಸಾಹೇ ಬರು ನಿಮ್ಮನ್ನು ಕರಕೊಂಡು ಬಾ ಅಂದಾರ. ಈಗಿಂದೀಗsss ಬರ ಬೇಕಂತ....

ಆನಂದ:— (ನಿಟ್ಟುಸಿರುಗರೆದು) ಹೆಂಡತಿ ಹೀಂಗ.... ಮಗಾ ಹಾಂಗ ! ಆಗಲಿ.... ಬರ್ತೀನಿ.... ನಡೀರಿ.... ನನ್ನೆದsss ತಪ್ಪಾಗೇದ.... ಮಾಡಿದ್ದುಣ್ಣೊ ಮಹಾರಾಯಾ....

ಪೋಲೀಸ್:— ಯಾರಿಗೂ ಬಿಟ್ಟದ್ದಲ್ರೀ ಅದು! ಮಾಡಿದ್ದುಣ್ಣೋ ಮಾರಾಯಾ !

ವಿದೇಶಕ್ಕೆ ಹೊರಟುನಿಂತ

ಶ್ರೀ. ಜೋಶಿ ಮಾರ್ತಾಂಡರಾಯರು

(ಸಂದರ್ಶನಾತ್ಮಕ ಪರಿಚಯ)

ಶ್ರೀ. ಗೋವಿಂದಮೂರ್ತಿ ದೇಸಾಯಿ, ಬಿ. ಎ. (ಆನರ್ಸ್), ಧಾರವಾಡ

There's divinity which shapes our ends.....

ಕಾಲ ಬಂದರೆ, ಮೊಹಮ್ಮದ ಪರ್ವತಕ್ಕೆ ಹೋಗದಿದ್ದರೂ ಪರ್ವತನೇ ಮೊಹಮ್ಮದನ ಬಳಿ ಬಂದುನಿಲ್ಲುತ್ತದಂತೆ! ಹತ್ತು ವರ್ಷಗಳ ಹಿಂದೆ ಯಾರು ತಾನೇ ಶ್ರೀ. ಜೋಶಿ ಮಾರ್ತಾಂಡರಾಯರು ಸಾಗರ ದಾಚೆ ಹೋಗುವರೆಂದು ಅರಿತಿದ್ದರು? ಇಂದು ಶ್ರೀಯುತ ಜೋಶಿಯವರು ವರ್ಲ್ಡ್ ಫೆಲೋಶಿಪ್ ಪಡೆದು, ಅಮೇರಿಕೆಯ ಪ್ರಿನ್ಸ್‌ಸ್ಟನ್ ವಿಶ್ವವಿದ್ಯಾಲಯಕ್ಕೆ ಹೊರಟುನಿಂತಿದ್ದಾರೆ ಈ ವಿದ್ಯಾರ್ಥಿ ವೇತನವು ಭಾರತೀಯರಿಗೆ ಸಿಕ್ಕುವುದು ತೀರ ವಿರಳ. ಭಾರತೀಯರಿಗೇಕೆ, ಏಶಿಯಾದವರಿಗೆ ದೊರೆಯುವುದೇ ದುರ್ಲಭ. ಇಡಿ ಭೂಮಂಡಲದ ಜಾಣ ವಿದ್ಯಾರ್ಥಿಗಳಿಗಾಗಿ ಭೂಗರ್ಭಶಾಸ್ತ್ರದಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆಯಲು—ಪ್ರಿನ್ಸ್‌ಸ್ಟನ್ ವಿಶ್ವವಿದ್ಯಾಲಯದವರು ಪ್ರತಿವರುಷ ಹತ್ತು ವಿದ್ಯಾರ್ಥಿವೇತನಗಳನ್ನು ದಯಪಾಲಿಸುತ್ತಾರೆ. ಅದರಲ್ಲಿ ಐದು ವೇತನಗಳನ್ನು ವಿವಿಧ ದೇಶದವರಿಗೆ ಕೊಟ್ಟು, ಉಳಿದ ಐದು ವಿದ್ಯಾರ್ಥಿವೇತನಗಳನ್ನು ವಿವಿಧ ದೇಶದವರಿಗೆ ಹಂಚುತ್ತಾರೆ. ಹೀಗಾಗಿ ಏಶಿಯಾದವರಿಗೆ ಸಿಕ್ಕುವುದು ಎಷ್ಟೋ ವರುಷಗಳಿಗೊಮ್ಮೆ! ಅಂಥ ದುರ್ಲಭ ಶಿಷ್ಯವೇತನ ಲಭ್ಯವಾಗಿಸಿಕೊಂಡು, ಭಾರತದಿಂದ ಇಂದು ಅಮೇರಿಕೆಗೆ ಹೊರಟಿದ್ದಾರೆ ಶ್ರೀ. ಜೋಶಿಯವರು.

ಭೂಗರ್ಭಶಾಸ್ತ್ರವನ್ನು ತೆಗೆದುಕೊಂಡು, ೧೯೩೩ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ, ಮೊದಲನೆಯ ತರಗತಿಯಲ್ಲಿ **ಬಿ. ಎಸ್ ಸಿ.** ಪರೀಕ್ಷೆಯನ್ನು ಪಾಸಾದಂದಿನಿಂದ ಶ್ರೀ. ಜೋಶಿಯವರ ದೈವ ಅವರನ್ನು ಮೇಲಕ್ಕೆತ್ತಿ ಹಿಡಿಯುತ್ತಲೆ ಹೊರಟಿದೆ. ಇವರು ಆಡುವ ಮಾತು ಇತಿಹಾಸಕ್ಕೆ ಸಂಬಂಧಿಸಿದ್ದಲ್ಲ. ಇತಿಹಾಸ ಕುರಿತಾಗಲಿ, ಭೂಗೋಲ ಕುರಿತಾಗಲಿ, ಸಾಹಿತ್ಯ ಕುರಿತಾಗಲಿ ಹೆಚ್ಚು ಮಾತನಾಡದೆ, ಭೂಗರ್ಭ ಶಾಸ್ತ್ರ ಕುರಿತು ತಮ್ಮವೇ ಆದ ಅನೇಕ ವಿಚಾರಗಳನ್ನು ಇವರು ಹೇಳುತ್ತಾರೆ. ಇವರಾಡುವ ಆ ಶಾಸ್ತ್ರದ ಮಾತುಗಳಿಂದ ನಿರ್ಜೀವ ಕಲ್ಲೂ ಕಿವಿ ತೆರೆದು ತನ್ನ ಇತಿಹಾಸವನ್ನು ಕೇಳುತ್ತದೆ.

ಧಾರವಾಡದಲ್ಲಿ ಹುಟ್ಟಿ, ಬೆಳೆದು ಇಂಟರಿನವರೆಗೆ ಧಾರವಾಡದಲ್ಲಿಯೆ ಶಿಕ್ಷಣಪಡೆದ ಇವರಿಗೆ, 'ಧಾರವಾಡದ ಶಿಲೆ'ಯ ಮೇಲೆ ತುಂಬಾ ಪ್ರೀತಿ. ಅದೊಂದು ತೀರ ಪ್ರಾಚೀನವಾದ ಕಲ್ಲೆಂದು ಇವರು ಹೇಳಿದರು. ಇವರು ಸಂಶೋಧಕ ಬುದ್ಧಿಯಿಂದ ಎಮ್. ಎಸ್ ಸಿ. ಪದವಿಗಾಗಿ ಸಾದರಪಡಿಸಿದ ಪ್ರಬಂಧವನ್ನು ಕುರಿತು, ದೇಶದವರೊಡನೆ ವಿದೇಶೀಯರೂ ಬಾಯಿತುಂಬ ಹೊಗಳಿದ್ದಾರೆ. ಶ್ರೇಯುತರ ಪರೀಕ್ಷಕ ಸ್ಥಳರಲ್ಲಿ ಒಬ್ಬರಾದ—ಸಾಗರ ವಿಶ್ವವಿದ್ಯಾನಿಲಯದ ಡಾ|| W. D. ವೆಸ್ಟ್ ಅವರು "ಶ್ರೀಯುತ ಜೋಶಿಯವರು ಡಾಕ್ಟರ್ ಪದವಿಗಾಗಿ ಸಾದರಪಡಿಸಬೇಕಾದ ಈ ಪ್ರಬಂಧವನ್ನು ಎಮ್. ಎಸ್ಸಿ. ಗೆ ಸಾದರ ಪಡಿಸಿದ್ದಾರೆ. ನಿಜವಾಗಿಯೂ ಅವರ ಈ ಪ್ರಬಂಧ ಅಮೋಘವಾದದ್ದು ....." ಎಂದು ಉದ್ಗಾರ ತೆಗೆದಿದ್ದಾರೆ. ಅದರಂತೆಯೇ ಭೂಗರ್ಭ ಶಾಖೆಯ ಪ್ರಥಮ ಭಾರತೀಯ ಡೈರೆಕ್ಟರರಾದ ಶ್ರೀ. ಎಮ್. ಎಸ್. ಕೃಷ್ಣನ್ ಅವರೂ ಬಹುವಿಧವಾಗಿ ಈ ಪ್ರಬಂಧವನ್ನು ಪ್ರಶಂಸಿದ್ದಾರೆ. ಇದೇ ಪ್ರಬಂಧವನ್ನು ಪ್ರಿನ್ಸ್‌ಸ್ಟನ್ ಮತ್ತು ಏಲ ವಿಶ್ವವಿದ್ಯಾನಿಲಯಗಳಿಗೆ ಸಾದರಪಡಿಸಿದ್ದರಿಂದಲೇ ಇವರಿಗೆ ಈ ಫೆಲೋಶಿಪ್ ದೊರೆತಿದೆ.

ಎತ್ತರವಾದ ನಿಲುವು, ಗೋದಿಗೆಂಪಿನ ವರ್ಣ, ತುಂಬುತುಂಬಾದ ಮುಖ— ಶ್ರೀ. ಜೋಶಿಯವರನ್ನು ನೋಡಿದ ಕ್ಷಣ ಯಾವ ಬಗೆಯ ಪರಿಣಾಮವಾಗದಿದ್ದರೂ, ಅವರ ಮಾತುಗಳನ್ನು ಕೇಳಿದಾಗ ಅವರ ಅನುಭವಗಳನ್ನು ಆಸ್ವಾದಿಸಿದಾಗ, ಅವರೊಬ್ಬ ಪ್ರಭಾವ ಬೀರಬಲ್ಲ ವ್ಯಕ್ತಿ ಎಂದೆನಿಸದಿರದು. ಅವರು ಬಿ. ಎಸ್ಸಿ. ಪದವಿ ಪಡೆದಮೇಲೆ, ಜಿಯಾಲಾಸಿಕಲ್ ಸರ್ವೇ ಆಫ್ ಇಂಡಿಯಾದಲ್ಲಿ ತರಬೇತಿ ಪಡೆದು ಅಲ್ಲಿಯೇ ನೌಕರಿಗೆ ನಿಂತಾಗ, ಎಮ್. ಎಸ್ಸಿ ಪದವಿ ದೊರಕಿಸುವ ಹವ್ಯಾಸವಾಯಿತಂತೆ. ಅದಕ್ಕಾಗಿ ನೌಕರಿಯೊಡನೆ ಆ ಶಿಕ್ಷಣವನ್ನೂ ಪ್ರಾರಂಭಿಸಿದರು. ಮುಂಜಾನೆ ಏಳು ಗಂಟೆಗೆ ಕಾರ್ಯವನ್ನು ಪ್ರಾರಂಭಿಸಿ, ಸಂಜೆಯ ಒಂಬತ್ತು ಗಂಟೆಯತನಕ ಗಡಿಯಾರದ ಮುಳ್ಳಿನಂತೆ ಸಂಶೋಧನೆ, ಕಚೇರಿಯ ಕೆಲಸ, ಮತ್ತೆ ಸಂಶೋಧನೆ-ಹೀಗೆ ಸತತವಾಗಿ ಕೆಲಸ ಮಾಡುತ್ತಿದ್ದರಂತೆ. ಮಧ್ಯಾಹ್ನ ಊಟವನ್ನು ಮಾಡಿದರೆ ನಿದ್ರೆ ಬರುವುದೆಂದೂ, ನಿದ್ರೆ ಬಂದರೆ ತಮ್ಮ ಕಾರ್ಯಕ್ಕೆ ಭಂಗ ಬರುವುದೆಂದೂ, ಇತ್ತೀಚಿನ ನಾಲ್ಕು-ಐದು ವರುಷಗಳ ಕಾಲ ಮಧ್ಯಾಹ್ನದ ಊಟವನ್ನೇ ಬಿಟ್ಟುಬಿಟ್ಟಿದ್ದರಂತೆ. ಅವರಿಗೆ ಯಾವಾಗಲೂ ತಮ್ಮ ಕೆಲಸದ ಕಡೆಗೆ ಹೆಚ್ಚು ಒಲವು. ಅವರ ಕೆಲಸ ಕೇವಲ ಆಫೀಸಿನ ಕುರ್ಚಿಗಂಟಿಕೊಂಡು ಕಾರಕೂನಿಕೆಯ ಪ್ರಪಂಚದಲ್ಲಿ ಈಸುವುದಲ್ಲ; ಅಂಕಿ-ಸಂಖ್ಯೆಗಳೊಡನೆ ಹೊಡೆದಾಡುವುದಲ್ಲ. ಅಡವಿ ಅಡವಿ ಅಲೆದು, ಅಲ್ಲಲ್ಲಿಯ ಕಲ್ಲುಗಳನ್ನು ತಂದು ಅವುಗಳ ಮೇಲೆ ಸಂಶೋಧನೆಯನ್ನು ಸಾಗಿಸುವುದು. ಎಂತಲೇ ತಿಂಗಳು ತಿಂಗಳು

ಹೊಟ್ಟೆಗೆ ಸರಿಯಾದ ಹಿಟ್ಟಿಲ್ಲದೆ, ಅಡವಿಯಲ್ಲಿ ಅಲೆಯುವ ಪ್ರಸಂಗ ಅವರ ಪಾಲಿಗೆ ಬಂದುದುಂಟು. ಎಂತಲೆ ಅವರ ಕೆಲಸ ಕಠಿಣವಾದದ್ದು. ಒಮ್ಮೆ ಹೀಗೆಯೇ ಅಡವಿಯಲ್ಲಿ ಅಲೆದು ಸಂಶೋಧನೆಯನ್ನು ಸಾಗಿಸುವಾಗ ಬಂದ ಒಂದು ಸ್ವಾರಸ್ಯಮಯ ಸಂಗತಿಯನ್ನು ಮಾತನಾಡುತ್ತಾ ಆಡುತ್ತಾ— ಶ್ರೀ. ಜೋಶಿಯವರು ನನಗೆ ಹೇಳಿದರು: ಅವರು ಸರ್ವೆ ಕಾರ್ಯಕ್ಕೆ ಹೊರಡುವ ಮುಂದೆ, ಗೊತ್ತುಪಡಿಸಿದ ಹೊತ್ತಿಗೆ ಅವರ ಸೇವಕನು ಬರಲಿಲ್ಲ. ಅವನು ಬರಲಿಲ್ಲವೆಂದು ತಮ್ಮ ಪೂರ್ವ ನಿಯೋಜಿತ ಪ್ರಯಾಣವನ್ನೇನೂ ಅವರು ಮುಂದಕ್ಕೆ ದೂಡಲಿಲ್ಲ. ತಾವಿಳಿಯ ಬೇಕಾದ ರೈಲು ಮನೆಯಲ್ಲಿ ಇಳಿದು, ಅಲ್ಲಿಯ ಮಾಸ್ತರರಿಗೆ ಯಾರಾದರೂ ಅಡಿಗೆಯವರಿದ್ದರೆ ಗೊತ್ತುಮಾಡಿಕೊಡಬೇಕೆಂದು ಹೇಳಿದರು. ಮಾಸ್ತರರು ಬಹುರೀತಿ ಪ್ರಯತ್ನಿಸಿ, ಒಬ್ಬ ಹುಡುಗನನ್ನು ಗೊತ್ತು ಪಡಿಸಿಕೊಟ್ಟರು. ಆ ಹುಡುಗನು ಕೇವಲ ಬ್ರಾಹ್ಮಣರಲ್ಲಿಯಷ್ಟೇ ಅಡಿಗೆ ಮಾಡುವವನಂತೆ. ಬಂಗಾಲ ಪ್ರಾಂತದ ಆ ಹಟಮಾರಿ ಹುಡುಗನು ಜೋಶಿಯವರ ಬರಿಗೊರಳನ್ನು ನೋಡಿ "ಬಾಬೂಜಿ ನಿಮ್ಮ ಕೊರಳಲ್ಲಿ ಜನಿವಾರವಿಲ್ಲ, ನೀವು ಬ್ರಾಹ್ಮಣರೆ?" ಎಂದನು. ಶ್ರೀ. ಜೋಶಿಯವರು ತಾವು ಬ್ರಾಹ್ಮಣರು ಅಹುದೆಂದು ಹೇಳಿದರೂ, ಅವನಿಗೆ ನಂಬಿಕೆಯಾಗಲಿಲ್ಲ. ಮತ್ತೆ ಅವನು "ಬಾಬೂಜಿ ನಿಮ್ಮ ಹೆಸರೇನು?" ಎಂದನು. ಇವರು **"ಜೋಶಿ"** ಅಂದರು. "ಜೋಶಿ ಅನ್ನುವವರು ಬ್ರಾಹ್ಮಣರೇ?" ಎಂದನು. ಅವನಿಗೆ ಗೊತ್ತಿದ್ದುದು ಬ್ಯಾನರ್ಜಿ?, ಚಕ್ರವರ್ತಿ?, ಚಟರ್ಜಿ ನೊದಲಾದ ಬಂಗಾಲಿ ಅಡ್ಡಹೆಸರುಗಳಲ್ಲದೆ ಬೇರಾವುದೂ ಅಲ್ಲ. ಆ ಹುಡುಗನು ಅಷ್ಟಕ್ಕೆ ಸಮಾಧಾನಗೊಳ್ಳದೆ "ಜೋಶಿ ಬಾಬೂಜಿ! ನೀವು ಬ್ರಾಹ್ಮಣರೆಂದು ಹೇಳುತ್ತೀರಿ; ನಿಮಗೆ ಗಾಯತ್ರೀ ಮಂತ್ರ ಬರುತ್ತದೆಯೋ?" ಎಂದು ಸವಾಲು ಹಾಕಿದನು. ಆಗ ಶ್ರೀ. ಜೋಶಿಯವರು ಆ ಅಡಿಗೆಯ ಹುಡುಗನೆದುರು ಗಾಯತ್ರೀ ಮಂತ್ರವನ್ನು ಪಠಿಸಿ ತಮ್ಮ ಬ್ರಾಹ್ಮಣತ್ವವನ್ನು ಸಿದ್ಧಪಡಿಸಿಕೊಳ್ಳಬೇಕಾಯಿತು. ಅವನನ್ನು ಶ್ರೀ. ಜೋಶಿಯವರು ಒಲಿಸಿಕೊಳ್ಳದೆ ಹೋಗಿದ್ದರೆ, ಊಟವನ್ನೇ ಕಾಣುತ್ತಿರಲಿಲ್ಲ ಇಂಥ ಕೆಲಸ ಅವರ ಪಾಲಿಗೆ ಕಟ್ಟಿಟ್ಟಿರುತ್ತಿತ್ತು. ತಮ್ಮ ಸರ್ವೇ ಕೆಲಸಕ್ಕೆ ಹೋದಾಗಲೆಲ್ಲ ಅವರು, ನಿಸರ್ಗ ಸೌಂದರ್ಯದಲ್ಲಿ ತಲ್ಲೀನರಾಗಿಬಿಡುತ್ತಿದ್ದರಂತೆ. ಅಡವಿಯ ಭಯಾನಕತೆ ಶ್ರೀ. ಜೋಶಿಯವರನ್ನು ಅಂಜಿಸುವುದಿಲ್ಲ; ಆದರೆ ಅಡವಿಯ ಚಿಲುವು ಶ್ರೀ. ಜೋಶಿಯವರನ್ನು ಸೆಳೆಯುತ್ತದೆ. "ನಿಸರ್ಗದ ರಮಣೆಯತೆಗೆ ಮಾರು ಹೋಗಿ, ನನ್ನ ಅಡವಿಯ ಬೇಸರವನ್ನೆಲ್ಲಾ ಅದನ್ನು ನೋಡುತ್ತಲೇ ಕಳೆದುಕೊಳ್ಳುತ್ತೇನೆ" ಎಂದು, ಮಾತನಾಡುತ್ತಿದ್ದಾಗ ಶ್ರೀ. ಜೋಶಿ ಮಾರ್ತಾಂಡರಾಯರು ನನಗೆ ಹೇಳಿದರು.

ಶ್ರೀ. ಜೋಶಿಯವರು ಚಿಕ್ಕಂದಿನಿಂದಲೂ ಕಾರ್ಯಪ್ರವೃತ್ತಿಯುಳ್ಳವರು. ಸ್ಕೌಟ್, ಸೇವಾದಲ, ಸ್ಕೂಲಿನ ಆಟಪಾಟಗಳು, ಕಾಲೇಜಿನ ಚಟುವಟಿಕೆಗಳು ಅವರನ್ನು ಸುತ್ತುವರಿದೇ ಹೋಗುತ್ತಿದ್ದುವು. ೧೯೪೭ರಲ್ಲಿ ಮುಂಬಯಿಯಲ್ಲಿ ನೆರೆದ ಕಾಂಗ್ರೆಸ್ ಅಧಿವೇಶನಕ್ಕೆ ಕರ್ನಾಟಕವನ್ನು ಪ್ರತಿನಿಧಿಸಿ, ಕಾಂಗ್ರೆಸ್ ಸೇವಾದಲದಿಂದ ಹೋದ ಮೂವರು ಸ್ವಯಂಸೇವಕರಲ್ಲಿ ಶ್ರೀ. ಜೋಶಿ ಮಾರ್ತಾಂಡರಾಯರೂ ಒಬ್ಬರಾಗಿದ್ದರು. ಹಾಯಸ್ಕೂಲಿನ ಮಂತ್ರಿಮಂಡಳದಲ್ಲಿ ಒಬ್ಬ ಸದಸ್ಯರಾಗಿ ಧಾರವಾಡದ ಬಾಸೆಲ್ ಮಿಶನ್ ಹಾಯಸ್ಕೂಲಿನಲ್ಲಿ ತುಂಬಾ ಚಟುವಟಿಕೆಗಳನ್ನು ನಡೆಸಿದ್ದರು. ಮುಂದೆ ಮುಂಬೈ ಸೆಂಟ್ ಝೇವಿಯರ್ ಕಾಲೇಜನ್ನು ಸೇರಿ, ಅಲ್ಲಿಂದ ಬಿ. ಎಸ್ಸಿ. ಪರೀಕ್ಷೆಯನ್ನು ಮುಗಿಸಿದರು. ಅಲ್ಲಿಯೂ ಅವರು ಅನೇಕ ಚಟುವಟಿಕೆಗಳನ್ನು ಸಾಗಿಸಿದರು.

ಶ್ರೀ. ಜೋಶಿಯವರು ಬಂಗಾಲ ಪ್ರಾಂತದಲ್ಲಿ ಐದು ವರುಗಳನ್ನು ಕಳೆದದ್ದಕ್ಕೆ— ಸರಾಗವಾಗಿ ಬಂಗಾಲಿಯನ್ನು ಮಾತನಾಡುತ್ತಾರೆ. ಮುಂಬೈಯಲ್ಲಿ ಇದ್ದಾಗ ಮರಾಠಿಯನ್ನು ಕಲಿತಿದ್ದಾರೆ. ಹಿಂದಿಯನ್ನು ರಾಷ್ಟ್ರಭಾಷೆಯೆಂದು ಅಭ್ಯಾಸಿಸಿದ್ದಾರೆ. ಕನ್ನಡ ಹಾಗು ಇಂಗ್ಲಿಷಂತೂ ಸರಿಯೇ! ಹೋದಲ್ಲಿ ಅಲ್ಲಿಯ ವೈಶಿಷ್ಟ್ಯವನ್ನು ನೋಡಿ ಅರಿತುಕೊಳ್ಳುವ ಗ್ರಹಣ ಶಕ್ತಿ ಶ್ರೀ. ಜೋಶಿಯವರಿಗಿದೆ. ಇವರು ಕಲಕತ್ತೆಗೆ ಹೋದಾಗ ಬಂಗಾಲಿ ಭಾಷೆಯ ಗುರುತೇ ಇರಲಿಲ್ಲ. ಆದರೆ ಈಗ ಬಂಗಾಲಿಯನ್ನು ಬಂಗಾಲಿಗಳಷ್ಟೆ ಸ್ವರೋಚ್ಚಾರ ಸಹಿತ ಮಾತನಾಡಲು ಕಲಿತಿದ್ದಾರೆ. ಅವರಾಡುವ ಗಡುಸು ಮಾತಿನಿಂದಲೇ ಇವರೊಬ್ಬ ಮೇಧಾವಿ ಇರಬೇಕೆನಿಸುವುದು. ಇನ್ನೂ ಇಪ್ಪತ್ತೈಂಟು ವಯಸ್ಸಿನ ಶ್ರೀ. ಜೋಶಿಯವರಿಗೆ ಇನ್ನೂ ವಿಶಾಲವಾದ ಜೀವನವಿದೆ. ಅವರು ಈ ರೀತಿ ಜೀವನದ ತುಂಬಾ ಲೋಕಸಂಗ್ರಹನನ್ನು ಮಾಡಿಕೊಳ್ಳುತ್ತ ಹೊರಟರೆ, ಅವರ ಜೀವನವು ಒಂದು ವಿಶ್ವಕೋಶವಾದೀತು. ಮುಂಬಯಿಯಲ್ಲಿ ಇರುವಾಗ ರಾಮಕೃಷ್ಣ ಮಿಶನ್ನಿನಲ್ಲಿದ್ದು ಅಲ್ಲಿಯ ವಿಶಿಷ್ಟಸಂಸ್ಕಾರವನ್ನೂ ಹೊಂದಿದ್ದಾರೆ. ಎಂತಲೆ ರಾಮಕೃಷ್ಣ ಹಾಗು ವಿವೇಕಾನಂದರು ಅವರ ಮೇಲೆ ಪ್ರಭಾವ ಬೀರಿದ್ದಾರೆ. ಇಂದಿಗೂ ಭಗವದ್ಗೀತೆಯ ಒಂದು ಅಧ್ಯಾಯವನ್ನು ಪಠಿಸದೆ ನಿದ್ರೆ ಹೋಗುವುದಿಲ್ಲ. ಆಧುನಿಕ ಪ್ರಪಂಚದಲ್ಲಿ ಮನೋರಂಜಕತೆಗೆ ಪುರುಳಾಗಿ, ಶ್ರೀ. ಜೋಶಿಯವರು ತಾವೀಗ ಹಾಕಿಕೊಂಡ ಜೀವನದ ಕ್ರಮವನ್ನು ತಪ್ಪಿಸಲು ಸಿದ್ಧರಿಲ್ಲ. ಕಲಕತ್ತೆಗೆ ಹೋಗುವ ವರೆಗೂ ಶ್ರೀ. ಜೋಶಿಯವರು ಚಹವನ್ನಾಗಲಿ, ಕಾಫಿಯನ್ನಾಗಲಿ ಕುಡಿಯುತ್ತಿರಲಿಲ್ಲ. ತತ್ತ್ವಜ್ಞಾನವನ್ನು ಅಭ್ಯಸಿಸದೇ ಹೋದರೂ, ಅದರ ಪ್ರಭಾವಕ್ಕೆ ಒಳಗಾಗಿ, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆಂಬುದು ಅವರ ಮಾತುಗಳನ್ನು ಕೇಳಿದವರಿಗೆ ಮನದಟ್ಟಾಗುತ್ತದೆ.

ಭೂಗರ್ಭಶಾಸ್ತ್ರದಲ್ಲಿ ಇಂತಹ ತರುಣ ವಯಸ್ಸಿನಲ್ಲಿಯೇ ಅಪಾರ ಜ್ಞಾನವನ್ನು ಅರ್ಜಿಸಿದ್ದಾರೆಂಬುದಕ್ಕೆ, ಅವರ ಕಾರ್ಯ ಕುರಿತು ಆ ರಂಗದಲ್ಲಿ ಪ್ರವೀಣರಾದವರು ಪ್ರಶಂಸಿಸಿ ಮಾತನಾಡುತ್ತಿರುವುದೇ ನಿದರ್ಶನ! ಇನ್ನೂ ಮದುವೆಯಾಗದ ಶ್ರೀ. ಜೋಶಿ ಮಾರ್ತಾಂಡರಾಯರನ್ನು ಧಾರವಾಡದವರು ಹೆಚ್ಚು ಅರಿಯದೇ ಹೋಗಿದ್ದರೂ, ರಸಿಕಪ್ರಿಯರಾದ ಅವರ ತಂದೆ ಶ್ರೀಪಾದರಾವ್ ಜೋಶಿಯವರನ್ನು ಬಹುಶಃ ಎಲ್ಲರೂ ಅರಿತಿದ್ದಾರೆ. ಮೊದಲಿನಿಂದಲೂ ಶ್ರೀಪಾದರಾಯರು, ಮಗನಾದ ಮಾರ್ತಾಂಡನನ್ನು ಸಿರಿವಂತಿಕೆಯಲ್ಲಿಯೇ ಬೆಳೆಸಿದ್ದಾರೆ. ಆ ಸಿರಿವಂತಿಕೆಯನ್ನು ಅವರ ಊಟ-ಪಾಟಗಳಲ್ಲಿ ಹಾಗು ವೇಷ-ಭೂಷಣಗಳಲ್ಲಿ ಯಾರೂ ಕಾಣಬಹುದು. ಆದರೆ ಅವುಗಳ ಜೊತೆ ಅವರು ತಮ್ಮ ಮನಸ್ಸನ್ನೂ ಶ್ರೀಮಂತವಾಗಿ ಮಾಡಿಕೊಂಡಿದ್ದಾರೆ. ಶ್ರೀಮಂತ

ಮನಸ್ಸೆಂಬುದಕ್ಕೆ— ಕಲಕತ್ತೆಗೆ ಹೋದ ಕನ್ನಡಿಗರಿಗೆಲ್ಲಾ ಅನುಭವ ಬಂದಿದೆ. ಅನೇಕ ಕನ್ನಡಿಗರು ಅವರ ಆತಿಥ್ಯ ಪಡೆದು ಕಲಕತ್ತೆಯಲ್ಲಿ ಯಾವ ಅನನುಕೂಲತೆಗಳನ್ನೂ ಮಾಡಿಕೊಳ್ಳದೆ, ಹಾಯಾಗಿ ಕಲಕತ್ತೆಯನ್ನು ನೋಡಿ ಬಂದವರುಂಟು.

ಇಂತಹ **ಶ್ರೀ. ಮಾರ್ತಾಂಡ ಶ್ರೀಪಾದರಾವ ಜೋಶಿ**ಯವರು, ಇಂದು ಅಮೇರಿಕೆಗೆ ಹೊರಟಿದ್ದಾರೆ. ಮರುವರುಷ ಅಲ್ಲಿರಬೇಕಾದ ಅವರು, ತಮ್ಮ ಶಿಕ್ಷಣವನ್ನು ಮುಗಿಸಿ ಮರಳಿ ಸ್ವದೇಶಕ್ಕೆ ಬಂದು ಭಾರತಕ್ಕೆ ತಾವು ಕೊಡಬೇಕಾದ ಸೇನೆಯನ್ನು ಸಲ್ಲಿಸಲು ಸಿದ್ಧರಿದ್ದಾರೆ. "ಭಾರತದಲ್ಲಿ ಈ ಭೂಗರ್ಭಶಾಸ್ತ್ರ ಕುರಿತು ಇನ್ನೂ ಅನೇಕ ಸಂಶೋಧನೆಗಳು ನಡೆಯಬೇಕಾಗಿವೆ. ಭಾರತವು ತನ್ನ ಒಡಲನ್ನು ಇನ್ನೂ ತೆರೆದು ತೋರಿಸಿಲ್ಲ. ಶ್ರಮಬಟ್ಟು ಶೋಧಿಸಿದರೆ ಬರೀ ಎಣ್ಣೆಯೇಕೆ. ಬಂಗಾರಕ್ಕಿಂತಲೂ ಬೆಲೆಯುಳ್ಳ ವಸ್ತು ಸಿಕ್ಕೀತು! ಎಂತಲೇ ಅಮೇರಿಕೆಯಿಂದ ಬಂದಮೇಲೆ ನಾನು, ನನ್ನ ಬುದ್ಧಿಯನ್ನೆಲ್ಲಾ ಈ ಸಂಶೋಧನೆಗೆ ನಾಡಿನ ಸೇವೆಗೆ ಮೀಸಲಿರಿಸುತ್ತೇನೆ. ನನಗೆ ನನ್ನ ನಾಡೆಂದರೆ ಪ್ರೀತಿ. ಯಾರಿಗೆ ತಾನೇ ತಾಯಿಯ ಮೇಲೆ ಮಮತೆಯಿರದು?" ಎಂದು ಗಹಗಹಿಸಿ ನಗುತ್ತ "ಜೋಶಿಯವರೆ, ಶಿಕ್ಷಣ ಮುಗಿಸಿ ಭಾರತಕ್ಕೆ ಬರುತ್ತೀರಾ? ಬಂದರೆ, ಬಂದಮೇಲೆ ಏನು ಮಾಡುತ್ತೀರಿ?" ಎಂದು ನಾನು ಕೇಳಿದ್ದಕ್ಕೆ—ಮೇಲಿನಂತೆ ಉತ್ತರ ಕೊಟ್ಟಾಗ, ಅವರ ಅಭಿಮಾನದ ಬಗ್ಗೆ ಹೆಮ್ಮೆ ಎನಿಸಿತು. 'ವಿದೇಶಕ್ಕೆ ಹೋಗುವವರಿಗೆ ಮಡುಕೋಡುಗಳು ಮೂಡುವವಂತೆ' ಎಂದು ಯಾರೋ ಹೇಳಿದ್ದರು. ಆ ಮಾತು ಶ್ರೀ ಮಾರ್ತಾಂಡರಾಯರ ವಿಷಯದಲ್ಲಿ ಸುಳ್ಳಾಯಿತಲ್ಲಾ' ಎಂದು ನನಗೆ ಆನಂದವಾಯಿತು.

ಒಮ್ಮೆ ಇತಿಹಾಸಜ್ಞ ಶ್ರೀ. ಸಂಕಾಲಿಯಾರವರಿಗೆ ಕನ್ನಡದ ಕವಿ ಶಿ. ನಂ. ಶ್ರೀಕಂಠಯ್ಯನವರು "ಸಂಕಾಲಿಯಾರವರೇ, ನಿಮ್ಮ ಮಾತು ನಿಜ. ಆದರೆ ನೀವಾಡುವ ಮಾತಿಗೆ ಏನೋ ವಿರೋಧವಾಗಿ ನನ್ನ ಸಾಹಿತ್ಯದಲ್ಲಿ ಹೀಗೆ ಹೇಳಿದೆಯಲ್ಲ!" ಎಂದು, ಸಂಕಾಲಿಯವರವರ ಮಾತಿಗೆ ಏನೋ ಸಂದೇಹ ತಂದುಕೊಂಡು ಕೇಳಿದ್ದರು. ಕೂಡಲೆ ಸಂಕಾಲಿಯಾರವರು ತನ್ನ ಮಾತನ್ನು ಮತ್ತೆ ಸಮರ್ಥಿಸಿಕೊಳ್ಳುತ್ತ "ಶ್ರೀಕಂಠಯ್ಯನವರೆ, ನಿಮ್ಮ ಸಾಹಿತ್ಯ ಹಾಗೆ ಹೇಳುತ್ತಿರಬೇಕು. ಆದರೆ ನೀವು ಹೇಳಿದಂತೆ ಸಿದ್ಧಪಡಿಸಲು ನಿಮ್ಮ ಬಳಿ ಏನಾದರೂ ಕಲ್ಲು-ಮಣ್ಣುಗಳಿವೆಯೋ?" ಎಂದು ಕೇಳಿದರು. ಹಾಗೆ ಯಾವುದೇ ಮಾತನ್ನು ಪರಿಪೂರ್ಣ ಸಿದ್ಧಾಂತವನ್ನಾಗಿ ಸಿದ್ಧಪಡಿಸಲು 'ಕಲ್ಲು' ಒಂದು ಮಹತ್ತ್ವದ ಅಂಗವೆಂದು ತಿಳಿದ ಶ್ರೀ. ಜೋಶಿಯವರು, ಕಲ್ಲಿನಿಂದಲೇ ತಮ್ಮ ಮಾತನ್ನು ಪ್ರಾರಂಭಿಸುತ್ತಾರೆ. 'ಕಲ್ಲಿನ ಪದರುಗಳೆಂದರೆ ನನಗೆ ಇತಿಹಾಸದ ಹಾಳೆಗಳು ಇದ್ದಂತೆ" ಎಂದು ಹೇಳಿದರು ಶ್ರೀ. ಜೋಶಿಯವರು— ಅದೊಂದು ಸಲ.

ನಾಡಿನಲ್ಲಿ ಇಂಥವರು ಅಪರೂಪ; ಹುಟ್ಟಿದಾಗ ಇಂಥವರನ್ನು ಈ ನೆಲದವರು ಇಟ್ಟುಕೊಳ್ಳುವುದು ಅದಕ್ಕೂ ಅಪರೂಪ. ಎಂತಲೇ ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು, ಎಲ್ಲೋ ಕಲಿತು, ಮುಂದಾಗಿ ಈಗ ಎಲ್ಲಿಗೋ— ತಮ್ಮ ಕಾರ್ಯದ ಮುಂದಿನ ಸಿದ್ಧತೆಗಾಗಿ ಹೊರಟಿದ್ದಾರೆ. ಇಂಥ ಶ್ರೀ. ಜೋಶಿಯವರಿಗೆ ದೇವರು ಆಯುರಾರೋಗ್ಯವನ್ನು ದಯೆ ಪಾಲಿಸಿ, ಬೇಗನೆ ಮರಳಿ ನಮ್ಮ ಮಧ್ಯೆ ಇವರು ಬರಲೆಂದು ದೇವರಲ್ಲಿ ನಾನು ಪ್ರಾರ್ಥಿಸುತ್ತೇನೆ. ●

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ

ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಆರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ

ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ಸೀಪು ಬಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

★ ಏಳು-ಬೀಳು ★

ಡಿ. ಬಿ. ಬಿ. ಹಿಂಗಮಿರೆ ಬಿ. ಎ., ನ್ಯೂಹೈಸ್ಕೂಲ್, ಅಥಣಿ

ಅಲ್ಲೊಂದು, ಅದೊ–
ಗಾಳಿ ಹರಿದಾಡುವ ಉರುವಲು-ಚಿಪ್ಪರ
ಕಬ್ಬುರವುದಿ-ಎಲೆ, ನೆತ್ತಿ ಮೇಲಕ್ಕೆ–
ಸಂಗೀತ ಕಛೇರಿ :
ಪೂರ್ವ-ಪಶ್ಚಿಮ ತಬ್ಬಲಿಳಿಸಿ, ಹುಚ್ಚಾಗಿ ಬಿದ್ದಿರುವ—
ಧೂಳೇಳುವ ದಾರಿ ಸರ್ಪಾಕಾರ;
ಅಂಗಳದ ತುಂಬೆಲ್ಲ,
ಹಗಲು–ತಿಂಗಳ ಹೆಜ್ಜೆ
ಳಿಳಿ, ಮಳಿ, ಬಿಸಿಲು— ಏನಿದ್ದರೂ ತಪ್ಪಿದ್ದಿಲ್ಲ
ತಾರಕ್ಕಿ-ತಿಂಗಳುಲಿ-ಗೆಜ್ಜೆ.
ರುಮು ಝುಮು, ರುಮು ಝುಮು ನಿನಾದ
ರಾತ್ರಿಯಾದಾಗೆಲ್ಲ ನಿದ್ರಾವಿಲಾಸ,
ಹಗಲೆಲ್ಲ ಮಾತ್ರ—
ಹೊಟ್ಟೆ–ಕಾಗೆಯ ಮಂತ್ರ, ಕಪ್ಪೆ–ವೇದ !

* * *

ಹತ್ತು ಬೇಸಗೆ ಹಿಂದೆ
ಇಬ್ಬರ ಸುಖನಿವಾಸ ರೆಸ್ಟೋರೆಂಟು;
ಈಗ ?
ಡಝನ್ನುಗಟ್ಟಲೆ ಗಂಡು-ಹೆಣ್ಣಿನ ಬೆಳಸು.
ಹೊಟ್ಟೆ ಬಟ್ಟೆಯ ಚಿಂತೆ
ಹೀಗೆ ಹೀಗೆ.

* * *

ಹೆಣ್ಣು ಹಡೆದಾಗೆಲ್ಲ ಹಣೆಗೆ ಸಾವಿರ ಗಂಟು
ದೀಡ ತಿಂಗಳು ತನಕ,
ಅತ್ತು ಕರೆದು, ನೆನೆನೆನೆದು ಕೊಳೆಯುವುದು
ಹೊಸ್ತಿಲು :
ಬಿದ್ದ ನೀರೆಲ್ಲ ನುಂಗಿ
ಅಪಚನದಿಂದ ನರಳುವುದು ಚಿಪ್ಪರದ ಹಿಂದಿರುವ
ತಲೆಮಾರಿನ ಮಾರುದ್ದ ಬಚ್ಚಲು.
ಮನೆಯ ತುಂಬೆಲ್ಲ—ಇಲಿಹಿಕ್ಕಿ, ಸಳ್ಳೆಟು
ಹೆಗ್ಗಣದ ಹೆಅಲು;
ಮೂಲೆ–ಮೂಲೆಗಳಲೆಲ್ಲ ಕಸ–ಕಡ್ಡಿ–ತಗಣಿ–ಚಿಕ್ಕಾಡು ಹುಡಿ
ಹತ್ತಿ ಕಟ್ಟಗೆಯ ಉರುವಲು.
ಊಟಮಾಡುವ ಕೋಣೆ
ನೊಣ–ಜೊಂಡಿಗಗಳ–ಪಾಯಖಾನೆ :
ಕೂಡ್ರುವದು, ಮಲಗುವದು, ಗುಂಗಾಡು ಗೋಡಾವನ್ನು !
ಮೂರು ಒಳಕೋಣೆ, ಮೂರು ಹೊರಕೋಣೆ
ಆರು ಅಂಕಣ ಒಟ್ಟು,
ಗಂಡ–ಹೆಂಡಿರ ಜೋಡಿ ಆನೆ–ಆಡು.
ಡಝನ್ನಿಗೊಂದೇ ಲೆಸ್ಸು ಸಂತಾನ ಬೆಳಸು :
ಮೂಗು ತಿನ್ನುವುದೊಮ್ಮೆ ದುರ್ಗಂಧವಾಯು—
ಅಟಂಬಾಂಬು ಅವುಟು !
ಎರಡು–ಹನ್ನೊಂದು ಹೊಟ್ಟೆ ತುಂಬೆಲ್ಲ ಯಾವತ್ತೂ
ಕಾಗೆ–ಕೂಗಾಟ. ಗೂಬೆ–ಪಿಟೀಲು,
ಮನೆಯ ತುಂಬೆಲ್ಲ ಇಲಿಹಿಕ್ಕಿ ಸಳ್ಳೆಟು,
ಹೆಗ್ಗಣದ ಹೆಅಲು—!

* * *

ಮೊಣಕಾಲ ನಡು–ತಲೆಹಾಕಿ ಕುಳಿತುಕೊಂಡಿರುವ
ಹಡೆದಪ್ಪ–ಹಡೆದವ್ವ:—
ಮಕ್ಕಳ ಹೊಟ್ಟೆ–ಬಟ್ಟೆ, ಮದುವೆ–ಮುಂಜಿಯೋಚನೆ
ಹತ್ತೂ ದಿಕ್ಕಿನಲಿ ಬೆಳೆದು ನಿಂತಿರುವ ಅಡ್ಡ ತಿಡ್ಡ
ಹಾವು--ನೋವಿನ ವೃಕ್ಷ:
ವಿಪರೀತ ಚಿಂತೆ ಹುತ್ತ.
ಹಣೆ–ಸುರುಭೂಮಿ ತುಂಬೆಲ್ಲ ನಿರಾಶೆ ದುಃಖ,
ಬಂಜೆ–ಚಿತ್ತ—
ದಾರಿದ್ರ್ಯದ ತವರೂರು
ಈ ಚಿಪ್ಪರ

* * *

ಹಗಲಿರಳು, ಹಗಲಿರುಳು–ನನ್ನ ಕಣ್ಣೆದುರು
ಕುಣಿದೆ ಕುಣಿವುದು ಹೀಗೆ–ವಿಷಪೂತ್ಕರಿಸುವ
ಸಾವಿರ ಕರಾಳ ನೆರಳು;
ಕೋಣೆ ತುಂಬೆಲ್ಲ ತರ್ಕ-ತಾಂಡವ-ಪ್ರಳಯ
ಏಳು ಬೀಳು !
ಹೊಟ್ಟೆ–ಬಟ್ಟೆಯ ಕೂಗು,
ನಾಯಿ–ಬಾಳಿನ ತೂಗು, ಮೇಗೆ–ಕೆಳಗು.
ಹಳ್ಳ–ದಿಳ್ಳಿಯ ತನಕ ಇದೇ ಬೈಗು, ಇದೇ ಬೆಳಗು
ಕೇಳಿ–ಕೂಹದ ಮೊದಲು ಕಾಗೆ–ಕೂಗು
ಘಮ್ಮಧಿಮ್ಮೆಂದು ಗುಮ್ಮುವವು, ನನ್ನ—
ಮಾನವ್ಯ ಜೀವಿತದ ಭವ್ಯ ಕನಸು.
ತಲೆಯ ತುಂಬೆಲ್ಲ ಫಕ್ತ್
ಬಂಜೆ ಮನಸು !

ಸಂಬಂಧ ಸಮಸ್ಯೆ

(ಸಣ್ಣಕಥೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ಜನರ ಕಲ್ಯಾಣಕ್ಕಾಗಿ ಎಂದು ಸರಕಾರ ನಿರ್ಮಿಸಿದ ಆಸ್ಪತ್ರೆಗಳು, ಅಧಿಕಾರಿಗಳ ಅಲಕ್ಷ್ಯ–ಪೆಟ್ಟಿನಿಂದ ನಡೆವಳಿಯ ಮೂಲಕ, ಬಡವರಿಗೆ ನರಕದ ಪ್ರತಿರೂಪಗಳಾಗಿವೆ. ಚತುರಳಾದ ಲೀಲಾ, ಪ್ರಸಂಗಾವಧಾನ ತೋರಿಸಿ ಗೆದ್ದುದೇನೋ ಸರಿ ! ಆದರೆ ಎಲ್ಲರಿಗೂ ಅಂತಹ ಚತುರ ಬುದ್ಧಿ ಎಲ್ಲಿರುತ್ತದೆ ? ಮಾನವ ಶ್ರಾಮಾಣಿಕತೆಯನ್ನು ಅಪೇಕ್ಷಿಸುತ್ತಿಲ್ಲ; ಮೋಸವನ್ನು ಬಯಸುತ್ತಾನೆ.

ಡಾಕ್ಟರ್ ಸುಂದರ್ ಅವರು ರಾಜಣ್ಣನನ್ನು ಪರೀಕ್ಷಿಸಿ ತಮ್ಮ ಅಭಿಪ್ರಾಯ ಕೊಟ್ಟರು:— ' ತುಂಬಾ ನಿಶ್ಶಕ್ತರಾಗಿದ್ದಾರೆ, ಒಂದು ವಾರವಾದರೂ ಜ್ವರ ಬಿಟ್ಟಿಲ್ಲ. ಟೈಫಾಯಿಡ್‌ಗೆ ತಿರುಗಿದರೂ ತಿರುಗಬಹುದು. ಆದ್ದರಿಂದ ಆಸ್ಪತ್ರೆಗೆ ಸೇರಿಸಿದರೆ ಎಲ್ಲ ರೀತಿಯಲ್ಲೂ ಉತ್ತಮ ' ಎಂದು.

ರಾಜಣ್ಣ ಲೀಲಳ ಮುಖ ನೋಡಿದ— " ಏಕೆ ಯೋಚನೆ ಮಾಡ್ತೀಯಾ ? ಅದೇ ಉತ್ತಮ. ಹೊಟ್ಟೆಬಟ್ಟೆಗೆ ಸರಿತೂಗಿಸುವುದೇ ಕಷ್ಟವಾಗಿರುವಾಗ, ಈ ಉಪದ್ರವಗಳು ಬೇರೆ ! ಔಷಧಿ-ಉಪಚಾರಕ್ಕೆ ಎಲ್ಲಿಂದ ಹಣ ತರೋದು ? ಡಾಕ್ಟರರ ಫೀಸಿಗೆ ಏನು ಮಾಡೋದು ? ಸುಮ್ಮನೆ ಆಸ್ಪತ್ರೆಗೆ ಸೇರಿಬಿಡ್ತೀನೆ. ಅದೇ ಸರ್ವೋತ್ತಮ " ಎಂದು ನುಡಿದ.

ಲೀಲಳಿಗೆ ಮಾತ್ರ ಮನಸ್ಸಿರಲಿಲ್ಲ.

" ಅಮ್ಮನ್ನ ಕರೆಸಿಕೊಳ್ತೀನೆ. ಈ ಡಾಕ್ಟರರ ಹತ್ತಿರಾನೇ ಔಷಧಿ ತೆಗೆದುಕೊಳ್ಳಿ. ಆಸ್ಪತ್ರೆ ಅಂದರೆ ನರಕಸದೃಶ. ' ಏನಿದ್ದರೂ ಆಲ್ಲಿ ದುಡ್ಡಿದ್ದವರು ಮಾತ್ರ ಬಚಾವಾಗ್ತಾರೆ ' ಅಂತಾರೆ— ಜನ."

ರಾಜಣ್ಣನಿಗೇಕೋ ತುಂಬಾ ರೇಗಿತು.

" ನಿನ್ನ ತಲೆ ! ಯಾರು ಹಾಗೆ ಹೇಳಿದ್ದು ? ಹೇಳಿದಷ್ಟು ಕೇಳೋದು ಬಿಟ್ಟು ಏನೇನೋ ರಗಳ್ತಾಳೆ" ಎಂದವನು, ಅವಳ ಕಣ್ಣಲ್ಲಿ ಜಿನುಗಿದ ನೀರನ್ನು ಕಂಡು ಕೋಪ ಶಮನಮಾಡಿಕೊಂಡ. ಬರಿಸೈ, ಜೊತೆಗೆ ಜ್ವರದ ತಾಪ—ಅವನು ಬಹು ಮುಂಗೋಪಿಯಾಗಿದ್ದ ಇತ್ತೀಚೆಗೆ. " ನೋಡು ಲೀಲಾ, ಮನೇಲಿರೋರು ನೀನು, ನಾನು, ಶಾಂತು, ಶ್ಯಾಮೂ. ಡಾಕ್ಟರನ್ನು ತತ್‌ಕ್ಷಣ ಕರೆಯಬೇಕು ಅಂದರೆ ಯಾರೂ ಹೋಗುವವರಿಲ್ಲ. ಆಸ್ಪತ್ರೇಲಿ ಎಲ್ಲ ಅನುಕೂಲವೂ ಇರುತ್ತೆ. ನಾನು ಮೆಟ್ರಿಕ್ ಪರೀಕ್ಷೆಗೆ ಕಟ್ಟಿದ್ದಾಗ, ಸೈಕಲ್‌ನಿಂದ ಬಿದ್ದು ಕಾಲು-ಕೈಮುರಿದುಕೊಂಡು ಆಸ್ಪತ್ರೆಗೆ ಸೇರಿದ್ದೆ. ಹದಿನೈದು ದಿನ ವಾರ್ಡಿನಲ್ಲಿದ್ದೆ. ಆಗ ಎಷ್ಟು ಚೆನ್ನಾಗಿ ನೋಡಿಕೊಳ್ಳೋರು ಅಂತ ! ಸಿಸ್ಟರ್ ಅಲಿಸ್ ಅಂತ ನರ್ಸಿದ್ದಳು—ಅಕ್ಕತಂಗಿಯರಿಗಿಂತ ಹೆಚ್ಚು ವಿಶ್ವಾಸದಿಂದರೋಳು. ರಾತ್ರಿ ಡ್ಯೂಟಿಗೆ ಬಂದರೆ, ಒಂದು ಕ್ಷಣ ಕೂತು ತೂಕಡಿಸುತ್ತಿರಲಿಲ್ಲ. ಫಟಪಟ ಅಂತಾ ಓಡಾಡೋಳು ಸ್ವಲ್ಪ ಹೊತ್ತು ಕೂತು ನಿದ್ದೆಯ ಜಂಪು ತೆಗೆಯುವಂತೆ ನಾವು ಹೇಳಿದರೆ, ನಕ್ಕು ಹೇಳೋಳು:– 'ಇಲ್ಲಿ ನಿದ್ದೆಮಾಡುವುದಕ್ಕೆ ನನ್ನನ್ನು ನಿಯಮಿಸಿಕೊಂಡಿಲ್ಲ. ನನ್ನ ಕರ್ತವ್ಯಾನ ನಾನು ಮಾಡ್ತೇನೆ. ಬೆಳಗ್ಗೆ ಮನೆಗೆ ಹೋದ ಮೇಲೆ ನಾನು ಬೇಕಾದಂತೆ ನಿದ್ದೆಮಾಡ್ತೇನೆ'— ಅನ್ನೋಳು. ಆ ತಾಯಿಯ ನಗುಮುಖ, ಸಾನುಭೂತಿಯ ಮಾತು ಕೇಳಿಯೇ ಅರ್ಧ ಕಾಯಿಲೆ ಹೋಗೋದು. ಆದ್ದರಿಂದ ಬೇಗ ಜಟಕಾ ತರಿಸು; ಆಸ್ಪತ್ರೆಗೆ ಹೋಗ್ತೋಣ " ಅಂದ.

ಜಟಕಾದಲ್ಲಿ ಆಸ್ಪತ್ರೆಗೆ ಬಂದರು. ಡಾಕ್ಟರರು ಬರೆದುಕೊಟ್ಟ ಚೀಟಿಯನ್ನು ತೋರಿಸಿ, ಸೇರಿಸಿಕೊಳ್ಳುವಂತೆ ಲೀಲಾಕೇಳಿಕೊಂಡಳು. ಲೀಲಾಳಿಂದ ಎಲ್ಲ ವಿವರಗಳನ್ನೂ ಕೇಳಿ ಬರೆದುಕೊಂಡು, ರಾಜಣ್ಣನನ್ನು ದಾಖಲು ಮಾಡಿಕೊಂಡರು. ಆದರೆ ಅರ್ಧಗಂಟೆಯಾದರೂ ರಾಜಣ್ಣನನ್ನು ವಾರ್ಡಿನೊಳಗೆ ಕರೆದೊಯ್ಯಲಿಲ್ಲ. ಆರ್ಡರ್ಲಿ ಯಾವುದೋ ಸಾಮಾನು ತರಲು ಅಂಗಡಿಗೆ ಹೋಗಿದ್ದ.

ರಾಜಣ್ಣ ನೋವಿನಿಂದ, ಬಾಯಾರಿಕೆಯಿಂದ, ಚಡಪಡಿಸಿದ: " ಸರ್, ತುಂಬಾ ಹೊತ್ತು ಕೂರಲು ಕಷ್ಟವಾಗುತ್ತೆ, ನಡೆಯೋದಕ್ಕೆ ಆಗೋದಿಲ್ಲ. ಯಾರಾದರೂ ಸಹಾಯಮಾಡಿದರೆ.... ಒಳಗೆ ಹೋಗಿ ಮಲಗ್ತೀನೆ...." ಎಂದ.

" ನಿಮಗೆ ಕಾಣ್ತಾ ಇಲ್ವೇನ್ರೀ ? ನಾವೆಷ್ಟು ಬಿಸಿ (busy) ಆಗಿದ್ದೀವಿ. ನೋಡಿ ! ಸ್ವಲ್ಪ ನಿಧಾನಿಸಿ...."

— ಎಂದ ಆಗ ಅಧಿಕಾರಿ ಅಸಮಾಧಾನದಿಂದ.

ಲೀಲಾ ತಮ್ಮೈದುರೇ ಅನಾಸಕ್ತಿಯಿಂದ ಓಡಾಡುತ್ತಿದ್ದ ಆಯಾಗಳನ್ನೂ ಆರ್ಡರ್ಲಿಗಳನ್ನೂ ಕರೆದು, ವಾರ್ಡಿಗೆ ಹೋಗಲು ಸಹಾಯ ಮಾಡುವಂತೆ ಕೇಳಿಕೊಂಡಳು. 'ತ್ವರಿತದ ಕೆಲಸವಿದೆ' ಎಂದು ಏನಾದರೂ ಸಬೂಬು ಹೇಳಿ, ಎಲ್ಲರೂ ನುಣುಚಿಕೊಂಡರು.

ರಾಜಣ್ಣ ಕಾದು ಕಾದು ಸಾಕಾಗಿ, ಹಾಗೆಯೇ ಬೆಂಚಿನ ಮೇಲೆಯೇ ಮಲಗಿಬಿಟ್ಟ. ರಾಜಣ್ಣನಿಗೆ ದೇಹ ಬಳಲಿದಂತೆ ಮನಸ್ಸೂ ಬಳಲಿತು. ತನ್ನ ಮುಖಲಕ್ಷಣವೇ ದಾರಿದ್ರ್ಯದ ಕಳೆಯನ್ನು ಸುರಿಸುತ್ತಿರುವಾಗ ಬೇರಾವ ಸ್ವಾಗತ ಇಲ್ಲಿ ದೊರಕೀತು ?

ಟ್ಯಾಕ್ಸಿಯೊಂದು ಬಂದು ನಿಂತಿತು. ಅದರೊಳಗಿಂದ ನಲವತ್ತೈದು ವಯಸ್ಸಿನ ಎತ್ತರವಾದ ಮನುಷ್ಯ ಕೆಳಗಿಳಿದ. ನೇರಾ ಡಾಕ್ಟರರ ಬಳಿಗೆ ಬಂದ :

"ನೋಡಿ, ಸಾರ್. ಮೆಡಿಕಲ್ ಆಫೀಸರ್ ಚೀಟಿಕೊಟ್ಟಿದ್ದಾರೆ. ನನ್ನ ನೆಂಟರು ಅವರು. ಮಲೆನಾಡಿನಲ್ಲಿ ವರ್ಷ ಸರ್ವಿಸ್ ಸಲ್ಲಿಸ್ದೆ. ಜ್ವರಗಡ್ಡೆ ಇದೆ. ನಾಲ್ಕರ ಛಳಿ ಬರುತ್ತೆ— ಈ ದಿನ ರಾತ್ರಿಗೆ ಬರುವ ಸಂಭವ ಇದೆ."

—ಎಂದು ಆರಾಮವಾಗಿ ಕೂತುಕೊಂಡು ಹೇಳಿದ.

ಡಾಕ್ಟರರು ಬೆಲ್ಲು ಒತ್ತುವುದೇ ತಡ— ಆಯಾಗಳು, ಅರ್ಡರ್ಲಿಗಳು ನುಗ್ಗಿಬಂದರು; ಆತ 'ಬೇಡಬೇಡ' ಎನ್ನುತ್ತಿದ್ದರೂ ಆತುರದಿಂದ ಅವನನ್ನು ವಾರ್ಡಿಗೆ ಕರೆದೊಯ್ಯಲು ಸಹಾಯ ಮಾಡಲು ಮುಂದಾದರು. ಡಾಕ್ಟರರೇ ಅವನನ್ನು ವಾರ್ಡಿನೊಳಕ್ಕೆ ಕರೆದುಕೊಂಡು ಹೋಗಿ ಬಿಟ್ಟುಬಂದರು.

ಕಾದುಕಾದು ಲೀಲಳಿಗೂ ಸಾಕಾಯಿತು.

"ಏಳಿ ಅಂದ್ರೆ. ವಾರ್ಡು ಎಲ್ಲಿದೆ ಅಂತ ನಿನುಗೆ ಗೊತ್ತೇ ಇದೆ. ನಾನು ಹಿಡಿದುಕೊಳ್ತೇನೆ-ಮೆಲ್ಲಗೆ ನಡೆಯುವಿರಂತೆ ಏಳಿ."

ರಾಜಣ್ಣ ಅತ್ತಿತ್ತ ನೋಡಿದ. ಯಾರೂ ಅವನ ನೆರವಿಗೆ ಬರುವಂತೆ ಕಾಣಲಿಲ್ಲ. ಲೀಲಳ ಭುಜದ ಮೇಲೆ ಭಾರಬಿಟ್ಟು, ಕುಂಟುತ್ತಾ, ಮಧ್ಯೆ ಮಧ್ಯೆ ನಿಂತು ಸುಧಾರಿಸಿಕೊಳ್ಳುತ್ತಾ ವಾರ್ಡಿಗೆ ಬಂದ.

"ಲೀಲಾ.... ನನಗೆ ಗುಣ ಆದಮೇಲೆ, ವಾರಕ್ಕೆ ಒಂದು ದಿನವಾದರೂ ಇಲ್ಲಿಗೆ ಬಂದು, ಹೀಗೆ ಗೋಳಾಡುವವರಿಗೆ ಸಹಾಯ ಮಾಡ್ತೇನೆ.... ಡಾಣಾಧಡಿಯರಾಗಿ ಇಷ್ಟು ಮಂದಿ ನಿಂತು ತಮಾಷೆ ನೋಡ್ತಾರೆ— ಕೈಲಾಗದವರಿಗೆ ಸ್ವಲ್ಪ ಸಹಾಯ ಮಾಡೋಣ ಎನ್ನುವ ಧರ್ಮಬುದ್ಧಿ ಇಲ್ಲವಲ್ಲಾ"—ಎಂದು ಪೇಚಾಡಿದ.

ಇತ್ತ ವಾರ್ಡಿನಲ್ಲೂ ದೊಡ್ಡ ಗಲಾಟೆ—ಎಲ್ಲ ಮಂಚಗಳೂ ಭರ್ತಿಯಾಗಿತ್ತು. ಆಗ ತಾನೇ ಬಂದ 'ಜ್ವರಗಡ್ಡೆ'ಯ ನಾರಾಣಪ್ಪನಿಗೆ ಮಂಚಕೊಟ್ಟು, ಮಂಚದಲ್ಲಿದ್ದ ರೋಗಿಯನ್ನು ನೆಲದ ಮೇಲೆ ಮಲಗಿಸಿದ್ದರು. ಬಲವಂತವಾಗಿ ನೆಲಕ್ಕಿಳಿಸಿದರೆಂದು ಆ ರೋಗಿ ಸಿಕ್ಕಾಪಟ್ಟೆ ರೇಗಾಡುತ್ತಿದ್ದ.

ನರ್ಸ್ ಅವನಿಗಿಂತಲೂ ದೊಡ್ಡ ಧ್ವನಿಯಲ್ಲಿ ರೇಗುತ್ತಿದ್ದಳು:—

"ಆಸ್ಪತ್ರೆ ಅಂದರೆ ಛತ್ರ ಅಂದುಕೊಂಡಿದೀಯೇನಯ್ಯಾ? ಬಿಟ್ಟೆ ಕವಳಾ. ಸಿಕ್ಕುತ್ತೆ ಅಂತ, ಹದಿನೈದು ದಿನದಿಂದ ಒಂದಲ್ಲ ಒಂದು ಸಬೂಬು ಹೇಳ್ತಾ ತಾಣ್ಯಹೂಡಿದ್ದಾನೆ! ಹೆಚ್ಚು ಕೂಗಿದರೆ, ವರಾಂಡಕ್ಕೆ ಹಾಕಿಸಿಬಿಡ್ತೇನೆ, ಹುಷಾರ್."

ಮದ್ದಲೆ ಬಾರಿಸಿದಂತಹ ಈ ಶಬ್ದಗಳ ಹೊಡೆತ ತಾಳಲಾರದೆ, ನಾಲ್ಕನೆಯ ಮಂಚದ ರೋಗಿ ಮುಖ ಕಿವಿಚಿಕೊಳ್ಳುತ್ತಿದ್ದ.

ಒಂದೇ ದಿನದಲ್ಲಿ ರಾಜಣ್ಣನಿಗೆ ಆಸ್ಪತ್ರೆಯ ಸಹವಾಸ ಸಾಕು-ಸಾಕಾಯಿತು. ಅವನು ಕಟ್ಟಿದ ಕನಸೆಲ್ಲಾ ಭಗ್ನವಾಗಿತ್ತು. ಜ್ವರದ ತಾಪದಿಂದ ಬಳಲುತ್ತಿದ್ದ ರಾಜಣ್ಣ ನೆಲದ ಮೇಲಿನ ಹಾಸಿಗೆಯಲ್ಲಿದ್ದ,— ಜ್ವರ ಬಂದೀತೆಂಬ ಭೀತಿಯಿಂದ ವಾರ್ಡಿಗೆ ದಾಖಲಾಗಿದ್ದ ನಾರಣಪ್ಪ, ಮಂಚದ ಮೇಲೆ ಪವಡಿಸಿ ರಾಜೋಪಚಾರ ಪಡೆಯುತ್ತಿದ್ದ.

ರಾಜಣ್ಣ ನೊಂದು ಹೇಳಿದ:—

"ನನಗೂ ನಾರಣಪ್ಪನಂತೆ ಯಾರಾದರೂ ದೊಡ್ಡ ಮನುಷ್ಯರು ನೆಂಟರಾಗಬಾರದಾಗಿತ್ತೇ ಅನ್ನಿಸುತ್ತೆ. ಉಳಿದವರೊಡನೆ ಹುಲಿಯಂತೆ ವರ್ತಿಸುವ ಈ ನರ್ಸ್‌ಗಳು ಅವನನ್ನು ಕಂಡರೆ ನರಿಯಂತೆ ಮಾತಾಡ್ತಾರೆ. ಇಲ್ಲೇ ಅವನಿಗೆ ಸ್ಪೆಷಲ್ ವಾರ್ಡ್‌ನಷ್ಟು ಅನುಕೂಲ ಸಿಕ್ಕಿದೆ. ಲೀಲಾ, ನಾನು ಆದಷ್ಟು ಬೇಗ ಇಲ್ಲಿಂದ ಪಾರಾಗಬೇಕು."

"ಈ 'ಸ್ವರ್ಗ'ಕ್ಕೆ ಬರುವುದಕ್ಕೆ ಅಷ್ಟು ಕಾತರರಾಗಿದ್ದಿರಿ!"

"ಹಿಂದೆ ನಾ ನೋಡಿದಾಗ ಹಾಗಿತ್ತು, ಲೀಲಾ! ಅಷ್ಟು ದಕ್ಷತೆ, ಕಾರ್ಯತತ್ಪರತೆ ಇತ್ತು.... ಸ್ವಾತಂತ್ರ್ಯ ಬಂದ ಮೇಲೆ ಎಲ್ಲವೂ ಅಧ್ವಾನವಾಗಿದೆ.... ಸರ್ಕಾರ ಸಾವಿರಾರು ರೂಪಾಯಿ ಖರ್ಚು ಮಾಡುತ್ತೆ. ಆದರೂ 'ದೇವರು ವರಕೊಟ್ಟರೂ ಪೂಜಾರಿ ವರಕೊಡ, ಅನ್ನೋ ಸ್ಥಿತಿ ಆಗಿದೆ."

"ಇದೇನೂಂದ್ರೆ— ಬ್ರೆಡ್ಡು ಹಾಗೇ ಉಳಿದಿದೆ. ತಿನ್ನಲಿಲ್ವೇ?"

"ತಿನ್ನುವ ಹಾಗಿಲ್ಲ ಆ ಬ್ರೆಡ್ಡನ್ನ. ಎಷ್ಟು ಅನ್ಯಾಯ ಅನಾಚಾರ ನಡೀತಿದೆ ಗೊತ್ತೇ ಲೀಲಾ? ಕೊಡುವ ಹಾಲಿಗಿಂತ ಕಣ್ಣೀರು ಉತ್ತಮ— ಒಳ್ಳೆಯ ಹಾಲು ಆಫೀಸ್ ಸ್ಟಾಫ್‌ಗೆ ಹೋಗುವುದಂತೆ."

"ಇದೆಲ್ಲಾ ದೊಡ್ಡ ಸಾಹೇಬರಿಗೆ ಗೊತ್ತಿದೆಯೇ?"

"ಯಾರಿಗೆ ಗೊತ್ತು? ಮಾಮೂಲಿನಂತೆ ಎಲ್ಲಾ ನಡೆಯಲಿ ಎಂದು ಅವರು ಸುಮ್ಮನೆ ಇರಬಹುದು. ಅನ್ಯಾಯವನ್ನ ಸಹಿಸೋದು ನಮಗೆ ಅಭ್ಯಾಸವಾಗಿ ಹೋಗ್ತಾ ಇದೆ; ಅದನ್ನ ವಿರೋಧಿಸುವ ಎದೆಗಾರಿಕೆಯೇ ಇಲ್ಲವಾಗ್ತಿದೆ.!"

"ಆ ನಾರಾಣಪ್ಪನಿಗೆ? ಅವನಿಗೂ ಇದೇ ಆಹಾರವೇ?"

"ಅವನಿಗೆ ಸ್ಪೆಷಲ್ ಹಾಲು, ಬ್ರೆಡ್ಡು ಬರುತ್ತೇ. ಅದೂ ಸಿಂಹ ಭಾಗ."

ರಾಜಣ್ಣನಿಗೆ ಘ್ರಾಣೇಂದ್ರಿಯ ಬಹು ಸೂಕ್ಷ್ಮ. ದುರ್ವಾಸನೆ ಬಂದರೆ ಅವನಿಗೆ ತಲೆನೋವು ಶುರುವಾಗುವುದು. ಅವನು ಮಲಗಿದ ಸ್ಥಳದ ಎದುರೇ ವಾರ್ಡಿನ ಕಕ್ಕಸು ಇದ್ದಿತು. ಅಸಾಧ್ಯ ದುರ್ನಾತ ಹೊಡೆಯುತ್ತಿದ್ದಿತಾಗಿ, ರಾಜಣ್ಣನಿಗೆ ತಲೆನೋವು ಹತ್ತಿ, ರಾತ್ರಿ ನಿದ್ರೆ ಬರದು. ರಾತ್ರಿ ಡ್ಯೂಟಿಗೆ ಬರುತ್ತಿದ್ದ ವಾರ್ಡ್‌ಬಾಯ್ ತುಂಬಾ ವಾಚಾಳಿ. ಸಿನಿಮಾ ಹಾಡುಗಳನ್ನು ಅಪಸ್ವರದಲ್ಲಿ ಗುನುಗಿ, ರೋಗಿಗಳ ನಿದ್ದೆ ಕೆಡಿಸುವುದರಲ್ಲಿ ನಿಸ್ಸೀಮ. ಅವನೊಡನೆ ಹಾಸ್ಯಮಾಡಿ, ನಕ್ಕು, ಸದ್ದು ಮಾಡಲು ಅಯಾಗಳು ಬೇರೆ.

ನಾಲ್ಕನೆಯ ಮಂಚದ ಪೇಷಂಟ್ ಟೈಫಾಯಿಡ್ ಆಗಿ, ಆಗ ತಾನೇ ಅಪಾಯಘಟ್ಟದಿಂದ ಪಾರಾಗಿದ್ದ. ಆದರೂ ತುಂಬಾ ನಿಶ್ಯಕ್ತನಾಗಿದ್ದ. ಜೋರಾಗಿ ಕೂಗಲು ಆಗುತ್ತಿರಲಿಲ್ಲ. ಅವನು 'ಬೆಡ್‌ಪ್ಯಾನ್' ಕೊಡುವಂತೆ ಅರ್ಧಗಂಟೆಯಿಂದ ಹಲುಬುತ್ತಿದ್ದ.

ಆದರೆ....

ಚಿಲುವಯ್ಯನ ಮದುವೆ, ಮೇರಿಯಮ್ಮ— ಡಾ. ರಘುರವರ ಪ್ರಣಯ, ರಾಜಯ್ಯನ ಪ್ರಮೋಷನ್— ಈ ರಸವಿಶೇಷಗಳನ್ನು ಸವಿಯುವುದರಲ್ಲಿ ಮಗ್ನರಾದವರಿಗೆ ರೋಗಿಯ ಕೂಗು ಹೇಗೆ ಕೇಳ ಬೇಕು ?

ರಾಜಣ್ಣ ಬೇಸರದಿಂದ ತಾನೇ ಜೋರಾಗಿ ಕೂಗಿದ.

" ಅಯ್ಯೋ, ನಿನ್ನ ಗಂಟಲು ಕಟ್ಟ ! ಒಂದು ಕ್ಷಣ ನಿಲ್ಲೋ-ಕೆಲ್ಲ-ಏನು ಸಾಯ್ತೀರಿ ! ಹಾಳಾದವರ ದೆಸೆಯಿಂದ ಒಂದು ಕ್ಷಣ ಕೂರುವಂತಿಲ್ಲ."

—ಎಂದು ಗೊಣಗಿಕೊಂಡು ಅಯಾ ಒಳಕ್ಕೆ ಬಂದಳು. ಅವಳ ಉರಿಮುಖ ನೋಡಿ ರಾಜಣ್ಣನ ಮನದ ತಾಪ ಮತ್ತೂ ಏರಿತು.

" ನಾಲ್ಕನೆಯ ಮಂಚದ ರೋಗಿ ಗಂಟೆಯಿಂದ ಕೂಗ್ತಾ ಇದ್ದಾನೆ. ನಿನಿಮಾ ಹಾಡು ಹೇಳೋಕೆ ಆತನಿಗೆ ಸಂಬಳ ಕೊಡ್ತಾ ಇದ್ದಾರೆಯೇ ? ಆತನ್ನ ಕಳಿಸು !"

" ಒಂದು ಗಂಟೆಯಿಂದ ಏಕೆ ಕೂಗಿದ—ಎದ್ದು ನಾಲ್ಕು ಹೆಜ್ಜೆ ಹೋಗಬೇಕಾಗಿತ್ತು!"

" ಎದ್ದು ನಾಲ್ಕು ಹೆಜ್ಜೆ ಹೋಗುವಂತಿದ್ದರೆ ಏಕೆ ಮಲಗಿ ರೋನು ? ರೋಗಿಗಳ ನಿದ್ದೆಗೆ ತೊಂದರೆ ಅಂತ ನಿಮ್ಮ ಮಾತನ್ನಾ-ದರೂ ಸ್ವಲ್ಪ ಕಡಿಮೆ ಮಾಡಬಾರ್ದಿ ?"

"ಏನಯ್ಯಾ, ನಾಲಿಗೇನ ಬಹಳಾ ಉದ್ದ ಮಾಡ್ತಿದ್ದೀಯೆ! ನಿಮ್ಮ ಜೊತೆಗೆ ನಾವೂ ಬಾಯಿ ಮುಚ್ಚಿಕೊಂಡು ಸಾಯೋಣವೇ ?"

—ಎಂದು ಸಿಡುಕುತ್ತಾ ಜವಾನನನ್ನು ಕಳುಹಲು ಹೋದಳು.

ರಾಜಣ್ಣ ನಿಡುಸುಯ್ದ—ಎಷ್ಟು ಅನಾಸಕ್ತಿ, ತಾತ್ಸಾರ, ನಿರು ತ್ಸಾಹ-ತಮ್ಮ ಕರ್ತವ್ಯದ ಬಗ್ಗೆ !

ವಾರ್ಡಿನಲ್ಲೆಲ್ಲಾ 'ಜಗಳಗಂಟ'ನೆನ್ನಿಸಿಕೊಂಡು, ಬೈಸಿಕೊಳ್ಳು ತ್ತಿದ್ದವನು ಆರನೆಯ ಮಂಚದ ಮುದುಕ. ಅವನೂ ಜ್ವರ, ತಲೆ-ನೋವಿನಿಂದ ಹಾಹಾಕಾರಪಡುತ್ತಿದ್ದ— ಅವನು ' ತಲೆಹರಟೆ' ಯೆಂದು ನರ್ಸ್‌ಗಳು ಅವನ ಬಗ್ಗೆ ಕಠಿಣವಾಗಿಯೇ ಮಾತನಾಡುತ್ತಿ ದ್ದರು. ಬಿಟ್ಟಸೇವೆ ಮಾಡಿಸಿಕೊಂಡು, ಕೈ ಬೆಚ್ಚಗೆ ಮಾಡದೆ ಹೋಗುವ ' ಕುಳ'ವೆಂದು ಅಯಾಗಳೂ ಅವನನ್ನು ಕಂಡರೆ ಸಿಡು-ಗುಟ್ಟುತ್ತಿದ್ದರು.

" ಅಯ್ಯೋ, ಅಯ್ಯೋ, ಹೋಯ್ತು, ಹೋಯ್ತು ನನ್ನ ತಲೆ.... ಯಾರಾದರೂ ಸ್ವಲ್ಪ ಒತ್ತಿ ಹಿಡೀರಿ.... ನಿಮಗೆ ಪುಣ್ಯ ಬರುತ್ತೆ...." ಎಂದು ನರಳಾಡಿದ ಆ ರೋಗಿ.

ಅಯಾ ಮತ್ತೊಮ್ಮೆ ಬಂದು ರೇಗಾಡಿದಳು :

" ಸುಮ್ಮನೆ ಕೂಗಿಕೊಂಡು ಏಕೆ ನಿದ್ದೆ ಕೆಡಿಸ್ತೀಯಾ ? ಬಾಯಿ ಮುಚ್ಚಿಕೊಂಡು ಬಿದ್ದುಕೊಳ್ಳಯ್ಯಾ.... ತಲೆ ಒತ್ತಲಿಕ್ಕೆ ನಿನ್ನ ಹೆಂಡತೀನ ಕರೆಸಿಕೋ...."

" ನನ್ನ ಹೆಂಡತಿ ಸತ್ತು ಸ್ವರ್ಗದಲ್ಲಿದ್ದಾಳವ್ವ- ನಾ ಇಲ್ಲಿ ಜಾತ್ರೇಗೆ ಬಂದೆ— ನನ್ನ ಹಣಾನ ದೋಚಿಬಿಟ್ಟು— ಕಾಯಿಲೆ ಬೇರೆ ಬಿದ್ದೆ — ಊರಲ್ಲಿ ನನ್ನ ಮಗಾ ಅಷ್ಟೆ— ನಾ ಹೀಗೆ ಕಾಯಿಲೆ ಬಿದ್ದಿರುವ ವಿಷಯ ಅವಂಗೂ ತಿಳೀದು— ' ಹೀಗೇ ದೇಶಾ ತಿರ-ಗುತನ್ನೆ' ಎಂದುಕೊಂಡಿದಾನೆ- ಊರಿಗೊಂದು ಕಾಗಜ ಹಾಕವ್ವಾ- ಬಂದು ಕರೆದುಕೊಂಡು ಹೋಗ್ತಾನೆ."

" ನಿಲ್ಲಿಸಯ್ಯಾ ನಿನ್ನ ಬೂಟಾಟಿಕೇನ ! ನಿನ್ನಾಯಿ ದನ ಸಾಹೇಬರ ಮುಂದೆ ಜಾಡಿ ಹೇಳಿ ನಮ್ಮನ್ನ ಬಯ್ಸಿದೀಯಾ! ಅವರು ' ಎನಿಮಾ ಕೊಟ್ಟದಾರೇ?' ಅಂದರೆ, ' ಇಲ್ಲ' ಅಂತ ಬೊಗುಳಿದಿ ! ಬಹಳಾ ಸೊಕ್ಕಿದೀಯಾ ನೀನು !"

" ಎನಿಮಾ ಕೊಟ್ಟತ್ತೀನವ್ವಾ ನನಗೆ ? ಅವರು ಕೇಳಿದರು- ಸುಳ್ಳಾಡಲೇನು ? ನಿಜ ಹೇಳಿದೆ. ನೀವು ಶಿಕ್ಷೇನೂ ಕೊಟ್ಟು ಬಿಟ್ರುಲ್ಲಾ— ಮಧ್ಯಾಹ್ನ ಮೂರು ಗಂಟೆಯವರೆಗೂ ಹಿಟ್ಟಲ್ಲದೆ ಸಾಯಿಸಿಬಿಟ್ಟರಲ್ಲಾ."

" ಅದನ್ನೂ ಹೇಳಬೇಕಾಗಿತ್ತು ಸಾಹೇಬರಿಗೆ! ಸತ್ತಮೇಲೇನೇ ಅನೇಲಿ ಕೊಡ್ತಾ ಇದ್ದೆವು ! ಇನ್ನು ನರಳಾಡದೆ ತೆಪ್ಪಗೆ ಮಲಗು."

—ಎಂದು ಕೆಂಗಣ್ಣು ಬಿಟ್ಟಳು.

" ನೋವು ತಿನ್ನುವಾಗ ನರಳುವುದಕ್ಕೂ ಹಕ್ಕಿಲ್ಲವೇನವ್ವಾ ಈ ತಾವಲ್ಲಿ ? ನರಳಿಕೆ ಹೋಗಿ ನಿದ್ದೆ ಬರುವಂತೆ ಏನಾರ ಮದ್ದು ಕೊಡಿ. ಸುಮ್ಮನೆ ಕಟಕಟ ಮಾಡ್ಬೇಡಿ ! "

—ಎಂದು ತಾನೂ ರೇಗಿದ ಮುದುಕ.

ಹತ್ತನೆಯ ಮಂಚದ ರೋಗಿ ತುಂಬಾ ಚಡಪಡಿಸುತ್ತಿದ್ದ. ಕೈಕಾಲುಗಳನ್ನು ಬೀಸಿ ಹಾಕುತ್ತಾ ಸಂಕಟಪಡುತ್ತಿದ್ದ. ನೀರುನೀರು ಎಂದು ದಾಹಪಡುತ್ತಿದ್ದ.

" ನೀರು, ನೀರು " ಎಂದು ನರಳಿದ.

ರಾಜಣ್ಣ ಜೋರಾಗಿ ಕೂಗಿದ ಮೇಲೆ ನರ್ಸ್ ಬಂದಳು. ತಮ್ಮ ಮಾತುಕತೆಯಲ್ಲಿ ವಿಘ್ನ ಬಂದಿತೆಂದು ಸಿಡುಕುತ್ತಲೇ ಬಂದಳು. ಹತ್ತನೆಯ ಮಂಚದ ರೋಗಿಗೆ ನೀರು ಕೊಟ್ಟಳು. ಅವನು ಎರಡೇ ಚಮಚ ಕುಡಿದು ಸಾಕೆಂದ.

" ಮತ್ತೆ ಮತ್ತೆ ಕೂಗಿಕೊಳ್ಳಬೇಡ. ಈಗಲೇ ಬೇಕಾದರೆ ಇನ್ನಷ್ಟು ನೀರನ್ನು ಕುಡಿ."

" ಬೇಡ ಬೇಡ " ಎಂದ ಕ್ಷೀಣನಾಗಿ.

ನರ್ಸ್ ಥೊಪ್ಪನೆ ಲೋಟನನ್ನಿಟ್ಟು ಹೋದಳು.

ಉಳಿದವರೆಲ್ಲಾ ಭಯದಿಂದ ಮುಖಕ್ಕೆ ಹೊದಿಕೆ ಮುಚ್ಚಿ ಕೊಂಡರು; ಅವನದು ಸಾವಿನ ಸಂಕಟವೆಂದು ಅವರಿಗೆಲ್ಲಾ ಗೊತ್ತು.

ಸ್ವಲ್ಪ ಹೊತ್ತಿನಲ್ಲೇ ಅವನು ಮೇಲುಸಿರು ಎಳೆಯ ಹತ್ತಿದ. ರಾಜಣ್ಣ ಗಾಬರಿಯಿಂದ ಕೂಗಿಕೊಂಡ-ನರ್ಸ್ ಬಂದಳು.

" ಸಿಸ್ಟರ್, ಹತ್ತನೇ ಮಂಚದ ರೋಗಿ ತುಂಬಾ ನರಳ್ತಿದಾನೆ. ಡಾಕ್ಟರನ್ನು ಕರೆಯಬೇಕಾಗಿತ್ತು "

" ಸುಮ್ಮನೆ ನಿಮ್ಮ ಪಾಡಿಗೆ ನೀವು ಮಲಗಿಕೊಳ್ರಿ. ನಮ್ಮ ಡ್ಯೂಟಿ ನಮಗೆ ಗೊತ್ತಿದೆ— ದೊಡ್ಡದಾಗಿ ಲೆಕ್ಚರ್ ಕೊಡೋಕೆ ಬರ್ತಾರೆ !" ಎಂದು ಸಿಡುಕಿದಳು.

ರಾಜಣ್ಣನಿಗೂ ತುಂಬಾ ರೇಗಿತು—

"ಏನು ನಿಮಗೆ ಗೊತ್ತಿರೋದು— ನಿಮ್ಮ ತಲೆ! ನಿಮ್ಮ ವೃತ್ತಿಯ ಘನತೆ ಗೌರವ ತಿಳಿದಿದೆಯೊ ನಿಮಗೆ? ಸಂಬಳಕ್ಕೆ ಸೇರಿ ಕೊಂಡಿರುವ ಕೂಲಿಗಳಂತ ಭಾವಿಸಿಕೊಂಡಿದಿರೇ ವಿನಾ, ಸೇವೆ ಮಾಡುವ ದೇವಿಯರು ಅಂದುಕೊಂಡಿಲ್ಲ. ಫ್ಲೋರಾನ್ಸ್ ನೈಟಿಂಗೇ-ಲ್‌ನ ತ್ಯಾಗ, ದಯೆ ನಿಮ್ಮ ಆದರ್ಶವಾಗಿದೆಯೇನು? ಏನೋ ಗೊತ್ತಿದೆಯಂತೆ!"

"ಈಗಲೇ ಆಸ್ಪತ್ರೆ ತುಂಬಿಹೋಗಿದೆ— ಇನ್ನು ಇದನ್ನೇ ಸ್ವರ್ಗ ಮಾಡಿದ್ದರೆ, ಜಾಗವೇ ಬಿಡುವಾಗ್ತಾ ಇರಲಿಲ್ಲ. ನಿನ್ನನ್ನ ಯಾರು ಬಾರಯ್ಯಾ— ಎಂದು ಆಹ್ವಾನ ಮಾಡಿದ್ದು?"

"ತುಂಬಿರೋದಕ್ಕೇನು— ನರಕಾನೂ ತುಂಬಿರುತ್ತೆ! ಇದು ಭೋಗಭೂಮಿ ಅಂತಾ ಯಾರೂ ಬಯಸಿ ಬರೋದಿಲ್ಲ; ಅವರವರ ಕಷ್ಟ ಇಲ್ಲಿಗೆ ಬರಮಾಡುತ್ತೆ. ಆದರೆ ನಿಮ್ಮನ್ನ ಇಲ್ಲಿಟ್ಟಿರೋದು ಇಲ್ಲಿಗೆ ಜನ ಬರದಂತೆ ಹೆದರಿಸಿ ಕಳಿಸೋದಕ್ಕಲ್ಲ."

"ಅಷ್ಟೆಲ್ಲಾ ಹರಟೆ ಹರಟುವನು ನೀನೇ ಬಾರಯ್ಯ—ಕೆಲಸ ಮಾಡೋಕೆ" ಎಂದು ರೇಗುತ್ತಾ ಹೋದಳು.

ಮಾರನೆಯ ದಿನ ರಾಜಣ್ಣನಿಗೆ ಜ್ವರವೇರಿತು. ಲೀಲಾ ಆಸ್ಪ-ತ್ರೆಯಲ್ಲೇ ನಿಂತಳು. ರಾಜಣ್ಣ ತುಂಬ ವ್ಯಥೆಯಿಂದ ತನ್ನ ಅನುಭವ ಗಳನ್ನೆಲ್ಲಾ ಹೇಳಿದ.

"ಏನು ಮಾಡೋದು ಹೇಳಿ—ಬಡವರಿಗೆ ಎಲ್ಲೂ ಉಳಿಗಾಲ ವಿಲ್ಲ. ಹಣ ಹಣ ಅಂತ ಜಿಗಣೆಗಳಂತೆ ಕಾಡ್ತಾರೆ-ದೊಡ್ಡ ಡಾಕ್ಟರಿಗೆ ಹೇಳಿದರೆ ಕೈಕೆಳಗಿನವರನ್ನ ಅವರು ಬಿಟ್ಟು ಕೊಡೋದಿಲ್ಲ-ಅದಕ್ಕೇ ನಾನು ಮುನೇಲಿರಿ ಅಂದದ್ದು.

"ನೋಡು, ಈ ಕಟು ಅನುಭವ ಬಂದ ಮೇಲೆ ನಿರ್ಧಾರ ಮಾಡಿ ಬಿಟ್ಟಿದ್ದೇನೆ: ನಮ್ಮ ಶಾಂತೂಗೆ ನರ್ಸ್‌ಸ್ ಟ್ರೇನಿಂಗ್ ಕೊಡಿಸಿ, ಅವಳನ್ನ ಆದರ್ಶ ನರ್ಸ್ ಮಾಡ್ತೇನೆ. ನಮ್ಮ ಶ್ಯಾಮೂನ ಡಾಕ್ಟರ್ ಪರೀಕ್ಷೆಗೆ ಓದಿಸಿ, ಅವನನ್ನ ಬಡವರ ಬಂಧುವಾಗಿ ಮಾಡ್ತೇನೆ."

"ಅಷ್ಟು ಉದ್ರಿಕ್ತರಾಗಬೇಡೀಂದ್ರೆ, ಹಾಗೇ ಮಾಡಿದವರಂತೆ."

ರಾಜಣ್ಣನಿಗೆ ಜ್ವರವೇರಿತು. ರಾತ್ರಿಯಂತೂ ಎತ್ತೆತ್ತಲೋ ಪಾತನಾಡುತ್ತಿದ್ದ.

"ಅಮ್ಮಾ.... ಫ್ಲೋರಾನ್ಸ್ ನೈಟಿಂಗೇಲ್.... ಎಲ್ಲಿ ನಿನ್ನ ಪವಿತ್ರ ಆದರ್ಶ? ಹೆಣ್ಣಾಗಿ ಹುಟ್ಟಿ ಹೆಂಡತಿಯಾಗಿ ಬಾಳಿವಾರೆ ಸಾವಿ ರಾರು ಮಂದಿ.... ನಿನ್ನಂತೆ ಜಗತ್ತಿಗೇ ತಾಯಾಗಿ, ತಂಗಿಯಾಗಿ ಸೇವೆ ಮಾಡಿದವರು ಎಷ್ಟು ಮಂದಿ ತಾಯಿ? ಭೋಗಭಾಗ್ಯ ಬಿಟ್ಟು ತ್ಯಾಗ ಜೀವನಾನ ಆಯ್ದ ಮಹಾತಾಯಿ ನೀನು.... ನೋಡು ಇವರನ್ನ.... ಧನಪಿಶಾಚಿ ಹಿಡಿದಿರೋ ಈ ರಕ್ಕಸೀರನ್ನ.... ನರಕದಲ್ಲಿ ಇವರಿಗೆ ಕೆಲಸ ಕೊಡ್ಬೇಕು—ಅದೇ ಇವರಿಗೆ ಸರಿಯಾದ ಸ್ಥಳ...."

ಆ ಸಿಡುಕಿ ನರ್ಸ್ ಮತ್ತೆ ಬಂದಳು:

"ಏನಯ್ಯಾ ನಿನ್ನ ಒದರಾಟ—ಎಲ್ಲರಿಗೂ ನಿದ್ರೆಗೆಡಿಸುತಿ-ದೀಯ— ಬಾಯಿ ಮುಚ್ಚಿಕೊಂಡು ಮಲಗಿಕೋಬಾದ್ದೇ?"

"ನೋಡು, ನೋಡು, ಲೀಲಾ. ಮೃತ್ಯುದೇವತೆ ಹೊಗೆ ಕಾರುತ್ತಾ ಹೇಗೆ ಈಕೆಯ ಬಾಯಿಂದ ಹೊರಗೆ ಬರ್ತಾ ಇದಾಳೇಂತ! ಈಕೆಯ ಮುಖ ಕಂಡು ಎದೆ ಒಡೆದೇ ಪ್ರಾಣಬಿಡ್ತಾರೆ! ಆಸ್ಪತ್ರೇನ ಖಾಲಿ ಮಾಡುವಾಕೆಯಿವಳು!"

"ಸಿಕ್ಕಿದಂತೆ ನಾಲಿಗೇನ ಹರಿಬಿಡ್ತೀಯೇನಯ್ಯಾ? ಸುಮ್ಮನೆ ಇರ್ತಿಯೋ ಬಾಯಿಗೆ ಬಟ್ಟೆ ತುರುಕಲೋ?"

ಸಾತ್ವಿಕ ಸಂತಾಪದಿಂದ ಲೀಲಳ ನಾಡಿ-ನಾಡಿಯೂ ಉರಿ ಯಿತು.

"ನರ್ಸಮ್ಮಾ—ಜ್ವರದ ತಾಪಕ್ಕೆ ಮೈಮೇಲೆ ಪ್ರಜ್ಞೆಯಿಲ್ಲದೆ ಅವರೇನೇನೋ ಮಾತಾಡ್ತಾರೆ— ಅವರನ್ನೇಕೆ ಹೆದರಿಸುತ್ತೀರಿ— ನೈಟ್‌ಡ್ಯೂಟಿ ಡಾಕ್ಟರನ್ನ ಕೂಗಿ-ಏನಾದರೂ ಇಂಜಕ್ಷನ್ ಕೊಡಲಿ!"

"ಬಲೇ ಬೂಟಾಟಿಕೆಯ ಮನುಷಾ—"

—ಎಂದು ಗೊಣಗಿಕೊಂಡು ಹೋದಳು ನರ್ಸ್.

ಒಬ್ಬ ರೋಗಿ ತುಂಬಾಗಲಾಟೆ ಮಾಡುತ್ತ ಎಲ್ಲರ ನಿದ್ರೆ-ಯನ್ನೂ, ಕೆಡಿಸುತ್ತಿರುವನೆಂದು ಹೇಳಿ, ನರ್ಸ್ ನೈಟ್‌ಡ್ಯೂಟಿಯ ಡಾಕ್ಟರನ್ನು ಕರೆತಂದಳು. ರಾಜಣ್ಣನೆದುರಿಗೇ ಅವನ ಉದ್ಧಟತನ ವನ್ನು ಡಾಕ್ಟರಿಗೆ ವರ್ಣಿಸಿದಳು. ವಾರ್ಡ್ ಬಾಯ್ ತಾನೂ ಧ್ವನಿ-ಗೂಡಿಸಿದ.

ಇಂತಹ ಸಂದರ್ಭದಲ್ಲಿ ಡಾಕ್ಟರ್ ರೋಗಿಗಳ ಪಕ್ಷ ವಹಿಸು-ವುದು ಅಪರೂಪವಷ್ಟೇ!

"ಏನಪ್ಪಾ, ಆಷ್ಟು ಗಲಾಟೆ ಏಕೆ? ನಿನಗಿಷ್ಟವಿಲ್ಲದಿದ್ದರೆ ಈಗಲೇ ಆಸ್ಪತ್ರೆಯಿಂದ ಹೊರಡು!"

"ಹೌದೂ ಡಾಕ್ಟರ್, ತನ್ನದೇ ಆಸ್ಪತ್ರೆ ಅನ್ನುವಂತೆ ಆಡ್ತಾನೆ— ಆಷ್ಟು ನಿಗಾ ಬೇಕು ಅಂತಿದ್ದರೆ, ಸ್ಪೆಷಲ್ ವಾರ್ಡ್ ತೆಗೆದುಕೊಳ್ಳಲಿ!"

ನಿರಾಯುಧನ ಮೇಲೆ ಸಶಸ್ತ್ರಧಾಳಿ ಮಾಡುವ ಬಲಿಷ್ಠರಂತೆ, ಜ್ವರದ ಬೇಗೆಯಿಂದ ಬಳಲಿದ್ದ ರಾಜಣ್ಣನ ವಿರೋಧವಾಗಿ ಎಲ್ಲರೂ ಒಂದಾಗಿ ನಿಂತಿದ್ದನ್ನು ಕಂಡು ಲೀಲಾ—ಮರಿಯ ರಕ್ಷಣೆಗೆ ಧಾವಿ ಸುವ ಸಿಂಹಿಣಿಯಂತೆ—ಕೆರಳಿ ನಿಂತಳು:

"ಏನ್ರೀ, ನೋಡೋಕೆ ಬಡವರಂತಿದ್ದೀವೆ ಅಂತ ಹೀಗೆಲ್ಲಾ ಮಾತ್ನಾಡ್ತಾ ಇದ್ದೀರಾ? ನಮಗೆ ಕುಲಕ್ಕೆ ಬಡಪತನವಿಲ್ಲ. ಆರೋಗ್ಯ-ಮಂತ್ರಿಗಳು ನನ್ನ ಖಾಸಾ ಚಿಕ್ಕಪ್ಪ. ಆಸ್ಪತ್ರೆಗೆ ಸೇರಿ ಅಂತ ಅವರು ಕಾಗದ ಬರೆದ ಮೇಲೆಯೇ ಇಲ್ಲಿಗೆ ಸೇರಿದ್ದು. ಇನ್ನು ಎರಡು-ಮೂರು ದಿನಗಳಲ್ಲಿ ನನ್ನ ಚಿಕ್ಕಪ್ಪ ಈ ಊರಿಗೆ ಬರ್ತಾರಂತೆ. ಅವ-ರಿದುರಿಗೇ ಎಲ್ಲಾ ಹೇಳ್ತೀನೆ."

ಲೀಲಳ ಕೆಂಪೇರಿದ ಮುಖ, ಉದ್ವೇಗದಿಂದ ಕಂಪಿಸುತ್ತಿದ್ದ ಧ್ವನಿ ತತ್‌ಕ್ಷಣ ಪ್ರಭಾವ ಬೀರಿತು. ಡಾಕ್ಟರರು, ನರ್ಸ್ ಮುಖ ಮುಖ ನೋಡಿಕೊಂಡರು.

ಡಾಕ್ಟರರ ಬಗೆಯೇ ಬದಲಿಸಿತು!

(ಮುಂದಿನ ಪುಟ ನೋಡಿರಿ)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಕೇಳಿಕೊಂಡ ಮೇರೆಗೆ **"ಹಸುಳೆ ಮತ್ತು ಸೂಳೆ"** ಕಥೆಯನ್ನು ವಿಮರ್ಶಿಸಿ ಎಂಟು ಜನರು ಲೇಖನಗಳನ್ನು ಕಳುಹಿಸಿದ್ದಾರೆ. ವಿಮರ್ಶೆಗೆಂದು ಇರಿಸಿದ ಇನ್ನೊಂದು ಕಥೆಯನ್ನು ಕುರಿತು ಒಬ್ಬರಿಂದಲೂ ವಿಮರ್ಶೆ ಬಂದಿಲ್ಲ.

ವಿಮರ್ಶಕರ ಪರಿವಿಡಿ :

೧ ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ. ೨ ಶ್ರೀ. ಕು. ಮಾ. ಶ್ರೀನಿವಾಸ, ಪನವೇಲ. ೩ ಶ್ರೀ. ಡಿ. ರಾಮಕೃಷ್ಣ ಭಟ್ಟ, ಬಿ. ಇ. ಎಂ. ಹೈಸ್ಕೂಲ್, ಕಾಸರಗೋಡು. ೪ ಶ್ರೀ. ಸೀತಾರಾಮು, ಪಾಡಿ, ಎಂ. ಎ. ಯು. ಪಿ. ಸ್ಕೂಲ್. ಕಲ್ಲಕಟ್ಟಾ. ೫ ಶ್ರೀ. ಎಂ. ಗಂಗಾಧರಭಟ್ಟ, ನೀರ್ಚಾಲು. ೬ ಶ್ರೀ. ನಾಗಪ್ಪಗೌಡ ಕುತ್ಯಾಳ, ಮುಂಗಳೂರು. ೭ ಶ್ರೀ. ವಿ. ಟಿ. ಜೋಶಿ, ನ್ಯೂ ಇಂಗ್ಲಿಷ್ ಸ್ಕೂಲ್, ಹುಬ್ಬಳ್ಳಿ. ೮ ಶ್ರೀ. ಕೆ. ನುರಿಯಪ್ಪಗೌಡ, ತೀರ್ಥಹಳ್ಳಿ.

ಬಂದಿರುವ ಎಲ್ಲ ವಿಮರ್ಶೆಗಳನ್ನು ಸಂಪಾದಕ ಸಮಿತಿಯವರೇ ನೋಡಿ ತಮ್ಮ ನಿರ್ಣಯವಿತ್ತಿದ್ದಾರೆ :

ಶ್ರೀ. ಎಸ್. ಆರ್. ಹಾಡಿಯವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಕು. ಮಾ. ಶ್ರೀನಿವಾಸ, ಪನವೇಲ; ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ ಇವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವು ಒಳ್ಳೆಯ ವಿಮರ್ಶೆಗಳೆ.

"ಹಸುಳೆ ಮತ್ತು ಸೂಳೆ" ಕತೆಯ ಬಗೆಗೆ ಬಂದ ಯಾವ ವಿಮರ್ಶೆಯೂ ತೀರ ಸಾಮಾನ್ಯವೆನಿಸುವಂತಿಲ್ಲ. ಎಲ್ಲ ವಿಮರ್ಶಕರೂ ಕತೆಯ ಮರ್ಮವನ್ನು ಚೆನ್ನಾಗಿ ಅರಿತುಕೊಂಡು ವಿಮರ್ಶಿಸಿರುವುದು ಸಮಾಧಾನ ಪಡಬೇಕಾದಂತಹ ಮಾತಾಗಿದೆ.

ಮುಂದಿನ ತಿಂಗಳ ವಿಮರ್ಶೆಯ ಶಿಕ್ಷಣರಂಗಕ್ಕಾಗಿ **" ಅನಾಗರಿಕರು "** ಎಂಬ ಕಥೆಯನ್ನಾಗಲಿ, **" ಮಾಡಿದ್ದುಣ್ಣೋ ಮಾರಾಯಾ "** ಎಂಬ ತರಂಗರೂಪಕವನ್ನಾಗಲಿ ಕುರಿತು ಬರೆದ ವಿಮರ್ಶೆಗಳನ್ನು ತಾ. ೨೦-೭-೫೯ರ ಒಳಗಾಗಿ ತಲ್ಪುವಂತೆ ಕಳುಹಬೇಕು.

ಸಂಪಾದಕರು

" ಕೋಪಿಸಬೇಡೀಮ್ಮಾ! ಜ್ವರದ ತಾಪ.... ಹೀಗೆ ಬಡಬಡಿಸಿದರೆ ಬಾಯಾರಿಕೆಯಾಗುತ್ತೆ ಅಂತ ಹಾಗೆ ಹೇಳಿದೆ. ಈಗ ಇಂಜಕ್ಷನ್ ಕೊಡ್ತೇನೆ. ನಿದ್ದೆ ಬರುತ್ತೆ. ಜ್ವರವೂ ಇಳಿಯುತ್ತೆ."

—ಎಂದು ನಮ್ರವಾಗಿ ಮಾತನಾಡಿ ಇಂಜಕ್ಷನ್ ಕೊಟ್ಟು ಹೋದರು.

ನರ್ಸಿನ ನಡೆವಳಿಕೆಯೂ ಬದಲಿಸಿತು. ಸಿಡಿಸಿಡಿಗುಟ್ಟುವುದನ್ನು ಬಿಟ್ಟು ಬಹಳ ನಯವಾಗಿ ಮಾತನಾಡುತ್ತಿದ್ದಳು. ಕಳಕಳಿಯಿಂದ ವಿಚಾರಿಸಿದಳು.

ಅಂದಿನಿಂದ ನಾರಣಪ್ಪನಿಗಾಗಿದ್ದಂತೆ ರಾಜಣ್ಣನಿಗೂ ಅಲ್ಲೇ ಸ್ಪೆಷಲ್ ವಾರ್ಡಿನ ಉಪಚಾರ ದೊರಕುತ್ತಿತ್ತು.... ಮಾರನೆಯ ದಿನವೇ ನೆಲದಿಂದ ಮಂಚಕ್ಕೆ ರಾಜಣ್ಣನಿಗೆ 'ಪ್ರಮೋಷನ್' ಸಿಕ್ಕಿತು.

ಅನಿವಾರ್ಯ ಕಾರಣದಿಂದ ಮಂತ್ರಿಗಳ ಪ್ರವಾಸ ಒಂದು ವಾರ ಮುಂದೆಹೋಯಿತು. ಮಂತ್ರಿಗಳು ಪ್ರವಾಸ ಬರುವ ವೇಳೆಗೆ ರಾಜಣ್ಣ ಪೂರ್ಣ ಗುಣಮೊಂದಿದ್ದ.

" ಆರೋಗ್ಯ ಮಂತ್ರಿಗಳು ನಿನ್ನ ಚಿಕ್ಕಪ್ಪ ಎನ್ನುವ ವಿಷಯ ನನಗೆ ತಿಳಿದೇ ಇರಲಿಲ್ಲ. ಹೇಗೆ ನಿನಗೆ ಸಂಬಂಧ ಆಗಬೇಕು? ನಿನ್ನ ತಾಯಿಯ ಕಡೆಯಿಂದಲೋ, ತಂದೆಯ ಕಡೆಯಿಂದಲೋ?" ರಾಜಣ್ಣ ಬೆರಗಿನ ಧ್ವನಿಯಲ್ಲಿ ಕೇಳಿದ.

" ಎರಡು ಕಡೆಯಿಂದಲೂನೂ—ನಮ್ಮ ತಾಯಿಯ ತಾತ! ನಮ್ಮ ತಂದೆಯ ತಾತ, ಮಂತ್ರಿಗಳ ತಾತ—ಮೂವರೂ ಸ್ವರ್ಗದಲ್ಲಿ ಒಂದೇ ಕೊಠಡೀಲಿ ವಾಸಮಾಡ್ತಾ ಇದ್ದರಂತೆ."

—ಎಂದು ಲೀಲಾ ನಕ್ಕಳು.

" ಹಾಗಂದರೆ ?"

" ಅಯ್ಯೋ, ಅಷ್ಟೂ ತಿಳೀಲಿಲ್ವೇಂದ್ರೆ— ಸಂಬಂಧವೂ ಇಲ್ಲ, ಏನೂ ಇಲ್ಲ— ವೇಪರಿನಲ್ಲಿ ಅವರು ಬರೋ ವಿಷಯಾನ ಓದಿದ್ದೆ. ಸಮಯ ಸ್ಫೂರ್ತಿಯಿಂದ ಹಾಗೆ ಹೇಳಿದೆ. ಆದರೆ ಮಂತ್ರಿಗಳು ನಮ್ಮ ಊರಿಗೆ ಓಟಿನ ಬೇಟೆಗೆ ಬಂದಿದ್ದರು, ಅನ್ನಿ. ಆಗ ಅಪರನ್ನು ನೋಡಿದ್ದೆ. ಆಧೈರ್ಯದ ಮೇಲೆ ಸುಳ್ಳ ಪೋಣಿಸಿದೆ."

ಇಬ್ಬರೂ ಮನದಣಿಯೆ ನಕ್ಕರು.

ಹಸುಳೆ ಮತ್ತು ಸೂಳೆ

[ಸಣ್ಣ ಕಥೆಯ ವಿಮರ್ಶೆ]

ಡಿ. ಎಸ್. ಆರ್. ಪಾಡಿ, ಕಲ್ಲಕಟ್ಟ

ಈ ನವಯುಗದಲ್ಲಿ ವಿಜ್ಞಾನವು ಕಲ್ಪನಾತೀತವಾದ ಉನ್ನತಿಯನ್ನು ಸಾಧಿಸುತ್ತಾ ನಡೆದಿದೆ. ಅದರ ಬೆನ್ನುಹತ್ತಿ ಮಾನವನು ಇಂದು ನವನಾಗರಿಕನೆನಿಸಿಕೊಂಡಿದ್ದಾನೆ. ವಾಸ್ತವವಾಗಿ ನೋಡಿದರೆ, ನಾಗರಿಕರೆಂದು ಹೇಳಿಕೊಳ್ಳುವ ಇಂದಿನ ಜನರ ಹೃದಯದಲ್ಲಿ ಮಾನವತೆಯೆಂಬುದು ಲವಲೇಶವಾದರೂ ಕಂಡುಬರುವುದಿಲ್ಲ. ಆಸುರೀ ಮನೋವೃತ್ತಿಯು ಹೃದಯದ ಕೋಮಲವಾದ ಕರುಣೆ, ಸಹಾನುಭೂತಿ ಮೊದಲಾದ ಸಾತ್ತ್ವಿಕ ಗುಣಗಳ ಮೇಲೆ ವಿಜಯವನ್ನು ಸಾಧಿಸಿದೆ. ಜಗತ್ತಿನಲ್ಲಿ ಎಲ್ಲಿ ನೋಡಿದರಲ್ಲಿ ಕ್ಷುದ್ರ ಸಂಕುಚಿತ ಸ್ವಾರ್ಥ ಮನೋಭಾವಗಳು ತಾಂಡವವಾಡುತ್ತಿವೆ. ಕರುಣೆಯ ಸೆಲೆಯುಕ್ಕೆ ಹರಿಯಬೇಕಾದ ಮಾನವಹೃದಯ ಬರಿಯ ಬಂಜರು ಭೂಮಿಯಾಗಿದೆ. ಇಂತಹ ಹೃದಯವಿಲ್ಲದ ಬಾಹ್ಯಾಡಂಬರದ ನಾಗರಿಕರಿಂದಲೇ ತುಂಬಿ ಹೋಗಿದೆ ನಮ್ಮ ಸಮಾಜ. ಅದರೂ ಇಲ್ಲೊಂದು ಅಲ್ಲೊಂದು ಎಂಬಂತೆ ಮಾನವತೆಯ ಬೆಳಕಿನಿಂದ ಬೆಳಗುವ ವ್ಯಕ್ತಿಗಳು ಸಮಾಜದಲ್ಲಿರುತ್ತಾರೆ. ಯಾರನ್ನು ಸಮಾಜ, ಹೀನರೆಂದು ಕಡೆಗಣಿಸುತ್ತದೋ—ಅಂತಹವರಲ್ಲಿ ಕೂಡ ಮಾನವತೆಯಿದೆ; ಆದರೆ ಸಭ್ಯತೆಯ ಸೋಗಿನಲ್ಲಿ ನಡೆಯುವ ನಾಗರಿಕರ ಅಂತರಂಗದಲ್ಲಿ ಪಶುತ್ವವು ಮನೆಮಾಡಿದೆ—ಎಂಬುದನ್ನು ಚಿತ್ರಿಸುವ ಸಮಾಜದ ನೈಜಚಿತ್ರಣವೇ ದು. ನಿಂ. ಬೆಳಗಲಿಯವರ **'ಹಸುಳೆ ಮತ್ತು ಸೂಳೆ.'**

ಸಕ್ಕರೆ ಕಾರ್ಖಾನೆಯ ಬಡ ಕೂಲಿಕಾರನ ಪತ್ನಿ ಮುರುಕು ಮನೆ ಅಪ್ಪಳಿಸಿ ಬಿದ್ದು ತೀರಿಹೋಗಿರುತ್ತಾಳೆ. ಹೇಗೋ ಪಾರಾಗಿ ಉಳಿದ ತಬ್ಬಲಿ ಮಗುವಿನ ಲಾಲನೆ-ಪಾಲನೆಗಳನ್ನು ಮಾಡಲಾರದೆ, ಅದನ್ನು 'ಮುಧೋಳ'ದಲ್ಲಿರುವ ತನ್ನ ತಂಗಿಯ ಹತ್ತಿರ ಬಿಡುವುದಕ್ಕಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾನೆ ಆತ. ಜನರಿಂದ ತುಂಬಿದ ಬಸ್ಸಿನಲ್ಲಿ ಕುಳಿತುಕೊಳ್ಳಲೂ ಸ್ಥಳವಿಲ್ಲದೆ, ಒಂಟೆಕಾಲಿನಲ್ಲಿ ನಿಂತು, ಒಂದು ಕೈಯಿಂದ ಮಗುವನ್ನು ಎದೆಗೆ ಅಮುಕಿ ಇನ್ನೊಂದು ಕೈಯಲ್ಲಿ ಚೀಲ ಹಿಡಿದು ಬಹಳ ಕಷ್ಟದಿಂದ ಪ್ರಯಾಣ ಮಾಡುತ್ತಾನೆ. ಇಷ್ಟಾದರೂ ಬಸ್ಸಿನಲ್ಲಿದ್ದ ಯಾವನೊಬ್ಬನಿಗೂ ಅವನ ಮೇಲೆ ದಯೆ ಬರಲಿಲ್ಲ. ಅವನಿಗೆ ಜಾಗ ಕೊಡಲೂ ಇಲ್ಲ. ಅಳುತ್ತಿರುವ ಮಗುವನ್ನೂ ಮಗುವಿನ ತಂದೆಯನ್ನೂ ತಿರಸ್ಕಾರದಿಂದ ನೋಡಿ ಹೀಸೈಸಿ ಬೈಗಳ ಮಳೆಯನ್ನು ಸುರಿಸುವುದಲ್ಲದೆ, ವ್ಯಂಗ್ಯೋಕ್ತಿಯ ಕೂರಲುಗುಗಳಿಂದ ಇರಿಯುತ್ತಾರೆ. ಕಡೆಗೆ ಬಸ್ಸನ್ನೇರಿದ ಹಳ್ಳಿಯ ಸೂಳೆಯೊಬ್ಬಳು ಆ ಪರಿಸ್ಥಿತಿಯನ್ನು ಕಂಡು, ಮಗು ಮತ್ತು ಆ ತಂದೆಯ ಮೇಲೆ ಕನಿಕರಗೊಂಡು, ತನ್ನ ಜಾಗ ಬಿಟ್ಟಿದ್ದು ಅವನನ್ನು ಕುಳಿತುಕೊಳ್ಳುವಂತೆ ಹೇಳಿದಳು. ಅವನನ್ನು ವಿಚಾರಿಸಿ ಎಲ್ಲಾ ಸಂಗತಿ ತಿಳಿದಬಳಿಕ, ತಾನೇ ಆ ಮಗುವನ್ನು ತೆಗೆದುಕೊಂಡು ತಿಂಡಿಯಿತ್ತು ಸಮಾಧಾನಪಡಿಸುನಳು. ಮಗು ಆಕೆಯ ಮಡಲಿನಲ್ಲಿ ಸುಖವಾಗಿ ನಿದ್ರಿಸುತ್ತದೆ. ಇದಿಷ್ಟು ಕಥಾನಸ್ತು. ಬಸ್ಸಿನ ಪ್ರಯಾಣದ ಈ ಚಿಕ್ಕ ಘಟನೆಯನ್ನು ತೆಗೆದುಕೊಂಡು ಲೇಖಕರು ಅಂದವಾಗಿ ಕಥೆಯನ್ನು ಹೆಣೆದಿದ್ದಾರೆ.

ಈ ಕಥೆಯಲ್ಲಿ ಬರುವ ಮುಖ್ಯ ಪಾತ್ರಗಳೆಂದರೆ ಕೂಲಿಕಾರ, ಅವನ ಮಗು (ಹಸುಳೆ) ಮತ್ತು ಸೂಳೆ ಇವು ಮೂರು. ಉಳಿದ ಪಾತ್ರಗಳಾದ ಕಂಡಕ್ಟರ್, ವ್ಯಾಪಾರಿ, ದೇಶಭಕ್ತ, ಹೆಡಿಗೆಯಂಥರುಮಾಲಿನವ, ವ್ಯಂಗ್ಯೋಕ್ತಿಕಾರರು, ಹಳ್ಳಿಯ ತರುಣ, ತರುಣಿ, ಸಮಾಜಶಿಕ್ಷಣ ಕಾರ್ಯದರ್ಶಿನಿ, ಸೂಟುದಾರಿ, ಕಲ್ಲೀಮಾಸೆಯ ಮಲ್ಲ—ಎಲ್ಲವೂ ಪೋಷಕ ಪಾತ್ರಗಳಾಗಿದ್ದು, ಸಮಾಜದ ವಿವಿಧ ಮುಖಗಳನ್ನು ಚಿತ್ರಿಸಲು ಸಹಾಯಕಾರಿಗಳಾಗಿವೆ.

ಮೊದಲಾಗಿ ಕೂಲಿಕಾರನನ್ನು ಗದರಿಸುತ್ತಾ ನಮ್ಮ ಕಣ್ಣಿಗೆ ಬೀಳುವವನೇ ಕಂಡಕ್ಟರ್ ಮಹಾಶಯ. "ಸ್ವಲ್ಪ ನಿಲ್ರಿ, ಚಹಾ ತರತಾನು; ಮಗು ಹಸಿದೈತಿ" ಎಂಬ ಮಗುವಿನ ತಂದೆಯ ನಮ್ರ ಬೇಡಿಕೆಗೆ ಬೆಲೆ ಕೊಡದೆ "ಇವೇನು ನಿಮ್ಮಪ್ಪನ ಮನೀ ಗಾಡಿ ಅಲ್ಲ! ಟಾಯಿಂ ಆಗೇತಿ" ಎಂದು ನಿರ್ದಯವಾಗಿ ಗಂಟೆಯನ್ನು ಬಾರಿಸಿದ, ನಾತ. ಎಂತಹ ಕಠೋರ ಹೃದಯ! ಬಡ ಜನರ ಮೇಲೆ ಕಂಡಕ್ಟರ್ ನಿಗೂ ಎಷ್ಟು ತಿರಸ್ಕಾರ! ತರುಣಿಯೊಬ್ಬಳು ಮೇಲೇರಿದಾಗ, ಇದೇ ಕಂಡಕ್ಟರನು ಕಣ್ಣು ಕುಣಿಸಿ ಮಾತನಾಡುತ್ತಾನೆ. ಕೂಲಿಕಾರ ಮತ್ತು ಆ ತರುಣಿಯೊಡನೆ ಅವನ ವರ್ತನೆ ಅದೆಷ್ಟು ಭಿನ್ನ!

ಒಂಟೆಗಾಲಿನಲ್ಲಿ ನಿಂತು ಸೋತ ಮಗುವಿನ ತಂದೆ ಕುಳಿತುಕೊಳ್ಳಲು ಜಾಗ ಕೇಳಿದಾಗ, ಮುಖಮುಲ್ ಟೊಪ್ಪಿಗೆಯ ವ್ಯಾಪಾರಿಯು ಅವನನ್ನು ಪರಿಪರಿ ತಿನ್ನುವವನಂತೆ ನೋಡುತ್ತಾ "ಏನಪ್ಪಾ, ಇರಿವಿ ಹೋಗಲಾಕ ಜಾಗ ಇಲ್ಲ, ಮತ್ತೆ ಕೇಳ್ತಿ! ನಮ್ಮ ತಲೀಮ್ಯಾಲ ಕೂಡು, ತಲೀಮ್ಯಾಲ!" ಎಂದು ಗದರಿಸುತ್ತಾನೆ. ಆತನಿಗೆ ಜಾಗ ಕೊಡುವ ಸದ್ಬುದ್ಧಿ ವ್ಯಾಪಾರಿಗೆ ಬರಲಿಲ್ಲ. ಮುಖಮುಲ್ಲ ಟೊಪ್ಪಿಗೆಯನ್ನಿಟ್ಟುಕೊಂಡ ದೊಡ್ಡ ವ್ಯಾಪಾರಿ! ಆದರೆ ಅವನ ಹೃದಯವೆಷ್ಟು ಸಂಕುಚಿತ ಮನೋಭಾವನೆಯಿಂದ ಕೂಡಿದೆ!

ಬಸ್ಸಿನಲ್ಲಿದ್ದವರೆಲ್ಲರೂ ಮಗುವನ್ನೂ ಅದರ ತಂದೆಯನ್ನೂ ತಿರಸ್ಕಾರ ತುಂಬಿದ ದೃಷ್ಟಿಯಿಂದ ನೋಡುತ್ತಾರೆ. ಮಗುವನ್ನು ನೋಡಿ ಅಸಹ್ಯಪಡುತ್ತಾರೆ. 'ಮಾನವೆ ಬರದಿದ್ದರೂ, ಒಂದಿಬ್ಬರು ಮೂಗನ್ನು ಕೂಡಾ ಮುಚ್ಚಿಕೊಂಡಿದ್ದರು' ಎಂದು ಹೇಳದ ಲೇಖಕರ ಮಾತಿನಲ್ಲಿ ಬಹಳ ಸ್ವಾರಸ್ಯವಿದೆ

ಗಾಂಧೀ ಟೊಪ್ಪಿಯನ್ನು ಧರಿಸಿ ದೇಶಭಕ್ತರ ಸೋಗಿನಿಂದ ಜನರನ್ನು ವಂಚಿಸುವವನ ಕಡೆಗೂ ಲೇಖಕರು ಸಂಕೇತ ಮಾಡಿದ್ದಾರೆ. ಮಗು ಕಾಲು ಜಾಡಿಸಿ ಅಳುತ್ತಿರುವಾಗ, ಅವರ ಕಾಲು ಅಂತಹ ವೇಶಭಕ್ತ ನೊಬ್ಬನ ಟೊಪ್ಪಿಗೆಯ ಹಿಂಭಾಗಕ್ಕೆ ತಾಗಲು, ಅವನು ಪರಿಹಾಯ್ದು ಆ ಮಗುವಿನ ತಂದೆಯನ್ನು ಹೊಡೆದುಬಿಡುವನೋ ಎಂಬಂತೆ ಎದ್ದು "ಏಯ್ ಕಾಣಿಸೂದಿಲ್ಲೇನೊ! ನೈಮ್ಯಾಲ ಎಚ್ಚರವತನೋ ಇಲ್ಲೋ!" ಎಂದು ಗದರಿಸುತ್ತಾನೆ. ಅರಿಯದ ಹಸುಳೆಯ ಕಾಲು ತಾಗಿದರೆ ಆಗುವ ಕೆಡುಕೇನು? ಅದಕ್ಕಾಗಿ ಗದರಿಸುವವನಿಗೆ ಹೃದಯವೇ ಇಲ್ಲವೆನ್ನಬೇಕು. ಅವನೊಬ್ಬ ಕಲ್ಲೆದೆಯ ಕಟುಕ. ಈ ಸಂದರ್ಭದಲ್ಲಿಯ ಲೇಖಕರ ವ್ಯಂಗ್ಯೋಕ್ತಿ ಅತ್ಯಂತ ಮಾರ್ಮಿಕವಾಗಿದೆ. "ಪಾಪ ಆ ಮಗುವಿಗೇನು ಗೊತ್ತು ಆ ಟೊಪ್ಪಿಗೆ ಕಾಂಗ್ರೆಸಿನ ಕಿರೀಟ ಎಂದು? ಪವಿತ್ರವಾದ ಆ ಶುಭ್ರ ಟೊಪ್ಪಿಗೆ, ಮಗುವಿನ ಕೊಳೆಯಾದ ಕಾಲಿನಿಂದ ದೂಷಿತವಾದರೆ ಖಾದಿಗೆ ಕಲಂಕ ಅಲ್ಲವೆ?" "ಅವರ ಟೊಪ್ಪಿಗೆ ಸ್ವದೇಶಿ; ಆ ಮಗು ಪರದೇಶಿ."

ಕೂಲಿಗಾರನ ಕೈಯಲ್ಲಿದ್ದ ಚೀಲ ಹೆಡಿಗೆಯಂಥ ರುಮಾಲಿನವನ ತಲೆಗೆ ಸೋಕಿದಾಗ, ಅವನು ಮೂಗು ಮುರಿದು "ಚೀಲಾ ನನ್ನ ತಲೀಮ್ಯಾಲ ಇಡತೀಯೇನು! ನೋಡು!" ಎನ್ನುತ್ತಾನೆ. ಹೀಗೆ ಪ್ರತಿಯೊಬ್ಬನಿಂದಲೂ ಆ ಬಡವನಿಗೆ ಬೈಗುಳಿನ ಸುರಿಮಳೆ. ಇದಲ್ಲದೆ ಕೆಲವರು "ಅಂವ ತಂದಾನ ಅಂದಮ್ಯಾಲ ತಾನು ಮೊಲಿ ಕುಡಿಸಿ ಸಮಾಧಾನ ಮಾಡ್ತಾನಲ್ಲ....! ಹಹ....!" ಎಂಬ ಕುಹಕ ವ್ಯಂಗ್ಯೋಕ್ತಿಗಳಿಂದ ಇರಿಯುತ್ತಾರೆ. ಆದರೂ ಎಲ್ಲವನ್ನೂ ಸಹಿಸಿಕೊಂಡ ಆ ದೀನ ತಂದೆ.

ತರುಣಿಯೊಬ್ಬಳು ಬಸ್ಸನ್ನೇರಿದಾಗ, ಹಳ್ಳಿಯ ತರುಣ ಅವಳಿಗೆ ತನ್ನ ಜಾಗವನ್ನಿತ್ತ. ಆದರೆ ಕಷ್ಟಪಡುತ್ತಿರುವ ಈ ಕೂಲಿಗಾರನಿಗೆ ಕೊಡಲಿಲ್ಲ. ಆ ತರುಣಿಯ ಮೆಚ್ಚಿಗೆ ಪಡೆಯಬೇಕೆಂದು ಆತ ಅವಳಿಗೆ ಜಾಗವಿತ್ತ; ಆದರೆ ಅವಳಿಂದ ಪ್ರತ್ಯುಪಕಾರವೇನೂ ಬಾರದೆ ನಿರಾಶನಾದ.

ಸಕ್ಕರೆ ಕಾರ್ಖಾನೆಯ ಬಡ ಕೂಲಿಗಾರ, ದೀನತೆಯ ಮೂರ್ತಿಯಾಗಿ ಕಥೆಯ ಪ್ರಾರಂಭದಲ್ಲೇ ನಮ್ಮ ಕಣ್ಮುಂದೆ ನಿಲ್ಲುತ್ತಾನೆ. ಎಡಗೈಯಲ್ಲಿ ಮಗುವನ್ನು ಎದೆಗೆ ಅಮುಕಿ, ಬಲಗೈಯಲ್ಲಿ ಕೈಚೀಲ ಹಿಡಿದು, ಒಂಟಿಗಾಲಲ್ಲಿ ನಿಂತು ಮಗುವನ್ನು ಸಮಾಧಾನಪಡಿಸಲಾರದೆ, ಚಡಪಡಿಸುವ ಅವನ ಪರಿಸ್ಥಿತಿ ನಿಜವಾಗಿಯೂ ಕರುಣಾಜನಕವಾಗಿದೆ. ಆದರೆ ಬಸ್ಸಿನಲ್ಲಿದ್ದ ನಾಗರಿಕರಿಗೆ ಅವನ ಮೇಲೆ ದಯೆ ಬರಲಿಲ್ಲ. ಮಗುವಿನ ಚೀರಾಟದಿಂದ ಬೇಸತ್ತ ಅವರೆಲ್ಲರ ಕ್ರೋಧ ತುಂಬಿದ ತಿರಸ್ಕಾರ ದೃಷ್ಟಿ, ಆ ತಂದೆಯ ಮೇಲೆ ಕೇಂದ್ರೀಕೃತವಾಯಿತು. ಅದರ ಪರಿಣಾಮವಾಗಿ ಬೈಗುಳಿನ ವ್ಯಂಗ್ಯೋಕ್ತಿಗಳ ಸುರಿಮಳೆಯಾಯಿತು. "ಸ್ವಲ್ಪ ಸರಿದು ಜಾಗ ಕೊಡತೀರೇನು?" ಎಷ್ಟು ವಿನಯದಿಂದ ಕೇಳುತ್ತಾನೆ ವ್ಯಾಪಾರಿಯೊಡನೆ. ಯಾರ ಹೃದಯವಾದರೂ ಕರಗಬೇಕು. ಆದರೆ ಮುಮುಮಲ್ ಟೊಪ್ಪಿಗೆಯ ವ್ಯಾಪಾರಿ ನಿಷ್ಠುರವಾಗಿ ಗದರಿಸಿದ. ತನ್ನ ಮತ್ತು ತನ್ನ ಮಗುವಿನ ಕಡೆಗೆ ಎಲ್ಲರೂ ಬೀರುತ್ತಿರುವ ತಿರಸ್ಕಾರ ದೃಷ್ಟಿಯನ್ನು ಮೌನವಾಗಿ ಸಹಿಸಿದ. ಆದರೆ ಅವನ ಹೃದಯದಲ್ಲಿ ಎಂತಹ ನೋವಿನೆಯಾಗುತ್ತಿರಬಹುದು? ಅದನ್ನು ಊಹಿಸಲು ಮಾತ್ರ ಸಾಧ್ಯ. "ಅಳಬೇಡ ಚಿನ್ನಾ! ಮನ್ಯಾಗ ಅತ್ತಿ ತಿನಿಸು ಕೊಡತಾಳು; ಅಳಬಾರದಪ್ಪಾ, ಸುಮ್ಮನಾಗು." ಎಂದು ಮಗುವನ್ನು ಎದೆಗೊತ್ತಿ ಸಮಾಧಾನ ಮಾಡಲು ಯತ್ನಿಸುತ್ತಾನೆ. ಎಲ್ಲರ ವ್ಯಂಗ್ಯೋಕ್ತಿಗಳೂ ಬಂದು ಅವನನ್ನಿರಿಯುತ್ತವೆ. ಆದರೆ ಆತ ಮೌನವಾಗಿ ಎಲ್ಲವನ್ನೂ ಸಹಿಸಿದ ಕಲ್ಲೀಮಿಸೆಯ ಮಲ್ಲ ಬಸ್ಸಿನಿಂದಿಳಿಯುವಾಗ, ಮಗುವಿನ ತಲೆಗೆ ಬಿದಿರಿನ ದಂಡವನ್ನು ತಾಗಿಸಿದ. ಮಗು ಜೋರಾಗಿ ಅಳತೊಡಗಿತು. ತಾನು ತಪ್ಪು ಮಾಡಿಯೂ ಆ ಮಲ್ಲ ಮಗುವಿನ ತಂದೆಯನ್ನೇ ಬೈದ. ಅಲ್ಲದೆ ಅವನ ಕಾಲನ್ನು ಮೆಟ್ಟುಗಾಲಿನಿಂದ ಬಲವಾಗಿ ಒದೆದ. ಇಷ್ಟನ್ನೂ ಸಹಿಸಿದ ಆ ಕೂಲಿಗಾರನ ತಾಳ್ಮೆ ಸಾಮಾನ್ಯವಲ್ಲ. ಅವನೊಬ್ಬ ಕಷ್ಟಸಹಿಷ್ಣು,— ಶಾಂತಮೂರ್ತಿಯಾಗಿ ನಮಗೆ ಕಾಣುತ್ತಾನೆ. ಸೂಳೆಯು ಅವನ ಮೇಲೆ ಕನಿಕರಗೊಂಡು ತನ್ನ ಸ್ಥಾನವನ್ನು ಬಿಟ್ಟೆದ್ದು ಅವನನ್ನು ಕುಳಿತುಕೊಳ್ಳುವಂತೆ ಹೇಳಿದರೂ, ಮೊದಲು ಅವನು ಹಿಂದೆ-ಮುಂದೆ ನೋಡುತ್ತಾನೆ. ಕಡೆಗೆ ಅವಳ 'ಒಲವಿನ ಕಟ್ಟಾಜ್ಞೆ'ಗೆ ತಲೆಬಾಗಿ ಕುಳಿತುಕೊಂಡ. ಸೂಳೆ ಅವನ ಸಮಾಚಾರವನ್ನು ವಿಚಾರಿಸಿದಾಗ, ಅವನಿಗೆ ದುಃಖ ಉಮ್ಮಳಿಸಿ ಬಂತು. ಆಕೆಯ ಒತ್ತಾಯದಿಂದ ತನ್ನ ಸಂಗತಿಯನ್ನು ಗದ್ಗದಿತನಾಗಿ ಅವಳಲ್ಲಿ ತೋಡಿಕೊಂಡ.

ಕೂಲಿಕಾರನ ಮಗು— 'ಹಸುಳೆ'— ಈ ಕಥೆಯ ಕೇಂದ್ರ ಬಿಂದುವಾಗಿದೆ. ಆ ಹಸುಳೆಗೆ ಸಂಬಂಧಿಸಿಯೇ ಎಲ್ಲಾ ಘಟನೆಗಳೂ ನಡೆಯುತ್ತವೆ. ಆ ತಬ್ಬಲಿ ಮಗು ದರಿದ್ರತೆಯ ಪ್ರತೀಕವಾಗಿದೆ. ಲೇಖಕರು ಅದನ್ನು ಹೀಗೆ ವರ್ಣಿಸುತ್ತಾರೆ: "ಹೊಲಸು ಹರಕು ಅಂಗಿ; ಪರೆಗಟ್ಟಿದ ಬೂದೀ ಬಣ್ಣದ ಮೈ, ಎಣ್ಣೆಗಾಣದೆ ಒಣಗಿದ ಕಂದು ಬಣ್ಣಕ್ಕೆ ತಿರುಗಿದ ತಲೆಕೂದಲು, ಮಿಂಚುತ್ತಿರುವ ಮೂಗಿನ ಕೆಳಭಾಗ, ಎಲ್ಲ ಅಂಗಗಳನ್ನೂ ಹಿಂದುಳಿಸಿ— ತಾನೇ ಮುಂದಾದ ಹೊಟ್ಟೆ— ಎಲ್ಲರಲ್ಲಿಯೂ ಒಂದು ರೀತಿಯ ಅಸಹ್ಯ ಹುಟ್ಟಿಸಿದ್ದುವು." ನಿಮ್ನ ವರ್ಗದ ದಟ್ಟದರಿದ್ರ ಜನತೆಯ ಮಕ್ಕಳ ಯಥಾರ್ಥ ನಗ್ನಚಿತ್ರಣಕ್ಕೆ ಇದಕ್ಕಿಂತ ಹೆಚ್ಚು ಏನು ಬೇಕು? ಮಗುವಿನ ಮನೋವಿಜ್ಞಾನವನ್ನು ಲೇಖಕರು ಜೆನ್ನಾಗಿ ತಿಳಿದಿದ್ದಾರೆ. ಯಾವುದಾದರೊಂದು ಹೊಸ ವಸ್ತುವನ್ನು ಕಂಡಾಗ, ಅದನ್ನು ಮುಟ್ಟಲು ಮಗು ಬಯಸುತ್ತದೆ. ಅಳುತ್ತಿದ್ದ ಆ ಮಗುವಿಗೆ ಪಕ್ಕದಲ್ಲಿದ್ದ ತರುಣಿಯ ಸೀರೆಯ ಸೆರಗು ಅಂದವಾಗಿ ಕಂಡಿರಬೇಕು. ಆದುದರಿಂದ ಅದು, ಆ ಸೆರಗನ್ನು ಹಿಡಿದೆಳೆಯಿತು. ಆದರೆ ಆಕೆಗೆ ಸಹಿಸಲಾಗಲಿಲ್ಲ. ತಂದೆಯನ್ನು ಬೈಯುತ್ತಾ ಮಗುವಿನ ಕೈಯನ್ನು ತೆಗೆಸೊಗೆದಳು. ಏನು ಮಾಡಿದರೂ ಅಳು ನಿಲ್ಲಿಸದ ಆ ಮಗು, ಕೊನೆಗೆ ಆ ಸೂಳೆಯ ಮಡಿಲಲ್ಲಿ ಮಲಗಿ ಸಮಾಧಾನ ತಾಳಿತು. ಇದರಿಂದ ಮಕ್ಕಳನ್ನು ಸಮಾಧಾನಪಡಿಸಲು ಸ್ತ್ರೀಯರೇ ಆಗಬೇಕೆಂಬ ಸತ್ಯತೆಯ ಅರಿವು ನನಗಾಗುತ್ತದೆ. ಆಕೆಯ ಮಡಿಲಲ್ಲಿ ಮಗುವಿಗೆ 'ತಾಯ ಮಡಿಲಿನ ಸುಖ ಮೊರೆತಿರಬೇಕು!'

ತನ್ನದೇ ಆದ ವಿಶಿಷ್ಟ ಗುಣಗಳಿಂದ ಭೂಷಿತನಾದ ಸಹೃದಯತೆಯ ಸೋಜ್ವಲ ಪಾತ್ರವೇ ಹಳ್ಳಿಯ ಸೂಳೆ. ಹೌದು, ಆಕೆ ಸೂಳೆ

ನಿಜ! ಆದರೆ ಅವಳನ್ನು ಸೂಳೆಯನ್ನಾಗಿ ಮಾಡಿದುದೂ ಸಮಾಜವೇ ಅಲ್ಲವೇ? ಈ ಸ್ಥಿತಿಗೀಡು ಮಾಡಿದ ಆ ಸಮಾಜವೇ ಅವಳನ್ನಿಂದು ಸಮಾಜಬಾಹಿರಳನ್ನಾಗಿ ಮಾಡಿದೆ. ಎಂತಹ ವಿಕಟ ವಿಡಂಬನೆ! ಅದನ್ನೇ ಲೇಖಕರು ಮುಖಮಲ್ ಟೋಪಿಮಾಲಿಕನ ಬಾಯಿಯಿಂದ ಹೇಳಿಸಿದ್ದಾರೆ. ಸೂಟುಧಾರಿಯೊಬ್ಬನು ಅವಳನ್ನುದ್ದೇಶಿಸಿ "ಸಮಾಜದ ಮತ್ತೊಂದು ವೈರಿ ನೋಡಿರಿ" ಎಂದು ಬದಿಯಲ್ಲಿ ಕುಳಿತವನಿಗೆ ಹೇಳಿದಾಗ, ಮುಖಮಲ್ ಟೋಪಿ ಮಾಲಿಕನು "ಹಾಗೆನ್ನುವವರು ರಾತ್ರಿ ಅವರ ಮನೆಗೆ ನಮಸ್ಕಾರ ಹಾಕತಾರ...." ಎಂದು, ತನ್ನ ಪಕ್ಕದಲ್ಲಿದ್ದವನಿಗೆ ಹೇಳುತ್ತಾನೆ. ಸಭ್ಯತೆಯ ಸೋಗಿನಲ್ಲಿ ನಡೆಯುವವರ ಎರಡು ಮುಖದ ಜೀವನ ಇದರಿಂದ ವ್ಯಕ್ತವಾಗುತ್ತದೆ.

ಆಕೆ ಸೂಳೆಯಾದರೂ, ನಾಗರಿಕನೆನಿಸಿಕೊಂಡ ಯಾರೊಬ್ಬನಲ್ಲಿಯೂ ಇಲ್ಲದ ಮಾನವತೆ ಅವಳಲ್ಲಿದೆ ಎಂಬುದನ್ನು ಲೇಖಕರು ತೋರಿಸಿಕೊಟ್ಟಿದ್ದಾರೆ. ಬಸ್ಸಿನಲ್ಲಿದ್ದ ಯಾವ ಸಭ್ಯ ಗೃಹಸ್ಥನಿಗೂ ಆ ತಂದೆ ಮತ್ತು ಮಗುವಿನ ಮೇಲೆ ದಯೆಯುಂಟಾಗಲಿಲ್ಲ. ಆದರೆ ಆ ಕರುಣಾಜನಕ ದೃಶ್ಯವನ್ನು ಕಂಡ ಸೂಳೆಯ ಹೃದಯ ಕರಗಿತು; ಮನ ಮರುಗಿತು. ಒರಟುತನದಿಂದ ವರ್ತಿಸಿದ ಕಲ್ಲೀಮಿಸೆಯ ಮಲ್ಲನನ್ನು ನೋಡಿ ಅವಳಿಂದ ಸಹಿಸಲಾಗಲಿಲ್ಲ. "ಇವನ ಕಣ್ಣಾಗ ಮನಿಸ್ಯಾರು ಕಾಣಿಸ್ತಾರೋ ಇಲ್ಲೋ, ಅವನ್ನ ತುಳಿದು ಅವನನ್ನ ಅಂಜಸ್ತಾನಲ್ಲ" ಎಂದು ಬಿರುಸಾಗಿ ನುಡಿಯುತ್ತಾಳೆ. ಆ ಮಗುವನ್ನು ಕಂಡು ಕರುಣೆಯ ಹೊನಲೇ ಹರಿಯಿತು ಅವಳ ಹೃದಯದಿಂದ. ತನ್ನ ಜಾಗದಿಂದೆದ್ದು ಆ ತಂದೆಯನ್ನು ಅಲ್ಲಿ ಕುಳಿತುಕೊಳ್ಳಲು ಒತ್ತಾಯಿಸುತ್ತಾಳೆ. ಅವನನ್ನು ವಿಚಾರಿಸಿ ಸಂಗತಿಯನ್ನೆಲ್ಲಾ ತಿಳಿದಬಳಿಕ, ತಬ್ಬಲಿ ಮಗುವಿಗಾಗಿ ಅವಳ ಹೆಣ್ಣು ಹೃದಯ ಬಹಳ ಮರುಗಿತು. ಮಾತೃ ಹೃದಯ ಉಕ್ಕಿ ಬಂದು ಆ ಮಗುವನ್ನು ಮಡಲಿನಲ್ಲಿ ತೆಗೆದುಕೊಂಡು ತಿಂಡಿಯಿತ್ತು ಸಮಾಧಾನಪಡಿಸಿದಳು. ಮಗುವಿನ ಸ್ಪರ್ಶದಿಂದ ಅತೀವ ಆನಂದವಾಯಿತವಳಿಗೆ.

ಮೊದಲು ಬಸ್ಸನ್ನೇರಿದ ತರುಣಿ, ಸಮಾಜಶಿಕ್ಷಣ ಕಾರ್ಯದರ್ಶಿನಿ, ಇಬ್ಬರೂ ಹೆಣ್ಣುಗಳೇ. ಆದರೆ ಅವರ ಹೃದಯ ಮತ್ತು ಸೂಳೆಯ ಹೃದಯ—ಇವುಗಳೊಳಗೆ ಎಷ್ಟು ಅಂತರ! ಆ ಸಭ್ಯ ಮಹಿಳೆಯರ ಮನಸ್ಸು ಆ ತಬ್ಬಲಿ ಶಿಶುವನ್ನು ನೋಡಿ ಕರಗಲಿಲ್ಲ. ಒಬ್ಬಳು, ಮಗು ತನ್ನ ಸೆರಗು ಹಿಡಿದಾಗ ಹೇಸಿ, ಅದರ ಕೈಯನ್ನು ತೆಗೆದೊಗೆದಳು. ಇನ್ನೊಬ್ಬಳು, ತನ್ನ ಮಗು ಬಿಸ್ಕೀಟು ಕೇಳಿದಾಗ ಕೊಡದೆ, "ಸುಮ್ಮನಿರು, ಬಸ್ಸಿನಲ್ಲಿ ಡಾಗೆ ಮಾಡಬಾರದು" ಎನ್ನುತ್ತಾ, ತನ್ನ ಕಡೆಗೇ ನೋಡುತ್ತಿರುವ ಆ ಕೂಲಿಗಾರನ ಹಸುಳೆಯನ್ನು ನುಂಗುವಂತೆ ನೋಡಿ, ಬಿಸ್ಕೀಟಿನ ಪೊಟ್ಟಣ ಮರೆಮಾಡುತ್ತಾಳೆ. ಅವಳೊಂದು ಮಗುವಿನ ತಾಯಿಯಾದರೂ ಅವಳಲ್ಲಿ ತಾಯ್ತನದ ಹೃದಯವೇ ಇಲ್ಲ. ನಿಜವಾಗಿ ಅವಳೊಬ್ಬ ರಕ್ಕಸಿಯೆನ್ನಬೇಕು. ಅವರಿಬ್ಬರ ಸಂಕುಚಿತ ಭಾವನೆ ಮತ್ತು ಕಲ್ಲೆದೆಯನ್ನೂ, ಮಾನವತೆಯ ಕೋಮಲ ಸುಮವರಳಿರುವ ವೇಶ್ಯೆಯ ಹೃದಯವನ್ನೂ ಲೇಖಕರು ಈ ರೀತಿಯಿಂದ ಮುಂದಿರಿಸುತ್ತಾರೆ.

ಆಕೆ ಪರಿಸ್ಥಿತಿಯ ವಶದಿಂದ ವೇಶ್ಯೆಯಾಗಿರಬಹುದು; ಆದರೂ ಒಳ್ಳೆಯ ಹೃದಯ ಅವಳಲ್ಲಿದೆ. ಒಳ್ಳೆಯ ಗುಣ ಯಾರಲ್ಲಿದ್ದರೂ ಅದು ಆದರಣೀಯ. ಸಮಾಜವು ವೇಶ್ಯೆಯೆಂದು ಕಡೆಗಣಿಸಿದ ಆಕೆಯಲ್ಲಿ ಲೇಖಕರು ಮಾನವತೆಯನ್ನು ಕಂಡಿದ್ದಾರೆ.

ಒಟ್ಟಿನಲ್ಲಿ ಕಥೆಯು ಸರ್ವಾಂಗಸುಂದರವಾಗಿದೆ. ಸನ್ನಿವೇಶ ಹಾಗೂ ಅದರಲ್ಲಿಯ ಪಾತ್ರಗಳು ಜೀವಂತವಾಗಿದ್ದು, ನೈಜವಾಗಿ ಕಂಡು ಬರುತ್ತವೆ. ಸೂಳೆಯೊಬ್ಬಳು ಬಸ್ಸಿನಲ್ಲಿದ್ದ ಅಪರಿಚಿತ ಕೂಲಿಕಾರನನ್ನು ವಿಚಾರಿಸಿ ಎಲ್ಲಾ ಸಂಗತಿಗಳನ್ನು ತಿಳಿದುಕೊಳ್ಳುವುದು, ಅವನ ಮಗುವನ್ನು ತೆಗೆದುಕೊಂಡು ಸಮಾಧಾನಪಡಿಸುವುದು ಅಸಂಭವ ಘಟನೆ—ಎಂದು ಕೆಲವರಿಗೆ ಕಂಡರೂ ಕಾಣಬಹುದು: ಅದಕ್ಕೆ ಉತ್ತರವಿಷ್ಟೆ. ಆಕೆಯ ಹೃದಯ ಕೋಮಲ; ಕೂಲಿಕಾರ ಹಾಗೂ ಅವನ ಮಗುವಿನ ಕರುಣಾಜನಕ ಸ್ಥಿತಿ ಅವಳ ಮನವನ್ನು ಕದಡಿತು. ಅಲ್ಲದೆ ಮಕ್ಕಳಿಲ್ಲದ ಅವಳಿಗೆ ಮಗುವಿನ ಮೇಲೆ ಕರುಣೆ ಮೂಡಿದುದೂ ಸ್ವಾಭಾವಿಕವೇ.

ಪಾತ್ರಗಳ ಸ್ವಭಾವ ಚಿತ್ರವನ್ನು ನೋಡಿದರೆ, ಲೇಖಕರು ಪಾತ್ರಗಳ ಬಾಯಿಯಿಂದ ಹೊರಡಿಸುವ ಒಂದೊಂದೇ ಮಾತು ಸಾಕು ಆ ಪಾತ್ರದ ವ್ಯಕ್ತಿತ್ವವನ್ನು ತಿಳಿದುಕೊಳ್ಳಲು.

ಹೀಗೆ 'ಹಸುಳೆ ಮತ್ತು ಸೂಳೆ' ಕಥೆಯ ಮೂಲಕ ದು. ನಿಂ. ಬೆಳಗಲಿಯವರು, ಸಮಾಜಕ್ಕೇ ಕನ್ನಡಿಯನ್ನು ಹಿಡಿದಿದ್ದಾರೆ. ಇಂತಹ ಹಲವಾರು ಕಥೆಗಳು ಅವರ ಲೇಖನಿಯಿಂದ ಇನ್ನೂ ಹೊರಬೀಳಲಿ ಎಂದು ಬಯಸುತ್ತೇನೆ. ❋

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ್ಯ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಷ ರೋಡ್, ಧಾರವಾಡ

◀ ಪುಸ್ತಕ ವಿಮರ್ಶೆ ▶

— ಸಾಡೇಸಾತಿ —

ಲೇಖಕರು:— **ಶ್ರೀ. ಎನ್. ಕೆ. ಜೋಗಳೇಕರ**

ಪ್ರಕಾಶಕರು:— **ಜ್ಯೋತಿಷ್ಯ ಕಾರ್ಯಾಲಯ ಧಾರವಾಡ**

ಬೆಲೆ: ೧—೮—೦

'ಸಾಡೇಸಾತಿ' ಎಂಬ ಹೆಸರನ್ನು ಕೇಳಿ ಬೆದರದ ಜನರು ಹಿಂದುಗಳಲ್ಲಿ ಬಹಳ ವಿರಳವೆಂದೇ ಹೇಳಬಹುದು. ಇದಕ್ಕೆ ಕಾರಣವೆಂದರೆ ಸಾಡೇಸಾತಿಗೆ ಒಳಗಾದವರು ಬಹಳಷ್ಟು ಕಷ್ಟ ಪರಂಪರೆಗಳನ್ನು ಎದುರಿಸಬೇಕಾಗುತ್ತದೆ. ತಾವು ಸ್ವತಃ ಕಷ್ಟಗಳನ್ನು ಅನುಭವಿಸಿದ್ದನ್ನು ನೆನೆಸಿಕೊಂಡು, ಇನ್ನೊಬ್ಬರು ಅನುಭವಿಸುವದನ್ನು ನೋಡಿ, ಜನರು ಸಾಡೇಸಾತಿಯ ಬಗ್ಗೆ ಒಂದು ಭಯವನ್ನು ಬೆಳೆಸಿಕೊಂಡು ಬಂದಿದ್ದಾರೆ. ಆದರೆ ಈ ಸಾಡೇಸಾತಿಯ ಬಗ್ಗೆ ಜನಸಾಮಾನ್ಯರಲ್ಲಿ ಶಾಸ್ತ್ರೀಯವಾದ ಕಲ್ಪನೆ ಮಾತ್ರ ಇಲ್ಲವೆಂದೇ ಹೇಳಬಹುದು.

ಜನಸಾಮಾನ್ಯರಲ್ಲಿ ಸಾಡೇಸಾತಿಯ ಬಗ್ಗೆ ರೂಢವಾಗಿರುವ ಈ ಭಯ ಮತ್ತು ಅಜ್ಞಾನಗಳನ್ನು ತೊಡೆದು ಹಾಕಲು ಶ್ರೀ. ಎನ್. ಕೆ. ಜೋಗಳೇಕರರು ತಾವು ಬರೆದ **'ಸಾಡೇಸಾತಿ'** ಎಂಬ ಈ ಪುಸ್ತಕದಲ್ಲಿ ಪ್ರಯತ್ನಿಸಿ ಸಾಕಷ್ಟು ಯಶಸ್ವಿಗಳಾಗಿದ್ದಾರೆ.

ಇದು ಶ್ರೀ. ಜೋಗಳೇಕರರು ಫಲಜ್ಯೋತಿಷ್ಯದ ಮೇಲೆ ಬರೆದ ನೂರನೆಯ ಪುಸ್ತಕವಾಗಿದೆ. ಈ ಪುಸ್ತಕಕ್ಕೆ ಕರ್ನಾಟಕದ ಸುಪ್ರಸಿದ್ಧ ಜ್ಯೋತಿರ್ವಿದರಾದ ಪಂಡಿತ ಕೇಶವಶರ್ಮಾ ಗಲಗಲಿಯವರು ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದಿದ್ದಾರೆ.

ಈ ಪುಸ್ತಕದಲ್ಲಿ ಒಟ್ಟಿಗೆ ಹನ್ನೆರಡು ಪ್ರಕರಣಗಳಿವೆ. - ಮೊದಲನೆಯ ಪ್ರಕರಣದಲ್ಲಿ ಸಾಡೇಸಾತಿಯ ಪರಿಣಾಮಗಳನ್ನು ಲೇಖಕರು ಬಣ್ಣಿಸಿದ್ದಾರೆ. ೨ ಹಾಗೂ ೩ ನೆಯ ಪ್ರಕರಣಗಳಲ್ಲಿ ಕುಂಡಲಿ ನಿರೀಕ್ಷಣೆಯ ಬಗ್ಗೆ — ಜ್ಯೋತಿಷ್ಯದ ಮೂಲಸಿದ್ಧಾಂತಗಳ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಈ ವಿವರಣೆ ಸಾಮಾನ್ಯ ಓದುಗನಿಗೆ ಬಹಳ ಉಪಯುಕ್ತವಾಗಿದೆ. ಜ್ಯೋತಿಷ್ಯಶಾಸ್ತ್ರದ ಈ ಮೂಲಸಿದ್ಧಾಂತಗಳ ಪರಿಚಯವಿಲ್ಲದಿದ್ದರೆ, ಅದರ ಫಲಗಳನ್ನು ನಾವು ಸರಿಯಾಗಿ ತಿಳಿಯಲು ಶಕ್ಯವಾಗುವುದಿಲ್ಲ. ಈ ಕಾರಣದಿಂದ ಈ ಪ್ರಕರಣಗಳ ಮಹತ್ವ ಬಹಳವಿದೆ. ಈ ಪುಸ್ತಕಕ್ಕೆ ಇವು ಉಪಯುಕ್ತ ಹಿನ್ನೆಲೆಯನ್ನು ಒದಗಿಸುತ್ತವೆ. ೪ ರಿಂದ ೯ ನೆಯ ಪ್ರಕರಣಗಳವರೆಗೂ ಸಾಡೇಸಾತಿ ಅಂದರೇನು, ಅದನ್ನು ಹೇಗೆ ನೋಡಬೇಕು, ವಿವಿಧ ಗ್ರಹಗಳ ಮೇಲೆ, ರಾಶಿಗಳ ಮೇಲೆ, ಸ್ಥಾನಗಳ ಮೇಲೆ ಶನಿಯು ದಾಟಿ ಹೋಗುವಾಗ ಆಗುವ ಪರಿಣಾಮಗಳೇನು?—ಇವೇ ಮೊದಲಾದ ವಿಷಯಗಳನ್ನು ಶಾಸ್ತ್ರೀಯವಾಗಿ ಸ್ಪಷ್ಟವಾಗಿ ಹಾಗೂ ಸುಲಭವಾಗಿ ವಿವರಿಸಿದ್ದಾರೆ. ೧೦ ನೆಯ ಪ್ರಕರಣದಲ್ಲಿ ಕೆಲವು ಅನುಭವಿಕ ನಿಯಮಗಳನ್ನೂ ೧೧ ನೆಯ ಪ್ರಕರಣದಲ್ಲಿ ಮಾದರಿಯ ಕುಂಡಲಿಗಳನ್ನೂ ಕೊಟ್ಟಿದ್ದಾರೆ. ಪರಿಶಿಷ್ಟವೆನಿಸಿದ ೧೨ ನೆಯ ಪ್ರಕರಣದಲ್ಲಿ ಕ್ರಿ. ಶ. ೧೯೬೦ ರಿಂದ ೧೯೭೫ ರ ವರೆಗೆ (ಶಾ. ಶ. ೧೮೮೧ ರಿಂದ ೧೮೯೭ ರ ವರೆಗೆ) ಶನಿಯು ಯಾವ ರಾಶಿಯಲ್ಲಿ ಯಾವ ತಿಂಗಳಲ್ಲಿ ಎಷ್ಟು ಅಂಶದಲ್ಲಿ ಇರುವನೆಂಬದನ್ನು ಕೊಡಲಾಗಿದೆ. ಇದು ಈ ಪುಸ್ತಕದ ಸ್ಥೂಲ ಪರಿಚಯವೆಂದು ಹೇಳಬಹುದು.

ಇನ್ನು ಗುಣದ ದೃಷ್ಟಿಯಿಂದ ನೋಡಿದಾಗ, ಕನ್ನಡದಲ್ಲಿ ಬಂದ ಅಪೂರ್ವವಾದ ಜ್ಯೋತಿಷ್ಯ ಗ್ರಂಥಗಳಲ್ಲಿ ಇದೊಂದಾಗಿದೆ ಎಂದು ಹೇಳಬಹುದು. ಕನ್ನಡದಲ್ಲಿ ಸಾಡೇಸಾತಿಯ ಬಗ್ಗೆ ಪ್ರತ್ಯೇಕವಾಗಿ ಬರೆದ ಪುಸ್ತಕಗಳೇ ಇಲ್ಲದಿದ್ದಾಗ ಶಾಸ್ತ್ರೀಯವಾಗಿ, ಸುಲಭವಾಗಿ, ಸರಳವಾಗಿ ಬರೆಯಲ್ಪಟ್ಟ ಈ ಗ್ರಂಥವನ್ನು ಕನ್ನಡಿಗರಿಗೆ ನೀಡಿದ್ದಕ್ಕಾಗಿ, ಕನ್ನಡ ಓದುಗರು ಶ್ರೀ. ಜೋಗಳೇಕರರನ್ನು ಅಭಿನಂದಿಸಲೇಬೇಕು.

ಯಾಕೆಂದರೆ ಜ್ಯೋತಿಷ್ಯಶಾಸ್ತ್ರದ ಬಗ್ಗೆ ತಪ್ಪು ತಿಳಿವಳಿಕೆಯಾಗಲು ಅದರ ಬಗ್ಗೆ ಸರಿಯಾದ ಜ್ಞಾನವಿಲ್ಲದುದೇ ಮುಖ್ಯ ಕಾರಣವಾಗಿದೆ. ಇಂಥ ಪುಸ್ತಕಗಳು ಬಂದರೆ, ಜನರ ಅಜ್ಞಾನ ದೂರವಾಗಿ ಉಪೇಕ್ಷೆಗೆ ಗುರಿಯಾದ ಆ ಅಮೋಘವಾದ ಶಾಸ್ತ್ರವು ಜನಾದರಣೆಯನ್ನು ಪಡೆದು ಜನರ ಕಲ್ಯಾಣಕ್ಕೆ ಸಹಕಾರಿಯಾಗುವುದು.

ಈ ಪುಸ್ತಕವನ್ನು ಓದಿ ಮುಗಿಸಿದ ಮೇಲೆ, ಗ್ರಹಗಳ ಪ್ರಭಾವವು ನಮ್ಮ ಜೀವನದ ಮೇಲೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬ ಮಾತು ಮನದಟ್ಟಾಗುತ್ತದೆ. ಅದರಲ್ಲಿಯೂ ಶನಿಯ ಪ್ರಭಾವವು ನಮ್ಮ ಬಾಳಿನಲ್ಲಿ ಎಂಥ ಏರಿಳಿತಗಳನ್ನು ತರುತ್ತದೆಂಬುದು ನಿಶ್ಚಳವಾಗಿ ನಮಗೆ ಗೊತ್ತಾಗುತ್ತದೆ. ಈ ಪುಸ್ತಕವನ್ನು ಓದುವುದರಿಂದ ನಮಗೆ ಗೊತ್ತಾಗುವ ಇನ್ನೊಂದು ಸಂಗತಿಯೆಂದರೆ: 'ಸಾಡೇಸಾತಿ' ಎಂದರೆ ಬರೀ

ಕಾಡುವ ಕಾಟವೇ ಅಲ್ಲ; ಕೆಲವು ಸಲ ಅದು ಉತ್ಕರ್ಷದ ಕಾಲವೂ ಆಗಬಹುದು— ಎಂಬದು.

ಒಟ್ಟಿನಲ್ಲಿ ಪೀಡಾಕಾರಕ ಗ್ರಹವೆನಿಸಿದರೂ ಶನಿಯು ಆಧ್ಯಾತ್ಮ ದೃಷ್ಟಿಯಿಂದ ವಿಚಾರಿಸಿದಾಗ ಅವನು ಸದ್ಗ್ರಹವೇ ಎಂಬ ಮಾತನ್ನು ಮುನ್ನುಡಿಕಾರರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರ ಮಾತಿನಲ್ಲಿಯೇ ಹೇಳುವುದಾದರೆ "ಮಾನವನ ಸುಪ್ತ ಆತ್ಮಶಕ್ತಿಯನ್ನು ಜಾಗೃತ ಮಾಡುವ ಕಾರ್ಯವು ಅವನ ಕಡೆಗಿರುವುದು. ಬಂಧುಗಳು ಕೈ ಬಿಟ್ಟಾಗ, ಹೆಂಡತಿ ಮಕ್ಕಳು ಕೂಡ ತಿರಸ್ಕರಿಸುವಾಗ, ಮಿತ್ರರು ದ್ರೋಹ ಬಗೆಯುವಾಗ; ಜಗತ್ತಿನಲ್ಲಿ ಯಾವ ಕಡೆಗೂ ಬೆಳಕಿನ ಕಿರಣಗಳು ತೋರದಿರುವಾಗ, ನಿರಾಶಾವಾದಸ್ಥಿತಿಯಲ್ಲಿ ಮನುಷ್ಯನ ಮನಸ್ಸು ಅಂತರ್ಮುಖವಾಗುವುದು. ಆಗ ಪರಮಾತ್ಮನಿಗೆ ಶರಣಾಗತವಾಗುವುದು..... ಸುಖ-ಸಮೃದ್ಧಿಗಳು ಇರುವಾಗ ಯಾರೂ ದೇವರನ್ನು ನೆನೆಸುವದಿಲ್ಲ. ಧನ ಮದ, ಜನಮದ, ವಿದ್ಯಾಮದ ಎಲ್ಲ ಮದಗಳನ್ನೂ ಕಳೆಯಲು ಶನಿ ಬರುತ್ತಾನೆ. ಅದುವೆ ಆತ್ಮಜಾಗೃತಿಯ ಕಾಲವೆಂದು ತಿಳಿಯಬೇಕು."

ಸಾಡೇಸಾತಿಯನ್ನು ನಾವು ಈ ದೃಷ್ಟಿಕೋನದಿಂದ ನೋಡಿದಾಗ ಅದರ ಬಗ್ಗೆ ನಮ್ಮಲ್ಲಿರುವ ಭಯ ಲೋಪವಾಗುತ್ತದೆ; ಶನಿಯ ಬಗ್ಗೆ ಇರುವ ತಿರಸ್ಕಾರವು ಆದರದಲ್ಲಿ ಪರಿವರ್ತನೆಗೊಳ್ಳುತ್ತದೆ. ಇಂಥ ದೃಷ್ಟಿಕೋನವನ್ನು ಬೆಳೆಯಿಸಲು ಈ ಪುಸ್ತಕವು ತುಂಬ ಸಹಾಯ ಮಾಡುತ್ತದೆ.

ಒಟ್ಟಿನಲ್ಲಿ ಜನಸಾಮಾನ್ಯರೂ ಜ್ಯೋತಿರ್ವಿದರೂ ಸಂತೋಷದಿಂದ ಸ್ವಾಗತಿಸಬೇಕಾದ ಪುಸ್ತಕವು ಇದಾಗಿದೆ. ಈ ಪುಸ್ತಕದಲ್ಲಿ ಕೊರತೆ ಎನಿಸಿದಿದ್ದರೂ ಅವಶ್ಯವೆನಿಸುವ ಒಂದು ವಿಷಯವೆಂದರೆ, ಶನಿಗ್ರಹ ಪೀಡಾಪರಿಹಾರಾರ್ಥವಾಗಿ ಮಾಡಬೇಕಾದ ಜಪ, ದಾನ ಮೊದಲಾದವುಗಳ ವಿವರಣೆ. ಈ ವಿವರಣೆಯೊಂದನ್ನು ಕೊಟ್ಟಿದ್ದರೆ ಈ ಪುಸ್ತಕವು ಪರಿಪೂರ್ಣವಾಗುತ್ತಿತ್ತು. ಮುಂದಿನ ಆವೃತ್ತಿಯಲ್ಲಿ ಇನ್ನೊಂದು ಪರಿಶಿಷ್ಟವನ್ನು ಸೇರಿಸಿ ಲೇಖಕರು ಈ ವಿವರಣೆಯನ್ನೂ ಕೊಡುವರೆಂದು ಹಾರೈಸುತ್ತೇನೆ.

—ಚಿ. ಶಂ. ಕುಲಕರ್ಣಿ ಎಂ. ಎ.

— ಮೈಲುಗಲ್ಲು —

(ಕವನಸಂಕಲನ)

ಬರೆದವರು:— **ಶ್ರೀ. ಎನ್. ಎಸ್. ಗದಗಕರರು**

ಇದು ಒಂದು ಪುಟ್ಟ ಕವನ ಸಂಕಲನದ ಹೊತ್ತಗೆ. ಬರೆದವರು ಶ್ರೀ. ಎನ್. ಎಸ್. ಗದಗಕರರು. ಇದರಲ್ಲಿ ಇಪ್ಪತ್ತೈದು ಕವನಗಳು ರೂಪುಗೊಂಡಿವೆ. 'ಕಿರಿದರೊಳು ಪಿರಿದರ್ಥ'ವನ್ನು ಹೇಳುವುದು ಕವನಗಳಲ್ಲಿಯೇ ಸಾಧ್ಯ. ಇಂದಿನ ಕನ್ನಡ ಕಾವ್ಯಪ್ರಪಂಚ ಚೆಲ್ಲುವರಿದು ಹೆಬ್ಬಿರುವಾಗ, ಮೈಲುಗಲ್ಲೂ— ತನ್ನ ರೀತಿಯಲ್ಲಿ ತಲೆಯೆತ್ತಿ ನಿಂತಿದೆ. ಬರೆಹಗಾರರು ಹಳೆಯ ಪರಂಪರೆಯನ್ನು ಬಿಡದೆ— ಹೊಸ ಪರಂಪರೆಯ ಓಟದವರಿಗೆ ಮೈಲುಗಲ್ಲಿನ ನೋಟ ತೋರಿಸಿರುವುದು ಒಂದು ರೀತಿಯಲ್ಲಿ ಉಚಿತವಾಗಿದೆ, ಕಾವ್ಯದಲ್ಲ ಸರಳತೆ ಕಂಡುಬಂದಾಗ, ಓದುಗರಿಗೆ ಶಬ್ದಗಳ ಕಿಂಕಿಣಿರವದ ರುಚಿಯು ಕೊರತೆ ಕಂಡುಬಂದರೂ—ವಿಷಯದ ಮತ್ತು ಅದನ್ನು ಕಾವ್ಯರೂಪಕ್ಕಿಳಿಸುವ ವಿಧಾನದಲ್ಲಿಯ ಕೌಶಲ್ಯಕ್ಕೆ ಮನಸೋಲಬೇಕಾಗುವುದು ಅನಿವಾರ್ಯ.

ಇಲ್ಲಿಯ ಕವನಗಳಲ್ಲಿ **'ಪಂಚಾಪ್ಸರ,' 'ಬಿಲ್ದಿಂಗಳಿರುಳಲ್ಲಿ' 'ಪುಟ್ಟ ಹಕ್ಕಿ' 'ನಿಸರ್ಗದುದಿಯಲ್ಲಿ-ಅಡಗುವೆನಿಂದು'**—ಮೊದಲಾದ ಕವನಗಳು ನಿಜಕ್ಕೂ ಬರೆಹಗಾರನ ವ್ಯಕ್ತಿತ್ವವನ್ನು ಪ್ರಕಟಗೊಳಿಸುತ್ತವೆ. ಇಲ್ಲಿ ಕಾವ್ಯವಾಹಿನಿಯು ತಿಳಿಯಾಗಿ ಹರಿದು ಬಂದಿದೆ. ಈ ಸಂಕಲನದಲ್ಲಿಯ ಕೆಲವು ಕವನಗಳು ವ್ಯಕ್ತಿಗಳಿಗೆ ವೀಸಲಾಗಿವೆ. ವ್ಯಕ್ತಿಗಳನ್ನು ಕುರಿತು ಬರೆಯುವಾಗ, ಬರೆಹಗಾರನಿಗೂ ಹಾಗೂ ವ್ಯಕ್ತಿಗೂ ಇರುವ ಸುವಧುರ ಸಂಬಂಧವು ಪ್ರಕಟವಾಗುವುದು ಅವಶ್ಯ. 'ಗಳಗನಾಥರು' 'ಮಹರ್ಷಿ ಆಲೂರ ವೆಂಕಟರಾಯರು' 'ಕಬ್ಬೂರ ನಾರಾಯಣರಾಯರು' ಇವು ಓದಲು ಹಗುರಾದರೂ, ಆ ಆ ವ್ಯಕ್ತಿಗಳ ಸುಸ್ಪಷ್ಟ ಪರಿಚಯ ಮಾಡಿಕೊಡುತ್ತವೆ; ಇದು ಅವಶ್ಯ. ಬರೆಹಗಾರರು ಇವನ್ನು ಸಾಧಿಸಿದ್ದಾರೆ. ಶೈಲಿಯ ಲಾಲಿತ್ಯ ಅಲ್ಲಿ ಇಲ್ಲಿ ಪ್ರಕಟಗೊಳ್ಳುವದಾದರೂ— ಸರಳತೆಯೇ ಬಹಳ ಕಡೆಯಲ್ಲಿ ತನ್ನ ಕೈ ಮೇಲು ಮಾಡಿದೆ. ಆದರೂ ಭಾವಗಳ ಅನುಕಂಪವು ಅದನ್ನೆಲ್ಲ ಮರೆಯಿಸಿ ನಿಂತಿದೆ. ಸುಲಭವೆಂದು ಬಗೆಯುವುದೇ ಎಷ್ಟೋ ಸಲ ಕಠಿಣವಾಗಿ ಬಿಡಬಹುದು. 'ಹುಣಿಸೆನೆರ' 'ಮನಕೆ ಬರುವುದು ವಿಸ್ಮೃತಿ', 'ಚಿನ್ನಣ್ಣ' 'ಯೋಗಿಯೊಲು' ಈ ಕವನಗಳು ಸುಲಭವಾಗಿ ಕಂಡರೂ—ಸರಳವೇನೂ ಆಗಿಲ್ಲ! ಒಟ್ಟಿನ ಮೇಲೆ ಹೇಳುವುದಾದರೆ, ಈ ಸಂಕಲನವು ಪರಂಪರೆಯನ್ನು ಬಿಡದೆ ಹೊಸ ಮಾರ್ಗಕ್ಕೆ ಮಾತ್ರ ಮೈಲುಗಲ್ಲಾಗಿ ನಿಂತಿದೆ ಎಂದು ಹೇಳಬಹುದು.

—ಭಾರತೀಶ

ಬಡತನದ ಬಾಳು

'ಆನಂದಕಂದ' ಅವರ

ಅತ್ಯುತ್ತಮ ಕಥೆಗಳ ಸಂಕಲನ

ಕೆಲವೇ ಪ್ರತಿಗಳು ಉಳಿದಿವೆ.

ಓದಲು ಪ್ರಾರಂಭಿಸಿದರೆ ಮುಗಿಯುವ ವರೆಗೆ

ಪುಸ್ತಕವನ್ನು ಕೆಳಗಿಡಲಾರಿರಿ.

ಬೆಲೆ ೧.೨೫

'ಜಯಂತಿ' ಕಾರ್ಯಾಲಯ, ಧಾರವಾಡ

ಸಿಕ್ಕಬಹುದು. ನಮ್ಮ ಮೈಸೂರು ಸರಕಾರ ಇದರ ವಿಚಾರವನ್ನೇ-ನಾದರೂ ಮಾಡಿದೆಯೆ? ಇದುವರೆಗೂ ಮಾಡದೆ ಇದ್ದರೆ ಇನ್ನು ನುಂದಾದರೂ ವಿಚಾರಮಾಡಿ ಉಪಾಯ ಯೋಜನೆ ನಡೆಸುವುದೆ?

ಕೇರಳದಲ್ಲಿ ಕೆರಳಿದ ರಾಜಕೀಯ

ಕೇರಳದಲ್ಲಿಂದು ನಡೆದಿರುವ ವಿಪ್ಲವಕಾರಕ ರಾಜಕೀಯ ಚಟುವಟಿಕೆಗಳು, ನಮ್ಮ ನಿತ್ಯ ವಾಚನದ ಸಾಧನಗಳಾಗಿವೆ. ಹೊರಗಿದ್ದು ಅಲ್ಲಿಯ ಚಟುವಟಿಕೆಯ ಪರಿಣಾಮಗಳನ್ನು ನಿರೀಕ್ಷಿಸುತ್ತಿದ್ದೇನೆ. ಆದರೆ ಏಕರಾಷ್ಟ್ರೀಯ ಭಾವನೆ ಇದುವರೆಗೂ ಮೈಗೊಳ್ಳದ ನಮ್ಮ ಜನ, ಕೇರಳದ ಜನತೆಯ ಸುಖ-ದುಃಖ ತಮ್ಮದೂ ಆಹುದು— ಎಂಬ ಭಾವನೆಯಿಂದ ಅದನ್ನು ನೋಡುತ್ತಿಲ್ಲ.

ಒಂದು ಕಾಲದಲ್ಲಿ ತಾವೆ ಆಯ್ದುಕೊಟ್ಟ ನಾಯಕರಿಂದ ರಚಿತವಾದ ಸರಕಾರವನ್ನು ಎದುರಿಸಿ ಅಲ್ಲಿಯ ಜನರು ಹೋರಾಟ ಹೂಡಿದ್ದಾರೆ; ತಮ್ಮನ್ನು ಅಧಿಕಾರಸ್ಥಾನಕ್ಕೇರಿಸಿ ಶಾಸನಸೂತ್ರಗಳನ್ನು ಕೈಯಲ್ಲಿ ಕೊಟ್ಟ ಜನರನ್ನೇ ಅಲ್ಲಿಯ ಸರಕಾರದವರು ಹಿಡಿದು ಸೆರೆಮನೆಯಲ್ಲಿ ಗಿಡಿಯುತ್ತಿದ್ದಾರೆ; ಗುಂಡುಹಾಕಿ ಸಾಯಹೊಡೆಯುತ್ತಲಿದ್ದಾರೆ. ಚುನಾವಣೆಯ ಕಾಲದಲ್ಲಿ ಜನತೆಗಿದ್ದ ಮತಾಧಿಕಾರವು, ಭಾರತದ ರಾಜ್ಯ-ಘಟನೆಯ ದೃಷ್ಟಿಯಿಂದ ಇಂದು ಅನಕ್ಕಿಲ್ಲ. ಇಷ್ಟೇ ಅಲ್ಲ, ಜನತೆ ಹೂಡಿದ ಇಂದಿನ ಚಳವಳಿ ನ್ಯಾಯವಾದುದಾಗಿದ್ದರೂ, ಕೇಂದ್ರ ಸರಕಾರ ಅದರ ಕಡೆಗೆ ಲಕ್ಷ್ಯ ಕೊಡದೆ, ರಾಜ್ಯಘಟನೆಯ ನಿಯಮದಂತೆ, ಇಂದಿನ ಕೇರಳ ಸರಕಾರಕ್ಕೆ ಸಹಾಯ-ಸಹಕಾರಗಳನ್ನು ನೀಡಬೇಕಾಗಿದೆ. ಹೇಗಿದೆ ನೋಡಿ ರಾಜಕೀಯದ ಮೌಜು!

ಕೇರಳ ಸರಕಾರದ ಈ ಪ್ರಕರಣದಲ್ಲಿ ಕೇಂದ್ರ ಸರಕಾರಕ್ಕೆ ಒಮ್ಮೆಲೆ ದುಡುಕಿ ಕೈ ಹಾಕಲು ಬಾರದಂತಹ ಪರಿಸ್ಥಿತಿಯಿದೆ. ಏಕೆಂದರೆ ಮಿಕ್ಕ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳು ಆಧಿಪತ್ಯ ನಡೆಸುತ್ತಿದ್ದರೂ, ಬೇರೆ ಬೇರೆ ರಾಜ್ಯಗಳಲ್ಲಿ ಆ ಆ ಸರಕಾರಗಳ ವಿರೋಧಿ ಪಕ್ಷಗಳು ಇಲ್ಲದೆ ಇಲ್ಲ. ಇನ್ನೊಂದು ಮಹತ್ತ್ವದ ವಿಷಯವೆಂದರೆ ಅಧಿಕಾರಲಾಲಸೆಯ ಮೂಲಕ ಆ ಕಾಂಗ್ರೆಸ್ ರಾಜ್ಯಗಳಿಗೂ ಪೀಠವು ಭದ್ರವಾಗಿಲ್ಲ.

ಕೇರಳದಲ್ಲಿಯ ಕಮ್ಯುನಿಸ್ಟ್ ಸರಕಾರ ಕಾಂಗ್ರೆಸಿಗೆ ಬೇಡವಾಗಿದೆ ಯಾದರೂ, ಅದನ್ನು ಎದುರಿಸಿದ ಜನತೆಯ ಚಟುವಟಿಕೆಗಳನ್ನು ಅದು ಪುರಸ್ಕರಿಸುವಂತಿಲ್ಲ. ಅದನ್ನು ಪುರಸ್ಕರಿಸಿದರೆ, ಮಿಕ್ಕ ರಾಜ್ಯಸರಕಾರ ಗಳನ್ನು ವಿರೋಧಿಸಿ, ಅಲ್ಲಲ್ಲಿಯ ಜನತೆ ಪ್ರತ್ಯಕ್ಷ ವಿರೋಧದ ಚಟುವಟಿಕೆ ಗಳನ್ನು ನಡೆಯಿಸಬಹುದಾಗಿದೆ.

ಪ್ರಧಾನ ಮಂತ್ರಿ ನೆಹರೂ ಅವರು ಕೇರಳದ ಪರಿಸ್ಥಿತಿಯನ್ನು ಕಣ್ಣಾರೆ ಕಂಡರೂ, ಇದುವರೆಗೆ ತಮ್ಮ ಸಂಯಮನವನ್ನು ಬಿಟ್ಟಿಲ್ಲ. ಭಾರತದ ಈ ನಿಜವಾದ ಕರ್ಣಧಾರ, ಕೇರಳದ ಪರಿಸ್ಥಿತಿಯನ್ನು ಹೇಗೆ ಸಮಾಧಾನಗೊಳಿಸುವರೋ ನೋಡಬೇಕಾಗಿದೆ. ಅವರ ರಾಜಕೀಯ ಜ್ಞಾನದ ಪರೀಕ್ಷಾ ಪ್ರಸಂಗವೇ ಇಂದು ಬಂದು ನಿಂತಂತಾಗಿದೆ.

ಅಯೂಬ್‌ಖಾನರ ಅಂತರಂಗ

ಮೊನ್ನೆಮೊನ್ನೆಯೆ ಪಾಕಿಸ್ತಾನದ ಸರ್ವಾಧಿಕಾರಿ ಅಯೂಬ್ ಖಾನರು, ತಮ್ಮ ಮನಸಿನಲ್ಲಿರುವ ಮಾತನ್ನು, ಲೋಕದ ಕಿವಿಗೆ ಕೇಳಿಸಿ ದ್ದಾರೆ: 'ಪಾಕಿಸ್ತಾನ್ ಸೈನ್ಯಬಲವನ್ನು ಬೆಳೆಸುವುದು ಇನ್ನಾವ ಕಾರಣ ಕ್ಕಾಗಿಯೂ ಅಲ್ಲ; ಭಾರತದ ಆಕ್ರಮಣಭೀತಿಯೇ ಅದರ ಮೂಲ ಕಾರಣ!' ಎಂಬುದು ಆ ಖಾನ್ ಸಾಹೇಬರ ಉಗ್ಗಡಣೆ.

ಜಗತ್ತಿನ ಎಲ್ಲ ರಾಷ್ಟ್ರಗಳೊಂದಿಗೆ ಸ್ನೇಹ, ಸಹಕಾರ, ಶಾಂತಿ ಇವುಗಳನ್ನೆ ಕುರಿತು ಮಾತನಾಡುವ ಭಾರತ, ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುವುದೆಂಬ ಭೀತಿಯಂತೆ— ಈ ಸೇನಾಪತಿ ಸರ್ವಾಧಿ ಕಾರಿಗೆ! ಪಾಕಿಸ್ತಾನದ ಸ್ನೇಹ-ಸಹಕಾರದ ಒಪ್ಪಂದದ ಕುರಿತು ಭಾರತ ಸರಕಾರ ಈ ಮೊದಲು ಎಷ್ಟು ಸಲ ಪಾಕಿಸ್ತಾನ್ ಸರಕಾರವನ್ನು ಕೇಳಿಕೊಂಡಿಲ್ಲ? ಕೇಳಿದಾಗೆಲ್ಲ ಆ ಆಹ್ವಾನಕ್ಕೆ ಹಿಂಜರಿದು, ಭಾರತದ ವಿರೋಧವನ್ನು ತನ್ನ ರಾಷ್ಟ್ರದಲ್ಲಿ ಬೆಳೆಸುತ್ತ ನಡೆದಿದೆ ಪಾಕಿಸ್ತಾನ್ ಸರಕಾರ.

ಅಯೂಬ್‌ಖಾನರದು ಇದೇನು ಹೊಸ ಮಾತಲ್ಲ. ಈ ಮೊದಲು ಸರಕಾರವನ್ನು ಕಟ್ಟಿಕೊಂಡಿದ್ದ ನಾಯಕರೂ ಇದೇ ಬಗೆಯ ಮಾತನ್ನು ಆಡುತ್ತಿದ್ದರು. ಭಾರತದ ವಿರೋಧವೇ ಪಾಕಿಸ್ತಾನ್ ರಾಜಕಾರಣಿ ಗಳಿಗೆ ಬದುಕುವ ಬಂಡವಾಳವಾಗಿದೆ. ಆದರೆ ಜಗತ್ತಿನ ಬೇರೆ ರಾಷ್ಟ್ರ ಗಳಿಗೆ ಭಾರತದ ನಿಜವಾದ ಆದರ್ಶವೇನೆಂಬುದು ಗೊತ್ತಿಲ್ಲದೆ ಇಲ್ಲ. ಅಲ್ಲಿಯ ರಾಜಕೀಯನಾಯಕರು, ಪಾಕಿಸ್ತಾನದ ಸರ್ವಾಧಿಕಾರಿಯ ಮೂರ್ಖತನದ ಮಾತುಗಳನ್ನು— ಕೇವಲ ರಾಜಕಾರಣಕ್ಕಾಗಿ ಕೆಲವರು ಹೊರಗೆ ಒಪ್ಪಿದರೂ— ಅಂತಃಕರಣಪೂರ್ವಕವಾಗಿ ಯಾರೂ ಒಪ್ಪಿ ಕೊಳ್ಳುವಂತಿಲ್ಲ. ಏಕೆಂದರೆ, ಭಾರತವಿಂದು ಜಗತ್ತಿನ ಯಾವ ರಾಷ್ಟ್ರದ ನಾಯಕರಿಗೂ ಅಪರಿಚಿತವಾಗಿ ಉಳಿದಿಲ್ಲ. ಎಲ್ಲ ರಾಷ್ಟ್ರಗಳ ನಾಯಕರು ಭಾರತಕ್ಕೆ ಬಂದುಹೋಗಿದ್ದಾರೆ; ಭಾರತದ ನಾಯಕರು ಎಲ್ಲ ರಾಷ್ಟ್ರಗಳಿಗೆ ಹೋಗಿ ತಮ್ಮ ಉದಾರಚರಿತ್ರೆಯಿಂದ ಅಲ್ಲಿಯ ಜನರ ವಿಶ್ವಾಸ-ಪ್ರೀತಿ ಗಳನ್ನು ಸೆಳೆದುಕೊಂಡಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ, ಅಯ್ಯೂಬ್ ಖಾನರು ಭಾರತದ ವಿರೋಧ ಭೀತಿಯ ಮಾತುಗಳನ್ನು ಆಡುತ್ತಿರು ವುದನ್ನು ಕೇಳಿ 'ಇದೊಂದು ಹುಚ್ಚುತನದ ಬಡಬಡಿಕೆ!' ಎಂದು ಆ ಜನ ಭಾವಿಸದೆ ಇರಲಾರರು.

ಅಯೂಬ್‌ಖಾನರ ಈ ಮಾತು, ಅದಕ್ಕೆ ಸರ್ವತೋಮುಖವಾಗಿ ಸಹಾಯ ಮಾಡುತ್ತಿರುವ ಅಮೇರಿಕೆಗೆ ಒಂದು ಸಮಸ್ಯೆಯಾಗಿ ಪರಿಣಮಿಸದೆ ಹೋಗದು. ಪಾಕಿಸ್ತಾನಕ್ಕೆ ಕಮ್ಯುನಿಸ್ಟ್ ರಾಷ್ಟ್ರಗಳ ಭೀತಿ ಇಲ್ಲವೇ ಇಲ್ಲ! ಭಾರತದ ಭೀತಿಯೇ ಭೀತಿ! ಅದಕ್ಕಾಗಿಯೆ ಅದು ಸೈನ್ಯಶಕ್ತಿಯನ್ನು ಹೆಚ್ಚಿಸುತ್ತಿದೆ. ಅಮೇರಿಕೆಗೆ ಭಾರತವೂ ಮಿತ್ರರಾಷ್ಟ್ರ. ಪಾಕಿಸ್ತಾನಕ್ಕೆ ಅಮೇರಿಕೆ ಶಸ್ತ್ರಾಸ್ತ್ರ ಸಹಾಯ ಮಾಡುವು ದೆಂದರೆ, ಅದರಿಂದ ಭಾರತದ ಮಿತ್ರತ್ವವನ್ನದು ಕಾಯ್ದುಕೊಂಡಂತೆ ಆಗುವುದೆ? ಜಗತ್ತಿಗೆಲ್ಲ ಬುದ್ಧಿಯನ್ನು ಹೇಳಲು ಹೊರಟ ಅಮೇರಿಕೆ, ಈ ಬಗೆಯ ಮಿತ್ರದ್ರೋಹದ ಕಾರ್ಯ ಮಾಡಿದರೆ, ಜಗತ್ತಿನಲ್ಲಿ ಅದರ ಮತ್ತು ಉಳಿಯಬಹುದೆ?

ಸಾದರ ಸ್ವೀಕಾರ

೧. **ಬಿಗರೆಯ ಮರಿ** (ಮಕ್ಕಳ ಕವನಗಳ ಸಂಕಲನ). ಲೇಖಕರು ಶ್ರೀಮಾನ್ ಶಶಿಕುಮಾರ, ಅಕ್ಕಿವಾಟ. ಪ್ರಕಾಶಕರು ಶಾಂತಿಸೇವಾಸದನ, ಸೇಡಬಾಳ; ಜಿಲ್ಲಾ ಬೆಳಗಾಂವಿ. ಕ್ರೌ. ಅ. ೩೨ ಪುಟಗಳು. ಬೆಲೆ ೦೦-೩೭.

೨. **ಅಮರಸಂದೇಶ** (ಶ್ರೀ ಶಾಂತಿಸಾಗರ ಸ್ವಾಮಿಗಳವರ ಜೀವನಪರಿಚಯ ಮತ್ತು ಉಪದೇಶವಚನ). ಲೇಖಿಕೆಯರು ಶ್ರೀಮತಿ ಚಂದ್ರಾವತಿ ಘೂಳಣ್ಣನವರ, ಸೇಡಬಾಳ. ಮೇಲಿನ ಶಾಂತಿಸೇವಾ ಸದನದ ಪ್ರಕಟನೆಯಿದು. ಕ್ರೌ. ಅ. ೨೪ ಪುಟಗಳು. ಬೆಲೆ ೦೦-೨೫.

೩. **ಕಲೆಯ ಕರೆ** (ವಿಶೇಷ ಲೇಖನ ಸಂಪುಟ). ಭದ್ರಾವತಿಯ ೧೯೫೯ರ ನಾಟಕೋತ್ಸವದಲ್ಲಿ ಪ್ರಕಟವಾದುದು. ಪ್ರಕಾಶಕರು ಮಿತ್ರಕಲಾಮಂಡಲಿ, ಭದ್ರಾವತಿ. ಕ್ರೌ. ಡಿಮಿ ೪೦ ಪುಟಗಳು.

ನಾಟಕಕಲೆಗೆ ಸಂಬಂಧಿಸಿದ— ಬೇರೆ ಬೇರೆ ಲೇಖಕರಿಂದ ಬರೆಯಿಸಿದ— ಒಳ್ಳೆಯ ಲೇಖನಗಳಿವೆ. ಸಂಸ್ಥೆಯ ಪರಿಚಯವೂ ಇದೆ.

೪. **ಮನ್ಮಥನ ಹೆಂಡತಿ** (ಹತ್ತು ಸ್ವತಂತ್ರ ಕಥೆಗಳ ಸಂಕಲನ). ಲೇಖಕರು ಶ್ರೀಮಾನ್ ವೆಂಕಟರಾಜ ಪಾನಸೆ. ಪ್ರಕಾಶಕರು: ಸಾಹಸ ಪ್ರಕಾಶನ, ನಂ. ೪೯, ೩ನೆಯ ಮೆಯಿನ್ ರೋಡು, ಚಾಮರಾಜಪೇಟೆ, ಬೆಂಗಳೂರು ೧೮. ಕ್ರೌ. ಅ. ೧೧೬ ಪುಟಗಳು. ಬೆಲೆ ೧-೨೫.

೫. **ಸಿಟ್ಟಾಕೊ ರಾಯ ಸನಮ್ಮಾಲ?** (ಕಥಾಸಂಕಲನ). ಲೇಖಕರು ಶ್ರೀಮಾನ್ ದು. ನಿಂ. ಬೆಳಗಲಿ, ಬನಹಟ್ಟಿ. ಪ್ರಕಾಶಕರು ಶ್ರೀಮಾನ್ ಭಾಲಚಂದ್ರ ಘಾಣೇಕರ್, ಪ್ರತಿಭಾ ಮುದ್ರಣಾಲಯ, ಧಾರವಾಡ. ಕ್ರೌ ಅ. ೯೬ ಪುಟಗಳು. ಬೆಲೆ ೧-೦೮.

೬. **ಶುಭೋದಯ** (ಕವನಸಂಕಲನ). ಲೇಖಕರು ಶ್ರೀಮಾನ್ ಹನುಮಂತಾಚಾರ್ಯ ಉಪಾಧ್ಯಾಯ ಎಂ. ಎ. ಹೈದರಾಬಾದ್. ಪ್ರಕಾಶಕರು ಸಾಧನಾ ಪ್ರಕಾಶನ, ರಾಯಚೂರು. ಕ್ರೌ ೮. ೧೨೪ ಪುಟಗಳು ಬೆಲೆ ೧-೫೦.

೭. **ಅಮೃತ** (ಆಯುರ್ವೇದ ಸಮ್ಮೇಳನದ ವಿಶೇಷ ಲೇಖನ ಸಂಪುಟ). ಸಂಪಾದಕರು ಶ್ರೀ. ಎಸ್. ಎಲ್. ನಾರಾಯಣಭಟ್ಟ ಸಂಪಾದಕ "ರಾಯಭಾರಿ" ಉಡುಪಿ. ಸಂಪಾದಕರೇ ಪ್ರಕಾಶಕರು. ಡೆ. ಅ. ೧೬೦ ಪುಟಗಳು.

ಮೊನ್ನೆ ಮೊನ್ನೆ ಉಡುಪಿಯಲ್ಲಿ ಸೇರಿದ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ ನೆನಪಿಗಾಗಿ ಈ ವಿಶೇಷ ಸಂಪುಟವನ್ನು ಹೊರಡಿಸಲಾಗಿದೆ. ಅಖಿಲ ಕರ್ನಾಟಕದಲ್ಲಿಯ ಹಲವು ಜನ ಆಯುರ್ವೇದ ತಜ್ಞರ ವಿವಿಧ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಆಯುರ್ವೇದದ ಅಭಿಮಾನಿಗಳೆಲ್ಲರೂ ಸಂಗ್ರಹಿಸಿ ಇರಿಸಬಹುದಾದ ಸಂಪುಟವಿದು. ಸಂಪಾದಕರ ಈ ಪ್ರಯತ್ನ ಪ್ರಯೋಜನಕಾರಿಯಾದುದು. ಅದಕ್ಕಾಗಿ ಅವರಿಗೆ ಧನ್ಯವಾದಗಳು

೮. **ಕುಕನೂರ ಶ್ರೀ ಮಹಾಮಾಯೆ** (ಚರಿತ್ರೆ ಮತ್ತು ವರ್ಣನೆ). ಲೇಖಕರು ಪ್ರೊ. ಪಾಂಡುರಂಗರಾವ ದೇಸಾಯಿ ಎಂ.ಎ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪ್ರಕಾಶಕರು ಶ್ರೀ. ರಂಗರಾವ ದೇಸಾಯಿ, ಸಿದ್ನೆಕೊಪ್ಪ, ಕುಕನೂರು. ಕ್ರೌ. ಅ. ೪೬ ಪುಟಗಳು. ಬೆಲೆ ೦೦-೫೦.

೯. **ಸಂಚಯ** (ಕವನಸಂಕಲನ). ಲೇಖಕರು 'ಅಂಬಿಕಾತನಯದತ್ತ' ಅವರು. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೧೦೪ ಪುಟಗಳು. ಬೆಲೆ ೧-೫೦.

೧೦. **ಶ್ರೀಗೀತಾಸಾರೋಕ್ತಿ** (ಭಗವದ್ಗೀತಾಸಾರ ಸಂಗ್ರಹ ಸಾರ್ಥ.) ಬರೆದವರು ಶ್ರೀಮಾನ್ ಅನಂತ ಆಪಟೆಯವರು. ಪ್ರಕಾಶಕರು ಮೇಲೆ ಕಾಣಿಸಿದ ಸಮಾಜ ಪುಸ್ತಕಾಲಯದವರು. ಕ್ರೌ. ಅ. ಗ್ಲಿದ ೧೨೭; ಬೆಲೆ ೧-೫೦.

೧೧. **ಮಾಲತೀ-ಮಾಧವ** (ಸಂಸ್ಕೃತ ನಾಟಕದ ಕಥೆ). ಕನ್ನಡಿಸಿದವರು ಶ್ರೀಮಾನ್ ಎನ್. ಭೀಮಭಟ್ಟ 'ವಿದ್ವಾನ್'. ಇದು ಕೂಡ ಸಮಾಜ ಪುಸ್ತಕಾಲಯದ ಪ್ರಕಾಶನವೇ. ಕ್ರೌ. ಅ. ೬೬ ಪುಟಗಳು. ಬೆಲೆ ೧-೦೦.

೧೨. **ಶಾಂತಿಪಥ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ದಿನೇಶರು. ಸಮಾಜ ಪುಸ್ತಕಾಲಯದ ಪ್ರಕಾಶನ. ಕ್ರೌ. ಅ. ೨೦೪ ಪುಟಗಳು. ಬೆಲೆ ೨-೦೦.

೧೩. **ರೂಪಾ** (ಕಥಾಸಂಕಲನ). ಬರೆದವರು ಶ್ರೀಮತಿ ಸರೋಜಿನಿ ಮಹಿಷಿ ಎಂ.ಎ., ಎಲ್.ಎಲ್. ಬಿ. ಧಾರವಾಡ. ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೧೨೦ ಪುಟಗಳು. ಬೆಲೆ ೧-೦೦.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ ! ಜಾನಪದ ಪ್ರೀತಿಗೀತಗಳು !!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಸಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತೆಳಗs — ಚೆಂದs ಗಂಧs ಹರಡೈತವ್ವಾ !

ಎಂಬ ಆನಂದಾನುಭವವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ೮೦ ಪುಟಗಳು **ಬೆಲೆ ರೂ. ೧ . ೨೫ ನ. ಪೈ.**

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು :

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಕಂಠಿ

ರಾಜಕೀಯದ ರಾಕ್ಷಸ

ಬದುಕಿಸಲೆಂದು ಭೂಮಿಯೊಳವತರಿಸಿದ ರಾಜಕೀಯವಿಂದು
ಬದುಕುವನೆನೆಂಬರನೆಲ್ಲ ನುಂಗುವ ರಕ್ಕಸನಾಗಿ ನಿಂತಿದೆ ನೋಡಿಭೋ !
ಒಂದೊಂದು ದೇಶದೊಳಗೆ ಒಂದೊಂದು ರಾಜಕೀಯವಾದದ ಗುಲ್ಲು—
ಪ್ರತಿಯೊಂದು ರಾಜಕೀಯವಾದಕ್ಕೂ ತಾನೆ ಸಾರ್ವಭೌಮನಾಗಿ
ಮೆರೆಯಬೇಕೆಂಬ ಹಂಬಲ ನೋಡಿಭೋ !

* * * *

ಎಲ್ಲ ರಾಜಕೀಯವಾದಗಳೂ ಉಗ್ಗಡಿಸುವುವು ಜನತೆಯ ಸ್ವಾತಂತ್ರ್ಯವನು;
ಆದರೆ, ಜನತೆಗೆ ಸ್ವಾತಂತ್ರ್ಯದ ಉಸಿರೆತ್ತಲೂ ಸ್ವಾತಂತ್ರ್ಯವಿಲ್ಲ ಕಾಣಯ್ಯಾ !
ಎಲ್ಲ ರಾಜಕೀಯ ನಾಯಕರೂ ನುಡಿವುದು ಶಾಂತಿ-ಸಮಾಧಾನಗಳ
ಮಾತನ್ನು;
ಆದರಾ ಶಾಂತಿ-ಸಮಾಧಾನಗಳು ಮುಖವಿಕ್ಕದಂತೆ ನಡೆನಳೆಯಿಡುವುದೇ
ಎಲ್ಲೆಡೆಗೂ ನಡೆದಿದೆ ತಂದೆ !

* * * *

ವಿಜ್ಞಾನದ ಭೂತ ರಾಜಕೀಯ ರಕ್ಕಸನ ಬಲವ ಬೆಳೆಸುತಿದೆ ನೋಡಾ !
ನೆಲ-ನೀರು-ನಭಗಳ್ಲೆಯೂ ಆ ಬಲದ ಮೆರೆಮಣಿಗೆ ನಡೆದಿದೆ ಕಾಣಯ್ಯಾ !
ಶಾಂತಿಯಲಿ ಬದುಕಬೇಕೆನುವ ಲೋಕದ ಜನಸಂಕುಲವನು
ನಿಮಿಷ-ನಿಮಿಷಕೂ ಆ ಬಲ ಬೆದಂಪುತಿದೆ ನೋಡಯ್ಯಾ !
ಕಾಪಿಗಾಗಿ ಹುಟ್ಟಿದ ರಾಜಕೀಯವೀಗ ರಾಪಸವಾಗಿ ಕಾಡುತಿರಲು,
ಕಂಡು ಕಂಡೂ ಕುರುಡನಂತಿಹೆಯೇಕೆ ಕಾಲರಾಯಾ !

—ಸಾಮಾಜಿಕ

ಈ ಸಂಚಿಕೆಯಲ್ಲಿ

ಕೆರಳಿದ ಕೇರಳ (ಸಂಪಾದಕೀಯ)

ಸಂಪಾದಕರು ೩೭

ನಾಡಿನಡೆ (ಪ್ರಾಸಂಗಿಕ ಟಿಪ್ಪಣಿಗಳು)

' ಕಾಲಭೈರವ ' ೩೯

ಸೈನಿಕನ ಇಚ್ಛೆ (ಒಂದು ಕಥೆ)

ಶ್ರೀ. ಸಿ. ಎಸ್. ಕುಲಕರ್ಣಿ ಎಂ. ಎ. ಧಾರವಾಡ ೪೧

ಪ್ಯಾಸ್ಟರ್‌ನ್ಯಾಕರ ಕೃತಿರತ್ನ (ಸಾಹಿತ್ಯ ಪರಿಚಯ)

ಶ್ರೀ. ಆ. ರಾ. ಸೇತೂರಾಮರಾವ್ ಬಿ. ಎಸ್‌ಸಿ. ಡಾವಣಗೆರೆ ೫೦

ಪ್ರದರ್ಶನ (ಕವನ)

ಶ್ರೀ. ಸುಂದರ ನಾಡಕರ್ಣಿ ಎಂ. ಎ. ವಿದ್ಯಾನಗರ ೫೩

ಗೌರಿಯ ಮದುವೆ (ಸಾಮಾಜಿಕ ಸಣ್ಣಕಥೆ)

ಶ್ರೀ. ಗಧಾಧರ ಗುಂಡುಮಿ, ದ. ಕ. ೫೫

ಯಜ್ಞದತ್ತಂಗನ ಕಥೆ (ಶಿಲಾಲಿಪಿಯಿಂದ)

ಶ್ರೀ. ವೆಂಕಟ್ರಾಯಾಚಾರ್ಯ, ಸುರತ್‌ಕಲ್ ೬೧

ಆಗಸ್ಟ್ ಹದಿನೈದು (ಕವನ)

' ಮಾಲತೀಪ್ರಿಯ' ಬೆಳಗಾಂವಿ ೬೪

ಗುಂಡೂಮಾಮಾನ ಗೋಷ್ಠಿ (ಪುರಾತನ ಅಸಾಮ.)

ಶ್ರೀ. ಪಿ. ವಿ. ಗುಡಿ, ಗೌಹಟ್ಟಿ (ಅಸಾಮು) ೬೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಶ್ರೀ. ನಿರ್ಜ ಅಣ್ಣಾರಾಯರು ಮತ್ತು ಶ್ರೀ. ಎಂ. ಡಿ. ರಾಮಚಂದ್ರ

ಗಾದರೆ ಸ್ವೀಕಾರ .... (ಕವರ್ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೩೨] [ಸಂಚಿಕೆ ೨

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
ಡಾ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

●

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕೆರಳಿದ ಕೇರಳ

ಇಂದು ನಮ್ಮ ನಾಡಿನಲ್ಲಿ; ಎಲ್ಲಿ ನೋಡಿದಲ್ಲಿ ಜನರೆಲ್ಲರೂ ಕೇರಳದ ಸುದ್ದಿಯನ್ನೇ ಆಡುತ್ತಿರುವರು. ಕೇರಳದ ಇಂದಿನ ರಾಜಕೀಯ ಸಮಸ್ಯೆ ದೊಡ್ಡ ದೊಡ್ಡ ರಾಜಕಾರಣಿಗಳೆಲ್ಲರ ಮೆದುಳನ್ನೂ ಕಚ್ಚುವ ಹುಳುವಾಗಿದೆ. ಘಟನಾಬದ್ಧ ಸರಕಾರವನ್ನು ಜನತೆ ಸುಸಂಘಟಿತ ಶಕ್ತಿಯಿಂದ ಎದುರಿಸಿನಿಂತ ಕೇರಳದ ಉದಾಹರಣೆಯಿದು ನಮ್ಮ ರಾಷ್ಟ್ರದಲ್ಲಿ ಮೊದಲನೆಯದಾಗಿದೆ.

ಕೇರಳರಾಜ್ಯ ಚಿಕ್ಕದಾಗಿದ್ದರೂ ಇದೊಂದು ವೈಶಿಷ್ಟ್ಯಪೂರ್ಣ ಪ್ರದೇಶವಾಗಿದೆ. ಭಾರತದ ಮಿಕ್ಕಕಡೆಯಲ್ಲಿಗಿಂತ ಇಲ್ಲಿ ಸಾಕ್ಷರರ ಸಂಖ್ಯೆ ಹೆಚ್ಚು ಇದೆ. ಆದುದರಿಂದಲೇ ಇಲ್ಲಿ ಪ್ರಭಾವಶಾಲಿಯಾದ ರಾಜಕೀಯ ನಾಯಕನಾವನೂ ಇದುನರೆಗೆ ಆದಂತಿಲ್ಲ; ಸದ್ಯ ಇದ್ದಂತಿಲ್ಲ. ಬರೀ ಸಾಕ್ಷರರಿಷ್ಟೇ ಅಲ್ಲದೆ ಇಲ್ಲಿಯ ಜನರು ತುಂಬ ಬುದ್ಧಿಶಾಲಿಗಳು—ಚತುರರು. ಎಂತಲೇ ಅನೇಕ ಜನ ಕೇರಳೀಯರು ಸ್ವದೇಶದಲ್ಲಿ ನಾಯಕರೆನಿಸಿಕೊಳ್ಳದಿದ್ದರೂ, ಅಖಿಲಭಾರತ ರಾಜಕಾರ್ಯದಲ್ಲಿ ನಾಯಕಮಣಿಗಳೆನಿಸಿ ಮೆರೆಯುತ್ತಿದ್ದಾರೆ. ಸ್ವಾಭಾವಿಕ ಪರಿಸ್ಥಿತಿಯ ಕಾರಣದಿಂದಾಗಿ ಕೇರಳದಲ್ಲಿ ದೈನ್ಯ-ದಾರಿದ್ರ್ಯಗಳಿವೆಯೆಂದು ಹೇಳುವರಾದರೂ, ಅಲ್ಲಿಯ ಜನರಲ್ಲಿ ದೇಹ-ಬುದ್ಧಿಗಳನ್ನು ದುಡಿಸಿ, ಇಲ್ಲದ ಸಂಪತ್ತಿಯನ್ನು ಎಳೆದು ಜೀವನಕ್ಕೆ ಹೊಂದಿಸಿಕೊಳ್ಳುವ ಕರ್ತೃತ್ವಶಕ್ತಿಯೂ ಇದೆ.

ಕೇರಳ ಪಶ್ಚಿಮಸಮುದ್ರದ ಕರಾವಳಿಯ ಪ್ರದೇಶವಾದುದರಿಂದ, ಅರಬೀಸಮುದ್ರದ ತೆರೆಗಳು ಹೊತ್ತುತರುವ ವಿದೇಶೀಯ ವಿಚಾರಗಳೆಲ್ಲವೂ ಅಲ್ಲಿ ನೊದಲು ತಲೆಯಿಕ್ಕುತ್ತವೆ. ಮದ್ರಾಸ್ ರಾಜ್ಯದೊಂದಿಗೆ ಕೂಡಿ ಇರುವಾಗ, ಕೇರಳದ ವೈಶಿಷ್ಟ್ಯ ಅಷ್ಟೊಂದು ಪ್ರಭಾವಪೂರ್ಣವಾಗಿ ಲೋಕದ ಕಣ್ಣುಗಳಿಗೆ ಬೀಳುತ್ತಿರಲಿಲ್ಲ. ಭಾರತವು ಸ್ವತಂತ್ರವಾಗಿ, ಕೇರಳ ರಾಜ್ಯಕ್ಕೆ ಸ್ವಾಯತ್ತತೆ ದೊರೆತೊಡನೆಯೆ ಅದು ತನ್ನ ವೈಶಿಷ್ಟ್ಯಗಳನ್ನು ಒಂದರ ಹಿಂದೆ ಒಂದರಂತೆ ಹೊರಗೆ ಹಾಕಲು ತೊಡಗಿತು.

ಬ್ರಿಟಿಷರಿರುವಾಗಿನಿಂದಲೂ ನಮ್ಮ ರಾಷ್ಟ್ರೀಯ ಮಹಾಸಭೆ, ಭಾರತದ ಎಲ್ಲ ಪ್ರಾಂತಗಳಲ್ಲಿಯೂ ಅದರ-ಗೌರವಗಳನ್ನು ಪಡೆದು ನಿಂತಿತ್ತು. ಎಂತಲೇ ರಾಜಕೀಯ ಚುನಾವಣೆಗಳಲ್ಲಿ ಮಿಕ್ಕೆಲ್ಲ ರಾಜ್ಯಗಳಲ್ಲಿಯ ರಾಷ್ಟ್ರೀಯ ಮಹಾಸಭೆಯು ಗೆಲವನ್ನು ಪಡೆಯಿತು; ಅಂತಹ ಕಾಲದಲ್ಲಿಯೂ ಕೇರಳದಲ್ಲಿ ರಾಷ್ಟ್ರೀಯ ಮಹಾಸಭೆಯ ವಿಜಯಕ್ಕೆ ಅವಕಾಶ ದೊರೆಯಲಿಲ್ಲ. ಇದಕ್ಕೆ ಕಾರಣವೆಂದರೆ ಕೇರಳದ ಜನತೆಯಲ್ಲಿ ಆಟನಾಡುವ ಸ್ವೈರವಿಚಾರ ಪ್ರವೃತ್ತಿ: ಈ ವಿಚಾರ ಪ್ರವೃತ್ತಿಯನ್ನು ಪರಿಪೋಷಿಸುವಂತಹ ಅಲ್ಲಿಯ ಸಾಮಾಜಿಕ ವಿಷಮಜೀವನ.

ಕೇರಳದ ಜನತೆಯಲ್ಲಿ ಸನಾತನ ಸಂಪ್ರದಾಯದ ಸಂಪೂರ್ಣ ಅಭಿಮಾನಿಗಳ ಸಂಖ್ಯೆಯೂ ಸಾಕಷ್ಟಿದೆ. ಶ್ರೀಮದಾದಿ ಶಂಕರಾಚಾರ್ಯರ ಜನ್ಮಭೂಮಿಯಲ್ಲವೇ ಅದು? ಪುರಾಣ ಪ್ರಸಿದ್ಧವಾದ ಅನೇಕ ದೇವಸ್ಥಾನ-ತೀರ್ಥ-ಕ್ಷೇತ್ರಗಳೂ ಅಲ್ಲಿ ಇವೆ. ಇವುಗಳಿಂದ ಉಪಜೀವನ ನಡೆಯಿಸಬೇಕಾದವರು ಪರಂಪರೆಯ ಅಭಿಮಾನಿಗಳೇ ಆಗಿರಬೇಕಲ್ಲವೆ?

ಭಾರತೀಯ ಧರ್ಮಾಭಿಮಾನಿಗಳಂತೆ ಅಲ್ಲಿ ಕ್ರೈಸ್ತ ಧರ್ಮಾನುಯಾಯಿಗಳ ಸಂಖ್ಯೆಯು ಮಿಕ್ಕಕಡೆಗಿಂತ ಹೆಚ್ಚಾಗಿದೆ. ಜನತೆಯದಾರಿದ್ರ್ಯವೂ ಹಿಂದುಗಳ ಅಸಂಘಟಿತ ಸಾಮಾಜಿಕ ವ್ಯವಸ್ಥೆಯೂ ಸೇರಿ, ಅಲ್ಲಿ ಅನೇಕ ಕೇರಳೀಯರನ್ನು ಕ್ರೈಸ್ತರನ್ನಾಗಿ ಮಾಡಿವೆ. ಅಲ್ಲಿಯ ಕ್ರೈಸ್ತರ ಧರ್ಮಾಭಿಮಾನ ಜಾಜ್ವಲ್ಯಮಾನವಾದುದು.

ಸಾಗರ ಪ್ರಯಾಣದ ನಿಷೇಧದ ನಿರ್ಬಂಧದ ಕಾರಣದಿಂದಾಗಿ, ಸಾಗರ ವ್ಯಾಪಾರಿಗಳಾದ ಮುಸ್ಲಿಮರು, ಇತಿಹಾಸ ಕಾಲದಿಂದಲೂ ಕೇರಳರಾಜ್ಯದಲ್ಲಿ ನೆಲೆಯೂರಿಕೊಂಡು ಬಂದಿದ್ದಾರೆ. ಮುಸಲ್ಮಾನರ ಧರ್ಮಾಭಿಮಾನದ ಅತಿರೇಕತೆಯನ್ನಂತೂ ಬಣ್ಣಿಸಿ ಹೇಳಬೇಕಾಗಿಲ್ಲ.

ತಿರುವಣಕೋರ ಸಂಸ್ಥಾನಿಕರು ಜನತೆಯಲ್ಲಿ ಹರಡಿದ ಆಧುನಿಕ ಶಿಕ್ಷಣ, ಕ್ರೈಸ್ತಮಿಶನರಿಗಳು ನಾಡಿನಲ್ಲಿ ಹೆಚ್ಚಿಸಿದ ಸಾಕ್ಷರತೆ ಇವು, ಕೇರಳದ ಜನತೆಯಲ್ಲಿ ಒಂದು ಬಗೆಯ ನವವ್ಯಕ್ತಿತ್ವವನ್ನು ಹುಟ್ಟಿಸಲು ಮುಖ್ಯಕಾರಣವಾಗಿ ನಿಂತುವು. ಅನುದರಿಂದ ಆರ್ಥಿಕ ದಾರಿದ್ರ್ಯದಿಂದ ಕೂಡಿರುವ ಕೇರಳದ ಜನತೆಯು ಹೊಸ ಸಂತಾನದಲ್ಲಿ, ಕಮ್ಯುನಿಜಂ ತತ್ತ್ವವೂ ಬೆಳೆದು ನೆಲೆನಿಲ್ಲಲು ಅನುಕೂಲಾವಕಾಶ ಸಿಕ್ಕಂತಾಯಿತು. ಆದುದರಿಂದಲೇ ಕೇರಳದಲ್ಲಿ ಯಾವುದೇ ಒಂದು ರಾಜಕೀಯ ಪಕ್ಷವು ಸಮರ್ಥವಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ಎಂತಲೇ ಸ್ವತಂತ್ರ ಭಾರತದ ಯಾವ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಅಲ್ಲಿ ಅವಿರೋಧವೆನಿಸುವಂತಹ ವಿಜಯ ದೊರೆಯಲಿಲ್ಲ.

ಮಿಕ್ಕ ಯಾವ ರಾಜಕೀಯ ಪಕ್ಷಗಳಿಗೂ ಅಲ್ಲಿ ಗೆಲವು ದೊರೆಯುವಂತಿಲ್ಲವಾದುದರಿಂದಲೇ, ಅಲ್ಪಸಂಖ್ಯಾಕರಾದರೂ ಸುಸಂಘಟಿತವಾಗಿದ್ದ ಕಮ್ಯುನಿಸ್ಟ್ ಪಕ್ಷವು, ಅಲ್ಲಿ ಅನಾಯಾಸವಾಗಿ ಜಯವನ್ನು ಪಡೆಯಿತು. ಬಹುಸಂಖ್ಯಾಬಲದ ಮೂಲಕ, ಭಾರತದ ರಾಜಕೀಯ ಘಟನೆಗನುಗುಣವಾಗಿ ಮಂತ್ರಿಮಂಡಲವನ್ನು ರಚಿಸಿ, ಕೇರಳದ ಆಡಳಿತದ ಸೂತ್ರಗಳನ್ನು ಅದು ತನ್ನ ಕೈಯಲ್ಲಿ ತೆಗೆದುಕೊಂಡಿತು.

ಕೇರಳದಲ್ಲಿಯ ಈ ರಾಜಕೀಯ ನಿಷ್ಲವವನ್ನು ಭಾರತದ ರಾಷ್ಟ್ರೀಯ ಮಹಾಸಭೆಯೂ, ದಿಲ್ಲಿಯ ಕೇಂದ್ರಸರಕಾರವೂ ಸಹಜ ವಿಷಯವನ್ನಾಗಿ ಭಾವಿಸಿದುವು; ಭಾರತೀಯರಿಂದಲೆ ರೂಪುಗೊಂಡು ನಿಂತ ಕೇರಳೀಯ ಕಮ್ಯುನಿಸ್ಟ್ ಸರಕಾರವನ್ನು ಸಹನೆ–ಸಹಾನುಭೂತಿಗಳಿಂದಲೇ ನೋಡಿದುವು. ಕಮ್ಯುನಿಸ್ಟ್ ವಿರೋಧಿಗಳಾದ ಪಶ್ಚಿಮದ ಪ್ರಮುಖ ರಾಷ್ಟ್ರಗಳಲ್ಲಿ ಈ ವಿಷಯ ಸಾಕಷ್ಟು ವಾದ–ಚರ್ಚೆಗಳ ಹುಡಿಯನ್ನು ಎಬ್ಬಿಸಿತಾದರೂ, ಭಾರತದ ಪಟ್ಟನಾಯಕರು ಇದನ್ನು ಸಹಾನುಭೂತಿಯ ಉಪೇಕ್ಷಾಭಾವದಿಂದಲೇ ನೋಡುತ್ತ ಬಂದಿರುವರು.

ಕೇರಳದಲ್ಲಿ ಸರಕಾರ ರೂಪುಗೊಂಡು ನಿಂತಮೇಲೆ, ಅಲ್ಲಿಯ ಮಿಕ್ಕ ರಾಜಕೀಯ ಪಕ್ಷದ ಜನರಿಗೆ, ಚುನಾವಣೆಯ ಕಾಲದಲ್ಲಿ ತಾವು ನಡೆದುಕೊಂಡ ಅಚಾತುರ್ಯದ ರೀತಿ ಕಲ್ಪನೆಗೆ ಬಂದಿತು. ಕೈಮೀರಿದ ಮೇಲೆ ಮಾಡುವುದೇನು? ಶಾಸನಸಭೆಗಳಲ್ಲಿ ಬಲಿಷ್ಠ ವಿರೋಧಿಪಕ್ಷವನ್ನು ರಚಿಸುವಂತಹ ಸೌಹಾರ್ದವೂ ಅಲ್ಲಿಯ ಬೇರೆ ಬೇರೆ ಪಕ್ಷಗಳ ನಾಯಕರಲ್ಲಿ ಇರಲಿಲ್ಲ; ನಿರ್ವಾಹವಿಲ್ಲದೆ ಮೌನವಾಗಿದ್ದುಕೊಂಡು, ಕಮ್ಯುನಿಸ್ಟ್ ಆಡಳಿತದ ಪ್ರಜೆಗಳಾಗಬೇಕಾಯಿತು.

ಕಮ್ಯುನಿಸ್ಟ್ ಸರಕಾರ ಹೊಸ ಧ್ಯೇಯ–ಧೋರಣಗಳನ್ನು ಉಗ್ಗಡಿಸುತ್ತ ಉತ್ಸಾಹದಿಂದ ಕಾರ್ಯವನ್ನು ಪ್ರಾರಂಭಿಸಿತಾದರೂ, ಮಾತಿನಲ್ಲಿಯ ಆದರ್ಶನಿಷ್ಠೆಯನ್ನು ಕೃತಿಯಲ್ಲಿ ಇಳಿಸಲಿಕ್ಕೆ ಆಗಲಿಲ್ಲ. ಉದಾತ್ತ ಧ್ಯೇಯವನ್ನಿರಿಸಿಕೊಂಡು ಒಳ್ಳೆಯ ಸಂಘಟನೆಯಿಂದ ಕೂಡಿರುವ ಅನೇಕ ಕಾಂಗ್ರೆಸ್ ಸಂಸ್ಥೆಗಳಲ್ಲಿಯ ಹಲವು ವ್ಯಕ್ತಿಗಳೂ ಆದರ್ಶಚ್ಯುತರಾಗಿ ನಡೆಯುತ್ತಲಿದ್ದಾರೆಂದಬಳಿಕ, ಸಂಧಿಸಿಕ್ಕಂತೆ ಸ್ವಾರ್ಥ ಸಾಧಿಸಿಕೊಳ್ಳುವ ಗುರಿಯನ್ನು ಇರಿಸಿಕೊಂಡು ತಮ್ಮ ಚಟುವಟಿಕೆ ಸಾಗಿಸಿರುವ ಭಾರತದ ಕಮ್ಯುನಿಸ್ಟರು ಸುಮ್ಮನೆ ಬಿಡುವರೆ?

ಕೇರಳದ ಅನಿರ್ಬಂಧ ರಾಜ್ಯಕಾರಭಾರವು ಅಲ್ಲಿಯ ಕಮ್ಯುನಿಸ್ಟರ ಕೈಗೆ ದೊರೆಯಿತು. ಭವಿಷ್ಯದಲ್ಲಿ ಒದಗಬಹುದಾದ ಸಮಸ್ಯೆಗಳ ಕಲ್ಪನೆಯಿಲ್ಲದೆ ರಚಿತನಾದ ಭಾರತೀಯ ರಾಜ್ಯಘಟನೆಯು ಅವರ ಸ್ವೈರವರ್ತನೆಗೆ ಸಹಕಾರಿಯಾಗಿ ನಿಂತಿತು. ಇಂದು ಕಮ್ಯುನಿಸ್ಟೇತರ ಪಕ್ಷವೊಂದರ ಹೊರತು ಮಿಕ್ಕೆಲ್ಲ ರಾಜಕೀಯ ಪಕ್ಷಗಳೂ, ಸಾಮಾನ್ಯ ಜನತೆಯೂ ಸಮಾನ ದುಃಖದುರಿಯ ಸಮಾನ ನೋವಿನ ಮೂಲಕ, ಎಚ್ಚತ್ತು ಎಲ್ಲರೂ ಒಟ್ಟುಗೂಡಿ, ಅಲ್ಲಿಯ ಕಮ್ಯುನಿಸ್ ಸರಕಾರವನ್ನು ಪದಚ್ಯುತಗೊಳಿಸಲು ಸತ್ತ್ವಯುಕ್ತವಾದ ಚಳವಳಿ ಹೂಡಿದ್ದಾರೆ. ಕಮ್ಯುನಿಸ್ಟ್ ಸರಕಾರ ಆಡಳಿತದ ಕಾಲದಲ್ಲಿ ಅಮಾನುಷ ರೀತಿಯಿಂದ ವರ್ತಿಸಿದೆ; ಈಗ ಜನತೆಯು ವಿರೋಧ ಚಳವಳಿಯ ಕಾಲದಲ್ಲಿ, ಪುರಾಣ ಕಾಲದ ರಾಕ್ಷಸರನ್ನು ಮೀರಿಸುವಂತಹ ಹಿಂಸಾಶಾಸನವನ್ನು ಕೈಕೊಂಡಿದೆ. ಎಂತಹ ನಿಷ್ಪಕ್ಷಪಾತಿ ಸಭ್ಯಗೃಹಸ್ಥರು ಕೇರಳದಲ್ಲಿ ಇಂದು ಸುತ್ತಾಡಿ ಬಂದರೂ, ಅವರು ಸರಕಾರದ ದುಷ್ಟವರ್ತನೆಯನ್ನೂ ಪ್ರಜೆಗಳು ಪಡುತ್ತಿರುವ ದುಃಖ–ದುರ್ಮಾನಗಳನ್ನೂ ಸಾರಿಹೇಳುತ್ತಲೇ ಬರುತ್ತಾರೆ.

ಇಂದು ಕೇರಳದ ನಾಗರಿಕಜನತೆಗೆ ಕಮ್ಯುನಿಸ್ಟರ ಆಡಳಿತ ಬೇಡನಾಗಿದೆ. ಆದುದರಿಂದ ಪ್ರಾಣವನ್ನು ಪಣಕ್ಕೆ ಕಟ್ಟಿ ಅವರು ಹೋರಾಟ ಹೂಡಿದ್ದಾರೆ. ಜನತೆಗೆ ಬೇಡವಾದ ಸರಕಾರ ಏಕೆ ಬದುಕಬೇಕೆಂಬುದು ತರ್ಕಕ್ಕೆ ನಿಲುಕದ ಮಾತು. ಆದರೂ ರಾಜ್ಯಘಟನೆಯು ತನ್ನನ್ನು ಬದುಕಿಸಬಲ್ಲದೆಂದು ಕಮ್ಯುನಿಸ್ಟ್ ಸರಕಾರ ನಂಬಿ ಕುಳಿತಿದೆಯಲ್ಲದೆ, ಆ ನಂಬುಗೆಯಿಂದ ಬಾಯಿಗೆ ಬಂದಂತೆ ಗಳುಹುತ್ತಲಿದೆ; ಕೈಗೆ ಬಂದಂತೆ ಪಡುಕುತ್ತಲಿದೆ.

ಕೇಂದ್ರದಲ್ಲಿಯ ರಾಜಕೀಯ ನಾಯಕರು ರಾಜ್ಯಘಟನೆಯ ನಿರ್ಜೀವ ನಿಯಮಗಳನ್ನೇ ನೋಡುತ್ತ ಕುಳಿತಂತೆ ಇದೆಯಲ್ಲದೆ, ಕೇರಳದ ಕೆರಳಿದ ಸಜೀವ ಜನತೆಯ ಇಷ್ಟಾನಿಷ್ಟಗಳ ಕಡೆಗೆ ವಿಲಂಬ ಧೋರಣದಿಂದ ನಡೆದುಕೊಳ್ಳುತ್ತಿದ್ದಾರೆ. ಇದು ಭಾರತದಲ್ಲಿಯ ಪ್ರಜಾಪ್ರಭುತ್ವವಾದಿಗಳೆಲ್ಲರನ್ನೂ ಬೆರಗು ಬಿದರಿಕೆಗಳಲ್ಲಿ ಕೆಡಹಿಬಿಟ್ಟಿದೆ.

ಜನತೆಯ ಸುಖಜೀವನಕ್ಕಾಗಿ ರಾಜ್ಯಘಟನೆಯೋ, ಇಲ್ಲವೆ ರಾಜ್ಯಘಟನೆಯ ನಿಯಮಗಳ ಪಾಲನೆಗಾಗಿ ಜನತೆಯ ಆಹುತಿಯೋ? ಕೇರಳದಲ್ಲಿಂದು ಪ್ರಜಾಪ್ರಭುತ್ವದ ಹಕ್ಕಿಗಾಗಿ ಹೋರಾಟ ಹೂಡಿದ ಜನತೆ, ಅಲ್ಲಿಯ ಕ್ರೂರ ಸರಕಾರದ ಶಾಸನದಿಂದ ಎಡೆಬಿಡದೆ ಏಟುಗಳನ್ನು ತಿನ್ನುತ್ತಲಿದೆ. ಈ ಏಟುಗಳನ್ನವರು ಏತಕ್ಕಾಗಿ ಸಹಿಸಬೇಕು? ಎಷ್ಟು ಕಾಲದವರೆಗೆ ಸಹಿಸಬೇಕು? ಏಕರಾಷ್ಟ್ರೀಯ ಹೊಣೆಗಾರಿಕೆಯಿಂದ ಇಡಿ ಭಾರತದ ಕಡೆಗೆ ನೋಡಬೇಕಾಗಿರುವ ಭಾರತ ಸರಕಾರಕ್ಕೆ, ಕೇರಳದ ಜನತೆಯು ಪಡುತ್ತಿರುವ ಹಿಂಸೆ ಕಾಣದೆ? ಸಂತಾಪದಿಂದ ಕೂಗುವ ಕೂಗು ಕೇಳಿಸದೆ? ರಾಜಕೀಯ ನಾಯಕರ ಮನೋಲಹರಿಯ ಮೇಲೆ ಜನತೆಯ ಜೀವನ ಕುಣಿಯಬೇಕೆ? ಕಾಯಬೇಕಾದ ತಾಯಿಯೇ ಕೈಬಿಟ್ಟುಬಿಟ್ಟರೆ ಬೇರೆಯವರು ಯಾರು ಕೇಳಬೇಕು?

—ಸಂಪಾದಕರು

ನಾಡನಡೆ

ಚತುರ ರಾಜಾಜಿಯವರ ಸ್ವತಂತ್ರಪಕ್ಷ

ಭೌತಿಕ ಪದಾರ್ಥಗಳಂತೆಯೆ ತಾತ್ತ್ವಿಕ ವಿಚಾರಗಳು ಕೂಡ. ಹೊಸತಾಗಿ ಇರುವಾಗ, ಅವುಗಳ ಹೊಸ ರೂಪಗುಣಗಳ ಮೂಲಕ ಎರಡೂ ಜನಪ್ರಿಯವಾಗುವುವು; ದಿನಗಳು ಹೆಚ್ಚುತ್ತ ಹೋದಂತೆ ಅವು ಬಲಿತು ಬಿರುಸಾಗಿ, ವಾತಾವರಣದ ಪರಿಣಾಮದಿಂದ ಕೊಳೆ-ಕಶ್ಮಲಗಳನ್ನು ಹೊಂದಿ, ಜನರಿಗೆ ಬೇಸರವನ್ನು ಉಂಟುಮಾಡುವುವು.

ವಿಜ್ಞಾನಿಯೊಬ್ಬ ತನ್ನ ವಿಶಿಷ್ಟ ಸಂಶೋಧನೆಗಳ ಮೂಲಕ ಭೌತಿಕಪದಾರ್ಥಗಳನ್ನು ನಿತ್ಯನೂತನವಾಗಿ ಇರಿಸಬಲ್ಲನು; ಅದರಂತೆಯೆ ಜೀವನವಿಜ್ಞಾನಿಯು ಆತ್ಮವಿಚಾರಗಳನ್ನೂ ನಿತ್ಯನೂತನವಾಗಿ ಇರಿಸಬಲ್ಲನು. ಆದರೆ ವಿಜ್ಞಾನಿಯಾಗಲಿ ಜೀವನವಿಜ್ಞಾನಿಯಾಗಲಿ, ಕಾಲನಿಯಮಕ್ಕೆ ಒಳಗಾದವರು. ಅವರು ಗತಿಸಿದೊಡನೆ ಆ ಭೌತಿಕ ಪದಾರ್ಥ ಸಾಮಾನ್ಯರ ಕೈಗೆ ಸಿಕ್ಕಿ, ತಕ್ಕ ಆರಯಿಕೆಯಿಲ್ಲದೆ ಕೊಳೆಯತೊಡಗುವುದು; ಅದರಂತೆಯೆ ಜೀವನವಿಜ್ಞಾನಿಯ ತತ್ತ್ವವಿಚಾರವು ಜನಸಾಮಾನ್ಯರ ಕೈಗೆ ಸಿಲುಕಿ, ಯೋಗ್ಯ ತಿಳಿವಳಿಕೆಯ ನೆರವು ಇಲ್ಲದೆ ಹದಗೆಡತೊಡಗುವುದು.

ಪರಾಧೀನತೆಯಿರುವ ತನಕ ಭಾರತ ರಾಷ್ಟ್ರೀಯಸಭೆ, ಸಂಪೂರ್ಣ ಸ್ವಾತಂತ್ರ್ಯ ಸಂಪಾದನೆಯ ವಿಚಾರವನ್ನು ಹೇಳುತ್ತಿತ್ತು; ಕಾಲಾನುಗುಣವಾಗಿ ಆ ವಿಚಾರಕ್ಕೆ ಹೊಸ ರೀತಿಯ ಒಪ್ಪ ಹಾಕುತ್ತಿತ್ತು. ಆ ವಿಚಾರ ಜನರಿಗೆ ಪಥ್ಯನೆನಿಸಿತು ರಾಷ್ಟ್ರೀಯ ಮಹಾಸಭೆಯು ಹೇಳಿವ ಎಲ್ಲ ಕಾರ್ಯಕ್ರಮಗಳಲ್ಲಿಯೂ ನಾಗರಿಕ ಭಾರತೀಯರೆಲ್ಲರೂ ಮನವಾರೆ ಭಾಗವಹಿಸಿದರು; ಗುರಿಯನ್ನು ತಲ್ಪಿದರು.

ಸ್ವಾತಂತ್ರ್ಯಪ್ರಾಪ್ತಿಯೊಂದಿಗೆ ನಮ್ಮ ಕಾಂಗ್ರೆಸ್ಸು ಪ್ರಜಾಪ್ರಭುತ್ವ ಪದ್ಧತಿಯ ಆಡಳಿತವನ್ನು ಪುರಸ್ಕರಿಸಿತು. ಅದು ಅನಿವಾರ್ಯವೇ ಆಗಿದ್ದಿತು. ಏಕೆಂದರೆ, ಪೂರ್ವಪರಂಪರೆಯನ್ನು ಸಂರಕ್ಷಿಸಬೇಕೆಂದು, ಸಾರ್ವಭೌಮನ ಕಡೆಗೆ ರಾಜ್ಯವನ್ನು ಒಪ್ಪಿಸಬೇಕೆಂದರೆ ಯಾರ ಕಡೆಗೆ ಒಪ್ಪಿಸಬೇಕು? ಇಂದಿನ ಕಾಲದಲ್ಲಿ ಸಾರ್ವಭೌಮನ ಸರ್ವಾಧಿಕಾರಿತ್ವದ ಆಡಳಿತ ತಡೆಮಟ್ಟು ನಿಲ್ಲುವಂತಹದೂ ಅಲ್ಲ.

ಪ್ರಜಾಪ್ರಭುತ್ವದ ತತ್ತ್ವವನ್ನು ಪುರಸ್ಕರಿಸಿ ಭಾರತದ ರಾಜ್ಯ ಘಟನೆಯೂ ಸಿದ್ಧವಾಯಿತು. ಘಟನೆಗನುಗುಣವಾಗಿ ಬಹುಸಂಖ್ಯಾಕ ಪಕ್ಷವಾದ ಕಾಂಗ್ರೆಸ್ ಸಂಸ್ಥೆ ಆಡಳಿತದ ಅಧಿಕಾರವನ್ನೂ ಸ್ವೀಕರಿಸಿತು.

ಪ್ರಜಾಪ್ರಭುತ್ವ ಪದ್ಧತಿ ನಮ್ಮ ರಾಷ್ಟ್ರಕ್ಕೆ ಹೊಸದು. ಅದಕ್ಕಾಗಿ ಆಡಳಿತದ ಸೂತ್ರಗಳನ್ನು ಕೈಯಲ್ಲಿ ಹಿಡಿವ ಕಾಂಗ್ರೆಸಿನ ನಾಯಕರು ವಿವಿಧರೀತಿಯ ಶಾಸನಸ್ಪಯೋಗಗಳನ್ನು ನಡೆಸಿದ್ದಾರೆ. ಒಂದೊಂದು ಪ್ರಯೋಗವೂ ಸಮಾಜವಲ್ಲಿಯ ಒಂದೊಂದು ಬಗೆಯ ಜನರಿಗೆ ಸಿಡಿಲಿನ ಆಘಾತವಾಗಿ ಪರಿಣಮಿಸುತ್ತಲಿದೆ. ಅನೇಕ ವರ್ಗದ ಜನರು ಇಂದಿನ ಆಡಳಿತದ ಪ್ರಯೋಗಗಳಿಗಾಗಿ ಭೀತರಾಗಿದ್ದಾರೆ. ಕಾತರರಾಗಿದ್ದಾರೆ. ಇವರು ತಾರಕಪುರುಷನೊಬ್ಬನ ದಾರಿಯನ್ನು ಕಾಯುತ್ತಿದ್ದರು. ಚತುರರಾದ ಪೂರ್ವ ಚಕ್ರವರ್ತಿ ರಾಜಗೋಪಾಲಾಚಾರ್ಯರು ಈಗ ಇವರಿಗೆ ನೇತಾರರಾಗಿ ಮುಂದೆ ಬಂದಿದ್ದಾರೆ. "ಸ್ವತಂತ್ರಪಕ್ಷ" ಎಂಬ ಹೆಸರಿನಿಂದ ಹೊಸ ಪಕ್ಷವನ್ನು ಸಂಘಟಿಸಿ, ಸದ್ಯದ ಕಾಂಗ್ರೆಸಿನ ಪ್ರಯೋಗಾತ್ಮಕ ಆಡಳಿತವನ್ನು ಬಲವಾಗಿ ವಿರೋಧಿಸಬೇಕೆಂಬ ಹೊಂಚಿನಲ್ಲಿದ್ದಾರೆ. ಸದ್ಯದ ಆಡಳಿತದಿಂದ ಏಟನ್ನು ತಿಂದ ಅನೇಕ ಜನರು ಈ ಪಕ್ಷದ ಚಟುವಟಿಕೆಯನ್ನು ಆಶೆಯಿಂದ ನಿರೀಕ್ಷಿಸುತ್ತಲಿದ್ದಾರೆ.

ಸ್ವತಂತ್ರ ಪಕ್ಷದಲ್ಲಿ ಸೇರಿಕೊಂಡವರಾರು?

ಕಾಂಗ್ರೆಸ್ಸು ಕಾಲಕ್ಕನುಗುಣವಾಗಿ ಪ್ರಜಾಪ್ರಭುತ್ವ ತತ್ತ್ವವನ್ನೇನೋ ಪುರಸ್ಕರಿಸಿತು; ಆದರೆ ಆ ತತ್ತ್ವವನ್ನು ಭಾರತೀಯ ಸಂಸ್ಕೃತಿ ಪರಂಪರೆಗೆ ಸಮನ್ವಯಿಸಿಕೊಳ್ಳುವುದನ್ನು ಬಿಟ್ಟು, ಪಶ್ಚಿಮ ದೇಶದ ಭೌತಿಕ ರಾಜಕೀಯತತ್ತ್ವವನ್ನು ಭಾರತೀಯರ ಮನದ ಮೇಲೆ ಹೇರಬೇಕೆಂದು ಪ್ರಯೋಗವನ್ನು ನಡೆಸಿತು. ಆದರೆ ಭಾರತೀಯ ಜನತೆ ಇನ್ನೂ ಪರಿಗೂ ಹಳೆಯ ವಿಚಾರಗಳ ಹಿಡಿತದಿಂದ ಹೊರಗಾಗಿಲ್ಲ. ಅವುಗಳನ್ನವರು ಈಗಲೂ ಆತ್ಮೀಯ ಭಾವದಿಂದ ನೋಡುವರು.

ದೈವಭಕ್ತಿ ನಮ್ಮ ಜನರಿಂದ ದೂರವಾಗಿಲ್ಲ. ಧರ್ಮಶಾಸ್ತ್ರಗಳ ವಿಷಯಕವಾದ ಶ್ರದ್ಧೆ ಅವರಲ್ಲಿ ಕಡಮೆಯಾಗಿಲ್ಲ. ಸಂಪ್ರದಾಯ ಪರಂಪರೆಗಳನ್ನು ಬಿಡಲು ಅವರ ಮನಸ್ಸು ಸಿದ್ಧವಿಲ್ಲ. ಆದರೆ ಇಂದಿನ ಆಡಳಿತದ ಭೌತಿಕ ವಿಚಾರದಿಂದ ಸಿದ್ಧವಾದ ಶಾಸನಗಳು, ಅವರನ್ನು ನೊದಲಿನಂತೆ ಬದುಕಲಿಕ್ಕೆ ಬಿಡಲೊಲ್ಲವಾಗಿವೆ. ಆದುದರಿಂದ ಹಳೆಯ ವಿಚಾರದವರೆಲ್ಲರೂ ಇಂದಿನ ಆಡಳಿತದ ವಿಷಯದಲ್ಲಿ ಅತೃಪ್ತಿಯನ್ನು ತಳೆದಿದ್ದಾರೆ.

ಕಲ್ಯಾಣರಾಷ್ಟ್ರದ ಗುರಿಯನ್ನಿರಿಸಿಕೊಂಡು, ಭಾರತದಲ್ಲಿ ಆರ್ಥಿಕ ಸಮತೆಯನ್ನು ಉಂಟುಮಾಡಬೇಕೆಂಬುದು ಇಂದಿನ ಆಡಳಿತದ ನೀತಿ. ಇದರಿಂದ ದೇಶವಲ್ಲಿಯ ಆರ್ಥಿಕ ವ್ಯವಸ್ಥೆಯೆ ಬುಡಮೇಲಾಗಿಬಿಟ್ಟಿದೆ. ಜಮೀನ್‌ದಾರರಿಗೆ ಸ್ವಾತಂತ್ರ್ಯವಿಲ್ಲ; ಬಂಡವಾಳಗಾರರಿಗಾರರಿಗೆ ಸ್ವಾತಂತ್ರ್ಯವಿಲ್ಲ. ವರ್ತಕರಿಗೂ ಉದ್ಯಮಿಗಾರರಿಗೂ ಮೊದಲಿನಂತೆ ಕೈತುಂಬ ಲಾಭ ದಕ್ಕುವಂತಿಲ್ಲ. ಭೂಮಿ-ಧನ-ಉದ್ಯಮಗಳ ಮೂಲಕ ಅವರು, ಇದುವರೆಗೂ ವೈಯಕ್ತಿಕವಾಗಿ ಸಮೃದ್ಧಜೀವನವನ್ನು ಸಾಗಿಸುತ್ತ, ಬಂಡವಾಳ ಬೆಳೆಯಿಸುತ್ತ ಬಂದಿದ್ದಾರೆ. ಇವರು ಹೀಗೆ ಜೀವನ ಸಾಗಿಸುತ್ತಿರುವುದಕ್ಕಾಗಿ, ಅನೇಕ ಜನ ದೇಶಬಾಂಧವರು ಜರೆಹೊಟ್ಟೆಯಿಂದಲೋ ಬರಿಹೊಟ್ಟೆಯಿಂದಲೋ ಬದುಕಬೇಕಾಗುತ್ತಿತ್ತು. ಇಂದಿನ ಆಡಳಿತ ಎಲ್ಲರ

ಹೊಟ್ಟೆಗೂ ಆಹಾರವನ್ನು ಒದಗಿಸಬೇಕೆಂಬ ಗುರಿಯನ್ನು ಇರಿಸಿಕೊಂಡಿದೆ. ರಾಷ್ಟ್ರದಲ್ಲಿ ಇದ್ದ ಪರಿಮಿತ ಸಂಪತ್ತಿನಲ್ಲಿ ಇದುವರೆಗೂ ಹಿಂಹದ ಪಾಲನ್ನು ಪಡೆಯುತ್ತಿರುವವರು, ಈಗ ಆಡಳಿತದ ವಿಚಾರದಲ್ಲಿ ಅತೃಪ್ತಿಯನ್ನು ಪಡೆದಿದ್ದರೆ, ಆದೊಂದು ಅಸ್ವಾಭಾವಿಕವೇನೂ ಅಲ್ಲ.

ಇಂದಿನ ಆಡಳಿತವನ್ನು ನಡೆಯಿಸುವವರೊಂದಿಗೇ ಇದುವರೆಗೂ ಕಾರ್ಯಮಾಡಿ, ತಮಗೆ ತಕ್ಕ ಸ್ಥಾನಮಾಫಗಳು ದೊರೆಯದೆ ಹೋದುದರಿಂದ, ಕೆರಳಿದ ಮನದವರಾದ ಕೆಲವು ಜನ ರಾಜಕೀಯ ಮುಖಂಡರೂ ನಮ್ಮ ರಾಷ್ಟ್ರದಲ್ಲಿ ಇವ್ವಾರೆ. ಇವರ ಗುರಿಯೆಂದರೆ ರಾಜಕೀಯ ಅಧಿಕಾರ ಸೂತ್ರಗಳನ್ನು ದೊರಕಿಸಿಕೊಳ್ಳುವುದಲ್ಲದೆ ಇನ್ನೇನೂ ಇಲ್ಲ.

ಇಂದಿನ ಆಡಳಿತದಲ್ಲಿಯ ಶೈಥಿಲ್ಯದ ಕಾರಣದಿಂದಲೂ ಸ್ವಾರ್ಥಿಗಳಾದ ಅಧಿಕಾರಿಗಳ ದುರಾಡಳಿತದಿಂದಲೂ ಮನವಾರೆ ರೋಸಿಕೊಂಡ ಜನರೂ ನಾಡಿನಲ್ಲಿ ಸಾಕಷ್ಟು ಜನರಿವ್ವಾರೆ. ಇವರು ಇಂದಿನ ಆಡಳಿತದ ಬಲದಿಂದರೇ ತಮ್ಮ ಬಂಡವಾಳವನ್ನು ಬೆಳೆಯಿಸಿಕೊಳ್ಳುವ "ಮುಂದ್ರಾ"ಗಳನ್ನು ಎಲ್ಲೆಲ್ಲಿಯೂ ನೋಡಿ ನೋಡಿ ರೋಸಿಹೋಗಿದ್ದಾರೆ.

ಜನಸಾಮಾನ್ಯರಂತೂ ಜನಸಾಮಾನ್ಯರು. ಅವರು, ನಂಬುಗೆಯಿಂದ ಕಾಣುವ ಮುಂದಾಳುಗಳು ಯಾವ ದಾರಿಯನ್ನು ತಮಗೆ ಹಿಡಿಯಲು ಹೇಳುತ್ತಾರೋ ಆ ದಾರಿಯಿಂದ ನಡೆಯುತ್ತಾರೆ. ಅಂಧ-ಶ್ರದ್ಧಾಳುಗಳಾದ ಜೀವನವಾದಿಗಳವರು.

ಮೇಲೆ ಹೇಳಿದ ಅತೃಪ್ತ ಜನರೆಲ್ಲರೂ ಸೇರಿ "ಸ್ವತಂತ್ರ ಪಕ್ಷ"ವನ್ನು ಬಲಿಸುತ್ತಲಿದ್ದಾರೆ. ಈ ಪಕ್ಷದ ಗೊತ್ತು-ಗುರಿಗಳೇನೆಂಬುದು ಇದುವರೆಗೆ ನಿಚ್ಚಳವಾಗಿ ಗೊತ್ತಾಗಿಲ್ಲವಾದರೂ, ಪಕ್ಷದ ವಿಷಯಕವಾದ ಕೂಗೇನೋ ವಾತಾವರಣದಲ್ಲಿ ರಭಸದಿಂದ ತುಂಬಿಕೊಂಡಿದೆ.

ಸ್ವತಂತ್ರಪಕ್ಷದ ಸ್ವರೂಪವೆಂತಿದೆ ?

ಲೋಕಕಲ್ಯಾಣಕ್ಕಾಗಿ ಹೊರಟ ಯಾವುದೇ ತತ್ತ್ವವಿಚಾರವೂ ಸಮೂಹಹಿತಕ್ಕಾಗಿ ವ್ಯಕ್ತಿಗಳು ಸ್ವಾರ್ಥತ್ಯಾಗದಿಂದ ವರ್ತಿಸಬೇಕೆಂಬುದನ್ನು ಬೋಧಿಸುತ್ತದೆ. ನೈಮಿತ್ತಿಕವಾಗಿ ವ್ಯಕ್ತಿಗಳು ತಾತ್ಪೂರ್ತಿಕ ತ್ಯಾಗಕ್ಕೆ ಒಪ್ಪಿಕೊಳ್ಳಬಹುದು; ಆದರೆ ನಿತ್ಯತ್ಯಾಗಕ್ಕೆ ಒಪ್ಪಿಕೊಳ್ಳುವ ವ್ಯಕ್ತಿಗಳ ಸಂಖ್ಯೆ ಸಮಾಜದಲ್ಲಿ ಅಲ್ಪವಾಗಿರುವುದು. ಲಾಟ್ರಿಯ ಆಶೆಯಿಂದ ಅದರ ಟಿಕೇಟನ್ನು ಹಣಕೊಟ್ಟು ಕೊಳ್ಳುವ ವ್ಯಕ್ತಿಗಳು ನಮ್ಮಲ್ಲಿ ಬಹಳ ಜನರು; ಆದರೆ ಅಷ್ಟೇ ಹಣವನ್ನು ಒಂದು ವಿಧಾಯಕ ಕಾರ್ಯಕ್ಕೆ ಕೊಡಿರೆಂದರೆ, ಕೊಡಲು ಸಿದ್ಧರಾಗುವವರು ಎಷ್ಟು ಜನರು? ಹೊಸ ರಾಜಕೀಯ ಪಕ್ಷದಿಂದ ತಮಗೆ ಒಳ್ಳೆಯ ಭವಿಷ್ಯವಿದೆಯೆಂಬ ಆಶೆಯಿಟ್ಟುಕೊಂಡವರು, ಆ ಪಕ್ಷಕ್ಕೆ ಸೇರಿಕೊಳ್ಳಬಹುದು. ಲಾಟ್ರಿ ಮನೋವೃತ್ತಿಯಿಂದಲೇ ಅದಕ್ಕೆ ಪ್ರಾರಂಭದಲ್ಲಿ ಆರ್ಥಿಕ ಸಹಾಯವನ್ನೂ ಒದಗಿಸಬಹುದು. ಆದರೆ ಈ ಹೊಸ ಪಕ್ಷದಿಂದ ಭವಿಷ್ಯದಲ್ಲಿಯ ಲಾಭ ಕಾಣದೆ ಹೋದರೆ, ಅಥವಾ ಪಕ್ಷ ತತ್ತ್ವಕ್ಕಾಗಿ ನಿತ್ಯತ್ಯಾಗವನ್ನು ಬೋಧಿಸತೊಡಗಿದರೆ, ಆ ಪಕ್ಷಕ್ಕೆ ಅಂಟಿಕೊಂಡು ಉಳಿಯುವ ವ್ಯವಹಾರಜೀವಿಗಳು ಎಷ್ಟೋ ಹೇಳಲು ಬಾರದು. ಹೇಳಲು ಬಾರದೇನು? ಸದ್ಯದ ಜೀವನಾನುಭವ ಹೇಳಲು ಬರುವಂತೆಯೂ ಮಾಡಿದೆ.

ಇಂದು ಕೇವಲ ತತ್ತ್ವನಿಷ್ಠೆಯಿಂದ ಕಾಂಗ್ರೆಸ್ ಪಕ್ಷದಲ್ಲಿ ಇರುವವರೆಂದರೆ ಒಂದೆರಡು ದಶಕಗಳಷ್ಟಾದರೂ ಇರುವರೋ ಇಲ್ಲವೋ! ಹೆಚ್ಚು ಜನರು, ಆ ಪಕ್ಷದಲ್ಲಿ ಸೇರುವುದರಿಂದ ಲಾಭವಿದೆ ಎಂಬ ಆಶೆಯಿಂದಲೇ ಸೇರಿರುವರು. ಎಂತಲೆ ಕಾಂಗ್ರೆಸ್ಸಿನ ತತ್ತ್ವಜ್ಞಾನದ ಮಾರಾಟವಿಂದು ಪೇಟೆಯಲ್ಲಿ ಕಾಸಿಗೆ ಸಂಘೇರಾಗಿದೆ.

ಮಾನ್ಯ ರಾಜಗೋಪಾಲಾಚಾರ್ಯರಾದರೂ ತ್ಯಾಗಮೂರ್ತಿಯಾದ ಮಹಾತ್ಮಾಗಾಂಧಿಯವರ ಗರಡಿಯ ಗಡಿಗಳು. ಜನಹಿತ ಕಾರ್ಯಕ್ಕೆ ವ್ಯಕ್ತಿಗಳ ತ್ಯಾಗದ ಅಗತ್ಯವಿದೆಯೆಂಬುದನ್ನು ಅವರೂ ಸಂಪೂರ್ಣವಾಗಿ ಅರಿತವರು. ಅಂತಹ ತ್ಯಾಗದ ತಳಹದಿಯ ಮೇಲೆಯೆ ಅವರು ತಮ್ಮ ಸ್ವತಂತ್ರ ಪಕ್ಷದ ಧ್ಯೇಯ-ಧೋರಣೆಗಳನ್ನು ರೂಪಿಸಿರಬಹುದು. ಆದರೆ ಇಂದು ಯಾವುದೋ ಉದ್ರಿಕ್ತ ಭಾವನೆಯಿಂದಲೋ, ಆವಿಷ್ಟ ಮನದಿಂದಲೊ, ಧೂರ್ತಬುದ್ಧಿಯಿಂದಲೋ— ಸ್ವತಂತ್ರ ಪಕ್ಷಕ್ಕೆ ಸೇರಿಕೊಳ್ಳುತ್ತಿರುವ ಬಹುಜನರು, ಕೊನೆಯವರೆಗೆ ಪಕ್ಷದ ತತ್ತ್ವಕ್ಕೆ ಅಂಟಿಕೊಂಡು ಉಳಿಯಬಹುದೇ ?

ಶಾಸನಾಧಿಕಾರವಿರುವ ಸರಕಾರ, ಇಂದು ಜನರ ಮೇಲೆ ಕರಭಾರವನ್ನು ಹೇರಬಹುದು. "ಕರವನ್ನು ಹಾಕುವುದು ಒತ್ತಾಯವೆನಿಸುವುದು. ಜನರಲ್ಲಿ ದಾನಕೊಡುವಂತಹ ಸದ್ಭಾವನೆಯನ್ನು ಹುಟ್ಟಿಸಬೇಕು!" ಎಂದು ಸಂಪ್ರದಾಯಪ್ರಿಯರಾದ ರಾಜಾಜಿ ಹೇಳುವರು. ಕರ-ಕಂದಾಯಗಳಿಗೆ ಶಾಸನದ ಒತ್ತಾಯವಿರುವುದು; ದಾನಮಾಡುವುದಕ್ಕೆ ಯಾರೂ ಒತ್ತಾಯವನ್ನು ಮಾಡರು— ಆದುದರಿಂದ ರಾಜಾಜಿಯವರ ಸ್ವತಂತ್ರ ಪಕ್ಷ ಒಳ್ಳೆಯದು— ಎಂಬ ಹಗುರುತರ್ಕದಿಂದ ರಾಜಾಜಿಯವರ ಪಕ್ಷವನ್ನು ಸೇರುವವರು, ತುಂಬ ವಿಚಾರಮಾಡಿ ಸೇರಬೇಕು. ರಾಜಾಜಿಯವರು ಆಸ್ತೇಯವಾದಿಗಳು; ಹೆಚ್ಚು ಗಳಿಸಿ ಹೆಚ್ಚು ದಾನಮಾಡಬೇಕೆಂಬ ಸ್ಮೃತಿಮತಾಭಿಮಾನಿಗಳು ಇಲ್ಲಿಯೂ ತಮಗೆ ಬಂಡವಾಳ ಬೆಳೆಯಿಸಿಕೊಳ್ಳಲು ಅನುಕೂಲವಿಲ್ಲವೆಂಬುದು ಮನವರಿಕೆಯಾದಾಗ, ಸ್ವತಂತ್ರ ಪಕ್ಷದ ಅಭಿಮಾನಿಗಳು ಎಷ್ಟು ಜನ ಉಳಿದಾರೆಂಬುದರ ನಿಯಮವಿಲ್ಲ. ಅದೂ ಒಂದು ಮಿಕ್ಕ ಅಲ್ಪಸಂಖ್ಯಾಕ ಪಕ್ಷವೊಂದಿಗೆ— ನಿಷ್ಕ್ರಿಯತೆಯಿಂದ ಕೂಡಿದ— ಒಂದು ಪಕ್ಷವಾಗಿ ಪರಿಣಮಿಸೀತು. ಯಾವುದೇ ಪಕ್ಷವು, ತತ್ತ್ವನಿಷ್ಠರಾದ ಬಹುಸಂಖ್ಯಾತರಿಂದ ಪರಿವೃದ್ಧಿಗೊಳ್ಳುವುದು; ಪ್ರಭಾವ ಶಾಲಿಯಾಗಬಲ್ಲದು. ತತ್ತ್ವ ಹೀನರನ್ನು ಒಳಗೊಂಡ ಪಕ್ಷವು, ಎಂದೂ ಬಾಳಲಾರದು; ಬೆಳೆಯಲಾರದು.

★ ಸೈನಿಕನ ಇಚ್ಛೆ ★

(ಒಂದು ಕಥೆ)

ಲೇ. 'ಚಿದಂಬರಾನಂದ' ಧಾರವಾಡ

ಹೆಣ್ಣುಗಂಡಿನ ಕಾಮಾಕರ್ಷಣೆ-ಪ್ರೇಮಾಕರ್ಷಣೆಗಳು, ಬಾಳಿನಲ್ಲಿ ಎಂತೆಂತಹ ವಿಪ್ಲವದ ಬಿರುಗಾಳಿಗಳನ್ನು ಎಬ್ಬಿಸಬಲ್ಲವು? ಆದರೆ ಪ್ರೇಮಾಕರ್ಷಣೆ ಎಬ್ಬಿಸಿದ ವಿಪ್ಲವ ವ್ಯಕ್ತಿಗೂ ಸಮಾಜಕ್ಕೂ ಅಹಿತವನ್ನು ಉಂಟು ಮಾಡದು. ಕಾಮಾಕರ್ಷಣೆ ಎಬ್ಬಿಸಿದ ವಿಪ್ಲವ ಮಾತ್ರ ವ್ಯಕ್ತಿಯ ಬಾಳನ್ನೂ ಕೆಡಿಸುವುದು; ಸಮಾಜಸ್ವಾಸ್ಥ್ಯವನ್ನೂ ಹದಗೆಡಿಸುವುದು.

ಅನಿಲನ ಮನೆಯ ಕಡೆಗೆ ಹೋಗಬೇಕೆಂದು ವಸಂತ ವಿಚಾರಿಸಿದಾಗ, ಅವನ ಕಾಲುಗಳು ಒಮ್ಮೆಲೇ ತಮ್ಮ ವೇಗವನ್ನು ಕಡಿಮೆ ಮಾಡಿದುವು. ಅವನ ಮನಸ್ಸಿನ ಹೊಯ್ದಾಟವೇ ಅದಕ್ಕೆ ಕಾರಣವಾಗಿತ್ತು.

ಯುದ್ಧರಂಗದಿಂದ ರಜೆಯ ಮೇಲೆ ಬಂದಿದ್ದ ಕ್ಯಾಪ್ಟನ್ ವಸಂತನಿಗೆ "ನಿಮ್ಮ ರಜೆಯನ್ನು ರದ್ದುಗೊಳಿಸಲಾಗಿದೆ; ಕೂಡಲೇ ಬರಬೇಕು" ಎಂದು ತಂತಿ ಬಂದಿತ್ತು. ಮರುದಿನವೇ ಯುದ್ಧರಂಗಕ್ಕೆ ಹೊರಡುವುದನ್ನು ನಿಶ್ಚಯಿಸಿದ್ದ ವಸಂತನು, ತನ್ನ ಕೆಲವು ಸ್ನೇಹಿತರನ್ನು ಭೆಟ್ಟಿಯಾಗಿ ಬರಲು ಹೊರಟಿದ್ದ. ಆಗ ಅನಿಲನ ಮನೆಗೆ ಹೋಗಬೇಕೆಂಬ ವಿಚಾರವು ಬರಲು, ಅವನ ಕಾಲುಗಳು ಒಮ್ಮೆಲೇ ನಿಂತುಬಿಟ್ಟವು. ಆದರೂ ಅವನು ತನ್ನ ಕಾಲು ಎಳೆಯುತ್ತ ಅನಿಲನ ಮನೆಯ ಕಡೆಗೆ ನಡೆದ.

ಅನಿಲನೂ ವಸಂತನೂ ಕಾಲೇಜಿನಲ್ಲಿ ಗೆಳೆಯರಾಗಿದ್ದರು. ಅನಿಲನ ನೆರವು ಇರದಿದ್ದರೆ ವಸಂತನ ಶಿಕ್ಷಣ ಮುಂದುವರಿಯುತ್ತಿರಲಿಲ್ಲವೆಂದೇ ಹೇಳಬಹುದು. ಆದುದರಿಂದಲೇ ಅನಿಲನನ್ನು ವಸಂತ ತನ್ನ ಅಣ್ಣನಂತೆ ಕಾಣುತ್ತಿದ್ದ.

ವಸಂತನು ರಜೆಯ ಮೇಲೆ ಇದ್ದಾಗ ಅನಿಲನ ಮನೆಯ ಕಡೆಗೆ ಬಹಳ ಸಾರಿ ಹೋಗಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಅನಿಲನ ಹೆಂಡತಿಯಾದ ಅಂಜನಾ ವಸಂತನನ್ನು ಕಾಣುವ ರೀತಿ, ವಸಂತನಲ್ಲಿ ಹೆದರಿಕೆಯನ್ನು ಹುಟ್ಟಿಸಿತ್ತು.

ಅಂಜನಾ ವಸಂತನಿಗೆ ಅಪರಿಚಿತಳೇನೂ ಆಗಿರಲಿಲ್ಲ. ವಸಂತನು ಹಾಯ್‌ಸ್ಕೂಲಿನಲ್ಲಿದ್ದಾಗ, ಅಂಜನಾ ಅವನ ನೆರೆಮನೆಯವಳಾಗಿದ್ದಳು; ಸಾಕಷ್ಟು ಪರಿಚಿತಳಾಗಿದ್ದಳು. ಆದರೆ ಅವಳ ಆಗಿನ ಸ್ವಭಾವಕ್ಕೂ ಈಗಿನ ಸ್ವಭಾವಕ್ಕೂ ಬಹಳ ಅಂತರವಾಗಿದೆಯೆಂದು ವಸಂತನಿಗೆ ಎನಿಸಿತ್ತು. ಆಗಿನ ಅಂಜನಾ ವಸಂತನ ಕೂಡ ಸಲುಗೆಯಿಂದ ಇದ್ದರೂ, ಅವಳಲ್ಲಿ ಕಾಮದ ಕರಿ ಇರಲಿಲ್ಲ. ಈಗಿನ ಅಂಜನಾ ಮಾತ್ರ ವಸಂತನಿಗೆ ಕಾಮೋನ್ಮಾದಿನಿಯಾಗಿ ಕಂಡಿದ್ದಳು. ಅವಳ ಪ್ರತಿಯೊಂದು ನಡೆನುಡಿಯಲ್ಲಿ ಕಾಮದ ಕರೆಯಿದೆ ಎಂದು ವಸಂತ ಭಾವಿಸಿದ್ದ.

ವಸಂತ ಅಂತಹ ಸಂಭಾವಿತನೇನೂ ಅಲ್ಲ; ಅದರಂತೆಯೆ ಅವನು ದುಷ್ಟನೂ ದುರಾಚಾರಿಯೂ ಆಗಿರಲಿಲ್ಲ. ಸೈನಿಕನಾಗಿದ್ದ—ಅವಿವಾಹಿತನಾಗಿದ್ದ ವಸಂತನಲ್ಲಿ ವಿಷಯಾಸಕ್ತಿ ತುಂಬಿ ತುಳುಕುತ್ತಿದ್ದರೂ, ಅವನು ಕೆಲವೊಂದು ನೀತಿ-ನಿಯಮಗಳಿಗೆ ತನ್ನ ವಿಷಯಾಸಕ್ತಿಯನ್ನು ಒಳಪಡಿಸಿದ್ದನು.

ಅಂಜನೆಯ ನಡೆ-ನುಡಿಗಳು ಅವನ ವಿಷಯಾಸಕ್ತಿಯನ್ನು ಕೆರಳಿಸುತ್ತಿದ್ದರೂ; ಅನಿಲನ ಬಗ್ಗೆ ಅವನಲ್ಲಿ ನೆಲೆಸಿರುವ ಗೌರವಾದರಗಳು ಅವನ ಲಾಲಸೆಯನ್ನು ತಡೆಗಟ್ಟುತ್ತಿದ್ದುವು. ಈ ಹೋರಾಟದಲ್ಲಿ ತನ್ನ ವಿಷಯಾಸಕ್ತಿ ಮೇಲುಗೈಯಾಗಿ, ಅನಿಲನಿಗೆ ತಾನೇನಾದರೂ ಅನ್ಯಾಯ ಬಗೆದೇನೆಂಬ ಹೆದರಿಕೆಯಿಂದ ಅವನು ಅನಿಲನ ಮನೆಯ ಕಡೆಗೆ ಹೋಗುವುದನ್ನೇ ಕಡಿಮೆ ಮಾಡಿದ್ದ.

ಅದಕ್ಕಾಗಿಯೇ ಇಂದು ಅನಿಲನ ಮನೆಯ ಕಡೆಗೆ ಹೊರಟು ನಿಂತಾಗ, ಅವನ ಕಾಲುಗಳು ಒಮ್ಮೆಲೇ ಮುಂದಾಗಲಿಲ್ಲ. ಅದರೂ ಅನಿಲನನ್ನು ಭೆಟ್ಟಿಯಾಗದೇ ಹೋಗುವಂತಿರಲಿಲ್ಲ. ಅನಿಲನು ವಸಂತನಿಗೆ ಅಷ್ಟು ಬೇಕಾದವನಾಗಿದ್ದ.

ವಸಂತನು ಅನಿಲನ ಮನೆಯ ಬಾಗಿಲಿನಲ್ಲಿದ್ದ ವಿದ್ಯುತ್ತಿನ ಗುಂಡಿಯನ್ನೊತ್ತಿದಾಗ ಸಾಯಂಕಾಲವಾಗಿತ್ತು. ಅನಿಲನ ಪತ್ನಿ-ಅಂಜನಾ-ಬಾಗಿಲನ್ನು ತೆರೆದು 'ಒಳಗೆ ಬಾ' ಎಂದಾಗ, ಕರವಸ್ತ್ರದಿಂದ ಹಣೆಯ ಮೇಲಿನ ಬೆವರುಹನಿಗಳನ್ನು ಒರಸಿಕೊಳ್ಳುತ್ತ ವಸಂತ ಒಳಗೆ ಕಾಲಿಟ್ಟ. ಆದರೆ ಅನಿಲ ಕಾಣದ್ದರಿಂದ 'ಇನ್ನೂ ಅನಿಲ ಬಂದಿಲ್ಲವೇ?' ಎಂದು ಕೇಳಿದ.

"ಬರಲು ಸ್ವಲ್ಪ ತಡವಾಗುವುದೆಂದು ಹೇಳಿಹೋಗಿದ್ದಾರೆ" ಅಂಜನಾ ಹೇಳಿದಳು.

"ಹಾಗಾದರೆ ನಾನು ಸ್ವಲ್ಪ ತಡೆದು ಬರುತ್ತೇನೆ."

ವಸಂತ ನಿಂತ ಸ್ಥಿತಿಯಲ್ಲಿಯೇ ನುಡಿದ:

" ಅದೇಕೆ? ಅವರು ಬರುವವರೆಗೂ ಕುಳಿತಿರಲು ಭಯವಾಗುವುದೋ ?" ಅಂಜನಾ ಪ್ರಶ್ನಿಸಿದಳು.

" ಸೈನಿಕರುಗೆಲ್ಲಿಯ ಭಯ ! ಆದರಲ್ಲಿಯೂ ಮನೆಯಲ್ಲಿ ಸ್ತ್ರೀಯರಷ್ಟೇ ಇರುವಾಗ—" ವಸಂತ ವಿನೋದ ಮಾಡಿದ.

" ಯಾರಿಗೆ ಗೊತ್ತು ! ಸ್ತ್ರೀಯರಿಗಂಜುವ ಸೈನಿಕರೂ ಇರಬಹುದು— ನಿಮ್ಮ ಹಾಗೆ ! " ಅಂಜನಾ ವಿನೋದವಾಗಿಯೇ ಹೇಳಿ, ಒಂದು ತುಂಟ ನಗೆ ನಕ್ಕಳು.

" ನಿಮಗೆ ಅಂಜಿ ನಾನು ಹೋಗಿ ಬರುತ್ತೇನೆಂದು ಹೇಳಲಿಲ್ಲ. ನಾಳೆಗೇ ನಾನು ರಣಭೂಮಿಗೆ ಹೊರಡಬೇಕಾಗಿದೆ. ಅದಕ್ಕಾಗಿ ಅನಿಲನಿಗೆ ಭೆಟ್ಟಿಯಾಗಲು ಬಂದಿದ್ದೆ. ಅಲ್ಲದೆ ಇನ್ನೂ ಕೆಲವರಿಗೆ ಭೆಟ್ಟಿಯಾಗಬೇಕಾಗಿದೆ. ಬೇರೆ ಕೆಲವು ಕೆಲಸಗಳೂ ಇವೆ. ಅದಕ್ಕಾಗಿ ಇಲ್ಲಿ ಸುಮ್ಮನೇ ಕುಳಿತಿರುವುದಕ್ಕಿಂತ ಹೋಗಿಬರಬೇಕೆಂದೆ."

" ಇದೇನು ಹೇಳುತ್ತಿರುವಿರಿ ಮತ್ತೆ ! ಈಗಾಗಲೇ ನಿಮ್ಮ ರಜೆ ಮುಗಿಯಿತೇ ?" ಅಂಜನಾ ಆಶ್ಚರ್ಯಚಕಿತಳಾಗಿ ಕೇಳಿದಳು.

" ರಜೆಯು ಮುಗಿದಿಲ್ಲ. ಆದರೆ ರದ್ದುಗೊಳಿಸಲ್ಪಟ್ಟಿದೆ."

" ಓಗೇನು ? ಈಗ ಬಹಳ ದಿನಗಳಿಂದ ನೀವು ಇತ್ತ ಬಂದೇ ಇಲ್ಲ. ಆದ್ದರಿಂದ ನಿಮ್ಮ ಸುದ್ದಿಯೇ ನಮಗೆ ತಿಳಿದಿಲ್ಲ. ನಿನ್ನೆಯೇ 'ಅವರು' ನಿಮ್ಮ ಕಡೆಗೆ ಹೋಗಿಬರಬೇಕು, ಯಾಕೋ ಈಗ ಇತ್ತ ಬಂದೇ ಇಲ್ಲ' ಅನ್ನುತ್ತಿದ್ದರು."

" ಅದಕ್ಕಾಗಿಯೇ ಈಗ ಭೆಟ್ಟಿಯಾಗಿ ಹೋಗಲು ಬಂದಿದ್ದೇನೆ."

ನಾನೂ ಅದಕ್ಕಾಗಿಯೇ 'ಕುಳಿತುಕೊಳ್ಳಿರಿ' ಎಂದು ಹೇಳಿದ್ದು. ಹೇಗಾದರೂ ಚಹಕ್ಕೆ ಎಸರು ಇಟ್ಟಿದ್ದೇನೆ. ಈಗ ಯುದ್ಧಕ್ಕೆ ಹೊರಟಿರುವಿರೆಂದಮೇಲೆ ಮತ್ತೆ ಎಂದು ನಮ್ಮ ಮನೆಗೆ ಬರುವಿರೋ ಏನೋ ! ಅಲ್ಲದೇ ಚಹ ಆಗುವಷ್ಟರಲ್ಲಿ ಅವರೂ ಬರಬಹುದು. ಸ್ವಲ್ಪ ಕುಳಿತುಕೊಳ್ಳಿರಿ" ಅಂಜನಾ ಆಗ್ರಹಪಡಿಸಿದಳು.

" ಆಗಲಿ " ಎಂದು ವಸಂತ ನಿರ್ವಾಹವಿಲ್ಲದೆ ಕುಳಿತ.

" ಎಂದಾದರೊಂದು ದಿನ ಬಂದು ನಿಂತಕಾಲಮೇಲೆ ಓಡಿ ಹೊರಟದ್ದಾರೆ.' ಎನ್ನುತ್ತ ಅಂಜನಾ ಒಳಗೆ ಹೋದಳು.

ವಸಂತ ಒಂದೈದು ನಿಮಿಷ ಅತ್ತಿತ್ತ ನೋಡುತ್ತ ಕುಳಿತಿರುವಷ್ಟರಲ್ಲಿ ಅಂಜನಾ ಹೊರಗೆ ಬಂದು ಕರೆದಳು :

" ಒಳಗೇ ಬರ್ರಿ. ಚಹ ಆಗುವವರೆಗೆ ಮಾತನಾಡುತ್ತ ಕುಳಿತಿರಬಹುದು."

" ಬೇಡ ಬೇಡ. ಇಲ್ಲೇ ಇರಲಿ. ಈ ಬೂಟುಗಳನ್ನು ಮತ್ತೆ ಕಳೆಯಲಾರೆ."

" ಏನು ಬೂಟುಗಳಳಚುವುದೊಂದು ನಿಮಗೆ ಮಹಾಕಾರ್ಯವೇ ಆಯಿತಲ್ಲ."

" ಹೌದು ನಮಗೆ ಅದೊಂದು ಮಹಾಕಾರ್ಯವೇ."

" ಇದೇನು ? ಒಳಗೆ ಬರಲು— ಅಪರಿಚಿತರ ಹಾಗೆ— ಇಷ್ಟೇಕೆ ಸಂಕೋಚಪಡುತ್ತಿರುವಿರಿ ?"

" ನಾನು ಸೈನಿಕನಾದಾಗಿನಿಂದಲೂ ನಮಗ ಅಪರಿಚಿತನೇ ಆಗಿರುವುದಿಲ್ಲವೇ ? "

" ಹೀಗೇನು ? ಹೂಂ. ನೀವು ಎಂದಿನಿಂದ ಸೈನಿಕರಾಗಿರುವಿರಿ ?"

" ಇದೇನು ನೀವು ಹೀಗೆ ಕೇಳುತ್ತಿರುವುದು ? ನಾನು ಸೈನಿಕನಾಗಿ ಇಷ್ಟು ದಿನಗಳಾದರೂ ನಾನು ಸೈನಿಕನಾದದ್ದು ನಿಮಗೆ ಗೊತ್ತಾಗಿಲ್ಲವೇ ?"

" ನೀವು ಸೈನಿಕನ ವೇಷಧರಿಸುವುದನ್ನು ಮಾತ್ರ ಆಗೀಗ ನೋಡಿದ್ದೆ ಅಷ್ಟೆ. ಆದರೆ ವೇಷಧರಿಸಿದ ಮಾತ್ರಕ್ಕೇ ಎಲ್ಲರೂ ಸೈನಿಕರಾಗಿಬಿಡುತ್ತಾರೆಯೇ ?"

" ಮತ್ತೆ ಏನು ಮಾಡಿದರೆ ಸೈನಿಕರಾಗುತ್ತಾರೆ ?" ಅಂಜನೆಯ ಮಾತುಕೇಳಿ ಚಕಿತನಾದ ವಸಂತ ಪ್ರಶ್ನಿಸಿದ.

" ಸೈನಿಕರಂತೆ ನಡೆದರೆ ಮಾತ್ರ ಸೈನಿಕರಾಗುತ್ತಾರೆ."

" ನಾನು ಸೈನಿಕರಂತೆ ನಡೆಯುತ್ತಿಲ್ಲವೇ ?"

" ಖಂಡಿತವಾಗಿಯೂ ಇಲ್ಲ."

ಅಂಜನೆಯ ಈ ಮಾತುಕೇಳಿ ವಸಂತನಿಗೆ, ಯಾರೋ ಬಲವಾಗಿ ತನ್ನ ಕಪೋಲಕ್ಕೆ ಒಂದು ಏಟು ಬಿಗಿದರೆ ಹೇಗೆ ಎನಿಸಬೇಕೋ ಹಾಗೆ ಎನಿಸಿತು.

ಕ್ಷಣಹೊತ್ತು ಬೆಪ್ಪನಾಗಿ ಕುಳಿತು, ವಿಚಾರಿಸಿ, ಅನಂತರ ವಸಂತ ಕೇಳಿದ :

" ನಾನು ಸೈನಿಕನ ಹಾಗೆ ನಡೆಯುತ್ತಿಲ್ಲವೆಂದು ನೀವು ಹೇಗೆ ಹೇಳುತ್ತೀರಿ ?"

" ಅಯ್ಯೋ, ಇದಕ್ಕೂ ಆಧಾರಬೇಕೇ ? " ಎಂದು ನಕ್ಕು ಅಂಜನಾ ಹೇಳಿದಳು : " ನೀವು ಒಳಗೆ ಬರಲು ಮೀನಮೇಷ ಮಾಡುತ್ತಿರುವುದೇ ನನ್ನ ಮಾತಿಗೆ ಸಾಕ್ಷಿ. "

" ಆದರೆ ಈ ಮಾತು ಬೇರೆ ಇನ್ನಾರಿಗೂ ಅನ್ವಯಿಸಬಹುದು."

" ಸೈನಿಕರಿಗೇ ಇದು ವಿಶೇಷವಾಗಿ ಅನ್ವಯಿಸುತ್ತದೆ."

" ನನಗೆ ನಿಮ್ಮ ಮಾತಿನ ಅರ್ಥವಾಗಲಿಲ್ಲ."

" ನನ್ನ ಮಾತಿನ ಅರ್ಥವಿಷ್ಟೇ. ಸ್ತ್ರೀಯರ ಕೂಡ ಅವಿನಯದಿಂದ ವರ್ತಿಸುವುದೇ ಸೈನಿಕರ ಲಕ್ಷಣವೆಂದು ನಾನು ಕೇಳಿದ್ದೇನೆ. ಓದಿದ್ದೇನೆ. ನೀವು ಅವಿನಯದಿಂದ ನಡೆಯುವುದಂತೂ ದೂರವೇ ಉಳಿಯಿತು. ಬರೀ ಒಳಗೆ ಬರಲು ಹೆದರುತ್ತಿರುವಿರಿ. ಅಂದಮೇಲೆ ನಿಮಗೆ ಸೈನಿಕರೆಂದು ಹೇಗೆ ಹೇಳಬೇಕು ?"

" ಇಂದೇಕೋ ನಿಮ್ಮ ಮಾತೇ ವಿಚಿತ್ರವಾಗಿವೆ."

" ಇದರಲ್ಲೇನು ಬಂತು ವಿಚಿತ್ರ ! ನನಗೆ ಅನಿಸಿದ್ದನ್ನು ಅಡಿತೋರಿಸಿದ್ದೇನೆ. ಇಷ್ಟೆ."

"ಹಾಗಾದರೆ ಸೈನಿಕರ ಬಗ್ಗೆ ನಿಮ್ಮಲ್ಲಿ ಸಂಪೂರ್ಣವಾಗಿ ತಪ್ಪು ಕಲ್ಪನೆಯಿದೆ. ಸೈನಿಕರೆಂದರೆ ಸ್ತ್ರೀಯರಕೂಡ ಬರೀ ಅವಿನಯದಿಂದ ನಡೆಯುವ ಮೂರ್ತಿಗಳಲ್ಲ. ಅವರು ರಾಷ್ಟ್ರರಕ್ಷಕರು."

"ಇರಬಹುದು. ಅವರು ರಾಷ್ಟ್ರರಕ್ಷಕರೂ ಆಗಿರಬಹುದು. ಆದರೆ ಖಂಡಿತವಾಗಿಯೂ ಸ್ತ್ರೀಯರ ಮಾನರಕ್ಷಕರಲ್ಲ."

"ನಿಮಗಿನ್ನೂ ಇತಿಹಾಸದ ಕಲ್ಪನೆಯಿಲ್ಲ."

"ಹೀಗೇನು? ನೀವೊಬ್ಬರೇ ಕಲಿತವರು, ಇತಿಹಾಸವನ್ನೂ ಬಲ್ಲವರು— ಎಂಬಂತೆ ಮಾತನಾಡುತ್ತಿರುವಿರಲ್ಲ. ನಾನೂ ನಿಮ್ಮಷ್ಟೇ ಕಲಿತಿದ್ದೇನೆ. ನೀವು ಓದಿದ ಇತಿಹಾಸವನ್ನೇ ಓದಿದ್ದೇನೆ. ನಾನು ಈಗ ಹೇಳಿದ್ದು ಇತಿಹಾಸದ ಆಧಾರದಿಂದಲೇ."

"ಒಂದು ಕ್ಷಣ ನಿಮ್ಮ ಅಭಿಪ್ರಾಯವೇ ಸರಿಯೆಂದು ಭಾವಿಸಿದರೂ, ಸೈನಿಕರ ವರ್ತನೆಗೆ ಅವರೇ ಸಂಪೂರ್ಣ ಹೊಣೆಗಾರರಲ್ಲ. ಆದುದರಿಂದ ಹಾಗೆ ಅವರು ನಡೆದರೆ ಅದು ಅವರದೇ ತಪ್ಪಲ್ಲ. ಆ ರೀತಿ ವರ್ತಿಸುವಂತೆ ಅವರಲ್ಲಿ ಪ್ರೇರಣೆಯನ್ನುಂಟು ಮಾಡುವ ವಾತಾವರಣವನ್ನು ನಿರ್ಮಿಸಿದವರ ತಪ್ಪೂ ಅದರಲ್ಲಿದೆ."

"ತಪ್ಪು ಯಾರದೇ ಇರಲಿ. ಅಪಮಾನವನ್ನು ಸಹಿಸುವುದು ಮಾತ್ರ ಸ್ತ್ರೀಯರಿಗೆ ತಪ್ಪಿದ್ದಲ್ಲ. ಯಾವುದೇ ದೇಶದಲ್ಲಿ ಯಾವುದೇ ಕಾಲದಲ್ಲಿ ಯುದ್ಧವಾದರೆ, ವಿಪ್ಲವವಾದರೆ ಸ್ತ್ರೀಯರಷ್ಟು ಇನ್ನಾವ ಜನರೂ ದುಃಖವನ್ನು ಅನುಭವಿಸುವುದಿಲ್ಲ."

"ಆದರೆ ಮಹಾ ಮಹಾ ವಿಪ್ಲವಗಳಿಗೂ ಯುದ್ಧಗಳಿಗೂ ಬಹಳ ಸಂದರ್ಭಗಳಲ್ಲಿ ಸ್ತ್ರೀಯರೇ ಕಾರಣರಾಗಿದ್ದಾರೆ—ಆಗುತ್ತಾರೆ—ಎಂಬುದನ್ನು ನೀವು ಮರೆತಂತೆ ಕಾಣುತ್ತದೆ." ಗೆಲುವಿನ ದನಿಯಲ್ಲಿ ವಸಂತ ಹೇಳಿದ.

"ಇಲ್ಲ. ನಾನೇನೂ ಇದನ್ನು ಮರೆತಿಲ್ಲ. ಆದರೆ ನೀವೇ— ಸ್ತ್ರೀಯರ ರೂಪಕ್ಕೆ ಮರುಳಾದ ಪುರುಷರೇ— ಎಲ್ಲ ಅನರ್ಥಗಳಿಗೂ ಕಾರಣರೆಂಬುದನ್ನು ಮರೆತಿರುವಿರಿ." ಎಂದು ನುಡಿದು ಅಂಜನೆ ವಸಂತನ ಬಾಯಿ ಕಟ್ಟಿದಳು.

ಈಗ ಏನು ಮಾತನಾಡಬೇಕೆಂಬುದು ವಸಂತನಿಗೆ ತಿಳಿಯಲಿಲ್ಲ. ಆದುದರಿಂದ ಅವನು "ಹುಂ. ನೀನೇನು ಚಹ ತಯಾರಿಸುವವರೋ ಅಥವಾ ಹೀಗೇ ವಾದ-ವಿವಾದ ಮಾಡುತ್ತ ನಿಲ್ಲುವವರೋ ಹೇಳಿರಿ. ನನಗೆ ಹೊತ್ತಾಗುತ್ತದೆ. ಬೇಗನೇ ಹೊರಡಬೇಕು." ಎಂದು ಮಾತಿನ ದಿಶೆಯನ್ನೇ ಬದಲಿಸಿದ.

"ಇಲ್ಲ. ಇಲ್ಲ. ಸ್ವಲ್ಪ ಕುಳಿತುಕೊಳ್ಳಿರಿ. ಈಗಲೇ ಚಹ ಸಿದ್ಧ ಮಾಡುತ್ತೇನೆ. ನನ್ನದೊಂದು ಖೋಡಿ ಸ್ವಭಾವ. ಮಾತಿಗೆ ಹತ್ತಿದೆನೆಂದರೆ ಎಲ್ಲವನ್ನೂ ಮರೆತೇ ಬಿಡುತ್ತೇನೆ. ಅಲ್ಲದೇ ಈಗ ಬಹಳ ದಿನದಿಂದಲೂ ನಿಮ್ಮ ಕೂಡ ವಾದ ಮಾಡಿಲ್ಲ" ಎಂದು ನುಡಿದು ಅಂಜನಾ ಒಳಗೆ ಓಡಿದಳು.

ವಸಂತನು ಮಾತ್ರ ಬೆಪ್ಪನಾಗಿ ಕುರ್ಚಿಯ ಮೇಲೆ ಕುಳಿತಿದ್ದ. ಮೇಜಿನ ಮೇಲಿಟ್ಟ ಗಡಿಯಾರವೊಂದು ಕಾಲನ ಹೆಜ್ಜೆಯ ಸಪ್ಪಳವನ್ನು ಸೂಚಿಸುವಂತೆ 'ಟಿಕ್ ಟಿಕ್' ಎಂದು ಧ್ವನಿ ಮಾಡುತ್ತಲಿತ್ತು. ನೆರೆ ಮನೆಯ ಬಾನುಲಿಯೊಂದು ವಸಂತನ ಜೀವನವನ್ನು ಕಳೆಯಲೋಸುಗ ನೆಂಬಂತೆ ಸಂಗೀತಸೇವೆಯನ್ನು ನಡೆಸಿತ್ತು. ಪಟ್ಟಣದ ಗದ್ದಲವು ಅಸ್ಪಷ್ಟವಾದ ಒಂದು ಸಂಕೀರ್ಣರೂಪದಲ್ಲಿ ಕೇಳುತ್ತಲಿತ್ತು. ಎದುರಿನ ಕಿಡಕಿಯ ಮೇಲ್ಬದಿಗೆ ತೂಗುಹಾಕಿದ್ದ ಕ್ಯಾಲೆಂಡರಿನಲ್ಲಿಯ ತಾರೆಯೋರ್ವಳು ವಸಂತನ ಕಡೆಗೆ ಕುಡಿನೋಟದ ಕಣಿಗಳನ್ನೆಸೆದು ಮುಗುಳುನಗೆ ನಗುತ್ತಲಿದ್ದಳು.

ವಸಂತನು ಗುಂಗುಹಿಡಿದು ಕುಳಿತಿದ್ದ. ಅವನಿಗೆ ಅಂಜನೆಯ ಇಂದಿನ ಮಾತುಗಳು ವಿಚಿತ್ರವೆನಿಸಿದ್ದುವು. ಅಂಜನಾ ಸೈನಿಕರ ಬಗ್ಗೆ ಹೀಗೆ ಅಭಿಪ್ರಾಯವನ್ನು ವ್ಯಕ್ತಮಾಡಬಹುದೆಂದು ಅವನು ತಿಳಿದಿರಲಿಲ್ಲ. ಇಲ್ಲಿಯ ವರೆಗೂ ಅಂಜನಾ ಎಷ್ಟೋ ಸಾರಿ ಅವನ ಕೂಡ ಹಲವು ಸಂದರ್ಭಗಳಲ್ಲಿ ಸಾಕಷ್ಟು ಹರಟೆ ಹೊಡೆದಿದ್ದಳು; ಚರ್ಚೆ ಮಾಡಿದ್ದಳು. ಆದರೆ ಇಂದಿನ ಹಾಗೆ ಎಂದೂ ಮಾತನಾಡಿರಲಿಲ್ಲ. ಆದುದರಿಂದ 'ಇವಳು ಹೀಗೇಕೆ ಇಂದು ಮಾತನಾಡುತ್ತಿರುವಳು?' ಎಂದು ವಸಂತ ವಿಚಾರಿಸುತ್ತಿರುವಾಗಲೇ ಅಂಜನಾ ಮತ್ತೆ ಹೊರಗೆ ಇಣಕಿ ಹಾಕಿ:

"ಚಹವಾಗಿದೆ. ಇನ್ನಾದರೂ ಒಳಗೆ ಬರುತ್ತೀರೋ?" ಎಂದು ಕೇಳಿದಳು.

"ಇಲ್ಲೇ ಕೊಟ್ಟರೆ ನಡೆಯುವುದಿಲ್ಲವೇ?" ನಗುತ್ತ ವಸಂತ ಕೇಳಿದ.

"ನಿಮಗೆ ಚಹಾ ಬೇಕಾಗಿದ್ದರೆ ಒಳಗೆ ಬರ್ರಿ" ಎಂದು ಹೇಳಿ ಅಂಜನಾ ಒಳಗೆ ಹೋದಳು.

ವಸಂತ ನಿರ್ವಾಹವಿಲ್ಲದೆ ತನ್ನ ಬೂಟುಗಳನ್ನು ಕಳೆದು ಒಳಗೆ ಹೋದ.

ಅಡುಗೆಯ ಮನೆಯಲ್ಲಿ ಮೂರು ಮಣೆಗಳು ಹಾಕಲ್ಪಟ್ಟಿದ್ದುವು. ವಸಂತನಿಗೆ ಮೂರು ಮಣೆಗಳೇಕೆಂಬುದು ತಿಳಿಯಲಿಲ್ಲ. ಒಮ್ಮೆ ಅಂಜನೆಯ ಕಡೆಗೆ, ಒಮ್ಮೆ ಮಣೆಗಳ ಕಡೆಗೆ ನೋಡುತ್ತ ನಿಂತ. ಅವನ ಭಾವವನ್ನರಿತು ಅಂಜನಾ ಹೇಳಿದಳು: "ಒಂದು ನಿಮಗೆ, ಒಂದು ಅವರಿಗೆ, ಒಂದು ನನಗೆ."

"ಅನಿಲ ಇನ್ನೂ ಬಂದಿಲ್ಲ ಅಲ್ಲವೇ?"

"ಇಲ್ಲ. ಆದರೂ ಅವರ ಪಾಲಿನದನ್ನು ಹಾಕಿ ಇಟ್ಟುಬಿಡುತ್ತೇನೆ."

ವಸಂತ ಒಂದು ಮಣೆಯ ಮೇಲೆ ಕುಳಿತ; ಅಂಜನಾ ಅವನ ಮುಂದೆ ಉಪಾಹಾರದ ತಟ್ಟೆಯನ್ನಿಟ್ಟಳು. ಅದನ್ನು ನೋಡಿ ವಸಂತ— "ಇದೆಲ್ಲ ಏನು? ಒಂದು ಸಣ್ಣ ಮೇಜವಾನಿಯನ್ನೇ ಮಾಡಿಬಿಟ್ಟಿರುವಿರಲ್ಲ— ಬರೀ ಚಹವೆಂದು ಹೇಳಿ." ಎಂದು ಉದ್ಗಾರ ತೆಗೆದ.

"ಯುದ್ಧ ಮಾಡಲಿಕ್ಕೆ ಹೊರಟಿರುವಿರಿ. ಆದುದರಿಂದ ಸ್ವಲ್ಪ ಉಂಡು-ತಿಂದು ಗಟ್ಟಿಮುಟ್ಟಾಗಿ ಹೋಗಲಿ ಎಂದು ಮಾಡಿರುವೆನು. ಯುದ್ಧ ಮಾಡುವವರು ಬರೀ ಚಹ ಕುಡಿದರೆ ರಟ್ಟೆಯಲ್ಲಿ ಬಲ ಹೇಗೆ ಬಂದೀತು?" ಅಂಜನಾ ಹಾಸ್ಯದಿಂದಲೇ ನುಡಿದಳು.

ವಸಂತ ಹೆಚ್ಚಿಗೆ ಮಾತನಾಡದೆ ಸುಮ್ಮನೇ ತಲೆತಗ್ಗಿಸಿಕೊಂಡು ತಟ್ಟೆಗೆ ಕೈಹಚ್ಚಿದ. ವಸಂತ ಎಷ್ಟೋ ಸಾರೆ ಅವರ ಮನೆಗೆ ಬಂದು ಹೋಗಿದ್ದ; ಅಲ್ಲದೇ ಅಲ್ಲಿ ಉಪಾಹಾರ ಊಟಗಳನ್ನೂ ತೀರಿಸಿದ್ದ; ಆದರೆ ಈಗಿನಷ್ಟು ಅವನಿಗೆ ಯಾವಾಗಲೂ ಸಂಕೋಚವೆನಿಸಿರಲಿಲ್ಲ. ಅದಕ್ಕೆ ಕಾರಣವೆಂದರೆ ಅವನ ಸಂಗಡ ಹರಟಿ ಹೊಡೆಯಲು ಅನಿಲ ಇದ್ದೇ ಇರುತ್ತಿದ್ದ. ಮತ್ತು ಅಂಜನಾ ಎಷ್ಟೇ ಸಲುಗೆಯಿದ್ದರೂ ಇಂದಿನಂತೆ ಮಾತನಾಡಿದ್ದಿಲ್ಲ. ಇಷ್ಟು ಮಾತ್ರ ನಿಜ. ಈಗೀಗ ಅಂಜನೆಯ ವರ್ತನೆ, ಮಾತಿನ ರೀತಿ ನೋಡುವ ಬಗೆ ಇವುಗಳಲ್ಲಿ ಬದಲಾವಣೆ ಆದಂತೆ ಮಾತ್ರ ವಸಂತನಿಗೆ ಆಗಾಗ ಭಾಸವಾಗುತ್ತಿತ್ತು. ಅವನು ಹೆಚ್ಚಿಗೆ ಮಾತನಾಡದೇ ಮೌನದಿಂದಲೇ ಉಪಾಹಾರವನ್ನು ನಡೆಸಿದ್ದ.

ಆ ಮೌನವನ್ನು ಭೇದಿಸಿ ಅಂಜನಾ ಮಾತನಾಡಿದಳು: "ನಾಳೆ ನೀವು ಯಾವ ಯುದ್ಧ ಭೂಮಿಗೆ ಹೋಗುವಿರಿ?" "ನನಗೇ ಗೊತ್ತಿಲ್ಲ." ಮುಖ ತಗ್ಗಿಸಿಕೊಂಡೇ ವಸಂತ ಉತ್ತರಕೊಟ್ಟ.

"ಇದೊಳ್ಳೆ ಆಶ್ಚರ್ಯ. ನೀವು ಎಲ್ಲಿಗೆ ಹೋಗುತ್ತೀರೆಂಬುದು ನಿಮಗೇ ಗೊತ್ತಿಲ್ಲವೇ?"

"ಇಲ್ಲ. ಸೈನಿಕರಿಗೆ ಅವರು ಯಾವ ಯುದ್ಧರಂಗಕ್ಕೆ ಹೋಗ ಬೇಕೆಂಬುದನ್ನು ಮೊದಲೇ ತಿಳಿಸಿರುವದಿಲ್ಲ."

"ಏಕೆ?"

"ಅದು ಯುದ್ಧನೀತಿ; ಗೌಪ್ಯವನ್ನು ಕಾಯ್ದುಕೊಳ್ಳುವ ರೀತಿ."

ಮತ್ತೆ ಕ್ಷಣಹೊತ್ತು ಅಲ್ಲಿ ಮೌನವು ವ್ಯಾಪಿಸಿತು ಏಕೆಂದರೆ ಅಂಜನಾ ಚಹ ಆಗಿದೆ ಎಂದು ಹೇಳಿದ್ದು ಉಪಾಹಾರವಾಗಿದೆ ಎಂಬ ಅರ್ಥದಲ್ಲಿ ಮಾತ್ರ. ವಸಂತ ಉಪಾಹಾರವನ್ನು ಸುರುಮಾಡಿದ ನಂತರ ಚಹಕ್ಕೆ ಇಟ್ಟಿದ್ದಳು. ಆದುದರಿಂದ ಎಸರಿನಲ್ಲಿ ಸಕ್ಕರೆಯನ್ನೂ ಅದು ಕರಗಿದ ನಂತರ ಚಹದ ಪುಡಿಯನ್ನೂ ಬೆರೆಸಿ, ಈಗ ಅದನ್ನು ಕೆಳಗೆ ಇಳಿಸುವುದರಲ್ಲಿ ಅವಳು ಮಗ್ನಳಾದಳು. ಅದಾದ ಮೇಲೆ ಏನೋ ಹೊಳೆದವರಂತೆ ಒಮ್ಮಿಲೇ ಅಂಜನಾ ಪ್ರಶ್ನೆ ಕೇಳಿದಳು:

"ನಿಮಗೆ ಯುದ್ಧರಂಗಕ್ಕೆ ಹೋಗಲು ಭಯವಾಗುವುದಿಲ್ಲವೇ?"

ವಸಂತ ಮುಖವನ್ನೆತ್ತಿ ಕೇಳಿದ: "ಭಯವೇಕಾಗಬೇಕು?"

"ಇದೊಳ್ಳೇ ಪ್ರಶ್ನೆ. ಅಲ್ಲಿಯ ಆ ರೌದ್ರ, ಭಯಾನಕ ಹಾಗೂ ಕ್ರೂರ ದೃಶ್ಯವನ್ನು ನೋಡಿ."

"ಅದೆಲ್ಲ ನಮಗೆ ರೂಢಿಯಾಗಿರುತ್ತದೆ."

"ಅಂದರೆ ರಣರಂಗದಲ್ಲಿ ನೀವು ನರರಾಕ್ಷಸರಾಗಿರುತ್ತೀರೆನ್ನಿರಿ."

ಅಂಜನೆಯ ಈ ಮಾತನ್ನು ಕೇಳಿ ಅವಾಕ್ಕಾಗಿ ವಸಂತ ಕ್ಷಣ ಹೊತ್ತು ಕುಳಿತ. ಸ್ವಲ್ಪ ಈಗ ಅವನಿಗೆ ಸಿಟ್ಟೂ ಬಂದಿತ್ತು. ಆದುದರಿಂದ ಕ್ರುದ್ಧನಾಗಿಯೇ ಅವನು ಉತ್ತರಕೊಟ್ಟ: "ಮನೆಯಲ್ಲಿ ಕುಳಿತು ವಿಲಾಸದಲ್ಲಿ ಕಾಲಕಳೆಯುತ್ತ 'ಯುದ್ಧಸ್ಯ ವಾರ್ತಾರಮ್ಯಾ' ಎಂದು ಹೇಳುವವರಿಗೆ, ಸೈನಿಕರ ಯೋಗ್ಯತೆಯಾದರೂ ಹೇಗೆ ತಿಳಿಯಬೇಕು? ಪ್ರತ್ಯಕ್ಷ ರಣಭೂಮಿಗೆ ಬಂದರೆ ಮಾತ್ರ ತಿಳಿಯುತ್ತದೆ.... ಸೈನಿಕರು ರಾಕ್ಷಸರೋ ರಕ್ಷಕರೋ ಎಂಬುದು."

"ನೀವು ಸೈನಿಕರನ್ನು ಎಷ್ಟೇ ಹೊಗಳಿರಿ; ನನಗಂತೂ ಅವರು ಮಾನವರಾಗಿ ತೋರುವುದೇ ಇಲ್ಲ."

"ಅದೇಕೆ?"

"ಏಕೆಂದರೆ ಮಾನವಾಂಶವು ಅವರಲ್ಲಿಂದ ಮಾಯವಾಗಿರುತ್ತದೆಂದೇ ಅವರು, ತಾವು ಎಂದೂ ನೋಡಿರದ ತಮಗೆ ಏನೂ ಮಾಡಿರದ ಎದುರಾಳಿಯನ್ನು ಕೊಲ್ಲಲು ಸಮರ್ಥರಾಗುತ್ತಾರೆ."

"ಇದಕ್ಕೇ ನಾನು ಹೇಳುತ್ತಿರುವುದು ತಪ್ಪುಕಲ್ಪನೆಯೆಂದು. ಸೈನಿಕರು, ರಾಜಕಾರಣಿಗಳ, ರಾಷ್ಟ್ರನಾಯಕರ ಚದುರಂಗದಾಟದಲ್ಲಿ ಬರೀ ಪೇದೆಗಳಾಗಿರುವುದರಿಂದ, ಅವರು ಎದುರಾಳಿಯನ್ನು ಹೀಗೆ ಕೊಲ್ಲುತ್ತಾರಲ್ಲದೆ, ತಮ್ಮಲ್ಲಿಯ ಮಾನವಾಂಶವು ಮಾಯವಾಗಿರುವುದರಿಂದಲ್ಲ!"

"ಹಾಗಾದರೆ ಅವರೇಕೆ ರಾಜಕಾರಣಿಗಳ ಚದುರಂಗದಾಟದಲ್ಲಿ ಪೇದೆಗಳಾಗಲು ಒಪ್ಪಬೇಕು? ಸೈನಿಕರು ಪೇದೆಗಳಾಗಲು ಒಪ್ಪುತ್ತಾರೆಂದೇ ರಾಜಕಾರಣಿಗಳೂ ರಾಷ್ಟ್ರನಾಯಕರೂ ಚದುರಂಗವಾಡಬಯಸುತ್ತಾರೆ. ಸೈನಿಕರು ಸೈನಿಕರಾಗಲು ಒಪ್ಪದಿದ್ದರೆ ಯುದ್ಧವು ಹೇಗೆ ಸಂಭವಿಸುವದು? ಎಲ್ಲ ದೇಶದ ಸೈನಿಕರೂ ಬರೀ ನಾಗರಿಕರಾಗಿಬಿಟ್ಟರೆ ಯುದ್ಧವೆನ್ನುವುದು ರಾಜಕಾರಣಿಗಳ ಕನಸಿನ ವಿಷಯ ಮಾತ್ರ ಆಗುವುದಿಲ್ಲವೇ?"

ಅಂಜನೆಯ ಈ ಮಾತುಗಳನ್ನು ಕೇಳಿ ವಸಂತ ದಂಗುಬಡಿದು ಕುಳಿತ. ಅಂಜನೆಯನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೆಂಬುದೇ ಅವನಿಗೆ ತಿಳಿಯದಾಯಿತು. ಸೈನಿಕರ ಬಗ್ಗೆ ಹೀಗೇಕೆ ಅವಳು ಅಭಿಪ್ರಾಯ ವ್ಯಕ್ತಮಾಡುತ್ತಿರುವಳು? ಸೈನಿಕರ ವಿಷಯವಾಗಿ ಅವಳಲ್ಲಿರುವ ತಿರಸ್ಕಾರ ಭಾವನೆಯ ರಹಸ್ಯವೇನು?— ಎಂಬುದನ್ನು ಅವನು ವಿಚಾರಿಸಹತ್ತಿದ.

ಚಹವನ್ನು ಸೋಸುತ್ತ ಮತ್ತೆ ಅಂಜನೆಯೇ ಕೇಳಿದಳು: "ಉಳಿದದ್ದೆಲ್ಲ ಹೋಗಲಿ. ಮರಣ ಬರುವುದೆಂಬ ಸಂಗತಿಯಾದರೂ ಯುದ್ಧಭೂಮಿಗೆ ಹೋಗುವಾಗ ನಿಮ್ಮಲ್ಲಿ ಭಯವನ್ನು ಹುಟ್ಟಿಸುವುದಿಲ್ಲವೇ?"

"ಯುದ್ಧಭೂಮಿಗೆ ಹೋಗದಿದ್ದರೆ ಮರಣ ಬರುವುದೇ ಇಲ್ಲವೇ? ಅಂದಮೇಲೆ ಯುದ್ಧಕ್ಕೆ ಹೊರಡುವಾಗ ಮರಣಭಯವೇಕೆ ಅಡ್ಡಬರಬೇಕು?"

"ಆದರೆ ಯುದ್ಧಕ್ಕೆ ಹೋಗುವುದೆಂದರೆ ನಾವೇ ಮರಣವನ್ನು ಹುಡುಕಿಕೊಂಡು ಹೋದಂತೆಯಾಗುತ್ತದೆ. ಇಲ್ಲೇ ಇರುವುದೆಂದರೆ ಮರಣವೇ ನಮ್ಮನ್ನು ಹುಡುಕಿಕೊಂಡು ಬರುವಂತಾಗುತ್ತದೆ. ಇವೆರಡರಲ್ಲಿಯೂ ಅಂತರವಿಲ್ಲವೇ?"

"ಇದೆ. ಬಹಳ ಅಂತರವಿದೆ" ಎಂದು ನುಡಿದು ಕ್ಷಣಹೊತ್ತು ಸುಮ್ಮನೇ ಕುಳಿತು ಆಮೇಲೆ ವಸಂತ ಹೀಗೆ ಹೇಳಿದ:

"ನಿಜವಾಗಿ ಹೇಳಬೇಕೆಂದರೆ, ಸ್ತ್ರೀಯರಲ್ಲಿ ಅದರಲ್ಲಿಯೂ ನಿಮ್ಮಲ್ಲಿ ಇಷ್ಟು ವಿಚಾರಶಕ್ತಿ ಇರಬಹುದೆಂದು ನಾನು ಕನಸಿನಲ್ಲಿಯೂ ನೆನಸಿರಲಿಲ್ಲ."

"ಏಕೆ ? ಸ್ತ್ರೀಯರೆಂದರೆ ಪಶುಗಳೇನು ? ಹುಂ—ಸೈನಿಕರಿಗೇನು ? ಸ್ತ್ರೀಯರೂ ಪಶುಗಳಂತೇ ಕಾಣುತ್ತಾರೆ. ಅಲ್ಲವೇ ? ಅಂದಮೇಲೆ ಸ್ತ್ರೀಯರಲ್ಲಿ ವಿಚಾರಶಕ್ತಿ ಎಲ್ಲಿಂದ ಬರಬೇಕು ?"

"ಸ್ತ್ರೀಯರಲ್ಲಿ ವಿಚಾರಶಕ್ತಿಯಿರುವುದಿಲ್ಲವೆಂದು ನಾನು ಹೇಳಲಿಲ್ಲ. ಆದರೆ ಇಷ್ಟು ತೀಕ್ಷ್ಣ ವಿಚಾರಶಕ್ತಿಯುಳ್ಳವರನ್ನು ನಾನು ಕಂಡಿರಲಿಲ್ಲ. ಸ್ತ್ರೀಯರು ಭಾವನಾಪ್ರಧಾನರೆಂದೇ ನನ್ನ ಕಲ್ಪನೆ."

"ಇರಬಹುದು. ಆದರೆ 'ಸಾಯುವುದಕ್ಕೆ ನಿಮಗೆ ಹೆದರಿಕೆ ಯಾಗುವುದಿಲ್ಲವೇ ?' ಎಂದು ಕೇಳುವುದರಲ್ಲಿ ತೀಕ್ಷ್ಣ ವಿಚಾರಶಕ್ತಿ ಏನಿದೆ ? ಇದು ಎಲ್ಲರಿಗೂ ಅನಿಸುವ ಮಾತು. ನೀವು ಸೈನಿಕರಾದರೂ ನಿಮಗೂ ಸಾವಿನ ಅಂಜಿಕೆ ಇರಬಹುದಲ್ಲವೇ ?—ಎಂದು ನಾನು ಕೇಳಿದೆ ಇಷ್ಟೆ. ನಿಮಗೆ ನಿಜವಾಗಿಯೂ ಸಾವಿನ ಅಂಜಿಕೆ ಇಲ್ಲವೇ ?"

"ಇದೆ. ಸಾವಿನ ಅಂಜಿಕೆ ಯಾರಿಗಿಲ್ಲ ?"

"ಮತ್ತೇಕೆ ಯುದ್ಧಭೂಮಿಗೆ ಹೋಗುತ್ತೀರಿ ?"

"ಸೈನಿಕನಾದುದರಿಂದ !"

"ಏಕೆ ಸೈನಿಕನಾದಿರಿ ?"

ವಸಂತ ತಡೆದು ಹೇಳಿದ: "ಈ ಪ್ರಶ್ನೆಗೆ ನಾನು ಉತ್ತರ ಹೇಳಲಾರೆ."

"ಅದೇಕೆ ?"

ವಸಂತನು ಉತ್ತರವನ್ನೇನೂ ಕೊಡದೆ ಅಂಜನೆಯನ್ನೇ ಕ್ಷಣ ಹೊತ್ತು ದಿಟ್ಟಿಸಹತ್ತಿದ.

ಆಗ ಅಂಜನೆ ಕೇಳಿದಳು:

"ಹೀಗೇಕೆ ನನ್ನನ್ನು ದುರುಗುಟ್ಟಿ ನೋಡುತ್ತಿರುವಿರಿ ?"

"ಇಂದು ನಿನಗೆ—ಅಲ್ಲ ಇಂದು ನಿಮಗೆ ಏನಾಗಿದೆ ಎಂಬುದನ್ನು ನೋಡುತ್ತಿರುವೆನು."

"ಏನೂ ಆಗಿಲ್ಲ. ಇಂದಾದರೂ ನನ್ನ ಪ್ರಶ್ನೆಗೆ ಉತ್ತರ ಬರುವುದೇನೋ ನೋಡುವುದಕ್ಕಾಗಿ ಹೀಗೆ ಕೇಳುತ್ತಿದ್ದೇನೆ. ಇತ್ತಿತ್ತಲಾಗಿ ನಾಲ್ಕೈದು ವರುಷ ನಿಮ್ಮ ಭೆಟ್ಟಿಯಾಗದ್ದರಿಂದ—ನೀವು ಮದುವೆ ಮಾಡಿಕೊಳ್ಳವೇ ಹಾಗೇ ಇದ್ದುಬಿಡಲು ಪ್ರೇರಿಸಿದಂತಹ ಯಾವ ಘಟನೆ ನಿಮ್ಮ ಜೀವನದಲ್ಲಿ ಜರುಗಿತು ಎಂಬದು ನನಗೆ ತಿಳಿಯದಾಗಿದೆ. ಈಗ ರಜೆತೆಗೆದುಕೊಂಡು ಈ ಊರಿಗೆ ನೀವು ಬಂದಾಗಿನಿಂದಲೂ, ನಾನು ಸಂದರ್ಭವೊದಗಿದಾಗೆಲ್ಲ ಈ ಪ್ರಶ್ನೆಯನ್ನು ಕೇಳುತ್ತಲೇ ಬಂದಿದ್ದೇನೆ. ನೀವು ಅದನ್ನು ಬದಿಗೆ ಸರಿಸಿಬಿಡುತ್ತಲೇ ಬಂದಿರುವಿರಿ. ಅದಕ್ಕಾಗಿ ಮತ್ತೆ ಇಂದು ಕೇಳುತ್ತಿದ್ದೇನೆ."

"ಅದೆನೇ ಆಗಲಿ. ಇಂದು ನಿಮ್ಮ ಪ್ರಶ್ನೆಗಳು ಮಾತ್ರ ವಿಚಿತ್ರವಾಗಿವೆ."

"ಇದರಲ್ಲೇನು ಬಂತು ವಿಚಿತ್ರ ? 'ನೀವು ಏಕೆ ಮದುವೆ ಆಗಿಲ್ಲ' ಎಂದು ಕೇಳಬಾರದೇ ?"

"ಅದನ್ನು ಕೇಳುವುದರಿಂದ ನಿಮಗಾಗುವ ಪ್ರಯೋಜನವೇನು ?"

"ಪ್ರಯೋಜನವಿದೆ."

"ಖಂಡಿತವಾಗಿಯೂ ಇಲ್ಲ."

"ಹೇಗೆ ನೀವು ಇದನ್ನು ಹೇಳುತ್ತೀರಿ ?"

ವಸಂತ ಈ ಪ್ರಶ್ನೆಗೆ ಒಮ್ಮೆಲೇ ಉತ್ತರ ಕೊಡಲಿಲ್ಲ. ನಾಲ್ಕು ಗುಟುಕು ಚಹ ಕುಡಿದು, ಒಂದು ಕ್ಷಣ ವಿಚಾರಿಸಿ ಆ-ಮೇಲೆ ಹೇಳಿದ:

"ಹೇಗೆಂದರೆ, ಮದುವೆಯಾಗಿ ಮರ್ಯಾದೆಯಿಂದ ನೆಮ್ಮದಿಯಾಗಿ ಬಾಳುವ ಸ್ತ್ರೀಗೆ ಪರಪುರುಷನ ಪ್ರಣಯಜೀವನದ ಮತ್ತು ಪ್ರಣಯಭಂಗದ ಕತೆಯಿಂದ ಏನು ಪ್ರಯೋಜನವಾಗಬೇಕಾಗಿದೆ ? ಅದರ ಬದಲಾಗಿ ಇಂಥ ಸಂಗತಿಗಳನ್ನು ಕೇಳುವುದರಿಂದ, ನೆಮ್ಮದಿಯಿಂದಿರುವ ಜೀವನದಲ್ಲಿ ಅನಾವಶ್ಯಕವಾದ ಅಸಂತೋಷವು ತಲೆದೋರಬಹುದು."

"ನೀವು ನನಗೆ ಪರಪುರುಷರೋ ?"

"ಅಲ್ಲವೇ ?"

"ಅದು ಹೇಗೆ ? ಒಂದು ಕಾಲಕ್ಕೆ ನನ್ನ ನೆರೆಹೊರೆಯವರಾಗಿದ್ದು, ಈಗ ನನ್ನ ಪತಿಯ ಮಿತ್ರರಾಗಿದ್ದು ನಡುವೆ ಯಾವಾಗಲೋ ನಾಲ್ಕು ವರುಷ ಭೆಟ್ಟಿಯಾಗದ ಮಾತ್ರಕ್ಕೇ ನೀವು ಪರಪುರುಷರಾಗಿ ಬಿಟ್ಟಿರಾ ? ನೀವು ಮನಸ್ಸು ಮಾಡಿದ್ದರೆ ನನ್ನನ್ನೇ ಮದುವೆಯಾಗ ಬಹುದಿತ್ತು."

"ಅದೇನೇ ಇರಲಿ. ನನ್ನ ಕತೆಯನ್ನು ಹೇಳಿ ನಿಮ್ಮ ಜೀವನದ ಶಾಂತಸಾಗರದಲ್ಲಿ ನಾನು ಬಿರುಗಾಳಿಯನ್ನೆಬ್ಬಿಸಲಾರೆ."

"ಹೀಗೋ ? ಆದರೆ ನನ್ನ ಜೀವನದಲ್ಲಿ ಈಗಾಗಲೇ ಬಿರುಗಾಳಿಯೆದ್ದಿಲ್ಲವೆಂದು ನೀವು ಹೇಗೆ ಹೇಳುತ್ತೀರಿ ?"

ಕಪ್ಪಿನಲ್ಲಿಯ ಚಹವನ್ನೆಲ್ಲ ಕುಡಿದು ವಸಂತ ಕುತೂಹಲದಿಂದಲೇ ಕೇಳಿದ: "ಅಂದರೆ ?"

"ಅಂದರೆ ನಾನು ಮರ್ಯಾದೆಯ ಜೀವನ ಸಾಗಿಸುತ್ತಿರುವೆನೆಂದು ನನ್ನ ಬಾಳು ನೆಮ್ಮದಿಯದಾಗಿದೆಯೆಂದು ನೀವು ತಿಳಿದಿದ್ದರೆ, ಅದು ಖಂಡಿತವಾಗಿ ತಪ್ಪು."

"ಹಾಗಾದರೆ ನಿಮ್ಮ ಬಾಳಿನಲ್ಲಿಯೂ ಬಿರುಗಾಳಿಯೆದ್ದಿದೆಯೇ ?"

"ಹೌದು"

"ಯಾವಾಗಿನಿಂದ ?"

"ನೀವು ರಜೆ ತೆಗೆದುಕೊಂಡು ಇಲ್ಲಿ ಬಂದಾಗಿನಿಂದ."

"ಹಾಂ ! ಇದೇನು ನೀವು ಹೇಳುತ್ತಿರುವುದು ?"

"ನಾನು ನಿಜವನ್ನು ನುಡಿಯುತ್ತಿದ್ದೇನೆ. ನೀವು ಈ ಸೈನಿಕನ ವೇಷದಲ್ಲಿ ಅಂದು ನಮ್ಮ ಮನೆಗೆ ಬಂದಾಗಲೇ ನನ್ನ ಬಾಳಿನಲ್ಲಿ ಬಿರುಗಾಳಿಯನ್ನು ಎಬ್ಬಿಸಿದಿರಿ. ಅಂದು ನೀವು ಮರಳಿ ಹೋಗುವಾಗ ನಿಮ್ಮ ಕೂಡ ನನ್ನ ಹೃದಯವನ್ನೂ ಒಯ್ದುಬಿಟ್ಟಿರಿ."

ಅಂಜನೆಯ ಈ ಮಾತುಗಳನ್ನು ಕೇಳಿ ವಸಂತ ನಡುಗಿದ. ತಾನು ನಿರೀಕ್ಷಿಸಿದ ಸಂಕಟ— ಧರ್ಮಸಂಕಟ— ಎಲ್ಲಿ ಎದುರಾಗುವುದೋ ಎಂದು ಕಳವಳಗೊಂಡ. ಆದರೂ ಅದನ್ನು ತೋರಗೊಡದೇ "ಈ ಸೈನಿಕನ ವೇಷದಲ್ಲಿ ಹೃದಯವನ್ನೇ ಕದ್ದೊಯ್ಯುವಂತಹದು ಏನಿದೆ?"

"ಅದರಲ್ಲಿ ಏನು ಇಲ್ಲ? ನನ್ನ ಮಟ್ಟಿಗಂತೂ ಅದು ಸಾಹಸದ, ಧೈರ್ಯದ ಅದ್ಭುತರಮ್ಯತೆಯ ಪ್ರತೀಕವಾಗಿದೆ."

"ಆದರೆ ಆ ವೇಷಧರಿಸುವವರಲ್ಲಿ ಇಂತಹ ಗುಣಗಳಿರುವವೆನ್ನುವುದಕ್ಕೆ ಏನು ಭರವಸೆ ಇದೆ?"

"ಉಳಿದವರ ಬಗ್ಗೆ ಏನೂ ಭರವಸೆ ಹೇಳಲು ಬಾರದಿದ್ದರೂ,— ನಿಮ್ಮ ಮಟ್ಟಿಗೆ ಮಾತ್ರ ಈ ವೇಷ ಸಾರ್ಥಕವಾಗಿದೆ."

ಅವಳ ಮಾತಿನಿಂದ ಕ್ಷಣಹೊತ್ತು ದಿಗ್ಭ್ರಾಂತನಾದ ವಸಂತನು ಅವಳನ್ನು ಎಚ್ಚರಿಸುವ ರೀತಿಯಲ್ಲಿ ಹೀಗೆ ನುಡಿದ: "ನಿಮ್ಮ ಮಾತನ್ನು ಕೇಳಿ ನನಗೆ ಎದೆಯಲ್ಲಿ ಗುಂಡುಹೊಡೆದಂತಾಯಿತು. ನೀವು ನನ್ನ ಬಗ್ಗೆ ಇಂಥ ಭಾವನೆಯನ್ನಿಟ್ಟುಕೊಂಡದ್ದು ಮೊದಲೇ ಗೊತ್ತಾಗಿದ್ದರೆ, ನಾನು ಇಲ್ಲಿಗೆ ಬರುತ್ತಿರಲೇ ಇಲ್ಲ"

"ಇದೆಲ್ಲ ಸುಳ್ಳು. ನನ್ನ ಮನೋಗತ ನಿಮಗೆ ಈ ಮೊದಲು ತಿಳಿದಿರಲೇಬೇಕು. ಅದನ್ನು ತಿಳಿದೇ ನೀವು ಇತ್ತ ಬರುವುದನ್ನು ಬಿಟ್ಟಿದ್ದಿರಿ. ಹೌದೋ ಅಲ್ಲವೋ?"

"ಅಲ್ಲ, ಅಲ್ಲ" ವಸಂತ ಉದ್ವಿಗ್ನನಾಗಿ ನುಡಿದ.

"ಹೋಗಲಿ. ಈಗಾದರೂ ತಿಳಿಯಿತಲ್ಲವೇ?"

"ಹೀಗೆ ಮಾತನಾಡಲು ನಾಚಿಕೆ ಬರುವುದಿಲ್ಲವೇ?"

"ನಾನು ಇಲ್ಲಿಯವರೆಗೂ ನಾಚಿಯೇ ಸುಮ್ಮನಿದ್ದೆ. ಈಗ ನೀವು ಒಮ್ಮೆಲೇ ಹೊರಟುನಿಂತುದರಿಂದ, ನಾಚಿಕೆಗೆಟ್ಟವಳಾಗಿದ್ದೇನೆ."

ಅಂಜನೆಯ ಈ ಮಾತುಗಳನ್ನು ಕೇಳಿ ವಸಂತನಿಗೆ ಅಲ್ಲಿ ನಿಲ್ಲುವುದಾಗಲಿಲ್ಲ. ಅವನು ಚಿಟ್ಟನೇ ಎದ್ದು ನಡೆದ. ಅಂಜನಾ ಅವನನ್ನು ಅಡ್ಡಗಟ್ಟಿದಳು.

ಆಗ ವಸಂತ ಸಿಟ್ಟನ್ನು ತಡೆಯದೇ "ಇದೇನು ಮಾಡುತ್ತಿರುವೆ ಅಂಜನಾ?" ಎಂದು ಚೀರಿದ.

"ಇದು....ಇದು...." ಅಂಜನೆಗೆ ಚೆನ್ನಾಗಿ ಮಾತನಾಡಲು ಬರಲಿಲ್ಲ. ವಸಂತನನ್ನು ತಬ್ಬಿಕೊಂಡು ಅಳಹತ್ತಿದಳು.

"ಇದೇನು ಅಂಜನಾ, ಹೀಗೇಕೆ ಮಾಡುತ್ತಿರುವೆ? ನಿನಗೆ ಉನ್ಮಾದವೇನಾದರೂ ಆಗಿರುವುದೇ?" ವಸಂತ ಅವಳನ್ನು ಸಂತೈಸುತ್ತ ಕೇಳಿದ.

"ಹೌದು! ವಸಂತ, ಈ ಸಪ್ಪೆಯಾದ ಸರಳವಾದ ನೀರಸವಾದ ರೋಮಾಂಚಕಾರಿಯಲ್ಲದ ಈ ಬಾಳಿನಿಂದ ಗಾಣದೆತ್ತಿನಂತಹ ಈ ಗೃಹಿಣಿಯ ಜೀವನದಿಂದ ಹೊರಗೆ ಬರುವ ಉನ್ಮಾದವಾಗಿದೆ. ನೀನು ನನ್ನನ್ನು ಹೊರಗೆ ಕರೆಯದೊಯ್ಯಲಾರೆಯಾ?"

"ಇಲ್ಲ. ಇಲ್ಲ. ಇದು ಸಾಧ್ಯವಿಲ್ಲ. ಅನಿಲ ನನಗೆ ಎಂಥ ಉಪಕಾರವನ್ನು ಮಾಡಿರುವನೆಂಬುದು ನಿನಗೆ ಗೊತ್ತಿಲ್ಲ; ನನ್ನನ್ನು ಹೇಗೆ ಕಾಣುತ್ತಾನೆಂಬುದೂ ನಿನಗೆ ತಿಳಿದಿಲ್ಲ. ಅಂಜನಾ! ಅನಿಲನಂಥ ಮಿತ್ರನಿಗೆ ನಾನೆಂದೂ ಅನ್ಯಾಯ ಬಗೆಯಲಾರೆ."

"ಹಾಗಾದರೆ ನೀನೆಂಥ ಸೈನಿಕ! ನೀನು ಸೈನಿಕನೆಂದು ನಿನ್ನ ಮೇಲೆ ನಾನು ಬಹಳ ಭರವಸೆ ಇರಿಸಿದ್ದೆ."

"ಸೈನಿಕನಿಗೂ ಮಾನವಮೂಲ್ಯಗಳ ಬೆಲೆ ಗೊತ್ತಿರುತ್ತದೆಂಬುದನ್ನು ಮರೆಯಬೇಡ ಅಂಜನಾ! ಸೈನಿಕನೂ ಮಾನವನಲ್ಲವೇ? ಅವನ ಗುಣ-ದೋಷಗಳೇಲ್ಲವೂ ಮಾನವನ ಗುಣದೋಷಗಳೇ."

ಇಷ್ಟು ಹೇಳಿ ಅಂಜನೆಯನ್ನು ಬದಿಗೆ ಸರಿಸಿ ವಸಂತ ಸರಸರನೇ ನಡೆದು ಬಿಟ್ಟ. ಕಾಲಲ್ಲಿ ಇಟ್ಟ ಕಪ್ಪು ಬಸಿ ಅವನ ಪಾದಾಘಾತಕ್ಕೆ ಸಿಕ್ಕಿ ಪುಡಿಪುಡಿಯಾದುವು.

ಅವನು ತಲೆ ಬಾಗಿಲಿನಿಂದ ಹೊರಗೆ ಕಾಲಿಡುವಾಗ "ವಸಂತ! ವಸಂತ!" ಎಂದು ಕನವರಿಸುತ್ತ ಅಂಜನಾ ಬಿಕ್ಕುತ್ತಿರುವುದು ಅವನಿಗೆ ಕೇಳಬಂದಿತು.

— ೨ —

ವಸಂತ ಬೀದಿಗೆ ಬಂದಾಗ ಅವನ ತಲೆ ತಿರುಗುತ್ತಲಿತ್ತು. ಅಂತರಂಗದಲ್ಲಿ ಬಿರುಗಾಳಿಯೆದ್ದಿತ್ತು. ಅವನು ಅಂಜನೆಯನ್ನು ಬದಿಗೆ ಸರಿಸಿ ಬರಬೇಕಾದರೆ, ತನ್ನ ಇಚ್ಛಾಶಕ್ತಿಯನ್ನೆಲ್ಲ ಕೇಂದ್ರೀಕರಿಸಿ, ತನ್ನ ವಿವೇಕವನ್ನು ಜಾಗೃತಗೊಳಿಸಿ ಬಹಳಷ್ಟು ಸಾಹಸವನ್ನು ಮಾಡಬೇಕಾಗಿತ್ತು. ಆ ರೀತಿ ಸಾಹಸವನ್ನೇನೋ ಮಾಡಿದ; ಆದರೆ ಅದರ ಪ್ರತಿಕ್ರಿಯೆಯಿಂದ ಅವನು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದರ ಗುಂಗಿನಲ್ಲಿಯೇ ತನ್ನ ಕಾಲು ಎಳೆದತ್ತ ಹೊರಟಿದ್ದ. ಅವನ ಕಾರ್ಯಕ್ರಮದ ಪಟ್ಟಿ ತಲೆಕೆಳಗಾಗಿತ್ತು. ಆನನು ಏನೇನೋ ಹಿಂದಿನ ಸಂಗತಿಗಳನ್ನು ನೆನೆದುಕೊಳ್ಳುತ್ತ ಒಮ್ಮೆ ಹೆಜ್ಜೆ ಹಾಕುತ್ತಿದ್ದರೆ, ಮುಂಬರುವ ದೃಶ್ಯನನ್ನು ನೆನೆದು ಮತ್ತೊಮ್ಮೆ ಮುಂದೆ ಸಾಗುತ್ತಲಿದ್ದ. ಒಮ್ಮೆ ಗೆಳೆಯರ ಬಗ್ಗೆ, ಒಮ್ಮೆ ಅನಿಲನ ಬಗ್ಗೆ, ಒಮ್ಮೆ ತನ್ನ ಪ್ರಣಯಭಂಗದ ಬಗ್ಗೆ, ಒಮ್ಮೆ ಸ್ತ್ರೀ ಚಾರಿತ್ರ್ಯದ ಬಗ್ಗೆ ಒಮ್ಮೆ ತಾನು ಮಾಡಿದ ಅಕೃತ್ಯ ದುಷ್ಕೃತ್ಯಗಳ ಬಗ್ಗೆ— ಹೀಗೆ ಏನೇನೋ ವಿಚಾರಿಸುತ್ತ ಅವನು ನಡೆದಿದ್ದ. ಅವನ ವಿಚಾರದಲ್ಲಿಯಾಗಲಿ, ನಡೆಯಲ್ಲಿಯಾಗಲಿ, ಒಂದು ಉದ್ದೇಶ—ಒಂದು ಗುರಿ ಇರಲಿಲ್ಲ. ಕಾಲು ಎಳೆದತ್ತ ದೇಹ ಹೊರಟ್ಟಿದ್ದರೆ, ವಿಚಾರವೆಳೆದತ್ತ ಮನಸ್ಸು ಹೊರಟಿತ್ತು. ಕಾಲು ನಡೆಯದಾದಾಗ, ವಿಚಾರವು ಕುಂಠಿತವಾದಾಗ, ತಾನೆಲ್ಲಿರುವೆನೆಂದು ವಸಂತ ಸುತ್ತಲೂ ನೋಡಿದ.

ಅವನು ನಿಂತದ್ದು ಒಂದು ವೇಶ್ಯಾವೀಥಿಯಾಗಿತ್ತು. ಆಗ ಅವನ ಕಾರ್ಯಕ್ರಮದ— ಅಂದಿನ ಕಾರ್ಯಕ್ರಮದ— ಪಟ್ಟಿಯಲ್ಲಿಯ ಕೊನೆಯ ವಿಷಯ ಫಕ್ಕನೇ ನೆನಪಾಯಿತು. ಅದೆಂದರೆ ಅಂದಿನ ರಾತ್ರಿಯನ್ನು ಒಂದು ವೇಶ್ಯಾಗೃಹದಲ್ಲಿ ಕಳೆಯುವುದೇ ಆಗಿತ್ತು. ಈಗ ಅದು ನೆನಪಾಗುವುದರಿಂದ ಅವನು ನೇರವಾಗಿ ಒಂದು ವೇಶ್ಯಾ ಗೃಹವನ್ನು ಪ್ರವೇಶಿಸಿದ.

ಆ ವೇಶ್ಯಾಗೃಹದಲ್ಲಿಯ ಒಂದು ಕೋಣೆಯಲ್ಲಿ ದೀಪವನ್ನಾರಿಸಿ ಒಬ್ಬ ತರುಣಿಯ ಕೈಹಿಡಿದಾಗ, ವಸಂತನ ಕೈಗಳ ಮೇಲೆ ನಾಲ್ಕು ಹನಿ ಕಣ್ಣೀರು ಪಟಪಟನೆ ಉದುರಿದುವು.

ವಸಂತ ಕೂಡಲೆ ದೀಪವನ್ನು ಹಚ್ಚಿನೋಡಿದ. ತಾನು ಕೈಹಿಡಿದ ತರುಣಿ ಮೌನವಾಗಿ ಕಣ್ಣೀರು ಸುರಿಸುತ್ತಿದ್ದಳು.

ಅವನು ಮೆಲ್ಲನೇ ಅವಳನ್ನು ತನ್ನ ಪಕ್ಕಕ್ಕೆ ಸೆಳೆದುಕೊಂಡು ಬದಿಗೆ ಕುಳ್ಳಿರಿಸಿಕೊಂಡ. ಅನಂತರ ಮೆಲ್ಲಾತುಗಳಿಂದ ಕೇಳಿದ:

"ಏಕೆ ಅಳುತ್ತೀ ?"

ಆಕೆ ಏನೂ ಉತ್ತರವನ್ನೇ ಕೊಡಲಿಲ್ಲ. ಆದರ ಬದಲಾಗಿ ನೀರು ತುಂಬಿದ ಕಣ್ಣುಗಳಿಂದ ವಸಂತನನ್ನೊಮ್ಮೆ ದೈನ್ಯದಿಂದ ನೋಡಿದಳು. ಅವಳ ಆ ಕಣ್ಣಿನಲ್ಲಿ ಸ್ತ್ರೀಜನ್ಮದ ದುಃಖವೆಲ್ಲ ಒಬ್ಬುಳಿಗೂಡಿ ನಿಂತಂತೆ ವಸಂತನಿಗೆ ಕಂಡು ಬಂದಿತು. ಆದುದರಿಂದ ಅವನು ಒಳ್ಳೇ ಅಂತಃಕರಣದಿಂದ, ಆತ್ಮೀಯತೆಯಿಂದ, ಅವಳನ್ನು ಮತ್ತೆ ಕೇಳಿದ:

"ಏಕೆ ಅಳುತ್ತೀಯೆಂಬುದನ್ನು ಹೇಳುವುದಿಲ್ಲವೇ ?"

ಇದಕ್ಕೆ ಉತ್ತರವಾಗಿ "ಏ....ನು....ಹೇ....ಳ....ಲಿ ?" ಎಂದು ಕ್ಷೀಣವಾದ ಸ್ವರದಲ್ಲಿ ಇವನನ್ನೇ ಕೇಳಿದಳು.

"ಏಕೆ ಅಳುತ್ತೀ ಎಂಬುದನ್ನು ಹೇಳು."

"ಬಹಳ.... ಆಯಾಸವಾಗಿದೆ" ಇಷ್ಟು ನುಡಿದು ಮೆಲ್ಲನೇ ವಸಂತನ ಎದೆಯನ್ನೇಲೆ ಒರಗಿ, ಮೂರ್ಛೆ ಹೋದವಳಂತೆ ಕಣ್ಣು ಮುಚ್ಚಿದಳು.

ವಸಂತ ವೇಶ್ಯಾಗೃಹಕ್ಕೆ ಬಂದುದು ಇದೇ ಮೊದಲಸಾರೆಯಾಗಿರಲಿಲ್ಲ. ಅವನು ಸೈನಿಕನಾದಾಗಿನಿಂದಲೂ ವೇಶ್ಯಾಗಮನ, ಮದ್ಯಪಾನ, ಮತ್ತು ಮಾಂಸಭಕ್ಷಣ ಇವು ಬೆನ್ನುಹತ್ತಿಯೇ ಬಿಟ್ಟಿದ್ದುವು. ಇಂದು ಕೂಡ ಅವನು ಕುಡಿದು ಕುಣಿದು ರಾತ್ರಿಯನ್ನೆಲ್ಲ ಕಳೆಯಬೇಕೆಂದು ಮೊದಲೇ ಒಂದು ವೇಶ್ಯಾಗೃಹವನ್ನು ಗೊತ್ತು ಮಾಡಿದ್ದ. ಆದರೆ ಅಂಜನೆಯು ಅವನ ಎಲ್ಲ ಕಾರ್ಯಕ್ರಮಗಳನ್ನೂ ತಲೆಕೆಳಗೆ ಮಾಡಿದಂತೆ, ಅವನ ವೇಶ್ಯಾಗೃಹವನ್ನೂ ಬದಲಿಸಿದ್ದಳು. ಅವನು ಹೋದ ವೇಶ್ಯಾಗೃಹದಲ್ಲಿ ಅಕಸ್ಮಾತ್ತಾಗಿ ಮದ್ಯವೆಲ್ಲ ತೀರಿ ಹೋಗಿತ್ತು. ಆಗ ರಾತ್ರಿಯೂ ಸಾಕಷ್ಟಾಗಿತ್ತು. ಅವನೂ ವಿಚಾರಗಳ ತಾಕಲಾಟದಲ್ಲಿದ್ದ. ಇವೆಲ್ಲ ಒಟ್ಟಾಗಿ ಇಂದು ಅವನಿಗೆ ಮದ್ಯಪಾನವಿಲ್ಲದಂತೆ ಮಾಡಿದ್ದುವು. ಇಲ್ಲಿಯ ವರೆಗೂ ಅವನು ವೇಶ್ಯಾಗೃಹಕ್ಕೆ ಹೋದಾಗ ಅತಿಯಾಗಿ ಮದ್ಯಪಾನ ಮಾಡಿರುತ್ತಿದ್ದುದರಿಂದ, ಅವನಿಗೆ ತನ್ನ ಬಳಿಗೆ ಬಂದ ತರುಣಿಯ ಕಡೆಗೆ— ಅವಳ ಸುಖ ದುಃಖಗಳ ಕಡೆಗೆ— ಲಕ್ಷ್ಯಕೊಡುವುದು ಆಗಿರಲೇ ಇಲ್ಲ. ಆದರೆ ಈ ಸಾರೆ ಮಾತ್ರ ಎಲ್ಲ ಬೇರೆಯಾಗಿತ್ತು. ಅಂಜನೆಯು ಅವನ ವಿವೇಕವನ್ನು ಜಾಗೃತಗೊಳಿಸಿದ್ದಳು. ಆ ವಿವೇಕದ ಜ್ವಾಲೆ ಇನ್ನೂ ಅವನಲ್ಲಿ ನಂದಿಹೋಗಿರಲಿಲ್ಲ. ಆದುದರಿಂದ, ಈಗ ಏನು ಮಾಡಬೇಕೆಂಬುದು ತಿಳಿಯದೇ ಅವನು ಬಳ್ಳಿಯಂತೆ ತನ್ನನ್ನು ಆಶ್ರಯಿಸಿದ್ದ ಆ ತರುಣಿಯನ್ನೇ ಕ್ಷಣಹೊತ್ತು ನಿರೀಕ್ಷಿಸುತ್ತ ಕುಳಿತ.

ಅವಳು ಒಂದು ಕೈಯನ್ನು ಅವನ ಕೊರಳ ಮೇಲೆ ಹಾಕಿ, ಅವನನ್ನು ತಬ್ಬಿಕೊಂಡು ನಿದ್ರೆಹೋದವಳಂತೆ ಕಣ್ಣು ಮುಚ್ಚಿದಳು. ಅವಳನ್ನು ನೋಡಿದರೆ ಅವಳು ನಿದ್ರೆ ಹೋಗಿರುವಳೋ ಮೂರ್ಛೆ ಹೋಗಿರುವಳೋ ಎಂಬುದನ್ನು ನಿಶ್ಚಿತವಾಗಿ ಹೇಳುವುದು ಕಠಿಣವಾಗುತ್ತಲಿತ್ತು. ಅವಳ ಸುಂದರಮುಖವು ಬಾಡಿದ ಕಮಲದಂತೆ ಮ್ಲಾನವಾಗಿತ್ತು. ಅವಳ ತಲೆಗೂದಲು ಹೂವಿನ ಹುಡಿಯನ್ನು ಬಳಿದುಕೊಂಡ ಭ್ರಮರದಂತೆ ಸುವಾಸನೆ ಬೀರುತ್ತಿತ್ತು. ಆ ನೀಳವಾದ ಮತ್ತು ಕೃಶವಾದ ಅವಳ ಎಡದೋಳು, ಮುದುಡಿದ ಬೆರಳುಗಳಿಂದ ಕೂಡಿ, ಸರೋವರದಿಂದ ಕಿತ್ತೊಗೆಯಲ್ಪಟ್ಟ ಕಮಲಕೋರಕದಿಂದೊಡಗೂಡಿದ ಮೃಣಾಲದಂತೆ ತೋರುತ್ತಿತ್ತು. ಅವನ ಕೊರಳನ್ನು ಬಳಸಿದ ಅವಳ ಬಲದೋಳು ಶಿವನ ಭುಜದ ಮೇಲಾಡುವ ಭುಜಂಗದಂತೆ ಕಾಣುತ್ತಿತ್ತು. ಆಕೆ ದೀರ್ಘವಾಗಿ ಶ್ವಾಸವನ್ನು ಎಳೆದುಕೊಂಡಾಗ, ಅವಳ ತುಂಬಿದ ಎದೆ ಅವನಿಗೆ ಮೃದು ಮಧುರ ಸ್ಪರ್ಶವನ್ನುಂಟು ಮಾಡುತ್ತಿತ್ತು.

ಅವಳ ಮುಂಗುರುಳನ್ನು ನೇವರಿಸುತ್ತ ವಸಂತ ಕೇಳಿದ: "ಮೂರ್ಛೆ ಬಂದಿತೇ ?"

"ಇ....ಲ್ಲ.... ಬ....ಹ....ಳ.... ಆಯಾಸವಾಗಿದೆ."

"ಏಕೆ ?"

"ತಿ....ಳಿ....ಯ....ಲಿ....ಲ್ಲ....ವೇ ? ನೀವು ಹತ್ತನೆಯವರು."

"ಹಾಂ! ದಿನವೂ ಹೀಗೆಯೇ ಏನು ?"

"ಹೆ.... ಚ್ಚು....ಕ....ಡಿ....ಮೆ....ಹೀ....ಗೆ....ಯೇ."

ವಸಂತ ಇನ್ನೊಂದು ಕ್ಷಣ ಅವಳನ್ನು ಈಕ್ಷಿಸಿ ಕೇಳಿದ:

"ನಿನ್ನ ಹೆಸರೇನು ?"

"ನಿ....ರ್ಮ....ಲಾ"

"ಎಂಥವಳಿಗೆ ಎಂಥ ಹೆಸರು!" ಎಂದುಕೊಂಡ. ಅವನ ಮುಂದಿನ ಪ್ರಶ್ನೆಗಳಿಗೆ ತೀರ ಅಸ್ಪಷ್ಟ ಉತ್ತರ ಬಂದುವು. "ಪಾಪ! ನಿದ್ರೆಮಾಡಲಿ" ಎಂದು ಅವಳನ್ನು ಒಂದು ಬದಿಗೆ ಮಲಗಿಸಿ ತಾನು ಇನ್ನೊಂದು ಬದಿಗೆ ಮಲಗಿಕೊಂಡ. ಕೂಡಲೇ ನಿದ್ರೆ ಬಂದಿತು.

— ೩ —

ವಸಂತನಿಗೆ ಎಚ್ಚರವಾದಾಗ ಕೋಣೆಯಲ್ಲಿ ಬೆಳುದಿಂಗಳು ಬಂದಿತ್ತು. ತನ್ನ ಪಾದಗಳ ಮೇಲೆ ನೀರು ಬೀಳುತ್ತಿರುವಂತೆ ಅನಿಸಿದ್ದರಿಂದ ಅವನು ಒಮ್ಮೆಲೇ ಎದ್ದು ಕುಳಿತು, "ಯಾರು?" ಎಂದು ಕೇಳಿದ.

ಅವನಿಗೆ ಉತ್ತರವೇನೂ ಬರಲಿಲ್ಲ. ಅದರ ಬದಲಾಗಿ ಬರೀ ಅಳುವುದು ಮಾತ್ರ ಕೇಳಬಂತು. ಆ ತರುಣಿ ಅವನ ಕಾಲದಿಶೆಯಲ್ಲಿ ಕುಳಿತು ಅಳುತ್ತಿದ್ದಳು. ಅವಳನ್ನು ಮತ್ತೆ ತನ್ನ ಕಡೆಗೆ ಮೆಲ್ಲನೇ ಸೆಳೆದುಕೊಂಡು ವಸಂತ ಕೇಳಿದ:

"ಇದೇನು ಮಾಡುತ್ತಿರುವಿ?"

"ಏನೂ ಇಲ್ಲ."

"ಮತ್ತೆ ಈ ಕಣ್ಣೀರೇಕೆ?"

"ನನ್ನ ಕೃತಜ್ಞತೆಯನ್ನು ನಿಮಗೆ ಅರ್ಪಿಸಲು ನನ್ನ ಕಡೆಗೆ ಇನ್ನೇನಿದೆ?"

"ಕೃತಜ್ಞತೆ?"

"ಹೌದು"

"ನನಗೇಕೆ ಕೃತಜ್ಞತೆ?"

"ಇನ್ನಾರಿಗೆ ಅರ್ಪಿಸಲಿ?"

"ನನಗೆ ಅರ್ಥವಾಗಲಿಲ್ಲ."

"ಈ ಐದು ವರ್ಷಗಳ ನನ್ನ ವೇಶ್ಯಾಜೀವನದಲ್ಲಿ, ನಿಮ್ಮಂಥ ಪುಣ್ಯಾತ್ಮರನ್ನು ನಾನು ಒಬ್ಬರನ್ನಾದರೂ ನೋಡಲಿಲ್ಲ."

"ಏನು, ನಾನು ಪುಣ್ಯಾತ್ಮನೇ?"

"ಹೌದು. ಹೌದು!"

"ಅಲ್ಲ. ಅಲ್ಲ. ನಾನು ಪುಣ್ಯಾತ್ಮನಲ್ಲ. ನಾನೊಬ್ಬ ಪಾಪಾತ್ಮ. ನಾನಾರೆಂಬುದು ನಿನಗಿನ್ನೂ ಗೊತ್ತಿದ್ದಂತೆ ಕಾಣುವುದಿಲ್ಲ. ನಾನು ಸೈನಿಕ, ಕೊಲೆಗಡುಕ, ಸೆರೆಗುಡುಕ, ಮಾಂಸಭಕ್ಷಕ; ಅಲ್ಲದೇ ಕೆಲವು ಪ್ರಸಂಗಗಳಲ್ಲಿ ಸ್ತ್ರೀಯರ ಮೇಲೆ ಬಲಾತ್ಕಾರವನ್ನೂ ಮಾಡಿದವ"

"ನೀವು ಏನು ಹೇಳಿದರೂ ನಾನದನ್ನು ನಂಬುವುದಿಲ್ಲ."

"ನಾನು ಅಂಥದೇನನ್ನು ನಿನಗೆ ಮಾಡಿರುವೆನೆಂದು ನೀನು ನನಗೆ ಪುಣ್ಯಾತ್ಮನೆನ್ನುವಿ?"

"ಹೆರವರ ನೋವನ್ನು ಅರಿಯುವವರು ಪುಣ್ಯಾತ್ಮರಲ್ಲದಿದ್ದರೆ, ಇನ್ನಾರು ಪುಣ್ಯಾತ್ಮರೆನಿಸಬೇಕು?"

"ನಾನೆಲ್ಲಿ ಈಗ ನಿನ್ನ ನೋವನ್ನರಿತೆ?"

"ಅರಿಯದಿದ್ದರೆ, ನನ್ನನ್ನು ಹೀಗೆ ಸುಖವಾಗಿ ನಿದ್ರೆ ಮಾಡಲು ಬಿಡುತ್ತಿದ್ದಿರಾ?"

"ಅದಕ್ಕಾಗಿ ಇಷ್ಟು ಕೃತಜ್ಞತೆಯೇ? ಇಷ್ಟು ಹೊಗಳಿಕೆಯೇ?"

"ಇದು ಏನೂ ಅಲ್ಲ."

"ನನಗೇನೂ ನಿನ್ನ ಮಾತಿನ ಅರ್ಥವಾಗಲೊಲ್ಲದು."

"ನೀವೂ ನನ್ನ ಹಾಗೆ ವೇಶ್ಯೆಯಾಗಿ ನನ್ನ ಪರಿಸ್ಥಿತಿಯನ್ನನುಭವಿಸಿದ್ದರೆ, ನಿಮಗೂ ನನ್ನ ಮಾತಿನ ಅರ್ಥವಾಗುತ್ತಿತ್ತು."

"ನೀನೇಕೆ ವೇಶ್ಯೆಯಾದೆ?"

"ಸಾಹಸದ ಬಾಳನ್ನು ಮೆಚ್ಚಿ ವೇಶ್ಯೆಯಾದೆ"

"ನಿನ್ನ ಮಾತುಗಳು ನನ್ನ ಕುತೂಹಲವನ್ನು ಕೆರಳಿಸುತ್ತಿವೆ. ಸ್ವಲ್ಪ ನಿನ್ನ ಕತೆಯನ್ನೆಲ್ಲ ಬಿಡಿಸಿ ಹೇಳಬಾರದೇ?

"ಏನು ಹೇಳಲಿ ಅದೊಂದು ದೊಡ್ಡ ಕತೆ"

"ಅದನ್ನೇ ಸಣ್ಣದನ್ನಾಗಿ ಮಾಡಿ ಹೇಳಲ್ಲ!"

"ಹಾಗಾದರೆ ಕೇಳಿರಿ. ನಾನು ಸಣ್ಣವಳಿದ್ದಾಗಲೇ ಸಾಹಸ ಜೀವನದ ಬಗ್ಗೆ ಅತೀವ ಆಕರ್ಷಣೆಯಿತ್ತು. ನಮ್ಮ ನೆರೆಯಲ್ಲಿ ಒಬ್ಬ ಸಿರಿವಂತ ತರುಣನಿದ್ದ. ಅವನು ಒಳ್ಳೆ ರಸಿಕ, ಸಾಹಸಿ. ಅವನ ಜೀವನ ರೋಮಾಂಚಕಾರಿಯಾಗಿತ್ತು. ಅದಕ್ಕೆ ನಾನು ಮರುಳಾಗಿ ಅವನ ಕೂಡ ಓಡಿಹೋದೆ. ಅವನು ನನ್ನಿಂದ ಕೆಲದಿನ ಸುಖವನ್ನು ಪಡೆದು, ನನ್ನನ್ನು ಬಿಟ್ಟು ಇನ್ನೊಬ್ಬಳನ್ನು ಕಟ್ಟಿಕೊಂಡು ಓಡಿಹೋದ. ನಾನು ಅನಾಥಳಾಗಿ ವೇಶ್ಯೆಯಾದೆ. ಈಗ ನನಗೆ ಎನಿಸುತ್ತದೆ: ನಾನು ತಪ್ಪುಮಾಡಿದೆ ಎಂದು."

"ಏಕೆ?"

"ಸ್ತ್ರೀಯಳಿಗೆ ನಿಜವಾಗಿ ಬೇಕಾಗಿರುವುದು ಪ್ರೇಮ, ವಿಶ್ವಾಸ ಮತ್ತು ರಕ್ಷಣೆ. ಪ್ರೇಮ ವಿಶ್ವಾಸ ಮತ್ತು ರಕ್ಷಣೆಗಳಿಲ್ಲದಿದ್ದರೆ, ಎಂಥ ರೋಮಾಂಚಕಾರಿಯಾದ ಜೀವನವೂ ನರಕಸದೃಶವೆನಿಸುತ್ತದೆ."

"ಅಂತೂ ಈ ಜಗತ್ತು ಬಹಳ ವಿಚಿತ್ರವಾಗಿದೆ."

"ಏಕೆ?"

"ಏಕೆಂದರೆ, ಗೃಹಿಣಿಯಾಗಿ ಪ್ರೇಮ ವಿಶ್ವಾಸ ರಕ್ಷಣೆಗಳಿಗೆ ಪಾತ್ರಳಾದವಳು ರೋಮಾಂಚಕಾರಿಯಾದ ಜೀವನವನ್ನು ಬಿನ್ನು ಹತ್ತಿ ವೇಶ್ಯೆಯಾಗಲೂ ಸಿದ್ಧಳಾಗುತ್ತಾಳೆ. ರೋಮಾಂಚಕಾರಿ ಜೀವನದ ಬೆನ್ನು ಹತ್ತಿ ವೇಶ್ಯೆಯಾದವಳು, ಗೃಹಿಣಿಯಾಗಿ ಸಪ್ಪೆಯಾದ ಬಾಳನ್ನು ಬಾಳಬೇಕೆನ್ನುತ್ತಾಳೆ. ಇದು ವಿಚಿತ್ರವಲ್ಲದೇ ಮತ್ತೇನು?"

"ಅಂದರೆ ನಾನು ವೇಶ್ಯೆಯಾಗಿ ಹೀಗೆಯೇ ಇರಬೇಕೆಂದು ನಿನ್ನ ಅಭಿಪ್ರಾಯವೇ?"

"ಅಲ್ಲ. ಅಲ್ಲ. ಖಂಡಿತವಾಗಿಯೂ ನಾನು ಹಾಗೆ ಹೇಳಲಿಲ್ಲ. ನೀನು ಗೃಹಿಣಿಯಾಗಬೇಕೆಂದೇ ನನ್ನ ಇಚ್ಛೆಯಿದೆ."

"ಹಾಗಾದರೆ ನನ್ನನ್ನು ಇಲ್ಲಿಂದ ನೀವು ಹೊರಗೆ ಕರೆದೊಯ್ಯಲಾರಿರಾ? ನಿಮ್ಮಂಥ ಪುಣ್ಯಾತ್ಮರ ದಾಸಿಯಾಗಿ ನನ್ನ ಬಾಳನ್ನು ಸಾರ್ಥಕಮಾಡಿಕೊಳ್ಳುತ್ತೇನೆ."

"ಈಗ ಹೇಗೆ ಕರೆದೊಯ್ಯಲಿ! ನಾಳೆಗೇ ನಾನು ರಣಭೂಮಿಗೆ ಹೊರಟಿದ್ದೇನೆ. ಅಲ್ಲಿಂದ ಬದುಕಿಬಂದರೆ ಖಂಡಿತವಾಗಿಯೂ ನಿನ್ನನ್ನು ಇಲ್ಲಿಂದ ಹೊರಗೆ ಕರೆದೊಯ್ಯುತ್ತೇನೆ. ನೀನು ಬಯಸಿದ ಜೀವನವನ್ನು ನಿನಗೆ ಒದಗಿಸಿಕೊಡುತ್ತೇನೆ."

"ನೀವು ಬದುಕಿ ಬರುವಿರೆಂದೇ ನನ್ನ ಮನಸ್ಸು ಹೇಳುತ್ತದೆ. ಅದೂ ಹೇಡಿಯಂತೆ ಅಲ್ಲ. ವಿಜಯ ಸಂಪಾದಿಸಿದ ವೀರನಂತೆ."

ಅವಳ ಹೃದಯದಿಂದ ಬಂದ ಈ ಮಾತುಗಳು ನೇರವಾಗಿ ವಸಂತನ ಹೃದಯಕ್ಕೆ ಮುಟ್ಟಿದುವು.

"ಹುಚ್ಚು ಹುಡುಗಿ" ಎಂದು ಅವಳನ್ನು ಬಿಗಿದಪ್ಪಿ ಅವನು ಮುದ್ದಿನ ಮಳೆಗರೆದ.

ಅನಂತರ ವಸಂತನು ಆ ವೇಶ್ಯೆಯ ತೋಳ ಸೆರೆಯನ್ನು ಬಿಡಿಸಿಕೊಂಡು ಅಲ್ಲಿಂದ ಹೊರಬಿದ್ದಾಗ, ಆಕೆ ಆ ಮುಂಜಾವಿನ ಸಕ್ಕರೆಯ ನಿದ್ರೆಯಲ್ಲಿ ತನ್ನ ಭವಿಷ್ಯ ಜೀವನದ ಸವಿಗನಸುಗಳನ್ನು ಕಾಣುತ್ತಲಿದ್ದಳು. ಅವನು ಆ ವೇಶ್ಯಾಗೃಹದ ಕಡೆಗೊಮ್ಮೆ ಚೆನ್ನಾಗಿ ನೋಡಿ ಬೀದಿಗಿಳಿದಾಗ, ಜಗತ್ತು ತನ್ನ ಜೀವನದಲ್ಲಿಯ ಇನ್ನೊಂದು ಹೊಸದಿನದಲ್ಲಿ ಕಾಲಿಡುತ್ತಲಿತ್ತು.

— ೪ —

ವಸಂತ ಯುದ್ಧಭೂಮಿಗೆ ಹೋಗಿ ಆರು ತಿಂಗಳಾಗಿತ್ತು.

ಒಂದು ಮುಂಜಾವು. ಅನಿಲ ಒಂದು ವೃತ್ತಪತ್ರಿಕೆಯನ್ನು ಹಿಡಿದುಕೊಂಡು ಕುಳಿತವ ಎಷ್ಟೋ ಹೊತ್ತು ಕಲ್ಲಿನಂತೆ ಕುಳಿತೇ ಬಿಟ್ಟಿದ್ದ.

ಗಡಿಯಾರದಲ್ಲಿ ಎಂಟುಗಂಟೆ ಹೊಡೆದದ್ದರಿಂದ ಅಂಜನಾ ಗಡಿಬಿಡಿಯಿಂದ ಬಂದು "ಇದೇನು ಹೀಗೆ ಕುಳಿತಿರುವಿರಿ? ಇಂದು ಆಫೀಸು ಇಲ್ಲವೇ?" ಎಂದಳು.

ಅನಿಲ ಮಾತನಾಡಲಿಲ್ಲ. ಅವನು ಮಾತನಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಆವನ ಕಂಠ ಬಿಗಿದಿತ್ತು. ಕಣ್ಣುಗಳು ತುಂಬಿದ್ದುವು. ಅವನು ಮೌನದಿಂದಲೇ ತನ್ನ ಕೈಯಲ್ಲಿಯ ಸುದ್ದಿಯ ಪತ್ರವನ್ನು ಅಂಜನೆಯ ಕೈಗೆ ಕೊಟ್ಟ.

ಅಂಜನಾ ಅವನ್ನು ಕೈಗೆತೆದುಕೊಂಡು ನೋಡಿದಳು. ಅದರ ಮೊದಲ ಪುಟದ ಮಧ್ಯದಲ್ಲಿ ಒಂದು ಸಣ್ಣ ಅಂಕಣವನ್ನು ಮಾಡಿ, ಅದರಲ್ಲಿ 'ಸೈನಿಕನ ಇಚ್ಛೆ' ಎಂಬ ತಲೆಬರೆಹವನ್ನು ಕೊಟ್ಟು, ದಪ್ಪ ಅಕ್ಷರಗಳಲ್ಲಿ ಪ್ರಕಟಿಸಲಾದ ಸುದ್ದಿಯೊಂದರಲ್ಲಿ ಹೀಗೆ ಬರೆಯಲಾಗಿತ್ತು:

"....ರಣಭೂಮಿಯಲ್ಲಿ ಮೊನ್ನೆ ಬಹಳ ಶೂರತನದಿಂದ ಹೋರಾಡಿ, ನಮ್ಮ ಒಂದು ಮಹತ್ತ್ವದ ವಿಜಯಕ್ಕೆ ಕಾರಣರಾಗಿ ವೀರಸ್ವರ್ಗವನ್ನೈದಿದ ಕ್ಯಾಪ್ಟನ್ ವಸಂತರಾಯರು, ತಮ್ಮ ದಿನಚರಿಯಲ್ಲಿಯ ಒಂದು ಪುಟದಲ್ಲಿ 'ನಿರ್ಮಲಾ' ಎಂಬ ವೇಶ್ಯೆಯ ವಿಳಾಸವನ್ನು ಕೊಟ್ಟು, ತಾವು ಒಂದು ವೇಳೆ ರಣರಂಗದಲ್ಲಿ ಮಡಿದರೆ, ತಮ್ಮ ಆಸ್ತಿಯೆಲ್ಲ ಅವಳಿಗೇ ಹೋಗಬೇಕೆಂದೂ ಮತ್ತು ತಮ್ಮ ಶೌರ್ಯಕ್ಕೆ ಏನಾದರೂ ಮಾನಮರ್ಯಾದೆಗಳು ಸಲ್ಲುವ ಪ್ರಸಂಗ ಬಂದರೆ ಅವು ಅವಳಿಗೇ ಸಲ್ಲಬೇಕೆಂದೂ, ಅವಳನ್ನು ಆ ವೇಶ್ಯಾಗೃಹದಿಂದ ಬಿಡಿಸಿ ಸ್ವತಂತ್ರಳನ್ನಾಗಿ ಮಾಡಿ, ತನ್ನ ಮನಸ್ಸಿಗೆ ಬಂದವರನ್ನು ವರಿಸಲು ಅವಳಿಗೆ ಅವಕಾಶ ಮಾಡಿಕೊಡಬೇಕಲ್ಲದೇ ಗೃಹಿಣಿಯ ಜೀವನವನ್ನು ನಡೆಯಿಸಲು ಬೇಕಾಗುವ ಎಲ್ಲ ಅನುಕೂಲತೆಗಳನ್ನೂ ಒದಗಿಸಿಕೊಡಬೇಕೆಂದೂ, ಇದು ತಮ್ಮ ಕೊನೆಯ ಇಚ್ಛೆಯೆಂದೂ ಬರೆದು ಇಟ್ಟಿರುವುದಾಗಿ ವಿಶ್ವಸನೀಯವಾಗಿ ತಿಳಿದು ಬಂದಿದೆ...."

ಈ ಸುದ್ದಿಯನ್ನೋದಿ ಕ್ಷಣ ಹೊತ್ತು ಸ್ತಬ್ಧಳಾಗಿ ನಿಂತ ಅಂಜನಾ, ಒಮ್ಮೆಲೇ ಕೈಯಲ್ಲಿಯ ಆ ವರ್ತಮಾನ ಪತ್ರವನ್ನು ಬೀಸಿ ಒಗೆದು "ಮೂರ್ಖ! ಮೂರ್ಖ!" ಎಂದು ಕೂಗುತ್ತ ಒಳಗೆ ಓಡಿದಳು.

ಅನಿಲ ಮಾತ್ರ ಅವಳೇಕೆ ಹೀಗೆ ಮಾಡುತ್ತಾಳೆಂಬುದನ್ನು ಅರಿಯದೇ, ದಿಙ್ಮೂಢನಾಗಿ ಕುಳಿತಲ್ಲಿಯೇ ಕುಳಿತಿದ್ದ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಸೇರಿ ಮಾಡುವವರು; ನೂರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಪ್ಯಾಸ್ಟರ್ ನ್ಯಾಕರ ಕೃತಿರತ್ನ

(ಒಂದು ಪರಿಚಯ)

ಲೇಖಕ: ಶ್ರೀ. ಅ. ರಾ. ಸೇ. ದಾವಣಗೆರೆ

ಕಳೆದ ವರ್ಷದಲ್ಲಿ ನೋಬೆಲ್ ಬಹುಮಾನವನ್ನು ಪಡೆದು, ತನ್ನ ರಾಷ್ಟ್ರದ ಅಪೇಕ್ಷೆಯಂತೆ ಅದನ್ನು ನಿರಾಕರಿಸಿದ, ಸುಪ್ರಸಿದ್ಧ ರಸಿಯನ್ ಸಾಹಿತ್ಯಿಕ ಪ್ಯಾಸ್ಟರ್‌ನಾಕ್ ಅವರ ಪರಿಚಯ, ಈ ಮೊದಲೇ ನಮ್ಮಲ್ಲಿ ಅನೇಕರಿಗಾಗಿದೆ. ಆ ಮಹನೀಯನ ಶ್ರೇಷ್ಠ ಕೃತಿಯ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಅಕ್ಟೋಬರ್ ಕ್ರಾಂತಿಯ ನಂತರ ಸೋವಿಯೆಟ್ ರಷ್ಯದ ಜನಜೀವನ ಹೇಗಿತ್ತು?— ಎಂಬ ಪ್ರಶ್ನೆ ಅನೇಕರೆದುರು ಬರುವುದು ಸ್ವಾಭಾವಿಕ. ಆ ಪ್ರಶ್ನೆಗೆ ರಾಜಕೀಯದ ಬಣ್ಣ ಬಂದಿರುವುದರಿಂದ, ಆ ಬಗೆಗೆ ಬಂದ ಸಾಹಿತ್ಯ 'ಪ್ರಚಾರಸಾಹಿತ್ಯ'ದ ಮಾಲೆಗೆ ಸೇರಿ, ನಿಜವಾವುದೋ ತಿಳಿಯವೆ ಹೋಗುತ್ತದೆ. **'ಡಾ॥ ಝಿವಾಗೋ'** ಕ್ರಾಂತಿಪೂರ್ವ ಹಾಗೂ ಕ್ರಾಂತ್ಯುತ್ತರ ರಷ್ಯದ ಜನಜೀವನವನ್ನು ಪ್ರಾಮಾಣಿಕವಾಗಿ ಚಿತ್ರಿಸಿದೆಯೆಂದು ಭಾವಿಸಿದರೆ ತಪ್ಪಾಗಲಾರದು. **ಪ್ಯಾಸ್ಟರ್‌ನ್ಯಾಕ್** ರಷ್ಯದ ಉತ್ತಮ ಕವಿಗಳಲ್ಲೊಬ್ಬರು. ಅವರು ಉಜ್ವಲ ದೇಶಭಕ್ತರೂ ಹೌದು, ಪ್ರಾಮಾಣಿಕರಾದ ವಿಚಾರಿಗಳೂ ಹೌದು ಎಂಬುದು, ಅವರ ಪುಸ್ತಕದ ಅವಲೋಕನೆಯಿಂದ ಸ್ಪಷ್ಟವಾಗುತ್ತದೆ. ಅವರ ಕಾದಂಬರಿಗೆ ನೋಬಲ್ ಪಾರಿತೋಷಕ ದೊರೆತಾಗ, ಸೋವಿಯೆಟ್ ಲೇಖಕರ ಕಾಂಗ್ರೆಸ್ ಅವರನ್ನು ಬಹಿಷ್ಕರಿಸಿತು. ಬಹುಮಾನಪಡೆಯಲು ಒಪ್ಪಿಗೆ ಕೊಟ್ಟ ಆಜ್ಞೆ ಬಂದರೂ ಅವರು ಡಾಗೆ ಮಾಡಲಿಲ್ಲ. ಆದುದರಿಂದ ಅವರು ಕಾದಂಬರಿಯನ್ನು ರಾಜಕೀಯ ಉದ್ದೇಶಗಳಿಗಾಗಿ ಬರೆಯಲೂ ಇಲ್ಲ; ಅದಕ್ಕೆ ಆ ಬಣ್ಣ ಕೊಡಲ್ಪಟ್ಟಾಗಲೂ ಅವರು ವಿಚಲಿತರಾಗದೆ ಅದನ್ನು ಬಳಿದುಕೊಳ್ಳಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಕಾದಂಬರಿ ಉತ್ಕೃಷ್ಟತೆ ಪಡೆದಿರುವುದು ಮಾನವೀಯತೆಯ ಮೌಲ್ಯಗಳಿಗಾಗಿ.

ಪ್ಯಾಸ್ಟರ್ ನ್ಯಾಕರ ಗದ್ಯಕೃತಿಗಳು ಅತ್ಯಲ್ಪ: ಸೇಫ್‌ಕಾಂಡಕ್ಟ್, 'ಐ ರಿಮೆಂಬರ್' ಎಂಬ ಆತ್ಮವೃತ್ತಾತ್ಮಕ ಪ್ರಬಂಧಗಳು; ಸಾಲ್ಕಾರು ಸಣ್ಣ ಕತೆಗಳು ಮತ್ತು 'ಡಾ॥ ಝಿವಾಗೋ.'

'ಡಾ॥ ಝಿವಾಗೊ' ರಷ್ಯದಲ್ಲಿ ಇನ್ನೂ ಪ್ರಕಟಣೆ ಪಡೆದಿಲ್ಲ. ಇಟಾಲಿಯನ್ ಪ್ರಕಾಶಕರ ಬಳಿಯಿದ್ದ ಹಸ್ತಪ್ರತಿಯಿಂದ ಅದು ಇಂಗ್ಲೀಷಿಗೆ ಭಾಷಾಂತರ ಹೊಂದಿ ಪ್ರಕಟಿಸಲ್ಪಟ್ಟಿದೆ.

ಸುಮಾರು ಐನೂರು ಪುಟಗಳಷ್ಟು ದೊಡ್ಡದಾದ ಈ ಕಾದಂಬರಿಯಲ್ಲಿ ಅನೇಕ ಪಾತ್ರಗಳಿವೆ. ಕತೆಯ ಅವಧಿ ಸುಮಾರು ಐವತ್ತು ವರ್ಷಗಳದು. ಆದುದರಿಂದ ಕತೆಯ ಸಾರಾಂಶವನ್ನು ಸಂಗ್ರಹಿಸುವುದು ಕಷ್ಟಕರವಾದ ವಿಷಯ. ಮೂರು ಮುಖ್ಯ ಪಾತ್ರಗಳನ್ನು ಲಕ್ಷ್ಯಿಸಿ ಕತೆಯ ಹಂದರ ಸ್ಥೂಲವಾಗಿ ಹೀಗಿದೆ:

ತನ್ನ ತಾಯಿಯ ಮರಣಾನಂತರ, ಯೂರಿ ಝಿವಾಗೋ, ತನ್ನ ಚಿಕ್ಕಪ್ಪ ಕೋಲಾನ ಆಶ್ರಯದಲ್ಲಿ ಬೆಳೆಯುತ್ತಾನೆ. ಅವನ ಸ್ನೇಹಿತರ ಮನೆಗೆ ಹೋದಾಗ, ಅವನ ತಂದೆ ರೈಲುಗಾಡಿಯಿಂದ ಬಿದ್ದು ಮೃತನಾದ ಸುದ್ದಿ ತಿಳಿಯುತ್ತದೆ. ಯೂರಿಯ ತಂದೆ ಜಂಬುಗಾರನಾದ ಸಾಹುಕಾರ. ಯೂರಿಯ ಚಿಕ್ಕಪ್ಪ ಕೋಲ್ಯಾ ಕ್ರಾಂತಿಕಾರ ಸಾಹಿತಿ. ಅವನ ಗ್ರಂಥಗಳ ಪ್ರಭಾವ ಆ ಕಾಲದ ಅನೇಕ ತರುಣರ ಹಾಗೂ ಬುದ್ಧಿ ಜೀವಿಗಳ ಮೇಲೆ ಬಿದ್ದಿರುತ್ತದೆ. ಚಿಕ್ಕಪ್ಪ ಕೋಲ್ಯಾ ರಷ್ಯವನ್ನು ಬಿಟ್ಟು ಸ್ವಿಟ್ಸರ್‌ಲೆಂಡಿಗೆ ಹೋಗಿ ನೆಲೆಸುತ್ತಾನೆ.

ಆಗ ಯೂರಿ ಝಿವಾಗೋ, ಮಾಸ್ಕೋನಗರಕ್ಕೆ ಹೋಗಿ ಕೋಲ್ಯಾನ ಸ್ನೇಹಿತ ಪ್ರೊ॥ ಗ್ರೊಮೆಕೊ ಮನೆಯಲ್ಲಿ ಬೆಳೆದು, ಡಾಕ್ಟರ್ ಪರೀಕ್ಷೆಯನ್ನು ಮುಗಿಸಿ, ಗ್ರೊಮೆಕೊ ಮಗಳು ಟೊನ್ಯಾಳನ್ನು ಮದುವೆಯಾಗುತ್ತಾನೆ.

ಝಿವಾಗೋನ ತಂದೆಯ ಕೊನೆಯ ದಿನಗಳಲ್ಲಿ ಅವನ ಜೊತೆಗಾರನಾಗಿದ್ದ, ಕೊಮರೊವ್ಸ್ಕಿ ಎಂಬ ವಕೀಲನ ಆಶ್ರಯದಲ್ಲಿದ್ದ ಮೆಡೇಮ್ ಗಿಷಾರ್ ಎನ್ನುವವಳ ಮಗಳು: ಲಾರಾ. ಕೊಮರೋವ್ಸ್ಕಿ, ಲಾರಾಳೊಡನೆ ಸಂಬಂಧ ಬೆಳೆಸುತ್ತಾನೆ. ಲಾರಾ, ಆ ಸಂಬಂಧವನ್ನು ಕಡಿದು ಕೊಂಡು, ಕ್ರಾಂತಿಕಾರರಿಗೆ ಆಶ್ರಯದಾತನಾದ ಕೊಲೊಗ್ರಿವೋವ್ ಎಂಬ ಶ್ರೀಮಂತನ ಮನೆಯಲ್ಲಿ ಕಲಸಕ್ಕೆ ಸೇರಿ, ಓದು ಮುಗಿಸುತ್ತಾಳೆ. ಅವಳ ಜೊತೆಗೆ ಪಾಷಾ ಆಂಟಿಪೋವ್ ಎಂಬ ಯುವಕನೂ ಅದೇ ಮನೆಯಲ್ಲಿದ್ದು ಓದುತ್ತಿರುತ್ತಾನೆ. ಓದು ಮುಗಿಸಿದಮೇಲೆ ಅವರಿಬ್ಬರೂ ಮದುವೆ ಮಾಡಿಕೊಂಡು, ಯೂರಲ್ ಪರ್ವತ ಪ್ರಾಂತ್ಯದ ಯಾರ್ಯಟಿನ್ ಎಂಬ ಊರಿನಲ್ಲಿ ಉಪಾಧ್ಯಾಯನ್ನತ್ತಿಗೆ ಸೇರಿ, ನೆಲೆಸುತ್ತಾರೆ.

ಮೊದಲ ಮಹಾಯುದ್ಧ ಆರಂಭವಾದಾಗ, ಚಿಕಿತ್ಸಾಪಥಕವೊಂದಕ್ಕೆ ಝಿವಾಗೋ ಸೇರಿಕೊಂಡು, ಯುದ್ಧರಂಗಕ್ಕೆ ಹೋಗುತ್ತಾನೆ. ಪಾಷಾ ಮತ್ತು ಲಾರಾ, ಇವರಿಬ್ಬರ ವಿವಾಹಜೀವನವು ಕೂಡ, ಪಾಷಾನಿಗೆ ತೃಪ್ತಿಕೊಡುವುದಿಲ್ಲ. ರೈಲ್ವೆ ಕಾರ್ಮಿಕನ ಮಗನಾದ ಅವನ ಮನ-

ಸ್ಸಿನ ಅಂತರಾಳದಲ್ಲಿ, ವರ್ಗಗಳ ಅಸಮಾನತೆ ಸಾಕಷ್ಟು ಅತೃಪ್ತಿಯನ್ನುಂಟು ಮಾಡಿರುತ್ತದೆ. ಅವನು ಸೈನ್ಯಕ್ಕೆ ಸೇರಿ ಯುದ್ಧರಂಗಕ್ಕೆ ಅಧಿಕಾರಿಯಾಗಿ ಹೋಗುತ್ತಾನೆ. ಲಾರಾ, ಕೂಡ ಯುದ್ಧರಂಗಕ್ಕೆ ಹೋಗಿ ಝಿವಾಗೋ ಜೊತೆಗೆ ನರ್ಸ್ ಆಗಿ ಕೆಲಸಮಾಡುತ್ತಾಳೆ. ಯುದ್ಧರಂಗದಲ್ಲಿ ಪಾಷಾ ಸತ್ತನೆಂಬ ವಾರ್ತೆ ಹಬ್ಬುತ್ತದೆ.

ಝಿವಾಗೋ, ಮಾಸ್ಕೋಗೆ ಹಿಂದಿರುಗುತ್ತಾನೆ. ಯುದ್ಧಾನಂತರದ ರಷ್ಯ, ಶೈತ್ಯಾತಿಶಯ, ಕ್ಷಾಮಗಳಿಂದ ಪೀಡಿತವಾಗಿರುತ್ತದೆ. ಕೆಲಕಾಲದ ನಂತರ ಕ್ರಾಂತಿ ನಡೆದು, ಝಾರ್ ಪದಭ್ರಷ್ಟನಾಗಿ ಕ್ರಾಂತಿಕಾರರ ಆಡಳಿತ, 'ಶ್ರಮಜೀವಿಗಳ ಸರ್ವಾಧಿಕಾರ' ಆರಂಭವಾಗುತ್ತದೆ.

ಆದರೆ ಅವನ ಜೀವನ ಸುಗಮವಾಗಿರುವುದಿಲ್ಲ. ಆಹಾರಾಭಾವ, ವಿಪರೀತವಾದ ದುಡಿತಗಳಿಂದ ಅವನು ಕಾಯಿಲೆ ಬೀಳುತ್ತಾನೆ. ಅವನ ದಾಯಾದಿ ಯೆವ್‌ಗ್ರಾಫ್ ಝಿವಾಗೋನ ಸಹಾಯವಿಲ್ಲದಿದ್ದರೆ ಅವನು ಸತ್ತೇ ಹೋಗಬೇಕಾಗಿರುತ್ತದೆ. ಕಾಯಿಲೆಯಿಂದ ಚೇತರಿಸಿಕೊಂಡ ಮೇಲೆ ಅವನ ಹೆಂಡತಿಯ ಅಜ್ಜನ ಆಸ್ತಿಯಾದ, ಯೂರಲ್ ಪರ್ವತ ಪ್ರಾಂತದ ವೇರಿಕಿನೋ ಎಂಬ ಪ್ರದೇಶಕ್ಕೆ, ತನ್ನ ಸಂಸಾರದೊಡನೆ ಹೊರಡುತ್ತಾನೆ.

ಅವರ ಪ್ರಯಾಣ ಸುಗುಮವಾಗಿರುವುದಿಲ್ಲ. ಕ್ರಾಂತಿಯ ನಂತರ ರಷ್ಯದಲ್ಲಿ ಯಾದವೀಕಲಹ ಆರಂಭವಾಗಿ, 'ಕೆಂಪು ಸೈನ್ಯ' ಮತ್ತು 'ಬಿಳಿ ಸೈನ್ಯ'ಗಳಿಗೆ ಯುದ್ಧ ನಡೆಯುತ್ತಿರುತ್ತದೆ. ಮಂಜು ಸಟ್ಟವಾಗಿ ಬೀಳುತ್ತಿರುತ್ತದೆ. ಅವರ ಪ್ರಯಾಣದ ಕೊನೆಯ ಘಟ್ಟದಲ್ಲಿ ಝಿವಾಗೋ ಸ್ಟೆಲ್ನಿಕೋವ್ ಎಂಬ ಸೇನಾಧಿಕಾರಿಯನ್ನು ಭೆಟ್ಟಿ ಮಾಡುತ್ತಾನೆ. ಸಾಂಡೆವ್ಯಟೋವ್ ಎನ್ನುವವನ ಸಹಾಯದಿಂದ ಝಿವಾಗೋ ಪರಿವಾರದವರು ವೇರಿಕಿನೋವಿನಲ್ಲಿ ನೆಲೆಸುತ್ತಾರೆ.

ಅಲ್ಲಿ ವ್ಯವಸಾಯದಲ್ಲಿ ನಿರತನಾಗಿ ಕೆಲವು ಕಾಲ ಕಳೆದನಂತರ ಝಿವಾಗೋ, ಪುಸ್ತಕಗಳಿಗಾಗಿ ಯೂರ್ಯಟಿನ್ ಲೈಬ್ರರಿಗೆ ಹೋಗಿ ಬರಲು ಆರಂಭಿಸುತ್ತಾನೆ. ಝಿವಾಗೋ ಲೇಖನದ ಹವ್ಯಾಸವನ್ನು ಮೊದಲಿನಿಂದಲೂ ಇಟ್ಟುಕೊಂಡಿರುತ್ತಾನೆ. ಯುರ್ಯಟಿನ್ ಲೈಬ್ರರಿಯಲ್ಲಿ ಲಾರಾಳನ್ನು ಕಂಡು ಅವಳ ಮನೆಗೆ ಹೋಗುತ್ತಾನೆ. ಅವಳಿಂದ ಸ್ಟೆಲ್ನಿಕೋವ್ ಲಾರಾಳ ಗಂಡ ಪಾಷಾ ಎಂದು ತಿಳಿದುಕೊಳ್ಳುತ್ತಾನೆ. ಅವರಿಬ್ಬರ ನಡುವೆ ಅಭೇದ್ಯವಾದ ಗೋಡೆಯಿನ್ನಂತೆ ತೋರುತ್ತದೆ.

ಲಾರಾ ಮತ್ತು ಝಿವಾಗೋ ಪ್ರೇಮಿಗಳಾಗುತ್ತಾರೆ. ಕೆಲವು ದಿನಗಳ ನಂತರ ಕೆಂಪು ಸೈನ್ಯದ ಒಂದು ಭಾಗವಾದ ಫಾರೆಸ್ಟ್ ಬ್ರದರ್ ಹುಡ್ಡಿನ ಅಧಿಪತಿ ಲೈಬೀರಿಯಸ್ ಮಿಕುಲಿಟ್ಸಿನ್, ಝಿವಾಗೋನನ್ನು ಅಪಹರಿಸುತ್ತಾನೆ. ಅವನೊಡನೆ, ತನ್ನ ಇಚ್ಛೆಗೆ ವಿರುದ್ಧವಾಗಿ ಝಿವಾಗೋ ಮೂರು ವರ್ಷ ಇರಬೇಕಾಗುತ್ತದೆ.

ಈ ನಡುವೆ ಝಿವಾಗೋನ ಹೆಂಡತಿ ಮತ್ತು ಮಾವ ಮಾಸ್ಕೋಗೆ ಹಿಂತಿರುಗುತ್ತಾರೆ. ಝಿವಾಗೋನ ಮಿತ್ರರು ಮತ್ತು ಬಂಧುಗಳೆಲ್ಲರೂ ದೇಶಭ್ರಷ್ಟರಾಗಿ ಫ್ರಾನ್ಸಿಗೆ ಗಡೀಪಾರು ಮಾಡಲ್ಪಟ್ಟಿರುತ್ತಾರೆ. ಅವನಿಗೆ ಇದಾವುದೂ ತಿಳಿಯದು.

ಮೂರು ವರ್ಷಗಳ ನಂತರ ಝಿವಾಗೋ ಸೈನ್ಯದಿಂದ ತಪ್ಪಿಸಿಕೊಂಡು ಯುರ್ಯಟಿನ್‌ಗೆ ಓಡಿ ಬರುತ್ತಾನೆ. ಲಾರಾಳಿಂದ ತನ್ನ ಸಂಸಾರದ ವಿಷಯ ತಿಳಿದು ಬರುತ್ತದೆ. ಕೆಲವು ಕಾಲ ಲಾರಾಳೊಡನೆ ಅಲ್ಲಿದ್ದು, ಬಂಧನದಿಂದ ತಪ್ಪಿಸಿಕೊಳ್ಳಲು ಅವಳೊಡನೆ ಮತ್ತೆ ವೇರಿಕಿನೋವಿಗೆ ಹೋಗಿ ನೆಲೆಸುತ್ತಾನೆ.

ಸ್ಟೆಲ್ನಿಕೋವ್ ಯಾದವೀಕಲಹದಲ್ಲಿ ಕೆಂಪು ಸೈನ್ಯಕ್ಕಾಗಿ ಮಹದ್ವಿಜಯಗಳನ್ನು ಗಳಿಸುತ್ತಾನೆ. ಆದರವನು 'ಪಕ್ಷ'ಕ್ಕೆ ಸೇರಿದವನಲ್ಲ. ಯುದ್ಧಮುಗಿದ ನಂತರ, ಹೆಂಡತಿಯನ್ನು ನೋಡಲು ಹೋಗಬೇಕೆಂದು ಅವನ ತೀರ್ಮಾನ; ಆದರೆ ಅವನಿಂದ ಆಗಬೇಕಾದ ಕೆಲಸವೆಲ್ಲಾ ಆದ ಮೇಲೆ, ಅವನನ್ನು 'ದ್ರೋಹಿ' ಎಂದು ಕರೆದು, ವಿಚಾರಣೆ ನಡೆಸಿ ಅವನಿಗೆ ಮರಣದಂಡನೆಯನ್ನು ವಿಧಿಸುತ್ತಾರೆ—ಪಾರ್ಟಿಯವರು!

ಸ್ಟೆಲ್ನಿಕೋವ್ ತಪ್ಪಿಸಿಕೊಂಡು ತನ್ನ ಹೆಂಡತಿ-ಮಕ್ಕಳನ್ನು ನೋಡಲೆಂದು ವೇರಿಕಿನೋ ಕಡೆಗೆ ಓಡಿ ಹೋಗುತ್ತಾನೆ. ಅವನನ್ನು ಅಟ್ಟಿಸಿಕೊಂಡು ಸೈನಿಕರ ತಂಡ ಬರುತ್ತದೆ.

ಅಷ್ಟರಲ್ಲಿ ಕೊಮರೋವ್ಸ್ಕಿ ಉದ್ಭವಿಸುತ್ತಾನೆ. ಕ್ರಾಂತಿ ಅವನಿಗೆ ಏನನ್ನೂ ಮಾಡಿರುವುದಿಲ್ಲ. ಬಂಡವಾಳಶಾಹಿಗಳ ಕಾಲಕ್ಕಿಂತ ಕ್ರಾಂತಿಯ ಕಾಲ ಅವನ ಮೇಲೆ ಹೆಚ್ಚಿನ ವರಗಳನ್ನು ಸುರಿಸಿರುತ್ತದೆ. ಪೂರ್ವ ಸೈಬೀರಿಯಾ ಸರ್ಕಾರವೊಂದರ ಮಂತ್ರಿಯಾಗಿ ಅವನು ನೇಮಿತನಾಗಿರುತ್ತಾನೆ. ತನ್ನ ಹೊಸ ಹುದ್ದೆಗೆ ಸೇರುವ ಮೊದಲು ಅವನು ಲಾರಾಳ ಬಳಿಗೆ ಬಂದು ತನ್ನೊಡನೆ ಬರಬೇಕೆಂದು ಒತ್ತಾಯ ಪಡಿಸುತ್ತಾನೆ. ಝಿವಾಗೋ ಸೈನ್ಯದಿಂದ ಓಡಿ ಬಂದವನು; ಲಾರಾ 'ದ್ರೋಹಿ'ಯ ಹೆಂಡತಿ! ಅವರು ಬದುಕಲು ಉಳಿದಿರುವುದು ಒಂದೇ ಮಾರ್ಗ: ಕೊಮರೋವ್ಸ್ಕಿಯ ಜೊತೆಗಾರರಾಗಿ ಹೋಗುವುದು!

ಝಿವಾಗೋ ಅದಕ್ಕೊಪ್ಪುವುದಿಲ್ಲ. ಅವನು ಬರದೇ ಲಾರಾ ಹೊರಡುವಂತಿಲ್ಲ. ಹಿಂದಿನಿಂದ ಬಂದು ಸೇರಿಕೊಳ್ಳುವೆನೆಂದು ಸುಳ್ಳು ಹೇಳಿ, ಲಾರಾಳನ್ನು ಅವನು ಕೊಮರೋವ್ಸ್ಕಿಯ ಜೊತೆ ಕಳಿಸುತ್ತಾನೆ.

ಸ್ಟೆಲ್ನಿಕೋವನಿಗೆ ಇನ್ನು ಬದುಕುವ ನಿರೀಕ್ಷಣೆಯಿಲ್ಲ. ಅವನು ಬಯಸುತ್ತಿದ್ದುದು ಒಂದೇ ಒಂದು: ಹೆಂಡತಿ ಮಕ್ಕಳನ್ನು ಒಮ್ಮೆ ನೋಡುವುದು. ವೇರಿಕಿನೋ ತಲುಪಿದಾಗ ತನ್ನ ಹೆಂಡತಿ ಮಕ್ಕಳು ಅಲ್ಲಿಲ್ಲವೆಂದು ಅವನಿಗೆ ತಿಳಿಯುತ್ತದೆ. ಝಿವಾಗೋನೊಡನೆ ಅವನು ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಬಳಿಕ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಝಿವಾಗೋ ಕಾಲುನಡೆಯಲ್ಲಿ ಮಾಸ್ಕೋಗೆ ಹಿಂದಿರುಗಿ, ಅಲ್ಲಿ ಇನ್ನೊಬ್ಬಳ ಜೊತೆಗೆ ಹತ್ತು ವರ್ಷ ಬದುಕಿರುತ್ತಾನೆ. ಈ ಕಾಲಾವಧಿಯಲ್ಲಿ ಅವನ ಅನೇಕ ಪುಸ್ತಕಗಳು ಪ್ರಕಟವಾಗುತ್ತವೆ. ಅವನ ವೃತ್ತಿಯಲ್ಲೂ, ಲೇಖನದಲ್ಲೂ ಅವನಿಗಿದ್ದ ಆಸಕ್ತಿ ಕ್ರಮೇಣ ಕಡಿಮೆಯಾಗುತ್ತದೆ. ಅವನು ಹೃದ್ರೋಗದಿಂದ ನರಳುತ್ತಿರುತ್ತಾನೆ. ಒಂದು ದಿನ ಟ್ರಾಂ ಪ್ರಯಾಣ ಮಾಡುವಾಗ ಅವನು ಮರಣಕ್ಕೆ ತುತ್ತಾಗುತ್ತಾನೆ.

ಅವನ ಮರಣದ ನಂತರ ಅವನ ದಾಯಾದಿ ಯೆವ್‌ಗ್ರಾಫ್, ಝಿವಾಗೋನ ಕೃತಿಗಳನ್ನು ಪ್ರಕಟಿಸುತ್ತಾನೆ.

ಡಾ|| ಝಿವಾಗೋ ಒಂದು ದುರಂತ ಕತೆ; ಅವನು ಸತ್ತನೆಂಬ ಅರ್ಥದಲ್ಲಲ್ಲ. ಅವನು ಯಾವ ಮಾನವೀಯ ಆದರ್ಶಗಳಿಗಾಗಿ ಬಾಳಿದ್ದನೋ, ಯಾವ ಕನಸು ಕಂಡಿದ್ದನೋ, ಅವು ಬಹುಶಃ ಇನ್ನೆಂದೆಂದೂ ಬಾಳಲಾಗದಂಥ ಸ್ಥಿತಿಯುಂಟಾಯಿತೆಂಬ ಅರ್ಥದಲ್ಲಿ. ಹತ್ತೊಂಬತ್ತನೆಯ ಶತಮಾನದ ಯೂರೋಪಿನ ಜನಜೀವನದಲ್ಲಿ ವರ್ಗಸಮರ ಅನಿವಾರ್ಯವೆಂಬ ಸ್ಥಿತಿಯುಂಟಾಯಿತು. ಕಾರ್ಮಿಕರ ಅಸಹನೀಯ ದುಃಸ್ಥಿತಿ ಕಾರುಣ್ಯಜನಕವಾಗಿತ್ತು. ಅದನ್ನು ಸುಧಾರಿಸಲು ಬಂಡವಾಳಶಾಹೀ ವರ್ಗದ ಅಂತಿನು ಪತನವಾಗುವುದು ಅನಿವಾರ್ಯವಾಯಿತು. ಲೆನಿನ್ನನ ನಾಯಕತ್ವದಲ್ಲಿ ರಷ್ಯದ ಕ್ರಾಂತಿ ನಡೆದು ಯಶಸ್ಸುಗಳಿಸಿತು. 'ಶ್ರಮ ಜೀವಿಗಳ ಸರ್ವಾಧಿಕಾರ' ಸ್ಥಾಪನೆಯಾಯಿತು.

ರಷ್ಯದ ಕ್ರಾಂತಿಯೊಂದು 'ಶಸ್ತ್ರಚಿಕಿತ್ಸೆ' 'ಹಳೆಯ ವ್ರಣವನ್ನು ಶಸ್ತ್ರದಿಂದ ಕತ್ತರಿಸಿಹಾಕಿದಂತೆ' ಇಲ್ಲವೆ 'ಅನ್ಯಾಯವನ್ನು ವಿಚಾರಿಸಿ ಮರಣದಂಡನೆಗೆ ಗುರಿಪಡಿಸಿದ ಹಾಗೆ'— ಅದು 'ತ್ಸೈರ್‌ಸ್ಕಯಾ–ಯಂಸ್ಕಯಾ ರಸ್ತೆಯ ನಿರ್ಮೂಲನಕ್ಕಾಗಿ, ಅಪಮಾನ ಕಣ್ಣೀರುಗಳ ನಾಶಕ್ಕಾಗಿ, ದೀನದಲಿತರ ಮೇಲಿನ ಕನಿಕರಕ್ಕಾಗಿ' ನಡೆದ, ಕೊಂಚವೂ ಕನಿಕರವಿಲ್ಲದಂಥ ಹತ್ಯಾಕಾಂಡದಲ್ಲಿ ಆಳರಸರ, ಬಂಡವಾಳಶಾಹಿಗಳ, ಕೊಲೆ ನಡೆಯಿತು. ಕಾಲ ಪಕ್ವವಾಗಿಲ್ಲದಿರಬಹುದು. ಅದಕ್ಕೆ ಕಾಯದೆ 'ಮಧ್ಯದಲ್ಲೇ ಈ ಪವಾಡ ನಡೆಯಿತು.'

ಆದರೆ ಮಾನವೀಯತೆ ಅದರಿಂದ ಬದುಕಲಿಲ್ಲ. ಅದು ಸತ್ತು ಶೆಂದರೂ ತಪ್ಪಲಿಲ್ಲ. ಯಾರು ಕ್ರಾಂತಿಗಾಗಿ ಕೈಕೂಡಿಸಿ ಹೋರಾಡಿದರೋ, ಕ್ರಾಂತಿಯನಂತರ ಅವರು ವಿರೋಧಿಗಳಾದರು. ಯಾವ ಲೇಖಕರು ಕ್ರಾಂತಿಯ ಕೆಡಿ ಹೊತ್ತಿಸಿದರೋ, ಯಾವ ಬುದ್ಧಿಜೀವಿಗಳು ಕ್ರಾಂತಿಮಂತ್ರ ದ್ರಷ್ಟಾರರೋ ಅವರೇ ಯಜ್ಞಪಶುಗಳಾದರು. ಕ್ಷಾಮ, ಅಂತರ್ಯುದ್ಧ, ಪರಸ್ಪರ ಅಪನಂಬಿಕೆ, ವಿಚಾರನಾಶಗಳು ತಾಂಡವ ವಾಡಲಾರಂಭಿಸಿದುವು. ಯಾರಿಗಾಗಿ ಕ್ರಾಂತಿ ನಡೆಯಿತೋ, ಅವರಿಗೆ ಯಾವ ಲಾಭವೂ ಆಗಲಿಲ್ಲ, ಸುಖದೊರೆಯಲಿಲ್ಲ ಕಾಡುದೆವ್ವ ಹೋಗಿ ಊರುದೆವ್ವ ಹಿಡಿಯಿತು. ಮಾನವನ ಇತಿಹಾಸದಲ್ಲಿ ಇನ್ನೊಂದು ಕ್ರಾಂತಿ ವಿಫಲವಾಯ್ತು. ಬುದ್ಧಿ ಜೀವಿಗಳೂ, ಯುದ್ಧಜೀವಿಗಳೂ ಕ್ರಾಂತಿಯ ಕಿಸುರುಗಣ್ಣಿಗೆ ಸಿಕ್ಕು ಹತರಾದರು. ಕೊಮಿರೋವ್ಸ್‌ಕಿ ಯಂಥ ಕರಟಕರು ಇದ್ದ ಹಾಗೆಯೇ ಇದ್ದರು.

'ಜೀವನ'ವನ್ನು ಪರಿಷ್ಕರಿಸಿ, ಅದಕ್ಕೆ ಹೊಸದೊಂದು ರೂಪವನ್ನು ಕೊಡುವ ಯತ್ನ ನಡೆಯಿತು. ಆದರೆ ಝಿವಾಗೋ ಹೇಳುವಂತೆ 'ಜೀವನ ಪರಿಷ್ಕಾರ ನಡೆಸುವವರಿಗೆ ಅದೆಂದರೇನು ಎಂಬುದು ತಿಳಿದೇ ಇಲ್ಲ. 'ಜೀವನ ಒಂದು ಜಡವಸ್ತುವಲ್ಲ' ಬಲಾತ್ಕಾರದಿಂದ ಸುಗ್ರೀವಾಜ್ಞೆಗಳಿಂದ ಜೀವನ ಪಥವನ್ನು ಬದಲಿಸಬಹುದೇ? "ಕುದುರೆಯನ್ನು ನೀರಿಗೆ ಎಳೆದೊಯ್ಯಬಹುದು.—ನೀರನ್ನು ಕುಡಿಯುವಂತೆ ಮಾಡುವುದು ಸಾಧ್ಯವಿಲ್ಲ."

ಝಿವಾಗೋ, ಸ್ವೆಟ್ಲಿಕೋವ್ ಇಬ್ಬರಿಗೂ ಬಾಳು ದುರಂತವಾದರೆ, ಕ್ರಾಂತಿಯ ಲಾಭವಾದರೂ ಯಾರಿಗೆ? ಯಾರು ಕ್ರಾಂತಿಗೆ ತಮ್ಮ ಮನೋಬುದ್ಧಿಗಳನ್ನು ಕೊಟ್ಟು ಕೆಡಲಿಲ್ಲ? 'ಫಾರೆಸ್ಟ್ ಬ್ರದರ್ಸ್‌ಹುಡ್' ಸೇನಾನಿ ಲೈಬೀರಿಯಸ್ ಈ ಗುಂಪಿಗೆ ಸೇರಿದವನು. ಅವನ ರೀತಿಯನ್ನು ಅರಿಯಬೇಕಾದರೆ ಕಾದಂಬರಿಯನ್ನೇ ಓದಬೇಕು. ಜೋಸ್ಫ್-ನೆಸ್ಕಿಯ 'ದಿ ಪೊಸೆಸ್ಡ್' ಕಾದಂಬರಿಯನ್ನು ಓದಿದರೆ, ರಷ್ಯದ ಕ್ರಾಂತಿಯ ನೇತಾರರು ಮತ್ತು ಲೈಬೀರಿಯಸ್ ನಂತಹ ಅನುಯಾಯಿಗಳ ರೀತಿ-ನೀತಿಗಳನ್ನು ಅರ್ಥಮಾಡಿಕೊಳ್ಳಬಹುದು. ಇವರ ಮೆದುಳು ಮತ್ತು ಹೃದಯ ಕಾಡುಗಲ್ಲಿಂದ ಮಾಡಲ್ಪಟ್ಟಿರಬೇಕು. ಹಾಗೆಂದು ಹೇಳುವುದು ಸ್ವಲ್ಪ ಕಾಠಿಣ್ಯದ ಮಾತು. ಪಾರ್ಟಿಯಲ್ಲಿರುವ ದೃಢ ನಂಬಿಕೆ, ಅದರ ಉದ್ದೇಶಗಳಲ್ಲಿರುವ ದೃಢನಂಬಿಕೆ, ಬೇರಾವುದನ್ನೂ ತಿಳಿದುಕೊಳ್ಳದ ಛಲ, ತಮ್ಮ ಶಕ್ತಿಯಲ್ಲಿರುವ ಅಚಲವಿಶ್ವಾಸ, ಒಂದು ರೀತಿಯ ಕಟುವಿಡಂಬನೆ— ಇವುಗಳ ಜೊತೆಗೆ ಅವರಲ್ಲಿಲ್ಲದಿರುವ ವಿಚಾರ ಶಕ್ತಿ, ಮಾನವೀಯತೆ ಎರಡನ್ನು ಸೇರಿಸಿದರೆ ಅವರು 'Super man' ಗಳಾಗುತ್ತಾರೆ. ಸಮಯ ಸಾಧಕರಾದ ಅವರು ಯಾವುದನ್ನು ಮಾಡಲೂ ಹಿಂಜರಿಯರು. 'ವೋಡ್ಕ' ತಯಾರಿಕೆ ಗಾರರನ್ನು ದ್ರೋಹಿಗಳೆಂದು ದಂಡಿಸಿದ ಲೈಬೀರಿಯಸ್, ತನಗೆ ಬೇಕಾದಾಗ 'ವೋಡ್ಕ' ತಯಾರಿಕೆ ಸರಿಯೆಂದು ಪ್ರೋತ್ಸಾಹಿಸುತ್ತಾನೆ. ವಿವೇಚನೆಯಿಲ್ಲದೆ ತಾನು ಜನರನ್ನು ಕೊಂದೆನೆಂಬ ಚಿಂತೆ ಅವನಿಗೆ ಇಲ್ಲವೇ ಇಲ್ಲ.

ತನ್ನೊಡನೆ ಝಿವಾಗೋ ವಿಧಿಯಿಲ್ಲದೆ ಕೆಲಸ ಮಾಡುತ್ತಿದ್ದಾನೆ. ಅವನಿಗೆ ತನ್ನ ಸಂಸಾರಜೀವನ ಕೆಟ್ಟುಹೋಗಿ ಘೋರದುಃಖ ಬಂದಿದೆ ಎಂದು ತಿಳಿದೂ ತಿಳಿದೂ "ನಾವು ಸೋಲುತ್ತಿರುವುದನ್ನು ಕಂಡು ನಿನಗೆ ಇಂತಹ ಅಧೀರತೆ ಬಂದಿದೆ. ಅಂತಿಮ ಜಯ ನಮಗೆ ಸಿದ್ಧ. ಆದುದರಿಂದ ನೀನು ಸ್ವಲ್ಪ ಖುಷಿ ತಂದುಕೋ' ಎಂದವನು ಝಿವಾಗೋಗೆ ಹೇಳುತ್ತಾನೆ. ಇಂಥ ದೇಶೋದ್ಧಾರಕರ ಬಗೆಗೆ ಝಿವಾಗೋ ಹೇಳುವುದಿಷ್ಟೇ "'A' ಎಂದವನು 'B' ಎನ್ನಲೇಬೇಕು ಎಂಬ ನಿಮ್ಮ ನಾದವನ್ನು ನಾನು ಒಪ್ಪುವುದಿಲ್ಲ. ನಾನು 'A' ಎನ್ನುತ್ತೇನೆ. ಆದರೆ ನೀವೇನು ಮಾಡಿದರೂ 'B' ಎನ್ನುವುದಿಲ್ಲ. ನೀವು ರಷ್ಯದ ವಿಮೋಚಕರಿರಬಹುದು. ರಷ್ಯದ ಕಣ್ಮಣಿಗಳಾಗಿರಬಹುದು.... ಆದರೆ ನಿಮ್ಮನ್ನು ಕಂಡರೆ ನನಗಾವ ಆದರವೂ ಇಲ್ಲ. ನೀವೆಲ್ಲಾ ನರಕಕ್ಕೆ ಹೋಗಿರಿ."

ಇಂತಹವಕ್ಕೆಲ್ಲಾ ಲೈಬೀರಿಯಸ್ ಜಗ್ಗುವ ಕುಳವಲ್ಲ. ಅವನಿಗೆ ಯಾವ ವ್ಯಕ್ತಿತ್ವವೂ ಇಲ್ಲ. 'ವ್ಯಕ್ತಿವಾದ' 'ಭಾವನಾಪರತೆ' 'ಪ್ರೇಮ' ಇದಾವುದಕ್ಕೂ ಕ್ರಾಂತಿಯಲ್ಲಿ ಎಡೆಯಿಲ್ಲ.

ಹೌದು! ಭಾಷಣಗಳು, ನಿರ್ಣಯಗಳು, ಘೋಷಣೆಗಳಿಂದ ಬಾಳನ್ನು ಬೆಳಗುವುದಕ್ಕಾಗುವುದಿಲ್ಲ. 'ಪ್ರೇಮ ಅಳಿದುದರಿಂದ' ರಷ್ಯದ ಕ್ರಾಂತಿ ಮಾನವೀಯತೆಯ ದೃಷ್ಟಿಯಿಂದ ವಿಫಲವಾಯಿತು. "ಪ್ರೇಮವನ್ನು ಗಳಿಸಲು ಪರ್ವತಗಳನ್ನೇ ಎತ್ತಬೇಕು" ನಿಜ. ಹಾಗೆಂದು ತಿಳಿಹೇಳಿದರೆ ಕೇಳುವವರೊಬ್ಬರು ಬೇಕಲ್ಲ!

(ಮುಂದಿನ ಪುಟಕ್ಕೆ ಮುಂದುವರಿದುದು)

ಪ್ರದರ್ಶನ

ಶ್ರೀ. ಸುಂದರ ನಾಡಕರ್ಣಿ, ವಿದ್ಯಾನಗರ (ಗುಜರಾತ)

ನೂರೊಂದು ಮನಸಿರಲಿ ನನಗೇನು ಮುನಿಸಿಲ್ಲ
ಅದು ಕಲೆಯೋ ಇದು ಕಲೆಯೋ ಕಾಣುವೆಯಾ ಬಂದು ?
ಸಾಕ್ಷೀಭೂತ, ಪ್ರತ್ಯಕ್ಷತೆ—
ಓ ಚಿತ್ರಕಾರ,
ತಡೆ!
ಬಣ್ಣಕ್ಕೆ ಕುಂಚವನದ್ದುವ ಮೊದಲು ಬಾ ಹೊರಗೆ
ನೋಡು ಈ ಚಿತ್ರವನು; ಅದ್ಭುತ ವಿಚಿತ್ರವನು,
ಯಾವ ಬಣ್ಣದೊಳಗದ್ದಿ ಬರೆದುದೋ ಕಾಣು—
ಆಗಸದ ಆ ನೀಲ.
ಅಲ್ಲಿ ಗಿಡದ ಹಚ್ಚಹಸಿರು ಹಣ್ಣೆಲೆ ಬಣ್ಣ,
ನಸುಗೆಂಪು, ತಿಳಿಹಳದಿ ಇನ್ನು ಎಷ್ಟೋ ಬಣ್ಣ.
ಹೂವಿಗಿದೆ ನೋಡು—
ಸುತ್ತಾಡು ಎಲ್ಲಿದೆ ಹುಡುಕು.
ಬಂಡೆಗಳ ತಲೆ ಒತ್ತಿ, ಗುದ್ದಗಳ ಉದರದೊಳು
ಘಮುಕಿ ಹರಿವುದು ನೀರು.
ಕೈಗೆತ್ತಿ ತುಸು ಕಣ್ಣ ಹಾಯಿಸು.
ಅರಸು ಎಲ್ಲಿದೆ ಬಣ್ಣ ?
ನಿನ್ನ ಯಾವ ಟ್ಯೂಬಿನೊಳಿವೆ ಈ ಇದರ ರಂಗು ?
ಯಾವ ಕಂಪನಿಯ ಕೆಟಲಾಗಿನಲ್ಲಿಪೆ ಇದು, ಇನರ ಬೆಲೆ ?
ಹೊರಗಡಿಯಿಡು,
ಹಾಗೆ ಮುಂದಾಗು, ದೃಷ್ಟಿಯಿಡು, ಮರದ ಕೊಂಬೆಗಳಲ್ಲಿ ಆಚೀಚೆ
ಮರೆಯಲ್ಲಿ
ಮನ ಜೆದರಿ ನಲಿಯುತಿವೆ, ಹಕ್ಕಿಗಳ ಆವಲೋಕಿಸು.
ಬಯಸಿದರೆ ಚಂಚುವೋ ಪುಕ್ಕವೋ ಹರಿದುನೋಡು.
ಒಂದೊಂದಕ್ಕೆ ಇದೆ ಒಂದೊಂದು ಮಾದರಿ,
ನಿನ್ನ ಎಲ್ಲದಕೂ ಹುಸಿಯಾಗಿಸಿತು ಇದು.
ಎಲ್ಲ ಬಣ್ಣ ಮಶಿನುಂಗಿತು
ಕಂಡೆಯಾ ಕಲೆಯರಿತು ಈ ಚಿತ್ರ ? ಯಾರಿದನು ಬಿಡಿಸಿದಾತ?
ಈ ಚಿತ್ರದ ಜೀವನದಿ ಅದೆಷ್ಟು ಜೀವಂತತೆ !

ಇವನ ಕುಂಚದ ಒಂದೊಂದು ಕೂದಲಲಿ ಬಣ್ಣಗಳ ಮೇಳವಿದೆ
ನಿನ್ನ ಪಟದೊಳಗಿದೆಯೆ ಆ ತಾಳುಮೇಳು ?
ಅದೆಷ್ಟು ಅಂತರ !
ಅಹಂ, ನಾ ಅಹಂ, ಕಂಡೆಯಾ,
ಪ್ರತ್ಯಕ್ಷದಲಿ ನೀ ಕಣ್ಣ ದೂಷಿಸಬೇಡ.

— ೧ —

ಇವ ನಿನ್ನ ಬಳಗದವ
ಮೂರ್ತಿ ಕೆತ್ತಿಯೇ ಜೀವ ಸವಿಸಿದವ—
ಬಾ ಅದ ಬಿಟ್ಟು ಒಂದು ನಿಮಿಷ
ಎಲೆ ಮೂರ್ತಿ ! ನೋಡು ಈ ಮೂರ್ತಿ
ಏನು ಚಮತ್ಕಾರ ಚಿರಾಚರತೆ ಇದರೊಳಿದೆಯೋ ಕಾಣು,
ಗಂಡಂತೆ ಒಂದು, ಹೆಣ್ಣಂತೆ ಇನ್ನೊಂದು,
ನಿಸರ್ಗವನೇ ಸೆರೆ ಹಿಡಿದ ಎರಡು ಕಣ್ಣುಗಳಂತೆ—
ಧ್ವನಿಯಂತೆ, ಮಾತಂತೆ,
ರೂಪಚುಂಬಕಕೆ ಜಗನೇ ಅಂಟಿದೆಯಂತೆ;
ನಿನ್ನ ಮೂರ್ತಿಯೊಳಗಾವ ಈ ಶಕ್ತಿ ಇದೆ ?
ಮೂರ್ತಿಮತ್ತಾದುದು ನಿನ್ನದು :
ಒಂದೇ ಭಾವಕೆ ಒಂದೇ ಮೂರ್ತಿ.
ಒಂದೇ ಮೂರ್ತಿಯೊಳು ಹಲವು ಭಾವಗಳು ಸೇರಿವೆಯಂತೆ,
ಈ ಶಿಲ್ಪಿ ಯಾರು ?
ಬಹುಕಾಲ ಕಲ್ಪಿಸಿ ಕೆತ್ತಿದ ಒಂದು ಪ್ರತಿಮೆ ಇದಲ್ಲ
ಒಂದೇ ಪ್ರತಿಮೆಯಲಿ ಬಹುಕಲ್ಪನೆಯ ಹಿಡಿತವಿದೆ ಇಲ್ಲಿ
ಅದೆಷ್ಟು ಅದ್ಭುತ ಶಕ್ತಿಗಳ ಮೇಳ!
ಮುಷ್ಟಿ ಉಗ್ರಾಣದಲಿ ಮೂರುಲೋಕದ ಸಂಚಯ
ಮಿದುಳು ಸನೆದು ನೀರಾದರೂ ದುಸ್ಸಾಧ್ಯ ನಿನಗೆ
ಅರಿತೆಯಾ, ಅದು ಕಲೆಯೋ ಇದು ಕಲೆಯೋ ಕಂಡೆಯಾ?
ಆಂ! ಅಂತಾದರೆ ಕರೆ ನಿನ್ನ ಎಲ್ಲ ಕಾರ್ಮಿಕರ ಕರೆದು ಕೇಳು!
ನಗರ ಮಹಲುಗಳ ಶಿಲ್ಪಿಗಳೆಲ್ಲ ಬರಲಿ

ವಿಶ್ವ ಕರ್ಮನಿಗೊಂದು ಅವಸರದ ಓಲೆಕೊಡು
ಇನ್ನುಳಿದ ನಿನ್ನ ಸಹೋದ್ಯೋಗಿಗಳ ಕರೆ!
ಅದೋ,
ಭರತನಾಟ್ಯದ ಅಲರಿಸು ಹಿಡಿದು ಕೊನೆಯು ತಿಲ್ಲಾಣದಲಿರುವ,
ಮಣಿಪುರಿಯ ಮಾಟವನರಗಿಸಿದನ,
ಕಥಕ್‌ದ ತತ್ಕಾರ ಕಥಕ್ಕಳಿಯ ಚಮತ್ಕಾರ,
ಇದರೊಳಗೆ ತನ್ನ ಜೀವನದ ಸಾಕ್ಷಾತ್ಕಾರನಿದೆ
ಎಂದು ತಿಳಿದಿರುವ—ಆ ನರ್ತಕನ ಕರೆ,
ಸಂಗೀತದ ರಾಗತಾನಲಯಗಳು
ತನ್ನ ತನವನು ಮೆರುಗುಗೊಳಿಸಿದ ಆ ಗಾಯಕನ ಕರೆ!
ಹಲಬಗೆಯ ವಾದ್ಯದಲಿ ನಾದಗಳ ತರಿಸಿ—
ತಂತುವಾದ್ಯದ ತಂತಿಯಾಗಿರುವ ಆ ಉಸ್ತಾದನ ಕರೆ!
ರಂಗಭೂಮಿಯನೇ ತನ್ನ ಜನ್ಮಭೂಮಿಯಾಗಿಸಿದ
ತಾರಾಲೋಕದಲ್ಲಿ ತಾರೆಯರಿಗೆ ತೆಕ್ಕೆ ಬೀಳುವ ಆ ನಾಯಕನ ಕರೆ!
'ಮಿಕ್ಕುಳಿದ ಕಲೋಪಾಸಕರೆ ಬನ್ನಿ
ಕಲೆಯ ಅಂತರ್ಗತಿಯ ಪ್ರದರ್ಶನಕೆ;
ಪ್ರತಿಷ್ಠಿತರು ವಿಮರ್ಶಕರು ಬರಲಿ ಜೊತೆಗೆ
ನೂರು ಮತದವರೆಲ್ಲ ನೂರು ನುಡಿಯವರೆಲ್ಲ ನೋಡಿ!
ಯಾವ ಕಲೆ ಹೆಚ್ಚು, ಯಾವ ಕಲೆ ಹುಚ್ಚು?
ಸರ್ವಾಂತರ್ಯಾಮಿ ನಿನ್ನನೇ ಕಲೆಯ ಮೂರ್ತಿಯಾಗಿಸಿದ,
ಅದೇ ಹುಟ್ಟಿಸಿತು ನಿನ್ನಲ್ಲಿ ಕಲೆಯ ಬೀಜ.
ನೆಲೆಯಿಲ್ಲದ ಜೀವಂತ ಕಲೆ ನೆಲೆಯರಿತು ಸಾಧಿಸಿತು ಇನ್ನೊಂದು ಕಲೆ.
ಕಲೆ-ಕಲೆಯನು ಹುಟ್ಟಿಸಿದ ಇದು—'ಕಲಾ ಸಂತಾನ'!
ಎಂದು ಮರಳಿದರು ಎಲ್ಲವರು.
ಕೂಗಳತೆಯ ದೂರದಲಿ ಕಿರುಚು ಕೇಳಿತು:
"ಅದು ಕಲೆಯೋ – ಇದು ಕಲೆಯೋ—
ನೂರೊಂದು ಮನಸಿರಲಿ ನನಗೇನು ಮುನಿಸಿಲ್ಲ"

(೫೩ನೆಯ ಪುಟದಿಂದ ಮುಂದುವರಿದುದು)

'ಪ್ರೀತಿಹೀನವಾದ' 'ವ್ಯಕ್ತಿಗಳಿಲ್ಲದ' ಕ್ರಾಂತಿ ಯಾರಿಗೆ? ಶೋಷಣೆಯ ಒಂದು ರೂಪಮಾಯವಾಗಿ, ಮತ್ತೊಂದು ರೂಪಬರಲು ಅಷ್ಟು ಬಲಿದಾನವೇಕೆ? 'ನೀನು ನೀನಾಗಿರುವ ಇಂದು' ಹೋಗಿ 'ನೀನು ನೀನಾಗಿರದ ನಾಳೆ' ಬಂದಾಗ? ಕಾಡುದೆವ್ವ ಬಂದು ಊರ ದೆವ್ವವನನ್ನು ಓಡಿಸಿದರೆ ಏನು ಲಾಭ? ಲಾಭವಿಲ್ಲದ ಕೆಲಸ ಕತ್ತೆಯ ಮೈತುರಿಸಿದಂತೆ.

ಕ್ರಾಂತಿಯ ವೈಫಲ್ಯ, ತಾವು ಪ್ರೀತಿಸಿದ ಮೌಲ್ಯಗಳ, ವ್ಯಕ್ತಿಗಳ ಅಳಿವುಗಳಿಂದ ಪ್ಯಾಸ್ಟರ್ ನ್ಯಾಕರ ಅಂತರಂಗದಲ್ಲಿ ಒಂದು ದುರ್ಭರ ದುಃಖ ಮನೆಮಾಡಿಕೊಂಡಂತಿದೆ. ಆದರೆ ಅವರ ಮನಸ್ಸು ಕಹಿಯಾಗಿಲ್ಲ. ನಿರಾಶೆಯ ಮಡಿಲಿನಲ್ಲೂ ಅವರ ನಂಬುಗೆ ಅಳಿದಿಲ್ಲ. ಅವರ ಆಶಾ-ಸೌಧ ಪುಡಿಪುಡಿಯಾಗಿ ಆ ಹಾಳಿನ ನಡುವೆ ನಿಂತಿದ್ದರೂ, ಅವರ ಅಂತರಂಗದಲ್ಲಿ ಪ್ರೀತಿ ಅಳಿದಿಲ್ಲ. ಆ ಪ್ರೀತಿ ಅವರ ಅಳಲನ್ನು ಮತ್ತಷ್ಟು ಹೆಚ್ಚಿಸಿದೆ.

ಮಾನವೀಯತೆಯ ಪ್ರೇಮ, ಪ್ಯಾಸ್ಟರ್ ನ್ಯಾಕರಿಗೆ ಕ್ರೈಶ್ಚಿಯನ್ ತತ್ತ್ವಗಳಲ್ಲಿ ಒಡಮೂಡಿದಂತೆ ತೋರುತ್ತಿರಬೇಕು. ಕ್ರೈಸ್ತಮತ ವ್ಯಕ್ತಿತ್ವ ಮತ್ತು ಸ್ವಾಂತತ್ರ್ಯಗಳ ಊರುಗೋಲೆಂದು ಅವರ ಅಭಿಪ್ರಾಯ ವಿದ್ದಿರಬೇಕು. ಮಾನವರಲ್ಲಿ ತಾನೇತಾನಾಗಿರುವ ಕ್ಷೌರ್ಯ, ಪಾಪ-ಪ್ರಿಯತೆಗಳು, ಮಾನವೀಯತೆ ಪ್ರೇಮಗಳಮೇಲೆ ಡಾಳಿಯಿಡುತ್ತಿರು-ವುದು ಸುಸ್ಪಷ್ಟ. ಪ್ರೇಮದ ಪ್ರತಿಬಿಂಬನೇ ಜೀಸಸ್ 'ಶಕ್ತಿಯಿಂದ ಕಲಹದ ನಿರ್ಣಯವಾಗುವುದಿಲ್ಲ' ಎಂದವನು ಪೀಟರನಿಗೆ ಹೇಳಿದನೆಂದು, ಝಿವಾಗೋ ಬರೆದ ಪದ್ಯದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಜೆರುಸಲೆಂ ಪಟ್ಟಣಕ್ಕೆ ಕ್ರಿಸ್ತನು ಬಂದಾಗ ಅವನಿಗೆ ಸ್ವಾಗತದೊರೆಯಿತು. ಒಂದು ವಾರದಲ್ಲೇ, ಅದೇ ಪಟ್ಟಣದ ಜನಸಮೂಹ ಅವನನ್ನು ಕೊಲೆಮಾಡಲು ಮುಂದಾಯಿತು. ಆ ಜನಸಮೂಹವನ್ನು ಕಂಡಾಗ ಅವನಿಗೆ ಒಂದು ಬೆಟ್ಟದ ನೆನಪಾಯಿತು: ಆ ಬೆಟ್ಟದ ಮೇಲೆ ಸೈತಾನ್ ಪ್ರಪಂಚದ ಪ್ರಲೋಭನೆಗಳನ್ನು ಅವನಿಗೊಡ್ಡಿದ್ದ!

ತನ್ನ ಮರಣದ ನಂತರ ತಾನು ತೇಜೋಮಯನಾಗಿ ಉದಿಸುವೆನೆಂದು ಕ್ರಿಸ್ತ ಶಿಷ್ಯರಿಗೆ ಹೇಳಿದ. ತನ್ನ ಪ್ರೀತಿಯಿಂದ ಮಾನವರ ಪಾಪಗಳ ಹೊರೆಹೊತ್ತು ಅವನು ಶಿಲುಬೆಯೇರಿದ. ಅವನ ಮೇಲೆ ಪ್ಯಾಸ್ಟರ್ ನ್ಯಾಕರಿಗೆ ಒಲವಿರುವುದು ಸಹಜ.

ಡೋಸ್ಟೊವೆಸ್ಕಿಯ ಕೃತಿಗಳಲ್ಲಿರುವ ತೀವ್ರತೆ ಪ್ಯಾಸ್ಟರ್ ನ್ಯಾಕರ ಕೃತಿಯಲ್ಲಿಲ್ಲ. "ಕ್ರಾಂತಿಯ ನಂತರ ನನ್ನ ಜೀವನವನ್ನು ಕುರಿತು ಬರೆಯಬೇಕಾದರೆ, ಡೋಸ್ಟವೆಸ್ಕಿ, ಗೋಗೋಲರು ಪೀಟರ್ಸ್‌ಬರ್ಗ್‌ನ್ನು ಕುರಿತು ಬರೆದಹಾಗೆ ಬರೆಯಬೇಕು. ಅದಕ್ಕಿಂತ ಕಡಿಮೆ ತೀವ್ರತೆಯಿಂದ ಬರೆಯುವುದು ವ್ಯರ್ಥ" ಎಂದವರು ಬೇರೆ ಕಡೆ ತಿಳಿಸಿದ್ದಾರೆ.

ಅವರ ಶೈಲಿಯಲ್ಲಿ ಪ್ರಾಸಾದಿಕತೆ ಇದೆ. ಅವರ ಕೃತಿಯ ಒಂದೊಂದು ವಿಭಾಗವೂ ಒಂದು ಚಿಕ್ಕ ಕಾವ್ಯ ಇಲ್ಲವೇ ನಾಟಕ. ಅವರ ದೃಷ್ಟಿಕೋಭಾವದಂತೆ, ಅವರ ಶೈಲಿಯಲ್ಲೂ ಸಮತೂಕ ಒಡಮೂಡಿದೆ. ಪ್ರಾಮಾಣಿಕತೆ ತುಂಬಿದೆ.

ವಾಕ್ ಸ್ವಾತಂತ್ರ್ಯ, ಅಭಿಪ್ರಾಯಸ್ವಾತಂತ್ರ್ಯ, ಲೇಖನ-ಸ್ವಾತಂತ್ರ್ಯಗಳಿಲ್ಲದ ರಷ್ಯದ ಈ ಲೇಖಕನಿಂದ, ಅವೆಲ್ಲ ಸ್ವಾತಂತ್ರ್ಯ ಗಳಿರುವ ನಮ್ಮ ದೇಶದ ಲೇಖಕರು ಕಲಿಯುವ ಪಾಠಗಳು ಗುಡ್ಡದೆತ್ತರ ಬಿದ್ದಿವೆ.

ಗೌರಿಯ ಮದುವೆ

(ಸಾಮಾಜಿಕ ಕಥೆ)

ಶ್ರೀ. "ಗದಾಧರ ಗುಂಡುಮಿ"

ಸಾಮಾಜಿಕ ಪ್ರಜ್ಞೆಯನ್ನು ಕಳೆದುಕೊಂಡು ಬಿಟ್ಟಿರುವ ಇಂದಿನ ನಾಗರಿಕಸಮಾಜದಲ್ಲಿ, ಹೆಣ್ಣಿನ ಮದುವೆಯೊಂದು ನುಂಗಲಾರದ ತುತ್ತಾಗಿ ಕುಳಿತಿದೆ. ವೈಯಕ್ತಿಕ ಧನಲಾಲಸೆ, ಹೆಣ್ಣಿನ ಮದುವೆಯ ಸಮಸ್ಯೆಯನ್ನು ಹೆಚ್ಚುಹೆಚ್ಚಾಗಿ ಬಿಗಿಗೊಳಿಸುತ್ತಲಿದೆ.

Darkness travels towards Light;
But blindness towards Death.

(ಕತ್ತಲದೊ ನಡೆಯುತಿದೆ ಬೆಳಕಿನೆಡೆಗೆ—ಆದೊ ಕುರುಡುನಂಬಿಕೆ ಸಾವಿನೆಡೆಗೆ.)

—*Tagore*

"ಗೌರಿ, ನಿನಗೆ ಎಷ್ಟು ಸಾರಿ ಹೇಳುವುದು.... ದೇವರ ದೀಪಕ್ಕೆ ಆಷ್ಟ್ಯಾಕೆ ಎಣ್ಣೆ ಹಾಕ್ತೀಯೆ ?"

"ಇರ್ಲಿಬಿಡೇ ಅಮ್ಮಾ.... ದೀಪ ಬೆಳಗಲಿ !"

"ಹೌದು ಕಣೇ.... ದಿನಕ್ಕೆ ಅಷ್ಟು ಎಣ್ಣೆ ಹಾಕಿದರೆ, ನಾವೇನು "ದಿವಾಳಿ" ಹೋಗೋದೇನು ?"

"ಇವತ್ತೊಂದು ದಿನ ಬೆಳಗಲಿ ಬಿಡೇ ಅಮ್ಮಾ...."

"ಇವತ್ತೊಂದು ದಿನ ಬೆಳಗಲಿ ಬಿಡೆ ಅಮ್ಮಾ...." ಮರಿಗುಬ್ಬಚ್ಚಿ ತನ್ನ ತಾಯಿಯೊಡನೆ ಆಹಾರ ಕೇಳುವಂತಿತ್ತು ಆ ಧ್ವನಿ. ಶಾರದಮ್ಮ ಗೌರಿಯನ್ನೊಮ್ಮೆ ನೋಡಿದರು. ಮತ್ತೆ ಸೆರಗಿನಿಂದ ಕಣ್ಣೊರಸಿಕೊಂಡು ಒಳಹೋದರು.

"ಯಾಕೆ ಅಳ್ತೀಯಾ, ಅಮ್ಮಾ?" ಗೌರಿ ತಾಯಿಯನ್ನು ಹಿಂಬಾಲಿಸಿದಳು.

"ಹುಚ್ಚು ಹುಡುಗಿ.... ಯಾರೇ ಅಳೋದು.... ಕಣ್ಣಿಗೆ ಹೊಗೆ ಹೋಯಿತು. ನೀರು ಬಂತು, ಕಣ್ಣುಜ್ಜಿಕೊಂಡೆ...."

"ಹೌದು ಕಣೇ ಅಮ್ಮ.... ನನ್ನನ್ನು ನೋಡಿದಾಗಲೆಲ್ಲ ನಿನ್ನ ಕಣ್ಣಿಗೆ ಹೊಗೆ ಹೋಗುತ್ತದೆ.... ನಾನು ಹೊಗೆ ಹುಟ್ಟಿಸುವ "ಬೆಂಕಿ" ಅಲ್ವೇನಮ್ಮಾ..."

ಶಾರದಮ್ಮನವರ ಕರುಳನ್ನೇ ಹಿಜುಕಿತು— ಆ ಧ್ವನಿಯ ಕಾಣದ ಕೈ....

"ಗೌರಿ, ನನ್ನಕಂಡಾ.... ನಿನ್ನನ್ನ "ಬೆಂಕಿ" ಅಂತ ಕರೆದು, ನಾನಾವ ನರಕಕ್ಕೆ ಹೋಗಬೇಕೇ ?" ತಾಯಿಯ ಕಣ್ಣಿಂದ ನೀರು ಹರಿಯಿತು....

"ಆಮ್ಮಾ.... ತಪ್ಪಾಯಿತು ಕಣೆ...." ಗೌರಿ ತಾಯಿಯನ್ನು ತಬ್ಬಿಕೊಂಡಳು.... ತಾಯಿಯ ಕಣ್ಣಿನಿಂದ ಮಗಳ ತಲೆಯಮೇಲೆ ಒಂದು ಹನಿಯುದುರಿತು—ಕಂಬನಿಯ ಅಕ್ಷತೆ.

ಗೌರಿ ಮತ್ತೆ ಅಲ್ಲಿ ನಿಲ್ಲಲಿಲ್ಲ.... ಅವಸರವಸರವಾಗಿ ತನ್ನ ಕೋಣೆಗೆ ನಡೆದುಬಿಟ್ಟಳು.

"ಇವತ್ತು ಒಂದುದಿನ ಬೆಳಗಲಿ ಬಿಡೇ ಅಮ್ಮಾ...." ಗೌರಿ ಹೋದ ಮೇಲೂ, ಕತ್ತಲ ಗುಹೆಯಲ್ಲಿ ಧ್ವನಿ ಪ್ರತಿಧ್ವನಿಸುವಂತೆ, ಶಾರದಮ್ಮನವರ ಮನದಲ್ಲಿ ಈ ಮಾತುಗಳೇ ತಿರುಗುತ್ತಲಿದ್ದುವು. ಪಾಪ ! ಇಪ್ಪತ್ತುನಾಲ್ಕರ ಹರಯದ ಹುಡುಗಿ ಗೌರಿ.... ಇನ್ನೂ ಮದುವೆ ಆಗಿಲ್ಲ. "ಇನ್ನಿನ್ನು ಮದುವೇನೆ ನಿಂತುಹೋಗುತ್ತೆ" ಎಂಬ ಮಾತು ಗೌರಿಯ ಪಾಲಿಗೆ ಕಹಿ ಸತ್ಯವಾಗಿತ್ತು. ಗೌರಿಯೊಡನೆ "ಮದುವೆಯಾಟ" ಆಡಿದವರೆಲ್ಲರೂ, ಮದುವೆಯಾಗಿ ಹೋದರು. ಆ "ಮದುವೆಯಾಟ" ಮಕ್ಕಳ ಮೋಜಾಗಿತ್ತು....

"ಈ ಮದುವೆ" ಕಾಲಪುರುಷನ ಮೋಜೆಂದು ಯಾರಿಗೆ ಗೊತ್ತು ?

ಗೌರಿಗೆ ಮದುವೆಯಾಗಿರಲಿಲ್ಲ. ಒಂದೇ ಕಾರಣ—ಅವಳದು "ಮೂಲಾನಕ್ಷತ್ರ." ಅದಕ್ಕೂ ಹೆಚ್ಚಾಗಿ ಅವಳ ತಂದೆ ವರದಕ್ಷಿಣೆ "ಕೊಡುವುದಿಲ್ಲ" ಎಂಬ ಭೀಷ್ಮಪ್ರತಿಜ್ಞೆ ಮಾಡಿಬಿಟ್ಟಿದ್ದರು. ಆ ಹಾಳು ನಕ್ಷತ್ರವಲ್ಲೂ ಇವಳದು "ಕರಿಮೂಲವಂತೆ"! "ಬಿಳಿಮೂಲ" ನಾದರೆ ಬೇಕಾಬಷ್ಟು ಐಶ್ವರ್ಯ ಬರುತ್ತದಂತೆ ! ಬಹುಶಃ ನಕ್ಷತ್ರಕ್ಕೂ ಮೈಬಣ್ಣಕ್ಕೂ ಸಂಬಂಧವಿಲ್ಲವಂತೆ ಕಾಣುತ್ತದೆ. ಗೌರಿ "ಕರಿಮೂಲ" ದಲ್ಲಿ ಜನಿಸಿದ್ದರೂ ಬಿಳಿಯಾಗಿಯೇ ಇದ್ದಳು.

ಅವಳ ಜನ್ಮನಕ್ಷತ್ರವನ್ನು ಸುಲಭವಾಗಿ ಬದಲಿಸಬಹುದಿತ್ತು ! ಅವಳ ತಂದೆಯೂ ಅಂತಹ ಮಿಡೀಮರೆ ! ಆದರೆ ಆವರ ಮಗಳ

ಜಾತಕವನ್ನು ಸ್ಫುಟಮಾಡಿ ಕೊಟ್ಟ ಜ್ಯೋತಿಷಿ ಅವಳದ್ದು "ಬಿಳಿಮೂಲ" ಎಂದು ಬರೆದುಕೊಟ್ಟವ. ಆ ಜಾತಕ ಒಂದು ಗಂಡಿನ ಕಡೆಯವರಲ್ಲಿ ಹೋದಾಗ, ಅಲ್ಲಿಯ ಜ್ಯೋತಿಷಿ (ಅವರಿಗೆ ಹೇಗಾದರೂ ಮದುವೆ ತಪ್ಪಬೇಕಾಗಿತ್ತು) ಇದು "ಬಿಳಮೂಲ"ವಲ್ಲ "ಕರಿಮೂಲ" ಎಂದು ಸಾಧಿಸಿಬಿಟ್ಟ. ಜೊತೆಗೆ "ಇವಳನ್ನು ಮದುವೆಯಾದ ಗಂಡನಿಗೆ "ಬರಖಾತ್"ಗಿ ಇಲ್ಲನೆಂದು ಹೇಳಿಬಿಟ್ಟ. ಸರಿ, ನಿಷವಾಯುವಿನಂತೆ ಅದು ಹರಡಿತು. "ಬಿದ್ದ ಮಾತನ್ನು" ಹೆಕ್ಕಲು ಆಗಲೇ ಇಲ್ಲ.

ಗೌರಿಯ ಮನದಲ್ಲಿಯೂ ಹೊಂಗನಸಿನ "ಬುದ್ಬುದ" ಏಳುತ್ತಿತ್ತು— ಉಳಿದವರ ಮನದಲ್ಲಿ ಏಳುವಂತೆಯೇ. ಉಳಿದವರ "ಬುದ್ಬುದ" ನಾಲ್ಕು ಚಣವಾದರೂ ಬಣ್ಣ ಬಣ್ಣವಾಗಿ ಮಿರುಗಿದರೆ, ಇವಳದು ಏಳುತ್ತಿದ್ದಂತೆಯೇ ಒಡೆದು ಹೋಗುತ್ತಿತ್ತು.

ಗೌರಿ ಕೋಣೆಯಲ್ಲಿ ಕುಳಿತು ಯೋಚಿಸುತ್ತಿದ್ದಳು. ಆ ಮನದ ಕತ್ತಲಾಳದಲ್ಲಿ ಎಲ್ಲಿಯಾದರೂ ಆಸೆಯ ಕಿಡಿಯೊಂದು ಇದೆಯೇ ಎಂದು ಹುಡುಕುತ್ತಿದ್ದಳು. ಆದರೆ ಆಸೆಯ ಕಿಡಿಗಳೆಲ್ಲಾ ಎಂದೋ ಮಸಿಯಾಗಿದ್ದುವು.

ಮತ್ತೆಮತ್ತೆ ಯೋಚಿಸುವಳು ಗೌರಿ.... ಗತಕಾಲದ ಮೇಲಿನ ಮರವೆಯ ತೆರೆಯನ್ನು ಸರಿಸಿ ನೋಡಿದಳು.... ವಿಧಿಯ ನಗ್ನಸೃಷ್ಟಿಯನ್ನು ಕಂಡಳು.

"ತನ್ನ ತಾಯಿ ಎಂತಹ ಹೆಂಗಸು! ನಿಜಕ್ಕೂ ಅವಳು ದೇವತೆ. "ಮಾತೃದೇವೋಭವ" ಎಂಬುದನ್ನು ಸತ್ಯಮಾಡಿ ತೋರಿಸಿದ್ದಳು. ಅಪರಂಜಿ ಚಿನ್ನದಂತೆ ಅಪಳ ಮನ. ಅದರಲ್ಲಿ ತುಸುವಾದರೂ ಕಳಂಕಚೆರೆತಿರಲಿಲ್ಲ. ಅನೇಕರ ಮನೆಯಲ್ಲಿ ಮದುವೆಯಾಗದ ಹುಡುಗಿಯರನ್ನು ತಂದೆ-ತಾಯಂದಿರು ಬೈಯುವುದನ್ನು ಅವಳು ಕೇಳಿದ್ದಳು—

"ಇದೊಂದು ಕೊರಡು...."

"ಇದೊಂದು ಶನಿ.... ಅಪ್ಪ-ಅಬ್ಬೆಯರ ಹೊಟ್ಟೆ ಉರಿಸೋಕೆ-ಯಾಕಾಗಿ ಹುಟ್ಟತೋ?"

"ಅನಿಷ್ಟ ಮುಂಡೇದು.... ಮುಟ್ಟಿದ್ದೆಲ್ಲಾ ಕರಿ!"

ಮದುವೆಯಾಗದ ಹುಡುಗಿಯರಿಗೆ ಸಿಗುವ ಬಿರುದುಗಳು! ಆದರೆ ಅಮ್ಮ, ಒಂದು ದಿನವಾದರೂ ತನಗೆ ಕಠಿನವಾಗಿ ನುಡಿದಿದ್ದಳೆ? ಬೆಣ್ಣೆಯಂತೆ ಅವಳ ಹೃದಯ.... ತುಸು ಬಿಸಿಯಾದರೆ ಕಣ್ಣೀರಾಗಿ ಕರಗಿಬಿಡುತ್ತಿತ್ತು....

ಎಷ್ಟೊಂದು "ವರ"ರು ತನ್ನನ್ನು ನೋಡಲು ಬಂದಿರಲಿಲ್ಲ? ಬಂದವರೆಲ್ಲಾ ಕಣ್ಣಿಂದಲೇ ತಮ್ಮ ಹಸಿವನ್ನು ಹಿಂಗಿಸಿಕೊಂಡು ಹೋಗುತ್ತಿದ್ದರು.

ಬಂದವರೆಲ್ಲರ ಮುಂದ—ಗೌರಿ ನಿಲ್ಲಬೇಕಿತ್ತು—ಬೆಲೆಬೆಣ್ಣು "ಏಟ"ನ ಮುಂದೆ ನಿಲ್ಲುವಂತೆ....ಏಟ, ಬೆಲೆಬೆಣ್ಣನ್ನು ನೋಡಿ "ಹೂಂ.... ಹಣಹೆಚ್ಚಾಯಿತು" ಎಂದು ಹೋದರೆ, ಈ "ವರ" "ಹಣ ಕಡಿಮೆಯಾಯಿತು" ಎಂದು ಹೋಗುತ್ತಿದ್ದ! ಬಂದವರೆಲ್ಲರ ಮುಂದೆ ಹೋಗಿ ನಿಲ್ಲಬೇಕು—ಅವರಿಗೆ ನಮಸ್ಕರಿಸಬೇಕು....

"ಓದೋಕೆ ಬರುತ್ತೇನೆ? ಎಲ್ಲಿ ನೋಡೋಣ ಇದನ್ನು ಓದು...."

"ನೋಡೋಣ! ದಾಸರ "ಕೀರ್ತನೆ"ಯೊಂದನ್ನು ಹಾಡಿ ಬಿಡು...." ಜನ ತನ್ನನ್ನು ಪ್ರಶ್ನಿಸುವರು. ಅವರಿಗೆಲ್ಲ ತಾನು ಉತ್ತರಿಸಬೇಕು....ಅವರನ್ನು ಸಂತೋಷಪಡಿಸಲು ಹಾಡಬೇಕು. ಸೃಣ್ಯಕ್ಕೆ ಕುಣಿಯಲು ಹೇಳುತ್ತಿರಲಿಲ್ಲ. ಅದೂ ಕೆಲವರು—ಕೇಳುತ್ತಿದ್ದರು—"ನೃತ್ಯ ಬರುತ್ತದೇನು?"

"ನಿನ್ನ ಹೆಸರೇನಮ್ಮಾ?" ಮಾತನಾಡಲು ಬರುತ್ತದೋ ನೋಡಲು ಕೇಳುವರು.

"ನೋಡೋಣ! ವೀಳ್ಯ ತೆಗೆದುಕೊಂಡು ಬಾ!" ನಡಿಗೆ ಸರಿಯಿದೆಯೇ ನೋಡಲು ಪರೀಕ್ಷೆ!

ಎಂತೆಂತಹ ಜನರು ಬರುತ್ತಿದ್ದರು. ಕೆಲವರಂತೂ ಹುಟ್ಟಿದ ಮೇಲೆ—ಹೆಣ್ಣನ್ನೇ ನೋಡದವರಂತೆ ದೃಷ್ಟಿಥಳನಡೆಯಿಸುತ್ತಿದ್ದರು.

"ಹುಡುಗಿ ಪರವಾಗಿಲ್ಲ..... ಹುಡುಗಿಯ ಮೈ ಮೇಲೆ (ತಮ್ಮ ಕೈ ಮೇಲೆ) ಏನು ಹಾಕ್ತೀರ?" ಎಂದು ಕೇಳುವರು.

"ಮೊದಲಿನ ಹುಡುಗಿಯರಿಗೆ ಹಾಕಿದಂತೆ...." ಅಪ್ಪ ಉತ್ತರಿಸುತ್ತಿದ್ದರು.....ನಿಜಕ್ಕೂ ಗೌರಿಗೆ ಅಕ್ಕಂದಿರಿರಲಿಲ್ಲ.....ಆದರೂ ಅಪ್ಪ ಹೇಳುವ ಮಾತದು.

"ಆಗಲಿ..... ಊರಿಗೆ ಹೋದ ಮೇಲೆ ಕಾಗದ ಹಾಕ್ತೀವಿ" ಎಂದು, ಬಂದವರು ಹೊರಟು ಹೋಗುತ್ತಿದ್ದರು.

ಅನೇಕರು ಸರಾಗವಾಗಿ "ವರದಕ್ಷಿಣೆ ಸಾಕಾಗಲಿಲ್ಲ" ಎಂದು ಬರೆದು ಬಿಡುತಿದ್ದರು. ಉಳಿದವರು, "ಹುಡುಗಿ ವಯ್ಯ ಹೆಚ್ಚಾಯಿತು", "ಹುಡುಗಿ ಬೆಳೆವಣಿಗೆ ಹೆಚ್ಚು", "ಹುಡುಗ ಒಪ್ಪೋದಿಲ್ಲ" ಎಂದೆಲ್ಲಾ ಬರೆದು ಬಿಡುತಿದ್ದರು. ಹೆಸಿದ ಹುಲಿಯಂತೆ ತನ್ನನ್ನೇ ದಿಟ್ಟಿಸುತಿದ್ದ ಆ ಹುಡುಗರಿಗೆ, ಮನೆಗೆ ಹೋದಕೂಡಲೆ "ತೀವ್ರ ವೈರಾಗ್ಯ" ಬಂದಿರಬೇಕು!

ಈ ಐದು ವರ್ಷಗಳಲ್ಲಿ ಕಡಿಮೆ-ಕಡಿಮೆ ಇಪ್ಪತ್ತು ಜನರಾದರೂ ಅವಳನ್ನು ನೋಡಲು ಬಂದಿದ್ದರು. ಬಂದವರೆಲ್ಲಾ "Dowry must be abolished" ಎಂದು ಬಹಿರಂಗವಾಗಿ ಕೊಚ್ಚುವವರೆ! ಒಬ್ಬ ಲೇಖಕನೂ ತನ್ನನ್ನು ನೋಡಲು ಬಂದಿದ್ದ. ಕೆಲವೇ ದಿನಗಳ ಹಿಂದೆ, ಅದೇ ಲೇಖಕ ಪತ್ರಿಕೆಯೊಂದರಲ್ಲಿ "ಸ್ತ್ರೀ ಕೊರಳ ಉರುಳು-ವರದಕ್ಷಿಣೆ" ಎಂಬ ಲೇಖನ ಬರೆದ ಮಹಾನುಭಾವ! ಬಂದವನೆ "ಪತ್ರಿಕೆಯೊಂದನ್ನು ಹೊರಡಿಸಬೇಕೆಂದಿದೀನಿ....ಪ್ರೆಸ್ ತೆರೆಯಲು

---

೧ ಬರಖಾತ್=ಉಳಿಗಾಲ-ವಿಳಿಗೆ.

ಒಂದೈದು ಸಾವಿರ ಕೊಟ್ಟರಿ....." ಎನ್ನಬೇಕೆ ?....ಎಲ್ಲರೂ ಬೂಟಾಟಿಕೆಯವರೇ....."ಗಾಂಧೀ ಜಯಂತಿಯ ದಿನ ಸತ್ಯವನ್ನೇ ಆಡೋಣ .....ವರುಷವೆಲ್ಲ ತೆರಿವಿದೆ— ಸುಳ್ಳುಹೇಳಲು"* ಎನ್ನುವ ಜನರಿವರು.....

ಗೌರಿಯ ಅಪ್ಪ— ಅವಳ ತಾಯಿಯಂತಿರಲಿಲ್ಲ. "ನಾನೇನು ವರವಿಕ್ರಯಕ್ಕೆ ಕುಳಿತಿಲ್ಲ. ವರದಕ್ಷಿಣೆ ಒಂದು ಚಿಕ್ಕಾಸೂ ಕೊಡಲಿಕ್ಕಿಲ್ಲ" ಎಂದು ಬಿಟ್ಟಿದ್ದರು. ವರದಕ್ಷಿಣೆ "ಕೊಡೋದಿಲ್ಲ" ಎನ್ನುವ ಪ್ರತಿಜ್ಞೆಯನ್ನು ನೆಡೆಯಿಸೆ ಬಿಟ್ಟಿದ್ದರು—ಅವರು !

ಗೌರಿಯ ಅಣ್ಣ— ಅವಳಿಗಿಂತಲೂ ಕೇವಲ ಒಂದುವರೆ ವರ್ಷಕ್ಕೆ ಹಿರಿಯ—ಅಚ್ಯುತ ಆ ವರ್ಷವೇ B. Com. ಮುಗಿಸಿದ್ದ. B. Com. ಪಾಸಾದನೆಂದು ತಿಳಿದ ಕೂಡಲೆ, ಹೆಣದ ಮೇಲೆ ಬಂದೆರಗುವ ಹದ್ದುಗಳಂತೆ, ಹೆಣ್ಣು ಕೊಡುವವರು ಶಂಕರರಾಯರನ್ನು ಮುತ್ತಿದರು. "ಮದುವೆ ಆಗುವ ಹುಡುಗಿಯನ್ನು ಮನೆಯೆಲ್ಲಿಟ್ಟು ಕೊಂಡು, ಹುಡುಗನಿಗೆ ಮದುವೆಮಾಡುವುದು ಸರಿಯಲ್ಲ" ಎಂದು ರಾಯರು ಚಡಪಡಿಸುತಿದ್ದರು. " ಹುಡುಗಿ ಮೊದಲು ಹೊರ-ಹೋಗಲಿ.... ಆ ಮೇಲೆ ನೋಡೋಣ.....ಅಚ್ಯುತನೂ ಎರಡು ವರ್ಷ ಮದುವೆ ಬೇಡ— ಕೆಲಸ ಸಿಗಲಿ— ಎಂದು ಹೇಳುತಿದ್ದಾನೆ" ಎಂದು ಬೂಟಾಟಿಕೆಯ ಮಾತನಾಡತೆವಿಡಗಿದರು. "ಹುಡುಗನಿಗೆ B.Com. ಕಲಿಸಿದ್ದೇನೆ. ನಾನು ಅವನ ವಿದ್ಯೆಗೆ ಸುರಿದ ಹಣವಾದ್ರೂ ಸಿಗಬೇಡವೆ!" ಎಂದು ಒಳಗೊಳಗೆ ಹೇಳತೊಡಗಿದರು.

"ಅಚ್ಯುತನ ಡಿಗ್ರಿ, ಅಚ್ಯುತನ ನಡೆ-ನುಡಿ, ಅಚ್ಯುತನ ಸೌಂದರ್ಯ— ಕ್ಯಾಪು— ಕನ್ನಡಕ, ಗುಂಗುರು ಕೂದಲು" ಯಾವುದಕ್ಕೆ ಹಣ ಕೇಳಲಿ, ಯಾವುದಕ್ಕೆ ಬಿಡಲಿ" ಎಂದು ಚಡಪಡಿಸಿದರು ರಾಯರು.

ಇವೆಲ್ಲದರ ಮೊತ್ತ ಒಂದೈದು ಸಾವಿರವಾದ್ರು ಆಗೋದಿಲ್ಲವೇ ?

ಗೌರಿಯ ಮನ ಗತಕಾಲದ ನೆನಹಿಂದ ವರ್ತಮಾನಕ್ಕೆ ಜಿಗಿಯಿತು. ಅಂದೇ ಅವಳನ್ನು ನೋಡಲು ಮತ್ತೊಬ್ಬ "ವರ" ಬರುವವನಿದ್ದ. ಅವಳ ಹೃದಯದಲ್ಲಿ— ಕುಣಿಯಿಟ್ಟು— ಎಲೆಬಟ್ಟು— ದಾಂಗುಡಿಯಿಡುತ್ತಾ ಬಳಸಿಬಿಗಿದಿತ್ತು— ಪ್ರೇಮಲತೆ..... ಆದರೆ ಕಾಲ್ಗಿಜ್ಜೆಂದು ಇದನ್ನು ಸುಟ್ಟು ಕರಿಮಾಡಿತ್ತು.... ಈ ಬಾರಿಯೂ ಹಾಗಾಗದಿರಲೆಂದು ದೇವರೊಡನೆ ಬೇಡಿದಳು.

ಕೋಣೆಯಲ್ಲಿ ಯೋಚಿಸುತ್ತ ಕುಳಿತಿದ್ದ ಗೌರಿ, ಕಿಟಕಿಯ ಮೂಲಕ ಹೊರನೋಡಿದಳು. ದೂರದಲ್ಲಿ ಬಾನು— ಭೂಮಿಯನ್ನು ತಬ್ಬಿತ್ತು. ಅದನ್ನು ನೋಡುತ್ತಾ ಗೌರಿ ಯೋಚಿಸಿದಳು: "ಓ ! ಎಂತಹ ಪ್ರಪಂಚ ! ಆ ಬಾನು-ಭೂಮಿಗಳ ಸಂಗಮದಂತೆಯೇ ನಶ್ವರ....ಅದನ್ನು ಮುಟ್ಟುತ್ತೇನೆಂದು ಮುನ್ನಡೆದರೆ— ಹರದಾರಿ— ಹರದಾರಿ ಅದೂ ಮುಂದೋಡುವುದು. ಅಂತೆಯೇ ಈ ಎಲ್ಲ ಸುಖವಲ್ಲವೇ ?"

ಆದರೆ ಈ ಸ್ಮಶಾನವೈರಾಗ್ಯದಿಂದ ಅವಳಿಗೆ ಶಾಂತಿಸಿಗಲಿಲ್ಲ. ಎಷ್ಟೆಂದರೂ ಹೆಣ್ಣುಮನ..... ದೂರದಲ್ಲಿ ಬೆಳಕೊಂದನ್ನು ಅವಳು ಕಂಡಳು..... ಅದು ವಿಷಾಗ್ನಿಯೆಂದು ಅವಳಿಗೇನುಗೊತ್ತು ?

— ೨ —

"ಗೌರಿ....ಜಡೆ ಹೆಣಕೊಂಡು ಆಯ್ತೇನೆ....ಬಾ....ಇಗೋ.... ಈ ಮಲ್ಲಿಗೆ ದಂಡೇನ ಮುಡಿದುಕೋ...," ಶಾರದಮ್ಮ ಗೌರಿಯನ್ನು ಕರೆದು— ಹೇಳಿದರು.

ಗೌರಿ ಹೊರಬಂದಳು.... ಎರಡು ಜಡೆ, ಅವಳ ಬೆನ್ನಮೇಲೆ, ತುಂಟಮಗು ತಾಯಕುತ್ತಿಗೆಯನ್ನು ಹಿಡಿದು ಅತ್ತ-ಇತ್ತ ನೇಲುವಂತೆ, ಜೋತಾಡುತಿದ್ದವು. ಹಣೆಯ ಮಧ್ಯೆ ಕುಂಕುಮಬಿಂದು ಶೋಭಿಸುತ್ತಿತ್ತು. ಉಟ್ಟ ಕೇಸರಿ ಬಣ್ಣದ ರೇಶಿಮೆಯ ಸೀರೆ ಒಪ್ಪುತಿತ್ತು. ಕಣ್ಣು ಸುತ್ತಲೂ ತೆಳುಕಾಡಿಗೆ ಹರಡಿತ್ತು. ಅವಳನ್ನು, ನೋಡಿದಾಗ ಶಾರದಮ್ಮನವರಿಗೆ ಅಪಾರ ಯಾತನೆಯಾಯಿತು. "ಅಯ್ಯೋ, ನನ್ನ ಕಂದಾ..... ಬ್ರಹ್ಮ ನಿನಗೆ ಒಬ್ಬ ಗಂಡನನ್ನು ಸೃಷ್ಟಿ ಮಾಡಲಿಲ್ಲವೇ ?" ಎಂದುಕೊಂಡರು. ಮರುಗಳಿಗೆಯೇ "ಹೂಂ....ಹಣೆಬರಹ.... ಯಾವ ಗಂಡನನ್ನ ಇವಳಿಗೆ ಎಲ್ಲಿ ಸೃಷ್ಟಿ ಮಾಡಿದ್ದಾನೋ—ಯಾರಿಗೆ ಗೊತ್ತು ? ಎಲ್ಲ ಗಳಿಗೆ ಕೂಡಿಬರಬೇಕು...." ಎಂದು ಸಮಾಧಾನ ಪಟ್ಟುಕೊಂಡರು.

" ನನ್ನ ಗೌರಿ.... ಇನ್ನಾರಾದರು ನೋಡಿದರೆ ದೃಷ್ಟಿಯಾಗುತ್ತೆ —ಕಣೆ" ಎಂದು ಅವಳ ಗಲ್ಲದ ಮೇಲೆ ಕರಿ ಬೊಟ್ಟಿಟ್ಟರು. ಹಾಲುಗೆನ್ನೆಯ ಮೇಲೆ, ಆಕರಿಬೊಟ್ಟು, ಶಶಿಯಲ್ಲಿಯ ಕಲೆಯಂತೆ ಶೋಭಿಸುತಿತ್ತು.

"ಬಿಡೇ ಅಮ್ಮಾ.... ನಿನಗೆ ನಾನಿನ್ನೂ ಎಳೇ ಮಗು! ಹಾಗೆ ದೃಷ್ಟಿ ಆಗೋದಾದರೆ, ಬಂದವರೆದುರಿಗೆಲ್ಲಾ ಮುಖ ತೋರಿಸಿದ ನಾನು—ಇಷ್ಟರಲ್ಲೆ ಸಾಯಬೇಕಿತ್ತು.... ನನ್ನಂತಹ ಕಲ್ಲುಕೊರಡಿಗೆ ಏನೂ ಬಡಿಯೋಲ್ಲ...." ಕಹಿಯಾಗಿ ಹೇಳಿದಳು ಗೌರಿ....

"ಬಿಡ್ತು ಅನ್ನೆ ಗೌರಿ.... ಎಂತಹ ಅಮಂಗಳ ಮಾತಾಡ್ತೀಯೆ" —ಎಂದರು ಶಾರದಮ್ಮ..... ಅವಳ ಕೆನ್ನೆ ಸವರಿ, ನೆಲಕ್ಕೆ ನೆಟ್ಟ ಮುರಿದು, "ನನ್ನ ಕಂದನಿಗೆ ದೃಷ್ಟಿಯಾಗದಿರಲಿ" ಎಂದರು. ತನ್ನ ಕರುವನ್ನು ಪ್ರೀತಿಯಿಂದ ನೆಕ್ಕುವ ದನದಂತಿತ್ತು—ಆ ನೋಟ.

ಗೌರಿಯ ಕಣ್ಣಿನಿಂದ ಹನಿಯೊಂದು ಉದುರಿ, ಮುಖದ ಮೇಲೆ ತೆಳುವಾಗಿ ಹರಡಿದ್ದ ಪೌಡರನ್ನು ತೊಳೆಯಿತು.

"ಯಾಕೆ ಅಳ್ತೀಯ ಗೌರಿ ?...." ಶಾರದಮ್ಮ ಅಪಾರ ಯಾತನೆಯಿಂದ ಕೇಳಿದರು.

"ಅಲ್ಲ ಕಣೆ ಅಮ್ಮಾ.... ನಿನ್ನ ಪ್ರೀತಿಯ ಎದುರು ನಾನೆಷ್ಟು— ಚಿಕ್ಕವಳು ಅನಿಸುತ್ತೆ...."

---

* ಬೇಂದ್ರೆ

"ಅಯ್ಯೋ ಗೌರಿ....ನೀನು ಹಳೇ 'ಅಜ್ಜಮ್ಮ'ನಾದರೂ ನನಗೆ ಪುಟ್ಟ ಮಗುವೆ....! ಯಾವ ತಾಯಿಗೂ ತನ್ನ ಮಗು ಬೆಳೆಯೋಲ್ಲ.... ಅವನು ಎಷ್ಟೇ ಕಲಿತಿರಲಿ— "ಮಗೂ, ಹಾಗೆ ಮಾಡಬೇಡ— ಹೀಗೆ ಮಾಡಬೇಡ" ಅನ್ನೋದು ತಾಯಿಸ್ವಭಾವ.... ನಾಳೆ ನಿನಗೆ ಮಕ್ಕಳು ಆದರೂ— ನನಗೆ ನೀನೇ ಮಗು." ಶಾರದಮ್ಮ ಗೌರಿಯ ತಲೆಯನ್ನು ಮೃದುವಾಗಿ ನೇವರಿಸಿದರು ಜ್ವರತಪ್ತಗಂಡನನ್ನು ಅವನ ಹೆಂಡತಿ ತಲೆ ಸವರುವಂತೆ— ಅದು ಮೃದುವಾಗಿತ್ತು....

"ತಗೋ.... ಇದನ್ನು ಮುಡಿದುಕೋ....ಉಜ್ಜಿದ ಪೌಡರನ್ನು ಮತ್ತೆ ಬಳಿದುಕೋ" ಎಂದು ಶಾರದಮ್ಮ ಮಲ್ಲಿಗೆಯ ದಂಡೆಯನ್ನು ಮಗಳ ಕೈಗಿತ್ತರು. ಅದನ್ನೆತ್ತಿಕೊಂಡು, ಗೌರಿ, ಎರಡು ಜಡೆಗಳ ನಡುವೆ ತೂಗಿಬಿಟ್ಟಳು.

"ಅಯ್ಯೋ.... ನಾನೇ ಮುಡಿದುಕೋಬೇಕಲ್ಲ.... ಮುಡಿಸುವವರಿಲ್ಲವಲ್ಲಾ...." ಎಂದು ಅವಳ ಹೃದಯ ಮೊರೆಯಿಟ್ಟಿತು....

ತಾನು ಮಲ್ಲಿಗೆಯ ದಂಡೆಯನ್ನು ಮುಡಿದಂತೆಯೇ, ತನ್ನ ಹೃದಯ-ಮಲ್ಲಿಗೆಯನ್ನು ಮುಡಿಯುವವರಿಲ್ಲವಲ್ಲಾ-ಎಂದು ಪರಿತಪಿಸಿದಳು.

"ಇಂದು ಬರುತ್ತಾರೆ.... ಖಂಡಿತ ಬರುತ್ತಾರೆ" ಎಂದಿತು— ಒಳಗಿನ ಕ್ಷೀಣಧ್ವನಿಯೊಂದು.

ಅಳಸಿದ ಪೌಡರನ್ನು ಲೇಪಿಸಿಕೊಳ್ಳಲು ಗೌರಿ ಒಳಹೋದಳು.... ಇಂತಿದೆ ಈ ಜಗ! ಅಗಾಗ ಸತ್ಯದ ಹೊಳೆಯೊಂದು ಬಂದು ಅಸತ್ಯ-ಅಧರ್ಮಗಳನ್ನು ಅಳಿಸಿಹೋಗುವುದು.... ಆದರೆ ಈ ಜಗ ಮತ್ತೆ ಅದರ ಮೇಲೆ ಬಣ್ಣ ಬಣ್ಣದ-ಮಿರುಮಿರುಗುವ ಅಸತ್ಯವನ್ನು ಲೇಪಿಸುವುದು. ಹೊಳೆಯುವ "ಗಿಲೀಟಿನ" ಚಿನ್ನಕ್ಕೆ ಜನ ಮಾರು ಹೋಗುವರು.

* * * *

"ಒಳಗೆಲ್ಲಾ ಆಯ್ತೇನೆ ಶಾರದಾ.... ಹಾಗಾದರೆ ಕಾಫಿ-ತಿಂಡಿ ಬರಲಿ.... ಗೌರೀ, ನೀನೇ ತಗೊಂಡು ಬಾರಮ್ಮ...." ಎಂದು ಶಂಕರರಾಯರು ಹೊರಗಿನಿಂದ ಕೂಗಿ ಹೇಳಿದರು.

"ಗೌರೀ, ತೆಗೆದುಕೊಂಡು ಹೋಗು.... ನೋಡು ಇದರಲ್ಲಿ ತುಂಬ ತಿಂಡಿ ಇಟ್ಟಿದ್ದೀನಿ.... ಇದನ್ನ "ಅವರಿಗೇ" ಕೊಡು...." ಶಾರದಮ್ಮ ತಮಾಷೆ ಮಾಡಿದರು.

"ಹೋಗೇ ಅಮ್ಮ....ನೀನೇ ತೆಗೆದುಕೊಂಡು ಹೋಗು.... ನನ್ನಿಂದ ಸಾಧ್ಯವಿಲ್ಲ...." ಎಂದುಬಿಟ್ಟಳು ಗೌರಿ....

ಉಣ್ಣದ ಮಗುವನ್ನು ತಾಯಿ ರಮಿಸಿ ಉಣಿಸುವಂತೆ, ಶಾರದಮ್ಮ ಗೌರಿಯನ್ನು ಸಂತೈಸಿ, ಕಾಫಿ-ತಿಂಡಿಕೊಟ್ಟು ಕಳುಹಿದರು.

ಗೌರಿ ಹೊಸಿಲು ದಾಟುವಾಗ, ಸೀರೆಯಂಚು ತಗುಲಿ, ತಟ್ಟೆಯಲ್ಲಿದ್ದ ಕಾಫಿ ಲೋಟವೊಂದು ಕೆಳಗುರುಳಿತು. ಬಸ್ಸನ್ನು ಫಕ್ಕನೆ ನಿಲ್ಲಿಸಿದಾಗ, ಪ್ರಯಾಣಿಕರ ತಲೆಗಳು ಪರಸ್ಪರ-ಗಿಟ್ಟಿಸಿಕೊಳ್ಳುವಂತೆ, ಕಾಫಿ ಲೋಟಗಳು ಒಂದಕ್ಕೊಂದು ತಗುಲಿ-ಕಾಫಿ ತುಳುಕಿತು.

"ಥೂ.... ಹೊಸ್ತಿಲು ದಾಟೋಕಿಲ್ಲ-ಅಪಶಕುನ" ಎಂದುಕೊಂಡು ರಾಯರು ತಾವೇ ಕಾಫಿ-ತಿಂಡಿಯನ್ನು ಹಂಚಿದರು.

ಮರೆಯಲ್ಲಿ ನಿಂತು ನೋಡುತ್ತಿದ್ದ ಶಾರದಮ್ಮ "ಅಯ್ಯೋ.... ಅಪಶಕುನ" ಎಂದುಕೊಂಡರು.... ಅವರ ಕಣ್ಣಿನಿಂದ ಹನಿಯೊಂದು ಉದುರಿತು-ಸುಖದ್ದೊ ? ದುಃಖದ್ದೋ ?

ಕರಿಯ ಬೆಕ್ಕೊಂದು, ಕರ್ಕಶವಾಗಿ ಕೂಗುತ್ತಾ ಬಲದಿಂದ ಎಡಕ್ಕೆ ಹೋಯಿತು.

* * * *

ಗೌರಿ ಕೋಣೆಯಲ್ಲಿ ಕುಳಿತು ಯೋಚಿಸುತ್ತಿದ್ದಳು. ಅವಳ ಮನ ಶರತ್ಕಾಲದ ಒಂಟಿನೋಡದಂತೆ ಎತ್ತೆತ್ತಲೋ ಹಾರುತ್ತಿತ್ತು.... ಕುಣಿದು-ಜಿಗಿದು-ನಲಿದು-ಎತ್ತೆತ್ತಲೋ ಓಡಿ ಮತ್ತೆ ತಾಯಿದನದ ಬಳಿ ಬಂದು ನಿಲ್ಲುವ "ಕರು"ವಿನಂತೆ-ಗೌರಿಯ ಮನ "ಅವರ" ಕುರಿತೇ ಯೋಚಿಸುವುದು....ತನ್ನನ್ನಿಂದು ನೋಡಲು ಬಂದವರು.... B. sc ಕಲಿತಿದ್ದಾರೆ.... ಎಷ್ಟು ಚಂದವಾಗಿದ್ದಾರೆ.... ಕದ್ದುನೋಡಿದ್ದಳು ಗೌರಿ.... ಎತ್ತರವಾದ ನಿಲುವು.... ಅಗಲವಾದ-ಧೀರವಾದ ಹಣೆ.... ಕಣ್ಣುಮೇಲೆ ಕಾಡಿಗೆ ಹಚ್ಚಿದಂತಿದ್ದ—ಹುಬ್ಬು.... ಚಂದನ ಲೇಪಿಸಿದಂತಹ ಕೆಂದುಟಿ....ಏನೇನೋ....ಅವಳಿಗೆ ವರ್ಣಿಸಿಕೊಳ್ಳಲು ಸಾಧ್ಯವಿರಲಿಲ್ಲ.

"ಅವರೂ" ತನ್ನನ್ನೇ ನೋಡುತ್ತಿದ್ದರು.... ಅವರ ನೋಟದಲ್ಲಿ "ಭರವಸೆ"ಯ ಹೊಳಹನ್ನು ಕಂಡಿದ್ದಳು-ಗೌರಿ.

ಫಕ್ಕನೆ ಕಾಫಿ ಚೆಲ್ಲಿದ ನೆನಪಾಯಿತು.... ಅವಳ ಮನದಲ್ಲಿ ಕತ್ತಲನೆರಳೊಂದು ಮೈನೀಡಿತು-" ತನ್ನ ಹೃದಯಕರಂಡದಲ್ಲಿದ್ದ ಪ್ರೇಮತೀರ್ಥವೂ ಅಂತೆಯೇ ಚೆಲ್ಲಿಹೋದಪಿ ?"

"ದೇವಾ.... ಈ ಬಾರಿಯಾದರೂ ಕೈಬಿಡಬೇಡ" ಗೌರಿ ದೇವನೊಡನೆ ಪ್ರಾರ್ಥಿಸಿಕೊಂಡಳು.....ಇಲ್ಲ.....ದೇವರು ಕೈಬಿಡಲಿಲ್ಲ..

— ೩ —

"ನೋಡೆ ಶಾರದಾ.... 'ಸಾಟ್‌ಮೂರಂತೆ'* ಅವರ ಮನೆಯ ಹುಡುಗಿಯನ್ನ ಅಚ್ಚುಗೆ ತರಬೇಕಂತೆ.... ಹಾಗಾದ್ರೆ ಮಾತ್ರ ಗೌರಿಯನ್ನ ಅವರು ತೆಗೆದುಕೊಂಡು ಹೋಗುತ್ತಾರಂತೆ...."

* ಸಾಟ್‌ಮೂರ್=ಪರಸ್ಪರ ಹೆಣ್ಣು-ಗಂಡುಗಳ ವಿನಿಮಯ.

"ಆಗಲಿ.... ಏನಾಯಿತು.... ಹೀಗಾದ್ರೆ ಹಾಗೆ.... ನಮಗೆ ಹುಡುಗಿ ಹೊರಗೆ ಹೋದ್ರೆ ಸಾಕು" ಎಂದರು ಶಾರದಮ್ಮ.

"ಹುಡುಗಿ ಹೊರಹೋಗಬೇಕೆಂದು, ಅಚ್ಯುತಗೆ ಎಲ್ಲೆ-ಲ್ಲಿಂದಲೋ ಹೆಣ್ಣು ತರೋದೇನು"

"ಈಬಾರಿ ಬಿಟ್ಟರೆ ಹೋಯ್ತು...."

"ಒಳ್ಳೇದು ಹೇಳ್ತೀಯೆ....B com ಕಲಿಸಿಲ್ವೆ ? ಒಂದೈದು ಸಾವಿರ...." ಶಾರದಮ್ಮ ಮಾತನಾಡಲಿಲ್ಲ. ಗೌರಿಯನ್ನು ನೋಡಲು ಅನೇಕ ಎಮ್. ಎ. (M.A.)ಗಳು ಬಂದಿದ್ದರು. ಅವರಿಗೆಲ್ಲ "ಒಂದು ಚಿಕ್ಕಾಸೂ" ಕೊಡೆನೆಂದು ರಾಯರು ಹಿಂದೆ ಕಳುಹಿದ್ದರು. ಆದರೆ ಅಚ್ಯುತನ B. com ಗೆ ಐದುಸಾವಿರ....!

"ನಿಮ್ಮಿಷ್ಟ.... ಬೆಳೆದ ಹುಡುಗೀನ ಇನ್ನೂ ಮನೇಲಿ ಇಟ್ಟು ಕೊಂಡರೆ-ನೋಡಿದವರು ಏನು ಹೇಳ್ತಾರೆ ?....ಇಷ್ಟಾದರೂ ಯೋಚನೆ ನಿಮಗಿಲ್ವಲ್ಲಾ...."

"ಸಾಕೇ.... ಜನ ಆಡ್ಕೊಳ್ತಾರೆ ಅಂತ ! ನಾನೇನು ಆತ್ಮಹತ್ಯೆ ಮಾಡಿಕೊಳ್ಳಲೇನು?....ಅಚ್ಯುತನ ವಿದ್ಯೆಗೆ ಹಣಸುರಿದದ್ದು ನಿನ್ನಪ್ಪನಲ್ಲ-ನಾನು...."

"ಏನಾದ್ರೂ.... ಒಂದು ನೂರಿನ್ನೂರು ಹೆಚ್ಚು ಕಡಿಮೆ.... ಈ ಬಾರಿ ತಪ್ಪಿಹೋದರೆ— ಹೋಯಿತು.... ಗೌರಿಗೂ ಈ ಸಂಬಂಧ ಖುಷಿ ಇದ್ದಂತೆ ಕಾಣುವುದು...."

"ಅಂ.... ಗೌರಿಗೆ ಖುಷಿ.... ಇವರಿವರ ಖುಷಿ ಬಂದೋರನ್ನ ಮದುವೆ ಆಗೋದಾದ್ರೆ, ಯಾರಹಿಂದಾನರೂ ಓಡಿ ಹೋಗ್ಲೇಳು.... ಇದೇನು ಸೂಳೆಮನೆಯಲ್ಲ...." ಎನ್ನುತ್ತಾ ಶಂಕರರಾಯರು ಹೊರಟು ಹೋದರು.

ಬೇರೆಬೇರೆ ಕಡೆ ಹುಟ್ಟಿದ ನದಿಗಳೆಲ್ಲಾ ಸಾಗರಕ್ಕೆ ಬಂದು ಸೇರು ವಂತೆ—ಮನೆಯ ಎಲ್ಲ ದುಃಖವಾರಿಧಿ ಶಾರದಮ್ಮನವರ ಹೃದಯವನ್ನು ತುಂಬುತ್ತಿತ್ತು.

ನಿಜಕ್ಕೂ ಅವಳ ಹೃದಯ—ಒಂದು ಮಹಾಸಾಗರ....

ಈ ಸಾಗರದ ನೀರು-ಉಪ್ಪಲ್ಲ.... ಸಿಹಿ.... ಅಮೃತದ ಸಿಹಿ !

ಅದರಾಳದಲ್ಲಿ ಅನೇಕ ಅನರ್ಘ್ಯ ರತ್ನಗಳು ಇದ್ದುವು.

ಅದೊಂದು--ಪ್ರೇಮಾಂಬುಧಿ.

* * * *

ಮದುವೆ ಮುರಿದು ಹೋಯಿತು. "ನಿಮ್ಮ ಹುಡುಗ B Com. ನಮ್ಮ ಹುಡುಗ B. Sc. ಆದುದರಿಂದ ವರದಕ್ಷಿಣೆ ವಿನಿಮಯಬೇಡ. ಹಾಗಾದರೆ ನಮ್ಮ ಒಪ್ಪಿಗೆ. ಮಾವನ ದೇವಸ್ಥಾನದಲ್ಲಾದರೂ ಚಿಂತೆ ಯಿಲ್ಲ." ಎಂದು ಗಂಡಿನ ಕಡೆಯವರಿಂದ ಮತ್ತೆ ಕಾಗದ ಬಂದಿತು.

"ನೋಡು, ಇವನ ತೇಂಕಾರ....ಹುಡುಗ ಎಲ್ಲೋ ಮಂಕುಗೂಬೆ ಯಂತಿದಾನೆ.... ಇವನಿಗೆ ನನ್ನ ಮಗಳನ್ನು ಕೊಡಬೇಕೇನು.... ಇವನ ಬೊಜ್ಜ.... ಆ ಪೆಚ್ಚನಿಗೆ ನನ್ನ ಮಗಳು...." ಶಂಕರರಾಯರು ಕೂಗಾಡಿ ದರು. ಕೈಗೆಟುಕದ ದ್ರಾಕ್ಷೆ—ನರಿಗೆ ಹುಳಿಯಾದಂತೆ, ಆ ಹುಡುಗ ಇವರ ಪಾಲಿಗೆ "ಮಂಕುಗೂಬೆ"ಯಾಗಿ ಬಿಟ್ಟ....

"ಆಗಲಿ ಎಂದು ಬರೀರಿ..... ಏನಾದ್ರು ಆಗಲಿ— ಈ ಸಾರಿ ಬಿಡೋದು ಬೇಡ...."

"ಮುಚ್ಚೆ ಬಾಯಿ.... ನಿನ್ನನ್ನ ಕರಿಸ್ಲಿಲ್ಲ—ಪಂಚಾಯಿತಿಗೆ..... ನಿನ್ನಪ್ಪ ಕೊಡಲಿಲ್ಲ— ಅಚ್ಯುತನ ಕಲಿಸೋಕೆ. ಇವನಿಲ್ಲದಿದ್ರೆ ಇವನ ಅಪ್ಪನಂತೋರು ಬರ್ತಾರೆ..... ನನಗಿರೋ ಆಸ್ತಿ-ಪಾಸ್ತಿ, ಮಾನ-ಅಂತಸ್ತು ಇವನಿಗಿದೆಯೇನು ?" ಎಂದು ಶಂಕರರಾಯರು ಹೊರಟು ಹೋದರು....

ಶಾರದಮ್ಮನವರ ಕಣ್ಣಿಗೆ ಹೊಗೆ ಹೋಯಿತೋ ಏನೋ— ಕಣ್ಣುಜ್ಜಿಕೊಂಡರು.....

* * * *

ಶಂಕರರಾಯರಿಗೆ ಗೌರಿಯ ಮದುವೆಯ ನೆನಪು ಹೋಯಿತು; ಅಚ್ಯುತನ ಮದುವೆಯ— 'ಗಿರ'* ಹಿಡಿಯಿತು. ರಾಯರು ಮೊದಲು ಬೆಂಗಳೂರು-ಮೈಸೂರುಗಳಲ್ಲಿದ್ದುದರಿಂದ, ದೊಡ್ಡ ದೊಡ್ಡ "ಹೋಟೆಲು" ಗಳವರ ಗುರುತು ಇದ್ದಿತು. ಹೀಗಾಗಿ ಆ 'ಶ್ರೀಮಂತ ಸಂಘ'ದಲ್ಲಿ ಅಚ್ಯುತನಿಗೆ ಒಂದು ಹೆಣ್ಣುವಿಾಸಿಗಾಗಿ ಗಾಳಹಾಕತೊಡಗಿದರು.

ಫಕ್ಕನೆ ಶ್ರೀಮಂತ ಮನೆತನದ ಜಾತಕವೊಂದು ಅಚ್ಯುತನಿಗೆ ಕೂಡಿಬಂದಿತು. ಎಂಟು ಸಾವಿರ ವರದಕ್ಷಿಣೆ ಕೊಡಲು ಅವರೊಪ್ಪಿ-ದ್ದರು. ಶಂಕರರಾಯರು ಕುಬೇರನ "ಖಜಾನೆ"ಯನ್ನೇ ಗೆದ್ದವರಂತೆ ಕುಣಿದರು.

"ಹುಡುಗಿ ಸಲ್ಲಕ್ಷಣವಾಗಿದ್ದಾಳೆ!" ಎಂದು ಹೇಳಿದರು— ಹುಡುಗಿ ನೋಡಿ ಬಂದ ಶಂಕರರಾಯ. ಆದರೆ ಅವಳ ಕಣ್ಣಲ್ಲಿದ್ದ "ಬಿಳಿ ಹೂ" ಮತ್ತು ಉಗ್ಗು ಬಾಯಿಯ ವಿಷಯ ಬಚ್ಚಿಟ್ಟರು.....

ಗೌರಿಗೆ ಮಾತ್ರ ಅಪಾರ ಯಾತನೆಯಾಯಿತು. ಸಾವಿರ ಚೇಳು ಗಳು ಕುಟುಕಿದಂತಾಯಿತು....

"ಗೌರಿ, ಅಚ್ಯುತ ಮದುವೆ ಆಗ್ಲಿ.... ಅನೇಲೆ...." ಎಂದು ಸವಿ ಮಾತಾಡಿದರು— ರಾಯರು. ಆದರೆ ಅವು "ಸ್ವರ್ಣಖಡ್ಗ"ದಂತಿ ದ್ದುವು.

"ನಾನು ಜಾಪಿ ಈಣೇ.... ಅಮ್ಮಾ.... ನಿಮಗೆ ಭಾರವಾಗಿ ಹುಟ್ಟಿ ದ್ದೇನೆ" ಎಂದಳು ಗೌರಿ....

"ಅಳಬೇಡ ಗೌರಿ....ನಾನೇನು ಮಾಡ್ಲಿ....ಎಲ್ಲಕ್ಕೂ ಕಾಲ ಕೂಡಿ ಬರಬೇಕು...."

"ಹೌದಮ್ಮಾ.... ಎಲ್ಲಕ್ಕೂ ಕಾಲಕೂಡಿ ಬರಬೇಕು..... ಬಹು ಬೇಗ ಕೂಡಿಬರುವುದು— ಆ "ಕಾಲ".

---

* ಭ್ರಾಂತಿ, ಹುಚ್ಚು

"ಅವರಿಗೆ ಹೇಳಿದರೆ ತಿಳಿಯೋಲ್ಲ....ಅಚ್ಚು ಮದುವೆ ಈಗೇನು— ತಡೆದು ಹೋಗಿಲ್ಲ— ಎಂದರೆ 'ಎಂಟುಸಾವಿರ ಯಾರು ಕೊಡ್ತಾರೆ?' ಅನ್ನುತ್ತಾರೆ...."

"ಅಗಲಿ ಬಿಡು ಅಮ್ಮಾ....ಅಚ್ಚಣ್ಣನಿಗಾದ್ರೂ ಒಳ್ಳೆ ಕಡೆ ಹೆಣ್ಣು ಸಿಕ್ಕೆತಲ್ಲ....ನಾನಂತೂ ದೌರ್ಭಾಗ್ಯೆ....ಅವನಾದ್ರೂ ಸುಖವಾಗಿರ್ಲಿ...." ಸಾಯಲಿರುವ ಮುದುಕಿ, ಮನೆಯವರಿಗೆಲ್ಲಾ ಆಶೀರ್ವಾದ ಕೊಡುವಂತಹ—ಧ್ವನಿಯದು.

ಬಿರುಗಾಳಿ ಬೀಸುವ ಮುನ್ನ ಗಂಭೀರವಾದ ನುಹಾಸಮುದ್ರದಂತೆ — ಅವಳು ಗಂಭೀರಳಾಗಿದ್ದಳು.

ಬೀಸುವ ಬಿರುಗಾಳಿ ಏನೆಲ್ಲ ಅನಾಹುತ ತರುವುದೋ.

* * * *

ಆ ಕುಜವಾರ, ಸಂಜೆ ಸಲ್ಲುವ ಗೋಧೂಳಿ (ಸ್ಟೇ. ಗಂ. ೬-೩೦) ಲಗ್ನದ ಶುಭಮುಹೂರ್ತದಲ್ಲಿ, ಅಚ್ಯುತ-ಲತಾಂಗಿಯರ ಮದುವೆ ನಡೆಯಿತು. ಶಾರದೆಗೆ ಆಶ್ಚರ್ಯತಂದುದೆಂದರೆ— ಗೌರಿ ಅತ್ಯುತ್ಸಾಹದಿಂದ ಅದರಲ್ಲಿ 'ಓಡಾಡಿದುದು'. "ಅಗ್ನಿತರುವ ಕೆಲಸದಿಂದ ಅಕ್ಷತೆ ಹಿಡಿಸುವ" ಕೆಲಸದವರೆಗೆ— ಎಲ್ಲಾ ಒಬ್ಬಳೇ ಮಾಡುತ್ತಿದ್ದಳು. "ಯಾಕೆ ಹೀಗೆ ಓಡಾಡ್ತಿ—ಗೌರಿ....ಬೇರೆಯವರಿಲ್ಲವೇ ಮಾಡಲಿಕ್ಕೆ?" ಎಂದರೆ "ನನ್ನ ಅಚ್ಚಣ್ಣನ ಮದುವೆಗೆ ನಾನು ಓಡಾಡದೆ—ಮತ್ತಾರು ಓಡಾಡುವುದು- ಅಮ್ಮಾ...." ಎನ್ನುತಿದ್ದಳು...." "ನಿನ್ನ ಮದುವೆಗೂ ನೀನೇ ಓಡಾಡುತ್ತೀಯೇನು?" ಎಂದರೆ ಸುಮ್ಮನೆ ನಗೆಯಾಡುತಿದ್ದಳು. ಬಾಡುವ ಎಳೆಗುಲಾಬಿಯು— ಕ್ಷೀಣ ನಗುವದು.

ಬಂದವರೆಲ್ಲ "ಹುಡುಗೀ ಕಣ್ಣೇನು 'ಬಳ'ಯಾಗಿದೆ—ಬೆಕ್ಕಿನ ಕಣ್ಣಿನ ಹಾಗೆ" ಎಂದರೆ, ರಾಯರು "ಛೇ! ರಾತ್ರಿ 'ಗ್ಯಾಸ್' ದೀಪದ ಬೆಳಕಿಗೆ ಹಾಗೆ ಕಾಣುತ್ತದೆ." ಎಂದು ಹಾರಿಸಿ ಉತ್ತರ ಕೊಟ್ಟಿದ್ದರು.

* * * *

ಮದುವೆಗೆ ಬಂದವರೆಲ್ಲ ಹೋದರು. ಮದುವೆಯ ಮನೆ ಮಸಣದ ಮಾಡದಂತೆ "ಭಿಕೋ" ಎನ್ನತೊಡಗಿತು. ಮದುವೆ ಮುಗಿದ ಮನೆಗೂ ಮಸಣದ ಮನೆಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಎರಡೂ 'ಹಾಳುಸುರಿಯುವ' ಬೀಡುಗಳು.... ಒಂದರಲ್ಲಿ, ಬಂದ ಜನ ಹೋಗುತ್ತಾರೆ..... ಇನ್ನೊಂದಕ್ಕೆ ಜನ ಬಂದು ಸೇರುತ್ತಾರೆ..... ಶಂಕರರಾಯರ ಮನೆಗೆ ಈ ಎರಡೂ ಸಂದರ್ಭಗಳು ಬಂದೊದಗಿದುವು— ಅದು ಗೌರಿಯ ಸಾವು.

ಮದುವೆಯಾಗಿ ಎಂಟು ದಿನ ಕಳೆದಿತ್ತು.....ಆ ದಿನ ಬೆಳಗಿನಲ್ಲಿ ಗೌರಿ ಮನೆಯಲ್ಲಿ ಇಲ್ಲದುದನ್ನು ಶಾರದಮ್ಮನವರ "ಹದ್ದಿನ ಕಣ್ಣು" ಗುರುತಿಸಿತು. ಕೂಡಲೆ ಕೆರೆ-ಭಾವಿ ಶೋಧನೆಗೆ ತೊಡಗಿತು. ಕಡೆಗೆ ಮನೆಯ ಹಿಂದಿನ ಪಾಳುಭಾವಿಯಲ್ಲಿ ಗೌರಿಯ ಶವ ಸಿಕ್ಕಿತು. ಮುಡಿಯ ಮಲ್ಲಿಗೆ ನೀರಮೇಲೆ ತೇಲುತಿತ್ತು..... ಹಣೆಯ ಕುಂಕುಮ ಅಳಸಿಹೋಗಿತ್ತು !!!

ಶಂಕರರಾಯರು ನಿರ್ವಿಣ್ಣರಾದರು. ಭೂತ ಹಿಡಿದವರಂತೆ, ತಲೆಗೆ ಕೈಗೊಟ್ಟು ಮೂಲೆಯಲ್ಲಿ ಕುಳಿತರು. ಅವರ ಅಂತರ್ವಾಣಿ ಹೇಳುತಿತ್ತು— "ಪಾಪಿ! ನೀನೇ ಗೌರಿಯನ್ನು ಕೊಂದವ...."

ನಾಲ್ಕಾರು ಜನಸೇರಿ ಶವವನ್ನು ಮೇಲೆ ತಂದರು. ಚಿತೆ ಒಟ್ಟಿದರು. ಗೌರಿಯ ಶವವನ್ನು ಅದರ ಮೇಲಿಟ್ಟರು.

ಅದಕ್ಕೆ ಬೆಂಕಿ ಕೊಡುವಾಗ ಶಂಕರರಾಯರು ಕುಸಿದು ಬಿದ್ದರು.... ಅಯಸ್ಕಾಂತದ ಸಜಾತೀಯ ಧ್ರುವಗಳು ಒಂದನ್ನೊಂದು ದೂಡುವಂತೆ, ಅವರ ಕೈ ಶವದ ಬಳಿ ಹೋದಾಗ, ಅಶರೀರಶಕ್ತಿಯೊಂದು ಹಿಂದೆ ದೂಡುತಿತ್ತು. ಅವರನ್ನು ಹಿಡಿದುಕೊಂಡು, ನೆರೆದವರು, ಶವಕ್ಕೆ ಬೆಂಕಿ ಕೊಡಿಸಿದರು....

ಶಾರದಮ್ಮ ಅದನ್ನು ನೋಡುತ್ತಲೇ ಇದ್ದರು.....ಅವರ ಕಣ್ಣಿನಿಂದ ಒಂದು ಹನಿ ಕಂಬನಿ ಉದುರಲಿಲ್ಲ. ತುಂಬಿದ ಕಣ್ಣೀರಕೊಡದಿಂದ ನೀರು ತುಳುಕಲಿಲ್ಲ.

ಶವದ ಹೊಗೆ ವರ್ತುಲ-ವರ್ತುಳವಾಗಿ ಮೇಲೇರುತಿತ್ತು. ಅದೇ ಗೋಧೂಳಿ ಲಗ್ನದಲ್ಲಿ, ಅದೇ ಎಂಟು ದಿನಗಳ ಹಿಂದೆ ಮದುವೆಯ ಹೋಮಾಗ್ನಿಯ ಹೊಗೆ ವರ್ತುಳ-ವರ್ತುಳವಾಗಿ ಮೇಲೇರುತಿತ್ತು....

ದೇವರ ಮುಂದಿಟ್ಟ ಕರ್ಪೂರ ಕರಗಿ, ಹೊಗೆ ಏಳುವಂತೆ, ಶವದ ಹೊಗೆ ಬಾನಿನಲ್ಲಿ- ಮೇಲೆ-ಮೇಲೆ ಏರುತಿತ್ತು.

* * * *

ಎಂಟು ದಿನ ಕಳೆದಿರಲಿಲ್ಲ. ಆ ಸೂತಕದ ಮನೆಗೆ ಕಾಗದವೊಂದು ಬಂದಿತು ಅದು ಅಂದು ಗೌರಿಯನ್ನು ನೋಡಲು ಬಂದ ವರನೇ ಬರೆದ ಕಾಗದ. ತನ್ನ ತಂಗಿಗೆ ಲಗ್ನವಾಯಿತೆಂದೂ, ತಾನು ವರದಕ್ಷಿಣೆ ವಿನಾ ಗೌರಿಯನ್ನು ವದುವೆಯಾಗುವೆನೆಂದೂ ಬರೆದಿದ್ದ.

ಆದರೆ ಗೌರಿಯೆಲ್ಲಿ?

ಅವಳಾಗಲೇ ತನ್ನ ಪತಿಗೃಹಕ್ಕೆ ಹೋಗಿಯಾಗಿತ್ತು.

ಯಮನೇ ಅಲ್ಲವೇ ಅವಳ ಗಂಡ?

ಅವಳಂತಹ ಸಾವಿರಾರು ನಿರ್ಭಾಗ್ಯೆಯರ ಗಂಡನೇ ಅವನು!

ಆದರೆ ಪುಣ್ಯಕ್ಕೆ ಅವನು "ವರದಕ್ಷಿಣೆ" ಕೇಳುವುದಿಲ್ಲವಂತೆ!!

ಋಷ್ಯಶೃಂಗನ ಕತೆ

(ಶಿಲಾಶಾಸನದಿಂದ)

ಸಿರಸಂಗಿ ಗ್ರಾಮದ ಪ್ರಾಚೀನ ಪರಿಚಯಾತ್ಮಕ ಲೇಖ

ಡಾ. ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ (ದ. ಕ.)

ಪುರಾಣದ ಸಂಬಂಧವನ್ನು ಹೇಳುವ ಪುರಾತನ ಗ್ರಾಮ-ನಗರಗಳು ಕನ್ನಡನಾಡಿನಲ್ಲಿ ಅಸಂಖ್ಯವಾಗಿರುವುವು. ಮೂಲ ಪೌರಾಣಿಕ ಕಥೆ ಸ್ಥಳಪುರಾಣವಾಗುವಾಗ, ಕವಿಯ ಸಂಸ್ಕೃತಿ-ಸ್ಫೂರ್ತಿಗಳನ್ನು ಅನುಸರಿಸಿ ಸ್ವಲ್ಪ ಮಾರ್ಪಾಡನ್ನೂ ಹೊಂದಿರುವುದು.

ಶ್ರೀರಾಮನು ದಶರಥನಲ್ಲಿ ಹುಟ್ಟಿ ರಾವಣನನ್ನು ಕೊಂದುಗೆದ ಕತೆ, 'ರಾಮಾಯಣ' ಎಂದು ಪ್ರಸಿದ್ಧವಾಗಿದೆ. ಶ್ರೀರಾಮನು ದಶರಥನಲ್ಲಿ ಹುಟ್ಟುವ ಸಲುವಾಗಿ, ದಶರಥನು ಕೈಗೊಂಡ ಪುತ್ರಕಾಮೇಷ್ಟಿಗೆ ಪ್ರಾಮುಖ್ಯನಾಗಿ ಋಷ್ಯಶೃಂಗನನ್ನು ಕರೆಯಿಸಿದ್ದೂ, ಋಷ್ಯಶೃಂಗನು ಹುಟ್ಟಿ ಬೆಳೆದ ಕಾಡಿನಿಂದ ನಾಡಿಗೆ ಬಂದುದೂ ಅಲ್ಲಿ ಹೇಳಿದೆ. ಇದೀಗ ಕನ್ನಡದ ಶಾಸನವೊಂದರಲ್ಲಿ ಹೇಳಿದ 'ಋಷ್ಯಶೃಂಗನ ಕತೆ'ಯನ್ನು ಬರೆಯಲಾಗಿದೆ. ಈ ಕತೆಗೆ 'ತೊರವೆಯವನ ಕೃತಿಯ' ಹೋಲಿಕೆ ನೋಡಿಕೊಳ್ಳಬಹುದು!

ಈಗಿನ **ಬೆಳಗಾಂವಿ ಜಿಲ್ಲಾ ಸೌಂದತ್ತಿ ತಾಲೂಕಿನ ಸಿರಸಂಗಿಯ** ಕಾಳಮ್ಮನ ಗುಡಿಯಲ್ಲಿ ನಿಲ್ಲಿಸಿದ ಶಾಸನವೊಂದು, ಧಾರವಾಡದ ಕನ್ನಡ ಸಂಶೋಧನಾಲಯದಿಂದ ಪ್ರಕಟವಾದ **'ಕರ್ನಾಟಕ ಶಾಸನಗಳು'** ಎಂಬ ಸಂಕಲನದ ಪ್ರಥಮ ಸಂಪುಟದಲ್ಲಿದೆ. ಇದು **ಇಸ್ವಿ ೧೧೭೬**ರಲ್ಲಿ, ಚಾಳುಕ್ಯಮನೆತನದಲ್ಲಿ ಸುಪ್ರಸಿದ್ಧನಾದ ನಾಲ್ಕನೆಯ ಸೋಮೇಶ್ವರನ ಆಳಿಕೆಯಲ್ಲಿ ಬರೆದುದು. ಈ ಶಾಸನದ ಉದ್ದನೆಯ ನೂರು ಸಾಲುಗಳಲ್ಲಿ, **ಇಪ್ಪತ್ತನಾಲ್ಕು ಸಾಲಿನಷ್ಟು ಈ ಕತೆಯು** ಚೆನ್ನಾಗಿ ಹರಡಿದೆ. ಆ ಮೊದಲ ಹದಿನಾಲ್ಕು ಸಾಲುಗಳಲ್ಲಿ ರಾಜ ಹಾಗೂ ರಾಜ್ಯಗಳ ವರ್ಣನೆಯಿದೆ. ಇವಿಷ್ಟು ಸಾಲುಗಳ ಪೂರ್ಣ ಪಾಠದ ಸ್ವಾರಸ್ಯ ಭಾಗವನ್ನು ಅಯ್ದುತೆಗೆದು ಇಲ್ಲಿ ಬರೆಯಲಾಗಿದೆ; ಆ ಪ್ರಕಾಶಕರಿಗೆ ಕೃತಜ್ಞತೆ ಸಲ್ಲಬೇಕು. ಈ ಶಾಸನಾದಿಗೆ ಶಿಲಾಶಾಸನಗಳಲ್ಲಿ ಹೆಚ್ಚಾಗಿ ಬರುವ 'ನಮಸ್ತುಂಗ'— 'ಜಯತ್ಯಾವಿಷ್ಕೃತಂ' ಎಂಬೀ ಪದ್ಯಗಳೊಂದಿಗೆ ಇನ್ನೊಂದು ಪದ್ಯವೂ ಬಂದಿದೆ:

'ಜಯಂತಿ ಸ್ಥಾಯಿಸಂಚಾರಿ ಭಾವಾಭಿನಯ ಭಾವಕಾಃ |
ನೀಲಲೋಹಿತ ಶೈಲೂಷ ಭ್ರೂಣ(ಲ)ತಾಲಾಸ್ಯ ವಿಭ್ರಮಾಃ' ||

ಇದು ಶಿವಸ್ತುತಿಯೆಂದು ಇದರೊತ್ತಿನ 'ನಮಃ ಶಿವಾಯ ನಮಃ' ಎಂಬುದರಿಂದಲೂ ಸ್ಪಷ್ಟವಾಗುವುದು. ಇದಾಗಿ, ಹಬ್ಬೆಯ ನಾಯಕನನ್ನು 'ಪ್ರಸನ್ನ ಹಬ್ಬೇಶ್ವರ'ನು ಸಲಹುವಂತೆ ಆಶಿಸಲಾಗಿದೆ. ಅನಂತರ 'ಶ್ರೀಮತ್ತ್ರಿಭುವನಮಲ್ಲ ವೀರಸೋಮೇಶ್ವರನು ರಾಜ್ಯವಾಳುತ್ತಿರುವಲ್ಲಿ' ಎಂದು ಹೇಳಿ, ಸಮುದ್ರ, ಕುಂತಳದೇಶಗಳ ವರ್ಣನೆ ಇರುತ್ತದೆ! ಈ ಯೆಡೆಯಲ್ಲಿ **ಸಮುದ್ರವು ಭೈರವನಂತಿದೆ**ಯೆಂದು ಹೋಲಿಸಿದೆ:

'ಭಾಳಾಕ್ಷಿದ್ಯುತಿ ಬಾಡಬಾಗ್ನಿಗೆ, ಜಟಾಜೂಟಂ ಪ್ರವಾಳಕ್ಕೆ, ಸ |
ರ್ಪಾಳಂಕಾರಮುದಾಹಿಕೋಟಿಗೆ, ಕರೋಟೀಮಾಲೆ ಶಂಖಾಳಿಗಾ |
ಭೀಳಧ್ವಾನಮುದೀರ್ಣ ಘೋಷಕಕೆಯಾಗಲ್, **ಭೈರವಸದೃಶ**
ಶ್ರೀಲೀಲಾಕೃತಿವೊಲ್ ಮನಂಗೊಳಿಸುತೋ ರತ್ನಾಕರಂ ಶ್ರೇಕರಂ'||

ಭೈರವನ ಹಣೆಗಣ್ಣು ಬಾಡವಾಗ್ನಿಗೆ ಎಣೆಯಾಗಲು, ಜಟಾಮಂಡಲವು ಪ್ರವಾಳಕ್ಕೆ ಹೋಲಿಕೆಯಾಗಲು, ಸರ್ಪಾಲಂಕಾರವು ನೀರುಹಾವಿಗೆ ಸರಿಕೆಯಾಗಲು, ರುಂಡಮಾಲೆಯು ಶಂಖಗಳ ಸಾಲಿಗೆ ಹೊಂದಿಕೆಯಾಗಲು, ಗಂಭೀರನಾದವು ಅಬ್ಬರಕ್ಕೆ ಓರಗೆಯಾಗಲು, ಭೈರವನ ಆಕಾರದಂತೆ ಕಡಲು ಮನಸ್ಸನ್ನು ಸೆರೆಹಿಡಿಯುತೆಂದುದು ಕಾವ್ಯಗುಣದಿಂದ ಕೂಡಿದೆ.

ಈ ಕಡಲು ಸುತ್ತಿದ ಜಂಬೂದ್ವೀಪ, ಅದರ ನಡುವೆ ಮೇರು, ಅದರ ತೆಂಕಣ ಭಾರತವರ್ಷ, ಅದರ 'ಕುಂತಳದಂತಿರುವ' ಕುಂತಳದೇಶ-

ಗಳು ಆಗ ಚಿಲುವಾಗಿದ್ದವು. ಈ ಕುಂತಳದೇಶದ ವರ್ಣನೆಯೆರಡು ಪದ್ಯಗಳು ಬಲು ಚೆಲುವಾಗಿವೆ:

'ಅದು ಕುಂತಳ ದೇಶವೆನಿ |
ಪ್ಪುದರಿಂದಂ ಮಧ್ಯದೇಶಕಂ ಕಾಂಚೀದೇ- |
ಶದ ಚೆಲ್ವಿಂಗಂ ಮೇಲೆನಿ |
ಪ್ಪುದು, ಮೇಲಂ ಮೇಲೆನಿಪ್ಪುದೇಂ ಗಳಪಂಗೆ ||

ಅದಲ್ಲದೆಯುಂ |
ಶ್ರೀಮಜ್ಜನಸೇವ್ಯಂ ಸುಮ |
ನೋಮಾಳೋದ್ಯಾಸಿ ಬಹುಲಲಾಟಾಶ್ರಯವೆಂ |
ಬೀ ಮಯ್ಮೆಯಿನೆಣೆಯಾದುದಿ |
ಳಾ ಮಹಿಳೆಯ ಕುಂತಳಕ್ಕೆ ಕುಂತಳದೇಶಂ' ||

ಕುಂತಳದೇಶವು ಮಧ್ಯದೇಶಕ್ಕಿಂತಲೂ, ಕಾಂಚೀದೇಶಕ್ಕಿಂತಲೂ ಮೇಲಾದುದು, ಮೇಲಾದುದನ್ನು ಮೇಲೆಂಬುದು ದೂರಿಗೆಡೆಯೇನು? ಕುಂತಳ (ಮುಂಗುರುಳು)ವು ಮಧ್ಯ ಹಾಗೂ ಕಾಂಚಿಗಳಿಗಿಂತ ಮೇಲಿರುವುದೂ, ಅದನ್ನು ಮೇಲೆನ್ನುವುದೂ ಸಹಜವೆಂದೂ ವ್ಯಂಗ್ಯವಾಗುತ್ತದೆ. ಎರಡನೆಯ ಪದ್ಯದಲ್ಲಿ ಪ್ರತಿಯೊಂದು ಶಬ್ದ ಜಾಲವನ್ನು ಸಂಸ್ಕೃತ ರೀತಿಯಲ್ಲಿ ಸಮಾಸಮಾಡಿ, ಕುಂತಳದೇಶ ಹಾಗೂ ಕುಂತಳಗಳಿಗೆ ಸಮಾನತೆಯನ್ನು ತೋರಿಸಿದೆ. 'ಮಹಿಮೆ–ಮಯ್ಮೆ'ಯೆಂಬ ರೂಪಾಂತರಗಳು ಇಲ್ಲಿವೆ. 'ಮಹಿಮೆ–ವೈಮೆ'ಯೆಂಬುದಕ್ಕಿಂತ ಈ 'ಮಯ್ಮೆ'ಯೆಂಬುದೇ ಸಾಧುರೂಪವಾಗಿರಬೇಕು!

ಕುಂತಳ ನಾಡಿನಲ್ಲಿ 'ಚಿನ್ನಪೂವೆನಿಸುವ' ಬೆಳವಲವೆಂಬ ಪ್ರದೇಶವೂ, ಆ ಪ್ರದೇಶದಲ್ಲಿ ಕೊಳನೂರ್ ಮೂವತ್ತರ ನಾಡೂ, ಅದರ ಬಳಿಯ ಹಳ್ಳಿಯಾದ **ರಿಶ್ಯಶೃಂಗ ಗ್ರಾಮವೂ** ಬಲು ಸೊಗಸಾಗಿವೆಯೆಂದಿದೆ. ಆ ಸ್ಥಳದ ಆದಿಪ್ರಪಂಚವೇನೆಂದು ವಿವರಿಸಿ ಬರೆದಿದೆ; ಅದರ ಸಾರಾಂಶವಿದು:

" ಹಿಮವತ್ಪರ್ವತ, ವಿಂದ್ಯಾಚಲ, ಕಿಷ್ಕಿಂಧಾದ್ರಿಗಳೆಂಬ ಮೂರು ಬೆಟ್ಟಗಳು ಮೂಡುಪಡುಗಡಲನಕ ಹರಡಿದ್ದುವು. ಆ ಹಿಮಾಚಲ ವಿಂದ್ಯಾಚಲಗಳಿಗಿಂತಲೂ ಕಿಷ್ಕಿಂಧ ಶೈಲವು— ಜನವಾಸಯೋಗ್ಯವಾಗಿದ್ದುದರಿಂದ—ಮೇಲೆನಿಸಿತ್ತು.! " ಈ ಒಕ್ಕಣೆ ಬಸಳ ಚೆನ್ನು. ಅಲ್ಲಿದ್ದ ಜನರಿಂದರೆ ಯಾರೆಂಬುದನ್ನು ಕವಿ ಸಂಗ್ರಹಿಸಿ ಹೇಳಿದ್ದಾನೆ:

'ತರದಿಂ ಬಾಲಿಮರುಕ್ಷಸ್ತಾಂಗದ ದಿನೇಶಾಪತ್ಯ ತಾರಾಮನೋ |
ಹರಿ ವಿಪ್ರರ್ಷಿಮತಂಗ ಹಂಸಕಪಿಲ ಶ್ರೀಶೌನಕಾಗಸ್ತ್ಯ ಸ |
ಚ್ಚರಿತೋದ್ಯಾಸಿ ವಿಭಾಂಡಕ ಪ್ರಿಯಸುತ ಶ್ರೀ ರಿಶ್ಯಶೃಂಗಬ್ರತೀ |
ಶ್ವರರ್ಗಾಯ್ತಾಶ್ರಯವಂತದೆಂಬಿನರಿಯಿಂ ಕಿಷ್ಕಿಂಧಮಂ ಬಣ್ಣಿಸಲ್'||

ಆ ಬೆಟ್ಟದ ತಪ್ಪಲು 'ಕಂದ ಮೂಲ ಫಲಸಂಕುಳ'ವಾಗಿತ್ತು, ಅಲ್ಲಿ ವಿಭಾಂಡಕನು ವಾಸವಿದ್ದನು. ಅವನ ಆಜ್ಞೆಗೆ ಹಾಗೂ ಶಾಂತಿಗೆ ಸಮರಿಲ್ಲೆಂಬುದಕ್ಕೆ ಅಲ್ಲಿಯ 'ಮಿಗ ಖಗ ಸರೀಸೃಪ ಪ್ರಾಣಿಗಳು' ನಿಸರ್ಗವೈರವನ್ನು ತೊರೆದು, ಆ ತಪ್ಪಲುಗಳಲ್ಲಿ ತಿರುಗುತ್ತಿವೆಯೆಂದಿದೆ! ಆ ಮುನಿಯ ವರ್ಣನೆಯೊಂದು ಪದ್ಯವಿದು:

"ಏಕಾಕಿ ನಿಸ್ಪೃಹಂ ಶಾಂ |
ತ್ಯಾಕರನೆನೆ ಕೂಡೆ ನೆಗಳ್ದ ಕೈವಲ್ಯಫ- |
ಲೈಕಾಂಕ್ಷೆಯಲ್ಲದನ್ಯ ಫ |
ಳಾಕಾಂಕ್ಷಯನುಳಿದು ತನ್ಮನೀಂದ್ರಂ ನೆಗಳ್ದಂ ||"

ಒಮ್ಮೆ ಆ ವಿಭಾಂಡನು ಆ ಬೆಟ್ಟದ ಅದೊಂದು ಕೊಳದಲ್ಲಿ ಸ್ನಾನಕ್ಕಾಗಿ ಹೋಗಿದ್ದನು, ಅಲ್ಲಿ 'ತನುನಿಧಾನ'ಳಾದ ಊರ್ವಶಿಯನ್ನು ಕಂಡನು ಅವನು ಅಸ್ಖಲಿತಚಿತ್ತನಾದರೂ, ಅವಳನ್ನು ಕಂಡು ರೇತಸ್ಸು ಸ್ಖಲನೆಗೊಂಡಿತು; ಅದರಿಂದ 'ನಾಚುತ್ತಾ, ಅತಿದುಃಖಾನ್ವಿತನಾಗುತ್ತಾ,' ಕಮಲದೆಲೆಯಲ್ಲಿ ಅದನ್ನು ವಹಿಸಿ ಇಟ್ಟನು. ಆ ವೀರ್ಯದಿಂದ ಋಷ್ಯಶೃಂಗನು ಹುಟ್ಟಲು ತಕ್ಕ ಪಾತ್ರವಾಗಿ, ಅದೊಂದು ಮೃಗವು ಅಲ್ಲಿತ್ತು! ಆ ಮೃಗದ ಬಗೆಗೆ ವಿಶೇಷವಾದ ಹೇಳಿಕೆಯಿಲ್ಲಿದೆ:

"ಮರೆವಿಡಿಯಾ ಭ್ರಾ(ಣಿ)ಸೆ ಮುನಿ |
ವರವೀರ್ಯವ ಮೋಘವೀರ್ಯವಪ್ಪುದರಿಂದಾ |
ಮರೆವೆಣ್ಣಿಗರ್ಭದಿಂದವ |
ತರಿಸಿದನೊರ್ವ್ವಂ ಕುಮಾರಕಂ ಶೃ(ಂ)ಗಯುತಂ ||
|| ಆಗಳೂ ||
ಪುರುಷಾಕಾರದ ರೂಪಂ |
ಮರೆಗೋಡಂ ಕಾಣಲೊಡನೆಯಾ ಮರೆವೆಣ್ಣಿ- |
ಚ್ಚರಸೆಯ ರೂಪಂ ತಳೆದಂ |
ಬರಕ್ಕೆ ಪಾರಿದು(ದು) ನಿಜನಿವಾಸಮನೆಯ್ದಲ್ ||"

ಅಲ್ಲಿದ್ದ ರೂಪಾಂತರದ ಅಪ್ಸರಸೆಯು ಆ ವೀರ್ಯವನ್ನು ಮೂಸಿ ಗರ್ಭವತಿಯಾಗಿ, ಕೋಡುಗಳು (ಶೃಂಗ) ಉಳ್ಳ ಮಗನನ್ನು ಹೆತ್ತು, ನಿಜರೂಪವನ್ನು ಧರಿಸಿ ಸ್ವರ್ಗಕ್ಕೆ ಹಾರಿದುದು ಹೇಳಿದೆ. ಇಲ್ಲಿ ರೂಪಾಂತರ, ನಿಜನಿವಾಸಗಳ ಮೇರೆಗೆ ಒಳಕತೆಯ ಹೇಳಿಕೆಗೆ ಎಡೆ ಮಾಡಿದೆ. ಆ ಅಪ್ಸರೆಯಾರೆಂದು, ರೂಪಾಂತರವೇಕೆಂದು ಇಲ್ಲಿದೆ:

(ಗದ್ಯ) "ಅದೆಂತೆಂದೊಡೆ **ಮಂಜುಘೋಷೆ**ಯೆಂಬಚ್ಚರಸೆಯೊರ್ಮೆ ರಾಗದಿಂ ರಾಗಾಂಧೆಯಾಗಿ ಶೃಂಗಿಯೆಂಬ ಬ್ರಹ್ಮರ್ಷಿಯನುಷ್ಠಾನಂ ಗೆಯ್ಯುತಿರ್ದುದನರಿಯದೆ ತಂನ ಸವಗಾಣಿಕೆಯೆರ ಸಾರಂಣ್ಗೆವೋಪ ತವಕದಿನಾ ಶೃಂಗಿಯಿಂ ಶೃಂಗಿಯಂ ಸೋಂಕುವಂತೆ ಸೋಂಕಿ ಪೋಪಾಗಳವಳ್ಗೆ ಮುನಿ ಮುನಿದು, ನೀಂ ದೆಸೆಬಿದ್ದಂ ಮರೆಯಂತೆ ಪಾಯಿ ತಂದೆಯಪ್ಪುದರಿಂ 'ಮರೆ'ಯಾಗೆಂದು ಶಾಪಮಂ ಕುಡೆ, ಕೋಪಕ್ಕಂಜಿ ಶಾಪಮಂ ಕೈಯ್ಕೊಂಡು ಮಗುಳೆ ಬಂದವರ ಪದಪದ್ಮಕ್ಕೆರಗಿಯಾನಜ್ಞಾನದಿಂ ನಿಮಮನವಜ್ಞೆಗೆಯ್ದೆನೆನ್ದಿಗೆ ವಿಶಾಪನಿಮಿತ್ತಮಂ ಬಿಸಸಿಮೆನೆ, ವಿಭಾಂಡಕಮುನಿಯ ವೀರ್ಯದ ದೆಸೆಯಿಂ ನಿನಗೆ **ರಿಶ್ಯಶೃಂಗಾನ್ವಿತ** ಮೊರ್ವ ಮಗಂ ಪುಟ್ಟಲೊಡನೆ ನಿನಗಾನಿತ್ತ ಶಾಪಂ ವಿಶಾಪವಾಗಿ

ಪುನ(ರ)ಸ್ಸಂಪತ್ತಿಯಂ ಪಡೆವೆ ಎನೆ, ಮುನಿಪ್ರಕ್ಷೋಭದಿಂ ಖೇದಮುಂ ಪುತ್ರಲೋಭದಿನತಿಪ್ರಮೋದಮುಂ ತಳೆದು, ತತ್ಸಮಯವಂ ಪಾರ್ದಿ-(ರ್ದು)ವಂತವೆಲ್ಲಂ ತನ್ನ ಬಯಕೆಯೊಡಗೂಡಿ ಕೂಡೆ ಕೃತಾರ್ಥೆ-ಯಾದಳ್."

ಇಲ್ಲಿ ಮಂಜುಘೋಷೆಯು ಜತೆಗಾರಿಣಿಯರ ಕೂಟಕ್ಕೆ ಸಾರುವ ತುರಿತದಿಂದ ಮುನಿಯನ್ನು ಸೋಂಕಿದುದು, ಅವಳಿಗೆ 'ಮರಿ'ಯಾಗೆಂದು ಶಾಪವಾದುದು, ವಿಭಾಂಡಕನ ವೀರ್ಯದಿಂದ ಅವಳಲ್ಲಿ ಮಗನು ಹುಟ್ಟುವುದೇ ವಿಶಾಪವೆಂದುದು ಪೌರಾಣಿಕ ರೀತಿಯಲ್ಲಿ ಬಂದಿದೆ. ಇದ-ರೊಂದಿಗೆ 'ಶೃಂಗಿಯಿಂ ಶೃಂಗಿಯಂ ಸೋಂಕುವಂತೆ' ಎಂದುದು ಕವಿಕೃತ ವರ್ಣನೆಯಾಗಿದೆ. ಅದೇ ತೆರದಲ್ಲಿ ಮುಂದೆ, ಮುನಿಯ ಪ್ರಕ್ಷೋಭದಿಂದ ಖೇದವೂ, ಪುತ್ರಲೋಭದಿಂದ ಪ್ರಮೋದವೂ ಆಯ್ತೆಂದುದು ಬಹಳ ಮಾರ್ಮಿಕವಾಗಿದೆ. ಹೆಣ್ಣರುಳು ಪುತ್ರನಿಗಾಗಿ ತಾನು ಅದೆಷ್ಟು ಪರಿ-ತಪಿಸುವುದು, ಹಾಗೂ ತತ್ಫಲದಿಂದ ಅದೆಷ್ಟು ಸಂತಸಗೊಳ್ಳುವುದೆಂದೂ ಸಾಮಾಜಿಕರಿಗೆ ಪ್ರತ್ಯೇಕ ಹೇಳಬೇಕಾಗಿಲ್ಲ. ಆ ಮೇರೆಗೆ ಮಂಜು-ಘೋಷೆಯು ಶಾಪದ ತಾಪನನ್ನು—ತನ್ಮೂಲಕ ಒದಗುವ ಪುತ್ರಲಾಭದ ಮೋದದಿಂದ— ತಡೆದುಕೊಂಡಳೆಂದು 'ಕೃತಾರ್ಥೆ'ಯೆಂದು, ಈ ಕವಿ ಯಾಶಯವು ಕಂಗೊಳಿಸುವುದು!

ಅಕೆ ಆ ಮಗುವನ್ನು ಹಡೆದು, ಸ್ವರ್ಗಕ್ಕೆ ಸಾರಿದಳು. ವಿಭಾಂಡ ಕನು ಇದೆಲ್ಲಾ ಅರಿತು ಅಲ್ಲಿಗೈದಿ ಮಗುವನ್ನು ರಕ್ಷಿಸಲು ತೊಡಗಿದನು. ಅವನು 'ತ್ರಿಕಾಲದರ್ಶಿ'ಯಾದುದರಿಂದ ಇಂದ್ರನನ್ನೂ ಅಶ್ವಿನೀದೇವತೆ ಗಳನ್ನೂ ಕರೆಸಿ, ನುಗುವಿಗೆ ಅವೃತವೃಷ್ಟಿಯನ್ನೂ ರೋಗ ಪೀಡಾ-ರಾಹಿತ್ಯವನ್ನೂ ಒದಗಿಸಿದನು. ಮಗುವಿದ್ದಲ್ಲಿ 'ಪದವಳೆಯೆಂದುಂ ಕುಂದದಿಷ್ಟಂತು, ರುಜಾಪೀಡೆಗಳಲ್ಲಿಯ ಜನಮನೊಂದದಿರ್ಪಂತು ಮಾಳ್ಪುದು' ಎಂದು ಕೇಳಿಸಿದನು. ಆ ಕುಮಾರನನ್ನು 'ಕುಮಾರನಂ ಪೊಲ್ತು ಶಕ್ತಿಸಂಪನ್ನನುಮತಿಪ್ರಸನ್ನನುಮಾಗೆ ಮಾಳ್ಪುದು' ಆ ದೇವತೆಗಳ ಪಾಲಿಗೆ ಬಂತು; ಹಾಗೆ ಮಾಡಿದ್ದಾಯ್ತು!

ಆ ಮಗುವು 'ಶ್ರೀಂಗಂ ಬೆರಸು ಪುಟ್ಟಿದುದರಿನೀತಂ ರಿಶ್ಯಶೃಂಗ-ನೆಂದನ್ವರ್ಥನಾಮಮನ್' ಪೊಂದಿತು. ಆ ಋಷ್ಯಶೃಂಗನನ್ನು ದಶ-ರಥನು ಕರೆಸಿ, ಪುತ್ರಕಾಮೇಷ್ಟಿಯನ್ನು ಮಾಡಿಸಿ, ರಾಮಾದಿ ನಾಲ್ವರು ಮಕ್ಕಳನ್ನು ಪಡೆದನು. (ಇಲ್ಲಿ ಆಮೊಲಾಗಿ ರೋಮಪಾದನು ತನ್ನ-ಲ್ಲಿಗೆ ಋಷ್ಯಶೃಂಗನನ್ನು ತರಿಸಿ, ಅನಾವೃಷ್ಟಿಯನ್ನು ಹೋಗಲಾಡಿಸಿ; ಶಾಂತೆಯೆಂಬ ಮಗಳನ್ನು ಕೊಟ್ಟ ಕತೆ ಹೇಳಿಲ್ಲ!)

ಶ್ರೀರಾಮಾದಿಯರು ರಾವಣವಧೆಯಾಗಿ ತಿರುಗಿ ಅಯೋಧ್ಯೆಗೆ ಬರುತ್ತಾ, 'ಕಿಷ್ಕಿಂಧಪರ್ವತೋಪಕಂಠದ ತನ್ಮುನೀಂದ್ರಾಶ್ರಮಕ್ಕೆ ಬಂದಲ್ಲಿ ನಿಜನಾಮಾಂಕಿತ ರಾಮೇಶ್ವರ ಲಕ್ಷ್ಮಣೇಶ್ವರ ಹನ್ಮಂತೇಶ್ವರಂ-ಗಳಂ ಪ್ರತಿಷ್ಠಿಸಿದರ್.'

"ಧಾತ್ರಿಯೊಳದು ಮನುಶಾಂತ |
ಕ್ಷೇತ್ರಂ **ರಿಶಿಪಳ್ಳಿ**ಯೆನಿಸಿತಿಗಳು ವೀರ |
ಕ್ಷೇತ್ರವೆನಿಸಿತ್ತು ಶತ್ರು ಕು |
ಳತ್ರಾಸಿಗೆ ಹಬ್ಬಣಂಗೆ ನೆಲೆಯಾದುದರಿಂ ||"

ಆ ರಿಶ್ಯಶೃಂಗಿ (ರಿಶಿಪಳ್ಳಿ) ಯೆಂಬುದೇ **ಸಿರಸೆಂಗಿ** ಯೆಂದು ರೂಪಾಂತರವಾದುದು ಸುಸ್ಪಷ್ಟವಾಗಿ ಕಾಣುವುದು. ಈ ಹಬ್ಬಣ-ನಾಯಕನ ವಂಶಾವಳಿಯೂ ಆ ಶಾಸನದಲ್ಲಿ ವಿವರವಾಗಿ ಬಂದಿದೆ, ದಾನವಿಷಯದ ವಿವರದೊಂದಿಗೆ ಫಲಶ್ರುತಿಯೂ ಹೇಳಿದೆ. ಈ ಕತೆ ಯನ್ನು ಬರೆದವನು ಯಾರೆಂದು, ಬರೆದ ಉದ್ದೇಶವೇನೆಂದು ಬೇರೆ ಹೇಳಿದೆ:

"ಶಾಸನಮನುಸರ್ವ ನೆವದಿಂ |
ಲೇಸೆನಿಸಿದ **ರಿಶ್ಯಶೃಂಗ ಮಹಿಮೋನ್ನತಿಯಂ** |
ಭಾಸುರಮತಿ ಬಣ್ಣಿಸಿದಂ |
ಶ್ರೀ ಸಜ್ಜನತಿಳಕನೊಸೆದು ಪೊಸಗನ್ನಡದಿಂ ||"

ಈ 'ಸಜ್ಜನತಿಳಕ'ವೆಂಬುದು ಬೇರೆಡೆಗಳಲ್ಲಿಯೂ ಕಾಣುವಂತಿದೆ ಯಾದರೂ ಆವೊಬ್ಬ ಕವಿಯೆಂಬ ನಿರ್ಧಾರವಾಗುವಂತಿಲ್ಲ; ಇವನ ಇತರ ಕೃತಿಗಳ ವಿಚಾರವೂ ವಿವೇಚನೀಯವದೆ. ಈ ಶಾಸನದ ಕಾಲವು ಕ್ರಿಸ್ತಾಬ್ದ ಹನ್ನೆರಡನೆಯ ಶತಕವು; ಆದಾಗಲೇ 'ಪೊಸಗನ್ನಡ'ವು ತಲೆ ದೋರಿತ್ತೆಂದೂ, ಕನ್ನಡ ಸಾಹಿತ್ಯಕೃತಿಗಳ ವೀಕ್ಷಕರು 'ಇಂತಹ ವಿಭಾಗವು ಅಷ್ಟು ಸಲ್ಲ'ದೆಂಬುದು ಅನಾಧಾರವೆಂದೂ ಇಲ್ಲಿ ಹೇಳದಿರ ಲಾರೆವು.

ಕೊನೆಮಾತು : ವಾಲ್ಮೀಕಿ ರಾಮಾಯಣ ಹಾಗೂ ತೊರವೆ ಯವನ ಕನ್ನಡ ರಾಮಾಯಣಗಳಲ್ಲಿ ಋಶ್ಯಶೃಂಗನ ಕತೆ ಬಂದಿದೆ. ಆದರೆ, ಆ ಜಂಕೆಯ ಹುಟ್ಟಿನ ಹಿನ್ನೆಲೆ ಹೇಳಿಲ್ಲ. ಕನ್ನಡದ ಪ್ರತಿಯೊಂದು ಎಡೆಗಳಲ್ಲೂ ರೂಢಿಯಾಗಿರುವ ಸ್ಥಳಮಹಿಮೆಗೆ ನಾವು ತುಸು ಗಮನಿ-ಸುವುದು, ಸಾಹಿತ್ಯಾಭಿಜ್ಞ ಕನ್ನಡಿಗರಾದ ನಮ್ಮ ಕರ್ತವ್ಯವಾಗಿದೆ.... 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬಂತೆ, ತಾಯಿ ಹಾಗೂ ಹುಟ್ಟೂರುಗಳ ಬಗ್ಗೆ ಸದಭಿಮಾನವು— ಇತರ ಪ್ರಾಂತೀಯ ರಾತಿ— ಕನ್ನಡಿಗರಲ್ಲಿ ಇನ್ನೂ ಹೆಚ್ಚು ಮೂಡಿ ನೆಲೆಗೊಳ್ಳಬೇಕು; ಇಂತಹ ಪುರಾವೆಗಳನ್ನು ನಾವು ಆ ಬಗ್ಗೆ ಅವಶ್ಯ ಓದಿಕೊಳ್ಳಬೇಕು! 'ಕನ್ನಡಿಗರು ಯಾವ ನೆಲದಲ್ಲಿದ್ದರೂ, ಕನ್ನಡತನವನ್ನು ಮರೆಯ ಬಾರದೆಂದು' ಗ್ರಂಥಗಳಲ್ಲೂ ಶಾಸನಗಳಲ್ಲೂ ಅದರ ವರ್ಣನೆ ವೈವಿಧ್ಯ ದಿಂದ ವರ್ಣಿಸಲಾಗಿದೆ! ನಮ್ಮ ಕವಿತಾಶಕ್ತಿಯನ್ನೂ, ನೈತಿಕ ರೀತಿ ಯನ್ನೂ, ಭಾವುಕತೆಯನ್ನೂ, ಸುಖಜೀವಿಕೆಯನ್ನೂ ಸಾಧಿಸಲು ಇವು ಪ್ರೇರಕವಾಗಿವೆ!

ಆಗಸ್ಟ್ ಹದಿನೈದು

' ಮಾಲತೀಪ್ರಿಯ ', ಬೆಳಗಾಂವಿ

ಆಗಸ್ಟ್ ಹದಿನೈದು:
ಭಾರತದ ಭಾಗ್ಯ ಭುವಿಗಿಳಿದುದಂದು—
ಭಾರತದ ಭವ್ಯತೆಯ ಕನಸ ಕಾಣುತಲಂದು
ಹಾಗೆಯೇ ಒರಗಿದ್ದೆ; ಕಂಡಿದ್ದೆ ಕನಸೊಂದು.
ಕನಸು—ಅಲ್ಲಲ್ಲ ನನಸು.
ನಾವ್ ಬೆಳೆದ ಬೆಳಸು
ಅಂದು:—
ಬೇಡಿದೆವು ದೇವನನು ಸ್ವಾತಂತ್ರ್ಯ ಭಿಕ್ಷೆ;
ಕೋಟಿ ಪ್ರಜೆಗಳು ಸೇರಿ ಮನವ ಹದಗೊಳಿಸಿ
ಒಂದುರದಿ ಕೂಗಿದೆವು—ಹಾಡಿದೆವು.
' ಜನಗಣಮನ ಅಧಿನಾಯಕ ಜಯಹೇ '
ಗಗನ ಬೇಧಿಸಿ ಹೊರಟಿತ್ತು ತಾರಕಾಮಂಡಲಕೆ
ತಾವೆಂದ ಹಿಂಮಂತ್ರ; ಸ್ವಾತಂತ್ರ್ಯ ತಂತ್ರ.
ಕುಂಬಿರುವ ನಾವೆಗಳು ಸಾಗರವ ಸಂಸುತಲಿ
ಸಾಗಿದುವು ಪಶ್ಚಿಮಕೆ; ತಮ್ಮ ನೆಲೆಯೆಡೆಗೆ.
ಸ್ವಾತಂತ್ರ್ಯ ಮುದ್ದುಮಗು ಕೈಮಾಡಿ ತೋರಿಸಿತು—
ಮುಗುಳ್ನಗುತ, ಪ್ರೇಮದಲಿ ಹೊರಟ ನಾವೆಯೆಡೆ;
ಟಾಟಾ.... ಟಾಟಾ.... ಬಾಯ್ ಬಾಯ್.

ಗತಿಸಿದುವು ವರುಷ ಹನ್ನೆರಡು
ಅನುಭವಿಸಿ ಸುಖ-ದುಃಖವೆರಡೂ....
ಶಾಂತಿ ಸತ್ಯದ ಮಂತ್ರ ಹೇಳಿರುವ ತಾತ
ಸ್ವರ್ಗದಲಿ ನಿಂತು ಸಂದೇಶ ನೀಡುತಿಹ—
ಹರಸುತಿಹ ' ಸೊಗದಿ ಬಾಳಿರೆನುತ '
ಇನ್ನಿಲ್ಲ ವಲ್ಲಭನು ಅಳುವಾದ ಕಿಡವಾಯಿ
ದಾರಿಕಾಣದೆ ಅಳುತಿದ್ದ ಭಾರತದ ಬಡಪಾಯಿ.
ನೆಹರು ವಹಿಸಿದನು ಸ್ವಾತಂತ್ರ್ಯಸಾರಥ್ಯ.
ಎಡೆಯಿರದೆ ಸಾಗಿಹುದು ನೆನೆದು ಬಾಂಧವ್ಯ.
ಬರುತಿಹುದು ಭಾರತದ ಬಂಗಾರಯುಗವು.
ಎಲ್ಲೆಲ್ಲು ಸೊಗವು; ನಲಿವು.
ಬರುತಿಹುದು ಯೋಜನೆಯು ಒಂದು ಮೇಲಿನ್ನೊಂದು.
ಬಡಜನರ ಕಣ್ಣೀರನೊರೆಸಲೆಂದು;
ದೀನದಲಿತರ ಸೇವೆಗೆಯ್ಯಲೆಂದು!

ವರುಷದಲ್ಲೊಂದು ಸಲ ಕಳ್ಪದೇ ಬರುತಿಹುದು
ಸ್ವಾತಂತ್ರ್ಯದುತ್ಸವ; ಮಂಗಲ ಪ್ರಭಾತ.
ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ
ಎಲ್ಲೆಲ್ಲು ತಳಿರು— ತೋರಣ-ಹೂಮಾಲೆ,
ಸಂಜೆಗೆಲ್ಲೆಲ್ಲೂ ದೀಪದಾರತಿ ಸಾಲೇ!
ಎಲ್ಲೆಲ್ಲೂ ದೀಪ-ಧೂಪ.
ಕಾಂತಿಮಯವಹುದು ಆ ದಿನದ ರಾತ್ರಿ.
ಅದುನೋಡು ಅಪಶಕುನ
ರಸದಲ್ಲಿ ವಿರಸ;
ಎರಗುತಿದೆ ಉಲ್ಕೆ ಭೂಮಿಗೊಂದು—
ಭಾರತದ ಹೃದಯಕೊಂದು;
ಏನಿದರ ಭಾವ? ಅರ್ಥವೇನಿದಕೆ?
ಊರಹೊರಗಿನ ದೂರ ಕಟ್ಟೆಯೊಂದರ ಮೇಲೆ
ಕುಳಿತಿದ್ದ ಭಿಕ್ಷುವೊಬ್ಬ—ಹಾಡಿದ್ದ ಹಾಡನೊಂದ!
ಅವನುಡಿದ ಸೊಲ್ಲು....
" ದ್ವೇಷ ಮತ್ಸರ ಅಳಿದು ಬಾಳಿ,
ಶಾಂತಿ ಸಂದೇಶ ಕೇಳಿ "
ಕೊನೆಗೊಮ್ಮೆ ನುಡಿದ—
" ನಿಮ್ಮಗೋರಿಯ ನೀವು ತೋಡಬೇಡಿ "
ಕೇಳಿಸಲೆ ಇಲ್ಲ ಅವ ನುಡಿದ ಸೊಲ್ಲು—
ಉತ್ಸವದ ಅಬ್ಬರದಿ— ಉಬ್ಬಸದಿ;
ಸ್ವಾತಂತ್ರ್ಯ ದಿನ—
ಭಾರತದ ಉದ್ದಗಲ—ಅಗಲದಲಿ
ಬರಲಿ ದಿನಕೊಂದು—ಮನಕೊಂದು;
ಕಲಿಸಿರಲಿ ಪ್ರೇಮಪಾಠ
ಹಾಡಿರಲಿ ಶಾಂತಿಗೀತ;

ಕನಸು ಒಡೆಯಿತು, ದೂರದಲಿ ಕೇಳಿತ್ತು.
ನಾನೆನೆದ ಶಾಂತಿಗೀತ;
ಭಾರತದ ವೇದವಾಕ್ಯ—
" ಭಾರತ ಭಾಗ್ಯವಿಧಾತಾ...."
ವಂದೇಮಾತರಂ ಮಧುರಗಾಥಾ
ಭಾರತಿಯು ಸಸ್ಮಿತಳು
ತ್ರಿರಂಗ ನೆರಳಿನೊಳು—
ಕೊನೆಗೆ ನಾನೊಮ್ಮೆ ನುಡಿದೆ:
ಆನಂದದಲಿ— ಸ್ಫೂರ್ತಿಯಲಿ
" —ಜೋಲೋ ಭಾರತಮಾತಾಕೀ ಜೈ "

ಗುಂಡೂಮಾಮಾನ ಗೋಷ್ಠಿ

ಪುರಾತನ ಕಾಲದಲ್ಲಿ ಆಸಾಮು

(ಪ್ರದೇಶ ಪರಿಚಯ)

ಶ್ರೀ. ಪಿ. ವಿ. ಗುಡಿ, ಗೋಹಾಟಿ (ಆಸಾಮ್)

ಇಂದಿನ ಸ್ವತಂತ್ರ ಭಾರತದಲ್ಲಿ ಅತಿಪೂರ್ವದ ರಾಜ್ಯವೆನಿಸಿಕೊಳ್ಳುವ ಆಸಾಮ್ ಪ್ರಾಂತವು, ಪೌರಾಣಿಕ ಕಾಲದ ಕಾಮರೂಪದೇಶ. ಪುರಾಣದಲ್ಲಿ ಪ್ರಸಿದ್ಧವಾಗಿ ಇರುವ ಅನೇಕ ಘಟನೆಗಳೂ ವ್ಯಕ್ತಿಗಳೂ ಆಸಾಮುದಲ್ಲಿಯೆ ಆಗಿರುವುವೆಂದು ಅಲ್ಲಿಯ ಪರಂಪರೆಯ ಸಂಬುಗೆ.

"'ಸೇವೆಯಿಂದವೆ ಕಷ್ಟವಿನ್ನೊಂದಿಲ್ಲ....' ಎಂದು ಸೇವಾಗ್ರಣಿಯಾದ ಹನುಮಂತನೇ ಉದ್ಗಾರ ತೆಗೆದನಂತೆ. ಶ್ರೀರಾಮಚಂದ್ರನೊಬ್ಬನ, ಒಬ್ಬನೇ ಒಡೆಯನ ಸೇವಕನೇ ಹೀಗೆಂದ ಬಳಿಕ, ಈ ಸರಕಾರೀ ನೌಕರದಾರರ ಅವಸ್ಥೆ ಹೇಗಿರಬೇಡ! ಇವರಿಗೆ ಒಡೆಯರು ಒಬ್ಬರೇ ಅಲ್ಲ, ಎಷ್ಟೋ ಜನರು. ಅವರೆಲ್ಲರಿಗೂ ಜೀಕಾಗುವಂತೆ ನಡೆದುಕೊಳ್ಳಬೇಕು. ಕೇಂದ್ರ ಸರಕಾರದ ನೌಕರಿಯಲ್ಲಿದ್ದವರ ಪಾಡಂತೂ ತುಂಬ ಕಷ್ಟಕರವಾದದ್ದು. ಉಳಿದದ್ದೇನೇ ಇರಲಿ, ಒಂದು ಸ್ಥಳದಲ್ಲಿ ಹಾಯಾಗಿ ಕೆಲವು ದಿವಸ ಇರಬೇಕೆಂದರೆ ಅದು ಕೂಡ ಸಾಧ್ಯವಿಲ್ಲ. ಇವೊತ್ತು ಒಂದು ಪ್ರಾಂತದಲ್ಲಿದ್ದರೆ ನಾಳೆ ಮತ್ತೊಂದು; ಮೈಸೂರು, ಮುಂಬಯಿ, ಪಂಜಾಬ ಪ್ರಾಂತಗಳ ನಂತರ, ಈಗ ಆಸಾಮುದ ಪಾಳಿ. ನದಿ, ಮಹಾನದಿ, ಮಹಾನದಗಳನ್ನೂ, ಪರ್ವತ ಗಿರಿ ಕಂದರಗಳನ್ನೂ ದಾಟಿ, ೨-೩ ಸಾವಿರ ಮೈಲುಗಳಾಚೆ ಹೋಗಬೇಕು. ಬೇರೆ ಬೇರೆ ಸ್ಥಳಗಳನ್ನು ನೋಡಬೇಕೆಂಬ ಇಚ್ಛೆ ನನಗೆ ಮೊದಲಿನಿಂದಲೂ ಸಾಕಷ್ಟಿದೆ. ನೋಡುವುದಕ್ಕೆಂದು ಎಲ್ಲಿಗಾದರೂ ಕೆಲವು ದಿವಸಗಳ ಮಟ್ಟಿಗೆ ಹೋಗಿ ಬರಬಹುದು; ಆದರೆ ಸಾವಿರಾರು ಮೈಲು ದೂರ ಹೋಗಿ ಅಲ್ಲಿಯೇ ೨-೩ ವರ್ಷ ಇರುವುದೆಂದರೆ....."

ಮುಂಜಾನೆಯಿಂದಲೂ ಇನ್ನೆಲ್ಲ ಯೋಚನೆಗಳಿಂದ ಮನಸ್ಸಿನ ಶಾಂತತೆ ಕದಡಿದಂತಾಗಿತ್ತು. ಸಂಜೆ ನೋಡಕವಿದು ಮಳೆ ಬರುವಂತೆ ತೋರುತ್ತಿದ್ದರೂ, ಗುಂಡೂಮಾಮಾ ಒಬ್ಬರಾದರೂ ಮನೆಯಲ್ಲಿ ಸಿಗಬಹುದೆಂದು ಅವರ ಮನೆಯ ಕಡೆಗೆ ನಡೆದೆ.

ಶಾಸ್ತ್ರಿ, ಗುಂಡೂಮಾಮಾ ಏನೋ ಹರಟೆ ಹೊಡೆಯುತ್ತ ಕುಳಿತಿದ್ದರು. "ಹಾಗಾದರೆ ಈ ಸಾರೆ ಶ್ರೀಗಳವರು ಚಾತುರ್ಮಾಸದಲ್ಲಿ ಎಲ್ಲಿ ಕೂಡುವರಿದ್ದಾರೆ?' ಎಂದು ಗುಂಡೂಮಾಮಾ ಕೇಳುತ್ತಿದ್ದರು.

'ಯಾವ ಶ್ರೀಗಳವರು? ಎಲ್ಲಿಯ ಚಾತುರ್ಮಾಸ?' ಎಂದು ಕೇಳುತ್ತ ನಾನೂ ಹೋಗಿ ಕುಳಿತುಕೊಂಡೆ.

"ಇಷ್ಟೂ ಗೊತ್ತಿಲ್ಲವೆ ನಿನಗೆ? ಈ ನಾಲ್ಕು ತಿಂಗಳು ಶ್ರೀಗಳವರು ಒಂದೇ ಊರಿನಲ್ಲಿರುತ್ತಾರೆ. ದಿನಾಲೂ ಪುರಾಣ ಪುಣ್ಯಕಥಾಶ್ರವಣ ನಡೆಯುತ್ತಿರುತ್ತವೆ" ಎಂದು ಶಾಸ್ತ್ರಿ ನುಡಿದ.

ಗುಂಡೂಮಾಮಾ ನನ್ನ ಕಡೆಗೆ ತಿರುಗಿ ಹೇಳಿದರು: "ಯತಿಗಳು-ಸಂನ್ಯಾಸಿಗಳು ಯಾವಾಗಲೂ ಒಂದೇ ಸ್ಥಳದಲ್ಲಿರಬಾರದೆಂಬುದು ಅವರ ನಿಯಮ. ಯಾವಾಗಲೂ ಊರಿಂದೂರಿಗೆ ಅಡ್ಡಾಡುತ್ತಲೇ ಇರಬೇಕು. ಒಂದೇ ಸ್ಥಳದಲ್ಲಿ ಹೆಚ್ಚು ದಿವಸ ಇರುವುದರಿಂದ, ಅಲ್ಲಿಯ ಜನರೊಡನೆ ಬರುವ ನಿಕಟಸಂಬಂಧದ ಮೂಲಕವಾಗಿ, ಆ ಸ್ಥಳದ ಬಗ್ಗೆ ಒಂದು ತರದ ಮೋಹ ಹುಟ್ಟುತ್ತದೆ. ಯೋಗಿಗಳು ಈ ಮೋಹದಿಂದ ದೂರವಾಗಿರತಕ್ಕದ್ದು. ಅದಕ್ಕೆಂತಲೇ ಯತಿಗಳು ಈ ನಿಯಮವನ್ನು ಅನುಸರಿಸುವುದು. ಅದರೆ ಮುಳಿಗಾಲದ ಈ ನಾಲ್ಕು ತಿಂಗಳು, ಅಡ್ಡಾಡುವುದಕ್ಕೆ ತೊಂದರೆಯೆಂದಿರಬಹುದು,— ಒಂದೇ ಸ್ಥಳದಲ್ಲಿದ್ದುಕೊಂಡು, ಉಳಿದ ಯತಿಗಳೊಂದಿಗೆ ವೇದ-ಪುರಾಣ, ಕಥಾಶ್ರವಣಗಳಲ್ಲಿ ಕಾಲಕಳೆಯಬೇಕೆಂಬ ನಿಯಮವಿದೆ. ಅದೇ ಈ ಚಾತುರ್ಮಾಸ್ಯ."

'ಹಾಗಾದರೆ ನಾವು— ಸರಕಾರೀ ನೌಕರದಾರರು ಈ ಯತಿಗಳಿಗಿಂತ ಒಂದು ಹೆಜ್ಜೆ ಮುಂದೆ' ಎಂದು ನಾನು ಹೇಳಿದೆ. 'ಇವರು ಮಳೆಗಾಲದ ನಾಲ್ಕುತಿಂಗಳಾದರೂ ಒಂದೇ ಸ್ಥಳದಲ್ಲಿ ಇರುತ್ತಾರಲ್ಲವೇ? ನಮಗೆ ಮಳೆಗಾಲವೇ ಇರಲಿ, ಬೇಸಗೆಯೇ ಇರಲಿ, ಹೊರಡಲೇ ಬೇಕು. ಸರಕಾರವೂ ಸಹ ನಮ್ಮೆಲ್ಲರನ್ನೂ ಯೋಗಿಗಳನ್ನಾಗಿ ಮಾಡಲಿಕ್ಕೆ ಪ್ರಯತ್ನಿಸುವಂತಿದೆ.'

'ಇದು ನಿಮ್ಮ ಕರ್ಮದ ಫಲ' ಎಂದು ಶೀನಪ್ಪ ನಗುತ್ತ ನುಡಿದ. 'ನೀವು ಡ್ಯೂಟಿ— ಕರ್ತವ್ಯ—ಮಾಡುವಾಗ, ಕರ್ಮಯೋಗಿ

ಳಂತೆ ಅದರಲ್ಲಿ ಎಷ್ಟೂ ಆಸಕ್ತಿಯನ್ನು ತೋರದೆ, (without aking any interest) ಮುಂಜಾನೆ ಹತ್ತು ಹೊಡೆದ ನಂತರವೇ ಳಿಸೀಸಿಗೆ ಹೋಗಿ, ಸಂಜೆ ೫ ಗಂಟೆಯಾದೊಡನೆ ಹೊರಗೆ ಬರುತ್ತೀರಿ. ಈ ಕರ್ಮಯೋಗಿಗಳ ಮಾರ್ಗ ನೀನೇ ಅನುಸರಿಸಲಿಕ್ಕೆ ಪ್ರಾರಂಭಿಸಿದಿರಲ್ಲವೇ ? ಒಂದನ್ನು ಅನುಸರಿಸಿ ನುತ್ತೊಂದನ್ನು ಬಿಡಬೇಕೇಕೆ ?'

ಅದೇ ವೇಳೆಗೆ ರಂಗಣ್ಣ ಕಿಟ್ಟು ಬಂದರು. ಗುಂಡೂಮಾಮಾ ನನ್ನ ಕಡೆಗೆ ತಿರುಗಿ 'ಏನು ವಿಶೇಷ ? ಎಲ್ಲಿಗೆ ಹೋಗಬೇಕೀಗ ?' ಎಂದು ಕೇಳಿದರು.

ನಾನು ಹೇಳಿದೆ 'ಆಸಾಮಕ್ಕೆ ವರ್ಗವಾಗಿದೆ. ಸದ್ಯಕ್ಕೆ ಗೌಹಾಟಿಗೆ ಹೋಗಬೇಕು.'

'ಸ್ಥಳವು ಚೆನ್ನಾಗಿದೆಯೆಂದು ೨-೩ ವರ್ಷಗಳ ಹಿಂದೆ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಹೋಗಿ ಬಂದ ನನ್ನ ಅನೇಕ ಜನ ಮಿತ್ರರು ಹೇಳಿದ್ದಾರೆ....ಆದರೆ ದೂರವೆನ್ನುವುದಿಷ್ಟೆ' ಎಂದರು ಗುಂಡೂಮಾಮಾ. 'ಆ ಅಧಿವೇಶನದ ನಂತರ ಈ ೨ ವರ್ಷಗಳೊಳಗೆ ಆ ಪಟ್ಟಣದಲ್ಲಿ ನಾನಾತರದ ಸುಧಾರಣೆಗಳನ್ನು ಮಾಡಿದ್ದಾರೆಂದು ಕೇಳಿದ್ದೇನೆ.'

'ಗೌಹಾಟಿ ಎಂದೆನ್ನಬೇಡ. ಅಷ್ಟು ದೂರದ ಊರಿಗೆ ಅಷ್ಟು ಚಿಕ್ಕ ಹೆಸರೇ ? ಅಧಿವೇಶನದ ಕಾಲಕ್ಕೆ ಅದಕ್ಕೆ ಏನು ಹೆಸರು ಕೊಟ್ಟಿದ್ದರು ನೆನಪಿದೆಯೇ ? 'ಪ್ರಾಗ್ಜ್ಯೋತಿಷ್ಪುರ'— ಎಂದು ಶೀನಪ್ಪ ನಗುತ್ತ ನುಡಿದ.

'ನಗಲಿಕ್ಕೇನಾಯಿತು ? ಅದು ಮಹಾಭಾರತದ ಕಾಲಕ್ಕೆ ಪ್ರಾಗ್ಜ್ಯೋತಿಷ್ಪುರವೆಂದೇ ಹೆಸರಾಗಿತ್ತು. ಅದು ಕಾಮರೂಪ ರಾಜ್ಯದ—ನರಕಾಸುರನ ರಾಜಧಾನಿ—ಪ್ರಾಗ್ಜ್ಯೋತಿಷ್ಪುರ- ಅಂದರೆ City of Eastern Lights. ಬ್ರಹ್ಮನು ನಕ್ಷತ್ರಗಳನ್ನು ಇಲ್ಲಿಯೇ ಹುಟ್ಟಿಸಿದನೆಂದು ಹೇಳಲ್ಪಟ್ಟಿದೆ. ಮತ್ತು ಈ ಸ್ಥಳ ಜ್ಯೋತಿಷ ಮುಂತಾದ ವಿಷಯಗಳನ್ನು ಅಭ್ಯಾಸಿಸುವ ಕೇಂದ್ರಸ್ಥಳವಾಗಿತ್ತು. ಅಲ್ಲಿರುವ ನನಗ್ರಹಗಳ ಗುಡಿಯೇ ಇದಕ್ಕೆ ಸಾಕ್ಷಿಯಾಗಿದೆ' ಎಂದು ಶಾಸ್ತ್ರಿ ನುಡಿದ.

'City of Eastern Lights ಆಗಲಿ ಇಲ್ಲವೆ City of western Lights ಆಗಲಿ; ಆದರೆ ಒಂದು ವಿಷಯ ಮಾತ್ರ ಎಚ್ಚರಿಕೆಯಿಂದ ಇರು' ಎಂದು ಶೀನಪ್ಪ ಪ್ರಾರಂಭಿಸಿದ. 'ಆಸಾಮವು ಪೂರ್ವಕಾಲದಿಂದಲೂ ಮಂತ್ರ-ತಂತ್ರಗಾರರಿಂದ ತುಂಬಿದೆಯೆಂದು ಕೇಳಿದ್ದೇನೆ. ಅಲ್ಲಿಗೆ ಹೋದವರು ತಿರುಗಿ ಬರುವುದೇ ಅಪರೂಪವಂತೆ. ಯಾರಾದರೂ ಅಲ್ಲಿಗೆ ಹೋದರೆ ಮಾಟ-ಮಂತ್ರಗಳಿಂದ ಆಡು-ನಾಯಿಗಳಾಗಿಯೋ, ಬಿಗರೆ, ಬೆಕ್ಕುಗಳಾಗಿಯೋ ಅಲ್ಲಿಯೇ ಇರಬೇಕಾಗುತ್ತದಂತೆ.'

ಶಾಸ್ತ್ರಿ ಏನೋ ಹೇಳುವುದರಲ್ಲಿದ್ದ. ಅಷ್ಟರಲ್ಲಿ ಗುಂಡೂಮಾಮಾ ನಡುವೆಯೇ ತಡೆದರು. 'ನೀವೀಗ ಹೇಳಿದ್ದು ನಿನ್ನು ಅಭಿಪ್ರಾಯವೆಂದಷ್ಟೇ ಅಲ್ಲ. ಭಾರತದ ಬಹುಜನರಿಗೆ ಆಸಾಮದ ಬಗ್ಗೆ ಗೊತ್ತಿದ್ದದ್ದು ಅಷ್ಟೆ. ನನಗೆ ಗೊತ್ತಿದ್ದದ್ದೆಂದರೆ ಜಗತ್ತಿನಲ್ಲಿಯೇ ಅದು ಅತಿ ಹೆಚ್ಚಾಗಿ ಮಳೆಬೀಳುವ ಪ್ರದೇಶ; ಇಲ್ಲವೆ ಇಂದ್ರಜಾಲ, ಮಹೇಂದ್ರಜಾಲ, ಮಂತ್ರ-ತಂತ್ರವಾದಿಗಳಿದ್ದ ದೇಶವೆಂದು. ಇದಕ್ಕೂ ಹೆಚ್ಚಾಗಿ ಗೊತ್ತೂ ಇಲ್ಲ; ಮತ್ತು ಗೊತ್ತುಮಾಡಿಕೊಳ್ಳಲಿಕ್ಕೆ ಹೋಗಿಯೂ ಇಲ್ಲ.'

'ಅದಕ್ಕೆ ಕಾರಣವಿಲ್ಲದಿಲ್ಲ' ಎಂದು ರಂಗಣ್ಣ ನುಡಿದ. ಈ ಪ್ರಾಂತ ಭಾರತದ ಒಂದು ಮೂಲೆಗೆ ಸಾವಿರಾರು ಮೈಲು ದೂರದಲ್ಲಿದೆ. ಇದು- ಈ ಪ್ರಾಂತವೆಂದರೆ ದುರ್ಗಮವಾದ ಗುಡ್ಡ-ನದಿಗಳಿಂದಲೇ ಕಟ್ಟಿದಂತಾಗಿದೆ. ಇದರಿಂದಾಗಿ ಹೋಗಿ ಬರುವ ಸಾಧನಗಳಾದ ರೈಲು-ಮೋಟರುಗಳು ಸಾಕಷ್ಟಿಲ್ಲ. ಮಳೆಗಾಲದಲ್ಲಿಯಂತೂ ಮಹಾಪೂರಗಳ ಮೂಲಕ, ಹೋಗಿ ಬರುವುದಿಷ್ಟೇ ಅಲ್ಲ, ಅಲ್ಲಿಯ ಸುದ್ದಿ ತಿಳಿಯುವುದು ಕೂಡ ಕಠಿಣವಾಗುತ್ತದೆ.'

'ಈ ಇಪ್ಪತ್ತನೆಯ ಶತಮಾನದಲ್ಲಿ—ಮೋಟರು, ಉಗಿಬಂಡಿ, ವಿಮಾನಗಳ ಯುಗದಲ್ಲಿಯೇ ಆಸಾಮಕ್ಕೆ ಹೋಗಿಬರುವುದು ಕಠಿಣವೆಂದು ಅನ್ನುತ್ತಿ. ಆದರೆ Bullock-Cart Age ಎಂದು ಹೀಯಾಳಿಸಲ್ಪಡುತ್ತಿರುವ ಕಾಲದಲ್ಲಿ ನಮ್ಮ ಪೂರ್ವಜರು ಹೇಗೆ ಮಾಡುತ್ತಿದ್ದರೆಂದು ಯೋಚಿಸಿರುವೆಯಾ ?' ಎಂದು ಶಾಸ್ತ್ರಿ ಪ್ರಾರಂಭಿಸಿದ. 'ಮಹಾಭಾರತದ ಕಾಲದಲ್ಲಿ ಇದು ಕಾಮರೂಪವೆಂದು ಒಳ್ಳೇ ಪ್ರಸಿದ್ಧವಾದ ರಾಜ್ಯವಾಗಿದ್ದು, ನರಕಾಸುರನು ಅಲ್ಲಿ ರಾಜನಾಗಿದ್ದ. ಆತನನ್ನು ಕೃಷ್ಣನು ಕೊಂದದ್ದು, ಮತ್ತು ಅದರ ನೆನಪಿಗಾಗಿ ಭರತ ಖಂಡದ ಜನರೆಲ್ಲರೂ ಆ ದಿವಸವನ್ನು ದೊಡ್ಡ ಹಬ್ಬವನ್ನಾಗಿ ಆಚರಿಸುತ್ತಿರುವುದು ಎಲ್ಲರಿಗೂ ಗೊತ್ತಿದ್ದ ವಿಷಯ. ಆ ದಿವಸವೇ ನರಕ ಚತುರ್ದಶಿ; ಅಂದಿನಿಂದಲೇ ದೀಪಾವಳಿ ಹಬ್ಬದ ಪ್ರಾರಂಭ. ಆ ನರಕಾಸುರನನ್ನು ಕೊಲ್ಲುವುದಕ್ಕಾಗಿ ದ್ವಾರಕಾಧೀಶನಾದ ಶ್ರೀ ಕೃಷ್ಣನು, ಪಶ್ಚಿಮದ ಆಚೆಯ ತುದಿಗಿರುವ ದ್ವಾರಕೆಯಿಂದ ಪೂರ್ವದ ಈ ಕೊನೆಗಿರುವ ಆಸಾಮಕ್ಕೆ ಹೇಗೆ ಬಂದ ? ರುಕ್ಮಿಣಿಯ ಸ್ವಯಂವರದ ಕತೆ ಗೊತ್ತಿರಬಹುದು. ಅವಳ ತಂದೆಯ ರಾಜ್ಯ ಕುಂಡಿಲ ದೇಶ—ಈಗಿನ ನದಿಯಾ ಜಿಲ್ಲೆ—ಆಸಾಮದ ಮಧ್ಯದಲ್ಲಿದೆ. (ಈಗಲೂ ಕೂಡ ಅಲ್ಲಿ ವಾಸಿಸುವ ನಿಶ್ಕಿ ಗುಡ್ಡದ ಜನರು, ರುಕ್ಮಿಣಿಯು ತಮ್ಮ ವಂಶಜವಳೆಂದು ಹೇಳಿಕೊಳ್ಳುತ್ತಾರಂತೆ). ರುಕ್ಮಿಣಿಯನ್ನು ಶಿಶುಪಾಲನಿಗೆ ಲಗ್ನ ಮಾಡಿಕೊಡಬೇಕೆಂಬ ಅವಳಣ್ಣ ನಿಶ್ಚಯಿಸಿದೊಡನೆ, ಅವಳು ಕೃಷ್ಣನಿಗೆ ಹೇಳಿಕಳುಹಿದಳಂತೆ; ಕೃಷ್ಣನು ಆಜ್ಞೆಯನ್ನು ಕೇಳಿದೊಡನೆ ಅಲ್ಲಿಗೆ ಬಂದು, ಶಿಶುಪಾಲ ಮುಂತಾದವರನ್ನೆಲ್ಲ ಸೋಲಿಸಿ, ರುಕ್ಮಿಣಿಯೊಡನೆ ದ್ವಾರಕೆಗೆ ಹೋದನಂತೆ.... ಅಷ್ಟು ಅಲ್ಪಾವಧಿಯಲ್ಲಿ ರುಕ್ಮಿಣಿಯ ದೂತರು ದ್ವಾರಕೆಗೆ ಹೋದದ್ದು ಹೇಗೆ ? ಕೃಷ್ಣನು ಬಂದದ್ದು ಹೇಗೆ ? ಆಗ ವಿಮಾನ ರೇಡಿಯೋ ಮುಂತಾದುವುಗಳು ಇದ್ದಿರಲಿಲ್ಲವಷ್ಟೇ ? ಇದನ್ನೂ ಬಿಡು. ಉಷಾಹರಣದ ವಿಷಯ ಹೇಗೆ ? ಬಾಣಾಸುರನು ಇದ್ದದ್ದು 'ಸೋನಿತಪುರ'— ಈಗಿನ ತೇಜಪುರದಲ್ಲಿ (ಅವನು ಕಟ್ಟಿಸಿದ ಮಹಾಭೈರವನ ಗುಡಿ ಅಲ್ಲಿ ಇನ್ನೂ ಆದೆಯಂತೆ). ಅವನ ಮಗಳಾದ ಉಷಾ, ಶ್ರೀಕೃಷ್ಣನ ಮೊಮ್ಮಗ

ಅನಿರುದ್ಧನಲ್ಲಿ ಅನುರಕ್ತಳಾಗಿದ್ದಳು. ಅವಳ ಸ್ನೇಹಿತಳಾದ ಚಿತ್ರಲೇಖೆಯು ದ್ವಾರಕೆಯಿಂದ ಅನಿರುದ್ಧನನ್ನು ಒಂದೇ ರಾತ್ರಿಯಲ್ಲಿ ಹೇಗೆ ಕರೆತಂದಳು? ಆಗ ಬ್ರಹ್ಮಪುತ್ರಾ ನದಿಯು ಇದ್ದಿರಲಿಲ್ಲವೇ? ಈ ಗುಡ್ಡಗಳು ಇರಲಿಲ್ಲವೇ? ಇವೆಲ್ಲ ಸಂಗತಿಗಳು ಏನು ತೋರಿಸುತ್ತವೆ? ೨-೩ ಸಾವಿರ ವರ್ಷಗಳ ಪೂರ್ವದಲ್ಲಿ, ಅಸಾಮವು ಈಗಿನ ಹಾಗೆ ಅಜ್ಞಾತವಾಗಿ ಉಳಿದಿರಲಿಲ್ಲ. ಈಗ ಉತ್ತರಭಾರತವೆನ್ನಿಸಿಕೊಂಡ ಎಲ್ಲ ಸ್ಥಳಗಳಲ್ಲಿಯ ಜನರಿಗೆ ಅಸಾಮವು ಒಳ್ಳೇ ಪರಿಚಿತವಾಗಿದ್ದು, ಅಲ್ಲಿಯ ಸಂಗತಿಗಳೆಲ್ಲ ಭಾರತದ ಎಲ್ಲ ಜನರಿಗೂ ಮನೆಮಾತಾಗಿದ್ದುವೆಂದು ಹೇಳಬಹುದು. ಈ ರುಕ್ಮಿಣೀ ಸ್ವಯಂವರ, ಉಷಾಹರಣ, ಯಾರಿಗೆ ಗೊತ್ತಿಲ್ಲ? ಪ್ರಲ್ಹಾದ ಚರಿತ್ರೆಯನ್ನು ಯಾರು ಕೇಳಿಲ್ಲ? ಹಿರಣ್ಯ ಕಶಿಪು ಆಳಿದ ಪ್ರದೇಶವೇ ಅದು. ದಕ್ಷಪ್ರಜಾಪತಿಯ ಯಜ್ಞದ ಕತೆ ನಾನೇನೂ ಹೇಳಬೇಕಾಗಿಲ್ಲ. ಶ್ರೀ ಶಂಕರನ ಪತ್ನಿ ಸತಿ,—ದಕ್ಷಪ್ರಜಾಪತಿಯ ಮಗಳು, ಯಜ್ಞಕ್ಕೆ ಬಂದು, ತನ್ನ ಪತಿಗಾದ ಅಪಮಾನ ಸಹಿಸದೆ, ಯಜ್ಞಕುಂಡದಲ್ಲಿ ಹಾರಿಕೊಂಡು ಪ್ರಾಣಬಿಟ್ಟದ್ದು ಪುರಾಣಪ್ರಸಿದ್ಧವಾಗಿದೆ.' ಶಾಸ್ತ್ರಿ ನನ್ನ ಕಡೆಗೆ ತಿರುಗಿ ಹೇಳಿದ. 'ಗೌಹಾಟಿಗೆ ಹೋಗುವೆಯಲ್ಲವೇ? ನೀನು ಪುಣ್ಯಶಾಲಿಯೆಂದು ತಿಳಿದುಕೊಳ್ಳು. ಗೌಹಾಟಿಗೆ ನೀಲಾಚಲ ಪರ್ವತ ಒಳ್ಳೇ ಸಮೀಪವಾಗಿದೆಯೆಂದು ಕೇಳಿದ್ದೇನೆ ಅದರ ಮೇಲೆಯೇ ಕಾಮಾಖ್ಯಾ ಮಂದಿರವಿದೆ. ಸತಿಯ ಅವಯವದ ೫೧ ತುಣುಕುಗಳು ಭಾರತದ ಬೇರೆ ಬೇರೆ ಸ್ಥಳಗಳಲ್ಲಿ ಬಿದ್ದು, ಅವು ೫೧ ಪುಣ್ಯಕ್ಷೇತ್ರಗಳೆಂದು ಹೆಸರಾಗಿವೆ. ಅವುಗಳಲ್ಲಿ ಈ ನೀಲಾಚಲ ಪರ್ವತವೂ ಒಂದು.'

'ಇದೇನು ೫೧ ತುಣುಕುಗಳ ಕತೆ? ಒಳ್ಳೇ ಸ್ವಾರಸ್ಯ ಪಾದಂತಿದೆ?' ಎಂದು ಶೀನಪ್ಪ ಕೇಳಿದ.

'ನಿನಗೆಲ್ಲವೂ ವಿನೋದ, ಸ್ವಾರಸ್ಯ; ದಕ್ಷಪ್ರಜಾಪತಿಯ ಯಜ್ಞದ ಬಗ್ಗೆ ಆಗಲೇ ಹೇಳಿದೆನಲ್ಲವೇ? ಯಜ್ಞಕ್ಕೆ ಅಳಿಯ ಶಂಕರನಿಗೆ ಆಮಂತ್ರಣ ಕಳುಹಿರಲಿಲ್ಲ. ಆದರೂ ಸತಿಯು ತಂದೆಯ ಮೇಲಿನ ಅಭಿಮಾನದಿಂದ, ಶಂಕರನು ಬೇಡವೆಂದರೂ ತಂದೆಯ ಮನೆಗೆ ಬರುತ್ತಾಳೆ. ಅದರಿಂದ ಬಾಗಿಲಲ್ಲಿ ದ್ವಾರಪಾಲಕನ ಕೆಲಸಕ್ಕೆಂದು ಶಂಕರನ ಪ್ರತಿಮೆಯನ್ನು ನಿಲ್ಲಿಸಿದ್ದು ನೋಡಿ, ಈ ಅಪಮಾನ ಸಹಿಸದೆ, ಅವಳು ಅದೇ ಯಜ್ಞಕುಂಡದಲ್ಲಿ ಹಾರಿಕೊಂಡು ಪ್ರಾಣಬಿಡುತ್ತಾಳೆ. ಈ ಸುದ್ದಿ ತಿಳಿದೊಡನೆ ಶಂಕರನು ರೊಚ್ಚಿಗೆದ್ದು, ಅಲ್ಲಿಗೆ ಬಂದು ಯಜ್ಞವನ್ನು ಧ್ವಂಸಮಾಡಿ, ಸತಿಯ ಮೃತದೇಹವನ್ನು ಜಗೆದುಕೊಂಡು ತಾಂಡವ ನೃತ್ಯವನ್ನೇ ಪ್ರಾರಂಭಿಸುತ್ತಾನೆ. ತಾಂಡವ ನೆಂದರೆ ಪ್ರಳಯ-ಸೃಷ್ಟಿಯ ನಾಶ. ಎಲ್ಲ ದೇವತೆಗಳೂ ಗಾಬರಿಯಾಪರು ಆದರೆ ಸೃಷ್ಟಿಯ ಸ್ಥಿತಿಯ ಹೊಣೆ ಹೊತ್ತ ವಿಷ್ಣುವಿಗೆ ಯೋಚನೆಗಿಟ್ಟುಕೊಂಡಿತು. ಒಂದೇ ಉಪಾಯವೆಂದು ತನ್ನ ಸುದರ್ಶನ ಚಕ್ರದಿಂದ ಸತಿಯ ಆ ಮೃತದೇಹವನ್ನು ಕತ್ತರಿಸಲಾಗಿ, ಅದು ೫೧ ತುಣುಕುಗಳಾಗಿ, ಆವು ಭಾರತದ ಬೇರೆ ಬೇರೆ ಸ್ಥಳಗಳಲ್ಲಿ ಬಿದ್ದುವು. ಆವು ಬಿದ್ದಲ್ಲೆಲ್ಲ ಪವಿತ್ರ ಯಾತ್ರಾಸ್ಥಳಗಳಾಗಿ ಪರಿಣಮಿಸಿವೆ. ಗೌಹಾಟಿಯ ಹತ್ತಿರವಿದ್ದ ನೀಲಾಚಲ ಪರ್ವತದಮೇಲೆ ಸತಿಯ ಯೋನಿಭಾಗವು ಬಿದ್ದಿತೆಂದೂ, ಆ ಸ್ಥಳದಲ್ಲಿಯೇ ಕಾಮಾಖ್ಯಾ ಮಂದಿರವು ಕಟ್ಟಲ್ಪಟ್ಟಿದೆಯೆಂದೂ ಹೇಳಲಾಗಿದೆ. ಅದು ಬಹಳ ಪುರಾತನ ಕಾಲದ ಗುಡಿ. ಮೊದಲು ಅದನ್ನು ನರಕಾಸುರನು ಕಟ್ಟಿಸಿದನಂತೆ.'

'ಅಲ್ಲೋ ಶಾಸ್ತ್ರಿ, ಆ ಉಳಿದ ೫೦ರುಗಳು ಬಿದ್ದು ಉಂಟಾದ ಯಾತ್ರಾಸ್ಥಳಗಳು ಯಾವುವು?' ಎಂದು ಶೀನಪ್ಪ ಕೇಳಿದ.

'ಕ್ಷೇತ್ರಗಳ ಹೆಸರುಗಳನ್ನು ನೀನು ಕೇಳಿರಬಹುದು. ಆದರೆ ಅವು ಕ್ಷೇತ್ರಗಳೆಂದು ಯಾಕೆ ಗಣಿಸಲ್ಪಡುತ್ತವೆಯೆಂಬುದು ಗೊತ್ತಿರಲಿಕ್ಕಿಲ್ಲ' ಎಂದು ಶಾಸ್ತ್ರಿ ನುಡಿದ. 'ಜ್ವಾಲಾಮುಖಿಯಲ್ಲಿ ಅವಳ ನಾಲಗೆ, ಜನಸ್ಥಾನದಲ್ಲಿ ಗದ್ದ, ವೃಂದಾವನದಲ್ಲಿ ಕೂದಲು, ಕಾಶ್ಮೀರದಲ್ಲಿಯ ಅಮರನಾಥನಲ್ಲಿ ಆವಳ ಕುತ್ತಿಗೆ, ಮಾನಸಸರೋವರದಲ್ಲಿ ಬಲಗೈ, ಪ್ರಯಾಗದಲ್ಲಿ ಬೆರಳುಗಳು, ರಾಮಗಿರಿಯಲ್ಲಿ (ಚಿತ್ರಕೂಟ) ಬಲಸ್ತನ, ವೈದ್ಯನಾಥದಲ್ಲಿ ಹೃದಯ, ನೇಪಾಳದಲ್ಲಿ ತೊಡೆ, ಕಲಕತ್ತೆಯ ಕಾಳೀಘಾಟಿನಲ್ಲ ಬಲಗಾಲಿನ ಬೆರಳುಗಳು,....ಮುಂ. ಬಿದ್ದು, ಅವು ದೊಡ್ಡ ಕ್ಷೇತ್ರಗಳೆಂದು ಹೆಸರಾಗಿವೆ. ಮತ್ತು ಅಲ್ಲೆ ಶಕ್ತಿಯ (ಬೇರೆ ಬೇರೆ ರೂಪದಲ್ಲಿ) ಪುರಾತನ ಮಂದಿರಗಳಿವೆ.'

ಶೀನಪ್ಪನಿಗೆ ಇದೆಲ್ಲ ಬಗೆಹರಿದಂತೆ ತೋರಲಿಲ್ಲ. ಅವನು ಮತ್ತೆ ಪ್ರಾಗ್ಜ್ಯೋತಿಷ್ಪುರವೆಂದು ಹೆಸರುಕೊಡುವುದರಲ್ಲಿಯೂ ಕಾರಣವಿಲ್ಲದೆ ಇಲ್ಲ. Auto-suggestion, Hypnotism ಗಳಲ್ಲಿ ಅವರೊಳ್ಳೇ ನಿಷ್ಣಾತರಿದ್ದಿರಬೇಕು.

ಶಾಸ್ತ್ರಿಗೆ ಶೀನಪ್ಪನ ವ್ಯಂಗ್ಯ ತಿಳಿಯಲಿಲ್ಲ. ತನ್ನ ರೀತಿಯಲ್ಲಿಯೇ ಹೇಳಿದ: "ಅದೊಂದೇ ಯಾಕೆ? ಅವರು ಪ್ರತಿಯೊಂದು ಶಾಸ್ತ್ರಗಳಲ್ಲಿಯೂ ನಿಷ್ಣಾತರಿದ್ದರು. ಅವರು ಬರೆದಿಟ್ಟದ್ದನ್ನು ಅರ್ಥಮಾಡಿಕೊಳ್ಳುವಷ್ಟು ಸಹ ನನಗೆ ಜ್ಞಾನವಿಲ್ಲ."

"ಅಡಿರಲಿ ನೋಡು; ನಮ್ಮ ಪೂರ್ವಜರಿಗೆ ಈ ಅಸಾಮದ ಹಣೆಯಬರೆಹ ಜೆನ್ನಾಗಿ ಗೊತ್ತಿತ್ತು." ಎಂದು ಶೀನಪ್ಪ ಸುರುಮಾಡಿದ: 'ಈ ದುರ್ಗಮವಾದ ಗಿರಿಕಂದರಗಳ ಮಧ್ಯದಲ್ಲಿ ಭಾರತದ ಯಾವುದೋ ಒಂದು ಮೂಲೆಗಿದ್ದ ಈ ಅಸಾಮವು ನಿಜವಾಗಿಯೂ ಭಾರತದ Dark State ಆಗಿಯೇ (ಆಫ್ರಿಕವು Dark Continent ಇದ್ದಂತೆ) ಉಳಿಯುತ್ತಿದೆಯೆಂದು ಅವರಿಗೆ ನಿಶ್ಚಯವಾಗಿ ತಿಳಿದಿತ್ತು. ಹಾಗೆ ಆಗಗೊಡಬಾರದೆಂದು, ಜನರ ಲಕ್ಷ್ಯವನ್ನು ಇತ್ತಕಡೆಗೆ ಎಳೆಯುವುದಕ್ಕಾಗಿ ಗೌಹಾಟಿಗೆ ಪ್ರಾಗ್ಜ್ಯೋತಿಷ್ಪುರವೆಂದು ಹೆಸರಿಟ್ಟರು. ಜನರ ಚಿತ್ತವನ್ನೆಳೆಯುವುದಕ್ಕೆ ಈ ಮೋಹಕವಾದ ಹೆಸರೇ ಸಾಕು. ಅದರ ಅರ್ಥವೂ ಹಾಗೆಯೆ. City of Eastern Lights— ಪೂರ್ವ, ಜ್ಯೋತಿರ್ಮಯ ಪಟ್ಟಣ. ಮೋಹಕವಾದ ಹೆಸರಿನಿಂದ ಇದು ಜ್ಯೋತಿರ್ಮಯ ಪಟ್ಟಣವೆಂದು ಪದೇ ಪದೇ

ಹೇಳುತ್ತ, ಜನರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿ, ಅದು ನಿಜವಾಗಿ Dark State ಇದ್ದರೂ, ಜ್ಯೋತಿರ್ಮಯವಾಗಿದೆಯೆಂದೇ ನಂಬಿಗೆ ಹುಟ್ಟಿಸುವುದು— ಅವರ ಮನಸ್ಸಿನ ಮೇಲೆ ಬಿಂಬಿಸುವುದು. ಇದೊಂದು ತರದ Hypnotism, Auto-suggestions ದಂತೆ ಯಾವನಾದರೊಬ್ಬ ಹೋಗಿ ತನಗೆ ರೋಗವಿಲ್ಲವೆಂದು ಮೇಲಿಂದ ಮೇಲೆ ಅಂದುಕೊಳ್ಳುವುದರಿಂದ, ನಿರೋಗಿಯಾಗುತ್ತಾನಂತೆ. ಆದರೆ ಈ ಪೂರ್ವಜರ ಯುಕ್ತಿ ನಮ್ಮೆದುರಿಗೆ ನಡೆಯಲಿಲ್ಲ. ನಾವು ಸತ್ಯವನ್ನಷ್ಟೇ ನಂಬುತ್ತೇವೆ."

"ಅದೇನೇ ಇರಲಿ, ಭಾರತವು ಸ್ವತಂತ್ರವಾದಾಗಿನಿಂದ ಮಾತ್ರ ಹಾಗೇನಿಲ್ಲ. ಅಸಾಮವೂ ಭಾರತದ ಒಂದು ಪ್ರಾಂತವೆಂಬಿಣಿಸಲ್ಪಡುತ್ತದೆ. ಅದರ ಬಗ್ಗೆ ಎಲ್ಲರಿಗೂ ಸ್ವಲ್ಪಾದರೂ ಗೊತ್ತಿದ್ದೇ ಇದೆ." ಎಂದು ರಂಗಣ್ಣನೆಂದ.

'ಸ್ವಲ್ಪ ತಡೆ' ಎಂದು ಶೀನಪ್ಪ ನಗುತ್ತಲೇ ನುಡಿದ: 'ನಮಗೆ ಸ್ವಲ್ಪ ಗೊತ್ತಿದ್ದದ್ದು ಭಾರತವು ಸ್ವತಂತ್ರವಾದದ್ದರ ಮೂಲಕವಲ್ಲ, ೨–೩ ವರ್ಷಗಳ ವರೆಗೆ ಸ್ವತಂತ್ರ ಭಾರತವು ಅದೆಷ್ಟು ಪ್ರಯತ್ನಿಸಿದರೂ, ಅಸಾಮವು Dark State ಆಗಿಯೇ ಉಳಿಯಿತು. ಆನಂತರ ಸೃಷ್ಟಿದೇವತೆಯೇ ಸರಕಾರದ ಸಹಾಯಕ್ಕೆ ಬರಬೇಕಾಯಿತು. ೧೯೫೦ರ ಆಗಸ್ಟ್ ೧೫ನೆಯ ತಾರೀಖು, ಭಾರತದ ಮೂರನೆಯ ವರ್ಷದ Independence Day— ಸ್ವತಂತ್ರ ದಿನ ಸಾವಿರಾರು ಅಣುಬಾಂಬುಗಳ ಶಕ್ತಿಗಿಂತಲೂ ಮಿಗಿಲಾದ ಶಕ್ತಿಯುಳ್ಳ ಭೂಕಂಪ ಇಡೀ ಅಸಾಮವನ್ನೇ ಅಲ್ಲಾಡಿಸಿ, ಭಾರತೀಯರೆಲ್ಲರ ಲಕ್ಷ್ಯವನ್ನು ಅಸಾಮದ ಕಡೆಗೆ ಎಳೆಯಿತು. ಆನಂತರ ಪ್ರತಿವರ್ಷವೂ ಮಹಾಪೂರ ಮುಂತಾದುವುಗಳಿಂದ ಅಸಾಮವು ನಿಮ್ಮ ಮನಸ್ಸಿನಿಂದ ಅಳಿಸದಂತೆ, ಸೃಷ್ಟಿದೇವತೆ ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದಾಳೆ...."

"ಇದೇನು ನಮ್ಮ ಶೀನಪ್ಪನಿಗೆ ಭಾರಿ Inspiration ಬಂದು ಬಿಟ್ಟಿದೆಯಲ್ಲ!!" ಎಂದು ಕಿಟ್ಟು ನುಡಿದ.

ಗುಂಡೂಮಾಮೂ ನನ್ನ ಕಡೆಗೆ ತಿರುಗಿ ಹೇಳಿದರು: "ಇದೆಲ್ಲ ನಾವು ಮಾತನಾಡಿದ್ದು, ಆ ನಾಲ್ಕು ಜನ ಕುರುಡರು ಅನೆ ನೋಡಿ ಬಂದು ಅದರ ಬಗ್ಗೆ ಚರ್ಚಿಸಿದಂತೆ ಆಯಿತು. ನೀನು ಅಲ್ಲಿಗೆ ಹೋದ ಬಳಿಕ, ಅದರ ಬಗ್ಗೆ ನಿಜವಾದ ಸಂಗತಿ ತಿಳಿಸು."

ಒಳ್ಳೆಯದೆಂದು ನಾನು ತಲೆಯಲ್ಲಾಡಿಸಿ ಒಪ್ಪಿಗೆಯನ್ನು ಕೊಟ್ಟೆ. ಎಲ್ಲರೂ ಮನೆಯ ಕಡೆಗೆ ತಿರಳಿದೆವು—

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ನೀಡೆ ಬಂಟ್ಸ್)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ "**ಅನಾಗರಿಕರು**" ಎಂಬ ಕ್ಷತೆಯನ್ನು ಕುರಿತು ಏಳು ಜನರಿಂದಲೂ "**ಮಾಡಿದ್ದುಣ್ಣೋ ಮಾರಾಯಾ**" ಎಂಬ ರೂಪಕವನ್ನು ಕುರಿತು ಮೂರು ಜನರಿಂದಲೂ ವಿಮರ್ಶೆಗಳು ಬಂದಿವೆ.

'ಅನಾಗರಿಕರು' ವಿಮರ್ಶಕರು:

೧. ಶ್ರೀ. ಸತ್ಯನಾರಾಯಣ, ತಿಳಿಂಗಾರು; ೨. ಶ್ರೀ. ಬಿ. ಜಿ. ಸುಬ್ಬರಾವ, ಮದ್ರಾಸು; ೩. ಶ್ರೀ. ಎಸ್. ಬಿ. ಡೆಂಬಳ, ಬಿ. ಇ. ಎಂ. ಸ್ಕೂಲ್, ಕಾಸರಗೋಡು; ೪. ಶ್ರೀ. ವಿ. ರಾ. ಹಚಡದ, ಬೆಂಗಳೂರು; ೫. ಶ್ರೀ. ಎಸ್. ಆರ್. ಪಾಡಿ, ಟೀಚರ್, ಕಲ್ಲಕಟ್ಟ. ೬. ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ; ೭. ಶ್ರೀ. ಎ. ಶಂಕರನಾರಾಯಣ ಹೆಬ್ಬಾರ್, ಕುಂದಾಪುರ.

'ಮಾಡಿದ್ದುಣ್ಣೋ ಮಾರಾಯಾ' ರೂಪಕದ ವಿಮರ್ಶಕರು:

೧. ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ; ೨. ಶ್ರೀ. ಎಂ. ಡಿ. ರಾಮಚಂದ್ರ, ಕೋಯನಾ; ೩. ಶ್ರೀ. ವಿ. ಆರ್. ಹಚಡದ, ಬೆಂಗಳೂರು.

ಬಂದಿರುವ ಎಲ್ಲ ವಿಮರ್ಶೆಗಳನ್ನು ಜಯಂತಿಯ ಸಂಪಾದಕಸಮಿತಿಯವರೇ ನೋಡಿ, ತಮ್ಮ ತೀರ್ಮಾನವನ್ನು ವಿಶದವಾಗಿ ಕೊಟ್ಟಿದ್ದಾರೆ.

ಈ ಸಲ ಬಹಳ ಜನ ವಿಮರ್ಶಕರು ಉತ್ತಮ ವಿಮರ್ಶೆಗಳನ್ನು ಬರೆದಿರುವುದು ಸಂತೋಷದ ಸಂಗತಿ. "**ಅನಾಗರಿಕರು**' ಕಥೆಯ ವಿಮರ್ಶಕರಲ್ಲಿ ಶ್ರೀಮಾನ್ ಮಿರ್ಜಿ ಅಣ್ಣಾರಾಯರ ನಿಮರ್ಶೆ ಅತ್ಯುತ್ತಮವಾಗಿದ್ದು ಹೊಸ ಮಾದರಿಯದಾಗಿದೆ. ಶ್ರೀ. ವ್ಹಿ. ಶಂಕರನಾರಾಯಣಭಟ್ಟ ಹೆಬ್ಬಾರರ ವಿಮರ್ಶೆಯೂ ಅತ್ಯುತ್ತಮವಾಗಿದೆ, ಆದರೆ ತುಂಬ ದೀರ್ಘವಾಗಿದೆ (ಜಯಂತಿಯ ೬ ಮುದ್ರಿತ ಪುಟಗಳಷ್ಟಾಗಬಹುದು).

ಶ್ರೀ. ಸತ್ಯನಾರಾಯಣ ತಿಳಿಂಗಾರು ಮತ್ತು ಶ್ರೀ. ಎಸ್. ಆರ್. ಪಾಡಿ ಇವರು ಬರೆದ ವಿಮರ್ಶೆಗಳೂ ಉತ್ತಮವಾಗಿವೆ; ಆದರೆ ಶಿಕ್ಷಣರಂಗಕ್ಕಾಗಿ ಬರೆಯುವ ವಿಮರ್ಶೆಗಳು ಇಷ್ಟೊಂದು ದೀರ್ಘವಾಗಬಾರದು.

ಮಿಕ್ಕ ವಿಮರ್ಶೆಗಳು ಒಳ್ಳೆಯವಾಗಿವೆ.

'**ಮಾಡಿದ್ದುಣ್ಣೋ ಮಾರಾಯಾ**' ರೂಪಕದ ವಿಮರ್ಶೆಗಳಲ್ಲಿ ಶ್ರೀ. ಎಂ. ಡಿ. ರಾಮಚಂದ್ರ ಅವರದು ಉತ್ತಮವಾಗಿದೆ. ಶ್ರೀ. ಎಕ್ಸಂಬೆಯವರ ವಿಮರ್ಶೆಯೂ ಚೆನ್ನಾಗಿದೆ. ಆದರೆ ನಡುನಡುವೆ ವಿಮರ್ಶಕರ ವೈಯಕ್ತಿಕ ಅಭಿಪ್ರಾಯದ ಮಾತುಗಳು ಹೆಚ್ಚಾಗಿ ಬಂದಿವೆ. ಇನ್ನೊಂದು ಸಾಮಾನ್ಯವಾಗಿದೆ.

ಮುಂದಿನ ಸಂಚಿಕೆಯ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ "**ಸೈನಿಕನ ಇಚ್ಛೆ**" ಎಂಬ ಕಥೆಯನ್ನಾಗಲಿ, '**ಗೌರಿಯ ಮದುವೆ**' ಎಂಬ ಕಥೆಯನ್ನಾಗಲಿ ವಿಮರ್ಶಿಸಿ, ಅವಧಿಯೊಳಗಾಗಿ ತಲ್ಪುವಂತೆ ಕಳುಹಬೇಕು.

—ಸಂಪಾದಕರು

"ಅನಾಗರಿಕರು"

(ಚಿಕ್ಕ ಕಥೆಯ ರಸಗ್ರಹಣ)

ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ

(೧)

ಅಂದಿನ ಅಂಚೆಯಲ್ಲಿ ಬಂದ ಕೆಲವು ಕಾಗದಗಳಲ್ಲಿ, ಎಂದಿನಂತೆ 'ಜಯಂತಿ"ಯನೆ, ಮೊದಲು ಕೈಗೆತ್ತಿಕೊಂಡೆ. ಮೊದಲು ಪುಟವನ್ನು ತೆರೆದು, ವಾಡಿಕೆಯಂತೆ ನಿಷಯಗಳ ಮೇಲೆ ಕಣ್ಣಾಡಿಸಿದೆ. 'ಅನಾಗರಿಕರು (ಒಂದು ಜೀವನ ಕಥೆ) 'ಅಶ್ವತ್ಥ' ಬನಾರಸ' ಎಂಬು ದನ್ನು ಕಂಡೊಡನೆ ಉತ್ಸಾಹ, ಆತುರಗಳಿಂದ ಪುಟಗಳನ್ನು ತೆರೆದೆ. ಕಥೆಯನ್ನು ಓದಲು ಆರಂಭಿಸುವ ಮೊದಲು ಕಥೆಯ ಪುಟಗಳನ್ನು ನೋಡಿದೆ. ಒಂದು, ಎರಡು, ಮೂರು, ನಾಲ್ಕು.... ಒಂಭತ್ತು ! 'ಜಯಂತಿ'ಯಲ್ಲಿ ಒಂಭತ್ತು ಪುಟಗಳು ! ಕಥೆಯಲ್ಲಿ ವೈಶಿಷ್ಟ್ಯವೇನಾದರೂ ಇರಬೇಕು; ಇಲ್ಲದಿದ್ದರೆ ಸಂಚಿಕೆಯಲ್ಲಿ ಮೊದಲ ಸ್ಥಾನ, ಅದೂ ಇಷ್ಟು ಪುಟಗಳಷ್ಟು ಸಂಪಾದಕರು ಒದಗಿಸುತ್ತಿದ್ದರೆ ?— ಎಂದು ಕೊಂಡೆ. ಆದರೂ ಮಧ್ಯಾಹ್ನದಲ್ಲಿ ಆ ಕಥೆಯನ್ನು ಓದುವುದಕ್ಕೆ ಅಷ್ಟು ಅವಕಾಶ ಇಲ್ಲದುದಕ್ಕೆ ನಿರಾಶೆಯಿಂದಲೇ ಪತ್ರಿಕೆಯನ್ನು ಕೆಳಗಿಟ್ಟು ಎದ್ದೆ. ಆದರೆ ಕಥೆಯನ್ನು ಓದಬೇಕೆಂಬ ಲವಲವಿಕೆಯೇನೂ ಕಡಿಮೆ ಯಾಗಿರಲಿಲ್ಲ.

ರಾತ್ರಿ, ಮಲಗುವ ಪೂರ್ವದಲ್ಲಿ ಕಥೆಯನ್ನು ಓದುವ ಎಂದು 'ಜಯಂತಿ'ಯನ್ನು ಕೈಯಲ್ಲಿ ಹಿಡಿದುಕೊಂಡು ಹಾಸಿಗೆಯಲ್ಲಿ ಉರುಳಿದೆ. ಮಧ್ಯಾಹ್ನದಲ್ಲಿ 'ಅಶ್ವತ್ಥ'ರು ಬರೆದ ಕಥೆ ಎಂಬುದು ತುಸುಮಟ್ಟಿಗೆ ಕಥೆಯನ್ನು ಕೂಡಲೆ ಓದಲು ಪ್ರಚೋದಿಸಿದ್ದರೆ, ಈಗ ಆ ಭಾವವು ಅಳಿದು, 'ಜಯಂತಿ'ಯನ್ನು—ಅದರೊಳಗಿನ ಕಥೆಯನ್ನು—ಮಲಗುವ ಮುಂಚೆ ಮನಸ್ಸು ಹಗುರುಗೊಳ್ಳಲಿಕ್ಕೆ ಓದುವುದೆಂಬ ಭಾವವು ಸ್ಥಾಯಿ ಯಾಗಿತ್ತು. ಕಥೆಯನ್ನು ಓದಲು ಆರಂಭಿಸಿದೆ. ಜಾಗೂ ಹೀಗೂ ಕಥೆಯ ಮೊದಲ ಭಾಗವನ್ನಷ್ಟು ಓದಿ ಮುಗಿಸಿದೆ. ನಾಗಾಜನರ ಜೀವನದ ರೀತಿನೀತಿಗಳನ್ನು ವಿವರಿಸುವ—ಸ್ವಾನುಭವವನ್ನು ಹೇಳುವ ರೀತಿಯಲ್ಲಿ ಬರೆದ—ನಿಬಂಧದಂತೆ ಎನಿಸಿ, ಓದುವುದನ್ನು ನಿಲ್ಲಿಸಿ, ಮಲಗಿ ಬಿಟ್ಟೆ.

ಮರುದಿನ ಗೆಳೆಯರೊಬ್ಬರು ಪತ್ರಿಕೆಯನ್ನು ಓದಲು ಒಯ್ದರು. ಅವರು ಎರಡು ದಿನಗಳ ತರುವಾಯ ಪತ್ರಿಕೆಯನ್ನು ತಿರುಗಿಕೊಡುತ್ತ "'ಅನಾಗರಿಕರು' ಕಥೆಯನ್ನು ಓದಿರಬೇಕಲ್ಲ ?" ಎಂದು ಕೇಳಿದರು. ನಾನು ಅನುಮಾನಿಸುತ್ತಲೇ 'ಓದಿರುವೆ' ಎಂದೆ. "ನಾವೆಲ್ಲ ನಾಗರಿಕ ರಂತೆ ! ನಾಗಾಜನರು ಅನಾಗರಿಕರು ! ನಾಗರಿಕತೆಯು ಬುಡಿಗೆ-ತೊಡಿಗೆಯಲ್ಲಿ ಮಾತ್ರ. ಇದೆಯೆ ?"— ಎಂದು ಸ್ನೇಹಿತರು ನನ್ನನ್ನು ಚರ್ಚೆಗೆ ಎಳೆದರು. ಆಗ ನಾನು "ಆ ಲೇಖನ ನಾನಿನ್ನೂ ಪೂರ್ಣ ಓದಿಲ್ಲ !" ಎಂದು ಹೇಳಿ, ಮಾತನ್ನು ಮುಗಿಸಿದೆ.

ಸಾಯಂಕಾಲ ಮತ್ತೆ ಮರಳಿ ಕಥೆಯನ್ನು ಓದಲು ತಕ್ಕೊಂಡೆ. ಆದರೆ ಕಥೆಯ ಮೊದಲ ಭಾಗವನ್ನು ಬಿಟ್ಟು ಎರಡನೆಯ ಹಂತದಿಂದಲೇ ಓದಲಿಕ್ಕೆ ಆರಂಭಿಸಿದೆ. ಮತ್ತೂ ನೀರಸವಾಗಿಯೇ ಮುನ್ನಡೆದಂತೆನಿ-ಸಿತು ಕಥೆ. ಆದರೂ ತಾಳ್ಮೆಯಿಂದ ತುಸು ಮುಂದರಿದೆ. ಸುಮಾರು ಕಥೆಯ ಅರ್ಧ ಭಾಗ ಉರುಳಿದ ಮೇಲೆ ಕೋಚಕತೆಯು ಉಂಟಾ ಯಿತು. ಮುಂದಿನ ಕಥೆಯನ್ನು ಓದಿದುದರ ಅರಿವೇ ನನಗೆ ಉಳಿಯ ಲಿಲ್ಲ. ಕಥೆಯ ಪ್ರವಾಹದಲ್ಲಿ ತೇಲಿ ಹೋಗಿ ಬಿಟ್ಟೆ. 'ಥಾಪಾ' ತನ್ನ ಕೈಯಿಂದ ತಾನು ಪಿಸ್ತೂಲು ಹೊಡೆದುಕೊಂಡು ಪ್ರಾಣ ನೀಗಿದ ಸಂಗತಿಯನ್ನು ತಿಳಿಹೊಡನೆಯೇ, ಆಶ್ಚರ್ಯಚಕಿತನಾಗಿ ತಡೆದೆ. ಕಥನ ಕಲೆಯಲ್ಲಿ ಈ ಅಕಸ್ಮಿಕತೆಗೆ ಹಿನ್ನೆಲೆ ಏನಾದರೂ ಇದೆಯೇ— ಎಂದು ನಿರೀಕ್ಷಿಸಲು, ಕಥೆಯ ಪುಟಗಳನ್ನು ಹಿಂದೆ ತಿರುಹಿ ಅವಲೋಕಿಸ ತೊಡಗಿದೆ.

'ಥಾಪಾ'ನ ಮುಖದ ಮೇಲಿನ ಮೂರು ಗಾಯದ ಕರೆಗಳು, ಜಯಂತಿಯು ಅಂದು ಸೈನಿಕನ ಮುಖವನ್ನು ಫರಚಿದ ಸಂಗತಿಗಳು ಹೊಂದಿ ಅರ್ಥಪೂರ್ಣವಾಗಿ ಕಂಡುವು. ಸಹಜ ಅಡ್ಡಾಡಲಿಕ್ಕೆ ಹೊರ ಟಾಗ ಥಾಪಾ ಪಿಸ್ತೂಲನ್ನೂ ಚೌಧರಿಯು ತುಬಾಕೆಯನ್ನೂ ತಕ್ಕೊಂಡು ಹೊರಡುವಿಕೆ, ಶಿವಪುರಿಯ ಹುಚ್ಚ 'ಬಾಬಾ' ಕ್ಷಣಕಾಲ ಥಾಪಾ, ಚೌಧರಿ ಮೊದಲಾದವರನ್ನು ದಿಟ್ಟಿಸಿ ನೋಡಿ ಕಲ್ಲುತೂರಿದ ಘಟನೆ, ಆ ಹುಚ್ಚ 'ಮೋಟಾ ಹಜರಿ'ಯ ಕಾಲಕ್ಕೂ ಆ ಸೈನಿಕರ ಬೀಡಿನ ಹತ್ತಿರ ಬರುವಿಕೆ, ರಾತ್ರಿ ಥಾಪಾ ಇಟ್ಟ ಬಿಗಿಯಾದ ಕಾವಲಿನ ವ್ಯವಸ್ಥೆ, ಆರಂಭ ದಲ್ಲಿ ಅವನು ಸ್ವಲ್ಪ ಅನುಮಾನಿಸುತ್ತಲೇ ಬೇಟೆಗೆ ಹೊರಟ ಬಗೆ, ಹುಚ್ಚ ಮುದುಕ ಕಲ್ಲು ತೂರಿದಾಗ ಚೌಧರಿಯ "ಹಾ !" ಥಾಪಾನ "ಆ !" ಉದ್ಗಾರಗಳಲ್ಲಿಯ ಹೆದರಿಕೆ, ಬೆರಗುಗಳ ತಾರತಮ್ಯ, ಆಗಲೇ ನೀರುಗಡಿಗೆಗಳನ್ನು ಹೊತ್ತು ತರುವ ನಾಗಾಬಾಲೆಯರು ಅಲ್ಲಿಗೆ ಬರು ವಿಕೆ—ಇವೆಲ್ಲ ಕಥೆಯ ಅಂಶಗಳು ಬಹುಸ್ವಾರಸ್ಯವಾಗಿ ಕಂಡುವು. ಕಥೆಗಾರರ ಕಥನಕೌಶಲ್ಯಕ್ಕೆ ತಲೆಮೊಗಿಸಿದುವು. ಆನಂದವೂ ಆಯಿತು. ಆ ಆನಂದವ ಭರದಲ್ಲಿಯೇ ಸಮೀಪದ ಕೋಣೆಯಲ್ಲಿ ಒರಗಿದ್ದ ಹೆಂಡತಿ ಯನ್ನು ಕರೆದು ಕೇಳಿದೆ:

"ಜಂಪು ಹತ್ತಿತೇನೆ ?"

"ಇಲ್ಲ; ಏಕೆ ?" ಎಂದಳು ಅವಳು.

"ಕಥೆಯೊಂದನ್ನು ಹೇಳುವೆ ಬಾ...." ಎಂದು ಕರೆದು, ಹುಚ್ಚು ಓದಿ ತಿಳಿಯದ ಹೆಂಗುಸೆಂದು ತಿಳಿದು, ಜಯಂತಿಯ ಅಣ್ಣ ಕಥೆಯನ್ನು ಹೇಳಲಿಕ್ಕೆ ಆರಂಭಿಸಿದಲ್ಲಿಂದಲೇ ಆರಂಭಿಸಿ, ಗರುಡಗಂಬದ ಒಳಿಯಲ್ಲಿ ಎರಡು ಅಸ್ಥಿಗಳು ಸಿಕ್ಕ ಸಂಗತಿಯವರೆಗೆ ಕಥೆಯನ್ನಷ್ಟು ಹೇಳಿ ಮುಗಿ-ಸಿದೆ. ನಾನು ಕಥೆಯನ್ನು ಹೇಳುತ್ತಿದ್ದ ಹಾಗೆಯೇ,

"ಆ ಹುಚ್ಚು ಹುಡುಗಿ ಹಾಗೆ ಮಾಡಬಾರದಿತ್ತು ! ತಮ್ಮ ಗುಡಿಸಿಲನ್ನು ಬಿಟ್ಟು ಸೈನಿಕರ ಕಡೆಗೆ ಹೋಗಬಾರದಾಗಿತ್ತು" ಎಂದು

ಸೌಭಾಗ್ಯವತಿಯು, ಜಯಂತಿಯ ವರ್ತನೆಯನ್ನು ಕುರಿತು ತನ್ನ ಅಭಿಪ್ರಾಯವನ್ನು ನಾನು ಕೇಳಬೆಯೇ ಸೂಚಿಸಿದಳು.

ಜಯಂತಿಯ ವರ್ತನೆಯ ಬಗ್ಗೆ ಊರವರು ಸಭೆ ಸೇರಿ, ವಿಚಾರಣೆ ನಡೆಯಿಸಿದ ಸಂದರ್ಭದಲ್ಲಿ ಭೀಮನ ನುಡಿಗಳನ್ನು ಕೇಳಿ,

"ಭೀಮನಾಗನದು ಎಷ್ಟು ದೊಡ್ಡ ಮನಸ್ಸು!" ಎಂದು ಉದ್ಗಾರ ಅವಳ ಬಾಯಿಂದ ಹೊರಟಿತು. ಕಥೆಯನ್ನು ಪೂರ್ಣ ಕೇಳಿ ಕೊಂಡಮೇಲೆ ತುಸು ತಡೆದು "ಭೀಮನಾಗನೇ ಜಯಂತಿಗೆ ಸೈನಿಕರ ಕಡೆಗೆ ರಾತ್ರಿ ಹೋಗಲು ಹೇಳಿರಬೇಕೆ?" ಎಂದು ಕೇಳಿದಳು. ನಾನು ತಟ್ಟನೆ ಅವಳಿಗೆ ಉತ್ತರ ಹೇಳಲಿಕ್ಕೆ ಸಮರ್ಥನಾಗಲಿಲ್ಲ. ತಲೆದಿಂಬಿನ ದೀಪವನ್ನು ಎತ್ತರಿಸಿ ಕಥೆಯ ಸಂಗತಿಗಳ ಮೇಲೆ ಕಣ್ಣಾಡಿಸತೊಡಗಿದೆ.

"ರಾತ್ರಿ ಮಲಗುವ ಮುಂಜೆ ತಂದೆ-ಮಕ್ಕಳು ಜಯಂತಿಯನ್ನೂ ಭೀಮನಾಗನನ್ನೂ ಏಕಾಂತದಲ್ಲಿ ಬಿಟ್ಟು ಹೊರಗೆ ಬಂದಿದ್ದರಲ್ಲವೆ?" ಎಂದು ಮತ್ತೆ ಅವಳೇ ಸೂಚಿಸುವಂತೆ ಕೇಳಿದಳು. ಆ ಸಂದರ್ಭದೊಳಗಿನ ಭೀಮನಾಗನ ವರ್ತನೆಯನ್ನು ಗಮನಿಸಿದಾಗ, ನನಗೂ ಹಾಗಿರ ಬೇಕೇನೊ ಎಂದೆನಿಸಿತು. ಆಮೇಲೆ ನಾನು ಈ ಕಥೆಯನ್ನು ಕೇಳುವವರಲ್ಲಿ ಥಾಪಾನೂ ಒಬ್ಬನೆಂದೂ ಅವನು ಕಥೆಯನ್ನು ಕೇಳಿ, ಪಿಸ್ತೂಲಿನಿಂದ ಹೊಡೆದುಕೊಂಡು ಸತ್ತ ಸಂಗತಿಯನ್ನು ಹೆಂಡತಿಗೆ ವಿವರಿಸಿದೆ. ಅವನೇ ಹತ್ತು-ಹನ್ನೊಂದು ವರ್ಷಗಳ ಹಿಂದೆ ಅಲ್ಲಿ ಬಂದಾಗ ಜಯಂತಿಯ ಮೇಲೆ ಅತ್ಯಾಚಾರವೆಸಗಿದ ಸೈನಿಕನೆಂದು ಹೇಳಿದೆ.

"ಅಯ್ಯೋ ಪಾಪ!" ಎಂದುಸುರಿದಳವಳು. ತುಸು ತಡೆದು "ಅವನಿಗಾದರೂ ಕೆಟ್ಟವನೆಂದು ಹೇಗೆ ಹೇಳುವುದು? ಹತ್ತು ವರ್ಷಗಳ ಮೇಲೆ ಅಲ್ಲಿ ತಿರುಗಿ ಬಂದಾಗ, ತಾನು ಕೆಡಿಸಿದ ಹುಡುಗಿಯನ್ನು 'ದೇವತೆ' ಎಂದು ಹಳ್ಳಿಗರು, ಅವಳ ಮೂರ್ತಿಯನ್ನು ಮಾಡಿಟ್ಟು ಪೂಜಿಸುವುದು, ಊರ ನಾಯಕನಾಗಿ ಅವಳ ತಂದೆಯೇ ಅವಳಿಗೆ ಶಿಕ್ಷೆನಿಧಿಸಿದ ಬಗೆ, ಅವನು ಹುಚ್ಚನಾದುದು—ಇವನ್ನೆಲ್ಲ ನೋಡಿ, ಅವನಿಗೇ ಪಶ್ಚಾತ್ತಾಪವಾಗಿ ಜೀವಕೊಟ್ಟನಲ್ಲ! ಆ ಪ್ರಾಯದಲ್ಲಿ ಆಗ ಏನನ್ನೋ ಮಾಡಿದ್ದ. ಈಗ ತನ್ನ ತಪ್ಪನ್ನು ತಾನು ತಿಳಿದನಲ್ಲಾ!" ಎಂದು ಥಾಪಾನ ವಿಷಯದಲ್ಲೂ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿದಳು.

ತಿರುಗಿ ಮತ್ತೊಮ್ಮೆ ಕಥೆಯನ್ನು ಓದಲು ಎತ್ತಿಕೊಂಡೆ. ಈ ಸಲ ಕಥೆಯ ವಿಷಯದಲ್ಲಿ ಇನ್ನೂ ಕುತೂಹಲ ಕೆರಳಿತ್ತು. ದೃಷ್ಟಿ ಸೂಕ್ಷ್ಮವಾಗಿತ್ತು, ತೀಕ್ಷ್ಣವಾಗಿತ್ತು.

ಕಥೆಯ ಮೊದಲ ವಾಕ್ಯದಲ್ಲಿಯೇ 'ನನಗೂ ಷಿಕಾರಿಯ ಮೇಲೆ ಮನಸ್ಸಾಯಿತು' ಎಂಬ ಮಾತು ಬರುತ್ತದೆ. ಮುಂದೆ ಕಥೆಯ ಎರಡನೆಯ ಭಾಗದ ಆರಂಭ 'ಜೇಟಿ ಬಹಳ ಯಶಸ್ವಿಯಾಗಿ ನಡೆಯಿತು....' ಎಂದು ಮೊದಲಾಗಿ ಆ ಜೇಟಿಯ ವಿಶೇಷತೆ ಎನ್ನುವಂತೆ 'ಥಾಪಾ ಹುಲಿಯ ಗವಿಯ ಮುಂದೆ ನಿಂತು, ಅದನ್ನು ಕೆಣಕಿ, ಅದು ರೋಷಾವೇಶದಿಂದ ಮೈಮೇಲೆ ಏರಿ ಬಂದಾಗ ಕೊಂದ ಪ್ರಕರಣ'ವೊಂದನ್ನು ಉಲ್ಲೇಖಿಸಲಾಗಿದೆ. ಈ ಬೇಟೆಯ ಪ್ರಸಂಗದಲ್ಲಿ ಥಾಪಾ ಕಾಡುಹುಲಿಯನ್ನು ಕೊಂದನೋ ಬಿಟ್ಟನೋ! ಅದರಿ ತನ್ನ ಹೃದಯವೆಂಬ ಗುಹೆಯ ಕಾಡು ಭಾವಗಳನ್ನು ಕೊಂದನೆಂಬುದರಲ್ಲಿ ಸಂಶಯವಿಲ್ಲ. ಅವು ಕೆರಳಿದಾಗ ಅವು ಎಷ್ಟು ಕ್ರೂರ ಎಂಬ ಅರಿವು ಆಗುತ್ತಿತ್ತೇನೊ! ಅದಕ್ಕಾಗಿಯೇ ಕಥೆ ಕೇಳುತ್ತಿದ್ದಂತೆಯೇ ಆಗಾಗ ಮಜ್ಯವನ್ನು ಕುಡಿದು ಮೈಮರೆಯುತ್ತಿರಬೇಕು. ಪಶ್ಚಾತ್ತಾಪದ ಬೇಗುದಿಯಲ್ಲಿ ಬೆಂದಿರಬೇಕು. ನಿಜವಾಗಿಯೂ ಥಾಪಾ Crack shot ನೆ ಎಂಬುದರಲ್ಲಿ ಸಂಶಯವಿಲ್ಲ. ಕಾಡಿನೊಳಗಿನ ಜೇಟಿಯು ಪಶುಗಳಿರಲಿ, ತನ್ನ ಪಶುತ್ವವೇ ಇರಲಿ, ಯಾವುದಕ್ಕೂ ಅವನು ಪ್ರಸಿದ್ಧ ಗುರಿಗಾರ!— ಎಂದುಕೊಳ್ಳುತ್ತ ಪಾಸಿಗೆಯಿಂದ ಎದ್ದೆ.

ಕಥೆಯ ರಸಪ್ರಪಾಹದಲ್ಲಿ ಮನಸ್ಸು ಮುಳುಗಿ ಹೋಗಿತ್ತು. ಕಥನಕಲೆಗಾಗಿ ಮನ ಮುಗ್ಧಗೊಂಡಿತ್ತು. ಕಥೆಯು ದುರಂತದಿಂದ ದುರಂತವನ್ನು ರೂಪಿಸಿ ಮುಗಿದಿದ್ದರೂ, ಕರುಣಾನಂದವೆಂಬುದಕ್ಕೆ ಕೊರತೆಯು ಇರಲಿಲ್ಲ. ಆ ನಾಗಾಜನಾಂಗದ ಮುಗ್ಧ ಜಯಂತಿ, ನಿಷ್ಠುರ ನ್ಯಾಯವಾದಿ ಗ್ರಾಮನಾಯಕ, ಆ ತ್ಯಾಗಿ—ವೀರಪ್ರಣಯಿ ಭೀಮನಾಗ ಮೊದಲಾದವರೆಲ್ಲರೂ ಬಗೆಗಣ್ಣಿನೆದುರಿಗೆ ನಿಂತು, ತಮ್ಮ ತಮ್ಮ ವ್ಯಕ್ತಿತ್ವದಿಂದ ಇನ್ನೂ ಮುಗ್ಧತೆಗೊಳಿಸಿದ್ದರು. 'ಇವರು ಅನಾಗರಿಕರೆ?' ಎಂಬ ಹಪ್ಪಿಯು ನುನವಲ್ಲಿ ಮೂಡುತ್ತಿತ್ತು. ತಮ್ಮ ಕುಲದ ರಕ್ಷಣೆಗಾಗಿ ಆ ಮುಗ್ಧಜೀವಿಗಳು ತೆತ್ತ ತ್ಯಾಗವು ಸಾಮಾನ್ಯವೆ? ಕುಲದ ಮರ್ಯಾದೆಗಾಗಿ ಹಳ್ಳಿಗರೆಲ್ಲ ಒಂದಾಗಿ, ಜೀವಕ್ಕಿಂತ ಶೀಲವು ಮಿಗಿಲೆಂದು ಭಾವಿಸಿ ಹೋರಾಡಲು ಸಿದ್ಧರಾದರಲ್ಲ, ವ್ಯಕ್ತಿಗಾಗಿ ಊರೇ ಬಲಿಯಾಗಲು ಸಿದ್ಧವಾದ ತ್ಯಾಗವೇನು ಸಣ್ಣದಲ್ಲ. ಸಂಘಟನೆಯೇನು ಸಾಮಾನ್ಯವಲ್ಲ. ಇವನ್ನೆಲ್ಲ ಚಿತ್ರಿಸಿದ ಕಲೆಗಾರಿಕೆಯೂ ಅಷ್ಟೇ ಅಸಾಮಾನ್ಯ—ಎಂದು ಮನಸ್ಸು ತಿರುತಿರುಗಿ ಆನಂದದಲ್ಲಿ ಮಿಂದೇಳುತ್ತಿತ್ತು. ಈ ಆನಂದವನ್ನು ಜಯಂತಿಯ-ನಾಗಾಜನಾಂಗದ ಜಯಂತಿಯಲ್ಲ ಮತ್ತೆ—ವಾಚಕರೊಡನೆ ಸವಿಯೋಣವೆಂದು ಈ ಸಮೀಕ್ಷೆಯನ್ನು ಬರೆಯಲು ತೊಡಗಿಸಿದೆ. ಒಂದೆರಡು ಸಲದ ವಾಚನದಿಂದ ಗ್ರಹಿಸಿದ ರಸಾನಂದವನ್ನು ಇಲ್ಲಿ ವ್ಯಕ್ತಪಡಿಸಲು ಯತ್ನಿಸಿದೆ. ●

"ಮಾಡಿದ್ದುಣ್ಣೋ ಮಾರಾಯಾ"

(ತರಂಗದೂರದರ್ಶನ ವಿಮರ್ಶೆ)

ವಿಮರ್ಶಕರು: ಶ್ರೀ. ಎಂ. ಡಿ. ರಾಮಚಂದ್ರ— ಕೊಯನಾ.

ಇಂದಿನ ನಮ್ಮ ಸಮಾಜದಲ್ಲಿ ಲಂಚರುಷುವತ್ತು ಮೊದಲಾದ ನೀತಿಬಾಹಿರ ಕೃಮಗಳಿಗೆ ಕೊರತೆಯೇನಿಲ್ಲಾ. ಯಾವ ಸಮಾಜದಲ್ಲಾದರೂ ಇಮು ಸರ್ವೇ ಸಾಧಾರಣವಾಗಿ ಕಂಡು ಬರುವ ಪಿಡುಗು. ಶ್ರೀ. ಬೇಂದ್ರೆ ಲಕ್ಷ್ಮಣರಾಯರು ಸಂಸಾರದ ವಾಸ್ತವ ಚಿತ್ರದ ಒನ್ನಲೆಯೊಂದರಲ್ಲಿ, ಸಮಾಜದಲ್ಲಿ ಕಂಡುಬರುವ ಈ ದೋಷವನ್ನು "ಮಾಡಿದ್ದುಣ್ಣೋ ಮಾರಾಯಾ" ತರಂಗರೂಪಕದಲ್ಲಿ ಎತ್ತಿ ಹಿಡಿದು ತೋರಿಸಿದ್ದಾರೆ.

ದಾಂಪತ್ಯಜೀವನದಲ್ಲಿ ಸಮತೋಲವನ್ನು ಕಾಪಾಡಿಕೊಂಡು ಬರುವುದರಿಂದ ಮಾತ್ರ ಪರಿಪೂರ್ಣತೆಯನ್ನು ಸಾಧಿಸಬಹುದು. ಗಂಡಸು ಹೆಸರಿಗೆ ಮನೆಯ ಯಜಮಾನನೇನೋ ಹೌದು; ಆದರೆ ಅಕಾರಣವಾಗಿ ಮನೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡರೆ, ಅವನು ಅಪ್ರಿಯವಾದ 'Boss' ಎನಿಸಿಕೊಳ್ಳುತ್ತಾನೆ. ಆದ್ದರಿಂದ ಗೃಹ-ಕೃತ್ಯದ ಎಲ್ಲ ವಿಷಯಗಳಲ್ಲೂ ಹೆಂಡತಿಯ ಮನೋಭಿಪ್ರಾಯ-ಇಚ್ಛೆಗಳನ್ನು, ಗಂಡನ ಅಭಿಪ್ರಾಯ ಮತ್ತು ಇಚ್ಛೆಗಳಿಗೆ ಸಮಾನತ್ವದ ಆಧಾರದ ಮೇಲೆ ಗಣನೆಗೆ ತೆಗೆದುಕೊಳ್ಳಬೇಕು. ಇದೇ ದಾಂಪತ್ಯ ಜೀವನದ ನೈಜ ಆರ್ಥ. ಗಂಡಸು, ಸಾಂಪತ್ತಿಕ ಗಳಿಕೆಯನ್ನು ಮಾಡುವವನಾದರೂ, ಮನೆ ಮತ್ತು ಅದರ ವಾತಾವರಣವನ್ನು ಕಲ್ಪಿಸುವವಳು ಹೆಂಗಸೇ.

ಸಮಾಜದಲ್ಲಿ ಕಾಣಬರಬೇಕಾದ ಈ ಮೇಲಿನ ನಿಯಮಗಳಿಗೆ ಹೊರತಾಗಿದ್ದಾರೆ, ಚಿತ್ರದ ಇಬ್ಬರೂ ಮುಖ್ಯ ವ್ಯಕ್ತಿಗಳು. ಅವರೆಂದರೆ ಆಫೀಸರ್ ಆನಂದ ಹಾಗೂ ಅವನ ಕಲಾಪ್ರೇಮಿ ಪತ್ನಿ — ಹೇಮಾ. ದಾಂಪತ್ಯದ ಕುರುಹಾಗಿ ಎದ್ದು ಕಾಣುವ ಇವರ ಏಕ ಮಾತ್ರ ಸುಪುತ್ರ— ಚಂದು— ತಾಯಿತಂದೆಯರ ಗುಣಗಳು ಎರಕ ಹೊಯ್ದಂತಿವೆ ಇವನಲ್ಲಿ. ಕಂಟ್ರಾಕ್ಟರನಾಗಿ ಬರುವ ಪಂಚಪ್ಪನ ಪಾತ್ರ, ಈ ರೂಪಕದಲ್ಲಿ ಅಷ್ಟೇನೂ ಮುಖ್ಯವೆನಿಸದಿದ್ದರೂ, ಸೂತ್ರದಾರನಂತೆ, ಸೂತ್ರದ ಗೊಂಬೆಗಳಂತಿರುವ ಅಂಕದ ಮುಖ್ಯ ವ್ಯಕ್ತಿಗಳಾದ, ಆನಂದ ಹೇಮಾರನ್ನು ಆಡಿಸುವುದರಲ್ಲಿ ಯಶಸ್ವಿಯಾಗಿದ್ದಾನೆ. ರೂಪಕದ ಇನ್ನೊಂದೇ ವ್ಯಕ್ತಿ. ಪ್ರೇಷಕಪಾತ್ರದ ಯೆಲ್ಲವ್ವನ ವ್ಯಕ್ತಿತ್ವ ಸಂದರ್ಭಕ್ಕನುಗುಣವಾಗಿ ಚಿತ್ರಿತವಾಗಿದೆ. ಲೇಖಕರು ತಮ್ಮ ಉದ್ದೇಶದಲ್ಲಿ ಸಾಕಷ್ಟು ಮಟ್ಟಿಗೆ ಸಫಲರಾಗಿದ್ದಾರೆ. ಈ ಸಾಂಸಾರಿಕ ಏಕಾಂಕದಲ್ಲಿ ಇರುವ ಐದೇ ಪಾತ್ರಗಳಲ್ಲಿ, ಅತಿ ಚಿಕ್ಕದಾದರೂ, ಚೊಕ್ಕವಾಗಿ— ಸಂಸಾರದ ಒಂದು ವಾಸ್ತವಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ.

ಆನಂದ, ಪಿ. ಡಬ್ಲ್ಯೂ. ಡಿ ಖಾತೆಯಲ್ಲಿ ತಕ್ಕ ಮಟ್ಟಿಗೆ ಜಬರ್ದಸ್ತಾದ ಸ್ಥಾನವನ್ನೇ ಅಲಂಕರಿಸಿರುವ ವ್ಯಕ್ತಿ. ಸಾಹೇಬಗಿರಿಗೆ ಲಕ್ಷಣವೆನಿಸುವ ಗತ್ತು, ಗೂಢವ್ಯಕ್ತಿತ್ವ ಎಲ್ಲವೂ ಇವೆ. ರಮಿ ಆಟದ ಮುಂದೆ, ಆನಂದನಿಗೆ ಬೇರೆ ಜಗತ್ತೇ ಕಾಣದು. ಹೆಂಡತಿ, ಮನೆ, ಮಕ್ಕಳನ್ನೂ ಮರೆತಾನು! ಹೆಂಡತಿಯ ಸ್ವೇಚ್ಛಾಪ್ರವೃತ್ತಿ ಅವನಿಗೆ ಸರಿಬೀಳದು; ಆದರೆ ತಾನೆ ತನ್ನ ಜೀವನದ ಎಲ್ಲ ನಡೆವಳಿಕೆಗಳಲ್ಲೂ ಆದರ್ಶವಾದಿಯೆ?— ಅಲ್ಲವೇ ಅಲ್ಲ— ತನ್ನ ಜೂಜಿಗೆ ಹಣ ದೊರೆತರೆ ಸರಿ. ಅದರ ಮೂಲದ ಬಗ್ಗೆ ಅವನಿಗೆ ಸ್ವಲ್ಪವೂ ವಿಚಾರಧಾರೆ ಬೇಡ. ತಾನು ಳಿಸಿದ್ದನ್ನು, ಇಷ್ಟಬಂದ ರೀತಿಯಲ್ಲಿ, ತಾನು ಮಾತ್ರ ಖರ್ಚುಮಾಡಬಹುದೆಂಬ ಅವನ ಮನೋವೃತ್ತಿ ನಿಜಕ್ಕೂ ಹೇಯವಾದುದು.

ಇತ್ತ ಅವನ ಹೆಂಡತಿ ಹೇಮಾಳಾದರೋ, ದಾರಿಕೆಟ್ಟು ನಡೆಯುವ ಗಂಡನನ್ನು ತಿದ್ದುವುದಂತಿರಲಿ, ಅವಳೂ ಇಂದಿನ ಸಮಾಜದಲ್ಲಿ— ಎಲ್ಲೆಲ್ಲೂ ಸಿಡಿದೆದ್ದಿರುವ ಸಮಾನಸ್ವಾತಂತ್ರ್ಯ, ಸಮಾನ ಹಕ್ಕುಗಳ ವರ್ಗದವಳು. ತನ್ನ ಮನೆಯಲ್ಲಿ ಇವಳ ಗಾಯನವನ್ನೇರ್ಪಡಿಸುವ ಬಗ್ಗೆ "ಸಾಹೇಬರಲ್ಲಿ ವಿನಂತಿಸಿಕೊಳ್ಳುತ್ತೀನಿ" ಎನ್ನುವ ಪಂಚಪ್ಪನ ಮಾತಿಗೆ— ಸಿಡಿಲೆರಗುವಂತೆ "ಹಾಡುವವಳು ನಾನೋ, ಅವರೋ?" ಎಂದು ಅಬ್ಬರಿಸುತ್ತಾಳೆ. ಕಲೆಯ ಉದ್ಧಾರದ ಸೋಗಿನಲ್ಲಿ—ಮಾತಾಡುವ ಈಕೆ, ಶಾಲೆಗೆ ಹೋಗುವ ತನ್ನ ಮಗನಿಗೆ ಹೊತ್ತಿಗೆ ಸರಿಯಾಗಿ ಊಡಿಗೆಯನ್ನೂ ಮಾಡಿಹಾಕಿ, ತಾಯಿಯೆನಿಸಿಕೊಂಡು ಹೆಂಗಸಿಗೆ ಸಹಜವಾದ ಈ ಕನಿಷ್ಠ ಕರ್ತವ್ಯವನ್ನು ಸಹೆ ಮಾಡಲಾರಳು. ಇದು ಬಹುಶಃ ಅವರ ಸಂಸಾರದ ಮಟ್ಟಿದ ಇನ್ನಾವುದೇ ಸಂಸಾರದಲ್ಲೂ ಕಾಣಬಹುದಾದ ಅತಿಪ್ರಾಮಾಣ್ಯ ವಿಷಯವಾಗಿರಬಹುದು. ಆದರೆ ಮಾನವವರ್ಗದ ಇಂದಿನ ಸಮಾಜದಲ್ಲಿ ವ್ಯಕ್ತಿಯ ಕರ್ತವ್ಯ, ನಡೆವಳಿಕೆಗಳ ಬಗ್ಗೆ ಅವರ ಅಂತಸ್ತು ದರ್ಜೆಗಳಿಗೆ ಯಾವ ರೀತಿಯ ರಿಯಾಯಿತಿಯೂ ಸಿಗದು. ಗಂಡನ ಳಿಕೆ-ಅಂತಸ್ತುಗಳಲ್ಲಿ ಪಾಲು ಬೇಕೆನ್ನುವವಳು, ಸಹಜವಾಗಿಯೇ, ಅವನ ದುಷ್ಕೃತ್ಯಗಳಲ್ಲಿಯೂ ಪಾಲ್ಗೊಳ್ಳುತ್ತಾಳೆ. "ಳಿಸೋದು ನಿಮ್ಮೊಬ್ಬರಿಗಾಗೇ ಅಲ್ಲ— ನಾವೂ ಅದರೊಳಗ ಪಾಲುಗಾರರಿದ್ದಿವಿ"—ಎಂದು ಅವಳಿಂದ ಲೇಖಕರು ಅತಿಮಾರ್ಮಿಕನಾಗಿ ಹೇಳಿಸಿದ್ದಾರೆ. ಅಂತೆಯೇ ದೃಶ್ಯದ ಕೊನೆಯಲ್ಲಿ— ಇಡೀ ಸಂಸಾರದ— ಮೂರು ವ್ಯಕ್ತಿಗಳೂ ದುಡಿತದಿಂದಲ್ಲದೆ, ಬೇರೊಂದು ರೀತಿಯಲ್ಲಿ ಬಂದ ಹಣದಲ್ಲಿ ಪಾಲುಗಾರರಾಗಿ ಹೊಂಚಿಕೊಂಡಿದ್ದಾರೆ.

ಅಂಕದ ತುಂಬಾ ಎದ್ದು ಕಾಣುವ ಮತ್ತೊಂದು ವ್ಯಕ್ತಿಯೇ, 'ಚಂದು'— ಹೇಮಾ—ಆನಂದರ ಸುಪುತ್ರ. ಈ ಸುಪುತ್ರನ ಮೊಳಕೆಯೊಡೆಯುತ್ತಿರುವ ವ್ಯಕ್ತಿತ್ವದಲ್ಲಿ, ತಂದೆಯ ದುಂದುವೆಚ್ಚ ತಾಯಿಯ ಹಟಮಾರಿತನ, ತನ್ನದೇ ಆದ ವಾಚಾಳಿತನ ಮನೆಮಾಡಿಕೊಂಡಿವೆ ತಾಯಿ-ತಂದೆಯರ ಆದರ್ಶ ಕಣ್ಣುಮುಂದೆಯೇ! ಮನಸ್ಸು ಮಾತ್ರ ಅತಿಸರಳ ಮತ್ತು ನಿರ್ಮಲವಾದುದು. ಇವ ನಿಜಕ್ಕೂ ಮರಿಸಾಹೇಬನೆ. ತಾನು ಸಾಹೇಬರ ಮಗನೆಂಬುದು ಅವನಿಗೂ ತಿಳಿದಿದೆ! ಮನೆಯವರ ಎಲ್ಲ ಚಾಳಿಗಳನ್ನೂ ಚಾಚೂ ಬಿಡದೇ ಪಂಚಪ್ಪನಿಗೆ ವರದಿ ಮಾಡುತ್ತಾನೆ. ನವನಾಗರಿಕತೆಯ ಅಪ್-ಟುಡೇಟ್ ಕುಮಾರನೇ ಹೌದು. ನಿಷ್ಕಲ್ಮಶಕತೆ, ವಾತ್ಸಲ್ಯ ಸಾಮರಸ್ಯವಿಲ್ಲದಿರುವ ಕುಟುಂಬದಲ್ಲಿ— ಅಂತ್ಯದಲ್ಲಿ ಆದ ಪರಿಣಾಮ ಅತಿ ಪರಿಣಾಮಕಾರಿಯಾಗಿ ನಿರೂಪಿಸಲ್ಪಟ್ಟಿದೆ. ಚಂದು ಕಳ್ಳ ಗಂಟೆನಲ್ಲಿ ನೂರರ ನೋಟೊಂದನ್ನು ಒಯ್ದು, ಚೆಹಾ ಅಂಗಡಿಯಲ್ಲಿ ಸಿಕ್ಕಿಬಿದ್ದುದು.

ಪಂಚಪ್ಪ— ಆನಂದನ ಬಿಲ್ಡಿಂಗ್ ಕಂಟ್ರಾಕ್ಟರ್. ಎಲ್ಲ ಕಂಟ್ರಾಕ್ಟರ್‌ಗಳಂತೆ ಸ್ವಲ್ಪ ಇಂಗ್ಲಿಷ್ ಬೆರೆತ ಕನ್ನಡ ಇವನ ಬಾಯಿಂದ ನಿರರ್ಗಳವಾಗಿ ಹೊರಬರುತ್ತದೆ. ಉದ್ಯೋಗಕ್ಕನುಗುಣವಾದ "ಸಮಯಸಾಧಕ ಪ್ರವೃತ್ತಿ ಇದೆ." ಸಾಹೇಬರು ಬಂದಮ್ಯಾಲ, ಅವರಿಗೆ ಸಾವಿರಾಂತ ಹೇಳ್ರಿ. ಬೇಕಾದರೆ ಐನೂರಂತ ಹೇಳ್ರಿ!

(ಕವರ್ ೩ನೆಯ ಪುಟಕ್ಕೆ ಮುಂದುವರಿದಿದೆ.)

ಸಾದರ ಸ್ವೀಕಾರ

೧೪. ಭಾರತದಲ್ಲಿ ಗ್ರಂಥಾಲಯಗಳ ಪ್ರಸಾರ (ಸಚಿತ್ರ ವಿಷಯನಿರೂಪಣಾ ಗ್ರಂಥ). ಲೇಖಕರು ಶ್ರೀ. ಕೆ. ಎಸ್. ದೇಶಪಾಂಡೆ ಎಂ. ಎ., ಡಿಪಿ. ಲಿಬ್. ಲೈಬ್ರೇರಿಯನ್ ಕರ್ನಾಟಕ ವಿ. ವಿದ್ಯಾಲಯ, ಧಾರವಾಡ. ಪ್ರಕಾಶಕರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಚಾರ ಶಾಖೆ, ಧಾರವಾಡ. ಪೂ. ಕ್ಯಾ. ಅ. ೧೦೮ ಪುಟಗಳು. ಬೆಲೆ ೦೦-೫೫

೧೫. ಕುಮಾರಕೃಪ (ಗೀತಗಳ ಸಂಕಲನ) ಬರೆದವರು 'ಗೋ. ಕೃ.' ಬೆಂಗಳೂರು. ಪ್ರಕಾಶಕರು ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು. ಕ್ರೌ. ಅ. ೭೮ ಪುಟಗಳು. ಬೆಲೆ ೧-೫೦.

೧೬. ಪುತ್ರಾಪೇಕ್ಷೆ (ಸಾಮಾಜಿಕ ನಾಟಕ). ಬರೆದವರು ಶ್ರೀ. ಕೆ. ಸೀತಾರಾಮಶಾಸ್ತ್ರಿ (ಹುಲಿಮನೆ). ಪ್ರಕಾಶಕರು ಶ್ರೀ ಸಿದ್ಧಿ-ವಿನಾಯಕ ಪ್ರಕಾಶನ, ಸಾಗರ (ಶಿವಮೊಗ್ಗ). ಕ್ರೌ ಅ. ೧೫೨ ಪುಟಗಳು. ಬೆಲೆ ೧-೫೦.

೧೭. ಲೇಖಕನ ಹೆಂಡತಿ (ಕಥಾಸಂಕಲನ). ಬರೆದವರು ಶ್ರೀಮತಿ ಸುಶೀಲಾ ಕೊಪ್ಪರ, ಬೆಂಗಳೂರು. ಪ್ರಕಾಶಕರು ಉಷಾ ಸಾಹಿತ್ಯ ಮಾಲೆ, ಮೈಸೂರು. ಕ್ರೌ. ಅ. ೧೫೬ ಪುಟಗಳು. ಬೆಲೆ ೧-೫೦.

೧೮. ಆಂತರ ರಾಷ್ಟ್ರೀಯ ರಾಜಕಾರಣ (ಪರಿಚಯಾತ್ಮಕ ಗ್ರಂಥ). ಲೇಖಕರು ಶ್ರೀಮಾನ್ ಕೃಷ್ಣಾಚಾರ್ಯ ಜೋಶಿ ಬಿ. ಎ., ಎಲ್‌ಎಲ್. ಬಿ., ಹೈದರಾಬಾದ್. ಪ್ರಕಾಶಕರು ವಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ. ಕ್ರೌ. ಅ. ೧೩೪ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೩-೫೦: ಸಾಮಾನ್ಯ ಪ್ರತಿಗೆ ೨-೦೦.

೧೯. ಬಾಳು-ಬೆಳಕು (ಅನುಭವೋಕ್ತಿಗಳ ಸಂಕಲನ). ಲೇಖಕರು 'ಚಿರಂತನ'. ಪ್ರಕಾಶಕರು ಸಂಗಮ ಪ್ರಕಾಶನ ಕಲ್ಮಡ್ಕ, ದ. ಕ. ಜಿಲ್ಲೆ. ಕ್ರೌ. ಗ್ಟಿದ ೧೨೦ ಪುಟಗಳು. ಬೆಲೆ ೦೦-೬೦.

೨೦. ಬೆಳಕು (ಹೈಸ್ಕೂಲಿನ ವಾರ್ಷಿಕ ಸಂಪುಟ). ಎಂಟು ಜನ ಅಧ್ಯಾಪಕರ ಸಂಪಾದಕ ಮಂಡಲಿಯಿಂದ ಸಂಪಾನೆ. ಪ್ರಕಾಶಕರು ಶ್ರೀಮಾನ್ ಎನ್. ಟಿ. ಪುರಾಣಿಕ ಬಿ. ಎ, ಬಿ. ಟಿ. ಮುಖ್ಯಾಧ್ಯಾಪ-ಕರು ಎಸ್. ಎಸ್. ಹೈಸ್ಕೂಲ್ ಬಾಗಲಕೋಟೆ. ಕ್ರೌ ಗ್ಟಿದ ಸುಮಾರು ೭೫ ಪುಟಗಳು.

೨೧. ನಾವು, ನಮ್ಮವರು (ಕವಿತಾ ಸಂಕಲನ). ಸಂಪಾದಕರು 'ಸಿಸು' ಸಂಗಮೇಶ. ಪ್ರಕಾಶಕರು ಭಾರತ ಸಾಹಿತ್ಯ ಭಾಂಡಾರ, ಯರನಾಳ, ಜಿ. ವಿಜಾಪುರ. ಕ್ರೌ. ಅ. ೧೦೮ ಪುಟಗಳು. ಬೆಲೆ ೧-೫೦.

೨೨. ನಾವು, ನಮ್ಮವರು (ಕಥಾಸಂಕಲನ). ಸಂಪಾದಕರು 'ಸಿಸು' ಸಂಗಮೇಶ. ಪ್ರಕಾಶಕರು ಭಾರತ ಸಾಹಿತ್ಯ ಭಾಂಡಾರ ಯರನಾಳ, ಜಿಲ್ಲಾ ವಿಜಾಪುರ. ಕ್ರೌ. ಅ. ೧೫೮ ಪುಟಗಳು. ಬೆಲೆ ೧-೫೦.

೨೩. ಗದ್ಯಮಣಿಮುಕುರ (ಆಯ್ದ ಗದ್ಯಭಾಗಗಳ ಸಂಕಲನ—ವಿಶೇಷ ಟಿಪ್ಪಣಿ ಸಹಿತ). ಸಂಪಾದಕರು ಮತ್ತು ಪ್ರಕಾಶಕರು: ಪಂಡಿತ ಹೆಚ್. ಎಂ. ರಾಮಾರಾಧ್ಯ (ಮೈಸೂರು ವಿದ್ಯಾ ಇಲಾಖೆ). ಕ್ರೌ. ಅ. ೧೫೮ ಪುಟಗಳು. ಬೆಲೆ ೧-೫೫.

(೬೩ನೆಯ ಪುಟದಿಂದ ಬಂದುದು)

ಕಡೀಗೆ ಏನೂ ಹೇಳಿದ್ದರೂ ನನ್ನದೇನೂ ಆಪ್ಲೀಜನ್ ಇಲ್ಲ! ಯಾವ ಜಾಗಕ್ಕೆ ಮುಟ್ಟಬೇಕೊ ಆ ಜಾಗಕ್ಕೆ ಮುಟ್ಟತಾವ ಸಾಕರಿ. I enjoy ತೊಗೊಳ್ರಿ ಬಾಯಿಸಾಹೇಬ್— dont worry ರಿ." ಎನ್ನುವ ಇವನ ಮಾತುಗಳು ವಿಡಂಬನಾತ್ಮಕವಾಗಿದ್ದರೂ, ಅತಿ ಸಹಜವಾಗಿವೆ.

ಸಮಾಜದಲ್ಲಿ ಬಾಹ್ಯ ಜೀವನಕ್ಕೆ ಸಂಬಂಧಿಸಿದಂತೆ, ಗಣ್ಯ ಸ್ಥಾನಗಳಲ್ಲಿದ್ದಾಗ್ಯೂ, ಗಂಡ ಹೆಂಡಿರಲ್ಲಿ ಸಾಮರಸ್ಯವಿದ್ದಂತೆ ತೋರಿ ಬರುವುದಿಲ್ಲ. ಹಾಲು ಜೇನಿನಂತೆ ಕೂಡಬೇಕಾದ ದಾಂಪತ್ಯದಲ್ಲಿ ವಿರಸ ಎದ್ದು ಕಾಣುತ್ತದೆ. ಈ ವಿರಸಕ್ಕೆ ಕಾರಣಕರ್ತರು ಯಾರೆಂದು ಹೇಳುವುದು ಕಷ್ಟ. ವರಿಷ್ಠಸ್ಥಾನದಲ್ಲಿದ್ದು ಅಧಿಕಾರ, ಹಣದಿಂದಾಗಿ ಸುಖಮಯ ಸಂಸಾರಜೀವನವನ್ನು ಮೂಲೆಗೊತ್ತಿದ್ದ ಆನಂದನೇ?— ಅಥವಾ ಕಲೆಯ ಉದ್ಧಾರದ ಹೆಸರಿನಲ್ಲಿ— ಸಾಮರಸ್ಯ ಜೀವನದ ಪ್ರಾಥಮಿಕ ಅವಶ್ಯಕತೆಗಳಿಗೇ ಗಮನಕೊಡದೇ ಗಂಡನೆಂದರೆ— ಯಾವುದೋ ಮೂಲೆಗುಂಪಿನ ಸದಸ್ಯನೆನ್ನುವ ಮನೋವೃತ್ತಿ ಹೊಂದಿದ್ದ— ಅವನ ಹೆಂಡತಿಯೆನಿಸುವ ಹೇಮಾಳೇ?— ನಿರ್ಧರಿಸುವುದು ಅಷ್ಟು ಸುಲಭವಲ್ಲ. ಆದರೆ ಇಷ್ಟಂತೂ ಖಂಡಿತ—ಅವರ ದಾಂಪತ್ಯಜೀವನದಲ್ಲಿ ಯಾವ ಅರ್ಥವೂ ಉಳಿದಿರಲಿಲ್ಲವೆಂಬುದು— ಸ್ವೇಚ್ಛಾವೃತ್ತಿಯೇ ನಮಗೆ ಒಡೆಮು ಕಾಣುವ ಅರ್ಥ. ಆ ಸಂಸಾರದಲ್ಲಿ ಗಂಡ-ಹೆಂಡಿರು ಕೂಡಿ ವರ್ತಿಸುವುದು ಯಾವಾಗೆಂದರೆ— ಅದು ವಿಪತ್ತು ಬಂದಾಗ—ಪೋಲಿಸನನ್ನು ನೋಡಿ ಲಂಚನಿರೋಧ ಶಾಖೆಯವರೆಂದು ನಿಜಕ್ಕೂ ಹೆದರಿದಾಗ ಮಾತ್ರ!

ಪ್ರೀತಿಯ ಸಲುವಳಿ

ಇದೇ ಜೂಲೈ ೧೯ನೆಯ ದಿನಾಂಕದಲ್ಲಿ ಜರುಗಿದ— ನನ್ನ
ಮಗಳು ಸೌ. ವೈಜಯಂತಿಯ ವಿವಾಹಸಂದರ್ಭದಲ್ಲಿ,
ನನ್ನ ಅನೇಕ ಜನ ಆಪ್ತಬಂಧುಗಳೂ, ಮಿತ್ರರೂ, ಮಾನ್ಯರೂ
ಮದುಮಗಳಿಗೆ ಶುಭಾಶೀರ್ವಾದಗಳನ್ನೂ ಒಲವಿನ ಕಾಣಿಕೆಗಳನ್ನೂ
ಕಳುಹಿಸಿ, ನನ್ನ ವಿಷಯದಲ್ಲಿರುವ ಆತ್ಮೀಯತೆಯನ್ನು ಪ್ರಕಟ-
ಗೊಳಿಸಿದ್ದಾರೆ. ಅವರೆಲ್ಲರಿಗೂ ವೈಯಕ್ತಿಕ ಕೃತಜ್ಞತೆ
ಗಳನ್ನು ತಿಳುಪಲು ಅಸಮರ್ಥನಾದುದರಿಂದ,
ಇಲ್ಲಿ ಸಾಮೂಹಿಕವಾಗಿ ಎಲ್ಲರಿಗೂ
ನನ್ನ ಕೃತಜ್ಞತೆಯನ್ನು ಸಲ್ಲಿಸಬಯಸುತ್ತೇನೆ.

ಬಿಟಗೇರಿ ಕೃಷ್ಣಶರ್ಮ

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣೆಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ-ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು-ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳಿದೈತವ್ವಾ —
ಮುಂದ ಹಿಂದ ಮ್ಯಾಲ ತಳಗs—ಚೆಂದs ಗಂಧs ಹರಡೈತವ್ವಾ!

ಎಂಬ ಆನಂದಾನುಭವನನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ೮೦ ಪುಟಗಳು ಬೆಲೆ ರೂ. ೧ . ೨೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ವ್ಯವಹಾರ, ಆದರ್ಶ

❋

'ಆದರ್ಶ' ಎಂಬ ನುಡಿಯ ಕೇಳಿದೊಡನೆ ಅಣಕುನಗೆ ನಗುವ ಅಣ್ಣಂಗಳೆ,
ಆದರ್ಶವೆಂಬುದು ನಿಮ್ಮ ವ್ಯವಹಾರದಿಂದ ಭಿನ್ನವಾದುದಲ್ಲ ಕೇಳಿಭೋ !
ಬೀಜ ಮೊಳೆತು ಬೆಳೆದು ನಿಂತ ಮರನ ವ್ಯವಹಾರವೆಂಬಿರಾದೊಡೆ
ಅದುವೆ ಹೂತು ಕಾತು ತನಿವಣ್ಣ ನೀಯಬೇಕೆಂಬಾಶೆ ಆದರ್ಶವೈಯಾ !
ಹೂ-ಹಣ್ಣುಗಳನೀಯದ ಬಂಜೆಗಿಡ-ಮರ ಸಾವಿರ-ಸಾವಿರವಿದ್ದರೂ
ಅವುಗಳ ಪ್ರಯೋಜನನೇನಯ್ಯಾ, ಉರಿವ ಉರುವಲಿಂಗವಲ್ಲದೆ ?
ಕಮ್ಮಲರು- ತನಿವಣ್ಣುಗಳ ಪಡೆಯಬೇಕೆಂಬ ಪೇರಾಸೆಯೊಳು
ನೆಟ್ಟ ಗಿಡ-ಮರಂಗಳಿಗೆ ಮೊದಲಿಂದಲೂ ಹಪವನೀವುದು
ನಗೆಯ ಮಾತಾಯಿತೆ ತಂದೆ
ಇಂದಿನ ಕಾಲದ ಕೃಷಿಗಾಗಿ ಹಿಂದಣ ಕಾಲದ ಹಪದ ಬೀಜಂಗಳ-
ನಾಯ್ವುದೆ ಆದರ್ಶ
ಇಂದು ಗೈದ ಕೃಷಿ ಮುಂದಿನವರಿಗೆ ಒಳ್ಳೆಯ ಬೀಜಂಗಳ-
ನೊಪಗಿಸಲೆಂಬುದೆ ಆದರ್ಶ !
ಇಂತಹ ಕಲ್ಯಾಣಸಾಧಕ ಆದರ್ಶಬೋಧೆಯ ನುಡಿಕೇಳಿ
ಅಣಕು ನಗೆ ನಗುವವರ ಕಂಡು ಕನಲಿನಿಂತಿಹ ಕಾಣಯ್ಯಾ
ನಮ್ಮ ಕಾಲರಾಯ !

—ಸಾಮಾಜಿಕ

ಈ ಸಂಚಿಕೆಯಲ್ಲಿ

ಕೆಂಪು ಚೀನಾದ ಕಡಿಗೇಡಿತನ (ಸಂಪಾದಕೀಯ)
ಸಂಪಾದಕರು ೩೭೩

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
' ಕಾಲಭೈರವ ' ೭೫

ನಾನು ಕೊಂದ ಹುಡುಗಿ (ಸಣ್ಣಕಥೆ)
ಶ್ರೀ. ರಾಘವೇಂದ್ರ ಪಾಸನೀಸ್, ಎಂ. ಎ., ಡಿಪ್. ಲಿಬ್. ಪುಣೆ ೭೭

ಕರ್ಣನ ಸತ್ತ್ವ ಯಾವುದು ? (ವ್ಯಕ್ತಿತ್ವ ವಿಮರ್ಶೆ)
ಶ್ರೀ. ಬಿ. ಬಿ. ರಾಜಪುರೋಹಿತ ಎಂ. ಎ. ಧಾರವಾಡ ೮೫

ಗಾಂಧಾರಿಯ ಶೋಕ (ಕವನ)
ಶ್ರೀ. ಕೆ. ವ್ಹಿ. ತಿರುಮಲೇಶ, ಪನ್ನೆಪ್ಪಲ ೮೯

ಸುಖ-ದುಃಖ (ಕವನ)
' ಮಾಲತೀಪ್ರಿಯ ' ಬೆಳಗಾಂವಿ ೮೯

ಹಳ್ಳಿಯ ಏಳಿಗೆ (ತರಂಗ ರೂಪಕ)
ಶ್ರೀ. ಬೆಟಗೇರಿ ಕೃಷ್ಣಶರ್ಮಾ, ಧಾರವಾಡ ೯೦

ಕಾಮಾಖ್ಯಾ ಮಂದಿರ (ಪ್ರದೇಶ ಪರಿಚಯ)
ಶ್ರೀ. ಪಿ. ವ್ಹಿ. ಗುಡಿ, ಗೌಹಾಟಿ (ಆಸಾಂ ೯೪

ತರ್ಪಣ (ಕವನ)
ಸೌ. ಪಾರ್ವತೀದೇವಿ ಹೆಗಡೆ, ವಿಜಾಪುರ ೯೭

ಮುಳಿಗಾಲದ ನಮ್ಮೂರು (ಲಲಿತ ಪ್ರಬಂಧ)
ಶ್ರೀ. ಕುಲಕರ್ಣಿ ಶಂಕರರಾಯರು, ಅಕ್ಕಲಕೋಟೆ ೯೯

ಹೀರು ಸತ್ತ್ವನಿಲ್ಲೆ (ಕವನ)
ಶ್ರೀ. ' ರಂಜನ ' ಭಟ್ಟ, ಮದ್ರಾಸ್ ೧೦೨

ಸಾಹಿತ್ಯವಿಮರ್ಶೆಯ ತಿಕ್ಷ್ಣಣರಂಗ
ಶ್ರೀ. ಡಿ. ಸೀತಾರಾಮು ಮತ್ತು ಶ್ರೀ. ಡಿ. ಸುಬ್ರಹ್ಮಣ್ಯಭಟ್ಟರು ೧೦೩

ನೀ ಬರುವೆಯೆಂದು ಒಲವೆ ? (ಕವನ)
ಶ್ರೀ. ಬಿ. ರಘುರಾಮು ಬಿ. ಎ.; ಬಿ. ಟಿ ಕಾಸರಕೋಡು ೧೦೪

ಸಾದರ ಸ್ವೀಕಾರ .... (ಹೊದಿಕೆಯ ೩ ನೆಯ ಪುಟ)

ಜಯಂತಿ

ಸಂಪುಟ ೨೨] [ಸಂಚಿಕೆ ೩

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

●

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕೆಂಪು ಚೀನದ ಕಿಡಿಗೇಡಿತನ

ಕಮ್ಯುನಿಸ್ಟ್ ಚೀನ ಸರಕಾರ, ತನ್ನ ಸೈನ್ಯದ ಪಾಶವ ಶಕ್ತಿಯಿಂದ, ತಿಬೇಟದಲ್ಲಿ ಪ್ರಲಯ ಕೋಲಾಹಲವನ್ನೇ ನಡೆಯಿಸಿಬಿಟ್ಟಿದೆ. ತಿಬೇಟದ ಪರಂಪರೆಯಂತೆ ಅಲ್ಲಿಯ ಸಾರ್ವಭೌಮ ಅಧಿಕಾರವನ್ನು ಹೊಂದಿದ್ದ ದಲಾಯಿಲಾಮಾ ಅವರು ಅಧಿಕಾರಚ್ಯುತರಾಗಿ ಭಾರತದ ಆಶ್ರಯಚ್ಛತ್ರದಲ್ಲಿ ನಿಂತಿದ್ದಾರೆ. ತಿಬೇಟದ ಪರಂಪರಾಪ್ರಿಯ ಜನತೆಗೆ ಕಮ್ಯುನಿಸ್ಟ್ ಚೀನದ ಆಡಳಿತವು ಒಪ್ಪಿಗೆಯಿಲ್ಲವಾದುದರಿಂದ, ವಿರೋಧಿಗಳಾಗಿ ನಿಂತ ಜನರನ್ನೂ ಚೀನೀಸೈನ್ಯ ಹುಡಿಗೂಡಿಸುತ್ತ ನಡೆದಿದೆ. ನಿರ್ಭಾಗ್ಯ ಹಸುಗಳು ಹುಲಿಯ ಬಾಯಿಯಲ್ಲಿ ಸಿಕ್ಕಿ ಕೂಗಾಡುತ್ತಲಿವೆ. ಆದರೆ ಇಂದು ಅವುಗಳ ಕೂಗನ್ನು ಕೇಳುವವರೇ ಇಲ್ಲ.

ಇಂದು ಎಲ್ಲ ರಾಜಕೀಯ ತತ್ತ್ವಗಳೂ ಸಾಮಾಜಿಕ ತತ್ತ್ವಗಳೂ 'ಮಾನವತೆ' 'ಮಾನವತೆ' ಎಂಬ ನುಡಿಯನ್ನು ಮತ್ತೆ ಮತ್ತೆ ಮೊರೆಯುತ್ತಲಿವೆ. ಆದರೆ ಬಲಿಷ್ಠರ ಪಾಶವಶಕ್ತಿ ಮಾನವತೆಯ ನೆತ್ತರಿನ ಓಕಳಿಯಾಡುತ್ತಿರುವುದನ್ನು ತಡೆಯುವವರು ಎಲ್ಲಿಯೂ ಕಾಣುತ್ತಿಲ್ಲ. ಬಲಿಷ್ಠ ಮಾಡಿದ ಮಾನವತೆಯ ಕೊಲೆಯನ್ನು ಕಂಡು ಎಲ್ಲರೂ ಮೌನವಹಿಸುತ್ತಿರುವರು. ಮಾತಿಗೂ ಕೃತಿಗೂ ಸಂಬಂಧವೇ ಇಲ್ಲದಂತಾಗಿದೆ. ತಿಬೇಟದ ಇಂದಿನ ದುರವಸ್ಥೆಯನ್ನು ಕಂಡು ಒಳಗೊಳಗೆ ಮರುಗುವವರು, ಸಂತಪ್ತರಾಗಿರುವವರು ಬಹುಜನರು ಇರಬಹುದಾದರೂ, ಬಹಿರಂಗವಾಗಿ ಅದನ್ನು ವಿರೋಧಿಸಿ ಮಾತನಾಡುವ ಧೈರ್ಯವನ್ನೂ ತಡೆಯುವ ಧೈರ್ಯವನ್ನೂ ಇಂದು ಜಗತ್ತಿನಲ್ಲಿಯ ಯಾವ ಮಹಾರಾಷ್ಟ್ರವೂ ತೋರಿಸಲು ಸಿದ್ಧವಿಲ್ಲ. ಸಂಯುಕ್ತ ರಾಷ್ಟ್ರಸಂಘದಂತಹ ಜಾಗತಿಕ ನ್ಯಾಯ-ಶಾಂತಿ-ಸಮಾಧಾನಗಳಿಗಾಗಿ ಹೆಣಗುವ ಮಹಾಸಂಸ್ಥೆಯೂ, ಇಂತಹ ಸಂದರ್ಭಗಳಲ್ಲಿ ಹೇಳವನಂತೆ ವರ್ತಿಸುವುದು. ಇಂದು ತಿಬೇಟಿಗರಿಗಾದ ಅನ್ಯಾಯಕ್ಕೆ ಪರಿಹಾರ ಸಿಕ್ಕುವ ಬಗೆ ಹೇಗೆ?

ಅಂದು ಕ. ಚೀನದ ಮುಖ್ಯ ಮಂತ್ರಿ ಚೌ ಎನ್-ಲಾಯರು ಭಾರತಕ್ಕೆ ಬಂದು, ಅಭೂತಪೂರ್ವವಾದ ಆತಿಥ್ಯವನ್ನು ಪಡೆದು, ಚೀನಾ-ಭಾರತ ಮೈತ್ರಿಯ ಬಗೆಗೆ ನಾಟಕೀಯ ಮಾತುಗಳನ್ನಾಡಿ, ಭಾರತದ ಮುಖ್ಯಮಂತ್ರಿ ಜವಾಹರರು ಪುರಸ್ಕರಿಸಿದ ಪಂಚಶೀಲ ತತ್ತ್ವವನ್ನು ಒಪ್ಪಿಕೊಂಡು, ಅದರಂತೆ ಲೋಕಕ್ಕೆಲ್ಲ ಸಾರಿ ಹೇಳಿದರು, ಇಂದು ಅದೇ ಚೌ ಎನ್-ಲಾಯರ ಚೀನಾ ಸರಕಾರ, ಹಿಂದೆ ಒಪ್ಪಿಕೊಂಡ ಪಂಚಶೀಲ ತತ್ತ್ವವನ್ನು ಮೆಟ್ಟಿ ಮಣ್ಣುಗೂಡಿಸಿ ನಿಂತಿದೆ. ಇಷ್ಟೇ ಅಲ್ಲ; ಎಂದಿನಿಂದಲೂ ಸರ್ವಸಮತಾಬುದ್ಧಿಯಿಂದ, ಉದಾರ ಭಾವದಿಂದ ಚೀನಕ್ಕೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಸದಸ್ಯಸ್ಥಾನ ಸಿಕ್ಕಬೇಕೆಂದು ಮನವಾರೆ ಹೆಣಗುತ್ತ ಬಂದಿರುವ ಭಾರತದೊಂದಿಗೆ ಸಂಪೂರ್ಣ ಕೃತಘ್ನತೆಯಿಂದ ನಡೆದುಕೊಳ್ಳುತ್ತಲಿದೆ. ಕೆಂಪು ಚೀನಾ ಸರಕಾರ, ಇಂದು ಭಾರತದೊಂದಿಗೆ ನಡೆದುಕೊಳ್ಳುವ ರೀತಿಯನ್ನು ನೋಡಿದರೆ, ಕಮ್ಯುನಿಜಮ್ ತನ್ನ ಅನುಯಾಯಿಗಳನ್ನು ಭಾವನಾರಹಿತ ಮೃಗಗಳನ್ನಾಗಿ ಮಾಡುತ್ತಿದೆಯೇನೊ ಎಂದು ಪ್ರತಿಯೊಬ್ಬ ಸಹೃದಯನಿಗೂ ಎನಿಸದಿರದು.

ಇಂದು ಕೆಂಪು ಚೀನಾ ಸೈನ್ಯವು ಭಾರತದ ಉತ್ತರ ಗಡಿಯಲ್ಲಿ ನುಗ್ಗಿ ಒಳಸೇರಿ, ಭಾರತದ ಪ್ರದೇಶದಲ್ಲಿಯೆ ತನ್ನ ಠಾಣ್ಯಗಳನ್ನು ನೆಲೆಗೊಳಿಸುತ್ತಲಿದೆಯೆಂಬ ಸುದ್ದಿ ಸಾರ್ವತ್ರಿಕವಾಗಿ ಹಬ್ಬಿದೆ. ಭಾರತದ ವಿದೇಶಮಂತ್ರಿ ಶಾಖೆಯವರು ಈ ಸುದ್ದಿಯನ್ನು ಸಾಮಾನ್ಯವಾಗಿ ಒಪ್ಪಿಕೊಂಡು, ಅದಕ್ಕೆ ಅಧಿಕೃತ ಸ್ವರೂಪವನ್ನೂ ತಂದುಕೊಟ್ಟಿದ್ದಾರೆ. ದಲಾಯಿಲಾಮಾ ಅವರಿಗೆ ಆಶ್ರಯಕೊಟ್ಟ ದಿನದಿಂದ ಕಮ್ಯೂನಿಸ್ಟ್ ಚೀನದ ರಾಜಕಾರಣಿಗಳು, ಭಾರತ ಸರಕಾರವನ್ನು ಶಾಪಿಸುತ್ತ ಮಾತ್ರ ಬಂದಿದ್ದರು; ಒಳ್ಳೊಳ್ಳೆಯ ಹೊಣೆಗಾರಿಕೆಯ ಸ್ಥಾನದಲ್ಲಿದ್ದ ನಾಯಕರೂ ಹೊಣೆಗೇಡಿಗಳಂತೆ ಭಾರತವನ್ನು ಬೈದರು; ಇನ್ನೂ ಬೈಯುತ್ತಲಿದ್ದಾರೆ.

ಈ ಬೈಗಳ ಹಿಂದೆಯೇ ಹೊರಬಿದ್ದ ಮತ್ತೊಂದು ವಿಕೃತಸ್ವರವೆಂದರೆ, ಭಾರತದ ಉತ್ತರದ ಗಡಿಯಲ್ಲಿರುವ ಸಿಕೀಮ್, ಭೂತಾನ್, ಲಡಖ್ ಇವೆಲ್ಲ ಚಿನಾರಾಷ್ಟ್ರದ ಅವಿಭಾಜ್ಯ ಅಂಗಗಳೆಂಬ ಪ್ರಚಾರವಾಣಿ, ಆ ಪ್ರಚಾರವಾಣಿಯನ್ನು ಸತ್ಯಮಾಡಿ ತೋರಿಸಬೇಕೆಂದೇ ಈಗ ಉತ್ತರ ಗಡಿಯನ್ನು

ಚೀನೀ ಸರಕಾರ ಉಲ್ಲಂಘಿಸಿದೆಯೆಂದು, ಯಾರೂ ಅಭಿಪ್ರಾಯಪಡ ಬಹುದು. ರಾಷ್ಟ್ರ-ರಾಷ್ಟ್ರ ಸಂಬಂಧದ ನೀತಿಯಂತೆ, ಇವೆಲ್ಲ ನುಡುಕಿನ ಮಾತು-ಕೃತಿಗಳ ಬಗೆಗೆ ಭಾರತ ಸರಕಾರ ಪೇಕಿಂಗ್ ಸರಕಾರಕ್ಕೆ ಪತ್ರ ಬರೆದು ಕೇಳಿದರೆ, ಅದರಿಂದ ಯಾವ ಉತ್ತರವೂ ಬಂದಿಲ್ಲ. ಬಹುಶಃ ಅದು ' ನಮ್ಮ ಕೃತಿಯೇ ನಿಮ್ಮ ಆಕ್ಷೇಪಣೆಗಳಿಗೆ ಉತ್ತರವಾಗಿರಲು, ಬೇರೆಯ ಮಾತಿನ ಉತ್ತರವನ್ನು ಏಕೆ ಕೊಡಬೇಕು ? '— ಎಂದು ಸುಮ್ಮಗಿದ್ದು ಬಿಟ್ಟರಬೇಕು. ಚೀನೀಯರು ಇಂದು ಭಾರತ ರಾಷ್ಟ್ರ ವಿಷಯದಲ್ಲಿ ನಡೆಸಿರುವ ಕಿಡಿಗೇಡಿತನದ ಕೃತಿಗಳನ್ನು ನೋಡಿದರೆ, ಅವರು ಭಾರತದೊಂದಿಗೆ ಯುದ್ಧಕ್ಕೆ ಕಾಲುಕೆದರುತ್ತಿರುವರೆಂಬುದು ಸ್ಪಷ್ಟವಾಗಿ ಕಂಡುಬರುತ್ತಲಿದೆ. ತಿಬೇಟಿವನ್ನು ನುಂಗಿ ನೀರು ಕುಡಿದ ಕಮ್ಯುನಿಸ್ಟ್ ಚೀನೀಯರ ಆಶಾಪಿಶಾಚ, ಈಗ ಭಾರತವತ್ತ ಬಾಯ್ತೆರೆದು ನಿಂತಿದೆ. ನೀತಿ-ನ್ಯಾಯ-ಸ್ನೇಹಧರ್ಮ-ಇವೆಲ್ಲವನ್ನೂ ತೊತ್ತುಳಿದುಳಿದು, ತನ್ನಷ್ಟಕ್ಕೆ ತಾನು ಸುಖಶಾಂತಿಗಳಿಂದ ಬದುಕಬೇಕೆಂದು ಸ್ವಯಂಪೂರ್ಣತೆಗಾಗಿ ಪ್ರಯತ್ನ ನಡೆಯಿಸಿರುವ ಭಾರತ ರಾಷ್ಟ್ರವನ್ನು ನಿರ್ನಾಮಕರಣವಾ ಕೆಣಕುತ್ತಲಿವೆ.

ಪಾಶವ ಬಲದ ಗೆಲವಿನ ಮನೋಧರ್ಮವೇ ಇಂತಹದು. ತಿಬೇಟಿವಲ್ಲಿ ತನಗೆ ಗೆಲವು ದೊರೆಯಿತು. ಆ ಗೆಲವಿನ ನಶೆ ಭಾರತವತ್ತ ಹೊರಳುವ ದುರಾಕಾಂಕ್ಷೆಯನ್ನು ಹುಟ್ಟಿಸಿತು. ಕಳೆದ ಮಹಾಯುದ್ಧದ ಪ್ರಾರಂಭದಲ್ಲಿಯೂ ಹೀಗೆಯೆ ನಡೆಯಿತು. ಬಲಿಷ್ಠ ರಾಷ್ಟ್ರಗಳಾದ ಇಟಲಿ-ಜರ್ಮನಿಗಳು ಪ್ರಾರಂಭದಲ್ಲಿ ಆಕ್ರಮಿಸಿದ ಚಿಕ್ಕ ರಾಷ್ಟ್ರಗಳ ಕಡೆಗೆ ಇಗ್ಲಂಡ್-ರಶಿಯಗಳು ಉಪೇಕ್ಷೆಯನ್ನು ತೋರಿಸಿದುವು. ಮೌನವನ್ನು ವಹಿಸಿ ಅರ್ಧಸಮ್ಮತಿಯನ್ನೇ ತೋರಿಸಿದಂತೆ ಮಾಡಿದುವು. ಈ ವಿಜಯದ ನಶೆ ಜರ್ಮನಿ-ಇಟಲಿಗಳ ಬುದ್ಧಿಯನ್ನು ಕೆಡಿಸಿ, ಅವು ಸಾಕಷ್ಟು ರಾಷ್ಟ್ರಗಳ ಸಮಾಧಾನ ಜೀವನವನ್ನು ಹಾಳುಮಾಡತೊಡಗಿದಾಗ, ಇಂಗ್ಲಂಡಿನ ಪ್ರಧಾನಮಂತ್ರಿ ' ಛತ್ರಿಯ ' ಚೆಂಬರ್ಲೀನರು ತಮ್ಮ ರಾಷ್ಟ್ರವನ್ನು ಯುದ್ಧದಲ್ಲಿ ನುಗ್ಗಿಸಿದರು. ರಶಿಯನರೂ ಅವರ ನೆರವಿಗೆ ನಿಂತರು. ಮೊಳಕೆಯಿರುವಾಗಲೇ ಚಿವುಟುವ ಕಾರ್ಯವು ನಡೆದಿದ್ದರೆ, ಕಳೆದ ಮಹಾಯುದ್ಧವು ಅಷ್ಟೊಂದು ರುದ್ರಸ್ವರೂಪವನ್ನು ಪಡೆಯದೆ ಇರಬಹುದಾಗಿತ್ತು.

ಈಗಲೂ ಹಾಗೆಯೇ ಆಗಿದೆ. ತಿಬೇಟವನ್ನು ನುಂಗಿ ನೀರು ಕುಡಿದರೂ, ಎಲ್ಲಿಂದಲೂ ತೀಕ್ಷ್ಣ ವಿರೋಧವು ಬಾರದಿದುರಿಂದ, ಕಮ್ಯುನಿಸ್ಟ್ ಚೀನಾ ಈಗ ಭಾರತದ ಅಭಿಯೋಗಕ್ಕೆ ಮುಂದಡಿಯಿಟ್ಟಿದೆ. ನಿಜವಾಗಿ ನೋಡಿದರೆ ಭಾರತ ರಾಷ್ಟ್ರವು ನೊನ್ನೆ ಮೊನ್ನೆ ಚೇತರಿಸಿಕೊಂಡೆದ್ದ ಹಳೆಯರೋಗಿ. ಆದುದರಿಂದಲೇ ತನ್ನ ಅಂಗಾಂಗಗಳ ಕೊರತೆಗಳನ್ನು ತುಂಬಿ, ಸರ್ವಾಂಗ ಸಮೃದ್ಧತೆಯನ್ನು ತಂದುಕೊಳ್ಳ ಬೇಕೆಂಬುದೇ ಅದರ ಮುಖ್ಯ ಗುರಿಯಲ್ಲದೆ, ಇನ್ನೊಬ್ಬರ ಮೇಲೆ ಏರಿ ಹೋಗಬೇಕೆಂಬ ದುರುದ್ದೇಶವನ್ನು ಇರಿಸಿಕೊಂಡಿಲ್ಲ. ಎಂತಲೇ ಈ ರಾಷ್ಟ್ರವು ಯುದ್ಧೋಪಯುಕ್ತ ಸೈನ್ಯ-ಶಸ್ತ್ರಾಸ್ತ್ರಗಳನ್ನು ಬೆಳೆಸುವುದರ ಕಡೆಗೆ ವಿಶೇಷ ಗಮನಕೊಟ್ಟಿಲ್ಲ. ತನ್ನ ಕಲ್ಯಾಣಸಾಧನೆಯೊಂದಿಗೆ, ಜಗತ್ತಿನ ಕಲ್ಯಾಣಸಾಧನೆಯೂ ಆಗಬೇಕೆಂಬುದು ಭಾರತದ ಇಂದಿನ ಪ್ರತಿಯೊಂದು ಚಟುವಟಿಕೆ.

ಕಮ್ಯುನಿಸ್ಟ್ ರಾಷ್ಟ್ರಗಳೋ, ಹುಟ್ಟುವಾಗಲೇ ಅವು ಆಕ್ರಮಕ ಶಕ್ತಿ-ಸಾಧನಗಳನ್ನು ಬೆಳೆಸುವ ಗುರಿಯಿಂದ ಹೊರಟಿರುವುವು. ಈ ಮಾತಿಗನುಸಾರವಾಗಿ ಕೆಂಪು ಚೀನಾ ಬಲಾಢ್ಯವಾದ ಸೈನ್ಯವನ್ನು ಕಟ್ಟಿದೆ; ಅಪರಿಮಿತ ಹಿಂಸಾಸಾಧನಗಳನ್ನು ಸಂಗ್ರಹಿಸಿದೆ. ದುರ್ದೈವ ವಶಾತ್ ಭಾರತವು ಚೀನಾದ ಸೈನ್ಯಶಕ್ತಿಯನ್ನು ಎದುರಿಸಬೇಕಾದ ಪ್ರಸಂಗ ಬಂದರೆ, ಅದನ್ನು ಸಹಜವಾಗಿ ನಿವಾರಿಸಲಿಕ್ಕೆ ಸಾಧ್ಯವಿದೆಯೆ ? ಆದುದರಿಂದಲೇ ಕೆಂಪು ಚೀನಾದ ಈ ದುಶ್ಯಕ್ತಿಯನ್ನು ಹುಡಿಗೂಡಿಸಲು ಇಂದು ನೆರೆಯ ರಾಷ್ಟ್ರಗಳೂ ಮಿತ್ರರಾಷ್ಟ್ರಗಳೂ ಒಂದುಗೂಡಿ ನಿಂತು, ಭಾರತಕ್ಕೆ ಬಲದ ನೆರವನ್ನು ಕೊಡಬೇಕಾಗಿದೆ. ಪಾಕಿಸ್ತಾನ್, ಅಫಗಾನಿಸ್ತಾನ್, ಪರ್ಸಿಯಾ-ಅರಬರಾಷ್ಟ್ರ, ಬ್ರಹ್ಮದೇಶ, ಇಂಡೋನೇಶಿಯಾ, ಜಪಾನ್, ಇವೆಲ್ಲ ಭಾರತದ ನೆರವಿಗೆ ನಿಂತುಕೊಳ್ಳಬೇಕು. ಇಂಗ್ಲಂಡ್ ಅಮೇರಿಕೆ, ಮೊದಲಾದ ಪಶ್ಚಿಮದ ಮಹಾರಾಷ್ಟ್ರಗಳು, ಧೈರ್ಯದಿಂದ ತಮ್ಮ ವಿರೋಧವನ್ನು ವ್ಯಕ್ತಪಡಿಸಿ, ಭಾರತದ ನೈತಿಕ ಧೈರ್ಯವನ್ನು ಹೆಚ್ಚಿಸಬೇಕು. ಭಾರತದ ಪರಮಮಿತ್ರ ತಾನೆಂದು ಲೋಕದಲ್ಲೆಲ್ಲ ಸಾರುತ್ತಲಿರುವ ಸೋವಿಯೆಟ್ ರಸಿಯಾ, ತನ್ನ ಇನ್ನೊಂದು ಮಿತ್ರರಾಷ್ಟ್ರವಾದ ಚೀನಾಕ್ಕೆ ಕಿವಿಹಿಂಡಿ ಬುದ್ಧಿಯನ್ನು ಕಲಿಸಬೇಕು. ಸಕಾಲದಲ್ಲಿ ಇವೆಲ್ಲ ನಡೆಯದೆಹೋದರೆ, ಕಮ್ಯುನಿಸ್ಟ್ ಚೀನಾದ ಆಶಾಪಿಶಾಚಕ್ಕೆ ಕೊಂಬುಗಳೊಡೆದು ಅದು ಲೋಕಕಂಟಕವಾಗಿ ನಿಲ್ಲಬಹುದು. ಬರೀ ಅಧಿಕಾರಸ್ಥಾನ ಗಳಿಸುವುದಷ್ಟೇ ದೊಡ್ಡ ವಿಷಯವಲ್ಲ. ಆ ಸ್ಥಾನಗಳ ಹೊಣೆಗಾರಿಕೆಯನ್ನು ಅರಿತು, ಮಾನವತೆ ಗೊಡಗಲಿಳುವ ಅನರ್ಥಗಳನ್ನು ಮೊದಲೇ ತಪ್ಪಿಸುವುದು ದೊಡ್ಡ ಕೆಲಸ. ಎಲ್ಲ ರಾಷ್ಟ್ರಗಳ ಧುರೀಣರೂ ಈ ಕರ್ತವ್ಯಬುದ್ಧಿಯಿಂದ ನಡೆದುಕೊಳ್ಳ ಬೇಕಾದ ಅಗತ್ಯವಿದೆಯಾಗ.

ನಮ್ಮ ಮಾತು

ನಮ್ಮ ವಾಚಕವರ್ಗದ ಉಪೇಕ್ಷಾವೃತ್ತಿ, ಜಯಂತಿಯ ಬಲವನ್ನು ದಿನದಿನಕ್ಕೆ ಕುಂದಿಸುತ್ತಲಿದೆ. ಜಯಂತಿ ಬೇಡವಾದವರು, ಒಂದು ಕಾರ್ಡು ಬರೆದು ಮೊದಲೇ ಆ ಮಾತನ್ನು ತಿಳಿಸಿಬಿಟ್ಟರೆ, ಜಯಂತಿಗೆ ಅದೊಂದು ದೊಡ್ಡ ಉಪಕಾರ. ಆದರೆ, ಅನೇಕ ಮಿಡಲ್‌ಸ್ಕೂಲ್-ಹೈಸ್ಕೂಲುಗಳ ಮುಖ್ಯಾಧ್ಯಾಪಕರಂತಹರೂ, ಸಾರ್ವಜನಿಕ ಸಂಸ್ಥೆಗಳ ಅಧಿಕಾರಿಗಳಂತಹರೂ, ನೆನಪಿನೋಲೆ ಬರೆದಾಗ ಸುಮ್ಮಗಿದ್ದು, V. P-ಗಳುಹಿದಾಗ ನಿರ್ದಾಕ್ಷಿಣ್ಯವಾಗಿ, ಸ್ವೀಕರಿಸದೆ ಮರಳಿಬಿಟ್ಟಿರುವರು. ಇಂತಹ ಸಾಂಸ್ಕೃತಿಕ ಸಂಸ್ಥೆಗಳವರೇ ಜಯಂತಿಯನ್ನು ಹೀಗೆ ಉಪೇಕ್ಷೆಯಿಂದ ನೋಡುತ್ತಿರುವುದರಿಂದ, ಸಂಚಾಲಕರ ನಷ್ಟದ ಭಾರ ಹೆಚ್ಚುತ್ತ ನಡೆದಿದೆ. ಇದೇನು ಆರೋಗ್ಯದ ಲಕ್ಷಣವಲ್ಲ. ಈಗ V. P. ಅಸ್ತ್ರೇ ಕೃತವಾಗಿ ಬಂದಿರುವ ಚಂದಾದಾರರೆಲ್ಲರೂ, ಪುನರ್ವಿಚಾರಮಾಡಿ, ಮತ್ತೆ ತಮ್ಮ ಚಂದಾದಾರಿಕೆಯನ್ನು ಮುಂದುವರೆಸುವ ಉಪಕಾರ ಮಾಡಬೇಕು.

—ಸಂಪಾದಕರು

ನಾಡನಡೆ

ಶ್ರೀ. ಪುರಂದರದಾಸರ ಚತುಶ್ಶತ ಸಾಂವತ್ಸರಿಕಕೋತ್ಸವ

ಹರಿದಾಸ ಸಾಹಿತ್ಯದ ಉತ್ಕಟ ಅಭಿಮಾನಿಗಳೂ ಸುಪ್ರಸಿದ್ಧ ಸಂಗ್ರಹಕಾರರೂ ಸಂಶೋಧಕರೂ ಆದ ಶ್ರೀಮಾನ್ ಗೋರಾಬಾಳ ಜನುಮಂತರಾಯರು, ಕರ್ಮವೀರ ವಾರಪತ್ರಿಕೆಯಲ್ಲಿ ಮೊನ್ನೆ ಮೊನ್ನೆ, ಈ ಮಹೋತ್ಸವವು ಅಖಿಲಭಾರತೀಯ ಮಟ್ಟದಲ್ಲಿ ನಡೆಯ ಬೇಕಾದುದರ ಅಗತ್ಯವನ್ನೂ ಇದು ಹೇಗೆ ಹೇಗೆ ನಡೆಯಬೇಕೆಂಬು-ದರ ವಿಷಯದಲ್ಲಿ ತಮ್ಮ ಅಭಿಪ್ರಾಯದಂತೆ— ವಿವರಣೆಯನ್ನೂ ಪ್ರಕಟಿಸಿರುವರು. 'ಮಾನ್ಯ ಗೋರಾಬಾಳ ಅವರ ಸೂಚನೆ— ಅಭಿಪ್ರಾಯಗಳು, ಹರಿದಾಸಸಾಹಿತ್ಯದ ಅಭಿಮಾನಿಗಳೆಲ್ಲರಿಗೂ ಒಪ್ಪಿಗೆಯಾಗುವಂತಹವೆ. ಆದರೆ ಬರೀ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ ಮಾತ್ರಕ್ಕೆ ಕಾರ್ಯವನ್ನು ಕೈಕೊಂಡು ನಡೆಯಿಸುವಂತಹ ಜನಜಾಗೃತಿ ನಮ್ಮ ನಾಡಿನಲ್ಲಿಲ್ಲ. ಆದರಲ್ಲಿಯೂ ಶ್ರೀಪುರಂದರ ದಾಸರನ್ನು ವಿಶಿಷ್ಟಮತೀಯರೆಂಬ ಸಂಕುಚಿತ ದೃಷ್ಟಿಯಿಂದ ಕಾಣು-ವವರ ಸಂಖ್ಯೆಯೂ ನಮ್ಮಲ್ಲಿ ಸಾಕಷ್ಟಿದೆ. ಆದುದರಿಂದ ನಡೆಯಿಸ ಬೇಕಾದ ಕಾರ್ಯದ ಮಹತ್ತ್ವಕ್ಕೆ ತಕ್ಕಂತಹ ಪೂರ್ವಜಾಗೃತಿ ಯನ್ನು ನಮ್ಮ ನಾಡಿಗರಲ್ಲಿ ಹುಟ್ಟಿಸಿ, ಅನೇಕರ ಮನಸ್ಸಿನಲ್ಲಿರುವ ಸಂಕುಚಿತ ಭಾವನೆಗಳನ್ನು ತೆಗೆದುಹಾಕಬೇಕಾದರೆ, ಇಂದಿನಿಂದಲೇ ಸುಸಂಘಟಿತವಾಗಿ ಕೆಲಸ ನಡೆಯಬೇಕಾಗುವುದು. ಅದಕ್ಕಾಗಿ ಸದ್ಯ ಅಖಿಲಕರ್ನಾಟಕದ ಪ್ರಾತಿನಿಧ್ಯವಹಿಸುವಂತಹ ಕೇಂದ್ರ ಮಂಡಲವೊಂದು ಕೂಡಲೇ ನಿರ್ಮಾಣವಾಗಬೇಕಾಗಿದೆ. ಶ್ರೀ. ಪುರಂದರದಾಸರ ಅಭಿಮಾನಿಗಳೆಲ್ಲರೂ ಅಂತಹ ಕೇಂದ್ರಸಂಸ್ಥೆ ಯೊಂದನ್ನು ಸ್ಥಾಪಿಸುವ ಉದ್ಯೋಗವನ್ನು ಮೊದಲು ಕೈಕೊಳ್ಳ ಬೇಕು. ಮೊದಲು ಸಮರ್ಥರಾದ ಜನರ ಕೇಂದ್ರಸಮಿತಿಯ ರಚನೆ ಯಾಗಬೇಕು. ಶ್ರೀಪುರಂದರದಾಸರ ಮಹೋತ್ಸವದ ವಿವರ ಗಳನ್ನೂ ಅದು ಸಿದ್ಧಗೊಳಿಸಿ, ಸಾರ್ವಜನಿಕ ಮನ್ನಣೆಯನ್ನು ಪಡೆಯಬೇಕು. ಆ ಮೇಲೆ ಕಾರ್ಯಕ್ರಮಗಳ ನಿರ್ವಹಣೆಗೆ ಬೇಕಾ-ಗುವ ಅರ್ಥದ ಸಂಗ್ರಹಕ್ಕೆ ತೊಡಗಬೇಕು. ಈಗಾಗಲೇ ಈ ವಿಷಯ ದಲ್ಲಿ ಸಾಕಷ್ಟು ಮಾತನಾಡಿ ಆಗಿದೆ; ಬರೆಯೂ ಆಗಿದೆ. ಮಾತನಾಡಿ ದವರ ಉಸಿರುಕೇಡು; ಬರೆದವರ ಬೆಳುಗಾಗದ ಕೇಡು. ಕಾರ್ಯಾ ರಂಭವೂ ಕಾರ್ಯವಿಸ್ತಾರವೂ ಮಾತು-ಬರೆಹಗಳ ನೀರವನ್ನು ಪಡೆ-ಯಲೇಬೇಕು.

ಕೇಂದ್ರ ಉತ್ಸವಸಮಿತಿಯನ್ನು ಸ್ಥಾಪಿಸಬೇಕೆನ್ನುವ ಅಪೇಕ್ಷೆ ಯುಳ್ಳವರು ಅನೇಕ ಜನರಿರಬಹುದು. ಅವರೆಲ್ಲರೂ ಅದಷ್ಟು ಬೇಗನೆ ಒಂದೆಡೆ ನೇರಿ ಚರ್ಚಿಸಿ ನಡೆಯಿಸಿ, ಸಮಿತಿ ನಿರ್ಮಾಣವಾಗುವಂತಹ ವಾತಾವರಣವನ್ನು ಉಂಟುಮಾಡಬೇಕು.

ಮತ್ತೆ ಗಡಿಸಂಬಂಧದ ಗಡಿಬಿಡಿ

ಕೇಂದ್ರ ಗೃಹಮಂತ್ರಿಗಳಾದ ಪಂಡಿತ ಗೋವಿಂದ ವಲ್ಲಭ ಪಂತರು, ಸಂಯುಕ್ತಮಹಾರಾಷ್ಟ್ರ ಸಮಿತಿಯ ಚಳವಳಿಗೆ ಬೆದ ರಿಯೊ—ಮಹಾರಾಷ್ಟ್ರೀಯರ ವಿಷಯಕವಾದ ವಿಶೇಷ ವಿಶ್ವಾಸ ದಿಂದಲೋ, ಮುಂಬೈ-ಮೈಸೂರು ರಾಜ್ಯಗಳ ಗಡಿಗಳ ಪುನರ್ವಿಚಾ-ರಣೆಯ ಮಾತನ್ನು ಪುರಸ್ಕರಿಸಿ. ಮಾತನಾಡುತ್ತಿರುವರೆಂದು ಹೇಳ ಲಾಗುತ್ತಿದೆ. ಇದೇ ಮಾತಿನ ನಿರ್ಣಯಕ್ಕಾಗಿ ಮೊನ್ನೆಮೊನ್ನೆ, ಮೈಸೂರು-ಮುಂಬಯಿಗಳ ಮುಖ್ಯ ಪ್ರಧಾನರನ್ನು ಕರೆಯಿಸಿಕೊಂಡಿ ದ್ದರು. ಅಲ್ಲಿ ಯಾವ ಬಗೆಯಿಂದ ಮಾತುಗಳು ಮುಂದುವರಿದು ವೆಂಬುದು ಇನ್ನೂ ಹೊರಬಿದ್ದಿಲ್ಲ. ಈ ಗಡಿಯ ಜಗಳವನ್ನು ಬಗೆ ಹರಿಸಲು ಗೋವಿಂದ ವಲ್ಲಭಪಂತರು, ತಮ್ಮುನೇ ಆದ ಕೆಲವು ಕರಾ-ರುಗಳನ್ನು ಮುಂದೊಡ್ಡಿ, ಸ್ಥಾನದಾಕ್ಷಿಣ್ಯದಿಂದ ಇಬ್ಬರೂ ಮುಖ್ಯ ಮಂತ್ರಿಗಳನ್ನು ತಮ್ಮ ಕರಾರುಗಳಿಗೆ ಒಪ್ಪಿಸಬೇಕೆಂದು ಪ್ರಯತ್ನಿಸ ಲಿದ್ದಾರೆಂಬ ವರ್ತಮಾನ ಹವೆಯಲ್ಲಿ ಹರಡಿಕೊಂಡಿದ್ದಿತು. ಆದರೆ ಆ ಕರಾರುಗಳು ಏನಿದ್ದುವೆಂಬುದು ಇದುವರೆಗೂ ಬೆಳಕಿಗೆ ಬಂದಂತಿಲ್ಲ. ದಿಲ್ಲಿಗೆ ಹೋಗುವುದಕ್ಕಿಂತ ಮೊದಲು ಮುಂಬಯಿ ಮುಖ್ಯಮಂತ್ರಿ ಗಳೂ ಗಡಿವಾದದ ವಿಷಯಕವಾದ ತಮ್ಮ 'ಮಹಾರಾಷ್ಟ್ರೀಯ' ಧೋರಣದಂತೆ ಮೊದಲಿನ ಏಕನಾದವನ್ನೇ ನುಡಿಸಿದ್ದರು. ಅದಕ್ಕೆ ಉತ್ತರವೆನಿಸುವಂತೆ ಮೈಸೂರು ಮುಖ್ಯಮಂತ್ರಿಗಳು, ಕನ್ನಡನಾಡಿನ ಜನಾಭಿಪ್ರಾಯವನ್ನು ಪ್ರಕಟಿಸುವಂತಹ ಮಾತುಗಳನ್ನು ಉಗ್ಗಡಿ ಸಿದ್ದರು. ಇಬ್ಬರೂ ತಮ್ಮ ತಮ್ಮ ಬಗೆಯಲ್ಲಿ ಒಬ್ಬರಿಗೊಬ್ಬರು ವಿರೋಧಿಗಳೆನಿಸುವಂತೆ ಹಟದ ಅಭಿಪ್ರಾಯವನ್ನು ಇರಿಸಿಕೊಂಡು, ಪಂಡಿತ ಗೋವಿಂದ ವಲ್ಲಭಪಂತರ ಬಳಿಹೋಗಿ ಮಾಡುವರಾದರೂ ಏನು ?—' ಎಂದು ಎಲ್ಲರೂ ಕುತೂಹಲಿಗಳಾಗಿ ಪರಿಣಾಮದ ದಾರಿ ಯನ್ನು ಕಾಯುತ್ತಿದ್ದರು. ಕೆಲಕೆಲವರಂತೂ ಪಂತರು ಜತ್ತಿಯ ವರಿಗೆ ಟೊಪ್ಪಿಗೆ ಹಾಕಿ, ಮಹಾರಾಷ್ಟ್ರೀಯರಿಗೆ ಅನುಕೂಲವಾಗು ವಂತೆ ನಡೆಮಾಡಿಕೊಳ್ಳಲು ಹೆಚ್ಚುನರೆಂದು ಅಸಮಾಧಾನದಿಂದಲೊ ಕುಸ್ಪತಪದಿಂದಲೋ ಮಾತುಗಳನ್ನಾಡತ್ತಲಿದ್ದರು. ಬೆಳಗಾಂವಿಯ 'ಮರಾಠಾಗಡಿ'ಗಳಂತೂ, ಪಂತರು ತಮ್ಮೂರನ್ನು ಮಹಾರಾಷ್ಟ್ರಕ್ಕೆ ಸೇರಿಸಿಯೇ ಬಿಡುವರೆಂಬ ಅಹಂಕಾರದ ವರ್ತನೆಯನ್ನು ಇರಿಸಿದ್ದರು. ಆದರೆ ಮುಖ್ಯಮಂತ್ರಿಗಳಿಬ್ಬರೂ ವಿಮಾನದಲ್ಲಿ ಕುಳಿತು ಹಾರಿ, ದಿಲ್ಲಿಗೆ ಹೋಗಿ ಬಂದುದೆಷ್ಟೋ ಆಷ್ಟೇ ! ಯಾವ ನಿರ್ಣಯವನ್ನೂ ಕಾಣದೆ ಮರಳಿಬಂದರು. ಮುಖ್ಯಮಂತ್ರಿ ಜತ್ತಿಯವರನ್ನು ವಿರೋಧಿಸಿ ನಾಡಿನಲ್ಲಿ ಚಟುವಟಿಕೆ ನಡೆಯಿಸಬೇಕೆಂದಿದ್ದ ಅನೇಕ ರಾಜಕೀಯ ಧುರೀಣರಿಗೆ ನಿರಾಶೆಯಾಯಿತು. ಮುಖ್ಯಮಂತ್ರಿಗಳಿಬ್ಬರ ದಿಲ್ಲೀ ಯಾತ್ರೆಯ ಕೊನೆಯೊಂದಿಗೆ ಬೇರೆಯ ಮಹತ್ತ್ವದ ವಿಷಯವೊಂದು ವಾತಾವರಣದಲ್ಲಿ ಮೊಳಗಿ, ಕನ್ನಡಿಗರನ್ನೂ ಮಹಾರಾಷ್ಟ್ರೀಯರನ್ನೂ

ಗುಜರಾತಿಗಳನ್ನೂ ಕುತೂಹಲಗೊಳಿಸಿರುವುದು. ಆ ವಿಷಯವೆಂದರೆ ಮುಂಬಯಿ ದ್ವಿಭಾಷಾರಾಜ್ಯವನ್ನು ಎರಡು ರಾಜ್ಯಗಳನ್ನಾಗಿ ವಿಭಾಗಿಸುವ ಬಗೆಗೆ ಕೇಂದ್ರಸರಕಾರವು ಪ್ರಕಟಿಸಿದ ಅನುಕೂಲಾಭಿಪ್ರಾಯ. ಮುಂಬಯಿರಾಜ್ಯವನ್ನು ವಿಭಾಗಿಸಲಿರುವ ಸರಕಾರದ ಈ ಧೋರಣೆಯೇ ಸದ್ಯದ ಮುಂಬಯಿ-ಮೈಸೂರು ಗಡಿಯ ಸಂಬಂಧದ ವಿಚಾರವನ್ನು ಮುಂದೆ ಹಾಕಲು ಕಾರಣವಾಗಿರಬಹುದು.

ದ್ವಿಭಾಷಾಮುಂಬಯಿರಾಜ್ಯದ ಸೋಲು

ಪ್ರಜಾಪ್ರಭುತ್ವದಂತೆ ಆಡಳಿತ ನಡೆಯಿಸಬೇಕೆನ್ನುವ ನಮ್ಮ ಕೇಂದ್ರಸರಕಾರದಲ್ಲಿಯ ನಾಯಕರು, ದ್ವಿಭಾಷಾ ಮುಂಬಯಿರಾಜ್ಯದ ಬಗೆಗೆ ತಳೆದಿರುವ ಹೊಸ ಧೋರಣವು ಸ್ವಾಗತಾರ್ಹವಾಗಿದೆ. ರಾಜ್ಯ ಪುನರ್ನಿರ್ಮಾಣಕಾಲದಲ್ಲಿ ದ್ವಿಭಾಷಾಮುಂಬಯಿರಾಜ್ಯವು ಬಹುಜನಮತವನ್ನು ಮೀರಿ, ಕೆಲವೊಂದು ಪ್ರಭಾವಶಾಲಿ ಮುಂದಾಳುಗಳ ಅಭಿಪ್ರಾಯದಂತೆ ನಿರ್ಮಾಣವಾಗಿತ್ತು. ಇದರ ತೀಕ್ಷ್ಣಪರಿಣಾಮ ಪ್ರಾರಂಭದಲ್ಲಿಯೆ ತನ್ನ ರುದ್ರರೂಪವನ್ನು ಪ್ರಕಟಿಸಿತಾದರೂ, ಪ್ರಜಾಪ್ರಭುತ್ವಕ್ಕೆ ಸಲ್ಲದ ಅಧಿಕಾರಬಲದಿಂದ, ರಾಜ್ಯಸರಕಾರ ತಾತ್ಕಾಲಿಕವಾಗಿ ಆ ರುದ್ರರೂಪವನ್ನು ಮರೆಮಾಡಿತು. ಆದರೆ ಅಸ್ವಾಭಾವಿಕವಾದ ಅಧಿಕಾರಬಲ ಪ್ರಜಾಭಿಪ್ರಾಯವನ್ನು ಶಾಶ್ವತವಾಗಿ ಹತ್ತಿಕ್ಕಲು ಹೇಗೆ ಸಮರ್ಥವಾದೀತು? ಮಹಾರಾಷ್ಟ್ರ—ಗುಜರಾತ ಪ್ರಾಂತಗಳೆರಡರಲ್ಲಿಯೂ ಬಹುಜನತೆ, ದ್ವಿಭಾಷಾ ಮುಂಬಯಿರಾಜ್ಯವನ್ನು ನಿಷೇಧಿಸಿ, ಸ್ವತಂತ್ರರಾಜ್ಯದ ತನ್ನ ಬೇಡಿಕೆಯ ಬಗೆಗೆ ವಿವಿಧಮುಖದ ಚಟುವಟಿಕೆಗಳನ್ನು ಇದುವರೆಗೂ ನಡೆಯಿಸುತ್ತ ಬಂದಿದೆ. ಮಹಾರಾಷ್ಟ್ರ-ಗುಜರಾತ ಪ್ರದೇಶಗಳಲ್ಲಿ ನಡೆದ ಚುನಾವಣೆ-ಉಪಚುನಾವಣೆಗಳಲ್ಲಿ, ಬಹುಜನ ಕಾಂಗ್ರೆಸ್ ಹುರಿಯಾಳುಗಳ ಸೋಲಿಗೆ ಈ ಜನತೆಯ ಚಳವಳಿಯೇ ಮುಖ್ಯಕಾರಣವಾಗಿದೆ. ಹೊಸತಾಗಿ ಸೇರಿದ ವಿದರ್ಭ, ನಾಗಪುರಭಾಗ, ಹೈದರಾಬಾದ್ ಮಹಾರಾಷ್ಟ್ರಪ್ರದೇಶ—ಇಲ್ಲಿಯ ಸದಸ್ಯರ ಬೆಂಬಲವಿಲ್ಲದೆ ಹೋಗಿದ್ದರೆ, ದ್ವಿಭಾಷಾ ಮುಂಬಯಿರಾಜ್ಯದ ಆಡಳಿತಸೂತ್ರಗಳು ಕಾಂಗ್ರೆಸ್ಸಿಗರ ಕೈಗೆ ಹೋಗಲಿಕ್ಕೆ ಸಾಧ್ಯವೇ ಇರಲಿಲ್ಲ. ಪ್ರಜಾಪ್ರಭುತ್ವಪದ್ಧತಿಯು ಪುರಸ್ಕೃತವಾಗಿರುವಲ್ಲಿ, ಚುನಾವಣೆಯಲ್ಲಿಯ ಸೋಲು-ಗೆಲವುಗಳೇ ಪ್ರಜೆಗಳ ಅಭಿಪ್ರಾಯವನ್ನು ನಿರ್ಣಯಿಸುವ ಸಾಧನಗಳಾಗಿರುವುವು. ಅದಕ್ಕನುಸಾರವಾಗಿ ತಳೆದ ಚುನಾವಣೆಯ ಪರಿಣಾಮವನ್ನು ತೂಗಿನೋಡಿದಾಗ, ದ್ವಿಭಾಷಾ ಮುಂಬಯಿರಾಜ್ಯವನ್ನು ಒಪ್ಪಿಕೊಳ್ಳುವವರು ಅಲ್ಪಸಂಖ್ಯಾಕರೆಂಬುದು ಸ್ಪಷ್ಟವಾಗಿ ಪ್ರಕಟವಾಯಿತು. ಒಮ್ಮೆ ಮಾಡಿರುವ ವ್ಯವಸ್ಥೆಯನ್ನು ಕೂಡಲೆ ಮುರಿದುಹಾಕಿ ಬೇರೆಯ ವ್ಯವಸ್ಥೆಗೆ ಕೈಹಾಕುವುದು ಅಸಮಂಜಸವೂ ಎನಿಸುವುದು. ಅಸಾಧ್ಯವೂ ಎನಿಸುವುದು. ಆದುದರಿಂದಲೇ ಕೇಂದ್ರಸರಕಾರ ತನ್ನ ನಿರ್ಣಯದಂತೆ ದ್ವಿಭಾಷಾ ಮುಂಬಯಿರಾಜ್ಯವನ್ನು ನಿರ್ಮಿಸಿತು—ಕೆಲವು ಅವಧಿಯನ್ನು ಕೊಟ್ಟು ಪರಿಸ್ಥಿತಿಯನ್ನೂ ಪರೀಕ್ಷಿಸಿತು. ಆದರೆ ಜನತೆಯ ಅತೃಪ್ತಿ-ಅಸಮಾಧಾನಗಳ ಕಟುಚಿತ್ರಗಳನ್ನೇ ಎಲ್ಲೆಲ್ಲಿಯೂ ನೋಡಬೇಕಾಗಿ ಬಂದುದರಿಂದ, ಈಗ ಕಾಂಗ್ರೆಸಿನ ಧುರೀಣರೂ ಕೇಂದ್ರಸರಕಾರದಲ್ಲಿರುವ ಹಿರಿಯರೂ, ಬಹುಜನಾಭಿಪ್ರಾಯಕ್ಕೆ ಮನ್ನಣೆಕೊಡಲೇಬೇಕೆಂಬ ವಿಚಾರ ವಿವೇಕಕ್ಕೆ ಬಂದಿರಬಹುದು ಇದಕ್ಕಾಗಿ ಆ ಧುರೀಣರನ್ನೂ ನಾಯಕಮಣಿಗಳನ್ನೂ ನಾವು ಮನವಾರೆ ಅಭಿನಂದಿಸುತ್ತೇವೆ.

ಮುಂಬಯಿ ಯಾರಿಗೆ?

ಕಾಲಲಕ್ಷಣವನ್ನು ನೋಡಿದರೆ, ಮುಂಬೈರಾಜ್ಯ ಒಡೆದು ಎರಡೋ ಮೂರೋ ರಾಜ್ಯಗಳಾಗುವ ಸಂಭವ ಹೆಚ್ಚಾಗಿ ತೋರುತ್ತಲಿದೆ. ಹಿಂದೆ ಮುಂಬಯಿ ನಗರ ಯಾರದು?— ಎಂಬುದು ಒಡೆಯದ ಒಗಟಾಗಿ, ಅದೇ ಕಾರಣದಿಂದಲೇ ದ್ವಿಭಾಷಾ ಮುಂಬಯಿ ರಾಜ್ಯವು ಕಲೆಯೆತ್ತಿತ್ತು. ಬಹುಶಃ ಆ ಒಗಟು ಈಗ ಒಡೆದಂತೆ ತೋರುತ್ತಲಿದೆ. ಪ್ರತ್ಯೇಕ ರಾಜ್ಯನಿರ್ಮಾಣಕ್ಕಾಗಿ ಹೆಗಲಿಗೆ ಹೆಗಲು ಹಚ್ಚಿ ಸ್ನೇಹ-ಸಹಕಾರಗಳಿಂದ ಚಳವಳಿಯನ್ನು ನಡೆಯಿಸುತ್ತ ಬಂದ ಸಂಯುಕ್ತಮಹಾರಾಷ್ಟ್ರ ಸಮಿತಿಯ ಜನರೂ, ಪ್ರತ್ಯೇಕ ಗುಜರಾತವಾದಿಗಳೂ ಒಂದು ಒಪ್ಪಂದಕ್ಕೆ ಬಂದಿರುವಂತೆ ಕಾಣುತ್ತದೆ. ಗುಜರಾತಿಗಳು ಮುಂಬಯಿಯನ್ನು ಮಹಾರಾಷ್ಟ್ರಕ್ಕೆ ಒಪ್ಪಿಸಬೇಕೆಂಬ ನಿರ್ಣಯಕ್ಕೆ ಬಂದಿರಬಹುದಾಗಿದೆ. ಈ ನಿರ್ಣಯದ ಕಾರಣದಿಂದಲೇ ಕೇಂದ್ರ ಸರಕಾರ, ಸಮಸ್ಯಾರಹಿತವಾಗಿರುವ ಈ ಮುಂಬಯಿರಾಜ್ಯದ ಪ್ರಶ್ನೆಯನ್ನು ಆದಷ್ಟು ಬೇಗನೆ ಬಿಡಿಸಿಬಿಡಬೇಕೆಂಬ ನಿರ್ಣಯಕ್ಕೆ ಬಂದಿರಬಹುದಾಗಿದೆ. ಕೇಂದ್ರ ಸರಕಾರದಲ್ಲಿಯ ಹಿರಿಯರು ಇದರ ಬಗೆಗೆ ಈಗಾಗಲೇ ಸಾಕಷ್ಟು ಮಾತು-ಕಥೆಗಳನ್ನು ನಡೆಸಿದ್ದಾರಂತೆ. ಮುಂಬಯಿ ಯಾರದೆಂಬ ಮಾತು ಈಗ ಉಳಿದಂತೆ ಕಾಣುವುದಿಲ್ಲ. ಅದು ಮಹಾರಾಷ್ಟ್ರೀಯರಿಗೇ ಸಲ್ಲುವುದು.

ಬಳಿಕ ಉಳಿಯುವುದು ಮೈಸೂರು-ಮಹಾರಾಷ್ಟ್ರಗಳ ಗಡಿಯವಾದ. ಮುಂಬಯಿಯನ್ನು ಪಡೆದ ವಿಜಯದಿಂದ ಸಂತೃಪ್ತರಾದ ಮಹಾರಾಷ್ಟ್ರೀಯರು, ಈ ಗೌಣಪ್ರಶ್ನೆಯ ಕಡೆಗೆ ಅಷ್ಟೊಂದು ಲಕ್ಷ್ಯಕೊಡದೆ ಇರಲೂ ಬಹುದು. ನಿಜವಾಗಿ ನೋಡಿದರೆ, ಪುಣೆ-ಮುಂಬಯಿ ಮಹಾರಾಷ್ಟ್ರೀಯರಿಗೆ ಬೆಳಗಾಂವಿ-ಕಾರವಾರಗಳ ಬಗೆಗೆ ಮೊದಲಿನಿಂದಲೂ ಅಷ್ಟು ಆಸ್ಥೆಯಿಲ್ಲ. ಬೆಳಗಾಂವಿಯಲ್ಲಿಯೇ ಇದ್ದ ಕೆಲವು ದುಷ್ಪಗ್ರಹಗಳು, ಅವರನ್ನು ಇತ್ತಕಡೆಗೆ ಎಳೆದು ತರುತ್ತಿದ್ದುವು. ಅಲ್ಲದೆ ತಮ್ಮ ಅಸಂತುಷ್ಟಿ-ಅತೃಪ್ತಿಗಳ ಪ್ರಕಟನೆಗಾಗಿ, ಸಂಯುಕ್ತ ಮಹಾರಾಷ್ಟ್ರ ಸಮಿತಿಯವರಿಗೆ, ಯಾವು-ಯಾವುದೋ ಅಭಾಸ ಕಾರಣಗಳನ್ನೂ ನಿಜಕಾರಣಗಳಂತೆ ನಟಿಸಬೇಕಾಗಿತ್ತು. ಮುಂಬಯಿ ತಮಗೆ ದೊರೆತುದರಿಂದ, ಮಹಾರಾಷ್ಟ್ರೀಯರಿಗೆ ೧೦೦ಕ್ಕೆ ನೂರರಷ್ಟು ವಿಜಯದ ಸಮಾಧಾನ ಸಿಕ್ಕಂತಾಗುವುದು. ಈ ಸಮಾಧಾನ ಗಡಿಸಂಬಂಧದ ವಾದದಂತಹ ಕಿರುಕುಳ ಪ್ರಶ್ನೆಯನ್ನು ಸಮಾಧಾನದಿಂದಲೇ ಬಿಡಿಸಬಹುದೆಂದು ನಾವು ಭಾವಿಸಬಹುದಾಗಿದೆ. ಏಕೆಂದರೆ ಗಡಿನಿರ್ಣಯದ ಹಟಕ್ಕೆ ಕಟ್ಟುಬಿದ್ದರೆ, ಕೊಡು

(೧೦೬ನೆಯ ಪುಟವನ್ನು ನೋಡಿರಿ.)

(ಸಣ್ಣ ಕತೆಯೊಂದು)

ನಾನು ಕೊಂದ ಹುಡುಗಿ

ಡಿ. ರಾಘವೇಂದ್ರ ಪಾಸನೀಸ M. A. Dip. Lib.

ಎಸ್. ಪಿ. ಕಾಲೇಜು, ಪುಣೆ

ಮನುಷ್ಯನ ಮನೋಧರ್ಮ, ಅವನನ್ನು ಎಂತೆಂತಹ ಅಭಾಸಗಳಲ್ಲಿಯೋ ತಿರುಗಾಡಿಸುವುದು. ಆತನ ಹತ್ತಿಕ್ಕಿದ ಉತ್ಕಟ ಭಾವನೆಗಳೇ ಅದಕ್ಕೆ ಕಾರಣ. ಈ ಬಗೆಯ ಅಭಾಸಮಯ ಪರಿಸ್ಥಿತಿ, ಮನುಷ್ಯನಿಗೆ ಕನಸಾವುದೋ ನನಸಾವುದೋ ಎಂಬುದರ ವಿವೇಕವನ್ನೂ ಕಳೆದುಬಿಡುವುದುಂಟು !

ನೀವು ಈ ರೀತಿ ನನ್ನ ಕಡೆಗೆ ಬಂದು ಪ್ರೀತಿಯಿಂದ ನನ್ನ ಯೋಗಕ್ಷೇಮವನ್ನು ಕೇಳುತ್ತಿರುವುದು ನಿಮ್ಮ ಒಳ್ಳೆಯತನವನ್ನು ತೋರಿಸುತ್ತದೆ, ವಕೀಲರೇ ! ಇದಕ್ಕಾಗಿ ನಾನು ನಿಮಗೆ ಋಣಿಯಾಗಿದ್ದೇನೆ. ತಮ್ಮ ಕೇಸು ಸೋಲುವುದೆಂದು ಗೊತ್ತಿದ್ದರೂ, ಪಕ್ಷಗಾರನ ಹೇಳಿಕೆ ನಿರಾಶಾಯಕವಾಗಿದ್ದರೂ, ಅಂಥ ದುರ್ದೈವಿ ಪಕ್ಷಗಾರನ ವಿಷಯದಲ್ಲಿ ನಿಮ್ಮಷ್ಟು ಯಾರು ಆಸಕ್ತಿ ತೆಗೆದುಕೊಳ್ಳುತ್ತಾರೆ, ನೋಡಿರಿ ! ನಿಮ್ಮ ಮನಸ್ಸನ್ನು ಮೆಚ್ಚಿಸಲಿಕ್ಕಾದರೂ ವಸ್ತುಸ್ಥಿತಿಯ ಬದಲಾಗಿ ಒಂದು ವಿಶ್ವಾಸಹುಟ್ಟುವ ಕತೆಯನ್ನು ಕಟ್ಟಿ ಹೇಳಲು ನನಗೆ ಸಾಧಿಸಿದರೆ ಚೆನ್ನಾಗಿತ್ತು ಎನಿಸುತ್ತದೆ. ಆದರೆ, ವಕೀಲರೇ, ಅದು ನನಗೆ ಸಾಧಿಸದ ಮಾತು. ಹೀಗಾಗಿ ನಾನು ಮತ್ತೆ ಆ ದಿನ ಕುಲಕರ್ಣಿಯವರಿಗೆ ಹೇಳಿದ್ದನ್ನೇ ಈ ದಿನ ತಪ್ಪದೆ ನಿಮಗೂ ಹೇಳುತ್ತಿದ್ದೇನೆ. ಕುಲಕರ್ಣಿಯವರೆದುರು ಆ ದಿನ ನಾನು ಹೇಳಿದ ಒಂದು ಮಾತಿನ ಮೇಲೂ ಅವರ ವಿಶ್ವಾಸಕೂಡಲಿಲ್ಲ ಎಂಬ ಮಾತೇನೋ ನಿಜ ! ಅದು ನನ್ನ ತಪ್ಪಲ್ಲ. ಅಲ್ಲದೆ ಅವರಿಗಾದರೂ ನಾನು ಅದಕ್ಕಾಗಿ ದೋಷ ಕೊಡುವುದಿಲ್ಲ. ಇದಕ್ಕೂ ಹೆಚ್ಚು ಸುಸಂಬದ್ಧವಾದ ಕತೆಯೊಂದನ್ನು ಕಟ್ಟಿ ಕೋರ್ಟು ನಂಬುವಂತೆ ಹೇಳಬೇಕೆಂದು ಅವರು ನನಗೆ ಸೂಚಿಸಿದ್ದೇನೋ ನಿಜ; ಆದರೆ ಕೋರ್ಟಿನಲ್ಲಿ ಅದರಿಂದೇನು ಉಪಯೋಗವಾಗಬೇಕಾಗಿದೆ ನೋಡಿರಿ ! ಸುಳ್ಳನ್ನೇ ಹೇಳುತ್ತ ಹೋದರೆ, ಮನುಷ್ಯ ಕೋರ್ಟಿನಲ್ಲಿ ಒಮ್ಮಿಲ್ಲ ಒಮ್ಮೆಯಾದರೂ ಪೇಚಿನಲ್ಲಿ ಸಿಕ್ಕೇಬಿಡುತ್ತಾನೆ. ಅಂದಮೇಲೆ ಕೋರ್ಟಿನಲ್ಲಿ ಸುಳ್ಳುಹೇಳುವುದರಲ್ಲಿ ಏನು ಅರ್ಥವಿದೆ ? ವಕೀಲರೇ, ನನ್ನಾಣೆಯಾಗಿಯೂ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ನಾನು ಹೂಡಿದ್ದು ಒಂದೇ ಒಂದು ಗುಂಡು. ಅದು ಸಹಿತ ಬೆಕ್ಕಿಗೆ ಗುರಿಯಿಟ್ಟು. ಆದರೆ, ವಕೀಲರೇ, ಇದೆಂಥ ಪೋಜನ ಮಾತು ? ಬೆಕ್ಕನ್ನು ಕೊಂದದ್ದಕ್ಕಾಗಿ ಇಂದು ಒಬ್ಬ ಮನುಷ್ಯನನ್ನ ಗಲ್ಲಿಗೇರಿಸುತ್ತಿದ್ದಾರೆ !

ನಾನು ಮತ್ತು ಫ್ರಾನ್ಸಿಸ್ ಚಿಕ್ಕಂದಿನಿಂದಲೂ ಜೀವದ ಗೆಳೆಯರಾಗಿದ್ದೆವು. ನಾನು ಹಿಂದು, ಅವನು ಕ್ರಿಶ್ಚನ್; ಇದೊಂದನ್ನು ಬಿಟ್ಟು ಉಳಿದೆಲ್ಲ ವಿಷಯಗಳಲ್ಲಿ ನಾವು ಒಡಹುಟ್ಟಿದವರಂತಿದ್ದೆವು. ಕಾಲೇಜಿನ ಶಿಕ್ಷಣ ಮುಗಿಯುವ ವರೆಗೂ ನಮ್ಮ ಸ್ನೇಹ ಬೆಳೆದುಬಂತು. ಮುಂದೆ ನೌಕರಿಯ ನಿಮಿತ್ತ ಬೇರೆ ಬೇರೆ ಸ್ಥಳಗಳಿಗೆ ಹೋದುದರಿಂದ, ಇಬ್ಬರೂ ಬಹಳ ದೂರವಾಗಿಬಿಟ್ಟೆವು. ನಮ್ಮಿಬ್ಬರ ನಡುವೆ ಪತ್ರವ್ಯವಹಾರವಿತ್ತು. ಯಾವಾಗಲಾದರೂ ಒಮ್ಮೆ ಇಬ್ಬರೂ ಊರಿಗೆ ಬಂದಾಗ, ಪರಸ್ಪರರ ಭೇಟ್ಟಿಯಾಗುತ್ತಿತ್ತು. ಎರಡು ವರ್ಷಗಳ ಹಿಂದೆ ಫ್ರಾನ್ಸಿಸ್, ತಾನು ಮದುವೆಯಾಗುವವನಿದ್ದೇನೆ– ಎಂದು ಬರೆದು ತಿಳಿಸಿದ. ಅವನಿಗೆ ಆಗ ನಾಲ್ವತ್ತು ವರ್ಷಗಳಾಗಿದ್ದು ಅವನು ಲಗ್ನವಾಗಲಿರುವ ಹುಡುಗಿ ಅವನಿಗಿಂತ ಹದಿನೈದು ವರ್ಷಕ್ಕೆ ಚಿಕ್ಕವಳಿದ್ದಳು. ಇದರಿಂದಾಗಿ ನನಗೆ ಸ್ವಲ್ಪ ಆಶ್ಚರ್ಯವೆನಿಸಿತು. ಯಾಕೆಂದರೆ, ನಾನು ಮತ್ತು ಫ್ರಾನ್ಸಿಸ್ ಇಬ್ಬರೂ ಕೊನೆಯವರೆಗೂ ಲಗ್ನವಾಗದೆ ಉಳಿಯುವೆವೆಂದೇ ನನ್ನ ಗ್ರಹಿಕೆಯಾಗಿತ್ತು. ಇಷ್ಟು ಅನಿರೀಕ್ಷಿತವಾಗಿ ಅವನು ತನ್ನ ನಿರ್ಣಯವನ್ನು ಬದಲಿಸಿದನೆಂದಮೇಲೆ, ಅವನು ಆ ಹುಡುಗಿಗೆ ನಿಜವಾಗಿಯೂ ಬಹಳ ಮನಸೋತಿರಬೇಕು, ಎಂದು ನನಗೆನಿಸಿತು. ವಯಸ್ಸಿನ ಅಂತರವೊಂದನ್ನು ಬಿಟ್ಟರೆ ಉಳಿದೆಲ್ಲ ವಿಷಯಗಳಲ್ಲಿ ಅವರಿಬ್ಬರೂ ಅನುರೂಪವಾಗಿಯೇ ಇದ್ದರು. ಯಾವುದೋ ಒಂದು ಹಳ್ಳಿಯಲ್ಲಿ ಅವನಿಗೆ ಅವಳ ಪರಿಚಯವಾಯಿತಂತೆ. ಅವಳು ಜೀವಮಾನದಲ್ಲೇ ಎಂದೂ ಆ ಹಳ್ಳಿಯನ್ನು ಬಿಟ್ಟು ಹೊರಗೆ ಹೋದವಳಲ್ಲ. ಅವಳ ತಂದೆಯ ಸ್ವಭಾವವು ತೀರ ವಿಚಿತ್ರವಾದದ್ದಿದ್ದು, ಅವನು ಯಾವಾಗಲೂ ಮಂತ್ರತಂತ್ರಗಳಲ್ಲಿ ತೊಡಗಿದ್ದು ಸಂನ್ಯಾಸಿಯಂತೆ ತನ್ನ ಬಾಳುವೆ ಸಾಗಿಸುತ್ತಿದ್ದ. ಅವರು ಅತಿ ಬಡವರಿದ್ದರು. ಹುಡುಗಿಯ ಲಗ್ನವಾದ ಕೆಲವೇ ದಿವಸಗಳಲ್ಲಿ ತಂದೆ ತೀರಿಕೊಂಡ.

ಫ್ರಾನ್ಸಿಸ್ ಸಿವಿಲ್ ಇಂಜಿನಿಯರನಿದ್ದ ವಿಷಯವನ್ನು, ನಾನು ನಿನಗೆ ಹೇಳುವುದನ್ನು ಮರೆತಿರಬಹುದು. ಲಗ್ನವಾದಾಗ ಅವನು 'ಕಾಂಡಲಾ' ಬಂದರದಲ್ಲಿ ಕೆಲವು ತಿಂಗಳು ಕೆಲಸಕ್ಕಿದ್ದ. ಅವನ ಹೆಂಡತಿಗೂ ಆ ಬದಲಾವಣೆ ಬಹಳ ಹಿಡಿಸಿರಬೇಕು. ಅವರಿಬ್ಬರೂ ಅಲ್ಲಿ ಸುಖವಾಗಿದ್ದರೆಂಬುದು, ನನಗೆ ಫ್ರಾನ್ಸಿಸ್‌ನಿಂದ ಬರುವ ಪತ್ರಗಳಿಂದ ತಿಳಿಯುತ್ತಿತ್ತು. ಕೆಲವು ಪತ್ರಗಳನ್ನಂತೂ ಫ್ರಾನ್ಸಿಸ್ ಸುಖದ ಸುಪ್ಪತ್ತಿಗೆಯಿಂದಲೇ ಬರೆದಿದ್ದ. ಆದರೆ ಬರುಬರುತ್ತ ತನ್ನ ಹೆಂಡತಿಯ

ಪ್ರಕೃತಿಯ ಬಗೆಗೆ ಫ್ರಾನ್ಸಿಸ್ ಸ್ವಲ್ಪ ಚಿಂತೆಗೀಡಾದಂತೆ ಕಂಡುಬಂತು. ಮುಂದೆ ಯಾಕೋ ಆ ಊರು ಅವಳಿಗೆ ಬಗೆಹರಿಯಲಿಲ್ಲವಂತೆ. ಹೀಗಾಗಿ ಅಲ್ಲಿಯ ಕೆಲಸವನ್ನು ಮುಗಿಸಿ ಯಾವಾಗ ಮತ್ತೆ ಊರಿನ ಕಡೆಗೆ ಮರಳುವುದೋ ಎಂದು ಫ್ರಾನ್ಸಿಸ್ ಆತುರನಾಗಿದ್ದ. ಇಬ್ಬರೂ ಪರಸ್ಪರರ ಬಗೆಗೆ ಚೆನ್ನಾದ ಪ್ರೀತಿ–ವಿಶ್ವಾಸಗಳನ್ನಿಟ್ಟುಕೊಂಡದ್ದರಿಂದ, ಅವರಿಬ್ಬರೂ ನಿಜವಾಗಿಯೂ ಸುಖಿಯಾಗಿದ್ದರು. ಇದರಲ್ಲಿ ಯಾವ ಸಂದೇಹವೂ ಇಲ್ಲ. ವಕೀಲರೇ, ಈ ಮಾತನ್ನು ಇನ್ನೊಮ್ಮೆ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ಉಳಿದ ಕತೆಯನ್ನು ಸ್ವಲ್ಪದರಲ್ಲೇ ಹೇಳಬೇಕೆಂದರೆ, ಹೋದ ತಿಂಗಳ ಮೊದಲನೆಯ ವಾರದಲ್ಲಿ ಫ್ರಾನ್ಸಿಸ್‌ನಿಂದ ಪತ್ರ ಬಂತು. ಅವನು ಈಗ 'ಕೊಯನಾ ಪ್ರೊಜೆಕ್ಟ್'ಗೆ ಮತ್ತೊಂದು ಕೆಲಸ ಹಿಡಿದು ಬಂದಿದ್ದ. ನಾನು ಕೆಲವು ದಿವಸಗಳ ಮಟ್ಟಿಗಾದರೂ ಅಲ್ಲಿ ಬಂದುಹೋಗಬೇಕೆಂಬುದು ಅವನ ಇಚ್ಛೆಯಾಗಿತ್ತು. ನಾವಿಬ್ಬರೂ ಬಹಳ ದಿವಸಗಳಿಂದ ಭೆಟ್ಟಿಯಾಗದೆ ಇದ್ದುದರಿಂದ, ಸ್ವಾಭಾವಿಕವಾಗಿಯೇ ನಾವಿಬ್ಬರೂ ಕೂಡಿ ಚರ್ಚಿಸಬಹುದಾದ ಸಾವಿರಾರು ವಿಷಯಗಳಿದ್ದುವು. ಅಲ್ಲದೆ ಅವನ ಹೆಂಡತಿ ಲಿಲ್ಲಿಗೆ ನನ್ನ ಪರಿಚಯಮಾಡಿಕೊಳ್ಳುವ ಆತುರವಿತ್ತಂತೆ. ಕೊಯನಾ ನಗರದಿಂದ ತುಸುವೇ ದೂರದಲ್ಲಿದ್ದ ಹಳ್ಳಿಯೊಂದರಲ್ಲಿ, ಒಂದು ಹೊಟೆಲ್ಲಿನಲ್ಲಿ ಅವರು ಕೆಲವು ರೂಮುಗಳನ್ನು ತೆಗೆದುಕೊಂಡಿದ್ದರು. ಆ ಸ್ಥಳವು ನಿರಾಂತವಾಗಿದ್ದರೂ ನದಿಗೆ ಸಮೀಪವಾದ್ದರಿಂದ ರಮ್ಯವಾಗಿತ್ತು. ನನಗೂ ಮುಂಬೈ ಬೇಸರು ಬಂದಿತ್ತು. ಅಲ್ಲದೆ ನನ್ನ ಹೆಸರಿನಲ್ಲಿ ಸಾಕಷ್ಟು ರಜೆ ಇನ್ನೂ ಇದ್ದೇ ಇತ್ತು. ಹೀಗಾಗಿ ನಾನು ಅಂದೇ ಸಂಜೆಗೆ ಹೊರಡುವೆನೆಂದು ಫ್ರಾನ್ಸಿಸ್‌ನಿಗೆ 'ವಾಯರ್' ಕೊಟ್ಟೆ; ಸಂಜೆಗೆ ರೈಲನ್ನು ಹಿಡಿದೆ. ನಾನು ಕೂಡ ಬೇಕಾಗಿದ್ದ ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಆಗಲೇ ಮೂರು ಜನ ಕುಳಿತಿದ್ದರು. ಮಿಲಿಟರಿ ಆಫೀಸರನಂತೆ ಕಾಣುವ ಹಿರಿಯ ಮನುಷ್ಯನೊಬ್ಬ, ತನ್ನ ಸುತ್ತುಮುತ್ತಲೂ ಬ್ಯಾಗುಗಳನ್ನು ಮತ್ತು ಬೆತ್ತದ ಬುಟ್ಟಿಗಳನ್ನು ಹರಡಿಕೊಂಡು ಕುಳಿತ ಒಬ್ಬ ವೃದ್ಧೆ– ಪಾರ್ಸೀ ಹೆಣ್ಣು ಮಗಳು ಹಾಗೂ ಒಬ್ಬ ಹುಡುಗಿ. ನಾಲ್ಕನೆಯವನಾಗಿ ನಾನು ಹೋದೆ. ಪ್ರವಾಸ ಸುಖಕರವಾಗಬಹುದೆನಿಸಿತು.

ಆದರೆ ಆ ಸುಖ ನನ್ನ ಹಣೆಯಬರಹದಲ್ಲಿ ಬರೆದಿರಲಿಲ್ಲ. ಮೊದ–ಮೊದಲು ಎಲ್ಲವೂ ಸುಲಲಿತವಾಗಿ ಸಾಗಿತು. ನಾನು ಎರಡು ತಾಸು ನಿದ್ದೆಮಾಡಿ ಎಚ್ಚರ್ತಾಗ, ಆ ಮಿಲಿಟರೀ ಆಫೀಸರನು ನಡುವೆಯೇ ಎಲ್ಲಿಯೊ ಇಳಿದುಹೋಗಿದ್ದ. ಈಗ ಇಡೀ ಕಂಪಾರ್ಟ್‌ಮೆಂಟಿನಲ್ಲಿ ನಾವು ಮೂವರೇ ಉಳಿದೆವು. ಅವರಿಬ್ಬರೂ ಹೆಂಗುಸರು, ನಾನೊಬ್ಬ. ನಾನು ಕಂಪಾರ್ಟ್‌ಮೆಂಟಿನ ಅದೇ ಮೂಲೆಯಲ್ಲಿ ವಾಲಿ ಮಲಗಲು ಯತ್ನಿಸಿದೆ. ಆದರೆ ಕ್ರಮೇಣ ನನಗೆ ಭಯವೆನಿಸತೊಡಗಿತು. ಆ ಕಂಪಾರ್ಟ್‌ಮೆಂಟಿನಲ್ಲಿಯೇ ಎಲ್ಲಿಯೋ ಒಂದು ಬೆಕ್ಕು ಇದೆ– ಎಂಬ ಭಯಾನಕವಾದ ಭಾವನೆ ನನ್ನ ಮೈಯನ್ನಡರತೊಡಗಿತು. ಬೆಕ್ಕನ್ನು ಕಂಡರೆ ಕೆಲವು ಜನರು ಬಹಳ ಅಂಜುತ್ತಾರೆ ಎಂಬುದನ್ನು ನೀವು ಕೇಳಿರಬಹುದು. ಅಂಥವರಲ್ಲಿ ನಾನೂ ಒಬ್ಬ. ಜಗತ್ತಿನಲ್ಲಿಯ ಎಂಥ ಅಪತ್ತನ್ನೂ ನಾನು ಹಾಯಾಗಿ ನಿದ್ರಿಸಿ ಕಳೆಯಬಹುದು, ಆದರೆ ಒಂದು ಬೆಕ್ಕಿದ್ದ ಕೋಣೆಯಲ್ಲಿ ನಾನು ನಿರ್ಭಯವಾಗಿ ಕೂಡಲಾರೆ. ಯಾಕೆ, ನನ್ನ ಮಾತಿನ ಮೇಲೆ ನಂಬಿಕೆ ಇಲ್ಲವೆ ನಿಮಗೆ? ಈ ವರ್ತನೆ ನಿಮಗೆ ವಿಚಿತ್ರವೆನಿಸಿದರೂ ಇದರಲ್ಲಿ– ಅಸಂಭವನೀಯವೇನೂ ಇಲ್ಲ, ವಕೀಲರೇ ! ನನ್ನಂಥ ಜನರು ಹುಡುಕಿದರೆ ನಿಮಗೆ ನೂರಾರು ಜನರು ಸಿಕ್ಕಬಹುದು. ಈ ರೀತಿ ಎರಡು ವಸ್ತುಗಳ ನಡುವಿದ್ದ ತಿರಸ್ಕಾರವು ಪರಸ್ಪರವಾಗಿದೆಯೆಂದು ನಾನು ಓದಿದ್ದೇನೋ ನಿಜ ! ಆದರೆ ನನ್ನವಿಷಯದಲ್ಲಿ ಇದು ತದ್‌ವಿರುದ್ಧವಾಗಿದೆ. ಬೆಕ್ಕುಗಳ ಬಗೆಗೆ ನನಗಿಷ್ಟು ಅಸಡ್ಡೆಯಿದ್ದರೂ, ಆ ದುಷ್ಟಪ್ರಾಣಿಗಳಿಗೆ ಮಾತ್ರ ನನ್ನನ್ನು ಕಂಡರೆ ಅಪಾರ ಪ್ರೇಮ. ನಾನು ಎಲ್ಲಿಯಾದರೂ ಮೈಮರೆತು ಕುಳಿತಿದ್ದರೆ, ಅವು ನನ್ನ ಕಾಲಿಗೆ ಜೇನ್ನೊಣಗಳಂತೆ ಮುತ್ತಿಬಿಡುತ್ತವೆ. ಆಗಲೆ ಹೇಳಿದಂತೆಇದು ನಿಮಗೆ ವಿಚಿತ್ರವೆನಿಸಿದರೂ ಅಸಂಭವನೀಯವೇನೂ ಅಲ್ಲ.

ಮುಂದೆ ಮುಂದೆ ನನಗೇಕೋ ಹೆದರಿಕೆ ಹೆಚ್ಚತೊಡಗಿತು. ಆ ಪಾರ್ಸೀ ಮುದುಕಿಯು ಹರಡಿದ್ದ ಹಲವಾರು ಬುಟ್ಟಿಗಳಲ್ಲಿ, ಎಲ್ಲಿಯೋ ಒಂದರಲ್ಲಿ ಬೆಕ್ಕು ಇರಲೇಬೇಕೆಂಬ ಭಾವನೆ ದೃಢವಾಯಿತು. ಓಡುತ್ತಿರುವ ರೈಲಿನ ಕಿಟಕಿಯಿಂದ ಆ ಬೆಕ್ಕನ್ನು ಹೊರಗೆ ಒಗೆಯೆಂದು ಆ ಮುದುಕಿಗೆ ಹೇಳಲೇ ಎಂದೆನಿಸಿತು. ಅಥವಾ ಮುಂದಿನ ಸ್ಟೇಶನ್ನಿನಲ್ಲಿ ಗಾರ್ಡ್‌ನಿಗೆ ಹೇಳಿ, ಅದನ್ನು ತೆಗೆಸಿಹಾಕಲೋ ಎಂಬ ವಿಚಾರ ಬಂತು. ಆದರೆ ಹಾಗೆ ಮಾಡುವುದು ಮೂರ್ಖತನದ ಕೆಲಸವಾಗಬಹುದೆಂದು ನಾನು ಸುಮ್ಮನಾದೆ. ಅಲ್ಲದೆ ಆ ಮುದುಕಿ ತನ್ನ ಪಾಡಿಗೆ ತಾನಿದ್ದಳು; ಆ ಬೆಕ್ಕಾದರೂ ನನಗೇನೂ ತೊಂದರೆ ಕೊಟ್ಟಿರಲಿಲ್ಲ. ನಾನೇ ಇಷ್ಟು ಅಂಜುಬುರುಕನಿದ್ದರೆ, ಪಾಪ ಆ ಮುದುಕಿಯಾದರೂ ಏನು ತಪ್ಪು ? ಹೆದರಿಕೆಯಿಂದ ಮನಸ್ಸನ್ನು ತಿರುಗಿಸಲೆಂದು ಆ ಹುಡುಗಿಯ ಕಡೆಗೆ ನೋಡುತ್ತ ಕುಳಿತೆ.

ಒಮ್ಮೆ ನೋಡಿದರೆ ಇನ್ನೊಮ್ಮೆ ನೋಡಬೇಕೆಂದು ಆತಿಹುಟ್ಟಿಸುವ ರೂಪ ಅವಳದಾಗಿತ್ತು. ಹಾಲಿನಂತಿದ್ದ ಅವಳ ಮೈಬಣ್ಣ, ಶುಭ್ರತೆಯಲ್ಲಿ ಹಾಗೂ ಕೋಮಲತೆಯಲ್ಲಿ ನಿಮಗೆ ಮಲ್ಲಿಗೆಹೂವಿನ ನೆನಪನ್ನು ತರುತ್ತಿತ್ತು. ಅವಳ ಮಾದಕ ಕಣ್ಣುಗಳು ಯಾರನ್ನೂ ಮಂತ್ರಮುಗ್ಧವಾಗಿ ಮಾಡಿಬಿಡುವಂತಿದ್ದುವು– ಅಂಥ ಮಾಟಮಾಡುವ ಕಣ್ಣುಗಳನ್ನು ನಾನು ಜೀವಮಾನದಲ್ಲೇ ಕಂಡಿಲ್ಲ. ವಕೀಲರೇ, ಈ ಎಲ್ಲ ವರ್ಣನೆಯಿಂದ ನಾನು ಅವಳಿಗೆ ಮೋಹಿತನಾದೆನೆಂದು ಮಾತ್ರ ನೀವು ತಿಳಿದುಕೊಳ್ಳಬೇಡಿರಿ. ನನ್ನನ್ನು ಆಕರ್ಷಿಸಬಹುದಾಗಿದ್ದ ರೂಪ ನಿಜವಾಗಿಯೂ ಅವಳದಾಗಿರಲಿಲ್ಲ. ಅವಳು ಜನಸಾಮಾನ್ಯರಿಗಿಂತ ತೀರ ಭಿನ್ನವಾದದ್ದೇ ನನ್ನ ಮೆಚ್ಚಿಗೆಗೆ ಕಾರಣವಾಗಿತ್ತು. ಆದರೆ ಏನು ಮಾಡಿದರೂ ನನಗೆ ಆ ಬೆಕ್ಕಿನ ಹೆದರಿಕೆ ಹೋಗಲೊಲ್ಲದು. ಅಂತೆಯೇ ಕುಳಿತ ಸ್ಥಳಬಿಟ್ಟು ಬಾಗಿಲಿಗೆ ಹೋಗಿ ನಿಂತೆ. ಮುಂದಿನ ಘಟನೆಗಳೆಲ್ಲ ಇವರ ಮೇಲೆ ಅವಲಂಬಿಸಿವೆಯೆಂದು ನಾನು ನಿಮಗೆ ಇದನ್ನು ವಿವರಿಸಿ ಹೇಳುತ್ತಿದ್ದೇನೆ. ವಕೀಲರೇ, ಬೆಕ್ಕೆಂದರೆ ನಾನು ಎಷ್ಟು ಅಂಜಿ ಸಾಯುತ್ತೇನೆ ಎಂಬುದು ನಿಮಗೆ ಮನದಟ್ಟಾಯಿತೆ ಮಾತ್ರ, ನಾನು ಮುಂದೆ ಅದಕ್ಕಾಗಿ ರಿವಾಲ್ವರನ್ನು ಕೊಳ್ಳುವ ಸಾಹಸವನ್ನು ಏಕೆ ಮಾಡಿದೆನೆಂಬುದು ನಿಮಗೆ ಅರ್ಥವಾದೀತು.

ಅಷ್ಟರಲ್ಲಿ 'ಕರಾಡ್' ಸ್ಟೇಶನ್ನು ಬಂತು. ಫ್ರಾನ್ಸಿಸ್ ನನಗಾಗಿ ಪ್ಲಾಟ್‌ಫಾರ್ಮಿನ ಮೇಲೆ ನನಗಾಗಿ ಕಾಯ್ದಿದ್ದ. ಆ ಹುಡುಗಿಯೂ ನನ್ನೊಡನೆ ಇಳಿದಳು. ಆದರೆ– ದೇವರೇ ಸಾರಾದೆ– ಎಂದೆನಿಸಿತು. ಯಾಕೆಂದರೆ ಜತೆಗೆ ಬೆಕ್ಕಿದ್ದ ಆ ಪಾರ್ಸೀ ಹೆಂಗುಸು ಇಳಿಯಲಿಲ್ಲ. ನಾವಿಬ್ಬರೂ ಇಳಿಯುತ್ತಿರುವಾಗಲೇ ಫ್ರಾನ್ಸಿಸ್ ನಮ್ಮ ಕಡೆಗೆ ಓಡಿ ಬಂದ.

"ಅರೆ, ಇದೇನು ? ಒಬ್ಬರಿಗೊಬ್ಬರು ರೈಲಿನಲ್ಲಿ ಆಗಲೇ ಪರಿಚಯ ಮಾಡಿಕೊಂಡಂತೆ ಕಾಣುತ್ತದಲ್ಲ" ಎಂದು ಫ್ರಾನ್ಸಿಸ್ ಅನ್ನುತ್ತಲೇ ನನಗೆ ತಿಳಿಯಿತು—ಅವಳೇ ಅವನ ಹೆಂಡತಿ 'ಲಿಲ್ಲಿ' ಇರಬಹುದೆಂದು. ಮತ್ತೆ ಪರಿಚಯವಾಯಿತು. "ನೀವು ಇಲ್ಲಿ ಬಂದದ್ದಕ್ಕಾಗಿ ಸಂತೋಷವಾಯಿತು" ಇತ್ಯಾದಿ ಮಾತುಕತೆಗಳಾದುವು. ಆದರೆ ಅವಳು ಆ ದಿನ ಮುಂಬೈಗೆ ಏಕೆ ಹೋಗಿದ್ದಳೆಂದು ನಾನು ಫ್ರಾನ್ಸಿಸ್‌ನನ್ನು ಕೇಳಲೂ ಇಲ್ಲ, ಅವನು ಹೇಳಲೂ ಇಲ್ಲ. ಇಬ್ಬರ ದೃಷ್ಟಿಯಲ್ಲಿಯೂ ಅದಕ್ಕೆ ವಿಶೇಷ ಮಹತ್ತ್ವವಿರಲಿಲ್ಲ. ಅವಳ ಆಕರ್ಷಕ ಹಾವಭಾವ, ಅವಳ ಉನ್ಮಾದಕಾರಿಯಾದ ಪಿಸುಗುಟ್ಟುವ ಧ್ವನಿ ನನ್ನನ್ನು ಕೂಡ ದಂಗು ಬಡಿಸಿದುವು. ಆಗ ನನಗೆ ಅರ್ಥವಾಯಿತು; ಫ್ರಾನ್ಸಿಸ್ ಅವಳಿಗಾಗಿ ಇಷ್ಟೇಕೆ ಹುಚ್ಚನಾಗಿದ್ದಾನೆ ಎಂಬುದು.

ನಾವು ಕಾರಿನಲ್ಲಿ ಕುಳಿತೆವು; ಲಿಲ್ಲಿ ಹಿಂದಿನ ಸೀಟಿನಲ್ಲಿ, ನಾವಿಬ್ಬರೂ ಮುಂದೆ. ಕಾರಿನ ಎರಡು ಕಿಟಕಿಗಳಿಂದ ನುಗ್ಗಿ ಬರುವ ಸ್ವಚ್ಛವಾದ ಗಾಳಿ ನನಗೆ ಟ್ರೇನಿನಲ್ಲಿ ಆದ ದಣಿವನ್ನು ಹೋಗಲಾಡಿಸಿತು. ಫ್ರಾನ್ಸಿಸ್ ಹೇಳಿದ, ಆ ಸ್ಥಳ ಅವರಿಬ್ಬರಿಗೂ ಹಿಡಿಸಿತಂತೆ. ಲಿಲ್ಲಿಗೆ ಇದರಿಂದಾಗಿ ಹೊಸ ಜೈತನ್ಯ ಬಂದಂತಿದೆ– ಇತ್ಯಾದಿ. ತಾನೂ ಇದರಿಂದಾಗಿ ಸುಧಾರಿಸಿದ್ದೇನೆ, ಎಂದ. ಆದರೆ ನನಗೇಕೋ ಅವನು ಬಹಳ ಸೋತು ಹೋದವನಂತೆ ಕಂಡುಬಂದ.

ನೀವು ಕೂಡ ಆ ಹೊಟೆಲ್ಲನ್ನು ನೆಚ್ಚಬಹುದಾಗಿತ್ತು, ವಕೀಲರೇ. ಭವ್ಯವಾದ ಆ ಕಟ್ಟಡ ಪುರಾತನ ಕಾಲದ ಪಾಳೆಯಗಾರರ ಸಣ್ಣ ಅರಮನೆಯಂತಿತ್ತು. ಅದರ ಇದಿರಿನಲ್ಲಿ ವಿಶಾಲವಾದ ತೋಟವಿದ್ದು, ಕೋಟೆಯ ಗೋಡೆಯಂತಿದ್ದ ಎತ್ತರವಾದ ಗೋಡೆಯು ಆ ವಿಸ್ತೀರ್ಣ ನೆಲವನ್ನೆಲ್ಲ ಸುತ್ತಿ ನಿಂತಿತ್ತು. ನಾವು ಅವನ್ನು ಮುಟ್ಟಿದಾಗ ಸಂಜೆಯಾಗಿತ್ತು. ಎಲ್ಲರೂ ಊಟಮಾಡಿದೆವು. ಲಿಲ್ಲಿಗೆ ಬಹಳ ದಣಿವಾದ್ದರಿಂದ, ಅವಳು ಮಲಗಲೆಂದು ತನ್ನ ಕೋಣೆಗೆ ಹೋದಳು ನಾನು ಮತ್ತು ಫ್ರಾನ್ಸಿಸ್ ಹತ್ತಿರವಿದ್ದ ಹಳ್ಳಿಯನ್ನು ಸುತ್ತಿಬರೋಣವೆಂದು ಹೊರಟೆವು. ಆ ಹಳ್ಳಿ ನಾವಿದ್ದ ಸ್ಥಳದಿಂದ ಸ್ವಲ್ಪ ದೂರವೇ ಇತ್ತು. ಅದು ಬಹಳ ಚಿಕ್ಕದು. ರಾತ್ರಿ ಹತ್ತೆನ್ನುವುದರಲ್ಲಿಯೇ ಊರ ದೀಪಗಳೆಲ್ಲ ಆರಿಹೋಗುತ್ತಿದ್ದುವು. ತೆಂಗಿನ ಗರಿಯ ಛಾವಣಿ ಹೊದಿಸಿದ್ದ ಚಿಕ್ಕ ಚಿಕ್ಕ ಮನೆಗಳು, ಅವುಗಳಿಗಿದ್ದ ವಿಶಾಲವಾದ ಕಿಡಕಿಗಳು– ರಾತ್ರಿಯೆಲ್ಲ ಗಾಳಿಗೆ ತೆಂಗಿನ ಗರಿಗಳು 'ಪರಪರ' ಸಪ್ಪಳವೊಂದಿಗೆ ಹೊಯ್ದಾಡಿ ಬಾಗ, ಇಡೀ ಸ್ಥಳವೆಲ್ಲ ಬೆಕ್ಕು ನಿದ್ದೆಯಲ್ಲಿ ಮೈಕೊಡವಿಗೊಂಡಂತೆನಿಸುತ್ತಿತ್ತು.

ನಾವು ತಿರುಗಿಬಂದಾಗ ಹೊಟೆಲ್ಲಿನ ಮಾಲಕನು ಅಂಗಡಿಯನ್ನು ಮುಚ್ಚುತ್ತಿದ್ದ– ಅವನ ಮುಖ ಒಟ್ಟಾರೆ ನಿರ್ವಿಕಾರ ಹಾಗೂ ಭಾವನಾರಹಿತವಾಗಿತ್ತು. ನನಗೆ ಅವನು ಕಟೆದ ಮೂರ್ತಿಯಂತೆ ಕಂಡ. ತೀರ ಸೊರಗಿ ಸವಕಲಾಗಿದ್ದ ಅವನ ಹೆಂಡತಿ, ಗಂಡನ ಅಧಿಕಾರದರ್ಪಕ್ಕೆ ಸಿಕ್ಕು ನಿರ್ವೀರ್ಯಳಾದಂತೆ ಕಾಣಿಸುತ್ತಿದ್ದಳು. ಆದರೆ ಮುಂದೆ ಕ್ರಮೇಣ ಅನುಭವದಿಂದ ಗೊತ್ತಾಯಿತು, ಅವಳೇ ತನ್ನ ಗಂಡನ ಮೇಲೆ ಪ್ರಭುತ್ವ ನಡೆಸುತ್ತಿದ್ದಳೆಂಬುದು. ಗಂಡ ಅವಳೆದುರು ಬಾಯಿ ಬಿಡಲು ಕೂಡ ಅಂಜುತ್ತಿದ್ದ.

ಅವರು ನನಗೆ ಕೊಟ್ಟಿದ್ದ ಬೆಡ್‌ರೂಮು ಚೊಕ್ಕಟವಾಗಿತ್ತು. ಛಾವಣಿಯ ವರೆಗಿದ್ದ ವಿಶಾಲವಾದ ಕಿಡಕಿಯಿಂದ ಹೊರಗಿನ ತೋಟವೆಲ್ಲ ಕಾಣುತ್ತಿತ್ತು. ಆಗ ನಾನು ಬಹಳ ದಣಿದಿದ್ದರಿಂದ, ಲೆವೆಂಡರ್ ಸಿಡಿಸಿದ ಆ ಬೆಡ್‌ಸೀಟಿಗೆ ನನ್ನ ಬೆನ್ನು ಹತ್ತುವುದೇ ತಡ– ನನಗೆ ಗಾಢವಾಗಿ ನಿದ್ರೆಹತ್ತಿತು. ಆದರೆ ನಡುರಾತ್ರಿಯಲ್ಲಿ ನನಗೆ ಒಮ್ಮೆಲೆ ಹಠಾತ್ತಾಗಿ ಎಚ್ಚರವಾಯಿತು. ಬಹಳ ಸೆಕೆಯೆನಿಸಿದ್ದರಿಂದ ಹೊತ್ತುಕೊಂಡ ರಗ್ಗನ್ನು ತೆಗೆದೊಗೆದು ತಂಗಾಳಿಗಾಗಿ ಆಸೆಮಾಡಿಕೊಂಡು ನಾನು ಕಿಡಕಿಯ ಬಳಿ ಹೋದೆ. ಇಡೀ ತೋಟವೆಲ್ಲ ಬೆಳುದಿಂಗಳಲ್ಲಿ ಮಿಂದು ನಿಂತಿತ್ತು. ನಾನು ನೋಡುತ್ತಿದ್ದಂತೆಯೇ ಎದುರಿನಲ್ಲಿ ಬೆಳೆಸಿದ್ದ ಹುಲ್ಲಿನ ಮೇಲೆ ಏನೋ ಸುರುಳಿ ಸುತ್ತಿದಂತೆ, ಮತ್ತೆಮತ್ತೆ ಅತ್ತಿತ್ತ ಜಿಗಿದಂತೆ ಕಾಣಿಸಿತು. ನಾನು ಅದೇನು ಇರಬಹುದೆಂದು ಪುನಃಪುನಃ ಕಣ್ಣುಬಿಟ್ಟು ನೋಡಿದೆ. ಅವು ಎರಡು ಬೆಕ್ಕುಗಳಿದ್ದುವು. ಅವು ಸಾಕಷ್ಟು ಅಂತರದ ಮೇಲೆ ಇದ್ದುದರಿಂದ, ಆಗ ನನಗೆ ಅಂಜಿಕೆ ಬರಲಿಲ್ಲ. ಒಂದರ ಮೇಲೊಂದು ಉರುಳುತ್ತ ಮತ್ತೆಮತ್ತೆ ಜಿಗಿದು ದೂರ ಸರಿಯುತ್ತ, ಹುಲ್ಲಿನ ಮೇಲೆ ಬಿದ್ದಿದ್ದ ತಮ್ಮ ನೆರಳನ್ನು ಪುನಃ ಪುನಃ ಬೆನ್ನಟ್ಟುತ್ತ, ಯಾವುದೋ ರಹಸ್ಯಮಯವಾದ ಕಾರ್ಯದಲ್ಲಿ ಅವು ನಿರತವಾಗಿದ್ದುವು. ನನಗೆ ಅದೊಂದು ಧಾರ್ಮಿಕನೃತ್ಯದಂತೆ ಕಂಡಿತು. ಮುಂದೆ ಯಾವುದೋ ಪ್ರಾಣಿ ಒಮ್ಮೆಲೆ ಬಂದು ಅವುಗಳನ್ನು ಹೆದರಿಸಿದಂತೆ ತೋರಿತು. ಯಾಕೆಂದರೆ ಅವು ಅಲ್ಲಿಂದ ತತ್‌ಕ್ಷಣ ಚಿದರಿಹೋದುವು.

ನಾನು ಹಾಸಿಗೆಗೆ ತಿರುಗಿದೆ. ನನಗೆ ನಿದ್ದೆಬರಲಿಲ್ಲ. ನನ್ನ ಮೈಯಲ್ಲಿಯ ಶಕ್ತಿಯೆಲ್ಲ ಉಡುಗಿಹೋದಂತಾಯ್ತು. ಕಿಟಕಿಯ ಕೆಳಗಡೆ ಹತ್ತಿರದಲ್ಲಿಯೇ ಬೆಳೆದ ಎತ್ತರವಾದ ಹೂವಿನ ಕಂಟಿಯಿಂದ ಬರುವ "ಕರಕರ" ಸಪ್ಪಳವನ್ನು ಕೇಳುತ್ತ, ಕಿಟಕಿಯನ್ನೇ ದಿಟ್ಟಿಸುತ್ತ ನಾನು ಮಲಗಿಕೊಂಡೆ. ಮಧ್ಯೆ ಒಮ್ಮೆಲೇ ಏನೋ ಹಾರಿಬಂದು ಧೊಪ್ಪನೆ ಕಿಟಕಿಯಲ್ಲಿ ಬಿದ್ದಂತಾಯಿತು, ಕಣ್ಣರಳಿಸಿ ನೋಡಿದೆ– ಒಂದು ದೊಡ್ಡದಾದ ಕರಿಯ ಬೆಕ್ಕು ಅಲ್ಲಿ ನಿಂತಿತ್ತು ! ಅಷ್ಟು ಭಯಾನಕವಾದ ಬೆಕ್ಕನ್ನು ನಾನು ಈ ವರೆಗೆ ಎಂದೂ ನೋಡಿರಲಿಲ್ಲ. ಅದು ಸೆಟೆದು ನಿಂತು, ತಲೆಯನ್ನು ಒಂದು ಮಗ್ಗಲಿಗೆ ಹೊರಳಿಸಿ, ಕೋಣೆಯನ್ನೆಲ್ಲ ನಿರೀಕ್ಷಿಸುತ್ತ, ತನ್ನ ಕಿವಿಯನ್ನು ಕಿಟಕಿಯ ಸಲಾಕಿಗೆ ಮೆಲ್ಲನೆ ತಿಕ್ಕುವುದರಲ್ಲಿ ಮಗ್ನವಾಗಿತ್ತು. ನನಗೆ ಅಂಜಿಕೆಯೆಂದು, ಹತಾಶನಂತೆ ಮಲಗಿದಲ್ಲಿಂದಲೇ ಹುರ್‌ಹುರ್ ಎಂದು ಆ ಬೆಕ್ಕನ್ನು ಓಡಿಸಲು ಯತ್ನಿಸಿದೆ. ಅದು ಯಾವ ಸಪ್ಪಳವೂ ಇಲ್ಲದೆ ಕಿಟಕಿಯಿಂದ ಜಿಗಿದುಹೋಯಿತು. ಸೆಕೆಯಾದರೂ

ಚಿಂತೆಯಿಲ್ಲವೆಂದು, ಆ ಬೆಕ್ಕಿನ ಹೆದರಿಕೆಯಿಂದ ಕಿಟಕಿಯನ್ನು ಭದ್ರವಾಗಿ ಮುಚ್ಚಿಬಂದೆ. ಕೆಳಗೆ ದೂರದಲ್ಲಿ ಕಂಟಿಯೊಳಗಿಂದ " ಮ್ಯಾಂವ್ ಮ್ಯಾಂವ್ " ಎಂಬ ಧ್ವನಿ ಮಂದವಾಗಿ ಕೇಳಿಬಂತು. ಆಮೇಲೆ ಮತ್ತೆ ಎಲ್ಲವೂ ಶಾಂತವಾಯಿತು. ಇದಾದ ನಂತರ ನಾನು ನೇರವಾಗಿ ಮಲಗಿ ಕೊಳ್ಳಲು ಹೋದೆ.

ಮರುದಿವಸ ಫ್ರಾನ್ಸಿಸ್ ತಾನು ಕಟ್ಟುತ್ತಿದ್ದ ಒಡ್ಡನ್ನು ತೋರಿ ಸಲು ನಮ್ಮಿಬ್ಬರನ್ನೂ ತನ್ನ ಕಾರಿನಲ್ಲಿ ಕರೆದುಕೊಂಡು ಹೋದ. ಅಲ್ಲಿ ಆ ದಿನ ನರವಿಹೀನತೆ (nervousness) ಯಿಂದ ಬಳಲುತ್ತಿದ್ದಂತೆ ನನಗೆನಿಸಿತು. ನದಿಯ ನೀರನ್ನು ತಡೆದು ಅದರ ಸಹಾಯದಿಂದ ಅಲ್ಲಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದ್ದರು. ಅದನ್ನು ತೋರಿಸಲೆಂದು ಫ್ರಾನ್ಸಿಸ್, ನಮ್ಮಿಬ್ಬರನ್ನೂ ತಾತ್ಪೂರ್ತಿಕವಾಗಿ ಹಾಕಿದ್ದ ಕಟ್ಟಿಗೆಯ ಹಲಗೆಗಳ ಪೂಲಿನ ಮೇಲಿಂದ ಕರೆದುಕೊಂಡು ಹೋದ. ಬರೀ ಹಲಗೆ ಗಳಿದ್ದರೂ ಆ ಪೂಲು ಭಯಾನಕವೇನೂ ಇರಲಿಲ್ಲ. ಆದರೆ ಲಿಲ್ಲಿ ಬರ ಲೊಪ್ಪಲಿಲ್ಲ. ಇಷ್ಟೇ ಅಲ್ಲ, ಫ್ರಾನ್ಸಿಸ್ ಸಿಟ್ಟಿನಿಂದ ಅವಳಿಗೆ ಬಲಲು ಬಲವಂತಮಾಡಲು ಅವಳು ಹುಚ್ಚಿಯಂತಾದಳು. ಅನಿವಾರ್ಯವಾಗಿ ನಾವಿಬ್ಬರೇ ಹೋಗಿಬಂದೆವು. ನಾವು ಬರುವಷ್ಟರಲ್ಲಿಯೇ ಲಿಲ್ಲಿ ಎಲ್ಲವನ್ನೂ ಮರೆತು ಮತ್ತೆ ಮೊದಲಿನಂತಾಗಿ, ತಾನು ಕ್ಷಣದ ಹಿಂದೆ ಮಾಡಿದ ಮೂರ್ಖತನಕ್ಕಾಗಿ ನಮ್ಮ ಕ್ಷಮೆಬೇಡಿದಳು. ಫ್ರಾನ್ಸಿಸ್ ಅಪಮಾನಿತ ನಂತೆ ಕಂಡ. ನನಗೂ ಈ ಘಟನೆ ಸ್ವಲ್ಪ ಹೆಚ್ಚೇ ಕರುಣಾಮಯ ವೆನಿಸಿತು. ಅವಳೇ ನನಗೆ– ಇದಾದ ನಂತರ– ಒಮ್ಮೆ ಹೇಳಿದಳು : ತಾನು ಚಿಕ್ಕವಳಿದ್ದಾಗ ಒಮ್ಮೆ ನದಿಯಲ್ಲಿ ಬಿದ್ದು ಮುಳುಗಿಹೋಗುತ್ತಿದ್ದ ಳಂತೆ; ಆಗ ಯಾರೋ ಬದುಕಿಸಿದರು. ಅಂದಿನಿಂದ ಇಂದಿನವರೆಗೂ ತನಗೆ ಹರಿಯುವ ನೀರನ್ನು ಕಂಡರೆ ಪ್ರಾಣಾಂತಿಕ ಭಯವಾಗುತ್ತಿದೆ– ಎಂದು. ಇದೊಂದು ಸಣ್ಣ ಘಟನೆಯನ್ನು ಬಿಟ್ಟರೆ, ನಾನು ಎಂದೂ ಅವರಿಬ್ಬರೂ ಒಬ್ಬರ ಮೇಲೊಬ್ಬರು ಸಿಟ್ಟಾಡುವುದನ್ನಾಗಲಿ, ಅಥವಾ ತಿರಸ್ಕಾರ ತೋರಿಸಿದುದನ್ನಾಗಲಿ ನೋಡಿಲ್ಲ. ಫ್ರಾನ್ಸಿಸ್ ಕೆಲಸದ ನಿಮಿತ್ತ ಇಡೀ ದಿನವನ್ನೆಲ್ಲ ಹೊರಗೇ ಕಳೆಯುತ್ತಿದ್ದ. ಹೀಗಾಗಿ ನಾನೇ ಅವಳಿಗೆ ಸಂಗಾತಿಯಾಗಬೇಕಾಗಿತ್ತು. ಲಿಲ್ಲಿ ಒಮ್ಮೊಮ್ಮೆ ನನ್ನನ್ನು ಕಾರಿನಲ್ಲಿ ಬಹಳ ದೂರದವರೆಗೆ ಕರೆದುಕೊಂಡು ಹೋಗುತ್ತಿ ದ್ದಳು. ಇಂಜನಿನ ಸಪ್ಪಳ ಕೇಳುತ್ತ ಕಿಟಕಿಯಿಂದ ಬರುವ ಗಾಳಿಗೆ ಅರಿ ತೂಕಡಿಸುತ್ತ, ತಾಸುಗಟ್ಟಲೆ ನಾನು ಹಾಗೇ ಕುಳಿತಿರುತ್ತಿದ್ದೆ. ಮುಂದೆ ಸುತ್ತಿಸುತ್ತಿ ಮರೆಯಾಗುತ್ತಿರುವ ರಸ್ತೆಯನ್ನು ನೆಟ್ಟದೃಷ್ಟಿಯಿಂದ ನೋಡುತ್ತ ಶೂನ್ಯಮನಸ್ಕಳಾಗಿ ಲಿಲ್ಲಿ ಗಂಟೆಗಟ್ಟಲೆ ಕಾರನ್ನು ಡ್ರೈವ್ ಮಾಡುತ್ತಲೇ ಇರುತ್ತಿದ್ದಳು. ಆ ಭಾಗದ ಸುತ್ತುಮುತ್ತಲಿನ ಸ್ಥಳಗಳ ನ್ನೆಲ್ಲ ನಾವು ಸುತ್ತಿಬಂದೆವು.

ಒಟ್ಟಿನಲ್ಲಿ ನಾನು ಅವರೊಡನೆ ಒಂದು ವಾರವನ್ನು ಸುಖವಾಗಿ ಕಳೆದೆ. ಬೆಕ್ಕುಗಳ ಹಾವಳಿಯೊಂದು ಇದ್ದಿಲ್ಲವಾದರೆ, ನನ್ನ ಇರವು ಹೆಚ್ಚು ಸುಖಕರವಾಗಿಬಹುದಿತ್ತು. ಪ್ರತಿರಾತ್ರಿಯಲ್ಲಿಯೂ ಆ ವೇಳೆಯಲ್ಲಿ ಅವು ಭೂತಗಳಂತೆ ಅಲೆಯುತ್ತಿದ್ದುವು– ನಾನು ಮೊದಲಿನ ನೋಡಿದ ಆ ದೊಡ್ಡ ಕರಿಯ ಬೆಕ್ಕು, ಇನ್ನೊಂದು ಕಂದು ಬಣ್ಣದ ಬೆಕ್ಕು, ಮತ್ತು ಬಹಳ ಉಗ್ರವಾಗಿ ನಾರುವ ಹೆಂಡಬಂಡ ಬಣ್ಣದ ಬೆಕ್ಕು, ಇವು ನನಗೆ ಕಾಣಿಸದೆ ಇದ್ದ ರಾತ್ರಿಯೇ ಇರಲಿಲ್ಲ. ಇವಲ್ಲದೆ ಒಂದು ರಾತ್ರಿಯಂತೂ ಉಗ್ರವಾಗಿ ಕಾಣುವ ಅಚ್ಚ ಬಿಳಿಯ ಬಣ್ಣದ ಬೆಕ್ಕೊಂದು, ತಾಸುಗಟ್ಟಲೆ ಒಂದೇಸವನೆ ನನ್ನ ಕಿಟಕಿಯ ಬಳಿಯಲ್ಲಿ ಮ್ಯಾಂವ್‌ಗುಟ್ಟುತ್ತ ನಿಂತಿತ್ತು. ಆ ಬೆಕ್ಕುಗಳನ್ನು ಚದರಿಸಲು ನಾನು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ಇದ್ದುಬಿದ್ದ ಬೂಟು, ಪುಸ್ತಕ, ನೋಟು-ಬುಕ್ಕುಗಳನ್ನೆಲ್ಲ ಒಂದೊಂದಾಗಿ ಅವುಗಳ ಮೇಲೆ ಒಗೆದೆ. ಇಷ್ಟಾದರೂ ಅವುಗಳಲ್ಲಿ ಒಂದು ಬೆಕ್ಕಾದರೂ ಅಲ್ಲಿಂದ ಚಲಿಸಲಿಲ್ಲ. ಆ ತೋಟವನ್ನೇ ಅವು ವಿರಾಮಸ್ಥಳ ಮಾಡಿಕೊಳ್ಳಲು ನಿರ್ಧರಿಸಿದ್ದುವೆಂದು ತೋರುತ್ತದೆ. ಆ ಬೆಕ್ಕುಗಳ ಕಾಟ ದಿವಸದಿವಸಕ್ಕೆ ಇನ್ನೂ ಹೆಚ್ಚತೊಡಗಿತು. ಒಂದು ರಾತ್ರಿ ಹದಿನೈದು ಇಪ್ಪತ್ತು ಬೆಕ್ಕುಗಳು ಗೋಲಾಕಾರದಲ್ಲಿ ಹಿಂಭಾಗದ ಮೇಲೆ ಕುಳಿತು, ಆ ದೊಡ್ಡ ಕರಿಯ ಬೆಕ್ಕು ಆ ಚಕ್ರದ ಒಳಗೊಮ್ಮೆ ಹೊರಗೊಮ್ಮೆ ನೃತ್ಯಮಾಡುತ್ತ ಆ ಬೆಕ್ಕುಗಳ ಸುತ್ತಲೂ ಸುಳಿದದ್ದನ್ನು ನಾನೇ ನೋಡಿದ್ದೇನೆ. ನಾನು ಪ್ರತಿರಾತ್ರಿಯೂ ಕಿಟಕಿಯನ್ನು ತಪ್ಪದೆ ಮುಚ್ಚಬೇಕಾಗುತ್ತಿತ್ತು. ಯಾಕೆಂದರೆ ಇತ್ತೀಚೆಗೆ ಆ ಕರಿಯ ಬೆಕ್ಕಿಗೆ ಕಂಟಿಯ ಮೇಲಿಂದ ಕಿಟಕಿಗೆ ಹಾರಿ ನನ್ನ ಕೋಣೆಗೆ ಬರುವುದು ಪರಿ ಪಾಠವಾಗಿಬಿಟ್ಟಿತ್ತು. ಮುಂದೆ ಕ್ರಮೇಣ ನಾನು ಕೋಣೆಯ ಬಾಗಿ ಲನ್ನು ಕೂಡ ಮುಚ್ಚಿಕೊಳ್ಳುವುದನ್ನು ಕಲಿಯಬೇಕಾಯ್ತು. ಒಮ್ಮೆ ನಾನು ಏನೋ ತರಲು ಬಾಗಿಲನ್ನು ಹಾಗೆಯೇ ಬಿಟ್ಟು ಹೊರಗೆ ಹೋಗಿದ್ದೆ. ತಿರುಗಿ ಬರುವಷ್ಟರಲ್ಲಿಯೇ ಆ ಕರಿಯ ಬೆಕ್ಕು ಕಾಲಿನ ಉಗುರಿನಿಂದ 'ಕರ್‌ಕರ್' ಎಂದು ಹಾಸಿಗೆಯನ್ನು ಕೆರೆಯುತ್ತ, ಕಣ್ಣು ಮುಚ್ಚಿ ನನ್ನ ಹಾಸಿಗೆಯ ಮೇಲೆ ಸುಖದ ಸಮಾಧಿಯಲ್ಲಿ ಒರಗಿತ್ತು. ನಾನು ಸಿಟ್ಟಿನಿಂದ ಅದನ್ನು ಹೊಡೆದೆ. ಅದು ನನ್ನನ್ನು 'ದುರುದುರು' ನೋಡಿ, ತಿರಸ್ಕಾರಪೂರ್ವಕವಾಗಿ ನನ್ನ ಕಡೆಗೆ ಉಗುಳಿ, ಕಿಟಕಿಯಿಂದ ಜಿಗಿದು ಕತ್ತಲೆಯಲ್ಲಿ ಮರೆಯಾಯಿತು.

ನಾನು ಇದರ ಬಗೆಗೆ ಮಾಲಕನ ಹೆಂಡತಿಯನ್ನು ಕೇಳಲಾಗಿ, ಅವಳು, " ನಾವು ಹೊಟೆಲ್ಲಿನಲ್ಲಿ ಬೆಕ್ಕುಗಳನ್ನು ಇಟ್ಟಿಲ್ಲ " ಎಂದು ಸ್ಪಷ್ಟವಾಗಿ ಹೇಳಿಬಿಟ್ಟಳು. ನನಗೂ ಅವಳು ಹೇಳಿದ್ದು ನಿಜವೆನಿಸಿತು. ಯಾಕೆಂದರೆ ನಾನು ಕೂಡ ಹಗಲಿನಲ್ಲಿ ಒಂದು ಬೆಕ್ಕನ್ನಾದರೂ ಕಂಡಿರ ಲಿಲ್ಲ. ಒಂದು ದಿವಸ ಸಂಜೆಯ ಮಬ್ಬುಗತ್ತಲಲ್ಲಿ ಮಾಲಕನನ್ನು 'ಔಟಹೌಸ್'ನ ಹತ್ತಿರ ತಡೆದೆ. ನಾನು ಅಂದೊಮ್ಮೆ ನೋಡಿದ ಬಿಳಿಯ ಬೆಕ್ಕು ಅವನ ಹೆಗಲಮೇಲಿತ್ತು. ಅವನು ಅದಕ್ಕೆ ತನ್ನ ಕೈಯಿಂದ ಮಾಂಸ ತಿನ್ನಿಸತೊಡಗಿದ್ದ. " ಬೆಕ್ಕುಗಳ ಹಾವಳಿ ಬಹಳವಾಗಿದೆ, ಹೇಗಾದರೂ ಮಾಡಿ ನೀವು ಅದನ್ನು ತಡೆಯಬೇಕು " ಎಂದು ನಾನು ಅವನಿಗೆ ಹೇಳಿಕೊಂಡೆ. ಆ ಕೋಣೆಯಲ್ಲಿ ರಾತ್ರಿ ಅವುಗಳ ಕಾಟ ವಿಪರೀತವಾದ್ದರಿಂದ ನನಗೆ ಬೇರೊಂದು ಕೋಣೆಯನ್ನು ಕೊಡಲು ಅವನಿಗೆ ಹೇಳಿದೆ. ಅವನು ನನ್ನನ್ನು ನೋಡಿ ಪಿಳಿಪಿಳಿ ಕಣ್ಣುಬಿಡುತ್ತ. " ಹೆಂಡತಿಯನ್ನು ಕೇಳಿ ನೋಡುತ್ತೇನೆ " ಎಂದು ಗುಣುಗುಟ್ಟಿದ. ಮುಂದೆ ಆ ವಿಷಯ ಅಷ್ಟಕ್ಕೇ ನಿಂತುಹೋಯಿತು. ಯಾಕೆಂದರೆ ಆಗ ಕೊಡಲು ಬೇರೆ ಯಾವ ಕೋಣೆಯೂ ಖಾಲಿ ಇರಲೇಇಲ್ಲ.

ಒಳ್ಳೇದು, ವಕೀಲರೇ, ಸುಮ್ಮನೆ ಕತೆಬೆಳೆಸದೆ ನಿಮ್ಮಿಚ್ಛೆಯಂತೆ ನೇರವಾಗಿ ವಿಷಯಕ್ಕೆ ಬರುತ್ತೇನೆ. ನನ್ನಾಣೆಯಾಗಿಯೂ ನಾನು ಯಾವ ವಿಷಯವನ್ನೂ ನಿಮ್ಮಿಂದ ಮುಚ್ಚಿಡುವುದುವುದಿಲ್ಲ. ಲಿಲ್ಲಿಯೊಡನಿದ್ದ ನನ್ನ ಸಂಬಂಧ ಬಹಳ ಸಾಮಾನ್ಯ ದರ್ಜೆಯದಾಗಿದ್ದು, ಅಲ್ಲಿ ಯಾವ ಸಂದೇಹಕ್ಕೂ ಆಸ್ಪದವಿರಲಿಲ್ಲವೆಂಬುದನ್ನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ. ನಾನು ಬಹಳ ವೇಳೆಯನ್ನು ಅವಳೊಂದಿಗೆ ಕಳೆಯುತ್ತಿದ್ದೆನೆಂಬುದೇನೋ ನಿಜ; ಆದರೆ ನಾನು ಈ ಮೊದಲೇ ಹೇಳಿದಂತೆ, ಫ್ರಾನ್ಸಿಸ್ ಇಡೀ ದಿವಸವೆಲ್ಲ ಹೊರಗಿರುತ್ತಿದ್ದುದರಿಂದ, ನಾನು ಹಾಗೆ ಮೂಡುವುದು ಅನಿವಾರ್ಯವಾಗಿತ್ತು. ದಿನವೆಲ್ಲ ನಾವಿಬ್ಬರೂ ಏಕಾಕಿಗಳ್ಳಾಗಿದ್ದುದರಿಂದ, ಹೊತ್ತು ಕಳೆಯಲೂ ಒಬ್ಬರನ್ನೊಬ್ಬರು ಮನರಂಜಿಸುವುದು ಅವಶ್ಯವಾಗಿತ್ತು. ನನ್ನ ಸಹವಾಸ ಅವಳಿಗೆ ಹಿಡಿಸಿದಂತೆನಿಸಿತು. ಹೀಗಾಗಿ ನನಗಾದರೂ ಅವಳನ್ನು ತಿರಸ್ಕರಿಸುವುದು ಸಾಧ್ಯವಿರಲಿಲ್ಲ. ಆಗ ನಾವಿಬ್ಬರೂ ಏನೇನು ಮಾತಾಡಿದೆವೆಂಬುದನ್ನು ನಾನು ಹೇಳಲಾರೆ—ಯಾಕೆಂದರೆ ನಾವು ಯಾವ ನಿಶ್ಚಿತ ವಿಷಯದ ಬಗೆಗೂ ಮಾತಾಡಲಿಲ್ಲ. ಬರೀ ಹೊತ್ತು ಕಳೆಯಲೆಂದು ಮಾತಾಡಿದೆವು. ಅವಳು ವಾಚಾಳ ಸ್ವಭಾವದವಳಿರಲಿಲ್ಲ. ಎಷ್ಟೋ ಸಲ ಅವಳು, ತಾಸು ಗಟ್ಟಲೆ ಮಾತಿಲ್ಲದೆ ಹೊರಗೆ ಸೂರ್ಯನ ಬೆಳಕಿಗೆ ಮೈಚಾಚಿ, ಬೆಕ್ಕಿನಂತೆ ಬಿಸಿಲುಕಾಸಿಕೊಳ್ಳುತ್ತ ಮಲಗಿಕೊಳ್ಳುತ್ತಿದ್ದಳು. ಒಮ್ಮೊಮ್ಮೆ ಇಡೀ ಮಧ್ಯಾಹ್ನವೆಲ್ಲ ತನ್ನಷ್ಟಕ್ಕೆ ತಾನೇ ಸಣ್ಣ ಕಲ್ಲುಗಳೊಂದಿಗೋ ಇಲ್ಲವೇ ಗಿಡಪಟೊಂಗೆಯೊಂದಿಗೋ ಆಟವಾಡುತ್ತ, ತನ್ನಷ್ಟಕ್ಕೇ ತಾನೇ ಹರ್ಷಪಡುತ್ತಿದ್ದಳು. ಜೀವನದಲ್ಲಿ ತೃಪ್ತವಾದ ಜೀವ ಅವಳದೆಂದಿರಾ? ಛೇ. ನನಗೆ ಹಾಗೆನಿಸಲಿಲ್ಲ ಯಾವುದೋ ಮೂಕ ವೇದನೆ ಹಗಲಿರುಳೂ ಅವಳನ್ನು ಕೊರೆಯುತ್ತಿದ್ದಂತೆ ನನಗೆನಿಸಿತು. ಸಂಜೆಗೆ ಫ್ರಾನ್ಸಿಸ್ ಬಂದೊಡನೆ, ಆಗ ಕೆಲವು ನಿಮಿಷ ಮಾತನಾಡಿ ಆಮೇಲೆ ಅವಳು ತನ್ನ ಕೋಣೆಗೆ ಹೋಗಿಬಿಡುತ್ತಿದ್ದಳು. ಮುಂದೆ ಕತ್ತಲೆಯಾದರೂ ಎಷ್ಟೋ ಹೊತ್ತು ನಾನು ಮತ್ತು ಫ್ರಾನ್ಸಿಸ್ ಇಬ್ಬರೆ ಪರಟಿಹೊಡೆಯುತ್ತ ತೋಟದಲ್ಲಿ ಕುಳಿತಿರುತ್ತಿದ್ದೆವು.

ಇನ್ನು ನನ್ನ ಹತ್ತಿರವಿದ್ದ ಆ ರಿವಾಲ್ವರಿನ ಬಗೆಗೆ; ಹೌದು, ನಾನು ಅದನ್ನು ಒಂದುವಾರದ ಹಿಂದೆ ಹತ್ತಿರದ ಊರಿನಲ್ಲಿ ಕೊಂಡುಕೊಂಡೆ. ನಾನು ಹಾಗು ಲಿಲ್ಲಿ ಅಂದು ಮುಂಜಾನೆ ಕಾರಿನಲ್ಲಿ ಅಲ್ಲಿಗೆ ಹೋಗಿದ್ದೆವು. ಅವಳಿಗೆ ಗಂಡನಿಗಾಗಿ ಕೆಲವು ಸಾಮಾನುಗಳನ್ನು ಕೊಳ್ಳುವುದಿತ್ತು. ಅವಳ ವ್ಯಾಪಾರ ನಡೆದಾಗ ನಾನು ಅಲ್ಲಿ ಸುಮ್ಮನೆ ಏಕೆ ನಿಲ್ಲುವುದೆಂದು ಹತ್ತಿರವಿದ್ದ 'ಮೋಡಕಾ ಆಂಗಡಿ'ಯಲ್ಲಿ ಸುಳಿದುಬರೋಣವೆಂದು ಹೊರಟೆ. ನನಗೆ ಚಿಕ್ಕಹುಡುಗರು ಗುಬ್ಬಿ ಹೊಡೆಯುವ ಆಟದ 'ಏರ್‌ಗನ್' (Air gun) ಕೊಂಡು ಕೊಳ್ಳುವ ವಿಚಾರವಿತ್ತು. ಆದರೆ ಆ ಅಂಗಡಿಯವನು ನನಗೆ ಈ ರಿವಾಲ್ವರನ್ನು ತೋರಿಸಿದ. ಇದನ್ನು ನೀವು ನೋಡಿಯೇ ಇದ್ದೀರಿ. ಇದು ನೋಡಲು ಏರ್‌ಗನ್ನಿಗಿಂತಲೂ ಚಿಕ್ಕದಿದ್ದರೂ, ಇದರ ಹೊಡೆತ ಮರಣಾಂತಿಕವಿದೆ. ನನಗೆ ಈ ರಿವಾಲ್ವರನ್ನು ಮಾರಿದ ಆ ಮುದುಕನಿಗೆ ಮನ್ನುಗುಂಡಿನ ಬಗೆಗೆ ವಿಶೇಷಗೊತ್ತಿದ್ದಂತೆ ಕಾಣಲಿಲ್ಲ. ಯಾರೋ ಅವನ ಹತ್ತಿರ ಗಾಂಭೀರ್ಯವಾಗಿ ಅದನ್ನು "ನತ್ತೀ ಇಟ್ಟು" ಹೋಗಿದ್ದರಂತೆ. ಅದರಲ್ಲಿ ಹತ್ತು ಗುಂಡುಗಳು ಇವೆಯೆಂದೂ ಮುದುಕನು ಮೆಲ್ಲನೆ ನನಗೆ ಹೇಳಿದ. 'ಲೈಸೆನ್ಸ್' ಇಲ್ಲದ ತುಡುಗು ವ್ಯಾಪಾರ ಅದಾದ್ದರಿಂದ, ಮುದುಕ ನನಗೆ ಕೊಡಲು ಬಹಳ ಹಿಂಜರಿದ. ನನಗೆ ಅದರ ಉಪಯೋಗ ಚೆನ್ನಾಗಿ ಗೊತ್ತಿದೆಯೆಂದು ಅವನಿಗೆ ಮನದಟ್ಟು ಮಾಡಿಕೊಟ್ಟೆ. "ನೀನೇನೂ ಹೆದರುವ ಕಾರಣವಿಲ್ಲವಯ್ಯ! ನನಗೇನೂ ಮನುಷ್ಯರನ್ನು ಕೊಲ್ಲುವ ವಿಚಾರವಿಲ್ಲ. ಬಹಳವಾದರೆ ಒಂದೆರಡು ಬೆಕ್ಕುಗಳನ್ನು ಹೊಡೆದರೆ ಹೊಡೆಯಬಹುದು, ಅಷ್ಟೇ" ಎಂದು ನಾನು ನಗುತ್ತ ಅವನಿಗೆ ಹೇಳಿದೆ. ಮುದುಕ ಒಮ್ಮೆಲೆ ಗಾಬರಿಯಾದ. "ನೀವು ಇರುವುದು ಎಲ್ಲಿ?" ಎಂದು ಬಿಟ್ಟ ಬಾಯಲ್ಲಿಯೇ ಕೇಳಿದ. ನಾನು ಅವನಿಗೆ ಆ ಹಳ್ಳಿಯ ಹೆಸರನ್ನು ಹೇಳಿದೆ. ಮುದುಕನಿಗೆ ಆ ಹಳ್ಳಿಯ ಬೆಕ್ಕುಗಳ ಬಗೆಗೆ ಸಾಕಷ್ಟು ಗೊತ್ತಿದ್ದಂತೆ ಕಂಡಿತು. ಅವನು ಭಯಭಕ್ತಿಯಿಂದ ನನಗೆ ತಿಳಿಸಿ ಹೇಳಿದ: "ಸ್ವಾಮೀ, ಆಲ್ಲಿ ಸ್ವಲ್ಪ ಜಾಗರೂಕರಾಗಿರಿ. ಆ ಊರಲ್ಲಿಯವರಿಗೆ ಬೆಕ್ಕೆಂದರೆ ಪ್ರಾಣ. ಅವುಗಳನ್ನು ಕೊಲ್ಲುವುದು ಬಹಳ ಅಶುಭವೆಂದು ಅವರು ತಿಳಿಯುತ್ತಾರೆ." ಇದರಿಂದಂತೂ ಮುದುಕ ನನ್ನನ್ನು ಇನ್ನೂ ಹೆಚ್ಚಿನ ಸಂದೇಹದೃಷ್ಟಿಯಿಂದ ನೋಡತೊಡಗಿದ. ಅಲ್ಲದೆ ರಿವಾಲ್ವರನ್ನು ಕೊಡುವುದಿಲ್ಲವೆಂದು ಕೂತ. ಅವನನ್ನು ರಮಿಸಿ ಅದರ ಉಪಯೋಗದ ಬಗೆಗೆ ಅವನಿಗೆ ಆಶ್ವಾಸನ ಕೊಟ್ಟು ಬರಬೇಕಾದರೆ ಸಾಕುಬೇಕಾಗಿ ಹೋಯಿತು. ಮುದುಕ ಅಂಗಡಿಯ ಬಾಗಿಲಿಗೆ ಬಂದು, ನಾನು ಮರೆಯಾಗುವವರೆಗೂ ನೋಡುತ್ತ ನಿಂತಿದ್ದ.

ಆದಿನ ರಾತ್ರಿ ಗುಡುಗು ಮಿಂಚು ಬಹಳವಾಗಿತ್ತು. ಸಂಜೆಯವರೆಗೆ ಬಿಸಿಲಿನ ಝಳಕ್ಕೆ ನೆಲವೆಲ್ಲ ಕಾಯ್ದಿದ್ದರಿಂದ, ನಮಗೆಲ್ಲ ಕಕ್ಕಸವಾಗತೊಡಗಿತ್ತು. ಫ್ರಾನ್ಸಿಸ್ ಆ ಸೆಕೆಯನ್ನು ಮನಸಾರೆ ಶಪಿಸುತ್ತಿದ್ದರೆ, ಲಿಲ್ಲಿ ಒಂದು ವಿಚಿತ್ರಭಾವಸಮಾಧಿಯಲ್ಲಿ ಕುಳಿತಿದ್ದಳು. ಗುಡುಗು ಮಿಂಚು ಕೆಲವರ ಪ್ರಕೃತಿಗೆ ಒಗ್ಗುವುದಿಲ್ಲವೆಂದು ಹೇಳುತ್ತಾರೆ, ಅದು ನಿಜ. ನನಗೂ ಮೈಯಲ್ಲಿ ಸರಿಯಿರಲಿಲ್ಲ. ಅಲ್ಲದೆ ಸಾಲದ್ದಕ್ಕೆ ನುತ್ತೆ ಆ ಇಡೀ ಮನೆಯೆಲ್ಲ ಬೆಕ್ಕುಗಳಿಂದ ತುಂಬಿದಂತೆ ಭಾಸವಾಗತೊಡಗಿತು. ನನ್ನ ಕಣ್ಣಿಗೆ ಅವು ಬಿದ್ದಿರಲಿಲ್ಲ, ನಿಜ. ಆದರೆ ನಿಶ್ಚಿತವಾಗಿಯೂ ಅವು ಅಲ್ಲಿದ್ದುವು. ಕಪಾಟುಗಳ ಹಿಂದೆ, ಕಾಟನ ಕೆಳಗೆ, ಟೇಬಲ್ಲಿನ ಹಿಂದೆ, ಹೀಗೆ ನೋಡಿದಲ್ಲೆಲ್ಲ ಅವು ನಿಶ್ಶಬ್ದವಾಗಿ ಸುಳಿಯುತ್ತಿದ್ದಂತೆ ನನಗೆ ಭಾಸವಾಯಿತು. ಸೆಕೆ ಅಸಹನೀಯವಾದ್ದರಿಂದ, ಮತ್ತೆ ನಾನು ಅನಿವಾರ್ಯವಾಗಿ ಕಿಟಕಿಯನ್ನು ತೆರೆದು ಕುಳಿತುಕೊಂಡೆ. ಹೊರಗೆ ಕತ್ತಲೆ ಕರಾಳವಾಗಿ ಹಬ್ಬಿತ್ತು. ದಟ್ಟವಾಗಿ ಬಿದ್ದ ಆ ಕಗ್ಗತ್ತಲೆಯಲ್ಲಿ ಗಿಡಗಳೆಲ್ಲ ಕರಗಿ ಹೋದಂತಿದ್ದುವು. ಕಂಟೆಯಲ್ಲಿ ಮತ್ತೆ "ಕರಕರ" ಸಪ್ಪುಳವಾಗತೊಡಗಿತು. ಎಲೆಗಳು 'ಸರಕ್ ಸರಕ್' ಎಂದು ಅಲುಗಾಡಿದುವು. ಸುಮಾರು ಹನ್ನೊಂದು ಗಂಟೆಗೆ ಕಂಟೆಯೊಳಗಿಂದ ಬೆಕ್ಕೊಂದು ಜಿಗಿದು ಬಂದು ಹುಲ್ಲಿನ ಮೇಲೆ ನರ್ತನಮಾಡಿದಂತೆ ಸುತ್ತುತ್ತ "ಓ'

ಎಂದು ಭಯಾನಕವಾಗಿ ಅತ್ತಿತು. ಆಮೇಲೆ ಕ್ರಮೇಣ ಒಂದೊಂದಾಗಿ ಬೆಕ್ಕುಗಳು ಆ ಮೇಳವನ್ನು ಸೇರಿದುವು. ಅವುಗಳ ಸಂಖ್ಯೆ ಐವತ್ತಕ್ಕೂ ಮಿಕ್ಕಿರಬೇಕು. ನನಗೆ ಒಮ್ಮೆಲೆ ಭಯದಿಂದ ಮೈಯಲ್ಲಿಯ ರಕ್ತ ಹೆಪ್ಪುಗಟ್ಟಿದಂತಾಯಿತು. ಆ ಕಗ್ಗತ್ತಲಲ್ಲಿ ನನ್ನ ಕಾಲ ಕೆಳಗೆಯೇ ಒಂದು ಬೆಕ್ಕು ಮೆಲ್ಲನೆ ಹೊಟ್ಟೆಹೊಸೆಯುತ್ತ ಬಂದಂತೆನಿಸಿತು. ಕೆಳಗೆ ನೋಡದೆ ಗಾಬರಿಯಿಂದ ಮುಖ ಮೇಲೆತ್ತಿದೆ. ನೋಡುತ್ತೇನೆ, ಇದಿರಿನಲ್ಲಿಯೇ ಆ ಭಯಾನಕವಾದ ಕರಿಯಬೆಕ್ಕು ನಿಂತಿದೆ !! ಕಿಡಕಿಯಲ್ಲಿ ನನ್ನ ಮುಖಕ್ಕೆ ಅದರ ಮುಖ ಹತ್ತುವಷ್ಟು ಸಮೀಪದಲ್ಲಿ ಆ ಬೆಕ್ಕು ನಿಂತಿತ್ತು. ಅದರ ಕ್ರೂರವಾದ ಕಣ್ಣುಗಳು ಹಸಿರು ದೀಪಗಳಂತೆ ಆ ಕರಾಳಕತ್ತಲೆಯಲ್ಲಿ ಹೊಳೆದುವು. ನಾನು ಚಿಟ್ಟನೆ ಚೀರಿ, 'ಹುಶ್ ಹುಶ್' ಎಂದು ಗಾಬರಿಯಿಂದ ಕಿರುಚಿದೆ. 'ಓಕ' ಎಂದು ಅಳುಧ್ವನಿತೆಗೆದು ಆ ಬೆಕ್ಕು ಕಿಟಕಿಯಿಂದ ಕೆಳಗೆ ಜಿಗಿಯಿತು. ಮುಂದೆ ಒಮ್ಮೆಲೆ ನೂರಾರು ಬೆಕ್ಕುಗಳ ಸಾಮೂಹಿಕವಾದ ಅಳುವಿನ ಧ್ವನಿ ಆ ತೋಟದಲ್ಲೆಲ್ಲ ಪ್ರತಿಧ್ವನಿಸಿತು. ಆಮೇಲೆ ಇದ್ದಕ್ಕಿದ್ದಂತೆ ಆ ಧ್ವನಿ ಹಠಾತ್ತಾಗಿ ನಿಂತು ಎಲ್ಲವೂ ಸ್ಮಶಾನ ಶಾಂತವಾಯಿತು. ನಾನು ಇದೆಲ್ಲವನ್ನು ನೋಡುತ್ತ ದಿಙ್ಮೂಢನಾಗಿ ಕುಳಿತಿದ್ದೆ. ಅಷ್ಟರಲ್ಲಿ ದೂರದಿಂದ ಎಲ್ಲಿಂದಲೋ ನೀಲಿಯ ಬೆಳಕು, "ಸರ್ಚ್‌ಲಾಯಿಟ್"ನಿಂದ ಬರುವ ಪ್ರಕಾಶದಂತೆ, ಹರಿದು ಬಂದು, ಆ ತೋಟದ ಮೇಲೆ ಕ್ಷಣಹೊತ್ತು ಬಿದ್ದು ಆರಿಹೋಯಿತು. ಮಿಂಚಿನಂತೆ ಸುಳಿದುಹೋದ ಆ ಬೆಳಕಿನಲ್ಲಿ ನಾನು ಹೊರಗೆ ನೋಡಿದಾಗ, ಆ ತೋಟದ ಸುತ್ತಲೂ ಚಾಚಿದ್ದ ಭವ್ಯವಾದ ಹೊರಗೋಡೆಯ ಮೇಲೆ, ಅದರ ತುದಿಗುಂಟ ಸಾವಿರಾರು ಬೆಕ್ಕುಗಳು ಸಾಲುಸಾಲಾಗಿ ಕುಳಿತಿದ್ದುವು. ಆರಿದ ನೀಲಿಯ ಬೆಳಕು ಮತ್ತೊಮ್ಮೆ ಮಿಂಚಿತು. ಅಷ್ಟರಲ್ಲಿಯೇ ಗೋಡೆಯಮೇಲೆ ಕುಳಿತಿದ್ದ ಅಸಂಖ್ಯ ಬೆಕ್ಕುಗಳೆಲ್ಲ ಒಮ್ಮೆಲೆ ಅದೃಶ್ಯವಾಗಿ ಹೋಗಿದ್ದುವು !

ರಾತ್ರಿಯ ಎರಡು ಗಂಟೆಗೆ ಮಳೆಬಂತು. ಆಕಾಶದಲ್ಲಿ ಏಕಾಕಿಯಾಗಿ ಚಲಿಸುವ ಮಿಂಚನ್ನು ನೋಡುತ್ತ, ಪ್ರಳಯಪುಂಜುಳಿಯಂತೆ ಮೊರೆಯುವ ಗುಡುಗಿನ ಗರ್ಜನೆಯನ್ನು ಕೇಳುತ್ತ ನಾನು ಎಚ್ಚರವಾಗಿಯೇ ಕುಳಿತಿದ್ದೆ. ಗಾಳಿ ಹುಚ್ಚೆದ್ದು ಕುಣಿಯುತ್ತಿತ್ತು. ಬಿಸಿಲಿನಿಂದ ಕಾಯ್ದು ಕಬ್ಬಿಣವಾಗಿ ಹೋಗಿದ್ದ ನೆಲದ ಮೇಲೆ 'ಧೋ ಧೋ' ಎಂದು ಪ್ರಖರವಾಗಿ ಸುರಿಯುವ ಜಡಿಮಳೆ, ಉಕ್ಕಿನ ಸಳಿಗಳಂತೆ ಬಿದ್ದು ಬಹಳ ಸಪ್ಪಳಮಾಡತೊಡಗಿತ್ತು. ಭರ್ರಿಂದು ಬೀಸುತ್ತಿದ್ದ ಬಿರುಗಾಳಿಯ ಸೆಳಕು ಮಳೆನೀರನ್ನು ತಂದು ನನ್ನ ಮುಖಕ್ಕೆ ಗೊಜ್ಜಿತು. ದಿನದ ಸೆಕೆಯಿಂದ ಕಾಯ್ದುಹೋಗಿದ್ದ ತಲೆಯನ್ನು ತೊಯ್ಸಲೆಂದು ನಾನು ಹೊರಗೆ ಹಣಿಕೆಹಾಕಿದೆ. ಆಗ ಮಗ್ಗಿಲಿನ ಕೋಣೆಯ ಕಿಟಕಿ ಒಮ್ಮೆಲೆ ಮುಚ್ಚಿಕೊಂಡಿತು. ಮುಂದೆ ಗುಡುಗು ಮಿಂಚು ಕಡಮೆಯಾಗಿ ಹೊರಗೆ ನೀರು ಹರಿಯುವ ಸಪ್ಪಳವೊಂದೇ ಅವ್ಯಾಹತವಾಗಿ ಕೇಳಿಸತೊಡಗಿತು.

ಆಗ ಹೊರಗೆ ಯಾರೋ ಬಾಗಿಲು ತಟ್ಟಿದ ಸಪ್ಪಳ ಕೇಳಿಸಿತು. ಹೋಗಿ ನಾನು ಬಾಗಿಲು ತೆಗೆದೆ. ಅಲ್ಲಿ ಫ್ರಾನ್ಸಿಸ್ ನಿಂತಿದ್ದ. ಅವನ ಕೈಯಲ್ಲಿದ್ದ ಕಂದೀಲಿನ ಮಂದಪ್ರಕಾಶದಲ್ಲಿ ಅವನ ಮುಖ ನೋಡಿದೆ. ಅದು ಗಾಬರಿಯಿಂದ ಕಂಗೆಟ್ಟು ಹೋಗಿತ್ತು. ಫ್ರಾನ್ಸಿಸ್ ಕೋಣೆಯ ಕಡೆಗೆ ಕೈಮಾಡುತ್ತ ವಿಷಣ್ಣ ಧ್ವನಿಯಲ್ಲಿ ತೊದಲಿದ: "ಲಿಲ್ಲಿಗೆ ಒಮ್ಮೆಲೆ ಕಾಯಿಲೆಯಾಗಿದೆ. ಎಚ್ಚರತಪ್ಪಿ ಮಲಗಿದ್ದಾಳೆ. ನನ್ನ ಕೂಡ ಬೇಗನೆ ಬರುತ್ತೀಯಾ ?" ಎಂದು.

ಇಬ್ಬರೂ ಗಡಿಬಿಡಿಯಿಂದ ಅವನ ಕೋಣೆಗೆ ಧಾವಿಸಿದೆವು. ಅಲ್ಲ ಎತಡು ಕಾಟುಗಳಿದ್ದುವು. ಒಂದು ಸುಂದರವಾಗಿ ಅಲಂಕೃತವಾದ ದೊಡ್ಡ ಕಾಟು. ಇನ್ನೊಂದು ಚಿಕ್ಕ ಫೋಲ್ಡಿಂಗ್ ಕಾಟು. ಆ ಚಿಕ್ಕ ಕಾಟು ಕಿಟಕಿಯ ಹತ್ತಿರ ಎಳೆಯಲ್ಪಟ್ಟಿತ್ತು. ಅದು ಖಾಲಿಯಾಗಿದ್ದು ಅದರಲ್ಲಿಯ ಚಾದರು ಅಸ್ತವ್ಯಸ್ತವಾಗಿ ಬಿದ್ದಿತ್ತು. ಫ್ರಾನ್ಸಿಸ್ ಆ ಹಾಸಿಗೆಯಿಂದಲೇ ಎದ್ದು ಬಂದಿರಬೇಕು. ಇಬ್ಬರು ಹಿಡಿಸುವ ಆ ಇನ್ನೊಂದು ದೊಡ್ಡ ಕಾಟಿನ ಮೇಲೆ ಲಿಲ್ಲಿಯೊಬ್ಬಳೇ ನಗ್ನಳಾಗಿ ಅಂಗಾತ ಮಲಗಿದ್ದಳು. ದೇಹದ ಕೆಳಗಿನ ಭಾಗದಮೇಲೆ ಮಾತ್ರ ಚಾದರನ್ನು ಎಳೆದಿತ್ತು. ಅವಳ ಕಪ್ಪಾದ ಕೂದಲುಗಳು ಜಡೆಗಳಾಗಿ ಹೆಗಲಿನ ಎರಡೂ ಭಾಗಗಳ ಮೇಲೆ ಬಿದ್ದಿದ್ದುವು. ಮೊದಲೇ ಶ್ವೇತವರ್ಣದ ಆ ಮುಖ ಈಗ ಇನ್ನೂ ನಿಸ್ತೇಜವಾಗಿ ಶವದ ಮುಖದಂತೆ ಮುದುಡಿಕೊಂಡಿತ್ತು. ಅವಳ ನಾಡಿ ಬಹಳ ಮಂದವಾಗಿ ಮಿಡಿಯುತ್ತಿದ್ದುದರಿಂದ, ಮೊದಮೊದಲು ಅದರ ಸ್ಪಂದನ ನನ್ನ ಸ್ಪರ್ಶಕ್ಕೆ ಹತ್ತಲಿಲ್ಲ ಕೂಡ. ಉಸುರಾಡಿಸುವುದು ಬಹಳ ಮಂದವಾಗಿದ್ದು ದೇಹ ನೆಲ್ಲ ತಣ್ಣಗಾಗಿಹೋಗಿತ್ತು. ಅವಳನ್ನು ನಾನು ಬಲವಾಗಿ ಅಲುಗಾಡಿಸಿದೆ. ಅವಳು ಪ್ರೇತದಂತೆ ನಿರ್ಜೀವನಾಗಿ ಬಿದ್ದು ಬಿಟ್ಟಿದ್ದಳು. ಅವಳ ಕಣ್ಣುಗುಡ್ಡೆಗಳನ್ನು ನೋಡಲೆಂದು ಕಣ್ಣೆವೆಗಳನ್ನು ಬಿಡಿಸಿದೆ. ಅಲ್ಲಿಯೂ ಯಾವ ಚಲನವಲನವೂ ಕಂಡುಬರಲಿಲ್ಲ. ಅವಳು ಯಾವುದಾದರೂ ಅಫೀಮಿನಂತಹ ಮಾದಕ ಔಷಧವನ್ನು ತೆಗೆದುಕೊಂಡಿದ್ದಳೇನೋ—ಎಂದು ನನಗೆ ಬಲವಾಗಿ ಸಂದೇಹವಾಯಿತು.

ಫ್ರಾನ್ಸಿಸ್ ಇದೆಲ್ಲವನ್ನೂ ನೋಡಿ ದಿಕ್ಕುಗಾಣದವನಂತೆ ನಿಂತು ಬಿಟ್ಟಿದ್ದ. ಅದುವರೆಗೆ ನಡೆದ ಘಟನೆಗಳನ್ನು ನನಗೆ ಹೇಳಿದರೆ ಅದರಿಂದ ಏನಾದರೂ ಉಪಯೋಗವಾಗಬಹುದೆಂದೆನಿಸಿತೇನೋ ಅವನಿಗೆ. ಎಲ್ಲವನ್ನೂ ವಿವರಿಸಿದ. ಲಿಲ್ಲಿ ಅಸಹನೀಯವಾದ ಆ ಸೆಕೆಗೆ ಬಹಳ ಪರಿತಪಿಸಿದಳು. ಸೆಕೆ ಸಹನವಾಗದ್ದಕ್ಕೆ ರಾತ್ರಿ ಮೈಮೇಲಿದ್ದ ಸಿಲ್ಕಿನ ನೈಟ್‌ಗೌನನ್ನು ಸಹಿತ ಕಳಚಿ ಒಗೆದಳು. ಹಾಗೂ ಫ್ರಾನ್ಸಿಸ್‌ನಿಗೆ ಬೇರೆ ಹಾಸಿಗೆಯ ಮೇಲೆ ಮಲಗಲು ಸೂಚಿಸಿದಳು. ಆಶ್ಚರ್ಯದ ಸಂಗತಿಯೆಂದರೆ, ಅಂಥ ಪ್ರಕ್ಷುಬ್ಧ ರಾತ್ರಿಯಲ್ಲಿಯೂ ಅವನಿಗೆ ಗಾಢವಾದ ನಿದ್ರೆಹತ್ತಿತ್ತು. ಕಿಟಕಿಯಿಂದ ಗಾಳಿಯ ರಭಸಕ್ಕೆ ಒಳಗೆ ಬಂದ ಮಳೆನೀರು ಮುಖದಮೇಲೆ ಬಿದ್ದು ಫ್ರಾನ್ಸಿಸ್‌ನಿಗೆ ಎಚ್ಚರವಾಯಿತು. ಎದ್ದು ಕಿಟಕಿಯನ್ನು ಮುಚ್ಚಿ ಬಂದ. ಅವಳಿಗೆ ಮೈಯಲ್ಲಿ ಸರಿಯಾಗಿದೆಯೇ ಎಂದು ಕೂಗಿ ಕೇಳಿದ. ಬಿರುಗಾಳಿಗೆ ಅವಳು ಬಹಳ ಹೆದರಿರಬೇಕು ಎಂದೆನಿಸಿತು. ಮತ್ತೆಮತ್ತೆ ಕೂಗಿದ. ಏನಾದರೂ ಉತ್ತರವೇ ಇಲ್ಲ. ಗಾಬರಿಯಿಂದ ದೀಪಹಚ್ಚಿ ಅವಳ ಕಡೆಗೆ ಧಾವಿಸಿದ. ಅವಳು ಹಾಗೆ ಬಿದ್ದು ಬಿಟ್ಟಿದ್ದಳು—ಮುಂತಾಗಿ,

ಲಿಲ್ಲಿಯ ಕೈಕಾಲುಗಳನ್ನು ತಿಕ್ಕುವುದರಿಂದಾದರೂ ಅವಳಿಗೆ ಎಚ್ಚರಿಕೆ ಬರಹುದೆಂದು ನಾನು ಅವನಿಗೆ ಸೂಚಿಸಿದೆ. ಅವಳು ಯಾವುದೋ ಔಷಧದ ಗುಂಗಿನಲ್ಲಿಯೇ ಇರಬಹುದೆಂದು ನನಗೆ ನಿಶ್ಚಿತವಾಯಿತು. ನಾವಿಬ್ಬರೂ ಅವಳ ಮೈಕೈ ತಿಕ್ಕಲು ಆರಂಭಿಸಿದೆವು. ಎದೆಗಳ ಮುಂದ ಏರಿಳಿತದ ವಿನಾ ಆ ದೇಹವೆಲ್ಲ ಪ್ರೇತದಂತಿತ್ತು. ನೋಡುತ್ತಿದ್ದಂತೆಯೇ ಶುಭ್ರವಾದ ಅವಳ ಹಾಲಿದೆಯ ಮೇಲೆ ಮಧ್ಯದಲ್ಲಿ ನನಗೆ ಕಂದೀಬಣ್ಣದ ದೊಡ್ಡ ಬೊಕ್ಕೆಯೊಂದು ಕಂಡಿತು. ಇಂಥ ಶುಭ್ರತೆಯಲ್ಲಿ ಇದೆಲ್ಲಿಯ ಕಲೆ ಎಂದು ನಾನು ಸ್ವಾಭಾವಿಕವಾಗಿಯೇ ಪುನಃಪುನಃ ಅದನ್ನು ನೋಡತೊಡಗಿದೆ. ಅದು ನನಗೆ ಘಾಯದಂತೆ ಕಂಡಿತು. ಯಾರೋ ಡಬ್ಬಣ ಚುಚ್ಚಿಟ್ಟಂತೆ ನನಗೆ ಭಾಸವಾಯಿತು. ನಾವಿಬ್ಬರೂ ಹಾಗೆಯೇ ಎಷ್ಟು ಹೊತ್ತು ಕುಳಿತಿದ್ದೆವೊ ತಿಳಿಯದು—ಅಷ್ಟರಲ್ಲಿ ಕಿಟಕಿಗೆ ಹೊರಗಿನಿಂದ ಯಾರೋ 'ಧಕ್‌ಧಕ್' ಎಂದು ಹಾಯ್ದಂತಾಯಿತು. ಕೈಯಲ್ಲಿ ಕಂದೀಲನ್ನು ತೆಗೆದುಕೊಂಡು ನಾನು ಕಿಟಕಿಯ ಬಳಿಗೆ ಹೋದೆ.

ಕರಿಯಬೆಕ್ಕು ಮತ್ತೆ ಕಿಟಕಿಯ ಕಾಜನ್ನು ತನ್ನ ಕಾಲುಗುರಿನಿಂದ ಕೆದರುತ್ತ ನಿಂತಿತ್ತು. ತಪತಪ ತೊಯ್ದು ಹೋಗಿದ್ದ ಅದರ ತುಪ್ಪಳ ಅದರ ದೇಹದ ಸುತ್ತಲೂ ಜೋತುಬಿದ್ದಿತ್ತು. ನನ್ನ ಕಾರ್ಯವನ್ನು ಪ್ರತಿಭಟಿಸುವುದೋ ಎನ್ನುವಂತೆ ಅದು ಬಾಯ್ತೆರೆದು, ಉರಿಯುವ ತನ್ನ ಕಣ್ಣುಗಳಿಂದ ನನ್ನ ಕಣ್ಣುಗಳನ್ನು ದಿಟ್ಟಿಸುತ್ತ ನಿಂತಿತ್ತು. ನಾನು ಸಿಟ್ಟಿನಿಂದ ಅದರ ತಲೆಯಮೇಲೆ ಬಲವಾಗಿ ಹೊಡೆದೆ. ಮಂತ್ರಿಸಿದವರಂತೆ ಅದು ಮತ್ತೆ ಕಾಜನ್ನು ಚಿಪ್ಪಿಕೊಂಡು ನಿಂತಿತೇ ವಿನಾ ಒಂದು ಇಂಚೂ ಅಲ್ಲಿಂದ ಚಲಿಸಲಿಲ್ಲ. ನಾನು ಅದನ್ನು ಶಪಿಸುತ್ತ ತಿರುಗಿ ಹೋಗಲು ಮತ್ತೆ 'ಓ' ಎಂದು ಅತ್ತಿತು.

"ಆ ಬೆಕ್ಕು ಹಾಳಾಗಿ ಹೋಗಲಿ. ಕಂದೀಲನ್ನು ತೆಗೆದುಕೊಂಡು ಬಾ" ಎಂದು ಫ್ರಾನ್ಸಿಸ್ ಕರೆದದ್ದರಿಂದ, ನಾನು ಒಳಗೆ ಹೋದೆ. ಅಪಶಕುನ—ಸೂಚಕವಾದ ಅವರ ಅಳುವು ಅವ್ಯಾಹತವಾಗಿ ನಡೆದೇ ಇತ್ತು. ಹೊರಗೆ ಹೋಗಿ ಮಾಲಕನನ್ನು ಎಬ್ಬಿಸಿ ಅವನಿಂದ "ಬಿಸಿನೀರಿನ ಚೀಲ"ವನ್ನು ಹಾಗೂ ಸ್ವಲ್ಪ ಬ್ರ್ಯಾಂಡಿಯನ್ನು ತೆಗೆದುಕೊಂಡು, ಯಾರನ್ನಾದರೂ ಊರಲ್ಲಿ ಕಳಿಸಿ ಒಬ್ಬ ಡಾಕ್ಟರನ್ನು ಕರೆತರಲು ಹೇಳಿಬರಲು ನಾನು ಫ್ರಾನ್ಸಿಸ್‌ನಿಗೆ ಸೂಚಿಸಿದೆ. ಫ್ರಾನ್ಸಿಸ್ ಕೂಡಲೇ ಮಾಲಕನ ಕಡೆಗೆ ಹೋದ. ನಾನು ಹಾಗೇ ಅವಳ ವೈತಿಕ್ಕುತ್ತ ಕುಳಿತೆ. ಅವಳ ನಾಡಿ ಇನ್ನೂ ಕ್ಷೀಣವಾಗತೊಡಗಿತ್ತು. ನನಗೆ ಆಗ ಒಮ್ಮೆಲೆ—ನಾನು ಔಷಧಕ್ಕೆಂದು ನನ್ನ ಹತ್ತಿರವಿಟ್ಟುಕೊಂಡಿದ್ದ ಬ್ರ್ಯಾಂಡಿಯ ಸಣ್ಣ ಬಾಟ್ಲಿಯ ನೆನಪಾಯ್ತು. ಅದನ್ನು ತರಲೆಂದು ನಾನು ಕೋಣೆಗೆ ಓಡಿದೆ. ಬೆಕ್ಕು ಒಮ್ಮೆಲೆ ಅಳುವುದನ್ನು ನಿಲ್ಲಿಸಿತು.

ನಾನು ಕೋಣೆಯಲ್ಲಿ ಹೋಗುವುದೇ ತಡ; ತೆರೆದಿಟ್ಟ ಕಿಟಕಿಯಿಂದ ಗಾಳಿಯು ಸೆಳಕು ಸರ್ರೆಂದು ಬಂದಿತು. ಆ ಕಗ್ಗತ್ತಲೆಯಲ್ಲಿ ನಾನು ನನ್ನ 'ಬ್ಯಾಗಿ'ನಲ್ಲಿ ಸುತ್ತಲೂ ಬಾಟ್ಲಿಗಾಗಿ ಹುಡುಕುತ್ತಿರುವಾಗ, ಮತ್ತೆ 'ಮೆಂವ್' ಎಂಬ ಸಪ್ಪಳ ಕೇಳಿಸಿತು. ನಾನು ನೋಡುತ್ತಿದ್ದಂತೆಯೇ ಅದೇ ಕರಿಯಬೆಕ್ಕು ಕಿಟಕಿಯಿಂದ ನನ್ನ ಕೋಣೆಯಲ್ಲಿ ಜಿಗಿದು, ಒಮ್ಮೆಲೆ ನನ್ನನ್ನು ದಾಟಿ ಬಾಗಿಲಿನಿಂದ ಹೊರಗೆ ಓಡಿಹೋಯಿತು. ನನಗೆ ಬಾಟ್ಲಿ ಸಿಕ್ಕಿತು. ಅದನ್ನು ಹಿಂಬಾಲಿಸಿ ನಾನು ಹೊರಗೆ ಹೋದೆ. ಅಷ್ಟರಲ್ಲಿಯೇ ಫ್ರಾನ್ಸಿಸ್ ಹಾಗೂ ಮಾಲಕನು ಇಬ್ಬರೂ ಓಡುತ್ತ ಬಂದರು. ನಾವೆಲ್ಲರೂ ಕೂಡಿ ಕೋಣೆಯ ಒಳಗೆ ಧಾವಿಸಿದೆವು. ನಾವು ಹೋಗುವುದೇ ತಡ, ಲಿಲ್ಲಿ ಅಳಿಸುತ್ತ ಅದೇ ನಿದ್ದೆಯಿಂದ ಎದ್ದವಳಂತೆ ಎದ್ದು ಕುಳಿತು, "ಏನಾಗಿದೆ?" ಇಷ್ಟೆಲ್ಲ ಜನರು ಯಾಕೆ ನೆರೆದಿದ್ದಾರೆ ಇಂಥ ರಾತ್ರಿಯಲ್ಲಿ?" ಎಂದು ಕೇಳಿದಳು.

ನಾವು ಹುಚ್ಚರಂತೆ ಒಬ್ಬರೊಬ್ಬರ ಮುಖ ನೋಡಿದೆವು !!

ಮರುದಿವಸ ಹವಾಮಾನ ಸ್ವಲ್ಪ ಶೀತಲವಾಗಿತ್ತು. ರಾತ್ರಿಯೆಲ್ಲ ಬೀಸಿದ್ದ ಬಿರುಗಾಳಿಯ ಮೂಲಕ ಹವೆ ಸ್ವಚ್ಛವಾಗಿತ್ತು. ಫ್ರಾನ್ಸಿಸ್ ಆ ದಿನ ಲಿಲ್ಲಿಯೊಂದಿಗೆ ಏನೇನು ಮಾತಾಡಿದನೋ ನನಗೆ ಗೊತ್ತಿಲ್ಲ. ಹಿಂದಿನ ರಾತ್ರಿಯ ಘಟನೆಯ ಬಗ್ಗೆ ನಮ್ಮಲ್ಲಿ ಒಬ್ಬರಾದರೂ ಚಕಾರ ಶಬ್ದವೆತ್ತಲಿಲ್ಲ. ಆ ದಿನ ಲಿಲ್ಲಿ ಗೆಲುವಾಗಿಯೇ ಇದ್ದಳು. ಫ್ರಾನ್ಸಿಸ್ ಆ ದಿವಸ ರಜೆ ತಗೆದುಕೊಂಡಿದ್ದ. ನಾವೆಲ್ಲರೂ ಪಿಕ್‌ನಿಕ್‌ಗೆ ಹೋಗಿ ಬಂದೆವು. ಫ್ರಾನ್ಸಿಸ್ ಮತ್ತು ನಾನು ಕೊನೆಯವರೆಗೂ ಸ್ನೇಹದಿಂದಲೇ ಇದ್ದೆವು. ನಮ್ಮಲ್ಲಿ ಎಂದೂ, ಯಾವ ವಿಷಯಕ್ಕೂ ಜಗಳ ಬರಲಿಲ್ಲ. ನೀವು ಬೇಕಾದರೆ ಫ್ರಾನ್ಸಿಸ್‌ನನ್ನೇ ಕೇಳಿರಿ. ಅವನು ಕೂಡ ನಿಮಗೆ ಇದೇ ಮಾತನ್ನೇ ಹೇಳುವನು. ಅವನು ಬೇರೆ ಹೇಳಲು ಸಾಧ್ಯವೇ ಇಲ್ಲ. ಅಷ್ಟು ನನ್ನ ಮೇಲೆ ವಿಶ್ವಾಸವಿದ್ದ ಫ್ರಾನ್ಸಿಸ್, ಇಂದು ನನ್ನ ಮೇಲೆ ಸಂಶಯಪಡುತ್ತಿದ್ದಾನೆಂದರೆ, ಈ ಮಾತನ್ನು ನಾನು ನಂಬಲಾರೆ. ವಕೀಲರೆ ನಿಜವಾಗಿಯೂ ಅಲ್ಲಿ ಸಂಶಯಾಸ್ಪದವಾದದ್ದು ಏನೂ ಇರಲಿಲ್ಲ.

ಹೌದು. ಅಂದು ಜೂನ್ ೨೪ನೆಯ ತಾರೀಖು ನಿಮ್ಮೆಲ್ಲರ ಮಾತಿನಂತೆ, ಅದು ಮಹತ್ವದ ದಿನವಾಗಿತ್ತು. ಆದಿನ ನಡೆದ ಘಟನೆಗಳ ಬಗೆಗೆ ನಾನು ಹೆಚ್ಚಿನ ವಿವರಗಳನ್ನು ಕೊಡಲಾರೆ. ಯಾಕೆಂದರೆ ಹೇಳುವಂತಹ ವಿಶೇಷ ಪ್ರಸಂಗ ಆದಿನ ನಡೆಯಲೇ ಇಲ್ಲ. ಎಲ್ಲವೂ ದಿನದಂತೆಯೇ ಇತ್ತು. ರಾತ್ರಿ ಮಲಗುವ ವರೆಗೂ ನಾವು ಕೂಡಿಯೇ ಇದ್ದೆವು. ನಾನು ದೇವರಾಣೆ ಮಾಡಿ ಹೇಳುತ್ತೇನೆ, ಆದಿವಸ ನಾನು ಫ್ರಾನ್ಸಿಸ್‌ನೊಂದಿಗಾಗಲಿ ಲಿಲ್ಲಿಯೊಡನಾಗಲಿ ಏಕಾಂತದಲ್ಲಿ ಮಾತಾಡಿಲ್ಲ. ಆದಿವಸ ಅವರಿಬ್ಬರಿಗಿಂತಲೂ ನಾನೇ ಮೊದಲು ಮಲಗಲು ಹೋದದ್ದು, ಮುಂದೆ ಅರ್ಧಗಂಟೆಯ ನಂತರ ಅವರಿಬ್ಬರೂ ಮಲಗಲು ಹೋದ ಸಪ್ಪಳ ನನಗೆ ಕೇಳಿಸಿತು. ಆದಿನ ಅವರಿಬ್ಬರೂ ಗೆಲುವಿನಿಂದಲೇ ಇದ್ದರು. ಯಾವ ವಿಷಯಕ್ಕೂ ಮನಸ್ತಾಪವಾಗಿರಲಿಲ್ಲ.

ಅಂದು ಬೆಳುದಿಂಗಳ ರಾತ್ರಿಯಿತ್ತು. ಸುದೈವದಿಂದ ಆಗ ಬೆಕ್ಕಿನ ಕಾಟ ಎಲ್ಲಿಯೂ ಕಂಡು ಬರಲಿಲ್ಲ. 'ಹಾಯಾಗಿ ಮಲಗಬಹುದಲ್ಲ'

ಎಂದು ನನಗೆ ಬಹಳ ಸಂತೋಷವಾಯಿತು. ಆಗ ಕಿಟಕಿ, ಬಾಗಿಲು ಗಳನ್ನು ಕೂಡ ನಾನು ಮುಚ್ಚಲಿಲ್ಲ. ನಾನು ಮಲಗುವ ಮುಂದೆ ಹಾಸಿಗೆಯ ಮಗ್ಗಲಿಗೆ ಇದ್ದ ಕುರ್ಚಿಯ ಮೇಲೆ ಆ ರಿವಾಲ್ವರನ್ನು ಇಟ್ಟಿದ್ದೆ. ಹೌದು. ಅದು ತುಂಬಿದ್ದಿತ್ತು. ಬೆಕ್ಕುಗಳು ಮತ್ತೆ ನಡು ರಾತ್ರಿಯಲ್ಲಿ ಎದ್ದು ತಮ್ಮ ಆಟವನ್ನು ಪ್ರಾರಂಭಿಸಿದರೆ, ಅವುಗಳನ್ನು ಹೆದರಿಸುವುದನ್ನು ಬಿಟ್ಟು ಬೇರೆ ಯಾವ ಉದ್ದೇಶದಿಂದಲೂ ನಾನು ಆ ರಿವಾಲ್ವರನ್ನು ಅಲ್ಲಿ ಇಟ್ಟಿರಲಿಲ್ಲ.

ನನಗೆ ಬಹಳ ಆಯಾಸವಾದ್ದರಿಂದ, ಒಮ್ಮೆಲೆ ನಿದ್ದೆ ಬರಬಹು ದೆಂದು ಎಣಿಕೆ ಹಾಕಿದ್ದೆ. ಆದರೆ ನಿದ್ದೆ ಬರಲಿಲ್ಲ. ನಾನು ಹಾಗೆಯೇ ಹೊರಗೆ ಹರಡಿದ್ದ ಬೆಳುದಿಂಗಳನ್ನು ನೋಡುತ್ತ ಬಿದ್ದುಕೊಂಡೆ. ಸುಮಾರು ಮಧ್ಯರಾತ್ರಿಯಲ್ಲಿ ನಾನು ನಿರೀಕ್ಷಿಸಿದಂತೆಯೇ ಆಯಿತು; ಕಳ್ಳಬೆಜ್ಜಿಯಿಂದ ಕಂಟೆಯನ್ನೇರಿದ ಸದ್ದು, ಹಾಗೂ ಬೆಕ್ಕಿನ 'ಮ್ಯಾಂವ್ ಮ್ಯಾಂವ್' ಎನ್ನುವ ಸಪ್ಪಳ ನನಗೆ ಕೇಳಿ ಬಂತು.

ನಾನು ತತ್‌ಕ್ಷಣ ಹಾಸಿಗೆಯಲ್ಲಿ ಎದ್ದು ಕುಳಿತು, ರಿವಾಲ್ವರಿ ಗಾಗಿ ಕೈಚಾಚಿದೆ. ಎತ್ತರವಾಗಿ ಭೀಕರವಾಗಿ ಕಾಣುವ ಆ ಕರಿಯ ಬೆಕ್ಕು ಕಂಟೆಯಿಂದ ಕಿಟಕಿಗೆ ಹಾರಿದ ಸಪ್ಪಳಕ್ಕೆ ನನ್ನ ಮೈ ಜುಮ್ಮೆಂದಿತು. ಅದರ ಸೆಟೆದು ನಿಂತ ಕಿವಿಗಳು, ನಿಗುರಿನಿಂತ ಬಾಲ, ಹಾಗೂ ಹಿಲಾಲಿನಂತೆ ಉರಿಯುವ ಕಣ್ಣುಗಳು—ಅಂಥ ಆ ಕತ್ತಲೆ ಯಲ್ಲಿಯೂ ನನಗೆ ಸ್ಪಷ್ಟವಾಗಿ ಕಾಣಿಸಿದುವು. ಅದಕ್ಕೆ ನಾನು ರಿವಾಲ್ವರನ್ನು ಗುರಿಯಿಟ್ಟು ಒಂದು ಗುಂಡನ್ನು ಹಾರಿಸಿದೆ. ಆ ಬೆಕ್ಕು ಒಂದು ಸಲ 'ಓ' ಎಂದು ಅಳುಧ್ವನಿ ತೆಗೆದು, ಕಿಟಕಿಯಿಂದ ನೋವಿನ ಭರದಲ್ಲಿ ಕೋಣೆಯ ಒಳಕ್ಕೆ ಹಾರಿತು.

ನಾನು ಹಾಸಿಗೆಯಿಂದ ಟಣ್ಣನೆ ಹೊರಗೆ ಜಿಗಿದೆ. ಪ್ರಶಾಂತ ವಾಗಿದ್ದ ಆ ಮನೆಯಲ್ಲಿ ನಾನು ಹೊಡೆದ ಗುಂಡಿನ ಸಪ್ಪಳ ಬಹಳ ಭಯಾನಕವಾಗಿ ಕೇಳಿಬಂತು. ಅಕ್ಷಣವೇ ಹೊರಗೆ ಎಲ್ಲಿಂದಲೋ ಒಂದು ಧ್ವನಿ ಕೇಳಿಬಂತು. ನಾನು ರಿವಾಲ್ವರನ್ನು ಹಾಗೆಯೇ ಕೈಯಲ್ಲಿ ಹಿಡಿದು, ಕೋಣೆಯ ಹೊರಗೆ ಓಡಿ ಹೊರಟಿದ್ದ ಆ ಬೆಕ್ಕನ್ನು ಕೊಲ್ಲಲೆಂದು ಅದನ್ನು ಹಿಂಬಾಲಿಸಿದೆ. ಆಗ ಹೊರಗೆ ಫ್ರಾನ್ಸಿಸ್‌ನು ಕೋಣೆಯ ಹೊರಬಾಗಿಲಿಗೆ ಲಿಲ್ಲಿ ನನಗೆ ಕಾಣಿಸಿದಳು. ಅವಳು ತನ್ನ ಎರಡೂ ಕೈಗಳನ್ನೂ ಆ ಎರಡು ಬಾಗಿಲುಗಳ ಮೇಲೆ ಇಟ್ಟು, ಆಕಡೆಗೊಮ್ಮೆ ಈಕಡೆಗೊಮ್ಮೆ ಸೋಲಿ ಹೊಡೆಯತೊಡಗಿದ್ದಳು. ಆಮೇಲೆ ಅವಳು ಬಂದು ನನ್ನ ಪಾದಗಳ ಮೇಲೆ ಧೊಪ್ಪನೆ ಬಿದ್ದಳು. ಅವಳ ಬರಿಯದಾದ ಎದೆಯೆಲ್ಲ ರಕ್ತಮಯವಾಗಿ ಹೋಗಿತ್ತು. ಕೈಯಲ್ಲಿಯ ರಿವಾಲ್ವರನ್ನು ಇನ್ನೂ ಬಿಗಿಯಾಗಿ ಹಿಡಿದುಕೊಂಡು ನಾನು ಅವಳನ್ನು ದಿಙ್ಮೂಢನಾಗಿ ನೋಡುತ್ತ ನಿಂತಾಗ, ಫ್ರಾನ್ಸಿಸ್ ತನ್ನ ಕೋಣೆಯಿಂದ ಹೊರಗೆ ಬಂದು ನಮ್ಮಿಬ್ಬರನ್ನೂ ಆ ಸ್ಥಿತಿಯಲ್ಲಿ ಕಂಡ.

ಆಯಿತು, ವಕೀಲರೇ, ಇಲ್ಲಿಗೆ ನನ್ನ ಕತೆ ಮುಗಿಯಿತು. ನಾನು ಕುಲಕರ್ಣಿಯವರಿಗೆ ಹೇಳಿದ್ದೂ ಇಷ್ಟೇ. ನಾಳೆ ಇದನ್ನೇ ನಾನು ಕೋರ್ಟಿನಲ್ಲಿ ಹೇಳಿದರೆ ಬಹಳ ಅಸಂಭವನೀಯವೆಂದು ತೋರುತ್ತದಲ್ಲವೆ? ರಕ್ತದ ಕಲೆಗಳು ನನ್ನ ಕೋಣೆಯಿಂದ ಬಂದು ಅವಳ ಕೋಣೆಯ ಕಡೆಗೆ ಹೋಗಿದ್ದುವು. ಅದಕ್ಕೆ ನಾನೇನು ಮಾಡಲಿ? ಬೆಕ್ಕು ಆ ಕಡೆಗೆ ಹೋಗಿರಬೇಕು. ನಾನು ಸಾವಿರಸಲ ಆಣೆಮಾಡಿ ಹೇಳುತ್ತೇನೆ, ವಕೀಲರೇ, ನಾನು ಕೊಂದದ್ದು ಬೆಕ್ಕು ಎಂಬುದು ನನಗೆ ನಿಶ್ಚಿತವಾಗಿಯೂ ಗೊತ್ತಿದೆ. ಇದಕ್ಕಿಂತ ಬೇರೆ ವಿವರಣೆಯನ್ನು ಕೊಡಲು ನನಗೆ ಸಾಧ್ಯವಿಲ್ಲ. ಲಿಲ್ಲಿಯನ್ನು ಯಾರು ಕೊಂದರೆಂಬುದೂ ನನಗೆ ಗೊತ್ತಿಲ್ಲ. ಯಾಕೆ ಕೊಂದರೆಂಬುದೂ ಗೊತ್ತಿಲ್ಲ. ಹೊಟೆಲ್ಲಿನಲ್ಲಿದ್ದ ಜನರೆಲ್ಲರೂ ಆ ಕರಿಯ ಬೆಕ್ಕನ್ನು ನೋಡಿಲ್ಲವೆಂದರೆ ಅದು ನನ್ನ ತಪ್ಪಲ್ಲ. ಬೇಕಾದರೆ ನೀವು ಫ್ರಾನ್ಸಿಸ್ ನನ್ನು ಕೇಳಿರಿ; ಅವನು ಆ ದಿವಸ ರಾತ್ರಿಯಲ್ಲಿ ಆ ಬೆಕ್ಕನ್ನು ನೋಡಿ ದನೋ ಇಲ್ಲವೋ ಎಂದು. ಅವನು ಆ ಮಾತನ್ನು ಅಲ್ಲಗಳೆಯಲಾರ ನೆಂಬುದು ನನಗೆ ನಿಶ್ಚಿತವಾಗಿ ಗೊತ್ತಿದೆ. ಇನ್ನು ಉಳಿದದ್ದು ಒಂದೇ ಒಂದು ದಾರಿ— ಆ ಮನೆಯನ್ನೆಲ್ಲ ಹುಡುಕುವುದು. ವಕೀಲರೇ, ಆ ಮನೆಯ ಕಟ್ಟಡವನ್ನೆಲ್ಲ ಕೆಡವಿಹಾಕಿದರೂ ಸರಿಯೇ, ಸತ್ತು ಬಿದ್ದ ಆ ಬೆಕ್ಕಿನ ದೇಹವನ್ನು ಹುಡುಕಿ ತೆಗೆಯಿರಿ. ಅಂದರೆ ಅದರ ಮೈಯಲ್ಲಿ ನಾನು ಹೊಡೆದ ಗುಂಡು ನಿಮಗೆ ಸಿಕ್ಕೇಸಿಗುತ್ತದೆ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ಸಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಕರ್ಣನ ಸತ್ತ್ವ ಯಾವುದು?

ಶ್ರೀ. ಬಿ. ಬಿ. ರಾಜಪುರೋಹಿತ ಎಂ. ಎ. ಧಾರವಾಡ

ವ್ಯಾಸ ಮಹಾಭಾರತದಲ್ಲಿಯ ಕರ್ಣನ ಪಾತ್ರ ಕನ್ನಡ ಕೃತಿಗಳಲ್ಲಿ ಚಿತ್ರಿತವಾಗುವಾಗ, ಸ್ವಭಾವದ ಭಿನ್ನತೆಯನ್ನು ತಾಳಿರುವುದು. ಕರ್ಣನು ಔರವ ಪಕ್ಷಪಾತಿಯಾದರೂ ಕನ್ನಡ ಕವಿಗಳಿಗೆ—ಅದೇಕೋ—ಕರ್ಣನಲ್ಲಿ ಅನ್ಯಾದೃಶವಾದ ಪಕ್ಷಪಾತ. ಪಂಪ–ಕುಮಾರವ್ಯಾಸರು, ಕರ್ಣನ ಬಗೆಗೆ ಗೌರವಾದರಗಳನ್ನು ಹುಟ್ಟಿಸಿದ್ದಾರೆ.

ಧರ್ಮಸಂಸ್ಥಾಪನೆಗಾಗಿ ಪರಮಾತ್ಮನ ಅವತಾರವಾಗುವಂತೆ, ನಾಡಿನ ಪುಣ್ಯ ಫಲಿಸಿದಾಗ ಮಹಾಕಾವ್ಯದ ಉದಯವಾಗುತ್ತದೆ. ಆ ಯುಗದ ಜನಜೀವನದಲ್ಲಿ ಜೀವನದ ಮೂಲಭೂತ ತತ್ತ್ವಗಳ ಬಗೆಗೆ ಕ್ರಾಂತಿಯೆದ್ದು ತಣ್ಣಗಾಗಿರುತ್ತದೆ. ಆದನ್ನು ಕಂಡನುಭವಿಸಿದ ದಾರ್ಶನಿಕನಿಗೆ ಕ್ರಾಂಚದ ವಿರಹದಂತಹ ಯಾವುದೋ ಘಟನೆಯನ್ನು ನೋಡಿ ಹೃದಯ ಉಕ್ಕುತ್ತದೆ. ಅದೇ ರಸಗಂಗೆಯಾಗುತ್ತದೆ, ಮಹಾಕಾವ್ಯವಾಗುತ್ತದೆ. ದಾರ್ಶನಿಕತೆಯನ್ನು ಪಡೆದವರಿರಬಹುದು; ಅವರು ಅನುಭಾವಿಗಳು, ತಮ್ಮ ಧ್ಯಾನದಲ್ಲಿ ಕಂಡ ಬೆಳಕನ್ನು ತಮ್ಮ ಜೀವನವನ್ನು ಬೆಳಗಿಸಲಿಕ್ಕೆ ಉಪಯೋಗಿಸುವವರು. ಆದರೆ ದಾರ್ಶನಿಕತೆಯೊಡನೆ ಅಭಿವ್ಯಕ್ತಿಯ ಶಕ್ತಿಯನ್ನು ಪಡೆದವರು ಮಹಾಕವಿಗಳು. ಜನ ಸಾಮಾನ್ಯರೊಡನೆ ಸಾಮರಸ್ಯ ಬೆಳೆಸುವವರು ಅವರು. ಅವರು ಸೃಷ್ಟಿಸಿದ ವ್ಯಕ್ತಿಗಳನ್ನೂ ಚಿತ್ರಿಸಿದ ಸನ್ನಿವೇಶಗಳನ್ನೂ ಅಷ್ಟು ಹಗುರಾಗಿ ಪ್ರಶ್ನಿಸಲು ಬರುವಂತಿಲ್ಲ. ರಾಮಾಯಣ ಮಹಾಭಾರತಗಳು ಅಂಥ ಕೃತಿಗಳು. ವಾಲ್ಮೀಕಿ-ವ್ಯಾಸರು ಜೀವನವನ್ನು ನೋಡಿದ ಬೃಹದ್ದರ್ಶನದ ಪ್ರತಿಫಲ.

ಆ ಮಹಾಕಾವ್ಯಗಳಲ್ಲಿ ನಾಡಿನ ನಾಡಿಯು ಮಿಡಿತವಿದ್ದುದರಿಂದ, ಜನತೆಯೆಲ್ಲ ಪ್ರಭಾವಿತವಾಯಿತು. ಕನ್ನಡವೂ ಆ ಪ್ರಭಾವಕ್ಕೆ ಹೊರಗಾಗಲಿಲ್ಲ. ಕನ್ನಡದಲ್ಲಿಯೂ ಅಂತಹ ಮಹಾಕಾವ್ಯಗಳು ಪ್ರತ್ಯವತಾರ ತಾಳಿದುವು. "ಮಣಾವಜ್ರ ಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿಮೇ ಗತಿಃ" ಎಂಬಂತೆ, ನಮ್ಮ ಕವಿಗಳೂ ಕಾವ್ಯರಚನೆಮಾಡಿದರು. ಸೂತ್ರವು ಹಾಯುವಾಗ ಅಲ್ಲಲ್ಲಿ ಹೊರಗೆ ತಲೆಹಾಕಿದ್ದರೆ, ಅದು ನಮ್ಮ ಕವಿಗಳ ಕಾಣ್ಕೆ, ಕಾಣಿಕೆ.

ಇತ್ತೀಚಿನ ವಿಮರ್ಶಕರು ನಮ್ಮ ಮಹಾಕಾವ್ಯಗಳಲ್ಲಿಯ ಕೆಲವು ಪಾತ್ರಗಳ ಬಗೆಗೆ, ಸನ್ನಿವೇಶಗಳ ಬಗೆಗೆ ಎಂದೂ ಬಿಡಿಸಲಾಗದ ಪ್ರಶ್ನೆಗಳು ಎಂಬಂತೆ ಶಂಕಿಸುತ್ತಾರೆ. ರಾವಣನ ಪಾತ್ರದ ಬಗೆಗೆ, ಪುಂಥರೆಯ ಪಾತ್ರದ ಬಗೆಗೆ, ದುರ್ಯೋಧನ–ಕರ್ಣರ ಬಗೆಗೆ ಅಂತಹ ಪ್ರಶ್ನೆಗಳು ಎದ್ದಿವೆ. ದುರಂತ ವ್ಯಕ್ತಿಯನ್ನೋ ಮಹಾನುಭಾವನನ್ನೋ ಅಥವಾ ಬೇರೆ ಸ್ವಭಾವದ ವ್ಯಕ್ತಿಯನ್ನೋ ಮಾಡಿದರೆ, ಅವು ಮೂಲಕಥೆಯ ಪಾತ್ರಗಳಾಗದೆ ಬೇರೆ ಕಥೆಯ ಪಾತ್ರಗಳಾಗುತ್ತವೆ. ಆದ್ದರಿಂದ ಎತ್ತಿಕೊಂಡ ಕಥೆಯ ಪಾತ್ರದ ಸತ್ತ್ವದ ಪದರುಗಳನ್ನು ಅರಿಯುವುದು ಅವಶ್ಯ. ಇಲ್ಲಿ ವ್ಯಾಸ, ಪಂಪ, ಕುಮಾರವ್ಯಾಸ ಇವರಲ್ಲಿ ಬಂದ ಕರ್ಣನ ಪಾತ್ರದ ಭಿನ್ನ ಸತ್ತ್ವಗಳನ್ನು ಏನೇಚಿಸಲಾಗಿದೆ.

ಕರ್ಣನ ನನ್ನಿಯ ಬಗೆಗೆ ಈ ಪ್ರಶ್ನೆಗಳನ್ನು ಕೇಳಲಾಗುತ್ತಿದೆ :

(೧) 'ಜೋಳದ ಸಾಲಿಯನ್ನು' (ಅಂದರೆ ದುರ್ಯೋಧನನ ಉಪ್ಪನ್ನು) ನೆನೆಯುವವನು ಕೃಷ್ಣನು ಬಂದು ತನ್ನ ಜನನವನ್ನು ತಿಳಿಹಿದ ಕೂಡಲೇ "ನಿನ್ನಯ | ವೀರರೈವರ ನೋಯಿಸೆನು ರಾಜೀವ ಸಖನಾಣೆ" ಎಂದು ಕೃತಘ್ನನಂತೆ ಮಾತು ಕೊಟ್ಟುದೇಕೆ?

(೨) ಕುಂತಿಯು ಬಂದು ವಚನವನ್ನು ಕೇಳುವಾಗ, ತನ್ನ ತಂದೆಯಾದ ಸೂರ್ಯನು ಬಂದು ಹೀಗೆ ಮಾಡುಕಬೇಡೆಂದು ಮುನ್ನೆಚ್ಚರಿಕೆ ಕೊಟ್ಟರೂ ಎಬಡತನದಿಂದ ವರ್ತಿಸಿದುದೇಕೆ?

(೩) ತಾನು ಕೃಷ್ಣನಿಗೂ ಕುಂತಿಗೂ ವಚನಕೊಟ್ಟಿದ್ದರೂ, ದುರ್ಯೋಧನನು ತನ್ನ ಆಪ್ತಮಿತ್ರನಿದ್ದರೂ, ಅವನಿಗೆ ಹೇಳದೆ ಅವನನ್ನು ಮೋಸಗೊಳಿಸಿ ತಾನು ಪಟ್ಟಕಟ್ಟಿಸಿಕೊಂಡುದೇಕೆ?

(೪) ಕರ್ಣನು ಬಾಣವನ್ನು ಬಿಡುವಾಗ ಶಲ್ಯನು, "ಕೊರಳ ಗೊಡ್ಡಲು ಸರಳುಮುಕುಟವ ತಾಗುವುದು ಮೇಣುರಕೆ ತೊಟ್ಟರೆ ಕೊಯ್ವುದೀಗಳೆ ಕೊರಳನರ್ಜುನನ" ಆದುದರಿಂದ ಮರಳಿ ತೊಡು–ಎಂದು ಎಚ್ಚರಿಸಿದರೂ ಒರಟುತನದಿಂದ ನಡೆದುದೇಕೆ?

(೫) ಸರ್ವಾಸ್ತ್ರವು ಬಂದು ತನ್ನನ್ನು ಇನ್ನೊಮ್ಮೆ ತೊಡು–ಎಂದು ಕೇಳಿದಾಗ, ತಾಯಿಗೆ ಕೊಟ್ಟ ವಚನವನ್ನು ಹೇಳದೆ, "ಎರಡನೆಯವರ ಸಹಾಯದಿಂದ ಗೆಲ್ಲುವನ್ನು ಹೇಡಿ ನಾನಲ್ಲ" ಎಂದು ಹೇಳಿದಾಗ ಕರ್ಣನ ನನ್ನಿಯೆಲ್ಲಿ ಬಂದಿತು?

ಆಧುನಿಕ ವಿಮರ್ಶೆಯ ಪ್ರಕಾರ ಈ ಪ್ರಶ್ನೆಗಳು ಸಂಭವನೀಯವೇ. ಆದರೆ ಮಹಾಕಾವ್ಯಗಳು ವಿವಿಧ ಸ್ವಭಾವದ ವಿವಿಧ ವ್ಯಕ್ತಿಗಳನ್ನು ಚಿತ್ರಿಸುತ್ತವೆ. ಒಂದೊಂದು ವ್ಯಕ್ತಿಯೂ ಒಂದೊಂದು ಸಾರ್ವತ್ರಿಕ ತತ್ತ್ವದ ಪ್ರತೀಕವಾಗಿರುತ್ತದೆ. ಹಾಗಿದ್ದರೆ ಮಾತ್ರ ಕತೆ ನಮಗೆ ಹಿಡಿಸುವುದು; ಯುಗ–ಯುಗಗಳ ವರೆಗೂ ಜೀವಂತವಾಗಿರುವುದು.

ಪಂಪನು ತನ್ನ ಕತೆಯನ್ನು ಮಾರ್ಪಡಿಸಿಕೊಂಡಿದ್ದರೂ ವ್ಯಾಸರ ಜಾಡನ್ನು ಬಿಟ್ಟು ಬಹಳ ದೂರ ಹೋಗಿಲ್ಲ. ಕುಮಾರವ್ಯಾಸನಂತೂ ವ್ಯಾಸರ ಕುಮಾರನಾಗಿ, ಪಂಪನಿಗೆ ಕೆಲಮಟ್ಟಿಗಾದರೂ ಋಣಿಯಾಗಿ ಕಥೆಯನ್ನು ಸಾಗಿಸಿಕೊಂಡು ಹೋಗಿದ್ದಾನೆ.

ಕರ್ಣನ ಪಾತ್ರ ಮುಖ್ಯವಾಗಿ ಕಣ್ಣಿಗೆಬೀಳುವುದು ಉದ್ಯೋಗ-ಪರ್ವದಲ್ಲಿ ಮತ್ತು ಕರ್ಣಪರ್ವದಲ್ಲಿ.

ಕೃಷ್ಣನು ಕರ್ಣನ ಜನ್ಮವೃತ್ತಾಂತವನ್ನು ತಿಳುಹಿ, "ನೀನು ಪಾಂಡವರ ಹಿರಿಯ. ನೀನು ಪಾಂಡವರನ್ನು ಸೇರಿದರೆ ಒಂದೆಡೆ

ಕೌರವರು, ಒಂದೆಡೆ ಪಾಂಡವರು ನಿನ್ನನ್ನು ಓಲೈಸುವಂತೆ ಮಾಡುತ್ತೇನೆ" ಎಂದು ಹೇಳುತ್ತಾನೆ. "ಇಂಥ ಮಹಾಯೋಗವಿದ್ದಾಗ ದುರ್ಯೋಧನನ ಬಾಯ್ದಂಬುಲಕೆ ಕೈಯಾನುವರೆ?" ಎಂದು ಮನವೊಲಿಸಲು ಪ್ರಯತ್ನಿಸುತ್ತಾನೆ. ಆದರೆ ಕರ್ಣನು "ನಾನು ಜೋಳದ ಪಾಳಿಗೆ ಎರಡು ಬಗೆಯುವುದಿಲ್ಲ. ದುರ್ಯೋಧನ ನನ್ನನ್ನು ನಂಬಿದ್ದಾನೆ. ಅವನಿಗೆ ವಿಶ್ವಾಸ ಘಾತ ಮಾಡಲಾರೆ" ಎಂದು ಹೇಳುತ್ತಾನೆ. ಆದರೂ "ಕಾದಿ ಕೊಲುವೊಡೆ ಪಾಂಡುಸುತರು ಸ | ಹೋದರರು ಕೊಲಲಿಲ್ಲ, ಕೊಲ್ಲದೆ | ಕಾದೆ ನಾದಡೆ ಕೌರವಂಗವನಿಯಲಿ ಹೋಗಲಿಲ್ಲ |" ಎಂಬ ಸಂಘರ್ಷ ಅವನನ್ನು ಕಾಡುತ್ತದೆ. ಆದರೂ ನಿನ್ನಯ ವೀರರೈನರ ನೋಯಿಸೆನು" ಎಂದು ವಚನಕೊಡುತ್ತಾನೆ. ಪಂಪನಲ್ಲಿ ಈ ಪ್ರಸಂಗ ಹೆಚ್ಚುಕಡಿಮೆ ಹೀಗೆಯೇ ಇದೆ. ಆದರೆ ಅಲ್ಲಿ ಕೃಷ್ಣನಿಗೆ ಮಾತುಕೊಡುವುದಿಲ್ಲ, ಮನೆಗೆ ಬಂದು ವಿಚಾರಿಸುತ್ತಾನೆ. ಅದೇ ರೀತಿ ಇನ್ನೊಂದು ಪ್ರಸಂಗದಲ್ಲಿ ಕುಂತಿಯು ಬಂದು ಕರ್ಣನಿಗೆ ಭೆಟ್ಟಿಯಾದಾಗ, ಅಲ್ಲಿ ತಾಯಿಯು ಮಮತೆಯನ್ನು ತೋರಿದ ಕೂಡಲೇ, ತಂದೆಯಾದ ಸೂರ್ಯನು ಬಂದು "ಕುಂತಿ ನಿನ್ನ ತಾಯಿಯಿದ್ದರೂ ಕೃಷ್ಣನ ಪ್ರೇರಣೆಯಿಂದ ನಿನ್ನನ್ನು ಮೋಸಮಾಡಲಿಕ್ಕೆ ಬಂದಿದ್ದಾಳೆ" ಎಂದು ಎಚ್ಚರಿಸಿದರೂ "ಒಮ್ಮೆ ತೊಟ್ಟ ಬಾಣವನ್ನು ಇನ್ನೊಮ್ಮೆ ತೊಡುವುದಿಲ್ಲ" ಎಂದು ವಚನ ಕೊಡುತ್ತಾನೆ. ದುರ್ಯೋಧನನ ಬಗೆಗೆ ಅಷ್ಟೊಂದು ಆದರ–ಪ್ರೇಮ ಗಳಿರುವಾಗ, ಹೀಗೆ ಕೃಷ್ಣನಿಗೂ ಕುಂತಿಗೂ ಎಬಡನಂತೆ ವಚನ ಕೊಟ್ಟುದೇಕೆ? ಆ ಸನ್ನಿವೇಶದಲ್ಲಿ ತಾನೇನು ಮಾಡುತ್ತಿದ್ದೇನೆಂಬದರ ಅರಿವಿಲ್ಲದಂತೆ ಏಕೆ ವರ್ತಿಸಿದನೆಂಬುದು ಪ್ರಶ್ನೆಯಾಗಿದೆ. ಕೃಷ್ಣನು ತನ್ನ ಜನ್ಮವೃತ್ತಾಂತವನ್ನು ತಿಳುಹಿದ ಕೂಡಲೇ ಕರ್ಣನು, ತಾನು ಸಾಯತಕ್ಕ ವ್ಯಕ್ತಿ– ಎಂದು ನಿರ್ಧರಿಸಿಬಿಡುತ್ತಾನೆ. ಸಾಯುವನನು ಕೃಷ್ಣನನ್ನು ಸಂತೋಷಪಡಿಸಲು ಒಂದು ವಚನಕೊಟ್ಟರೆ ಅದರಲ್ಲೇನು ತಪ್ಪು? ವ್ಯಾಸರಲ್ಲಿಯಂತೂ ಇದು ಸ್ಪಷ್ಟವಾಗಿ ಚಿತ್ರಿತವಾಗಿದೆ. "ಅಧಿರಥನೆಂಬ ಸೂತನೂ ಅವನ ಸಖಿ ರಾಧೆಯೂ ತನ್ನನ್ನು ಬೆಳೆಸಿದ್ದಾರೆ. ಅವರಿಗೆ ಹೇಗೆ ಕೃತಘ್ನನಾಗಲಿ? ನನಗೆ ಸೂತಕುಲದಲ್ಲಿ ಮದುವೆಯಾಗಿ ಮಕ್ಕಳೂ ಮೊಮ್ಮಕ್ಕಳೂ ಇದ್ದಾರೆ. ಅವರಲ್ಲಿ ನನ್ನ ಅಂತಃಕರಣ ತೊಡಗಿಕೊಂಡಿದೆ" ಎಂದು ಕೃಷ್ಣನಿಗೆ ಹೇಳುತ್ತಾನೆ. "ನಾನು ಧರ್ಮಜನ ಅಣ್ಣನೆಂದು ತಿಳಿದರೆ, ಯುಧಿಷ್ಠಿರನು ತಾನಾಗಿಯೇ ರಾಜ್ಯವನ್ನೊಪ್ಪಿಸುತ್ತಾನೆ. ಆದರೆ ಧರ್ಮವೇ ರಾಜ್ಯವಾಳಬೇಕು.

"ಸ ಏವ ರಾಜಾ ಧರ್ಮಾತ್ಮಾ ಶಾಶ್ವತೋಽಸ್ತು ಯುಧಿಷ್ಠಿರಃ |
ನೇತಾಯಸ್ಯ ಹೃಷಿಕೇಶೋ ಯೋದ್ಧಾ ಯಸ್ಯ ಧನಂಜಯಃ ||"

ಎಂದು ಹೇಳಿ, ಕರ್ಣನು ತನ್ನ ನಿಲುವನ್ನು ತೋರಿಸುತ್ತಾನೆ. 'ಯುಧಿಷ್ಠಿರ ಶಾಶ್ವತನಾಗಲಿ' ಎಂದರೆ, ದುರ್ಯೋಧನನ ಮತ್ತು ತನ್ನ ನಾಶವನ್ನು ಹೇಳಿದಂತೆಯೇ. ಮೇಲಾಗಿ ವ್ಯಾಸರಲ್ಲಿ ಕರ್ಣನು ದಾರ್ಶನಿಕನಂತಿದ್ದಾನೆ. ಅವನು ತನಗೆ ಕಂಡ ಕನಸು, ಶಕುನಗಳಿಂದ ಮಹಾಭಾರತವೆಂಬ ರಣಯಜ್ಞದಲ್ಲಿ ತನ್ನದೂ, ಕೌರವರದೂ ಬಲಿದಾನವಾಗುತ್ತದೆ, ಎಂದು ಹೇಳುತ್ತಾನೆ. ಭೀಮನಿಂದ ದುಶ್ಶಾಸನ–ದುರ್ಯೋಧನರ ವಧೆ, ಅರ್ಜುನನಿಂದ ತನ್ನ ಮತ್ತು ಭೀಷ್ಮದ್ರೋಣಾದಿಗಳ ವಧೆಯಾಗುವುದನ್ನು ವಿವರಿಸುತ್ತಾನೆ. ಕೊನೆಗೆ "ವಿದಿತಂ ವೇ ಹೃಷೀಕೇಶ ಯತೋ ಧರ್ಮಸ್ತತೋ ಜಯಃ" ಎಂದು ಹೇಳುತ್ತಾನೆ. 'ದುರ್ಯೋಧನನ ಪಕ್ಷ ಅನ್ಯಾಯದ್ದು' ಎಂಬ ಪ್ರಜ್ಞೆ ಅವನಿಗಿದೆ. ಆ ಪಕ್ಷ ಸೇರಿದ್ದಕ್ಕೆ ನಿಧಿಯಿಲ್ಲದೇ ಮರಣವನ್ನು ಸ್ವೀಕರಿಸುವ ಪ್ರಸಂಗ ಬಂದಿದೆ. ಈ ಪ್ರಸಂಗದಲ್ಲಿ ಅವನು ಮರಣದ ದುಃಖವನ್ನೂ ಮೀರಿ ನಿಂತಿದ್ದಾನೆ. ಹ್ಯಾಮ್ಲೆಟನು "Readiness is all" ಎಂದು ಹೇಳುವಂತೆ, ಬಂದದ್ದಕ್ಕೆ ಎದೆಗೊಡಲು ನಿಂತಿದ್ದಾನೆ. ಹೇಗಾದರೂ ಸಾಯತಕ್ಕವನೇ ಎಂದ ಮೇಲೆ ನೈರಿಪಕ್ಷವಾದ ಪಾಂಡವ ಪಕ್ಷನನ್ನು ಸೇರಿ ಅಪಕೀರ್ತಿಗೀಡಾಗುವುದಕ್ಕಿಂತ ಕೌರವ ಪಕ್ಷದಲ್ಲಿಯೇ ಗೌರವದಿಂದ ಸಾಯುವುದನ್ನು ಆರಿಸಿಕೊಳ್ಳುತ್ತಾನೆ. ಪಂಪನ ಕೃತಿಯಲ್ಲಿ ಹೋಗಿ ವಿಚಾರಮಾಡುತ್ತಾನೆ ಎಂಬಲ್ಲಿ, ಇದನ್ನೇ ವಿಚಾರಿಸಿ ಕರ್ಣ ರಕ್ತ ಸುಟ್ಟುಕೊಂಡಿರಬೇಕು.

ಹೀಗಿದ್ದಮೇಲೆ ದುರ್ಯೋಧನನಿಗೆ ತಿಳಿಸಲಿಲ್ಲವೇಕೆ? ಇದು ತನ್ನ ಆಪ್ತಮಿತ್ರನೂ, ಒಡೆಯನೂ ಆಗಿದ್ದವನಿಗೆ ಮೋಸವಲ್ಲವೇ? ಅಪಾಂಡವ ಪೃಥ್ವಿಯನ್ನಾಗಿ ಮಾಡುವ ಪಣತೊಟ್ಟ ಅಶ್ವತ್ಥಾಮನಿಗೆ ಅವಕಾಶ ಕೊಡದೆ, ತಾನು ಪಟ್ಟಕಟ್ಟಿಸಿಕೊಂಡುದೇಕೆ— ಎಂದು ಕೇಳಬಹುದು. ಪಾಂಡವರ ಹೆಸರುತೆಗೆದರೆ ರೊಚ್ಚಿಗೇಳುವ ದುರ್ಯೋಧನನ ಮುಂದೆ 'ಅವರೇ ಗೆಲ್ಲತಕ್ಕವರು' ಎಂಬ ಭವಿಷ್ಯವನ್ನು ಹೇಳಿದರೆ, ಇದು ಅವನ ಚಲಕ್ಕೆ ರುಚಿಸತಕ್ಕ ಮಾತಲ್ಲ. ಅಪ್ರಿಯವಾದ ಮಾತನ್ನು ದುರ್ಯೋಧನನ ಮುಂದೆ ಆಡಲು ಕರ್ಣನಿಗೆ ಇಷ್ಟವಿಲ್ಲ. ತನ್ನನ್ನು ಸಾಕಿದವನ ಮುಂದೆ ಒಂದು ಸುಸಂಧಿಯನ್ನು ದೊರಕಿಸಿಕೊಂಡು ವೀರಮರಣವನ್ನಪ್ಪಿದರೆ, ತಾನು ಕೃತಕೃತ್ಯನೆಂದು ಕರ್ಣ ತಿಳಿದುಕೊಳ್ಳುತ್ತಾನೆ. ಅಂತೆಯೇ ಪಟ್ಟಾಭಿಷೇಕದ ಸಂಧಿಯನ್ನು ಪಡೆಯುತ್ತಾನೆ. ಅಷ್ಟೇಕೆ ಕುಮಾರವ್ಯಾಸನಲ್ಲಿಯಂತೂ ಕರ್ಣನನ್ನು ಸೇನಾಪತಿತ್ವಕ್ಕೆ ಸೂಚಿಸುವವನು ಕೃಪ, ಅನುಮೋದಿಸುವವನು ಅಶ್ವತ್ಥಾಮ. "ಆ ಮಹಾನಾರಾಯಣಾಸ್ತ್ರದ ಸೀಮೆ ಸೀದುದು ಮಿಕ್ಕ ಭಟರುದ್ದಾಮರೇ .... ಸಾಕಿನ್ನು ಸೇನಾಪತಿಯ ಮಾಡು" ಎಂದು ಅಶ್ವತ್ಥಾಮ ಅನಂದದಿಂದ ಕರ್ಣನನ್ನು ಸೇನಾಪತಿಯೆಂದು ಆರಿಸುತ್ತಾನೆ. ಪಂಪನ ಕೃತಿಯಲ್ಲಿ ಮಾತ್ರ ಕರ್ಣಾಶ್ವತ್ಥಾಮರಲ್ಲಿ ದೊಡ್ಡ ವಾಗ್ವಾದವೇ ಆಗುತ್ತದೆ. "ಸೂತಜನೇನು ಕೊಲ್ಲಬಲ್ಲ? ಕಟ್ಟಿದ ಪಟ್ಟನೇ ಹಗೆಯನ್ನು ಹಾರಿತಿನ್ನುವುದೇ?" ಎಂದು ಅಶ್ವತ್ಥಾಮ ಹೀಗಳೆದಾಗ ಕರ್ಣ ಮೂದಲಿಸುತ್ತಾನೆ. ಅದಕ್ಕೆ ಅಶ್ವತ್ಥಾಮನು "ನಾನಿರುತ್ತಿರುವಾಗ ವೀರಪಟ್ಟವನ್ನು ಸೂತಸುತನಿಗೆ ಕಟ್ಟುತ್ತೀರೆಂದಮೇಲೆ, ಈ ಖಳನು (ಕರ್ಣ) ಧನಂಜಯನ ಕ್ರೂರಬಾಣಗಳಿಂದ ಸಾಯುವವರೆಗೂ ನಾನು ಚಾಪವನ್ನು ಹಿಡಿಯುವುದಿಲ್ಲ" ಎಂದು ಪ್ರತಿಜ್ಞೆಮಾಡುತ್ತಾನೆ.

ಕರ್ಣನಿಗೆ ಜೀವನದ ಬಗೆಗೆ ಸರಿಯಾದ ದೃಷ್ಟಿಕೋನವಿದ್ದರೂ ಮೂಲತಃ ಅವನು ಅಹಂಕಾರಿ. ಪಂಪ–ಕುಮಾರವ್ಯಾಸರಲ್ಲಿ ಕರ್ಣನು ಹೆಚ್ಚು ಮಾನವೀಯ ವ್ಯಕ್ತಿತ್ವದಿಂದ ಕೂಡಿದ್ದಾನೆ. ಅವನಲ್ಲಿಯೂ ಗುಣದೋಷಗಳಿವೆ. ಪಂಪನಲ್ಲಿಯ ಕರ್ಣನು ಭೀಷ್ಮರಿಗೆ ಕೊನೆಯ ನಿರೋಪ ಹೇಳಿಬರುವಾಗಿನ ಸಂದರ್ಭ, ಹೃದಯ ಕರಗಿಸುವಂತಹದು.

ವ್ಯಾಸ ಭಾರತದಲ್ಲಿ ಕುಂತಿಯು ಕರ್ಣನನ್ನು ಕಾಣಲು ಬಂದಾಗಿನ ಸಂದರ್ಭ, ಪಂಪ-ಕುಮಾರವ್ಯಾಸರಿಗಿಂತ ಭಿನ್ನವಾಗಿದೆ. ಅಲ್ಲಿ ಸೂರ್ಯನ

ಎಚ್ಚರಿಸುವ ಬದಲು " ಕುಂತಿ ಹೇಳಿದುದು ಸರಿ; ನೀನು ಪಾಂಡವರನ್ನು ಸೇರಿಕೊಳ್ಳು " ಎಂದು ಉಪದೇಶಮಾಡುತ್ತಾನೆ. (ಸತ್ಯಮೂಹ ಪೃಥಾ ವಾಕ್ಯಂ ಕರ್ಣ ಮಾತೃವಚಃ ಕುರು). ಆದರೂ ಕರ್ಣನು ಕುಂತಿಯನ್ನು ಜರಿಯುತ್ತಾನೆ. " ನಿನ್ನ ಕೃತಿ ನನ್ನ ಯಶಸ್ಸಿಗೆ ಕುಂದುತಂದಿದೆ. ಕ್ಷತ್ರಿಯನಾಗಿ ಜನಿಸಿದರೂ ನಾನು ಸಂಸ್ಕಾರಕ್ಕೆ ಬಾಹಿರನಾಗಬೇಕಾಯಿತು. ಈ ಮೊದಲು ಒಮ್ಮೆಯಾದರೂ ತಾಯಿಯಂತೆ ನಡೆದುಕೊಂಡಿರುವೆಯಾ? ಈಗ ಮಾತ್ರ ಬಂದಿರುವೆ; ಸ್ವಾರ್ಥಸಾಧಕಳು" ಎನ್ನುತ್ತಾನೆ. " ನಾನು ವಿರೋಚಿತ ಕಾರ್ಯ ಕೈಕೊಳ್ಳುತ್ತೇನೆ. ಒಡೆಯನಿಗೆ ಎರಡು ಬಗೆಯಬಾರೆ. ನನ್ನ ಹಗೆಯಿರುವುದು ಅರ್ಜುನನೊಡನೆ ಮಾತ್ರ. ಅವ ನೊಬ್ಬನೊಡನೆ ಕಾದುವೆನು. ಅವನು ಸತ್ತರೆ ನಾನು ಸೇರಿ ನಿನಗೆ ಐವರು ಮಕ್ಕಳು; ನಾನು ಸತ್ತರೆ ಅವನು ಸೇರಿ ಐವರು. ಕುಂತಿಗೆ ಆರು ಮಕ್ಕಳು ಎಂದೂ ಇರಬಾರರು. (ನಿರರ್ಜುನಾ ಸಕರ್ಣಾವಾ ಸಾರ್ಜುನಾ ವಾ ಹತೇ ಮಯಿ) ಎಂದು ತನ್ನ ನಿರ್ಧಾರವನ್ನು ಹೇಳುತ್ತಾನೆ.

ಇನ್ನು ಯುದ್ಧದ ಪ್ರಸಂಗ : ಮೊದಲನೆಯ ದಿನ ಯುದ್ಧರಂಗವನ್ನು ಪ್ರವೇಶಿಸುವಾಗ ಅಪಶಕುನಗಳು ಗೋಚರಿಸುತ್ತವೆ. ಆದರೂ ಕರ್ಣನು " ಸಂದ ಸುಭಟರು ಬನ್ನಿ ಸ್ವರ್ಗವ | ಬಂದಿಕಾರರು ಬನ್ನಿ ನಮನದಿಂ | ಮುಂದೆ ಹೆಜ್ಜೆಯ ತವಕಿಗರು ಬಹುದೆನ್ನ ಸಂಗಾತ|| ನೊಂದ-ಡುಬ್ಬುವರಿತ್ತ ಬನ್ನಿಪು | ರಂದರನ ಸರಿಗದ್ದುಗೆಗೆ ಮನ | ಸಂದವರು ಹೊಗಿ ಕಣಿವನು " ಎಂದು ಹುರಿದುಂಬಿಸಿಕೊಂಡು ಹೊರಡುತ್ತಾನೆ. ಯುದ್ಧದ ಮೊದಲದಿನ ಧರ್ಮಜನನ್ನೂ, ನಕುಲ ಸಹದೇವರನ್ನೂ ಗೆಲ್ಲುತ್ತಾನೆ. ಆಗ ಶಲ್ಯನು, " ನಿನ್ನೊಳಿವಂದಿರೇತರೊಳ್ ದೊರೆ, ದೊರೆವೆತ್ತ ಕಾಳೆಗದ ಗೆಲ್ಲದ ಸೋಲನ ಮಾತು ನಿನ್ನೊಳಂ ನರಸೊಳಂ ಇರ್ದುದು " (— ಪಂಪ) ಎಂದು ಹೇಳಿ, ಕರ್ಣನ ಲಕ್ಷ್ಯವನ್ನು ಬೇರೆಡೆಗೆ ತಿರುಗಿಸುತ್ತಾನೆ. ಆದರೆ ಕುಮಾರವ್ಯಾಸನಲ್ಲಿ ಧರ್ಮನನ್ನು ಗೆದ್ದಾಗ ಕರ್ಣನಿಗೇ, " ಕೊಲುವಡವ್ವೆಗೆ ಕೊಟ್ಟ ಮಾತಿಂಗಳುಕುವೆನು " ಎಂಬ ವಚನ ನೆನಪಾಗುತ್ತದೆ. ನಕುಲ ಸಹದೇವರನ್ನು ಗೆದ್ದಾಗ ಶಲ್ಯನಿಗೆ ಅಳಿಯಂದಿರ ಮೇಲಿನ ಕಕ್ಕುಲತೆ ಉಕ್ಕಿ " ಇವರು ಅಕುಟಿಲರು, ನಯಕೋವಿದರು, ಧಾರ್ಮಿಕರ ಕೊಲಬೇಡ ಇವರನು, ಅತಿಬಾಧಕರು ಭೀಮಾರ್ಜುನರ ಸಂಹರಿಸು " ಎಂದು ಹೇಳುತ್ತಾನೆ. ಎಷ್ಟೆಂದರೂ ಶಲ್ಯ–ಕರ್ಣರು ಕೌರವರಿಗಿಂತ ಪಾಂಡವರಿಗೆ ರಕ್ತದ ಹೆಚ್ಚು ಸಂಬಧವುಳ್ಳವರು. ಆದರೂ ತಮ್ಮ ಕರ್ತವ್ಯ ನಿರ್ವಹಿಸಲೆಂದು ನಿಂತಿದ್ದಾರೆ.

ಇನ್ನು ಕೊನೆಯ ರುದ್ರ ಸನ್ನಿವೇಶ, ಕರ್ಣಾರ್ಜುನರ ಕಾಳಗ. ಬ್ರಹ್ಮಾಂಡದ ಸಕಲ ವಸ್ತ್ರಗಳೂ ಇಬ್ಭಾಗವಾಗುತ್ತವೆ. ಅವುಗಳಲ್ಲಿ ಒಳ್ಳೆಯವು ಅರ್ಜುನನನ್ನೂ ಕೆಟ್ಟವು ಕರ್ಣನನ್ನೂ ಆಶ್ರಯಿಸುತ್ತವೆ. ಸಮದಂಡಿಯಲ್ಲಿ ಇಬ್ಬರೂ ಕಾದುತ್ತಾರೆ. ಆಗ ಸರ್ಪಾಸ್ತ್ರವನ್ನು ತೆಗೆದು ಕರ್ಣನು ಅರ್ಜುನನ ಕುತ್ತಿಗೆಗೆ ಗುರಿಯಿಟ್ಟು ಶಲ್ಯನಿಗೆ " ಏನು ಸಾರಥಿ ಸರಳು ಪಾಂಡವಸೇನೆಯನು ಗೆಲಲಹುದೆ, ಪಾರ್ಥನ ಮಾನಿನಿಗೆ ವೈಧವ್ಯ ದೀಕ್ಷಾವಿಧಿಯ ಕೊಡಲಹುದೆ ? " ಎಂದು ಕೇಳುತ್ತಾನೆ. ಆಗ ಶಲ್ಯನು ಅಸ್ತ್ರವನ್ನು ಹೊಗಳಿ " ಕೊರಳಿಗೊಡ್ಡಲು ಸರಳು ಮುಕುಟವ ತಾಗುವುದು ನೇಣುರಕೆ ತೊಟ್ಟರೆ ಕೊಯ್ವುದೀಗಳೆ ಕೊರಳನರ್ಜುನನ! ಆದ್ದರಿಂದ ಮರಳಿ ತೊಡು " ಎಂದು ಹೇಳುತ್ತಾನೆ. " ಒಮ್ಮೆ ಗುರಿಯಿಟ್ಟನೇಲಿ ಮತ್ತೊಮ್ಮೆ ಗುರಿಯಿಡುವುದು ಅಧರ್ಮದ ಯುದ್ಧ. ಅದನ್ನು ನಾನರಿಯೆ" ಎಂದು ಹೇಳುತ್ತಾನೆ. ವ್ಯಾಸರಲ್ಲಿ, ಕುಮಾರವ್ಯಾಸರಲ್ಲಿ ತಾಯಿಗೆ ಕೊಟ್ಟ ವಚನ ಇಲ್ಲಿ ನೆನಪಾಗುವುದಿಲ್ಲ. ಪಂಪನಲ್ಲಿ ಮಾತ್ರ,

ಎನಿತುಂ ಶಲ್ಯನ ಪೇೞ್ದ ಪಾಂಗೆ ತೊಡರಿಲ್ಲಂತಾದೊಡಾಶಕ್ರಪು |
ತ್ರನನಾಂ ಕೊಂದಡೆ ಧರ್ಮಪುತ್ರನಳಿಗುಂ ತಾಯಂದೆಮುಂಕೊಂತಿ ಬಂ|
ದಿನಿಸಂ ಪ್ರಾರ್ಥಿಸಿ ಪೋದಳೆನ್ನನದನಾಂ ಮಾಣ್ದೆರ್ದೆನಿರ್ದಾಗಳೊ |
ಳ್ಪಿನ ಪೆರ್ಮಾತಿನ ನನ್ನಿ ಬನ್ನಪೊಳೊಡಂಬಟ್ಟೆರ್ವುದಂ ನಾಳ್ಪೆನೇ||

ಎಂದು ಮನದಲ್ಲಿ ವಿಚಾರಿಸುತ್ತಾನೆ. 'ಕುಂತಿಗೆ ನನ್ನಿಕಾರನಾಗುವುದರಲ್ಲಿ ದುರ್ಯೋಧನನಿಗೆ ಸುಳ್ಕಾದನಲ್ಲ !' ಎಂಬ ಪ್ರಶ್ನೆ ಸ್ವಾಭಾವಿಕ. ಎಷ್ಟು ಹೇಳಿದರೂ ಕೇಳದೆ ಶಲ್ಯನು " ಇಂತಪ್ಪ ಏಕಗ್ರಾಹಿಗಂ ಒರಂಟಂಗಂ ತೇರನೆಸಗೆನ್ " ಎಂದು ಹೇಳಿ ಸಾರಥ್ಯವನ್ನು ಬಿಟ್ಟುಹೋಗುವಂತೆ ಮಾಡಿದನಲ್ಲ ? ಎಂದು ಕೇಳಬಹುದು. ಇದಕ್ಕೆ ಉತ್ತರವಿಷ್ಟೆ– ಏನೋ ಕರ್ಣನು ಶಲ್ಯನಿಗೆ ಸಮಾಧಾನದ ತಾತ್ಕಾಲಿಕ ಉತ್ತರಕೊಟ್ಟೆದ್ದಾನೆ, ಸರಿ. ಇಲ್ಲವಾದರೆ ಅವನು ಕೇಳಬಹುದಾಗಿತ್ತು, "ಸ್ವಾಮಿ, ಇದು ಕರ್ಣನ ಬಾಣವಿದೆ. ಇದರ ಗುರಿಯಲ್ಲಿ ನಿಮಗೆ ಸಂಶಯವಾದರೂ ಏಕೆ ಬರಬೇಕು? ಮರಳಿತೊಡು ಎಂದು ಕೇಳಲು ನಾಚಿಕೆಯಾಗುವುದಿಲ್ಲವೇ?" ಎಂದು ಕೇಳಿದ್ದರೆ, ಶಲ್ಯ ಏನು ಹೇಳುತ್ತಿದ್ದ ? ಅಥವಾ ಓದುಗರು ಶಲ್ಯನಿಗೆ ಕೃಷ್ಣನು ರಥವನ್ನು ಎಂಟಂಗುಲ ಕೆಳಕ್ಕೊತ್ತಿ, ಕಿರೀಟಕ್ಕೆ ತಾಗುವಂತೆ ಮಾಡುತ್ತಿದ್ದನೆಂದು ಮೊದಲೇ ಗೊತ್ತಿತ್ತೆಂದು ಅರ್ಥ ಮಾಡಬೇಕೇ ? ಅಥವಾ ಶಲ್ಯನ ಮಾತುಕೇಳಿ ಎದೆಗೇ ತೊಟ್ಟಿದ್ದನೆಂದು ತಿಳಿದರೆ, ಎಂಟಂಗುಲ ರಥವನ್ನೊತ್ತಿದ ಕೃಷ್ಣನಿಗೆ ಹದಿನಾರಂಗುಲ ಒತ್ತಿ ಆಗ ಉಳಿಸಿಕೊಳ್ಳಲು ಸಾಧ್ಯವಾಗುತ್ತಿದ್ದಿಲ್ಲವೆಂದು ತಿಳಿಯಬೇಕೇ ? ಶಲ್ಯನ ಮಾತುಗಳು ಕಥೆಯ ಮುಂದಿನ ಆಗುಹೋಗುಗಳನ್ನು ಅರಿತು ಆಡುವ ಮಾತಿನಂತಿವೆ. ಅದು ಕವಿಯ ದೋಷವಲ್ಲ. ಕೃಷ್ಣನ ನಿಯೋಜನೆ, ಸಾರಥಿರಹಿತ ಕರ್ಣನು, ರಥದ ಗಾಲಿ ಸಿಕ್ಕು ಕೆಳಗೆ ಬರಬೇಕು, ಆಗ ಅರ್ಜುನ ಹೊಡೆಯಬೇಕು— ಎಂಬುದು ನಿಯೋಜಿತವಾದುದು, ಶಲ್ಯನನ್ನು ಹೊರಗುಮಾಡಲು ವಿಧಿಯೇ ಅವನ ಮತ್ತು ಕರ್ಣನ ನಡುವೆ ಮನಸ್ತಾಪತಂದಿದೆ. ಮೊದಲಿನಿಂದಲೂ ತುರುಸಿನಿಂದಲೇ ಸಾರಥಿಯಾದವನಿಗೆ ಅಷ್ಟು ಕಾರಣ ಸಾಕಾಯಿತು.

ಸರ್ಪಾಸ್ತ್ರವು ಮರಳಿ ಬರುತ್ತದೆ. ಆಗ " ನನ್ನನ್ನು ಇನ್ನೊಮ್ಮೆ ತೊಡು. ಮೂಲೋಕದಲ್ಲಿಯೂ ಬೆನ್ನಟ್ಟಿ ತಿನ್ನುವೆನು " ಎನ್ನುತ್ತದೆ. ಆಗ ತೊಡಲಿಲ್ಲವೇಕೆ ? ತಾಯಿಗೆ ಕೊಟ್ಟ ವಚನವನ್ನು ಹೇಳದೆ " ನಾನೇನು ಪರರ ಸಹಾಯದಿಂದ ಗೆಲ್ಲುವಷ್ಟು ಹೇಡಿಯೇ ?" ಎಂದು ಸುಳ್ಳು ಹೇಳುವನೇಕೆ ? — ಎಂಬದು ಇನ್ನೊಂದು ಪ್ರಶ್ನೆ. ಅಹುದು ಅದು ವಿರೋಚಿತ ಉತ್ತರ. ಇದು ಅರ್ಜುನನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದಿದ್ದ ಸರ್ಪವೆಂದು ಮೊದಲೇ ತಿಳಿದಿದ್ದರೆ, ಮೊದಲ ಸಲವಾದರೂ ಬಿಡುತ್ತಿದ್ದನೋ ಇಲ್ಲವೋ. ತನ್ನ ಶೌರ್ಯದಲ್ಲಿ ಆತ್ಮವಿಶ್ವಾಸ ಅವನಿಗೆ. ಆ ಶೌರ್ಯ ಇದ್ದೂ ಇವೆ. ತಾಯಿಗೆ ಕೊಟ್ಟ ವಚನ ಹೇಳಬೇಕಾದ ಪ್ರಸಂಗವೇ ಬರುವುದಿಲ್ಲ. ನನ್ನಿಗೆ ಹೊರಗಾಗುವ ಸಂದರ್ಭವೇ ಇಲ್ಲ.

ಕರ್ಣನ ಪಾತ್ರದ ಇನ್ನೊಂದು ಸತ್ತ್ವವೆಂದರೆ ಅವನ ದಾನ ಗುಣ. "ಅವನು ಬೇಡುವವರು ಯಾರೆಂದು ವಿಚಾರಿಸದೇ ಪಾತ್ರದಾನ ಮಾಡುವುದೇಕೆ?" ಎಂದರೆ, ಕೊಡುವುದು ಅವನ ಗುಣ. ಅವನು ಸೂರ್ಯನ ಮಗ. ಸೂರ್ಯನಿಗೆ ಕಿರಣಗಳನ್ನು ಏಕೆ ಕೊಡುತ್ತೀ ಎಂದು ಕೇಳಿದಂತಾಗುತ್ತದೆ. ತಿಂದು ಬೆಳೆಯುವುದು ಅಗ್ನಿಯ ಗುಣವಾದರೆ, ಕೊಟ್ಟು ಬೆಳೆಯುವುದು ಪ್ರಕಾಶದ ಗುಣ. ಜನಿಸುವಾಗ ಬಂದ ವಿಪ್ರನೇಷದ ಕೃಷ್ಣನಿಗೆ ಕುಂಡಲಗಳನ್ನು ದಾನ ಮಾಡುತ್ತಾನೆ. ಅವು ಇರುವ ವರೆಗೆ ಕರ್ಣನಿಗೆ ಮರಣವಿಲ್ಲ. ಕೃಷ್ಣನ ದೇವತ್ವವನ್ನು ಅರಿತ ಕರ್ಣನಿಗೆ ಆಗ ಕೃಷ್ಣನು ನಿಜರೂಪ ತೋರಿಸುತ್ತಾನೆ. ಋಷ್ಯಶೃಂಗನಿತ್ತ ವರ ಫಲಿಸುತ್ತದೆ.

ಇದೆಲ್ಲವನ್ನು ವಿವೇಚಿಸಿದ ಮೇಲೆ ನಮಗೆ ಕೆಲವು ಮಾತುಗಳು ವಿದಿತವಾಗುತ್ತವೆ. ವ್ಯಾಸರ ಕರ್ಣನ ಸತ್ತ್ವವು ಒಂದು ಬಗೆಯ-ದಾದರೆ ಪಂಪ-ಕುಮಾರವ್ಯಾಸರ ಕರ್ಣರ ಸತ್ತ್ವ ಇನ್ನೊಂದು ಬಗೆಯದಾಗಿದೆ. ವ್ಯಾಸರ ಕರ್ಣ ಧರ್ಮದ ಆದರ್ಶಕ್ಕೆ ಅಂಟಿಕೊಂಡಿದ್ದಾನೆ. ಧರ್ಮವೇ ಗೆಲ್ಲುವುದೆಂದು ಅಲ್ಲಿ ಅವನಿಗೆ ಗೊತ್ತಿದೆ. ಆದರೆ ಪಂಪ-ಕುಮಾರವ್ಯಾಸರಲ್ಲಿ ಕರ್ಣ ಮಾನವೀಯ ವ್ಯಕ್ತಿತ್ವದಿಂದ ಕೂಡಿದ್ದಾನೆ. ಇಲ್ಲಿಯೂ ತಾನೂ ದುರ್ಯೋಧನನೂ ಗೆಲ್ಲತಕ್ಕವರೆಂದು ಗೊತ್ತಿದೆ. ಆದರೆ ಆ ನಿರ್ಣಯಕ್ಕೆ ಬಂದ ದಾರಿ ಧರ್ಮದ ಆದರ್ಶವಲ್ಲ, ಕೃಷ್ಣನ ಉಪದೇಶ. ತಾಯಿ ಪೃಥೆಗೆ ಅಪಕಾರ ಮಾಡಿದ್ದರೂ "ಎಷ್ಟೆಂದರೂ ಆಕೆ ತಾಯಿ" ಎಂಬ ವಾತ್ಸಲ್ಯ ಉಕ್ಕುತ್ತದೆ. ಇದು ಕಾರುಣ್ಯದ ಆಳವನ್ನು ಅರ್ಥಮಾಡಿಕೊಂಡ ಹೃದಯದ ಪ್ರವೃತ್ತಿ. ಪಂಪನಲ್ಲಿ 'ಕುಂತಿಯು ಕರ್ಣನನ್ನು ಕಂಡಾಗ ಆಕೆಯ ಮೊಲೆಹಾಲು ಉಕ್ಕುತ್ತವೆ' ಎಂದು ಬರುತ್ತಿದೆ. ಕಾರಣಾಂತರಗಳಿಂದ ಕರ್ಣನಿಂದ ದೂರಳಾದ ತಾಯಿ ಎಷ್ಟೊಂದು ಕೊರಗಿರಬೇಕು! ಕೊನೆಗೆ ಸಂಕಟದ ಪ್ರಸಂಗ ಬಂದಾಗ ಪುತ್ರಭಿಕ್ಷೆಯನ್ನು ಬೇಡಲು ಪುತ್ರನನ್ನೇ ಕಾಣುವುದು ಎಂದರೆ ಎಂಥ ವಿಧಿವಿಲಾಸ! ಕರ್ಣನೂ ಗೌರವದಿಂದಲೇ ಆಕೆಯನ್ನು ಕಾಣುತ್ತಾನೆ. ಕೃಷ್ಣನು ಬಿಟ್ಟ ಬಾಣ ಯಾವಾಗಲೇ ತಾನು ಸಾಯತಕ್ಕವನೆಂದು ನಿರ್ಧರಿಸಿದ ಮೇಲೆ, ತಾಯಿಯನ್ನು ಒಂದು ಮಾತಿನಿಂದಾದರೂ ಸಂತುಷ್ಟಗೊಳಿಸೋಣ ಎಂದು ವಚನ ಕೊಡುತ್ತಾನೆ. ವ್ಯಾಸರಲ್ಲಿ ಕರ್ಣನು ಅಹಂಕಾರದ ಪ್ರತೀಕನಾಗಿದ್ದಾನೆ. ಏಕೆಂದರೆ ಅವನು ಕೊನೆಯವರೆಗೂ ತನ್ನ ಛಲಕ್ಕೆ ಅಂಟಿಕೊಳ್ಳುತ್ತಾನೆ. ಆದರೆ ಪಂಪ-ಕುಮಾರವ್ಯಾಸರಲ್ಲಿ ಕರ್ಣನಿಗೆ ತನ್ನ ವೀರ್ಯಪ್ರದರ್ಶನದಲ್ಲಿ ಹೆಚ್ಚು ಆಸಕ್ತಿಯಿದೆಯೇ ಹೊರತು ಹಟಸಾಧಿಸುವುದರಲ್ಲಲ್ಲ. ಅವನ ಕಥೆಯಿಂದ ನಮ್ಮ ಅಂತಃಕರಣ ಕದಡುತ್ತದೆ. ಇಷ್ಟರಿಂದಲೇ ನಮಗೆ ಅವನು ಮಹಾನುಭಾವನೆಂದು ಸಾಧಿಸಲಿಕ್ಕಾಗುವುದಿಲ್ಲ. ಇನ್ನು ಕೃಷ್ಣನಿಗಾಗಲಿ, ಕುಂತಿಗಾಗಲಿ ಕರ್ಣನು ತಾನು ವಚನ ಕೊಟ್ಟದ್ದನ್ನು ಹೇಳುವುದಿಲ್ಲವೇನೋ ನಿಜ; ಆದರೆ ಅವನಾದರೂ ಇವನಿಗೇನು ಉಪಕಾರ ಮಾಡಿದ್ದು? ದುರ್ಯೋಧನನಿಗೆ ಕರ್ಣನ ಜನ್ಮವೃತ್ತಾಂತ ಗೊತ್ತಿರುತ್ತದೆ ರನ್ನನ "ಆನರಿವೆಂ ಪೃಥೆಯರಿವಳ್ ದಿವ್ಯಜ್ಞಾನಿ ಸಹದೇವನರಿವಂ ಮುರಾಂತಕನರಿವಂ" ಎಂಬ ಪದ್ಯವನ್ನು ನೋಡಬಹುದು. ಅಂದಮೇಲೆ ತನಗೆ ಗೊತ್ತಿದ್ದೂ ಅಂಗರಾಜನನ್ನಾಗಿ ಮಾಡಿ ಏಕೆ ನಾಟಕವಾಡಿದ? ಆಗಲೇ ಹೇಳಿಬಿಡಬಹುದಾಗಿತ್ತಲ್ಲವೇ, ಕರ್ಣನು ಹಿರಿಯ ಪಾಂಡವನೆಂದು? ಆದರೆ "ಕಂಟಕೇನೈವ ಕಂಟಕಂ" ಎಂದು ಕರ್ಣನನ್ನು ಉಪಯೋಗಿಸುತ್ತಾನೆ.

ಮಹಾಭಾರತದ ಕಥಾವಸ್ತುವನ್ನು ನೋಡಿದಾಗ, ದುರ್ಯೋಧನಾದಿ ನೂರುತಮ್ಮಂದಿರನ್ನು ಭೀಮು ಕೊಲ್ಲುವುದು, ಉಳಿದ ಕಂಟಕಗಳನ್ನು ಅರ್ಜುನ ನಿವಾರಿಸುವುದು--ಎಂದು ಯೋಜಿಸಿದೆ. ಅಂದಮೇಲೆ ಕರ್ಣನನ್ನು ಕೊಂದರೂ ಅರ್ಜುನನೇ ಕೊಲ್ಲಬೇಕು. ಮೇಲಾಗಿ ಕರ್ಣನನ್ನು ಮಹಾಕಾವ್ಯಕಾರ ಬದುಕಗೊಡಲಾರ. ಏಕೆಂದರೆ ಕರ್ಣ ಬದುಕಿದ್ದರೆ ಅರ್ಜುನ ಸಾಯಬೇಕು. ಅರ್ಜುನ ಸತ್ತರೆ ಧರ್ಮಜನ ಆಹುತಿ ಅನಾಯಾಸ. ಮುಂದೆ ಭೀಮನಿಗೆ ಗದಾಯುದ್ಧದ ಕಾಲಕ್ಕೆ ಕರ್ಣ-ದುರ್ಯೋಧನರಿಬ್ಬರನ್ನೂ ಕೊಲ್ಲಬೇಕಾಗುತ್ತಿತ್ತು. ಒಂದು ವೇಳೆ ಕೊಂದಿದ್ದರೂ ಧರ್ಮವಿಲ್ಲದ ರಾಜ್ಯವನ್ನು ಭೀಮನಾಳುವ ಪ್ರಸಂಗ ಬರುತ್ತಿತ್ತು. "ಧರ್ಮ ಸಂಸ್ಥಾಪನಾರ್ಥಾಯ" ಹುಟ್ಟಿದ ಕೃಷ್ಣ, ಇಷ್ಟೆಲ್ಲ ನಡೆಯಗೊಟ್ಟಾನೇ? ಅಂತೆಯೇ ಮಾರ್ಗದಲ್ಲಿಯ ಕಂಟಕಗಳನ್ನು ಉಪಾಯದಿಂದ ನಿವಾರಿಸುತ್ತಾನೆ. ಬಲರಾಮನನ್ನು ಯಾತ್ರೆಗೆ ಕಳುಹುತ್ತಾನೆ, ಸಂಧಿಗೆ ಬಂದಾಗ ದಾಸೀಪುತ್ರ ವಿದುರನ ಮನೆಯಲ್ಲಿ ತಂಗುತ್ತಾನೆ. ವಿದುರ ತನ್ನ ಭಕ್ತನೇನೋ ನಿಜ; ಆದರೆ ದುರ್ಯೋಧನ ವಿದುರನ ಮೇಲೆ ಸಿಟ್ಟೆ ಗೇಳಬೇಕಾಗಿದೆ. ಭೀಮನು ದುರ್ಯೋಧನನ ತೊಡೆ ಒಡೆಯುವಾಗ ರಕ್ಷಿಸಬೇಕೆಂದಿಟ್ಟ ಬಿಲ್ಲನ್ನು, ವಿದುರನೂ ಸಿಟ್ಟಿಗೆದ್ದು ಮುರಿಯಬೇಕಾಗಿದೆ. ಕರ್ಣನ ಫಿತೂರಿಯಂತೂ ಸರಿ. ಅಲ್ಲದೆ ದುರ್ಯೋಧನನು ಪೂರ್ಣ ವಜ್ರದೇಹಿಯಾದರೆ ತಾನು ಚಕ್ರಹಿಡಿಯುವ ಪ್ರಸಂಗ ಬಂದೀತೆಂದು, ಚಡ್ಡಿಯನ್ನು ಕೊಡುವುದು—ಎಲ್ಲ ಅವನ ತಂತ್ರಗಳು. ಆದರೆ ಪಾಪ ದುರ್ಯೋಧನ "ಗಾಂಧಾರೀ ದೃಷ್ಟಿಯಾಡದ ಚಿತ್ತ ದ್ರವ್ಯ ತನ್ನ ಮುಖ್ಯ ಪ್ರಾಣಗಳಲಿ ಸಿಂಹಾಸನಸ್ಥವಾಗಿದೆ" ಎಂದು ಗೊತ್ತಿಲ್ಲದೆ ತೊಡೆತಟ್ಟುತ್ತಾನೆ ಕೊನೆಗೆ ಭೀಮು ಗದೆಯಿಂದ ಕುಟ್ಟುತ್ತಾನೆ. ಈ ಎಲ್ಲ ಕೃಷ್ಣನ ತಂತ್ರಗಳು ಬರಿಯ ರಾಜಕೀಯ ಚಾಣಕ್ಯ ತಂತ್ರಗಳಾಗಿರದೆ, ಧರ್ಮಸಂಸ್ಥಾಪನೆಯ ದೈವೀಪ್ರವೃತ್ತಿಯ ಮಂತ್ರಗಳಾಗಿವೆ.

ಕೊನೆಯ ಮಹತ್ತ್ವದ ಮಾತೆಂದರೆ ರಾಮಾಯಣ ಮಹಾಭಾರತಗಳೇ ಇರಲಿ, ಇನ್ನಾವುದೇ ಮಹಾಕಾವ್ಯವಿರಲಿ, ಅಲ್ಲಿಯ ವ್ಯಕ್ತಿಗಳು ಬರಿಯ ವ್ಯಕ್ತಿಗಳಾಗಿರದೆ, ಒಂದೊಂದು ಸಾರ್ವತ್ರಿಕ ತತ್ತ್ವದ ಪ್ರತೀಕಗಳಾಗಿರುತ್ತವೆ. (Symbols) ಅವರ ನಡತೆಗಳು ಅಲ್ಲಿಯ ಘಟನೆಗಳಲ್ಲಿ ನಡೆದುಕೊಂಡ ಸಹಜ ಕ್ರಿಯೆಯಾಗಿರದೆ ಯುಗ ಯುಗಗಳ ನರೆಗೂ ಬೆಳಕುಕೊಡುವಂಥ ತತ್ತ್ವಗಳನ್ನು ಅಭಿವ್ಯಕ್ತಗೊಳಿಸುವ ನಿದರ್ಶನದ ವಿಧಾನಗಳಾಗಿರುತ್ತವೆ. ನಮ್ಮ ಪ್ರವೃತ್ತಿಗೆ ಕೆಲವೊಂದು ರುಚಿಸದಿದ್ದರೆ ಅವುಗಳನ್ನು ಅಷ್ಟು ಹಗುರಾಗಿ ಪ್ರಶ್ನಿಸುವುದರಿಂದ ಆ ಕಾವ್ಯಗಳಿಗೇನೂ ಹಾನಿಯಾಗದಿದ್ದರೂ ಅರ್ಥ ಮಾಡಿಕೊಂಡಾಗ ಆಗಬಹುದಾದ ಲಾಭ ಆಗದೇ ಹೋಗಬಹುದು.

ಗಾಂಧಾರಿಯ ಶೋಕ

ಶೀ. ಕೆ. ವಿ. ತಿರುಮಲೇಶ, ಪನ್ನೆಪ್ಪಲ

೧

ಅನ್ಯಕ್ತ ತಾನೆಂದು ಬಾನಂಚಿನೊಳಗೇಕೆ
ಅಡಗಿರುವೆ? ನನ್ನೆದುರು ಬಂದು ನಿಲ್ಲು.
ಈ ಜಗದ ಕಾರ್ಯದೊಳು ಕಾರಣನು ನೀನಂತೆ
ನನ್ನುಗ್ರ ಪ್ರಶ್ನೆಗುತ್ತರವ ಹೇಳು.
ಗಾಂಧಾರಿಯಿಂಥ ಪತಿವ್ರತೆಯನಿಳೆಯರಿವಂತೆ
ಹೆಸರುಗೆಡಿಸಿದನಾರು? ಅಹಹ ಹೇಳು.
ನನ್ನ ಜೀವಿತನಾಥನಕ್ಷಿಗಳ ದೃಷ್ಟಿಯೊಳು
ಸುಣ್ಣವೆರೆದವನಾರು? ಹೇಳು ಹೇಳು.

೨

ಹರಿಯಂತೆ! ಹರನಂತೆ! ವಿಧಿಯಂತೆ! ಅಯ್ಯಯ್ಯೊ!
ಸಾನಿರವತಾರಗಳ ಬಲೆಯನಿಕ್ಕಿ–
ಎನಿತು ಹೆಂಡಿರ ತಾಳಿಗೆನಿತು ಹಸುಳೆಗಳಸುಗೆ
ಮುಳಿದೆಯೋ! ಅಕಟಕಟ ಕೊಲೆಪಾತಕಿ!
ಅಣ್ಣತಮ್ಮಂದಿರನೆ ಅಕ್ಕತಂಗಿಯರನ್ನೆ
ವಂಚನೆಯೊಳಕ್ಕಿತ್ತ ತಿಕ್ಕಿತಿಕ್ಕಿ–
ನಂದನವನಂಗಳನು ಯುದ್ಧರಂಗವಗೈದು
ಸುಖಿಸುವೆಯ? ಜೀವಿಗಳ ಮುಕ್ಕಿನುಕ್ಕಿ!

೩

ತಾಯಿಯಾಗುವ ಕನಸ ಕಂಡು ನಾ ಹಿಗ್ಗಿರಲು
ಇತ್ತೆಯೋ ನೂರೊಂದು ಪಿಂಡಖಂಡ
ಪೆತ್ತ ಬಸಿರೊಳು ಕಿಚ್ಚು ಕೊಳ್ಳಿಯನು ಬೀಸಿದೆಯ!
ಮಕ್ಕಳೋ ಅಕಟಕಟ ಬೆಂಕಿ ಕೆಂಡ!

ತಣಿಯಬೇಕಾಗಿದ್ದ ಎದೆಯಿಂತು ಸುಟ್ಟುರಿಯೆ
ಒಡೆದು ನಃಚ್ಚಾಗದೇ ಹೃದಯ ಭಾಂಡ!
ವಿಧಿಯ ಮುಸುಕನು ಹೊದ್ದು ಹೊಂಚುತಿಹ ರಣಹದ್ದು!
ಅಕಟಕಟ ನೀನೆಂಥ ಚಂಡ! ಚಂಡ!

೪

ಎಂತಾದರೂ ತಾಯ್ಗೆ ಮಕ್ಕಳಣುಗರೆ ಅಲ್ತೆ!
ಎಂದೆ, ಎದೆದೊಟ್ಟಲೊಳು ಪೊರೆದೆ ನಚ್ಚಿ.
ಹತ್ತು ತಿಂಗಳು ಹೊತ್ತು ಹೆತ್ತ ಹೊಟ್ಟೆಗೆ ಮತ್ತೆ
ಅಹಹ ಕ್ರೌರ್ಯದಿ ನೀನೆ ಬೆಂಕಿಹಚ್ಚಿ–
ತಾಯ್ತನದ ಹೃದಯಾನುಕಂಪವಿಲ್ಲದ ಮೂರ್ಖ!
ಪೆಣ್ತನದ ಪಯಿಯನ್ನೆ ಗಾಳಿಗೆರಚಿ–
ಕಾಳೆಗದ ನೆಪದಿಂದ ಕೊಂದೆಯಲ್ಲವೆ ಪಾಪಿ!
ಎನ್ನ ಸಂಸಾರವನು ಕೊಚ್ಚಿ ಕೊಚ್ಚಿ–

೫

ಜನ್ಮಾಂಧರನರಾಗಿ ಶೋಕಾಂಧೆಯಾನಾಗಿ
ನನೆಯುತಿರೆ ನಿನ್ನ ಕಣ್ ತಣಿಯಿತೇನು?
ಎನ್ನಣುಗರೆದೆಯ ನೆತ್ತರ ತೋಡುಗಳು ಹರಿಯೆ
ನಿನ್ನ ಹೊಟ್ಟೆಗೆ ಹಬ್ಬವಾಯಿತೇನು?
ಇಲ್ಲಿ ನಿನ್ನದೆ ಆಟ ನಿನ್ನದೇ ಮಾಟ ಮೇಣ್
ಈ ಜಗದ ಸರ್ವಾಧಿಕಾರಿ ನೀನು!
ಎನ್ನ ಪೆಣ್ತನಕೆ ತಾಯ್ತನಕೊಂದು ಬೆಲೆಯಿಹರೆ
ಅವರ ಫಲವನು ಮತ್ತೆ ಕಾಣು ಕಾಣು!

ಸುಖ-ದುಃಖ

'ಮಾಲತೀಪ್ರಿಯ' ಬೆಳಗಾಂವಿ

ಚಿರದುಃಖ ಬಯಸಿಲ್ಲ;
ಚಿರಸುಖವು ಬೇಕಿಲ್ಲ;
ಸುಖದುಃಖ ಸಮರಸವೆ
ಬಾಳದುವೆ ಮರಿತಿಲ್ಲ;

ಅಂಬರದಿ ಚಂದ್ರಮಗೆ
ನೋಡ ಮುಸುಕುವುದೊಮ್ಮೆ
ಗಾಳಿಗೋಡಲು ನೋಡ—
ತಿಳಿಬೆಳಕು ಮಾಸದದು.

ನೋವು ನಲಿವುಗಳೆರಡು
ಬಾಳಿಗನುಗಂಬಗಳು;
ಜಗದರಿವ ತಿಳಿಸುತಿಹ
ಕಾರ್ಯವಾಹಕವು;

ಕತ್ತಲೆಯು ಬರುತಿಹುದು
ಬೆಳಕು ತರಲೆಂದೇ!
ಮನದಳಲು ಬರುತಿಹುದು
ನೆಗವ ತರಲೆಂದೇ!

★ ಹಳ್ಳಿಯ ಏಳಿಗೆ ★

(ತರಂಗರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಪಾತ್ರಪರಿಚಯ

ಒಬ್ಬ (ಶಿವಣ್ಣ), ಇನ್ನೊಬ್ಬ (ಸಿದ್ದಣ್ಣ), ಕಂಬಾರ ಕಾಳವ್ವ, ಸಮಾಜಸೇವಕ

ವೃಂದಗೀತ

ಎದ್ದಽದ ಮೂಡಣಕ ನೋಫ ಹರಡಿ ಬಾನೊಳು
ಸುರಿಸತ್ತದೀಗ ಜೀವನುಳಿನೀರಾ–
ಎದ್ದೇಳು ನೀನು ಹಳ್ಳಿಗಽ ಬೆದರಬ್ಯಾಡೀಗ
ಬಿತ್ತು ಹೊಲದಾಗ ಬೆಳಕೊ ನೀ ಪೂರಾ ! ||

ಬಳಲಿದಿಯೊ ಬಾಳ ಇಲ್ಲಿತನಾ, ಹೊಟ್ಟೆಗಿರದನಽ
ಮರುಗಿ ದಿನದಿನಾ–ಬಾಯಿ ಬಾಯಿಬಿಟ್ಟೆ–
ಹಗಲಿರುಳು ದುಡಿದು ಹುಡಿಮಣ್ಣ ಕಡಿದು
ಬೆವರ್ದನಿಯ ಕುಡಿದು ನೀ ಕೆಟ್ಟೆ ! ||

ಹಿಂದಾಯ್ತು ನಿನ್ನ ಕೆಡುಗಾಲ, ಸೋಸಿದೆಯೊ ಗೋಳ
ಯಾರು ಹಿಡಿಲಿಲ್ಲ ನಿನ್ನ ಎತ್ತ–
ಬಂದೈತಿ ಈಗ ಶುಭಕಾಲ, ಕಣ್ಣ ತಗದಾಳ
ತಾಯಿ ನಿನಮ್ಯಾಲ, ಹೋಯ್ತೊ ಭೀತಿ ! ||

(ಹಾಲಕ್ಕಿಯ "ಕಲಕಲ-ಕಲಕಲ" ಎಂಬ ಶಬ್ದ ಕೇಳಿಸುವುದು)

ನಾ ನುಡಿಯೊದಿಲ್ಲ. ಸುಳು–ಸುಳ್ಳು, ಹಕ್ಕಿ ನುಡಿ ಕೇಳು
ಜಯಜಯಾ ಮೇಲು– ಅನ್ನತೈತಿ–
ಇನ್ನ ಚಿಂತಿಬಿಟ್ಟು ನೀ ದುಡಿ, ತುಂಬತ್ತದ ಉಡಿ
ಮೆರಸು ಸಿರಿಗುಡಿ– ಮ್ಯಾಲಕೆತ್ತಿ !

ನಿವೇದಕ

ಬದುಕುವ ಬಯಕೆಯಿಂದ ದುಡಿದು, ದುಡಿದು ಫಲವನ್ನು ಕಾಣದ ನಿರಾಶೆಯಿಂದ ಸೋತುಬಿದ್ದ ಒಂದು ಹಳ್ಳಿ. ಕಳೆಗೆಟ್ಟ ಮುಖದ– ಬಳಲಿ ಬಡಕಲಾದ ದೇಹದ ಹಳ್ಳಿಗರು. ಇಳಿಹೊತ್ತಿನ ವೇಳೆ. ಕೆಲಸವೇನೂ ಇಲ್ಲದ ಹಳ್ಳಿಗರು ಹಳ್ಳಿಯ ಹನುಮನ ಗುಡಿಯ ಕಟ್ಟೆಯ ಮೇಲೆ ಕುಳಿತು, ಬಾಳನ ಗೋಳನ್ನು ಅಳೆದು ಬಳಚುತ್ತಿದ್ದಾರೆ.

ಒಬ್ಬ:–– ನೋಡು ಸಿದ್ದಣ್ಣಾ, ನನಗ ಮನೀ ಅಂದರ ಬ್ಯಾಸರಾಗಿಹೋಗೈತ್ರಿ. ಹೋದ ಸುಗ್ಗ್ಯಾಗ ಬಂದ ಸೆರಿ ಮುಕ್ಕುಕಾಳು, ಎಲ್ಲಾ ಮುಗದುಹೋತು. ಹೊಟ್ಟೆಗೆ ಮೇವು ಇಲ್ಲದ್ದಕ್ಕ ದನಗೋಳು ಕರಾಕರಾ ಅಂತ ಕೂದಲಾಕಹತ್ತ್ಯಾವ್ರೆ. ಎರಡು ತಿಂಗಳ ಮ್ಯಾಲಾತು. ಮನ್ಯಾಗ ಬ್ಯಾನ್ಯವರ ಹರಿಹಾಸಗೀನೂ ತಪ್ಪಿಲ್ಲ. ಕಸಾರಿಕೆ ಬಂದವರಿಗೆ ಒಂದು ಗುಟುಕು ಚಾನಾದರೂ ಕಾಸಿ ಹಾಕಬೇಕಂದರ, ಸಕ್ಕರಿ–ಚಾಪುಡಿ ಕೊಂಡು ತರಲಾಕ, ಕೈಯಾಗ ಒಂದು ಕಾಸಿಲ್ಲ. ನನಗಂತೂ ಈ ಜಲಮ, ಸಾಕ–ಸಾಕಾಗಿ ಹೋಗೆಯ್ತಿ ನೋಡಪಾ !

ಇನ್ನೊಬ್ಬ:— ಎಲ್ಲಿಗೆ ಹ್ವಾದರೂ ಮುತ್ತಲಕ್ಕ ಮೂರsಎಲೀನೋ ಶಿವಣ್ಣಾ ! ಈ ಹಳ್ಳಿಯೊಳಗ ಯಾರು ತಿಂದುಂಡು ಸುಕದಿಂದ ಅದಾರಂತಿ ? ನಿನ್ನ ಬಾಳೇನsನನ್ನ ಬಾಳೆ ! ನನ್ನ ಬಾಳೇನs ಇನ್ನೊಬ್ಬನ ಬಾಳೆ! ಒಂದನ್ನ ಹುಗಿಯೂದು, ಇನ್ನೊಂದನ್ನ ತಗಿಯೂದು! ಅಲ್ಲಪ್ಪಾ, ನವ್ಯಾ ಮನ್ಯಾಗರೇ ಏನೈತಿ ಅಂತೀ ನೀನು ? ಕೈಗಡದ ಕಾಳು ತಂದು ತಿನ್ನಾಕಹತ್ತಿ ತಿಂಗಳಮ್ಯಾಲಾತು. ಈಗ ಕೈಗಡಸುದ್ದಾ ಸಿಗದ್ಹಾಂಗ ಆಗ್ಯಾವ. ಮನ್ಯಾಗ ಮೂರು ಹುಡುಗೋರು ಚಳಿಯುರಿ ಬಂದು ಬಿದ್ದು ಬಿಟ್ಟಾವ. ದೇವರು ಎಂದು ಕಣ್ಣತಗೀತಾನೋ ನವ್ಯಾ ಹಳ್ಳೀಮ್ಯಾಗ!

ಒಬ್ಬ:— ನವ್ಯಾ ಹಳ್ಳಿಗಳನ್ನಷ್ಟಽ ನೋಡಬಾರದಂತ ಮಾಡ್ಯಾನೇನು ದೇವರು ನವ್ಯಾಪ್ಪ ! ಅಲ್ಲಾ, ಆ ಪ್ಯಾಟೀ ಊರುಗಳನ್ನು ನೋಡೀದೀ ಇಲ್ಲೋ ಸಿದ್ದಣ್ಣಾ ! ಹಾಂಗs ಝಗಝಗಾಡಸತಾವ. ಅಲ್ಲೀ ಉಪ್ಪರಿಗೀ ಮನಿಗೋಳೇನು, ಡಾಂಬರಿನ ರಸ್ತೆ ಏನು, ಮಿಂಚಿನ ದೀಪದ ಸಾಲು ಏನು, ಚಾ-ಕಾಫೀ ಅಂಗಡೇನು, ಸಿನಿಮಾ ಮನಿಗೋಳೇನು– ಹಾಂಗs ಸ್ವರ್ಗ ಭೂಮಿಗೆ ಇಳದುಬಂದ್ಹಾಂಗ ಕಾಣತಾವ ನೋಡು!

ಇನ್ನೊಬ್ಬ:—ಮತ್ತ ಪ್ಯಾಟೀ ಊರಾಗ ಕೂಲೀನಾಲೀಮಾಡೀನಂದರ ಬೀಕಾದಷ್ಟು ಸಿಗತಾವ. ಇಲ್ಲೀನೋ ಮಾರಾಯಾ, ಎಲ್ಲಾರೂ ಸುದಾಮನ ಮಮ್ಮಕ್ಕಳs ! ಒಂದು ಶಿವರಾತ್ರಿ, ಇನ್ನೊಂದು ಏಕಾದಶಿ ! ದಸರೇ, ದೀವಳಿಗೀ, ಕಾಣೂ ಹಾಂಗs ಇಲ್ಲ.

ಒಬ್ಬ:— ಅದಕsನೋ ಮಾರಾಯಾ ! ಈ ಹಳ್ಳೀ ಬಿಟ್ಟು ಪ್ಯಾಟೀ ಊರನಾದರೂ ಸೇರಿಕೊಳ್ಳಾಕ ಅಂತ ಅನಸಾಕ ಹತ್ತೈತಿ! ಹೆಂಡರು ಮಕ್ಕಳನ್ನು ಉಪಾಸs ಕೊಲ್ಲುದೈತೇನು ಹೇಳು!

ಇನ್ನೊಬ್ಬ:–– ನಿನ್ನ ಮಾತು ಖರೇನಪಾ ! ಆದರ ಈ ಹೊಲಾ ನೆಲಾ ಬಿಟ್ಟು ಹೋಗೋದು ಹ್ಯಾಂಗ? ಏನೋ ಮಳರಾಜ ದಯಾ ತೊರಿಸಿದರ, ಮುಂದಿನ ವರಸರೇ ನಾಕು ಚೀಲ ಕಾಳು ಬೆಳದು ಅನ್ನಾ

ಕಂಡೀವು; ಭೂಮಿತಾಯಿ ತನ್ನ ಮಕ್ಕಳನ ಹೀಂಗs ಕಡಿತನಕಾ ಮರಗಸತಾಳs ?

ಒಬ್ಬ:— ನೀ ಅನ್ನೂದು ಬರಾಬ್ಬರೀನs ಅನ್ನು; ಆದರ ಮುಂದಿನ ವರಸದ ಬೆಳೀ ಬರೂತನಕಾ ನಾವು ಬದುಕುವ ಬಗಿ ಹ್ಯಾಂಗ? ಅಷ್ಟು ದೂರದ ಮಾತು ಬಿಡು. ಈ ಭೂಮಿಗಾ ಹಸ ಮಾಡಲಾಕ, ನಮ್ಮ ಎತ್ತುಗೋಳ ಮೈಯಾಗ ಸಗತಿ ಎಲ್ಲಿ ಐತಿ ? ದೇವರು ದಯ ಮಾಡಿ ಮಳೀಕೊಟ್ಟರ, ಬಿತ್ತಲಾಕ ಬೀಜಾದರೂ ಬ್ಯಾಡs ನಮಗ ?

ಇನ್ನೊಬ್ಬ:— ಈ ನಮ್ಮ ಅಪ್ಪಗ ನಮ್ಮನ್ನೆಲ್ಲಾ ಕೊಂದುಬಿಡ ಬೇಕಂತ ಮನಸ ಇದ್ದರ, ನಾವೇನು ಮಾಡಬಲ್ಲಿವಿ? ಇನ್ನ ಬದಕಸ ಬೇಕಂಬೂ ಮನಸು ಇದ್ದರ, ಏನಾರೀ ದಾರೀ ತೋರಿಸೇ ತೋರಿಸ ತಾನು !

(ಕಂಬಾರ ಕಾಳವ್ವ ದೇವರ ಗುಡಿಗೆ ಬರುವಳು.)

ಏನಬೇ ಕಾಳಮ್ಮಾ, ಹನುಮಪ್ಪನ ಗುಡಿಗೆ ಬಂದಿ? ನಿಮ್ಮ ಉದ್ದಿಮಿದಾರ ಮಂದೀದs ಮಜಾ ಐತಿ ನೋಡು !

ಕಾಳವ್ವ:— ಐ ಮಜಾನs ! ನಮ್ಮ ಹಳ್ಳೀ ಉದ್ದಿಮಿದಾರಿಕಿ ಏನು ಯಣ್ಣಾ ! ನೀವೆಲ್ಲಾ ಕೊಟ್ಟರ ನಮ್ಮದೆಲ್ಲಾ ಮಜಾ! ನೀವs ಕೊಡದಿದ್ದರ ನಮ್ಮದೇನು ಪಾಡು ಹೇಳು !

ಒಬ್ಬ:— ಆದರೂ ನಿನ್ನಗಂಡ ಬಾಳ ಶಾಣ್ಯಾ ಬಿಡು! ಈ ಹಳ್ಳ್ಯಾಗ ಇರೂದs ಅಂವ ಪ್ಯಾಟೀ ಊರಾಗ ಇದ್ದರ, ಬಂಗಾರ ಮನೀ ಕಟ್ಟಿಸತಿದ್ದ — ಬಂಗಾರಮನಿ !

ಕಾಳವ್ವ:— ಐ ನನ್ನ ಶಿವನs, ಇದ್ದ ಮಣ್ಣಿನ ಮನೀ ಆದರೂ ನಮಗ ಉಳಿದರ ಸಾಕು. ಬಂಗಾರದ ಮನೀಮಾತು ಹೇಳತಾನ ನಮ್ಮಪ್ಪ ! ದೊಡ್ಡೂರ ಸಾವಕಾರ್ರು ನಿನ್ನಿನ ದಿನಾನ ಬಂದು ಬೆದರಿಸಿ ಹೋಗ್ಯಾರ ! ಬಡ್ಡೀನಾದರೂ ಕೊಡು— ಇಲ್ಲದಿದ್ದರ ಮನೀ ನನಗ ಬಿಟ್ಟು ಬಿಡು— ಅಂತ. ಎಂಥಾ ದಿನಮಾನ ಬಂದೂ ಯಣ್ಣಾ ! ಇದs ಕಮ್ಮಾರಿಕೀ ಉದ್ಯೋಗಾ ಮಾಡೀ ನಮ್ಮ ಮಾವ, ನಾಕು ಸೇರು ಬಂಗಾರಾ ಮಾಡಿದ್ದರಂತ ಮನ್ಯಾಗ. ಈಗ ನೋಡಿದರ, ಮನ್ಯಾಗ ಧಂದೇ ಮಾಡೀನಂದರ ನಾಕು ಸೇರು ಕಬ್ಬಿಣ ಸುದ್ದಾ ಸಿಗೂದಿಲ್ಲ !

ಇನ್ನೊಬ್ಬ:— ನಿನ್ನ ಮಾತೂ ಖರೇನs ಕಾಳವ್ವಾ ! ಈಗ ಕಬ್ಬಿಣಕ್ಕ ಬಂಗಾರದ ಬೇಲೀನs ಬಂದೈತಿ. ಬೇಕಾದ್ದಾದರೂ ಕಾಡೀತಿ ಬಾಳ ಶಾಣ್ಯಾ ಅಲ್ಲಾ ಶಿವಣ್ಣಾ ! ಕೇಲಿ, ಅಡಕೊತ್ತು, ಈಳಿಗಿ ಅಂತ ಏನೇನಾರೇ ಮಾಡಿ ರೊಕ್ಕಾ ತಗದ ತಗೀತಾನ !

ಕಾಳವ್ವ:— ಐ ನನ ರೊಕ್ಕs ! ಅನ ಗಳಿಸಿದ ರೊಕ್ಕ ಅವನ ಚಾ— ಚುಟ್ಟಾಕs ಸಾಕಾಗೂದಿಲ್ಲ. ಮನ್ಯಾಗ ಮಕ್ಕಳು ಉಪಾಸ ಬಿದ್ದು ಸಾಯವೊಲ್ಲೂ ಯಾಕ; ಅವನ ಚಾ--ಚುಟ್ಟಾಕ ಮಾತ್ರ ಏನೂ ಕೊರತಿ ಆಗ ಕೂಡದು. ಈಗ ಮೂರು ದಿನಾ ಆತು, ಮನ್ಯಾಗಿನ ಕಾಳು ತೀರಿ ! ಮಕ್ಕಳು ಹಸದು ಬಿಲಿಬಿಲಿ ಒದ್ದಾಡಲಾಕ ಹತ್ಯಾವು. ಅಂವ ಹೇಳಿದ: ಸಿದ್ದಣ್ಣನ ಮನಿಗೆ ಹೋಗಿ, ಆಯದ ಕಾಳು ಇಸಕೊಂಡು ಬಾ — ಅಂತ. ಅದಕ್ಕs ನಿನ್ಮ ಮನಿಗೆ ಹೋದ್ನಿ. ನೀವು ಇಲ್ಲಿ ಅದೀರಿ ಅಂತ ತಿಳೀತು. ಇಲ್ಲಿಗೆ ಬಂದ್ನಿ. ಥ್ಯಾಡೇ— ತುಸಾನರೆ ಕಾಳುಕೊಡಲಾಕs ಬೇಕ ಇಂದ. ಇಲ್ಲದಿದ್ದರ ಒಲೀನs ಹೊತ್ತsೂ ಹಾಂಗಿಲ್ಲ.

ಇನ್ನೊಬ್ಬ:— ಕಾಳವ್ವs, ನಿನ್ನ ಆಯದ ಕಾಳು ಕೊಡೊದೇನೂ ಸುಳ್ಳಲ್ಲ. ನನ್ನ ಮನ್ಯಾಗ ಒಂದು ಕಾಳಿದ್ದರೂ ನೀನs ತೊಗೊಂಡು ಹೋಗು. ನಾಯೇನೂ ನಿನ್ನ ಕೈ ಹಿಡಿಯೂದಿಲ್ಲ. ಆದರ, ನೋಡು ತಾಯಿಾ ! ಕಸಾರಿಕೀ ಹುಡುಗೋರಿಗೆ ಅರದು ಅಂಬಲೀ ಕಾಸಿ ಹಾಕೀ ನಂದರ ಕೈಗಡಾ ಸುದ್ದಾ ಎಲ್ಲೂ ಹುಟ್ಟವೊಲ್ಲದು !

ಕಾಳಪ್ಪ:— ಅಯ್ಯೋ, ಶಿವನs ಇನ್ನೇನು ಗತಿ ?

ಒಬ್ಬ:— ಎಲ್ಲಾರಿಗೂ ದೇವರs ಗತಿ !

(ದೂರದಿಂದ ಹಾಡುಕೇಳುವುದು)

ಎದ್ದsದ ದೂಡಣಕ ಮೇಘ, ಹರಡಿ ಬಾನೊಳಗ
ಸುರಿಸತsದೀಗ ಜೀವಮಳಿನೀರಾ !
ಎದ್ದೇಳು ನೀನು ಹೆಳ್ಳಿಗs ಬೆದರ ಬ್ಯಾಡೀಗ
ಬಿತ್ತು ಹೊಲದಾಗ ಬೆಳಕೊ ನೀ ಪೂರಾ !

೨

ನಿವೇದಕ

ಹಳ್ಳಿಯಲ್ಲಿ ಸರಕಾರದ ಸಂದೇಶದೂತನಾಗಿ ಸಮಾಜ ಸೇವಕನೊಬ್ಬನು ಬಂದಿರುವನು. ಹಳ್ಳಿಯ ಹನುಮನ ಗುಡಿಯ ಬಯಲಲ್ಲಿ ಹಳ್ಳಿಗರ ಸಭೆಯನ್ನು ಕರೆದಿರುವನು. ನಿರ್ವಿಣ್ಣಹೃದಯದ ಹಳ್ಳಿಗರು ನಿರ್ವಾಹವಿಲ್ಲದೆ ಸಭೆಯಲ್ಲಿ ಬಂದು ಕುಳಿತಿರುವರು. ಹೆಂಗುಸರು ಗಂಡುಸರ ಎಲ್ಲರೂ ಸೇರಿದ್ದಾರೆ. (ಮಾತಾಡುವ ಉಲುಹು ಕೇಳುವುದು.)

ಸಮಾಜ ಸೇವಕ:— (ಉಪನ್ಯಾಸದ ಧಾಟಿಯಲ್ಲಿ) ನನ್ನ ಹಳ್ಳಿಯ ತಾಯಿ-ತಂಗಿಯರೆ, ಅಣ್ಣ-ತಮ್ಮಂದಿರೆ ! ನೀವೆಲ್ಲರೂ ಕಷ್ಟದಿಂದ ಬಳಲುತ್ತ ಇರುವುದು, ನಮ್ಮ ಭಾರತದ ಪ್ರಜಾಸರಕಾರಕ್ಕೆ ಸಂಪೂರ್ಣ ಗೊತ್ತಾಗೇದ. ನಮ್ಮ ರಾಷ್ಟ್ರವು ಹಳ್ಳಿಗಳ ರಾಷ್ಟ್ರ. ಹಳ್ಳಿಯ ಜನರೇ ನಮ್ಮ ರಾಷ್ಟ್ರದ ಪ್ರಾಣವಿದ್ದಂತೆ....

ಒಬ್ಬ:— ಹಳ್ಳಿಯ ಜನದ ನೈಯ್ಯಾಗ ಪ್ರಾಣ ಉಳಿದಿದ್ದರ ಹೌದಲ್ಲೋ, ಅವರು ರಾಷ್ಟ್ರಕ್ಕ ಪ್ರಾಣ ಆಗೂದು ! ಹಳ್ಳೀ ಜನಾ ಸತ್ತಾರೋ ಬದಿಕ್ಯಾರೋ ಅಂಬೂದನ್ನ ನೋಡವರರೆ ಯಾರು ಅದಾರು ?

ಸಮಾಜ:— (ಶಾಂತಭಾವದಲ್ಲಿಯೆ) ನಿನ್ನ ಮಾತು ಸುಳ್ಳಲ್ಲ ಅಣ್ಣಾ ! ಇಮವರೆಗೆ ಹಳ್ಳಿಗಳ ಕಡೆಗೆ ಸರಕಾರ ಸ್ವಲ್ಪವೂ

ಲಕ್ಷ್ಯಕೊಡುತ್ತಿರಲಿಲ್ಲ. ಕಟುಕತನದಿಂದ ಹಳ್ಳಿಗರಿಂದ ಕರ-ಕಂದಾಯಗಳನ್ನು ಮಾತ್ರ ಕಿತ್ತುಕೊಂಡು ಹೋಗುತ್ತಿತ್ತು. ಹಾಗೆ ಮಾಡುತ್ತಿದ್ದದ್ದು ಪರಕೀಯರ ಸರಕಾರ! ಆಗ ಭಾರತವು ಪಾರತಂತ್ರ್ಯದಲ್ಲಿ ಇತ್ತು. ಭಾರತವನ್ನು ಆಗ ಆಳುತ್ತಿದ್ದವರು ನಮ್ಮನ್ನು ಪ್ರಜೆಗಳೆಂದು ಕಾಣುತ್ತಿರಲಿಲ್ಲ. ದುಡಿಯುವ ಆಳಿಗಿಂತಲೂ ಕೀಳಾಗಿ ನೋಡುತ್ತಿದ್ದರು. ನಮ್ಮ ಸುಖ-ದುಃಖಗಳ ಸಂಪೂರ್ಣ ವಿಚಾರ ಅವರಿಗೆ ಇರಲೇ ಇಲ್ಲ. ಈಗ ನಮ್ಮ ರಾಷ್ಟ್ರ ಸ್ವತಂತ್ರ ಆಗೇದ. ನಮ್ಮ ಸರಕಾರ ಈಗ ನಮ್ಮ ಜನರದ್ದ ಆಗೇದ.

ಇನ್ನೊಬ್ಬ:— ಯಾವ ಸರಕಾರ ಯಾರದಾದರೂ, ನಮ್ಮ ಹಳ್ಳೀ ಜನಕ್ಕ ಎಲ್ಲಾ ಒಂದ್ದ ಬಿಡ್ರಿ! ನಮ್ಮ ಕಷ್ಟ ನಮ್ಮ ದುಃಖ ನಮ್ಮ ಬೆನ್ನಿಗೆ ಅಂಟಿಕೊಂಡು ಕುಂತ್ದ ಇರತಾವ.

ಸಮಾಜಸೇವಕ:— ಅಹುದು, ಈ ನಿರಾಶಾಭಾವ ನಿಮ್ಮಲ್ಲಿ ನೆಲೆಮಾಡಿರೂದು ಸ್ವಾಭಾವಿಕನೇ ಅದ. ಯಾಕಂದರ ಇದುವರೆಗೂ ನಿಮಗ ಸ್ವಾತಂತ್ರ್ಯದ ಸವಿ, ಸ್ವರಾಜ್ಯದ ಸುಖ-ಸೌಕರ್ಯ ಗೊತ್ತಾಗಿಲ್ಲ. ಈಗ ನಮ್ಮ ಸರಕಾರ ಹಳ್ಳಿಯ ಜನರ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟ್ದ. ಹಳ್ಳಿಗಳು ಸುಧಾರಿಸವೆ ಹೋದರ—ದಿಲ್ಲಿಗೆ ಬಲಾ ಬರೂದಿಲ್ಲಾ ಅಂಬೂದು ಅದಕ್ಕ ಸಂಪೂರ್ಣ ಗೊತ್ತಾಗೇದ.

ಕಾಳವ್ವ:— ಹಳ್ಳಿಗಳು ಸುಧಾರಿಸೂದು ಅಂದರ ಏನು ಅಣ್ಣವರ?

ಸಮಾಜಸೇವಕ:—ಅಂದರ, ಹಳ್ಳಿಯ ಜನರೆಲ್ಲಾರೂ ಓದುಬರೀ ಕಲಿತು ಶ್ಯಾಣಾರಾಗೂದು ಅದಕ್ಕಾಗಿ ಎಲ್ಲಾ ಊರೊಳಗೂ ಸಾಲೀ ತಗೀಯವರದ್ದಾರ ಸರಕಾರದವರು.

ಒಬ್ಬ:— ಏನ ಹೇಳತೀರಿ ಬಿಡ್ರೀ ನೀವು! ಹೊಟ್ಟೆಗೆ ಹಿಟ್ಟು ಹಾಕದ, ಜುಟ್ಟಗೆ ಮಲ್ಲಿಗೀ ಮುಡಿಸಿದರು—ಅಂತಾರಲ್ಲ, ಹಾಂಗೈತಿ ನೋಡ್ರಿ ನಿಮ್ಮ ಮಾತು. ವರಸಾ ವರಸಾ ಮಳೀ ಇಲ್ಲ. ಮಳೀ ಇಲ್ಲದ್ದಕ್ಕ ಬೆಳೀ ಇಲ್ಲ. ಬೆಳೀ ಇಲ್ಲದ್ದಕ್ಕಾಗಿ ನಮ್ಮದೆಲ್ಲಾರದೂ ಬರೀಹೊಟ್ಟ. ಸರಕಾರ ಹೊಟ್ಟೀತುಂಬಿಸೋ ಉಪಾಯಾ ಏನಾರೇ ಮಾಡೇತೇನು? ಮಾಡಿದ್ದರ ಅದನ್ನ ಮೊದಲು ಹೇಳ್ರಿ!

ಸಮಾಜಸೇವಕ:— ಈ ಕೆಲಸಂತೂ ಸರಕಾರದ ಮುಖ್ಯ ಕೆಲಸ. ಯಾರೂ ದೇಶದೊಳಗ ಉಪವಾಸ ಬೀಳದ್ಹಾಂಗ ನೋಡಿಕೊಳ್ಳಬೇಕಂಬೂದು ಸರಕಾರದ ಪಣಾ ಅದ. ನಮ್ಮ ಭಾರತ ರಾಷ್ಟ್ರವನ್ನ ಕಲ್ಯಾಣರಾಷ್ಟ್ರವನ್ನಾಗಿ ಮಾಡಬೇಕಂತ ನಿರ್ಣಯಿಸಿ, ಅದಕ್ಕಾಗಿ ಐದುವರ್ಷಗಳ ಯೋಜನೆಗಳನ್ನು ತಯಾರುಮಾಡಿ, ದೇಶದ ಜನರ ಏಳಿಗೆಗಾಗಿ ಎಷ್ಟೋ ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ಸರಕಾರ ವೆಚ್ಚಮಾಡೂದದ.

ಇನ್ನೊಬ್ಬ:— (ಆಶ್ಚರ್ಯದಿಂದ) ಎಷ್ಟೋ ಸಾವಿರ ಕೋಟಿ! ಅಂ....ಕೋಟಿ ಅಂದರ ಎಷ್ಟ ರೂಪಾಯಿರಿ?

ಸಮಾಜ ಸೇವಕ:— ನಿಮಗ ಸಾವಿರ ಅಂದರ ಎಷ್ಟು ಗೊತ್ತದನ್ನ! ಅಂಥಾವು ನೂರು ಸಾವಿರ ಅಂದರೆ, ಒಂದು ಲಕ್ಷ ಅಂತಾರ. ಅಂಥಾ ನೂರು ಲಕ್ಷ ಅಂದರ ಒಂದು ಕೋಟ ಅಂತಾರ.

ಕಾಳವ್ವ:— ಅಬಾಬಾಬಾ! ಬಾಳ ಆತು ಬಿಡ್ರಿ! ಇಷ್ಟು ಹಣಾ ಖರ್ಚುಮಾಡಿ ಏನು ಮಾಡಬೇಕಂತಾರ್ರಿ?

ಸಮಾಜಸೇವಕ:—ದೇಶದೊಳಗ ಅನ್ನ, ಸಂಪತ್ತು ಬೆಳಸುವ ಅನೇಕ ಸಾಧನ-ಸೌಕರ್ಯಗಳನ್ನು ಬೆಳಸಬೇಕಂತ ವಿಚಾರ ಮಾಡೇದ ನಮ್ಮ ಸರಕಾರ.

ಒಬ್ಬ:— ಅನ್ನಾ ಬೆಳಸವರು ನಾವು ಹೆಳ್ಳಿಯ ರೈತರೇ ಅಲ್ಲೇನ್ರಿ?

ಸಮಾಜ ಸೇವಕ:— ಅದಕ್ಕಾಗಿಯೇ ಹಳ್ಳಿಗಳ ಏಳಿಗೆಗಂತ್ದ ಈ ಹಣದೊಳಗ ಸಾಕಷ್ಟು ಹಣವನ್ನು ಕಾದಿರಿಸಿದ್ದಾರೆ. ನೀರಿಲ್ಲದ ಹಳ್ಳಿಗಳಲ್ಲಿ ಕೆರೆ-ಭಾವಿಗಳನ್ನು ಕಡಿಸಿಕೊಡುತ್ತಾರೆ. ಮನೆಯಿಲ್ಲದವರಿಗೆ ಮನೆಕಟ್ಟಿಸಿಕೊಳ್ಳಲಿಕ್ಕೆ ಹಣ ಒದಗಿಸುತ್ತಾರೆ. ಎಲ್ಲೆಲ್ಲಿ ಶಕ್ಯವಿದೆಯೊ ಅಲ್ಲೆಲ್ಲ ಹಳ್ಳ-ಹೊಳೆಗಳನ್ನು ಕಟ್ಟಿ, ರೈತರ ಭೂಮಿ ನೀರುಣ್ಣುವಂತೆ ಮಾಡುತ್ತಾರೆ. ಬಡವರಾದ ರೈತರಿಗೆ ಎತ್ತುಗಳನ್ನು ಕೊಳ್ಳಲಿಕ್ಕೂ ಬೇಸಾಯದ ಸಲಕರಣಿಗಳನ್ನು ಕೂಡಿಸಿಕೊಳ್ಳಲಿಕ್ಕೂ ಹಣದ ಅನುಕೂಲತೆ ಮಾಡಿಕೊಡುತ್ತಾರೆ. ಒಳ್ಳೆಯ ಬೀಜಗಳನ್ನು ಬಿತ್ತಲಿಕ್ಕೆ ಒದಗಿಸಿಕೊಡುತ್ತಾರೆ. ಉದ್ಯೋಗವಿಲ್ಲದ ಜನರಿಗೆ ಉದ್ಯೋಗ ಕಲ್ಪಿಸಿಕೊಡುತ್ತಾರೆ.

ಕಾಳವ್ವ:—ಇದೆಲ್ಲಾ ರೈತರಿಗಾಗಿ ಆತರಿ. ಹಳ್ಳಿಯೊಳಗ ರೈತರಷ್ಟ ಇರತಾರೇನ್ರಿ? ನೇಕಾರ್ರು ಇರತಾರು, ಕಂಬಾರ್ರು ಇರತಾರು, ಬಡಿಗೇರು ಇರ್ತಾರು, ಕುಂಬಾರ್ರು ಇರತಾರು. ಈ ಜನರನ್ನ ಸರಕಾರ ನೋಡೇ ಇಲ್ಲೇನ್ರಿ?

ಸಮಾಜಸೇವಕ:— ನೋಡೇ ಇಲ್ಲ್ಯಾಕ ತಾಯಿ? ಹಳ್ಳಿಯೊಳಗಿನ ಎಲ್ಲಾ ಕೈಗಾರಿಕೆ, ಎಲ್ಲಾ ಉದ್ಯಮಗಳನ್ನೂ ಸರಕಾರ ಸಹಾಯಕೊಟ್ಟು ಬೆಳಸಬೇಕಂತ ನಿರ್ಣಯ ಮಾಡೇದ. ಅವರಿಗೂ ಸರಕಾರದಿಂದ ಯೋಗ್ಯ ನೆರವು ಸಿಕ್ಕ್ದ ಸಿಗತ್ದ. ಇಷ್ಟ್ದ ಯಾಕ! ಹಳ್ಳಿಯೊಳಗಿನ ಬ್ಯಾರೇ ಬ್ಯಾರೇ ಉದ್ಯಮದಾರರ ಮಕ್ಕಳಿಗೆ, ಅವರವರ ಉದ್ಯಮ—ಕೈಗಾರಿಕೆಗಳ ಶಿಕ್ಷಣಕೊಟ್ಟು, ಅವರನ್ನು ನಿಪುಣರನ್ನಾಗಿ ಮಾಡಬೇಕಂತ ಕೂಡ ಯೋಜನಾ ಮಾಡೇದ.

ಕಾಳವ್ವ:— ಇದೊಂದು ಪಾಡ ಆತು ಬಿಡ್ರಿ.

ಇನ್ನೊಬ್ಬ:— ಏನ ಪಾಡಾತಂತೀಯ್ದ ಕಾಳವ್ವಾ? ಈಗ ನಾವು ಬದುಕಿ ಉಳದರ ಮುಂದೆಲ್ಲಾ ಕ್ವಾಟೆ ಆದೀತು—ಪ್ಯಾಟೇ ಆದೀತು. ನಾಳಿನ ಊಟಕ್ಕ್ದ ನಮ್ಮ ಜನಕ್ಕ ಪಂಚಾಯ್ತಿ ಬಂದು ಕುಂತಿರುವಾಗ, ಮುಂದಿಂದು ತೊಗೊಂಡು ಮಾಡೂದೇನೂ? ಸೇದೂ

ಬಾವೀ ಕಂಡು ನಾಯೀ ಸಂತೋಸಪಟ್ಟಿತೂ ಅಂತಾರಲ್ಲ—ಹಾಂಗೈತಿ ನಿನ್ನ ಮಾತು!

ಸಮಾಜಸೇವಕ:— ನಿನ್ನ ಮಾತು ಸರಿ ಏನಪಾ! ಈಗ ಮ್ಯಾಲಿನವರು ನನ್ನನ್ನ, ನಿಮ್ಮ ಸದ್ಯದ ದುಃಖ ಬಿಡಿಸಲಿಕ್ಕಂತs ಇಲ್ಲಿಗೆ ಕಳಿಸ್ಯಾರ. ಈ ಭಾಗದೊಳಗ ಬರಗಾಲ ಇದ್ದದ್ದರಿಂದ, ಕೂಡಲೇ ಇಲ್ಲಿಯ ಜನಕ್ಕ ಸಹಾಯ ಒದಗಿಸಬೇಕಂತ ಸರಕಾರ ನಿರ್ಣಯಿಸೇದ. ಆದಕ್ಕಾಗಿಯೇ ಇಲ್ಲಿ ಲೈನದಾರಿಯ ಕೆಲಸ, ಒಂದೆರಡು ದಿನದೊಳಗs ಪ್ರಾರಂಭ ಆಗತೈದ. ಎಷ್ಟು ಜನರು ದುಡೀಲಿಕ್ಕೆ ಬರತಾರೋ ಅಷ್ಟೂ ಜನರನ್ನೂ ಕೆಲಸಕ್ಕ ನೇಮಿಸಿಗೋತಾರ. ನಿಮಗೆ ಕೈತುಂಬ ಕೂಲೀ ಕೊಡತಾರ. ಇಷ್ಟs ಅಲ್ಲದ, ನಿಮ್ಮ ಊರ ಮುಂದಿನ ಹಳ್ಳಕ್ಕ ಒಡ್ಡುಹಾಕಿಸೋದೊಂದು ದೊಡ್ಡ ಯೋಜನಾ ಆದ. ಆ ಕೆಲಸ ಆದರ, ನಿಮ್ಮ ಊರಿನ ಬಹುಭಾಗ ಭೂಮಿಗೆ ನೀರು ಸಿಗತಾವ.

ಒಬ್ಬ:— ಅಲಲಲಲ! ಇನ್ನೇನ ಬಿಡಪಾ, ನಮ್ಮೂರ ಜನಕ್ಕ ಒದಕಲಿಕ್ಕೆ ಮಾರ್ಗ ಆತು.

ಸಮಾಜ ಸೇವಕ:— ಹೊಟ್ಟೇದು ಆಯ್ತುಲಾ! ಹಳ್ಳಿಯ ಜನರಿಗೆ ಯೋಗ್ಯ ಔಷಧೀ ಸಿಕ್ಕೂಹಾಂಗೂ ಸರಕಾರವ ಯೋಜನಾ ಆವ.

ಇನ್ನೊಬ್ಬ:— ಸರಕಾರಕ್ಕ ಪುಣ್ಯೇ ಹತ್ತಲೈಪಾ! ನೋಡ್ರಿ, ಸದ್ಯ ನಮ್ಮ ಹಳ್ಳಿಯೊಳಗ ನೂರರ ಮ್ಯಾಗs ಹಾಸಿಗಿ ಹಾಸ್ಯಾವು.

ಸಮಾಜಸೇವಕ:— ನಾಳೆಯ ದಿನವೇ ಒಬ್ಬ ಡಾಕ್ಟರೂ ನೋಟಾರು ತೆಗೆದುಕೊಂಡು ಇಲ್ಲಿಗೆ ಬರತಾರ. ಎಲ್ಲಾ ರೋಗಿಗಳನ್ನು ಪರೀಕ್ಷಿಸಿ ಔಷಧಾ ಕೊಡತಾರ. ಮತ್ತು ಸದ್ಯ ಈಗ ಯಾರ ಮನಿಯೊಳಗ ತೀರಾ ಬೀಸೂಕಲ್ಲು ತಡೆದು ನಿಂತಿದ, ಅವರೆಲ್ಲಾರೂ ನನ್ನ ಕಡೆ ಹೆಸರು ಕೊಡ್ರಿ! ಇಂದs ನಿಮಗ ಸ್ವಲ್ಪ ಸ್ವಲ್ಪ ಕಾಳು ಆಳಿಯಿಸಿ ಕೊಡತೇನಿ.

(ಎಲ್ಲರೂ ಸಂತೋಷದಿಂದ ಕೂಗುವರು)

" ಭಾರತಮಾತೆಗೆ ಜಯವಾಗಲಿ!"
"ಜನತಾರಾಜ್ಯಕ್ಕೆ ಜಯವಾಗಲಿ!"
" ಸರಕಾರದ ಯೋಜನೆಗೆ ಗೆಲವಾಗಲಿ "

ವೃಂದಗೀತ

ನಾ ನುಡಿಯೊದಿಲ್ಲ ಸುಳುಸುಳ್ಳು, ಹಕ್ಕಿನುಡಿಕೇಳು
ಜಯಜಯಾ ನೇಲು ಅನ್ನತೈತಿ!
ಇನ್ನ ಚಿಂತಿಬಿಟ್ಟು ನೀ ದುಡಿ, ತುಂಬತsದ ಉಡಿ
ಮೆರಸು ಸಿರಿಗುಡಿ–ಮ್ಯಾಲಕೆತ್ತಿ
ಸಿರಿಗುಡಿ–ಬಾನಿಗೆತ್ತಿ ॥

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ನೀಮು ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

▲ ಕಾಮಾಖ್ಯಾ ಮಂದಿರ ▲

(ಅಸಾಮದ ಪರಿಚಯ)

ಲೇ. ಪಿ. ವಿ. ಗುಡಿ, ಗೌಹಾಟಿ

ಅಸಾಮದಲ್ಲಿಯ ಸುಪ್ರಸಿದ್ಧ ಕಾಮಾಕ್ಷಿದೇವತೆ, ಪುರಾಣಕಾಲದಲ್ಲಿಯ ನರಕಾಸುರನಿಗೆ ಕುಲದೈವತವಂತೆ. ಅಲ್ಲಿ ನಿತ್ಯ ನಿತ್ಯವೂ ನಡೆಯುತ್ತಿರುವ ಪ್ರಾಣಹಿಂಸೆಯನ್ನು ನೋಡಿದರೆ, ಕಾಮಾಕ್ಷಿ ಆಸುರನ ಕುಲದೈವತವಾಗಿದ್ದುದು ಸರಿಯೆ—ಎನಿಸುವುದು.

ಭಾರತದಲ್ಲಿಯ ಪವಿತ್ರವೆಂದೆನಿಸಿಕೊಂಡ ನದಿಗಳ ದರ್ಶನ ತೆಗೆದುಕೊಂಡು (ರೈಲುಗಾಡಿಯ ಕಿಟಕಿಯಿಂದಲೇ), ಮುಖ್ಯವಾದ ಐತಿಹಾಸಿಕ ಮತ್ತು ಯಾತ್ರಾಸ್ಥಳಗಳ ನಿಲ್ದಾಣಗಳ ಮೇಲೆ ಅಡ್ಡಾಡಿ, ನಾಲ್ಕು ದಿನಗಳ ಪ್ರಯಾಣದನಂತರ ಅಮೀನ್‌ಗಾಂವ ಸ್ಟೇಶನಿನಲ್ಲಿ ಬಂದಿಳಿದೆ. ಇಷ್ಟು ದೂರದ ಪ್ರಯಾಣವಾದರೂ ಮನಸ್ಸಿಗೆ ಬೇಸರ ವೆನ್ನಿಸಿರಲಿಲ್ಲ; ನೆಮ್ಮದಿಯಿತ್ತು. ಪ್ರವಾಸದ ಕೊನೆಯ ೫–೬ ತಾಸು ಗಳ ಪ್ರಯಾಣ ಮನಸ್ಸಿನ ಎಲ್ಲ ಬೇಜಾರವನ್ನೂ ಹೊಡೆದೋಡಿಸಿತ್ತು. ಆ ೫–೬ ತಾಸುಗಳು ನಿಮಿಷಗಳಂತೆ ಕಳೆದುಹೋಗಿದ್ದುವು. ಹಾಗೆಯೇ ನೋಡುತ್ತ ಎಷ್ಟೋ ಹೊತ್ತು ಕಳೆಯಬಹುದಿತ್ತು. ಎರಡೂ ಬದಿಗೂ ಎಲ್ಲಿ ನೋಡಿದಲ್ಲಿ ಮಾವಿನ ತೋಪುಗಳು, ಬಾಳೆಯ ತೆಂಗಿನ ತೋಟ ಗಳು, ಮಧ್ಯದಲ್ಲಿ ಚಿಕ್ಕ ಮನೆಗಳು. ಸುತ್ತಲೂ ಭೂಮಿಕಾಣದಂತೆ ಬೆಳೆದ ಹಸಿರು ಹುಲ್ಲು; ಎಲ್ಲಿಯೂ ನೀರಿಗೆ ಕೊರತೆ ಇಲ್ಲ— ಚಿಕ್ಕ ದೊಡ್ಡ ಹಳ್ಳ-ನದಿಗಳು. "ತೋಟಗಳ ಮಧ್ಯದಲ್ಲಿ, ಈ ಶಾಂತ ವಾತಾ ವರಣದಲ್ಲಿರುವ ಇಲ್ಲಿಯ ಜನರು ಎಂತಹ ಸುದೈವಿಗಳು!" ಎಂದುಕೊಂಡೆ. ಬಾಳೆಯ ಎಲೆಗಳು ಸುಳಿಗಾಳಿಗೆ ಅಲ್ಲಾಡುತ್ತ ಕೈಮಾಡಿ ಕರೆಯುವಂತಿ ದ್ದರೆ, ಎತ್ತರವಾಗಿ ತಲೆ ಎತ್ತಿಕೊಂಡು ನಿಂತಿದ್ದ ತೆಂಗಿನ ಮರಗಳು ನಾಡಿಗರ ಹೃದಯದ ಮಟ್ಟವನ್ನು—ದೊಡ್ಡಸ್ತಿಕೆಯನ್ನು— ತೋರಿಸು ವಂತಿದ್ದುವು. ನಾನು ಅಮೀನ್‌ಗಾಂವ ಸ್ಟೇಶನನ್ನು ತಲುಪಿದಾಗ, ಮನ ಸ್ಸಿನ್ನೂ ಆ ತೋಟಗಳ ಕಡೆಗೇ ಇತ್ತು. ಕೂಲಿಯವನು ಬಂದು ಒದ ರಿದ ನಂತರವೇ ಅರಿವಾದದ್ದು— ಇನ್ನು ಗಾಡೀ ಬಿಟ್ಟು ಇಳಿಯ ಬೇಕೆಂದು.

ಅಮೀನ್‌ಗಾಂವ ಬ್ರಹ್ಮಪುತ್ರಾ ನದಿಯ ಈಚೆಯ ದಂಡೆಗಿದೆ. ಮುಂದೆ ಗೌಹಾಟಿಗೆ ಹೋಗಬೇಕಾದರೆ ನದಿಯನ್ನು ದಾಟಿ ೪–೫ ಮೈಲು ನಡೆಯಬೇಕು. ಇಲ್ಲಿ ನದಿಗೆ ಸೇತುವೆ ಇಲ್ಲ. ಇನ್ನೂವರೆಗೆ ಕಟ್ಟುವುದು ಸಾಧ್ಯವಾಗಿಲ್ಲ. ಕಾರಣ ನದಿಯ ಅಗಲ ಮತ್ತು ಪ್ರವಾಹದ ಸೆಳವು ಬಹಳೇ ಹೆಚ್ಚಾಗಿವೆ. ಈ ಪಂಚವಾರ್ಷಿಕ ಯೋಜನೆಯಲ್ಲಿ ಬ್ರಹ್ಮ-ಪುತ್ರಾ ನದಿಯ ಸೇತುವೆಯ ರಚನೆಯೂ ಇದ್ದಿಯಂತೆ, ನೋಡಬೇಕು. ಈಗ ನದಿಯನ್ನು ದಾಟಲಿಕ್ಕೆ ರೇಲ್ವೆಯವರೇ ಸ್ಟೀಮರಿನ ವ್ಯವಸ್ಥೆ ಮಾಡಿದ್ದಾರೆ. ಇದಲ್ಲದೆ ಚಿಕ್ಕ ಚಿಕ್ಕ ನೌಕೆಗಳೂ ಸಾಕಷ್ಟಿರುತ್ತವೆ.

ಗಾಡಿಯಿಂದಿಳಿದು ನದಿಯ ದಂಡೆಗೆ ಬಂದು ಸುತ್ತಲೂ ನೋಡಿದೆ. ಸೂರ್ಯಾಸ್ತಕ್ಕೆ ಇನ್ನು ಸ್ವಲ್ಪ ಹೊತ್ತು ಮಾತ್ರ. ಹೊಂಬಿಸಿಲಿನಲ್ಲಿ ನದಿಯ ಪ್ರವಾಹ ಬಹಳ ಸುಂದರವಾಗಿ ಕಾಣುತ್ತಿತ್ತು. ಅನೇಕ ಚಿಕ್ಕ ದೊಡ್ಡ ನೌಕೆಗಳಿಂದ ನದಿಯು ತುಂಬಿದ್ದಿತೆಂದು ಹೇಳಬಹುದು. ಎಡ ಬಲಕ್ಕೆ ಹಸುರುಹುಲ್ಲಿನಿಂದ ತುಂಬಿದ ಗುಡ್ಡಗಳ ಸಾಲು; ಅವುಗಳ ಮಧ್ಯದಿಂದ ತೂರಿಕೊಂಡು ಬಂದಂತೆ ತೋರುತ್ತಿದ್ದ ಆ ನದಿ—ಅದೆಂತಹ ಮನೋಹರ ದೃಶ್ಯ! ಇಲ್ಲಿಯ ನೌಕೆಗಳದೂ ಒಂದು ವಿಚಿತ್ರವೇ: ಒಂದು ದಂಡೆಯಿಂದ ಮತ್ತೊಂದು ದಂಡೆಗೆ ಜನರನ್ನು ಸಾಗಿಸುವುದಕ್ಕೆ ಮಾತ್ರ ಇವುಗಳನ್ನು ಉಪಯೋಗಿಸುವುದಿಲ್ಲ. ನದಿಯ ದಂಡೆಗುಂಟ ಇದ್ದ ಊರುಗಳಿಗೆ ಜನರನ್ನು ಸಾಮಾನುಗಳನ್ನು ಸಾಗಿಸುವುದಕ್ಕೆ, ಸೋಟರು ಗಾದಿಗಳಂತೆ ಇವುಗಳನ್ನು ಉಪಯೋಗಿಸುತ್ತಾರೆ. ಇವುಗಳಿಗೆ ಹುಲ್ಲಿನ ಚಪ್ಪರಪಾಕೆ ಮನೆಗಳಂತೆ ಮಾಡಿ, ಅಡಿಗೆ, ಊಟ, ಕೂಡುವುದು, ಮಲಗುವುದು— ಎಲ್ಲವನ್ನೂ ಅಲ್ಲಿಯೇ ಮಾಡುತ್ತಾರೆ ಮೀನುಗಳನ್ನು ಹಿಡಿಯುವುದಕ್ಕೆ ಇವುಗಳನ್ನು ಉಪಯೋಗಿಸುವುದಂತೂ ಎಲ್ಲ ಕಡೆಗೂ ಕಂಡುಬರುವ ದೃಶ್ಯ. ವ್ಯಾಪಾರ, ಉದ್ಯಮ, ಹೋಗಿಬರುವುದು ಈ ನದಿಯಿಂದಲೇ ಸಾಧ್ಯ. ಈ ನದಿಯಿಂದಲೇ ಇಲ್ಲಿಯ ಎಲ್ಲ ಭೂಮಿ ಫಲಪ್ರದೇಶವಾಗಿದೆ. ಇಲ್ಲಿ ಮೀನು ಹಿಡಿದು ಜೀವಿಸುವ ಜನರಿಗೂ ಕಡಿಮೆ ಇಲ್ಲ. ಅಸಾಮದ ಜನರಿಗೆ ಈ ನದಿಯೇ ಸರ್ವಸ್ವವಾಗಿದೆ. ಇಜಿಪ್ತದಲ್ಲಿ ನೈಲ್ ನದಿ ಇದ್ದಂತೆ, ಇಲ್ಲಿಯ ಜನರಿಗೆ ಬ್ರಹ್ಮಪುತ್ರಾ ನದಿ. ಇನ್ನೆಲ್ಲ ಯೋಚನೆಗಳಿಂದ ಶಾಸ್ತ್ರಿ ಹೇಳುತ್ತಿದ್ದ ಕತೆ ನೆನಪಾಯಿತು— ಬ್ರಹ್ಮಪುತ್ರಾ ನದಿ ಹುಟ್ಟಿದ ರೀತಿಯ ಬಗ್ಗೆ:—

"ಹಿಂದಕ್ಕೆ ಶಂತನು ಎಂಬೊಬ್ಬ ಋಷಿ ಇದ್ದನಂತೆ. ಅವನಿಗೆ ಮಕ್ಕಳಿರಲಿಲ್ಲವಾದ್ದರಿಂದ, ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನಂತೆ. ಬ್ರಹ್ಮದೇವರ ಅನುಗ್ರಹದಿಂದ ಅವನಿಗೊಬ್ಬ ಪುತ್ರನು ಜನಿಸಿ, ಜಲ ರೂಪದಿಂದ ಕಾಣಿಸಿಕೊಂಡನು. ಶಂತನು ಋಷಿಯು ಅವನನ್ನು ಕೈಲಾಸ ಮುಂತಾದ ನಾಲ್ಕು ಶಿಖರಗಳ ಮಧ್ಯದಲ್ಲಿ ಇಟ್ಟನು. ಅದೇ 'ಬ್ರಹ್ಮ ಕುಂಡ'. ಪರಶುರಾಮನು ತಂದೆಯ ಅಪ್ಪಣೆಯ ಮೇರೆಗೆ ತಾಯಿಯನ್ನು ಕೊಲ್ಲಲು, ಮಾತೃಹತ್ಯದೋಷದ ಮೂಲಕ ಪರಶುವು ಅವನ ಕೈಗೆಯೇ ಅಂಟಿಕೊಂಡಿತು. ಎಷ್ಟು ಪ್ರಯತ್ನಿಸಿದರೂ ಬಿಡಲೇ ಇಲ್ಲ. ಆ

ದೋಷವು ಬ್ರಹ್ಮಕುಂಡದಲ್ಲಿ ಸ್ನಾನಮಾಡುವುದರಿಂದ ಹೋಗುವುದೆಂದೂ, ಅನಂತರ ಪರಶುವು ಕೈಬಿಡುವುದೆಂದೂ ಆತನ ತಂದೆಯು ಹೇಳಲಾಗಿ, ಅಮೇರೆಗೆ ಪರಶುರಾಮನು ಇಲ್ಲಿಗೆ ಬಂದು ಸ್ನಾನಮಾಡಿದನಂತರ ಪರಶುವು ಕೈಬಿಟ್ಟಿತಂತೆ. ಬ್ರಹ್ಮಪುತ್ರನು ಜನಿಸಿದ್ದು ಜನರ ಹಿತದ ಸಲುವಾಗಿ. ಪರಶುರಾಮನು ಬ್ರಹ್ಮಕುಂಡದಿಂದ ಭಾರತದವರೆಗೂ ಭೂಮಿಯನ್ನು ಪರಶುವಿನಿಂದ ಕೊರೆದು, ಬ್ರಹ್ಮಪುತ್ರನಿಗೆ ದಾರೀಮಾಡಿಕೊಟ್ಟನಂತೆ; ಅದೇ ಬ್ರಹ್ಮಪುತ್ರಾನದಿ—ಈ ನದಿಯೆಂದರೆ ಬ್ರಹ್ಮಪುತ್ರ—ಬ್ರಹ್ಮನ ಮಗ-ಆದ್ದರಿಂದ ಇದು 'ಮಹಾನದ' ಎಂದು ಕರೆಯಲ್ಪಡುತ್ತದೆ. ಎಂದರೆ ಉಳಿದೆಲ್ಲ ಗಂಗಾ ಮುಂತಾದ ನದಿಗಳು ಸ್ತ್ರೀಲಿಂಗಗಳು; ಆದರೆ ಇದು ಪುಲ್ಲಿಂಗ.'

ಉಳಿದ ಕತೆ ಎಷ್ಟು ಮಟ್ಟಿಗೆ ನಿಜವಿದೆಯೋ, ಆದರೆ ಜನರ ಹಿತದ ಸಲುವಾಗಿ ಹುಟ್ಟಿದೆಯೆಂಬುದರಲ್ಲಿ ಎಷ್ಟು ಸತ್ಯವಿದೆಯಲ್ಲ !! ಈ ಇಡೀ ಅಸಾಮಪ್ರಾಂತ ಜೀವಿಸಿದ್ದು ಈ ಬ್ರಹ್ಮಪುತ್ರ ನದಿಯಿಂದಲೇ ಅಲ್ಲವೇ? ಅಸಾಮವೆಂದರೆ Valley of Brahmaputra ಎಂದು ಹೇಳಬಹುದು.

ನನಗೆ ಬೇಗ ನದಿಯನ್ನು ದಾಟಿ ಮುಂದೆ ಮತ್ತೆ ರೈಲು ಹಿಡಿಯಬೇಕೆಂಬ ಅವಸರವೇನೂ ಇರಲಿಲ್ಲ. ಗೌಹಾಟಿಗೆ ಮಾತ್ರ ಹೋಗುವುದಿತ್ತು. ಆಚೆಯ ದಂಡೆಯಿಂದ ೪-೫ ಮೈಲು ಅಂತರ ಮಾತ್ರ ಎಂದು ಕೇಳಿದ್ದೆ. ಅಂದಬಳಿಕ ಅವಸರವೇನು ? ಸ್ಟೀಮರಿನಲ್ಲಿ ದಾಟುವುದಕ್ಕಿಂತ ನೌಕೆಯೇ ಉತ್ತಮನೆಂದುಕೊಂಡೆ. (ಇಲ್ಲಿ Boat ಗಳಿಗೆ ನೌಕೆಗಳೆಂದೇ ಕರೆಯುತ್ತಾರೆ.)

ನಮ್ಮ ನೌಕೆ ನದಿಯ ಮಧ್ಯದಲ್ಲಿ ಬಂದಾಗ, ಅಲ್ಲಿಯ ಸೌಂದರ್ಯ ಮತ್ತೂ ಹೆಚ್ಚಾಗಿತ್ತು. ಮುಳುಗುತ್ತಲಿದ್ದ ಸೂರ್ಯನ ಹೊಂಬಣ್ಣದ ಕಿರಣಗಳ ಪ್ರತಿಬಿಂಬದಿಂದ ನದಿಯ ಪ್ರವಾಹವೆಲ್ಲ ರಕ್ತವರ್ಣ ತಾಳಿತ್ತು. ಗಿಡಮರಗಳ ಹಚ್ಚ ಹಸುರಿನಿಂದ ಮುಚ್ಚಿದ ಆ ಗುಡ್ಡದ ಸಾಲುಗಳ ಮಧ್ಯದಲ್ಲಿಯ, ರಕ್ತವರ್ಣದಿಂದ ಥಳಥಳಿಸುವ ಈ ಪ್ರವಾಹ ಅದೆಷ್ಟು ಮೋಹಕ !! ಮತ್ತೆ ಶಾಸ್ತ್ರಿ ಹೇಳುತ್ತಿದ್ದದ್ದು ನೆನಪಾಯಿತು. 'ಈ ನದಿಗೆ ವೇದಕಾಲದಲ್ಲಿ 'ಲೋಹಿತ್ಯ' ಎಂದು ಹೆಸರಿತ್ತು. ಹರಿಯುವ ನೀರಿನ ಬಣ್ಣ ಕೆಂಪು ಇದ್ದದ್ದೇ ಇದಕ್ಕೆ ಕಾರಣ. ಅದು ಅಲ್ಲಿಯ ಭೂಮಿಯ ಗುಣವಿರಬಹುದು. ಆದರೆ ಪುರಾಣದ ಕತೆಯೇ ಬೇರೆ. ಪರಶುರಾಮನು ಕ್ಷತ್ರಿಯರನ್ನು ಸಂಹರಿಸಿದನಂತರ ರಕ್ತಹತ್ತಿದ ತನ್ನ ಪರಶುವನ್ನು ಈ ಹೊಳೆಯಲ್ಲಿಯೇ ತೊಳೆದನಂತೆ; ಆ ರಕ್ತದಿಂದ ಇಲ್ಲಿಯ ನೀರು ಕೆಂಪಾಯಿತಂತೆ.

ನಮ್ಮ ನೌಕೆ ದಕ್ಷಿಣ ದಂಡೆಯನ್ನು ತಲುಪಿದಾಗ ಸೂರ್ಯಾಸ್ತವಾಗಿತ್ತು. ಮುಂದೆ ಕಾಣುತ್ತಿದ್ದ ಗುಡ್ಡದ ಸಾಲುಗಳೀಗ ಕಪ್ಪು ನೀಲಿಯ ಛಾಯೆಯನ್ನು ತಾಳಿದ್ದುವು. ಅವುಗಳನ್ನು ನೋಡಿದ ಕೂಡಲೆ ಶಾಸ್ತ್ರಿ ಹೇಳುತ್ತಿದ್ದ ನೀಲಾಚಲದ ನೆನಪಾಯಿತು. ಗೌಹಾಟಿಯಿಂದ ೨-೩ ಮೈಲು ಅಂತರದಲ್ಲಿ ಒಳ್ಳೇ ಪವಿತ್ರವಾದ ಕಾಮಾಕ್ಷಿಯ ಮಂದಿರವಿದ್ದ ನೀಲಾಚಲವಿದೆ. ಆದರೆ ಈ ಗುಡ್ಡಗಳ ಸಾಲುಗಳಲ್ಲಿ ಅದೆಲ್ಲಿರಬಹುದು ? ನೌಕೆಯಲ್ಲಿದ್ದ ೭-೮ ಜನರನ್ನು ಕೇಳಿದೆ—'ನೀಲಾಚಲ ಎಲ್ಲಿದೆ'ಯೆಂದು. ಆದರೆ ಒಬ್ಬರಿಗೂ ಗೊತ್ತಿದ್ದಂತೆ ತೋರಲಿಲ್ಲ. ಎಷ್ಟೋ ದೂರದಲ್ಲಿದ್ದ ಶಾಸ್ತ್ರಿಗೆ ಕೂಡ ಗೊತ್ತಿದ್ದ ಈ ನೀಲಾಚಲ, ಇಲ್ಲಿಯ ಜನರಿಗೇನೇ ಗೊತ್ತಿಲ್ಲವಲ್ಲ—ಎಂದು ಆಶ್ಚರ್ಯವಾಯಿತು.

ನದಿಯನ್ನು ದಾಟಿ ಪಾಂಡುಘಾಟಿನಲ್ಲಿ ಇಳಿದೆ. ಅಲ್ಲಿಂದ ನಾಲ್ಕು ಮೈಲು ಗೌಹಾಟಿಗೆ ಟ್ಯಾಕ್ಸಿಯಲ್ಲಿ ಹೋಗಬೇಕು. ಇಲ್ಲವೇ ರೈಲಿನಿಂದಲೂ ಹೋಗಬಹುದು. ದಾರಿಯು ಗುಡ್ಡಗಳ ಮಧ್ಯದಲ್ಲಿಯೇ; ಎಡಬಲಕ್ಕೆ ಗುಡ್ಡಗಳ ಸಾಲು; ಗುಡ್ಡಗಳ ಆಚೆ ಬ್ರಹ್ಮಪುತ್ರನದಿ; ಅದರ ಆಚೆ ಮತ್ತೆ ಗುಡ್ಡಗಳ ಸಾಲು. ಅಸಾಮದಲ್ಲಿ ಅದೊಂದು ಗಾದೆಯ ಮಾತೇ ಆಗಿದೆ— ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಕನಿಷ್ಟ ಒಂದು ಗುಡ್ಡ ಒಂದು ನದಿಯನ್ನು ದಾಟಲೇಬೇಕು.

ಪಾಂಡುಘಾಟಿನಿಂದ ನಾವು ೨ ಮೈಲು ಬಂದಿರಬಹುದು; ರಸ್ತೆಯಿಂದ ಒಂದು ಚಿಕ್ಕದಾರಿ ಗುಡ್ಡಗಳ ಕಡೆಗೆ ಹೋಗಿದ್ದು, ಅಲ್ಲಿ 'To Kamakshya—ಕಾಮಾಕ್ಷ್ಯಕ್ಕೆ' ಎಂಬ ಬೋರ್ಡು ಇದ್ದದ್ದು ಕಣ್ಣಿಗೆ ಬಿದ್ದಿತು. ನಾನೊಳ್ಳೇ ಆಶ್ಚರ್ಯದಿಂದ ಡ್ರೈವ್ವರನನ್ನು ಕೇಳಿದೆ: 'ಇದೇ ಕಾಮಾಕ್ಷ್ಯ ಮಂದಿರಕ್ಕೆ ಹೋಗುವ ದಾರಿಯೇ ?' ಎಂದು ಅಹುದೆಂದು ಗೋಣು ಅಲ್ಲಾಡಿಸಿ, ಗುಡ್ಡದ ಮೇಲಿನ ಒಂದು ಗುಡಿಯನ್ನು ತೋರಿಸಿ, ಅದೇ 'ಕಾಮಾಕ್ಷ್ಯ' ಮಂದಿರವೆಂದು ಹೇಳಿದ. ನಾನು ಮತ್ತೆ ಕೇಳಿದೆ; 'ಹಾಗಾದರೆ ಇದೇ ನೀಲಾಚಲನೇ ?' ಎಂದು. ಅವನು ನನ್ನ ಕಡೆಗೆ ಆಶ್ಚರ್ಯದಿಂದ ನೋಡಿ 'ಅದು ನನಗೆ ಗೊತ್ತಿಲ್ಲ. ಆದರೆ ಇಲ್ಲಿ ಮೇಲೆ ಕಾಮಾಕ್ಷ್ಯ ಮಂದಿರವಿದೆ ಎಂಬುದೊಂದು ಗೊತ್ತು' ಎಂದು ಹೇಳಿದ.

ಗೌಹಾಟಿಯು ಸಮೀಪಿಸಿತ್ತು. ಕತ್ತಲೆಯೂ ಆಗುತ್ತ ಬಂದಿತ್ತು. ರಾತ್ರಿಯಲ್ಲಿ ಹೋಗುವುದಾದರೂ ಎಲ್ಲಿಗೆ ? ಟ್ಯಾಕ್ಸಿಡ್ರೈವ್ವರನೇ ತೋರಿಸಿದ ಒಂದು ಹೋಟೆಲ್ಲಿನಲ್ಲಿ ಇಳಿದುಕೊಂಡೆ. ಸ್ನಾನ, ಊಟ ಮುಗಿಸಿಕೊಂಡು ಹೊರಗೆ ಬಾಲ್ಕನಿಗೆ ಬಂದಾಗ, ರಾತ್ರಿ ೯ ಗಂಟೆಯಾಗಿತ್ತು. ಹೊರಗೆ ಹುಣ್ಣಿವೆಯ ಶುಭ್ರ ಬೆಳುದಿಂಗಳು ಇರಲಿಲ್ಲ, ಅಮಾವಾಸ್ಯೆಯ ಕಗ್ಗತ್ತಲೆಯೂ ಇರಲಿಲ್ಲ. ಬ್ರಹ್ಮಪುತ್ರಾ ನದಿಯ ಪ್ರವಾಹ—ಎಡಬಲಕ್ಕೆ ನದಿಯ ಆಚೆಯ ದಂಡೆಗಿದ್ದ ಗುಡ್ಡಗಳ ಸಾಲುಗಳು,— ತಿಂಗಳಿನ ಮಂದಪ್ರಕಾಶದಲ್ಲಿ ಕಪ್ಪು ಛಾಯೆಗಳಂತೆ ತೋರುತ್ತಿದ್ದುವು. ಎಡಕ್ಕೆ ನೀಲಾಚಲಪರ್ವತ ಹೊರಳಿ ಸೋಡಿವೆ. ಗುಡ್ಡದ ಮೇಲೆ ಅಲ್ಲಲ್ಲಿ ದೀಪಗಳು ಕಾಣುತ್ತಿದ್ದುವು. ಮನೆಗಳಿದ್ದರೂ ಇರಬಹುದು. ಕಾಮಾಕ್ಷ್ಯ ಮಂದಿರವು ಮಸಕಾಗಿ ಕಾಣುತ್ತಿತ್ತು. ಶಾಸ್ತ್ರಿ ಹೇಳಿದ ಮಾತು ನೆನಪಾಯಿತು: 'ನೀನು ಸುದೈವಿಯೆಂದು ತಿಳಿದುಕೊಳ್ಳು; ಸತಿಯ ಜನನೇಂದ್ರಿಯವು ಬಿದ್ದ ನೀಲಾಚಲದ ಹತ್ತಿರನೇ ನೀನು ಹೋಗುತ್ತಿರುವಿ. ಅಲ್ಲಿಯೇ ನರಕಾಸುರನು ಕಟ್ಟಿ ಪೂಜಿಸಿದ ಕಾಮಾಕ್ಷ್ಯ ಪುರಾತನ ಮಂದಿರವಿದೆ. ಭಾರತದ ೫೧ ಪುಣ್ಯಕ್ಷೇತ್ರಗಳಲ್ಲಿ ಇದು ಬಹು ಮುಖ್ಯವಾದದ್ದು.

ಇದೊಂದು ವಿಚಿತ್ರವಾದ ಸಂಗತಿ— 'ನರಕಾಸುರ–ಅವನು ದೈತ್ಯ. ಎಲ್ಲ ಜನರನ್ನು ಪೀಡಿಸಿ, ಸಾವಿರಾರು ಸುಂದರ ತರುಣಿಯರನ್ನು ಬಂಧಿಸಿ, ಇಟ್ಟಿದ್ದನಂತೆ. ಕೃಷ್ಣನು ಅವನನ್ನು ಸಂಹರಿಸಿ, ಅವರನ್ನೆಲ್ಲ ಮುಕ್ತಮಾಡಿದನಂತೆ. ದೀಪಾವಳಿಯ ಹಬ್ಬದ ಪ್ರಾರಂಭ ನರಕಚತುರ್ದಶಿಯಿಂದ—ಈ ನರಕಾಸುರನನ್ನು ಕೊಂದ ನೆನಪಿಗಾಗಿ' ಇದು ನನಗೆ ತಿಳಿದ ವಿಷಯ. 'ಅಂತಹ ನರಕಾಸುರ ಕಾಮಾಕ್ಷಿಯ ಪೂಜಕನು ಹೇಗೆ ಆದ? ಈ ನರಕಾಸುರನನ್ನು ದೈತ್ಯನೆಂದಾದರೂ ಹೇಗೆ ಕರೆಯಬೇಕು? ಇವನ ತಾಯಿ ಪೃಥ್ವಿ; ತಂದೆ ವಿಷ್ಣು. ವರಾಹಾವತಾರದಲ್ಲಿ ಹಿರಣ್ಯಾಕ್ಷನನ್ನು ಸಂಹರಿಸಿ ಪೃಥ್ವಿಯನ್ನು ತರುವಾಗ, ವಿಷ್ಣುವಿನೊಂದಿಗಾದ ಸಂಪರ್ಕದ ಫಲವಾಗಿ ಪೃಥ್ವಿಯ ಉದರದಲ್ಲಿ ಈ ನರಕಾಸುರನು ಹುಟ್ಟಿದ್ದು. ಭೂಮಿಯ ಮಗನಾದ್ದರಿಂದ ಇವನನ್ನು ಭೌಮನೆಂದೂ ಕರೆಯುತ್ತಾರೆ. ಇವನ ಸಾಕು-ತಂದೆ ಜನಕ ಮಹಾರಾಜ. ಇವನ ಉಪನಯನ ಮುಂತಾದ ಸಂಸ್ಕಾರಗಳು ಕ್ಷತ್ರಿಯರಿಗನುರೂಪವಾಗಿ ನಡೆದುವು. ಮಹಾಭಾರತದಲ್ಲಿ ಪೃಥ್ವಿಯ ಪ್ರಾರ್ಥನೆಯ ಮೇರೆಗೆ ಶ್ರೀಕೃಷ್ಣನು ಇವನಿಗೆ ವೈಷ್ಣವಾಸ್ತ್ರವನ್ನು ದಯಪಾಲಿಸಿದ್ದನೆಂದು ಉಲ್ಲೇಖವಿದೆ. ಇಂತಹ ನರಕಾಸುರನು ದೈತ್ಯನೆಂದು ಹೇಗೆ ಗಣಿಸಲ್ಪಡುತ್ತಾನೆ? ಒಂದು ವೇಳೆ ದೈತ್ಯನೇ ಆದರೆ, ಕಾಮಾಕ್ಷಿಯ ಪೂಜಕನು ಹೇಗೆ ಆಗುತ್ತಾನೆ? ಒಂದಕ್ಕೊಂದು ಸಂಬಂಧವೇ ಇಲ್ಲ.

ಬಗೆಹರಿಯದ ಈ ಯೋಚನೆಗಳು ಒಂದರ ಮೇಲೊಂದು ಬಂದು ಮನಸ್ಸು ಉದ್ವಿಗ್ನಗೊಂಡಂತಾಯಿತು. ಈ ಎಲ್ಲ ವಿಷಯ ಮರೆಯಬೇಕೆಂದರೂ ಸಾಧ್ಯವಾಗಲೇ ಇಲ್ಲ, ಅಷ್ಟರಲ್ಲಿ ನನ್ನ ಹತ್ತಿರದ ಕೋಣೆಯಲ್ಲಿದ್ದವರೂ ಊಟ ತೀರಿಸಿಕೊಂಡು ಬಾಲ್ಕನಿಗೆ ಬಂದರು. ಅವರು ಕಲಕತ್ತೆಯಿಂದ ಏನೋ ಕೆಲಸದ ನಿಮಿತ್ತವಾಗಿ ಬಂದವರು. ನಾನು ಅವರನ್ನು ಸಹಜವಾಗಿ ಕೇಳಿದೆ: 'ಕಾಮಾಕ್ಷಿಯ ಮಂದಿರಕ್ಕೆ ಹೋಗಿದ್ದೀರಾ?' ಎಂದು. ಅಷ್ಟು ಕೇಳಿದ್ದೇ ತಡ, ಅವರು ತಮ್ಮ ಕತೆಯನ್ನೇ ಪ್ರಾರಂಭಿಸಿದರು:

'ನೋಡಿ, ನಾನು ೩–೪ ತಿಂಗಳ ಮೊದಲು ಇದೇ ಕೆಲಸಕ್ಕಾಗಿ ಇಲ್ಲಿಗೆ ಬಂದಿದ್ದೆ. ಆದರೆ ಕೆಲಸ ಮುಗಿದನಂತರ ಕಾಮಾಕ್ಷಿಯ ಗುಡಿಗೆ ಹೋಗದೆ ಹಾಗೆಯೇ ಕಲಕತ್ತೆಗೆ ಹೋದೆ. ಮುಗಿದುಹೋಗಿದೆಯೆಂದು ಭಾವಿಸಿದ ಆ ಕೆಲಸ ಮತ್ತೆ ಮೊದಲಿನಿಂದಲೂ ಪ್ರಾರಂಭವಾಗಿ, ಮೂರೇ ತಿಂಗಳಲ್ಲಿ ನಾನು ಮತ್ತೆ ಇಲ್ಲಿಗೆ ಬರಬೇಕಾಯಿತು. ಕಾಮಾಕ್ಷಿಯ ದರ್ಶನ ತೆಗೆದುಕೊಳ್ಳದೆ ಹೋದದ್ದಕ್ಕಾಗಿಯೇ ನಾನು ಮತ್ತೆ ಬರಬೇಕಾಯಿತೆಂದು ನನ್ನ ಹೆಂಡತಿಯು ಹೇಳಿದಳು.' ಇದು ಒಳ್ಳೇ ಜಾಗೃತ ದೇವಸ್ಥಾನ. ಬೇಕಾದವರಿರಲಿ, ದರ್ಶನ ತೆಗೆದುಕೊಳ್ಳದೆ ಹಾಗೆಯೇ ಹೋದಲ್ಲಿ, ಅವರು ಮತ್ತೆ ಇಲ್ಲಿ ಬರಲೇ ಬೇಕಾಗುತ್ತದೆ. ಆದ್ದರಿಂದ ಈ ಸಾರಿ ನಾನಿಲ್ಲಿಗೆ ಬಂದ ಮರುದಿವಸವೇ, ಎಲ್ಲ ಕೆಲಸ ಬಿಟ್ಟು ಆ ದೇವಸ್ಥಾನಕ್ಕೆ ಹೋದೆ. ಹೋದ ಸಲ ಹಾಗೆಯೇ ಹೋದ ತಪ್ಪಿಗಾಗಿ, ಈ ಸಾರಿ ಎರಡು ಆಡುಗಳ ಬಲಿಯನ್ನು ಕೂಡ ಕೊಡುತ್ತೇನೆಂದು ಬೇಡಿಕೊಂಡು ಬಂದಿದ್ದೇನೆ.'

ಈ ಇಪ್ಪತ್ತನೆಯ ಶತಮಾನದಲ್ಲಿ ಸಹ ಒಳ್ಳೇ ಸುಸಂಸ್ಕೃತ ನೆಂಬಂತೆ ತೋರುತ್ತಿದ್ದ ಈ ಗೃಹಸ್ಥ, ಅನಾಗರಿಕರಂತೆ ಪ್ರಾಣಿಗಳ ಬಲಿಕೊಡುವುದನ್ನು ಮಾತನಾಡುತ್ತಿದ್ದುದು ನನಗೊಳ್ಳೇ ಆಶ್ಚರ್ಯವನ್ನುಂಟುಮಾಡಿತು. 'ನಿಮಗೂ ಸಹ ಇದರಲ್ಲಿ ವಿಶ್ವಾಸವಿದೆಯೇ?' ಎಂದು ಕೇಳಿದೆ.

'ನೀವು ಇಲ್ಲಿಗೆ ಹೊಸಬರೆಂಬಂತೆ ತೋರುತ್ತದೆ' ಎಂದು ಆತನೆಂದ. 'ಕಾಮಾಕ್ಷಿಯು ಬಲಿ ಇಲ್ಲದ ಯಾವ ಪೂಜೆಯನ್ನೂ ಸ್ವೀಕರಿಸುವುದೇ ಇಲ್ಲ. ಅದರಲ್ಲಿಯೂ ಕೆಲವು ಪ್ರಾಣಿಗಳ ಮೇಲೆ ಅವಳಿಗೆ ಬಹಳ ಇಷ್ಟ. ಈ ಗುಡಿಯನ್ನು ಕಟ್ಟಿಸಿದಾಗ—ಮುಸಲ್ಮಾನರು ಹಾಳುಮಾಡಿದನಂತರ ಇದನ್ನು ನರನಾರಾಯಣನೆಂಬ ಅರಸನು ೧೬ನೆಯ ಶತಮಾನದಲ್ಲಿ ಮತ್ತೆ ಕಟ್ಟಿಸಿದನಂತೆ— ೧೪೦ ನರಬಲಿಗಳನ್ನು ಕೊಟ್ಟರಂತೆ. ಈಗ ದಿನಾಲೂ ಪೂಜೆಯ ಕಾಲಕ್ಕೆ ಎಷ್ಟೋ ಪ್ರಾಣಿಗಳ ಬಲಿಕೊಡುವುದು ನಡೆದೇ ಇರುತ್ತದೆ.'

ಪ್ರಾಣಿಗಳ ಬಲಿಕೊಡುವುದೆಂದೊಡನೆ ಮೈ ಜುಮ್ಮೆಂದಿತು. ನಾನು ಚಿಕ್ಕವನಿದ್ದಾಗಿನ ಸಂಗತಿಯೊಂದು ನೆನಪಿಗೆ ಬಾರದೆ ಇರಲಿಲ್ಲ.

'ಆಗ ನನಗೆ ೭–೮ ವರ್ಷ ವಯಸ್ಸಿರಬಹುದು. ನಮ್ಮ ಹಳ್ಳಿಯಲ್ಲಿ, ಮೈಲಿಬೇನೆ, ಕಾಲೆರಾ ಒಂದರ ಹಿಂದೊಂದು ಬಂದು ಬಹಳೇ ಜನರು ಸತ್ತರು. ಆಗ ಎಲ್ಲರ ಬಾಯಲ್ಲಿಯೂ ಒಂದೇ ಮಾತು ಕೇಳ ಬರುತ್ತಿತ್ತು:— 'ಹೋದ ವರ್ಷ ಬಿಟ್ಟಾಗಲೇ ನನಗೆನಿಸಿತ್ತು–ನಮ್ಮ ಹಳ್ಳಿಗೆ ಏನೋ ಒಂದು ಆಪತ್ತು ಕಾದಿದೆಯೆಂದು. ಈ ಸಾರಿಯೂ ಜಾತ್ರೆಯನ್ನು ಮಾಡದಿದ್ದರೆ ದ್ಯಾಮವ್ವನು ಇಡೀ ಹಳ್ಳಿಯನ್ನೇ ಮುಗಿಸಿಬಿಡುತ್ತಾಳೆ.' ಮತ್ತೊಬ್ಬ— 'ಈಗ ೫ ವರ್ಷಗಳಾದುವು' ಜಾತ್ರೆಯೇ ಇಲ್ಲ. ಪೂಜಾರಿಯ ಕನಸಿನಲ್ಲಿ ಮೊನ್ನೆ ಹೇಳಿದಳಂತೆ— 'ನಾನು ಹಸಿದಿದ್ದೇನೆ. ೫ ವರ್ಷದ ಎಲ್ಲ ಆಹಾರಗಳನ್ನು ನನಗೀಗ ಕೊಡದಿದ್ದರೆ ನಿನ್ಮೆಲ್ಲರನ್ನೂ ತಿಂದು ನನ್ನ ಹಸಿವನ್ನು ಹಿಂಗಿಸಿಕೊಳ್ಳುತ್ತೇನೆ' ಎಂದು. ಇನ್ನೊಬ್ಬ— 'ಅಹುದು, ಎಷ್ಟೋ ಜನರು ಬೇಡಿಕೊಂಡು ಬಲಿಕೊಡಬೇಕಾದ ಎಲ್ಲ ಕೋಳಿ-ಆಡುಗಳನ್ನು ಹಾಗೆಯೇ ಇಟ್ಟುಕೊಂಡು ಕುಳಿತಿದ್ದಾರೆ....' ಮುಂ.

ಹೀಗೆಯೇ ಎಷ್ಟೋ ಸುದ್ದಿಗಳು ಹಬ್ಬಿ, ಕಡೆಗೆ ಗೌಡ ಶಾನುಭೋಗರೊಂದಿಗೆ ಮಾತನಾಡಿ, ಆ ವರ್ಷ ಜಾತ್ರೆಮಾಡುವುದನ್ನು ನಿಶ್ಚಯಿಸಿದರು. ಜಾತ್ರೆಯ ದಿನ ಸಮೀಪಿಸಿದಂತೆ ಊರಲ್ಲಿ ಎಲ್ಲ ಕಡೆಗೆ ಉತ್ಸಾಹ ಕಂಡು ಬರುತ್ತಿತ್ತು. ಜಾತ್ರೆಯ ಉತ್ಸಾಹಕ್ಕಿಂತ ತಾವೆಲ್ಲ ಈ ಪಿಡುಗುರೋಗಗಳಿಂದ ಮುಕ್ತರಾಗುವೆವೆಂಬ ಆಶೆಯೇ ಜನರಲ್ಲೆಲ್ಲ ಉತ್ಸಾಹ ತಂದಿರಬೇಕು.

ಜಾತ್ರೆಯ ಮುನ್ನಾದಿನ ತಾವು ೫ ವರ್ಷಗಳಿಂದಲೂ ಬೇಡಿ ಕೊಂಡ ಕುರಿ-ಕೋಳಿಗಳೊಂದಿಗೆ ಜನರು ತಯಾರಾಗಿದ್ದರು. ಒಂದು ಕೋಣವನ್ನೂ ಬಲಿಕೊಡುವುದಿತ್ತು. ಆದರೆ ಜಾತ್ರೆಯ ದಿನ ಮುಂಜಾನೆ ವಾತಾವರಣವೇ ಬದಲಾಯಿತು. ಕೆಲಸದ ನಿಮಿತ್ತ ವಾಗಿ ಬೇರೆ ಊರಿಗೆ ಹೋಗಿದ್ದ ಜಹಗೀರ್‌ದಾರರು ಅಂದು ಮುಂಜಾನೆ ಊರಿಗೆ ಬಂದರು. ಜಾತ್ರೆಯಲ್ಲಿ ಭಾಗವಹಿಸಲು ಅವರೂ ಅಣಿ ಯಾದರು. ಅದರೆ ಯಾವ ಪ್ರಾಣಿಗಳ ಬಲಿಯನ್ನೂ ಕೊಡಲಾಗ ದೆಂದು ಗಟ್ಟಿಯಾಗಿಯೇ ಹೇಳಿದರು. ಇದರಿಂದಾಗಿ ಊರತುಂಬೆಲ್ಲ ದೊಡ್ಡ ಗೊಂದಲವೆದ್ದಿತು. ದೊಡ್ಡ ದೊಡ್ಡ ಪಂಡಿತರನ್ನು ಕರೆಯಿಸ ಲಾಯಿತು. ಹತ್ತಿರದ ಊರ ಪ್ರಮುಖ ಜನರು ಮತ್ತು ಕೆಲವು ಕಾಂಗ್ರೆಸ್ ಮುಖಂಡರೂ ಬಂದು, ಸಂಜೆ ೫ ಗಂಟೆಯವರೆಗೂ ತಿಕ್ಕಾಟ ಗೊಂದಲ ನಡೆದು, ಪ್ರಾಣಿಗಳ ಬಲಿಕೊಡುವುದನ್ನು ರದ್ದು ಗೊಳಿಸಲಾಯಿತು. ಆ ಪ್ರಾಣಿಗಳನ್ನು ಕೊಲ್ಲುವಾಗ ಅವುಗಳೆಷ್ಟು ಒದ್ದಾಡುವುವೊ ! ಎಷ್ಟು ಒದರಿಕೊಳ್ಳುತ್ತವೆಯೋ ! ಆ ಹರಿಯುವ ರಕ್ತ..... ಅವುಗಳನ್ನೆಲ್ಲ ನೆನಿಸಿಕೊಳ್ಳುವುದೇ ಅಸಾಧ್ಯವೆನಿಸಿ, ಹೊರಗೆ ಬಂದರೆ ಅದೆಲ್ಲಿ ಕಣ್ಣಿಗೆ ಬೀಳುವುದೋ ಎಂದು ನಾನು ಅವೊತ್ತು ಮುಂಜಾನೆಯಿಂದ ಮನೆಯಲ್ಲಿಯೇ ಉಳಿದುಕೊಂಡಿದ್ದೆ. ಬಲಿ ಕೊಡುವುದು ರದ್ದಾಯಿತೆಂದು ಗೊತ್ತಾದ ಬಳಿಕ ಹೊರಗೆ ಬಂದೆ. ವಿಚಿತ್ರವೆಂದರೆ ಜಾತ್ರೆಯನಂತರ ಬೇನೆ ಕಡಿಮೆಯಾಗುತ್ತ ಮುಂದೆ ಒಂದೇ ತಿಂಗಳಲ್ಲಿ ಇದೇ ಹಳ್ಳಿಯು ಸಂಪೂರ್ಣವಾಗಿ ರೋಗಮುಕ್ತ ವಾಯಿತು. ಅಂದಿನಿಂದಲೂ ತಪ್ಪದೆ ಪ್ರತಿವರ್ಷ ದ್ಯಾಮವ್ವನ ಜಾತ್ರೆ ಮಾಡುತ್ತಾರೆ; ಆದರೆ ಬಲಿಕೊಡುವುದನ್ನು ಮಾತ್ರ ಸಂಪೂರ್ಣವಾಗಿ ನಿಲ್ಲಿಸಿದ್ದಾರೆ.'

ಕಾಮಾಕ್ಷ್ಯ ಮಂದಿರದಲ್ಲಿ ದಿನಾಲು ಇದೇ ರೀತಿ ಪ್ರಾಣಿಗಳ ಬಲಿಕೊಡುವುದು ನಡೆಯುತ್ತಿದ್ದರೆ ಅಲ್ಲಿಗೆ ಹೋಗುವುದು ಹೇಗೆ ? ಶಾಸ್ತ್ರಿಯ ಮಾತು ಕೇಳಿಕೊಂಡು ನಾನು ನಿರ್ಧರಿಸಿದ್ದೆ: ಇಲ್ಲಿಗೆ ಬಂದ ಕೂಡಲೇ ಮೊದಲು ಕಾಮಾಕ್ಷಿಯ ಮಂದಿರಕ್ಕೆ ಹೋಗಿ ಬರ ಬೇಕೆಂದು. ಆದರೆ ಈಗ ಅದನ್ನು ಬದಲಿಸಬೇಕಾಯಿತು. ಅದರ ಬಗ್ಗೆ ಸಂಪೂರ್ಣವಾಗಿ ಗೊತ್ತುಮಾಡಿಕೊಂಡು ಅನಂತರ ಹೋಗ ಬೇಕೆಂದು ನಿಶ್ಚಯಿಸಿದೆ.

ನನ್ನ ಸಂಗಡ ನಿಂತವರು ಕೇಳಿದರು: 'ಏನು ಯೋಚನೆ ಮಾಡುತ್ತಿದ್ದೀರಿ ?' ಎಂದು.

ಕೂಡಲೆ ಅವರ ಜೊತೆಗೆ ಮಾತನಾಡುತ್ತ ನಿಂತದ್ದು ಅರಿವಾಗಿ ಹೇಳಿದೆ: 'ಯೋಚನೆ ಎನೂ ಇಲ್ಲ. ಪ್ರವಾಸದ ದಣಿವಿನಿಂದ ನಿದ್ದೆ ಬಂದಂತಾಗಿದೆ. ನಾಳೆ ಬೆಳಗ್ಗೆ ನಿಮ್ಮನ್ನು ಕಾಣುತ್ತೇನೆ' ಎಂದು ಹೇಳಿ ಕೋಣೆಗೆ ಬಂದೆ. ಈ ಪುರಾತನ ಮಂದಿರ, ಅದರಲ್ಲಿ ನಡೆ ಯುವ ಈ ಪ್ರಾಣಿಹಿಂಸೆ ಇವುಗಳೇ ನನ್ನ ತಲೆಯಲ್ಲಿ ತುಂಬಿದ್ದುವು. ಮರುದಿವಸ ಸಂಪೂರ್ಣವಾಗಿ ಇದರ ಬಗ್ಗೆ ತಿಳಿದುಕೊಳ್ಳಬೇಕೆಂದು ನಿಶ್ಚಯಿಸಿ ಮಲಗಿಕೊಂಡೆ. ○

ತರ್ಪಣ

ಸೌ. ಪಾರ್ವತಿದೇವಿ ಹೆಗಡೆ

'ಇಲ್ಲಿ ನಡೆದಾಡಿದರು ಶ್ರೀರಾಮ ಸೀತೆಯರು'
'ತನ್ನ ಕೊಡಲಿಯ ತೊಳೆದ ಪರಶುರಾಮನು ಇಲ್ಲಿ'
'ಶಿವ ಕಾಲಕೂಟವನು ಕುಡಿದು ಇಲ್ಲಿಯೇ ತಂಗಿದ್ದ'
'ಈ ತೀರ್ಥದಲಿ ಮಿಂದು ಪಾಪಿ ಪಡೆದನು ಮುಕ್ತಿ'
ಇದುವೆ ಪಲ್ಲವಿ—
ಪಲ್ಲವಿಗೆ ಉಂಟು ಗೀತ:
ನ್ಯಗ್ರೋಧದಲ್ಲಿಹ ಮರದ ಹಾಗೆ
'ಕಾಸು ಇಡು'
ಅರದ ಪಿಪಾಸೆ ಅದು

೨

ದೇವತೆಗೆ ಬಂಗಾರದ ಮುಖ,
ವಜ್ರದ ಕಿರೀಟ, ರತ್ನದ ಕಣ್ಣು,
ಲಕ್ಷ ನಂದಾದೀಪ—
ಈ ಪರಿಯ ಸೊಬಗು ನಾನಾವ ದೇವರೊಳು ಕಾಣೆ
ಅರ್ಚಕಸ್ಯ ತಪೋಬಲಂ
ನೈಪುಣ್ಯ ಸಿದ್ಧಿಸಿದ ಈ ಅರ್ಚಕನು
ತನ್ನ ಮನಸನೆ ಬಟ್ಟೆ ಮಾಡಿ ಸುತ್ತಿಕೊಂಡಿರಬಹುದು.
ಅದು ಮಡಿವಸ್ತ್ರ
ನೀರೊಳದ್ದುವವರೆಗು ದೇವಪೂಜೆಗೆ ಬಹುದು.

೩

ಆ ಸಂಗಮ
ಆ ದೇಗುಲ
ಆ ವೃಕ್ಷ
ಅರ್ಥವಿರಹಿತವಾದ ಸಂಕೇತದೊಲು ಶೂನ್ಯ

೪

ಭಾರತದ ಸಂಸ್ಕೃತಿಯೆ
ಮ್ಲೆಂಛರಾರೂ ನಿನ್ನ ಹೀಗೆ ಕಾಡಿರಲಿಲ್ಲ;
ಇವನು ನಿನ್ನವನು—
ಧೂಸದ ಹೊಗೆಯ ಹಾಕಿ ನಿನ್ನ ಕೊಂದನು.
ಸಂಭ್ರಮದಲಿ ಸಾಗಿದೆ ಅಂದಿನಿಂದ
ನಿನ್ನ ಶ್ರಾದ್ಧವಿಧಿ
ಕಣ್ಣೀರಿನ ತರ್ಪಣ. ○

ಹೊಸಗನ್ನಡದಲ್ಲಿಯ ಒಂದು ಉತ್ತಮ ಕಥಾಸಂಕಲನ

ಶ್ರೀ. ಯಶವಂತ ಚಿತ್ತಾಲ ಅವರ

ಸಂದರ್ಶನ

ನಾಡಿನ ಹಿರಿಯ ಸಾಹಿತಿಗಳು ಇದನ್ನು ಬರಮಾಡಿಕೊಂಡ ರೀತಿ ಇಲ್ಲಿದೆ:

" .....ಬರವಣಿಗೆ ನನಗೆ ಮೆಚ್ಚುಗೆಯಾಗುವ ರೀತಿಯದು. ಎಂದರೆ ಜೊತೆಯ ಜೀವದ ಜೀವನದಲ್ಲಿ ಸಹಾನುಭೂತಿಯಿಂದ ಬೆರೆತು ಅದರ ಸಂಗತಿಯನ್ನು ಬೇರೆ ಜೀವಕ್ಕೆ ತಿಳಿಸುವ ಆಸೆಯದು. ಸಾಹಿತ್ಯ ಹಲವು ರೀತಿಯಲ್ಲಿ ಉದಿಸಬಲ್ಲದು. ಆದರೆ ಅದು ಹೀಗೆ ಉದಯಿಸಿದಾಗ ಅದು ಸಾಹಿತ್ಯವೆಂಬ ಕರ್ಮದ ಅತ್ಯುತ್ತಮ ಲಕ್ಷ್ಯವನ್ನು ಸಾಧಿಸ ಹೊರಟಿರುತ್ತದೆ ಎಂದು ನನ್ನ ತಿಳಿವಳಿಕೆ.....ಕೆಲಸ ತುಂಬ ಚೆನ್ನಾಗಿದೆ....."

—ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಂಗಳೂರು

".....ಇದು (ಲೇಖಕರ) ಪ್ರಥಮ ಕೃತಿ ಎಂದು ತಿಳಿಸಲಾಗಿದೆ. ಕಥೆಗಳನ್ನು ನೋಡಿದರೆ ಅದನ್ನು ಕಲ್ಪಿಸಿಕೊಂಡ ಮನಸ್ಸು-ಅದನ್ನು ಕಾಗದಕ್ಕೆ ಇಳಿಸಿದ ಕೈ ಎರಡೂ ತುಂಬ ಪಳಗಿದಂತೆ ಭಾಸವಾಗುತ್ತದೆ. ಕಥೆಗಳನ್ನು ಓದಿ ನನ್ನ ಮನಸ್ಸಿಗೆ ತುಂಬ ಉಲ್ಲಾಸವಾಗಿದೆ....."

—ಅ. ನೀತಾರಾವ್ (ಅನಂದ), ಮೈಸೂರು

".....ಕಥಾನಿರೂಪಣೆಯೊಳಗಿನ ಔಚಿತ್ಯ, ಸಂಯಮ ಎರಡೂ ಅಭಿನಂದನಾರ್ಹವಾಗಿವೆ. ಇವೆಲ್ಲ (ಲೇಖಕರ) ಹೃದಯಸಂಸ್ಕಾರಗಳ ಸಾಕ್ಷಿ. ನೀತಿಯ ಪ್ರಚಾರಕ್ಕಾಗಿ ಹೊರಟ ಆವೇಶವು ಎಲ್ಲಿಯೂ ಇಣಿಕಿಲ್ಲ. ಇವೆಲ್ಲ ಸಂಗತಿಗಳು....ಉಜ್ವಲ ಭವಿಷ್ಯತ್ತಿಗೆ ಕಾರಣವಾಗದೇ ಇರಲಾರವು....."

—ಶಂ. ಬಾ. ಜೋಶಿ, ಧಾರವಾಡ

".....ಕತೆಗಳನ್ನು ಬಹಳ ಕುತೂಹಲದಿಂದ ಓದಿದೆ. ಒಟ್ಟಿನಲ್ಲಿ ಅವುಗಳ ಕಥನಕಲೆ ನನ್ನ ಮನಸ್ಸನ್ನು ಸೆರೆಹಿಡಿಯಿತು. ವಸ್ತು, ಪಾತ್ರ, ಶೈಲಿ, ತಂತ್ರ ಇವುಗಳ ವಿಷಯದಲ್ಲಿ ಎದ್ದುಕಾಣುವ ಗುಣ ಅವರಲ್ಲಿದೆ. ....."

—ಡಾ. ರಂ. ಶ್ರೀ. ಮುಗಳಿ, ಸಾಂಗಲಿ

".....ಕತೆಗಳು ತಮ್ಮ ಒಪ್ಪದಿಂದ, ಶುಚಿ-ರುಚಿಗಳಿಂದ, ನಗೆಯ ಪ್ರಸನ್ನತೆಯಿಂದ ಹಸನಾಗಿ ಕಂಡಿವೆ....."

—ದ. ಬಾ. ಕುಲಕರ್ಣಿ, ಧಾರವಾಡ

".....ಚಿತ್ತಾಲರು ಜೀವನದ ಸಮಸ್ಯೆಗಳನ್ನೆತ್ತಿಕೊಂಡು ಗಂಭೀರ ಶೈಲಿಯಲ್ಲಿ ಚಿತ್ತಾಕರ್ಷಕವಾಗಿ ಕತೆಗಳನ್ನು ಬರೆಯಬಲ್ಲರು ಎಂಬುದಕ್ಕೆ ಇಲ್ಲಿಯ ಕೆಲವು ಕತೆಗಳು ನಿದರ್ಶನವಾಗಿವೆ. ಅವರ ಭಾಷೆ ಮಧುರವಾದುದು, ಪರಿಶುದ್ಧವೂ ಸರಳವೂ ಆದುದು. ತಾವು ಅಭ್ಯಸಿಸಿರುವ ಮನೋವಿಜ್ಞಾನವನ್ನೂ ತಮ್ಮ ಕತೆಗಳಿಗೆ ಅಳವಡಿಸಿಕೊಂಡು ಬರೆಯಲು ಯತ್ನಿಸಿರುವುದು ಸ್ವಾಗತಾರ್ಹ....."

—ಜೀ. ಶಂ. ಪರಮಶಿವಯ್ಯ, ಮೈಸೂರು
(ಪುಸ್ತಕ ಪ್ರಪಂಚದಲ್ಲಿ)

".....ಈ ಕತೆಗಳ ವಸ್ತು, ಆವರಣ, ವರ್ಗೀಯತೆ, ಜೀವನಿಷ್ಠೆ, ನಿರ್ದಿಷ್ಟವೂ ನಿರ್ದುಷ್ಟವೂ ಆದ ಕಲಾದೃಷ್ಟಿ ಇವೆಲ್ಲವೂ ನನಗೆ ಪ್ರಿಯವಾದಂತೆಯೇ ಹಿತವೆನಿಸಿದಂತೆಯೇ ಈ ಕತೆಗಾರರ ನಿಲುವು, ಅದರ ಹಿಂದಿನ ಸಂಸ್ಕಾರಸಂಪತ್ತು, ಅದರಿಂದ ಹೊಮ್ಮಿದ ಭಾಷೆಯ ಮತ್ತು ಶೈಲಿಯ ಚದುರು-ಚುರುಕು, ಇವೆಲ್ಲವುಗಳಿಗೂ ಹಿನ್ನೆಲೆಯಾಗಿ ಬೆಂಬಲವಾಗಿ ನಿಂತು ಆಳವಾದ ಮಾನವತೆಯಿಂದ ಮಿಡಿಯುವ ಸ್ನೇಹ, ಸಂವೇದನೆ, ಸಹಾನುಭೂತಿ ಮತ್ತು ಸಾಹಸಗಳಿಂದ ಪುಳಕಿತವಾದ ಈ ತರುಣ ಸಾಹಿತಿಯ ಹೃದಯವಂತಿಕೆಯೂ ಅಷ್ಟೇ ಇಷ್ಟವೆನಿಸಿತು, ಕೌತುಕವೆನಿಸಿತು....."

—ಗೌರೀಶ ಕಾಯ್ಕಿಣಿ, ಗೋಕರ್ಣ
(ಮುನ್ನುಡಿಯಲ್ಲಿ)

"..... (ಈ ಚಿತ್ರಗಳನ್ನು) ಚಿತ್ರಿಸುವವರಲ್ಲಿ ಶ್ರೀ ಯಶವಂತ ಚಿತ್ತಾಲರು ತೋರಿಸಿದ ನೈಪುಣ್ಯವು ಅಸಾಧಾರಣವಾದುದು. ಜೀವಂತ ವ್ಯಕ್ತಿಗಳು ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತವೆ. ಪ್ರತಿಯೊಂದು ಚಿತ್ರವು ವೈಶಿಷ್ಟ್ಯಪೂರ್ಣ ವಾಗಿದೆ. ಲೇಖಕರ ಸೂಕ್ಷ್ಮ ನಿರೀಕ್ಷಣ ಶಕ್ತಿಗೆ ನಾವು ತಲೆದೂಗದೆ ಇರಲಾರೆವು. ಈ ಚಿತ್ರಗಳು ಆಧುನಿಕ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಮೆರುಗನ್ನು ಕೊಡಬಲ್ಲವು....."

—ದಿನಕರ ದೇಸಾಯಿ, ಮುಂಬಯಿ
(ಪ್ರಕಾಶಕರ ಮಾತಿನಲ್ಲಿ)

ನಿಮ್ಮ ಪ್ರತಿಗಾಗಿ ಇಂದೇ ಬರೆಯಿರಿ.

ಕ್ರೌ. ಅ. ೧೨೦ ಪುಟಗಳು **ಬೆಲೆ ರೂ. ೧.೫೦**

— ಪ್ರತಿಗಳು ದೊರೆಯುವ ಸ್ಥಳ —

೧. ಸಾಹಿತ್ಯ ಭಂಡಾರ, ಹುಬ್ಬಳ್ಳಿ ೨. ಮನೋಹರ ಗ್ರಂಥ ಭಂಡಾರ, ಧಾರವಾಡ ೩. ಜನಸೇವಕ ಕಾರ್ಯಾಲಯ, ಅಂಕೋಲಾ (ಉ.ಕ.)

ಮಳೆಗಾಲದ ನಮ್ಮೂರು

(ಲಲಿತಪ್ರಬಂಧ)

ಶ್ರೀ. ಕುಲಕರ್ಣಿ ಕಂಕರರಾಯರು ಕನ್ನಡ ಶಾಲೆ, ಅಕ್ಕಲಕೋಟೆ.

ವಿಜ್ಞಾನದ ಇಂದಿನ ಪ್ರಗತಿಯ ಯುಗದಲ್ಲಿ, ಚಂದ್ರ-ಮಂಗಳರ ಲೋಕಗಳಿಗೆ ಹೋಗಿ ವಸತಿ ಮಾಡಬೇಕೆನ್ನುವ ಅತ್ಯಪ್ತ ಆಶೆಯ ಜನರು, ಹಗಲಿರುಳೂ ಆಕಾಶಬಾಣಗಳನ್ನು ಹಾರಿಸುತ್ತಿರುವರು. ಆದರೆ ನಮ್ಮ ನಾಡಿನ ಹಳ್ಳಿಗರು, ತಮ್ಮ ಪರಂಪರಾ ಸಂಸ್ಕೃತಿಯಲ್ಲಿಯೆ ಸಂತೃಪ್ತರಾಗಿ ಬದುಕಿಕೊಂಡು, ದುಃಖ-ದುಮ್ಮಾನಗಳನ್ನು ಮೀರಿ ನಿಂತಿರುವರು.

ಮಳೆಗಾಲವು ಕೊಳೆಗಾಲವೆಂದು ತೀಕ್ಷ್ಣವಾಗಿ ಆಕ್ಷೇಪಿಸಿ, ಬೇಸಗೆಯು ಒಸಗೆಯ ಕಾಲವೆಂದು ಹಗುರಾಗಿ ಪ್ರಶಂಸಿಸುವವರು ನಮ್ಮಲ್ಲಿ ಅನೇಕ ಜನರಿರಬಹುದು. ಆದರೆ ಅವರೀ ಏಕಪಕ್ಷೀಯ ನಿರ್ಣಯವು ನಿರ್ವಿವಾದ ಸಮ್ಮತವಲ್ಲ. ದಿನನಿತ್ಯದ ಲೌಕಿಕ ವ್ಯವಹಾರದಲ್ಲಿ ಯಾರನ್ನೋ ಇಳಿಸಿ ಇನ್ನಾರನ್ನೋ ಏರಿಸಿದರೆ, ಅದೊಂದು ಪರಿಯ ವ್ಯಾವಹಾರಿಕ ಚಾತುರ್ಯವೆನಿಸೀತು; ಏಕೆಂದರೆ ಲೋಕ ವ್ಯಾಪಾರದಲ್ಲಿ ಪಕ್ಷಪಾತ-ಸ್ವಾರ್ಥಗಳನ್ನು ಬಿಟ್ಟಿರಾಗದು. ಇಂಥ ಸಂದರ್ಭದಲ್ಲಿ ಏರಿಳಿತದ ಧೋರಣೆಯು ಅನುಕೂಲಪ್ರದ. ಆದರೆ ಇದೇ ಧೋರಣೆಯನ್ನು ಋತುಪಕ್ಷವಾಗಿ ಇಟ್ಟುಕೊಳ್ಳುವುದು ಸಮಂಜಸವಲ್ಲ. ಎಲ್ಲ ಋತುಗಳೂ ಒಂದೊಂದು ಬಗೆಯ ಮಹತ್ತ್ವವನ್ನು ಹೊಂದಿಯೇ ಇವೆ. ಅವೆಲ್ಲವೂ ನಮ್ಮ ಪಾಲಿನ ಕಲ್ಯಾಣಕಾರಿ ವರಪ್ರದಾನಗಳೇ. ಬೇಸಗೆ ಬಿಟ್ಟರೆ ಮಳೆಗಾಲವಿಲ್ಲ; ಮಳೆಗಾಲಬಿಟ್ಟರೆ ಚಳಿಗಾಲವಿಲ್ಲ.

ಮಳೆಗಾಲದಲ್ಲಿ ತುಸು ಕೊಳಕು-ಕೊಳಚೆ ಮಿಗಿಲೇನೋ ಸರಿ. ಇದನ್ನು ಉಪೇಕ್ಷಿಸಿದರೆ, ಚಳಿಗಾಲದಲ್ಲಿ ನೈಕೊರೆಯುವ ಚಳಿ, ಬೇಸಗೆಯಲ್ಲಿ ಉಸಿರುಕಟ್ಟಿಸುವ ಸೆಕೆಯೇನಾದರೂ ಕಡಮೆಯೆ? ಸೂಕ್ಷ್ಮವಾಗಿ ವಿವೇಚಿಸಿನೋಡಿದರೆ, ಉಳಿದೆರಡು ಕಾಲಗಳಿಗಿಂತ ಮಳೆಗಾಲವೇ ಒಂದು ಪಾಲಾಗಿ ಹಿರಿದಾಗಿಯೂ, ಮಹತ್ತ್ವದ್ದಾಗಿಯೂ ತೋರುವುದು. ಮುಂಗಾರು ಮಿಂಚಿದಮೇಲೆ ನಾಲ್ಕು ದಿನ ಮಳೆ ಮುಂದೆ ಸೆಳೆದರೆ, ನಿರಭ್ರವಾದ ಆಕಾಶ ಉದಾಸಮುಖಿಯಾಗಿ ನಿಂತರೆ, ಆಗ ನೋಡಬೇಕು ಜನದ ಗೋಳಾಟವನ್ನು. ಮಳೆಗಾಲವು ಕೊಳೆಗಾಲವೆಂದು ಅವಹೇಲಯಿಸುವವರೇ, 'ಮಳೆ ಯಾಕೋ ಮುಂದೆ ಹೋಯಿತು ಸ್ವಾಮಿ' ಎಂದು ಕೈಕಾಲು ಕಳೆದುಕೊಂಡು ನುಡಿಯುವರು. ರೈತ-ಜನತೆಯಂತೂ ಹೌಹಾರಿ ಮುಗಿಲ-ಮೋರೆ ನೋಡುವ ಚಾತಕವಾಗುತ್ತದೆ. ಯಾವಾಗ ಮುಂಗಾರಿನ ಒಂದು ಹನಿ-ಬರಲಿರುವ ವರ್ಷಾ ಋತುವಿನ ಪ್ರಧಾನದೂತನಂತೆ ನೆಲಕ್ಕೆ ಬಿದ್ದು ಹೆಸಿಮಾಡುವುದೋ, ಆಗ ಎಲ್ಲರ ಆಶೆ-ಆಕಾಂಕ್ಷೆಗಳು ಹೆಸುರು ಗೊಳ್ಳುವವು. ಈ ಮಾತನ್ನು ಯಾರು ವಿರೋಧಿಸಬಹುದು? ಮಳೆಗಾಲವು—ಹಾಸ್ಯಕ್ಕೆ ಕರೆಯುವಂತೆ—ಕೊಳೆಗಾಲವಾದರೂ, ಅದು ಭೂದೇವಿಯ ಪಾಲಿನ ಪೂರ್ಣ ಕಳೆಗಾಲವು. ಬೇಸಗೆಯ ಉರಿಬಿಸಿಲಿಗೆ ಮೊಗನೊಂದು ಬವಣಿಸುವ ನೆಲದೊಡಲು, ಮಳೆಗಾಲದ ಪೂರ್ಣ ಕೃಪೆಯಿಂದ ಕಳೆವೆತ್ತು ಬೀಗುವುದು. ಹೊಸ ಆಸೆಯ ಪ್ರಫುಲ್ಲತೆಯಿಂದ ಬೀಗಿ ತೇಗುವುದು. ಸಾರಾಂಶವಾಗಿ ಹೇಳಬೇಕೆಂದರೆ, ಮಳೆಗಾಲವು ಸೊಗಸಿನ ಮೊದಲ ಬೀಜ ಬಿತ್ತಿ ಪೋಷಿಸುವ ಕರುಣಾಕಾಲವು.

ಈ ಪರಿಯಾಗಿ ಕರುಣಾಮಯವಾಗಿರುವ ಮಳೆಗಾಲವು ತನ್ನ ಸರ್ವ ಕೃಪಾಶಕ್ತಿಯನ್ನು ನಮ್ಮೂರಿಗೇ ನೀಡಿಬಿಟ್ಟಿದೆಯೋ ಏನೋ! ನಮ್ಮೂರಿನ ಮಳೆಗಾಲದ ವೈಭವವನ್ನು ಬಣ್ಣಿಸುವುದು, ಹಳೆಯ ಕವಿಗಳು ಹೇಳುವಂತೆ ಹಲವು ನಾಲಗೆಯುಳ್ಳ ಆದಿಶೇಷನಿಂದಲೂ ಸಾಧ್ಯವಿಲ್ಲವೆಂದು ಹೇಳಿದರೆ, ಒಂಟಿ-ನಾಲಗೆಯ ವರ್ಣನೆಯನ್ನು ಒಪ್ಪದಿದ್ದೀರಿ ನೀವು.

'ನಮ್ಮೂರು' ಬಯಲುಸೀಮೆ ಕಂಡ ಒಂದು ರಮಣೀಯ ಸ್ವಪ್ನದಂತಿದೆ. ಪಶ್ಚಿಮಕ್ಕೆ ಹರಿದಿರುವ ಹಳ್ಳದಗುಂಟ ಎರಡು-ಮೂರು ಫರ್ಲಾಂಗಿನಷ್ಟು ಉದ್ದವಾಗಿ ಹಬ್ಬಿ ಅಗಲವಾಗಿದೆ ಊರು. ಊರ ಪೂರ್ವಕ್ಕೆ ಮನೆಗಳ ಹಿಂಗೋಡೆಗಳಿಗಂಟಿಯೇ ತೋಟಗಳು. ಪ್ರಕೃತಿಸೌಂದರ್ಯದ ಕ್ರೀಡಾಕ್ಷೇತ್ರದಂತೆ ಬೆಳೆಬೀಗಿ ತೊನೆಯುತ್ತಿರುತ್ತವೆ. ಆ ತೋಟಗಳ ತಡಿಗೆ ಬೆಳೆಯಿಸಿಕೊಂಡ ಬೇಲಿಯ ಮೇಲೆ ಹತ್ತಾರು ಬಣ್ಣದ ಹೂಗಳು-ಕಲಾವತಿಯಾದ ನಿಸರ್ಗ ರಮಣೀಯ ಮಧುರ ಕಲ್ಪನೆಗಳಂತೆ ಪಸರಿಕೊಂಡಿರುತ್ತವೆ. ದಕ್ಷಿಣಕ್ಕೆ ಸಾರ್ವಜನಿಕ ಧರ್ಮಶಾಲೆ. ಅದಕ್ಕೆ ನಿಕಟವರ್ತಿಯಾಗಿಯೇ ಶಾಲಾ ಕಟ್ಟಡ. ಅದರ ಹಿಂದೆ ಕೆಲವು ಅಂತರದಲ್ಲಿ ಗೈರಾಣಿ*-ನೂರೆಂಟು ವಿಚಾರಗಳ ತಾಕಲಾಟದಿಂದ ಅವ್ಯವಸ್ಥೆಗೊಂಡ ಚಂಚಲನ ಚಿತ್ರ

* 'ಗೈರಾಣಿ' ಇದು 'ಗಾಯರಾನ' ಎಂಬ ಮರಾಠಿ ಶಬ್ದದ ಅಪಭ್ರಂಶ. ಊರ ಹಸುಗಳು ಮೇಯುವುದಕ್ಕೆಂದು ಕಾಯ್ದಿರಿಸಿದ ಸಾರ್ವಜನಿಕ ಹುಲ್ಲು ಗಾವಲಿಗೆ 'ಗೈರಾಣಿ' ಎನ್ನುವರು. ಸ. ಜ.

ದಂತೆ ಹಬ್ಬಿಕೊಂಡಿದೆ. ಅದಕ್ಕೆ ಹೊಂದಿಕೊಂಡೇ ಮಲ್ಲಿನಾಥನ ರಮಣೀಯ ಸಾನ್ನಿಧ್ಯ. ಅಲ್ಲಿಂದ ಕೊಂಚ ಮೂಲೆಯ ಮೇಲೆ ಬಂದರೆ ಹೆಗಲುಹೊತ್ತೇ ಭೂತಪ್ರೇತಗಳ ನೃತ್ಯಕ್ಕೆ ರಂಗಶಾಲೆಯಾಗಿರುವ ಗವಿ. ಅದರ ಹತ್ತಿರ ಮತ್ತೆ ಹಳ್ಳದ ದಂಡೆ.

ನಮ್ಮೂರ ಹಳ್ಳವೆಂದರೆ ಎಲ್ಲಿಯೋ ಒಂದು ಕ್ಷುಲ್ಲಕ ಪ್ರವಾಹವೆಂದು ಕಲ್ಪಿಸಬೇಡಿರಿ. ನಾಡಿನ ನಾಲ್ಕೂ ನಿಟ್ಟನ್ನು ತಿರುಗಾಡಿ ಬಂದವರು ಇದಕ್ಕೆ 'ನದಿ' ಎಂದು ಕರೆದಿದ್ದಾರೆ. ಅವರ ಸಂಬೋಧನೆಗೆ ತಕ್ಕಂತೆ ನಮ್ಮೂರ ಹಳ್ಳ-ನದಿಯಾಗಬೇಕಿತ್ತು. ಆದರೆ ಯಾವ ಕಾರಣವೇನೋ, ಯಾರ 'ನಾಲಗೆ-ರಜಿಸ್ಟರನ್ನೇ' ಪರಿವರ್ತಿಸಿದಾಗ ಏನೋ—ಹಳ್ಳ ನದಿಯಾಗಬಹುದು. ಆದರೆ ಆ ಹೆಸರು ಯಾರಿಗೆ ಬೇಕಾಗಿದೆ ? ಹೆಸರು ದೊಡ್ಡದಿದ್ದು ಯೋಗ್ಯತೆ ಚಿಕ್ಕದಿರುವುದಕ್ಕಿಂತ, ಹೆಸರು ಹೇಗೋ ಇದ್ದು ಯೋಗ್ಯತೆ ಹಿರಿದಾಗಿದ್ದರೆ ಸಾಕು. ಇದೇ ಉನ್ನತ ಆತ್ಮಿಕ ಸಮಾಧಾನ ತಾಳಿ, ನಮ್ಮೂರ ಹಳ್ಳ ತನ್ನ ಎಂದಿನ ಗಾಂಭೀರ್ಯದಲ್ಲಿ ಹರಿಯುತ್ತಿದೆ—ಸ್ಥಿತಪ್ರಜ್ಞನಂತೆ.

ಋತುನಿಯತಿಯಂತೆ ಮಳೆಗಾಲವು ಭೂಲೋಕದತ್ತ ಪ್ರಸಾನ ಮಾಡಿದರೆ—ನಮ್ಮೂರ ಸೊಬಗು-ಸೊಗಸುಗಳಿಗೆ ಗರಿಯೊಡೆಯುತ್ತವೆ. ನಾವೆಲ್ಲ ಮಳೆಯ ಆಗಮನವನ್ನು ವಿಜೃಂಭಣೆಯಿಂದ ಉತ್ಸಾಹದಿಂದ ಸ್ವಾಗತಿಸುತ್ತೇವೆ. ಮುಂಗಾರು ಮಿಂಚಿ ಮುಗಿಲಿನಿಂದ ನಾಲ್ಕುಹನಿ ಬಿದ್ದು ನಮ್ಮೂರ ನೆಲ ತೊಯಿಸಿದರೆ ತೀರಿತು; ಲಕ್ಷ್ಮಿಯ ಗುಡಿಯಲ್ಲಿ ಡೊಳ್ಳುಗಳ ಭೈರವಸ್ವರ ಆರಂಭವಾಗುತ್ತದೆ. ಗುಡಿಯ ಪೂಜಾರಿಯಾದ ಭೂಸಪ್ಪನ ನೇತೃತ್ವದಲ್ಲಿ ಹೇಳಿಕೆ-ಹಾಡಿಕೆಗಳಿಗೆ ಮೊದಲು. ನೆಲಮಳೆ ಸಿದ್ದನ ಇಲ್ಲವೆ ಲಕ್ಷ್ಮಿಯ 'ಧಂಡಿ' ನಡೆಯುತ್ತದೆ. 'ಧಂಡಿ' ಎಂದರೆ ಯಾವ ವಿಶೇಷವೂ ಅಲ್ಲ. ಕುರುಬರ ನಾಲ್ಕಾರು ಜನ, ಹಿರಿಯ ಪೂಜಾರಿಯ ಜೊತೆಸೇರಿ ಮನೆ-ಮನೆ ತಿರುಗಿ 'ಜೋಳ' ಎತ್ತುವುದು. ಅದರಿಂದ ಒಂದು ಲಕ್ಷಣವಾದ ಮುಹೂರ್ತನೋಡಿ 'ಹುಗ್ಗಿ', ಅಟ್ಟು ಆ-ಆ-ದೇವರುಗಳಿಗೆ ನೈವೇದ್ಯ ತೋರಿಸಿ, ಭಕ್ತಿಯಿಂದ ಬಂದವರಿಗೆ ಸಂತರ್ಪಿಸಿ ಬಿಡುವುದು. ಇದರಿಂದ ನೆಲಮುಳೆಸಿದ್ದ ತೃಪ್ತಿಹೊಂದಿ ಹುಲುಸಾದ ಬೆಳೆಕೊಡುವನಂತೆ. ಏನೇ ಇರಲಿ, ಮಳೆಗಾಲದ ಮೊದಲ ಚಟುವಟಿಕೆಯಾಗಿ ನಡೆಯುವುದು ಧಂಡಿ ದಿನವೂ ಬೆಳಗಿನವರೆಗೆ ಡೊಳ್ಳಿನ ಹಾಡುಗಳನ್ನು ಸೊಗಸಿನ ನಾಂದಿಗೀತಗಳೆನ್ನುವಂತೆ ಹಾಡಿಯೇ ಹಾಡಿದ್ದು. ಮಳೆ ಆಗೀಗ 'ತಟ್-ಪಟ' 'ರಪ-ರಪ' ಬಿದ್ದು ಜನತೆಯ ಆನಂದರಾಗಾಲಾಪನೆಗೆ ತಕ್ಕ ತಾಲವೀಯುವುದು.

ರೋಹಿಣಿಯ ಅಬ್ಬರದ ಸೋನೆ ಸುರಿಯತೊಡಗಿತೆಂದರೆ, ತಿಪ್ಪೆ-ತಗ್ಗುಗಳು ಒಮ್ಮೆ ಸ್ವಚ್ಛವಾಗಿ ಮೈತೊಳೆದುಕೊಂಡು, ಮೈ ಹೊಲಸನ್ನು ಬೀದಿಗುಂಟ ಹರಿಬಿಡುತ್ತವೆ. ನಾಷ ! ವರ್ಷಗಟ್ಟಲೆ ಕೊಳೆಸಹಿಸಿ-ವರ್ಷಕ್ಕೊಮ್ಮೆ ಅದನ್ನು ಪರಿಮಾರ್ಜಿಸಿಕೊಂಡರೆ ತಪ್ಪೆ? ನಮ್ಮಲ್ಲಿ ದಿನಕ್ಕೆ ಐದಾರುಬಾರಿ ಸ್ನಾನಮಾಡುವ ವೀರರಿಲ್ಲವೆ ?

ನಮ್ಮೂರಿನ ಜನ ತಿಪ್ಪೆಯ ಸ್ನಾನವನ್ನು ಅಸಹ್ಯವೆಂದು ಬಗೆಯಲಾರರು; ಅಲ್ಲಲ್ಲಿ ಆಶ್ರಯವಿದ್ದ ಕಟ್ಟಿಗೆಯ ಮೇಲೆ ಕುಳಿತು, ಅದರ ಮೋಜನ್ನು ನೋಡಿ ನಕ್ಕುನಲಿದಾಡುವರು. ಹೇಗೂ ನಾಲ್ಕಾರು ದಿನಗಳಲ್ಲಿ ಊರಕಶ್ಮಲವೇ ಕಿತ್ತುಹೋಗಿ ಬೀದಿ-ಬೀದಿಗಳೆಲ್ಲ ಕನ್ನಡಿಯಂತಾಗುವುವೆಂಬುದು ಅವರಿಗೆ ಪಕ್ಕಾಗೊತ್ತು. ರೋಹಿಣಿಯು ಹೊಡೆತಕ್ಕೆ ಊರಿಗೆ-ಊರೇ ಮಿಂದು ಮಡಿಯಾಗುವುದು ಏನೋ ಕೈಲಾಗದ ಅಥವಾ ವಯಸ್ಸಾದ ಮನೆಗಳು, ಮಡಿಯಾಗುತ್ತಲೇ ಮಡಿಯಬಹುದು. ಹಾಗಾಗುವ ಕುರಿತು ಜನ ಚಿಂತಿಸಿದ್ದೂ ಅಷ್ಟೇ. ಏಕೆಂದರೆ ಮರುಬೇಸಗೆಯಲ್ಲಿ ಹೊಸದೊಂದು ಮನೆಕಟ್ಟಿಸಬೇಕೆಂಬ ಹಿಮ್ಮತ್ತು ಹೆಚ್ಚು ಎದೆಯಲ್ಲಿ.

ವಿನೋದಪ್ರಿಯತೆಗೆ ನಮ್ಮೂರಿನ ಜನ ಹೆಸರಾದವರು. ಅವರಿಗೆ ಸಾಟಿ ಅವರೇ. ಊರ ಮಧ್ಯದ ಹನುಮನಗುಡಿಯಲ್ಲಿ ಇಲ್ಲವೆ ಲಕ್ಷ್ಮಿಯ ಗುಡಿಯಲ್ಲಿ, ಬೇಕಾದರೆ ವೀರಭದ್ರನ ಮಂದಿರದಲ್ಲಿ ಕುಳಿತು ಅಭಿರಾಮವಾಗಿ ಹರಟೆಹೊಡೆಯುತ್ತಿರುತ್ತಾರೆ. ಹೊರಗೆ ಮಳೆ ಧೋ-ಧೋ ಸುರಿಯಲಿ, ಬೇಕಾದರೆ ಹಟಹಿಡಿದ ಹುಡುಗನಂತೆ 'ಜಟಿ-ಜಟಿ' ಬರಲಿ, ತಮ್ಮ-ತಮ್ಮ ಮನಸ್ಸಿನಲ್ಲಿಯ ಮುಂದಾಲೋಚನೆ ಹಾಗೂ ಅಭಿಲಾಷೆಗಳನ್ನು ವ್ಯಕ್ತಪಡಿಸುತ್ತ ಹರಟುವರು. ಮುಗಿಲಿನಲ್ಲಿ ಮೋಡವು ನಾರುಮೋರೆ ಹಾಕಿರಬೇಕು. ಆಗಾಗ ಆಗದ್ದಕ್ಕೆ ಅಬ್ಬರದಿಂದ ಗುಡುಗು ಗುಡುಗುತ್ತಿರಬೇಕು. ಮಿಂಚು-ಬೆಳ್ಳಿಯ ಬೆತ್ತದಂತೆ ಸಳಕ್ಕನೆ ಮಿಂಚಿಮಾಯವಾಗುತ್ತಿರಬೇಕು. ಸಿಡಿಲು ಬೇರೆ ನಡುವೆ ಸಿಡಿಮಿಡಿಕೊಂಡು ತಡಕಾಡುತ್ತಿರಬೇಕು. ಹೀಗಿರುವ ರುದ್ರ ದೃಶ್ಯಕ್ಕೆ ಎಷ್ಟೂ ಬೆದರದೆ ಹರ್ಷ-ಪ್ರಸನ್ನಮುಖಿಗಳಾಗಿ ಕೂಡಿದ ಜನಹಾಡುತ್ತಿರುವರು:

"ಬಾರಣ್ಣ ಮಳೆಯಣ್ಣ । ಉರವೀಯತೊಳೆಯಣ್ಣ
ಸರುವರಿಗಿ ಸುಕಕೊಟ್ಟು । ದರಣೀಯ ಕಾಯಣ್ಣ
ಶರಣು ಬಂದೇವಣ್ಣ...."

ಎಂತಹ ಸೊಗಸಾದ ಹಾಡು. ಕೂಡಿದವರೆಲ್ಲ ಧ್ವನಿಗೂಡಿಸಿ ಹಾಡುವಾಗ ಸುರಸಂಗೀತವೆಂಬುದು ಬೇರೆಯುಂಟೆ ?—ಎಂದು ಯಾರೂ ಪ್ರಶ್ನಿಸಲಾರರು.

ಇದೇ ಸಮಯಕ್ಕೆ ಆರಂಭವಾಗುವ ಮನೋರಂಜಕ ಚಟುವಟಿಕೆಯೆಂದರೆ ಬಯಲಾಟದ ತಾಲೀಮು. ಕೇರಿ-ಕೇರಿಗೊಂದು ತಾಲೀಮು ಸಂಘ. ಪ್ರತಿಸಂಘವೂ ರೂಢಿಮಾಡುವ ಬಯಲಾಟದ ಕತೆಯೇ ಬೇರೆ. ಮೂಲಗಾರ ಓಣಿಯಲ್ಲಿ 'ಪಾತಿಜಾತ'ನಾದರೆ, ಮಠದ ಬೀದಿಯಲ್ಲಿ 'ಕೀಚಕವಧೆ' ಕುರುಬರಕೇರಿಯಲ್ಲಿ 'ದಕ್ಷಬ್ರಹ್ಮ'ನಾದರೆ ಹರಿಜನ ಸಂಘದಲ್ಲಿ 'ಬಾಣಾಸುರ'. ಮೂರೂಸಂಜೆಗೆ ಮುನ್ನವೇ ಊರಿನ ನಿರುದ್ಯೋಗಿ ತರುಣ-ವೃದ್ಧರು ಊಟದ ಶಾಸ್ತ್ರ ಮುಗಿಯಿಸಿ ತಾಲೀಮು ನಡೆಯುವ ಸ್ಥಳದಲ್ಲಿ ಕೂಡಿಬಿಡುವರು. ತಾಲೀಮು ನಡೆಯುವಲ್ಲಿ ದೊಡ್ಡ ಬತ್ತಿಯ ಒಂದೆರಡು ಪ್ರಣತಿಗಳು, ಬಹಳ ಸುಧಾರಿಸಿದ ಸಂಘವಾಗಿದ್ದರೆ ಕಂದೀಲು ಇಲ್ಲವೆ ಗ್ಯಾಸುಬತ್ತಿ ಇದ್ದರೆ ತೀರಿತು. ಅವುಗಳ ಪ್ರಕಾಶದಲ್ಲಿ ಎಲ್ಲ ಸೋಗುಗಳೂ ಬಂದು ಕುಣಿದಾಡಿಹೋಗುತ್ತವೆ. ಪೇಳದವರು ಸ್ವರದ ಅಲೇಖ ತೆಗೆಯು

ವನರಂತೆ ತಮ್ಮ ಎತ್ತರ ಸ್ವರದಲ್ಲಿ ಹಾಡುವರು. ಉಪರೋಕ್ತ ನಾಲ್ಕೂ ಸಂಘಗಳಲ್ಲಿ ಪಾರಿಜಾತ ಸಂಘವು ಬಲು ಪ್ರಗತಿಹೊಂದಿದೆ. ಆ ಸಂಘದ ಜೀವ-ಜೀವಾಳವೆಂದರೆ ಜೀವಣ್ಣಭಟ್ಟರು. ಸ್ವಭಾವತಃ ಹಾಸ್ಯಪ್ರಕೃತಿಯವರಾದ ಅವರು ಹಾಡಿಕೆಯಲ್ಲಿ ಅಪೂರ್ವ ಪಾಂಡಿತ್ಯಗಳಿಸಿದ್ದಾರೆ. ಅದರ ಮೇಲೆ ಸಿದ್ದನ 'ಕೊರವಂಜಿ' ಪಾತ್ರ ಬಂಗಾರಕ್ಕೆ ಕುಂದಣವಿಕ್ಕಿದಂತಿದೆ. ಉಳಿದ ಸಂಘಗಳ ಅಭಿನೇತೃಗಳೂ ಚೆನ್ನಾಗಿದ್ದಾರೆ. ಹೀಗೆ ಮಳೆಗಾಲದ ಮೂರು ತಿಂಗಳು ಪರಿಶ್ರಮಪಟ್ಟು ಅಭ್ಯಸಿಸಿದ. ಆಟವನ್ನು ಚಳಿಗಾಲದ ಅನುಕೂಲ ದಿನಗಳಲ್ಲಿ ಅಡಿ ಊರ ರಸಿಕರ ಮನ ಸೂರೆಗೊಳ್ಳುವರು.

ಬಯಲಾಟದ ಜೊತೆಗೆ ಸುರುವಾಗುವ ಇನ್ನೊಂದು ಸೋಜೆಂದರೆ ಮಲಕಯ್ಯನವರ ಭಜನೆ. ಹನುಮನ ಗುಡಿಯ ಬದಿಯಲ್ಲಿ ಅವರ ಮಿಠಾಯಿ ಅಂಗಡಿ. ಸ್ಥಳ ಕಿರಿದಾದರೂ ಹತ್ತೆಂಟು ಜನ ಕೂಡಲಿಕ್ಕೇನೂ ಸಂಕೋಚವಿಲ್ಲ. ತಾಳ-ತಂಬೂರಿ ಸದಾ ಸಿದ್ಧ. ಮಲಕಯ್ಯನವರು ನೂಲತಃ ವೇದಾಂತಿಗಳು. ನಾಲ್ಕಾರು ವೇದಾಂತದ ಹಾಡು ಹಾಗೂ ಶಿವಶರಣರ ವಚನಸಂಗ್ರಹಗಳನ್ನು ಓದಿದ ಕಾರಣ, ಅವರ ನಾಲಗೆಯಲ್ಲಿ 'ದೇವರು – ಅಸ್ತಿಕವಾದ – ಇಷ್ಟಲಿಂಗ – ಪರಬ್ರಹ್ಮ' ಇಂಥವೇ ಶಬ್ದಗಳು ಆಗೀಗ ಒಡಾಡುತ್ತವೆ ನೆಯ್ಯಾರನ ಲಾಳಿಯಂತೆ. ಅವರ ವೇದಾಂತವನ್ನೊಪ್ಪುವ ಅನೇಕ ಜನ ತರುಣ-ವೃದ್ಧರು ಅಂಗಡಿಯಲ್ಲಿ ನೆರೆದಿರುವುದುಂಟು. ಉಳಿದೆರಡು ಕಾಲಗಳಿಗಿಂತ ಮಳೆಗಾಲವು ಅವರಿಗೆ ಬಹಳ ಅನುಕೂಲ. ಏಕೆಂದರೆ ಮಳೆಯ 'ಸರುವು' ಆಕಾಶದಿಂದ ನೆಲಕ್ಕಿಳಿಯುವಾಗ ತಂದ 'ನಿರುದ್ಯೋಗದ' ಕರುಳಿನ ಕಾಣಿಕೆಯನ್ನು ಅವರೆಲ್ಲ ಪ್ರೀತಿಯಿಂದ ಸ್ವೀಕರಿಸುವರು ಹಗಲು ಎರಡೂ ಹೊತ್ತು; ಮನಸ್ಸು ಬಂದರೆ ರಾತ್ರಿ ಬಹಳ ಹೊತ್ತಿನವರೆಗೂ 'ಶಿವಾಯ ನಮ ಓಂ' 'ಬಸವನ ನಾಮಾ ವಸುಧೆಗೆ ಪ್ರೇಮಾ' 'ಓಂ ನಾಮಾ ಶಿವಾಯೆನ್ನಿ ಅನಂದದಿಂದ' ಇನ್ನೂ ಏನೇನೋ ತಂಬೂರಿಯ (ಏಕತಾರಿ) ಏಕನಾದದೊಂದಿಗೆ ಆರಂಭವಾಗಿರುತ್ತವೆ. ಮಳೆಗಾಲ ಹೋಗುವುದರೊಳಗೆ ಒಮ್ಮೆ ಈ ಭಜನೆಯ ತಂಡ ಹುಲ್ಲಿನಾಥನೆದುರು 'ಸಪ್ತಾಹ' ನಿಲ್ಲಬೇಕು. ಸಪ್ತಾಹದ ಕೊನೆಯ ದಿನ ಪ್ರಸಾದ. ಅಂದು ಊರ ಜಂಗಮರು, ಬಡಬಗ್ಗರು ಪ್ರಸಾದ ಹೊಡೆದು ತೇಗುವರು. ಥಂಡಿಯ ನಂತರ ಊರಲ್ಲಿ ನಡೆಯುವ ಎರಡನೆಯ ಅನ್ನಸಂತರ್ಪಣೆ ಇದು. ಮಲಕಯ್ಯನವರ ಭಜನೆಯ ಮಂಡಳಿ ಈ ರೂಢಿಯನ್ನು ಚಾಚೂ ತಪ್ಪದೆ ಕಾಯ್ದುಕೊಂಡು ಬಂದಿದೆ.

ಇದೇ ಹೊತ್ತಿಗೆ ಗೋಪಣ್ಣನ ಪಡಸಾಲೆಯಲ್ಲಿ 'ಇಸ್ಪೀಟು' ಸಂಘದ ಉದ್ಘಾಟನೆಯಾಗುವುದು. ಚಾವಡಿಯ ಕಟ್ಟೆಗೆ ಬಂದರೆ ಅಲ್ಲೊಂದು ಬಗೆಯ ಸೊಬಗು. ಗೌಡ-ಕುಲಕರಣಿಯವರು, ಓಲೆಕಾರ ಹಾಗೂ ಊರ ಧೈತ ಜನತೆಯೊಂದಿಗೆ ಕೂಡಿ ಮಳೆಯ ರೌಕನ್ನು ನಿರೀಕ್ಷಿಸುತ್ತ, ಮುಂಬರುವ ಬೆಳೆ-ತೆರಿಗೆ-ಆ ಖುಟ್ಲೆ-ಈ ಖುಟ್ಲೆಯ ಕುರಿತು ಚರ್ಚೆ ನಡೆಯಿಸಿರುವುದುಂಟು. ಓಲೆಕಾರ ರುದ್ರನೆಂದರೆ ಸುದ್ದಿಯ ಸೂರಣ್ಣ. ಅಂಥ ಸುರಿಯುವ ಮಳೆಗಾಲದಲ್ಲೂ ಹತ್ತಾರು ಮೈಲುಗಳವರೆಗಿನ ಒಳ್ಳೇ ಗುಟ್ಟಿನ ಸಂಗತಿಗಳನ್ನು ತಿಳಿದು ಹೇಳುತ್ತಿರುತ್ತಾನೆ. ನಮ್ಮೂರಿನ ಜನ ಅವನನ್ನು 'ಮಳೆಗಾಲದ ಟೆಲಿಫೋನ್' ಎಂದು ಕರೆಯುವುದುಂಟು. ಇಂದು ಶಿವಪುರದಲ್ಲಿ ಬಿದ್ದ ಮನೆಗಳೆಷ್ಟು? ಎಂದರೆ ಚಾಚೂ ತಪ್ಪದೆ ಇಷ್ಟೆಂದು ಹೇಳುತ್ತಾನೆ. ಅವನೊಬ್ಬ ಮನೋರಂಜನಕಾರಿ ಜೀವಿ. ಅವನ ಸ್ವಾರಸ್ಯಮಯಿ ಹೇಳಿಕೆಯಿಂದ ಬೇಜಾರು ತರುವ ಮಳೆಗಾಲ ಯಾವಾಗೋ ಹೋದಂತೆನಿಸುವುದು.

ಊರಲ್ಲಿಯ ಸೊಗಸು ಹೀಗಿದ್ದಾಗ ತುಸು ಧರ್ಮಸಾಲೆಯ ಬಯಲಿನತ್ತ ಬಂದರೆ ನಾವು ಯಾವುದೋ ಅನುಪಮರಾಮಣೀಯಕದ ದಿವ್ಯ ಸಾನ್ನಿಧ್ಯದಲ್ಲಿ ನೆಲೆಯೂರಿ ನಿಂತಂತೆ ಆಗುವುದು. ಗೈರಾಣಿ–ಈಗ ಸ್ವರ್ಗವನ್ನೇ ತನ್ನಲ್ಲಿ ಆಮಂತ್ರಿಸಿಕೊಂಡ ಚೆಲುವಿನ ಸೀಮೆಯಾಗಿರುವುದು. ತನ್ನ ಲಲಿತಕಲ್ಪನೆಗಳ ಗುಂಫನದಲ್ಲಿ ಮನಸ್ಸನ್ನೇ ತೊಡಗಿಸಿ ಆತ್ಮಾನಂದಲೀನತೆಯ ಉನ್ಮಾದವಸ್ಥೆಯಲ್ಲಿ ಮುಳುಗಿರುವ ಭಾವಜೀವಿ ಕವಿಯಂತೆ-ಗೈರಾಣಿ-ಹಸುರಿನ ಹರೆಯ ತಲೆಗೇರಿ ತನ್ನದೇ ಅದ ಹುಚ್ಚಿನಲ್ಲಿ ಮೆರೆದು ಕಣ್ಮನಗಳ ಸೂರೆಗೆಯ್ಯುವುದು. ಎಲ್ಲಿ ಬೇಸಗೆಯ ಒಣ ಗೈರಾಣಿ? ಎಲ್ಲಿ ಮಳೆಗಾಲದ ಸುಶೋಭಿತ ಚೆಲುವು-ಗೈ-ರಾಣಿ? ಅದನ್ನು ನೋಡಿದಾಗ ಇಡೀ ವರ್ಷವೂ ಏಕೆ ಮಳೆ ಸುರಿಯುತ್ತಿರಬಾರದು? ಎಂದು ಭಾವಾವಿಷ್ಟ ಚಿತ್ತವು ಆಲೋಚಿಸುವುದು. ಕಿರಿಬೆರಳಿನಷ್ಟು-ಏಕಪ್ರಕಾರವಾಗಿ ಒಂದು ಮೈಲು ಪ್ರದೇಶವನ್ನೆಲ್ಲಾ ಹಬ್ಬಿದ ಹಸಿರು ಎಳೆಹುಲ್ಲು ತನ್ನ ಬಾಲ್ಯದ ಸವಿಗತೆ ಹೇಳುತ್ತ ತೂಗುತ್ತಿರುವುದು. ಆ ಎಳೆಹುಲ್ಲಿನ ಮೇಲೆ ಎಡೆಬಿಡದೆ ಇಳಿಯುವ ತುಂತುರಿನ ಸಾಂದ್ರಧಾರೆ–ಸನ್‌ಲಾಯಿಟಿನ ತಿಳಿ ಬುರುಗಿನಂತೆ ಕಂಗೊಳಿಸುವುದು. ಅದರ ಎರೆತಕ್ಕೆ ಈಡಾದ ಹುಲ್ಲು-ಕಂದರ ತುಂಬಿದ ಲಾವಣ್ಯವನ್ನು ಏನೆಂದು ವರ್ಣಿಸಬೇಕು? ಊರಿನ ಎಮ್ಮೆ–ಆಕಳುಗಳೂ ಈ ಎರೆತದಲ್ಲಿ ಭಾಗವಹಿಸಲು ತಪ್ಪುವುದಿಲ್ಲ. ಹೀಗೆ ನೆಲ–ಮುಗಿಲುಗಳನ್ನು ಒಂದು ಮಾಡಿದ ಮಂಜಿನಾಚೆಗೆ ದಿವ್ಯ ಸತ್ಯದಂತೆ ತೋರುವ ಮಲ್ಲಿನಾಥನ ಮಂದಿರ. ಇತ್ತ ಗವಿಯ ಆವರಣ. ಯಾವುದನ್ನು ನೋಡಬೇಕು? ಎಲ್ಲವನ್ನೂ ನೋಡುವ ಮಹದಪೇಕ್ಷೆ. ಆದರೆ ಇದ್ದ ಎರಡೇ ಕಣ್ಣು ಸಾಲವು. ಅದಕ್ಕಾಗಿ ಹೃದಯದ ಅತೃಪ್ತಿ ಜೀವಂತವಾಗಿ ಉಳಿಯುವುದು.

ಬಂಗಲೆಯಲ್ಲಿ ನಿಂತರೆ ಹಳ್ಳದ ರುದ್ರಸೌಂದರ್ಯವು ಬಲು ಆಕರ್ಷಕವಾಗಿ ತೋರುತ್ತದೆ. ಮಳೆಗಾಲದಲ್ಲಿ ಅದು ಅನುಸರಿಸುವ ಪ್ರವಾಹ ಪದ್ಧತಿಯೇ ಚರಿತಗೊಳಿಸುವಂತಹದು. ಆಗ ನಮ್ಮೂರ ಹಳ್ಳದ ವೈಭವವನ್ನು ಕಂಡವರು ಅದಕ್ಕೆ ನದಿಯೆಂದೇ ಕರೆದಾರಲ್ಲದೆ ಹಳ್ಳವೆಂದಲ್ಲ. ಮಕಾನದ ಏರಿಯಹತ್ತಿರ ನಿಂತರೆ ಪ್ರವಾಹದ ತೀವ್ರ ವೇಗವು ರಭಸವಾಗಿ ಮುನ್ನುಗ್ಗುವುದನ್ನು ಕಾಣುತ್ತೇವೆ. ಆನೆಗಲ್ಲು-ಒಂಟೆಗಲ್ಲುಗಳ ತೆಕ್ಕೆಹಾಯ್ದು-ತಲೆಯೇರಿ ಸಾರ್ವಭೌಮನ ತೀವ್ರತೆಯಲ್ಲಿ ಮುಂದುವರಿಯುವುದು. ಅದರ ಅಬ್ಬರಕ್ಕೆ ಏನು ತಡೆಯಬೇಕು? ಆದರೆ ಇನ್ನೂ ತುಸು ಮೇಲೆ ಬರಬೇಕು. ಎಂದರೆ ಉಪ್ಪಿನ ನೋಳಿಯ ಹತ್ತಿರ. ಅಲ್ಲಿ ಹಳ್ಳದ ಪಾತ್ರವು ತುಂಬಾ ವಿಶಾಲವಾದುದರಿಂದ, ನೀರು ಪ್ರಶಂತವಾಗಿ ಹರಿಯುವುದು. ತನ್ನ ಗಾಂಭೀರ್ಯವನ್ನು ಭಂಗಪಡಿಸಿಕೊಳ್ಳದ ವಿವೇಕ ಶೀಲನಾದ ಧೀರಪುರುಷನಂತೆ ಅಲ್ಲಿ ಹಳ್ಳವು ನೋಡು-

ನವಂಗೆ— ಅನುಭಾವಿಯ ಸುಶಾಂತ ಜೀವನದ ದಿವ್ಯದರ್ಶನದಂತೆಯೂ ಮಕಾನದೇರಿಯ ಹತ್ತಿರ. ತಾರುಣ್ಯದ ಒತ್ತಡಕ್ಕೆ ಸಿಲುಕಿ ಮುಂದು ಡುಕಿ–ಮುಗ್ಗುರಿಸುವ ಅನನುಭವಿಯ ಅಶಾಂತ ಜೀವನದ ಭವ್ಯ ದರ್ಶನದಂತೆಯೂ ತೋಚುವುದು. ಇವೆರಡೂ ಪಾಶಗಳನ್ನು ನಮ್ಮೂರಿನ ಜನ ಮಳೆಗಾಲದಲ್ಲಿ ತಪ್ಪದೆ ಕಲಿಯುವ ಭಾಗ್ಯ ಪಡೆದಿದ್ದಾರೆ. ಇನ್ನನೇ-ಕರು— ಈ ಪರಿಯಾದ ಪ್ರವಾಹದ ಜೊತೆಗೆ ಸರಸವಾಡುತ್ತ 'ಈಜು' ಬೀಳುವುದೂ ಉಂಟು. ತುಂಬಿದ ಹಳ್ಳದಲ್ಲಿ 'ಗೌಡರ ತೋಟದ ಹತ್ತಿರ ಈಜುಬಿದ್ದು ಮಕಾನದ ಮುಂದೆ ತಡೆಗೆ ಹತ್ತುವ ಹಲಕೆಲವರ ಸಾಹಸ ವನ್ನು ನೋಡಲೂ ಧೈರ್ಯಬೇಕಾಗುವುದು.

ಬೇರೆ–ಬೇರೆ ಜಾತಿಯ ಹೂಗಳಿಗೇನೂ ಕೊರತೆಯಿಲ್ಲ ನಮ್ಮೂರಿಗೆ. ಸಾಹುಕಾರರ ತೋಟಕ್ಕೆ ಬಂದರೆ ಮಲ್ಲಿಗೆ-ಜಾಜಿ-ಆಕಾಶಮಲ್ಲಿಗೆಗಳು ರಾಶಿ-ರಾಶಿಯಾಗಿ ಅರಳಿ ನಗುತ್ತಿರುವುವು. ಅಲ್ಲಿಯೇ ಇರುವ ಕದಳೀ ವನದಲ್ಲಿ 'ಕೇಕಾರವ' ಹಾಕುತ್ತ ಹುಚ್ಚು–ಹರ್ಷದಲ್ಲಿ ನಾಟ್ಯಗೆಯ್ಯುವ ನವಿಲುಗಳ ಗುಂಪನ್ನೂ ನೋಡಬಹುದು. ಗೌಡರ ತೋಟಕ್ಕೆ ಬಂದರೆ ಮಳಿಗೆಯ ಸಮೃದ್ಧಿ. ಮಳಿಗೆಯೆಂದರೆ ಬಹುಶಃ ಬಹುಜನಕ್ಕೆ ಗೊತ್ತಿ ರದ ಹೂವು. ಅದೊಂದು ಮಲ್ಲಿಗೆಯ ಬಣ್ಣ ಹಾಗೂ ಆಕಾರಗಳನ್ನು ಹೊಂದಿದ ಹೂ. ಗಾತ್ರವಾದರೆ ಮಲ್ಲಿಗೆಗಿಂತ ತುಸು ದಪ್ಪ. ಆದರೆ ಪರಿಮಳವಾದರೋ ಮಲ್ಲಿಗೆಗೂ ಮೀರಿದುದು. ಸ್ವಲ್ಪ ಮಳೆ ನಿಂತಿರ ಬೇಕು. ಮಳಿಗೆ ಸುಖವಾಗಿ ನಕ್ಕುನಲಿದಾಡುವುದು ಆಗ. ಒಂದು ಫರ್ಲಾಂಗಿನಷ್ಟು ಅಂತರದಲ್ಲಿದ್ದರೂ ಅದರ ಗಂಧ-ಸಮ್ಮೋಹಿನೀಶಕ್ತಿಯು ನಮ್ಮನ್ನು ಅಲ್ಲಿಗೆ ಎಳೆದೊಯ್ಯುತ್ತದೆ. ಮಳೆಗಾಲದ ಸೊಗಸೆಲ್ಲವೂ ಮಳಿಗೆಯಲ್ಲಿ ಅಡಕವಾಗಿದೆ ಎನೋ ಎಂದು ನಾವು ಭಾವಿಸಬಹುದು. ನಮ್ಮೂರು ಪಡೆದ ಮಹಾಸೌಭಾಗ್ಯವೆಂದರೆ 'ಮಳಿಗೆ' ಎಂದು ನನ್ನ ಅಭಿಪ್ರಾಯ.

ವಾಚಕರೆ, ಇನ್ನೂ ಅನೇಕ ವಿಧವಾಗಿ 'ನಮ್ಮೂರು' ಮಳೆಗಾಲದ ಸೊಗಸನ್ನು ಕಂಡು ಕುಲುಕುಲು ನಗುತ್ತಿರುವುದು. ಕಾಲಿಟ್ಟರೆ 'ಅಯ್ಯೋ' ! ಎನ್ನಿಸುವ ಕಿಚಿಕಿಚಿ ಕೆಸರು ಒಂದೆರಡು ಓಣಿಗಳಲ್ಲಿದ್ದರೂ– 'ಊರಿದ್ದಲ್ಲಿ ಹೊಲಗೇರಿ ಇರತಕ್ಕದ್ದೇ' ಎನ್ನುವ ಸಮಾಧಾನವಿಟ್ಟು ಕೊಂಡು ಅದರತ್ತ ಗಮನನೀಯಲಾರೆವು. ಅಂತೂ ನಮ್ಮೂರು ಆ ಸೊಗಸಿನ ವಿವರವನ್ನು ಇನ್ನೂ ಹೇಳುತ್ತ ಹೋದಂತೆ 'ಅತಿಶಯೋಕ್ತಿಯ ದೃಷ್ಟಿ' ತಾಗೀತು. ಬೇಕಾದರೆ ನನ್ನ ಮಾತಿನ ಸತ್ಯಾ–ಸತ್ಯತೆಯನ್ನು ಒರೆಗಲ್ಲಿಗೆ ಹಚ್ಚಿ ನೋಡುವ ಹವ್ಯಾಸವಿದ್ದರೆ ಮಳೆಗಾಲದಲ್ಲೊಮ್ಮೆ ನಮ್ಮೂರಿಗೆ ಬಂದು ಹೋಗಿರಿ. ಮೋಟರಿನಲ್ಲಿ ಕುಳಿತಾಗಿನಿಂದಲೇ ಹಾವಿನಂತೆ ಓರೆಕೋರೆಯಾಗಿ ಹರಿದಿರುವ ರಸ್ತೆ–ಅಲ್ಲಿಂದ ಎಡಬಲಕ್ಕೂ ಪಸರಿಸುವ ಎರೆಯ ಕಪ್ಪುನೆಲ ದೂರಿನಿಂದ ಕಾಣುವ ಊರ ಅಲೌಕಿಕ ಜಿಲ್ಮಿಕೆಯನ್ನು ಕಂಡು ಮಂಕುಪಟ್ಟೀರಿ ಎಚ್ಚರಿಕೆ.

ಇಷ್ಟೆಲ್ಲ ಪುರಾಣ ಹೇಳಿದರೂ ಎಲ್ಲಿಯೂ ಊರ 'ಹೆಸರೇ' ಬರ ಲಿಲ್ಲವಲ್ಲ? ಎಂದು ಗೋಜುಗರೆಯಬೇಡಿ ಮತ್ತೆ. ನಮ್ಮೂರು 'ಹಳ್ಳಿಯ' ಬಾಯಲ್ಲಿ 'ತಂಬ'—ಸುಧಾರಿಸಿದ ಬಾಯಲ್ಲಿ 'ತಾಂಬೆ'. ●

ಹೀರು ಸತ್ವವನಿಲ್ಲೆ!

" ರಂಜನ "ಭಟ್ಟ, ಮದ್ರಾಸು

ಹೀರು ಸತ್ವವನಿಲ್ಲೆ
ಹಿಚುಕು ಗಂಟಲಿನಲ್ಲೆ
ಎಸೆಳ್ಲು ಮಸೆಕತ್ತಿ
ಲಗ್ಗೆಯಿಡು ನುಗ್ಗಿನಡೆ
ಹಿಂದೆ ನೋಡಿದರಿಲ್ಲ
ಮತ್ತೆ ಬಂದರೆ ಸಲ್ಲ
ಯಾರ ಕೇಳುವೆಯೇಕೆ ?
ಹೃದಯವಿದ್ದರೆ ತಾನೆ ?
ಮತ್ತೆ ಯಾತರ ಚಿಂತೆ ?
ಅನುಮಾನ ಅಳಿಯದಿರೆ; ಹೇಳು ಸಾಗರ ಭೂಪ—
ಮುಗಿಯದಂತಹ ನಿನ್ನ ಮತ್ಸ್ಯನ್ಯಾಯದ ಕತೆಯ
ಮೀನು ಮೀನನೇ ತಿಂದು, ಕೊಬ್ಬಿ ಬೆಳೆಯುವ ಕತೆಯ
ನಂಬಿದವರನೆ ಮುರಿದು, ನೆಚ್ಚಿದವರನೆ ಇರಿದು
ಉಂಡಮನೆ ಗಳ ಎಣಿಸಿ ಮುಂದೆ ನುಗ್ಗುವ ವಿಭವ—
ನೀರುನೆಲದೀ ತತ್ವ
ಅರಿಯೆ ನೀನಿದ ಮೂಢ
ಬಲವೆ ಇಲ್ಲಿಯ ಮಂತ್ರ
ಕಪಟವಿಲ್ಲಿಯ ತಂತ್ರ
ಹೇಗೆ ಸಾಗಿದರೇನು ಮುಂದೆ ಹೋದರೆ ಸಾಕು
ಎದುರು ನಿಂತಿದೆಯಲ್ಲಾ
ದಾರಿಬದಿಯಲೆ ಬನವು
ನಿಂತು ನೋಡುವಿಯೇಕೆ ?
ಎಸೆಳ್ಲ ಮಸೆಕತ್ತಿ
ಇಲ್ಲಿ ಕೇಳುವರಿಲ್ಲ
(ಕೇಳಿದರು ಕೇಳದಿರು.)
ಎಲ್ಲಿ ತೆಗೆ, ತುಂಬು ಹಣ್ಣಿನ ಬುಟ್ಟಿ—
ದಾರಿಹಿಡಿ, ಓಡು ನಿನ್ನಯ ನೆಲೆಗೆ—
ಮತ್ತೆ ಹೃದಯದ ದನಿಗೆ
ಹೀಗೆ ಉತ್ತರ ಹೇಳು:
" ಹಾದಿಹೋಕರ ಸೊತ್ತು
ನಾನು ಒಯ್ದರೆ ತಪ್ಪೆ ?"—

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡ ಮೇರೆಗೆ **'ಗೌರಿಯ ಮದುವೆ'** ಎಂಬ ಸಾಮಾಜಿಕ ಕಥೆಯನ್ನು ವಿಮರ್ಶಿಸಿ ೬ ಜನರಿಂದಲೂ, **'ಸೈನಿಕನ ಇಚ್ಛೆ'** ಎಂಬ ಮನೋವಿಶ್ಲೇಷಣಾತ್ಮಕ ಕಥೆಯನ್ನು ವಿಮರ್ಶಿಸಿ ೩ ಜನರಿಂದಲೂ ಲೇಖನಗಳು ಬಂದಿವೆ.

'ಗೌರಿಯ ಮದುವೆ'ಯ ವಿಮರ್ಶಕರು:

೧ ಶ್ರೀ. ಜಿ. ಆರ್. ಗೋಣಿ, ಗಂದಿಗವಾಡ. ೨ ಶ್ರೀ. ಎಂ. ಆಯ್. ಪಟ್ಟಣಶೆಟ್ಟಿ ಬಿ. ಎ. ವಿಭಾಗ III, ವಿಜಯ ಮಹಾವಿದ್ಯಾಲಯ, ವಿಜಾಪುರ. ೩ ಶ್ರೀ. ಎಂ. ಗಂಗಾಧರಭಟ್ಟ, ನೀರ್ಚಾಲು. ೪ ಶ್ರೀ. ಎಸ್. ಆರ್. ಕುಲಕರ್ಣಿ, ನವಲಗುಂದ. ೫ ಶ್ರೀ. ಎಂ. ಎಸ್. ಭಾಗವತ, ಕಡತೋನಾ. ೬ ಶ್ರೀ. ಡಿ. ಸುಬ್ರಹ್ಮಣ್ಯಭಟ್ಟ VIB. ಬಿ. ಇ. ಎಂ. ಸ್ಕೂಲ್, ಕಾಸರಗೋಡು.

'ಸೈನಿಕನ ಇಚ್ಛೆಯ ವಿಮರ್ಶಕರು:

೧ ಶ್ರೀ. ಎಚ್. ಎಮ್. ವೆಂಕಟೇಶ ಬಿ. ಎಸ್‌ಸಿ. II, ಫರ್ಸ್ಟ್‌ಗ್ರೇಡ್ ಕಾಲೇಜ್, ತುಮಕೂರು. ೨ ಶ್ರೀ. ಎಂ. ಗಂಗಾಧರ ಭಟ್ಟ, ನೀರ್ಚಾಲು. ೩ ಶ್ರೀ. ಸೀತಾರಾಮು, ಪಾಡಿ, ಟೀಚರ್ ಕಲ್ಲಕಟ್ಟ (ಕಾಸರಗೋಡು).

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಸಮಿತಿಯವರೇ ಪರೀಕ್ಷಿಸಿ ತಮ್ಮ ತೀರ್ಮಾನವನ್ನು ಕೊಟ್ಟಿದ್ದಾರೆ :

'ಗೌರಿಯ ಮದುವೆ' ಕಥೆಯನ್ನು ಕುರಿತು ಬಂದುವುಗಳಲ್ಲಿ **ಶ್ರೀ. ಡಿ. ಸುಬ್ರಹ್ಮಣ್ಯಭಟ್ಟ** ಆವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಎಂ. ಆಯ್. ಪಟ್ಟಣಶೆಟ್ಟಿ ಮತ್ತು ಶ್ರೀ. ಎಂ. ಎಸ್. ಭಾಗವತ ಅವರ ವಿಮರ್ಶೆಗಳು ಚೆನ್ನಾಗಿವೆ. ಶ್ರೀ. ಎಸ್. ಆರ್. ಕುಲಕರ್ಣಿಯವರ ವಿಮರ್ಶೆಯೂ ಒಳ್ಳೆಯದು. ಮಿಕ್ಕವು ಸಾಮಾನ್ಯ.

'ಸೈನಿಕನ ಇಚ್ಛೆ' ಕಥೆಯನ್ನು ಕುರಿತು ಬಂದುವುಗಳಲ್ಲಿ **ಶ್ರೀ. ಸೀತಾರಾಮು ಪಾಡಿ**ಯವರ ವಿಮರ್ಶೆ ಉತ್ತಮವಾಗಿದೆ. ಶ್ರೀ. ಎಚ್. ಎಂ. ವೆಂಕಟೇಶ ಆವರ ವಿಮರ್ಶೆ ಚೆನ್ನಾಗಿದೆ ಮಿಕ್ಕುದು ಸಾಮಾನ್ಯ.

ಕಥೆ ಹೇಳುವುದಕ್ಕಾಗಿಯೇ ಹೆಚ್ಚು ಮಾತುಗಳನ್ನು ಬಳಸುವುದಕ್ಕಿಂತ—ಜಯಂತಿಯ ವಾಚಕರೆಲ್ಲರೂ ಓದಿದ ಕಥೆಗಳೇ ಆದುದರಿಂದ—ನೇರವಾಗಿ ವಿಮರ್ಶೆಗೆ ಸಂಬಂಧಿಸಿದೆ ಮಾತುಗಳನ್ನು ಪ್ರಾರಂಭಿಸಿ, ಆದನ್ನೆ ವಿವಿಧ ಮುಖವಾಗಿ ಬೆಳೆಸಿ ಬರೆಯುವುದು ಒಳ್ಳೆಯದು. ಈ ಮಾತನ್ನು ಕಡೆಗೆ ನಮ್ಮ ತರುಣ ವಿಮರ್ಶಕರು ಗಮನದಲ್ಲಿ ಇರಿಸಿಕೊಳ್ಳಬೇಕು. ಅನೇಕರು ಕಥೆಯನ್ನು ಸಂಗ್ರಹಿಸಿ ಬರೆಯುವುದೆಂದರೆಯೇ ವಿಮರ್ಶೆಯೆಂದು ಭಾವಿಸಿದಂತಿದೆ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ನಾನು ಕೊಂದ ಹುಡುಗಿ' ಎಂಬ ಕಥೆಯನ್ನಾಗಲಿ ನಿಮ್ಮ ಮನಸ್ಸಿಗೊಪ್ಪಿದ ಬೇರೆಯ ಯಾವುದಾದರೊಂದು ಲೇಖನವನ್ನಾಗಲಿ ವಿಮರ್ಶೆಗೆ ಆಯ್ದು ಕೊಳ್ಳಬೇಕು. 'ನಾನುಕೊಂದ ಹುಡುಗಿ' ಕಥೆಯ ತಂತ್ರ-ಸಂಕೇತಗಳು ವಿದೇಶೀಯವಾಗಿ, ವಿಲಕ್ಷಣವಾಗಿ ತೋರಬಹುದು. ಆದುದರಿಂದ ಯಾರೂ ಅದನ್ನು ವಿಮರ್ಶಿಸಲು ಹಿಂಜರಿಯಲಾಗದು; ಈ ಬಗೆಯ ಕಥೆಗಳು ಹೇಗೆ ಎನಿಸುವುವೆಂಬುದನ್ನು ಬಿಚ್ಚುಮಾತುಗಳಲ್ಲಿ ಹೇಳಲು ಮುಂದುವರಿಯಬೇಕು.

—ಸಂಪಾದಕ

"ಗೌರಿಯ ಮದುವೆ"

"ವಿಮರ್ಶೆ"

ಲೇ. ದಿ. ಸೀತಾರಾಮು, ಕಾಸರಗೋಡು

ತಂದೆ–ತಾಯಿಗಳೇ ಮಕ್ಕಳ ಭವಿಷ್ಯತ್ತಿನ ಏಳಿಗೆಗೂ, ಅವನತಿಗೂ ಕಾರಣರಾಗಿದ್ದಾರೆ ಎಂದರೆ ಅದು ಹೆಚ್ಚಲ್ಲ. ಮಕ್ಕಳನ್ನು ಯೋಗ್ಯ ರೀತಿಯಲ್ಲಿ ಸಾಕಿ–ಸಲಹಿ, ಮುಗ್ಧ–ಕೋಮಲವಾದ ಎಳೆಯ ಹುನಸ್ಸನ್ನು ಬೇಕಾದಂತೆ ರೂಪಿಸುವ ಹೊಣೆ ಹೆತ್ತವರ ಮೇಲಿದೆ. ಅದರಲ್ಲೂ ಹೆಣ್ಣುಮಕ್ಕಳ ಬಗ್ಗೆ ಅವರು ಬಿಡುಗಣ್ಣಾಗಿರಬೇಕಾದುದು ಅತ್ಯಗತ್ಯವೆಂದರೆ ಅದು ಅತಿಶಯವಲ್ಲ. ಬೆಳೆದು ನಿಂತ ಕನ್ಯೆಯರ ಕಡೆಗೆ ಲಕ್ಷ್ಯ ಕೊಡದಿರುವುದರಿಂದಲಾಗಿ ಇಂದು ವ್ಯಭಿಚಾರವೇ ಮೊದಲಾದ ದುಷ್‌ಕೃತ್ಯಗಳೂ, ಅಂತರ್ಜಾತೀಯ ವಿವಾಹಗಳೂ ದಿನೇ–ದಿನೇ ಹೆಚ್ಚುತ್ತಿವೆಯೆಂದರೆ ಅತಿಯಾಗಲಾರದು. ಇದರಿಂದಲಾಗಿ ಸಾವಿರಾರು ಕನ್ಯೆಯರು ಮಾನವತೆಯನ್ನು ಕಳೆದುಕೊಂಡರೆ–ಇನ್ನು ಹಲವರು ಅಮಾನುಷಗಳಾದ ಘೋರಕೃತ್ಯಗಳನ್ನೆದುರಿಸಲು ಬೊಂಕಗಟ್ಟುತ್ತಿರುವುದು, ಕಣ್ಣಮುಂದೆ ಹಾದುಹೋಗುತ್ತಿರುವ ಸಾಮಾನ್ಯ ಚಿತ್ರಗಳಾಗಿವೆ. ಒಟ್ಟು ಸಂಸಾರದ ಚಿತ್ರವನ್ನು ಒಳಗಣ್ಣಿನಿಂದ ನಿಟ್ಟಿಸುವಾಗ ನಾವು ಕವಲೊಡೆದು ನಿಂತ ನೂರಾರು ಮುಖಗಳನ್ನು ಕಾಣಬಹುದು. ಈ ಮುಖಗಳಲ್ಲಿ ಮಕ್ಕಳ ಮುಂದೆ ನೆಲೆನಿಂತ ತಂದೆತಾಯಂದಿರ ಜೀವಿತವನ್ನು ನಿಲುಕುವುದು ಮರೆಯಲಾಗದ ಮಾತು. ಆ ಚಿತ್ರದಲ್ಲೂ ಒಂದು ಬಗೆಯ ಭೀಕರತೆಯಿದೆಯೆಂದಾದರೆ, ಆಗುವ ನೋವು–ಆಗುವ ಸಂತಾಪ ವರ್ಣನಾತೀತವಾಗಿದೆ.

ವೈಯಕ್ತಿಕ ಸ್ವಾರ್ಥಕ್ಕೆ–ಧನಲಾಲಸೆಯ ಪಾಶಕ್ಕೆ ಸಿಕ್ಕಿದ ತಂದೆಯೊಬ್ಬನು, ಅಲ್ಲ–ಧನಪಿಶಾಚದ ಗರಬಡಿದ ಚಾಂಡಾಲನೊಬ್ಬನು, ಮಗಳ ಮದುವೆಯನ್ನು ಮುಂದೂಡಿ ಮಗಳ ಬಲಿದಾನ ತೆಗೆದುಕೊಂಡ ದುರಂತ ಚಿತ್ರಣವೇ " ಗೌರಿಯ ಮದುವೆ "

ಗೌರಿ ಇಪ್ಪತ್ತರ ಹರೆಯದ ಕನ್ಯೆಯಾಗಿದ್ದರೂ, ತಂದೆ ಶಂಕರರಾಯರ ವೈಯಕ್ತಿಕ ಲಾಭ ದೃಷ್ಟಿಯಿಂದ ವರದಕ್ಷಿಣೆ ಚಿಕ್ಕಾಸೂ ಕೊಡಲಾರೆನೆಂದು, ಭೀಷ್ಮಪ್ರತಿಜ್ಞೆ ಮಾಡಿದುದರಿಂದ ಇನ್ನೂ ಮದುವೆಯಾಗಿರಲಿಲ್ಲ. ಬಂದ–ಬಂದವರೆಲ್ಲ ಅಲ್ಲಸಲ್ಲದ ಪ್ರಶ್ನೆಗಳನ್ನು ಹಾಕಿ, ಕಡೆಗೆ ಕುಂಟುನೆಪ ಹೇಳಿ ಜಾರುತ್ತಿರುವುದನ್ನು ಕಂಡು ಶಾರದಮ್ಮ ಮಗಳ ಮದುವೆಯ ಚಿಂತೆಯಲ್ಲಿಯೆ ಕರಗುತ್ತಿದ್ದಳು. ಗೌರಿಯದು " ಕರಿಮೂಲ "ವೆಂದಾದ ಅಪಪ್ರಚಾರವೂ ಅವಳ ಮದುವೆಯನ್ನು ಮುಂದೂಡುವಲ್ಲಿ ಕಾರಣವಾಗಿತ್ತು. ಕಡೆಗೊಬ್ಬ B. Sc. ಕಲಿತ ತರುಣನು " ಸಾಟಮಾರ್ " ಮದುವೆಗೊಪ್ಪಿದರೆ, ಶಂಕರರಾಯರು ಮಗ ಅಚ್ಯುತನಿಗೆ ಐದಾರು ಸಾವಿರ ರೂಪಾಯಿಯಾದರೂ ಸಿಗಲೇಬೇಕೆಂದು ಆ ಮಾತನ್ನಲ್ಲಿಗೆ ನಿಲ್ಲಿಸಿದರು. ಶಾರದಮ್ಮ–ಶಂಕರರಾಯರ ನ್ನೊಪ್ಪಿಸಲು ಮಾಡಿದ ಪ್ರಯತ್ನವು ವಿಫಲವಾಗಿ, ಹರೆಯದ ಮಗಳನ್ನು ಮನೆಯಲ್ಲಿಟ್ಟು, ಅಚ್ಯುತನಿಗೆ ಕುರೂಪಿಯೊಬ್ಬಳನ್ನು ಹಣದಾಸೆಗೆ ' ಶ್ರೀಮಂತಸಂಘ 'ದಿಂದ ಗಂಟು ಹಾಕುವುದನ್ನು ಕಂಡೂ–ಕಾಣದಂತಿರಬೇಕಾಯಿತು. ಅಜ್ಜಮ್ಮನಾದ ತನ್ನನ್ನಿನ್ನು ಮದುವೆಯಾಗಲು ಮುಂದಾಗುವವರಾರೂ ಇರಲಾರರೆಂಬ ಚಿಂತೆಯಲ್ಲಿ, ಗೌರಿಯು ಅಣ್ಣನ ಮದುವೆಗೆ ಸಮ್ಮತಿಸಿ, ಮನೆತುಂಬಾ ಓಡಾಡಿ, ಮದುವೆ ಕಳೆದ ಏಳೆಂಟು ದಿನಗಳಲ್ಲಿ ಬಾವಿಗೆ ಹಾರಿ ಅಸುವನ್ನು ನೀಗುವಳು. ಶಂಕರರಾಯರ ಧನಲಾಲಸೆಯ ಮುಂಕುತೆರೆಯು ಹರಿಯುತ್ತಿದ್ದಂತೆ, ಈ ರುದ್ರನಾಟಕದ ತೆರೆಯು ಕೆಳಗಿಳಿಯುವುದು.

ಇಪ್ಪತ್ತರ ಹರೆಯದ ಕನ್ಯೆ ಗೌರಿ, ಸಹನೆಯ ಮೂರ್ತಿ ಶಾರದಮ್ಮ ಇಲ್ಲಿ ಬರುವ ಸ್ತ್ರೀಪಾತ್ರಗಳು. ಧನಪಿಶಾಚದ ಗರ ಬಡಿದ ತಂದೆ ಶಂಕರರಾಯರ ವಿನಾ ಅಚ್ಯುತ ಮತ್ತು B. Sc. ಯಾದ ತರುಣ–"ಸ್ತ್ರೀಯ ಜೊರಳ ಉರುಳು ವರದಕ್ಷಿಣೆ" ಎಂಬ ಲೇಖನ ಬರೆದ ಮಹಾನುಭಾವರೇ ಮೊದಲಾದ ಚಿಕ್ಕ ಪುರುಷ ಪಾತ್ರಗಳೂ ಕಥೆಯ ಬೆಳವಣಿಗೆಗಾಗಿ ಅಲ್ಲೊನ್ನೆ–ಇಲ್ಲೊನ್ನೆ ಇಣಿಕಿ ನೋಡುತ್ತವೆ. ಪಾತ್ರ ರಚನಾ ಕೌಶಲ್ಯವು ಪ್ರಸ್ತುತ ಕಥಾಭಾಗಕ್ಕೆ ಅತಿಶಯವಾಗಿ ಬೇಕೆನಿಸಿಲ್ಲವಾದರೂ, ನಿರೂಪಿತನಾದ ಇಲ್ಲಿಯ ವಿಧಾನ ಚೆನ್ನಾಗಲಿಲ್ಲ.

ಬೆಳೆಯುತ್ತಿರುವ ಮಲ್ಲಿಗೆಯ ಲತೆಯೊಂದು ಆಧಾರವನ್ನಿರುನೋಡುವಂತೆ, ಇಪ್ಪತ್ತರ ಹರೆಯದಲ್ಲಿ ಬೆಳೆದುನಿಂತ ಗೌರಿಯು ನಲ್ಲನಿಗಾಗಿ ಇದಿರುನೋಡುತ್ತಿರುವುದು ಸ್ತ್ರೀಸಹಜವಾಗಿದೆ. " ನಾನು ಹೊಗೆ ಹುಟ್ಟಿಸುವ ' ಬೆಂಕಿ ' ಅಲ್ಲವೇನಮ್ಮಾ " ? ಎನ್ನುತ್ತಿರುವ ಅವಳ ಮಾತಿನಲ್ಲಿ, ತಂದೆ–ತಾಯಿಗಳಿಗೆ ತಾನು–ಹರೆಯದ ಕನ್ಯೆ ಎಷ್ಟರ ಮಟ್ಟಿಗೆ ಭಾರವಾಗಿದ್ದಾಳೆ, ಅಲ್ಪಳೆನಿಸಿ ತುಚ್ಛಳಾಗಿದ್ದಾಳೆಂದೂ ವಿಶದಪಡಿಸುವುದರೊಂದಿಗೆ, ಅವಳ ಹೃದಯದಲ್ಲಡಗಿದ ಯಾತನೆಯನ್ನು ಎತ್ತಿತೋರಿದುದು ಸ್ತ್ರೀತ್ವಕ್ಕೆ ಒಪ್ಪುತ್ತಿದೆ. " ಎಲ್ಲಕ್ಕೂ ಕಾಲಕೂಡಿ ಬರಬೇಕು....ಬಹುಬೇಗ ಕೂಡಿಬರುವುದು....ಆ "ಕಾಲ"—ಎನ್ನುತ್ತಿರುವ ಗೌರಿಯ ಕಟ್ಟಕಡೆಯ ಮನೋನಿರ್ಧಾರವನ್ನೂ, ಶಾರದಮ್ಮನಿಗೆ ಸಮರ್ಪಕವಾದ ಉತ್ತರವಾಗುವಂತೆ ನಿರೂಪಿಸಿರುವುದರಲ್ಲಿ ಕಥನ ಕೌಶಲ್ಯವಿದೆ. ಗೌರಿಯ ಪಾತ್ರನಿರೂಪಣೆಯಲ್ಲಿ ಲೇಖಕರು ಕೊನೆಯ ಭಾಗವೊಂದನ್ನು ಬಿಟ್ಟರೆ ಬಹುಮಟ್ಟಿಗೆ ಯಶಸ್ವಿಗಳಾಗಿದ್ದಾರೆಂದು ಓದುಗನಿಗೆ ತಿಳಿದಿರಲಾರದು.

ಶಾರದಮ್ಮನ ವ್ಯಕ್ತಿತ್ವ " ಬೆಣ್ಣೆಯಂತೆ ಅವಳ ಹೃದಯ .... ತುಸು ಬಿಸಿಯಾದರೆ ಕಣ್ಣೀಠಾಗಿ ಕರಗಿಬಿಡುತ್ತಿತ್ತು " ಎನ್ನುತ್ತಿರುವುದು ತಾಯ್ತನಕ್ಕೆ–ಸ್ತ್ರೀತ್ವಕ್ಕೆ ಒಪ್ಪುತ್ತಿದೆ ಎನ್ನುವಾಗಲೆ, ಅಲಂಕಾರಳಾಗಿ ಹೊರಬಂದ ಗೌರಿಯನ್ನು " ಇನ್ನಾರಾದರೂ ನೋಡಿದರೆ ದೃಷ್ಟಿಯಾಗುತ್ತೆ " ಎಂದು ಅವಳ ಗಲ್ಲದ ಮೇಲೆ ಕರಿ ಬೊಟ್ಟನ್ನಿಡುವುದೂ–ಅವಳ ಕೆನ್ನೆ ಸವರಿ, ನೆಲಕ್ಕೆ ನೆಟ್ಟ ಮುರಿಯುತ್ತಿರುವಂತೆ ಲೇಖಕರು ನಿರೂಪಿಸಿರುವುದೂ, ಹರೆಯದ ಮಗಳಲ್ಲಿ ತೋರಿಸಬೇಕಾದ ತಾಯ್ತನಕ್ಕೆ

ಒಪ್ಪಲಾರದೆಂದು ಹೇಳಲೇಬೇಕಾಗಿದೆ. ಮಗಳ ಅಂತಿಮದ ದುಃಸ್ಥಿತಿಯನ್ನು ಕಂಡ ಶಾರದಮ್ಮನ "ಕಣ್ಣಿನಿಂದ ಒಂದು ಹನಿ ಕಂಬನಿ ಉದುರಲಿಲ್ಲ "ಎನ್ನುತ್ತಿರುವುದು ಶಾರದಮ್ಮನ ಮಾತೃತ್ವಕ್ಕೇ ಕುಂದು ತರುವಂತಹುದಾಗಿದೆ. ಇದರಿಂದಲಾಗಿಯೆ ಕಥೆಯು ಕೊನೆಯಲ್ಲಿ ಕುಸಿದು ಬಿದ್ದಿದೆಯೆಂದು ವಾಚಕರ ದೃಷ್ಟಿಗೆ ನಿಲುಕದಿರದು.

ಗೌರಿಯನ್ನು ಮದುವೆಯಾಗಬಂದವರಿಗೆಲ್ಲ "ನಾನೇನು ವರ ವಿಕ್ರಯಕ್ಕೆ ಕುಳಿತಿಲ್ಲ. ವರದಕ್ಷಿಣೆ ಒಂದು ಚಿಕ್ಕಾಸೂ ಕೊಡಲಿಕ್ಕಿಲ್ಲ" ಎಂದ ಶಂಕರರಾಯರೆ- "ಹುಡುಗನಿಗೆ B. Com ಕಲಿಸಿದ್ದೇನೆ. ನಾನು ಅವನ ವಿದ್ಯೆಗೆ ಸುರಿದ ಹಣವಾದರೂ ಸಿಗಬೇಡವೇ?" ಎನ್ನುತ್ತಿರುವುದು ಅವರ ಹೃದಯದಲ್ಲಿ ನೆಲೆನಿಂತ ಧನಲಾಲಸೆಯ ದೆವ್ವವು,- ಪುತ್ರವಾತ್ಸಲ್ಯವನ್ನು ಸ್ಥಾನಚ್ಯುತಿಗೊಳಿಸಿ, ಮಗಳನ್ನೇ ಸ್ವಾರ್ಥಕ್ಕಾಗಿ- ಧನಲಾಲಸೆಯಿಂದ ಬಲಿತೆಗೆದುಕೊಂಡ ಅವರ ಹೃದಯಕಾಠಿಣ್ಯದ ಸಾಕ್ಷಿಯಾಗಿದೆಯೆನ್ನಬೇಕಾಗುತ್ತದೆ. ಆದರೆ ಶಂಕರರಾಯರ ಹೃದಯ-ಕಾಠಿಣ್ಯದ ಹಿನ್ನೆಲೆಯೇನೂ ಕಂಡುಬಾರದೆ, ಶಂಕರರಾಯರ ಪಾತ್ರದ ಕಾಠಿಣ್ಯವು ಕುಂದಿದೆ, ಅಲ್ಲದೆ ಪರಿಪಕ್ವವಾಗಿ ಈ ಪಾತ್ರವು ಬೆಳೆದು ಬಂದಿಲ್ಲವೆಂಬುದು ಅದರ ಕುಂದಾಗಿದೆ ಎಂದೆನಿಸುತ್ತದೆ.

B. Com ಕಲಿತ ವಿದ್ಯಾವಂತನೊಬ್ಬನು ವಧೂಸಂದರ್ಶನ ಮಾಡದೆ, ತಂದೆಯೆ ಹೇಳುತ್ತಿರುವುದನ್ನು ಕೇಳಿ ಮದುವೆಯಾಗುವುದು ಈ ಇಪ್ಪತ್ತನೆಯ ಶತಮಾನಕ್ಕೆ ಒಪ್ಪಲಾರದೆಂದು ನನಗೆನಿಸುತ್ತದೆ. ಒಂದು ಪಕ್ಷದಲ್ಲಿ ಅಚ್ಯುತನು ತಂದೆ ಹಾಕಿದ ಗೆರೆಯನ್ನು ಚಾ-ಚೂ ಅನ್ನದೆ ಅನುಸರಿಸುವ ಮಗನಾದರೆ ಹೀಗಾಗಬಲ್ಲದು. ಆದರೆ ಪ್ರಕೃತ ಇಲ್ಲಿ ಅಚ್ಯುತನ ಚಿತ್ರಣದಲ್ಲಿ ಈ ಎರಡು ಗುಣಗಳಲ್ಲಿ ಒಂದನ್ನೂ ಕಾಣದಿರುವ ನ್ಯೂನತೆಯು ಎದ್ದು ಕಾಣುವುದರಲ್ಲಿ ಸಂದೇಹವಿಲ್ಲ.

'ಸ್ತ್ರೀಯ ಕೊರಳ ಉರುಳು ವರದಕ್ಷಿಣೆ' ಎಂಬ ಲೇಖನ ಬರೆದಂತಹ ವ್ಯಕ್ತಿಗಳಿಂದು ಸಮಾಜದಲ್ಲಿ ಇದ್ದಾರೆ. "ನನ್ನ ಈ ಬೋಧೆಯೆಲ್ಲ ನನಗೂ-ನಿನಗೂ ಅಲ್ಲ? ಉಳಿದವರಿಗಾಗಿ" ಎಂಬ ಮಾತಿನಂತೆ "ಎಲ್ಲರೂ ಮಾತಿನಲ್ಲಿ-ಇತರರಿಗೆ ಕೊಡುವ ಬೋಧನೆಯಲ್ಲಿ ಮುಂದು- ಕಾರ್ಯದಲ್ಲಿ-ಆಚರಣೆಯಲ್ಲಿ ಹಿಂದು" ಎಂದು ಎತ್ತಿತೋರಿರುವುದು ಶ್ಲಾಘನೀಯವಾಗಿದೆ.

ದುರಂತದಲ್ಲಿ ಕೊನೆಗೊಳ್ಳುವ ಕಥೆಯಲ್ಲಿ, ಅದಕ್ಕೆ ಅನುಗುಣವಾಗಿ ನಿಂತ ಕಥಾವಸ್ತುವಿನ ರಚನೆಯಲ್ಲಿ ಮೂಡಿಬಂದ ಉಪಸಂಹಾರವು ಓದುಗನ ಮೇಲೆ ಯಾವ ಬಗೆಯ ಮಾನಸಿಕ ಪರಿಣಾಮವನ್ನೂ ಉಂಟು ಮಾಡಲಿಲ್ಲವೆಂದು ಇಲ್ಲಿ ಕಾಣುವ ಒಂದು ಮುಖ್ಯ ದೋಷವಾಗಿದೆ. ಅಲ್ಲದೆ ವಧೂಪರೀಕ್ಷೆಯ ಕಾಲದಲ್ಲಿ ತನ್ನ ಮಗಳ ಮುಂದೆ ಕಾಣಿಸಿದ ತಾಯಿಯ ಹೃದಯವು ಮಾತೃಪ್ರೇಮದ ಕೋಡಿಯನ್ನು ಹರಿಸುವುದಾದರೂ, ಅದೇಕೋ, ಭಾವಾತಿರೇಕದ-ವರ್ಣಾತಿರೇಕನ ಒಂದು ಅಸಹಜತೆಯಲ್ಲಿ ನಿಂತಿದೆಯೆಂದರೆ ಓದುಗನ ಮುಂದೆ ಇದು ಹೊಸತೆನಿಸದು. ಒಟ್ಟು ತನ್ನ ಸ್ವಾರ್ಥದ ನಿಕೃಷ್ಟತೆಯ ಮುಂದೆ ಹೆಣ್ಣನ್ನು ಬಲಿಕೊಡಲು-ಬಲಿತೆಗೆದುಕೊಳ್ಳಲು ಹಿಂದು-ಮುಂದಾಗದ ಒರ್ವ ತಂದೆಯ ಹೃದಯವನ್ನಿಲ್ಲಿ ಲೇಖಕರು ನಿರೂಪಿಸಿದುದೂ-ಮಾತೃಹೃದಯದ ಆಕಾಂಕ್ಷೆಗಳನ್ನು ಹೊರ ತೋರಿದುದೂ ಮೆಚ್ಚಬಹುದಾಗಿದೆ. ಸಂದರ್ಭ ಪೋಷಕವಲ್ಲದ B. Com ಕಲಿತು, ಸಮಾಜದ ಒಳಿತನ್ನೇ ಅರಿಯದವನಂತಿದ್ದ ಅಚ್ಯುತನ ಪಾತ್ರವನ್ನಿಲ್ಲಿ ತಂದುದು ಬಹುಶಃ ತಂದೆಯ ಹೃದಯಕಾಠಿಣ್ಯವನ್ನೂ-ಗೌರಿಯ ದುರಂತವನ್ನೂ ಕಾಣಿಸಲು ಲೇಖಕರು ಮಾಡಿದ ಸಾಹಸವಿರಬಹುದು! ಮದುವೆ ಕಳೆದು ಎಂಟು ದಿನಗಳ ಮುಂದೆ ದುರಂತಕ್ಕೀಡಾದ ಗೌರಿಯ ವರಣದ ವೇದನೆಗಾಗಿ ನಾವು ಕೊರಗುವುದಕ್ಕಿಂತ, ಲೇಖಕರು ಮದುವೆಗೂ-ದುರಂತಕ್ಕೂ ಮಧ್ಯದಲ್ಲಿ ತಂದಿಕ್ಕಿದ ಅತಿ ದೀರ್ಘದ ಬಿಡುವಿಗಾಗಿ ಆಶ್ಚರ್ಯಪಡಬೇಕಾಗಿದೆ!! ಸಮಾಜಜೀವನದ ಒಂದು ಮುಖವನ್ನು ಕಾಣಿಸಲು ಪ್ರಯತ್ನಿಸಿದ ಲೇಖಕರ ಈ ಕೃತಿಗೆ ತುಂಬೆದೆಯ ಸ್ವಾಗತವು. ●

ಸೈನಿಕನ ಇಚ್ಛೆ

(ಸಣ್ಣಕಥೆಯ ವಿಮರ್ಶೆ)

ವಿಮರ್ಶಕ: ಎಸ್. ಆರ್. ಹಾಡಿ

ಯಾವನೇ ಒಬ್ಬ ವ್ಯಕ್ತಿ ಸರ್ವಗುಣ ಸಂಪನ್ನನಾಗಿ, ಜೀವನದಲ್ಲಿ ಪರಿಪೂರ್ಣನಾಗಿರುವುದು ತೀರಾ ವಿರಳ. ಮಾನವನಲ್ಲಿ ಇಲ್ಲದಂತಹ ಅಮಾನುಷ ಗುಣಗಳನ್ನು ಕಲ್ಪಿಸಿ, ಅವನನ್ನು ದೇವ-ತ್ವದ ಪದವಿಗೇರಿಸಿ ಸಾಹಿತ್ಯಸೃಷ್ಟಿಗೈದರೆ, ಅದು ಅತಿಶಯೋಕ್ತಿಯಾದೀತು; ವಾಸ್ತವ ಪ್ರಪಂಚಕ್ಕಿಂತ ದೂರವಾದೀತು. ಆದರೆ ಮಾನವಸಹಜವಾದ ದೌರ್ಬಲ್ಯಗಳಿಂದ ಕೂಡಿದ್ದು, ಕೆಲವೊಂದು ಕಟ್ಟುನಿಟ್ಟು ರೀತಿನೀತಿಗಳನ್ನು ಜೀವನದಲ್ಲಿ ಅನುಸರಿಸಿಕೊಂಡು ಬರುವ ವ್ಯಕ್ತಿಗಳಿಗೇನೂ ಸಮಾಜದಲ್ಲಿ ಕೊರತೆಯಿಲ್ಲ. ಅಂಥವರು ತಮ್ಮ ಜೀವನದಲ್ಲಿ ಒಂದೆರಡುಬಾರಿ ಎಡವಿದರೂ, ಉಚಿತ ಅನುಚಿತಗಳನ್ನು ವಿವೇಚಿಸಿ, ಮನುಷ್ಯತ್ವದ ಬೆಲೆಯನ್ನರಿತು ಮುನ್ನಡೆಯುವ ಶಕ್ತಿಯನ್ನು ಪಡೆದಿರುತ್ತಾರೆ. ಸಮಾಜಕ್ಕೆ ಕಂಟಕರಾಗದೆ, ಸಾಧ್ಯವಿದ್ದಲ್ಲಿ ಅವನ್ನು ಮೇಲಕ್ಕೆತ್ತಲು ಪ್ರಯತ್ನಿಸುತ್ತಾರೆ. ಅಂತಹ ವ್ಯಕ್ತಿಗಳ ಪ್ರತಿನಿಧಿಯೇ ಕ್ಯಾಪ್ಟನ್ ವಸಂತ. ಅವನ ಜೀವನದ ಕತೆಯೇ ಶ್ರೀ. ಸಿ. ಎಸ್. ಕುಲಕರ್ಣಿಯವರ ಲೇಖನಿಯಿಂದ ಹೊರಬಿದ್ದ 'ಸೈನಿಕನ ಇಚ್ಛೆ'. ವಾಸ್ತವಿಕತೆಗೆ ಆದರ್ಶದ ಮೆರುಗನ್ನು ಕೊಟ್ಟು ಚಿತ್ರಿಸಿದ ಸುಂದರವಾದ ಪ್ರಗತಿಪರ ಕಥೆಯಿದು:

ಅಂಜನಾ ಮತ್ತು ನಿರ್ಮಲಾ— ವಸಂತನ ಬಾಳಬಟ್ಟೆಯಲ್ಲಿ ಹಾದುಹೋದ ಎರಡು ಹೆಣ್ಣುಗಳು. ಒಬ್ಬಳು ಗೃಹಿಣಿ, ಇನ್ನೊಬ್ಬಳು ವೇಶ್ಯೆ. ಮೊದಲನೆಯವಳು ವಸಂತನ ಹೃದಯದಲ್ಲಿ ಕ್ರಾಂತಿಯ ಬಿರುಗಾಳಿಯೆಬ್ಬಿಸಿದ್ದರೆ, ಎರಡನೆಯವಳು ಶಾಂತಿಯ-ಪ್ರೇಮದ ಮಳೆ

ಗರೆದಳು. ಅಂಜನಾ ಕಾಮಾಂಧಳಾಗಿ ಅವನನ್ನು ಮಿತ್ರದ್ರೋಹಕ್ಕೆ ಪ್ರೇರೇಪಿಸಿ ಅವನತಿಯ ಕಡೆಗೆಳೆಯುವ ಜಾರುವ ದಾರಿಯಾದರೆ, ನಿರ್ಮಲಾ ತನ್ನ ನಿರ್ಮಲ ಪ್ರೇಮವನ್ನರ್ಪಿಸಿ, ಕಣ್ಣುತೆರೆಯಿಸಿ ಅವನ ಉನ್ನತಿಯದಾರಿಯನ್ನು ತೋರಿದ ಸೋಪಾನ. ಜಾರು ದಾರಿಯನ್ನು ಬಿಟ್ಟು ಸೋಪಾನವನ್ನೇ ಏರಿದನಾತ.

ಮುಖ್ಯವಾಗಿ ಸಂಭಾಷಣಾ ರೂಪದಲ್ಲಿಯೇ ಕಥೆ ಸಾಗಿದೆ. ಅಂಜನಾ–ವಸಂತ, ನಿರ್ಮಲಾ–ವಸಂತ ಇವರೊಳಗಿನ ಮಾತುಕತೆಯಿಂದಲೇ ಹೆಚ್ಚಿನ ಸಂಗತಿಗಳು ತಿಳಿದುಬರುತ್ತವೆ. ಲೇಖಕರು ಸ್ವತಃ ಹೇಳಿದ ವಿಷಯಗಳು ಅತ್ಯಲ್ಪ. ಗೌಣಪಾತ್ರವಾದ ಅನಿಲ ಕಥೆಯ ಕೊನೆಗೊಮ್ಮೆ ಮಾತ್ರ ವೃತ್ತಪತ್ರಿಕೆ ಹಿಡಿದು ನಮ್ಮ ಮುಂದೆ ಬರುತ್ತಾನೆ.

ವಸಂತ–ಕಥಾನಾಯಕ–ಸೈನಿಕನಾಗಿದ್ದಾನೆ. ಪ್ರಣಯಭಂಗದಿಂದಾಗಿ ಅವಿವಾಹಿತನಾಗಿಯೇ ಉಳಿದವನು. ಅತ ಆದರ್ಶದ ಪ್ರತಿಮೂರ್ತಿಯೇನಲ್ಲ. ಮಾನವಸಹಜವಾದ ಗುಣದೋಷಗಳು ಅವನಲ್ಲಿವೆ. ವಿಷಯಾಸಕ್ತಿ ತುಂಬಿತುಳುಕುತ್ತಿದ್ದರೂ ಅದಕ್ಕೆ ನೀತಿನಿಯಮದ ನಿರ್ಬಂಧವನ್ನು ಹಾಕಿದ್ದಾನೆ. ಕೃತಜ್ಞತಾಬುದ್ಧಿ ಅವನಲ್ಲಿರುವ ಒಂದು ಹಿರಿಯ ಗುಣ. ತನ್ನ ಶಿಕ್ಷಣ ಮುಂದುವರಿಯುವಂತೆ ಸಹಾಯ ಮಾಡಿದ್ದ ಗೆಳೆಯ ಅನಿಲನನ್ನು 'ಅಣ್ಣನಂತೆ' ಕಾಣುತ್ತಾನೆ. ಆತನಿಗೆ ದ್ರೋಹಬಗೆಯಬಾರದೆಂಬ ಧೃಢನಿರ್ಧಾರ ವಸಂತನಲ್ಲಿದೆ. ಸೈನಿಕರ ಸ್ವಾಭಾವಿಕ ದುರ್ಗುಣಗಳು ಅವನಲ್ಲಿ ನೆಲಸಿದ್ದರೂ ಅದಕ್ಕವನು ತನ್ನ ಹೃದಯದ ಮಾನವತೆಯನ್ನು ಬಲಿಗೊಡಲಿಲ್ಲ.

ಮನುಷ್ಯನ ಅಂತರಾತ್ಮವು ಸದಾ ಜಾಗೃತವಾಗಿದ್ದರೆ ಮನೋವೃತ್ತಿಯು ಸ್ವಚ್ಛಂದವಾಗಲಾರದು—ಎಂಬುದು ಮನೋವೈಜ್ಞಾನಿಕ ಸತ್ಯ. ಅನಿಲನ ಹೆಂಡತಿ ಅಂಜನಾ ವಸಂತನಿಗೆ ಕಾಮದಕರೆಯನ್ನೀಯುತ್ತಿದ್ದರೂ ಅವನದಕ್ಕೆ ಓಗೊಡಲಿಲ್ಲ. ಒಂದೆಡೆ ವಿಷಯಾಕ್ತಿ, ಇನ್ನೊಂದೆಡೆ ಮಿತ್ರದ್ರೋಹ ಬಗೆಯಬಾರದೆಂಬ ಸದ್ಭಾವನೆ— ಈ ಅಂತರ್ದ್ವಂದಕ್ಕೆ ಸಿಲುಕಿ ಅವನು ಚಡಪಡಿಸುತ್ತಾನೆ. ತನ್ನಿಂದ ಎಲ್ಲಿ ಮಿತ್ರನಿಗೆ ಅನ್ಯಾಯವಾಗಿಬಿಡುವುದೋ ಎಂಬ ಹೆದರಿಕೆಯಿಂದ ಅವನ ಮನೆಗೆ ಹೋಗಲೂ ಹಿಂಜರಿಯುತ್ತಾನೆ. ಹೋರಾಟದಲ್ಲಿ ಸದ್ಭಾವನೆಗೆ ಜಯದೊರೆಯಿತು. ಕಾರಣ—ಅವನ ಆತ್ಮ ಜಾಗೃತವಾಗಿರುತ್ತಿತ್ತು. ಹಾಗಿಲ್ಲದಿರುತ್ತಿದ್ದರೆ ಅಂಜನಾ ಅಡ್ಡಗಟ್ಟಿ ಅವನನ್ನು ತಬ್ಬಿಕೊಂಡಾಗ ಹಾರಾಗಿಬರುವುದು ಅವಿವಾಹಿತ ತರುಣನಾದ ಅವನಿಗೆ ಅಸಾಧ್ಯವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಈ ಸಮಯದ ಅವನ ಸಾಹಸವನ್ನು ಲೇಖಕರ ಮಾತಿನಲ್ಲೇ ಹೇಳುವ ದಾದರೆ—" ಅವನು ಅಂಜನೆಯನ್ನು ಬದಿಗೆ ಸರಿಸಿಬರಬೇಕಾಪರೆ, ತನ್ನ ಇಚ್ಛಾಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ತನ್ನ ವಿವೇಕವನ್ನು ಜಾಗೃತಗೊಳಿಸಿ ಬಹಳಷ್ಟು ಸಾಹಸವನ್ನು ಮಾಡಬೇಕಾಗಿತ್ತು."

ನಿರ್ಮಲೆಯ ಸಂಪರ್ಕದಿಂದ ನವೀನ ಸತ್ಯವೊಂದನ್ನು ಕಂಡುಕೊಳ್ಳುತ್ತಾನೆ ವಸಂತ. ಅಂಜನಾ ನಿರ್ಮಲಾ—ಇಬ್ಬರ ಚಿತ್ರವೂ ಅವನ ಮನಃಪಟಲದಲ್ಲಿ ಮೂಡಿ ಮಾಯವಾಗುತ್ತದೆ, ಗೃಹಿಣಿಯಾದ ಅಂಜನಾ ತನ್ನ ಬಾಳಿನಲ್ಲಿ ಸಾರವನ್ನು ಕಾಣದೆ, ವೇಶ್ಯೆಯಾಗಿ ರೋಮಾಂಚಕಾರಿ ಜೀವನ ನಡೆಸಬಯಸುತ್ತಾಳೆ. ವೇಶ್ಯೆಯಾದ ನಿರ್ಮಲಾ ನರಕಸದೃಶವಾದ ಆ ಜೀವನದಿಂದ ಮುಕ್ತಳಾಗಿ ಗೃಹಿಣಿಯಾಗಲು ಆಶಿಸುತ್ತಾಳೆ. ವಸಂತ ಈ ಎರಡು ಹೆಣ್ಣುಗಳ ವ್ಯಕ್ತಿತ್ವವನ್ನು ತನ್ನ ವಿವೇಚನೆಯ ಒರೆಗಲ್ಲಿಗೆ ಹಚ್ಚಿನೋಡಿದ; ವಿಮರ್ಶೆಯ ತಕ್ಕಡಿಯಲ್ಲಿ ತೂಗಿ ನೋಡಿದ. ನಿರ್ಮಲಾ ಹೆಚ್ಚಿನವಳಾಗಿ ಕಂಡಳು ಆತನಿಗೆ. ಅವನ ಜೀವನ ಪ್ರವಾಹದ ಗತಿ ಬೇರೆಯಾಯಿತು ಅಂದಿನಿಂದ. ತಾನು ಯುದ್ಧದಲ್ಲಿ ಸತ್ತರೆ ತನ್ನ ಸಕಲ ಸಂಪತ್ತೂ ನಿರ್ಮಲೆಗೆ ಸಲ್ಲಬೇಕೆಂದೂ, ವೇಶ್ಯಾಗೃಹದಿಂದ ಅವಳನ್ನು ಬಿಡಿಸಿ, ಮನಬಂದವರನ್ನು ವರಿಸಿ ಗೃಹಿಣಿಯ ಜೀವನ ನಡೆಸಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನೂ ಅವಳಿಗೆ ಒದಗಿಸಿಕೊಡಬೇಕೆಂದೂ ತನ್ನ ಕೊನೆಯ ಇಚ್ಛೆಯನ್ನೂ ಡೈರಿಯಲ್ಲಿ ಬರೆದಿಡುತ್ತಾನೆ. ಯುದ್ಧದಲ್ಲಿ ಹೋರಾಡಿ, ವಸಂತ ಮಡಿದನಂತರ ಅವನ ಕೊನೆಯ ಇಚ್ಛೆ ನೆರವೇರಿಸಲ್ಪಡುತ್ತದೆ. ಹೀಗೆ ವಸಂತನ ಪಾತ್ರಸೃಷ್ಟಿಯ ಮೂಲಕ ವೇಶ್ಯೋದ್ಧಾರದ ಒಂದು ಮಾದರಿಯನ್ನೇ ಸಮಾಜದ ಮುಂದಿರಿಸಿದ್ದಾರೆ ಲೇಖಕರು.

ಭಾರತೀಯ ಮಹಿಳೆಯರ ಆದರ್ಶವೇನೆಂಬುದನ್ನು ತಿಳಿಯದೆ, ಗೃಹಿಣೀ ಧರ್ಮವನ್ನು ಸರಿಯಾಗಿ ಪಾಲಿಸದೆ ಅದನ್ನು 'ಗಾಣದೆತ್ತಿನ ಜೀವನ' ಎಂದು ಹಳಿದು, ವೇಶ್ಯಾಜೀವನವನ್ನು ಬಯಸುವ ತಿಳಿಗೇಡಿ ಅಂಜನಾ ಕಾಮೋನ್ಮಾದಿನಿಯಾಗಿ ವಾಚಕರ ಮುಂದೆ ನಿಲ್ಲುತ್ತಾಳೆ. ಲೇಖಕರು ಅವಳ ಬಾಯಿಂದ ಹೊರಡಿಸುವ ಪ್ರತಿಯೊಂದು ಮಾತೂ ಅವಳ ಸ್ವಭಾವದ ಪರಿಚಯವನ್ನೂಡಿಕೊಡುತ್ತದೆ. ಆಕೆ ವಾಚಾಳಿ–ವಾದದಲ್ಲಿ ನಿಪುಣೆ. ಸೈನಿಕರ ಕುರಿತು ಅವಳ ಟೀಕೆ ಟಪ್ಪಣಿಗಳನ್ನು ಕೇಳಿ ವಸಂತನೂ ದಂಗುಬಡಿದು ಹೋಗುತ್ತಾನೆ. ಕಾಮಾಂಧ ಸ್ತ್ರೀಯು ಲಜ್ಜಾಹೀನಳಾಗುತ್ತಾಳೆ ಎಂಬುದಕ್ಕೆ ವಸಂತನೊಡನೆ ಅಂಜನೇಯ ವರ್ತನೆಯೇ ಸಾಕ್ಷಿ. " ಹೀಗೆ ಮಾತಾಡಲು ನಾಚಿಕೆಬರುವುದಿಲ್ಲವೇ ?" ಎಂದು ವಸಂತ ಕೇಳಿದಾಗ " ನಾನು ಇಲ್ಲಿಯವರೆಗೂ ನಾಚಿಯೇ ಸುಮ್ಮನಿದ್ದೆ. ಈಗ ನೀವು ಒಮ್ಮೆಲೇ ಹೊರಟುನಿಂತುದರಿಂದ ನಾಚಿಕೆಗೆಟ್ಟವಳಾಗಿದ್ದೇನೆ" ಎನ್ನುತ್ತಾಳೆ. ವಸಂತ ಎದ್ದು ನಡೆದಾಗ ಅವನನ್ನು ಅಡ್ಡಗಟ್ಟುವುದು, ಅನಂತರ ತಬ್ಬಿಕೊಳ್ಳುವುದು ಅವಳ ಅತೃಪ್ತ ಕಾಮದ ದ್ಯೋತಕವಾಗಿದೆ.

ಯೌವನದ ಹುಚ್ಚುಹೊಳೆಯಲ್ಲಿ ತೇಲಿಹೋದ ನಿರ್ಮಲಾ ರಸಿಕನಾದ ಧನಿಕ ತರುಣನಿಂದ ವಂಚಿತಳಾದ ಬಳಿಕ ಅನಾಥಳಾಗಿ ವೇಶ್ಯೆಯಾಗುತ್ತಾಳೆ. ವೇಶ್ಯಾಜೀವನದ ಕಹಿಯನ್ನುಂಡು ಬೇಸತ್ತ ಅವಳು ಗೃಹಿಣಿಯಾಗಿ ಬಾಳಲು ಹಾತೊರೆಯುತ್ತಾಳೆ. ತನ್ನ ನೋವನ್ನರಿತ ವಸಂತನಿಗೆ ಕಣ್ಣೀರಿನ ಕೃತಜ್ಞತೆಯನ್ನರ್ಪಿಸುತ್ತಾಳೆ

ಳಕೆ. ವಸಂತ ಅವಳ ಭಾಗಕ್ಕೆ ದೇವರಾಗುತ್ತಾನೆ. ನಿರ್ಮಲೆಯ ಪಾತ್ರವನ್ನೇ ಸೃಷ್ಟಿಸಿ ಲೇಖಕರು ಹೇಗೆ ಪರಿಸ್ಥಿತಿವಶದಿಂದ ಸ್ತ್ರೀಯರು ವೇಶ್ಯೆಯರಾಗುತ್ತಾರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ವೇಶ್ಯೆಯು ರಕ್ಕಸಿಯಲ್ಲ, ಮಾನವಿ; ಪ್ರೇಮ, 'ವಿಶ್ವಾಸ, ರಕ್ಷಣೆಯನ್ನು' ಪಡೆಯುವ ಗೃಹಿಣಿಯ ಬಾಳಿಗಾಗಿ ಹಾತೊರೆಯುತ್ತಿರುತ್ತಾಳೆ. ನಿರ್ಮಲ ಪ್ರೇಮದ ಅಮೃತವರ್ಷವನ್ನು ಕರೆದು ಪುರುಷನ ಹೃದಯವನ್ನು ಗೆಲ್ಲುವ ಶಕ್ತಿ ಅವಳಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಿ, ವೇಶ್ಯೆಯ ಕೋಮಲ ಸ್ತ್ರೀಹೃದಯವನ್ನು ನಮ್ಮ ಮುಂದಿರಿಸಿದ್ದಾರೆ ಕಥೆಗಾರರು.

ಕಥೆಯ ಶೈಲಿ ಸರಸ ಹಾಗೂ ಸುಂದರವಾಗಿದ್ದು ವ್ಯಕ್ತಿಗಳ ಭಿನ್ನಮನೋವೃತ್ತಿಯನ್ನು ಸ್ಪಷ್ಟಪಡಿಸಲು ಸಹಕಾರಿಯಾಗಿದೆ. ಸಂಭಾಷಣೆಯು ಚಿಕ್ಕ ವಾಕ್ಯಗಳಿಂದ ಕೂಡಿ ಮನೋಹರವಾಗಿದೆ. ಪಾತ್ರಗಳ ಬಾಯಿಯಿಂದ ಹೊರಡಿಸುವ ಮಾತು ಅವುಗಳ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ವಸಂತನ ಮಾನಸಿಕ ಹೋರಾಟದಲ್ಲಿ ಪ್ರಾರಂಭವಾದ ಕಥೆ ಅಂಜನಾ, ನಿರ್ಮಲೆಯರೊಡನೆ ನಡೆದ ಸಂಭಾಷಣೆಯಲ್ಲಿ ವಿಕಾಸವಾಗಿ, ಸೈನಿಕನ ಇಚ್ಛೆ ಪ್ರಕಟವಾದ ಪತ್ರಿಕೆಯನ್ನು ಅಂಜನಾ ಓದುವಲ್ಲಿ ಚರಮೋತ್ಕರ್ಷವನ್ನು ಮುಟ್ಟುತ್ತದೆ. ಕಥೆಯ ಮುಖ್ಯ ಉದ್ದೇಶ ಇಲ್ಲಿ ಕೇಂದ್ರೀಕೃತವಾಗಿದೆ. ಅದುದರಿಂದ 'ಸೈನಿಕನ ಇಚ್ಛೆ' ಎಂಬ ಹೆಸರು ಕತೆಗುಚಿತವಾಗಿದೆ.

ಅಂಜನಾ–ವಸಂತರ ಸಂಭಾಷಣೆಯಲ್ಲಿ ಸೈನಿಕರ ಕುರಿತು ಲೇಖಕರು ವ್ಯಕ್ತಪಡಿಸಿದ ಅಭಿಪ್ರಾಯದ ಸಾರಾಂಶ ಹೀಗಿದೆ. 'ಸೈನಿಕರಲ್ಲಿಯೂ ಮಾನವತೆಯಿದೆ; ಮಾನವಮೂಲ್ಯಗಳ ಬೆಲೆ ಅವರಿಗೆ ಗೊತ್ತಿದೆ. ಅವರು ರಾಷ್ಟ್ರರಕ್ಷಕರು. ಸೈನಿಕರ ದುರ್ವರ್ತನೆಗೆ ಸಂಪೂರ್ಣ ಅವರೇ ಜವಾಬ್ದಾರರಲ್ಲ. ಆ ರೀತಿ ವರ್ತಿಸುವಂತೆ ಅವರಲ್ಲಿ ಪ್ರೇರಣೆಯನ್ನುಂಟುಮಾಡುವ ವಾತಾವರಣವನ್ನು ನಿರ್ಮಿಸಿದವರ ತಪ್ಪು ಅವರಲ್ಲಿದೆ. ಸೈನಿಕರು ರಾಜಕಾರಣಿಗಳ, ರಾಷ್ಟ್ರನಾಯಕರ ಚದುರಂಗದಾಟದ ಪೇದೆಗಳು.' ಇದಲ್ಲದೆ ವಸಂತ–ನಿರ್ಮಲೆಯರ ಸಂಭಾಷಣೆಯ ಮೂಲಕ ವೇಶ್ಯಾಸಮಸ್ಯೆಯ ಕಡೆಗೂ ಲೇಖಕರು ಬೆಳಕುಬೀರಿದ್ದಾರೆ.

ಮಾನವನ ಏಳು ಬೀಳುಗಳನ್ನು ನವೀನ ಆದರ್ಶದ ದೃಷ್ಟಿಕೋಣದಿಂದ ಸುಂದರವಾಗಿ ಚಿತ್ರಿಸಿದ ಇಂತಹ ಪ್ರಗತಿಪರ ಕಥೆಗಳು ಇಂದು ಅಪೇಕ್ಷಣೀಯ. ಕೇವಲ ಯಥಾರ್ಥವಾದವನ್ನಷ್ಟೇ ಚಿತ್ರಿಸಿದರೆ ಅವರಿಂದ ಸಮಾಜಕ್ಕೆ ಹಾನಿಯಾಗುವ ಸಂಭವವಿದೆ. ಆದುದರಿಂದ ಯಥಾರ್ಥವಾದದೊಂದಿಗೆ ಆದರ್ಶವಾದವನ್ನೂ ಸೇರಿಸಿ ರಚಿಸಿದ ಈ ಮಾದರಿಯ ಕಥೆಗಳು ಸ್ವಾಗತಾರ್ಹ ಮತ್ತು ಸಮಾಜದ ಹಿತಕ್ಕೆ ಅನುಕೂಲ ಎಂಬುದರಲ್ಲಿ ಸಂದೇಹವಿಲ್ಲ. ■

[೭೬ ನೆಯ ಪುಟದಿಂದ ಬಂದುದು.]

ಕೊಳ್ಳುವ ವ್ಯವಹಾರದಲ್ಲಿ, ಯಾವ ರಾಜ್ಯದ ಯಾವ ಪ್ರದೇಶವನ್ನು ಮತ್ತೊಂದು ರಾಜ್ಯಕ್ಕೆ ಬಿಟ್ಟುಕೊಡಬೇಕಾಗುವುದೆಂಬುದರ ನಿಯಮ ವಿಲ್ಲ.

ಪಾಕಿಸ್ತಾನ್-ಭಾರತ ಮುಖ್ಯಪ್ರಧಾನರ ಸಂದರ್ಶನ

ಒಂದು ಸಂತೋಷ–ಸಮಾಧಾನಗಳ ಸಂಗತಿಯೆಂದರೆ: ಪಾಕಿಸ್ತಾನ್ ಸರಕಾರ ತಾನಾಗಿಯೆ ತನ್ನ ಮುಖ್ಯ ಪ್ರಧಾನ ಮತ್ತು ಪಂಡಿತ ನೆಹರೂ ಅವರ ಬೆಟ್ಟಿಯಾಗಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದುದು. ಅಜಾತ ಶತ್ರುವಿನಂತಿರುವ ಪಂ. ನೆಹರೂ ಅವರು ಈ ಬೆಟ್ಟಿಗೆ ಸಂತೋಷದಿಂದ ಸಮ್ಮತಿಸಿದ್ದಾರೆ. ಬೇಗನೆ ಆ ಬೆಟ್ಟಿಯೂ ಜರುಗಲಿದೆ. ಬೆಟ್ಟಿ ದಿಲ್ಲಿಯ ಬಳಿಯ ಪಾಲಂ ವಿಮಾನ ನಿಲ್ದಾಣದಲ್ಲಿ. ಬೆಟ್ಟಿಯಾಗಲಿರುವ ಶ್ರೀ ಆಯೂಬ್ ಖಾನರು ಪೂರ್ವ ಪಾಕಿಸ್ತಾನದ ಪ್ರಮಾಣಿಕರು.

ಪಾಕಿಸ್ತಾನ್–ಭಾರತ ಮುಖ್ಯಮಂತ್ರಿಗಳ ಸಂದರ್ಶನ ಈ ಮೊದಲು ಅನೇಕಸಲ ನಡೆದಿದೆ. ಬೆಟ್ಟಿಯಾಗಿ ಪಾಕಿಸ್ತಾನಕ್ಕೆ ಅವರು ಮರಳುವ ವರೆಗೆ ಆಶಾದಾಯಕ ವಾತಾವರಣವಿರುತ್ತಿದ್ದಿತು. ಮುಂದೆ ಒಂದೆರಡು ದಿನಗಳಲ್ಲಿಯೆ ಆ ಮುಖ್ಯ ಮಂತ್ರಿಗಳು, ಭಾರತದಲ್ಲಿ ಒಪ್ಪಿಕೊಂಡು ಹೋದಮಾತೆಲ್ಲ ಸುಳ್ಳೆಂದು ಹೇಳಿ, ಮತ್ತೆ ತಮ್ಮ ಪೂರ್ವದ ಸ್ವರೂಪದಲ್ಲಿಯೆ ನಡೆದುಕೊಳ್ಳುತ್ತಿದ್ದರು. ಈ ಪರಂಪರೆಯನ್ನು ಬಲ್ಲವರು, ಈ ಮಂತ್ರಿದ್ವಯರ ಈಗಿನ ಬೆಟ್ಟಿಗೂ ಮಾತು-ಕತೆಗಳಿಗೂ ಮಹತ್ತ್ವಕೊಡದೆ ಹೋಗಬಹುದು. ಅದು ಸ್ವಾಭಾವಿಕವೂ ಆಗಿದೆ. ಏಕೆಂದರೆ ಗಡಿಗಳಲ್ಲಿ ಆಗಾಗ ನಡೆದ ಅತಿಕ್ರಮಣ ಒಪ್ಪಂದಗಳನ್ನು ಮಾಡಿಕೊಂಡ ದಿನವೇ ಪಾಕಿಸ್ತಾನಿಗಳು ಮುರಿದುಬಿಟ್ಟ ಉದಾಹರಣೆಗಳು ಸಾಕಷ್ಟಿವೆ. ಆಯೂಬ್ ಖಾನರು ಆಡಳಿತ ವಹಿಸಿದ ನೇಲೆಯೇ ಈ ಪಚನಭಂಗ ಸಂದರ್ಭಗಳು ಹೆಚ್ಚಾಗಿ ನಡೆದಿವೆ. ಆದುದರಿಂದ ಈ ಬೆಟ್ಟಿಯು ಭಾರತದ ಜನರಲ್ಲಿ ಅಷ್ಟೊಂದು ಆಶೆ-ಉತ್ಸಾಹಗಳನ್ನು ಹುಟ್ಟಿಸಲಾರದೆಂಬುದು ಸ್ವಾಭಾವಿಕವೆ.

ಆದರೂ ನಿರಾಶೆಯಲ್ಲಿ ಒಂದು ಆಶೆಯ ಕಿರಣ ಕಾಣುತ್ತಲಿದೆ. ಪಾಕಿಸ್ತಾನದಲ್ಲಿ ಈ ಮೊದಲು ಮುಖ್ಯಮಂತ್ರಿಗಳಾಗಿದ್ದವರ ವ್ಯಕ್ತಿತ್ವ-ಸ್ವಾತಂತ್ರ್ಯಗಳಿಗೂ ತುಂಬ ವ್ಯತ್ಯಾಸವಿದೆ. ಹಿಂದಿನ ಮಂತ್ರಿಗಳು ಪಕ್ಷದ ಸದಸ್ಯರ ಕೈಗೊಂಬೆಗಳಾಗಿರುತ್ತಿದ್ದರು, ಅವರು ಕುಣಿಯೆಂದಂತೆ ಕುಣಿಯಬೇಕು. ಆದರೆ ಆಯೂಬ್ ಖಾನರ ಪರಿಸ್ಥಿತಿ ಹಾಗಿಲ್ಲ. ಅವರೀಗ ಸರ್ವತಂತ್ರ ಸ್ವತಂತ್ರ ಸೂತ್ರಧಾರಿಗಳಾಗಿದ್ದಾರೆ. ಹಿಂದಿನ ಆಟದ ಮೇಳಗಾರರನ್ನೆಲ್ಲ ಮೂಲೆಗೊತ್ತಿಬಿಟ್ಟಿದ್ದಾರೆ. ಇವರು ಒಪ್ಪಿಕೊಂಡು ಹೋದಮಾತನ್ನು ಬೇಡವೆಂದು ಬಿಡಿಸುವವರು ಯಾರೂ ಇಲ್ಲ. ಅದುದರಿಂದಲೇ ಈ ಪ್ರಧಾನ-ದ್ವಯರ ಬೆಟ್ಟಿಯು ಹೆಚ್ಚು ಆಶಾದಾಯಕವೆನಿಸುವಂತಿದೆ. ●

ನೀ ಬರುವೆಯೆಂದು, ಒಲವೆ !

ಶ್ರೀ ಬಿ. ರಘುರಾಮ ರಾವ್, ಬಿ. ಎ. ಬಿ. ಟಿ. ಕಿನ್ನಿಗೋಳಿ

ಇಂದೆನ್ನ ಹೊಬನವು ಹಸುರುಟ್ಟು ನಿಂದಿಹುದು
ನೀ ಬರುವೆಯೆಂದು ಒಲವೆ !
ಮುಳ್ಳುಬೇಲಿಯ ದಾದಿ ಹೂಹಾಸಿ ಕಾದಿಹುದು
ನೀ ಬರುವೆಯೆಂದು ಚೆಲುವೆ !

ಗಿಡಬಳ್ಳಿಗಳ ಮೇಲೆ ಹೊಂಬಿಸಿಲು ಸುರಿದಿಹುದು—
ಹೊಳೆದಂತೆ ಪಚ್ಚೆಹರಳು;
ದಾರಿಯುದ್ದಕು ನಿಂತ ಹಳದಿ ಕಣಗಿಲೆ ಸಾಲು—
ಕರೆದಂತೆ ಹೊನ್ನ ಬೆರಳು !

ಮೆಲ್ಲೆಲರು ಮೈಗರೆದು ನೇವರಿಸೆ ನವಿರೆದ್ದು
ಮಣ್ಣೆಲ್ಲ ಮಿದುವಾಗಿದೆ;
ಕಳ್ಳಿಮುಳ್ಳಿಗು ಬೆಳ್ಳಿ ಬೆಡಗುಳ್ಳ ಹೂವರಳಿ
ಬನವೆಲ್ಲ ಚೆಲುವಾಗಿದೆ.

ಹುಲ್ಲು-ಹುಲ್ಲಿನೊಳಿಲ್ಲಿ ಹನಿಗನಸು ಕಣ್ದೆರೆದು
ಚೆಲುವೇರಿ ನೋಡುತಿಹವು;
ಅಳಿಬಳಗ ಸುಳಿಸುಳಿದು ನಗುಮೊಗದ ಮಲ್ಲಿಗೆಯ
ಬಳಿ ಬಳಸಿ ಕಾಡುತಿಹವು !

ಬಳ್ಳಿಬಳ್ಳಿಯು ಇಲ್ಲಿ ಮುದ್ದುಮದುಮಗಳಾಗಿ
ನಗುನಗುತ ನಿಂದಿರುವವು;
ಹೂವಿನಂಜಲಿ ಹಿಡಿದು ಹೆಜ್ಜೆ ಹೆಜ್ಜೆಗು ನಿನ್ನ
ನರುಗಂಪ ಸೂಸಲಿಹವು.

ಮುಗಿಲುಪನ್ನೀರಿನಲಿ ತೊಳೆದಿಹವು ನಿನ್ನ ಪಥ
ರವಿ ಮೂಡುವುದಕು ಮುನ್ನ;
ಸ್ವಾಗತದೊಳೆಡೆವಿಡದೆ ಹಕ್ಕಿ ಮಂಗಲಗೀತ
ಹಾಡಿ ಕರೆದಿಹವು ನಿನ್ನ !

ಕೊಳದಿ ಕೆಂದಾವರೆಯು ಕಣ್ದೆರೆದು ಕಾಯುತಿದೆ
ಮನಮೆಚ್ಚಿ ಕರೆವೆ ಬಾರೆ !
ಹೊನ್ನ ಬಟ್ಟಲಲಿ ಹೂ ಜೇನು ತೊಟ್ಟಿಕ್ಕುತಿದೆ,
ತುಟಿಹಚ್ಚಿ ಕುಡಿವ ಬಾರೆ !

ನೀ ಬಾರದಿರೆ, ಚೆಲುವೆ, ವ್ಯರ್ಥವೀ ಸಿಂಗರವು
ಬರಿದು ನಾ ಕಾದ ಕಾವು;
ಬರಿದು ಬೆಳಗಿನ ಬೆಳಕು, ಬರಿದು ಬಾಳಿನ ಥಳುಕು
ಬರಿದೆ, ನನ್ನೆದೆಯ ನೋವು !

ತರಳೆ, ಬಾ, ಕಾದಿರುವೆ, ಇಲ್ಲಿ ಮರದಡಿಯಲ್ಲಿ
ತಿಳಿನೀರ ಕೊಳದ ದಡದಿ;
ಹಿಡಿದೊಂದು ಹೂವ ಕಾತರಿಸಿ ಕಂಬನಿದುಂಬಿ,
ಹಂಬಲಿಸುತಿಹೆನು ಕೆಳದಿ !

ಬಳ್ಳಿ, ಎಲೆ, ಹುಲ್ಲು, ಹೂ, ಕಲ್ಲು, ಬೇಲಿಯ ಮುಳ್ಳು
ಕಾದಿಹವು ಎಲ್ಲ ನಿನ್ನ !
ಮುಗಿಲು, ಅಲೆ, ಹಕ್ಕಿ, ಕಮ್ಮೆಲರು, ಪಾತರಗಿತ್ತಿ
ಅರಸುವವು ಚೆನ್ನೆ, ನಿನ್ನ !

ಸಾದರಸ್ವೀಕಾರ

೨೩ ಇಲ್ಲಿದೆ ಸ್ವರ್ಗ (ಚಿಕ್ಕ ಕಾದಂಬರಿ) ಬರೆದವರು ಶ್ರೀ ಎಂ. ಎಸ್. ಬಸ್ತವಾಡ; ಪ್ರಕಾಶಕರು ಸ್ನೇಹಪ್ರಕಾಶನ, ಶಮುನೇವಾಡಿ. ಕ್ರೌ. ಅ. ೭೬ ಪುಟಗಳು. ಬೆಲೆ ೧ ರೂ.

೨೪ ಹೊಸ ಶಿಕ್ಷಣ (ಚಿಕ್ಕನಾಟಕ) ಬರೆದವರು ಶ್ರೀ ಎಸ್. ಕೆ. ಜೋಶಿ ಬಿ.ಎ., ಬಿ.ಟಿ. ೨೪೪/೪೬ ಫುಲಭಾಗಗಲ್ಲಿ, ಬೆಳಗಾಂವಿ. ಲೇಖಕರೇ ಪ್ರಕಾಶಕರು. ಕ್ರೌ. ಅ. ೩೦ ಪುಟಗಳು. ಬೆಲೆ ೦೦. ೩೭.

೨೫ ಆಶಾವಾದಿ (ಕವನ ಸಂಕಲನ) ಬರೆದವರು ಶ್ರೀ ಎಂ. ಕೆ. ಮಠಪತಿ, ರಾಜಾಪುರ (ಕೃಷ್ಣಾತೀರ). ಪ್ರಕಾಶಕರು ಶಾಂತಿಸೇವಾಸದನ, ಸೇಡಬಾಳ, ಜಿ. ಬೆಳಗಾಂವಿ. ಕ್ರೌ. ಅ. ೪೪ ಪುಟಗಳು. ಬೆಲೆ ೦೦. ೭೫.

೨೬ ಪ್ರಕಾಶ (ವಾರ ಪತ್ರಿಕೆಯ ಸ್ವಾತಂತ್ರ್ಯೋತ್ಸವ ವಿಶೇಷಾಂಕ). ಸಂಪಾದಕರು ಸರ್ವಶ್ರೀ ಎ. ಜನಾರ್ದನ ಅಲಸೆ, ಬನ್ನಂಜೆ ರಾಮಾಚಾರ್ಯರು, ಪಾಡಿಗಾರು ಸೀತಸೆಟ್ಟರು. ಪ್ರಕಾಶ ಕಾರ್ಯಾಲಯ, ರಾಮಕೃಷ್ಣ ಬಿಲ್ಡಿಂಗ್ಸ್, ಉಡುಪಿ. ಕ್ರೌ. ಫ್ರೊ. ೫೬ ಪುಟಗಳು. ಬೆಲೆ ೦೦. ೩೦

ಅನೇಕ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ ಲೇಖನಗಳಿಂದ ಕೂಡಿದ ಈ ಸಚಿತ್ರ ವಿಶೇಷಾಂಕವು ವಾಚನೀಯವಾಗಿದೆ.

೨೭ ಪ್ರಭಾತ (ವಾರಪತ್ರಿಕೆಯ ಸ್ವಾತಂತ್ರ್ಯ ಅಂಕ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ ಕುಡ್ಪಿ ವಾಸುದೇವ ಶೆಣ್ಯೈ, ಪ್ರಭಾತ ಕಾರ್ಯಾಲಯ, ರಥಬೀದಿ, ಮಂಗಳೂರು. ಕ್ರೌ. ಫೋಲಿಯೊ ೨೪ ಪುಟಗಳು. ಬೆಲೆ ೦೦. ೧೫.

ಸಂದರ್ಭೋಚಿತವಾದ ಚಿತ್ರ-ಲೇಖನಗಳಿಂದ ಕೂಡಿರುವ ಸಂಚಿಕೆಯಿದು, ಚೆನ್ನಾಗಿದೆ.

೨೮ ಸರ್ವಜ್ಞನ ಅಮರಸಂದೇಶ (ಕವಿಕಾರ್ಯ ನಿಸೇಚನಾತ್ಮಕ ಗ್ರಂಥ) ಬರೆದವರು ಶ್ರೀಮಾನ್ ದೇಶಪಾಂಡೆ ಮನೋಹರ ರಾಯರು ಎಂ ಎ. ಅಥಣಿ. ಧಾರವಾಡ ಮಿಂಚಿನ ಬಳ್ಳಿಯಿಂದ ಪ್ರಕಟವಾಗಿದೆ. ಕ್ರೌ. ಅ. ೧೫೦ ಪುಟಗಳು. ಬೆಲೆ ಉತ್ತಮಪ್ರತಿಗೆ ೩. ೫೦. ಸಾಮಾನ್ಯಪ್ರತಿಗೆ ೨.೦೦.

೨೯ ಕನ್ನಡ ಕನ್ನಡಿ (ಎಸ್. ಎಸ್. ಸಿ. ಕನ್ನಡ ಪಾಠ್ಯ-ಪುಸ್ತಕದ ಗಾಯಿಡ್) ಅಣಿಗೊಳಿಸಿದವರು ಶ್ರೀಮಾನ್ ವ್ಹಿ. ಕೆ. ಹೋಳಿಕಟ್ಟಿ ಬಿ. ಎ, ಬಿ. ಟಿ., ಧಾರವಾಡ. ಕ್ರೌ. ಅ. ಸುಮಾರು ೪೦೦ ಪುಟಗಳು. ಬೆಲೆ ೩. ೫೦.

ಶ್ರೀ ಹೋಳಿಕಟ್ಟಿಯವರ 'ಗಾಯಿಡ್' ಎಂದರೆ, ಈಗಾಗಲೆ ವಿದ್ಯಾರ್ಥಿಗಳಿಗೆ ಪರಿಚಿತವಾದ ಮತ್ತು ಅವಶ್ಯಕವೆನಿಸಿದ ಪುಸ್ತಕ ಶ್ರೀಯುತರು ವಿದ್ಯಾರ್ಥಿಗಳಿಗೆ ಪಾಠ್ಯವಿಷಯದ ಕೂಲಂಕಷ ಜ್ಞಾನವಾಗುವಂತೆ ಪರಿಶ್ರಮವಹಿಸಿ ಈ ಗಾಯಿಡನ್ನು ರಚಿಸಿದ್ದಾರೆ. ವಿದ್ಯಾರ್ಥಿಗಳಿಗೆ ಇದು ಒಳ್ಳೆಯ ಮಾರ್ಗದರ್ಶನ ಮಾಡುವಂತಿದೆಯೆಂದು ಯಾರೂ ಒಪ್ಪುವಂತಿದೆ.

30 News From Bulgaria (ಕನ್ನಡದಲ್ಲಿ ಸುದ್ದಿಯೋಲೆ) ಬಲ್ಗೇರಿಯ ಸ್ವತಂತ್ರ ಪ್ರಜಾಪ್ರಭುತ್ವದ ಭಾರತ ಪ್ರತಿನಿಧಿಯ ಕಾರ್ಯಾಲಯದಿಂದ ಹೊಸತಾಗಿ ಪ್ರಕಟವಾಗುತ್ತಲಿದೆ.

ಇದರಲ್ಲಿ ಬಲ್ಗೇರಿಯಾ ದೇಶದ ರಾಜಕೀಯ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ವಿವಿಧ ಲೇಖನಗಳಿರುವುದಲ್ಲದೆ 'ಕತ್ತಲೆಯಿಂದ ಸೂರ್ಯಪ್ರಕಾಶದೊಳಕ್ಕೆ' ಎಂಬ ಹೆಸರಿನ ಬಲ್ಗೇರಿಯನ್ ಸಣ್ಣ ಕತೆಯ ಭಾಷಾಂತರವಿದೆ. ಪರಂಪರೆ-ಸಂಪ್ರದಾಯಗಳಿಗೆ ಅಂಟಿಕೊಂಡ ಹಳೆಯ ವಿಚಾರಗಳನ್ನು ಹೊಸ ವಿಚಾರಗಳತ್ತ ಒಲಿಸುವ ಪ್ರಚಾರೋದ್ದೇಶದಿಂದ ಬರೆದ ಕಥೆಯಿದಾದರೂ, ಕತೆಗಾರರಾದ ಇವಾನ್ ಓಸ್ಟ್ರೊಕೋವ್ ಎಂಬ ಬಲ್ಗೇರಿಯನ್ ಕತೆಗಾರರು ಇದನ್ನು ತುಂಬ ಕುಶಲತೆಯಿಂದ ಬರೆದಿದ್ದಾರೆ.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣೆಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ಕೆಳಗs — ಚಿಂದs ಗಂಧs ಹರಡೈತವ್ವಾ!

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರೌ. ಆ. ೮೦ ಪುಟಗಳು ಬೆಲೆ ರೂ. ೧. ೨೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಆಳ್ಕೆಯ ಅಪರೂಪ

ಆಳ್ಕೆಯೆಂಬುದು ದುಶ್ಶಾಸನಪಾಶಂಗಳನಣಿಗೊಳಿಸುವ
ಕರ್ಮಶಾಲೆಯಲ್ಲ ಕಾಣಯ್ಯಾ !
ಆಳ್ಕೆಯೆಂಬುದು ಬರಿ ಆಳುಗಳನೆ ನಿರ್ಮಿಸಲಾಟಿಸುವ
ಯಕ್ಷಿಣೀಶಕ್ತಿಯಲ್ಲ ಕಾಣಯ್ಯಾ !
ಆಳ್ಕೆಯೆಂಬುದು ಲೋಗರ ಸಿರಿಯನೆಲ್ಲ ಸೆಳೆದೊಯ್ಯುವ
ಸುಲಿಗೆಗಾರನಲ್ಲವಣ್ಣಾ !
ಆಳ್ಕೆಯೆಂಬುದು ಕಳವಳದ ಸೋಂಕುರೋಗ ಹರಡುವ
ವಿಷವಾಯುವಲ್ಲವಣ್ಣಾ !
ಅಯ್ಯಾ, ಆಳ್ಕೆಯೆಂಬುದರ ಅವತಾರವಾದುದು
ಲೋಕದ ಸುಖ-ಶಾಂತಿಗಾಗಿ—
ಅದೊಡಾ ಅವತಾರದ ಉದ್ದೇಶವನೆ ಮರೆಗೆ ಸರಿಸಿ
ದೈವ ದೆವ್ವವಾಗಿ ಕಾಡುತಿದೆ ನೋಡಾ !
ಬೆಳೆದು ಬಿದ್ದ ಅನ್ನದ ರಾಶಿ ಕಣ್ಮರೆಯಾಗುತಿದೆಯೆಂದು
ಆಳ್ಕೆಯ ಕೈಮಾಟದಿಂದ—
ಗಳಿಸಿದ ಪಡಿಯೆಲ್ಲಾ ಕಳವಲ್ಲದ ಕಳವಿಂದಳಿಯುತಿದೆ
ಆಳ್ಕೆಯ ಕೈಚಳಕದಿಂದ !
ದೆವ್ವಗಳನೆ ದೇವದೂತರೆಂದು ಕಾವಲಿಗೆ ನಿಲಿಸಿದೆ
ಈ ಆಳ್ಕೆಯ ಹಿರಿಮೆ—
ಈ ಆಳ್ಕೆಯ ಭೂತೋಚ್ಚಾಟನಕೆಂದು ಕಾಲರಾಯ
ಹುಡುಕುತಿಹನಿಂದು ನುಂಶ್ರದ ಅರಿಮೆ !

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ಹಳ್ಳಿಪುಸ್ತಕಗಳ ರಾಷ್ಟ್ರೀಕರಣ (ಸಂಪಾದಕೀಯ)
ಸಂಪಾದಕರು ೧೦೯

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೧೧೧

ಫೋಟೊ (ಅನುವಾದಿತ ಕಥೆ)
ಶ್ರೀ. ಜಿ. ಜೆ. 'ಹರಿಜೀತ್,' ಮಹಾರಾಜಾ ಕಾಲೇಜು,ಮೈಸೂರು ೧೧೩

ಕಾಮಾಖ್ಯಾ ಮಂದಿರ – ೨ (ಅಸಾಮದ ಪರಿಚಯ)
ಶ್ರೀ. ಪಿ. ವ್ಹಿ. ಗುಡಿ; ಗೌಹಾಟಿ (ಅಸಾಮ) ೧೨೦

ಬೇಡುವಾಕೆ (ಕವನ)
ಶ್ರೀ. ಸುಂದರ ನಾಡಕರ್ಣಿ, ವಿದ್ಯಾನಗರ ೧೨೩

ನೂವನ ಮನಿ-ಆರ್ಡರ್ (ಏಕಾಂಕ)
ಶ್ರೀ. ದು. ನಿ ಬೆಳಗಲಿ, ಎಸ್.ಆರ್.ಎ. ಹೈಸ್ಕೂಲ್, ಬನಹಟ್ಟಿ ೧೨೪

ಭಾರತದ ಸ್ವಾತಂತ್ರ್ಯಕ್ಕೆ ಅಮೇರಿಕದ ಕಾಣಿಕೆ
ಡಾ. ಫರ್ನಾಂಸ್. ಬಿ. ಮುಜುಂದಾರ್, ಅಮೇರಿಕಾ ... ೧೨೮

ಹಿರೋಶಿಮಾ (ಕವನ)
ಶ್ರೀ. ಬಿ. ಬಿ. ಹಿಂಗಮಿರೆ, ಬಿ. ಎ. ಅಥಣಿ ೧೩೦

ಯಾರಿಗಾಗಿ ? (ಕವನ)
ಶ್ರೀ ತಾ. ಸದಾನಂದ ಉಚ್ಚಿಲ್, ಮುಂಬಯಿ ೧೩೦

ಮಾನವತೆಗೆ ಒಡ್ಡು (ಸಣ್ಣ ಕಥೆ)
ಶ್ರೀ. ಆರ್. ಪಿ. ಕುಲಕರ್ಣಿ ಎಮ್. ಎ, ಬೆಳಗಾಂವಿ ೧೩೧

ನಾಗರ ಪಂಚಮಿ (ಹಬ್ಬದ ಪರಿಚಯ)
ಶ್ರೀಮತಿ ಸೌ. ರಾಧಾಬಾಯಿ ಕಮಲಾಪೂರ, ಧಾರವಾಡ ೧೩೫

ಸಾಹಸಮೂರ್ತಿ ಸುಧಾಸಹೋದರು (ವ್ಯಕ್ತಿತ್ವ ಚಿತ್ರ)
ಶ್ರೀ.ಗೋವಿಂದಮೂರ್ತಿ ದೇಸಾಯಿ ಬಿ ಎ. (ಆನರ್ಸ್) ಧಾರವಾಡ ೧೩೭

ಬಂಗಾರಿವ್ವ (ಕವನ)
ಶ್ರೀ. ಬಿ ಬಿ. ಮಹಿಷವಾಡಿ, ರಾಜಾರಾಮ ಕಾಲೇಜ್,
ಕೊಲ್ಹಾಪೂರ ೧೩೯

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಎಮ್ ಟಿ. ಧೂಪದ ಮತ್ತು ಶ್ರೀ. ಎಸ್ ಆರ್. ಪಾಡಿ ೧೪೧

ಜಯಂತಿ

ಸಂಪುಟ ೩೨] [ಸಂಚಿಕೆ ೪

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಪಠ್ಯಪುಸ್ತಕಗಳ ರಾಷ್ಟ್ರೀಕರಣ

ಭಾರತದ ಎಲ್ಲ ರಾಜ್ಯಗಳಲ್ಲಿಯೂ, ಸಮಾಜೋಪಯುಕ್ತವಾದ ಎಲ್ಲ ವ್ಯವಹಾರಗಳನ್ನೂ ರಾಷ್ಟ್ರೀಕರಣ ಮಾಡಬೇಕೆಂಬ ಮಾತುಗಳು ಹೆಚ್ಚು ಹೆಚ್ಚಾಗಿ ಕಿವಿಗೆ ಬೀಳುತ್ತಲಿವೆ. ರಾಷ್ಟ್ರೀಕರಣವೆಂದರೆ, ವ್ಯಕ್ತಿಗಳ ಕೈಯಲ್ಲಿರುವ ವ್ಯಾಪಾರ-ವ್ಯವಹಾರಗಳನ್ನು ಸರಕಾರವು ವಹಿಸಿಕೊಂಡು ನಡೆಸುವುದು. ವ್ಯಕ್ತಿಗಳು ಮಾಡುತ್ತಿರುವ ವ್ಯವಹಾರಗಳು ಜನತಾಶೋಷಕ— ಅಪರಿಪೂರ್ಣ— ಇರುತ್ತಿದ್ದರೆ, ಅಂತಹ ವ್ಯವಹಾರಗಳನ್ನು, ಜನತಾಕಲ್ಯಾಣದೃಷ್ಟಿಯ ಸರಕಾರವು ತನ್ನ ಕಡೆಗೆ ವಹಿಸಿಕೊಳ್ಳಬೇಕಾದುದು ಅತ್ಯಂತ ಅಗತ್ಯ. ಆದರೆ, ಮೊದಲಿನಿಂದಲೂ ಆ ವ್ಯವಹಾರಗಳಿಂದ ಬದುಕಿಕೊಂಡು ಬಂದ ಜನರು, ರಾಷ್ಟ್ರೀಕರಣದ ತರುವಾಯ ಹೇಗೆ ಬದುಕಬೇಕೆಂಬುದರ ಯೋಜನೆಯನ್ನು ಸರಕಾರ ಮೊದಲೇ ಮಾಡಬೇಕು: ಇದು ಸರಕಾರದ ಅನಿವಾರ್ಯ ಕರ್ತವ್ಯ.

ಯಾವ ವ್ಯಕ್ತಿಯೂ ನಾಡಿನಲ್ಲಿ ಉಪವಾಸ-ವನವಾಸಗಳಿಂದಲೂ ನಿರುದ್ಯೋಗ ಸಮಸ್ಯೆಯಿಂದಲೂ ತೊಂದರೆಗೊಳಗಾಗದಂತೆ ನೋಡಿಕೊಳ್ಳುವುದು, ಸರಕಾರದ— ಅದರಲ್ಲಿಯೂ ಜನತಾ ಸರಕಾರದ— ಪ್ರಮುಖ ಕಾರ್ಯಗಳಲ್ಲಿ ಒಂದು. ಹೀಗಿರುವಾಗ ಯಾವುದೇ ವ್ಯವಹಾರವನ್ನೂ ರಾಷ್ಟ್ರೀಕರಣ ಮಾಡುವುದಕ್ಕೆ ಮೊದಲು, ಆ ವ್ಯವಹಾರವನ್ನು ಪರಂಪರೆಯಿಂದ ನಡೆಸಿಕೊಂಡು ಬಂದ ಜನರ ಯೋಗ-ಕ್ಷೇಮದ ಪೂರ್ವಸಿದ್ಧತೆಗಳನ್ನು ಸರಕಾರ ಮಾಡಬೇಕಲ್ಲವೆ? ಅಂತಹ ಯಾವ ಪೂರ್ವಸಿದ್ಧತೆಗಳೂ ಇಲ್ಲದೆ, ಅಧಿಕಾರ ಬಲದ ಮೇಲೆ ಒಂದೊಂದೇ ವ್ಯವಹಾರಗಳನ್ನು ರಾಷ್ಟ್ರೀಕರಿಸುತ್ತ ಹೋಗುವುದರಿಂದ, ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಿದಂತಾಗುವುದು. ನಿರುದ್ಯೋಗವೇ ಅಸಂತುಷ್ಟಿಯ ಮೂಲ; ಅಸಂತುಷ್ಟಿಯೇ ವೈಚಾರಿಕ ಕ್ರಾಂತಿಯ ಮೂಲ.

ನಮ್ಮ ರಾಷ್ಟ್ರದಲ್ಲಿ ವ್ಯಾಪಾರ-ವ್ಯವಹಾರಗಳನ್ನು ಮಾಡುವ ಜನರ ಅತಿಲಾಭಲಾಲಸೆ, ಅದಕ್ಕಾಗಿ ಹೆಚ್ಚುತ್ತಿರುವ ಅಪ್ರಾಮಾಣಿಕತೆ ಇವೇ— ಸರಕಾರದ ರಾಷ್ಟ್ರೀಕರಣದ ವಿಚಾರಕ್ಕೆ ಪ್ರೇರಕವಾಗಿವೆಯೆಂಬುದನ್ನು ನಾವು ಮರೆತು ನಡೆಯುವಂತಿಲ್ಲ. ಇದು ನಮ್ಮ ವ್ಯಾಪಾರಿ-ವ್ಯವಹಾರಿಗಳು ಮಾಡುವ ಸಮಾಜದ್ರೋಹ—ಎಂಬುದನ್ನು ಎಲ್ಲ ವಿಚಾರಿಗಳೂ ಒಪ್ಪುವರು. ಆದರೆ ಅವರ ಈ ಸಮಾಜದ್ರೋಹದ ಅಪರಾಧಕ್ಕೆ, ರಾಷ್ಟ್ರೀಕರಣವು ಯೋಗ್ಯ ಶಿಕ್ಷೆಯೆನಿಸದು. ತಪ್ಪುಮಾಡಿದ ಮಕ್ಕಳನ್ನು ತಾಯಿ-ತಂದೆಗಳು ಉಪವಾಸ ಕೆಡಹಿ ಕೊಲ್ಲುವುದುಂಟೇ ಎಲ್ಲಿಯಾದರೂ? ಅವರಿಂದ ತಪ್ಪುಗಳು ನಡೆಯಲಾರದಂತಹ ಪರಿಸ್ಥಿತಿಯನ್ನು ಅವರು ನಿರ್ಮಾಣ ಮಾಡಿ ಕೊಡಬೇಕಿಷ್ಟೆ! ಹಾಗೆಯೆ ಸರಕಾರ ವ್ಯಾಪಾರಿ-ವ್ಯವಹಾರಿಗಳ ಲಾಭಗುಳಿತನ-ಅಪ್ರಾಮಾಣಿಕತನಗಳಿಗೆ ಅವಕಾಶ ದೊರೆಯದಂತೆ ಜಾಗೃತಿ ವಹಿಸಬೇಕು.

ಹೀಗೆ ಜಾಗೃತಿವಹಿಸುವುದೆಂದರೆ, ಸರಕಾರ ಏನುಮಾಡಬೇಕೆಂದು ಕೆಲವರು ಕೇಳಲು ಮುಂದುವರಿಯಬಹುದು. ವ್ಯಾಪಾರಿ-ವ್ಯವಹಾರಗಳಿಗೆ ಅವರವರ ಉದ್ಯೋಗದ ಸ್ವಾತಂತ್ರ್ಯ ಇರಲಿ; ಆದರೆ ಅವರು ಕಳ್ಳಪೇಟೆ, ಅತಿಲಾಭವೃತ್ತಿಗಳನ್ನು ನಡೆಯಿಸಲು ಬಾರದಂತೆ, ಕಾನೂನಿನ ಬಿಗಿಯಿರಲಿ! ಜನತೆಗೆ ಅವರಿಂದ ತೊಂದರೆಯಾಗದಂತೆ, ಸರಕಾರ ತಾನೂ ಸುಲಭವರದ ವ್ಯವಹಾರವನ್ನು ನಡೆಯಿಸಿ, ವ್ಯಾಪಾರಿ-ವ್ಯವಹಾರಿಗಳೊಂದಿಗೆ ಸ್ಪರ್ಧೆಯನ್ನು ಹೂಡಲಿ! ಈ ಸ್ಪರ್ಧೆಯಿಂದ ವ್ಯಾಪಾರ-ವ್ಯವಹಾರಗಳಲ್ಲಿ ತನ್ನಿಂದ ತಾನೇ ಅನುಕೂಲ ಪರಿಸ್ಥಿತಿಯು ತಲೆದೋರಿ ಜನತೆಯ ಜೀವನಹಿತ ಸಹಜವಾಗಿ ಸಾಧಿಸುವುದು.

ಈ ಸೂಕ್ತಕ್ರಮವನ್ನು ಬಿಟ್ಟು, ದಂಡನಬುದ್ಧಿಯಿಂದ, ಜನರ ಕೈಯಲ್ಲಿಯ ವ್ಯಾಪಾರ-ವ್ಯವಹಾರಗಳನ್ನು ಕಸಿದುಕೊಂಡುಬಿಟ್ಟರೆ, ಆ ಜನರ ಉಪಜೀವನದ ಮಾರ್ಗವೇನು ? ಅದು ಹೋಗಲಿ, ರಾಷ್ಟ್ರೀಕರಣ ಮಾಡುವುದರಿಂದ ಸರಕಾರ ಸಾಧಿಸುವ ಲೋಕಕಲ್ಯಾಣವಾದರೂ ಏನು ? ವ್ಯಾಪಾರಿಗಳಲ್ಲಿ ಲಾಭಗುಳಿತನ ನೆಲೆಮಾಡಿರುವಂತೆ, ಸರಕಾರೀ ನೌಕರರಲ್ಲಿ ಲಂಚಗುಳಿತನ ಮನೆಮಾಡಿಕೊಂಡಿರುವುದು. ಸರಕಾರದ ರಾಷ್ಟ್ರೀಕರಣದ ಹಿಂದೆ ಅಡಗಿರುವ ಸದುದ್ದೇಶವು ಸಾಧಿಸದೆ ಇರುವುದಕ್ಕೆ ಈ ಸರಕಾರೀ ನೌಕರ ವರ್ಗ, ಏಕಮುಖವಾಗಿ ಕಾರ್ಯಮಾಡಲು ಸಿದ್ಧವಾಗಬಹುದು. ವ್ಯಾಪಾರಿಗಳು ಹೆಚ್ಚು ದುಡ್ಡು ತೆಗೆದುಕೊಂಡರೂ ನಿಜವಾದ ಪದಾರ್ಥಗಳನ್ನೆ ಒದಗಿಸುತ್ತಿದ್ದ ಪರಿಸ್ಥಿತಿ ಹೋಗಿ, ಹೆಚ್ಚು ದುಡ್ಡು ಕೊಡುವಂತೆ ಕೊಟ್ಟು ಕೃತ್ರಿಮ-ಕೊಳಕು-ಹುಳುಕು-ಪದಾರ್ಥಗಳನ್ನು ಪಡೆಯಬೇಕಾದ ದುರ್ಧರ ಪ್ರಸಂಗವನ್ನು ಜನತೆ ಎದುರಿಸಬೇಕಾಗುವುದು. ರಾಷ್ಟ್ರದ ಅಭಿಮಾನ, ಸ್ವಜನ ಹಿತಬುದ್ಧಿ ಇಲ್ಲದ ರಾಷ್ಟ್ರದಲ್ಲಿ, ಸ್ವತಂತ್ರ ವ್ಯಾಪಾರಿಗಳು ಮಾಡುವ ಜನಹಿತವೂ ಅಷ್ಟೆ ! ಸರಕಾರದ ನೌಕರರು ಮಾಡುವ ಜನಹಿತವೂ ಅಷ್ಟೆ ! ಇಂತಹ ದೇಶಗಳಲ್ಲಿ ಜನತೆ ಮೂಕಪಶುವಾಗಿ, ಆಗುವುದನ್ನೆಲ್ಲ ಸಹಿಸಬೇಕು ಒಂದು ! ಇಲ್ಲವೆ ತನಗಿರುವ ಹಕ್ಕುಗಳನ್ನು ತಿಳಿದುಕೊಂಡು, ಕಾನೂನಿಗೆ ಸರಿಯಾಗಿ- ವಿರೋಧಪರಿಸ್ಥಿತಿಯನ್ನು ಪ್ರತಿಭಟಿಸಬೇಕು ಒಂದು !

ಈಗ ನಮ್ಮ ಮೈಸೂರು ಸರಕಾರ, ಮಿಕ್ಕೆಲ್ಲ ವ್ಯವಹಾರಗಳನ್ನು ಬಿಟ್ಟು, ಶಾಲೆಗಳಲ್ಲಿಯ ಪಠ್ಯಪುಸ್ತಕಗಳ ವ್ಯವಹಾರದ ರಾಷ್ಟ್ರೀಕರಣದ ಕಡೆಗೆ ಲಕ್ಷ್ಯಹಾಕಿದೆ. ಇದರಿಂದ ಸರಕಾರ ಯಾವ ಜನಹಿತವನ್ನು ಸಾಧಿಸಲಿರುವುದೋ; ಸರಕಾರಕ್ಕೆಕೂಡ ಇದರ ಪೂರ್ಣಕಲ್ಪನೆಯಿರಲಿಕ್ಕಿಲ್ಲ. ಏಕೆಂದರೆ ಮುಂಬಯಿಯಂತಹ ಪ್ರಗತಿಪರ ರಾಜ್ಯದ ಸರಕಾರವೂ, ಈ ಪಠ್ಯಪುಸ್ತಕಗಳ ರಾಷ್ಟ್ರೀಕರಣದ ವಿಚಾರವನ್ನು ತಲೆಯಲ್ಲಿ ತುಂಬಿಕೊಂಡು, ಕೆಲವೆ ದಿನಗಳಲ್ಲಿ ಅದರ ಪೊಳ್ಳುತನವನ್ನೂ ದುಷ್ಪರಿಣಾಮವನ್ನೂ ಕಂಡುಕೊಂಡು, ಪಠ್ಯಪುಸ್ತಕ ರಾಷ್ಟ್ರೀಕರಣದ ವಿಚಾರವನ್ನು ಸಂಪೂರ್ಣವಾಗಿ ತಲೆಯಿಂದ ತೆಗೆದು ಹಾಕಿತು, ಅಂತಹ ಅಹಿತಕಾರಿಯಾದ ಅಪೂರ್ಣ ವಿಚಾರವನ್ನು ನಮ್ಮ ಮೈಸೂರು ಸರಕಾರವೀಗ ತಲೆಯಲ್ಲಿ ತುಂಬಿಕೊಂಡಿದೆ. ಇದರ ಬಗೆಗೆ ನಮ್ಮ ಸರಕಾರ ಸ್ವತಂತ್ರಯೋಚನೆಯನ್ನೇನೂ ಮಾಡಿರದೆ ಯಾವುದೋ ಅನುಕರಣಬುದ್ಧಿಯ ಬೆನ್ನು ಹತ್ತಿ ಹೊರಟಿರುವಂತೆ ಕಾಣುತ್ತದೆ. ಇದರಿಂದ ಸರಕಾರಕ್ಕೆ ಯಾವ ಬಗೆಯ ಫಲಸಿದ್ಧಿಯೂ ದೊರೆಯಲಾರದೆಂಬುದು ಪರಿಣಾಮದಲ್ಲಿ ಅದಕ್ಕೆ ಗೊತ್ತಾಗದೆ ಹೋಗದು. ಆದರೆ ಹೀಗೆ ಸರಕಾರಕ್ಕೆ ಗೊತ್ತಾಗುವ ವರೆಗಿನ ಅವಧಿಯಲ್ಲಿ, ಜನತೆ ಯಾವ ಬಗೆಯ ಅನಿಷ್ಟವನ್ನು ಅನುಭವಿಸಬೇಕಾದೀತೆಂಬುದನ್ನು, ಈಗಲೆ ನಮ್ಮ ಸರಕಾರದ ಗಮನಕ್ಕೆ ತಂದುಕೊಡುವುದು, ಜನಹಿತಬುದ್ಧಿಯುಳ್ಳ ಪ್ರತಿಯೊಬ್ಬ ವಿಚಾರಿಯ ಕರ್ತವ್ಯವಾಗಿದೆ.

ಪಠ್ಯಪುಸ್ತಕಗಳ ರಚನಾಧೋರಣೆ, ಅವುಗಳಲ್ಲಿ ಇರಬೇಕಾದ ವಿಷಯಗಳ ವಿಚಾರ, ಬಹಿರಂಗ ಸೌಂದರ್ಯ, ಪರಿಮಿತ ಬೆಲೆ—ಇವೆಲ್ಲವುಗಳನ್ನೂ ನಿರ್ಣಯಿಸಿ ನಿಯಂತ್ರಿಸುವ ಅಧಿಕಾರವನ್ನು, ಸರಕಾರ ತನ್ನ ಕೈಯೊಳಗೇ ಇಟ್ಟುಕೊಂಡಿರಲಿ; ಸರಕಾರದ ಈ ಆವಶ್ಯಕ ಅಧಿಕಾರವನ್ನು ಯಾರೂ ಪ್ರಶ್ನಿಸರು. ಆದರೆ, ಪಠ್ಯಪುಸ್ತಕಗಳ ನಿರ್ಮಿತಿಯನ್ನೂ ಪ್ರಕಾಶನ ವ್ಯವಹಾರವನ್ನು ಸರಕಾರ ತನ್ನ ಕೈಯಲ್ಲಿ ತೆಗೆದುಕೊಂಡರೆ, ಯಾವ ಆದರ್ಶವನ್ನೂ ಅದರಿಂದ ಸಾಧಿಸಲಿಕ್ಕಾಗದು. ಅದನ್ನು ಎಂದಿನಂತೆ ಬೇರೆ ದೇರೆ ಪ್ರಕಾಶಕರ ಕಡೆಗೆ ಒಪ್ಪಿಸಿಕೊಡುವುದರಿಂದಲೇ ಸರಕಾರದ ಸಾಂಸ್ಕೃತಿಕ ಆದರ್ಶ ಹೆಚ್ಚಾಗಿ ಸಾಧಿಸುವಂತಿದೆ.

ಪಠ್ಯಪುಸ್ತಕಗಳ ನಿರ್ಮಾಣಕಾರ್ಯವನ್ನು ಸರಕಾರ ತನ್ನ ಮೇಲೆ ವಹಿಸಿಕೊಳ್ಳುವುದರಿಂದ, ಮೊದಲನೆಯ ಮಾತಾಗಿ, ಎಲ್ಲ ಪುಸ್ತಕಗಳ ಒಂದೊಂದೇ ಮಾದರಿಗಳು ಹೊರಟು, ಪಠ್ಯಪುಸ್ತಕ ಪ್ರಪಂಚದಲ್ಲಿಯ ನೈವಿಧ್ಯ ಇಲ್ಲದಂತಾಗಿ ಹೋಗುವುದು. ರಾಜ್ಯದ ಎಲ್ಲ ಭಾಗದ ಎಲ್ಲ ಹುಡುಗರೂ, ಅನೇ ಅನೇ ಪುಸ್ತಕಗಳನ್ನು ಓದಿಕೊಳ್ಳಬೇಕು. ಸರಕಾರ ನಿರ್ಮಿಸಿ ಪ್ರಕಟಿಸಿದ ಪಠ್ಯಪುಸ್ತಕಗಳು ಸರ್ವತೋಮುಖ ಗುಣಗಳಿಂದ ಕೂಡಿದ್ದರಾದರೂ ನಾವು ಈ ಮಾತನ್ನು ಸ್ವಲ್ಪ ಸಹನೆಯಿಂದ ನೋಡಬಹುದು; ಆದರೆ ಹಾಗೆ ಅವು ಗುಣಪೂರ್ಣವಾಗಲಾರವೆಂಬುದಕ್ಕೆ, ಸರಕಾರ ಪ್ರಕಟಿಸಿದ ಈ ಸೊದಲಿನ ಪುಸ್ತಕಗಳನ್ನು ನೋಡಿದರೆ ತಿಳಿಯುವಂತಿದೆ. ರಾಷ್ಟ್ರೀಕರಣದ ಫಲವಾಗಿ, ಹೊಸತಾಗಿ ಇದೇ ವರ್ಷ ಬೆಳಕಿಗೆ ಬಂದಿರುವ ೧ ನೆಯ ೩ ನೆಯ ಕನ್ನಡ ಪಠ್ಯಪುಸ್ತಕಗಳನ್ನು ನೋಡಿದವರು, ಸರಕಾರ ಇನ್ನು ಮುಂದೆ ಪ್ರಕಟಿಸಲಿರುವ ಪಠ್ಯಪುಸ್ತಕಗಳ ಬಗೆಗೆ ಅತೃಪ್ತಿ ನಿರಾಶಾಭಾವಗಳನ್ನು ತಳೆದರೆ, ಅದು ಅಸಮಂಜಸವೆಂದೇನೂ ಎನಿಸದು.

ಇನ್ನು ಪಠ್ಯಪುಸ್ತಕಗಳನ್ನು ರಚಿಸಿ ಪ್ರಕಟಿಸುವ ಕಾರ್ಯವನ್ನು, ಯುಕ್ತನಿಯಂತ್ರಣಗಳೊಂದಿಗೆ— ನಾಡಿನಲ್ಲಿಯ ಪ್ರಕಾಶಕರ ಕಡೆಗೆ ಒಪ್ಪಿಸಿದರೆ, ಹತ್ತಾರು ಮಾದರಿಯ ಪುಸ್ತಕಗಳು ತಲೆಯೆತ್ತಿ, ಪಠ್ಯಪುಸ್ತಕ ಪ್ರಪಂಚದಲ್ಲಿ, ಅವಶ್ಯಕವಾದ ಒಂದು ವಿವಿಧತೆಯು ಕಾಣತೊಡಗುವುದು. ಬೇರೆ ಬೇರೆ ಪ್ರಕಾಶಕರಲ್ಲಿ ಪುಸ್ತಕಗಳ ಅಂತರಂಗ-ಬಹಿರಂಗ ಸೌಂದರ್ಯಗಳ ಬಗೆಗೆ ಮೇಲಾಟವುಂಟಾಗಿ, ಈ ವಿಚಾರ ಸಾಗರ ಮಂಥನದಿಂದ ಒಳ್ಳೊಳ್ಳೆಯ ಪುಸ್ತಕರತ್ನಗಳು ತಲೆದೋರಬಹುದು. ಇದರಿಂದ ಅಭಿರುಚಿಗನುಸರಿಸಿ, ಬೇರೆ ಬೇರೆ ಭಾಗದ ವಿದ್ಯಾರ್ಥಿಗಳು, ಬೇರೆ ಬೇರೆ ಪುಸ್ತಕಗಳನ್ನು ಆಯ್ದುಕೊಂಡು ಅಭ್ಯಸಿಸಲು ಅನುಕೂಲವಾಗುವುದು. ವಿವಿಧ ಪ್ರಕಾಶಕರ ವಿವಿಧ ಪಠ್ಯಪುಸ್ತಕಗಳ ಪ್ರಕಟನೆಯ ಮೂಲಕ, ನಾಡಿನ ಸಾಹಿತ್ಯಿಕರಿಗೂ ಸ್ವಲ್ಪ ಪ್ರಯೋಜನವಾಗುವುದು; ಅಲ್ಲದೆ, ಹೆಚ್ಚುಜನ ಸಾಹಿತ್ಯಿಕರ ಸಂಬಂಧ ವಿದ್ಯಾರ್ಥಿಗಳಿಗೆ ಬರುವುದು.

ವಿಚಾರ ಮಾಡಬೇಕಾದ ಇನ್ನೂ ಒಂದು ಮಹತ್ತ್ವದ ವಿಷಯವೆಂದರೆ: ನವಕರ್ನಾಟಕದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು

ಬಗೆಯ ದೇಶಿನುಡಿಯಿದೆ. ಒಂದೊಂದು ದೇಶಿನುಡಿಯೂ ಸತ್ತ್ವ ಸಂಪನ್ನವಾಗಿದ್ದು ವಿಶಿಷ್ಟವ್ಯಕ್ತಿತ್ವವನ್ನು ಅರಳಿಸಿಕೊಂಡು ನಿಂತಿರುವುದು. ಈ ದೇಶಿನುಡಿಗಳ ಸತ್ತ್ವ-ಸೌಂದರ್ಯಗಳನ್ನು, ಅವಸರಮಾಡಿ ನಷ್ಟಪಡಿಸದೆ, ಸಾವಧಾನದಿಂದ ವರ್ತಿಸಿ, ಸಾರ್ವಜನಿಕ ಭಾಷೆಯಲ್ಲಿ ಸಮನ್ವಯಿಸಿಕೊಳ್ಳಬೇಕಾಗಿದೆ. ನಮ್ಮ ದೇಶಿಯೇ ಶ್ರೇಷ್ಠವೆಂದು ಯಾರಾದರೂ ಹೇಳಹೊರಟರೆ, ಅದು ವೃಥಾಭಿಮಾನವೆನಿಸುವುದು— ಇಷ್ಟೇ ಅಲ್ಲ– ಪರಿಪೂರ್ಣಗೊಳ್ಳಬೇಕಾಗಿರುವ ಕನ್ನಡ ಭಾಷೆಗೆ ಘಾತಕವಾಗಿ ಪರಿಣಮಿಸುವುದು. ಆದುದರಿಂದ, ನಮ್ಮ ರಾಜ್ಯದಲ್ಲಿ ಪ್ರಚಾರಕ್ಕೆ ಬರುವ ಪಠ್ಯಪುಸ್ತಕಗಳು, ಆ ಆ ಭಾಗದ ದೇಶಿ ವೈಶಿಷ್ಟ್ಯದಿಂದ ಕೂಡಿದುವೇ ಆಗಿರಬೇಕು. ಇಲ್ಲವಾದರೆ ಕನ್ನಡ ವಿದ್ಯಾರ್ಥಿಗಳು ತಮ್ಮ ಭಾಷೆಯನ್ನೇ ಪರಭಾಷೆಯಂತೆ ಕಲಿಯಬೇಕಾದೀತು. ಶೈಕ್ಷಣಿಕ ತತ್ತ್ವದ ದೃಷ್ಟಿಯಿಂದ ಇಂತಹ ಪಠ್ಯಪುಸ್ತಕಗಳು ಅಪ್ರಯೋಜಕವೆನಿಸುತ್ತವೆ. ಆದುದರಿಂದಲೇ ನಮ್ಮ ಸರಕಾರದ ವಿದ್ಯಾಶಾಖೆಯವರು, ದೇಶದ ವಿವಿಧ ಭಾಗದ ಪ್ರಕಾಶಕರ ಕಡೆಗೆ, ಈ ಪುಸ್ತಕ ನಿರ್ಮಾಣ-ಪ್ರಕಾಶನಗಳ ವ್ಯವಹಾರವನ್ನು ಒಪ್ಪಿಸಿಕೊಡಬೇಕು. ಇಲ್ಲವಾದರೆ ನಮ್ಮ ವಿದ್ಯಾರ್ಥಿಗಳಿಗೆ ಸರಕಾರ ಪ್ರಕಟಿಸಿದ ಪಠ್ಯಪುಸ್ತಕಗಳ ಏಕನಾದ–ಏಕರೂಪಗಳನ್ನು ಕೇಳಿ, ಕಂಡು, ಬೇಸರಿಯುವ ಸಂದರ್ಭ ಬಂದೀತು.

ಈಗಲೂ ವೇಳೆ ಮಿಾರಿಲ್ಲ. ನಮ್ಮ ಸರಕಾರ ಸಮಂಜಸ ಬುದ್ಧಿಯನ್ನಿರಿಸಿಕೊಂಡು, ಸರ್ವತೋಮುಖವಾಗಿ ವಿಚಾರ ಮಾಡಿ, ಪಠ್ಯಪುಸ್ತಕಗಳ ರಾಷ್ಟ್ರೀಕರಣದ ತನ್ನ ನಿರ್ಣಯವನ್ನು–ಕೆಲವು ಅವಧಿಯವರೆಗಾದರೂ— ತಡೆದುಹಿಡಿಯಬೇಕೆಂದು ನಮ್ಮ ವಿನ್ನಹ. ಹೊರಗಿನ ಪ್ರಕಾಶಕರನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವ ಅಧಿಕಾರ ಸರಕಾರಕ್ಕೆ ಯಾವಾಗಲೂ ಇದ್ದೇ ಇದೆ. ಇದು ವರೆಗೂ ಪ್ರಕಾಶನೋದ್ಯಮದಿಂದ ಜೀವನಸಾಗಿಸಿಕೊಂಡು ಬಂದಿರುವ ಬೇರೆ ಬೇರೆ ಭಾಗದ ಪ್ರಕಾಶಕರ ಹಿತಸಂಬಂಧಗಳನ್ನು ಸರಕಾರವಲ್ಲದೆ ಇನ್ನಾರು ನೋಡಬೇಕು? ಅವರ ಜೀವನಸಾಧನವನ್ನು ಒಮ್ಮೆಲೆ ಕಸಿದುಕೊಂಡರೆ, ಅವರು ಹೇಗೆ ಜೀವಿಸಬೇಕು? ಈ ಮಾತಿನ ವಿಚಾರವನ್ನೂ ಮಾಡಿ, ನಮ್ಮ ಸರಕಾರ, ತನ್ನ ಪಠ್ಯಪುಸ್ತಕ ರಾಷ್ಟ್ರೀಕರಣದ ಧಾಳಾಧೂಳಿಯನ್ನು, ಸದ್ಯ ನಿಲ್ಲಿಸಿಬಿಡಬೇಕು.

ಒಂದು ಮರೆತ ಮಾತು

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ನಾನು ಕೊಂದ ಹುಡುಗಿ' ಎಂಬ ಕಥೆಯೊಂದಿಗೆ ಬರಬೇಕಾಗಿದ್ದ ಅಡಿಟಿಪ್ಪಣಿ— "Dorothy Sayers ಅವರು ಇಂಗ್ಲಿಷಿನಲ್ಲಿ ಬರೆದ ಕತೆಯೊಂದರ ಪೂರ್ತಿಅನುವಾದವಿದಕ್ಕಿದೆ." ಎಂಬ ಮಾತು, ಅಲ್ಲಿ ಮರೆವಿನಿಂದ ಅಚ್ಚಾಗದೆ ಉಳಿದಿದೆ. ಓದುಗರು ಈ ಮಾತನ್ನು ಅರಿತುಕೊಳ್ಳಬೇಕು.

— ಸಂಪಾದಕರು

ನಾಡನಡೆ

ರಾಜಕಾರಣದ ಚದುರಂಗದಾಟ

ಅಮೇರಿಕೆಯೆಂದರೆ, ಕಟುವಚನಗಳನ್ನಾಡಿ, ವಾತಾವರಣವನ್ನು ಕಹಿಗೊಳಿಸುತ್ತಲಿದ್ದ ರಸಿಯದ ಮುಖ್ಯ ಶಾಸನಾಧಿಕಾರಿ ನಿಕಿಟಾ ಕ್ರುಶ್ಚೇವ್ ಅವರು, ಇಂದು ಅಮೇರಿಕಾ ಸರಕಾರದ ಸನ್ಮಾನ್ಯ ಅತಿಥಿಗಳಾಗಿ, ಆ ರಾಷ್ಟ್ರದ ಜನತೆ-ಸರಕಾರ, ಎರಡರಿಂದಲೂ ಸಂಭ್ರಮದ ಸ್ವಾಗತವನ್ನು ಪಡೆಯುತ್ತಿದ್ದಾರೆ; ಕ್ರುಶ್ಚೇವರು ಅಮೇರಿಕೆಯ ವಿಷಯಕವಾದ ತಮ್ಮ ಕಹಿಮಾತುಗಳನ್ನು ಕಡಮೆಮಾಡಿ, ಪರಸ್ಪರ ಸ್ನೇಹ-ಸಹಜೀವನದ ಮಾತುಗಳನ್ನು, ಹೋದಕಡೆಗೆಲ್ಲ ಗಿಳಿಯಂತೆ ಗೊಣಗುತ್ತಲಿರುವರು; ಆದರೂ ತಮ್ಮ ಸಮಾಜ ಸಮತಾವಾದದ ಮೇಲ್ಮೈಯನ್ನು—ಕೆಲವೊಂದು ಸಂದರ್ಭಗಳಲ್ಲಿ ಉಗ್ಗಡಿಸಿ, ಅಮೇರಿಕೆಯ ಬಂಡವಾಳವಾದಿಗಳ ಎದೆಯಲ್ಲಿ ಮುಳ್ಳುಚುಚ್ಚುವ ಕೆಲಸವನ್ನೂ ಮಾಡದೆ ಇಲ್ಲ. ಎಂತಲೇ ಕ್ರುಶ್ಚೇವ್ ಅವರ ಹಲವು ಸ್ವಾಗತ–ಸನ್ಮಾನ ಸಂದರ್ಭಗಳಲ್ಲಿ, ಅವರನ್ನು ಕೆಣಕಿರೇಗಿಸುವಂತಹ ಅಪಸ್ವರಸಂದರ್ಭಗಳೂ ಒದಗಿದುದುಂಟು.

ಅಮೇರಿಕೆಯ ಸರಕಾರ, ಸದ್ಯ ಕೃತಿಯಲ್ಲಿ ಕ್ರುಶ್ಚೇವ್ ಅವರನ್ನು ಒಬ್ಬ ಶ್ರೇಷ್ಠ ಅತಿಥಿಯೆಂದು ಸನ್ಮಾನಿಸುತ್ತಿದೆ; ಅವರಿಗೆ ತಮ್ಮ ರಾಷ್ಟ್ರದ ಸಂಸ್ಕೃತಿ-ವೈಭವಗಳನ್ನೆಲ್ಲ ತೋರಿಸುತ್ತಲಿದೆ. ಕ್ರುಶ್ಚೇವರು ಹೋದಕಡೆಯಲ್ಲೆಲ್ಲ ಸಂಭ್ರಮದ ಮಾನ-ಸನ್ಮಾನಗಳು ದೊರೆಯುವಂತೆ ಎಚ್ಚರಿಕೆ ವಹಿಸುತ್ತಲಿದೆ. ಅವರ ಸಂರಕ್ಷಣೆಯ ಹೊಣೆಯನ್ನು ಅಲ್ಲಿಯ ಸರಕಾರ ತಾನೆ ಹೊತ್ತುಕೊಂಡಿದೆ. ಇದೆಲ್ಲವನ್ನು ಪ್ರತ್ಯಕ್ಷ ಕಂಡು, ರಸಿಯ–ಅಮೇರಿಕೆಗಳಲ್ಲಿ ಸ್ನೇಹ-ಸೌಹಾರ್ದಗಳು ಬೆಳೆದು, ಲೋಕದ ಕಣ್ಣಿದುರಿದ್ದ ಮಹಾಯುದ್ಧದ ಭೀತಿ ತೊಲಗುವುದೇನೋ–ಎಂದು ಭಾವುಕರು ಭಾವಿಸಿದರೆ ಅದರಲ್ಲಿ ಆಶ್ಚರ್ಯವೇನೂ ಇರದು. ಆದರೆ ಅಮೇರಿಕಾ ಸರಕಾರದ ಪ್ರಚಾರ ಶಾಖೆ, ಈ ಕ್ರುಶ್ಚೇವ್ ಅವರ ಅಮೇರಿಕಾ ಸಂದರ್ಶನದ ವಿಚಾರದಲ್ಲಿ ನಡೆಸಿರುವ ಪ್ರಚಾರದ ಭಾಷೆಯನ್ನು ನೋಡಿದರೆ, ಅಮೇರಿಕಾ–ರಸಿಯಾಗಳ ಸ್ನೇಹ–ಸೌಹಾರ್ದ ಸಂಬಂಧವು ಕನಸಿನ ಮಾತೇ ಎನಿಸುವುದು. ಸದ್ಯ ನಡೆದಿರುವದು ಎರಡೂ ರಾಷ್ಟ್ರಗಳ ರಾಜಕಾರಣಿಗಳ ಚದುರಂಗದಾಟ— ಎಂದು ತೋರುವುದು.

ಚೀನಾ–ಭಾರತಗಳ ಮತ್ತೊಂದು ಚದುರಂಗದಾಟ

ಚೀನಾ ಭಾರತದ ವಿಷಯಕವಾದ ತನ್ನ ವಿರೋಧಭಾವನೆಯನ್ನು ತನ್ನ ಗಡಿಯ ಆಕ್ರಮಣದಿಂದ ಸಾಕಷ್ಟು ಲೋಕದ ನಿದರ್ಶನಕ್ಕೆ

ತಂದುಕೊಟ್ಟಿದೆ. ಆದರೂ ಭಾರತ ಸರಕಾರ ಚೀನಾದ ವಿಷಯದಲ್ಲಿ ತನ್ನ ಹಿಂದಿನ ಸ್ನೇಹಭಾವವನ್ನೇ ಇರಿಸಿಕೊಂಡಿದೆ. ಇದಕ್ಕೆ ಪ್ರತ್ಯಕ್ಷ ಪ್ರಮಾಣವೆಂದರೆ, ನೊನ್ನೆ ಮೊನ್ನೆಯೆ ಶ್ರೀ. ಕೃಷ್ಣಮೆನನ್ನರು ಭಾರತದ ಪ್ರತಿನಿಧಿಗಳಾಗಿ, ಸಂಯುಕ್ತರಾಷ್ಟ್ರ ಸಭೆಯಲ್ಲಿ ಚೀನಕ್ಕೆ ಪ್ರಾತಿನಿಧ್ಯ ದೊರೆಯಲೇ ಬೇಕೆಂದು ವಾದಿಸಿದುದು. ಎಂದಿನಂತೆ ಅವರ ವಾದಕ್ಕೆ ಯಶಸ್ಸು ದೊರೆಯಲಿಲ್ಲವೇನೋ ಸರಿಯೆ! ಭಾರತದ ಈ ವಾದನನ್ನು ನೋಡಿ, ಸಂಯುಕ್ತರಾಷ್ಟ್ರ ಸಭೆಯಲ್ಲಿಯ ಹಲವು ಶುದ್ಧ ಲೌಕಿಕರಾಷ್ಟ್ರಗಳಿಗೆ ಆಶ್ಚರ್ಯವೂ ಎನಿಸಿರಬಹುದು. ದ್ವೇಷ-ಮತ್ಸರಗಳನ್ನೆ ತಮ್ಮ ಪ್ರಗತಿಯ ಶಕ್ತಿಗಳನ್ನಾಗಿ ಭಾವಿಸಿದ ಆ ರಾಷ್ಟ್ರಗಳಿಗೆ ಭಾರತದ ಆಧ್ಯಾತ್ಮಿಕ ಸಂಸ್ಕೃತಿಯ ಈ ಅದ್ವೇಷ ಸಾಧನೆಯ ಅರ್ಥ ಹೇಗೆ ಆಗಬೇಕು? ಚಿನೀಯರು ಕೂಡ ಭಾರತದ ಈ ಕೃತಿಯನ್ನು ಹೇಡಿತನದ್ದೆಂದೇ ಭಾವಿಸಿರಬೇಕು. ಏಕೆಂದರೆ ತಿಬೇಟಿನ ಆಕ್ರಮಣದಿಂದ ಅಹಂಕಾರದ ಕೊಂಬನ್ನು ಮೂಡಿಸಿಕೊಂಡ ಚೀನೀಯರ ಹೃದಯದಲ್ಲಿ ವಿವೇಕದ ಉದಯಕ್ಕೆ ಅವಕಾಶವೇ ಇಲ್ಲವೆಂತಾಗಿದೆ.

ಭಾರತದಲ್ಲಿಯ ಕಮ್ಯುನಿಸ್ಟರ ರೀತಿಯನ್ನು ನೋಡಿದರೆ, ಭಾರತೀಯರಿಗಿಂತ ಚೀನೀಯರೇ ಅವರಿಗೆ ಆತ್ಮೀಯರಾಗಿ ಕಾಣುತ್ತಾರೆ. ತಾವು ಹೇಳಿದಂತೆಯೇ ಚೀನೀಯರು ವರ್ತಿಸುತ್ತಾರೆಂಬ ಅವಿರ್ಭಾವ ಅವರದು. ಅವರ ಹೇಳಿಕೆಯಂತೆಯೆ ಚೀನೀಯರು ಭಾರತದ ಗಡಿಯನ್ನು ಆಕ್ರಮಿಸಿದ್ದಾರೇನೋ!—ಎಂಬ ಅನುಮಾನವನ್ನು ಯಾವ ಸಾಮಾನ್ಯ ತಾರ್ಕಿಕನೂ ಕಮ್ಯುನಿಸ್ಟ್ ಮುಂದಾಳುಗಳು ಆಗಾಗ ಆಡುವ ಮಾತುಗಳಿಂದ ತಿಗೆಯಬಹುದಾಗಿದೆ. ಆದರೂ ಭಾರತ ಸರಕಾರ ಇನ್ನೂ ಅವರನ್ನು ರಾಷ್ಟ್ರದ್ರೋಹಿಗಳೆಂದು ಎಣಿಸುತ್ತಿಲ್ಲ. ಮಾನ್ಯ ಜವಾಹರಲಾಲನೇಹರು ಅವರು ತಳೆದಿರುವ ಸಹನೆ-ಸಮಾಧಾನ ವೃತ್ತಿಗಳನ್ನು ನೋಡಿದರೆ, ಚೀನ-ಭಾರತ ರಾಜಕೀಯ ಆಟದ ಕೊನೆ ಎಲ್ಲಿಗೆ ಹೋಗಿ ತಲ್ಪುವುದೇನೋ ಎಂದು ಯಾರೂ ಭ್ರಮಿತರಾಗಬಹುದು.

ಸಿಂಹಲದ ಮುಖ್ಯಮಂತ್ರಿಯ ಸಂಹಾರ

ರಾಜಕಾರ್ಯದಲ್ಲಿರುವವನ ಮರಣಕ್ಕೆ ಯುದ್ಧವೇ ಆಗಬೇಕೆಂಬ ಮಾತು ಈಗ ಉಳಿದಿಲ್ಲ. ಅದೆಲ್ಲ ಹಳೆಯಕಾಲದ ಬಾಬತ್ತಿಗೆ ಸೇರಿದುದು. ಒಂದು ದೇಶದ ಮುಖ್ಯಾಧಿಪತಿಯ ಮರಣಕ್ಕೆ ಇನ್ನೊಂದು ದೇಶದ ವೈರವೇ ಬೇಕೆಂಬ ಹಳೆಯ ವಿಚಾರಕ್ಕೆ ಈಗ ಅವಕಾಶವಿಲ್ಲ. ಒಳದೇಶದಲ್ಲಿಯೆ ಅವನಿಗೆ ವೈರಿಗಳು ಹುಟ್ಟಿಕೊಳ್ಳುವುದು ಹೊಸರಾಜಕೀಯದ ರೀತಿ.

ನಿಜವಾಗಿ ನೋಡಿದರೆ ಸಿಂಹಲಕ್ಕೆ ಈಗಹೊರಗಿನ ವೈರಿಗಳಾರೂ ಇರಲಿಲ್ಲ. ಮುಖ್ಯಮಂತ್ರಿಗಳಾಗಿದ್ದ ದಿ. ಬಂದಾರನಾಯಕೆ ಅವರು, ತಮ್ಮ ವಿವೇಕಪೂರ್ಣವಾದ ವಿದೇಶೀಯ ರಾಜಕಾರಣ ಧೋರಣೆಯಿಂದ, ಎಲ್ಲ ರಾಷ್ಟ್ರಗಳ ಸೌಹಾರ್ದಕ್ಕೂ ಪಾತ್ರರಾಗಿ ಇದ್ದರು. ಆದರೆ ಅವರ ಮನೆಯಲ್ಲಿಯೆ—ಅವರ ದೇಶದ ಮನುಷ್ಯನೊಬ್ಬನೇ—ಅವರ ಕೊಲೆಯನ್ನು ಮಾಡಿ, ಅವರ ಮುಖ್ಯಮಂತ್ರಿತ್ವದ ಆಡಳಿತಕ್ಕೆ ಪೂರ್ಣವಿರಾಮವನ್ನು ಹಾಕಿದನು.

ಇದನ್ನು ನೋಡಿದರೆ, ಪ್ರಜಾಪ್ರಭುತ್ವದಲ್ಲಿ ಅಧಿಕಾರವನ್ನು ಕೈಯೊಳಗಿರಿಸಿಕೊಂಡಿರುವವರ ಜೀವನವು, ಅವರ ದೇಶದಲ್ಲಿಯೆ ಎಷ್ಟೊಂದು ಅಸ್ಥಿರವಾಗಿರುವುದೆಂಬುದು ಜಿನ್ನಾಗಿ ಕಂಡುಬರುವುದು. ಪ್ರಜಾಪ್ರಭುತ್ವ ಪದ್ಧತಿಯು ಪ್ರಾರಂಭ-ಪ್ರಾರಂಭದಲ್ಲಿ, ವಿಧಾಯಕ ವೆನಿಸುವುದಕ್ಕಿಂತ ವಿಧ್ವಂಸಕವೆನಿಸುವುದೇ ಹೆಚ್ಚು ಅನುಭವಕ್ಕೆ ಬಂದ ವಿಷಯ. ಜನತೆಯಲ್ಲಿ ಸರಿಯಾದ ಮಾನವತೆ-ಸಂಸ್ಕೃತಿಗಳ ವಿಕಾಸ ವಿಲ್ಲದೆ ಹೋದರೆ, ಪ್ರಜಾಪ್ರಭುತ್ವ ಪದ್ಧತಿ ದೇಶದಲ್ಲಿ ಪಕ್ಷ-ಪಂಗಡಗಳನ್ನು ನಿರ್ಮಿಸುವುದು. ಈರ್ಷೆ-ದ್ವೇಷಗಳನ್ನು ಹಬ್ಬಿಸುವುದು. ನೆರೆಹೊರೆಯಲ್ಲಿಯೆ ವೈರಿಗಳನ್ನು ನಿರ್ಮಾಣಮಾಡುವುದು. ಇದೆಲ್ಲದರ ಪ್ರತ್ಯಕ್ಷ ಉದಾಹರಣೆಯೆಂದರೆ, ಶ್ರೀ ಬಂದಾರ ನಾಯಕೆಯವರ ಭೀಕರವಾದ ಕೊಲೆ.

ಮೂವತ್ತು ವರ್ಷ ವಯಸ್ಸಿನ ಒಬ್ಬ ತರುಣ ಪ್ರಾಧ್ಯಾಪಕ, ತನ್ನ ರಾಷ್ಟ್ರದ ಮುಖ್ಯಮಂತ್ರಿಯನ್ನು ಗುಂಡುಹೊಡೆದು ಕೊಲ್ಲುವುದೆಂದರೆ, ಇದನ್ನು ವ್ಯಕ್ತಿದ್ವೇಷವೆಂದು ಯಾರೂ ಭಾವಿಸರು. ರಾಜಕೀಯ ಪಕ್ಷ-ಪಕ್ಷಗಳಲ್ಲಿಯ ಮತ್ಸರ-ವೈರಗಳೇ ಕಾರಣವೆಂದು ಎಲ್ಲರೂ ಊಹಿಸಬಹುದು.

ಏನೇ ಇರಲಿ, ಸದ್ಧೇತುವಿನಿಂದ ಆಡಳಿತವನ್ನು ನಡೆಯಿಸಿದ್ದ ಬಂದಾರ ನಾಯಕೆಯವರು, ಅಕಸ್ಮಾತ್ತಾಗಿ ಲೋಕದಿಂದ ಹೊರಟು ಹೋದರು. ಇದರ ದುಷ್ಪರಿಣಾಮವನ್ನು ಸಿಂಹಳದ ಆಂತರಿಕ ಜೀವನ ಯಾವ ರೀತಿಯಿಂದ ಅನುಭವಿಸುವುದೋ ಏನೋ! ಕೊಲೆಯ ನಿಜವಾದ ಕಾರಣ ಇಂದು ನಾಳೆ ಹೊರಗೆ ಬಾರದೆ ಇರದು. ಅಂತಹ ಕೊಲೆಗಾರನನ್ನು ಕ್ಷಮಿಸಬೇಕೆಂಬ ತಮ್ಮ ಅಪೇಕ್ಷೆಯನ್ನು ಪ್ರಕಟಿಸಿ, ಸಾವಿನ ದಾರಿಯಲ್ಲಿದ್ದ ಬಂದಾರ ನಾಯಕೆಯವರು ತಮ್ಮ ಮಾನವತೆಯ ಸೌಮನಸ್ಯವನ್ನು ಲೋಕದೆದುರು ಒಡ್ಡಿದ್ದಾರೆ. ಇಂತಹ ಸಜ್ಜನರಿಗೂ ಇಂತಹ ದುರ್ಮರಣವೇ?—ಎಂದು ಪ್ರತಿಯೊಬ್ಬ ಸಹೃದಯನೂ ಅವರಿಗಾಗಿ ಕಳವಳಿಸದೆ ಇರಲಾರ. ಎಲ್ಲರ ಕಳವಳದಲ್ಲಿ ನಾವೂ ಭಾಗವಹಿಸಲಿಚ್ಛಿಸುತ್ತೇವೆ.

★ ಫೋಟೋ ★

(ಅನುವಾದಿತಕಥೆ*)

ಡಿ. ಜಿ. ಜೆ. 'ಹರಿಜೀತ್'

ಮಹಾರಾಜಾ ಕಾಲೇಜು, ಮೈಸೂರು

ಜಮಾದಾರನಂತಹ ಕನಸುಗಾರರು ನಮ್ಮ ದೇಶದಲ್ಲಿ ಎಷ್ಟು ಜನರಿಲ್ಲ? ಆದರೆ ಅಂತಹರಕನಸಿನ ಆಶೆಗಳೆಲ್ಲ ನನಸಿನಲ್ಲಿ ಹರಿಹಂಚಾಗಿ, ಬಾಳಿನ ಗೋಳಿಂದ ಬಿಡುವ ಬಿಸಿಯುಸಿರುಗಳೂ ದುಃಖದ ಬಿಕ್ಕುಗಳೂ ವಾತಾವರಣದಲ್ಲಿ ತುಂಬಿಕೊಂಡಿವೆ. ಇದನ್ನು ತವಿಸುವ ಯೋಜನೆಗಳು ಯಾವುವು?

ಕೈಗೊಂದು ಕ್ಯಾಮರಾ ಸಿಕ್ಕಿಬಿಟ್ಟಿದೆ; ಅದರಿಂದ ಕಿಸೆಯಲ್ಲಿ ಕಾಸು ಬರುತ್ತಲೇ ಫೋಟೋ ಸ್ಟುಡಿಯೋಗೆ ಓಡುತ್ತೇನೆ. ಎಷ್ಟು ಫೋಟೋಗಳು ಜೆನ್ನಾಗಿ ಬಂದಿವೆ ಎಂದು ಬಹಳ ಉತ್ಸುಕತೆಯಿಂದಲೂ ಉತ್ಸಾಹದಿಂದಲೂ ಅವುಗಳನ್ನು ಪರಿಶೀಲಿಸುತ್ತೇನೆ. ಸ್ನೇಹಿತರೊಡನೆ ಚರ್ಚಿಸುತ್ತೇನೆ. ಒತ್ತಾಯವನ್ನು ನಿರೀಕ್ಷಿಸುತ್ತೇನೆ. ಸರಿ, ಒತ್ತಾಯ ಮಾಡುವುದೊಂದೇ ತಡ. ಫೋಟೋ ತೆಗೆಯ ಬೇಕೆಂದು ಒತ್ತಾಯ ಮಾಡಿದವರನ್ನು ನಿಲ್ಲಿಸಿ ಆಕಡೆಯೊಂದು ಸಾರಿ, ನೋಡುವಂತೆ ಹೇಳುತ್ತೇನೆ. ನಾನೇ ಓಡಾಡುತ್ತೇನೆ, ಒಮ್ಮೆ ದೂರ, ಇನ್ನೊಮ್ಮೆ ಹತ್ತಿರ. ಕ್ಯಾಮರಾದಲ್ಲಿ ಕಣ್ಣನ್ನು ಈಕಡೆಯೊಂದು ಸಾರಿ ಹೂಳಿ, ಒಮ್ಮೆ ಕೆಳಗಿನಿಂದ—ಇನ್ನೊಮ್ಮೆ ಮೇಲಿನಿಂದ–ಮಗುದೊಮ್ಮೆ ನೂಲೆಯಿಂದ–ನೋಡುತ್ತೇನೆ.

ಕೆಲವೇ ದಿನಗಳಲ್ಲಿ, ಪರಿಚಿತರಾಗಿದ್ದವರೆಲ್ಲರ ಮುಂದೆ ನನ್ನ ಬೆಲೆ ಹೆಚ್ಚಿತು. 'ಮದುವೆಗೆ ಫೋಟೋ ಬೇಕೆಂದು ಸೋದರತ್ತೆ ತನ್ನ ಮಗಳನ್ನು ನಿಲ್ಲಿಸುತ್ತಾಳೆ. ಅಕ್ಕ ತನ್ನ ವರ್ಷದ ಮಗನನ್ನು ತಲೆಬಾಚಿ, ಪೌಡರ್ ಹಾಕಿ, ಸಾಹೇಬನನ್ನಾಗಿ ಮಾಡಿ ನನ್ನ ಮುಂದೆ ನಿಲ್ಲಿಸುತ್ತಾಳೆ. ಗೆಳೆಯರು, ಒಡನಾಡಿಗಳು, ಸೋದರರು, ಬಂಧು-ಬಾಂಧವರು. ಕೇರಿಯ ಹುಡುಗರೇ ಮೊದಲಾದ ತರುಣ ಮಂಡಲಿಯ ನ್ನಂತೂ ಕೇಳುವ ಹಾಗೆಯೇ ಇಲ್ಲ! ಮಿಂಚುತ್ತಾ ಹೊಸಹೊಸ ಕಲ್ಪನೆಗಳು ಮೂಡಿ ಬರುತ್ತವೆ. ಹೊಸಹೊಸ ಭಂಗಿಗಳನ್ನು ಪಡೆಯಲು—ಚತುರತೆಯಿಂದ ನೋಡುತ್ತಾ, ನೋಡದೆ ಇದ್ದು, ಕುಳಿತು ಕೊಂಡು, ಬಗ್ಗಿ, ಮುಂಡಿಯನ್ನೂರಿ ಕುಳಿತುಕೊಂಡು, ಮಲಗಿ ಕೊಂಡು—ಪ್ರಯತ್ನಿಸುತ್ತಿರುತ್ತೇನೆ.

ನನಗಿದರಲ್ಲಾವ ಬೇಸರವೂ ಇಲ್ಲ. ಇಚ್ಛಾನುಸಾರವಾಗಿ ಎಲ್ಲರ ಉತ್ಸುಕತೆಯನ್ನು ಪೂರ್ಣಮಾಡುತ್ತೇನೆ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ನನ್ನ ಉತ್ಸುಕತೆಯನ್ನು ಪೂರ್ಣಮಾಡುತ್ತೇನೆ. ಮನೆಯ ಪ್ರತಿಯೊಂದು ವ್ಯಕ್ತಿಯ, ಪ್ರತಿಯೊಬ್ಬ ಪರಿಚಿತರ,— ಗಿಳಿ, ಬೆಕ್ಕು, ಮನೆ, ಸಪಳುಗಳು, ತುಲಸಿಗಿಡ ಮೊದಲಾದ ಪ್ರತಿಯೊಂದು ಆಕೃತಿಯ—ಅನೇಕ ಫೋಟೋಗಳನ್ನು ತೆಗೆದಮೇಲೆಯೂ, ಯಾರಾದರೂ ಒತ್ತಾಯಮಾಡಿದರೆ ಅಥವಾ ನನಗೆ ಜ್ಞಾಪಕ ಬಂದರೆ, ಇನ್ನೊಂದು ಫೋಟೋತೆಗೆಯುವ ಸುಯೋಗವನ್ನು ಸುಲಭವಾಗಿ ಬಿಟ್ಟುಬಿಡಲಿಚ್ಛಿಸುತ್ತಿರಲಿಲ್ಲ.

ನಮ್ಮ ತಾಯಿ "ಅಯಿತು. ಪರಿಚಿತರಲ್ಲಿ ಯಾರೂ ತಪ್ಪಿಸಿ ಕೊಂಡ ಹಾಗೆ ಕಾಣಿಸುವುದಿಲ್ಲ. ಈಗೇನು ಮಾಡುವೆ?" ಎಂದರು.

ಇಷ್ಟಾದರೂ ಒಬ್ಬನು ತಪ್ಪಿಸಿಕೊಂಡಿದ್ದ. ಆದೂ ನಮ್ಮ ಮನೆಗೆ ಘನಿಷ್ಟ ಪರಿಚಿತನೆ. ನನಗೆ ಅವನ ಯೋಚನೆಯೇ ಬಂದಿರಲಿಲ್ಲ. ಯೋಚನೆ ಬಂದುದು, ನಮ್ಮ ಮನೆಯ ಜಮಾದಾರ್ ಒಂದು ದಿನ ತಾನೇ ಸ್ವತಃ ಮುಂದೆ ಬಂದು "ನಮಸ್ಕಾರ ಸ್ವಾಮಿ!" ಎಂದಾಗ.

ಜಮಾದಾರನದೊಂದು ಅಭ್ಯಾಸ: ದಿನವೂ ಅವನು ಮೌನವನ್ನು ಧರಿಸಿ ಮನೆಯಲ್ಲಿ ಕಸಗುಡಿಸುತ್ತಿರುತ್ತಾನೆ. ಮನೆಯ ಗಂಡುಸರೊಡನೆ ಹೆಚ್ಚಾಗಿ ಮಾತನಾಡುವುದಿಲ್ಲ. ಎಂದಾದರೂ ಏನಾದರೂ ಹೇಳಬೇಕಾಗಿದ್ದರೆ ಮನಸ್ಸನ್ನು ಬಹಳ ಗಟ್ಟಿಮಾಡಿಕೊಂಡು, ಮೊದಲು ಒಂದು ದೀರ್ಘನಮಸ್ಕಾರ ಮಾಡುತ್ತಾನೆ.

"ನಮಸ್ಕಾರ. ಏನು ಜಮಾದಾರ್, ಏನು ಸಮಾಚಾರ?" ಎಂದು ನಗುತ್ತಾ ಕೇಳಿದೆ.

"ಆಯ್ಯೋ, ನಮ್ಮದೆಲ್ಲಾ ಏನು ಸಮಾಚಾರ ಬಿಡಿ ಸ್ವಾಮಿ! ಏನು ಮಾಡೋಣ....ಆದರೆ ಜಮಾದಾರಿಣಿ ಹೇಳ್ತಾ ಇದ್ದಳು...."

ಜಮಾದಾರಿಣಿ ಅಂದರೆ ಜಮಾದಾರನ ಹೆಂಡತಿ.

"ಏನು ಹೇಳುತ್ತಾ ಇದ್ದಳು?"

---

* ಶ್ರೀನಿಭೌಮಿಕ್ ಅವರ ಬಂಗಾಳಿ ಕಥೆಯ ಕನ್ನಡ ಅನುವಾದ.
—ಅನು.

" ಅಯ್ಯೋ ಬಿಡಿ ಸ್ವಾಮಿ ಅವಳದೇನು ಮಾತು ! ಏನೇನೋ ಹೇಳ್ತಾ ಇದ್ದಳು: ಎಂದಾದರೂ ಸತ್ತು ಹೋಗ್ತೀರಿ, ಒಂದು ಫೋಟೋ ಇದ್ದರೆ ಮನೆಯಲ್ಲಿ ಗೋಡೆಗೆ ಹೊಡೆಯಬಹುದು, ಮುಕ್ಕಳು ಮರಿಗಳು, ನಮಗೂ 'ಒಬ್ಬ ಅಪ್ಪ ಇದ್ದ' ಅಂದ್ಕೊಳ್ತಾರೆ.... ಸ್ವಲ್ಪ ಅವರಿಗೆ ನೆನಪು ಬರುತ್ತೆ....ಅಷ್ಟೇ ಸ್ವಾಮಿ, ಇನ್ನೇನು ? ಎಂದಾದರೊಂದುದಿನ ಕಣ್ಮುಚ್ಚಿಕೊಳ್ತೀನಿ....."

ನಿಜವಾಗಿಯೂ ನನಗೆ ನಾಚಿಕೆಯಾಯಿತು. ಇಷ್ಟು ಜನರ ಫೋಟೋ ತೆಗೆದಿದ್ದೇನೆ; ಕಣ್ಣಮುಂದೆ ದಿನವೂ ಬರುವ ಜಮಾದಾರನ ಫೋಟೋ ತೆಗೆಯುವ ವಿಚಾರವೇ ಬರಲಿಲ್ಲ. ಅವನೇ ಬಂದು ತಿಳಿಸದಿದ್ದರೆ....!

" ಸರಿ, ಅಂಗಳದಲ್ಲಿ ನಿಂತುಕೊ, ಕ್ಯಾಮರಾ ತೆಗೆದುಕೊಂಡು ಬರುತ್ತೇನೆ " ಎಂದೆ.

ಜಮಾದಾರನು ಮುಗ್ಧ ಮತ್ತು ಕೃತಾರ್ಥನಂತೆ ಕೆಲವು ಕ್ಷಣ ಕ್ಯಾಮರಾವನ್ನೇ ಎವೆಯಿಕ್ಕದೆ ನೋಡತೊಡಗಿದ. ಮೂರ್ಖನಂತೆ ಕಣ್ಣನ್ನು ಪಿಳುಕಿಸಿದ. ಬಳಿಕ ಇದ್ದಕ್ಕಿದ್ದಂತೆ ಕ್ಯಾಮರಾದ ಮುಂದಿನಿಂದ ಸರಿದು ಲಜ್ಜಿತನಂತೆ " ಈಗಲೇ ತೆಗೀತೀರಾ ಸ್ವಾಮಿ?" ಎಂದ.

" ಹೂಂ! ಈಗಲೆ ! ಫಿಲ್ಮ್ ಇದೆ ಅಂದಮೇಲೆ, ತೆಗೆದೇ ಬಿಡುತ್ತೇನೆ. ಇಲ್ಲದಿದ್ದರೆ ಮರೆತುಬಿಡುತ್ತೇನೆ."

" ಮರೆಯೋದೇನೋ ಮರೆಯಬಹುದು; ಒಳ್ಳೇ ತಮಾಷೆ ಹೇಳಿದ್ರಿ ನೀವು. ಇದಂತೂ ನಿಮ್ಮ....ಹ್ಞೂ, ನಾನು ಹೇಳ್ತಾ.... ಈವತ್ತೇ ತೆಗಿತೀರಾ ?"

" ಹ್ಞೂ, ಈವತ್ತೇ. ಹೇಗಿದ್ದೀಯೊ ಹಾಗೆಯೆ!"

" ಇಡೆಲ್ಲಾ ಫೋಟೋದಲ್ಲಿ ಬಂದುಬಿಡುತ್ತದೆಯೇ ಸ್ವಾಮಿ ? ಈ ಪೊರಕೆ, ಈ ಡಬ್ಬ ಎಲ್ಲಾ ?"

" ಹೌದು, ಎಲ್ಲಾ."

ಇದ್ದಕ್ಕಿದ್ದಂತೆ ಜಮಾದಾರ್ ಸ್ವಲ್ಪ ಹಿಂದೆಮುಂದೆ ನೋಡಿದ. " ನಾನು ಹೇಳ್ತಾ....ಜಮಾದಾರಿಣಿಗೂ ಸ್ವಲ್ಪ ಹೇಳಿಬಿಡುತ್ತೇನೆ. ನೀವು ಜಮಾದಾರನ ಫೋಟೋ ತೆಗೀತೀನಿ ಅಂದ್ಮೇಲೆ....ಈವತ್ತು ಇರಲಿಬಿಡಿ ಸ್ವಾಮಿ ! ನಾನೇ ಇನ್ನೊಂದು ದಿನ ನಿಮಗೆ ಜ್ಞಾಪಕ...."

ಹತ್ತಿಕ್ಕಿದ ಉತ್ಸುಕತೆ ಮತ್ತು ನಾಚಿಕೆಗಳ ಮೂಲಕ ಜಮಾದಾರ ಕ್ಯಾಮರಾದ ಮುಂದಿನಿಂದ ಹಿಂದೆ ಸರಿದ. ಪುನಃ ಕಸಗುಡಿಸುವುದರಲ್ಲಿ ನಿರತನಾದ. ಕಸಗುಡಿಸುತ್ತಾ-ಗುಡಿಸುತ್ತಾ ತನ್ನ ಷ್ಟಕ್ಕೆ ತಾನೇ ಗೊಣಗಿಕೊಳ್ಳತೊಡಗಿದ: " ಇನ್ನೊಂದು ದಿನ ತೆಗೆಯುವಿರಂತೆ ಸ್ವಾಮಿ....ನೀವು ...."

ಕ್ಯಾಮರಾವನ್ನು ಮಡಿಸಿ ಇಟ್ಟೆ. ನನಗೆ ಸ್ವಲ್ಪ ಆಶ್ಚರ್ಯವಾಗಿತ್ತು. ಜಮಾದಾರನು ಅಷ್ಟೇನೂ ಹೊಂದಿಕೊಳ್ಳುವ ಸ್ವಭಾವದವನಲ್ಲ. ಯಾರಿಗೆ ಗೊತ್ತು, ದೃಷ್ಟಿಗೆ ಬೀಳಲು ಯೋಗ್ಯನಲ್ಲದವನ ಮೇಲೆ ದಿವ್ಯದೃಷ್ಟಿ ಬೀಳುವುದರಿಂದ ಹೀಗೆಯೇ ಕಾಣಬಹುದು ಅಥವಾ ಹೊಂದಿಕೊಳ್ಳುವ ಸ್ವಭಾವಿಯಾಗಿದ್ದರೂ ದೃಷ್ಟಿಗೆ ಬೀಳಲು ಯೋಗ್ಯನಲ್ಲದಿರಬಹುದು. ನಮ್ಮ ಜಮಾದಾರನು ಅವರಲ್ಲೊಬ್ಬನು. ಕಲಕತ್ತೆಯಲ್ಲಿ ಅವನೊಬ್ಬ ವೃದ್ಧ, ರೋಗಗ್ರಸ್ತ, ನಿರ್ವಿಕಾರ, ನಿರ್ಲಕ್ಷಿತ ಜಮಾದಾರನಾಗಿದ್ದರೂ, ಜಾತಿಯಲ್ಲಿ ಬಂಗಾಲಿಯವನು. ಅವನ ಮನೆ ಇರುವುದು ಹುಗಳಿಯ ಯಾವದೋ ಹಳ್ಳಿಯಲ್ಲಿ. ಆದರೆ ಮಾತುಗಳನ್ನು ಕೇಳದೆಯೇ ಅವನನ್ನು ಬಂಗಾಳಿಯೆಂದರಿಯುವುದು ಕಷ್ಟ. ಬತ್ತಲೆ ಶರೀರ, ಬರಿಗಾಲು, ಕೈಯಲ್ಲಿ ಪೊರಕೆ ಮತ್ತು ಡಬ್ಬವನ್ನು ಹಿಡಿದುಕೊಂಡು ಪ್ರತಿದಿನವೂ ಕಾಣಿಸುತ್ತಾನೆ; ಯಾವಾಗ ಬರುತ್ತಾನೆ, ಯಾವಾಗ ಹೊರಟು ಹೋಗುತ್ತಾನೆ ಎಂಬ ಬಗ್ಗೆ ಏನೂ ವಿಶೇಷ ಲಕ್ಷ್ಯವನ್ನಿತ್ತಿಲ್ಲ. ಲಕ್ಷ್ಯಗೊಡುವ ಅಗತ್ಯವೂ ಇರುವುದಿಲ್ಲ. ಮನುಷ್ಯ ಏನಾದರೂ ಮಾಡಿಕೊಳ್ಳಲಿ, ಕಸವನ್ನಂತೂ ಚೆನ್ನಾಗಿ— ಯಾವ ಮೂಲೆಯನ್ನೂ ಬಿಡದೆ— ಗುಡಿಸುತ್ತಾನೆ. ಕೊಳೆಯ ಬಗ್ಗೆ ಮನದಲ್ಲಿ ಅಸಹ್ಯಪಟ್ಟುಕೊಳ್ಳದೆ, ಯಾರೂ ಇಷ್ಟು ಆಸ್ಥೆ ಮತ್ತು ನಿಷ್ಠೆಯಿಂದ ಚರಂಡಿಗಳ ಮತ್ತು ಕಕ್ಕಸಗಳನ್ನು ತೊಳೆಯುವುದಿಲ್ಲ. ಆದುದರಿಂದ ಅವನ ಸೇಲಾರಿಗೂ ದೃಷ್ಟಿಯಿಡುವ ಅಗತ್ಯವಿಲ್ಲ. ದೃಷ್ಟಿ ಬೀಳುವುದೆಂದರೆ, ಅವನೇ ಗಟ್ಟಿಯಾಗಿ ಕೂಗಿ ಕೊಂಡಾಗ " ಅರೆ ಅರೆ ! ಮಗು ನೆಲದಮೇಲಿರೋದನ್ನ ತಗೊಂಡು ತಿನ್ತಾ ಇದೆ. ನೀವು ಮಗುವಿನ ಕಡೆ ನೋಡುವುದೇ ಇಲ್ಲಮ್ಮ !.... ಏ ಮಗು ತಿನ್ನಬೇಡಪ್ಪ, ಕಾಯಿಲೆ ಬರುತ್ತೆ. ಈ ಕಲಕತ್ತಾ ಬಹಳ ಕೆಟ್ಟಸ್ಥಳ. ಹೀಗೆಲ್ಲಾ ತಿನ್ನಬಾರದು, ಕಾಯಿಲೆ-ಗೀಯಿಲೆ ಬಂದು ಬಿಡುತ್ತೆ...."

ಎಷ್ಟೋ ಸಾರಿ ಕಸಗುಡಿಸುತ್ತಾ ಗುಡಿಸುತ್ತಾ ಹಾಗೆಯೆ ನಿಲ್ಲಿಸುವನು. " ಬಟ್ಟೆ ಹಾಸಿದೆ. ತೆಗೆದುಕೊಳ್ಳಿ ತಾಯಿ. ಮುಟ್ಟಿಕೊಳ್ಳುವುದು, ಕಸ ಅಂಟಿಕೊಳ್ಳುವುದು; ಕೊಳೇನೂ ಆಗಬಹುದು. ನಿಮಗೆ.... ಏನು.... ಹೇಳಲಿ...."

ಆಗ ಎಲ್ಲಿಂದಲೋ ಜಮಾದಾರನ ಅಸ್ತಿತ್ವದ ವಿಷಯ ಮನೆಯ ಜನರಿಗೆ ತಿಳಿದು ಮಗುವನ್ನು ಎತ್ತಿಕೊಳ್ಳುತ್ತಾರೆ; ಕೊಳೆ-ಕಸವನ್ನು ಒರೆಸುತ್ತಾರೆ ಅಥವಾ ಬಟ್ಟೆಗಳನ್ನು ತೆಗೆದುಕೊಂಡು ಹೋಗುತ್ತಾರೆ. ಬಳಿಕ ಜಮಾದಾರನನ್ನು ಅವರು ಅನಾಯಾಸವಾಗಿ ಪುರುಕ್ಷಣದಲ್ಲಿಯೇ ಮರೆತುಬಿಡುತ್ತಾರೆ.

ವಾಡಿಕೆಯಂತೆ ನಾನು ಆ ಜಮಾದಾರನ ಮಾತು ಮತ್ತು ಅವನ ಫೋಟೋ ತೆಗೆಯುವ ವಿಷಯವನ್ನು ಮರೆತೇ ಬಿಟ್ಟೆ. ಅನವರತವಾಗಿ ಜರುಗುವ ಘಟನೆಗಳ ಜೊಂಜಾಟದಲ್ಲಿ ಜಮಾದಾರನ ಮಾತನ್ನು ಮರೆಯುವುದು ಅಸಂಭವವೇನಲ್ಲ.

ಜಮಾದಾರನೇ ಪುನಃ ಜ್ಞಾಪಿಸಿದ " ನಮಸ್ಕಾರ ಸ್ವಾಮಿ!"

ನಮಸ್ಕಾರ ಮಾಡುವುದು ಜಮಾದಾರನ ಬಂಗಾಳೀತನದ ಒಂದು ಲಕ್ಷಣ.

" ನಮಸ್ಕಾರ, ಜಮಾದಾರ್, ಏನು ಸಮಾಚಾರ ?"

"ಅಯ್ಯೋ, ಜಮೀದಾರನದೇನು ಸಮಾಚಾರ ಬಿಡಿ ಸ್ವಾಮಿ! ಹ್ಞಾ, ನನ್ನ ಫೋಟೊ.... ಹ್ಞಾ, ನನ್ನ ಮಗನೂ ಸ್ವಲ್ಪ ದೊಡ್ಡವ ನಾಗಿದ್ದಾನೆ ಸ್ವಾಮಿ! ಏನೋ ದೇವರ ದಯೆ.... ನೀವು ಆವತ್ತು ಹೇಳಿದ್ದಿರಲ್ಲ ಸ್ವಾಮಿ...."

ಜಮೀದಾರನ ಅನುಲೇಪನದ, ಕೆಂಪಾದ, ಅದರೂ ನಾಚಿದ್ದ ಕಣ್ಣುಗಳ ಕಡೆ ಸ್ವಲ್ಪಹೊತ್ತು ಎವೆಯಿಕ್ಕದೆ ನೋಡುತ್ತಿದ್ದರೂ, ನಾನೇನು ಹೇಳಿದ್ದೆನೆಂಬುದು ಜ್ಞಾಪಕಕ್ಕೆ ಬರಲಿಲ್ಲ. ಅನಂತರ ಇದ್ದಕ್ಕಿದ್ದಂತೆ ಜ್ಞಾಪಕ ಬಂದು "ಓಹೊ, ನಿನ್ನ ಫೋಟೋನಾ?" ಎಂದೆ

"ಅಯ್ಯೋ ಸ್ವಾಮಿ! ಸ್ವಾಮಿಗಳೇ ಹೇಳಿದ ಮೇಲೆ.... ಅಂತ ಅಂತಾಳೆ ಅವಳು.... ಇದೂ ಒಂದು ಗೀಳು ಸ್ವಾಮಿ, ಏನು ಮಾಡೋದು! ಏಕೆ, ಏನಂತೀರಿ ಸ್ವಾಮಿ?"

ಅಲ್ಲಿ ಇದ್ದವರೆಲ್ಲಾ ಜಮೀದಾರನ ಮಾತನ್ನು ಕೇಳಿ ನಕ್ಕು ಬಿಟ್ಟರು. ಕೆಲವರ ನಗುವಿನಲ್ಲಿ ಸಹಾನುಭೂತಿಯಿತ್ತು; ಕೆಲವರ ನಗುವಿನಲ್ಲಿ ಪರಿಹಾಸ್ಯವಿತ್ತು. ಜಮೀದಾರ, ಆಮೇಲೆ ಜಮೀದಾರಿಣಿ, ಅವರ ಮೇಲೆ ಫೋಟೋತೆಗೆಸುವ ಗೀಳು! ಒಂದಕ್ಕೊಂದು ಸಂಬಂಧವಿಲ್ಲದ ಮಾತುಗಳು. ಆದರೂ ಗೀಳು! ಈ ಗೀಳುಗಳನ್ನು ಇಷ್ಟುದಿನಗಳ ಬಳಿಕವೂ ಮರೆಯುವದಕ್ಕಾಗಿರಲಿಲ್ಲ. ಅಂದಮೇಲೆ ಸಹಾನುಭೂತಿ-ಪರಿಹಾಸ ಇದ್ದೇ ಇರುತ್ತದೆ.

ಅಪರಾಧಿಯಂತೆ ತಪ್ಪನ್ನು ಒಪ್ಪಿಕೊಳ್ಳಬೇಕಾಗಿ ಬಂದಿತು. "ನಿಜವಾಗಿಯೂ ನಾನು ಮರೆತುಬಿಟ್ಟಿದ್ದೆ. ಹ್ಞಾ, ಈಗ ಯಾವಾಗ ತೆಗೆಸಿಕೊಳ್ಳುತ್ತೀಯೆ? ಈಗಲೆ?"

ಇಂದೂ ಜಮೀದಾರನು ಮೊದಲಿನಂತೆ ಸಂಕೋಚಗೊಂಡು ಹೋದ. "ಈಗಲೆ? ಆಗಲಿ, ನೀವು ಹೇಳಿದ ಮೇಲೆ....." ಎನ್ನುತ್ತಾ ನಿತ್ಯದಂತೆ ಕಸಗುಡಿಸತೊಡಗಿದ.

ಕ್ಯಾಮರಾ ತಂದು ಜಮೀದಾರನಿಗೆ "ನಿಂತುಕೊ, ಈಗಲೇ ತೆಗೆದುಬಿಡುತ್ತೇನೆ. ಇಲ್ಲದೇ ಇದ್ದರೆ ನಾನು ಆಮೇಲೆ ಮರೆತು ಬಿಡುತ್ತೇನೆ" ಎಂದೆ.

ಆದರೆ ಜಮೀದಾರನು ಕ್ಯಾಮರಾ ಮುಂದೆ ನಿಂತುಕೊಳ್ಳಲಿಲ್ಲ. ಏಕೆ, ಎನ್ನುವುದಕ್ಕೆ ಉತ್ತರ ಹೇಳಲು ಅವನು ನಾಚಿಕೊಳ್ಳುತ್ತಿದ್ದ. ಕೊನೆಗೆ ಹೇಳಿದ: "ನನ್ನದೊಬ್ಬನದೇ ಫೋಟೋ ತೆಗೀತೀರಾ ಸ್ವಾಮಿ? ಜಮೀದಾರಿಣಿ.... ಹೋಗ್ಲಿ ಬಿಡಿ ಸ್ವಾಮಿ, ಹೆಂಗಸರ ಮಾತೇನು.... ಆದರೆ ನಿನ್ನೆ ಹೇಳ್ತಾ ಇದ್ದಳು...."

ಸ್ವಲ್ಪ ಹೊತ್ತು ಪ್ರಯತ್ನಿಸಿದ ಬಳಿಕ ಅವನ ಅಭಿಪ್ರಾಯವನ್ನು ಅರಿತೆ. ಜಮೀದಾರನ ಆಂತರಿಕ ಇಚ್ಛೆ, ತನ್ನದೊಬ್ಬನ ಫೋಟೋ ಮಾತ್ರವಲ್ಲದೆ ಜೊತೆಗೆ ಜಮೀದಾರಿಣಿ, ಮಗು ಮತ್ತು ಹಿರಿಯ ಮಗ—ಎಲ್ಲರ ಫೋಟೊ ತೆಗೆಸಬೇಕೆಂದಿತ್ತು.

"ಏನಂತೀರಿ ಸ್ವಾಮಿ? ಮಗ....ನಮಗೊಬ್ಬ ಅಪ್ಪ, ಒಬ್ಬ ಅಮ್ಮ ಇದ್ದರು, ಎಷ್ಟೋ ಕಷ್ಟ-ನಷ್ಟಗಳಿಂದ ನಮ್ಮನ್ನು ಬೆಳೆಸಿ ಮನುಷ್ಯರನ್ನಾಗಿ ಮಾಡಿದರು ಅಂದುಕೊಳ್ಳುತ್ತಾನೆ. ಚಿಕ್ಕಂದಿನಲ್ಲಿ ಮಗು ಹೇಗಿತ್ತು ಅನ್ನೋದನ್ನು ನಾವೂ ನೋಡ್ತೀವಿ.... ಅಷ್ಟೇ ಸ್ವಾಮಿ, ಇನ್ನೇನಿಲ್ಲ! ಜಮೀದಾರಿಣಿ...."

"ಸರಿ, ಹಾಗಾದರೆ ಎಲ್ಲರ ಫೋಟೋನೂ ತೆಗೆಯುತ್ತೇನೆ. ಆದರೆ ಹೇಗೆ ತೆಗೆಯೋದು? ಎಲ್ಲರನ್ನೂ ಇಲ್ಲಿಗೇ ಕರೆದುಕೊಂಡು ಬರುತ್ತೀಯೇನು?" ಎಂದೆ.

ಜಮೀದಾರನು ಕೃತಾರ್ಥನಾಗಿ "ಆಗಲಿ ಸ್ವಾಮಿ, ನೀವು ಹೇಳಿದ ಮೇಲೆ.... ಯಾವತ್ತಾದರೂ ಒಂದು ದಿನ ಇಲ್ಲಿಗೇ ಕರೆದು ಕೊಂಡು ಬರುತ್ತೇನೆ" ಎಂದ.

"ಸ್ವಲ್ಪ ತಾಳು, ಇಲ್ಲಿಗೇನೂ ಕರೆದುಕೊಂಡು ಬರಬೇಡ. ನಾನೇ ನಿಮ್ಮಲ್ಲಿಗೆ ಬರುತ್ತೇನೆ" ಎಂದೆ.

"ಸಾಯಂಕಾಲ....ಆಗ ನನಗೆ ಕೆಲಸ ಇರೊಲ್ಲ!"

"ಸರಿ."

ಅವನ ವಿಳಾಸವನ್ನು ಬರೆದಿಟ್ಟುಕೊಂಡೆ. ಈ ಸಾರಿ ನನ್ನ ಗೀಳಿನ ಸರದಿ. ಅವನ ಮನೆಗೆ ಹೋಗಿಯೇ ಫೋಟೋ ತೆಗೆಯುತ್ತೇನೆ. ಜೇನ್ನಾಗಿ ತೆಗೆದರೆ ಕೆಟ್ಟುಹೋಗುವುದಿಲ್ಲ. ಹೇಗೆ ತೆಗೆಯಬೇಕೆಂಬುದರ ರೂಪ-ರೇಷೆಯನ್ನು ಮನದೊಳಗೇ ಚಿತ್ರಿಸಿಕೊಂಡೆ. ಒಂದು ಪ್ರಸಿದ್ಧ ವಿದೇಶೀ ಪ್ರಜಾರಚಿತ್ರದ ಫೋಟೊ, ಹೃದಯದಲ್ಲಿ ಮತ್ತು ಕಣ್ಣುಗಳಲ್ಲಿ ಕವಿದು ಕುಣಿಯುತ್ತಿತ್ತು.

ಇದು ನನ್ನ ಗೀಳಿನ ಸರದಿಯಾಗಿದ್ದುದರಿಂದ ನಾನು ಮರೆಯಲಿಲ್ಲ. ಕತ್ತಲಿನಲ್ಲಿ ಒಂದು ಕೈಯಲ್ಲಿ ಪೊರಕೆಯನ್ನು ಇನ್ನೊಂದು ಕೈಯಲ್ಲಿ ಡಬ್ಬವನ್ನೂ ಹಿಡಿದುಕೊಂಡು ಜಮೀದಾರನು ಪ್ರತಿದಿನವೂ ನಮಗೆ ಕಾಣಿಸುವ ಹಾಗೆಯೇ, ನಾನೂ ಒಂದು ಅಲಕ್ಷ್ಯ ಯಂತ್ರದಂತೆ ಸಾಯಂಕಾಲ, ಕ್ಯಾಮರಾ ಹಿಡಿದುಕೊಂಡು ಹೊರಟೆ.

ಹುಡುಕುತ್ತಾ ಹೊರಟು ನಾನು ತಲುಪಿದ ಸ್ಥಳ, ಕಲಕತ್ತಾದ ಅನ್ಯಾನ್ಯ ನಿವಾಸಿಗಳಿಗಿಂತ ಅಲ್ಪವೂ ಬೇರೆಯಾಗಿರಲಿಲ್ಲ. ಹಂಚಿನ ಮನೆಗಳು, ಕರಡುಮುರುಡು ರಸ್ತೆ, ಚರಂಡಿಗಳ ಮೇಲೆ ನೆಲೆಯೂರಿದ ಪಾಚಿ, ಎಲ್ಲಿ ಅಂದರಲ್ಲಿಯೇ ಕೊಚ್ಚೆ-ಕೆಸರು. ಕೋಳಿ, ಹುಂಜ ಮತ್ತು ನಾಯಿಗಳು. ಚರಂಡಿಯ ಅಕ್ಕಪಕ್ಕದಲ್ಲಿ ಹುಡುಗರು ಅವುಲೇರಿದವರಂತೆ ಹೇಸಿಕೆಯ ಪರವೆಯಿಲ್ಲದೆ ಆಟ ಆಡುತ್ತಿದ್ದರು. ಗಟ್ಟಿಯಾಗಿ ಗದ್ದಲವನ್ನಾಡ್ತುತ್ತಿದ್ದರು. ಹತ್ತಿರದಲ್ಲಿಯೇ ಇದ್ದ ಒಂದು 'ಹೌವ'ದ ಕೆಳಗೆ, ಕೆಲವರು ದಿಂದ. ಹಿಂದಿರುಗಿದ ಕೆಲವು ಗಂಡಸರು, ಬಟ್ಟೆಗಳಿಗೆ ಸಾಬೂನು ಹಚ್ಚುತ್ತಿದ್ದರು; ಕೆಲವರು ಸ್ನಾನ ಮಾಡುತ್ತಿದ್ದರು. ಅವರ ಮುಖಗಳನ್ನು ನೋಡಿ ಅವರಾವ ಕೆಲಸ ಮಾಡುವವರೆಂಬುದನ್ನು ಹೇಳಲು ಕಷ್ಟವಾಗಿತ್ತು. ಗಸ್ತು ಹೊಡೆಯುವುದೊ, ರಿಕ್ಷಾ ಎಳೆಯುವುದೊ, ಮೋಟಾರಿನ ಗ್ಯಾರೇಜಿನದೊ, ಗ್ಲಾಸ್-ಫ್ಯಾಕ್ಟರಿಯದೊ ಅಥವಾ ಕೂಲಿಯ ಕೆಲಸವೊ, ಏನೂ ಹೇಳುವು ದಕ್ಕಾಗುತ್ತಿರಲಿಲ್ಲ.

ನವೀನತೆ ಒಂದು ಕಡೆ ಮಾತ್ರವೇ ಇತ್ತು. ಒಂದು ಚಿಕ್ಕ ಅಂಗಳದ ಒಂದು ಮೂಲೆಯಲ್ಲಿ ಎಷ್ಟೋ ಬೀಭತ್ಸ ಮುಖದ ಹಂದಿಗಳು ತಮ್ಮ ತಮ್ಮಲ್ಲೇ 'ಘೊಂ-ಘೊಂ' ಎಂದುಕೊಳ್ಳುತ್ತಿದ್ದುವು.

ಸ್ವಲ್ಪ ಹೊತ್ತು ನಿಂತಿದ್ದು ಬಳಿಕ "ಜಮಾದಾರ್, ಏ ಜಮಾದಾರ್!" ಎಂದು ಕೂಗಿದೆ.

ಚಿಕ್ಕ ಚಿಕ್ಕ ಗವಿಗಳಂತೆ ಎಷ್ಟೋ ಮನೆಗಳು. ಒಂದೊಂದು ಮನೆ ಒಂದೊಂದು ಸಂಸಾರದ ಶಿಬಿರ. ಅವುಗಳಲ್ಲೊಂದರಿಂದ ಜಮಾದಾರ ಹೊರಬಂದ.

"ನಮಸ್ಕಾರ ಸ್ವಾಮಿ."

"ನಮಸ್ಕಾರ. ಎಲ್ಲಿ ?...."

'ಎಲ್ಲಿ ?' ಎಂದಷ್ಟೇ ಹೇಳಿ ನಿಲ್ಲಿಸಿದೆ; ಆಗ ಜಮಾದಾರನನ್ನು ಒಮ್ಮೆಲೆ ಗುರುತಿಸುವುದು ಕಷ್ಟಕರವಾಗಿತ್ತು. ಏಕೆಂದರೆ ಒಂದು ಅಪರಿವರ್ತಿತ ಮುಖದಲ್ಲಿಯೇ ದಿನವೂ ಜಮಾದಾರನನ್ನು ನೋಡುವ ಅಭ್ಯಾಸವಾಗಿತ್ತು. ಬತ್ತಲೆ ಮುಖದ, ಒಣದೇಹದ, ಸೊಂಟದ ಮೇಲೆ ಒಂದು ಕೊಳಕು ಲಂಗೋಟಿಯನ್ನು ಸುತ್ತಿದ, ಒಂದು ಕೈಯಲ್ಲಿ ಪೊರಕೆ ಇನ್ನೊಂದು ಕೈಯಲ್ಲಿ ಡಬ್ಬಿ ಹಿಡಿದ ಜಮಾದಾರ ನನ್ನನ್ನೇ ಇದುವರೆಗೂ ನೋಡುತ್ತಿದ್ದುದು. ಸಿಕ್ಕುಗಟ್ಟಿದ ಒಣ ಕೂದಲಿನ, ನಿರ್ವಿಕಾರ ಕಣ್ಣುಗಳ ಜಮಾದಾರನನ್ನೇ ನೋಡಿದ್ದುದು.

ಆದರೆ ಎಲ್ಲಿ ಆ ಜಮಾದಾರ ? ನನ್ನ ಎದುರಿಗೆ ಬಂದು ನಿಂತುಕೊಂಡ. ಸ್ವಲ್ಪ ಹೊತ್ತಿನ ಮುಂಚೆಯೇ ಇವರ ಊಟ-ತಿಂಡಿ ಮುಗಿದಿದೆ ಎನಿಸಿತು. ತಲೆಯ ಮೇಲೆ ಸುಂದರವಾದ, ಮಿನುಗುವ ಗುಂಗುರು ಕೂದಲು. ಶುಭ್ರವಾದ ಪಂಚೆ ಮುಂಡಿಯ ಕೆಳಗಿನ ವರೆಗೂ ತಲುಪಿತ್ತು. ಬಾಯಲ್ಲಿ ಬೀಡಾ, ಹೆಗಲಿನ ಮೇಲೆ ನೆನೆದ ವಸ್ತ್ರ ಮತ್ತು ಕೈಯಲ್ಲಿ ಮಗು. ಒಂದೇ ಕಾಲದಲ್ಲಿ ಒಬ್ಬ ಗೃಹಸ್ಥ, ಕೋಮಲ,-ನಿರ್ಬೋಧ ಬಾಲಕನ ಸ್ನೇಹಮಯನಾದೊಬ್ಬ ತಂದೆ.

"ನಮಸ್ಕಾರ ಸ್ವಾಮಿ ! ಎಲ್ಲಿ ಕುಳಿತುಕೊಳ್ಳುತ್ತೀರಾ ? ನಮ್ಮ ಸಾಮಾನುಗಳೆಲ್ಲಾ ಕೊಳೆಯಾಗಿವೆ" ಎಂದು ಹೇಳಿ, ಅವನು ಅಂಗಳದಲ್ಲಿ ಒಂದು ಚಾಪೆಯನ್ನು ಹಾಸಿದ. ಅಂಗಳವೇನೋ ಚೆನ್ನಾಗಿ ಶುಭ್ರವಾಗಿತ್ತು. ಹಳ್ಳಿಯ ಸಾಧಾರಣ ಮನೆಗಳಂತಹುದೇ ಮನೆ. ಬಾಗಿಲಮೇಲೆ ಮಂಗಳ ಚಿಹ್ನೆಗಳಾದ ಕುಂಕುಮದ ರೇಖೆಗಳು. ಮಣ್ಣಿನ ಗೋಡೆಯ ಮೇಲೆ ಹಳೆಯ ಹಾಸಂಗಿಯ ರೇಖೆಗಳು.

"ಬೇಡ, ಕುಳಿತುಕೊಳ್ಳೋದೇನೂ ಬೇಡ. ಬೆಳಕು ಹೊರಟು ಹೋಗುತ್ತೆ. ಮೊದಲು ಫೋಟೋ ತೆಗೆಯುತ್ತೇನೆ" ಎಂದೆ.

"ಹಂಗೇ ಆಗಲಿ ಸ್ವಾಮಿ" ಎಂದು ಹೇಳಿ ಜಮಾದಾರ ಮನೆಯ ಕಡೆ ಅನೇಕ ಸಾರಿ ದೃಷ್ಟಿಬೀರಿದ. ಮಗುವನ್ನು ಇಳಿಸಿ ನೆಲದಮೇಲೆ ನಿಲ್ಲಿಸಿದ. "ಇವನೇ ನನ್ನ ಚಿಕ್ಕ ಮಗ.... ಏನೋ ಒಂದು ಗೀಳು, ಆಸ್ಪೇ ಸ್ವಾಮಿ" ಎಂದು ಹೇಳಿ, ಅರ್ಧ ಲಜ್ಜೆ ಮತ್ತು ಅರ್ಧ ಕೃತಜ್ಞತೆಯೊಂದಿಗೆ ಜಮಾದಾರನು ನಗೆಯನ್ನು ಬೀರಿದ, ಒಬ್ಬ ಸಾಮಾನ್ಯ ಬಂಗಾಳಿ ತಂದೆಯಂತೆ.

ಕೈಯಲ್ಲಿ ಕಬ್ಬಿಣದ ಬಳೆ, ಕೂದಲು ತುಂಬಿರುವ ಪುಟ್ಟ ತಲೆ, ಬೆಳ್ಳಿಯ ಕಣಗಳಂತಹ ಹಾಲುದಂತಗಳು, ಕೋಮಲ ತಳಿರಿನಂತಹ ಕರಿಯಹುಬ್ಬು, ನಿರ್ಬೋಧ—ಉನ್ಮುಕ್ತ ನಗುವಿನಿಂದ ಓತಪ್ರೋತನಾದ ಜಮಾದಾರನ ಪುಟ್ಟಮಗ, ತಂದೆಯ ಮಡಿಲಲ್ಲಿಂದ ಇಳಿದು ಅಂಗಳದಲ್ಲಿ ಓಡತೊಡಗಿದ.

ನಾನು ಕಲ್ಪನೆ ಮಾಡಿದ್ದ ಕಾಂಪೋಜಿಶನ್ ಎಲ್ಲಾ ಒಂದೇ ಸಾರಿಗೆ ಚೂರು ಚೂರಾಯಿತು. ಸಾಕಾರವಾದ ಕಲ್ಪನೆ ಎದುರಿಗಿದೆ. ಈ ನಗ್ನ ಸರಳತೆಯ ಫೋಟೋ ಕೆಡುವ ಹಾಗೇನೂ ಇಲ್ಲ. ಆದುದರಿಂದ ಬತ್ತಲೆಯಾಗಿದ್ದ ಜಮಾದಾರನ ಮಗನನ್ನು ಅಂಗಳದ ಮೂಲೆಯೊಂದರಲ್ಲಿ, ಕ್ಯಾಮರಾ ಕಡೆ ಅವನ ದೃಷ್ಟಿಯನ್ನು ತಿರುಗಿಸಿ ನಿಲ್ಲಿಸಿದೆ. ಕ್ಯಾಮರಾ ಸರಿಮಾಡಿಕೊಳ್ಳುತ್ತಿರುವಷ್ಟರಲ್ಲಿ ಜಮಾದಾರನು "ಸ್ವಾಮಿ !" ಎಂದ

ನಾನು ಕಣ್ಣೆತ್ತದೆಯೇ "ಏನು ?" ಎಂದೆ.

"ಹೀಗೆಯೇ ಫೋಟೊ ತೆಗಿತೀರಾ ಅಂತ...."

"ಹೌದು ಏಕೆ ?"

"ಹ್ಞುಹ್ಞೂ.... ಹಾಗೇನೇ ತೆಗೇರಿ.... ಆದರೆ ಅವಳು ಇವನಿನ್ನೂ ಚಿಕ್ಕ ಹುಡುಗ; ಸ್ವಲ್ಪ ಅಲಂಕಾರ ಮಾಡೋಣ ಅಂತಿದ್ದಳು. ಇಲ್ಲೇ ಇದ್ದರೆ ಜನ ಏನಂತಾರೆ ! ತನ್ನ ಮಗನಿಗೆ ಒಂದು ಅಂಗಿಯನ್ನೂ ಅವರಪ್ಪ ಹೊಲಿಸಲಿಲ್ಲ....ಇದೇ ಫೋಟೋನೇ ಕಡೇವರೆಗೂ ಉಳಿಯೋದು ಅಲ್ವೆ ಸ್ವಾಮಿ ?"

"ಹ್ಞುಹ್ಞೂ, ಬೇಡ ! ಅಂಗಿಯೇನೂ ಬೇಡ. ಹೀಗೇನೇ ಚೆನ್ನಾಗಿದೆ. ಹೀಗಿದ್ದರೆ ಫೋಟೋ ಚೆನ್ನಾಗಿ ಬರುತ್ತೆ ಅದಕ್ಕೆ."

"ಸ್ವಾಮಿ !"

ಫೋಕಸ್ ಅನ್ನು ಸರಿಮಾಡಿದ್ದೆ. ಆದರೆ ಫೋಟೋ ತೆಗೆಯುವುದಕ್ಕೆ ಆಗಲೇ ಇಲ್ಲ ಜಮಾದಾರನ ಕೊರಳ ದನಿಯನ್ನು ಕೇಳಿ ಬೆಚ್ಚಿಬೀಳಬೇಕಾಯಿತು. ಭೀತ-ವಿನೀತ ಕಣ್ಣುಗಳಿಂದ ಜಮಾದಾರನು ಎವೆಯಿಕ್ಕದೆ ಕ್ಯಾಮರಾವನ್ನು — ತನ್ನದೇನೋ ಸರ್ವನಾಶವಾಗುತ್ತಿರುವಂತೆ—ನೋಡುತ್ತಿದ್ದ.

"ಏನಾಯಿತು ?"

"ಇದೇ ಫೋಟೋ ಕಡೇವರೆಗೂ ಇರುತ್ತೆ. ಮಗು ದೊಡ್ಡವನಾದ ಮೇಲೆ ಏನೆಂದುಕೊಳ್ಳುತ್ತಾನೆ ? 'ನಮ್ಮಪ್ಪ ನನಗೊಂದು ಅಂಗಿಯನ್ನೂ ಹೊಲಿಸಲಿಲ್ಲ'—ಅನ್ನೊಲ್ವೆ?"

ಹತಾಶನಾಗಿ ಕ್ಯಾಮರಾವನ್ನು ಕೆಳಗಿಳಿಸಿದೆ. ಹ್ಞುಹ್ಞೂ, ಈಗ ನನ್ನಿಂದ ಏನೂ ಮಾಡುವಕ್ಕಾಗುವುದಿಲ್ಲ, ಕ್ಯಾಮರಾದಿಂದಲೂ ಏನೂ ಆಗುವುದಿಲ್ಲ.

"ನೀನು ಏಕೆ ಅಡ್ಡಿಮಾಡಿದೆ ?.... ಹ್ಞೂ, ಸರಿ, ಕರೆದುಕೊಂಡುಹೋಗಿ ಅಲಂಕರಿಸಿಕೊಂಡು ಬಾ ಹೋಗು. ಹ್ಞಾ, ನೀನೆಲ್ಲರೂ ಬಂದುಬಿಡಿ !"

ಜಮಾದಾರನ ಕಣ್ಣುಗಳಲ್ಲಿ ಆನಂದದ ತರಂಗಗಳೆದ್ದುವು. ' ಅಂಗೇ ಆಗ್ಲಿ ಸ್ವಾಮಿ, ಇಗೋ...." ಎಂದ.

ಅವರು ಅಲಂಕರಿಸಿಕೊಂಡು ಬರುವ ನಿರೀಕ್ಷಣೆಯಲ್ಲಿ ಬಹಳ ಹೊತ್ತು ಕುಳಿತುಕೊಳ್ಳಬೇಕಾಯಿತು. ಈಮಧ್ಯೆ ಕ್ಯಾಮರಾವನ್ನು ನೋಡಿ, ಅಲ್ಲಿ ಜನರ ಗುಂಪು ಸೇರಿಬಿಟ್ಟಿತು. ಆ ಕೇರಿಯ ಮಕ್ಕಳು, ಮುದುಕರು, ಯುವಕರು, ಸ್ತ್ರೀ-ಪುರುಷರು, ಮತ್ತು ಪರಿಶ್ರಮಿಗಳ ಗುಂಪು ತಮ್ಮ ತಮ್ಮಲ್ಲೇ ಪಿಸುಗುಟ್ಟುತ್ತಾ ಮಾತನಾಡಿಕೊಳ್ಳುತ್ತಿದ್ದರು. ಒಮ್ಮೆ ಕ್ಯಾಮರಾದ ಕಡೆ ಬರುತ್ತಿದ್ದರು, ಇನ್ನೊಮ್ಮೆ ಗದ್ದಲಮಾಡಿ ಆಟವಾಡತೊಡಗುತ್ತಿದ್ದರು. ಎಲ್ಲವೂ ಎಂತೆಂತಹ ಏನರ್ಣ!

ಕುಳಿತು ಕುಳಿತೂ ಸಾಕಾಯಿತು. ಮನೆಯೊಳಗಿನಿಂದ ನಿರಂತರವಾಗಿ ಒಂದು ಅಸ್ಪುಟ ಸ್ವರ ಒಂದೇರೀತಿ-ಜಮಾದಾರ, ಜಮಾದಾರಿಣಿ ಮತ್ತು ಅವರ ಮಗನ ಸ್ವರ-ಕೇಳಿಬರುತ್ತಿತ್ತು. ಬಹಳ ಮೆಲ್ಲಗೆ ಮಾತನಾಡುತ್ತಿದ್ದರು. ಜಗಳ ಆಡುತ್ತಿರುವರೇನೋ ಎನಿಸಿತ್ತು.

" ಏನು ಜಮಾದರ್ ಆಯಿತೋ ? "

ಮನೆಯೊಳಗಿನ ಮಾತುಕತೆ ತಕ್ಷಣವೇ ನಿಂತುಹೋಯಿತು. ಸ್ವಲ್ಪ ಹೊತ್ತಿನ ಬಳಿಕ ಪುನಃ ಆರಂಭವಾಗಿ ಪುನಃ ನಿಂತುಹೋಯಿತು. ಬಳಿಕ ಜಮಾದಾರನೊಬ್ಬನೇ ಮನೆಯಿಂದ ಹೊರಬಂದ. ಅವನ ಮುಖ ಒಣಗಿತ್ತು.

" ಏಕೆ ಮಗುವೆಲ್ಲಿ ? "

ಜಮಾದಾರನಿಗೆ ನನ್ನ ಕಡೆ ಕಣ್ಣೆತ್ತಿ ನೋಡುವುದಕ್ಕಾಗಲಿಲ್ಲ. ಬೇರೆಯ ಕಡೆ ನೋಡುತ್ತಾ " ಇವತ್ತು ಜಮಾದಾರಿಣಿ ಮತ್ತು ಮಗುವಿನ ಫೋಟೊ ಮಾತ್ರ ತೆಗೆದುಬಿಡಿಸ್ವಾಮಿ. ನನ್ನದು ಇನ್ನಾವಾಗಾದರೂ ತೆಗೆಯುವಿರಂತೆ. ಇನ್ನೊಂದು ದಿನ...." ಎಂದ.

" ಏಕೆ ? ಏನಾಯಿತು ? "

ಆದರೆ ಏಕೆ ಎಂಬುದುದಕ್ಕುತ್ತರವನ್ನೀಯಲಾಗಲಿಲ್ಲ ಜಮಾದಾರನಿಗೆ.

ಕಾರಣ ತಿಳಿಯಿತು. ಜಮಾದಾರಿಣಿ ಹೇಳುತ್ತಿದ್ದುದನ್ನು ಕೇಳಿ- " ಅಂಗಿನೇ ಇಲ್ಲ, ಇದ್ದುನೆಲ್ಲ ಹರಕಲಂತೆ. ಅವನ ಫೋಟೊ ಏನೂ ಬೇಡ. ಅಂತಹ ಬಟ್ಟೆ-ಬರೆ ಬೇಕಲ್ಲ...."

" ಹ್ಹಾ, ಜಮಾದಾರಿಣಿ ಈ ಹರಿದ ಬಟ್ಟೆಯನ್ನು ಹಾಕಿಕೊಂಡು ತೆಗೆಸುವಳೊ ? ಹಾಗಾದರೆ ನಾವೂ ತೆಗೆಸುತ್ತೇನೆ."

ಕೆಲವು ಕ್ಷಣ ನಾನು ಅವಾಕ್ಕಾಗಿ ಕುಳಿತಿದ್ದೆ. ಅನಂತರ ಇಂದು ಬರಿಯ ಮಗುವಿನ ಫೋಟೊ ಮಾತ್ರ ತೆಗೆಯುವದೆಂದಾಯಿತು. ಜಮಾದಾರ ಮತ್ತು ಜಮಾದಾರಿಣಿಯ ಫೋಟೊವನ್ನು ಇನ್ನೊಂದು ದಿನ ತೆಗೆಯುವುದು.

ಆದರೆ ಮಗುವಿನ ಬಗ್ಗೆಯೂ ಒಂದು ಸಮಸ್ಯೆ ಉದ್ಭವಿಸಿತು. ಮಗು ಹುಟ್ಟಿದಾಗ ಜಮಾದಾರನು ಒಂದು ಬಣ್ಣದ ಶರಟನ್ನು ಕೊಂಡು ಕೊಂಡಿದ್ದ. ಅದು ಇಂದಿನವರೆಗೂ ಸುರಕ್ಷಿತವಾಗಿತ್ತು. ಆದರೆ ಮಗುವಿನ ದೇಹಕ್ಕದು ಬಿಗಿಯಾಗುತ್ತದೆ. ಎಳೆದು ತೊಡಿಸಿದರೂ ಸೊಂಟದ ವರೆಗೇ ಬರುತ್ತದೆ. ಉಳಿದ ಭಾಗವೆಲ್ಲಾ ಬತ್ತಲೆಯಾಗಿ ಬಿಟ್ಟಿತ್ತು. ಒಂದು ಪೈಜಾಮವೂ ಇತ್ತು. ಆದರೆ ಅದು ಬಹಳ ಹಳೆಯದು, ಕೊಳೆಯಾಗಿ ಹರಿದುಹೋಗಿತ್ತು. ಅದನ್ನು ತೊಡಿಸಲು ಜಮಾದಾರನು ಸಿದ್ಧನಿರಲಿಲ್ಲ.

" ಕೊಳೆಯಾಗಿದ್ದರೂ ಪರವಾ ಇಲ್ಲ, ಹರಿದಿದ್ದರೂ ಪರವಾ ಇಲ್ಲ, ಅದೆಲ್ಲಾ ಫೋಟೊದಲ್ಲಿ ಬರುವುದಿಲ್ಲ, ಕಾಣಿಸುವುದಿಲ್ಲ " ಎಂದೆ ನಾನು.

ಆದರೆ ಅವನನ್ನಾರು ಸಮಾಧಾನ ಪಡಿಸುವವರು? ಜಮಾದಾರ-ಜಮಾದಾರಿಣಿಯ ವಾಗ್ಯುದ್ಧ ಹೆಚ್ಚುತ್ತಲೇ ಹೋಯಿತು. ಕೊನೆಗೆ ಜಮಾದಾರನು ತಲೆತಗ್ಗಿಸಿಕೊಂಡೇ ನನ್ನನ್ನು ರಸ್ತೆಯವರೆಗೂ ತಲುಪಿಸಿದ : " ಇವತ್ತಾಗಲಿಲ್ಲ ಸ್ವಾಮಿ, ನಮ್ಮ ಮಾತುಗಳು.... ಏನು ಮಾಡೋದು ಸ್ವಾಮಿ !....ಹ್ಞೂ, ಇನ್ನೊಂದು ದಿನ ನಿಮ್ಮನ್ನು ಕರೆದುಕೊಂಡು ಬರುತ್ತೇನೆ ಸ್ವಾಮಿ.....ಒಂದು ಹೊಸ ಪಂಚೆ-ಅಂಗಿ ಬಂದು ಬಿಡಲಿ....ಏನಂತೀರಿ ಸ್ವಾಮಿ ?...."

ಮನೆಗೆ ಬಂದ ಮೇಲೆ ತಾಯಿಗೆ " ಒಂದು ಚಿಕ್ಕ ಶರಟು ಇದ್ದರೆ ನೋಡಮ್ಮಾ ಜಮಾದಾರನ ಮಗನಿಗೆ. ಇಲ್ಲದೇ ಇದ್ದರೆ ಅವನ ಫೋಟೊ ತೆಗೆಯೋಹಾಗೇನೇ ಇಲ್ಲ " ಎಂದೆ.

ಹಳೆಯ ಪೆಟ್ಟಿಗೆಯ ಸಾಮಾನನ್ನೆಲ್ಲಾ ತಡಕಾಡಿ ಒಂದು ಶರಟನ್ನು ಸಂಪಾದಿಸಿದ್ದಾಯಿತು. ಸಿಕ್ಕುಗಟ್ಟಿದ ಕೂದಲಿನ, ಕರಿಯ ಕೋಮಲ ಮಗುವಿನ ದೇಹಕ್ಕೆ ಈ ಶರಟು ಸರಿಹೋಗುತ್ತದೆ ಎನಿಸಿತು. ಮಾರನೆಯ ದಿನ ಅದನ್ನು ಜಮಾದಾರನಿಗಿತ್ತಾಗ, ಅವನ ಮುಖ ಹಿಗ್ಗಿನಿಂದ ಅಗಲವಾಯಿತು. " ತಗೊಂಡು ಹೊಗ್ತೀನ್ರಮ್ಮಾ, ಇನ್ನೂ ಕಸಗುಡಿಸುತ್ತಿದ್ದೀನಿ. ಇಂತಹ ಸುಂದರವಾದುದನ್ನು ಈ ಕೈಯಿಂದಲೇ ತೆಗೆದುಕೊಂಡರೆ ಕೊಳೆಯಾಗಿ ಬಿಡುತ್ರಮ್ಮ. ಖಂಡಿತವಾಗಲೂ ತಗೊಂಡು ಹೋಗ್ತೀನ್ರಮ್ಮಾ, ಜಮಾದಾರಿಣಿ ಬಹಳ ಖುಷಿಪಟ್ಟೋಳ್ತಾಳೆ ತಾಯಿ ! " ಎಂದ ಜಮಾದಾರ.

ಕೆಲಸ ಮುಗಿಸಿ ಜಮಾದಾರ ಶರಟನ್ನು ಮನೆಗೆ ತೆಗೆದುಕೊಂಡು ಹೋದ. ಆದರೆ ಫೋಟೋತೆಗೆಸುವ ಬಗ್ಗೆ ಅವನೆಂದೂ ಉಸಿರೆತ್ತಲಿಲ್ಲ. ಕೊನೆಗೊಂದು ದಿನ ನಾನೇ ಕೇಳಿದೆ : " ಏನು ಜಮಾದಾರ್, ಏನಾಯಿತು ? ಶರಟು ಸರಿಯಾಗಿ ಆಯಿತೋ ? ಈಸಾರಿ ನಿನ್ನ ಮಗನ ಫೊಟೊವನ್ನು ತೆಗೆದೇಬಿಡಬೇಕು."

" ಹೌದು ಸ್ವಾಮಿ, ಶರಟು ಬಹಳ ಚೆನ್ನಾಗಿದೆ. ಫೋಟೊ ಈಗ ತೆಗೆದೇಬಿಡಿ ಸ್ವಾಮಿ " ಎಂದು ಹೇಳಿ ಪುನಃ ಪೊರಕೆಯಿಂದ ಮೇಲಿನ ಪಾಚಿಯನ್ನು ಉಜ್ಜಿ-ಉಜ್ಜಿ ತೆಗೆಯುವುದರಲ್ಲಿ ಮಗ್ನನಾದ. ಅನಂತರ ಮನೆ ಮನೆಯಲ್ಲಿ ಎಸೆದಿದ್ದ ಒಣರೊಟ್ಟಿ, ಅನ್ನ, ತರಕಾರಿ ಮೊದಲಾದುವುಗಳನ್ನೆಲ್ಲಾ ಸೇರಿಸಿ, ಮನೆಯಲ್ಲಿ ಸಾಕಿದ್ದ ಹಂದಿಗಳಿಗೋಸ್ಕರ ವಸ್ತ್ರದಲ್ಲಿ ಕಟ್ಟಿಕೊಂಡ.

" ಹಾಗಾದರೆ ಯಾಸಾಗ ? "

ಜಮಾದಾರನು ಎಷ್ಟೋಸಾರಿ ತಾರೀಖುಗಳನ್ನು ನಿಶ್ಚಯಿಸಿದ, ಆದರೆ ಫೋಟೊ ತೆಗೆಯುವುದಕ್ಕೇ ಆಗಲಿಲ್ಲ. ಅವನೇ ಸ್ವತಃ, ತಾನು

ನಿಶ್ಚಯಿಸಿದ ತಾರೀಖನ್ನು ಬದಲಿಸತೊಡಗಿದ. " ಇನ್ನೊಂದು ದಿನ ಸ್ವಾಮಿ...."

ಇದೊಂದು ಜೊಂಜಾಟವೇ ಆಗಿಬಿಟ್ಟಿತು. ಒಂದು ದಿನ ಬಲಾತ್ಕಾರವಾಗಿ ನಿಲ್ಲಿಸಿ " ಅದೇನು ಸ್ಪಷ್ಟವಾಗಿ ಹೇಳು ಜಮಾದಾರ್ ? " ಎಂದೆ.

' ಹ್ಞಾ-ಹ್ಞೂ ' ಎಂದು ಹೇಳುತ್ತಾ ಕೊನೆಗೆ ಹೇಳಿದ " ಹ್ಞೂ ಸ್ವಾಮಿ, ಅಂಗೀನೇನೊ ಕೊಟ್ಟೀರಿ, ಧರ್ಮದ ಮಾತು. ಅಂಗಿ ಹರಿದಿಲ್ಲ, ಹಳೆಯದಲ್ಲ ಸ್ವಾಮಿ....ಆದರೆ ಅದನ್ನು ನೀವೇ ಕೊಟ್ಟದ್ದು. ದೊಡ್ಡವನಾದಮೇಲೆ ಮಗು ಇದೇ ಫೋಟೊವನ್ನಂತೂ ನೋಡುತ್ತದೆ.... ನೋಡಿ ಏನನ್ನಬಹುದು ಸ್ವಾಮಿ ?....ನಮ್ಮಪ್ಪ ಒಂದಂಗೀನೂ ಹೊಲಿಸಲಿಲ್ಲ, ಬೇರೆಯವರು ಕೊಟ್ಟ ಅಂಗಿಯನ್ನು ತೊಡಿಸಿ ಫೋಟೊ ತೆಗೆಸಿದ....ಇಷ್ಟೇ ಸ್ವಾಮಿ, ಇನ್ನೇನು ಹೇಳಲಿ ನಿಮಗೆ, ಸ್ವಾಮಿ...."

ಜಮಾದಾರನ ಮುದಿಯಾದ ರಹಸ್ಯಮಯ ನಿಶಾವ್ರತ ಕಣ್ಣುಗಳು ಭಯ-ಲಜ್ಜೆಯಿಂದೇನೊ ಎಂಬಂತೆ ನನ್ನ ಮೇಲೆಯೇ ನೆಲೆಸಿದ್ದುವು.

ಅವರೂ ಕೇಳಿದೆ " ಫೋಟೊವನ್ನು ನೋಡಿ, ಈ ಶರಟು ನನ್ನದೋ ಅಥವಾ ಬೇರೆಯವರದೊ ಎಂಬುದನ್ನು ಹೇಳುವುದಕ್ಕೆಲ್ಲಿ ಯಾದರೂ ಸಾಧ್ಯನೆ ? "

ಜಮಾದಾರನು ವಿನೀತಭಾವದಿಂದ ತಲೆ ಅಲ್ಲಾಡಿಸಿದ " ಹೌದು ಸ್ವಾಮಿ, ಅದೇನೊ ಸರೀನೆ. ಆದರೆ ಒಂದು ನನ್ನ ಸ್ವಂತ ದುಡಿತದ್ದು.... ಸರಿ, ಅಷ್ಟೇ ಸ್ವಾಮಿ, ನೀವಂತೂ ತಿಳಿದೋರೆ. ಮಗ ದೊಡ್ಡವನಾದ ಮೇಲೆ ನಮಗೂ ಒಬ್ಬ ಆಪ್ಪನಿದ್ದ, ನನಗೋಸ್ಕರ ಇದನ್ನು ಕೊಂಡು ಕೊಂಡಿದ್ದ ಅನ್ನುತ್ತಾನೆ.....ಅಷ್ಟೇ ಸ್ವಾಮಿ ! ಇನ್ನೇನು ? "

ಕ್ಷಯಗ್ರಸ್ತವಾದಂತೆ ಮುದಿಯಾಗಿದ್ದ ಜರ್ಜರ ಜಮಾದಾರನ ಕಣ್ಣುಗಳು ಈ ಸಾರಿ ನನ್ನೆಡೆಗೆ ನೋಡದೆ ಶೂನ್ಯದೆಡೆಗೆ ಆಕಾಂಕ್ಷೆಯ ದೊಂದು ಆಕಾರದೊಡನೆ ಎವೆಯಿಕ್ಕದೆ ನೋಡುತ್ತಿದ್ದುವು.

ಪೃಥ್ವಿಯ ಮೇಲೆ ಅನೇಕ ದೊಡ್ಡ ದೊಡ್ಡ ಆಕಾಂಕ್ಷೆಗಳಿವೆ. ಅವುಗಳ ಚಿತ್ರಗಳೂ ಅಸಾಧಾರಣವಾದುವು. ಜಮಾದಾರನ ಆಕಾಂಕ್ಷೆಗಳು ಅಂತಹ ಅಸಾಧಾರಣವಾದವುಗಳಲ್ಲ. ' ಸರಿ ಹಾಗೆಯೇ ಆಗಲಿ ಜಮಾದಾರ್. ಸ್ವಂತದ ಪರಿಶ್ರಮದ ಸಂಪಾದನೆಯಿಂದ ಮಗ ಮತ್ತು ಸಂಸಾರವನ್ನು ಸಜ್ಜಿತಗೊಳಿಸುವ ನಿನ್ನ ಈ ಅತ್ಯಂತ ಸಾಧಾರಾಣ ಸ್ವಪ್ನ ಸಾರ್ಥಕವಾಗಲಿ ! ' ಎನ್ನೋಣನೆ—ಎನಿಸಿತು. ' ಈ ಸಾಧಾರಣ ಅತ್ಯಂತ ಸಾಧಾರಣ ಮುದುಕನೊಬ್ಬನ ಕನಸಿನ ಫೋಟೊವನ್ನು ತೆಗೆಯಲು ಸಾಧ್ಯವಾಗಬಹುದಾದಂತಹ ಕ್ಯಾಮರಾ ಎಲ್ಲಿಯಾದರೂ ಸಿಗುತ್ತದೆಯೋ ' ಎಂದು ಯೋಚಿಸಿದೆ.

ಇದಾದ ಬಳಿಕ ಬಹಳ ದಿನಗಳವರೆಗೂ ಫೋಟೊತೆಗೆಯುವ ವಿಚಾರನೇ ಬರಲಿಲ್ಲ. ನಾನು ಮರೆತುಬಿಟ್ಟಿದ್ದೆ. ಜಮಾದಾರನೂ ಮರೆತುಬಿಟ್ಟಿದ್ದನೊ ಇಲ್ಲವೊ ಯಾರಿಗೆ ಗೊತ್ತು ? ಪತ್ರಿಕೆಗಳ ಶಿರೋನಾಮೆಗಳಿಗೆ ಕಣ್ಣು ಹಾಯ್ದು-ಹಾಯ್ದು ದಿನಗಳುರುಳುತ್ತಿವೆ. ಚುನಾವಣೆ, ಮಂತ್ರಿಗಳು ಯೋಜನೆಗಳು, ಹೊಸಯೋಜನೆಗಳು, ತಿದ್ದುಪಡಿ ಮಾಡಿದ ಯೋಜನೆಗಳು, ದ್ವಿತೀಯ ಯೋಜನೆ.... ಚಕ್ರಗಳುರುಳುತ್ತಿವೆ ಸಿಕ್ಕಾಪಟ್ಟೆ !

ಜಮಾದಾರನು ಈಗಲೂ ಬರುತ್ತಾನೆ ಎಂದಿನಂತೆ. ನೋಡಿ ನೋಡಿ ಕೊಳೆಯನ್ನು ದೂರಮಾಡುತ್ತಾನೆ. ಮನೆಯ ಮಕ್ಕಳು ಮಣ್ಣನ್ನೊ ಅಥವಾ ಕೊಳೆಯನ್ನೊ ಮುಟ್ಟುವುದನ್ನು ನೋಡಿದರೆ, ಸಂರಕ್ಷಕನಂತೆ ಅವರನ್ನು ಗದರಿಸುತ್ತಾನೆ. ಅಂಗಳದಲ್ಲಿ ಹಾಸಿರುವ ಬಟ್ಟೆಯನ್ನು ನೋಡಿ ತಾಕಬಹುದೆಂಬ ಭಯದಿಂದ ನಿಂತುಬಿಡುತ್ತಾನೆ. ಕೆಲಸ ಮುಗಿದ ಮೇಲೆ ಮನೆಮನೆಯಿಂದ ಎಸೆದ ಒಣರೊಟ್ಟಿಗಳು, ತಂಗಳು ಅನ್ನವನ್ನು ತನ್ನ ಹರಿದ ಹಳೆಯ ವಸ್ತ್ರದಲ್ಲಿ ಕಟ್ಟಿಕೊಂಡು ಹೋಗುತ್ತಾನೆ. ಮೊದಲಿನಂತೆ ಈಗಲೂ ಜಮಾದಾರನ ಸಾಧಾರಣ ಜೀವನದ ಪಯಣಕ್ಕೆ ಯಾರೂ ಯಾವುದೇ ಬಗೆಯ ಗಮನವನ್ನೀಯುವುದಿಲ್ಲ. ಅವನೂ ಯಾರ ದೃಷ್ಟಿಗೂ ಬೀಳದಂತೆ ಅದಷ್ಟು ಪ್ರಯತ್ನಿಸುತ್ತಾನೆ.

ಒಂದು ದಿನ ಅವನೇ ಬಂದು ನನಗೆ ಜ್ಞಾಪಿಸಿದ– " ನಮಸ್ಕಾರ ಸ್ವಾಮಿ."

" ನಮಸ್ಕಾರ ಜಮಾದಾರ್, ಏನು ಸಮಾಚಾರ ? "

" ಹ್ಞೂಹ್ಞೂ..ಏನೂ ಇಲ್ಲ ಸ್ವಾಮಿ, ಅದೇ..ಆ ಮಗು ಈಗ ದೊಡ್ಡವನಾಗಿದ್ದಾನೆ ಸ್ವಾಮಿ ದೇವರದಯಯಿಂದ.ನೀವಂತೂ ಇನ್ನೊಂದುಸಾರಿ ನೋಡಲಿಲ್ಲ. ಅಂತಲೇ ಜಮಾದಾರಿಣಿ ಈ ಸಾರಿ ಸ್ವಾಮಿಗಳನ್ನು...."

" ಅಂದರೆ ಫೋಟೊ ! ಅಲ್ವೇ ! " ನನಗೆ ಆಶ್ಚರ್ಯವಾಯಿತು. ಜಮಾದಾರ ಇನ್ನೂ ಮರೆತಿರಲಿಲ್ಲ. " ಹ್ಞೂ, ಹಾಗಾದರೆ ನಿನ್ನ ಮಗನಿಗೆ ಬಟ್ಟೆ ಕೊಂಡುಕೊಂಡೆಯೇನು ? ' ಹ್ಞೂ ' ಅಂದರೆ, ಸರ್ಕಾರಿ ಯೋಜನೆಗಳಲ್ಲಿ ಹಣ್ಣು ಬಿಡತೊಡಗಿನೆ ಎಂದು ಒಪ್ಪಿಕೊಳ್ಳಲೇ ಬೇಕಾಗುತ್ತೆ. ಅಲ್ವೆ ? "

" ನೀನೇನೋ ತಮಾಷೆ ಮಾಡ್ತೀರಾ ಸ್ವಾಮಿ " ಎಂದು ಜಮಾದಾರನು ನಕ್ಕ. ಬಳಿಕ " ಆ ಹಂದಿಗಳನ್ನು ಸಾಕಿಕೊಂಡಿದ್ದೆನಲ್ಲಾ ಸ್ವಾಮಿ, ಅವುಗಳ ಮರಿಗಳೂ ಈಗ ದೊಡ್ಡವಾಗಿವೆ. ದೊಡ್ಡವಾದರೆ ಎರಡು ರೂಪಾಯಿ ಹೆಚ್ಚಿಗೆ ಸಿಗುತ್ತೆ–ಅಂತಾನೇ ಇಷ್ಟು ದಿನದವರೆಗೂ ಮಾರಿರಲಿಲ್ಲ. ಅಷ್ಟೇ.ಸ್ವಾಮಿ....ಇನ್ನೇನಿಲ್ಲ....ಈ ಸಾರಿ ಮಾರಿಬಿಡ್ತೀನಿ. ಅದರಿಂದ ಬಟ್ಟೆ ಏನೊ ಆಗಿಬಿಡುತ್ತೆ. ಅಲ್ವೆ ಸ್ವಾಮಿ? "ಎಂದ.

" ಹ್ಞೂ ಸರಿ, ನಾಡಿದ್ದು ಸಾಯಂಕಾಲ ಬರುತ್ತೇನೆ " ಎಂದೆ.

ಫೋಟೋ ತೆಗೆಯುವ ಹುಚ್ಚು, ಈ ಮಧ್ಯೆ ಯಾವಾಗ ಮಾಯವಾಗಿತ್ತು ಅನ್ನುವುದೇ ತಿಳಿಯಲಿಲ್ಲ. ಕ್ಯಾಮರಾ ಮತ್ತು ಒಂದು ಹೊಸ ಫಿಲ್ಮನ್ನು ತೆಗೆದುಕೊಂಡು ಹೊರಟೆ. ನನ್ನ ಜೊಂಜಾಟಗಳು ಈ ನಡುವೆ ಸಾಕಷ್ಟು ಬೆಳೆದಿದ್ದುವು. ಮನೆಯಲ್ಲಿ ಒಂದಲ್ಲ ಒಂದು ರಗಳೆ, ಯಾರದೋ ಓದು ಸಾಗುತ್ತಿಲ್ಲ, ಯಾರಿಗೋ ಔಷಧಕ್ಕೋಸ್ಕರ ಹಣವಿಲ್ಲ ಇತ್ಯಾದಿ-ಇತ್ಯಾದಿ....ಜಮಾದಾರನ ಮಗನ ಫೋಟೊ ತೆಗೆದು, ಈ ಸಾರಿ ಉಳಿದೆಲ್ಲಾ ಗೀಳುಗಳಂತೆ ಕ್ಯಾಮರಾದ ಗೀಳಿಗೂ ತಿಲಾಂಜಲಿಯನ್ನಿತ್ತುಬಿಡುತ್ತೇನೆ.

ಜಮಾದಾರನ ಕೇರಿಗೆ ಪುನಃ ಹೋದೆ. ಅದೇ ಬಗೆಯ ಪುಟ್ಟ ಪುಟ್ಟ ಕೊಳೆಮುಖದ ಮಕ್ಕಳು. ಅದೇ ನೀರಿನ ಹೌದು, ಅದರ ಕೆಳಗೆ ಸ್ನಾನಮಾಡುತ್ತಿರುವ ಅನೇಕ ಮುದುಕರು, ಯುವಕರು, ಸ್ತ್ರೀ-ಪುರುಷರು; ಯಾರು ಯಾವ ಕೆಲಸವನ್ನು ಮಾಡುತ್ತಾರೆಂಬುದನ್ನು ಗುರುತಿಸಲು ಕಷ್ಟವಾಗಿದೆ. ಜಮಾದಾರನ ಅಂಗಳದಲ್ಲಿ ಹಂದಿಗಳ ' ಫೊಂ-ಫೊಂ ' ಎಂಬ ಮೊದಲಿನದೇ ಶಬ್ದ. ಹಂದಿಗಳು ಅಂದಗೆಟ್ಟುವೆಂಬುದನ್ನು ಅರಿತಿದ್ದರೂ ನೋಡುವುದಕ್ಕೆ ಇಷ್ಟು ತೆಳ್ಳಗಿರುತ್ತವೆ ಎಂದುಕೊಂಡಿರಲಿಲ್ಲ.

" ಜಮಾದಾರ್ ! ಏ ಜಮಾದಾರ್ ! " ಎಂದು ಕೂಗಿದೆ.

ಸ್ವಲ್ಪ ಹೊತ್ತು ಯಾವ ಉತ್ತರವೂ ಬರಲಿಲ್ಲ. ಬಳಿಕ ಅದೇ ಕೇರಿಯ ಯಾವುದೋ ಒಂದು ಮನೆಯಿಂದ ಹೊರಬಂದು ಜಮಾದಾರನು ನಿಂತುಕೊಂಡ-ಮೌನವಾಗಿ, ನಿಸ್ತೇಜವಾಗಿ.

" ನಮಸ್ಕಾರ ಸ್ವಾಮಿ "

" ಏಕೆ, ಏನಾಯಿತು ? ಫೋಟೊ ? "

ಜಮಾದಾರನ ಮುದಿಯಾದ ಜರ್ಜರಿತ ಅಮಲಿನ ಕಣ್ಣುಗಳು ತಟ್ಟನೆ ನಡುಗಿದುವು. ಬಳಿಕ ಯಾವ ಉತ್ತರವನ್ನೂ ಕೊಡದೆ ಜಮಾದಾರನು ಅಲ್ಲಿಂದ ಜಾರಿಕೊಂಡ. ಮನೆಯೊಳಗಿನಿಂದ ನಾರೀ ಕಂಠದ ಕ್ರಂದನವೊಂದು ಮಾತ್ರ ವಿಕೃತರೂಪದಿಂದ ಹೊರಟು, ಪ್ರತಿಧ್ವನಿಸಿತು. ಮರುಕ್ಷಣದಲ್ಲಿಯೇ ಪುನಃ ಶಾಂತಿ ಮತ್ತು ಸ್ತಬ್ಧತೆ !

ಕ್ಯಾಮರಾ ಮತ್ತು ಒಬ್ಬ ಸಭ್ಯಗೃಹಸ್ಥನನ್ನು ನೋಡಿ, ಈ ಸಾರಿಯೂ ಅಲ್ಲಿ ಒಂದು ಗುಂಪುಗೂಡಿತ್ತು. ಗುಂಪಿನ ಜನರಿಂದಲೇ ಜಮಾದಾರನ ಕಿರಿಯ ಮಗ ಇಂದು ಬೆಳಗ್ಗೆಯೇ ಆಸ್ಪತ್ರೆಯಲ್ಲಿ ಕಾಲರಾದಿಂದ ಸತ್ತುಹೋದನೆಂದು ತಿಳಿಯಿತು. ಏನು ಮಾಡುವುದು, ತಿನ್ನಿಸಲೇಬೇಕು ! ಜಮಾದಾರನು ಏಳು ಮನೆಗಳಲ್ಲಿ ಕೆಲಸ ಮಾಡಿ ಹಂದಿಗಳಿಗೋಸ್ಕರ ಕಟ್ಟಿಕೊಂಡು ಬರುತ್ತಿದ್ದ ಎಂಜಲು ಮತ್ತು ಹಳಸಿದುದನ್ನು ಜಮಾದಾರಿಣಿ ಮಗನಿಗೂ ತಿನ್ನಿಸುತ್ತಿದ್ದಳು. ಜಮಾದಾರನು ದಿನವೂ ' ತಿನ್ನಿಸಬೇಡ, ಹಂದಿಗಳೇನು ತಿನ್ನಬೇಕು, ಅವುಗಳ ಮಾಂಸವೇ ಏರುತ್ತಿಲ್ಲ ' ಎಂದು ಅಡ್ಡಿಮಾಡುತ್ತಿದ್ದ. ಆದರೆ ಏನು ಮಾಡುವುದು ? ಮುದುಕನೇನಾದರೂ ತಿಂದಿದ್ದರೆ ಏನೂ ಆಗದೆ ಇರುತ್ತಿತ್ತೊ ಏನೋ ! ಆದರೆ ಅವನಿನ್ನೂ ಮಗು. ಹಳಸಿದುದನ್ನೇನು ತಿಂದಿತೊ ಏನೊ.... ಅವನೂ ಒಂದೇ ಸಾರಿ....

ಸಾಧಾರಣವಾದ ಕಥೆ. ನಿಜಜೀವನದ ಕಲಕತ್ತಾದ ಈ ಕಥೆ, ಪತ್ರಿಕೆಯಲ್ಲಿ ಪ್ರಕಟಣೆಗೂ ಅರ್ಹವಲ್ಲ. ಮನೆಯೊಳಗೆ ಸ್ತ್ರೀಕಂಠದ ಆಕ್ರಂದನ ಪ್ರತಿಧ್ವನಿಸತೊಡಗಿತ್ತು. ಪುನಃ ಶಾಂತಿ, ನಿಸ್ತಬ್ಧತೆ.... ಒಂದು ಕಾಗೆ-ಕಪ್ಪಿನ ಮಗುವಿತ್ತು ಈ ಕೇರಿಯಲ್ಲಿ.... ಈಗ ಇಲ್ಲ ಅಷ್ಟೆ !

" ಫೋಟೋ ತೆಗೆಯೊಲ್ವೆ ಸ್ವಾಮಿ ?"

ಹಿಂದಿರುಗಿ ಬರುತ್ತಿದ್ದೆ. ಕೂಡಿದ್ದ ಗುಂಪಿನೊಳಗಿನಿಂದ ಯಾರೋ ಕೇಳಿದರು. ನಿಂತು, ತಿರುಗಿ ನೋಡಿದೆ. ಕಲಕತ್ತೆಯ ಒಂದು ಸಾಧಾರಣವಾದ ಕೇರಿ. ದುರ್ದಶಾಗ್ರಸ್ತ ಮಾನವರು, ಮಕ್ಕಳು-ಮರಿಗಳು, ಹಂದಿಗಳ ಇಕ್ಕೆಗಳು, ನೀರಿನ ಹೌದು, ಸ್ತ್ರೀ-ಪುರುಷರು, ಮುದುಕರು, ಯುವಕರು, ಅನೇಕ ಮಂದ ಕಣ್ಣುಗಳು, ನೀರವ, ನಿಸ್ತಬ್ಧ. ಜಮಾದಾರನೂ ಇವರಲ್ಲಿದ್ದಾನೆ; ಆದರೆ ಈ ಕ್ಷಣದಲ್ಲಿ ಎಲ್ಲಿದ್ದಾನೆಯೊ, ಕಣ್ಣುಗಳು ಹುಡುಕಲಾರವು.

ಫೋಟೋ ! ಹ್ಹಾ ಹ್ಹಾ, ಫೋಟೋ ತೆಗೆಯಲೇಬೇಕು. ಕಣ್ಣುಗಳು ಹೋಗುತ್ತಿವೆ. ಉಸಿರಾಟ ನಿಲ್ಲುತ್ತಿದೆ. ಕೈಯಲ್ಲಿಯ ಕ್ಯಾಮರಾ ಗಡಗಡನೆ ನಡುಗುತ್ತಿದೆ. ಒಂದು ಫೋಟೊ ತೆಗೆಯಲೇಬೇಕು. ಯಾರ ಫೋಟೊ ?— ಅದೇ ತಿಳಿಯದು. ಆದರೂ ಒಂದು ಫೋಟೋ ಬೇಕೇ ಬೇಕು. ಸಾಧಾರಣವಾದ ಆ ಫೋಟೊ, ಯಾರಿಗೆ ಗೊತ್ತು. ಅದರಿಂದಲೇ ಅದು ಯಥಾರ್ಥವೂ ಹೌದು ! ನೈಮಿತ್ತಿಕ; ಅದರಿಂದಲೇ ಬಹುಶಃ ಇಷ್ಟು ಅಸಹ್ಯ! ಅಯ್ಯೊ! ಒಂದು ಫೋಟೊ ತೆಗೆದುಬಿಟ್ಟಿದ್ದರೆ! ○

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ಸಂಜಸಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು : (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ಸೀಮೆ ಬಿಟ್ಟು)

ಯುನೈಟೆಡ್ ಕಂಪನಿ, 54, ಬಂದರ್ ಸ್ಟ್ರೀಟ್, ಮದ್ರಾಸ್

ಕಾಮಾಖ್ಯಾ ಮಂದಿರ-೨

(ಅಸಾಮಿನ ಪರಿಚಯ)

ಶ್ರೀ. ಪಿ. ವಿ. ಗುಡಿ, ಗೌಹಟ್ಟಿ (ಅಸಾಮು)

ಕಾಮಾಖ್ಯಾದೇವಿಗೆ ಅಸಾಮಿನ ಜನತೆ ಸಲ್ಲಿಸುವ ಭಕ್ತಿ ಅನ್ಯಾದೃಶವಾದುದು. ಈ ದೇವಿಗೆ ಸಂಬಂಧಿಸಿದ ಪುರಾಣದ ಕಥೆಗಳೆಷ್ಟು, ಅದ್ಭುತವಾದಗಳೆಂತಹವು! ತಾಂತ್ರೀಯ ತಂತ್ರಮಾರ್ಗಿಗಳಿಗೆ ಈ ದೇವಿಯ ಉಪಾಸನೆಯೆ ಮುಖ್ಯ ಕರ್ತವ್ಯ. ಕಾಮಾಖ್ಯಾದೇವಿ ದೇವಕೀದೇವಿಯ ಬಳಸೆಯ ಗರ್ಭದಿಂದ ಜನಿಸಿದಾಕೆ.

'ಎಷ್ಟೋ ಹೊತ್ತು ಹಾಗೆಯೇ ನಡೆಯುತ್ತಲೇ ಇದ್ದೆ— ಲೋಹಿತ್ಯ ನದಿಯ ದಂಡೆಗುಂಟ. ನಡೆದಷ್ಟೂ ದೂರವೇ ಆಗುತ್ತಿದೆ ನೀಲಾಚಲ. ಮುಂಜಾನೆಯಿಂದಲೂ ೨-೩ ತಾಸು ನಡೆದು ಕಾಲು ಸೋತು, ದಣಿದು ಅಲ್ಲಿಯೇ ದಂಡೆಯ ಮೇಲೆ ಕುಳಿತುಕೊಂಡೆ. ಮೊದಲು 'ನೀಲಾಚಲ' ಬೆಟ್ಟವನ್ನಂತೂ ಮುಟ್ಟಬೇಕಲ್ಲವೇ? ಆನಂತರ ಮೇಲೆ ಹತ್ತಿ ಕಾಮಾಖ್ಯಾ ಮಂದಿರಕ್ಕೆ ಹೋಗಬೇಕು. ಆದರೆ ಇನ್ನೂ ನೀಲಾಚಲವೇ ಸಾಕಷ್ಟು ದೂರವಿದೆ. ಈಗಲೇ ದಣಿವಾಗಿದೆ....' ಇನ್ನೂ ಅದೇ ಯೋಚನೆಯಲ್ಲಿ ಇರುವಾಗಲೇ 'ಜೈ ಕಾಮಾಖ್ಯಾ ದೇವಿ' ಎಂಬ ಧ್ವನಿ ದೂರದಿಂದ ಕೇಳಬಂದಿತು. ಹಾಗೆಯೇ ಆ ಧ್ವನಿ ಹೆಚ್ಚೆಚ್ಚು ಗಟ್ಟಿಯಾಗಿ ಕೇಳಬರತೊಡಗಿತು. ಅದನ್ನು ಕೇಳಿ ಮಂತ್ರಮುಗ್ಧನಂತೆ ನನಗರಿಯದೆಯೇ ಎದ್ದು ಆ ಧ್ವನಿ ಬಂದ ದಿಕ್ಕಿಗೆ ಹೊರಟೆ. ನನಗರಿವಾದದ್ದು ನೀಲಾಚಲ ಬೆಟ್ಟದ ಕೆಳಗೆ ನಿಂತಾಗಲೇ. 'ಜೈ ಕಾಮಾಖ್ಯಾ ದೇವಿ' ಎಂಬ ಧ್ವನಿ ಗುಡ್ಡದ ಮೇಲಿಂದ ಕೇಳಬರುತ್ತಿತ್ತು. ಮೇಲೆ ಹತ್ತುವುದಕ್ಕಾಗಿ ನಾನು ಸುತ್ತಲೂ ದಾರಿಯನ್ನು ಹುಡುಕುತ್ತಿದ್ದೆ. ಎಲ್ಲ ಕಡೆಗೂ ಕಡಿದಾದ ಬೆಟ್ಟ ಮಾತ್ರ. ಅಷ್ಟರಲ್ಲಿ ಹಿಂದುಗಡೆಯಿಂದ ಒಬ್ಬ ಸಾಧುವು ಬಂದ. ನನ್ನನ್ನು ನೋಡಿ 'ಜೈ ಕಾಮಾಖ್ಯಾ' ಎಂದು ವಂದಿಸಿದ. ನಾನೂ 'ಜೈ ಕಾಮಾಖ್ಯಾ' ಎಂದು ನಮಸ್ಕರಿಸಿದೆ. 'ಏನು, ದೇವಿಯ ದರ್ಶನಕ್ಕೆ ಹೋಗಬೇಕಾಗಿದೆಯೇ?' ಎಂದು ಕೇಳಿದ.

'ಹೌದು. ಆದರೆ ಮೇಲೆ ಹೇಗೆ ಹೋಗಬೇಕೆಂಬುದೇ ಯೋಚನೆ' ಎಂದು ನಾನು ಹೇಳಿದೆ.

'ನೀವು ಹೊಸಬರೆಂಬಂತೆ ತೋರುತ್ತಿದೆ. ಇಲ್ಲಿಗೆ ಬಂದು ನೀವು ಹೇಗೆ ಮುಟ್ಟಿದಿರಿ ಎಂಬದನ್ನು ಹೇಳಬಲ್ಲಿರಾ?' ಎಂದು ನನ್ನನ್ನು ಕೇಳಿದ.

ನನಗೂ ಅದೇ ಯೋಚನೆಯೇ ಇತ್ತು. ಮುಂದೆ ಒಂದು ಸಹ ಹೆಜ್ಜೆ ಇಡಲಾರದಷ್ಟು ದಣಿವಾಗಿ ಕುಳಿತವನು ಇಲ್ಲಿಗೆ ಬಂದದ್ದು ಹೇಗೆ!! ನಾನು ಅವನಿಗೆ ಹೇಳಿದೆ: 'ದಣಿವಾಗಿ ನದಿಯ ದಂಡೆಗೆ ಕುಳಿತಿದ್ದೆ. ಆಗ 'ಜೈ ಕಾಮಾಖ್ಯಾ' ಎಂಬ ಧ್ವನಿಯನ್ನು ಕೇಳಿದೆ. ಆ ನಂತರ ಇಲ್ಲಿಗೆ ಬಂದದ್ದೇ ಗೊತ್ತು.'

'ಹಾ, ನೋಡಿ, ಆ ಕಾಮಾಖ್ಯಾ ದೇವಿಯ ಹೆಸರಿನಲ್ಲಿಯೇ ಆ ಶಕ್ತಿ ಇದೆ. ಅದರ ಪ್ರಭಾವದಿಂದಲೇ ನೀವು ಇಲ್ಲಿಗೆ ಬಂದಿರಿ. ಅದರ ಪ್ರಭಾವದಿಂದಲೇ ಇನ್ನು ಮೇಲೆ ಹತ್ತಬೇಕು. ಇಲ್ಲವಾದರೆ ಸಾಧ್ಯವಾಗುವುದಿಲ್ಲ. ನೀವು ಹೀಗೆಯೇ ಬಲಕ್ಕೆ ತಿರುಗಿದರೆ ಒಂದು ದೊಡ್ಡ ಕಲ್ಲಿನ ಬಾಗಿಲವಿದೆ. 'ಜೈಕಾಮಾಖ್ಯಾ' ಎಂದು ನುಡಿದು ಅದನ್ನು ತಟ್ಟಿದರೆ ಅದು ತೆರೆಯುತ್ತದೆ ಆಮೇಲೆ ಒಳಗೆ ಹೋಗಿ ಐದು ನಿಮಿಷ ನಡೆದರೆ ನುಂದಿರದ ಮುಂದೆಯೇ ನಿಲ್ಲುವಿರಿ' ಎಂದು ಅತನು ಹೇಳಿ ಮುಂದೆ ನಡೆದನು. ನಾನು ಬಲಕ್ಕೆ ತಿರುಗಿ ಆ ಕಲ್ಲಿನ ಬಾಗಿಲಿನ ಎದುರಿಗೆ ಬಂದೆ. ಅತನು ಹೇಳಿದಂತೆ 'ಜೈ ಕಾಮಾಖ್ಯಾ' ಎಂದು ಬಾಗಿಲನ್ನು ತಟ್ಟಿದೆ. ಅಂತಹ ದೊಡ್ಡ ಬಾಗಿಲು ಧಡಾರನೆ ತೆಗೆಯಿತು. ಕೂಡಲೇ ವಾತಾವರಣವೇ ಬದಲಾಯಿತು. ನಾಟಕದಲ್ಲಿ ಟ್ರಾನ್ಸ್‌ಫರ್ ಸೀನ್ (Transfer Scene) ಎನ್ನುತ್ತಾರಲ್ಲ ಹಾಗೆ— ಎಲ್ಲಿಂದಲೋ ಸುಗಂಧಪೂರಿತವಾದ ತಂಗಾಳಿ ಬರತೊಡಗಿತು. ಕೋಗಿಲೆಗಳ ಮಧುರಸ್ವರ ಕೇಳ ತೊಡಗಿತು. ಆ ತಂಪು ಹವೆ ಮೈಗೆ ತಾಗಿದೊಡನೆ ದಣಿವೆಲ್ಲ ಮಾಯವಾಗಿ ಮತ್ತೆ ಶಕ್ತಿ ಬಂದಂತಾಯಿತು. ತನ್ನಿಂದ ತಾನೇ 'ಜೈ ಕಾಮಾಖ್ಯಾ' ಎಂದು ನನ್ನ ಮುಖದಿಂದ ಹೊರಟಿತು."

ಎಲ್ಲಿಂದಲೋ ಗಂಟೆಯ ಸಪ್ಪಳ ಕೇಳ ಬಂದು ಫಕ್ಕನೆ ಕಣ್ಣು ತೆರೆದೆ. ಆ ದೊಡ್ಡ ಬಾಗಿಲು, ಬೆಟ್ಟ ಮಾಯವಾಗಿದ್ದುವು. ನಾನು ಹಾಟಿಲಿನಲ್ಲಿ ಹಾಸಿಗೆಯ ಮೇಲೆಯೇ ಮಲಗಿದ್ದೆ. ಆದರೆ ಆ ತಂಪು ಗಾಳಿ, ಕೋಗಿಲೆಯ ಮಧುರಧ್ವನಿ ಇನ್ನೂ ಇದ್ದುವು. ಇನ್ನೂ ಸ್ವಪ್ನದಲ್ಲಿಯೇ ಇರುವೆನೋ— ಎಂದು ನನ್ನನ್ನು ನಾನೇ ಚಿವುಟಿ ನೋಡಿಕೊಂಡೆ. ಕಿಟಕಿಯಿಂದ ತಣ್ಣನೆಯ ಗಾಳಿ ಬೀಸುತ್ತಿತ್ತು. ಬೆಳ್ಳಗೆ ಬೆಳಗಾಗಿದೆ. 'ಎಷ್ಟು ಹೊತ್ತಾಯಿತೋ' ಎಂದು ಗಡಬಡಿಸಿ ಕೊಂಡು ಎದ್ದು ನೋಡಿದರೆ, ಇನ್ನೂ ೪|| ಗಂಟೆ ಮಾತ್ರ. ೨-೩ ಸಾವಿರ ಮೈಲು ಪೂರ್ವಕ್ಕೆ ಬಂದಿದ್ದೇನಲ್ಲವೇ? ನಮ್ಮಲ್ಲಿಗಿಂತ ಇಲ್ಲಿ ೧|| ತಾಸು ಮೊದಲೇ ಬೆಳಗಾಗಬೇಕು.

ಎದ್ದು ಬಾಲ್ಕನಿಗೆ ಬಂದು ಹೊರಗೆ ನೋಡಿದೆ. ಎದುರಿನ ರಸ್ತೆಯ ಮೇಲೆ ೨-೩ ದೊಡ್ಡ ಸಂಪಿಗೆಯ ಗಿಡಗಳು; ಅದರ ಆಚೆ

ಬ್ರಹ್ಮಪುತ್ರ ನದಿ; ಗುಡ್ಡಗಳ ಸಾಲುಗಳು. ನದಿಯ ನೀರಿನ ಮೇಲಿಂದ ಬೀಸುವ ತಂಪುಗಾಳಿ ಸಂಪಿಗೆಯ ಹೂವಿನ ಸುಗಂಧವನ್ನು ಎಲ್ಲೆಡೆಗೂ ಹರಡಿತ್ತು. ಎಡಬಲದಿಂದ ಕೋಗಿಲೆಗಳ ಗಾನವೂ ಕೇಳಬರುತ್ತಿತ್ತು. ನದಿಯ ದಂಡೆಯ ಮೇಲೆ ಅಲ್ಲಲ್ಲಿ ಆಕಳುಗಳು ಹುಲ್ಲು ಮೆಲುಕಾಡಿಸುತ್ತ ನಿಂತಿದ್ದುವು. ರಸ್ತೆಯ ಮೇಲೆ ಅನೇಕ ಹುಡುಗರು ಹೆಂಗುಸರು ಹೂವುಗಳನ್ನು ಆರಿಸುತ್ತ ಹೋಗುವುದನ್ನು ನೋಡಿ ಇಲ್ಲಿಯ ಜನರಿಗೆ ಹೂಗಳೆಂದರೆ ಬಹಳ ಇಷ್ಟವಿರಬೇಕೆಂದುಕೊಂಡೆ. ಮುಂಬಯಿ ದಿಲ್ಲಿಗಳಲ್ಲಿ ಇಂತಹ ಸುಂದರ ನೋಟ ಕಂಡುಬರುವುದು ಅಪರೂಪ. ಹಾಗೆಯೇ ನೋಡುತ್ತ ನಿಂತಿದ್ದೆ. ಅಷ್ಟರಲ್ಲಿ ನಿನ್ನೆ ಸಂಜೆ ಭೆಟ್ಟಿಯಾದ ಆ ಕಲಕತ್ತೆಯ ಗೃಹಸ್ಥ 'ನಮಸ್ಕಾರ, ಬಹುಬೇಗ ಎದ್ದಂತಿದೆ; ನಿದ್ದೆಯಾಯಿತೇ ?' ಎಂದು ಕೇಳುತ್ತ ನಾನು ನಿಂತಲ್ಲಿಗೆ ಬಂದರು.

'ನನಗೆ ಮೊದಲಿನಿಂದಲೂ ಬೇಗನೆ ಏಳುವ ಅಭ್ಯಾಸವೇ ಇದೆ' ಎಂದು ನಾನು ಹೇಳಿದೆ.

'ಬನ್ನಿರಿ, ಚಹಕ್ಕೆ ಹೋಗೋಣ!' ಎಂದು ಅವರೆಂದರು. ಇಬ್ಬರೂ ಒಳಗೆ ನಡೆದೆವು.

'ಇಂದಿನ ನಿಮ್ಮ ಪ್ರೋಗ್ರಾಮ್ ಏನು ?' ಎಂದು ಚಹ ಕುಡಿಯುತ್ತ ಅವರು ಕೇಳಿದರು.

'ಏನಿರಬೇಕು ? ಮೊದಲು ಆಫೀಸಿಗೆ ಹಾಜರಾಗಬೇಕು. ಅದೆಲ್ಲಿದೆ ನೋಡಬೇಕು. ಅಲ್ಲಿಯ ಕೆಲಸ ಮುಗಿಸಿಕೊಂಡು, ಅನಂತರ ಇರುವುದಕ್ಕೆ ಮನೆ ಹುಡುಕಬೇಕು. ನಿಮ್ಮ ಹಾಗೆ ನಾನು ೨-೩ ದಿವಸ ಮಾತ್ರ ಇರುವವನಲ್ಲ. ಕನಿಷ್ಠ ೧-೨ ವರ್ಷಗಳಾದರೂ ಇರಬೇಕು' ಎಂದು ನಾನೆಂದೆ.

'ಹಾಗಾದರೆ ಒಳ್ಳೆಯದಾಯಿತು. ಇಲ್ಲಿ ನನ್ನ ಮಿತ್ರರೊಬ್ಬರಿದ್ದಾರೆ. ಅವರು ಇಲ್ಲಿಯವರೇ. ಇಲ್ಲಿಯ ವಿಶೇಷ ಮಾಹಿತಿಗಳ ಬಗೆಗೆ ಅವರಿಂದ ನಿಮಗೆ ಸಹಾಯವಾಗಬಹುದು. ಇಂದು ಸಂಜೆ ಅವರಲ್ಲಿಗೆ ಹೋಗೋಣ' ಎಂದು ಅವರು ಹೇಳಿ, ತಮ್ಮ ಪ್ರಾತರ್ವಿಧಿಗಳ ಸಲುವಾಗಿ ಹೋದರು. ಅಂತೂ ಮನೆ-ಗಿನೆ ಹುಡುಕುವುದಕ್ಕಾಗಿ ಸಹಾಯವಾಯಿತೆಂದು ನನಗೂ ಸಂತೋಷವಾಯಿತು.

* * * *

ನಾನು ಆಫೀಸು ಕೆಲಸ ಮುಗಿಸಿಕೊಂಡು ತಿರುಗಿ ಹಾಟೆಲಿಗೆ ಬರುವ ಹೊತ್ತಿಗೆ, ಸಂಜೆಯ ೭ ಗಂಟೆಯಾಗುತ್ತ ಬಂದಿತ್ತು. ನಾನು ಒಳಗೆ ಬರುತ್ತಲೇ ಆ ಕಲಕತ್ತೆಯ ಗೃಹಸ್ಥರು 'ನನ್ನ ಮಿತ್ರರೆಂದು ಹೇಳಿದ್ದೆನಲ್ಲ. ಅವರು ಇಲ್ಲಿಗೇನೇ ಬಂದಿದ್ದಾರೆ' ಎಂದು ಅವರ ಸಂಗಡ ಕುಳಿತವರೊಬ್ಬರನ್ನು ನನಗೆ ಗುರುತು ಮಾಡಿಕೊಟ್ಟರು. ನಾನು ನಮಸ್ಕರಿಸಿ ಕುಳಿತುಕೊಂಡೆ. ಕ್ಷೇಮಸಮಾಚಾರದ ಮಾತುಗಳ ನಂತರ ಅವರು (ಅವರನ್ನು ಆ ಕಲಕತ್ತೆಯ ಗೃಹಸ್ಥರು ಪಂಡಿತಜಿ ಎಂದು ಕರೆಯುತ್ತಿದ್ದುದರಿಂದ ನಾನೂ ಹಾಗೆಯೇ ಕರೆಯಲು ಪ್ರಾರಂಭಿಸಿದೆ). 'ಕಾಮಾಖ್ಯಾ ಮಂದಿರಕ್ಕೆ ಹೋಗಿದ್ದಿರಾ?' ಎಂದು ನನ್ನನ್ನು ಕೇಳಿದರು.

'ನಾನು ಇಲ್ಲಿ ನಿನ್ನೆಯೇ ಬಂದಿದ್ದೇನೆ. ಆ ಮಂದಿರದ ಬಗ್ಗೆ ಬಹಳೇ ಕೇಳಿದ್ದೇನೆ. ಇದು ಬಹು ಪುರಾತನ ಮಂದಿರವಾದ್ದರಿಂದ ಸಾಕಷ್ಟು ಮಾಹಿತಿ ಕೇಳಿ ತಿಳಿದುಕೊಂಡು ಅನಂತರ ಹೋಗಬೇಕೆಂಬ ಇಚ್ಛೆ ಇದೆ' ಎಂದು ನಾನು ಹೇಳಿದೆ. ಬಲಿಶೂಡುವ ವಿಷಯದ ಬಗೆಗೆ ಏನೂ ಮಾತನಾಡಲಿಲ್ಲ. ಅವರ ಬಾಯಿಂದಲೇ ಕೇಳಬೇಕೆಂದು ಸುಮ್ಮನಿದ್ದೆ.

'ಹೀಗೋ !' ಎಂದು ಅವರು ಉದ್ಗಾರ ತೆಗೆದರು. 'ಅದರ ಬಗ್ಗೆ ನೀವು ಕೇಳಿದಷ್ಟೂ ಓದಿದಷ್ಟೂ ಕಡಿಮೆಯೇ. ಕಾಮಾಖ್ಯಾ ಮಂದಿರದ ಇತಿಹಾಸವೆಂದರೆ ಕಾಮರೂಪದ ಇತಿಹಾಸ. ಈ ದೇಶದ ಪೌರಾಣಿಕ ಐತಿಹಾಸಿಕ ಕಾಲದ ರಾಜಕೀಯ, ಸಾಮಾಜಿಕ ಜೀವನಕ್ಕೆಲ್ಲ ಹಿನ್ನೆಲೆ ಈ ಕಾಮಾಖ್ಯಾ ಮಂದಿರ. ಈ ಮಂದಿರವನ್ನು ಮೊದಲು ಕಟ್ಟಿಸಿದವನು, ಈ ದೇವಿಯನ್ನು ಮೊದಲು ಪೂಜಿಸಿದವನು **ನರಕಾಸುರ.** ಅವನ ಏಳಿಗೆಗೂ, ಅಳಿಗಾಲಕ್ಕೂ ಈ ದೇವಿಯೇ ಕಾರಣಳೆಂಬುದು ಗಮನಾರ್ಹವಾದ ವಿಷಯ. ಪುರಾತನ ಕಾಲದಲ್ಲಿಯ ಶೈವ-ದ್ವಿಜರ ತಿಕ್ಕಾಟಕ್ಕೂ ಈ ಮಂದಿರವೇ ಕಾರಣ. ಇದರ ಸಂಪೂರ್ಣ ಇತಿಹಾಸ ತಿಳಿದುಕೊಳ್ಳಬೇಕಾದರೆ 'ಯೋಗಿನೀ ತಂತ್ರ' ಮತ್ತು 'ಕಾಲಿಕಾಪುರಾಣ'ಗಳನ್ನು ಓದಬೇಕು. ನರಕಾಸುರನು ಈ ಪ್ರದೇಶವನ್ನು ತನ್ನ ಕೈವಶಮಾಡಿಕೊಳ್ಳುವ ಮೊದಲು ಇದು ಪ್ರಾಗ್ಜ್ಯೋತಿಷವೆಂದು ಹೆಸರಾಗಿತ್ತು. ಆಗ ಅದು ಮ್ಲೇಚ್ಛರ ರಾಜ್ಯ. ನರಕಾಸುರನು ಇಲ್ಲಿ ರಾಜನಾದ ಬಳಿಕ ಆತನು ಕಾಮಾಖ್ಯಾ ದೇವಿಯ ಭಕ್ತನಾದ. ಶ್ರೀ ವಿಷ್ಣುವೇ ಈ ದೇವಿಯ ಪ್ರತಿಷ್ಠಾಪನೆ ಮಾಡಿದನೆಂದೂ, ನರಕಾಸುರನು ಮಂದಿರವನ್ನು ಕಟ್ಟಿಸಿದನೆಂದೂ ಕಾಲಿಕಾಪುರಾಣವಲ್ಲಿ ಉಲ್ಲೇಖವಿದೆ. ಈ ಪ್ರದೇಶವೆಲ್ಲ ಈ ಕಾಮಾಖ್ಯಾ ದೇವಿಯ Spiritual domination ದಲ್ಲಿರುವ ದಾದ್ದರಿಂದ ನರಕಾಸುರನು ಈ ಪ್ರದೇಶಕ್ಕೆ ಕಾಮರೂಪವೆಂದು ಹೆಸರಿಟ್ಟನಂತೆ. ಏನೇ ಇರಲಿ; ಈ ಮಂದಿರದ ಬಗ್ಗೆ ಯೋಗಿನೀತಂತ್ರ ನಲ್ಲಿದ್ದ ಉಲ್ಲೇಖ ಹೆಚ್ಚು ಅರ್ಥಪೂರ್ಣವಾಗಿದೆ.'

ನನಗೆ ಬೇಕಾದ ವಿಷಯವನ್ನೇ ಅವರು ಪ್ರಾರಂಭಿಸಿದ್ದರಿಂದ ನನಗೆ ಸಂತೋಷವಾಯಿತು. 'ಆದರಲ್ಲೇನಿದೆ, ನರಕಾಸುರನ ವಿಷಯವೇ ?' ಎಂದು ನಾನು ಮತ್ತೆ ಕೇಳಿದೆ.

'ಅದಲ್ಲ' ಎಂದು ಮತ್ತೆ ಅವರು ಪ್ರಾರಂಭಿಸಿದರು. 'ಈ ಮಂದಿರದ ಬಗ್ಗೆ ನಿಮಗೆ ಗೊತ್ತಿರಬಹುದು, ಇಲ್ಲವೆ ಕೇಳಿರಬಹುದು. ಇಲ್ಲಿ ಯಾವ ದೇವಿಯ ಮೂರ್ತಿಯೂ ಇರದೆ ಯೋನಿಮುದ್ರೆ ಮಾತ್ರ ಇದೆ. ಶಿವಲಿಂಗವನ್ನು ಪೂಜಿಸುವಂತೆ ಇಲ್ಲಿ ಸ್ತ್ರೀ ಜನನೇಂದ್ರಿಯ ಪೂಜಿಸುತ್ತಾರೆ....

ಬ್ರಹ್ಮನು ಈ ಸೃಷ್ಟಿಯನ್ನು ನಿರ್ಮಿಸಿದನಂತರ ಅವನಿಗೊಳ್ಳೇ ಅಹಂಕಾರ ಹುಟ್ಟಿತಂತೆ—ತಾನು ಇಂತಹ ಸೃಷ್ಟಿಯ ಕರ್ತನೆಂದು. ಮಹಾಮಾಯಾ-ಆದಿಶಕ್ತಿಯಾದ ದುರ್ಗಾಕಾಳಿಗೆ ಇದು ಗೊತ್ತಾಗಿ, ಬ್ರಹ್ಮನ ಅಹಂಕಾರವನ್ನು ಇಳಿಸಬೇಕೆಂದು ತನ್ನ ಶರೀರದಿಂದಲೇ 'ಕೇಶಿ' ಎಂಬ ದೈತ್ಯನನ್ನು ಹುಟ್ಟಿಸಿದಳು. ಹುಟ್ಟಿದ ಕೂಡಲೇ

ಅವನು ಬ್ರಹ್ಮನನ್ನೇ ತಿನ್ನಲಿಕ್ಕೆ ಧಾವಿಸಿದ. ಬ್ರಹ್ಮನು ಗಾಬರಿಯಾಗಿ ವಿಷ್ಣುವಿನಲ್ಲಿ ನೊರೆ ಹೋದ. ಕೇಶಿಯು ಅನಂತರ 'ಕೇಶಿಪುರ'ವೆಂಬ ಅಜೇಯವಾದ ಪಟ್ಟಣವನ್ನು ಕಟ್ಟಿಕೊಂಡು ಎಲ್ಲರಿಗೂ ತೊಂದರೆ ಕೊಡುವುದಕ್ಕೆ ಪ್ರಾರಂಭಿಸಿದ. 'ಬ್ರಹ್ಮನನ್ನು ಕೊಲ್ಲಿರಿ' ಎಂಬ ಧ್ವನಿಯು ಎಂಟು ದಿಕ್ಕುಗಳಲ್ಲಿಯೂ ತುಂಬಿ ಪ್ರತಿಧ್ವನಿಸತೊಡಗಿತು.

ಶ್ರೀ ವಿಷ್ಣುವಿನ ಸಲಹೆಯ ಮೇರೆಗೆ ಬ್ರಹ್ಮನು ಆ ಅದಿಶಕ್ತಿಯನ್ನು ಕುರಿತು ತಪಸ್ಸುಮಾಡಿದ. ಅನಂತರ ಬ್ರಹ್ಮ, ವಿಷ್ಣು ಇಬ್ಬರೂ ದೇವಿಯನ್ನು ಪ್ರಾರ್ಥಿಸಿದರು. ಅದರಿಂದ ದೇವಿಯು ಸಂತುಷ್ಟಳಾಗಿ ಹೂಂಕಾರದಿಂದ ಆ ದೈತ್ಯನನ್ನು ಸುಟ್ಟು ಭಸ್ಮಮಾಡಿದಳು. ಆಹೂಂಕಾರದಿಂದ ಹುಟ್ಟಿದ ಪಾಪ ಪರಿಹಾರಕ್ಕಾಗಿ ಬ್ರಹ್ಮನಿಗೆ ಕೆಳಗಿನ ಪ್ರಕಾರ ಆಜ್ಞೆಮಾಡಿದಳು:—

(೧) ಬ್ರಹ್ಮನು ಒಂದು ಬೆಟ್ಟವನ್ನು ಸೃಷ್ಟಿಸಬೇಕು. ಅದು ಯಾವಾಗಲೂ ದನಕರುಗಳ ಸಲುವಾಗಿ ಹುಲ್ಲಿನಿಂದ ಮುಚ್ಚಿರಬೇಕು. ದನಕರುಗಳು ಅಲ್ಲಿಯ ಹುಲ್ಲನ್ನು ತಿನ್ನುವ ಪ್ರಮಾಣದಲ್ಲಿ ಬ್ರಹ್ಮನ ಪಾಪವೂ ಕಡಿಮೆಯಾಗುತ್ತದೆ. (ಅದೇ ಪ್ರಕಾರ ಬ್ರಹ್ಮನು ಗೋವರ್ಧನ ಪರ್ವತವನ್ನು ಸೃಷ್ಟಿಸಿದ. ಅದರ ಹತ್ತಿರವೇ ತುಳಸಿಯ ಗಿಡವನ್ನೂ ಹುಟ್ಟಿಸಿದ. ಅದೇ ವೃಂದಾವನವಾಯಿತು.)

(೨) ಬ್ರಹ್ಮ ಮತ್ತು ವಿಷ್ಣು ಇವರು ದೇವಿಯನ್ನು ಪ್ರಾರ್ಥಿಸಿದ ಸ್ಥಳದಲ್ಲಿ, ಅವರು ನೋಡು-ನೋಡುತ್ತಿರುವಾಗಲೇ ಅವಳ ಶಕ್ತಿಯಿಂದ ಯೋನಿಮಂಡಲವೊಂದು ಉದ್ಭವಿಸಿತು. ಅದನ್ನು ತೋರಿಸುತ್ತ ಅವಳು ಬ್ರಹ್ಮನನ್ನು ಉದ್ದೇಶಿಸಿ ಹೇಳಿದಳು: 'ಇದೇ ಸೃಷ್ಟಿಯಲ್ಲಿಯ ಪ್ರತಿಯೊಂದು ವಸ್ತುವಿನ ಮೂಲ ಉಗಮಸ್ಥಾನವೆಂದು ತಿಳಿದುಕೊಳ್ಳತಕ್ಕದ್ದು. ಜಗತ್ತನ್ನು ಸೃಷ್ಟಿಸುವ ಮೊದಲು ಇದನ್ನು ಕುರಿತು ನೀನು ಧ್ಯಾನಮಾಡತಕ್ಕದ್ದು. ಜಗತ್ಕಲ್ಯಾಣಕ್ಕೋಸುಗ, ದೇವ, ದಾನವ, ಮಾನವರ ಹಿತದ ಸಲುವಾಗಿ ಈ ಯೋನಿಮಂಡಲವನ್ನು ನಾನು ಕಾಮರೂಪವಲ್ಲಿಡುತ್ತೇನೆ.... ಮುಂ"....

ಪಂಡಿತಜಿಯವರು ಹೇಳಿದರು— 'ಆ ಸ್ಥಳವೇ ಈ ನೀಲಾಚಲ. ಅಲ್ಲಿಯ ಮಂದಿರವೇ ಕಾಮಾಖ್ಯಾ ಮಂದಿರವೆಂದು ಹೆಸರಾಗಿದೆ. ಇದು ಇಲ್ಲಿ ತಾಂತ್ರಿಕರ ಆರಾಧ್ಯ ದೇವತೆ. ಒಳ್ಳೇ ಹೆಸರಾದ ತಾಂತ್ರಿಕ ಗೋರಖನಾಥನ ವಿಷಯ ನೀವು ಕೇಳಿರಬಹುದು. ಅವನೂ ಈ ಕಾಮಾಖ್ಯಾದೇವಿಯ ಭಕ್ತ. ಕಾಮಾಖ್ಯಾದೇವಿಯೆಂದರೆ ದುರ್ಗಾ ಎಂದು ನೊದಲೇ ಹೇಳಿದೆನಲ್ಲವೇ ? ನಿಮಗೆ ಗೊತ್ತಿರಬಹುದು— ಈ ದುರ್ಗಾ ಬೇರೆ ಯಾರೂ ಅಲ್ಲ; ವಸುದೇವ-ದೇವಕಿಯರ ಏಳನೆಯ ಕೂಸು. ಅಂದಬಳಿಕ ಕೃಷ್ಣನ ತಂಗಿ. ನರಕಾಸುರನು ಕಾಮರೂಪದ ರಾಜನಾಗಿ ಕಾಮಾಖ್ಯಾದೇವಿಯ ಪೂಜಕನಾದ. ಶ್ರೀವಿಷ್ಣು ಮತ್ತು ಪೃಥ್ವಿಯರ ಮಗನಾದ ನರಕಾಸುರನು ಕಾಮಾಖ್ಯಾದೇವಿಯ ಭಕ್ತನಾದದ್ದು ಆಶ್ಚರ್ಯವಲ್ಲ. ಆದರೆ ಕಡೆಗೆ ಅವನು ಬಾಣಾಸುರನ ಸ್ನೇಹದಿಂದ ದೇವ-ಬ್ರಾಹ್ಮಣರನ್ನು ದ್ವೇಷಿಸತೊಡಗಿದ. ವಸಿಷ್ಠಋಷಿಯ ಶಾಪದ ಫಲವಾಗಿ ಶ್ರೀವಿಷ್ಣುವೇ ಕೃಷ್ಣಾವತಾರದಲ್ಲಿ ನರಕಾಸುರನನ್ನು ಸಂಹರಿಸಿದ. ಆ ಕಾಳಗದಲ್ಲಿ ನರಕಾಸುರನಿಗೆ ಕಾಮಾಖ್ಯಾದೇವಿಯು ಕೃಷ್ಣನ ಜೊತೆಯಲ್ಲಿ ತನ್ನೊಂದಿಗೆ ರೌದ್ರಾವೇಶದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ದುರಿಸುತ್ತ ಯುದ್ಧ ಮಾಡುತ್ತಿರುವಂತೆ ಕಂಡಿತಂತೆ.'

ನನಗಿದೆಲ್ಲ ವಿಷಯ ತೀರಾ ಹೊಸದು, ಚೆನ್ನಾಗಿ ತಿಳಿಯಲಿಲ್ಲವೆಂದು ಬಾಯಿಬಿಚ್ಚಿ ನಾನು ಅವರಿಗೆ ಹೇಳಿದೆ. ಆಗ ಅವರು 'ಪರವಾ ಇಲ್ಲ. ನಾಳೆ ನಿಮಗೆ ಆಫೀಸು ಮುಗಿದನಂತರ ನಮ್ಮ ಮನೆಗೆ ಬನ್ನಿರಿ. ಸಾವಕಾಶವಾಗಿ ಎಲ್ಲವನ್ನೂ ಮಾತಾಡೋಣ. ಮತ್ತು ನಿಮ್ಮ ಸಲುವಾಗಿ ಮನೆಯ ಬಗೆಗೂ ಯೋಚಿಸೋಣ' ಎಂದು ಹೇಳಿದರು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ಸಂಬುಗೆಯ ಮೂಲು ! ಶ್ರಾಮಾಣಿಕ ವ್ಯವಹಾರ !!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ಬೇಡುವಾಕೆ

ಲೇ. ಸುಂದರ ನಾಡಕರ್ಣಿ, ವಿದ್ಯಾನಗರ

— ಹಗಲು —

ಮರ್ಯಾದೆ ಮುಚ್ಚಲು ಅವಳು—
ಹರಿದ ಚಿಂದಿಯನೊಂದು ಎಳೆದುಕೊಂಡಿಹಳು.
ಅರ್ಧ ವಸನದ ದೇಹ, ಇನ್ನರ್ಧ ನಗ್ನ.
ಅಸ್ಥಿಪಂಜರ ಚಿತ್ರ ಚಿತ್ತವನೇ ಕದಡುವದು–
ನಡೆದಿರುವೆ, ನಡೆದಿರುವೆ, ತಾಯಿ ನೀನಾರು?
ನಿನ್ನ ಅಗಲದ ಹಣೆಗೆ ತಿಲಕ ಕಂಡಂತಿಲ್ಲ
ಉಬ್ಬಿ ಬೆಳೆದಿಹ ಗಲ್ಲ ಹೀಗೇಕೆ ಕಣಿವೆ ?
ಕತ್ತಲೆಯ ಗುಹೆಯಾಗಿ ಕಣ್ಣುಗಳು ಒಳಸೇರಿ
ಕಾಲುಗಳು ತೂರುತಿವೆ ಭೂಮಿಯನು ಕೆಳಗೆ.
ನೀತೆಗಿದ್ದಂತಿರುವ ಕೂದಲಿನ ತಲೆ ಈಗ
ಹುಲ್ಲು ಬಣವೆಯ ಹೊತ್ತಿದೆ.
ಎಲುಬು ಕಂಡಾದರೂ ಕನಿಕರಿಸಿ ಕೊಡಲೆಂದು
ಬತ್ತಿದರೂ ಎಂಜಲವ ನುಂಗುತಿರುವೆ.
ಇದ್ದ ಒಂದೇ ಒಂದು ವೊಕ್ಕು ಬಟ್ಟಲು ಮಗುಗೆ
ಹೊಟ್ಟೆ ಬೆನ್ನಿಗೆ ಹಿಡಿದು ಅದ ಬಟ್ಟಲು ನಿನಗೆ.
ಕಂಡ ವಸ್ತುವ ನೋಡಿ, ಹಸಿವ ಹೊಟ್ಟೆಗೆ ಬಯಸಿ
ಬಿಸಿ ಉಸಿರ ಬಿಟ್ಟು ಬಡಿಯ ಗಂಟಲೇ ನುಂಗುತಿರುವೆ.
ಹಸುಕರುವು ತಾಯ ಹಾಲ ಕುಡಿವುದ ಕಂಡು
ನಿನ್ನ ಮಗು ಬರಿ ಮೊಲೆಯ ಎಳೆಯುತಿಹುದು.
ಯಾವ ನಾಚಿಕೆಗೆಂದು ಇದ ನೀನು ಮುಚ್ಚಿದರೂ
ಮಗುವಿಗೆಂದದನು ನೀ ಮರೆತು ಬಿಡುವೆ.
ಕಂಡವರ ಅಂಗಳವೋ ಹಳೆಮುರಿದ ಅಂಗಡಿಯೋ
ಯಾವುದಾದರೂ ಸರಿ.
ಕಂದ ಮಲಗಲು ನಿನ್ನ ಮುಂದಜೋಗುಳಕೆ—
ಕಿರಿಹಲ್ಲು ತೆಗೆದು ಮಗುವು ನಕ್ಕರೆ ಅದುವೆ
ನಿನ್ನ ದೇಹದ ಸುತ್ತ ಶೃಂಗಾರದೊಡವೆ
ಅತ್ತಿತ್ತ ಬಿದ್ದೆದ್ದು ಮಗುವಿನಾಟವ ಕಂಡು
ತಾಯೇ ನೀ ಚೈತನ್ಯ ತುಂಬಿಕೊಂಡೆ.
ದೊರಕಿದಷ್ಟಿಷ್ಟನ್ನು ನುಂಗಿಕೊಂಡರೆ ಕಂದ
ನೀವೇ ಉಂಡಂತದುವೆ ತೇಗಿಕೊಂಡೆ.

— ರಾತ್ರಿ —

ಎಲ್ಲಿ ಬಿದ್ದುಕೊಂಡಿರುವೆಯೋ ಅದುವೆ ನಿನ್ನಯ ಮನೆ !
ಮನೆಯ ಅಸ್ತಿಯೇ ನಿನ್ನ ಬಗಲಕೂಸು.
ಗಟ್ಟಿ ಎಲುಬಿನ ದೇಹ, ಬಿರುಸು ನೆಲವೇ ಶಯನ,
ನೆಲವು ಅಳ್ಳುವ ಮೊದಲು ನಿದ್ದೆ ಆಕ್ರಮಣ—
ಏನು ದೊರಕದಿರಲೇಕೆ, ಇದು ದೊರಕದಿರದೇ ?
ಯಾರಕಂಡೋ ಏನ ನೆನೆದೋ ನಕ್ಕೆ ನೀ ತಾಯೇ,
ಹಗಲೆಲ್ಲ ನಗಲಾರದೇ ನೀನು ?
ಯಾರೂ ಕಾಣದ ಈಗ ಈ ಸಮಯ ನಕ್ಕೆಯಾ ?
ಹಿಂದೆ ಎಂದೋ ಮೆರೆದ ಬೆಡಗು ನೀ ಕಂಡೆಯಾ ?
ಗಾಢ ನಿದ್ದೆಯಲೇಕೆ ತಟ್ಟನೇ ಎಚ್ಚತ್ತೆ ?
ನಿದ್ದೆಗೂಸಿನ ಕಾಲು ದನ ಮೆಟ್ಟಿ ನಡೆದಿತ್ತು
ಅದರೂ ಅದಕು ಹೆಚ್ಚಿನ ನೋವು ನಿನ್ನದಲ್ಲ.
ಮುಂಜಾವ ಹಕ್ಕಿಗಳು ಉಲಿಯುತಿವೆ ಹಿಗ್ಗಿನಲಿ
ನಿನ್ನ ಜೀವದ ಹಕ್ಕಿ ಕುಸಿಯುತಿದೆ ಕುಗ್ಗಿನಲಿ.
ಮೊದಲ ದರ್ಶನ ಪಡೆದ ಬೆಳಕುದೇವನ ಕಂಡು,
ನೆನೆದು ಏನನು ನೀನು ಹೇಳುತಿರುವೆ ?
ಎಲ್ಲರಿಗೂ ಬೇಕಾದ ಬೆಳಕು ಬಂದಿರುವಾಗ
ಕತ್ತಲೆಯನೇಕೆ ನೀ ಬೇಡುತಿರುವೆ ?
ನಿನ್ನ ಬಾಳೇ ಪೂರ್ಣ ಕಾಳಿರುಳು ಹೊದ್ದಾಗ
ಹೊರಜಗದ ಬೆಳಕು ನೀ ಕಾಣಲಾರೆ.
ಹಾಗೆಂದು ಹಿಡಿದ ಜೀವವ ದೂಡಿ ಹೊರಟಿರುವೆ ಅಲ್ಲಿ—
ನಿತ್ಯನೇಮವು ನಿನಗೆ ಸಲ್ಲುವಲ್ಲಿ.
ಎಲ್ಲ ಒಂದೇ ನಿನಗೆ, ದಿನವೇನು ಇರುಳೇನು ?
ಯಾರು ಬಂದೇನು ನೋವು ಹರಿಸಬಹುದೇ ?
ಏನು ಮಾಡಿದರೇನು ವಿಧಿಬರಿಹ ಅಳಸಬಹುದೇ ?

ಮಾವನ ಮನಿ-ಆರ್ಡರ್

(ಏಕಾಂಕ)

ಲೇ ದು. ನಿ. ಬೆಳಗಲಿ, ಎಸ್. ಆರ್. ಏ. ಹೈಸ್ಕೂಲ್, ಬನಹಟ್ಟಿ

ಪಾತ್ರ ವಿವರ:

ಅತ:— ತಿಂಗಳಿಗಾಗದ ಪಗಾರ ಸ್ವೀಕರಿಸುವ ಸಮಯ –ಸಹಿಮಾಡುವಾಗ ಮುಖ ಸಣ್ಣದು ಮಾಡಿದಂತೆ, ಹೆಂಡತಿಯ ಎದುರು ಹಾಗೇ ಇರುವ ಖಾಸಗಿ ಶಾಳಾ ಶಿಕ್ಷಕ –Cum– ಸಾಹಿತಿ.

ಅಕೆ:— ಬಾಯಿ ದೊಡ್ಡದಿದ್ದಂತೆ ಮನಸ್ಸೂ ದೊಡ್ಡದು. ಅತನ ಕರ್ಮಪತ್ನಿ.
(ಕುಬಸದವ, ನಾರಾಯಣ ಮಾಸ್ತರ ಪಾಂಡು, ಕೆರಾಣಿ ಕಾಶೀಮ, ಪೋಸ್ಟಮನ್ ರಾಮು,).

ಪ್ರವೇಶ ೧

ರಂಗಭೂಮಿಯ ಮೇಲೆ ಒಂದು ಸಾಧಾರಣ ಮೇಜು. ಒಂದು ಕೈಮುರಿದ ಖುರ್ಚಿ. ಗೋಡೆಯ ಸುಣ್ಣ ಒಂದು ಕಡೆ ಹಾರಿದೆ, ಒಂದು ಕಡೆ ಹೊಗೆ ಸುತ್ತಿ ಕಪ್ಪಗೆ ಆಗಿದೆ. ಜಂತೆಗೆ ಗೋಡೆಗೆ ಬರೆದ ' ಅಸ್ತಿಕ ' ' ಅಸ್ತಿಕ ಕಾಳಭೈರವ ' ' ಸತ್ಯಕ್ಕೆ ಸಾವಿಲ್ಲ ' ಮೊದಲಾದ ಗೀಟಾಕ್ಷರಗಳು ಕಂಡುಬರುತ್ತವೆ. ಗೂಟಕ್ಕೆ ಕೆಲ ಅರಿವೆಯ ಗಂಟು, ಹರಳು ಕೋಟು, ಛತ್ರಿ, ಎದುರಿಗೆ ಪೆಟ್ಟಿಗೆ—ಇವೇ ರಂಗಭೂಮಿಯ ಸಂಭ್ರಮ. ಎಡಬದಿಗೆ ಅಡಿಗೆಮನೆಯ ಬಾಗಿಲು, ಬಲಬದಿಗೆ ಹೊರಬಾಗಿಲು. ತೆರೆ ಮೇಲಕ್ಕೆದ್ದಾಗ ಅತ ಮೇಜಿನ ಮೇಲೆ ಮೊಣಕೈಯೂರಿ, ಪಜೆಗೆ ಕೈಯಿಟ್ಟು ಏನೋ ಚಿಂತೆಯಲ್ಲಿ ಮುಳುಗಿದಂತೆ ಕುಳಿತಿದ್ದಾನೆ. ಅಕೆ ಅಡುಗೆಮನೆಯಿಂದ ' ರ್ರೀ ' ' ರ್ರೀ's ಅಂತ ಕೂಗುವಳು. ಅವನ ಉತ್ತರ ಬಾರದೆ ಇರಲು ಹಾಗೇ ಕೈಯಲ್ಲಿ ಕಸಬರಿಗೆ ಹಿಡಿದುಕೊಂಡು ಹೊರಗೆ ಬರುವಳು.

ಅಕೆ:— ರ್ರೀಽಽ ಎಷ್ಟು ಒದರೊದ್ರೀ. ತಾಸಾಯ್ತು ಬಾಯ್ ಹರ್ಕೊಳ್ಳಾಕ ಹತ್ತಿ. ಒಂದು ಚೂರು ಉತ್ತರಾ ಕೊಡಬಾರ್ದ ? ನಿಮ್ಮನ್ನ ಮದಿವೀ ಆಗೋದು ಒಂದಽ, ಕಲ್ಲು ಕಟ್ಕೊಂಡು ಕೆರ್ಯಾಗ ಮುಳುಗೋದೂ ಒಂದಽ ! ಇ ಸುಡ್ಲಿ ! ನನಗಽ ಬೇಕಾಗೇದೇನು ಈ ಬಾಳು ?.... ಕೇಳಿಸ್ತೇನ್ರಿ....

ಅತ:— ಕೇಳ್ಸಾಕ ಹತ್ತೇದ. ದೇವ್ರು ನನಗೊಂದು— ಈ ಜೀವಂತ ರೇಡಿಯೋ ಬಂದಮಾಡುವ ಬಟನ್ ಕೊಟ್ಟಿಲ್ಲಾ ಬಾ! ಮೊದಲಽ ಹೇಳಬಾರ್ದ, ನಿನ್ನಽ ನಮ್ಮ ಭಾಷಣಸಂಘದ **ಮೇಂಬರ್ಕ** ಮಾಡ್ತಿತಿದ್ದಿವಿ.

ಅಕೆ:— ಹುಂ ! ಅದನ್ನಿಷ್ಟು ಮಾಡ್ರಿ. ಈಗ ಮ್ಹಾರಾಣಿನ್ನ ಮಾಡಿ ಅರಮನ್ಯಾಗ ಇಟ್ಟೀರಿ. ಇನ್ನ ನೆಂಬರನ್ನ ಮಾಡಿ ಬ್ಯಾರೆ ಮನ್ಯಾಗ ಇಡ್ರಿ. ನಿಮಗ ಏನ್ ಬುದ್ಧಿ ಐತಿಲ್ಲೋ ? ನಾಳಿಗೆ ಬೆಳಗಾದರ ದೀಪಾವಳೀ ಹಬ್ಬ ಬಂತು. ಮನ್ಯಾಗ ಒಂದರೇ ಕಾಳುಕಡಿ ? ಔಷಧಕ್ಕ ಒಂದಽ ಇದ್ದರ ದೇವರಾಣಿ.... !

ಅತ:— ನಿಲ್ಲಽ ! ಬಾಳ ಮಾತಾಡಬ್ಯಾಡ. ಅದಕ್ಕಽ ನಾನು ಚಿಂತಿ ಮಾಡತೇನು !

ಅಕೆ:— ನೀವು ಮನ್ಯಾಗ ಚಿಂತಿ ಮಾಡಿಕೋಂತ ಕುಂತ್ರ, ಕಾಳು ಅಂತರಲೇ ಬಂದು ಬೀಳತಾವಂತ ಮಾಡೀರೇನು ? ಇದೇನು ಅಂಬರಿಷನ ಕಾಲ ಅಲ್ಲ. ಕಾಂಗ್ರೇಸ್ ಸರ್ಕಾರದ ಕಾಲೈತಿ ! ಕಾಲ ಬ್ಯಾರೈತಿ.

ಅತ:— ಹೌದಲ್ಲ ! ನಾನೂ ಅದನಽ ಅಂತೇನು. ನನಗೂ ಈ ಕಾಲ ದಾಗ ಬಾಳ ಬ್ಯಾಸರಿಕಿ ಬಂತು ನೋಡು. ನಾನೂ ಈ ಹಾಳು ಮಾಸ್ತರಿಕೀ ಬಿಟ್ಟು, ಕೈಯಾಗ ಕುಡುಗೋಲು ಹಿಡೀ ಬೇಕಂತೀನು.

ಅಕೆ:— ಈ ಮಾಸ್ತರಿಕೀಬಿಟ್ಟು ಕುಡುಗೋಲು ತಗೊಂಡು ಹುಲ್ಲು ಕೊಯ್ಲಿಕ್ಕೆ ಹೋಗಬೇಕಂತೀರೇನು ? ನಿಮ್ಮ ತಲೀನಽ ಬರೋಽಬ್ಬರೀ ಇಲ್ದಾಂಗ ಕಾಣತೈತಿ.

ಅತ:— ಹೌದ.–ನನಗೂ ಹಾಂಗಽ ಅನಿಸಲಾಕ ಹತ್ತೇತಿ. ನಿನ್ನ ಶಬ್ದ ಕೇಳಿ ತಲೀ ಠಿಕಾಣಿಯೊಳಗ ಇಲ್ದಾಂಗಽ ಆಗೇತಿ. ಏ ಆ ಕುಡುಗೋಲಂದರ, ಹುಲ್ಲಕೊಯ್ಯೋದಲ್ಲ !

ಅಕೆ:— ಅದೇನರೇ ಇರವೊಲ್ದ್ಯಾಕ, ನಾಳೆ ಹಬ್ಬಾ ಹ್ಯಾಂಗ ಮಾಡ್ಲಿ ?

ಅತ:— ಹುಚ್ಚಿ, ಹಬ್ಬಾ ನಾವ್ ಮಾಡ್ತೀವೇನು ? ಅವು ಹಾಂಗs ಬರ್ತಾರ್ತಾವ; ಹೋಗತಿರತಾವ !

ಅಕೆ:— ಅಯ್ಯ ದೇವ್ರ ! .... ನಿಮಗ ಇನ್ನೂ ಹುಡುಗಾಟಕೇ ಕಾಣ್ತದಲ್ಲಾ ! ನಾಕು ಮಂದಿ ನಮ್ಮ ಜನ್ಮಾ ನೋಡಿ ಏನಂದಾರು ?

ಅತ:— ಏನಾದರೂ ಅನ್ಲಿ ಬಿಡು. ಅವರೇನು ನಮಗ ಕೊಟ್ಟ ನಡಸ್ತಾರೇನು.... ?

ಅಕೆ:— ಹುಂ ಹಾಂಗs ಮಾಡ್ರಿ. ಮನಕಂಜಿ ನಡೀದಿದ್ರೂ ಜನಕ್ಕಂಜಿ ನಡಿಬೇಕಂತೀನು. ಇರ್ಲಿ, ಒಣಾ ಮಾತs ಅತು. ಕಾಳು ಕಡಿ ತಗೊಂಡು ಬರ್ರಿ....

ಅತ:— ನಾನು ತಗೊಂಡು ಬರ್ಬೇಕಂತಿನ ಖರೆ....ರೂಪಾಯಿನs ಇಲ್ಲ. ಅಲ್ಲಾ, ಈ ಹಬ್ಬ ಮುಗಿದ ಮ್ಯಾಗ, ನಮ್ಮ ಪಗಾರ ಆಗ್ತದ, ಏನ ಮಾಡೂದು ? ಈಗೊಂದು ಬೇಕಲ್ಲಾ ಹಬ್ಬಕ್ಕ !

ಅಕೆ:— ಮೊನ್ನೆ ಏನೋ ಹೇಳ್ತಿದ್ರೆಲ್ಲಾ. ಕತೀ ಬರ್ದೀನಿ. ಕಾದಂಬರೀ ಬರ್ದೀನಿ. ಮೈಸೂರಿಗೆ .... ಕಳಿಸೀನಿ. ಅವರು ಐದುನೂರು ರೂಪಾಯಿ ಕಳಿಸ್ತಾರ-ಅಂತಿದ್ರೆಲ್ಲಾ. ಅವು ಹಬ್ಬದ ಒಳಗಾಗಿ ಬರೂದಿಲ್ಲೇನು ?

ಅತ:— ಹುಂ.... ! ಅವರು ಕಳಿಸಿದರ ನನ್ನ-ನಿನ್ನ ದೈವ.

ಅಕೆ:— ಅದರಾಗ ನನ್ನ ದೈನ್ಯಾಕ ಮತ್ತ.... ?

ಅತ:— ನೀ ನನ್ನ ಅರ್ಧಾಂಗಿ ಅಲ್ಲೇನು ? ನೀ ಅಂದ್ರ ಒಂದು, ಅಂದ್ರ ಒಂದs,

ಅಕೆ:— ಸುಮ್ಮ ಬಿಡ್ರಿ ಇನ್ನ- ಹುಚ್ಚುಚ್ಚಾರ ಮಾತಾಡಬ್ಯಾಡ್ರಿ. ಯಾರಲ್ಲಿಯಾದ್ರೂ ರೂಪಾಯಿ ಸಾಲಾ ತರ್ರಿ, ಪಗಾರ ಆದ ಮ್ಯಾಲ ಮುಟ್ಟಿಸಾಕ ಬಂದೀತಂತ.

ಅತ:— ಸಾಲಾ ಕೇಳಾಕ ಹೋಗುತಲೇನs ಬಡಿಗಿ ಬಂದಾವಂತ ಅಂಜಿಕೇ....

ಅಕೆ:— ಯಾಕ.... ?

ಅತ:— ಯಾಕಂದ್ರs ಈಗs ಸಾಲ ತಲಿತಂಬಾ ಆಗೇತಿ; ತಿರುಗಿ ಮತ್ತ ಹೆಂಗ ಕೇಳೂದು ?

ಅಕೆ:— ಬಾಳ ಸಾಲಾ ಮಾಡಲಾಕ ಮನ್ಯಾಗ ಏನ ತಂದೀರಿ ? ನಾಲ್ಕ ತಿಂಗಳ ಅತು, ಸೀರೀ ತಗೊಂಡು ಬಾ ಅಂತ ಚೀರಿ ಚಿಪ್ಪಾದೆ. ಸೀರೀತರ್ಲಿಲ್ಲ. ಮತ್ತ ಸಾಲಾ ಯಾತರಸಲುವಾಗಿ ಮಾಡಿದ್ರಿ ?

ಅತ:— ನಾ ಸಾಲಾ ಮಾಡಿ ಕುಡಿದ್ನಿ— ಅಂತೀ ಏನು ?

ಅಕೆ:— ನನಗ ಗೊತ್ತೈತಿ, ನೀವೇನೂ ಕುಡಿಯೂದಿಲ್ಲs ಆದರ .... ಬಾಯಾಗಿನ ಬೀಡೀ ಬಿಡೂದಿಲ್ಲ, ಕಪ್ಪು ಬಸಿ ಕಳಗೆ ಇಡೋದಿಲ್ಲ.

ಅತ:— ಊಹುಂ ! ಅದರ ಸಲುವಾಗಿ ಅಲ್ಲ. ಈ ತಿಂಗಳ ಓದ್ಲಾಕ ಬಾಳ ಪುಸ್ತಕ ತಂದೀನಿ.

ಅಕೆ:— ಆ ಪುಸ್ತಕ ಓದಿ ಹೊಟ್ಟೆ ತುಂಬಿಸಿಕೊಳ್ರಿ. ಏನ್ ಪುಸ್ತಕ ಓದೂದು ? ಏನ್ ತರ್ಸೂದು ? ಏನ್ ಕತೀ-ಕಾದಂಬರೀ ಬರಿಯೂದು ?.... ಅಲ್ಲ ದೇವರಾಣಿ ಮಾಡಿ ಹೇಳ್ರಿ, ಕತೀ ಕಾದಂಬರೀ ಬರದು ಒಂದು ದುಡ್ಡಾದರೂ ಗಳಿಸೀರಾ ?

ಅತ:— ನಾನೊಬ್ಬನೇ ಅಲ್ಲ ಬಿಡs.... ನಮ್ಮಂಥ ಸಾಹಿತಿಗಳ ಪರಿಸ್ಥೀತಿನೆs ಹಾಂಗ ಆದ. ಉಪವಾಸ ವನವಾಸ ಬಿದ್ದು ಕತೀ ಕಾದಂಬರೀ ಬರದರ, ಸಂಪಾದಕರಿಂದ ಮತ್ತ ಪ್ರಕಾಶಕರಿಂದ ಒಂದು ದುಡ್ಡೂ ಪ್ರಾಪ್ತಿ ಇಲ್ಲ.

ಅಕೆ:— ಹಾಂಗಾದರ ಯಾಕ ರಾತ್ರಿ ನಿದ್ದೆ ಕೆಡಿಸಿ, ಕಣ್ಣ ಕೆಂಪಗ ಮಾಡಿಕೊಂಡು ತಲೆ ತುರಿಸತ, ಕತಿ ಬರಕೋಂತs ಕೂಡ್ರೂದು.... ? ಓದಿ ಓದಿ ತಲೀ ಕೆಡಿಸಿಕೊಳ್ಳೋದು.... ? ಕಮ್ಮಗ ನಿಮ್ಮ ಸಾಲೀ ಕೆಲಸಾ ತೀರಿಸಿಕೊಂಡು, ಆರಾಮ ಇದ್ದಿದ್ರ ನಿಮ್ಮ ಪರ್ಕರ್ತಿ ಚೆಲೂ ಇರ್ತಿತ್ತು. ಅನ್ಕೆಂತಾವ್ರು ಆ ಪರ್-ಕಾಸಕರು, ನಿಮ್ಮ ತಲೀ ಖರ್ಚ ಮಾಡಿ ನೀವು ಕತೀ ಬರದು ಕೊಟ್ಟ ಮ್ಯಾಗ, ನಿಮಗ ಏನೂ ಕೊಡೂದಿಲ್ಲಂದ್ರ....? ಅವರನ್ನ ಇಲ್ಲಿ ಕರ್ಕೊಂಡ ಬರಿ ನೋಡ್ತೀನಿ.

(ಎಂದು ಕೈಯಲ್ಲಿಯ ಕಸಬರಿಗೆ ಎತ್ತುವಳು).

ಅತ:— ಎಲಾ ಇಷ್ಟೋತ್ತನಕಾ ಕಯ್ಯಾಗ ಕಸಬರಿಗೀ ಹಿಡಕೊಂಡs ಮಾತಾಡ್ಲಾಕ ಹತ್ತೀದಿಯಲಾ !

ಅಕೆ:— ಅಯ್ಯ ಇದರ ಸುದ್ದಿ ! ನಾ ಹಾಂಗ ಮರ್ತು, ಅಡಿಗೀಮನಿ ಗೂಡಿ ಸೋದು ಬಿಟ್ಟು ಬಂದೇನಲ್ಲಾ ! ಇರ್ಲಿ ಏಳ್ರಿನ್ನ, ಶ್ಯಾಣ್ಯಾರ ಅದೀರಿ. ಹೊರಗಪ್ಪು ಹೋಗಿ ಎಲ್ಲಾರs ಏನಾದರೂ ಮಾಡಿ ಕೊಂಡು ಬರ್ರಿ. ನಾ ನೀವು ಬರೂದರಾಗs ಜಳಕಕ್ಕ ನೀರು ಕಾಸ್ತೀನು, ಬೇಗ ಬರ್ರಿ. ಅತ್ತs ಸೆಟ್ಟೇ ಅಂಗಡ್ಯಾಗ, ಕುಲಕರ್ಣಿ ಮಾಸ್ತರ ಮನ್ಯಾಗ ಹರಟೀ ಹೊಡಕೊಂತ ಕೂಡ ಬ್ಯಾಡ್ರಿ.

(ತೆರೆ ಬೀಳುವುದು)

ಪ್ರವೇಶ ೨

(ಅತ ಅದೇ ಒಂಟಿಗ್ಯೆ ಖುರ್ಚಿಯ ಹೆಂಲೆ ಕುಳಿತು ವಿಚಾರಿಸುತ್ತಿದ್ದಾನೆ. ಒಳಗಿನಿಂದ ಅಕೆ ಬರುವಳು.)

ಅಕೆ:— ಏನಾದರೂ ದೈವ ಬಲ ?

ಅತ:— ಊಹುಂ ! ಕೇಳಬ್ಯಾಡ. ನಮಗ ಮೊದಲs ಕೆಟ್ಟಕಾಲ ಹತ್ತೀತಿ. ಏನ್ ಆಗ್ತದ ಆಗಲಿ ! ?

ಆಕೆ:— ನೀವು ಹೀಂಗಷ್ಟೆ ಅನ್ನಕೋತ್ಕೂಡ್ರಿ, ಚಿಲೂ ಕಾಲ ಬರ್ತೈತಿ ! ಇನ್ನ ಮುಂದಿನ ತಿಂಗಳು ಕಾಗದಾ ಕೊಂಡೆ, ಪುಸ್ತಕಾ ಕೊಂಡೆ ಅಂತಾ ಹೇಳ್ರಿ ನೋಡ್ತೀನು. ತಿಂಗಳ ಪಗಾರೆಲ್ಲಾ ನನ್ನ ಕೈಯಾಗ ಕೊಟ್ಟ ಬಿಡ್ರಿ. ನಾನs ಬೇಕಾದಷ್ಟು ನಿಮಗ ಕೊಡ್ತೀನು.

ಆತ:— ಹಾಂಗss ಮಾಡು, ನಿನ್ನ ಕಾಲ ಬೀಳ್ತೀನಿ !

ಆಕೆ:— ಅಯ್ಯ ಶಿವನ ! ನನ್ನ ಕಾಲ ಯಾಕ್ರೀ–ದೇವರ ಕಾಲ ಬೀಳ್ರಿ. ಪುಣ್ಯ ಬಂದರೂ ಬಂದೀತು— ಹೂಂ, ಏಳ್ರಿನ್ನು ಜಳಕಕ್ಕ ! ಈ ನೆರಿಮನೀ ರಂಗೂಬಾಯರ ಮನ್ಯಾಗ ಹಿಟ್ಟು ತಂದೀನಿ. ಇನ್ನ ಸಂಜೀಕ-ಕಾಣ್-ಕಾಣ್ ಉತ್ತೋತ್ತಿ–ಎಲ್ಲಿಗೆ ಬಂತೋ ಸಂಗಯ್ಯಾ....

ಆತ:— ಸಂಗಯ್ಯೋ– ಮಂಗಯ್ಯೊ–ಏನ್– ಮಾಡಬೇಕೂ ?....ಇನ್ನ ಕನ್ನಡದಾಗ ಕತೀ ಕಾದಂಬರೀ ಬರೀಬಾರ್ದು ಅಂತ ಗಟ್ಟಿ ಮನಸ್ಸು ಮಾಡಾಂವ ಇದ್ದೀನಿ.

ಆಕೆ:— ಏನಾದ್ರೂ ಮಾಡ್ರಿ ಅಥವಾ ಬಿಡ್ರಿ; ಬಿಸಲು ಬಾಳ ಆತು ಏಳ್ರಿ.

ಆತ:— ಹುಂ !- ಅಲ್ಲ– ಇಲ್ಲಿ– ಸ್ವಲ್ಪ ತಡೆ. ಮತ್ತೇನಾದರೂ ವಿಚಾರ ಮಾಡ್ತೀನಿ.

ಆಕೆ:— ನಿಮ್ಮ ವಿಚಾರ ಸುಟ್ಟು ಬರ್ಲಿ. ಬರೇ ವಿಚಾರ ಮಾಡೇ ಹೀಂಗಾಗೀರಿ !

ಆತ:— ಅಲ್ಲ.... ಇಲ್ಲಿ ನೋಡು– ನಿಮ್ಮ ಮಾವ–ಅಲ್ಲ–ನಿಮ್ಮಪ್ಪ–ಪಡದಪ್ಪ ದೀಪಾವಳಿಗೆ ನನ್ನ ಅಳೇತನಕ– ಯಾಕ ಕರಿಸಬಾರ್ದು.... ? ಅಂವ ಹಬ್ಬಕಂತ ನಿನ್ನ ಕರೀಲಿಕ್ಕ ಬರ್ಲಿ; ನಿನ್ನ ಕಳಿಸಿಕೊಡತೇನೂ ಅಂತ ತಿಳಿದೀಯೇನು ?

ಆಕೆ:— ಅಂದ್ರ ಅಪ್ಪನ ಮ್ಯಾಲ ಸಿಟ್ಟು ಮಾಡವ್ರು ಏನು ?

ಆತ:— ಬಿಡತೀ ಏನು.... ?

ಆಕೆ:— ಏನಾರೇ ಮಾಡರಿ, ಈಗ ಏಳ್ರ !

ಆತ:— ಏನೋ ಆ ಮೈಸೂರಿಗೆ ಒಂದು ಪುಸ್ತಕ ಬರೆದು ಕಳಿಸೀನಿ : " ನಾಯಿ ಮದುವೆ " ಅಥವಾ " ನರಸಿಂಹಾಚಾರಿ ಗಂಟು " ಅಂತ ! ಅವ್ರು ೫೦೦ ರೂಪಾಯಿ ಕಳಸ್ತೀನಿ ಅಂದಿದ್ರು. ಅವೂ ಇಲ್ಲ....ಏ ಎಲಾ! ಹೋಗ್ತೀನಿ, ಹೀಂಗ ನೋಡಬೇಡ.ಹೋದ್ನೇ ನೋಡು.

ಆಕೆ:— ಹೋಗ್ರಿ .... ಹೀಂಗss ಆತು ನಿಮ್ಮ ಜನ್ಮ.
(ಹೊರಗಿನಿಂದ " ಅಡಾರೇನ್ರಿ ? ಮಾಸ್ತರ ! ಮಾಸ್ತರ ! ಮಾಸ್ತರಿದ್ದಾರೇನ್ರಿ !"

ಆಕೆ:— ಯಾರು.... ?

ಹೊರಗಿನವ:— ಅವ್ವಾರ ! ನಾ– ಕುಬಸದವ್ರಿ, ಕುಬಸದ ಉದ್ರಿ ಕೇಳ್ಲಾಕ ಬಂದೀನ್ರಿ.

ಆಕೆ:— ಅಯ್ಯ ಬಾಳಾ, ಅವ್ರು ಇದೇ ಈಗ ಊಟಾ ಮಾಡಿ ಹೊರಗ ಹೋದ್ರಲ್ಲಾ. ಬೇಗ ಬರ್ಬಾರ್ದಷ್ಟ. ನಾಳೆ ಬಾ. ಜರೂರ್ ಇಸಗೊಂಡು ಕೊಡ್ತೀನss !

ಹೊರಗಿನವ:— ಹೂಂ. ಮರೀಬ್ಯಾಡ್ರಿ. ನಾಳೆಬರ್ತೀನು.

(ಮತ್ತೆ ಹೊರಗಿನಿಂದ ಕೂಗು ! ' ಮಾಸ್ತರ್ರ, ಮಾಸ್ತರ್ ! ')

ಆಕೆ:— ಯಾರವರು.... ?

ಪಾಂಡು:— ನಾ ನಾರಾಯಣ ಮಾಸ್ತರ ಮಗಾ....ನಾ....ಪಾಂಡುರೀ.

ಆಕೆ:— ಯಾಕೋ ತಮ್ಮಾ.

ಪಾಂಡು:—ಮಾ–ಮಾಸ್ತ್ರ–ಅ–ಅಪ್ಪಾನ ಕಡೆ ರೂರ ರೂ....ರೂಪಾಯಿ ಹತ್ತ್ರಸಾ–ಸಾಲಾ ತಂದ್ರ....ತಂದಾರಂತ್ರಿ.... ಅ....ಅ....ಅ.

ಆಕೆ:— ಹೀಂಗss....ಅವ್ರು ಹೊರಗ ಹೋಗ್ಯಾರ. ಇದೇ ಈಗ ಊಟ ಆತು. ಸಾಲೀಕಡೇನ ಇರಬೇಕು ನೋಡಪಾ !

(ಪಾಂಡು ಹೋಗುವನು. ಅಂಗಡಿಯ ಅಳು ಬರುವನು.)

ಅಂಗಡಿ ಅಳು:— ಮಾಸ್ತರ ಇಲ್ಲೇನ್ರಿ....

ಆಕೆ:— ಅಯ್ಯ ಶಿವನ, ಇದೇನ ಬಂತವಾ ಕಾಟ....ಯಾರಪ್ಪಾ ಅದು ?

ಅಂ. ಅ:— ನಾ– ಕಿರಾಣೀ ಅಂಗಡೀ ಕಾಶೀಮರಿ.

ಆಕೆ:— ಅವ್ರು ಹೊರಗ ಹೋದ್ಹಾಂಗ ಕಾಣತೈತಿ; ಇನ್ನೂ ಊಟಕ್ಕ ಬಂದೇ ಇಲ್ಲ.

ಅಂ. ಅ:— ಬರುತಲೇನss ಹೇಳ್ರಿ. ನಾ ಬಂದಿನ್ನು, ಅಂತ.

ಆಕೆ:— ಒಳೇ ಹೇಳ್ತೀನಿ ಹೋಗಪಾ !

(ಕಾಶೀಮು ಹೋಗುವನು. ಮತ್ತೆ ಹೊರಗೆ ಧ್ವನಿ: ' ಮಾಸ್ತರ್ ಇದ್ದಾರೇನ್ರಿ.')

ಯಾರು.... ? ಅವ್ರು ಇದೇಈಗ ಹೊರಗ ಹ್ವಾದರು. ಆಲ್ಲೇ ಗಾಂಧೀಚೌಕಿನ್ಯಾಗ ಇರಬೇಕು ನೋಡಪಾ.

ವೋಸ್ಟಮನ್:— ಇದೇ ಈಗ ಅಲ್ಲಿಂದ ಬಂದ್ನಿರಿ; ಅವರದೊಂದು ಮನಿ ಆರ್ಡರ್ ಇತ್ತೂ !

ಆಕೆ:— ಮನಿಯಾರ್ಡರು ?

ಆತ:— (ಓಡಿ ಬಂದು) ಮನಿಆರ್ಡರು ! ! ಬಾ ರಾಮು, ಒಳಗ ಬಾ. ನಾ ಒಳಗ ಇದ್ದೀನಿ; ಈಕಿ ನೋಡೇ ಇಲ್ಲ. ಬಾ— ಒಳಗ ಬಾ ! ಎಷ್ಟು ರೂಪಾಯ ಅದಾವು ? ಅಡ್ಡ ಅಂತೀನಿ.... ಮೈಸೂರಿನಿಂದ ರೂಪಾಯಿ ಬರೂ ಇದ್ದು.

ಪೋ. ಮ.:— ನೂರು ಅದಾವರಿ.

ಆತ:— ಹಾಂ, ಅವ್ರು ನೂರಡ್ಡ ರೂಪಾಯಿ ಕಳಿಸಿರಬೇಕು. ಇನ್ನ ನಾಲ್ಕು ನೂರು ಹಿಂದಗಡೆ ಕಳಸ್ತಾರ. ಇಲ್ಲಿ ನೋಡಡ್ಡ ನಾ ಹೇಳಿದ್ದು ಖರೇ ಹೌದಲ್ಲೋ ? ಹಾಂ— ತಾಯಿಲ್ಲಿ ಸಹಿ ಮಾಡ್ತೀನಿ,....ಕೆಳಗ ಏನ್ ಬರ್ದಾರು....ಕೂಪನ್‌ನಾಗ ?.... " ಪ್ರೀತಿಯ ಅಳಿಯನಿಗೆ ! " ಆಂ.... ಪ್ರೀತಿಯ ಅಳಿಯ ! ನಾ—ಪ್ರಕಾಶಕ.... !! ಅಲ್ಲ ತಪ್ಪಿರಬೇಕು. ಇಲ್ಲ ಅನ್ನ ಮಗಳು ಬೆಳೆದಾಕೆ ಇರಬೇಕು.... ವಿಚಿತ್ರಾ.... ಮುಂದಡ— " ಮತ್ತು ಮಗಳಿಗೆ " ಮಗಳು.... ?

ಆಕೆ:— ಹಾಂಗ್ಯಾಕ ಗಾಬ್ರಿ ಆಗ್ತೀರಿ.... ಮುಂದ ಓದ್ರೆಲ್ಲಾ.

ಆತ:— ಇಲ್ಲ, ಇದು ತಪ್ಪೇ ಬಂದಿರಬೇಕು.

ಆಕೆ:— ಓದ್ರಿ ನೋಡೋಣು.

ಆತ:— ಹಂ.... ನೋದು— " ಮಗಳಿಗೆ— ನಿನ್ನ ಪತ್ರ ಬಂದಿತು. ಎಲ್ಲ ತಿಳಿಯಿತು. ನಿನ್ನ ಗಂಡನ ಕೆಲಸ ಹಂಗಡ್ಡ ! ನಿನ್ಮ ಅದಚಣೇ ಹಂಗಡ್ಡ ಜನ್ಮದ ತನಕಾ ಇರುವನೆ ! ನಾನು ನಮ್ಮ ಹೊಲದ ಕಬ್ಜಾ ಬಿಡಿಸಿಕೊಂಡು ಮನೆಯಿಂದ ಇಟ್ಟುಕೊಂಡೀನಿ. ಯಾಕಂದರ, ರೈತನಿಗೆ ಕೊಟ್ಟು ನಾವೇನು ಹೊಲದೊಳಗಿನ ಮಣ್ಣ ತಿನ್ನುವದು ಬಂದೀತು ! ಅದಕ್ಕಾಗಿ ನಿನ್ನ ಗಂಡನಿಗೆ ರಾಜೀನಾಮೇ ಕೊಟ್ಟು ಬಾ ಅಂತ ಹೇಳು. ಇತ್ತ ಹೊಲ ಮನೀ ನೋಡಿ— ಇಬ್ರೂ ಸುಖದಿಂದ— ಇರ್ರಿ. ನಮಗೂ ಮತ್ತೆ— ಯಾರೂ ಇಲ್ಲ, ಇತಿ— ನಿಮ್ಮ ಪ್ರೀತಿಯ ತಂದೆ.

ವಿ. ಸೂ.:— ಇತ್ತ ಬರೋಹಾಂಗ ಮಾಡಿರಿ."

(ಹುಶ್—ಎಂದು ನಿಟ್ಟುಸಿರಿಡುವನು.)

ಆಕೆ:— ಹಿಂಗ್ಯಾಕ್ರೀ ? ಇಷ್ಟ್ಯಾಕ ಬ್ಯಾಸರಿಕೆ ಬಂತು ? ನೋತೀ ಹಂಗ್ಯಾಕ ಮಾಡತೀರಿ ?

ಆತ:— ಇದು— ಮೈಸೂರಿನ ಮನಿಯಾರ್ಡರ್ ಅಲ್ಲ. ಮಾವನವರ ಮನಿಆರ್ಡರು !

ಆಕೆ:— ಊಹುಂ. ಮಾವನ ಮನಿಆರ್ಡರ್ ಅಲ್ಲ— ಮಾವನ ಮನೆಯ ಆರ್ಡರು. ಏನ್ ಮಾಡಾವ್ರು ?

ಆತ:— ಮಾಡುವದೇನು ? ನೂರು ರೂಪಾಯಿ ಅದಾವು; ಎಲ್ಲ ಸಾಲಾ ಸಂಬಳ ತೀರಿಸಿ,- ಒಂದು ಪಾಕೀಟ ತಂದು....

ಆಕೆ:— ಪಾಕೀಟು ಯಾಕ.... ?

ಆತ:— ' ನೌಕರೀ ಸಾಕೂ ' ಅಂತ ರಾಜೀನಾಮೆ ಬರಕೊಡಾಕ.

ಆಕೆ:— ನಾನೂ ಅಡ್ಡ ಅಂತೀನು. ಅಲ್ಲೇ ಹೊಲದಾಗ— ಎಷ್ಟು ವ್ಯಾಳೆ ಹೋಗತೈತಿ, ಎಲ್ಲಾ ಮಜಾ !

ಆತ:— ಎಲ್ಲಾ ನಿನಗ ಮಜಾನಡ್ಡ- ಇರ್ತಡದ.

ಆಕೆ:— ಇಲ್ಲೇನ್ರೀ. ಸಾಲಿ— ಅಂತ— ಅದ ಅಂತ, ಕಮ್ಮಗ ಹೊಲದಾಗ ಕೆಲಸಮಾಡಿಕೊಂತಡ್ಡ— ಆಡಿಕೊಂತಡ್ಡ, ಹಾಡಿಕೋಂತ ತಿರುಗಾಡಿದ್ರ ಎಷ್ಟು ಮಜಾ ! ನಮ್ಮ ಹೊಲಾ ಏನು— ಕೃಷ್ಣಾನದಿ ದಂಡೀಮ್ಯಾಲ, ಅಲ್ಲಿ ಮಾವಿನ ತೋಪಿನ್ಯಾಗ, ಜೀವ ಎಷ್ಟು ಗಮಿಸತೈತಿ,

ಆತಃ— ನಾ ಇದ್ದಿದ್ರ.... ?

ಆಕೆ:— ಹೋಗ್ರಿ..... ನಿಮ್ಮ ಬಿಟ್ಟು ಅಲ್ಲೇನು ಗಿಡದ ಕೂಡ ಆಡಲೇನು ?

ಆತ:— ಊಹುಂ ! ನೀ— ನಿಮ್ಮ ಅಪ್ಪ— ನಿಮ್ಮ ಅವ್ವ— ಅಲ್ಲಿ ಹೊಲ-ಮನೀ ಬೇಕಾರ ಮಾಡ್ರಿ, ನಾ ಇಲ್ಲೇ ಇರ್ತೀನಿ.

ಆಕೆ:— ಇದನ್ಯಾರು ಹೇಳ್ಯಾರು ? ಕಮ್ಮಗ ನಾಕ ಕೂರಿಗಿ ಹೊಳೀ ಮುಳುಗೂ ಹೊಲಾ ಐತಿ. ಮತ್ತ ಮನ್ಯಾಗ ಅಪ್ಪಗ ಯಾರೂ ಇಲ್ಲ, ನಮ್ಮಿಬ್ಬರನ್ನ ಬಿಟ್ಟರ ಯಾರದಾರು ಅದಕ್ಕಡ— ಅಲ್ಲೇ ರಾಜಾನಾಂಗ— ಇರೂನು.

ಆತ:— ಅದೇನಿಲ್ಲ. ನೀವು ಅತ್ತ—ನಾ . . ಇತ್ತ ! . . ನಾ ಬರೂದೇ ಇಲ್ಲ. (ಆಕೆ ಅಳುವಳು) .... ಛಿ .... ಹುಚ್ಚುಹುಡುಗೀ, ನೀ ಖರೇನ ನೂಡಿದಿ ಏನ ? ಅಳಬ್ಯಾಡ. ಇಲ್ಲೇನ ನಾಡೋದು ? ಭಂಗಾರದಂಥಾ ಭೂಮಿಬಿಟ್ಟು ? ಅಳಬ್ಯಾಡಡ್ಡ !

ಆಕೆ:— (ದುಃಖದಿಂದ) ನೀವ ಖರೇ ಬರ್ತೀರಾ ? ಸನ್ನಾಣೇ ?

ಆತ:— ಸನ್ನಾಣಿ.—ನಿಜವಾಗಿಯೂ ಬರತೀನಿ. ನೀ ನಗು ನೋಡೋಣ ! ಏನಡ್ಡ ಆಗಲಿ, ಮಾವನ ಮನಿಯಾರ್ಡರು ನನ್ನ ಮಾನಾ ಕಾಯಿತು ! ಮಾವನ ಮನಿಯಾರ್ಡರ್ ! ಮಾವನ ಮನಿಆರ್ಡರ್ ! ಹ ಹ ಹಾ (ನಗುವನು).

★ ಭಾರತದ ಸ್ವಾತಂತ್ರ್ಯಕ್ಕೆ ಅಮೆರಿಕದ ಕಾಣಿಕೆ ★

ಡಾ|| ಹರಿದಾಸ್ ಟಿ. ಮುಜುಂದಾರ್, ಅಮೇರಿಕಾ*

[ಅಮೆರಿಕದಲ್ಲಿ ಅನೇಕ ವರ್ಷಗಳಿಂದ ಭಾರತದ ಸ್ವಾತಂತ್ರ್ಯಚಳವಳಿಯ ಪರವಾಗಿ ಬರೆಯುತ್ತ, ಭಾಷಣ ಮಾಡುತ್ತ ದುಡಿಯುತ್ತ ಇರುವ ಡಾ॥ ಹರಿದಾಸ್ ಟಿ. ಮುಜುಂದಾರರು, ಈಗ ಅಲ್ಪಾವಧಿಯ ಸಂದರ್ಶನಕ್ಕೆಂದು ಭಾರತಕ್ಕೆ ಬಂದಿದ್ದಾರೆ. ಸೂರತದಲ್ಲಿ ಜನಿಸಿದ ಡಾ॥ ಮುಜುಂದಾರರು ೧೯೩೦ ರಲ್ಲಿ ಅಮೆರಿಕಕ್ಕೆ ಹೋದರು ಮತ್ತು ಅನಂತರ ಅಮೆರಿಕದ ಪ್ರಜೆಯಾದರು. ಈಗ ಅವರು ಅಯೋವದ ಮೌಂಟ್ ಸರ್ವಸ್ ಕಾರ್ನೆಲ್ ಕಾಲೇಜಿನಲ್ಲಿ ಸಮಾಜಶ್ಲೇಷಣಶಾಸ್ತ್ರದ ಪ್ರಾಧ್ಯಾಪಕರಾಗಿರುತ್ತಾರೆ.]

ಭಾರತದ ಸ್ವಾತಂತ್ರ್ಯಸಮರಕ್ಕೆ ಸಹಾಯ ಮಾಡಲು ಅಮೆರಿಕ ವಹಿಸಿದ ಪಾತ್ರದ ವಿಷಯ, ಭಾರತದಲ್ಲಿ ಹೆಚ್ಚಿನ ಜನರಿಗೆ ತಿಳಿದಿಲ್ಲ. ಆದರೆ ಈ ಶತಮಾನದ ಆದಿಭಾಗದಿಂದ, ಭಾರತದ ಸ್ವಾತಂತ್ರ್ಯ ಚಳವಳಿಗೆ ಅಮೆರಿಕದ ಜನರ ಸಕ್ರಿಯವಾದ ನೈತಿಕ ಮತ್ತು ಭೌತಿಕ ಬೆಂಬಲ ಲಭಿಸಿದೆಯೆಂಬುದು ವಾಸ್ತವವಾಗಿರುತ್ತದೆ.

ಈ ಬೆಂಬಲದ ಕತೆ ಪ್ರಥಮ ಪ್ರಪಂಚ ಯುದ್ಧಕಾಲದಲ್ಲಿ ಪ್ರಾರಂಭವಾಗುತ್ತದೆ. ಅಂದು ದಿವಂಗತ ಲಾಲಾಲಜಪತ್‌ರಾಯರವರು ರಾಜಕೀಯ ದೇಶಭ್ರಷ್ಟರಾಗಿ ಅಮೆರಿಕಾಕ್ಕೆ ಹೋದರು ಮತ್ತು ಅಮೆರಿಕದಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ನಿಃಶ್ರರನ್ನು ಗಳಿಸುವ ಕಾರ್ಯವನ್ನು ಕೈಗೊಂಡರು. ನಾನು ಸ್ವಂತ ವೆಚ್ಚದಿಂದ ಕಲಿಯುವ ವಿದ್ಯಾರ್ಥಿಯಾಗಿ ಅಮೆರಿಕಾಕ್ಕೆ ತಲುಪಿ, ಸ್ವಲ್ಪ ಸಮಯವಾದನಂತರ ೧೯೩೧ರಲ್ಲಿ ಲಜಪತರಾಯರವರು ಪ್ರಾರಂಭಿಸಿದ ಕಾರ್ಯ ಅಂತ್ಯವಾಯಿತು.

ಕಾಂಗ್ರೆಸ್ಸಿನ ಧ್ಯೇಯವನ್ನು ಪ್ರಸಾರ ಮಾಡಿದ ಮತ್ತು ಗಾಂಧಿಯವರ ಅಹಿಂಸಾತತ್ತ್ವಕ್ಕೆ ಮುಡಿಪಾಗಿದ್ದ ಲಜಪತರಾಯರವರ ಕಾರ್ಯವಷ್ಟೇ ಅಲ್ಲದೆ, ಅಮೆರಿಕದಲ್ಲಿ ಇನ್ನೊಂದು ಸಂಘವಿತ್ತು. ಭಾರತದ ಸ್ವಾತಂತ್ರ್ಯವನ್ನು ಹಿಂಸಾತ್ಮಕ ಕ್ರಾಂತಿಯಿಂದ ಸಾಧಿಸಬೇಕು ಎಂದು ಈ ಸಂಘವು ಪ್ರತಿಪಾದಿಸುತ್ತಿತ್ತು. ಡಾ|| ತಾರಕಾನಾಥದಾಸ ಇದರ ಮುಖಂಡರಾಗಿದ್ದರು.

ಅಮೆರಿಕಕ್ಕೆ ಆಗ ತಾನೆ ಬಂದಿದ್ದ ಮಹಾತ್ಮಾಗಾಂಧಿಯವರ ಅಹಿಂಸಾಮಂತ್ರಮುಗ್ಧನಾಗಿದ್ದ ನಾನು, ಅಮೆರಿಕದ ಸಾರ್ವಜನಿಕಾಭಿಪ್ರಾಯಕ್ಕೆ ಗಾಂಧೀಜಿಯವರ ಅತ್ಯಶಕ್ತಿಯ ಮತ್ತು ಅಹಿಂಸಾತ್ಮಕ ಕ್ರಾಂತಿಯ ತತ್ತ್ವದಲ್ಲಿ ಶಿಕ್ಷಣಕೊಡುವ ಕಾರ್ಯದಲ್ಲಿ ಹೃತ್ಪೂರ್ವಕವಾಗಿ ನಿರತನಾದೆನು. ಈ ಉದ್ದೇಶದಿಂದ ನಾನು ನ್ಯೂಯಾರ್ಕ್ ನಗರದ ಬೀದಿಯ ಮೂಲೆಗಳಲ್ಲಿ ಭಾಷಣ ಮಾಡತೊಡಗಿದೆನು.

ಅನಂತರ ಭಾಷಣಮಂದಿರಗಳಲ್ಲಿ ಮತ್ತು ದೊಡ್ಡ ಸಾರ್ವಜನಿಕ ಭವನಗಳಲ್ಲಿ ಭಾಷಣಮಾಡಲಾರಂಭಿಸಿದೆನು. ೧೯೨೦ ರಿಂದ ೧೯೨೯ ರ ವರೆಗೆ (೧೯೨೯ರಲ್ಲಿ ನಾನು ಭಾರತಕ್ಕೆ ಮರಳಿದೆನು.) ನಾನು ಅಮೆರಿಕದಲ್ಲಿ ಕನಿಷ್ಠಪಕ್ಷ ೩೦ ಸಂಸ್ಥಾನಗಳಲ್ಲಿ ಭಾಷಣ ಮಾಡಿರಬೇಕು; ಅಲ್ಲದೆ ಒಟ್ಟು ೨೦ ಲಕ್ಷಕ್ಕಿಂತ ಹೆಚ್ಚು ಜನರನ್ನು ಉದ್ದೇಶಿಸಿ ಭಾಷಣ ಮಾಡಿರಬೇಕು

ಈ ಸಮಯದಲ್ಲಿ ಐರಿಷ್ ಬುಡಕಟ್ಟಿನ ಅಮೆರಿಕನ್ನರು, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮೇಲೆ ಧಾಳಿಮಾಡಿ, ಸ್ವಾತಂತ್ರ್ಯದ ಉಭಯ ಸಮಾನ ಧ್ಯೇಯಕ್ಕೆ ಹೋರಾಡಲು ನನ್ನನ್ನು ಆಮಂತ್ರಿಸಿದರು. ಈ ಸಂದರ್ಭದಲ್ಲಿ ಐರ್ಲೆಂಡಿನ ಈಗಿನ ಪ್ರಧಾನಮಂತ್ರಿ ಈಡನ್ ಡಿವೆಲರಾರಂಥ ಪ್ರಖ್ಯಾತ ಸ್ವಾತಂತ್ರ್ಯ ಯೋಧರ ಪರಿಚಯ ಮಾಡಿಕೊಳ್ಳುವ ಮತ್ತು ಅವರೊಡನೆ ದುಡಿಯುವ ಸುಯೋಗ ನನಗೆ ಲಭಿಸಿತು.

೧೯೩೦ರಲ್ಲಿ ನಾನು ಭಾರತದಲ್ಲಿದ್ದಾಗ, ಮಹಾತ್ಮಾಗಾಂಧಿಯವರ ಕಾನೂನುಭಂಗ ಚಳವಳಿಯಲ್ಲಿ ಭಾಗವಹಿಸಿದೆನು; ಮತ್ತು ದಂಡಿ ಸತ್ಯಾಗ್ರಹದಲ್ಲಿಯೂ ಭಾಗವಹಿಸಿದೆನು. ಬಳಿಕ "ಅಮೆರಿಕದ ಜನರಿಗೆ ಭಾರತದ ಅಹಿಂಸಾತ್ಮಕ ಕ್ರಾಂತಿಯನ್ನು ವಿವರಿಸಲು ನಾನು ದಿವಂಗತ ಪಂಡಿತ ಮೋತೀಲಾಲ ನೆಹ್ರೂರವರ ಸಲಹೆಯ ಮೇರೆಗೆ ಅಮೆರಿಕಕ್ಕೆ ಹಿಂತಿರುಗಿದೆನು.

ಅಮೆರಿಕಕ್ಕೆ ಮರಳಿದ ನಂತರ, ಪುನಃ ಬರೆವಣಿಗೆಯ ಕಾರ್ಯಕ್ಕೆ ಮತ್ತು ಸಣ್ಣ ದೊಡ್ಡ ಸಭೆಗಳಲ್ಲಿ ಭಾಷಣ ಮಾಡುವ ಕಾರ್ಯಕ್ಕೆ ತೊಡಗಿದೆನು. ೧೯೩೦ ರಿಂದ ದ್ವಿತೀಯ ಪ್ರಪಂಚ ಯುದ್ಧದ ಅಂತ್ಯದವರೆಗಿನ ಅವಧಿಯಲ್ಲಿ, ನನಗೆ ಅಮೆರಿಕಾ ಒಕ್ಕೂಟದ ಪ್ರತಿಯೊಂದು ಸಂಸ್ಥಾನದಲ್ಲಿಯೂ ಭಾಷಣ ಮಾಡುವ ಮತ್ತು ಭಾರತದ ಸ್ವಾತಂತ್ರ್ಯದ ಪರವಾಗಿ ಸಾವಿರಾರು ಅಮೆರಿಕನ್ ಮಿತ್ರರ ಸಹಕಾರ ಮತ್ತು ಬೆಂಬಲವನ್ನು ಪಡೆಯುವ ಅವಕಾಶ ಲಭಿಸಿತ್ತು.

---

* ಯು. ಎಸ್. ಐ. ಎಸ್. ಅವರಿಂದ ಬರೆದು ಬಂದುದು.
ಸಂಪಾದಕ.

ಇಂದು ಭಾರತ ಸ್ವಾತಂತ್ರ್ಯದ ಹತ್ತನೇಯ ವಾರ್ಷಿಕೋತ್ಸವದಂದು, ನಾವು ಅಮೆರಿಕಾಕ್ಕೆ ಗೌರವ ಸಲ್ಲಿಸಬೇಕು—ಎಂದು ನಾನು ಅಭಿಪ್ರಾಯಪಡುತ್ತೇನೆ. ಅಮೆರಿಕದ ಸಾರ್ವಜನಿಕ ಅಭಿಪ್ರಾಯವು, ಬ್ರಿಟನ್ನಿನ ಭಾರತಧೋರಣೆಯ ಮೇಲೆ ನಿಶ್ಚಿತ ಪರಿಣಾಮ ಮಾಡಿತ್ತು. ಅಮೆರಿಕದ ಜನರು, ಪತ್ರಿಕೆಗಳು ಮತ್ತು ಆಕಾಶವಾಣಿ ಗಾಂಧಿಜೀಯವರಿಗೆ ಕೊಟ್ಟ ಉತ್ಸಾಪೂರ್ಣ ಬೆಂಬಲವು, ಭಾರತದ ಸ್ವರಾಜ್ಯಪ್ರಾಪ್ತಿಗೆ ಅಂಶತಃ ಕಾರಣವಾಗಿತ್ತೆಂದು ನನಗೆ ಖಚಿತ ವಿಶ್ವಾಸವಿದೆ.

ಗಾಂಧೀಜಿಯವರಲ್ಲಿ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಮೆರಿಕದ ಆಸಕ್ತಿಯ ಅಭಿವ್ಯಕ್ತಿಗೆ ನಿದರ್ಶನವಾಗಿ, ಮಹಾತ್ಮರು ಮೃತರಾದಾಗ ಅವರಿಗೆ ಸಲ್ಲಿಸಲಾದ ಹೃತ್ಪೂರ್ವಕ ಪ್ರಶಂಸೆಗಳನ್ನು ಉಲ್ಲೇಖಿಸಲು ಇಚ್ಛಿಸುತ್ತೇನೆ. ಪ್ರತಿ ಕೆಲವು ನಿಮಿಷಗಳಿಗೊಮ್ಮೆ ಅಮೆರಿಕದ ರೇಡಿಯೋ ಕೇಂದ್ರಗಳು ತಮ್ಮ ಕ್ರಮಬದ್ಧ ಕಾರ್ಯಕ್ರಮಗಳನ್ನು ನಿಲ್ಲಿಸಿ, ಗಾಂಧಿಜಿಯವರ ಮರಣದ ಬಗ್ಗೆ ವಿಶೇಷಘೋಷಣೆಗಳನ್ನು ಮಾಡುತ್ತಿದ್ದುವು; ಇವು ಮೌನವಾದ ಗೌರವಾರ್ಪಣೆ ಮಾಡಲು ಒಂದು ಕ್ಷಣ ಸ್ತಬ್ಧವಾಗಿದ್ದು, ಬಳಿಕ ಗಾಂಧಿಜೀಯವರಿಗೆ ಪ್ರಿಯವಾಗಿದ್ದ ಗೀತಗಳಿಂದ ಕೆಲವು ಹಾಡುಗಳನ್ನು ಹಾಡುತ್ತಿದ್ದುವು.

ಅಮೆರಿಕವು ಭಾರತಕ್ಕೆ ಋಣಿಯಾಗಿದೆ.

ಅಮೆರಿಕವು ಭಾರತಕ್ಕೆ ಬಹಳ ಋಣಿಯಾಗಿರುತ್ತದೆ. ವಾಸ್ತವವಾಗಿ ಈ ಎರಡು ದೇಶಗಳ ವಿಧಿಗಳು ಪರಸ್ಪರ ಅವಿಭಾಜ್ಯವಾಗಿ ಸಂಬದ್ಧವಾಗಿರುವಂತಿದೆ. ಮೊದಲನೆಯದಾಗಿ, ಅಮೆರಿಕದ ಅವಿಷ್ಕಾರನೇ ಕೋಲಂಬಸನು ಭಾರತಕ್ಕೆ ಜಲಮಾರ್ಗವನ್ನು ಶೋಧಿಸತೊಡಗಿದುದರಿಂದ ಸಾಧ್ಯವಾಯಿತು. ಇತಿಹಾಸಜ್ಞರು ಪೂರ್ಣವಾಗಿ ಮಾನ್ಯಮಾಡದಿದ್ದರೂ, ನಿಜವಾಗಿರುವ ಇನ್ನೊಂದು ಸಂಗತಿಯೇನೆಂದರೆ, ಅಮೆರಿಕದ ವಸಾಹತುಗಳ ಸ್ವಾತಂತ್ರ್ಯಸಮರಕ್ಕೆ ಭಾರತದ ಜನರು ಗಣನೀಯವಾಗಿ ಸೇನೆಸಲ್ಲಿಸಿದರು. ಭಾರತದ ಜನರು ಹಿಂದುಸ್ತಾನ್ ಯುದ್ಧರಂಗಗಳಲ್ಲಿ ಅನೇಕ ಬ್ರಿಟಿಷ್ ಪಡೆಗಳಿರುವಂತೆ ಮಾಡಿದರು.

ನ್ಯೂಇಂಗ್ಲಂಡ್ ಸಾಹಿತ್ಯ ಮತ್ತು ತತ್ತ್ವಶಾಸ್ತ್ರದ ವಿಕಾಸವು ನೂತನವಾಗಿ ಉದ್ಭವಿಸುತ್ತಿದ್ದ ಅಮೆರಿಕದ ಸಾಂಸ್ಕೃತಿಕ ಸ್ವರೂಪಕ್ಕೂ ಹಿಂದೂ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಗೂ ಆಗುತಿದ್ದ ಪರಸ್ಪರ ಸಂಬಂಧದ ನೇರ ಫಲಿತಾಂಶವಾಗಿತ್ತು– ಎಂಬಂಶವನ್ನು ಅಮೆರಿಕದ ಸಾಂಸ್ಕೃತಿಕ ಇತಿಹಾಸಕಾರರು ಮನಗಂಡಿದ್ದಾರೆ. ಹಿಂದೂ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಯನ್ನು ಪಾಶ್ಚಾತ್ಯ ಜಗತ್ತು ಆಗ ತಾನೆ ಅರಿತುಕೊಳ್ಳಲಾರಂಭಿಸಿತ್ತು ಮತ್ತು ಇಂಗ್ಲಿಷ್ ಮತ್ತು ಇತರ ಭಾಷೆಗಳಿಗೆ ಭಾಷಾಂತರಗಳಾಗಿದ್ದುವು.

ನ್ಯೂ ಇಂಗ್ಲೆಂಡಿನ ಅತೀಂದ್ರಿಯ ತತ್ತ್ವದ ಮಹಾಮುಖಂಡರು ಎಮರ್ಸನ್, ಥೋರೋ ಮತ್ತು ಇತರರು—ಹಿಂದೂ ತತ್ತ್ವಶಾಸ್ತ್ರದಿಂದ ಅತೀವ ಪ್ರಭಾವಿತರಾಗಿದ್ದರು. ಎಮರ್ಸನರ ಒಂದು ಕವಿತೆಯಲ್ಲಿ ಭಗವದ್ಗೀತೆಯ ಕೆಲವು ಶ್ಲೋಕಗಳ ಭಾಷಾಂತರವಿದೆ. ಥೋರೋ ಒಮ್ಮೆ ಹಿಂದುಗಳ ಒಂದು ಸುಭಾಷಿತಕ್ಕಾಗಿ ತಾನು ಇಡೀ ಮೆಸಾಡುಸೆಟ್ ಸಂಸ್ಥಾನವನ್ನು ಸಂತೋಷದಿಂದ ಬಿಟ್ಟು ಕೊಡುವೆನು" ಎಂದು ಹೇಳಿದ್ದರು. ವಾಲ್ಟ್‌ವ್ಹಿಟಮನರ ಕೆಲವು ಬರೆಹಗಳೂ ಭಾರತೀಯ ವಿಚಾರ ಮತ್ತು ಸಾಹಿತ್ಯದಿಂದ ಸ್ಫೂರ್ತಿ ಪಡೆದಂತಿವೆ.

೧೮೯೩ ರಲ್ಲಿ ಚಿಕಾಗೋದಲ್ಲಿ ಪ್ರಚಂಡ ಪರಿಷತ್ತು ಜರುಗಿದಾಗ, ಪ್ರಚಂಡ ಧರ್ಮಗಳ ಪಾರ್ಲಿಮೆಂಟಿನಲ್ಲಿ ಭಾರತದ ಪ್ರಖ್ಯಾತ ಪ್ರತಿನಿಧಿಗಳು ಅಮೆರಿಕದ ಜನತೆಯ ಮೇಲೆ ಮಹತ್ತ್ವದ ಪ್ರಭಾವ ಬೀರಿದರು. ವಿಶೇಷವಾಗಿ ಅನೇಕರಿಗಾದ್ಯಂತ ಜನರು ಸ್ವಾಮಿ ವಿವೇಕಾನಂದರ ವಾಣಿಯನ್ನು ಬಹಳ ಆಸಕ್ತಿಯಿಂದ ಕೇಳಿದರು.

ಉಭಯ ದೇಶಗಳ ಸಾಂಸ್ಕೃತಿಕ ಸಂಪರ್ಕಗಳಷ್ಟೇ ಅಲ್ಲದೆ, ಅಮೆರಿಕದಲ್ಲಿ ಭಾರತಕ್ಕೆ ಸಹಾಯಕೊಡಲು ತೀವ್ರವಾದ ಆಸಕ್ತಿಯಿದೆ. ಭಾರತದಲ್ಲಿ ಬರಗಾಲ ಅಥವಾ ಭೂಕಂಪ, ಅಥವಾ ಭೀಕರ ನೆರೆ, ಅಥವಾ ಸಾಂಕ್ರಾಮಿಕ ರೋಗ ಸಂಭವಿಸಿದಾಗ, ಅಮೆರಿಕದ ಜನರು ಕಷ್ಟಕ್ಕೊಳಗಾದವರಿಗೆ ಉದಾರ ಸಹಾಯ ನೀಡಲು ಮುಂದೆ ಬಂದಿದ್ದಾರೆ. ಸ್ವತಃ ಅಮೆರಿಕದ ಪ್ರಜೆಯಾಗಿರುವ ನಾನು ಅಮೆರಿಕದ ಜನರಲ್ಲಿ ಭಾರತದ ಜನರ ಬಗೆಗೆ ಅಪಾರ ಸದ್ಭಾವವಿದೆ ಎಂದು ಹೇಳಲು ಬಯಸುತ್ತೇನೆ.

ಅತಿ ಪ್ರಾಚೀನ ಸಂಸ್ಕೃತಿಯಿರುವ, ಮತ್ತು ಇನ್ನೊಂದು ದೃಷ್ಟಿಯಲ್ಲಿ ಎಳೆಯ ರಾಷ್ಟ್ರವಾಗಿರುವ ಭಾರತ—ಮತ್ತು ಪ್ರಪಂಚದ ಅತಿ ಎಳೆಯ ಜನಾಂಗಗಳಲ್ಲೊಂದಾಗಿರುವ ಆದರೂ ಲಿಖಿತ ಸಂವಿಧಾನವಿರುವ ಅತಿ ಪ್ರಾಚೀನ ಪ್ರಜಾಪ್ರಭುತ್ವಗಳಲ್ಲೊಂದಾಗಿರುವ ಅಮೆರಿಕಗಳು ಪರಸ್ಪರರನ್ನು ಸಹಾನುಭೂತಿಯಿಂದ ಮತ್ತು ಅರಿವಿನಿಂದ ಕಾಣಲು ಕಲಿಯಲಿ ಮತ್ತು ಶಾಂತಿ, ನ್ಯಾಯ, ಸೌಹಾರ್ದ ಸಾಧನೆಗಳಿಗೆ ಜೊತೆಗೂಡಿ ದುಡಿಯಲಿ—ಎಂದು ನಾನು ಆಶಿಸುತ್ತೇನೆ.

ಹಿರೋಶಿಮಾ

ಶ್ರೀ ಬಿ. ಬಿ. ಹಿಂಗಮಿರೆ ಬಿ. ಎ. ಅಥಣಿ

ಸೋಮವಾರ
೬-೮-೧೯೪೫
ಹೆಪ್ಪುಗಟ್ಟಿತು ಧ್ವನಿ, ಸ್ಮಶಾನ ಮೌನ !
ಕಪ್ಪಿಟ್ಟಿತು ಸೂರ್ಯನ ಮುಖ, ಕಪ್ಪಿಟ್ಟಿತು ಮುಂಜಾವು :
ಎಲ್ಲೆಲ್ಲೂ—
ಸಾವಿನ ಪಡೆ, ಸಾವಿನ ನಡೆ
ಸಾವಿನದೇ ಕೇಕೆ;
ಮಾನವಕರ ಮಸಿ ಬಳಿಯಿತು
ದೈನತ್ಯದ ಮುಖಕೆ !
ಪಂಡಿತ-ಪಾಮರ, ಬಡವ-ಬಲ್ಲಿದ, ನಲ್ಲ-ನಲ್ಲೆಯರೆಲ್ಲ
ಚಿಕ್ಕಸ್ಥ. ಶಿಲೆ.
ಮಾನವ ಪ್ರಯೋಗಕೆ
ಸೃಷ್ಟಿ-ಸೌಂದರ್ಯದ ಕೊಲೆ !
ಅನೂತನ, ಅಜೇತನ.
ಪ್ರಲಯದ ಅಕಸ್ಮಿಕ ನಗೆ
ಮುಸುಕಿಟ್ಟುವು- ಆ ದುರ್ದಿನ
ಸಾವಿನ ಹೊಗೆ, ಸಾವಿನ ಕಾರ್ಮೋಡ.
ನರ್ತಿಸಿದುವು-
ಹೂ-ಹೂವಿನಲೂ- ಸಾವು !
ಕುಳಿತವ ಕುಳಿತಲ್ಲೇ
ನಿಂತವ ನಿಂತಲ್ಲೇ, ಎದ್ದವ ಎದ್ದಲ್ಲೇ, ಬಿದ್ದವ ಬಿದ್ದಲ್ಲೇ.
ಆಶ್ಚರ್ಯದ ಅಳಿಗಾಲ :
ಮುಸುಕಿಟ್ಟಿತು ಆ ದುರ್ದಿನ
ಎಲ್ಲೆಲ್ಲೂ- ಕಾರ್ಗಾಲ !
ಮಣ್ಣಾದುವು ಆ ಕ್ಷಣದಲೆ
ಲಕ್ಷಾಂತರ ಕಥೆ :
(ತುಂಬುತ್ತಿದೆ ನನ್ನೆದೆಯಲಿ)

ಯಾರಿಗಾಗಿ ?

ಶ್ರೀ ಶಾ. ಸದಾನಂದ ಉಚ್ಚಿಲ್, ಮುಂಬಯಿ

ಅವಳಿನಿಯೆ ಮುಡಿದ ಜಡೆಯ ಮುತ್ತನಿಡುವ ಆಶೆಗೊ
ತೊನೆಯುತಿರುವೆ ಕುಣಿಯುತಿರುವೆ ಮತ್ತದಾನ ಭಂಗಿಗೊ ||
ನಿನ್ನೆ ಇರದ ನಾಳೆ ಬರದ ಮಂದಿರದಲಿ ಮುಲಗಿಹೆ
ನಿನ್ನೆ ನಾಳೆಗಳನು ತೊಡೆದು ಇಂದಿನದನೆ ಎಳಸಿಹೆ ||
ಆರದೆದೆಯ ಆಳದಲ್ಲಿ ತುಂಬಲಿಹೆಯ ಜೆಲುವನು
ಅವರನೊತ್ತಿ ಮತ್ತೆ ಮುತ್ತಿ ಪಡೆಯಲಿಹೆಯ ಏನನು ?
ನನ್ನ ಬಾಳು ನಿನ್ನ ಬಾಳು ಬಾಳಿಗಾಗಿ ಬಾಳುವೆ
ನಾನು ಕಾಣದುದನು ಕಂಡು ದಿನದಿ ಕಂಡು ಅಳಿಯುವೆ ||
ಮೇಲು ಮೇಲು ಎನುವ ನಾನು ಏತರಿಂದ ಮೇಲದೊ
ಮೇಲಿನವನ ಮೇಲಿಗಿರುವ ಬಾಳು ನಿನ್ನದಾರ್ಗದೊ ||
ಇನನ ತರುಣ ಬೆಳಕಿನಲ್ಲಿ ಬೆಳಗಿದದುವೆ ಜನನವೆ
ದಿನದ ಬಿಡೆಯ ನಿಳತಮಾಗೆ ಉರುಳಿತೆಂತು ಜೀವವು ? ||
ನಗುತ ನಗುತ ದಿನದ ಮುಗಿತಕೆಳಿದ ಬಾಳನಾಳವೊ
ದಿನಕು ದಿನಕು ಬೀಳುತೇಳ್ವ ನನಗೆ ಬಾಳನಿಳಿತವೊ !
ಯಾರಿಗಾಗಿ ಬಂದೆ ಇಂದು ದಿನದ ಚಂದಗೂಡುತ
ಕವಿಯ ಲೇಖದಲ್ಲಿ ಮೂಡಿ ಉಳಿಯಲೆಂದೊ ಹಾಡುತ.... ?

ಆ ವೇದನೆ, ಆ ರೋದನೆ
ದುರ್ಘಟನೆಯ ಗಂಡಾಂತರ ವ್ಯಥೆ
ಮಣ್ಣಾದುವು ಆ ದುರ್ದಿನ
ಲಕ್ಷಾಂತರ ಚರಿತೆ !
ಚೀರಿಟ್ಟಿತು ಮುಂಜಾನೇ, ಚೀರಿಟ್ಟಿತು ಗಾಳಿ
ಎಲ್ಲೆಲ್ಲೂ ದುರ್ದೈವದ ದಾಳಿ !
ಸ್ವಾಭಾವಿಕತೆಯ ನುಂಗಿತು- ಕೃತ್ರಿಮತೆಯ ಬಾಯಿ
ಗೋಳಿಟ್ಟಳು ಆ ದುರ್ದಿನ
ಹಾ ! ಭೂಮಿಯ ತಾಯಿ !
ಹೆಪ್ಪು ಗಟ್ಟಿತು ಧ್ವನಿ ಸ್ಮಶಾನ ಮೌನ.

ಮಾನವತೆಗೆ ಒಡ್ಡು

(ಸಣ್ಣಕತೆ)

ಆ. ಆರ್. ಪಿ. ಕುಲಕರ್ಣಿ ಎಮ್. ಎ., ಬೆಳಗಾಂವಿ

ನಮ್ಮ ಜನಸಾಮಾನ್ಯರಲ್ಲಿ ಲುಪ್ತವಾಗಿರುವ ಆದರ್ಶನಿಷ್ಠೆ ಅವರನ್ನು ಎಷ್ಟೊಂದು ಹೀನಸ್ವಾರ್ಥದ ಮತ್ತು ಕೃತಘ್ನತೆಯ ಕೂಪದಲ್ಲಿ ಕೆಡವಿದೆ ಎಂಬುದನ್ನು ನೋಡಿದರೆ, ನಿಜವಾದ ಮಾನವತೆಯ ಎದೆ ಒಡೆದು ಹೋಗುವುದು. ಇಂತಹ ಜನಮನದಲ್ಲಿ ಸುಧಾರಣೆಯಾಗದಿದ್ದರೆ, ಎಂತಹ ರಾಜಕೀಯ ಸ್ವಾತಂತ್ರ್ಯವೂ ಏನನ್ನೂ ಮಾಡದು!

"ಸಾವಕಾರ, ಈ ಮಾತ ಏನ ಹೇಳಬೇಕಽ ನಮಗ? ನೀವು ಽಟ ಮನಸರೆ ಹಾಕ್ರಿ. ಮುಂದಿನ ಎಲ್ಲಾ ಕೆಲ್ಸಾ ನಿಸ್ತರ ಸೋದ ನಮ್ಮ ಮ್ಯಾಗ" ಎಂದು ಹಿರಿಯ ಪಂಚ ಮಲ್ಲಪ್ಪನೆಂದ.

"ನಾನಾರೇ, ನಿನ್ನ ಬಿಟ್ಟ ಅದೀನೇನೋ ಮಲ್ಲಪ್ಪಾ? ನೀವು ಮಾಡ್ತೇವು ಅಂತ ಅಂದ ಅರೆ ಅಸ್ರಿ. ನಾ ನಿಮ್ಮ ಬೆನ್ಮಾ್ಯಲೆ ಅದೇನಽ" ರಾಮಣ್ಣ ಸಮಾಧಾನದಿಂದ ಹೇಳಿದ.

"ಏನ್ಮಾತ್ರೀ! ನೀವ ಹೇಳಿದಂಗ ಕೇಳ್ತೇವ" ಕೆಸರಳ್ಳಿಯ ಎಲ್ಲ ಪಂಚರೂ ತಲೆಯಲ್ಲಾಡಿಸಿದರು.

ಕೊನೆಗೆ ಹಳ್ಳಕ್ಕೆ ಒಡ್ಡು ಹಾಕಲು ಎಲ್ಲರೂ ಒಪ್ಪಿದರು; ಮುಂದೆ ಊರಲ್ಲಿ ನಾಲ್ಕಾರು ದಿನ ಒಡ್ಡಿನ ಮಾತೇ ಮಾತು.

* * * *

ಕಾಲೇಜಿನ ಉಚ್ಚ ಶಿಕ್ಷಣ ಮುಗಿಸಿದ ರಾಮಣ್ಣನಿಗೆ ತಕ್ಕ ಕೆಲಸ ದೊರೆಯಲಿಲ್ಲ. ಕರಿ ಬಂದ ಚಿಕ್ಕ-ಪುಟ್ಟ ಕೆಲಸಗಳಿಗೆ ಅವನ ಮನಸ್ಸು ಒಪ್ಪಲಿಲ್ಲ. ಅವನ ತಂದೆಗೂ ಇಳಿವಯಸ್ಸು. ಎಂಟೆತ್ತಿನ ಕಮತವನ್ನು ನೋಡುವುದಕ್ಕೆ ಅವರಿಗೆ ಅವನ ನೆರವೂ ಬೇಕಾಗಿತ್ತು. ರಾಮಣ್ಣ ಹಳ್ಳಿಯ ಜೀವನ ಸ್ವೀಕರಿಸಿದ; ಕೆಸರಳ್ಳಿಯಲ್ಲಿಯೇ ಇರುವುದನ್ನು ಗಟ್ಟಿಮಾಡಿದ. ಈವರೆಗೆ ಆತ ಪಟ್ಟಣದಲ್ಲಿ ಸುಖದಿಂದ ವಿಹರಿಸಿದ್ದ. ಹಳ್ಳಿಯ ಜೀವನ ಕೆಲವು ದಿನ ಅವನಿಗೆ ಉಪ್ಪಿಲ್ಲದ ಊಟವಾಗಿತ್ತು. ಆದರೆ ಅಲ್ಲಿಯ ಜನ ಅವನಿಗೆ ತೋರಿದ ಪ್ರೀತಿಯ ಜಾಳಿಗೆ, ಅವನ ಭಾವನೆಯ ಬೊಗರೆಯನ್ನು ದಿನಾಲು ಹೆಚ್ಚು-ಹೆಚ್ಚಾಗಿ ಸುತ್ತುತ್ತಿತ್ತು. ಅಲ್ಲಿಯ ಜನರೊಡನೆ ಬೆರೆತು ಬಾಳಲು ಅವನು ಹಾತೊರೆಯಹತ್ತಿದ; ಅವರ ಉನ್ನತಿಗಾಗಿ ತನ್ನ ಆಯುಷ್ಯ ಮೀಸಲಾಗಿರಿಸಲು ನಿಶ್ಚಯಿಸಿದ—ಎತ್ತು ರೈತನಿಗಾಗಿ ಹುಟ್ಟಿದಂತೆ.

ಕೆಸರಳ್ಳಿಯಲ್ಲಿ ಎಲ್ಲ ಅನುಕೂಲತೆಗಳು ಉಂಟು. ಶಾಲೆ ಇದೆ. ಅಂಚೆಯ ಕಚೇರಿ ಇದೆ. ಸರಕಾರ ಕೊಟ್ಟ 'ರೇಡಿಯೊ' ಇದೆ. ಗ್ರಾಮಪಂಚಾಯತಿಯ ಆಫೀಸಿದೆ. ಊರ ಹಳ್ಳಕ್ಕೆ ಒಡ್ಡು ಮಾತ್ರ ಇಲ್ಲ. ಅಲ್ಲಿ ಮೇಳೆರಾಜನ ಕೋಪ ಮೇಲಿಂದ ಮೇಲೆ ಉಂಟು. ಎಷ್ಟೋ ಸಲ ಹುಳಿಯಾಗದೆ, ಊರ ಜನ ದುಃಖದ ತೆರೆಗಳಲ್ಲಿ ತೇಲಿ-ಹೋದದ್ದುಂಟು. ಸಕಾಲಕ್ಕೆ ಮಳೆಗರದರೆ ಮನೆ-ಮನೆಗಳಲ್ಲಿ ಬಂಗಾರದ ಹೊಗೆ ಹಾಯುವ ಹಳ್ಳಿಯದು.

ಊರ ಸೀಮೆಯಲ್ಲಿ ಹರಿಯುವ ಹಳ್ಳಕ್ಕೆ ಒಡ್ಡು ಹಾಕ ಬೇಕೆಂದು ಪಂಚರು ಗೊತ್ತುಮಾಡಿದರು. ರಾಮಣ್ಣನ ಮನೆಯಲ್ಲಿ ಸಭೆ ಕೂಡಿತು. ಅವನೂ ಒಪ್ಪಿದ. ಒಪ್ಪದಿರುವುದಾದರೂ ಹೇಗೆ? ರಾಮಣ್ಣನ ಆನೆಯ ಸಾಮರ್ಥ್ಯ ಅವರಿಗೆ ದೊರಕಿತು. ಅವನೇ ಅದಕ್ಕೆ ಮುಂದಾಗಬೇಕೆಂದು ಅವರು ಹಟ ತೊಟ್ಟರು. ಅವನೂ ಸಮ್ಮತಿ ಇತ್ತ.

ರಾಮಣ್ಣ ಕಚೇರಿಗೆ ಹೋದ; ಅಲ್ಲಿ ಅರ್ಧ ಹಣ ಹಳ್ಳಿಯವರು ತುಂಬಬೇಕೆಂದೂ, ಉಳಿದರ್ಧ ಹಣವನ್ನು ಸರಕಾರವು ಕೊಡುವುದೆಂದೂ ತಹಸೀಲ್ದಾರ್ ಸಾಹೇಬರು ಹೇಳಿದರು. ಅವನೊಡನೆ ಪಂಚ ಮಲ್ಲಪ್ಪನೂ ಹೋಗಿದ್ದ. ಆಗ ಇಪ್ಪತ್ತು ರೂಪಾಯಿಗಳು ರಾಮಣ್ಣನ ಕೈಬಿಟ್ಟವು.

ಮರುದಿನ ರಾತ್ರಿ ಸುಮಾರು ಒಂಬತ್ತಕ್ಕೆ ರಾಮಣ್ಣ ಪಂಚರನ್ನು ಬರಮಾಡಿಕೊಂಡ; ಅವರೂ ಬಂದರು. ಪಂಚರು ರಾಮಣ್ಣನಲ್ಲಿ ನಾಯಿಯ ನಂಬಿಗೆಯನ್ನಿಟ್ಟಿದ್ದರು. ಅವರಿಗೆ ಅವನ ಕರೆ, ಇರುವೆಗಳಿಗೆ ಬೆಲ್ಲದಂತೆ ಇತ್ತು. ಒಡ್ಡಿಗೆ ಸಂಬಂಧಿಸಿದ ಅನೇಕ ಮಾತು ಆದುವು. "ಒಡ್ಡಾದ ಮ್ಯಾಲ ಊರ ಮ್ಯಾಲಿನ ಕೆರಿ ಕಟ್ಟಬೇಕು" ಎಂದ ಮಲ್ಲಪ್ಪ.

"ಸಾವಕಾರ, ಒಂದ ಕುಸ್ತೀನು ಬೇಕ ನೋಡ್ರಿ" ಕಲ್ಲಪ್ಪನ ಸೂಚನೆ—

"ಹಣಮಂತನ ಗುಡಿ ಪೂರಾ ಬೀಳ್ಲಾಕ ಆಗೇತ್ರಿ. ಅದರ ಗ್ವಾಡಿಗೋಳ್ನ ಕಲ್ಲೀಲೆ ಕಟ್ಟಬೇಕ್ರಿ" ಎಂದ ಮಂಗಣ್ಣ. ಎಲ್ಲರೂ ಒಂದೊಂದು ಸೂಚನೆಯನ್ನು ಮಾಡುವವರೇ! ಯಾರಿಗೆ ತಮ್ಮ ಮಣ್ಣು ಹೊನ್ನಾಗುವುದು ಬೇಡ? ಊರ ಉತ್ಸಾಹ ರಾಮಣ್ಣನನ್ನು ಉಬ್ಬಿಸಿತು. ಸುಮಾರು ಹತ್ತು ಸಾವಿರ ರೂಪಾಯಿ ಕೂಡಿಸ

ಬೇಕೆಂದು ನಿರ್ಣಯವಾಯಿತು. ಹಳ್ಳಿಯ ಇಡೀ ಭೂಮಿಗೆ ನೀರುಣ್ಣಿಸುವ ಒಡ್ಡಿಗೆ ಅಷ್ಟು ಹಣ ಬೇಡವೆ? ಮಲ್ಲಪ್ಪ ತನ್ನ ರುಮಾಲು ಸರಿಮಾಡಿಕೊಂಡು, ನಾಯಿಯ ಬಾಲದಂತೆ ಡೊಂಕಾದ ಮೀಸೆಯನ್ನು ತಿರುವುತ್ತ "ಸಾವಕಾರ, ಹಣಾ....ನೀವ ಆಟ ಮುಂದಾಗಿ ನಿಮ್ಮ ಪಾಲಿನ ಅಂಕೀ ಒಡೀರಿ. ಅಂದರ ಎಲ್ಲಾರೂ ಕೈಹಚ್ಚಾರ್ರಿ" ಎಂದ. ರಾಮಣ್ಣನಿಗೂ ಯೋಗ್ಯವೆನ್ನಿಸಿತು. ಮುಂದೆ ಊರು ಬೆಳೆಯಬಹುದಾದ ಪೈರಿನ ಹೊಂಗನಸು ಕಟ್ಟಿದ. "ಒಡ್ಡು ಆಟ ಅಗಾಕ ಬೇಕ್ರಿ; ಊರ ಭೂಮಿಗಾ ಆ ಮ್ಯಾಲ ನೋಡ್ಯಾರೆ ನೋಡ್ರಿ. ಊರ ಅಗಶ್ಯಾಗ ನಿಂತು ನೋಡಿದರ, ಹಿಂಗs ಹಚ್ಚಾನ ಹಸರ ಕಬ್ಬs ಕಬ್ಬರಿ!" ಎಂದು ಒಬ್ಬ ಭವಿಷ್ಯ ನುಡಿದ.

"ಬತ್ತsರೆ ಅಮ್ಯಾಲ ಕಡಿಮಿ ಬೆಳೀತೈತಿ ಅಂತೀರಿ?" ಇನ್ನೊಬ್ಬನ ಸವಾಲು.

"ಹುಂ ಮಲ್ಲಪ್ಪಾ, ಎಷ್ಟು ನಾ ಹಾಕ್ಬೇಕಂತಿ? ಒಂದು ಸಾವಿರ ರೂಪಾಯಿ?" ರಾಮಣ್ಣನ ಪ್ರಶ್ನೆ.

"ಏನ ಸಾವಕಾರ, ನಾವೇನ ನಿಮಗ ಹೇಳ್ಬೇಕ?" ಎಂದ ಮಲ್ಲಪ್ಪ.

ಮಲ್ಲಪ್ಪ ಒಂದು ಸಾವಿರ ರೂಪಾಯಿ ಎಣಿಸಿಕೊಂಡ. "ಇಂದೇ ಕೆಲಸಕ್ಕ ಸುರು ಆಗಬೇಕು." ರಾಮಣ್ಣ ತಿಳಿಸಿದ.

"ನೀವು ಹೇಳಬೇಕ ಏನ್ರಿ? ನೀವಾರೆ ಯಾರ ಸಲುವಾಗಿ ಇದನ್ನ ಮಾಡತೀರಿ?" ಎಂದ ಮಲ್ಲಪ್ಪ.

ಹಣ ಕೂಡಿಸಲು ನಾಲ್ಕಾರು ಜನ ಟೊಂಕ ಕಟ್ಟಿದರು. ಸಭೆ ಮುಗಿಯಿತು. ರಾತ್ರಿ ಊಟ ತೀರಿಸಿ ರಾಮಣ್ಣ ಮಲಗುವುದರಲ್ಲಿದ್ದ. ವಿದ್ಯಾವಂತ ಮಗನಲ್ಲವೇ? ತಂದೆ ತಾವೇ ಅವನ ಹತ್ತಿರ ಬಂದು "ಅಲ್ಲೋ ರಾಮಣ್ಣಾ, ನೀ ನನ್ನ ಮಾತು ಕೇಳ್ತೀನಿ ಅಂದ್ರ, ಈ ಭಾನಗಡ್ಯಾಗ ಬೀಳಬ್ಯಾಡಪ್ಪಾ" ಎಂದರು.

"ಈಗಿನ ದಿನದಾಗ ನಾಂವು ಹೀಗ ಹಿಂದ ನಿಂತರ ಪಾಸ, ಊರವರಕಿ ಏನು ಮಾಡ್ಬೇಕು?"

"ನಿನಗ ಇಲ್ಲೀ ಸ್ಥಿತಿ ಗೊತ್ತಿಲ್ಲ. ನಿನ್ನ ಅವರು ಮುಳುಗಿಸಿ ಬಿಟ್ಟಾರು ಹಂ—ನಾಯಿಾ ಕೆರ್ಯಾಗ ಮುಳುಗಿಸಿದ್ಹಾಂಗ!"

"ಇವೆಲ್ಲಾ ಹಳೇ ವಿಚಾರ. ನನಗೇನು ಇಸ್ಯೂ ತಿಳಿಯೋದಿಲ್ಲ? ಸಾಯುವಾಗ ನೀರ ಹಾಕ್ದ ಇನ್ನ ಯಾವಾಗ ಹಾಕಬೇಕು? ನಾವು ಅವರ ಕೂಡಾ ಪ್ರೀತೀಲಿ ನಡದರ ಅವರೂ....."

"ಕೆಸರಾಗ ಅಂತೂ ನೀ ಕಾಲು ಇಡಾಂವ ಹಾಂಗಾರ; ತಲಿ ತನಕಾ ಮುಳುಗತೀ ನೀನು! ಮಾಡಿದಾಂವ ಉಣತಾನ ಮಣಿಯಂಥಾ ಕಡಬು! ಮತ್ತ ನೀ ನೋಡಿಕೋ ನಿನ್ನ ಮ್ಯಾಲಿನ ಜವಾಬ್‌ದಾರೀ ಮನೀದು ಎಷ್ಟು ಅದ ಅಂಬೋದು!"

"ಒಡ್ಡು ಆಗೋದು ಅಷ್ಟs ತಡಾ. ಅದಕ್ಕ ಅರೆ ಎಷ್ಟು ದಿನಾಬೇಕು? ಅಮ್ಯಾಲ ಅದನs ಅದ ಮನೀ, ಹೊಲಾ ಎಲ್ಲಾ."

ಎರಡು ತಿಂಗಳಾದುವು. ಮಳೆಗಾಲ ಆರಂಭವಾಗುವುದರೊಳಗೆ ಒಡ್ಡು ಮುಗಿಯಬೇಕು. ರಾಮಣ್ಣ ಕಚೇರಿಯಿಂದ ಊರಿಗೆ, ಊರಿಂದ ಕಚೇರಿಗೆ ಹೋಗುತ್ತಿದ್ದ— ಅಡ್ಡ ತೊಲೆಗೆ ಕಟ್ಟಿದ ಜೋಕಾಲಿಯಂತೆ.

ಒಮ್ಮೆ ತಹಸೀಲ್ದಾರರು ರಾಮಣ್ಣನನ್ನು ಕರೆಯಿಸಿಕೊಂಡರು. ಒಡ್ಡಿನ ಹಣ ಮಂಜೂರಾಗಿತ್ತು. ಊರವರು ಐದು ಸಾವಿರ ರೂಪಾಯಿ ತುಂಬಬೇಕಿತ್ತು. ತಹಸೀಲ್ದಾರರಿಗೆ ರಾಮಣ್ಣ, ಒಂದು ವಾರದಲ್ಲಿ ಹಣ ತುಂಬುವ ಭರವಸೆಯನ್ನು— ಪರಿಶ್ಚಂದ್ರನ ಸತ್ಯನಿಷ್ಠೆಯಿಂದ ಕೊಟ್ಟ.

ಪುನಃ ಊರಲ್ಲಿ ಹೊಸ ಹುರುಪು ಕಂಡಿತು. ರಾಮಣ್ಣ ಪಂಚರನ್ನು ಕರೆಕಳಿಸಿದ. ಒಡ್ಡಿನ ಮಾತು ಆರಂಭವಾಯಿತು.

"ಏನ ಮಲ್ಲಪ್ಪಾ, ಎಷ್ಟು ರೊಕ್ಕ ಕೂಡಿದೂ?" ರಾಮಣ್ಣ ಕೇಳಿದ.

"ಒಂದೂವರಿ ಸಾವಿರಕ್ಕ ಒಂದು ಐವತ್ತs ಕಮ್ಮಿ ಅದಾವರಿ."

"ನಾನs ಒಂದು ಸಾವಿರ ಕೊಟ್ಟೀನಲ್ಲೋ! ನೀವು ಬರೇ ನಾಕೂವರಿನೂರು ಅಷ್ಟ ಕೂಡಿಸಿದಿರಿ?"

"ನೋಡೆರೆ ನೋಡ್ರಿ ಇನ್ನ ಎಂಟ ದಿನದಾಗ!" ಮಲ್ಲಪ್ಪ ಭರವಸೆಕೊಟ್ಟ.

"ದುಡ್ಡಿಲ್ಲ ಕೆಲ್ಸರೆ ಹ್ಯಾಂಗ ಆಗಬೇಕು? ಆ ಕೆಲ್ಸಾ ಜೋರ ಮಾಡ್ರಿ." ಎಲ್ಲ ಪಂಚರೂ ಒಪ್ಪಿದರು.

ಒಂದು ದಿನ ತಹಸೀಲದಾರರೇ ಕೆಸರಳ್ಳಿಗೆ ಬಂದರು. ಅವರಿಗೆ ಒಡ್ಡು ಕಟ್ಟುವ ಸ್ಥಳ ನೋಡುವುದಿತ್ತು. ಅವರೊಡನೆ ಸರಕಾರೀ ಇಂಜನಿಯರೂ ಬೇರೆ ಕೆಲವು ಅಧಿಕಾರಿಗಳೂ ಇದ್ದರು. ರಾಮಣ್ಣ ನಿಗೂ ಪಂಚರಿಗೂ ಕರೆ ಬಂದಿತು. ಎಲ್ಲರೂ ಕೂಡಿ ಒಡ್ಡು ಕಟ್ಟಲು ಸ್ಥಳ ನೋಡಲು ಹೊರಟರು. ಅಧಿಕಾರಿಗಳು ಯಾವುದೊಂದು ಸ್ಥಳ ಗೊತ್ತುಮಾಡಿದರೆ, ಯಾರಾದಾರದೊಂದು ಆತಂಕ; "ಇಲ್ಲಿಂದ ಮೇಲ್ಬದಿಗೆ ನೀರೇರಲಿಕ್ಕಿಲ್ಲ" "ಇಲ್ಲಿ ಪಾಯದ ಸ್ಥಳ ಗಟ್ಟಿಲ್ಲ." "ಇಲ್ಲಿ ನೆರೆಹಳ್ಳಿಗೆ ಹೋಗುವ ಹಾದಿ ಕಟ್ಟಾಗುವುದು." ಹೀಗೆ ಅನ್ನುತ್ತ ಮುಂದೆ ಸಾಗಿದರು. ಕೊನೆಗೆ ಒಂದು ಸ್ಥಳ ಗೊತ್ತಾಯಿತು.

ಆ ಸ್ಥಳವು ಅನುಕೂಲವೆಂದು ಎಲ್ಲರೂ ಹೇಳಿದರು. ಅಲ್ಲಿಂದ ಊರ ಸೀಮೆಯೆಲ್ಲವೂ ನೀರುಣ್ಣುವಂತಿತ್ತು. "ಇದs ಬಾಳ ಅನುಕೂಲ ಸ್ಥಳಾರಿ" ಎಂದ ಮಲ್ಲಪ್ಪ. ಎಲ್ಲ ಪಂಚರಿಗೂ ಅದೇ ಸ್ಥಳ ಒಪ್ಪಿಗೆಯಾಗಿತ್ತು.

ಅಲ್ಲಿಯೇ ಹೊಲದಲ್ಲಿ ರಾಮಣ್ಣನ ಆಳೊಬ್ಬ ಕೆಲಸ ಮಾಡುತ್ತಿದ್ದ. ರಾಮಣ್ಣನ ಹತ್ತಿರ ಬಂದ. "ಸಾವಕಾರ, ಈ ಜಾಗಾದಾಗ ಒಡ್ಡ ಹಾಕ್ತಾರೇನ್ರಿ?" ಎಂದ.

"ಹೌದು!"

"ಯಾರ್ದರೇ ಜ್ಯಾಗಾ ತೋರಸೋದ್ಕ ಆ ಮಕ್ಕಳಕ್ಕೆದ್ದೇನ್ರಿ? ಈ ಜ್ಯಾಗಾ ನಿಮ್ಮದರಿ."

"ಆದ್ರೇನೋ? ಯಾರಾರೇ ಜ್ಯಾಗಾ ಕೊಡಬೇಕು. ಅವರೇನು ಅದಕ್ಕ ರೊಕ್ಕಾಕೊಡಾಣಿಲ್ಲಾ?"

ರಾಮಣ್ಣ ಮಲ್ಲಪ್ಪನತ್ತ ನೋಡಿದ. "ಈ ಜ್ಯಾಗಾ ಯಾರ್ದೋ?" ಎಂದ.

"ನಿಮ್ಮದs ಅಲ್ರಿ?"

'ಈ ಜ್ಯಾಗಾ ನಾ ಫುಕಟ ಕೊಡಾಕಿಲ್ಲ ಹುಂ! ಇದಕ್ಕ ಯೋಗ್ಯ ಕಿಮ್ಮತ್ತು ಕೊಡಬೇಕಾದೀತು. ಆ ಮ್ಯಾಲ ರಾಮಣ್ಣ ಹಿಂಗs ಹಾಂಗs ಅಂದರ...."

"ಊರ ಕೆಲ್ಸರಿ. ರೊಕ್ಕಾ ಕೂಡಹಾಕಿ ಕೊಡ್ತೇನಲ್ರಿ. ಎಲ್ಲಾ ಮ್ಮ ಮ್ಯಾಲೇ ಹಾಕಿದ್ರ ಹ್ಯಾಂಗರಿ ?"

"ಏನು ಕಿಪ್ಮತ್ತಾದೀತು ?" ರಾಮಣ್ಣ ಕಣ್ಣರಳಿಸುತ್ತ ಕೇಳಿದ.

"ಆದೀತ ಅಲ್ರಿ ಒಂದು ಸಾವಿರ ತನಕಾ ?" ಮಲ್ಲಪ್ಪ ಸಾವ ಾಶವಾಗಿ ಹೇಳಿದ.

"ಅಷ್ಟs.... ಅಷ್ಟsರೀ." ಉಳಿದವರು ಜನಿಗೂಡಿಸಿದರು.

"ಎಲ್ಲಾ ನಿಮ್ಮದ ! ಕಾಯವರೂ ನೀವs, ಕೊಲ್ಲವರೂ ೀವs ! ಕುಡಗೋಲು ಕುಂಬಳಕಾಯಿ ಎಲ್ಲಾ ನಿಮ್ಮ ಕಡೇನs ! ಷ್ಟs ಹೊಟ್ಟಮ್ಯಾಲ ಬಡಿಬ್ಯಾಡ್ರಿ; ಬೆನ್ನಮ್ಯಾಲೆ...." ಎಂದ ರಿಯ ಮಲ್ಲಪ್ಪ.

ಅಲ್ಲಿಯೇ ಒಡ್ಡಾಗಬೇಕೆಂದು ಗೊತ್ತಾಯಿತು. ರಾಮಣ್ಣನಿಗೂ ನಂದವಾಯಿತು. ಎಲ್ಲರೂ ತಮ್ಮ ತರುಣ ಸಾವುಕಾರರನ್ನು ಹೊಗ- ದರು. ಜೀವನ ಸಾಂಗವಾಗಿ ಸಾಗಬೇಕಾದರೆ, ಸಮಾಜದ ಸುಖಕ್ಕೆ ುಹತ್ತ್ವಕೊಡಬೇಕೆಂಬುದು ರಾಮಣ್ಣನ ನಂಬಿಗೆ.

ಸಂಜೆಗೆ ಮತ್ತೆ ರಾಮಣ್ಣನ ಮನೆಯಲ್ಲಿ ಪಂಚರು ಕೂಡಿದರು. ೂಡಿದ ಜನರ ಮುಖದ ಮೇಲೆ ಏಕೋ ಚಿಂತೆಯ ತೆರೆ ಮುಸು- ತ್ತು. ಮೊದಲಿನ ಉತ್ಸಾಹ ಕಂಡುಬರುತ್ತಿದ್ದಿಲ್ಲ.

"ಯಾಕೋ ಮಲ್ಲಪ್ಪ, ಮುಂಜಾನೆ ಅಂದ ಮಾತು ಕೆಟ್ಟ ಳಕೊಂಡ್ರಿ? ಸುಳ್ಳs ಹುಸಿಗುಂಡು ಹಾರಿಸಿದ್ದಿ. ನನಗ ಆ ಜ್ಯಾಗಾಕ ುಡ್ಡು-ಗಿಡ್ಡು ಏನೂ ಬ್ಯಾಡ. ಕೆಲಸ ಸುರು ಅಗ್ಲಿ. ಆದರ...."

"ನೀವ ಸಾಕ್ಷಾತ್ ದೇವ್ರರಿ !" ಎಂದ ಮಲ್ಲಪ್ಪ.

"ರೊಕ್ಕಾ ಈಗ ತುಂಬಿರಿ ಅಂತ ಸರಕಾರದಿಂದ ಬಂದೈತಿ. ಇನ್ನೂ ಮೂರೂವರೆ ಸಾವಿರ ಬೇಕು. ನಾವು ಇದುಸಾವಿರ ಹಾಕಿದರ ಸರಕಾರ ಐದುಸಾವಿರ ಕೊಡೋದಂತ." ರಾಮಣ್ಣ ತಳಮಳದಿಂದ ತಿಳಿಸಿದ.

ಮೂರು-ನಾಲ್ಕು ತಿಂಗಳಾದರೂ ಹೆಣ ಕೂಡಿದ್ದಿಲ್ಲ. ರಾಮಣ್ಣ ಬಿರುನುಡಿಗಳನ್ನೇ ಬಿಟ್ಟ. ಹಿರಿಯ ಪಂಚ ಮಲ್ಲಪ್ಪನಿಗೂ ಛೀ ಾಕೆದ. "ನೀವು ರೊಕ್ಕಾ ಕೂಡ್ಸವ್ರೊ ? ನಾ ಕೆಲ್ಸಾ ಬಿಟ್ಟು ಬಿಡ್ಲೋ ?" ರಾಮಣ್ಣನಿಂದ ನೊಸಚೆಯಾದ ಮಾತು ಬಂದುವು.

"ನಾವೇನು ಸುಮ್ಮನs ಕುಂತೇವ್ರಿ ಸಾವುಕಾರ ? ದುಡ್ಡರಿ ಯೂರ ಕಡೆ ಐತಿ ? 'ನನ್ನ ಹಂತೇಕ ಇಲ್ಲ, ನಿನ್ನ ಹಂತೇಕ ಇಲ್ಲ'- ಂತಾರ್ರೀ ಜನಾ. ನೀವs ಅಷ್ಟು ಮನಸಿನಮ್ಯಾಗ ತಗೊಂಡು ನಾಕ ಜನಕ್ಕ ಹೇಳಿದರ...."

"ನೀ ಹೇಳೋದು ಬರೋಬರಿ ಮಲ್ಲಪ್ಪಾ. ನಾನs ನೋಡ್ತೀನಿ."

ಮುರುದಿನ ರಾಮಣ್ಣ ಪಂಚರನ್ನು ಕರೆದುಕೊಂಡು ಮನೆ- ುನೆಗೂ ಹೋದ. ಹಣ ಬೇಡಿದ. ಸಿಟ್ಟುಗೆದ್ದ ಜನರ ಮೇಲೆ ಹರಿ ಾಯ್ದ. ಹಣ ಬೇಡಿದಾಗ ಜನ ಏನೆನ್ನುವುದೆಂದು ಆಗ ಅವನಿಗೆ ೂರ್ಣ ತಿಳಿಯಿತು.

ಮತ್ತೆ ಸಭೆ. ಮತ್ತೆ ಹಣದ ವಿಚಾರ. "ಏನ್ಮಾಡಬೇಕಂತೀರಿ?" ರಾಮಣ್ಣ ಪಂಚರನ್ನು ಕೇಳಿದ.

"ನಿಮ್ಮ ಕಾಲ್ಮ್ಯಾಲ ಬೀಳ್ತೇವ್ರಿ. ಹ್ಯಾಂಗರೆ ಮಾಡಿ ಕೆಲ್ಸಾ ೂರಾ...." ಎಂದ ಮಲ್ಲಪ್ಪ.

"ನನ್ನ ಕಡೆ ಅರಿ ಎಲ್ಲಿ ಅದ, ಅಷ್ಟು ದುಡ್ಡು ? ಆದರೂ ನೋಡೋಣ. ಇನ್ನ ಎರಡು ದಿವಸದ್ಲೆ ಬೆಟ್ಟಯಾಗ್ರಿ." ಒಡ್ಡು ಕಟ್ಟಿಸಿಯೇ ತೀರಬೇಕೆಂದು ರಾಮಣ್ಣ ಹೆಟ ಹಿಡಿದ.

ರಾಮಣ್ಣ ಮಲ್ಲಪ್ಪನನ್ನು ಕರೆದುಕೊಂಡು ಪಟ್ಟಣಕ್ಕೆ ಹೋದ. ಹೋಗುವಾಗ, ತಾಯಿ ಮುಂಬರುವ ತನ್ನ ಸೊಸೆಗೆಂದು ಕಾಯ್ದಿ ಟ್ಟಿದ್ದ ಬಂಗಾರದ ಬಳೆ ಒಯ್ದು. ಮನೆಯಲ್ಲಿ ಸಾಕಷ್ಟು ರಂಬಾಟ ವಾಯಿತು. ಎಂಟೆತ್ತಿನ ಕಮತ ಆರೆತ್ತಿನದಾಯಿತು.

ಊರವರೇ ಕೆಲಸವನ್ನು ಗುತ್ತಿಗೆ ಹಿಡಿಯಬೇಕೆಂದೂ, ಊರ- ವರೆಲ್ಲರೂ ಪುಕ್ಕಟೆ ಕ್ರಮದಾನ ಮಾಡಬೇಕೆಂದೂ, ಅದಕ್ಕಾಗಿ, ಸರ ಕಾರದಿಂದ ಬಂದ ಹಣವನ್ನು, ತನ್ನ ಹಣವು ಮುಟ್ಟುವ ತನಕಾ ರಾಮಣ್ಣನೇ ತಕ್ಕೊಳ್ಳಬೇಕೆಂದೂ ಪಂಚರು ಗೊತ್ತುಮಾಡಿದರು.

ಅಂತೂ ಶುಭಮುಹೂರ್ತವು ಗೊತ್ತಾಯಿತು. ಒಡ್ಡು ಕಟ್ಟುವ ಸ್ಥಳದ ಸುತ್ತ ಊರ ಜನ ಕೂಡಿದರು. ತೆಂಗಿನಕಾಯಿ ಒಡೆದು ಪ್ರಸಾದ ಹಂಚಿದರು. ಮಲ್ಲಪ್ಪನೇ ಪಾಯಾ ಅಗಿಯುವ ಮುಹೂರ್ತ ಮಾಡಿದ. "ಇನ್ನು ನನ್ನ ಕೆಲ್ಸ ಮುಗೀತು ಮಲ್ಲಪ್ಪಾ! ನೀನೇ ಈ ಕೆಲ್ಸಾ ಇನ್ಮ್ಯಾಲೆ ನಿಭಾಯಿಸಬೇಕು." ಎಂದ ರಾಮಣ್ಣ.

"ಯಾವಾಗಾರೇ ಬರತ ಬರ್ರಿ. ನಾ ಎಲ್ಲಾ ನೋಡಿಕೋ- ತೇನಿ" ಉತ್ತರಿಸಿದ ಮಲ್ಲಪ್ಪ.

ಎಂದಾದರೊಮ್ಮೆ ಆಗುವ ಕೆಲಸ. ಇಡೀ ಊರ ಭೂಮಿ ನೀರುಣ್ಣಬೇಕು. ಒಡ್ಡು ಗಟ್ಟಿಮುಟ್ಟಾಗಬೇಕು. ಸುತ್ತಲಿನ ಹಳ್ಳಿಯವರು ಬೆರಗುಗಣ್ಣುಗಳಿಂದ ನೋಡಬೇಕು. ಎಂಥ ನೀರಿನ ಪ್ರವಾಹವೂ ಅದನ್ನು ಕೊಚ್ಚಿಕೊಂಡು ಹೋಗಬಾರದು. ಕಲ್ಲು ರಾಶಿಯೂ, ಸಿಮೆಂಟಿನ ಚೀಲಗಳೂ, ಉಕ್ಕಿನ ಸಲಾಕೆಗಳೂ ರಾಶಿ ರಾಶಿಯಾಗಿ ಬಿದ್ದುವು. ನೆರೆ ಹಳ್ಳಿಗಳಲ್ಲಿಯ ಪ್ರಸಿದ್ಧ ಉಪ್ಪಾರರೇ ಬಂದರು. ನೂರಾರು ಕೂಲಿಯಾಳುಗಳು ಕೆಲಸವಾಡಹತ್ತಿದರು. ಸುತ್ತಲಿನ ಹಳ್ಳಿಗಳ ಜನರು ಬಂದು ನೋಡಿ ಹೋಗುತ್ತಿದ್ದರು.

ಒಂದು ವಾರ ಕಳೆಯಿತು. ರಾಮಣ್ಣ ಒಡ್ಡು ನೋಡಲು ಬಂದ. "ಏ ಮಲ್ಲಪ್ಪಾ ಇದೇನಪಾ ? ಎಲ್ಲಿ ಅದಾರೋ ಜನ ?" ರಾಮಣ್ಣ ಮುಖಕಿವುಚಿ ಕೇಳಿದ.

"ಕೂಲೀ ಮಂದಿ ಬರೋದಿಲ್ಲ ಅಂತಾರ್ರಿ. ಈ ದಿನದಾಗ ಅವರಿಗೆ ಕೂಲಿ ಇಲ್ಲದ ದುಡ್ಯಾಕ ಆಗೋದಿಲ್ಲ ಅಂತರಿ!"

ರಾಮಣ್ಣ ಸಿಟ್ಟು ನುಂಗಿದ. "ನೀವೆಲ್ಲಾ ಹಿಂಗ ಲೆಕ್ಕಾ ಚಾರಾ ಬಿಟ್ಟು ನಡದರ ಹ್ಯಾಂಗೋ ?" ಎಂದ.

"ಸಾವಕಾರ, ನಾನರಿ ಏನಮಾಡ್ಲಿ ? ಊರ ಕೆಲ್ಸ ! ನಾನೂ ಬೇಕಾದಷ್ಟು ಹೇಳಿದ್ನಿರಿ. ಆದರ...."

ರಾಮಣ್ಣನ ಬಿಗುವು ಸ್ವಲ್ಪ ಸಡಿಲಾಯಿತು. "ಇರಲಿ ಬಿಡು ಮಲ್ಲಿಪ್ಪಾ. ಅವರಿಗೆ ಸರಕಾರದಿಂದ ಬಂದ ರೊಕ್ಕಾ ಕೊಟ್ಟುಬಿಡು. ಕೆಲ್ಸರಿ ಮುಗಿಲಿ." ರಾಮಣ್ಣ ಮಾತು ಮುಗಿಸಿದ.

ಮರುದಿನ ಮೊದಲಿನಂತೆ ಮತ್ತೆ ಜನರು ಕೆಲಸಕ್ಕೆ ಬಂದರು. ಕಲ್ಲುರಾಶಿ ತೀರುತ್ತ ಬಂದಿತು. ಸಿಮೆಂಟು ಮಾತ್ರ ಇನ್ನೂ ಇತು.

ಎರಡು ದಿನಗಳಲ್ಲಿ ಇನ್ನೂ ಒಂದು ಸಾವಿರ ಕಲ್ಲುಗಳಾದರೂ ಬೇಕಾಗಿದ್ದುವು. ಇಲ್ಲವಾದರೆ ಕೆಲಸ ಮುಂದೆ ಸಾಗುವಂತಿರಲಿಲ್ಲ.

ಪಂಚರು ರಾಮಣ್ಣನ ಮನೆಗೆ ಬಂದರು. ಒಡ್ಡಿನ ವಿಚಾರ ಕ್ಯಾಗಿಯೇ ಬಂದಿರಬೇಕೆಂದು ತಿಳಿಯಲು, ರಾಮಣ್ಣನಿಗೆ ವೇಳೆ ಹತ್ತಲಿಲ್ಲ. ಇಡೀ ಕೆಸರಳ್ಳಿಯೇ ರಾಮಣ್ಣನನ್ನು ನೋಡಿ ನಗುತ್ತಿತ್ತು. ಮನೆಯವರಂತೂ 'ಈತನ ತಲೆ ತಿರುಗಿದೆ' ಎಂದು ಅನ್ನುತ್ತಿದ್ದರು. ಕೆಸರಳ್ಳಿಯ ಕೆಸರಿನಲ್ಲಿ ಆತ ಪೂರ್ಣ ಮುಳುಗಿದ್ದ.

"ಏ ಮಲ್ಲಪ್ಪಾ, ನನ್ನ ಕಡೆ ದುಡ್ಡಿಲ್ಲ. ಯಾಕ ಬಂದ್ರಿ?" ರಾಮಣ್ಣ ಬಾಣ ಬಿಟ್ಟ.

"ಸಾವಕಾರ, ನಮಗ ಏನ ಬುದ್ದಿ-ಗಿದ್ದಿ ಏತಿಲ್ಲರೀ? ಇನ್ನ ಮ್ಯಾಲ ದುಡ್ಡು ಹ್ಯಾಂಗ ಬೇಡೇವು ನಿಮ್ಮ ಕಡೆ? ನಿಮ್ಮ ಭಾರ ನನ್ನ ತಲೀಮ್ಯಾಗ ಹೊರಲಾರದಷ್ಟ ಆತಿ." ಮಲ್ಲಪ್ಪ ಮಾತಿನ ಬಣ್ಣ ಬಳೆದ.

"ಹಾಂಗಾದರ?"

"ಕಲ್ಲ ಎಲ್ಲಾ ತೀರಿ ಹ್ವಾದೂರಿ ಸಾವಕಾರ!"

"ನಾ ಏನು ಮಾಡ್ಲೋ? ನೀವು ಏನ ಬೇಕಾದದ್ದು...." ರಾಮಣ್ಣನ ಸಿತ್ತ ನೆತ್ತಿಗೇರಿತ್ತು.

"ಸಾವಕಾರ, ದೊಡ್ಡ ಸಾವಕಾರ ಭಾವಿ ಕಟ್ಟಸಲಾಕ ಕಲ್ಲ ತಂದ, ಒಗದಾರೀ. ಒಂದ ದೀಡಸಾವಿರ ಇರಬೇಕ್ರಿ. ಆದರಾಗಿನ್ನೂ ಒಂದು ಸಾವಿರದಷ್ಟು ಕಲ್ಲು ಒಡ್ಡಿಗೆ...."

"ನನ್ನಿ ಒಯ್ದು ನಿಮ್ಮ ಒಡ್ಡಿನ್ಯಾಗ ಹಾಕಿ ಮುಚ್ಚಿರಿ!"

"ನೀವು ನಮ್ಮ ತಂದೀ ಹಾಂಗ್ರಿ. ನೀವಽ ಸಿಟ್ಟಿಗೆದ್ರ ನಾವೆಲ್ಲೆ ಹೋಗ್ಬೇಕ್ರಿ? ಈಗ ಕೊಡ್ರಿ; ಊರ ಪಟ್ಟ ಕೂಡಿದ ಮ್ಯಾಗ ಅದರ ರೊಕ್ಕಾ ತಗೋರಿ ಅಂದ್ರ ಮುಗೀತು."

"ಮಲ್ಲಪ್ಪಾ, ನೀ ಹಿರೇಮನಶ್ಯಾ—ಹ್ಯಾಂಗರೆ ಮಾಡು." ರಾಮಣ್ಣ ಹುಸಿನಗೆ ನಕ್ಕ.

ಕೆಲಸ ಮುಂದೆ ಸಾಗಿತು. ಒಡ್ಡು ಕಟ್ಟಿ ಮುಗಿಯಿತು. ಖರ್ಚು ಹತ್ತು ಸಾವಿರವನ್ನು ಮಿಕ್ಕಿತು. ಸುತ್ತಲಿನ ಹತ್ತು ಹಳ್ಳಿಗಳಲ್ಲಿ ಅಂಥ ಒಡ್ಡಿರಲಿಲ್ಲ. ಊರಲ್ಲಿ ಎಂದಿಲ್ಲದ ಉತ್ಸಾಹ ದಿನದಿನಕ್ಕೆ ಚಿಗುರಹತ್ತಿತು.

"ಸಾವಕಾರ, ಮನಶ್ಯಾಂದ ಏನ್ರಿ? ಇಂದ ಆದಾನು ನಾಳೆ ಇಲ್ಲ. ಛಲೋ ಕಟ್ಟ ಅಷ್ಟು ಉಳತಾವರಿ. ನಿಮ್ಮ ಹೆಸರು ಮಾತ್ರ ಕಾಯಂ ಉಳೀತ್ರಿ. ಮತ್ತ.... ಮುಂಚಿನ ದಿನಾ ಒಡ್ಡಿನ ನೀರ ಬಿಡೋವಾಗ, ಯಾರನ್ನಾರೆ ದೊಡ್ಡವರ್ನ ಕರಸೋಣ ಏನ್ರಿ?" ಮಲ್ಲಪ್ಪ ಕೇಳಿದ,

"ಹ್ಯಾಂಗರೆ ಮಾಡ್ರಿ." ರಾಮಣ್ಣ ನಿರುತ್ಸಾಹವನ್ನು ತೋರಗೊಡಲಿಲ್ಲ.

"ಮೇಲಳ್ಳಿ ಕಲ್ಲಪ್ಪನವರು ಇಲೆಕ್ಷನ್‌ಗೆ ನಿಂತಾರ್ರಿ. ಈಗ ಅವರು, ಊರಿಂದ ಊರಿಗೆ ಪರಚಾರಕ್ಕ ಹೊಂಟದಾರ್ರಿ. ಅವರ್ನ ಕರದರ್ಽ...."

ಕಲ್ಲಪ್ಪನವರೂ ಆಮಂತ್ರಣ ಸ್ವೀಕರಿಸಿದರು. ಅವರ ಶಿಕ್ಷಣ ಅಷ್ಟಕಷ್ಟೆಯಾದರೂ, ಅವರ ಕೀರ್ತಿ ಮಾತ್ರ ಆ ಭಾಗದಲ್ಲಿ ತುಂಬಿ ವ್ಯಾಪಿಸಿತ್ತು. ಉದ್ಘಾಟನೆಯ ದಿನ ಗೊತ್ತಾಯಿತು. ಒಡ್ಡಿನ ಹತ್ತಿರ ರಾಮಣ್ಣನ ಮನೆಯಲ್ಲಿಯ ಖುರ್ಚಿ, ಮೇಜು ತಂದಿಟ್ಟರು. ದೊಡ್ಡ ದೊಡ್ಡ ಹಾಸುಗೆ ಹಾಸಿದ್ದರು. ರಾಮಣ್ಣನಿಗೆ ಆನಂದ ವಾಯಿತು. ನಾಲ್ಕು ತಿಂಗಳ ದುಡಿತದ ಫಲ ಅವನಿಗೆ ಇಂದು ದೊರಕಿತು. ಸುತ್ತಲಿನ ಹಳ್ಳಿಗೂ ಸುದ್ದಿ ಹೋಗಿತ್ತು. ಸುಮಾರು ಎರಡು ಸಾವಿರ ಜನ ಕೂಡಿರಬಹುದು. ಸಮಾರಂಭ ಆರಂಭ ವಾಯಿತು.

"ಈ ಒಡ್ಡಿನಿಂದ ಊರಿಗೆ ಸುಖಸಿಗಲಿಕ್ಕೇಬೇಕು. ಇಂದಿನ ಶುಭಕೆಲಸಕ್ಕ ಶ್ರೀ ಕಲ್ಲಪ್ಪನವರು ದೊರೆತದ್ದು ನಮ್ಮ ಸುದೈವ ನಾನು ಶ್ರೀಮಾನ್ ಕಲ್ಲಪ್ಪನವರಿಗೆ ನಾಲ್ಕು ಮಾತು ಹೇಳಲು ಕೇಳಿ ಕೊಳ್ಳತೇನೆ" ಎಂದು ರಾಮಣ್ಣ ಮುಖ್ಯ ಅತಿಥಿಯ ಪರಿಚಯಮಾಡಿ ಕೊಟ್ಟ.

ಶ್ರೀ. ಕಲ್ಲಪ್ಪನವರು ಎದ್ದುನಿಂತರು. ಮೀಸೆ ಹುರಿಮಾಡಿ ಕೊಂಡರು. ಭಾಷಣಗಳನ್ನು ಮಾಡಿ-ಮಾಡಿ ಅವರ ಧ್ವನಿ ಕೂತಿತ್ತು. ಜನರು ಚಪ್ಪಾಳೆಗಳ ಗುಡುಗಿನಿಂದ ಅವರ ಭಾಷಣ ಸ್ವಾಗತಿಸಿದರು

"ಸದ್ಗಿರಸ್ಥರೇ, ನೀವು ನನ್ನ ಇಂದ ಈ ಸಮಾರಂಭಕ್ಕ ಕರಸಿದೀರಿ. ನನಗೆ ಬಾಳ ಆನಂದ. ಈಗ ದಿನಾ ಬದಲ ಆಗಿದಾವ. ನೀವು ನಿಮ್ಮ ಪ್ರಯತ್ನದಿಂದ—ಯಾರ ನೆರವಿಲ್ಲದ್ಹ—ಇಂಥಾ ಒಡ್ಡು ಕಟ್ಟಿದಿರಿ. ನೀವು ಜಮೀನದಾರರಿಂದ ಆಗದ ಕೆಲಸಾ ಮಾಡಿದ್ದೀರಿ. ಅವರು ಸಮಾಜಕ್ಕ ಒಂದು ವಿಷದ ಮುಳ್ಳು! ನಿಮ್ಮ ರಗತಾ ಹೀರಾವರು. (ಚಪ್ಪಾಳೆಗಳ ಕಡಕಡಾಟ) ಅವರ ಆಽಟ ಈಟ ಸಹಾಯ ನಿಮಗ ಸಿಕ್ಕಿದ್ದೀತು; ಆದರ ಅವರ ಸಹಾಯ ಇಲ್ಲದೆ ಇದ್ದರ, ನಿಮ್ಮ ಈ ಕೆಲ್ಸ ಎಂದಾರೇ ನಿಲ್ತಿತ್ತೇನ? (ಚಪ್ಪಾಳೆ) ಈಗ ಅವರು ತಮ್ಮ ಜಮೀನದಾರೀ ಕಾಯೋದಕ್ಕ ಹಿಂಗ ನಡೀ ಬೇಕಾಗತೈತಿ. ನಿಮಗ ಸಹಾಯ ಮಾಡಬೇಕಂದಿಂದ್ರ, ಇಷ್ಟ ದಿನಾ ಯಾಕ ಒಡ್ಡು-ಗಿಡ್ಡು ಕಟ್ಟಸಲಿಲ್ಲ? ಇಂಥಾ ಕೆಲಸಕ್ಕ ಅವರು ಕೊಟ್ಟ ಹಣ ಅರೆ ಎಲ್ಲಿಂದ ಬಂದಿರತೈತಿ? ಅವರ ಹಿತ್ತಲಾಗ ಏನ ದುಡ್ಡಿನ ಗಿಡ-ಪಡಾ ಅದಾವ? ನೀವು ಈಗ ಎಚ್ಚರಾಗೀದೀರಿ. ನಿಮ್ಮ ಪ್ರಯತ್ನಕ್ಕ ನಾ ಧನ್ಯವಾದ ಕೊಡತೇನ (ಚಪ್ಪಾಳೆ)" ಎಂದು ಮಾತು ಮುಗಿಸಿದರು. ಮುಖ್ಯ ಅತಿಥಿಗಳಿಗೆ ಮಾಲೆ ಹಾಕುವಾಗ ರಾಮಣ್ಣನ ಕೈ ನಡುಗುತ್ತಿದ್ದುವು ಶ್ರೀ ಕಲ್ಲಪ್ಪನವರು ಐದು ರೂಪಾಯಿಗಳ ಉದಾರ ದಾನಮಾಡಿದರು.

ಮರುದಿನ ಪಂಚರು ರಾಮಣ್ಣನ ಮನೆಗೆ ಬಂದರು. "ಸಾವ ಕಾರ, ಕಲ್ಲಪ್ಪನವರು ಬಂದಾಗ ಎರಡು ರೂಪಾಯಿ ಮಾಲಿಗೆ, ಹದಿ-ನೈದು ರೂಪಾಯಿ ಮೋಟರಕ್ಕ ಮತ್ತು ಹತ್ತರೂಪಾಯಿ ಚಹಾಕ್ಕ ಹತ್ತಿದು; ಅವನ್ನಟ್ಟು ಕೊಟ್ಟರ...." ಎಂದ ಮಲ್ಲಪ್ಪ.

"ಕತ್ತೇ ಮಕ್ಕಳೇ, ಹೋಗಿರಿ ಇಲ್ಲಿಂದ! ಇನ್ನ ಮ್ಯಾಲ ನನ್ನ ಕಟ್ಟಿ ಹತ್ತಿದರ...." ರಾಮಣ್ಣ ರೇಗಿದ. ಪಂಚರು ಹೊರಟು ಹೋದರು. ರಾಮಣ್ಣ ಪುನಃ ನೌಕರಿಗೆ ಅರ್ಜಿ ಹಾಕಿದ.

ನಾಗರ ಪಂಚಮಿ

(ಹಬ್ಬದ ಪರಿಚಯ)

ಶ್ರೀಮತಿ ಸೌ. ರಾಧಾಬಾಯಿ ಕಮಲಾಪುರ, ಧಾರವಾಡ

ಭಾರತದ ಪ್ರತಿಯೊಂದು ಪ್ರಾಂತಪಲ್ಲಿಯೂ ಪ್ರಾದೇಶಿಕ ವೈಶಿಷ್ಟ್ಯಗಳಿಂದ ಕೂಡಿದ ಅನೇಕ ಹಬ್ಬಗಳು ಪ್ರಚಾರದಲ್ಲಿರುವುವು. ಈ ಹಬ್ಬಗಳಿಗೆ ಲಿಖಿತ ಪುರಾಣಗಳಲ್ಲಿ ಆಧಾರವಿಲ್ಲದೆ ಹೋದರೂ, ಪರಂಪರೆಯ ಅಲಿಖಿತ ಜಾನಪದ ಪುರಾಣಗಳು ಇವುಗಳನ್ನು ಎತ್ತಿ ಹಿಡಿದುಕೊಂಡು ಬಂದಿವೆ. ಸಂತೃಪ್ತ ಜೀವನದ ಸದ್ಭಾವನೆಯೇ ಈ ಹಬ್ಬಗಳ ಗುರಿಯಾಗಿದೆ.

❋

'ನಾಗರ ಪಂಚಮಿ ನಾಡಿಗೆ ದೊಡ್ಡದು' ಎಂಬುದು ನಮ್ಮ ಜನಪದದ ವಾಣಿ. ನಾಗಪಂಚಮಿಯ ಹಬ್ಬದ ಪ್ರಚಾರ ಭರತಖಂಡದ ಪ್ರತಿಯೊಂದು ಪ್ರಾಂತದಲ್ಲಿ ಇದೆಯಾದರೂ, ಈ ಹಬ್ಬವನ್ನು ಜರುಗಿಸುವ ಪದ್ಧತಿಗಳು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯವಾಗಿರುವುವು. ಎಲ್ಲ ಕಡೆಯಲ್ಲಿಯೂ ಈ ಹಬ್ಬದ ಒಂದು ಸಾಮಾನ್ಯ ಲಕ್ಷಣವಾಗಿ ಕಾಣುವುದೆಂದರೆ, ನಾಗನ ಎಂದರೆ ಹಾವಿನ ಪೂಜೆ; ಆದರೆ ದೇಶಭೇದದಂತೆ ಈ ನಾಗಪೂಜೆಯ ಸಂಪ್ರದಾಯಗಳೂ ಪೂಜಾವಿಧಿಗಳೂ, ಭಿನ್ನಭಿನ್ನವಾಗಿರುವುವು. ಅದರಂತೆಯೆ ನಾಗಪಂಚಮಿಗೆ ಸಂಬಂಧಿಸಿದ ಕಥೆಗಳೂ ದೇಶ-ದೇಶಗಳಲ್ಲಿ ಬೇರೆ ಬೇರೆಯಾಗಿ ಕಾಣುವುವು.

ನಾಗಪಂಚಮಿಯ ಹಬ್ಬ ನಮ್ಮ ದೇಶದಲ್ಲಿ ಇಷ್ಟೊಂದು ಪ್ರಚಾರಗೊಂಡಿದ್ದರೂ, ಇದರ ಇತಿಹಾಸವನ್ನು ಶೋಧಿಸುತ್ತ ಹೋದಹಿ, ನಮ್ಮ ಪುರಾಣಗಳಲ್ಲಿ ಇದರ ಮೂಲ ದೊರೆಯುವುದಿಲ್ಲ. ಭಾರತೀಯರ ಪುರಾಣಪರಂಪರೆಯಲ್ಲಿ ನಾಗಪೂಜೆಗೆ ಸ್ಥಾನವು ಇಲ್ಲವೆಂದಲ್ಲ. ಪೌರಾಣಿಕರ ನಂಬುಗೆಯಂತೆ, ಭೂಮಿಯನ್ನು ಹೊತ್ತುನಿಂತ ಆದಿಶೇಷ ನಾಗರಾಜ. ಇವನೇ ಶ್ರೀಮನ್ನಾರಾಯಣನಿಗೆ ಹಾಸಿಗೆಯಾದವ; ಶ್ರೀ ಶಂಕರನಿಗೆ ಕಂಠಾಭರಣವಾದವ. ಆದುದರಿಂದ, ನಾಗರಾಜನಾದ ಆದಿಶೇಷ, ನಮ್ಮ ಪರಂಪರೆಯಲ್ಲಿ ಪೂಜೆಗೆ ಅರ್ಹನಾದ ದೇವತೆಯೆನಿಸಿಕೊಂಡಿದ್ದಾನೇನೋ ಸರಿ; ಆದರೆ ಈ ಆದಿಶೇಷನನ್ನು ಶ್ರಾವಣಶುದ್ಧ ಪಂಚಮಿಎಂದರೆ ನಾಗಪಂಚಮಿಯ ದಿನವೇ ಪೂಜಿಸಬೇಕೆಂಬ ಮಾತು, ನಮ್ಮ ಪುರಾಣಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ.

ನಾಗಪಂಚಮಿಯು ಹಬ್ಬದಲ್ಲಿ ಸರ್ಪಪೂಜೆಗೆ ಪ್ರಾಧಾನ್ಯವಿದ್ದರೂ, ಈ ಹಬ್ಬದ ಬಗ್ಗೆ ದೇಶ-ದೇಶಗಳಲ್ಲಿ ಪ್ರಚಾರದಲ್ಲಿರುವ ಕಥೆಗಳನ್ನು ನೋಡಿದರೆ, ಅವೆಲ್ಲ ಜಾನಪದ ನಿರ್ಮಿತಿಗಳಾಗಿ ಕಾಣುತ್ತವೆ. ನಮ್ಮ ಕನ್ನಡನಾಡಿನಲ್ಲಿ ನೆರವೇರುವ ಈ ಹಬ್ಬದ ವಿವರಗಳನ್ನೂ ಕಥೆಗಳನ್ನೂ ಕುರಿತು ವಿಚಾರ ಮಾಡಿದರೆ, ಇದೊಂದು ಅಣ್ಣ-ತಂಗಿ, ಅಕ್ಕ-ತಮ್ಮ ಇವರಲ್ಲಿ ಪ್ರೇಮ ಪ್ರೀತಿಗಳು ಅವಿಚ್ಛಿನ್ನ ಉಳಿಯುವುದಕ್ಕೆಂದು ಹುಟ್ಟಿ ಹರಡಿದ ಸಾಮಾಜಿಕ ಹಬ್ಬವೆಂದು ಕಂಡುಬರುವುದು. ನಮ್ಮ ಪೂರ್ವಜರ ಸಾಮಾಜಿಕ ಪ್ರಜ್ಞೆ, ಈ ಹಬ್ಬವು ಶಾಶ್ವತವಾಗಿ ನಡೆಯಬೇಕೆಂಬ ಕಲ್ಪನೆಯಿಂದ, ಪ್ರತ್ಯಕ್ಷ ಭೀತಿಪ್ರದಶಕ್ತಿಯಾದ ಹಾವನ್ನು ಈ ಹಬ್ಬಕ್ಕೆ ದೇವತೆಯನ್ನಾಗಿ ಮಾಡಿದೆ. ಅಲ್ಲದೆ ನಾಗಪೂಜೆ ಸಂತಾನ-ಸಂಪತ್ತಿಗೆ ಸಾಧನವೆಂದು, ಆರ್ಯರಿಗಿಂತ ಮೊದಲಿಗರಾದ ದ್ರಾವಿಡರು ನಾಗಗಳನ್ನು ಪೂಜಿಸುವ ಪದ್ಧತಿಯು ನಮ್ಮ ದೇಶದ ಸಾಮಾನ್ಯ ಜನತೆಯಲ್ಲಿ ರೂಢವಾಗಿತ್ತು.

ನಾಗಪಂಚಮಿಗೆ ಸಂಬಂಧಿಸಿದ ಕಥೆಗಳು ನಮ್ಮ ಕನ್ನಡನಾಡಿನಲ್ಲಿಯೆ ಬೇರೆ ಬೇರೆ ಮೂರು ನಾಲ್ಕು ದೊರೆಯಬಹುದು. ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಾರದಲ್ಲಿರುವ ಕಥೆಯೆಂದರೆ :

ಒಂದು ಸಾಮಾನ್ಯ ಕುಟುಂಬ. ಆ ಕುಟುಂಬದಲ್ಲಿ ಸೊಸೆಯಾಗಿ ಬಂದವಳಿಗೆ ಅಣ್ಣ-ತಮ್ಮಂದಿರು ಯಾರೂ ಇರುವುದಿಲ್ಲ. ಪಂಚಮಿಯ ಹಬ್ಬಕ್ಕಾಗಿ ಆ ಊರಲ್ಲಿಯ ಬೇರೆ ಬೇರೆ ಕುಟುಂಬಗಳಲ್ಲಿಯ ಸೊಸೆಯಂದಿರನ್ನು, ಅವರವರ ಅಣ್ಣ-ತಮ್ಮಂದಿರು ಬಂದು ತವರಮನೆಗಳಿಗೆ ಕರೆದುಕೊಂಡು ಹೋಗುವರು. ಆದರೆ ಈ ಪರದೇಶಿ ಸೊಸೆಯನ್ನು ಯಾರು ಕರೆದುಕೊಂಡು ಹೋಗಬೇಕು ? ಆದುದರಿಂದ ಅತ್ತೆ-ಮಾವಂದಿರು ಸೊಸೆಯನ್ನು ನಿಂದಿಸಿದರು; ಅತ್ತಿಗೆ-ನಾದಿನಿಯರು ಅವಳನ್ನು ಅಣಕಿಸಿ ಮಾತನಾಡಿದರು ಭಾವ-ಮೈದುನರು ಆಕೆಯನ್ನು ಬೀಳುಗಳೆದರು. ಗಂಡನು ಕೂಡ ಅವಳೊಂದಿಗೆ ತಿರಸ್ಕಾರದಿಂದ ನಡೆದುಕೊಂಡನು. ಆಗ ಅವಳಿಗೆ ಬಹಳ ದುಃಖವಾಯಿತು. ಆದರೆ ಅವಳ ದುಃಖವನ್ನು ಕೇಳುವವರಾರು ?

ನಿತ್ಯದಂತೆಯೇ ಸೊಸೆ ಕೆಲಸಕ್ಕಾಗಿ ಹೊಲಕ್ಕೆ ಹೋದಳು. ಮನದಲ್ಲಿ ತುಂಬಿದ ದುಃಖ ಅವಳನ್ನು ಕೆಲಸಮಾಡಗೊಡಲಿಲ್ಲ. ಆ ಸೊಸೆಯ ಕಣ್ಣಿಗೆ ಹೊಲದಲ್ಲಿ ಒಂದು ಹಾವಿನ ಹುತ್ತ ಕಂಡಿತು. ಹುತ್ತದಲ್ಲಿಯ ಹಾವಿನಿಂದ ಕಚ್ಚಿಸಿಕೊಂಡು ತಾನು ಸತ್ತುಬಿಡಬೇಕೆಂದು ಅವಳ ತಲೆಯಲ್ಲಿ ವಿಚಾರ ಮೂಡಿತು. ಕೂಡಲೇ ಆಕೆ ಹುತ್ತದ ಬಳಿಗೆ ಹೋದಳು; ದುಃಖದಿಂದ ಕಣ್ಣೀರು ಸುರಿಸುತ್ತ ಹುತ್ತದ ಬಾಯಲ್ಲಿ ಕೈ ಹಾಕಿದಳು.

ಸುಶೀಲಳೂ ದೀನಳೂ ಆದ ಆ ಸೊಸೆಯ ದುಃಖವನ್ನು ತಿಳಿದು, ಹುತ್ತದಲ್ಲಿಯ ನಾಗರಾಜನಿಗೆ ಕರುಣೆ ಉಂಟಾಯಿತು. ಆಗ ಆ ಹುತ್ತಪ್ಪ ಒಬ್ಬ ತರುಣನ ವೇಷದಿಂದ ಹೊರಗೆಬಂದು, ಅವಳ ದುಃಖದ

ಕಾರಣವನ್ನು ಕೇಳಿದ. ತನ್ನನ್ನು ಪಂಚಮಿಯ ಹಬ್ಬಕ್ಕೆ ತವರಿಗೆ ಕರೆದೊಯ್ಯುವ ಅಣ್ಣ-ತಮ್ಮಂದಿರು ಯಾರೂ ಇಲ್ಲ .... ಅದಕ್ಕಾಗಿ ಅತ್ತೆಯ ಮನೆಯಲ್ಲಿ ಎಲ್ಲರ ತಿರಸ್ಕಾರಕ್ಕೆ ತಾನು ಗುರಿಯಾಗಿದ್ದೇನೆ— ಎಂದು ಅವಳು ಹೇಳಿದಳು.

ಆಗ ಆ ತರುಣ ' ತಂಗೀ, ನೀನು ಚಿಂತೆ ಮಾಡಬೇಡ. ನಾನು ನಿನ್ನ ಅಣ್ಣ. ನನ್ನ ಹೆಸರು ನಾಗರಾಯ. ನಾನು ನಿನ್ನನ್ನು ಪಂಚಮಿಗೆ ತವರಿಗೆ ಕರೆದುಕೊಂಡು ಹೋಗುತ್ತೇನೆ ' ಎಂದು ಹೇಳಲು, ಸೊಸೆಗೆ ಬಹಳ ಸಂತೋಷವಾಯಿತು. ಮರಳಿ ಮನೆಗೆ ಹೋದಳು. ಅಂದೇ ಸಂಜೆಗೆ ನಾಗರಾಯ ಬಂದು, ತಾನು ಅಣ್ಣನೆಂದು ಹೇಳಿ, ಸೊಸೆಯನ್ನು ತವರಿಗೆ ಕರೆದುಕೊಂಡು ಹೋದನು. ನಾಗಲೋಕದಲ್ಲಿ ಆಕೆಯ ಪಂಚಮಿಯ ಹಬ್ಬ ಸಡಗರದಿಂದ ನೆರವೇರಿತು. ನಾಗಲೋಕದ ನಾಗರೆಲ್ಲರೂ ಅವಳನ್ನು ತಂಗಿಯೆಂದು ಗೌರವಿಸಿದರು.

ಪಂಚಮಿಯ ಹಬ್ಬ ಮುಗಿದೊಡನೆ, ಹೊಸ ಸೀರೆ–ಕುಪ್ಪಸಗಳನ್ನು ತೊಟ್ಟುಕೊಂಡು ಆಕೆ, ಅಣ್ಣನೊಂದಿಗೆ ಮರಳಿ ಅತ್ತೆಮನೆಗೆ ಬಂದಳು. ತಂಗಿಯನ್ನು ಕಳಿಸಿ ಅಣ್ಣನಾಗರಾಯ ತಿರುಗಿ ತನ್ನ ಊರಿಗೆ ಹೊರಟು ಹೋದ. ಅಂದಿನಿಂದ ಮನೆಯವರೆಲ್ಲರೂ ಸೊಸೆಯನ್ನು ಪ್ರೀತಿಯಿಂದ ನೋಡತೊಡಗಿದರು. ಬೇಗನೆ ಅವಳು ಗಂಡುಮಗುವಿನ ತಾಯಿಯೂ ಆದಳು.

ನಾಗಲೋಕದಿಂದ ಮರಳಿ ಬರುವಾಗ ಈ ಸೊಸೆ, ನಾಗರಾಯನ ಒಬ್ಬ ತಮ್ಮನನ್ನು ಕಂಡು ಬೇಳ್ಕೊಳ್ಳಿಕೆ ಬಂದಿದ್ದಳಂತೆ. ಅದಕ್ಕಾಗಿ ಆ ಚಿಕ್ಕನಾಗ ಕೋಪಗೊಂಡಿತಂತೆ, ಅವಳಿಗೆ ತನ್ನ ನೆನಪಾದರೂ ಇದೆಯೋ ಇಲ್ಲವೋ—ಎಂಬುದನ್ನು ತಿಳಿದುಕೊಳ್ಳಲು, ಅವಳ ಮನೆಗೆ ಬಂದು ಒಂದು ಮೂಲೆಯಲ್ಲಿ ಅಡಗಿ ಕುಳಿತುಕೊಂಡಿತಂತೆ. ಎಷ್ಟು ಹೊತ್ತು ದಾರಿಯನ್ನು ಕಾಯ್ದರೂ ಅವಳು ತನ್ನ ಸುದ್ದಿಯನ್ನೇ ತೆಗೆಯದುದನ್ನು ಕಂಡು, ಅದು ತುಂಬ ಸಂತಾಪಗೊಂಡಿತಂತೆ; ಇದರ ಮುಯ್ಯನ್ನು ತೀರಿಸಲು ಮಗುವನ್ನು ಕಚ್ಚಿ ಕೊಲ್ಲಬೇಕೆಂದು ಮನದಲ್ಲಿ ನಿರ್ಣಯಿಸಿತಂತೆ.

ಅಷ್ಟರಲ್ಲಿಯೆ ಮಗುವು ಅಳತೊಡಗಿತು. ಆಗ ಸೊಸೆ ಅದನ್ನು ತೊಡೆಯಮೇಲೆ ತೆಗೆದುಕೊಂಡು ರಮಿಸುತ್ತ " ಯಾಕೆ ಅಳುತ್ತೀ ಸುಮ್ಮನಾಗು ! ನಿನಗೆ ಬೇಕಾದ್ದನ್ನು ಕೊಡುವ ಸೋದರ ಮಾವಂದಿರು ಇದ್ದಾರೆ. ಪಂಚಮಿ ಹಬ್ಬಕ್ಕೆ ನನ್ನ ತವರಮನೆಗೆ ಹೋಗೋಣ; ಅಲ್ಲಿ ನಿನ್ನ ದೊಡ್ಡ ಮಾವ ಇದ್ದಾನೆ; ಚಿಕ್ಕ ಮಾವ ಇದ್ದಾನೆ. ಚಿಕ್ಕ ಮಾವನ ಪ್ರೀತಿಯಂತೂ ನನ್ನ ಮೇಲೆ ಬಹಳ. ನಾನು ಮರೆವುಗೇಡಿ. ಬರುವಾಗ ಆತನನ್ನು ಕಂಡು ಬರಲಿಕ್ಕೆ ಆಗಲಿಲ್ಲ. ಈ ಸಾರಿ ಪಂಚಮಿಗೆ ಹೋದಾಗ, ಆತನ ಕಾಲು ಹಿಡಿದು ತಪ್ಪು ಒಪ್ಪಿಸೋಳುತ್ತೇನೆ " ! ಎಂದು ನುಡಿದಳು. ಆಗ ಮೂಲೆಯಲ್ಲಿ ಅಡಗಿ ಕುಳಿತ ನಾಗನ ಸಿಟ್ಟು ಇಳಿದು ಹೋಯಿತು. , ಕೂಡಲೆ ಮನುಷ್ಯರೂಪದಿಂದ ತಂಗಿಯ ಬಳಿಗೆ ಬಂದು, ಅವಳು ಬೇಡಿದ್ದನ್ನೆಲ್ಲ ಕೊಟ್ಟುಹೋದ. ಅಲ್ಲದೆ ' ಪಂಚಮಿಯ ದಿನ ಒಮ್ಮೆಯಾದರೂ ತನ್ನನ್ನೂ ತನ್ನ ಕುಲವನ್ನೂ ನೆನೆಸಿದರೆ, ನಿನಗೆ ಒಳ್ಳೆಯದಾಗುವುದು ' ಎಂದು ಹೇಳಿ ಹೋದ. ಅಂದಿನಿಂದಲೂ ಆ ಸೊಸೆ ಶ್ರಾವಣ ಶುದ್ಧ ಚವತಿ–ಪಂಚಮಿಗಳಲ್ಲಿ ಹುತ್ತದ ನಾಗಪ್ಪನ ಪೂಜೆ ಮಾಡತೊಡಗಿದಳು. ಮಿಕ್ಕ ಮನೆತನಗಳ ಸೊಸೆಯಂದಿರೂ ಅವಳನ್ನು ಅನುಸರಿಸಿದರು. ನಾಗರಾಯ ಎಲ್ಲರಿಗೂ ಸುಖ-ಸಂಪತ್ತುಗಳನ್ನು ನೀಡಿದ.

ಇದೇ ಮಾದರಿಯ ಪವಾದದ ಕಥೆಗಳು ಇನ್ನೂ ಎರಡು-ಮೂರು ದೊರೆಯುವುವು. ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಪಂಚಮಿಯ ಹಬ್ಬವನ್ನು ಹೇಗೆ ನೆರವೇರಿಸುತ್ತಾರೆಂಬುದನ್ನು ನಾನೀಗ ಹೇಳುತ್ತೇನೆ.

ನಮ್ಮ ನಾಡಿನ ಹೆಣ್ಣುಮಕ್ಕಳಿಗೆ ಪಂಚಮಿಯ ಹಬ್ಬದ ಸಂಭ್ರಮವೇ ಸಂಭ್ರಮ. ಅತ್ತೆಯ ಮನೆಗೆ ಹೋದ ಹೆಣ್ಣುಮಕ್ಕಳು, ಈ ಹಬ್ಬಕ್ಕಾಗಿ ತವರ ಮನೆಗೆ ಬರಲೇಬೇಕು ಎಂತಹ ಬಡವರೇ ಇರಲಿ, ಹೆಣ್ಣುಮಕ್ಕಳನ್ನು ಪಂಚಮಿಗಾಗಿ ತವರಿಗೆ ಕರೆಯಿಸಿಕೊಂಡು, ಅವರಿಗೆ ತಂತನ್ಮ ಯೋಗ್ಯತೆಯಂತೆ ಉಡುಗೊರೆ ಸಲ್ಲಿಸುವರು.

ಶ್ರಾವಣ ಶುದ್ಧ ಚವತಿಗಿಂತ ಮೊದಲೇ ಮನೆ–ಮನೆಗಳಲ್ಲಿಯೂ ನಮ್ಮ ಜನರು ನಾಗಪ್ಪನ ಪೂಜೆ-ನೈವೇದ್ಯಗಳಿಗಾಗಿ, ಅರಳು, ಅತಳಿಟ್ಟು, ತಂಬಿಟ್ಟು, ಹುರಿಗಡಲೆ, ಎಳ್ಳಚಿಗುಳಿ– ಇವನ್ನೆಲ್ಲ ಸಿದ್ಧಪಡಿಸಿರುವರು. ಹಂಗನೂಲು-ಗೆಜ್ಜೆವಸ್ತ್ರಗಳನ್ನು ಅಣಿಗೊಳಿಸಿರುವರು. ಚವತಿಯ ದಿನ ಬೆಳಗಿನಲ್ಲಿ ಹೆಣ್ಣುಮಕ್ಕಳೆಲ್ಲರೂ ಎಣ್ಣೆ ಹೂಸಿ ನೀರೆದುಕೊಂಡು, ಹಬ್ಬದ ಉಡಿಗೆ-ತೊಡಿಗೆಗಳಿಂದ ಅಲಂಕೃತರಾಗಿ, ಗುಂಪುಗುಂಪಾಗಿ ನಾಗಪ್ಪನಿಗೆ ಹಾಲೆರೆಯಲು ಹೋಗುವರು. ಹೀಗೆ ಹಾಲೆರೆಸಿಕೊಳ್ಳುವ ನಾಗಪ್ಪನ ಮೂರ್ತಿ, ಊರಿಗೊಂದು ಇದ್ದೇ ಇರುವುದು. ನಾಗರ ಚವತಿಯ ದಿನ ಹೆಣ್ಣುಮಕ್ಕಳಿಗೆ ಉಪವಾಸ. ನಾಗಪ್ಪನ ನೈವೇದ್ಯಕ್ಕಾಗಿ ಮಾಡಿದ ತಿಂಡಿ-ತಿನಿಸುಗಳೇ ಇಂದು ಅವರ ಆಹಾರ.

ಮರುದಿನ ಪಂಚಮಿ. ಅಂದು ಕುಟ್ಟುವಂತಿಲ್ಲ; ಬೀಸುವಂತಿಲ್ಲ. ತರಕಾರಿಗಳನ್ನು ಕೂಡ ಹೆಚ್ಚುವಂತಿಲ್ಲ. ಪ್ರತ್ಯಕ್ಷ ಹಾವಿಗಷ್ಟೇ ಅಲ್ಲ, ಹಾವಿನಂತೆ ಆಕಾರವಿರುವ ಪದಾರ್ಥಗಳಿಗೂ ತೊಂದರೆಯಾಗದಂತೆ ಜನರು ನಡೆದುಕೊಳ್ಳುವರು. ಮನೆಯಲ್ಲಿ ನಾಗಪ್ಪನ ಮಣ್ಣಿನ ಪ್ರತಿಮೆಯನ್ನಾಗಲಿ, ನಾಗಪ್ಪನ ಪಟವನ್ನಾಗಲಿ, ಇರಿಸಿ– ಹಾಲೆರೆದು ಪೂಜಿಸುವರು. ಅಂದು ಮಧ್ಯಾಹ್ನ ಮನೆ ಮನೆಗಳಲ್ಲಿಯೂ ಕಡಬು-ಕಿಚಡಿಯಊಟ.

ಪಂಚಮಿಯ ಹಬ್ಬದ ಒಂದು ವೈಶಿಷ್ಟ್ಯವೆಂದರೆ, ಮನೆ-ಮನೆಗಳಲ್ಲಿಯೂ — ಸಾರ್ವಜನಿಕವಾಗಿ— ಮಂಗಳಗಿಗೂ ಕಪ್ಪೆಯ ಜೋಕಾಲಿಗಳು. ಬೀದಿಗಳ ಬಯಲಲ್ಲಿ ತಿರುಗುವ ಜೀಕಗಳು. ಹಬ್ಬದ ಉಲ್ಲಾಸದಲ್ಲಿರುವ ಹೆಣ್ಣು ಮಕ್ಕಳೂ ಗಂಡುಸರೂ ಈ ಜೋಕಾಲಿಗಳನ್ನೇರಿ ತೂಗಿಕೊಳ್ಳುವರು; ಜೀಕಗಳಲ್ಲಿ ಕುಳಿತು ಗಿಮಿಗಿಮಿ ತಿರುಗುವರು. ಪಂಚಮಿಯ ದಿನಗಳಲ್ಲಿ ನಮ್ಮ ಪ್ರತಿಯೊಂದು ಹಳ್ಳಿಯಲ್ಲಿಯೂ ಈ ಜೋಕಾಲಿ–ಜೀಕಗಳ ರಮ್ಯದೃಶ್ಯ ಕಣ್ಣಿಗೆ ಬೀಳುವುದು. ಚಿಕ್ಕ ಮಕ್ಕಳು ಕೊಬ್ಬರಿ ಬಟ್ಟಲುಗಳಿಂದ ಮಾಡಿದ ಬೋರಬೊಗರೆಗಳನ್ನು ತಿರುಗಿಸುತ್ತ ನಲಿಯುವುದು ಈ ಹಬ್ಬದ ಇನ್ನೊಂದು ವೈಶಿಷ್ಟ್ಯ.

ನಮ್ಮ ನಾಡಿನ ಮಿಕ್ಕೆಲ್ಲ ಹಬ್ಬಗಳಿಗಿಂತ ನಾಗರ ಪಂಚಮಿಯ ಹಬ್ಬ, ನಮ್ಮ ಜನರ ಜೀವನಕ್ಕೆ ತುಂಬ ಹೊಂದಿಕೊಂಡುದಾಗಿದೆ. ಪಂಚಮಿಯ ತಂಬಿಟ್ಟು, ಎಳ್ಳಚಿಗುಳಿಗಳ ಸವಿಯೂ, ಅಣ್ಣತಂಗಿ–ಅಕ್ಕ-ತಮ್ಮಂದಿರಲ್ಲಿಯ ಪ್ರೀತಿಯೂ ಪಂಚಮಿಯ ಹಬ್ಬವನ್ನು ಮತ್ತೆ ಮತ್ತೆ ನೆನಪಿಗೆ ತಂದುಕೊಡುವಂತಹವಾಗಿವೆ.

ಸಾಹಸಮೂರ್ತಿ ಸುಭಾಸ ಬೋಸರು :

(ವ್ಯಕ್ತಿತ್ವ ಚಿತ್ರ)

ಶ್ರೀ. ಗೋವಿಂದಮೂರ್ತಿ ದೇಸಾಯಿ ಬಿ.ಎ. (ಆನರ್ಸ್). ಧಾರವಾಡ

ಭಾರತದ ಆಧುನಿಕ ರಾಜಕೀಯ ನಾಯಕರಲ್ಲಿ ಸುಭಾಸಬೋಸರ ವ್ಯಕ್ತಿತ್ವವೇ ಅದೊಂದು ಬೇರೆ ಬಗೆಯದು. ಅಂತಹ ಕ್ಷಾತ್ರವೃತ್ತಿಯನ್ನು, ಇನ್ನಾರಲ್ಲಿಯೂ ನಾವು ಕಾಣುವಂತಿಲ್ಲ. ಸುಭಾಸ ಬೋಸರ ಸಾಹಸ ಜೀವನವೆಂದರೆ, ಇಂದಿನ ನಮಗೆ ಉತ್ಸಾಹಪ್ರದವಾದ ಒಂದು ಅದ್ಭುತ ಕನಸಿನಂತಾಗಿದೆ.

*

೧೯೪೧ ನೆಯ ಜಾನೇವರಿ ೨೬ರಂದು, ಕಲಕತ್ತೆಯ ಪೋಲಿಸರೆಲ್ಲಾ ವಿವಂಚನೆಗೊಳಗಾದರು. ಸುಭಾಸಚಂದ್ರ ಬೋಸರು ಇದ್ದಕ್ಕಿದ್ದ ಹಾಗೆ ತಮ್ಮ ಮನೆಯಿಂದ ಮಾಯವಾಗಿದ್ದಾರೆಂಬ ಕಲಕತ್ತೆಯ ಪೋಲಿಸರ ವರದಿ, ಭಾರತದ ಪೋಲಿಸರನ್ನೆಲ್ಲಾ ಎಚ್ಚರಿಸಿತು. ಕೂಡಲೇ ಭಾರತ ಸರಕಾರದವರು ಕಾಬೂಲ ಪೋಲಿಸರಿಗೆ ತಂತಿ ಕಳಿಸಿ, " ಭಾರತೀಯ ಕ್ರಾಂತಿಕಾರಿಯೊಬ್ಬನು ಓಡಿಹೋಗಿದ್ದಾನೆ. ಅವನು ಗಡಿದಾಟುವ ಪ್ರಯತ್ನದಲ್ಲಿರುವನು. ಕೂಡಲೇ ಅವನನ್ನು ಬಂಧಿಸಬೇಕು " ಎಂದು ತಿಳಿಸಿದರು. ಭಾರತ ಸರಕಾರದ ಈ ತಂತಿ ಕಾಬೂಲಕ್ಕೆ ಬಂದಾಗ, ಝಿಯಾಉದ್ದೀನರು ಬಿಗಿಯಾದ ಜೆಲ್ಲಣವನ್ನು ಧರಿಸಿ, ಫೇಜಕ್ಯಾಪಿನೊಂದಿಗೆ, ಬೆಳೆದ ಗಡ್ಡದ ನೇಲೆ ಕೈಯಾಡಿಸುತ್ತ ಹೋಟಲೊಂದರಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಒಮ್ಮಿದೊಮ್ಮೆಲೆ ಛದ್ಮವೇಷದಿಂದ ಕಲಕತ್ತೆಯಿಂದ ಜಾರಿ, ಪೇಶಾವರಕ್ಕೆ ಬಂದು, ಅಲ್ಲಿಂದ ಕಾಬೂಲಕ್ಕೆ ನುಸುಳಿದ ಝಿಯಾಉದ್ದೀನರೇ ಸುಭಾಸಬಾಬುಗಳೆಂದು ಕಾಬೂಲದ ಪೋಲಿಸರಿಗೆ ತಿಳಿಯಲೇ ಹೋಯಿತು. ನಾಲ್ವತ್ತುಮೂರು ದಿವಸಗಳವರೆಗೆ ಅಜ್ಞಾತವಾಸದಲ್ಲಿ, ಉತ್ತಮಚಂದರೆಂಬ ವ್ಯಾಪಾರಿಗಳೊಬ್ಬರ ಆಶ್ರಯದಲ್ಲಿ ನಿಂತು, ರಶಿಯಾ ಹಾಗು ಇಟಲಿಗಳ ರಾಯಭಾರಿಗಳೊಡನೆ ಸಂಪರ್ಕ ಬೆಳೆಸಲು ಪ್ರಯತ್ನಿಸಿದರೂ, ಕಾಬೂಲದ ಪೋಲಿಸರಿಗೆ ಸುಭಾಸರನ್ನು ಬಂಧಿಸುವುದಾಗಲಿಲ್ಲ.

ತೊಯ್ದ ಸಾಬೂನನ್ನು ಎಣ್ಣೆಗೈಯಿಂದ ಸಮುದ್ರದಂಡೆಯಲ್ಲಿ ನಿಂತು ನೀರಿಗೆಸೆದು, ಹುಡಕಲು ಹೋದರೆ ಅದು ಯಾರಿಗಾದರೂ ಸಿಕ್ಕೀತೆ ? ಮಿತ್ರರಾಷ್ಟ್ರವಾದ ಬ್ರಿಟನ್ನನ್ನು ಹತ್ತಿಕ್ಕಬೇಕೆನ್ನುವ ಶತ್ರು ರಾಷ್ಟ್ರಗಳೆಲ್ಲಾ ಸುಭಾಸರ ಬೆಂಗಾವಲಿಗೆ ನಿಂತಾಗ, ಬ್ರಿಟಿಶ್ ಸಾಮ್ರಾಜ್ಯದವರಿಗೆ ಬಾಬುಗಳು ಸಿಕ್ಕಬಹುದೆ ? ಏವೆಯಿಕ್ಕೆ ಏವೆ ತೆರೆಯುವುದರಲ್ಲಿಯೆ ಎಂಬಂತೆ, ಸುಭಾಸರು ಜರ್ಮನಿಗೆ ಹೋದರು. ಅಂದು ಜರ್ಮನಿ ಯುದ್ಧದಲ್ಲಿ ಮಿಂದು, ಬೆಂದು ಮುನ್ನಡೆಯಬೇಕೆಂದು ಹಾತೊರೆಯುತ್ತಿತ್ತು.

" ಜಗತ್ತಿನ ಇತಿಹಾಸವು ತೋರಿಸುವ ಸ್ವಾತಂತ್ರ್ಯದ ಹಾದಿ ಬೇರಾವುದೂ ಆಗದೇ ಕ್ರಾಂತಿಯದಾಗಿದೆ. ಕ್ರಾಂತಿಯಿಂದಲೇ ಭಾರತದ ಸ್ವಾತಂತ್ರ್ಯ ಸಾಧ್ಯ. ಮುಳ್ಳನ್ನು ಕಿತ್ತಬೇಕಾದರೆ ಮುಳ್ಳೇ ಬೇಕು. ನಾವು ಭಿಕ್ಷೆ ಬೇಡಿಸರೆ ನಮ್ಮ ಸ್ವಾತಂತ್ರ್ಯವೆಂದೂ ನಮಗೆ ದೊರೆಯಲಾರದು. ಗುಂಡಿಕ್ಕಿ ಕೊಲ್ಲಬೇಕೆಂದು ಕೋವಿಯನ್ನು ಎದೆಗೆ ಗುರಿಯಿಟ್ಟು ನಿಂತಾಗ, ಅಹಿಂಸೆಯನ್ನು ಬೋಧಿಸಿದರೆ ಅವನು ಕೇಳಬಹುದೆ ?" ಎಂಬ ವಿಚಾರಗಳನ್ನು ತಲೆತುಂಬಾ ತುಂಬಿಕೊಂಡು, ಬ್ರಿಟಿಶರ ವಿರುದ್ಧ ಹೋರಾಡಲು ಸುಭಾಸರು ಸಿದ್ಧತೆಗಳನ್ನು ಮಾಡಿ, ಭಾರತದಲ್ಲಿ ನಿಂತರೆ ಈ ಕಾರ್ಯವು ಸಾಧ್ಯವಾಗದೆಂದು ಪಲಾಯನಸೂತ್ರಕ್ಕಂಟಿಕೊಂಡರು.

' ಕಬ್ಬಿಣದ ಕಡಲೆಯನ್ನು ತಿಂದು ಯಾರಾದರೂ ಬದುಕಬಹುದೆ?' ಎಂದು ಬ್ರಿಟಿಶರು ನಗುತ್ತಿರುವಾಗ ' ಕಬ್ಬಿಣದ ಕಡಲೆಯೇಕೆ ? ಕಾಲ ಕೂಟದ ಬಟ್ಟಲವನ್ನೂ ಎತ್ತಿ ಕುಡಿದು ಬದುಕಿ ನಿಂತಿದ್ದೇನೆ ನೋಡಿರಿ ' ಎಂದು, ಬ್ರಿಟಿಶರ ವಿರುದ್ಧ ಯುದ್ಧವನ್ನೇ ಸಾರಿದರು ಸುಭಾಸಬಾಬುಗಳು !

ಭಾರತದ ಪೋಲಿಸರು ಸುಭಾಸಬಾಬುಗಳನ್ನು ಬಂಧಿಸದೆ ನಿರಾಶರಾದಾಗ, ಬ್ರಿಟಿಶ್ ಸರಕಾರವು ಮುಂದೇನು ಮಾಡಬೇಕೆಂದು ಚಿಂತಿಸುತ್ತಿರುವಾಗ, ಬರ್ಲಿನ್-ರಶಿಯಾ ಬಾನುಲಿಯಲ್ಲಿ ಸುಭಾಸರು ಮಾತನಾಡುತ್ತ "ನನ್ನನ್ನು ಭಾರತದಿಂದ ಹೊರಡದಂತೆ ತಡೆಯಲಾರದ ಬ್ರಿಟಿಶ್ ಸಾಮ್ರಾಜ್ಯಶಾಹಿ,ನಾನು ತಿರುಗಿ ಭಾರತಕ್ಕೆ ಬರುವುದನ್ನು ತಡೆಯಲಾರದು. ಸರಿಯಾದ ಸಮಯಕ್ಕೆ ನಾನು ಭಾರತಕ್ಕೆ ಬಂದು ನನ್ನ ದೇಶಬಾಂಧವರನ್ನು ಕೂಡಿಕೊಳ್ಳುವೆ " ಎಂದು ಹೇಳಿದಾಗ, ಅವರು ಎಲ್ಲಿರುವರೆಂದು ಜಗತ್ತಿಗೆ ತಿಳಿಯಿತು. ಎಲ್ಲಿಯ ಭಾರತ ? ಎಲ್ಲಿಯ ಬರ್ಲಿನ್ ? ಸುಭಾಸರು ಅದಾಗಲೇ ಇಟಲಿ ಹಾಗು ಜರ್ಮನಿಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದರು.

ಭಾರತದಿಂದ ಪಠಾಣ ವೇಷಧರಿಸಿ ಕಾಬೂಲಿಗೆ ಹೋದ ಸುಭಾಸರು, ಜರ್ಮನ್ನನೊಬ್ಬನ ಸಾಸ್ ಪೋರ್ಟಿನಲ್ಲಿ ಜರ್ಮನಿಗೆ ಹೋದರು. ಹೋಗುವಾಗ ಹಾದಿಯಲ್ಲಿ, ರಶಿಯದಲ್ಲಿಳಿದು ಭಾರತೀಯ

ಸ್ವಾತಂತ್ರ್ಯಾಂದೋಲನಕ್ಕೆ ಸಹಾಯನೀಡಬೇಕೆಂದು ಸ್ಟಾಲಿನ್ನರನ್ನು ಕೇಳಿದರೆಂಬ ವದಂತಿ ಮಾತ್ರ ಇದೆ. ಸುಭಾಸ ಬಾಬುವಿನ ದೇಶಾಂತರ ಗಮನದ ಕಾರಸ್ಥಾನದಲ್ಲಿ ಕಮ್ಯುನಿಸ್ಟರ ಅಂಗವಿತ್ತೆಂದು ಅನೇಕರು ಹೇಳುತ್ತಾರೆ.

ಸುಭಾಸಬಾಬುಗಳಿಗೆ ಜರ್ಮನಿಯು ಆಶ್ರಯವನ್ನಿತ್ತಿತಲ್ಲದೆ, ಸ್ವಾಗತವನ್ನು ಕೋರಿ ಸಹಕಾರದ ಆಶ್ವಾಸನವನ್ನೂ ಕೊಟ್ಟಿತು. ಅವರಿಗೆ ಜರ್ಮನ್ ಸರಕಾರದಿಂದ ಒಂದು ಸುಂದರವಾದ ವಿಮಾನವು ಕೊಡಲ್ಪಟ್ಟಿತ್ತಲ್ಲದೆ, ಒಂದು ಟ್ರಾನ್ಸ್‌ಮಿಟರನ್ನೂ ಕೊಡಲಾಯಿತು. ಅವರು ಟ್ರಾನ್ಸ್‌ಮಿಟರಿನಿಂದ ಯುದ್ಧದ ವಿವರಗಳನ್ನು ಕೇಳುತ್ತಿದ್ದರು. ಆ ವಿಮಾನದಿಂದ ಸುಭಾಸರು ಜರ್ಮನಿ, ಇಟಲಿ ಹಾಗು ರಶಿಯಾ ಗಳನ್ನೆಲ್ಲಾ ಸುತ್ತಿದರಲ್ಲದೆ, ಸ್ಟಾಲಿನ್‌ಗ್ರಾಡ್ ಯುದ್ಧವು ನಡೆದಾಗ ಅದನ್ನು ನೋಡಲು ಹೋಗಿದ್ದರಂತೆ.

ಹೀಗೆ ಜರ್ಮನಿಯ ಆತಿಥ್ಯದಲ್ಲಿ ಸುಭಾಸರು ದಿನಗಳನ್ನು ಕಳೆಯುತ್ತಿರುವಾಗ, ಒಂದು ದಿವಸ ಬರ್ಲಿನ್–ಹೆಂಬುರ್ಗ್ ನಗರಗಳ ಮಧ್ಯದ ಚಿಕ್ಕ ಸೈನಿಕಶಿಬಿರವೊಂದಕ್ಕೆ ಜರ್ಮನಿಯ ಸರ್ವಾಧಿಕಾರಿ ಹಿಟ್ಲರರು ಸುಭಾಸರನ್ನು ಆಹ್ವಾನಿಸಿದರು. ಸುಭಾಸರು ಬಂದೊಡನೆಯೇ ಅವರಿಗೆ ಅಭೂತಪೂರ್ವ ಸ್ವಾಗತವನ್ನು ಕೋರಲಾಯಿತಲ್ಲದೆ, ಸೈನಿಕರ ಗೌರವರಕ್ಷೆಯಲ್ಲಿ ' ಡೆಪುಟ ಫ್ಯೂರರ್ ಆಫ್ ಇಂಡಿಯಾ ' ಎಂಬ ಬಿರುದನ್ನು ದಯಪಾಲಿಸಲಾಯಿತು. ಅಲ್ಲಿ ಜರ್ಮನಿಯ ಸ್ನೇಹ–ಸಹಕಾರಗಳು ಬಾಬುಗಳ ಬೆಂಬಲಿಕ್ಕಿವೆಯೆಂದು ಸ್ಪಷ್ಟಪಡಿಸಲಾಯಿತು. ಅಂದು ಬರ್ಲಿನ್ ನಗರದ ಪತ್ರಿಕೆಗಳೆಲ್ಲಾ ಸುಭಾಸರ ಚಿತ್ರವನ್ನು ಪ್ರಕಟಿಸಿ, ಹಿಟ್ಲರನೊಡನೆ ಆದ ಅವರ ಸಂದರ್ಶನವನ್ನು ಕುರಿತು ಬರೆದಿದ್ದುವು.

ಮುಂದೆ ಹಿಟ್ಲರನೊಡನೆ ಜರ್ಮನಿಯಲ್ಲಿ ಅಂದು ನಡೆದ ಸಂಗ್ರಾಮ ಕ್ಷೇತ್ರಗಳನ್ನೆಲ್ಲ ಸಂದರ್ಶಿಸಿ ಬಂದು, ಅಲ್ಲಿಯೇ ಹಿಂದ್ ಫೌಜನ್ನು ಕಟ್ಟಿದರು. ಭಾರತೀಯ ನಿವಾಸಿಗಳೂ ಹಾಗು ಲಿಬಿಯಾ ಮೊದಲಾದ ದೇಶಗಳಿಂದ ತಂದ ಯುದ್ಧ ಕೈದಿಗಳೂ ಆ ಫೌಜಿನಲ್ಲಿ ಸೇರಿದ್ದರು. ಆ ಫೌಜು ಡ್ರೆಸ್‌ಡೆನ್ನಿನಲ್ಲಿ ಇದ್ದಿತೆಂದೂ, ಅದರಲ್ಲಿ ಎಂಟು ಬಟಾಲಿಯನ್ನು ಗಳು ಹಾಗು ಹನ್ನೆರಡು ಸಾವಿರ ಸೈನಿಕರು ಇದ್ದರೆಂದೂ ಹೇಳಲಾಗುತ್ತಿದೆ.

ಬರ್ಲಿನಿನಿಂದ ಸುಭಾಸರು ನೇರವಾಗಿ ಸಿಂಗಾಪುರಕ್ಕೆ ಬಂದರು. ಸಿಂಗಾಪುರವು ಅದಾಗಲೇ ಬ್ರಿಟಿಶರ ಕೈಬಿಟ್ಟು ಜಪಾನಿಯರ ವಶವಾಗಿತ್ತು. ಆ ನೆಲದಲ್ಲಿ ಬಂದುನಿಂತು ಸುಭಾಸರು ಸೈನ್ಯವನ್ನು ಕಟ್ಟಿದರು. ಸುಭಾಸರ ಮುಖ್ಯ ಮಂತ್ರಿತ್ವದಲ್ಲಿ 'ಆಜಾದ್ ಹಿಂದ್' ತಾತ್ಕಾಲಿಕ ಸರಕಾರವೂ ಸ್ಥಾಪನೆಯಾಯಿತು. ಅಂದಮಾನ್ ಮತ್ತು ನಿಕೋಬಾರ್ ದ್ವೀಪಗಳು, ಜಪಾನಿನಿಂದ ಈ ಹೊಸ ಸರಕಾರಕ್ಕೆ ಕೊಡಲ್ಪಟ್ಟುವು. ಆ ದ್ವೀಪಗಳಿಗೆ 'ಶಾಹೀದ್ ಸ್ವರಾಜ್ಯ' ಎಂಬ ಹೊಸ ಹೆಸರನ್ನು ಇಡಲಾಯಿತು.

೧೯೪೩ ಅಕ್ಟೋಬರ್ ೨೧ ನೆಯ ದಿನಾಂಕವು, ಭಾರತೀಯ ಸ್ವಾತಂತ್ರ್ಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ದಿನವಾಗಿದೆ. ಅಂದು ಪೂರ್ವ ಏಶಿಯದ ವೀರಭಾರತೀಯರು, ವಿದೇಶಗಳಲ್ಲಿಯ ವಿದ್ಯೋಹಿಗಳು ಸಿಂಗಾಪುರದಲ್ಲಿ ಒಂದುಗೂಡಿದ್ದರು. ಸಯಾಮ್, ಇಂಡೋಚೀನಾ, ಜಾವಾ, ಫಿಲಿಪಾಯಿನ್, ಜಪಾನ್....ಎಲ್ಲ ಕಡೆಗಳಿಂದಲೂ ಭಾರತೀಯ ಪ್ರತಿನಿಧಿಗಳು ಬಂದು ಕೂಡಿದ್ದರು. ಸ್ವಾತಂತ್ರ್ಯದ ಕಡೆಗೆ ಮುಂದುವರೆಯುವುದಕ್ಕಾಗಿ ತಮ್ಮ ಸಂಘಟನೆಗೆ ಮೂರ್ತ ಸ್ವರೂಪನನ್ನು ಕೊಡಲು ಅಂದವರು ಸಮ್ಮಿಲಿತರಾಗಿದ್ದರು. ಮುಂದ ಎರಡೇ ದಿನಸಗಳಲ್ಲಿ ಈ ಹೊಸ ಹಿಂದ್‌ಸೇನೆ, ಬ್ರಿಟನ್ ಮತ್ತು ಅಮೇರಿಕೆಯ ವಿರುದ್ಧ ಯುದ್ಧವನ್ನು ಸಾರಿತು.

ಆಜಾದ್ ಹಿಂದಸೇನೆ ಜಾತೀಯ ಐಕ್ಯಕ್ಕೆ ಒಂದು ಆದರ್ಶವಾಗಿತ್ತು. ಮಲಯಾ-ಬ್ರಹ್ಮದೇಶಗಳಲ್ಲಿಯ ಭಾರತೀಯರ ಪ್ರಾಣ ವಿತ್ತಗಳ ರಕ್ಷಣೆ, ದೀನರ ನಿರ್ಭಾಗ್ಯರ ವಿಶೇಷತಃ ಶ್ರಮಜೀವಿಗಳ ಹಿತ ರಕ್ಷಣೆ — ಮೊದಲಾದ ಸಮಾಜ ಸೇವೆಯ ಕಾರ್ಯಗಳನ್ನೂ ಆಜಾದ್ ಹಿಂದ ಸರಕಾರವು ದಕ್ಷತೆಯಿಂದ ನಿರ್ವಹಿಸಿತು.

ಶತ್ರುರಾಷ್ಟ್ರಗಳ ಜೊತೆ ಈ ಸರಕಾರವು ಯುದ್ಧವನ್ನು ಸಾರಿದೊಡನೆ, ಯುದ್ಧ ನಿರ್ವಹಣೆಗಾಗಿ ತನ್ನ ಕಾರ್ಯಾಲಯವನ್ನು ೧೯೪೪ ನೆಯ ಜನೇವರಿಯಲ್ಲಿ ರಂಗೂನಕ್ಕೆ ತರಲಾಯಿತು. ರಂಗೂನಕ್ಕೆ ಬಂದೊಡನೆಯೇ 'ದಿಲ್ಲಿ ಚಲೋ' ದಂಡಯಾತ್ರೆಯ ಯೋಜನೆಗಳೆಲ್ಲಾ ಸಿದ್ಧವಾಗಿ, ದಿಲ್ಲಿಯ ಕಡೆಗೆ ನುಗ್ಗಿಹೋಗುವ ಪಯಣದ ಸಿದ್ಧತೆಗಳೆಲ್ಲಾ ಪ್ರಾರಂಭವಾದುವು.

ಪಾರತಂತ್ರ್ಯದಲ್ಲಿನ್ನದ ತಮ್ಮ ಮಾತೃಭೂಮಿ ಹತ್ತಿರ ಹತ್ತಿರ ವಾದಂತೆ, ಹಿಂದ್ ಸೈನಿಕರ ಉತ್ಸಾಹ ಹೆಚ್ಚುತ್ತಿತ್ತು. ಅವರ ನೋವು ನಲಿವು, ಹಸಿವೆ–ಬಾಯಾರಿಕೆಗಳು ಎಲ್ಲವೂ ಮಾಯವಾಗಿ, ಅವರ ಹೆಜ್ಜೆಗೆ ಹಾಗು ಹಾಡುವ ಸ್ವಾತಂತ್ರ್ಯಗೀತೆಗೆ ಒಂದು ಸ್ವರ್ಗೀಯ ಶಕ್ತಿಯನ್ನು ತಂದುಕೊಟ್ಟಿದ್ದಿತು. ಆಜಾದ್‌ಹಿಂದ್ ಸೇನೆಯ ಅಭಿಮಾನಶಾಲಿ ಆಜಾದ್‌ದಳವು, ವೀರಾಗ್ರಣಿ ಶಹಾನವಾಜರ ನೇತೃತ್ವದಲ್ಲಿ ಭಾರತೀಯ ಗಡಿಯನ್ನು ಸಮೀಪಿಸಿತು.

' ಇಗೋ, ಇದೇ ನನ್ನ ಮಾತೃಭೂಮಿ ಭಾರತದ ಗಡಿ !' ಎಂದು ಯಾರೋ ಕೂಗಿದರು.

ಎದುರಿಗಿದ್ದ ಮುಳ್ಳುತಂತಿಯ ಬೇಲಿ ತನ್ನನ್ನೆಲ್ಲಾ ಪರತಂತ್ರರನ್ನಾಗಿ ಮಾಡಿದೆಯೆಂದು ಸೇನಾನಿಗಳು ಕೂಗಿಕೊಂಡರು. ಬೇಲಿಯ ಈ ಕಡೆ ವಿದೇಶ; ಆ ಕಡೆ ಸ್ವದೇಶ ! ಬೇಲಿಯನ್ನು ಕಿತ್ತಿ ಭಾರತವನ್ನು ಬಿಡುಗಡೆ ಮಾಡುವುದೇ ಈ ಸೈನಿಕರು ಮಾಡಿದ ಬಲಿದಾನದ ಪ್ರತಿಜ್ಞೆಯಾಗಿತ್ತು. ಅರೆಹೊಟ್ಟೆಗಳಿಂದ ಹಾಗು ಬರಿದೇಹದಿಂದ ನರಳುತ್ತಿದ್ದರೂ ಆ ಸೈನಿಕರು, ಅಡವಿಯ ಗಡ್ಡೆಸೊಪ್ಪುಗಳನ್ನು ತಿಂದು ಭಾರತ-ಸ್ವಾತಂತ್ರ್ಯಕ್ಕಾಗಿ ಟೊಂಕಕಟ್ಟಿ ನಿಂತಿದ್ದರು.

ಆ ಪಾರತಂತ್ರ್ಯದ ಬೇಲಿಯನ್ನು ಸೈನಿಕನೊಬ್ಬನು ಹರಿದೊಡನೆ ಎಲ್ಲ ಸೈನಿಕರೂ ಭಾರತದ ನೆಲದಲ್ಲಿ ನುಗ್ಗಿದರು. ಕೆಲವರು ಇಲ್ಲಿಯ ಮಣ್ಣನ್ನೆತ್ತಿ "ಇದು ನನ್ನ ದೇಶದ ಮಣ್ಣು" ಎಂದು ನಲಿದಾಡಿದರೆ, ಮತ್ತೆ ಕೆಲವರು ಅಲ್ಲಿದ್ದ ಹೂಗಳನ್ನು ಕೊಯ್ದು "ಇವು ನನ್ನ ದೇಶದ

ಹೊಗಳು" ಎಂದರು. "ನಾವು ದಿಲ್ಲಿಯ ಕಡೆ ಹೊರಟಿದ್ದೇವೆ" ಎಂದರು ಅನೇಕ ಸೇನಾನಿಗಳು.

ಅಂಧಕಾರವೆಲ್ಲಾ ಕತ್ತರಿಸಿ, ಬೆಳಗು ಹರಿದು, ಬೆಟ್ಟದುದಿಗಳಲ್ಲಿ ಹೊಂಬೆಳಕು ಹಣೆಯಿಕ್ಕಿದಾಗ ಹಕ್ಕಿಗಳು ಹಾರಾಡಿದುವು. ಬಹುಶಃ ಅವು ಸ್ವಾತಂತ್ರ್ಯ ಗೀತೆಯನ್ನೇ ಹಾಡಿರಬಹುದು. ಬಯಲಿನಲ್ಲಿ ಕಹಳೆ ಮೊಳಗಿದಾಗ ಸೈನಿಕರೆಲ್ಲ ಒಂದೆಡೆ ನೆರೆದರು. ನೇತಾಜಿ ಸುಭಾಸಚಂದ್ರ ಬೊಸರು ಅಲ್ಲಿಗೆ ಆಗಮಿಸಿದರು.

"ನೇತಾಜೀಕಿ ಜೈ!"....ಎಂದು ಕೂಗಿದ ಆಜಾದ್ ಸೇನಾನಿಗಳ ಕೂಗು ದಿಕ್ಕುಗಳನ್ನು ಪ್ರತಿಧ್ವನಿಸಿ ಸ್ವಾತಂತ್ರ್ಯವೀರನಿಗೆ ಸ್ವಾಗತಕವನ್ನು ಕೋರಿದುವು. ಕ್ಯಾಪ್ಟನ್ ಶಹಾನವಾಜರು ಆಜಾದ್ ಹಿಂದ್ ಸರಕಾರದ ಧ್ವಜವನ್ನು ಏರಿಸಿದರು. ಸ್ವಾತಂತ್ರ್ಯದಿಂದ ತಾವು ಭಾರತದ ಮಣ್ಣನ್ನಾದರೂ ಮುಟ್ಟಿದೆವಲ್ಲಾ – ಎಂದು ಚಿನ್ನವನ್ನು ಪಡೆದಷ್ಟು ಸಮಾಧಾನವಾಯಿತು ಆ ಸೈನಿಕರಿಗೆ!

ಈ ಹೋರಾಟವನ್ನು ಕುರಿತು ಸುಭಾಸರು ಮಾತನಾಡುತ್ತ "೧೯೪೪ನೆಯ ಫೆಬ್ರುವರಿ ೪ ರಂದು ನಾವು ಆಯುಧಪಾಣಿಗಳಾಗಿ ದಾಳಿಯನ್ನು ಆರಂಭಿಸಿದೆವು. ಅಂದಿನಿಂದ ಇಂದಿನವರೆಗೆ ನಮ್ಮ ದಂಡಿನ ಒಂದೊಂದು ಹೆಜ್ಜೆಯೂ ನೆತ್ತರಿನ ಕಾಲುದಾರಿಯಲ್ಲಿ ಮೂಡಿದೆ. ನಾವು ನಮ್ಮ ರಕ್ತನಾಳಗಳ ಬತ್ತಿಗಳಿಂದ ತಾಯಿಯ ಆರತಿಯನ್ನು ಅಣಿಗೊಳಿಸಿದ್ದೇವೆ." ಎಂದು ಹೇಳಿದಾಗಿನ ಅವರ ಕೆಚ್ಚನ್ನು ಯಾರೂ ಗುರುತಿಸಬಹುದು.

ಅಲ್ಲಿಂದ ಇಂಫಾಲದವರೆಗೂ ಬೋಸರ ಸೈನ್ಯ ನುಗ್ಗಿತು. ಅಲ್ಲಿ ಅಯಶಸ್ಸು ದೊರೆಯಿತು. ಮುಂದೆ ಬ್ರಿಟಿಶರು ರಂಗೂನನ್ನೂ ಮರಳಿ ವಶಪಡಿಸಿಕೊಂಡಾಗ, ಆಜಾದ್ ಹಿಂದ್ ಸೇನೆಯು ಹಿಂದೆ ಸರಿಯಿತು. ಅಲ್ಲಿಂದ ಸುಭಾಸರು ಹೊಸ ಯೋಜನೆಗಾಗಿ ವಾಯುಮಾರ್ಗದಿಂದ ಟೋಕಿಯೋಕ್ಕೆ ಹೋದರು; ಹೋಗುವಾಗ ದಾರಿಯಲ್ಲಿ, ೧೯೪೫ ಆಗಸ್ಟ್ ೧೮ ರಂದು, ಫಾರ್ಮೋಸಾದ ಬಳಿ ತಾಯಿಹೋಕದ ಹತ್ತಿರ, ವಿಮಾನ ಅಪಘಾತದಿಂದ ಗಾಯವಾಗಿ ಅವರು ತೀರಿಕೊಂಡರೆಂಬ ಸುದ್ದಿ ಬಂದಿತು. ಅದೇ ಸುಭಾಸರ ಕೊನೆ. ಆ ಕೊನೆಯೇ ಆಜಾದ್ ಹಿಂದ ಸೇನೆಗೂ ಪೂರ್ಣವಿರಾಮವನ್ನಿತ್ತಿತು.

ವಿದೇಶೀಯರ ದೃಷ್ಟಿಯಲ್ಲಿ ಸುಭಾಸ ಬಾಬುಗಳು ಕ್ರಾಂತಿಕಾರರು. ಭಾರತದ ಇತ್ತೀಚಿನ ಇತಿಹಾಸದಲ್ಲಿ, ಈ ರೀತಿ ದೇಶದಿಂದ ಓಡಿಹೋಗಿ ಪರದೇಶದಲ್ಲಿ ದಂಡುಕಟ್ಟಿ ಆಳರಸರ ಜೊತೆ ಯುದ್ಧಹೂಡಿದ ಉದಾಹರಣೆಗಳೇ ವಿರಳ. ಏಕೈಕವೀರರಾಗಿ ಹೋರಾಡಿದ ಸುಭಾಸರು ನಮ್ಮಿಂದ ಕಣ್ಮರೆಯಾಗಿದ್ದರೂ, ಅವರ ವೀರ-ಸಾಹಸಚರಿತ್ರೆಯು ನಮ್ಮ ಮಧ್ಯೆ ಇನ್ನೂ ಬದುಕಿನಿಂತಿವೆ; ಮುಂದೆಯೂ ನಿಲ್ಲಲಿದೆ. ಸುಭಾಸ ಬಾಬುಗಳು ಸೋತರೂ ಗೆದ್ದಂತೆ, ಬ್ರಿಟಿಶರು ಗೆದ್ದರೂ ಸೋತಂತೆ! ಸುಭಾಸಬೋಸರು ರಕ್ತಕ್ರಾಂತಿ ಮಾಡಿ ಬ್ರಿಟಿಶರನ್ನು ಭಾರತದಿಂದ ಓಡಿಸಲು ಪ್ರಯತ್ನಮಾಡಿದರು. ಅವರ ಪ್ರಯತ್ನ ವಿಫಲವಾದರೂ, ಅವರ ಉದ್ದೇಶ ಅವರು ಕಣ್ಮರೆಯಾದಮೇಲಾದರೂ ಸಾಧಿಸಿತಲ್ಲವೆ? ○

ಬಂಗಾರೆವ್ವ

ಜೀ. ಬಿ. ಬಿ. ಮಹಿಸವಾಡಿ, ರಾಜಾರಾಮ ಕಾಲೇಜ, ಕೊಲ್ಹಾಪೂರ

ಹಿಂಡಃ ಹಿಂಡಃ
ನಮ್ಮವ್ವಾ ಎಮ್ಮೆವ್ವಾ-
ಸ್ವಾರಿತುಂಬ ಹಾಲ ಹಿಂಡವ್ವಾ!
ಬಂಗಾರೆವ್ವಾ
ನಮ್ಮ ಮನಿ ಸಿಂಗಾರೆವ್ವಾ
ಹಿಂಡ ಹಿಂಡವ್ವಾ ನಮ್ಮವ್ವಾ!
ಚೆಜ್ಜಿ ಗುಗ್ಗರಿ ಹಾಕತೇನು
ಹತ್ತೀಕಾಳ ತರಸತೇನು
ಮುಸರಿ ಮುರಳಿ ತಿನಸತೇನು
ಪಸರ ಮೇವಾ ಹೊರಸತೇನು
ಹಿಂಡ ಹಿಂಡವ್ವಾ ಹಾಲ ಹಿಂಡವ್ವಾ!
ದಿಬ್ಬಗಿಬ್ಬ ಆಗೇತೇನೋ
ದಾರಾಮಾಡಿಸಿ ಕಟ್ಟತೇನು!
ಬನ್ನಿಮರದವ್ವಗ
ನಮ್ಮ ಮಸಿಯವ್ವಗ
ಜೋಡಕಾಯಿ ಒಡಸತೇನು!
ದ್ಯಾವಣ್ಣ ಮುತ್ತ್ಯಾಗ
ಬಾಳಿಹಣಿಗಿ ಹಚ್ಚತೇನು!
ಊರ ಬಸವಣ್ಣ-ಗಮ್ಮೀಸಲತುಪ್ಪ ಮುರಿತೇನು
'ಮ್ಯಾಲದೀಪ' ಉರಿತೇನು!
ಹಿಂಡ ಹಿಂಡವ್ವಾ
ಬಂಗಾರೆವ್ವಾ ಸಿಂಗಾರೆವ್ವಾ
ಸ್ವಾರಿ ತುಂಬ ಹಾಲಹಿಂಡವ್ವಾ!
ಮಕ್ಕಳ ಮರಿ
ಹಾಲಕುಡದ ಸೊಕ್ಕಲಿ!
ಆಯಿಮುತ್ತ್ಯಾಗ
ಮಜ್ಜಿಗೆರೆ ದಕ್ಕಲಿ!
ಹೈನ ತಿಂದ
ಮನಿ ಮಂದಿ
ಹೊಟ್ಟತಣ್ಣಗಾಗಲಿ!
ರೊಟ್ಟಿ ನುಚ್ಚಾ
ಅನ್ನಾ ಬಾನಾ
ಹೈನ ಜೋಡಿ
ರುಚಿ ಮಾಡಿ
ಪಂಚ ಪಕ್ವಾನ್ನಾಗಲಿ!
ತಿಂದ ಕೂಳ
ವೈಗ್ಹತ್ತಿ
ಬಾಳ ಅಮೃತಾಗಲಿ!
ಹಿಂಡ ಹಿಂಡವ್ವಾ ನಮ್ಮವ್ವಾ ಎಮ್ಮೆವ್ವಾ-
ಸ್ವಾರಿ ತುಂಬ ಹಾಲ ಹಿಂಡವ್ವಾ!
ಬಂಗಾರೆವ್ವಾ ನಮ್ಮ ಮನಿ ಸಿಂಗಾರೆವ್ವಾ
ಹಿಂಡ ಹಿಂಡವ್ವಾ ನಮ್ಮವ್ವಾ ಎಮ್ಮೆವ್ವಾ

ನವ ಮನ್ವಂತರ!

(ನಾಟ್ಯ ಛಟಾ)

ಶೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

[ಹೆಸರಿಗೆ ಮಾತ್ರ ತಾಲೂಕಾದ ಆ ಊರಲ್ಲಿ ಗೋಪಣ್ಣನವರು ನಿವೃತ್ತ ಶಿಕ್ಷಕರು. ಕನ್ನಡದಷ್ಟೇ ನೇವಾಣಿಯಲ್ಲಿಯೂ ಅವರಿಗೆ ಗತಿ ಇದೆ. ತೀರ ಮೊನ್ನೆ ಮೊನ್ನೆ ಭಗೀರಥ ಯತ್ನ ಹೂಡಿ ಮ್ಯಾಟ್ರಿಕ್ ಅದದ್ದು ಎಲ್ಲರ ನಾಲಗೆಯ ಸೇಲಿನ ರಂಜಕ ವಿಷಯವಾಗಿದೆ. ಸರಸ್ವತಿಯ ಇಷ್ಟೊಂದು ಖಟ್ಟಾ ಉಪಾಸಕರಿದ್ದರೂ, ಅವರಿಗೆ ಹಿಂದಿನ ತಲೆಮಾರಿನ ಆಚಾರ-ವಿಚಾರಗಳಲ್ಲಿ ಅಪೂರ್ವ ಶ್ರದ್ಧೆ. ಅವರ ಸದಾಚಾರಕ್ಕೆ (?) ತಕ್ಕಂತೆ ದೇವರೂ ಅವರಿಗೆ ಕೌಟುಂಬಿಕ ಭಾಗ್ಯ ದಯೆ ಪಾಲಿಸಿರುವನೆನ್ನೆಂದು ನೆರೆಹೊರೆಯವರ ಅಭಿಮತ. ಉಭಯ ಭಾಷಾ ಪಾಂಡಿತ್ಯದ ಸೋಂಕಿರದಿದ್ದರೂ ಗೋಪಣ್ಣನ ಮಗ ಬಂಡಿ ತನ್ನ ದೈವ ತಾನೇ ತೆಗೆದುಕೊಂಡಂತೆ ಸರಕಾರಿ ಹುದ್ದೆಯೊಂದರಲ್ಲಿರುವ. ಮುಂಜಾವಿನ ಬಿಸಿಲು ಕೊಂಚ ಚುರು ಚುರು ಎನಿಸುವ ಕಾಲಕ್ಕೆ ಮಾಸ್ತರರ ಗೆಳೆಯ ವತನದಾರ ನಾಥವರಾಯರು ತಮ್ಮ ದೌಲತ್ತಿನ ಠೀವಿಯಲ್ಲಿ ಮನೆಯ ಬಳಿ ಬರುವುದನ್ನು ಕಂಡು ಸಾವರಿಸಿಕೊಂಡು.....]

(ಆದರದ ಸರಣಿಯಲ್ಲಿ) ಬರ್ರಿ ಬರ್ರಿ ಮಾಧವರಾವ, ಏನು ಛಿಟ್ಟಿಯೊ ಏನು ಮಣ್ಣೋ ನನ್ಮಾದು ನಿನ್ಮುನು! ಹಿಂದ, ಮೂಲೀಮನಿ ದೇಶಪಾಂಡೆತ ಮನಿ ಲಗ್ನದ ಕಾಲಕ್ಕ ಆದ ಛೇಟ್ಟಿನಷ್ಟ ಛೆಟ್ಟಿ. ತಿರುಗಿ ಕೇಳಬ್ಯಾಡ್ರಿ. ಏನು ಮೋಜರೆಪಾ ಅಂದಿಂದು! ನೆನಸಿಕೊಂಡ ಸರತಿಗೆ ಬಿದ್ದು ಬಿದ್ದು ನಗೋ ಆಟ. ಅಡೀಚ ಹಜಾರ್ ವರದಕ್ಷಿಣೆ ಸಿಕ್ಕರೂ ಕಲಿತ ವೆದ್ದ (?) ಅಳಿಯ, ಹುಚ್ಚು ಹುಚ್ಚು ಬಡಿದಾ-ಹೆಂಗಸ ಮಾತು ಕೇಳಿ. ಸ್ಯಾಂಡೊ ವಾಚ್ ಕೊಡಿಸಿದ್ದರೂ ಒಂದು ಕೊರಳ ಚೇನಿನ ಸಲುವಾಗಿ ಸೆಟಗೊಂಡು ಕೂತು, ಲಗ್ನದಂಥಾ ಅಗ್ನದ ಮಾನ್ಯಾಗ, ಹೋದ-ಬಂದವರಿಗೆಲ್ಲಾ ಝುಣಕಾ ಅನ್ನಾ ಡಾಕೆಸಿದಾ ಪುಣ್ಯಾತ್ಮ! ಮುಂದ ಮೂರು ದಿನ ಖಾಟೇ ಪ್ರಕಾರ ಪಂಚಭಕ್ಷ್ಯ ಪರಮಾನ್ನ ಆದರೇನು? ಆಡಿಕೆಗೆ ಹೋದ ಮಾನ ಆನೇ ಕೊಟ್ಟರೂ ಬಾರದಾಂಗ ಆತು!

(ಸಲುಗೆಯಲ್ಲಿ....) ಹಾಂ, ಚಂಟೀ ಬಿಚ್ಯೇ ಬಿಟ್ಟರಾ? ನಾನೂ ನಾಶೀಪುಡಿ ಡಬ್ಬಿ ಬಿಟ್ಟೆ. (ಇಬ್ಬರೂ ತಾಬೂಲ ಮೆಲ್ಲುವಾಗ) ಏನು ಶಿಕ್ಷಣ ಕ್ಷೇತ್ರದೇಪಾ ಇಂದಿನದು! ಗೊಂದಲಕ್ಕ ಗೊಂದಲ! ನನ್ನ ಮನ್ವಂತರದ ಅಭಿರುಚೀನಷ್ಟ ಚಿಲೊ ನೋಡ್ರಿ. ನಿಮಗೆ ನೆನಪು ಅದಷ್ಟ ಇಲ್ಲೊ, ನಾವು ಸಾಲ್ಯಾಗ ಇದ್ದ ದಿಸದ್ದು? ನಾಳೆ, ಐದೂ ಖಂಡದ ಭೂಗೋಲು ಓದಿಕೊಂಡು ಬರ್ರಿ ಅಂದರೂ ನಾವು ತಯಾರಷ್ಟ! ಎಷ್ಟು ಅರಸರ ವಂಶಾವಳಿ, ಅವರ ಸುಧಾರಣಾ, ಶೀಲ ಸ್ವಭಾವ-- ಎಲ್ಲಾ ಮುಖೋದ್ಗತ. ನಮ್ಮ ವೈಯಾದರೂ ಹ್ಯಾಂಗ ಇತ್ತ್ರಿ? ಗರಡೀಮನಿ ಆಡಿ, ಹುರಿಕಟ್ಟು ಆಗಿತ್ತು. ಅಡ್ಡಾಬರ್ಕಾ ಬ್ಯಾಸರಷ್ಟ ಇಲ್ಲ. ....ಏನಂದಿರಿ? ಕಾವ್ಯದಾಗ ಇಬ್ಬರೂ ಪತ್ಕಾ ಬರಕೋತಷ್ಟ ಇದ್ದದ್ದು ಹೇಳಲೇ ಇಲ್ಲಾ ಅಂದಿರ್ಯಾ? ಮರಿಯೋ ಸಂಗತೀ ಅಲ್ಲಾ ಬಿಡ್ರಿ ಅವು. ಇನ್ನ ಅಂಕೆ--ಮಗ್ಗಿ, ಸವ್ವಾ, ದೀಡೆ, ಕಾಲು ನಿದ್ದಿಯೊಳಗಿದ್ದಾಗ ಕೇಳಿದರೂ ಬರೋಬರಿ ಹೇಳೋದು ಏನು ದೊಡ್ಡ ಮಾತು? ಈಗೆಲ್ಲೀ ಶ್ರದ್ಧಾರಿ? ಕಡಿದಷ್ಟು ತುರಿಸಿಗೊಳ್ಳೋ ಚಾಳಿ! ಸರ್ವಜ್ಞತ್ವದ ಬಿಸಿಲುಗುದರಿ ಹಿಂದ ಜಿಗರೀ ಹಾಂಗ ಹೊಂಟಷ್ಟದ ತೀರಿತು ಈಗಿನ ಜನ!

ಮತ್ತಷ್ಟ.... ಈಗಿನ ತಲೆಮಾರಿನ ಮುಂಡಳೀನ್ನ ನಾ ಅಪಹಾಸ್ಯ ಮಾಡೊ ಅಷ್ಟು ಸಣ್ಣವಾ ಇಲ್ಲರಿ. ವಸ್ತುಸ್ಥಿತಿ ನೋಡಿ--ದಾಸರು ಅಂದ್ಹಾಂಗ ನಗೀ ಬರತದ ನೋಡ್ರಿ.

(ತಾರ್ಕಿಕನ ಠೀವಿಯಲ್ಲಿ) ಮೊನ್ನೆ-ಓದಿದಿವಲ್ಲರೆಪಾ ನಾವಿಬ್ಬರೂ ಕೂಡಿ ಸಾರ್ವಜನಿಕ ವಾಚನಾಲಯದಾಗ. ' ಸಾಂಸ್ಕೃತಿಕ ಕೇಂದ್ರದ ವಿಶೇಷ ಸಂಚಿಕೆ ' ಅಂತ ಅದು. ಕಾವ್ಯಕ್ಕ ತಲಿ ಇಲ್ಲಾ, ಬಾಲ ಇಲ್ಲ. ' ನವ್ಯ ' ಅಂತ ಢಾಳಾಗಿ ಬರದಾರ, ಮಾತು ಯಾಕ ಅಂದಿರಿ ನೀವು--ಖರೆ! ಆದರೂ ನೋಡ್ರಿ, ಒಂದು ಶಬ್ದ ಸೌಷ್ಠವ, ಕಲ್ಪನಾ ಚಮತ್ಕೃತಿ, ಏನಷ್ಟರ ಇರಬೇಕೋ ಬ್ಯಾಡೋ! ಬರೇ ಶಬ್ದಚ್ಛಲಾ, ವಿಚಾರದ ಹಾರಿಕೆ! ಬರಿಯೊ ಉತ್ಸಾಹಕ್ಕ ಶರಣು ಅನ್ನದೆ ಗತಿ ಇಲ್ಲ ನೋಡ್ರಿ!

ಛೆ ಛೆ! ನನ್ಮ ವಿಚಾರದ ತುಮುಲದೊಳಗ ಗೃಹಸ್ಥಾನಿಕೆ ಲಕ್ಷಣ ಮರತೇ ಹೊತ್ಯ. (ಬದಿಗೆ ನೋಡಿ) .... ಏ ಪಮ್ಮಕ್ಕಾ, ರಾಯರಿಗೆ ಚಹಾ ಮಾಡು ಅನ್ನವ್ವಾ, ಒಳಗ ಇಕೀಗೆ (ಕರೆ ಹೋದಾಗ ಮತ್ತೆ ದೇವರು ತುಂಬಿದಂತಾಗಲು)

ಹಾಂ, ಏನಂದಿರಿ ಮಾಧೂರಾವ? ಹೋದವರ್ಷ ನಾಡಹಬ್ಬದ ಕಾರ್ಯಕಲಾಪ ವಹಿಸಿಗೊಂಡಾಗ, ನಾಟಕ ನೀರು ಕುಡಿಸಿತು ಅಂದಿರ್ಯಾ? ಖರೇರಿ. ಎಲ್ಲೆ ಅಷ್ಟ ಒಳ್ಳೇ ನಾಟಕ ನನಗ ಹೇಳ್ರಿ. ಹಿಂದಿನ ಗಾಂಭೀರ್ಯ ಕೇಳಬ್ಯಾಡ್ರಿ. ಬರೆ ನಗಿ, ಸಾಮ್ಯಾನ್ಯ ನಗಿ. ಅಲ್ಪ ಸ್ವಲ್ಪ ಹುಡುಕಿದರ ಹತ್ತು ಹನ್ನೆರಡು ಸಿಗಲಿಕ್ಕೆಲ್ಲ ಒಳ್ಳೇವು- ಅನ್ನೋ ಅಷ್ಟು ಪ್ರತಿಗಾಮಿ ಮನಸು ಅಲ್ಲರೀ ನಂದು! ಆದರ ನಾಡಿನ್ಯಾಗ ಎಲ್ಲಾ ಯಾವಾಗೂ ಮಾಡಲಿಕ್ಕೂ ಬರೊ ಅಷ್ಟು ನಾಟಕ ಯಾಕ ಸಿಗಬಾರದರೆಸಾ? ಅಂತಷ್ಟ ನಾ ಟ್ರೇ. ಕಾ. ದೊಳಗ ಇದ್ದಾಗ ಬರೆದ ' ಸುಭದ್ರಾ ಕಲ್ಯಾಣ '--ದಂಥಾ ಸಾಗ್ರ ಸಂಗೀತ ಪೌರಾಣಿಕ ನಾಟಕ ಆಡಿಸಿ ತೃಪ್ತಿಪಡಬೇಕಾತು. ಸುದೈವದಲೆ ಅವತ್ತ ಕಂಪನೀ ನಾಟಕದ ಸಾಮಾನೂ ಸಿಕ್ಕವು. ಟೆಕೇಟು ಹಚ್ಚಿದ್ದಕ್ಕ ನಮ್ಮ ಉತ್ಸವ ಸಂಸ್ಥಾಪ

(೧೪೪ ನೆಯ ಪುಟ ನೋಡಿರಿ.)

ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ

ಜಯಂತಿಯ ಸಪ್ಟಬಂರ್ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ನಾನು ಕೊಂದ ಹುಡುಗಿ' ಕಥೆಯನ್ನು ಕುರಿತ ವಿಮರ್ಶೆಗಳು ನಾಲ್ಕು ಜನರಿಂದ ಬಂದಿವೆ. ಮತ್ತೊಂದು ವಿಮರ್ಶೆಗಾಗಿ, ಸಪ್ಟಂಬರ್ ಸಂಚಿಕೆಯಲ್ಲಿಯ—ಮನಸ್ಸಿಗೆ ಒಪ್ಪಿಗೆಯೆನಿಸಿದ, ಲೇಖನದ ಬಗೆಗೆ ವಿಮರ್ಶೆ ಬರೆದು ಕಳುಹುವಂತೆ ಬಿನ್ನವಿಸಿಕೊಳ್ಳಲಾಗಿತ್ತು. ಈ ಬಿನ್ನಹದ ಮೇರೆಗೆ ಬೇರೆ ಬೇರೆ ಐದು ಜನರಿಂದ ವಿಮರ್ಶೆಗಳು ಬಂದಿವೆ. ಆದರೆ ಅವರೆಲ್ಲರೂ ವಿಮರ್ಶೆಗಾಗಿ ಆಯ್ದುಕೊಂಡುದು **'ಹಳ್ಳಿಯ ಏಳಿಗೆ'** ಎಂಬ ತರಂಗರೂಪಕವನ್ನು.

'ನಾನು ಕೊಂದ ಹುಡುಗಿ'ಯ ವಿಮರ್ಶಕರು:

೧ ಶ್ರೀ. ಆರ್. ಸಿ. ಕುಲಕರ್ಣಿ, ಆರ್. ಎಲ್. ಎಸ್. ಸೈನ್ಸ ಇನ್ಸ್ಟ್ಯೂಟ್, ಬೆಳಗಾಂವಿ. ೨ ಶ್ರೀ. ಎಂ. ಟಿ. ಧೂಪದ ಬಿ. ಎಸ್ಸಿ. ಗುಳೇದಗುಡ್ಡ. ೩ ಶ್ರೀ. ಎಸ್. ಆರ್. ಪಾಡಿ, ಶಿಕ್ಷಕರು, ಕಲ್ಲಕಟ್ಟೆ—ಕಾಸರಗೋಡು. ೪ ಶ್ರೀ ಎಸ್. ಆರ್. ಡಿ. ಅಥಣಿ.

'ಹಳ್ಳಿಯ ಏಳಿಗೆ'ಯ ವಿಮರ್ಶಕರು:

೧ ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ. ೨ ಶ್ರೀ. ಎಂ. ಎಸ್. ಭಾಗವತ, ಕಡತೋಕಾ, ೩ ಶ್ರೀ. ಎಸ್. ಆರ್. ಪಾಡಿ, ಶಿಕ್ಷಕರು—ಕಲ್ಲಕಟ್ಟೆ. ೪ ಶ್ರೀ. ಎಂ. ಗಂಗಾಧರಭಟ್ಟ, ನೀರ್ಚಾಲು, (ದ. ಕ.). ೫ ಶ್ರೀ. ಎಸ್. ಆರ್. ಡಿ, ಅಥಣಿ.

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕ ಮಂಡಲಿಯವರೇ ನೋಡಿ, ನಿರ್ಣಯವನ್ನು ಕೊಟ್ಟಿದ್ದಾರೆ:

'ನಾನು ಕೊಂದ ಹುಡುಗಿ' ಕಥೆಯ ತಂತ್ರ ತೀರ ಜಟಿಲವಾದುದು. ಅದೊಂದು ಇಂಗ್ಲಿಷ್ ಕಥೆಯ ರೂಪಾಂತರವಾಗಿದೆ. ಈ ಮಾದರಿಯ ಮನೋವಿಶ್ಲೇಷಣಾತ್ಮಕ ಪದ್ಧತಿ ಕನ್ನಡಕ್ಕೆ ತೀರ ಹೊಸದು. ಆದುದರಿಂದಲೇ ಬಹಳ ಜನರು ಇದರ ವಿಮರ್ಶೆಗೆ ಮುಂದೆ ಬಂದಂತಿಲ್ಲ. ಮುಂದೆ ಬಂದ ನಾಲ್ವರೂ ತಕ್ಕಮಟ್ಟಿಗೆ ಕಥೆಯ ರೀತಿಯನ್ನು ತಿಳಿದುಕೊಂಡಿರುವರು. ಎಂತಲೇ ಯಾವ ವಿಮರ್ಶೆಯನ್ನೂ ಉತ್ತಮ ವಿಮರ್ಶೆಯೆಂದು ಹೇಳಲು ಬರುವಂತಿಲ್ಲ. **ಶ್ರೀ. ಎಂ. ಟಿ. ಧೂಪದ** ಅವರ ವಿಮರ್ಶೆ ಇದ್ದುದರಲ್ಲಿಯೇ ಒಳ್ಳೆಯ ವಾಗಿದೆ. ಮಿಕ್ಕವರ ಪ್ರಯತ್ನಗಳೂ ಪ್ರಶಂಸನೀಯವಾಗಿವೆ.

'ಹಳ್ಳಿಯ ಏಳಿಗೆ'ಯನ್ನು ಕುರಿತು ಬಂದ ವಿಮರ್ಶೆಗಳಲ್ಲಿ **ಶ್ರೀ. ಎಸ್. ಆರ್. ಪಾಡಿ** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಮಿಕ್ಕ ವಿಮರ್ಶೆಗಳೂ ಉತ್ತಮ ತರಗತಿಯವೇ ಇವೆ.

ಈ ವಿಮರ್ಶೆಯ ಶಿಕ್ಷಣರಂಗವು ತರುಣ ವಿಮರ್ಶಕರಿಗಾಗಿ—ಎಂದು ಇದೆ. ನಮ್ಮಲ್ಲಿ ವಿಮರ್ಶೆಯೆಂಬುದು ಇನ್ನೂ ಬೆಳೆದೇ ಇಲ್ಲ. ವಿಮರ್ಶೆಯ ದೃಷ್ಟಿಯಿಂದ ಅನೇಕ ಹಿರಿಯರೂ ಇನ್ನೂ ತರುಣರಾಗಿಯೆ ಇರುವರು. ಆದುದರಿಂದ ಜಯಂತಿಯ ಮೇಲಾಟದಲ್ಲಿ ಭಾಗವಹಿಸಬೇಕೆಂದು ಅವರೂ ಅಪೇಕ್ಷೆ ಪಡಬಹುದು. ಮೇಲಾಟಕ್ಕೆ ಬಂದ ವಿಮರ್ಶೆಗಳನ್ನೆಲ್ಲ ನಿರ್ಣಾಯಕರು ಸಮಾನ ದೃಷ್ಟಿಯಿಂದ ನೋಡುವರು. ಅಲ್ಲಿ ಹಿರಿಯರು ಕಿರಿಯರು ಎಂಬ ಪಕ್ಷಪಾತವೆಂದೂ ನಡೆಯದು. ಹಿರಿಯರು ಬರೆದ ವಿಮರ್ಶೆ ಉತ್ತಮವಾದುದೆಂದು ನಿರ್ಣಯವಾದಲ್ಲಿ, ಅದನ್ನು ಮೇಲಾಟದ ನಿರ್ಣಯದ ರೀತಿಗನುಸರಿಸಿ ಕೊಡಲಾಗುವುದಲ್ಲದೆ, 'ಕೇವಲ ಹಿರಿಯರು ಬರೆದುದು' ಎಂಬ ದಾಕ್ಷಿಣ್ಯದಿಂದ ಕೊಡುವುದಿಲ್ಲ. ವಿಮರ್ಶೆಗಳನ್ನು ಬರೆಯುವುದಕ್ಕೂ ವಿವಿಧ ರೀತಿಗಳಿವೆ. ಲಲಿತಪ್ರಬಂಧದ ತಂತ್ರವನ್ನು ಇರಿಸಿಕೊಂಡೂ ಬರೆಯಬಹುದು.

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ **'ಫೋಟೊ'** ಎಂಬ ಅನುವಾದಿತ ಕಥೆಯನ್ನಾಗಲಿ, **'ಮಾನವತೆಗೆ ಒಡ್ಡು'** ಎಂಬ ಸ್ವತಂತ್ರ ಕಥೆಯನ್ನಾಗಲಿ—ಕುರಿತು ವಿಮರ್ಶೆಗಳನ್ನು ಬರೆದು, ಈ ತಿಂಗಳ ತಿಂಗಳ ತಾರೀಖಿನೊಳಗಾಗಿ ತಲ್ಪುವಂತೆ—ಕಳುಹಬೇಕು.

—ಸಂಪಾದಕ

卐 ನಾನು ಕೊಂದ ಹುಡುಗಿ 卐

(ಸಣ್ಣಕತೆ)

ವಿಮರ್ಶಕರು : ಎಸ್. ಟಿ. ಭೂಪತಿ ಬಿ. ಎಸ್‌ಸಿ.

ಎಸ್. ಎಚ್. ಸ್ಕೂಲ್ ಗುಳೇದಗುಡ್ಡ

ಹಾಲು ಪೂರ್ಣ ಆಹಾರ–ಪಚನಕ್ಕೆ ಹಗರು ಎಂದು ಆಧುನಿಕ ವೈಜ್ಞಾನಿಕ ಯುಗವು ಬಾರಿ ಬಾರಿಗೂ ಕೂಗಿ ಹೇಳಿದರೂ—'ನನಗೆ ಹಾಲು 'ದಕ್ಕು'ದಿಲ್ಲರಿ' ಎಂಬ ಮನೋಜಾಡ್ಯದಿಂದ ತೊಳಲುವವರೂ ಇಂದಿಗೂ ಇರುವ ಈ ಕಾಲದಲ್ಲಿ, ಕ್ಷುದ್ರಪ್ರಾಣಿಯೆಂದು ಕಾಣುವ 'ಬೆಕ್ಕಿ'ಗಾಗಿ ಹೆದರಿ ಹಲ್ಲಣ ಕಳೆದುಕೊಳ್ಳುವರುಂಟೆಂದು ಹೇಳಲು ಅಡ್ಡಿಯಿಲ್ಲ. ಸಹೃದಯ ವಕೀಲ-ಹಾಗೂ ಸುಸಂಸ್ಕೃತ ಮನಸ್ಸಿನ ಒರ್ವ ನಿರಪರಾಧಿ—ಸದ್ಯ ಅಪರಾಧಿಯು—ಇವರಲ್ಲಿ ಆರಂಭವಾಗುವ ಈ ಕಥೆ, ಮೊದ ಮೊದಲು ಚೆನ್ನಾಗಿ ಬೆಳೆದು ಬಂದಿದೆ.—ತನ್ನ ಪಾಗೂ ಪ್ರಾನ್ಸಿಸ್‌ನ ಗೆಳೆತನದ ಹಾಗೂ ಅವರಿಬ್ಬರ ನಡುವಿನ ಮೈತ್ರಿಯಂತೆ ತೀರ ಸ್ವಾಭಾವಿಕವಾದದ್ದು. ನೌಕರಿಗಳಿಗಾಗಿ ಅಗಲಿದ ಮಿತ್ರರಿಬ್ಬರ ನಡುವೆ ಪತ್ರವ್ಯವಹಾರ ಸಾಮಾನ್ಯ. ಸರಾಗವಾಗಿ ಓದುತ್ತ ಕಥೆ ನಮ್ಮನ್ನು ಕೊಯನಾ ಪ್ರಾಜಕ್ಟದ ಗಾಡಿಯ ಡಬ್ಬಿಗೆ ಕರೆದುಕೊಂಡು ಹೋಗಿ, ಅಲ್ಲಿ ಕಥಾನಾಯಕನ ಭಯಾನಕವಾದ ಭಾವನೆ(ಬೆಕ್ಕಿನ ಬಗೆಗಾಗಿ) ಜೆನ್ನಾಗಿ ಆಗಿ, ಅದನ್ನು ಮರೆಯಲು 'ಆ ಹೆದರಿಕೆಯಿಂದ ಮನಸ್ಸನ್ನು ತಿರುಗಿಸಲೆಂದು ಆ ಹುಡುಗಿಯ ಕಡೆಗೆ ನೋಡುತ್ತ ಕುಳಿತೆ' ಮದುವೆಯಾಗಿ—ಎಷ್ಟೋ ವರ್ಷಗಳನ್ನು ಕಳೆದ ಗೃಹಣಿಯು 'ಹುಡುಗಿ'ಯಾಗಿ ಕಂಡು ಬಂದ ಬಗೆ ತುಸು ವಿಲಕ್ಷಣವಾಗಿ ತೋರಿದೆ ಹಾಲಿನಂತಿದ್ದ ಮೈಬಣ್ಣ–ಯಾರೂ ಹೆಚ್ಚಾಗಿ ಪ್ರಯೋಗಿಸದ ಹೊಸ ಉಪಮೆ. ಮಲ್ಲಿಗೆ ಹೂವಿನ ನೆನಪು ಹರುತ್ತಿತ್ತು—ಎಂಬುದಾಗಿ ಮೈಮರೆತು ಓದುವಾಗ, ತಟ್ಟನೇ ನೆನಪಾಗುತ್ತಿದೆ ಆ-ವಕೀಲ ಇದ್ದನೆಂಬ ಸಂಗತಿ. ಅಲ್ಲಲ್ಲಿ ಬರುವ ತಿಳಿ ವರ್ಣನೆಗಳೇ ಕತೆಯು ಜೀವಾಳವೆನ್ನಲು ಸಿಲ್ಲಿ ಅಡ್ಡಿಯಿಲ್ಲ. ತೀರ ಸೊರಗಿ ಸವಕಲಾಗಿದ್ದ ಹೆಂಡತಿ.... ನಾಯಕ ಬೆಕ್ಕಿನ ಉಪದ್ರದ ಬಗ್ಗೆ ಹೊಟೆಲ ಮಾಲಕನಿಗೆ ಹೇಳಿ ಬೆಕ್ಕುಗಳ ಹಾವಳಿ ತಡೆಯ ಬೇಕು ಎಂದಾಗ, ಆ Henpacked ಮಾಲಕ ಸಿಳಿಸಿಳಿ ಕಣ್ಣು ಬಿಡುತ್ತ, 'ಹೆಂಡತಿಯನ್ನು ಕೇಳಿ ನೋಡುತ್ತೇನೆ' ಎಂದು ಗುಣುಗುಟ್ಟಿದ—ಎಂದು ಓದುವಾಗ, ಸಜೀವ ಚಿತ್ರ ಕಣ್ಣ ಮುಂದೆ ನಿಂತಂತಾಗಿ, ಸಂಪೂರ್ಣ ಹೆಂಡತಿಯ ಆಧೀನಕ್ಕೊಳಗಾಗಿ ಯಾವುದನ್ನೂ, ಏನನ್ನೂ ಮಾಡಲು ಇದ್ದ ಸ್ವಾತಂತ್ರ್ಯವನ್ನು ಕಳೆದುಕೊಂಡು ಹೆಂಡತಿಯ ದಾಸಾನು ದಾಸನಾದವನ ಕನಿಕರದ ಚಿತ್ರ ಚೆನ್ನಾಗಿ ಚಿತ್ರಿಸಲ್ಪಟ್ಟಿದೆ.

ಓದುಗನಿಗೆ ಸಂದೇಹವನ್ನೊಡ್ಡುವ ಹಲಕೆಲವು ಸಂದರ್ಭಗಳಿವೆ. ಹಗಲಿನಲ್ಲಿ ಕಾಣದ ನೂರಾರು ಬೆಕ್ಕುಗಳು ಕೇವಲ ರಾತ್ರಿಯಲ್ಲೇ ಏಕೆ ಆ ತೋಟದಲ್ಲಿ ಕೂಡಿ ನೃತ್ಯಗೈಯುತ್ತಿದ್ದುವು? ಒಮ್ಮೆ ಮಾಲಕನ ಹೆಂಡತಿಯನ್ನು ಬೆಕ್ಕಿನ ಬಗೆಗೆ ಕೇಳಲು "ನಾನು ಹೊಟೆಲ್ಲಿನಲ್ಲಿ ಬೆಳ್ಳುಗಳನ್ನು ಇಟ್ಟಲ್ಲ" ಎಂಬ ಸ್ಪಷ್ಟ ಉತ್ತರದ ಮುಂದೆಯೇ ಅವಳ ಯಜಮಾನ—ಹೊಟೆಲ ಯಜಮಾನ-ಬಿಳಿಯ ಬೆಕ್ಕಿಗೆ ತನ್ನ ಕೈಯಿಂದ ಮಾಂಸ ತಿನ್ನಿಸುತ್ತಿದ್ದ...." ಎಂದರೆ ಇದರ ಅರ್ಥವೇನು? ಸರಾಗವಾಗಿ ನಡೆದ ಅವರ ದಾಂಪತ್ಯದಲ್ಲಿ ಆಗಾಗ್ಗೆ ತೂರಿ ಬರುವ ವಿಲಕ್ಷಣ ಪರಿಸ್ಥಿತಿಗಳ ಬಗ್ಗೆ ಚೆನ್ನಾದ ಸೂಕ್ತವಾದ ಸೂಚನೆಯಿಲ್ಲ. ಗಡಿಬಿಡಿಯಿಂದ ಧಾವಿಸಿದಾಗ ಕಾಣುವ ಶಯ್ಯಾಗಾರ 'ಲಿಲ್ಲಿ' ಮಲಗಿದ ಸ್ಥಿತಿ, ಮುಂದಿನ ಕೆಲವು ಕ್ಷಣಗಳಲ್ಲಿಯೇ ತೀರ ವಿಲಕ್ಷಣವಾಗುವುದು. ನಂಬಲರ್ಹವಾದ ಸಂಗತಿಯೇ? ನಿಶ್ಚೇತನಳಾಗಿ ಬಿದ್ದ—ಯಾವದೋ ಅಮಲಿನಲ್ಲಿ ಇರುವಳೆಂದು ಶಂಕಿಸಬಹುದಾದ ಓರ್ವ ಸ್ತ್ರೀ ತನ್ನಿಂದ ತಾನೇ ಹೇಗೆ ನಿಚ್ಚಳಾದಳು? ಅವಳಿಗೇನಾದರೂ 'ಭೂತ' ಬಡಿಯುತ್ತಿತ್ತೋ!? ಅಥವಾ.... ಈ ಬಗೆಯ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿತ್ತು. ಅವಳ ಹಾಲೆದೆಯ ಮೇಲಿನ–ಮಧ್ಯದಲ್ಲಿಯ ಕಂದೀಬಣ್ಣದ ದೊಡ್ಡ ಬಕ್ಕೆ—ಮೂಡಿ ತಾನೇ ಮಾಯವಾಯಿತೇ? ಇನ್ನುಳಿದ ಕಥೆಯು ಯಾವುದೇ ಭಾಗದಲ್ಲಿ ಇದರ ಬಗ್ಗೆ ಉಲ್ಲೇಖವಿಲ್ಲ. ಅಪಕ್ಕೇನಾದರೂ ವಿಶಿಷ್ಟ ಅರ್ಥವಿಲ್ಲದಿದ್ದರೆ ನಗ್ನಳಾಗಿ ಮಲಗಿದ್ದ ಅವಳ ಹಾಲೆದೆಯ ಮಧ್ಯದ ಕಂದು ಬಣ್ಣದ ಬಕ್ಕೆಯ ಬಗ್ಗೆ ಯಾವುದೂ ಏಕೆ ಬರೆಯ ಬೇಕಿತ್ತು? ಭಾರತೀಯರ ನಂಬಿಕೆ–ಶಕುನಗಳನ್ನು ಒಡಮೂಡಿಸುವ–ಬೆಕ್ಕುಗಳ ಅಳುವಿಕೆ, ಕೂಗುವಿಕೆ ಅವ್ಯಾಹತವಾಗಿ ಕೆಲವು ಕಾಲದ ವರೆಗೆ ನಡೆದದ್ದು ಸೂಕ್ತವಾಗಿದೆ. ಜೂನ್ ತಿಳರಂದು ನಡೆದ ಸಂಗತಿ ಬರುವವರೆಗೆ—ವಕೀಲ ನಮ್ಮಿಂದ ದೂರವಾಗಿ, ಇಲ್ಲಿಂದ ಮತ್ತೆ ಪ್ರತ್ಯಕ್ಷನಾಗುತ್ತಾನೆ. ಹಾಯಾಗಿ ಮಲಗಬಹುದಲ್ಲ....ಎಂಬ ನಿಶ್ಚಿಂತೆಯು ದೂರವಾಗಿ ರಿವಾಲ್ವರಿಗಾಗಿ ಕೈಚಾಚುವ ದೃಶ್ಯ ಸಜೀವವಾಗಿದೆ... ರಿವಾಲ್ವರ್ ಕೊಳ್ಳುವಾಗಿನ ಆಪತ್ತನ್ನು "ಪತ್ತೇ ಇಟ್ಟು"ಕೊಂಡ ಮುದುಕ, ಆ ರಿವಾಲ್ವರನ್ನು ಮೂರುವಾಗ ಸಜೀವ ಕಳೆಯಾಗಿ, ಕಥೆಯ ನಾಯಕ ಮರೆಯಾಗುವವರೆಗೂ ಆ ಮುದುಕ ಅಂಗಡಿಯ ಬಾಗಿಲಿಗೆ ಬಂದು ನೋಡುತ್ತ ನಿಂತ ಎಂಬ ವಾಕ್ಯ, ಆ ಮುದುಕನ ಚಿತ್ರವನ್ನು ಹಣದ ಬಡ್ಡಿಯ ಆಶೆಗಾಗಿ ಕಳವಿನ—ಲೈಸೆನ್ಸ್ ಇಲ್ಲದ ಕುಡುಗು ಮಾಲನ್ನು ವತ್ತೇ ಇಟ್ಟುಕೊಂಡವರ ಹುಳ್ಳಹುಳ್ಳಗಿನ ಜೀವಿಗಳ ಪ್ರತಿನಿಧಿಯಂತಿದ್ದಾನೆ ಈ ಮುದುಕ.

ಓದುಗನೇ ತನಗೆ ತಿಳಿದಂತೆ ಗಣಿತಹಾಕಿ ಬೆಕ್ಕಿನ ಮರಣಕ್ಕೂ ಇವಳ ಮರಣಕ್ಕೂ ಸಂಬಂಧ ಕಲ್ಪಿಸಬಹುದಾದರೂ, ವೈಜ್ಞಾನಿಕ ಈ ಯುಗದಲ್ಲಿ ಇಂತಹ ದೃಶ್ಯಗಳಲ್ಲಿ ಕೇವಲ ಕಾಲ್ಪನಿಕ ಎನ್ನಿಸುವಷ್ಟು ಮಾತ್ರ ಜರುಗಬಹುದು. ಇಂಥ ತಂತ್ರ ನಮ್ಮಲ್ಲಿನೆಯೇ? ಅಲ್ಲಲ್ಲಿ ಕೆಲ ಸಂಕೇತಗಳು—ವಿದೇಶೀಯವಾಗಿ ಮಾರ್ಮಿಕವಾಗಿ ಚಿತ್ರಿಸಲ್ಪಟ್ಟಿವೆ. ಮೊದಲನೆಯದಾಗಿ— ಮದುವೆಯಾಗುವುದಿಲ್ಲ ಎನ್ನುವ ಪ್ರಾನ್ಸಿಸ್ ಳಂ ರ ಗಡಿಯಲ್ಲಿ ತನಗಿಂತ ೧೫ ವರ್ಷ ಚಿಕ್ಕ ವಯಸ್ಸಿನ ತರುಣಿಯನ್ನು ಮದುವೆಯಾಗುವಾಗ ಮಾರ್ದನಿಯಾಗಿ ಇದು ವಿದೇಶೀಯರ— ಹೆಂಡತಿಯನ್ನು ಸ್ವಚ್ಛಂದಕ್ಕಾಗಿ— ಅಷ್ಟು

ಸ್ತ್ರೀ ಸ್ವಾತಂತ್ರವನ್ನು ಕೊಟ್ಟ ಹೆಂಡತಿಯನ್ನು ಅಕಾರಣವಾಗಿ 'ತಿರುಗಲು' ಅಥವಾ ಮತ್ತ್ಯಾವುದಕ್ಕೋ ಅವಳನ್ನು ಮುಂಬೈಗೆ ಕಳಿಸಿದ್ದು ಇದು ಇದ್ದುದರಲ್ಲಿಯೇ ಭಾರತೀಯ ಪರಂಪರೆಗೆ ಒಗ್ಗದ ಮಾತು ಯಾವ ತಿಳಿದಭಾರತದ ಗೃಹಿಣಿ ಅಕಾರಣವಾಗಿ ಪತಿರಹಿತಳಾಗಿ ಹೀಗೆ ಅಲ್ಲಲ್ಲಿ ತಿರುಗಲು ಸಾಧ್ಯವಿಲ್ಲ. ಹಾಗೂ ಇಲ್ಲಿ ಹೇಳದಂತೆ ಆಕರ್ಷಕ ಹಾವಭಾವ, ಉನ್ಮಾದಕಾರಿಯಾಗಿ ಪಿಸುಗುಟ್ಟುವ ಧ್ವನಿ, ಹಳ್ಳಿಯಲ್ಲಿ ಬೆಳೆದ ನಮ್ಮ ನಾರಿಯಲ್ಲ, ಹಾಗೂ ಹೊಟೇಲಿನಲ್ಲಿ ವಾಸಿಸುವುದಿಲ್ಲ. ಕೊನೆಯದಾಗಿ ಅನಂದರ 'ನಾಕೊಂದ ಹುಡುಗಿ' ಎಂಬ ಚಿಕ್ಕ ಕಥೆಯನ್ನು ನೆನಪು ಮಾಡಿ ಕೊಡುವ ಈ ಕಥೆಯ ಶಿರೋನಾಮೆಯ ಬಗ್ಗೆ. ಕೊಂಚ ವಿಚಾರಿಸುವಾ. ಇಂಜನಿಯರನ ಹೆಂಡತಿಯಾಗಿ— ದಾಂಪತ್ಯದ ಕೆಲ ದಿನಗಳನ್ನು ಕಳೆದವಳನ್ನು ನಾವು ಅಪ್ಪಿತಪ್ಪಿ ಎಂದಾದರೂ 'ಹುಡುಗಿ' ಎಂದು ಕರೆಯ ಬಹುದೇ? ಹುಡುಗಿ ಹುಡುಗಿಯೇ ಗೃಹಣಿ–ಪ್ರಬುದ್ಧ ಸ್ತ್ರೀ–ಗೃಹಣಿಯೇ ಕಾರಣ 'ನಾನು ಕೊಂದ ಹುಡುಗಿ' ಎಂಬ ಈ ಶಿರೋನಾಮೆ "ಅಷ್ಟು" ಒಪ್ಪುವುದಿಲ್ಲವೆಂದು ನನ್ನ ಮತ.

ಆಲ್ಲಲ್ಲಿ ಸ್ವಾಭಾವಿಕವಾಗಿ ಬರುವ— ವರ್ಣನೆ— ಸಮಾಜದ ಕೆಲ ಮುಖಗಳನ್ನು ನಮ್ಮ ಕಣ್ಮುಂದೆ ತಂದು ನಿಲ್ಲಿಸಲು ಶಕ್ತವಾದ ವಾಕ್ಯ ಸರಣಿಗಳನ್ನು ಮರಳಿ ಓದಿದರೆ, ಈ ಕಥೆಯು ಉತ್ತಮ ದರ್ಜೆಯದೆಂದೆನ್ನಲಡ್ಡಿಯಿಲ್ಲ. ವಿದೇಶೀಯರ ರೀತಿ-ನೀತಿ, ಅಲ್ಲಿಯ ಸಣ್ಣ ಕಥೆಗಳ ಛಾಯೆಯನ್ನು ಕನ್ನಡ ಚಿಕ್ಕ ಕತೆಗಳಿಗೂ ಕೊಡಮಾಡಿದ ಶ್ರೀ. ಐಸನೀಸರ ಮನೋಧೈರ್ಯ ಅಭಿನಂದಾನರ್ಹವಾಗಿದೆ.

ಹಳ್ಳಿಯ ಏಳಿಗೆ

(ತರಂಗ ರೂಪಕದ ವಿಮರ್ಶೆ)

ಶ್ರೀ. ಎಸ್. ಆರ್. ಪಾಡಿ,

ದಾಸ್ಯದ ಅಂಧಕಾರವು ತೊಲಗಿ ಸ್ವಾಂತ್ರ್ಯದ ಬಾಲಸೂರ್ಯನ ಉದಯವಾದೊಡನೆಯೇ ಭಾರತ ಸರಕಾರದ ಕಣ್ಣಿಗೆ ಬಿದ್ದುದೇನು? ಹಳ್ಳಿಹಳ್ಳಿಗಳಲ್ಲಿ ದಾರಿದ್ರ್ಯದೇವತೆಯ ತಾಂಡವ! ಅರೆಹೊಟ್ಟೆಯ, ಅರೆಬತ್ತಲೆಯ, ಕಂದಿದ ಮೊಗದ ಮಣ್ಣಿನ ಮಕ್ಕಳ ಭೀಕರ ನಗ್ನಚಿತ್ರ! ಹಸಿವು ಮತ್ತು ರೋಗರುಜಿಗಳಿಂದ ಕಂಗೆಟ್ಟ ಜನತೆಯ ಆರ್ತಧ್ವನಿ! ಬ್ರಿಟಿಷರ ಶೋಷಣೆಯ ಅಡಳಿತ ಮತ್ತು ಪ್ರಕೃತಿಯ ಪ್ರಕೋಪಗಳಿಗೆ ಬಲಿಯಾದ ಹಳ್ಳಿಯ ಜನ ನಿರಾಶೆಯೊಂದಿ ಪಟ್ಟಣದ ಕಡೆಗೆ ನಡೆಯಿತು. ನಂದನವನದಂತಿದ್ದ ಹಳ್ಳಿಗಳು ಹಾಳುಸುರಿಯುವ ಬಂಜರು ಭೂಮಿಗಳಾದುವು. ಎಂತಹ ದುರ್ದಶೆ! 'ಹಳ್ಳಿಗಳ ಉದ್ಧಾರವೇ ಭಾರತದ ಉದ್ಧಾರ' ಎಂಬುದನ್ನು ಮನಗಂಡ ನಮ್ಮ ಸರಕಾರ ಇತ್ತ ಗಮನ ಹರಿಸಿ, ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸಿ ಈ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತವಾಗತೊಡಗಿತು ಇದರ ಹಿನ್ನೆಲೆಯಲ್ಲಿ ರಚಿತವಾದ ಸುಂದರವಾದೊಂದು ತರಂಗರೂಪಕವೇ 'ಹಳ್ಳಿಯ ಏಳಿಗೆ'?

ಸಾಹಿತ್ಯದ ವಿವಿಧಕ್ಷೇತ್ರಗಳಲ್ಲಿ ದುಡಿಯುತ್ತಿರುವ ಶ್ರೀ. ಕೃಷ್ಣ ಶರ್ಮರು ಜಾನಪದ ಸಾಹಿತ್ಯಗಳನ್ನು ಸೃಷ್ಟಿಸುವುದರಲ್ಲಿ ಸಿದ್ಧಹಸ್ತರೆನ್ನಬಹುದು. 'ಹಳ್ಳಿಯ ಏಳಿಗೆ', ಕೂಡಾ ಜಾನಪದಚಿತ್ರಣವನ್ನೊಳಗೊಂಡ ರೇಡಿಯೋ ನಾಟಕವಾಗಿದೆ. ಶಿವಣ್ಣ, ಸಿದ್ದಣ್ಣ, ಕಾಳವ್ವ ನಂತಹ ಗ್ರಾಮೀಣ ವ್ಯಕ್ತಿಗಳ ಸಹಜಸುಂದರವಾದ ನೈಜ ಚಿತ್ರಣ, ಅವರಂತಹ ಸಾಹಿತಿಗಳ ಲೇಖನಿಯಿಂದಲೇ ಹೊರಬರಲು ಸಾಧ್ಯ. ರೂಪಕದ ಒಂದನೆಯ ಭಾಗದಲ್ಲಿ ಬಡತನದ ಪಿಡಂಭೂತದಿಂದ ಪೀಡಿತರಾದ ಜನತೆಯ ಬಾಳಿನ ಭೀಕರ ಸಮಸ್ಯೆಯನ್ನು ಮುಂದಿರಿಸಿದರೆ, ಎರಡನೆಯ ಭಾಗದಲ್ಲಿ ಸಮಾಜಸೇವಕನ ಪಾತ್ರವನ್ನು ಸೃಷ್ಟಿಸಿ ಅದರ ಪರಿಹಾರವನ್ನು ಸೂಚಿಸಿದ್ದಾರೆ.

ಹಗಲಿರುಳೆನ್ನದೆ ಬೆವರಿಳಿಸಿ ದುಡಿದು ಮಣ್ಣಿನೊಡನೆ ಮಣ್ಣಾಗಿ ಬಾಳಿನೊಡನೆ ಹೋರಾಡಿದರೂ ಹಳ್ಳಿಯ ರೈತರ ಪರಿಸ್ಥಿತಿ ಅದೆಷ್ಟು ಶೋಚನೀಯ! ಬದುಕುವ ಆಸೆಯಿಂದ ಜೀವವನ್ನೇ ತೇದರೂ ಹೊಟ್ಟೆ ತುಂಬುವಷ್ಟು, ಹಿಟ್ಟೆಲ್ಲ, ಮೈ ಮುಚ್ಚುವಷ್ಟು ಬಟ್ಟೆಯಿಲ್ಲ. ಜಗತ್ತಿಗೆ ಅನ್ನದಾತರಾದವರು ಹಸಿವಿನಿಂದ ನರಳಿ ಸಾಯುತ್ತಿರುವುದಿದು ಎಂತಹ ವಿಕಟ ವಿಡಂಬನೆ! ಭಾರತದ ಇಂತಹ ಸಾವಿರಾರು ರೈತರ ಬಾಳಿನ ಕರುಣಕಥೆಯನ್ನು ಹೇಳುವ ಪ್ರತಿನಿಧಿಗಳಾಗಿ ನಮ್ಮ ಮುಂದೆ ನಿಂತಿದ್ದಾರೆ ಶಿವಣ್ಣ ಮತ್ತು ಸಿದ್ದಣ್ಣ.

ಶಿವಣ್ಣ, ಸಿದ್ದಣ್ಣ— ಇಬ್ಬರೂ ಬಡತನದ ಬೇಗೆಯಲ್ಲಿ ಬೆಂದು ಬಿಸಿಯುಸಿರು ಬಿಡುತ್ತಾರೆ. ಬಾಳಿನ ಗೋಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. "ನೋಡು ಸಿದ್ದಣ್ಣಾ ನನಗ ಮನೀ ಅಂದರ ಬ್ಯಾಸರಾಗಿ ಹೋಗೆಯ್ತಿ" ಎಂಬ ಶಿವಣ್ಣನ ನಿರಾಶೆಯ ನಿಟ್ಟುಸಿರಿನಿಂದಲೇ ರೂಪಕ ಪ್ರಾರಂಭವಾಗುತ್ತದೆ. ಇಬ್ಬರೂ ಸೇಟಿಯ ಆಡಂಬರ-ಪೂರ್ಣವಾದ ಸುಖಮಯ ಜೀವನದ ಕಡೆಗೆ ಆಕರ್ಷಿತರಾಗಿದ್ದಾರೆ. ಆದರೂ ಸಿದ್ದಣ್ಣ ಶಿವಣ್ಣನಷ್ಟು ನಿರಾಶಾವಾದಿಯಲ್ಲ. ನಿರಾಶೆಯ ಅಂಧಕಾರದಲ್ಲೂ ಆಶಾಕಿರಣವನ್ನು ಕಾಣುತ್ತಾನೆ. ಹೊಲಮನೆ ಬಿಟ್ಟು ಪಟ್ಟಣ ಸೇರಲು ಅವನ ಮನಸ್ಸೊಪ್ಪುವುದಿಲ್ಲ. 'ಮಳೆಯು ದಯೆ ತೋರಿಸಿದರೆ ಮುಂದಿನ ವರ್ಷ ನಾಲ್ಕು ಚೀಲಕಾಳುಗಳು ದೊರೆಯಬಹುದೆಂ'ದು ಅವನ ನಂಬಿಕೆ. "ಭೂವಿತಾಯಿ ತನ್ನ ಮಕ್ಕಳನ ಹೀಂಗs ಕಡಿತನಕಾ ಮರಗಸತಾಳs?" ಎನ್ನುತ್ತಾನೆ. ದೇವರು ಏನಾದರೊಂದು ದಾರಿ ತೋರಿಸಿಯೇ ತೋರಿಸುತ್ತಾನೆಂಬ ಅಚಲ ವಿಶ್ವಾಸ ಅವನಲ್ಲಿದೆ. ಸಮಾಜಸೇವಕ ಭಾಷಣ ಮಾಡುತ್ತಿದ್ದಂತೆ ಮೊದಲು ಇಬ್ಬರೂ ನಿರಾಶೆಯ ಕಹಿ ಮಾತುಗಳನ್ನೇ ಹೊರಗೆಡಹುತ್ತಾರೆ. ಆವರೆಗೆ ಸರಕಾರದಿಂದ ಯಾವ ಸಹಾಯವೂ ಅವರಿಗೆ ದೊರೆಯದಿದ್ದುದೇ ಅದಕ್ಕೆ ಕಾರಣ. "ಹಳ್ಳಿಯ ಜನ ಸತ್ತಾ-ರೋ ಬದಿಕ್ಯಾರೊ ಅಂಬೂದನ್ನ ನೋಡವರರೆ ಯಾರು ಅದಾರು?" ಎನ್ನುತ್ತಾನೆ ಶಿವಣ್ಣ. ಈ ಮಾತಿನಿಂದ ಅವನ ಹೃದಯದ ನೋವು ವ್ಯಕ್ತವಾಗುತ್ತದೆ. ಸಮಾಜ

ಸಮಾಜಸೇವಕನು ಓದುಬರಹದ ಸಂಗತಿ ಹೇಳಿದಾಗ ಅತ "ಏನ ಹೇಳತೀರಿ ಬಿಡ್ರಿ ನೀವು ! ಹೊಟ್ಟಗೆ ಹಾಕದ, ಜುಟ್ಟಗೆ ಮಲ್ಲಿಗೀ ಮುಡಿಸಿದರು-ಅಂತಾರಲ್ಲ ಹಾಂಗೈತಿನೋಡ್ರಿ ನಿಮ್ಮ ಮಾತು" ಎಂದು ರೇಗುತ್ತಾನೆ. ಹೊಟ್ಟೆತುಂಬಿಸುವ ವಿಚಾರ ಏನಾದರೂ ಸರಕಾರ ಮಾಡಿದ್ದರೆ ಅದನ್ನಷ್ಟೇ ತಿಳಿಯುವ ಅಪೇಕ್ಷೆ ಅವನದು. ಹಸಿದ ಹಳ್ಳಿಗರ ಬಾಯಿಯಿಂದ ಇಂತಹ ಮಾತು ಹೊರಡುವುದು ಸ್ವಾಭಾವಿಕವೇ. 'ಯಾವ ಸರಕಾರ ಬಂದರೂ ಹಳ್ಳಿಯ ಜನರ ಕಷ್ಟತಪ್ಪಿದ್ದಲ್ಲ' ಎಂಬ ಸಿದ್ದಣ್ಣನ ಅನುಭವವಾಣಿ ತ್ರಿಕಾಲಕ್ಕೂ ಸತ್ಯ. ಕಡೆಗೆ ಸಮಾಜಸೇವಕನು ಸರಕಾರದ ಯೋಜನೆಗಳನ್ನು ಸರಿಯಾಗಿ ವಿವರಿಸಿ, ಕೈಕೊಂಡ ಕಾರ್ಯಕ್ರಮಗಳನ್ನು ತಿಳಿಸಿದಾಗ ಎಲ್ಲರೂ ಸಂತೋಷಪಡುತ್ತಾರೆ.

ಕಾಲದ ನಕ್ರಗತಿಯಿಂದ ಹಳ್ಳಿಯ ಕೈಗಾರಿಕೆಗಳು ಹೇಗೆ ಮೂಲೆಪಾಲಾಗಿವೆ ಮತ್ತು ಅವುಗಳನ್ನು ಮಾಡಿ ಜೀವಿಸುವ ಜನ ಯಾವ ರೀತಿ ಕಷ್ಟದಲ್ಲಿದ್ದಾರೆ ಎಂಬುದನ್ನು ಎತ್ತಿ ತೋರಿಸುವುದೇ 'ಕಾಳವ್ವನ ಪಾತ್ರ ಸೃಷ್ಟಿಯ ಮುಖ್ಯೋದ್ದೇಶ. ಕಾಳವ್ವನ ಮಾವ ಕಮ್ಮಾರಿಕೆಯ ಉದ್ಯೋಗದಿಂದಲೇ ಮನೆಯಲ್ಲಿ ನಾಲ್ಕು ಸೇರು ಬಂಗಾರ ಕೂಡಿಟ್ಟಿದ್ದರಿ. ಈಗ ಅವಳ ಗಂಡನ ಗಳಿಕೆ ಅವನ ಚಾ-ಟ್ಯಾಗಳಿಗೂ ಸಾಕಾಗುವುದಿಲ್ಲ. ಮಕ್ಕಳು ಮನೆಯಲ್ಲಿ ಹಸಿವಿನಿಂದ ಒದ್ದಾಡುತ್ತಿವೆ. ನೈತರಿಗೆ ಸಹಾಯವನ್ನಿತ್ತು ಬೇಸಾಯವನ್ನು ಅಭಿವೃದ್ಧಿಗೊಳಿಸುವ ಸರಕಾರದ ಯೋಜನೆಯ ಕುರಿತು ಸಮಾಜ ಸೇವಕನು ವಿವರಿಸಿದಾಗ, ಕಮ್ಮಾರ ಹೆಂಗುಸಾದ ಅವಳಿಗೆ ನಿರಾಶೆಯಾಗುವುದು ಸ್ವಾಭಾವಿಕ. ಆದುದರಿಂದಲೇ ಉದ್ವೇಗಗೊಂಡು ಕೇಳುತ್ತಾಳೆ— "ಹಳ್ಳಿಯೊಳಗ ರೈತರಷ್ಟ ಇರತಾರೇನ್ರಿ ? ನೇಕಾರ್ರು ಇರತಾರು, ಬಡಿಗೇರು ಇರ್ತಾರು, ಕುಂಬಾರ್ರು ಇರತಾರು, ಬಡಿಗೇರು ಇರ್ತಾರು, ಕುಂಬಾರ್ರು ಇರತಾರು. ಈ ಜನರನ್ನ ಸರಕಾರ ನೋಡೇ ಇಲ್ಲೇನ್ರಿ ?" "ಎಲ್ಲಾ ಉದ್ಯಮಗಳನ್ನೂ ಸರಕಾರ ಸಹಾಯಕೊಟ್ಟು ಬೆಳೆಸುವ ನಿರ್ಣಯ ಮಾಡೇದ" ಎಂದು ಸಮಾಜ ಸೇವಕನ ಆಶ್ವಾಸನೆ ಸಿಕ್ಕಿದಾಗಲೇ ಅವಳಿಂದ ಸಮಾಧಾನದ ನಿಟ್ಟುಸಿರು ಹೊರ ಬಂದುದು. ಹೀಗೆ ಹಳ್ಳಿಯ ಹೆಂಗುಸಿನ ಪಾತ್ರವನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ ಲೇಖಕರು.

ಸರಕಾರದ ಕಾರ್ಯಕರ್ತರು ಒಳ್ಳೆಯವರಾಗಿದ್ದರೆ ಮಾತ್ರ ಜನರಿಗೆ ಪ್ರಯೋಜನ ಸಿಕ್ಕಬಹುದು ಮತ್ತು ದೇಶೋದ್ಧಾರವಾಗಲು ಸಾಧ್ಯ-ಎಂಬ ಸತ್ಯ, ಸಮಾಜಸೇವಕನ ಪಾತ್ರದಲ್ಲಿ ಎದ್ದುಕಾಣುತ್ತದೆ. ಅತನನ್ನು ಒಬ್ಬ ಆದರ್ಶ ಜನಸೇವಕನನ್ನಾಗಿ ಚಿತ್ರಿಸಿದ್ದಾರೆ ಲೇಖಕರು. ಜನರ ಕಷ್ಟದ ಬಗೆಗೆ ಅವನಲ್ಲಿ ಅನುಕಂಪವಿದೆ. ಅವರ ಮಾತುಗಳನ್ನು ಶಾಂತಚಿತ್ತನಾಗಿ ಕೇಳುತ್ತಾನೆ. ಬರಗಾಲ ಬಂದಿದ ಆ ಪ್ರದೇಶದ ಜನರಿಗೆ ಸಹಾಯಮಾಡಿರಕೆಸುವುದಕ್ಕಾಗಿ ಸರಕಾರವು ಮಾಡಿದ-ಲೈನ್ ದಾರಿಯ ಕೆಲಸ, ಹಳ್ಳಕ್ಕೆ ಒಡ್ಡುಹಾಕುವ ಯೋಜನೆ, ಹಳ್ಳಿಗರಿಗೆ ಔಷಧಿ ಸಿಕ್ಕುವ ವ್ಯವಸ್ಥೆ ಇತ್ಯಾದಿ-ನಿರ್ಣಯಗಳನ್ನು ಸರಳವಾಗಿ ತಿಳಿಯುವಂತೆ ಅವರಿಗೆ ಬೋಧಿಸುತ್ತಾನೆ. ಅಲ್ಲದೆ ಉಪವಾಸ ಇದ್ದವರ ಹೆಸರು ಬರೆದುಕೊಂಡು, ಅವರಿಗೆ ಅಂದೇ ಧಾನ್ಯ ದೊರಕಿಸುವ ಭರವಸೆಯನ್ನು ನೀಡುತ್ತಾನೆ. ಹಳ್ಳಿಗರನ್ನು ತಿರಸ್ಕಾರದೃಷ್ಟಿಯಿಂದ ನೋಡದೆ, ಅಧಿಕಾರದರ್ಪವನ್ನು ತೋರಿಸದೆ ಇರುವ ಆ ವ್ಯಕ್ತಿ ನಿಜವಾಗಿಯೂ ಒಬ್ಬ ಆದರ್ಶ ಸಮಾಜಸೇವಕನೆಂಬುದರಲ್ಲಿ ಸಂದೇಹವಿಲ್ಲ.

ರೇಡಿಯೋ ನಾಟಕದಲ್ಲಿ ಧ್ವನಿ ಮತ್ತು ಮಾತಿನ ಏರಿಳಿತಗಳಿಗೆ ತುಂಬಾ ಪ್ರಾಧಾನ್ಯವಿದೆ. ಇದರಲ್ಲಿನ ಪಾತ್ರಗಳ ಪ್ರತಿಯೊಂದು ಮಾತೂ ಅದಕ್ಕನುಸಾರವಾಗಿದೆ. ಅಲ್ಲದೆ ಎಲ್ಲ ಪಾತ್ರಗಳ ಮಾತೂ ಸ್ವಭಾವಕ್ಕನುಗುಣವಾಗಿದ್ದು ಸ್ವಾಭಾವಿಕವಾಗಿ ಕಂಡುಬರುತ್ತದೆ. ನಾಂದಿಯ ರೂಪದಲ್ಲಿರುವ ಮೊದಲಿನ ವೃಂದಗೀತೆ, ಹಾಲಕ್ಕಿಯ ಶಕುನ ಇಡೀ ನಾಟಕಕ್ಕೇ ಕಳಸವನ್ನಿಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು

ನಾಳ್ನುಡಿಗಳೂ,ನುಡಿಗಟ್ಟುಗಳೂ ಸೇರಿದ್ದು ಭಾಷೆಯಲ್ಲಿ ಪ್ರವಾಹಗುಣವು ಸ್ವಾಭಾವಿಕವಾಗಿ ಬಂದಿದೆ. 'ಎಲ್ಲಿಗೆ ಹೋದರೂ ಮುತ್ತಲಕ್ಕೆ ಮೂರೇ ಎಲೆ, ಹೊಟ್ಟೆಗೆ ಹಿಟ್ಟು ಹಾಕದೆ ಜುಟ್ಟಿಗೆ ಮಲ್ಲಿಗೆ ಮುಡಿಸಿದರು, ಸೇದುವ ಬಾವಿ ಕಂಡು ನಾಯಿ ಸಂತೋಷಪಟ್ಟಿತು' ಇತ್ಯಾದಿ ಗಾದೆಗಳನ್ನು ಅಲ್ಲಲ್ಲಿ ಪೋಣಿಸಿರುವುದರಿಂದ, ಸಂಭಾಷಣೆಗೆ ಸಹಜವಾಗಿ ಜೀವಕಳೆ ಬಂದಿದೆ ಮತ್ತು ಅದರ ಶೋಧ ಇಮ್ಮಡಿಸಿದೆ.

ಇದು ರೇಡಿಯೋ ನಾಟಕಮಾತ್ರವಾಗಿರದೆ ರಂಗಮಂಚದ ಪ್ರದರ್ಶನಕ್ಕೂ ಯೋಗ್ಯವಾಗಿಯೇ ಇದೆ. ವೃಂದಗೀತದಲ್ಲಿರುವ ಹಾಲಕ್ಕಿಯ ಶಕುನವೊಂದನ್ನು ಬಿಟ್ಟುಬಿಟ್ಟರೆ ಸಾಕು. ಉಳಿದುದನ್ನು ನೇಪಥ್ಯದಿಂದ ಹಾಡಬಹುದು. ಹೀಗೆ ಸರ್ವಾಂಗ ಸುಂದರವಾಗಿರುವ ಈ ತರಂಗರೂಪಕಕ್ಕೆ ಹಾರ್ದಿಕವಾದ ಮೆಚ್ಚುಗೆಯಿಂದ ಸ್ವಾಗತವನ್ನು ಬಯಸುತ್ತೇನೆ.

(೧೪ ನೆಯ ಪುಟದಿಂದ ಬಂದಿದುದು.)

ಕಟ್ಟಡಕ್ಕ ರೋಖ ಸಾತಸೇ ರೂಪಾಯಿ ಕಂಡಿತು. ಅದರೊಳಗ ಮಾಮಲೇದಾದರೂ ದೇಸಾಯರು ಕೊಟ್ಟದ್ದನ್ನ ಮೂರುನೂರು ಅಂತೀರ್ಯಾ ? ಆದರೇನ್ರಿ ? ಇನ್ನ ನಾಲ್ಕುನೂರು ನಮ್ಮ ಕುಗ್ರಾಮ (?) ದಾಗ ಅಂದರೇನು ಸಣ್ಣ ಮಾತ ?

....ಇನ್ನೊಮ್ಮೆ ಬಾರು ಮಾಡ್ರಿ ಮಾಧೂರಾವ ! ರಾಯರ, ಸಾಹಿತ್ಯ ಏನೈನಾ ಹ್ಯಾಂಗರ ಇರವೊಲ್ಲದ್ಯಾಕ. ಕಾಲಕ್ಕ ತಕ್ಕ ಹಾಂಗ ಅದು ಹೆಜ್ಜೀ ಹಾಕತದ, ಆದರ ಓದೊ ಚಟಾ ಬೀಳದಿದ್ದರ ಹ್ಯಾಂಗರೀ ಹುಡುಗರಿಗೆ? ಅಲ್ಲಾ, ನಾವು ನೋಡ್ರಿ ನೌಕರಿಗೆ ಸೇರೋದರೊಳಗ ಓದಿದ್ದೆಷ್ಟು ನೆನಪುಮಾಡಿ ಕೊಳ್ರಿ. ನೀವು ಪದವೀಧರರು- ಮತ್ತಾತು ಬ್ಯಾರೆ. ಪುಸ್ತಕದ ಹುಳಾ ಅಂದರೂ ದರಕಾರ ಮಾಡದಷ್ಟು ಚಟಾ ಬೆಳಿಸಿಕೊಂಡವರು. ಆದರ ನಾ ಸಾಮಾನ್ಯ ಪರಿಸ್ಥಿತಿಯೊಳಗ ಇದ್ದಾವಾ, ನಿಮ್ಮಿ ನಾದಕ್ಕ ಬಿದ್ದು Arabian Nights Entertainments, ಗೀತಾರಹಸ್ಯ, ಕುಮಾರವ್ಯಾಸ ಭಾರತ, ಭರತ ನಾಟ್ಯಶಾಸ್ತ್ರ ಓದಲಿಲ್ಲ ? ವ್ಯಾಳ್ಯಾ ಹೋದ ಖಬರು ಇರತಿದ್ದಿಲ್ರೆಪಾ ಸೂಟ ದಿನದ್ದಾಂಗ. ಹಾಂಗ ಮನಿ ತಾಪತ್ರಯ ನನಗ ಇದ್ದಿದ್ದಿಲ್ಲ; ಸುವರ್ಣಕಾಲ ಇತ್ತು ಖರೆ. (ಮುಂ. ಪುಟಕ್ಕೆ)

ಕನ್ನಡ ಲೇಖಕರು ಶುದ್ಧವಾದ ಶಬ್ದಗಳನ್ನು ಬಳಸುವ ಬಗೆಗೆ ಗಮನವೀಯಲಿ

ನಾಗರಿಕತೆಯುಳ್ಳ ಜನರು ಶುದ್ಧವಾದ ಗಾಳಿ, ಪರಿಶುದ್ಧವಾದ ನೀರು, ಆರೋಗ್ಯಕರವಾದ ಆಹಾರಗಳನ್ನು ಬಯಸುವಂತೆಯೇ ತಾವು ಆಡುವ ಭಾಷೆಯ ಪಾರಿಶುದ್ಧ್ಯ ಮತ್ತು ಸೌಂದರ್ಯಗಳನ್ನೂ ಬಯಸುತ್ತಾರೆ. ಪ್ರತಿಯೊಂದು ಭಾಷೆಯಲ್ಲಿಯೂ ತಪ್ಪು-ಒಪ್ಪುಗಳನ್ನು ಜನತೆಗೆ ತಿಳಿಸುವ ಸಲುವಾಗಿಯೇ ವ್ಯಾಕರಣಗ್ರಂಥಗಳು ಹುಟ್ಟಿವೆ. ಕನ್ನಡದಲ್ಲಿ ಕೂಡ ಶಬ್ದಸ್ಮೃತಿ, ಕರ್ಣಾಟಕ ಭಾಷಾಭೂಷಣ, ಶಬ್ದಮಣಿದರ್ಪಣ, ಶಬ್ದಾನುಶಾಸನ, ಶಬ್ದಾದರ್ಶ ಮೊದಲಾದ ಶ್ರೇಷ್ಠ ಗ್ರಂಥಗಳು ಇವಕ್ಕಾಗಿಯೇ ಹುಟ್ಟಿವೆ. ಪ್ರತಿಯೊಬ್ಬ ಮನುಷ್ಯನೂ ತಾನು ಚೆನ್ನಾಗಿ ಮಾತನಾಡಬೇಕು, ಶುದ್ಧವಾಗಿ ಬರೆಯಬೇಕು ಎಂದು ಬಯಸುತ್ತಾನೆ. ಆದರೆ ವ್ಯವಹಾರದಲ್ಲಿ ಅವನಿಗೆ ತಿಳಿಯದಂತೆಯೇ ತಪ್ಪುಗಳು ಸೇರಿಕೊಳ್ಳುತ್ತವೆ; ಇದು ಲೋಕ ಸ್ವಭಾವವೆಂದು ನಾವು ತಿಳಿಯಬಹುದು. ಈಗ ಕನ್ನಡನಾಡಿನಲ್ಲಿ ಬುದ್ಧಿವಂತರೆನಿಸಿಕೊಂಡ ಹಲವು ಜನರು ಕೂಡ ಅಶುದ್ಧ ಶಬ್ದಗಳಿಂದ ಕೂಡಿದ ಲೇಖನಗಳನ್ನು ಬರೆಯುವುದನ್ನು ನಾವು ನೋಡಬಹುದು. ಕನ್ನಡ ಜನರು ಶುದ್ಧವಾದ ಶಬ್ದಪ್ರಯೋಗಗಳ ಪರಿಚಯವನ್ನು ಮಾಡಿಕೊಳ್ಳಲಿ ಎಂಬ ಸದಾಶಯದಿಂದ ಈ ಮುಂದೆ ಕೆಲವು ತಪ್ಪು-ಒಪ್ಪುಗಳ ಶಬ್ದಗಳ ಪಟ್ಟಿಯನ್ನು ಕೊಡಲಾಗಿದೆ. ಇವರ ಪ್ರಯೋಜನವನ್ನು ಭಾಷಾಭಿಮಾನಿಗಳು ಪಡೆಯುವರೆಂದು ನಾವು ನಂಬುತ್ತೇವೆ:

ತಪ್ಪು	ಒಪ್ಪು
ಅಥವ	ಅಥವಾ
ಆಗುತ್ತೆ	ಆಗುತ್ತದೆ
ಛಲ	ಚಲ
ಅಡಿಗೆ	ಅಡುಗೆ
ಗಂಡಸು	ಗಂಡುಸು
ಹೊರಿ	ದೊರೆ
ಭಾವಿ	ಬಾವಿ
ನಾಲಿಗೆ	ನಾಲಗೆ
ಬುದ್ಧಿ ಬೆಳೆದು	ಬುದ್ಧಿ ಬಳೆದು
ಕೋಟ್ಯಾನುಕೋಟಿ	ಕೋಟ್ಯನುಕೋಟಿ
ಪುತ್ಥಳಿ	ಪುತ್ತಳಿ
ಪಾಶ್ಚಿಮಾತ್ಯ	ಪಾಶ್ಚಾತ್ಯ
ಭಾರತೀಯ	ಭಾರತೀಯ
ಭೋಜನಗೃಹ	ಭೋಜನಗೃಹ
ಸೊಳಿ	ಚಳಿ
ಪಂಚವಾರ್ಷಿಕ	ಪಾಂಚವಾರ್ಷಿಕ
ಶಕುಂತಲ	ಶಕುಂತಲೆ
ಸನ್ಯಾಸಿ	ಸಂನ್ಯಾಸಿ
ಬರಹ	ಬರೆಹ
ಶಂಖು	ಶಂಕು
ಲಿಂಗಧಾರಣೆ	ಲಿಂಗಧಾರಣ
ತಿಳುವಳಿಕೆ	ತಿಳಿವಳಿಕೆ
ಧೃಡ	ದೃಢ
ಧಾಳಿ	ದಾಳಿ
ಜಾತ್ಯಾತೀತ	ಜಾತ್ಯತೀತ
ಸಂಣ	ಸಣ್ಣ
ಶೃತಿ	ಶ್ರುತಿ
ಪೌರ್ವಾತ್ಯ	ಪೌರಸ್ತ್ಯ
ನಿಧನರಾದರು	ನಿಧನ ಹೊಂದಿದರು
ದುರಾದೃಷ್ಟ	ದುರದೃಷ್ಟ
ಅನಾನುಕೂಲ	ಅನನುಕೂಲ
ಬೆಳದಿಂಗಳು	ಬೆಳುದಿಂಗಳು
ದೊರತು	ದೊರೆತು
ಅಂಥಹ	ಅಂಥ, ಅಂತಹ
ಫಲಹಾರ	ಫಲಾಹಾರ
ಹೆಂಗಸು	ಹೆಂಗುಸು

ಇತ್ಯಾದಿ—

ಕನ್ನಡ ನಾಡು-ನುಡಿಗಳ ಅಭಿಮಾನಿಗಳೂ ವಿದ್ವಾಂಸರೂ ಈ ಕಾರ್ಯದಲ್ಲಿ ಪರಿಷತ್ತಿನೊಡನೆ ಸಹಕರಿಸುವರೆಂದು ನಂಬಲಾಗಿದೆ.

ಬಿ. ಶಿವಮೂರ್ತಿ ಶಾಸ್ತ್ರಿ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

(ಜಹ ಕುಡಿಯುತ್ತ)

ಏನು ? ಮೇಲ್ಬುದ್ಧಿ ಈಗಿನ ಕಲಿತವರಿಗೆ ಕಡಿಮಿ ಅಂತೀರಾ ? ಬಹಳ ಮಟ್ಟಿಗೆ ಖರೆ ಅನ್ರಿ ನಿನ್ನ ಮಾತು. ನೆನಪಾತು ನೋಡ್ರಿ— ಮೊನ್ನಿನ ಆಯ್. ಎ. ಎಸ್. ಪರೀಕ್ಷಾದ ಮೌಜು: ಒಬ್ಬ ಉಮೇದವಾರ ಇಂಟರವ್ಯೂಕ್ಕ ಬಂದು ನಿಂತಾಗ, ನಿನ್ನ ಹಿಂದಿನ ಗೋಡೆಯ ಬಣ್ಣ ಏಷದ ಅಂತ ಕೇಳಿದರ ಥಕ್ಕ ಆದನಂತರೆಪಾ ! ಮುಂದಿನ ಗೋಡಿ ನೋಡಲಿಕ್ಕೆ ಹೊಳೀಲಿಲ್ಲ— ಅಂತ ಬರೆದಿದ್ದರು. ಗ್ರಾಮೊಫೋನೊ ರೆಕಾರ್ಡ ನೋಡೀರಿ ಏನು?—ಅಂತ ಕೇಳಿ, ಆದರ ಮ್ಯಾಲಿನ ನಾಯಿ ಹೆಣ್ಣೋ ಗಂಡೋ— ಅಂತ ಕೇಳಿದರು ಅಂತ. ಉಮೇದವಾರ 'His Master's Voice' ಅನ್ನೋದರಾ ಮ್ಯಾಲೇ ತಿಳೀಬೇಕಾಗಿತ್ತಂತ ಅವರ ಅಭಿಪ್ರಾಯ ! ಏನೋ ನಡದಾದ ತೀರಿತು.

ಏನಂದಿರಿ ? ಹತ್ತು ವಿಷಯ ಏಕಕಾಲಕ್ಕ ಕಲೀಲಿಕ್ಕೆ ಹೋಗಿ ಈಗ ಸವ್ಯಸಾಚಿ ಆಗೋ ತೊಡಕನ್ಯಾಗ ಮೂಲ ಶಿಕ್ಷಣದ ಧ್ಯೇಯಕ್ಕಾ ಚ್ಯುತಿ ಬಂದವ ಅಂತಿರ್ಯಾ? ರಾಸ್ತು ಮಾತು. ಹೌದೆಂದೆ!

ಎಲೆಲೆ ಎದ್ದಾ ಬಿಟ್ಟರಲ್ಲ ? ಪ್ಯಾಟಿ ಕಡೀ ಹೋಗಬೇಕಾ ? ಹಾಂ, ನಾನೂ ಸ್ನಾನಕ್ಕ ಹೊರಡತೇನಿ. ನಮ್ಮ ಅನಸೂಯಕ್ಕಾ, ಆಕಿ ಗಂಡಾ ಬರೋವರಿದ್ದಾರ ಜಬಲಪುರದಿಂದ.... ಮೇಲಿಗೆ. ಸ್ಟೇಶನ್ನಿಗೆ ಹೋಗಬೇಕಾಗೇದ.

(ಅನ್ನುವಾಗ ನಿಧಾನವಾಗಿ ತೆರೆ.)

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣೆಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜೂಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವನನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತಳಗs—ಬಿಂದs ಗಂಧs ಹರದೈತವ್ವಾ!

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ೮೦ ಪುಟಗಳು ಬೆಲೆ ರೂ. ೧. ೨೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ದೀವಳಿಗೆ ಬಂತೆ ?

ಬಂತು, ದೀವಳಿಗೆ ಬಂತು ಎಂತೆಂಬರಿ; ಎಲ್ಲಿದೆ ದೀವಳಿಗೆ ?
ಹೊರಗನೂ ಮುಸುಕಿದೆ ಕತ್ತಲೆ, ಒಳಗನೂ ತುಂಬಿದೆ ಕತ್ತಲೆ!
ದೀವಳಿಗೆಯೆಂಬುದು ಹೊರಗು-ಒಳಗುಗಳ ಹಬ್ಬ ಕಾಣಯ್ಯಾ;
ಹೊರಗಿನ ದೀವಳಿಗೆಗೆ ಬೇಕು ಹರಿಹಿಂಗದ ಹಣತೆಯ ಬೆಳಕು—
ಒಳಗಿನ ದೀವಳಿಗೆಗೆ ಬೇಕು ಹೃದಯದೀಪ್ತಿಯ ಹೊಂಬೆಳಕು!
ಅಯ್ಯಾ, ಹೊರಗೂ ಮುತ್ತಿದೆ ಕತ್ತಲೆ, ಒಳಗೂ ಕವಿದಿದೆ ಕತ್ತಲೆ!

ಹೊರಗಿನ ಬೆಳಕ ಬೆಳಗಿಸಲು ಹೊಸಹೊಸ ಹಣತೆಗಳಿಲ್ಲ,
ಒಳಗಿನ ಬೆಳಕ ನಿರುಗಿಸಲು ಹಸನಾದ ಹೃದಯಪೀಠಗಳಿಲ್ಲ,
ಕತ್ತಲೆಯ ಕಳೆವ ಶಕ್ತಿಯಿಲ್ಲದೆ ದೀವಳಿಗೆಯನಾರಯ್ದು
ದೀಸರನು ಕಂಡು ಕಲಕಲಿಸಿ ನಗುವ ನಮ್ಮ ಕಾಲರಾಯ !

ದೀವಳಿಗೆ ಕೆಳೆಯ ಹಬ್ಬ, ಜೀವ ಜೀವವನೆಳೆವ ಹಬ್ಬ-
ಬಂಧುಭಾವ ಸೆಳೆವ ಹಬ್ಬ, ಕೊಳೆ-ಕೆಸರನು ತೊಳೆಯುವ ಹಬ್ಬ.
ಅಯ್ಯಾ, ಕೆಳೆಯೆಂಬುದಿಂದು ಎಲ್ಲಿಯೊ ಕಣ್ಮರೆಯಾಗಿದೆ ಕಾಣಾ,
ಒಂದು ಜೀವ ಇನ್ನೊಂದನು ತಿಂದು ಬದುಕುವೆನೆಂಬುದು ನೋಡಾ!
ಬಂಧುಭಾವಕ್ಕೆಂದು ನಿಂದಿರಲು ನೆಲೆಯಿಲ್ಲ, ನೆಲೆಯಿಲ್ಲ!
ರಕ್ಕಸಭಾವ ಬೆಳೆದು ಲೋಕವ ಕುಕ್ಕಿ ಕೊಲ್ಲುತಿರುವಾಗ
ದೀವಳಿಗೆ-ದೀವಳಿಗೆ-ಎಂದು ಕೂಗುವ ಕುರುಡರ ಕಂಡು
ನಿವೆನೇನೆನೆಂಬನಯ್ಯಾ ನಮ್ಮ ಜೀವಸನಿಜ್ಞಾನಿ ಕಾಲರಾಯ!

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ಹೋರಾಟದ ಬದುಕು (ಸಂಪಾದಕೀಯ)

ಸಂಪಾದಕರು ೧೪೫

ನಾಡನುಡಿ (ಪ್ರಾಸಂಗಿಕ ಟಿಪ್ಪಣಿಗಳು)

'ಕಾಲಭೈರವ' ೧೪೭

ಜೂಜು (ಸಣ್ಣಕಥೆ)

ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ.ಎ.ಬಿ.ಟಿ. ಧಾರವಾಡ ೧೪೯

ಕಾಲಿದಾಸನ ಭ್ರಮರ ವರ್ಣನೆ (ಸಾಹಿತ್ಯ ಪರಿಚಯ)

ಶ್ರೀ. ಎನ್. ಭೀಮಭಟ್ಟರು 'ಸಾಹಿತ್ಯ ಶಿರೋಮಣಿ' (ಕನ್ಯಾನ) ೧೫೭

ಸ್ನೇಹಸುರಿಗಿ (ಕವನ)

ಶ್ರೀ. ಪಂಢರೀನಾಥಾಚಾರ್ಯ ಗಲಗಲಿ, ಧಾರವಾಡ ೧೬೦

ಡಾ. ಜಾರ್ಜ್ ವಾಶಿಂಗಟನ್ ಕಾರ್ವರ್ (ವಿಜ್ಞಾನಿಯೊಬ್ಬನ ಜೀವನವೃತ್ತ)

ಶ್ರೀ. ಟಿ. ಆರ್. ನಾಡಗೀರ ಬಿ. ಎಸ್ಸಿ. (ಟೆಕ್) ಮುಂಬಯಿ ೧೬೧

ಭಾರ್ಗವಿ (ಪೌರಾಣಿಕ ಜೀವನರೂಪಕ)

ಶ್ರೀ. ಎಂ. ಕೆ. ಜಯಲಕ್ಷ್ಮಿ, ಕರಗಡ ೧೬೩

ಬುದ್ಧ (ಕವನ)

"ರಂಜನ" ಭಟ್ಟ, ಮದ್ರಾಸು ೧೬೭

ಭಾರತದ ಸಂಪತ್ತು (ಕವನ)

ಶ್ರೀ. ಆರ್. ವ್ಹಿ. ಹೊರಡಿ, ಹಾವೇರಿ ೧೬೭

ಕಾಮಾಖ್ಯಾ ಮಂದಿರ ೨ (ನರಕಾಸುರನ ವೃತ್ತಾಂತ)

ಶ್ರೀ ಪಿ. ವಿ ಗುಡಿ, ಗೋಹಟ್ಟಿ (ಆಸಾಮು) ೧೬೩

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಶ್ರೀ. ಜಿ.ಎಂ. ಚೌದರಿ ಬಿ.ಎ. (೧), ಧಾರವಾಡ, ಮತ್ತು

ಶ್ರೀ. ಎಸ್. ಆರ್. ಪಾಟಿ ೧೭೬

ಸಾದರ ಸ್ವೀಕಾರ .... (ಕವರಿನ ಮೂರನೆಯ ಪುಟದಲ್ಲಿ)

ಜಯಂತಿ

ಸಂಪುಟ ೩೩] [ಸಂಚಿಕೆ ೫

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಡಿ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಪಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಹೋರಾಟದ ಬದುಕು

ಸುಖಸಂಕಥಾವಿನೋದದ ಬದುಕು ಇಂದು ಪುರಾಣಕಾಲದ ಅತಿಶಯೋಕ್ತಿಯ ಮಾತಾಗಿ ಕುಳಿತಿದೆ. ಇಂದು ನಾಡಿನ ಜನಸಾಮಾನ್ಯರ ಬಾಯಿಂದ ಹೊರಟು ಎಲ್ಲೆಲ್ಲಿಯೂ ಕಿವಿಗೆ ಬೀಳುವ ಮಾತೆಂದರೆ, ದುಃಖಸಂಪೂರಿತ ಬದುಕಿನ ವಿಷಾದದದ ಮಾತುಗಳೆ !

ನಲವತ್ತು ಐವತ್ತು ವಯಸ್ಸಿನ ಹಿರಿಯರು, ತಾವು ಹಿಂದೆ ಕಂಡುಂಡ ಸುಖ-ಸಮೃದ್ಧಿಯ ಅನುಭವದ ಕಥೆಗಳನ್ನು ಹೇಳಲು ತೊಡಗಿದರೆ, ಇಂದಿನ ಹುಡುಗರು ಅವುಗಳನ್ನು ಸಂದೇಹಾಶ್ಚರ್ಯಗಳಿಂದ ಕೇಳುವರು. ಅವರು ಆ ಕಥೆಗಳಲ್ಲಿ ನಂಬುಗೆಯಿಡಲು ಬಾರದಷ್ಟು ಇಂದಿನ ಕಾಲ ಮಾರ್ಪಟ್ಟು ಹೋಗಿದೆ.

ಒಂದು ರೂಪಾಯಿಗೆ ಸೇರು ಬೆಣ್ಣೆಯಾದುದನ್ನು ಕಂಡು, 'ಅದೇನೋ, ಈ ವಾರ ಬೆಣ್ಣೆಯ ಬೆಲೆ ಇಳಿದಿದೆ !' ಎಂದು ಸಪೂಧಾನ ಪಡುವವರು, ಒಂದುವರೆ ಆಣೆ—ಎರಡು ಆಣೆಗೆ ಸೇರು ಬೆಣ್ಣೆಯಿದ್ದ ವಿಷಯವನ್ನು ಹೇಳಿದರೆ, 'ಇದು ಮುದಿಹುಚ್ಚಿನವರ ಬಡಬಡಿಕೆ' ಎಂದು ಮುಖ ಮುದುರಿಸಿ, ಬೀಳುಗಳೆದು ನಕ್ಕು ಬಿಡಬಹುದು. ಮೂರೂ ಕಾಲು ರೂಪಾಯಿ ಕೊಟ್ಟು ೧ ಧಡೆ ಬೆಲ್ಲವನ್ನು ಕೊಳ್ಳುವವರು 'ಅಯ್ಯೋ, ಬರಿ ಮೂರಾಣೆಗೆ ಧಡೆ ಬೆಲ್ಲ ಕೊಳ್ಳುತ್ತಿದ್ದೆವು !' ಎಂದು ಹೇಳುವವರನ್ನು, ಬುದ್ಧಿಗೇಡಿಗಳ ಸಾಲಿನಲ್ಲಿಯೆ ನಿಲ್ಲಿಸಿಬಿಡಬಹುದು.

ಬೆಣ್ಣೆ-ಬೆಲ್ಲಗಳಂತೆಯೆ ಮಿಕ್ಕೆಲ್ಲ ಜೀವನೋಪಯುಕ್ತ ಪದಾರ್ಥಗಳ ಸಮೃದ್ಧಿ; ಕ್ರಯ ಸೌಲಭ್ಯ ! ಅಂತಹ ಕಾಲವನ್ನು ಕಂಡವರಿಗೆ ಇಂದಿನ ಕಾಲ ನಿಜವಾಗಿಯೂ ಹುಚ್ಚನ್ನೆ ಹಿಡಿಸುವಂತಹದಾಗಿದೆ. ಅನೇಕ ಕುಟುಂಬಗಳಲ್ಲಿಯ ಹಿರಿಯ ಹೆಣ್ಣುಮಕ್ಕಳಿಗೆ, ಇಂದಿನ ಪೇಟೆಯ ದರಗಳ ಕಲ್ಪನೆಯೇ ಇರುವುದಿಲ್ಲ. ಮನೆಗೆ ಬಂದ ಅಕ್ಕಿ, ಬೇಳೆ, ಬೆಲ್ಲ ಮೊದಲಾದ ಪದಾರ್ಥಗಳನ್ನು, ಮೊದಲಿನಂತೆ ಆ ಆ ಪದಾರ್ಥಗಳೆಂದು ಮಾತ್ರ ಭಾವಿಸುವರು. ಅಂತಹ ಮನೆಗಳನ್ನು ನಡೆಯಿಸುವ ಯಜಮಾನರು ಇಂದು ಪಡುತ್ತಿರುವ ಗೋಳನ್ನು ದೇವರೇ ಕೇಳಬೇಕು.

ನಮ್ಮ ಬದುಕು ದಿನದಿನಕ್ಕೆ ತುಟ್ಟಿಯದಾಗುತ್ತ ನಡೆದಿದೆ; ಆದರೆ ಈ ತುಟ್ಟಿಯ ಬದುಕಿಗೆ ತಕ್ಕಂತೆ ನಮ್ಮ ಸಾಮಾಜಿಕ ಆಚರಣೆಗಳಲ್ಲಿ ಬದಲಾಗಿಲ್ಲ; ಬೇಗನೆ ಆಗುವ ಸಂಭವವೂ ಇಲ್ಲ. ಒಬ್ಬನ ದುಡಿತದಿಂದಲೇ ಬದುಕುವಂತಹ ಕುಟುಂಬಪದ್ಧತಿ ನಮ್ಮಲ್ಲಿ ಇದುವರೆಗೂ ಜೀವಂತವಾಗಿದೆ; ಆದರೆ ೧೦೦ಕ್ಕೆ ೯೦ ಕ್ಕಿಂತ ಹೆಚ್ಚು ಕುಟುಂಬಗಳು, ಒಬ್ಬ ಯಜಮಾನನ ದುಡಿತದ ಪಡಿಸಾಲದೆ, ಕೊರತೆಯಿಂದ ಕೊರಗಬೇಕಾಗಿದೆ. ಅಂತಹ ಕುಟುಂಬಗಳ ಮೇಲೆ ಇಂದಿನ ರಾಜಕೀಯ ಸಾಮಾಜಿಕ ಹೊಣೆಗಾರಿಕೆಯ ಭಾರವೂ ಬಿದ್ದು ಅವು ಬಾಯಿಬಾಯಿ ಬಡಬೇಕಾಗಿದೆ.

ರಾಜಕೀಯ ಹೊಣೆಗಾರಿಕೆಯೆಂದರೆ, ಸರಕಾರದ ಶಾಸನಕ್ಕನುಗುಣವಾಗಿ, ಒತ್ತಾಯದಿಂದ ತೆರಬೇಕಾಗಿರುವ ಪ್ರತ್ಯಕ್ಷ-ಅಪ್ರತ್ಯಕ್ಷ ಕರ-ಕಂದಾಯಗಳು. ಇಂತಹ ಕರ-ಕಂದಾಯ, ಕುಟುಂಬದಲ್ಲಿ ಗಳಿಸುವ ಯಜಮಾನನ ತಲೆಯ ಮೇಲೂ ಬೀಳುವುದು; ಗಳಿಸದೆ ಉಂಡು ಕೂಡುವ ಮಿಕ್ಕವರ ಮೇಲೆಯೂ ಬೀಳುವುದು. ಎಲ್ಲವನ್ನೂ ಕುಟುಂಬದ ಯಜಮಾನನೇ ತೆರಬೇಕು. ಭಾರತವನ್ನು ಭವಿಷ್ಯದಲ್ಲಿ ಸಮೃದ್ಧವಾಗಿಸಬೇಕೆಂಬ ನಮ್ಮ ಸರಕಾರದ ಆದರ್ಶ, ವರ್ತಮಾನ ಜೀವನವನ್ನು ಭಾರಗೊಳಿಸಿ ಬಿಟ್ಟಿದೆ.

ಸಾಮಾಜಿಕ ಹೊಣೆಗಾರಿಕೆಯ ಭಾರದಲ್ಲಿ ಮೊದಲನೆಯದಾಗಿ ನಿಲ್ಲತಕ್ಕುದು ತಿರುಕರ್ತೃ ಪಿಡುಗು. ಸಮಾಜವಾದದ ಸಮಾಜಪದ್ಧತಿಯನ್ನು ಗುರಿಯಾಗಿರಿಸಿಕೊಂಡ ನಮ್ಮ ಸರಕಾರಗಳು ತಿರುಕರ ಜೀವನದ ಕಡೆಗೆ ಇದುವರೆಗಂತೂ ಲಕ್ಷ್ಯಕೊಟ್ಟಿರುವುದಿಲ್ಲ. ವಿವಿಧ ಜಾತಿಯ ವಿವಿಧ ವೇಷದ ತಿರುಕರು, ದಿನದಿನವೂ ಬಂದು ಕುಟುಂಬಿಗಳ ಮನೆಗಳ ಮುಂದೆ ನಿಂತು ಕೂಗುತ್ತಲೇ

ಇರುವರು. ಸಾಂಪ್ರದಾಯಿಕ ಬುದ್ಧಿಯವರಾಗಿ, ಬಂದ ತಿರುಕರಿಗೆ ೀಡುವುದೆಂದರೆ ಅದೊಂದು ಮಹಾಸಂಕಟದ ವಿಷಯ. ಇನ್ನು ವ್ಯಾವಹಾರಿಕ ಬುದ್ಧಿಯವರಾಗಿ, ಬಂದ ತಿರುಕರನ್ನೆಲ್ಲ ಬರಿಗೈಯಿಂದ ಮರಳಿಸುವುದೆಂದರೆ ಅಸಾಮಾಜಿಕತೆಯಾಗಿ ಕಾಣುತ್ತದೆ. ಎಲ್ಲರೂ ಇಲ್ಲವೆಂದು ಹೇಳಿ ಬೆದರಿಸಿ ಕಳುಹಿಬಿಟ್ಟರೆ, ತಿರುಪೆಯನ್ನೇ ಉದ್ಯೋಗವನ್ನಾಗಿ ಮಾಡಿಕೊಂಡಿದ್ದ ಆ ಜನ ಬದುಕಬೇಕು ಹೇಗೆ? ಭಾರತದಲ್ಲಿಯೆ ಹುಟ್ಟಿಬೆಳೆದಿರುವ ಈ ತಿರುಕರ ಯೋಗ-ಕ್ಷೇಮಗಳನ್ನು ನೋಡುವುದು ಸರಕಾರದ ಕೆಲಸವೊ, ಸಾಮಾಜಿಕರ ಕೆಲಸವೋ? 'ಸಾಮಾಜಿಕರ ಕೆಲಸವೇ!' ಎಂದು ಹೇಳಿದರೆ, ಇಂದಿನ ಸಮಾಜದಲ್ಲಿಯ ಬಹುಜನ ಕುಟುಂಬೀಯರಿಗೆ ಅದು ಅಸಾಧ್ಯವಾಗಿರುವುದು.

ಇಂದು ಯಾವ ಸಾಮಾಜಿಕನಿಗೂ ಮತಧರ್ಮದ ನಿಯಮಗಳಿಗನುಸಾರವಾಗಿ ನಡೆಯಲು ಶಕ್ಯವಿಲ್ಲವಾದರೂ, ಮತ-ಧರ್ಮಗಳ ಹೆಸರಿನಿಂದ ಆತನ ಮೇಲೆ ಕೆಲವೊಂದು ಆರ್ಥಿಕಭಾರವು ಬೀಳುತ್ತಲಿದೆ. ಸಾಮಾಜಿಕ ಭೀತಿಗಾಗಿ ಆತನು ಅದನ್ನು ಅನಿವಾರ್ಯವಾಗಿ ಹೊರಬೇಕಾಗುತ್ತದೆ. ಆದರೆ ಗಳಿಸಿದ ಗಳಿಕೆ ಕುಟುಂಬದ ಜನರ ಜೀವನಾವಶ್ಯಕ ಅನ್ನ-ವಸ್ತ್ರ, ವಸತಿಗಳಿಗೇ ಸಾಲದಿರುವಾಗ, ದೈನಂದಿನ ಜೀವನಕ್ಕೆ ಯಾವ ರೀತಿಯಲ್ಲಿಯೂ ಅವಶ್ಯಕನೆನಿಸದಂತಹ ಈ ಮತ-ಧರ್ಮಗಳ ಹೆಸರಿಗಾಗಿ ವೆಚ್ಚವಾಗುತ್ತಲಿದೆ. ಇಂದಿನ ಈ ಹೊಸಕಾಲ ಜನಸಾಮಾನ್ಯರ ಮೇಲೆ ಅದರ ಭಾರವನ್ನು ಇನ್ನಿಷ್ಟು ಹೊರಿಸುತ್ತಲಿದೆ.

ಇಂದಿನ ಸಾಮಾಜಿಕ ಶಿಷ್ಟಾಚಾರಗಳೂ ಸಾಮಾನ್ಯ ಕುಟುಂಬಿಗೆ ತಲೆಹೊರೆಯೆನಿಸುತ್ತಿನೆ; ಆದರೆ ಅವುಗಳನ್ನು ಬಿಟ್ಟು ನಡೆಯುವುದೆಂದರೆ, ಅನಾಗರಿಕತನದ ಬಿರುದಿಗೆ ಗುರಿಯಾಗಬೇಕಾಗುತ್ತದೆ. ಸಮಾಜದಲ್ಲಿ ಅಂತಹ ಕುಟುಂಬದ ಜನರ ಬೆಲೆಯೇ ಕಡಮೆಯಾಗುತ್ತದೆ. ಅನುವು-ಅಪತ್ತುಗಳಲ್ಲಿ ಕುಟುಂಬಿಗೆ ಸಮಾಜದ ನೆರವಿನ ಅಗತ್ಯವಿರುತ್ತದೆ. ಹೆಸರನ್ನು ಕೆಡಿಸಿಕೊಂಡ ಕುಟುಂಬಿ, ಇಂತಹ ನೆರವಿಗೆ ಹೊರತಾಗಬೇಕಾಗುತ್ತದೆ. ಆದುದರಿಂದ ಪ್ರತಿಯೊಂದು ಕುಟುಂಬವೂ ಇಂದು ಹಳೆಯ ಹೊಸ ಶಿಷ್ಟಾಚಾರಗಳನ್ನು ಪುರಸ್ಕರಿಸಿಯೆ ನಡೆಯಬೇಕಾಗುತ್ತದೆ.

ಇಂತಹ ಕಾಲದಲ್ಲಿ ಸರಕಾರದ ಕಚೇರಿಗಳಲ್ಲಿಯು ಲಂಚಗುಳಿತನ, ವ್ಯಾಪಾರಿಗಳ ಲಾಭಗುಳಿತನ ಇವು ಮಾರಿ-ಮಸಣಿಗಳಂತೆ ಸಾಮಾಜಿಕರನ್ನು ಬೆನ್ನುಹತ್ತಿ ಕಾಡುತ್ತವೆ. ಪ್ರತಿಯೊಬ್ಬ ಸಾಮಾಜಿಕನೂ ಇಂದು ಈ ಮಾರಿ-ಮಸಣಿಗಳ ಬಾಯಿಗಳಿಗೆ ಬಲಿಕೊಟ್ಟು ಬದುಕಬೇಕಾಗಿದೆ. ಎಲ್ಲ ಕಡೆಗೂ ಇದೇ ಪರಿಸ್ಥಿತಿ. ಹೀಗಿರುವಾಗ ನಮ್ಮ ಜನಸಾಮಾನ್ಯರ ಬದುಕೊಂದು ಹರಿ ಹಿಂಗದ ಹೋರಾಟವಾಗಿ ಪರಿಣಮಿಸಿದ್ದರೆ ಅದರಲ್ಲಿ ಆಶ್ಚರ್ಯವೇನು? ಪ್ರತಿಯೊಬ್ಬ ಕುಟುಂಬಿಯು ತಲೆಯಲ್ಲಿಯೂ ಇಂದು-ಹಗಲೂ ಇರುಳೂ-ಬದುಕಿನ ಕೊರತೆಯ ಚಿಂತೆಯೇ ಚಿಂತೆ. ಇದರಿಂದ ಅವನ ಆನುವಂಶಿಕ ಸುಸಂಸ್ಕೃತಿಯು ಮಸುಳಿಸಿರುವುದು; ಸಮಕಾಲದ ಸುಸಂಸ್ಕೃತಿಯ ಕಡೆಗೆ ಕಣ್ಣು ಹಾಕಲಿಕ್ಕೂ ಅಶಕ್ಯವಾಗಿರುವುದು. ಇದರಿಂದ ಕುಟುಂಬದ ಜನರಲ್ಲಿಯ ಸಂಸ್ಕೃತಿನಿಷ್ಠೆಯೂ ಕುಸಿಯುತ್ತ ಹೊರಟಿದೆ. ಎಂತಲೇ ಕೌಟುಂಬಿಕ ಜೀವನವೂ ಇಂದು ವಿಷಮವಾಗಿದೆ. ಇದರ ಪರಿಣಾಮ, ನಮ್ಮ ರಾಷ್ಟ್ರದ ಭವಿಷ್ಯದ ಮೇಲೆ ಯಾವ ಬಗೆಯ ದಾದೀತು?— ಎಂಬ ವಿಚಾರ ಬಂದಾಗ, ಮುನ್ನೋಟದ ಬುದ್ಧಿವಂತರ ಎದೆಯು ಭುಗಿಲೆನ್ನದೆ ಇರದು.

ಹೊರಗೆ ನೋಡಿದರೆ, ಇಂದಿನ ವೈಜ್ಞಾನಿಕಯುಗವು ನಮ್ಮ ಜೀವನಕ್ಕೆ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ. ದಾರಿ-ದಾರಿಗಳಲ್ಲಿ ಓಡಾಡುವ ಮೋಟಾರ್ ಕಾರು-ಬಸ್ಸುಗಳು, ಆಕಾಶದಲ್ಲಿ ಹಾರಾಡುತ್ತಿರುವ ವಿಮಾನಗಳು, ರಾತ್ರಿಯನ್ನೂ ಹಗಲನ್ನಾಗಿಸುವ ಮಿಂಚಿನ ದೀಪ, ಲೋಕದ ವಾರ್ತೆಯನ್ನೆಲ್ಲ ಕುಳಿತಲ್ಲಿಯೆ ತಿಳುಹುವ ರೇಡಿಯೊ, ಭೂಮಿಯನ್ನು ಸ್ವರ್ಗವನ್ನಾಗಿ ಮಾರ್ಪಡಿಸುವೆವೆಂಬ ಸರಕಾರದ ಉಗ್ಗಡಣೆ— ಇವುಗಳನ್ನೆಲ್ಲ ನೋಡುತ್ತಿರುವಾಗ, ನಮ್ಮ ಜೀವನವು ಮೇಲಕ್ಕೆ ಏರುತ್ತಿರುವುದೇನೋ— ಎಂದು ಕ್ಷಣಹೊತ್ತು ಎನಿಸುವುದು. ಆದರೆ ನಾಡಿನ ವ್ಯಕ್ತಿ-ವ್ಯಕ್ತಿಗಳ ಬದುಕನ್ನು ವಿಶ್ಲೇಷಿಸಿ ನೋಡಿದಾಗ, ಎಲ್ಲೆಲ್ಲಿಯೂ ನಿರಾಶೆ-ಅತೃಪ್ತಿ-ಅಸಂತುಷ್ಟಿಗಳೇ ಕಂಡು ಬರುತ್ತಲಿವೆ. ಭಾರತೀಯ ಸಂಸ್ಕೃತಿ-ಸ್ವಭಾವಗಳಿಗೆ ಅಸಹಜವೆನಿಸುವಂತಹ ಸಂಗತಿಯಿದು. ಶಕ್ಕರು-ಪೆಂಢಾರಿಗಳು ದಾಳಿಮಾಡುತ್ತಿದ್ದ ಕಾಲದಲ್ಲಿಯ ಭಾರತೀಯ ಜನಜೀವನ ಇಷ್ಟೊಂದು ಅಸ್ಥಿರವಾಗಿರಲಿಲ್ಲ; ನಿರಾಶಾಮಯವಾಗಿರಲಿಲ್ಲ. ಇಂದು ಉಣ್ಣುವ ಅನ್ನಕ್ಕೇ ತತ್ವಾರ ಬಂದು ಕುಳಿತುದರಿಂದ ಜನರೆಲ್ಲರೂ ಗಾಬರಿಗೊಂಡಿದ್ದಾರೆ. ಹೀಗೆ ಜನತೆಯನ್ನು ಗಾಬರಿಯ ಪರಿಸ್ಥಿತಿಯಲ್ಲಿ ಇರಿಸುವುದು ನಮ್ಮ ಸರಕಾರಕ್ಕೂ ಒಳ್ಳೆಯದಲ್ಲ; ನಮ್ಮ ಸಿರಿವಂತರ ಸುಖಜೀವನಕ್ಕೂ ಒಳ್ಳೆಯದಲ್ಲ.

ಕಲ್ಯಾಣರಾಷ್ಟ್ರವನ್ನು ಆದರ್ಶವನ್ನಾಗಿ ಇರಿಸಿಕೊಂಡಿರುವ ನಮ್ಮ ಸರಕಾರದ ಯಾವ ಯೋಜನೆಯು ಮುಂದೆ ಬಂದರೂ, ಅದರಲ್ಲಿಯ ಮೊದಲನೆಯ ಕಾರ್ಯಕ್ರಮ, ನಮ್ಮ ಜನತೆಯ ಬದುಕಿನ ಹೋರಾಟವನ್ನು ನಿಲ್ಲಿಸುವಂತಹದಾಗಿ ಇರಲಿ. ಭಾಕ್ರಾನಾಂಗಲ್, ದಾಮೋದರ ಕಣಿವೆ ಮೊದಲಾದ ಯೋಜನೆಗಳು, ನಮ್ಮ ಸರಕಾರದ ಕರ್ತೃತ್ವಶಕ್ತಿಗೆ ಕೋಡು ಮೂಡಿಸಿರಬಹುದು; ಆದರೆ ಅವುಗಳಿಂದ—ಅಂತಹ ಬೇರೆಯವುಗಳಿಂದ-ಜನತೆಯ ಬದುಕಿನ ಹೋರಾಟ ಇನ್ನಿಷ್ಟು ಹೆಚ್ಚಾಯಿತು. ಇದೆಂತಹ ಕಲ್ಯಾಣ ಸಾಧನೆ?

—ಸಂಪಾದಕರು

ದೀವಳಿಗೆಯಲ್ಲಿ ಮನೆಮನೆಗಳನ್ನು ಬೆಳಗಿಸಿದ

ದೀವಿಗೆಗಳ ಬೆಳಕು

ಭಾರತೀಯರೆಲ್ಲರ ಮನ-ಮನಗಳನ್ನೂ ಬೆಳಗಿಸಲು

ಸಹಕಾರಿಯಾಗಲಿ!

'ಅಗ್ನೇ ನಯ ಸುಪಥಾರಾಯೇ ಅಸ್ಮಾನ್!'

ನಾಡ ನಡೆ

ಸಾಹಿತ್ಯಪಾಕದ ಪಕ್ಕಪುಸ್ತಕಗಳು

ಮೈಸೂರು ಸರಕಾರದವರು ಶಾಲೆಯ ಪಾಠ್ಯಪುಸ್ತಕಗಳನ್ನೆಲ್ಲ ತಾನೇ ತಯಾರಿಸಿ ಪ್ರಕಟಿಸುವುದಾಗಿ, ಕಾಲವಲ್ಲದ ಕಾಲದಲ್ಲಿ ತಿಳುಹಿದ್ದರಷ್ಟೇ! ಸರಕಾರದವರು ಮೊದಲು ಕೊಟ್ಟ ತಿಳಿವಳಿಕೆಯ ಪ್ರಕಾರ ಅನೇಕ ಜನ ಸಾಹಿತ್ಯಕರೂ ಪ್ರಕಾಶಕರೂ ಬೇರೆ ಬೇರೆ ಪಾಠ್ಯಪುಸ್ತಕಗಳನ್ನು ತಯಾರಿಸಿದ್ದರು. ಅದಕ್ಕಾಗಿ ಅವಶ್ಯಕವಾದ ಹಣವನ್ನೂ ವೆಚ್ಚಮಾಡಿದ್ದರು. ಇದಾವುದನ್ನೂ ಗಣನೆಗೆ ತಾರದೆ, ಸರಕಾರದ ಅಧಿಕಾರಿಗಳಾರೋ ಸ್ವಂತದ ಬುದ್ದಿಯನ್ನು ಉಪಯೋಗಿಸಿ, ಎಲ್ಲ ಪಾಠ್ಯಪುಸ್ತಕಗಳ ರಾಷ್ಟ್ರೀಕರಣದ ಆಜ್ಞೆಯ ಸಿಡಿಲನ್ನು ಗುಡುಗಿಸಿದರು.

ಇದರಿಂದ ಹಾನಿಗೊಳಗಾದ ಉತ್ತರ ಕರ್ನಾಟಕದ ಪ್ರಕಾಶಕರ ಪರವಾಗಿ ಹೋದ ಶಿಷ್ಟಮಂಡಳವೊಂದು, ರಾಜಧಾನಿಯ ವರೆಗೆ ಹೋಗಿ, ಶಿಕ್ಷಣ ಮಂತ್ರಿಗಳನ್ನು ಕಂಡು ತಮ್ಮ ಕಷ್ಟ-ನಷ್ಟಗಳನ್ನು ತಿಳುಹಿತು. ಅದನ್ನು ಸಹಾನುಭೂತಿಯಿಂದ ಕೇಳಿಕೊಂಡ ಶಿಕ್ಷಣಮಂತ್ರಿಗಳು, ಸದ್ಯ ಪಾಠ್ಯಪುಸ್ತಕಗಳನ್ನು ರಾಷ್ಟ್ರೀಕರಿಸದಿರುವಂತೆ ಮುಖತಃ ಆಶ್ವಾಸನ ಕೊಟ್ಟಿದ್ದಾರೆ.

ಆದರೆ ಆ ಆಶ್ವಾಸನ ದೊರೆತು ೧೫–೨೦ ದಿನಗಳು ಕಳೆದುಹೋದರೂ, ಇದುವರೆಗೂ ಲಿಖಿತಮೂಲಕವಾಗಿ ಅಧಿಕೃತ ಆಜ್ಞೆ ಹೊರಟಿಲ್ಲ. ಇದರಿಂದ ಪಾಠ್ಯಪುಸ್ತಕಗಳ ನಿರ್ಮಾಪಕರಿಗೆ ಸಂದಿಗ್ಧ ಪರಿಸ್ಥಿತಿಯು ಉಂಟಾಗಿದೆ. ನಮ್ಮ ಸರಕಾರದಲ್ಲಿರುವ ಅಧಿಕಾರಿಗಳ ರೀತಿ ಕುಂಬಳರಾಜಪಟ್ಟಣದ ಕತ್ತಲಿಕೋಣೆಯ ಅಳಿಕೆಯಂತಿದೆ. ಅಲ್ಲಿ ಒಂದು ವಿಚಾರಪೂರ್ವಕ ಧೋರಣೆಯಿಂದ ಕೆಲಸಗಳು ನಡೆಯದೆ ಎಲ್ಲವೂ ಅಧಿಕಾರಿ ವ್ಯಕ್ತಿಗಳ ತಾತ್ಕಾಲಿಕ ಮನೋಲಹರಿಯ ಮೇಲೆ ನಡೆದಿರುವಂತೆ ಕಾಣುತ್ತಲಿದೆ. ಅಧಿಕಾರಿಗಳ ಈ ಮನೋಲಹರಿ, ಯಾವಾಗ ಯಾವ ಬಗೆಯ ಆಜ್ಞೆಯನ್ನು ಹೊರಡಿಸೀತೆಂಬುದರ ನಿಯಮವಿಲ್ಲ. ಆ ಆಜ್ಞೆಯ ಕಾಯಿದೆಬದ್ಧತೆಯ ಕಡೆಗೆ ಕೂಡ ಅಷ್ಟೊಂದು ಲಕ್ಷ್ಯಕೊಟ್ಟಿರುವುದಿಲ್ಲ. ಮೈಸೂರು ವಿದ್ಯಾಭ್ಯಾಸ ಇಲಾಖೆಯಲ್ಲಿ, ಕಳೆದ ತಿಂಗಳಲ್ಲಿಯೆ ನಡೆದ ಅಕ್ರಮ ಸ್ಥಾನವ್ಯತ್ಯಾಸಗಳ ಪ್ರಕರಣ, ಈಗಾಗಲೇ ಕೋರ್ಟಿಗೆ ಹೋಗಿದೆ. ಕೋರ್ಟಿನ ನ್ಯಾಯ ಹಾನಿಗೊಳಗಾದ ನೌಕರರಿಗೆ ಅನುಕೂಲವಾಗಿ ದೊರೆತರೆ, ವಿದ್ಯಾಖಾತೆಯ ಮುಖ್ಯಾಧಿಕಾರಿಗಳ ಮರ್ಯಾದೆ ಸಂತೆಯಲ್ಲಿ ಮಾರಾಟವಾಗುವುದು.

ಇಂತಹ ಸಂದರ್ಭಗಳು ಆಗಾಗ ಒದಗುತ್ತಿರೆಯಾದರೂ ಮುಖ್ಯಾಧಿಕಾರಿಗಳ 'ಹಂಕರೇಸೋ ಕಾಯದಾರಿ'ವೃತ್ತಿಯೇನೋ ಕಡಿಮೆಯಾಗಲೊಲ್ಲದಾಗಿದೆ. ಆದುದರಿಂದಲೇ ಪಾಠ್ಯಪುಸ್ತಕದ ಪ್ರಕಾಶಕರೆಲ್ಲರೂ ಸಂದೇಹಭಾವದಿಂದ ಭವಿಷ್ಯವನ್ನು ನೋಡುತ್ತಲಿದ್ದಾರೆ. ಸರಕಾರ ಆದಷ್ಟು ಬೇಗನೆ ತನ್ನ ಕೊನೆಯ ನಿರ್ಣಯವನ್ನು ಅಧಿಕೃತವಾಗಿ ಹೊರಡಿಸಿ, ಪಾಠ್ಯಪುಸ್ತಕ ಪ್ರಕಾಶಕರು ಅನುಭವಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯನ್ನು ನಿವಾರಿಸಬೇಕು.

ಕನ್ನಡ ಗ್ರಂಥಕಾರರಿಗೆ ಸರಕಾರದ ಬಹುಮಾನ

ಮೈಸೂರು ಸರಕಾರದವರು 'ಪ್ರಸಕ್ತ ವರ್ಷ'ವಲ್ಲಿಯೂ ಕನ್ನಡ ಗ್ರಂಥಗಳಿಗೆ ಬಹುಮಾನವನ್ನು ಕೊಡುವುದಾಗಿ ಸಾರಿದ್ದಾರೆ. ಬಹುಮಾನಾಪೇಕ್ಷಿಗಳು ತಮ್ಮ ಗ್ರಂಥಗಳ ೩ ಪ್ರತಿಗಳನ್ನು ಮೈಸೂರು ಸರಕಾರದ ಸಾಹಿತ್ಯ-ಸಂಸ್ಕೃತಿ ಪ್ರಚಾರಶಾಖೆಯ ಅಧಿಕಾರಿಗಳ ಕಡೆಗೆ ಬರಲಿರುವ ಡಿಸೆಂಬರ್ ೧೫ನೆಯ ದಿನಾಂಕದೊಳಗಾಗಿ ತಲ್ಪುವಂತೆ ಕಳುಹಿಸಬೇಕಂತೆ ಆ ಗ್ರಂಥಗಳು ಪ್ರಸಕ್ತ ವರ್ಷದಲ್ಲಿ ಪ್ರಕಟಿಸಿದುವಾಗಿಯೇ ಇರಬೇಕಂತೆ.

'ಪ್ರಸಕ್ತ ವರ್ಷ'ಎಂದರೇನೆಂಬುದರ ವಿವರಣೆಯು ಪ್ರಕಟಣೆಯಲ್ಲಿ ಕಾಣುವುದಿಲ್ಲ. ೧೯೫೯ನೆಯ ಜನವರಿ ೧ನೆಯ ದಿನಾಂಕದಿಂದ ಪ್ರಾರಂಭ ವರ್ಷವನ್ನೆ 'ಪ್ರಸಕ್ತ ವರ್ಷ' ಎಂದು ತಿಳಿದುಕೊಂಡರೆ, ಕಳೆದ ವರ್ಷದ ಡಿಸೆಂಬರ್ ತಿಂಗಳಲ್ಲಿ ಪ್ರಕಟವಾದ ಗ್ರಂಥಗಳ ಗತಿಯೇನು? ಕಳೆದವರ್ಷದ ಬಹುಮಾನಾವಧಿಗೆ ಒಳಗಾಗದೆ ಅನೇಕ ಗ್ರಂಥಗಳು ಡಿಸೆಂಬರ್ ತಿಂಗಳಲ್ಲಿ ಅಚ್ಚಾಗಿ ಪ್ರಕಟವಾಗಿರಬಹುದು. ಅವು ಕಳೆದ ವರ್ಷದ ಬಹುಮಾನ ನಿರ್ಣಾಯಕರ ಕಣ್ಣಿಗೆ ಬಿದ್ದಿರಲೂ ಸಾಧ್ಯವಿಲ್ಲ. ಅಂತಹ ಗ್ರಂಥಗಳು ಬಹುಮಾನಸ್ಪರ್ಧೆಗೆ ಅನರ್ಹವಾಗಿಯೇ ಉಳಿಯಬೇಕೆ? ಇದರ ಬಗೆಗೆ ನಮ್ಮ ಬಹುಮಾನಾಧಿಕಾರಿಗಳು ಯುಕ್ತ ವಿಚಾರವನ್ನು ಮಾಡಬೇಕಾಗಿ ನಮ್ಮ ಸೂಚನೆ.

ಬಹುಮಾನ ವಿಷಯಕ ಪ್ರಕಟಣೆಯಲ್ಲಿ ಒಂದು ವಿಲಕ್ಷಣವಾದ ನಿಯಮವನ್ನು ನಾವು ನೋಡುವೆವು. ಒಂದು ವರ್ಷ ಒಂದು ವರ್ಗಕ್ಕೆ ಸೇರಿದ ಗ್ರಂಥಕ್ಕೆ ಬಹುಮಾನ ಪಡೆದವನು, ಮುಂದೆ ಮೂರು ವರ್ಷಗಳ ವರೆಗೆ ಆ ವರ್ಗದ ತನ್ನ ಗ್ರಂಥಕ್ಕೆ ಬಹುಮಾನವನ್ನು ಪಡೆಯಲಾರ. ಇದು ಪೂರ್ಣವಿಚಾರಮಾಡಿಮಾಡಿದ ನಿಯಮವೆಂದು ಎನಿಸುವುದಲ್ಲವೆ?

ಸರಕಾರ ಗ್ರಂಥಕರ್ತರಿಗೆ ಕೊಡುತ್ತಿರುವುದು ಬಹುಮಾನವೋ ಪ್ರೋತ್ಸಾಹಧನವೋ? ಪ್ರೋತ್ಸಾಹಧನವೆಂದು ಆದರೆ, ಆ ನಿಯಮವನ್ನು ಹಾಕಬಹುದು. ಆದರೆ ಸರಕಾರ ಬಹುಮಾನಕ್ಕಾಗಿ ಗ್ರಂಥಗಳ ಮೇಲಾಟವನ್ನು ಏರ್ಪಡಿಸುತ್ತಿದೆ. ನಿರ್ಣಾಯಕರು ಗ್ರಂಥಗಳನ್ನು ೧ನೆಯ ೨ನೆಯ ೩ನೆಯ ಬಹುಮಾನಗಳಿಗೆ ಅರ್ಹವಾದುವುಗಳೆಂದು ನಿರ್ಣಯಿಸುವರು. ಒಂದು ವಿಧದಿಂದ ಇದು ಮೇಲಾಟವೇ ಸರಿ. ಮೊದಲನೆಯ ಬಹುಮಾನ ಪಡೆದವರಿಗಾಗಿ ಇಂತಹ ನಿಯಮಗಳನ್ನು ಹಾಕಿದರೂ ಹಾಕಬಹುದು. ೨–೩ನೆಯ ಬಹುಮಾನ ಪಡೆದವರು ಮೊದಲನೆಯ ಬಹುಮಾನಕ್ಕಾಗಿ ಪ್ರಯತ್ನ ಮಾಡಬಹುದಲ್ಲವೆ? ಮುಂದಿನ ಮೂರು ವರ್ಷಗಳಲ್ಲಿ ಮೊದಲನೆಯ ಬಹುಮಾನಕ್ಕೆ ತಕ್ಕುವಾದ ಗ್ರಂಥಗಳನ್ನು ಆ ಲೇಖಕರು ಬರೆದರೆ, ಅವರು ತಮಗೆ ಸಲ್ಲಬಹುದಾದ ಮನ್ನಣೆಯ ಸಂದರ್ಭಗಳನ್ನು ಕಳೆದುಕೊಳ್ಳಬೇಕೆ? ಇಲ್ಲವೆ ಮೂರು ವರ್ಷಗಳವರೆಗೆ ಅವರು ಅಂತಹ ಗ್ರಂಥಗಳನ್ನು ಪ್ರಕಟಿಸದೆ ನಾಲ್ಕನೆಯ ವರ್ಷದ ದಾರಿ ಕಾಯುತ್ತ ಕುಳಿತುಕೊಳ್ಳಬೇಕೆ! ಇದು ಸಮಂಜಸವಾದ

ನಿಯನು ಎನಿಸುವುದೇ? ಒಂದು ವರ್ಗದಲ್ಲಿ ಒಮ್ಮೆ ಮೊದಲನೆಯ ಬಹುಮಾನವನ್ನು ಪಡೆದ ಲೇಖಕನು, ಮೂರು ವರ್ಷವೇಕೆ ಆರು ವರ್ಷದ ವರೆಗೂ ಆ ವರ್ಗದಮಟ್ಟಿಗೆ ಬಿಟ್ಟುಬಿಡಬಹುದು. ಈ ನಿಯಮದ ಸದೋಷತೆಯ ಕುರಿತು, ಬಹುಮಾನವಿತರಣಾಧಿಕಾರಿಗಳು ಮತ್ತೊಮ್ಮೆ ವಿಚಾರ ಮಾಡಬೇಕಲ್ಲದೆ, ಕಳೆದ ವರ್ಷದ ಡಿಸೆಂಬರ್ ತಿಂಗಳಲ್ಲಿ ಪ್ರಕಟವಾದ ಗ್ರಂಥಗಳನ್ನೂ ಬಹು-ಮಾನಕ್ಕಾಗಿ ಬರ ಮಾಡಿಕೊಳ್ಳಬೇಕು.

ಸಕ್ಕರೆಗಾಗಿ ಹಾಹಾಕಾರ!

ಅಖಿಲಭಾರತದಲ್ಲಿ ಎಲ್ಲ ಕಡೆಗೂ ಸಕ್ಕರೆಯ ಕೊರತೆಯಿರಬಹುದಾದರೂ, ಅದಕ್ಕಾಗಿ ಉತ್ತರಕರ್ನಾಟಕಸ್ಥರು ಪಡುತ್ತಿರುವಷ್ಟು ತೊಂದರೆಯನ್ನು ಯಾರೂ ಪಡುತ್ತಿಲ್ಲವೆಂದು ಹೇಳಿದರೆ, ಅದು ಅತಿಶಯೋಕ್ತಿಯ ಮಾತಲ್ಲ. ಪರಿಸ್ಥಿತಿಯ ಮೂಲಕ ಸಕ್ಕರೆಯೂ ಇಂದು ಉಪ್ಪಿನಷ್ಟೇ ಜೀವನಾವಶ್ಯಕ ಪದಾರ್ಥವಾಗಿ ಕುಳಿತಿದೆ; ಆದರೆ ಇಂದು ನಮ್ಮ ಜನರು ಸಕ್ಕರೆಗಾಗಿ ಬಾಯಿ — ಬಾಯಿ ಬಿಡುತ್ತಿರುವ ದೃಶ್ಯ ಎಲ್ಲ ಕಡೆಗೂ ಕಂಡುಬರುತ್ತಲಿದೆ. ನಿಜವಾಗಿ ನೋಡಿದರೆ, ಕರ್ನಾಟಕವು ಸಕ್ಕರೆಯ ಉತ್ಪಾದನೆಯ ದೃಷ್ಟಿಯಿಂದ ಹಿಂದೆ ಬಿದ್ದ ಪ್ರಾಂತ್ಯವಲ್ಲ. ಇಲ್ಲಿ ಆರೇಳು ದೊಡ್ಡ ದೊಡ್ಡ ಸಕ್ಕರೆಯ ಕಾರಖಾನೆಗಳಿವೆ. ಆಯಿ ಕಾರಖಾನೆಗಳಲ್ಲಿ ಉತ್ಪನ್ನವಾಗುವ ಸಕ್ಕರೆಯ ಪ್ರಮಾಣವನ್ನು ಲೆಕ್ಕಿಸಿದರೆ, ಕರ್ನಾಟಕ ಸಕ್ಕರೆಯ ವಿಷಯದಲ್ಲಿ ಕೊರತೆಯ ಪ್ರಾಂತ್ಯವೆನಿಸದು. ಆದರೂ ಈ ಕರ್ನಾಟಕ ರಾಜ್ಯದ ಒಂದು ಮುಖ್ಯಾಂಗವಾದ ಉತ್ತರ ಕರ್ನಾಟಕದ ಭಾಗದ ಜನತೆ ಸಕ್ಕರೆಯ ಹಾಹಾಕಾರಕ್ಕೆ ಸಿಕ್ಕಿಕೊಂಡಿದೆ.

ಜನತೆಗೆ ಸಾಲುವಷ್ಟು ಸಕ್ಕರೆ ದೇಶದಲ್ಲಿದ್ದರೂ, ಅದು ಜನತೆಗೆ ಯೋಗ್ಯ ಪ್ರಮಾಣದಲ್ಲಿ ಸಲ್ಲದಿರುವ ಅಪರಾಧಕ್ಕೆ ಕಾರಣರಾರು? ಸಕ್ಕರೆಯ ಕಾರಖಾನೆಗಳ ಒಡೆಯರೊ, ಅವರ ಮೇಲೆ ನಿಯಂತ್ರಣವನ್ನು ಹೇರಿದ ಸರಕಾರವರೊ, ಸಕ್ಕರೆಯನ್ನು ಹಂಚಿ ಮಾರಲು ಕೊಡುವ ಅಲ್ಲಲ್ಲಿಯ ಅಧಿಕಾರಿಗಳೊ, ವ್ಯಾಪಾರಿಗಳೊ? ಸೂಕ್ಷ್ಮವಾಗಿ ಪರೀಕ್ಷೆ ನಿಮರ್ಶೆ ಮಾಡಿನೋಡಿದರೆ, ಇಂದಿನ ಈ ಸಕ್ಕರೆಯ ಹಾಹಾಕಾರಕ್ಕೆ ಇವರೆಲ್ಲರೂ ತಪ್ಪುಗಾರರಾಗಿ ಕಾಣುವರು.

ಸರಕಾರ ಹೇರಿದ ಸುಂಕ-ನಿಯಂತ್ರಣಗಳ ಮೂಲಕ, ಲಾಭದಾಸೆಯ ಕಾರಖಾನೆದಾರರು ತಮ್ಮ ಕಾರಖಾನೆಗಳಲ್ಲಿಯ ಉತ್ಪತ್ತಿಯನ್ನು ಕಡಮೆ ತೋರಿಸುವರು. ತನ್ನ ನಿಯಂತ್ರಣಕ್ಕೆ ಬಂದಷ್ಟು ಸಕ್ಕರೆಯನ್ನು ಸರಕಾರ ಯಾವು ಯಾವುವೋ ಕಾರಣಗಳಿಂದ ಅಲ್ಲಲ್ಲಿ ತಡೆದು ಹಿಡಿಯುವುದು. ಅದು ಜನರಿಗೆ ಕೊಡಲೆಂದು ತೆಗೆದ ಸಕ್ಕರೆ, ಲಂಚಗುಳಿಗಳಾದ ಅಲ್ಲಲ್ಲಿಯ ಅಧಿಕಾರಿಗಳ ಸ್ವಾರ್ಥಸಾಧನೆಯ ಮೂಲಕ ಅಲ್ಪ ಪ್ರಮಾಣದಲ್ಲಿ ವಿಲಂಬವಾಗಿ ಪೇಟೆಗೆ ಬರುವುದು, ಕಳ್ಳಪೇಟೆಯ ಸವಿಗಲಿತ ಸಕ್ಕರೆ ವ್ಯಾಪಾರಿಗಳು, ಆ ದೊರೆತಷ್ಟು ಸಕ್ಕರೆಯೂ ಯೋಗ್ಯ ರೀತಿಯಲ್ಲಿ ಜನರಿಗೆ ದೊರೆಯದಂತೆ ಕೈಚಳಕ ತೋರಿಸುವರು.

ಕ್ಯೂ ಪದ್ಧತಿಯಿಂದ ಸಕರೆಯನ್ನು ಜನರು ಪಡೆಯಬೇಕಾಗುವ ಇಂದಿನ ರೀತಿಯನ್ನು ನೋಡಿದರೆ, ನಿಜವಾಗಿ ಸಕ್ಕರೆ ಬೇಕಾದವರಿಗೆ ಸಕ್ಕರೆ ದೊರಯುವಂತಿಲ್ಲ. ಆ ಕ್ಯೂದಲ್ಲಿ ನಿಂತ ಜನರನ್ನು ನೋಡಿದರೆ ಹೆಚ್ಚಿನ ಜನರು, ತಾವು ಪ್ರಯತ್ನಪೂರ್ವಕವಾಗಿ ಪಡೆದ ಸಕ್ಕರೆಯನ್ನು ಕಳ್ಳಪೇಟೆಯಲ್ಲಿ ಹೆಚ್ಚಿನ ಬೆಲೆ ತೆಗೆದುಕೊಂಡು ಮಾರಾಟ ಮಾಡುವವರೇ ಇನುವರು. ಇದೊಂದು ನಿತ್ಯೋದ್ಯಮವೇ ಆಗಿದೆ. ತನುಗಿದ್ದ ಕೆಲಸವನ್ನು ಬಿಟ್ಟು, ಕಾಲವಲ್ಲದ ಕಾಲದಲ್ಲಿ ಕ್ಯೂದಲ್ಲಿ ಬಂದು; ನಿಲ್ಲಲು ಎಲ್ಲ ನಾಗರಿಕರಿಕರಿಗೂ ಎಲ್ಲಿ ಸಾಧ್ಯವಾಗುವುದು. ಇಂತಹ ನಾಗರಿಕರು ಸಕ್ಕರೆಯ ಆಶೆಯನ್ನು ಬಿಟ್ಟು ಬದುಕಬೇಕು-ಒಂದು; ಇಲ್ಲವಾದರೆ ಕಳ್ಳಪೇಟೆಯ ಗಿರಾಕಿಗಳಾಗಿ ಹಣ ಕಳೆದುಕೊಳ್ಳಬೇಕು-ಒಂದು. ದೀಪಾವಳಿಯಂತಹ ದೊಡ್ಡ ಹಬ್ಬವನ್ನೂ ಸಕ್ಕರೆಯಿಲ್ಲದೆ ಮಾಡಿದ ನಾಗರಿಕ ಕುಟುಂಬಗಳು ಎಷ್ಟೋ ಏನೋ! ಇಂತಹ ಹಾಹಾಕಾರಕ್ಕೆ ಕಾರಣರಾದ ಅಪರಾಧಿಗಳನ್ನು ಕಂಡುಹಿಡಿದು, ನಮ್ಮ ಸರಕಾರ ಅವರನ್ನು ದಂಡಿಸಬಾರದೇ? ಧಾರವಾಡ, ಹುಬ್ಬಳ್ಳಿ, ಬೆಳಗಾಂವಿಗಳಂತಹ ನಗರಗಳಲ್ಲಿಯೆ ಸಕ್ಕರೆಯ ಸಲುವಳಿಯ ಈ ಅವ್ಯವಸ್ಥೆ. ಹಳ್ಳಿಗಳಿ ಜನರ ಗೋಳನ್ನಂತೂ ಕೇಳುವವರೇ ಇಲ್ಲ. ಕೆಲ-ಕೆಲವು ಹಳ್ಳಿಗಳಲ್ಲಿ ನಡೆದ-ಸಕ್ಕರೆಯ ಹಂಚಿಕೆಯ ವಿಷಯಕವಾದ-ಅನ್ಯಾಯದ ಕಥೆಗಳನ್ನು ಕೇಳಿದರೆ, ಮಾನವತೆಯೆಂಬುದು ನಾಚಿ ತಲೆ ಕೆಳಗೆ ಹಾಕಬೇಕು. ಬಾಯಿಂದ ಬಾಯಿಗೆ ಬಂದು ಕಿವಿಗೆ ಬೀಳುತ್ತಿರುವ ಈ ಕಥೆಗಳು ಸಹೃದಯರನ್ನು ಸಂತಾಪಕ್ಕೆ ಗುರಿಮಾಡದಿರವು. ಅದರೆ ಎಂತಹ ಅನ್ಯಾಯಗಳನ್ನೂ ಮೂಕಪಶುಗಳಂತೆ ಸಹಿಸಿ ಸುಮ್ಮನಿರುವ ಜನರಿರುವಲ್ಲಿ ಯಾವ ಸಂತಾಪು ಏನು ಮಾಡಬಲ್ಲದು? ಕಾಲದ ಮೇಲೆ ಭಾರಹಾಕಿ ಕೈಮುಚ್ಚಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ನಾವೆಲ್ಲರೂ ಸಿಕ್ಕಿಕೊಂಡಿದ್ದೇವೆ.

ಈ ಹೆಚ್ಚು-ಕಡಿಮೆಯ ಪಕ್ಷಪಾತವೇಕೆ?

ಈ ಮೊದಲಿನ ಹಂಚುವ ಪದ್ಧತಿಯಿಂದ ಎಲ್ಲರಿಗೂ ಸರಿಯಾಗಿ ಸಕ್ಕರೆ ಸಿಕ್ಕುವುದಿಲ್ಲವೆಂಬ ಕಾರಣದಿಂದ, ಉತ್ತರಕರ್ನಾಟಕದ ನಗರಗಳೆಲ್ಲೆಲ್ಲ ಸೀದಾ ಪದ್ಧತಿಯಿಂದ ಸಕ್ಕರೆಯನ್ನು ಹೆಂಚಬೇಕೆಂದು ಗೊತ್ತುಮಾಡಿದ್ದಾರೆ, ಅಲ್ಲಲ್ಲಿಯ ಅಧಿಕಾರಿಗಳು. ಆದರೆ ಈ ಪದ್ಧತಿಯ ಹಂಚಿಕೆಯಲ್ಲಿ ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ ೧॥ ಪೌಂಡಿನಷ್ಟು ಮಾತ್ರ ಸಕ್ಕರೆ ದೊರೆಯಲಿದೆ. ಈ ಮೊದಲೇ ಸೀದಾಪದ್ಧತಿ ಪ್ರಾರಂಭವಾಗಿರುವ ಹಳೆಯ ಮೈಸೂರು ಪ್ರದೇಶದ ನಗರ ನಿವಾಸಿಗಳಿಗೆ, ಪ್ರತಿಯೊಬ್ಬನಿಗೆ ಪ್ರತಿತಿಂಗಳಿಗೆ ೬ ಪೌಂಡಿನಷ್ಟು ಸಿಗುತ್ತಲಿದೆ. ಸಾಮಾನ್ಯ ಆಹಾರ ಪದಾರ್ಥದ ನಿತರಣೆಯಲ್ಲಿಯೂ ಈ ಬಗೆಯ ಪಕ್ಷಪಾತ ಬುದ್ಧಿಯೇಕೆ? ಈ ಪಕ್ಷಪಾತ ವೃತ್ತಿಗೆ ಸಮಂಜಸವೆನಿಸುವಂತಹ ಕಾರಣಗಳೇನಾದರೂ ಇವೆಯೇ? ಜನರ ನಿತ್ಯಾಹಾರದಲ್ಲಿ ನೈಮಿತ್ತಿಕ ಆಹಾರಗಳಲ್ಲಿ ಮೈಸೂರಿಗರಿಗಿಂತ ಹೆಚ್ಚು ಪ್ರಮಾಣದಲ್ಲಿ ಸಕ್ಕರೆಯನ್ನು ಈ ಭಾಗದಲ್ಲಿ ಬಳಸಲಾಗುತ್ತದೆ. ಕಾಫೀಪಾನಕ್ಕೆ ಪ್ರಾಶಸ್ತ್ಯವಿರುವ ಮೈಸೂರಿಗರಿಗಿಂತಲೂ ಚಹಾಪಾನಕ್ಕೆ ಪ್ರಾಶಸ್ತ್ಯವಿರುವ ಉತ್ತರಕರ್ನಾಟಕದ ಜನರಿಗೆ ಸಕ್ಕರೆಯ ಅಗತ್ಯ ಹೆಚ್ಚಾಗಿರುವುದು,

---

★ ಜೂ ಜು ★

(ಸಣ್ಣಕಥೆ*)

ಶ್ರೀ ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ ಧಾರವಾಡ

ದಾಂಪತ್ಯದ ಸುಖಜೀವನಕ್ಕೆ ಭಾವನಾತ್ಮಕವಾದ ಪ್ರೇಮದ ಬಂಡವಾಳ ಸಾಕೇನು ? ಆ ಪ್ರೇಮೋದಾಂಪತ್ಯ ವ್ಯಾವಹಾರಿಕ ಜಗತ್ತಿನಲ್ಲಿ ಜೀವಿಸಬೇಕಾಗುವುದಲ್ಲವೆ? ಜೀವನಕ್ಕೆ ಭೌತಿಕ ಉಪಕರಣಗಳ ಅಗತ್ಯವಿರುವುದಲ್ಲವೆ? ಇವುಗಳ ಅಭಾವ ಪ್ರೇಮಪ್ರಪಂಚದಲ್ಲಿ ಎಂತಹ ಪ್ರಳಯವನ್ನು ಎಬ್ಬಿಸಬಹುದು?

ಅವಳ ತಂದೆ-ತಾಯಿಗಳು ತೀರ ಬಡವರು. ಅವಳ ಕಾಲೇಜ ಶಿಕ್ಷಣ ನಡೆದದ್ದು ಸಂಬಂಧಿಕರ ಸಹಾಯದಿಂದಲೇ. ಪತ್ತಿರವೆಂದರೆ ಹತ್ತಿರ, ದೂರವೆಂದರೆ ದೂರ-ಇಂತಹ ಬಳಗದವರ ಮನೆಯಲ್ಲಿ ಈಗ ಅವಳ ವಾಸ. ' ಏನೋ, ಬುದ್ಧಿವಂತ ಹುಡುಗಿ. ತಮ್ಮಿಂದ ಆದಷ್ಟು ಸಲ್ಲಲಿ. ಹೇಗಾದರೂ ಅವಳ ಕಲ್ಯಾಣವಾದರೆ ತೀರಿತು— ಎಂದು ಅವಳಿಗೆ ಅವರು ಆಶ್ರಯಕೊಟ್ಟಿದ್ದರು. ಇಂಥ ಪರಿಸ್ಥಿತಿಯಲ್ಲಿದ್ದ ಅವಳು, ಪ್ರೇಮಕಲಾಪದಲ್ಲಿ ತೊಡಗಬೇಕೆಂದರೆ, ಅದೆಂತಹ ಅವಿವೇಕ! ಮೊದಮೊದಲು ಗುಜುಗುಜು ಎಂದು ಪ್ರಾರಂಭವಾಗಿದ್ದು ಈಗದು ಎಲ್ಲರ ಹರಟೆಯ ವಿಷಯವಾಗಿತ್ತು.

ಮನೆಯಲ್ಲಿ ಎಲ್ಲರೂ ಅವಳನ್ನು ವಿರೋಧಿಸುವವರೇ. ಒಂದೂ ಸಹಾನುಭೂತಿಯ ಸ್ವರ ಕೇಳಿಬರಲಿಲ್ಲ. ಸೋದರತ್ತೆ ಸೌಮ್ಯವಾಗಿ ಉಪದೇಶಕ್ಕೆ ಪ್ರಾರಂಭಿಸಿದಳು. "ಇಲ್ಲಿ ನೋಡು, ಆರತೀ, ಇದೊಂದು ನಿನ್ನ ಮನಸ್ಸಿನ ದೌರ್ಬಲ್ಯ. ಆದರೂ ಇವಕ್ಕೆ ಅಷ್ಟೇಕೆ ಮಹತ್ವ ಕೊಡಬೇಕು ? ನೀನೇ ಹೇಳುವಂತೆ, ವಿಷಯ ಅಷ್ಟೇನೂ ದೂರ ಹೋಗಿಲ್ಲ. ಇನ್ನೂ ಯಾವ ತೊಡಕೂ ಉಪ್ಪವಿಸಿಲ್ಲ. ಜೀವನದಲ್ಲಿ ಎಲ್ಲರೂ ಎಷ್ಟೋ ಮುಖ-ನಿರಾಶೆಗಳನ್ನು ಅನುಭವಿಸಲೇ ಬೇಕಾಗುವುದು. ಇಂಥ ಕಷ್ಟ-ನಷ್ಟಗಳನ್ನು ನಾವೆಷ್ಟು ಎದುರಿಸಿಲ್ಲ ? ಅವನ್ನೆಲ್ಲ ಮರೆತು, ಪುನಃ ನಗುತ್ತ ನಮ್ಮ ನಿತ್ಯಕಾರ್ಯದಲ್ಲಿ ತೊಡಗಿಲ್ಲವೆ ? ನಿನ್ನದು ನಮ್ಮ ಅರ್ಥವಹ್ಯೂ ಅಲ್ಲ. ಮೆಲ್ಲಗೇ ಇದನ್ನು ಮನಸ್ಸಿನಿಂದ ಪೂರ್ಣ ಅಳಿಸಿ ಬಿಡಬಹುದು. "

ನಿಷ್ಠುರಳಾದ ಕಕ್ಕಿಯು ಮಾತ್ರ ಜಿನ್ನಾಗಿಯೇ ಹೊಡೆತ ಕೊಟ್ಟಳು: " ಅಲ್ಲವೇ, ಈ ನಿನ್ನ ಮಾನಸಿಕರಾಯನು ಜೈಲುವಿನಲ್ಲಿ ಚಂದ್ರಾಮನೇ ? ಆ ಕಾಮಣ್ಣನ ಸಮಾಸರು ಮುತ್ತಿನ್ನಾರೂ ದೊರೆಯರೇ ? ಅವನನ್ನು ಮದುವೆಯಾಗಿ ನೀನಾವ ರಾಜ್ಯಸೌಖ್ಯವನ್ನು ಅನುಭವಿಸುವಳು ? ಅವನೊಬ್ಬ ಅಷ್ಟದರಿದ್ರ ! ಅದೇನೊ ಅನ್ನುತ್ತಾರಲ್ಲ, ಸಂನ್ಯಾಸಿಯನ್ನು ಅಪ್ಪಿಕೊಂಡರೆ ಮೈಯೆಲ್ಲ ಬೂದಿಯಂತೆ ! ನಿನ್ನ ಹಣೆಬರೆಹದಲ್ಲಿ ಏನೇನಿದೆಯೊ ಯಾರಿಗೆ ಗೊತ್ತು ? "

ಕಕ್ಕಳು ಒಂದು ಮಹತ್ತ್ವದ ಕೆಲಸಕ್ಕಾಗಿ ದಿಲ್ಲಿಗೆ ಹೊರಟು ನಿಂತಿದ್ದನು. ಅಷ್ಟರದಲ್ಲಿ ಅವನೂ ಪನಿಗೂಡಿಸಿದನು :

" ಅವನ ನಡತೆಯೂ ಸರಿಯಾಗಿಲ್ಲವೆಂದು ನನ್ನ ಕಿವಿಗೆ ಬಿದ್ದಿದೆ. ಹಿಂದಕ್ಕವನು ಜೂಜಾಡುತ್ತಿದ್ದನಂತೆ. ಈಗ ಬಿಟ್ಟಿರಬೇಕು. ಆದರೂ ಅವನ ಒಲವು ಎತ್ತಕಡೆ ಎಂಬುದು ಸ್ಪಷ್ಟವಿದೆ. "

ಕಕ್ಕನ ಭಗಿನಿಯು ಇದಕ್ಕೂ ವ್ಯಾವಹಾರಿಕ ದೃಷ್ಟಿಯಿಂದ ನುಡಿದಳು :

" ಈ ಮನುಷ್ಯನಿಗೆ ಹೊಲ-ಮನೆ ಆಸ್ತಿ-ಪಾಸ್ತಿ ಏನಾದರೂ ಉಂಟೇ ? ಸಂಸಾರದಲ್ಲಿ ಕೇವಲ ಪ್ರೀತಿಯೊಂದಿದ್ದರೆ ಸಾಲದು. ಹೊಟ್ಟೆ ಬಟ್ಟೆಗಳ ವಿಚಾರವನ್ನೂ ಮಾಡಬೇಕಾಗುವುದು. ದೇಶದಲ್ಲಿ ಇವನಂಥವರು ಮತ್ತಿನ್ನಾರೂ ದೊರೆಯಲಾರರೇ ?

" ಕಕ್ಕಿ, ನಿನಗೆ ತಿಳಿಯುವುದೇ ಇಲ್ಲ ನೋಡು. ಇಷ್ಟು ಮುದುಕಿಯಾಗಿ, ನೀನು ದಿನಾಲೂ ಪುರಾಣ ಕೇಳುತ್ತಿರುವದು ವ್ಯರ್ಥ. ಅಲ್ಲ, ಇಕೆ ಸಾವಿತ್ರಿ, ಆತ ಸತ್ಯವಾನ ! ಏನೂ ದೊರೆಯದಿದ್ದರೂ, ಕೊನೆಗೆ ಕಟ್ಟಿಗೆ ಹೊರೆ ಮಾರಿ ಹೊಟ್ಟೆತುಂಬಿಕೊಳ್ಳುವರು. " ಎಂದು ಮತ್ತೊಬ್ಬಳು ಅಣಕಿಸಿ ನುಡಿದಳು.

" ಆ ಸತ್ಯವಾಸನ ತಂದೆ ರಾಜನಾಗಿದ್ದ. ಅವರಿಗೆ ರಾಜ್ಯ ತಿರುಗಿ ದೊರೆಯುವ ಸಂಭವವಾದರೂ ಇತ್ತು. ಇವರಿಗೆ ಮಾತ್ರ ಕಟ್ಟಿಗೆಮಾರುವುದೇ ಕಡೆತನಕ ಕಟ್ಟಟ್ಟದ್ದು. " ಎಂಬುದು ಕಕ್ಕಿಯ ಕಟೂಕ್ತಿ.

ಇದೇ ಜಾಡನ್ನು ಹಿಡಿದು ಮಾತು ಸಾಗಿತು.

ಆರತಿಯು ಎಲ್ಲವನ್ನೂ ಮೌನವಾಗಿ ಕೇಳಿದಳು. ಅವರ ಮಾತಿನಲ್ಲಿ ಯಾವುದೂ ಅಸತ್ಯವೆಂದು ಅವಳಿಗೆ ಎನಿಸಲಿಲ್ಲ. ಆದರೂ ಅವರಿಂದ ಆಘಾತವಾಗಲಿಲ್ಲ. ಆಘಾತವಾದುದು ಇವರ ಬಿರುನುಡಿಗಳಿಂದಲ್ಲ; ಅದರೆ ಬೇರೆ ಕಾರಣವಿದೆ. ಒಂದು ಶಾಲೆಯಲ್ಲಿ ಆರತಿ ಅರ್ಧಪೇಕೆಯ ಅಧ್ಯಾಪಿಕೆಯ ಕೆಲಸವನ್ನು ಹಿಡಿದಿದ್ದಳು. ಅದರಿಂದ ದೊರೆಯುವ ಅಲ್ಪವೇತನವನ್ನು ಕಾಲೇಜ-ಫೀ ಕೊಡಲು ವಿನಿಯೋಗಿಸುತ್ತಿದ್ದಳು. ಈ ಪ್ರಣಯಕಲಾಪದ ವಾರ್ತೆ ಆ ಶಾಲೆಯ ವ್ಯವಸ್ಥಾಪಕವರ್ಗಕ್ಕೆ ತಲುಪಿ, ಅವರು ಇವಳನ್ನು ಕೆಲಸದಿಂದ ದೂರ ಮಾಡಿದರು. ಈಗ ಇವಳು ಕಾಲೇಜನ್ನೂ ಮನೆಯನ್ನೂ ಕೂಡಿಯೇ ತೊರೆಯಬೇಕಾಗಿ ಬಂದಿತು.

---

* ಸುಪ್ರಸಿದ್ಧ ಬಂಗಾಲೀ ಕತೆಗಾರ ಶ್ರೀ ಪ್ರಬೋಧಕುಮಾರ ಸನ್ಯಾಲ ಅವರ ಕತೆಯೊಂದರ ಆಧಾರದ.

ಮನೆಬಿಟ್ಟು ಹೊರಡುವ ಕಾಲದಲ್ಲಿ ಆಶೀರ್ವಾದವೆಂದು ಈ ನಾಗ್ಬಾಣಗಳನ್ನು ಬಿಡಲಾಯಿತು : " ತಾನು ನೋಡಿದರೆ, ಒಬ್ಬ ದರಿದ್ರನ ಮಗಳು. ಗತಿಗಾಣದೆ, ಮೂರದ ಸಂಬಂಧಿಕರ ಮನೆಯಲ್ಲಿ ವಾಸವಾಗಿದ್ದವಳು. ಇಂಥವಳಿಗೆ ಪ್ರೇಮ-ನಿವಾಹ ಬೇಕಂತೆ! ಆಯಿತು, ಇವಳ ದುರ್ದಶೆಯ ಕಾಲ ದೂರವೇನಿಲ್ಲ. ಇದೇ ಕಣ್ಣಿನಿಂದ ಕಂಡ ರಾಯಿತಲ್ಲೋ ?"

ಮನೆ ಬಿಡುವಾಗ ಆರತಿಯ ಹೃದಯದಲ್ಲಿ ನೋವಿತ್ತು, ಆದರೆ ಪಶ್ಚಾತ್ತಾಪವಿರಲಿಲ್ಲ. ಹಳೆಯ ಸಂಬಂಧಗಳನ್ನೆಲ್ಲ ಅವಳು ಕಡಿದೊಗೆದಳು. ಅದು ದೈವದ ಎಳೆತವಾಗಿತ್ತು. ಆ ಪಾಶದಿಂದ ಕೊಸರಿಕೊಂಡು ಪಾರಾಗುವುದು ಅವಳಿಂದ ಸಾಧ್ಯವಿರಲಿಲ್ಲ.

* * * *

ಒಂದು ದಿನ, ತೀರ ನಸುಕಿನಲ್ಲಿ ಆರತಿಯು ಚಿಕ್ಕದೊಂದು ರೇಲ್ವೆ ನಿಲ್ದಾಣದಲ್ಲಿ ಇಳಿದಳು. ಆಗ ಮಧ್ಯ ಮಳೆಗಾಲ. ಧೋ, ಧೋ ಎಂದು ಮಳೆ ಸುರಿಯುತ್ತಿತ್ತು ಅವಳ ಕೈಯಲ್ಲಿ ಒಂದು ಕಾಗದವಿದ್ದು, ಅದರಲ್ಲಿ ತನ್ನ ಜೀವದ ಗೆಳತಿ ಹಾಗೂ ಸಹಾಯಕಳಾಪ ನೀರಾಳ ಮನೆಯನ್ನು ಹೇಗೆ ತಲುಪಬೇಕು ಎಂಬುದರ ವಿವರಣೆಯಿತ್ತು. ಸ್ಟೇಶನ್ನಿನಿಂದ ಅಂಕುಡೊಂಕಾಗಿ ಸಾಗಿದ ಮಾರ್ಗದಗುಂಟ ಒಂದು ಮೈಲು ನಡೆದನಂತರ, ಬಲಬದಿಗೆ ಒಂದು ಮನೆ ಕಾಣುವುದು. ಅದು ಶುಭ್ರವಾಗಿ ಸುಣ್ಣದಿಂದ ಬಳೆದದ್ದು. ಅಕ್ಕಪಕ್ಕದಲ್ಲಿ ಮತ್ತಿನ್ನಾವ ಮನೆಯೂ ಇಲ್ಲ. ಆದರೆ ಅದರ ಉತ್ತರಕ್ಕೆ ಮಾತ್ರ ಸಮೀಪದಲ್ಲಿ ಒಂದು ಶಿವಾಲಯವಿದೆ. ಆರತಿಯು ಈ ನಿರ್ದೇಶಗಳನ್ನು ಅನುಸರಿಸಿ, ಆ ಶುಭ್ರಸೌಧದ ಎದುರು ಬಂದು ನಿಂತಳು.

ಉಲ್ಲಾಸದಿಂದ ನೀರಾ ಮೆಟ್ಟಿಲುಗಳಿನ್ನಿಳಿದು ಬಂದು ಕೈಕುಲುಕಿ ಕೇಳಿದಳು. " ಏಕೆ ಆರತಿ, ಕಣ್ಣುಹನಿಗೂಡಿವೆಯಲ್ಲ !"

ಸ್ನೇಹದ ಈ ಮೃದುಸ್ಪರ್ಶವು ಅವಳ ಹೃದಯದಲ್ಲಿ ಉಲ್ಲೋಲ ಕಲ್ಲೋಲವಾಗಿ ಹೊಯ್ದಾಡುತ್ತಿರುವ ಆವೇಗವನ್ನೆಲ್ಲ ಕಟ್ಟೊಡೆದು ಕುತ್ತಿಗೆಯಿಂದ ಹೊರಗೆ ಹಾಕುವುದರಲ್ಲಿತ್ತು. ಆದರೆ ಅದನ್ನೆಲ್ಲ ಹತ್ತಿಕ್ಕಿ ಆರತಿ ನುಡಿದಳು:

" ಛೆ, ಏನೂ ಇಲ್ಲ. ನಿನ್ನ ಮಕ್ಕಳೆಲ್ಲ ಕ್ಷೇಮವಷ್ಟೆ ? "

"ಅಹುದು. ಬಹಳ ದಿನದ ಕಾಹಿಲೆಯ ನಂತರ ಇದೀಗ ಎಲ್ಲವೂ ಸರಿಯಾಗಿದೆ. ಆದರೆ, ಇದೇನು ಹೊರಗೇ ನಿಂತಿರುವೆಯಲ್ಲ ! ಒಳಗೆ ನಡೆ. ಅಟ್ಟದಮೇಲೆ ಹಿಂದಿನ ಕೋಣೆಯನ್ನು ನಿನ್ನ ಬೀಡಾರಕ್ಕಾಗಿಯೇ ಸಿದ್ಧಪಡಿಸಿರುವೆ. ನೀನು ಬರುವೆಯೆಂದು ನನಗೆ ಮೊದಲೇ ಗೊತ್ತಿತ್ತು.

" ಹೇಗದು ?"

" ಹಸ್ತಸಾಮುದ್ರಿಕದಿಂದ "

" ಓಹೋ ! ಇತ್ತಿತ್ತಲಾಗಿ, ಹಸ್ತಸಾಮುದ್ರಿಕ, ಜೋತಿಷ್ಯ ಇವನ್ನೂ ಹಸ್ತಗತ ಮಾಡಿಕೊಂಡಿರುವೆಯೇನು ? ನನಗಿದು ಗೊತ್ತಿರಲಿಲ್ಲ ಬಿಡು. " ಎಂದು ಆರತಿಯು ಮುಖದ ಮೇಲೆ ಮಂದಹಾಸ ತಂದಳು. ಅದು ಅವಳ ಹೃದಯವನ್ನು ಸ್ವಲ್ಪ ಹಗುರಾಗಿಸಿತು.

" ಇಗೋ, ನೋಡು, ಆರತಿ, ನನ್ನ ಹಸ್ತಸಾಮುದ್ರಿಕದ ಜ್ಞಾನವನ್ನು " ಎಂದು ನೀರಾ ಬೆರಳುಗಳ ಮೇಲೆ ಎಣಿಕೆ ಹಾಕುತ್ತ ಸುರುವು ಮಾಡಿದಳು; " ಬುಧವಾರ, ನನ್ನ ಪತ್ರ ನಿನ್ನ ಕೈಸೇರಿತು. ಗುರುವಾರ, ಅದರ ಸಂಬಂಧ ಗಂಭೀರವಾಗಿ ವಿಚಾರಿಸುತ್ತಿದ್ದಿ. ಬಳಗದವರು ಆಡಿದ ಬಿರುನುಡಿಗಳನ್ನು ಸಹಿಸುತ್ತಿದ್ದಿ. ಶುಕ್ರವಾರ, ರಾತ್ರಿಯ ರೈಲು ಹತ್ತಿದಿ. ಶನಿವಾರ ಇಲ್ಲಿ ಬಂದು ತಲುಪಿದಿ. ನಾನು ಹೇಳುವುದು ಎಲ್ಲ ಸತ್ಯವೇ. ಹೌದಲ್ಲೊ ? "

" ಒಳ್ಳೇದು, ಹಾಗಾದರೆ ಈ ಕೈ ನೋಡಿ ನನ್ನ ದೈವವನ್ನಿಷ್ಟು ಒಡನುಡಿ. " " ನಿನ್ನ ದೈವಕ ? ಅದನ್ನು ಕಟ್ಟಿ ಬಿಗಿದು ಅಟ್ಟದ ಮೇಲೆಯೇ ತಂದಿಟ್ಟಿದ್ದೇನೆ. ನೋಡು ಬಾ. ಎಂಟು ದಿನವಾಯಿತು, ಹಾಸಿಗೆ ಹಿಡಿದು !"

" ಯಾರು ? ನವೆಂದುವೇ ? " ಅವಳು ಬೆಚ್ಚಿದಳು.

" ಹೌದು ನಿಜವಾಗಿಯೂ ಅವನೇ ! ನೀನೀಗ ಅವನ ಆರೈಕೆಗೆ ತೊಡಗಬೇಕು. "

ಸ್ವಲ್ಪ ಗಾಬರಿಯಾಗಿಯೇ ಆರತಿ ಉತ್ತರಿಸಿದಳು : " ಇದೇನು ಮಾಡಿದಿ ನೀರಾ ? ಜನರು ಏನೆಂದಾರು ? "

" ಜನರು ! ಈ ನಿನ್ನ ಅನುರಾಗದ ವಿಷಯದಲ್ಲಿ ಜನರ ಅಭಿಪ್ರಾಯಕ್ಕೆ ಎಂದಾದರೂ ಮಹತ್ವ ಕೊಟ್ಟಿರುವೆಯಾ ? "

" ಆದರೂ ಏನಾಯಿತು ? ನೀನೀಗ ಎಸಗಿದುದು ತೀರ ನನ್ನ ಸ್ವಾಭಿಮಾನಕ್ಕೇ ಧಕ್ಕೆ ತರುವಂತಹದು ! "

" ಹೇಗದು ? "

" ಇದುವರೆಗೂ ನಾವಿಬ್ಬರೂ ಒಂದೇ ಕೋಣೆಯಲ್ಲಿ ಒಬ್ಬರನ್ನೊಬ್ಬರು ಎಂದೂ ಕಂಡಿಲ್ಲ " ನೀರಾಗೆ ಆರತಿಯ ನೆಲೆ ಈಗ ಅರಿವಾಯಿತು. ಆರತಿ ನಡುಗುತ್ತಿದ್ದಳು. ಕಂಪಿತ ಸ್ವರದಿಂದ ಅಂಗಲಾಚಿ ಬೇಡಿದಳು: " ನೀರಾ, ಇಂದು ಮಧ್ಯಾನ್ಹದ ರೈಲಿನಿಂದ ನಾನು ಮರಳುವೆ. ದಯೆಮಾಡಿ ತಡೆಯ ಬೇಡ !"

"ನಿನ್ನ ಹಿಂದಿನ ಆತ್ಮವಿಶ್ವಾಸವೆಲ್ಲ ಈಗೆಲ್ಲಿ ಅಳಿದುಹೋಯಿತು? ಪಡೆದ ಶಿಕ್ಷಣವೆಲ್ಲ ವ್ಯರ್ಥವಾಯಿತೇ ? "

" ಆದರೆ, ನೀರಾ, ಇಂದಿನ ವರೆಗೂ ನಾನವನನ್ನು ಒಂದೇ ಕೋಣೆಯ ಏಕಾಂತದಲ್ಲಿ ಎದುರಿಸಿಲ್ಲ. ಹಾಸಿಗೆಯಲ್ಲಿ ಎಂದೂ ಕಂಡಿಲ್ಲ. ಹಾಸಿಗೆಯಲ್ಲೊರಗಿದ ಅವನನ್ನು ಆರೈಕೆ ಮಾಡಲು ನನಗೆ ಯಾವ ಅಧಿಕಾರ ?"

" ಅಧಿಕಾರದ ಬಗೆಗೆ ಮಾತನಾಡುವೆಯಾ, ಆರತಿ ? ಇಗೋ, ಈ ಮೂರು ವರುಷ ಒಂದೇ ಸವನೆ— ನಿನ್ನ ಪ್ರೇಮವೆ ಸಣ್ಣ ಉರಿಯ ಮೇಲೆ ಅವನನ್ನು ಬೇಯಿಸುತ್ತಿರುವೆಯಲ್ಲ ! ಅದೇ ನಿನ್ನ ಅಧಿಕಾರ."

" ಬೇಯುತ್ತಿರುವವಳು ನಾನು..... ಅವನಲ್ಲ. "

ಇಷ್ಟು ಹೊತ್ತಿಗೆ ಪರಿಚಾರಿಕೆಯು ಚಹಾ-ಫಲಾಹಾರ ತಂದಿಟ್ಟಳು. "ಮೊದಲು ಉಪಾಹಾರವನ್ನು ಮುಗಿಸಿ ಆಟ್ಟದ ಮೇಲೆ ಹೋಗೋಣ" ಎಂದು ಮೀರಾ ಸೂಚಿಸಿದಳು.

"ಆದರೆ, ನಾನು ಬಂದಿರುವುದು ಆವನಿಗೆ ಗೊತ್ತೇ?

"ಹೌದು, ಗೊತ್ತಿದೆ."

"ಏನಾದರೂ ಅಂದನೇ?

"ಇಲ್ಲ. ಆದರೆ ನನ್ನಮೇಲೆ ಸ್ವಲ್ಪ ಸಿಟ್ಟಾದಂತೆ ತೋರುವುದು."

"ಏಕೆ?"

"ಬಹುತರ ನೀನು ಸಿಟ್ಟಾದ ಕಾರಣಕ್ಕಾಗಿಯೇ ಇರಬಹುದು."

ಉಪಾಹಾರ ಮುಗಿದ ನಂತರ ಮೀರಾ ಅಡುಗೆಯ ಮನೆಗೆ ತೆರಳಿದಳು. ಆರತಿಯು ಉಪ್ಪರಿಗೆಯನ್ನೇರಿದಳು.

* * * *

ಕೈಯಲ್ಲಿ ಒಂದು ತೆರೆದ ಪುಸ್ತಕ ಹಿಡಿದು ನವೇಂದುವು ಹಾಸಿಗೆಯಲ್ಲಿ ಒರಗಿದ್ದನು. ಒಂದು ಚಾದರು ಕಾಲನ್ನು ಮುಚ್ಚಿತ್ತು. ನಿಲ್ಲಗೆ ಅಡಿಯಿಡುತ್ತ ಆರತಿ ಪ್ರವೇಶಿಸಿದಳು.

ಪುಸ್ತಕವನ್ನು ಬಿಸಿಗಿಟ್ಟು ನವೇಂದು ನುಡಿದನು: "ಇವೆಲ್ಲ ಮೀರಾನ ಮಾಟಗಾರಿಕೆ! ನನಗಾವುದೂ ಗೊತ್ತಿಲ್ಲ. ದಯೆಮಾಡಿ ನಾನೇ ಇದಕ್ಕೆ ಜವಾಬ್ದಾರನೆಂದು ತಿಳಿಯಬೇಡ."

"ಆದರೆ ನೀನು ಕಲಕತ್ತಾದಿಂದ ಬಂದ ಸುದ್ದಿಯನ್ನು ನನಗೇಕೆ ತಿಳಿಸಲಿಲ್ಲ?" ಎಂದು ಆರತಿ ಕೇಳಿದಳು.

"ಯಾಕೆ? ನನ್ನ ಬರು-ಹೋಗುವುದನ್ನೆಲ್ಲ ನಿನ್ನನ್ನು ಕೇಳಿಯೇ ಮಾಡುತ್ತಿರುವೆನೇ?"

ಆರತಿಯು ಒಂದು ಕ್ಷಣ ಮೌನದಿಂದ ನಿಂತಳು. ಆ ಮೇಲೆ ಸಹಜ ಕೇಳಿದಳು. "ಇನ್ನೂ ಜ್ವರವು ಹಾಗೇ ಇರುವುದೇ?"

"ಇದ್ದರೆ, ನೀನೇನು ಮಾಡತಕ್ಕವಳು?"

ವಿಪರೀತ ಪರಿಸ್ಥಿತಿಯ ಮೂಲಕ ನಿಷ್ಪಲಚಿತ್ತರಾದ ಈ ಪ್ರಣಯಿಗಳು ಪರಸ್ಪರ ಮಾತನಾಡುವ ಬಗೆ— ಇತ್ತಿತ್ತಲಾಗಿ— ನಿವಾಪ ರೂಪವನ್ನೇ ತಾಳಿತ್ತು. ಒಂದು ಪಕ್ಷದಿಂದ ಬಂದ ಇರಿತ-ತಿವಿತಗಳನ್ನು ಮತ್ತೊಂದು ಪಕ್ಷವು ಸಹಿಸಲೇಬೇಕಾಗಿತ್ತು. ಮಾತು ಕೆಲವು ನಿಮಿಷ ಇದೇ ರೀತಿಯಲ್ಲಿ ಸಾಗಿತು. ಅದರ ಓಘವನ್ನು ಹೊರಳಿಸಲು ಆರತಿಯು ಕೇಳಿದಳು: "ನೀನೊಂದು ನೌಕರಿಗಾಗಿ ಪ್ರಯತ್ನಿಸುತ್ತಿದ್ದೆಯಲ್ಲ. ಅದೇನಾದರೂ ದೊರಕುವ ಸಂಭವನಿದೆಯೇ?"

"ದೊರಕಬಹುದು. ಆದರೆ ಅದನ್ನೇ ನೆಚ್ಚಿ ಲಗ್ನವಾಗುವುದು ಸಾಧ್ಯವಿಲ್ಲ—ಮೀರಾ ಬೇಕಾಪದ್ದು ಹೇಳಲಿ" ಎಂದು ನವೇಂದುವು ನಿಷ್ಠುರವಾಗಿಯೇ ನುಡಿದನು.

"ಆದರೆ, ನೀನು ದುಡಿಯಬೇಕು; ನಾನು ಮಾತ್ರ ಸ್ವಸ್ಥ ಮನೆಯಲ್ಲಿ ಕೂಡಬೇಕು— ಎಂದು ನಾನು ಯಾವ ಕಾಲಕ್ಕಾದರೂ ಸೂಚಿಸಿರುವೆನೇ?"

"ಒಮ್ಮೆ ತಾಳೀ ಕಟ್ಟಿಕೊಂಡ ಮೇಲೆ ಹೆಣ್ಣಿಗೆ ದುಡಿಯಲು ಆಸ್ಪದವಾದರೂ ದೊರೆಯುವುದೆಲ್ಲಿ?"

"ಹಾಗಾದರೆ, ಈ ತ್ರಿಶಂಕು ಸ್ವರ್ಗದಲ್ಲಿಯೇ ನಾನು ಉಳಿಯಬೇಕೆಂದು ನಿನ್ನ ಅಂಬೋಣವೇ?"

"ಹಾಗೇನಿಲ್ಲ; ರಾಜಶಾಹಿಗೆ ಹೋಗಿ, ಆ ಶಾಲಾಶಿಕ್ಷಿಕೆಯ ಕೆಲಸ ಕೈಕೊಳ್ಳಲು ನಿನಗಾರು ಅಡ್ಡಿ ಬಂದಿರುವರು?"

"ನೀನೇನು ಮಾಡುತ್ತೀ?"

"ಅದರ ಗೊಡವೆ ನಿನಗೇಕೆ? ಅದೇನೋ ಅನ್ನುತ್ತಾರಲ್ಲ, ಊಟ ಸಿಕ್ಕರೆ ನವರಾತ್ರಿ, ಸಿಗದಿದ್ದರೆ, ಶಿವರಾತ್ರಿ. ಹೀಗೇ ಜೀವನ ಸಾಗಿಸುವೆ."

"ಈ ವಾರದಲ್ಲಿ ಜ್ವರವೇನಾದರೂ ಕಡಮೆಯಾಗಿತ್ತೇ?"

"ಜ್ವರಕ್ಕೆ ಕಾರಣವಾದ ಭೂತವು ತೊಲಗದ ಹೊರತು ನನಗೆ ಜ್ವರದಿಂದ ಮುಕ್ತಿಯಿಲ್ಲ."

"ಈ ಮೂರು ವರುಷದಿಂದ ಅದೇ ಭೂತವು ನನ್ನ ತಲೆಯ ಮೇಲೂ ಮೆಣಸು ಅರೆಯುತ್ತಿದೆ. ಎದೆಯನ್ನು ಸುಡುತ್ತಿದೆ, ಬೇಯಿಸುತ್ತಿದೆ."

"ಆದರೆ ನನ್ನ ವಿಷಯಲ್ಲಿ ಆ ಹೆಣ್ಣುದೆವ್ವವು ಬಹಳ ಹಟ ಮಾರಿಯಾಗಿದೆ. ನನ್ನನ್ನು ಬಿಟ್ಟು ಒಂದು ಹೆಜ್ಜೆ ಕೂಡ ಸರಿದಾಡುವ ಸುಳಿವು ತೋರಲೊಲ್ಲದು!"

"ಒಟ್ಟಿನಲ್ಲಿ ನೀನು ಅದನ್ನು ಹೊಡೆದೋಡಿಸಬೇಕೆಂದಿರುವಿ— ಹೌದಲ್ಲೊ?"

"ನೂರು ಸಲ."

"ನಿನ್ನ ಸಲುವಾಗಿ ಅವಳು ಎಲ್ಲವನ್ನೂ ತ್ಯಾಗಮಾಡಿದ್ದಾಳೆ. ನಿನಗದು ಗೊತ್ತು."

"ಎಲ್ಲವನ್ನೂ ತ್ಯಾಗ ಮಾಡಿರುವೆಯಾ? ಇದರ ಅರ್ಥ ಏನು-ಅಂದೆ? ನಿನ್ನ ಹತ್ತಿರ ಒಂದು ಒಡಕು ಕಾಸಾದರೂ ಇತ್ತೇ?"

ಈ ಅರೆ-ನೋವಿನ ಅರೆ-ನಗುವಿನ ವಾಗ್ವಾದವು, ಮೀರಾ ಕೈಯಲ್ಲಿ ಔಷಧಿ ತೆಗೆದುಕೊಂಡು ಬರುತ್ತಲೇ ಅಷ್ಟಕ್ಕೇ ನಿಂತಿತು. ಮೀರಾ ನುಡಿದಳು:

"ಇಲ್ಲಿಯ ವರೆಗೆ ದುಷ್ಟ ವಿಧಿ ನಿನ್ಮುನ್ನು ಆಂಟಿಕೊಂಡು ಹಿಂಬಾಲಿಸಿತ್ತು. ಜನಸಂದಣಿಯ ಆ ಕಲಕತ್ತೆಯಲ್ಲಿ ಪರಸ್ಪರರ ಹೃದಯವನ್ನು ಬಿಚ್ಚಿಡಲು ನಿಮಗೆ ಏಕಾಂತವು ದೊರೆಯುವುದಾದರೂ ಹೇಗೆ? ಈಗ ಇಲ್ಲಿ ನಿಕ್ಕಂತಹ ಸುಸಂಧಿ ಮತ್ತೆಲ್ಲಿಯಾದರೂ ದೊರೆತೀತೆ?"

"ಈ ಸುಸಂಧಿಯೇ ನನ್ನನ್ನು ಹಾಳು ಮಾಡಹತ್ತಿದೆ."

"ಇಲ್ಲಿ ನೋಡಿರಿ. ಈ ಕಣ್ಣುಮುಚ್ಚಾಲೆಯ ಆಟ ಇನ್ನು ಸಾಕು. ಇದರಿಂದ ಯಾವ ಲಾಭವೂ ಇಲ್ಲ. ಈ ಕೋಣೆಯಲ್ಲಿ ಇಬ್ಬರೇ ಪರಸ್ಪರ ಮಾತನಾಡಿಕೊಳ್ಳಿರಿ. ಪ್ರೇಮ ಪಾಶದಿಂದ ಪರಸ್ಪರ

ರನ್ನು ಎಳೆದಿರುವಿರಿ. ಈಗ ಗಟ್ಟಿಯಾಗಿ ಬಂಧಿಸುವ ಉಪಾಯ ಯೋಜಿಸಿರಿ. ಇಲ್ಲದಿದ್ದರೆ, ಜೀವನವಿರುವವರೆಗೂ ನಿಡುಕಬೇಕಾದೀತು" ಎಂದು ಮೀರಾ ಸೌಮ್ಯವಾಗಿ ಛೇ ಹಾಕಿದಳು.

"ಆದರೆ, ಮೀರಾ, ನಿನ್ನೆ ಸಂಜೆಗೇ ನನ್ನ ಕೊನೆಯ ನಿರ್ಣಯವನ್ನು ನಿನಗೆ ತಿಳಿಸಿದ್ದೇನೆ."

"ಓ, ಹಾಗಾದರೆ, ಇವಳನ್ನು ಬಿಟ್ಟು ಬಿಡುವುದೇ ನಿನ್ನ ಉದ್ದೇಶವೇ ? ಕಣ್ಣೀರು ಸುರಿಸುತ್ತಾ ಈಕೆ ತನ್ನ ಹಾದಿಯನ್ನು ತಾನು ಕಂಡುಕೊಳ್ಳಬೇಕೆ ? ನಿನ್ನ ಪೌರುಷಕ್ಕೆ ಇದು ಉಚಿತವೇ, ನವೇಂದು ? ಮೂರುವರುಷದ ಹಿಂದಿನ ಆ ನಿನ್ನ ನೀತಿಯ ಔನ್ನತ್ಯ ಈಗೆಲ್ಲಿ ಹೋಯಿತು ?"

"ಆದರೆ ಇಂದಿನ ವರೆಗೆ, ನಮ್ಮ ನಡುವೆ ನೀತಿಸಮ್ಮತವಲ್ಲದುದು ಯತ್ಕಿಂಚಿತ್ತೂ ಸಂಭವಿಸಿಲ್ಲ. ಮರ್ಯಾದೆಯ ಸೀಮೆಯನ್ನು ಎಳ್ಳಷ್ಟೂ ದಾಟಿಲ್ಲ. ಇವನ್ನು ಆಣೆ ಮಾಡಿ ಮಾಡಿ ಹೇಳುತ್ತೇನೆ, ಮೀರಾ."

"ಸಾಕುಮಾಡು, ನವೇಂದು. ಇದನ್ನು ಇಷ್ಟು ಗಟ್ಟಿಯಾಗಿ ಘೋಷಿಸುವ ಕಾರಣವಿಲ್ಲ. ಇದರ ಅರ್ಥ ನೀನು ಪಶುತ್ವಕ್ಕೆ ಇಳಿದಿಲ್ಲ ಎಂದಿಷ್ಟೇ ಆಗುವುದು. ಮನುಷ್ಯತ್ವದ ಮಟ್ಟಕ್ಕೆ ಏರಬೇಕಾದರೆ ಇದಕ್ಕೂ ಹೆಚ್ಚಿನ ಆಚರಣೆ ಬೇಕು. ಪುರುಷನಂತೆ ಸ್ತ್ರೀ ಸಮಾಜದಲ್ಲಿ ಸ್ವತಂತ್ರವಾಗಿ ಸ್ಥಾನವನ್ನು ಕಲ್ಪಿಸಿಕೊಳ್ಳಬಲ್ಲಳೋ ? ಅದು ಅವಳಿಗೆ ದೊರೆಯುವುದು ಯಾರಿಂದ ? ಪುರುಷನಿಂದಲೇ ಅಲ್ಲವೆ ? ನೀನಿದನ್ನು ಅವಳ ಪ್ರಣಯಾರಾಧನ ಮಾಡುವ ಕಾಲಕ್ಕೆ ಹೇಗೆ ಮರೆತಿ ? ಹೀಗೆ ನಡುನೀರಿನಲ್ಲಿ ಕೈಬಿಟ್ಟರೆ ಅವಳಿಗೆ ಯಾವ ಗತಿ ? ಆದರೆ ಮೊದಲು ಔಷಧಿಪಥ್ಯ ತೆಗೆದುಕೊ. ಎಲ್ಲಿ ನೋಡೋಣ— ಹಾಂ, ಈಗ ಜ್ವರವೆಲ್ಲ ಇಳಿದಿದೆ."

ನವೇಂದುವಿನ ಹಣೆಯ ಮೇಲೆ ಮೀರಾ ಕೈಯಿಟ್ಟು ನೋಡಿ; ಅವನಿಗೆ—ತಾನು ತಂದ ಬಾರ್ಲಿ-ವಾಟರ್ ಕುಡಿಸಿದಳು; ಕೂಡಲೆ ಹೊರಗೆ ನಡೆದಳು.

ಇವರಿರ್ವರಲ್ಲಿ ಈ ವಾದ ನಡೆದ ಸಮಯದಲ್ಲಿ, ಆರತಿಯು ಬದಿಗೆ ಸರಿದು ನಿಶ್ಶಬ್ದ-ನಿಶ್ಚಲಳಾಗಿ, ಕರುಣೆಯ ಮೂರ್ತಿಯಂತೆ ನಿಂತಿದ್ದಳು. ಅವಳ ಕಡೆಗೆ ಮುಖ ತಿರುಪಿ ನವೇಂದು ನುಡಿದನು :

"ಬಹುತರ ಮೀರಾ ಅಂದುದಕ್ಕೆಲ್ಲ ನಿನ್ನ ಅನುಮತಿ ಇರಬೇಕು!"

"! ಬರುಬರುತ್ತ ಈ ಪ್ರಶ್ನೆಗಳೆಲ್ಲ ತಲೆ ಎತ್ತ ತಕ್ಕುವೇ ?"

"ಆದರೆ ಇಲ್ಲಿ ಬಂದು, ನೀನು ಎಲ್ಲವನ್ನೂ ಅಸಾಧ್ಯ ಮಾಡಿಬಿಟ್ಟಿ.... ಇಲ್ಲಿ ಬರುವುದರಲ್ಲಿ ನಿನ್ನ ಉದ್ದೇಶ ಸರಿಯಾಗಿದ್ದಿಲ್ಲ ಎಂದೇ ನನಗೆನಿಸುವುದು." ನವೇಂದುವು ತಡೆದನು, ಎರಡು ನಿಮಿಷ ವಿಚಾರ ಮಾಡಿ, ನುಡಿದನು :

"ನಿನ್ನ ಉದ್ದೇಶವು ಇಲ್ಲಿಗೆ ಬರುವುದರಲ್ಲಿ ಒಳ್ಳೆಯದಾಗಿತ್ತೆ ?"

"ಇಬ್ಬರೂ ಪರಸ್ಪರರ ಹಾದಿಯನ್ನು ಸ್ವತಂತ್ರವಾಗಿ ಕಂಡುಕೊಳ್ಳುವುದು ಇನ್ನು ಮೇಲೆ ಉಚಿತ!"— ಈ ಮಾತನ್ನು ನುಡಿಯುವಾಗ ವ್ಯಥೆಯಿಂದ ಅವನು ಮುಖವನ್ನು ಅತ್ತ ಹೊರಳಿಸಿದನು :

"ಇದಕ್ಕೂ ಉತ್ತಮವೆಂದರೆ, ಇಬ್ಬರಲ್ಲಿ ಒಬ್ಬರು ಸಾಯಬೇಕು."

"ಹಾಗಾದರೆ, ನಾನು ಸಾಯಬೆಕೆಂದೇ ನಿನ್ನ ಇಚ್ಛೆಯೇ ?"

"ಹೌದು !"

"ನಾನು ಮಾಡಿದ ಅಪರಾಧ ?"

"ನಾನು ಪಡುತ್ತಿರುವ ಯಾತನೆಯನ್ನೇ ಇನ್ನೊಬ್ಬರು ಪಡುವಂತೆ ನೀನು ಮಾಡಬಹುದೆಂದು."

"ಇದೇ ಮಾತನ್ನೇ ನಾನೂ ನಿನ್ನ ವಿಷಯಕ್ಕೂ ಆಡಬಹುದು. ಆದರೆ ಸ್ವಲ್ಪು ತಡೆ. ಇಲ್ಲಿ ಕೇಳು...."

ಅವಳು ಕೋಣೆಯಿಂದ ಹೊರಡುವುದರಲ್ಲಿದ್ದಳು. ಆದರೆ ಮತ್ತೆ ಹೊರಳಿ, ಮುಖವನ್ನು ಅವನೆಡೆಗೆ ತಿರುಗಿಸಿ ಸ್ವಲ್ಪ ತಡೆದಳು.

"ಇಲ್ಲಿ ಹತ್ತಿರ ಬಾ."

"ರಕ್ಷೆಯಿಲ್ಲ" ಎಂದು ಉತ್ಪ್ರಾಸ್ತಳಾಗಿ ಆರತಿ ನುಡಿದಳು. ಅವಳ ಸರ್ವಾಂಗವೂ ಕಂಪಿಸುತ್ತಿತ್ತು.

"ಸ್ವಲ್ಪ ಸಮೀಪ ಬಾ— ಎಂದೆ, ಇಷ್ಟೇ ! ಆರತಿ ಇಷ್ಟು ದಿನದ ಸಂಯಮವನ್ನು ಈಗ ಬೀಸಾಡುವೆಯೆ ? ನಿನಗೊಂದು ಮಾತು ಹೇಳುವುದಿದೆ." ಆರತಿಯು ಒಂದು ಅಡಿ ಮುಂದಿಟ್ಟಳು. "ಒಳ್ಳೇದು, ಏನು ಹೇಳುವುದಿದೆ ಹೇಳು; ಆಲಿಸುತ್ತಿದ್ದೇನೆ." ನವೇಂದುವು ಪ್ರಾರಂಭಿಸಿದನು:

"ಇಲ್ಲಿ, ಕೇಳು, ಆರತಿ, ನಮ್ಮಿಬ್ಬರ ನಡುವಿನ ಪರಿಸ್ಥಿತಿ ಸ್ಪಷ್ಟವಿದೆ. ಇಬ್ಬರೂ ಪರಸ್ಪರ ಪ್ರೀತಿಸುತ್ತೇವೆ; ಹಾಗೂ ಮದುವೆಯಾಗಲು ಬಯಸುತ್ತೇನೆ. ಆದರೆ, ಇಬ್ಬರೂ ದರಿದ್ರರು. ಮನೆಮಾಡಿ ಸಂಸಾರ ಹೂಡುವಷ್ಟು ಯಾರ ಹತ್ತಿರವೂ ಒಂದು ಒಡಕು ಕಾಸಿಲ್ಲ. ಆದರೂ ನಿನಗೊಂದು ಪ್ರಶ್ನೆ ಕೇಳುವೆ. 'ನೀನು ಸಂಸಾರ ಮಾಡಬಲ್ಲೆಯಾ ? ಸಂಸಾರವೆಂದರೆ, ಶಬ್ದಶಃ ವಾಸ್ತವವಾದ ಸಂಸಾರ. ನೀನು ಶಾಲೆಯಲ್ಲಿ ಕಲಿತ ಪುಸ್ತಕೀ ಗೃಹವಿಜ್ಞಾನವಲ್ಲ !"

"ನಿನ್ನ ಸಂಸಾರದ ಅರ್ಥ ?"

"ಮದುವೆಯಾದ ಕೂಡಲೇ ಪ್ರಾರಂಭವಾಗುವ ನಿತ್ಯದ ಕೆಲಸ-ಬೊಗಸೆ— ಒಲೆ ಹೊತ್ತಿಸುವುದು, ಅಡಿಗೆ ಮಾಡುವುದು, ಕಸ, ಮುಸುರೆ, ಒಗೆಯುವುದು, ಇತ್ಯಾದಿ, ಇತ್ಯಾದಿ."

"ಸಂಸಾರಕ್ಕೆ ನೀನು ಇಷ್ಟೇ ಅರ್ಥ ಹೆಚ್ಚುತ್ತಿದ್ದರೆ, ನಾನದನ್ನು ತಿರಸ್ಕರಿಸುವೆ !"

"ಹಾಗಾದರೆ, ಮದುವೆಯಾದುದಕ್ಕೆ ನಿನ್ನನ್ನೇ ನೀನು ತಿರಸ್ಕರಿಸುವಿ. ಒಲೆಯ ಕಾವು ನಿನ್ನ ಮನವನ್ನೂ ಕರಗಿಸುವುದು."

"ಮದುವೆಗಾಗಿ ಮದುವೆಯಲ್ಲ. ಸಂಸಾರಕ್ಕಾಗಿಯೂ ಮದುವೆಯಲ್ಲ. ಆದರೆ, ನೀನು,—ಕೇವಲ ನೀನು, ಬೇಕೆಂದೇ ನಾನು ಮದುವೆಯಾಗತಕ್ಕವಳು."

"ಹಾಂ, ನೀನೀಗ ನಿಜವಾದ ಮರ್ಮಕ್ಕೆ ಬಂದಿ. ಇನ್ನು ನನ್ನ ವಿಚಾರವನ್ನಿಷ್ಟು ಚೆನ್ನಾಗಿ ತಿಳಿದುಕೊ. ನಿನ್ನ ಮೇಲಿನ ನನ್ನ ಪ್ರೀತಿ ಕಡಿಮೆಯಾಗಿದೆ ಎಂದು ದಯವಿಮಾಡಿ ಇದರ ಅರ್ಥ ಮಾಡಿಕೊಳ್ಳಬೇಡ. ಆದರೆ, ಈ ಲಗ್ನವು ನಮ್ಮಿಬ್ಬರನ್ನೂ ಕಂದಕದಲ್ಲಿ ನೂಕುವುದು ನಿಶ್ಚಿತ ಅಲ್ಲಿ ನಾವು ಆಜನ್ಮ ಪೇಚಾಡಬೇಕಾಗುವುದು. ಅದರೆ ಇಲ್ಲಿಗೇ ನಿಂತು, ನಮ್ಮ ನಮ್ಮ ಹಾದಿಯನ್ನು ಸ್ವತಂತ್ರವಾಗಿ ಕಂಡುಕೊಂಡರೆ ಈ ಸವಿ ನೆನಪು ಕೊನೆಯವರೆಗೂ ಉಳಿಯುವುದು. ಮೇಲಾಗಿ ಈ ನಮ್ಮ ವಿವಾಹವು ಸಮಾಜದ ಕಟ್ಟುನಿಟ್ಟುಗಳಿಗೆ ಹೊರತಾದುದು. ಇಬ್ಬರೂ ಭಿನ್ನ ಭಿನ್ನ ಜಾತಿಯವರು. 'ಸಮಾಜದ ಗೊಡವೆ ನಮಗೇಕೆ ?' ಎಂದು ಅದನ್ನು ಕಡೆಗಣಿಸುವುದೂ ಸಾಧ್ಯವಿಲ್ಲ ಯಾಕೆಂದರೆ ಇಬ್ಬರೂ ಬಡವರು. ನಮ್ಮ ಉದರ ನಿರ್ವಾಹಕ್ಕೆ ಸಮಾಜವನ್ನು ಅವಲಂಬಿಸಲೇ ಬೇಕು. ಕೊನೆಗೆ ಹುಚ್ಚನಾಯಿಯಂತೆ ಎಲ್ಲರೂ ನಮ್ಮನ್ನು ಹೊಡೆದಟ್ಟುವರು.

ಹೊರಗೆ ಮೀರಾಳ ಧ್ವನಿ ಕೇಳಿಬಂತು. ಆರತಿಯು ಹಿಂದೆ ಸರಿದಳು. ಮೀರಾ ಬಾಗಿಲೊಳಗೆ ಇಣಿಕಿ ಹಾಕಿ ನುಡಿದಳು: "ನವೀಂದು, ಇನ್ನು ಸಾಕು ಮಾಡು. ಪಾಪ ಹುಡುಗಿ ! ನಿನ್ನೆ ರಾತ್ರಿ ಪ್ರವಾಸದಲ್ಲಿ ನಿದ್ದೆ ಕೂಡ ಆಗಿರಲಿಕ್ಕಿಲ್ಲ. ನಡೆ, ಆರತಿ, ಕೆಳಗೆ ನಡೆ. ಸ್ನಾನ ತೊಳೆದುಕೋ."

* * * *

ಇಬ್ಬರೂ ಕೈಯಲ್ಲಿ ಕೈ ಹಾಕಿ ಉಜ್ವಲ ಭವಿಷ್ಯವನ್ನು ಎದುರಿಸುವ ದಿನ ಕೊನೆಗೊಮ್ಮೆ ಬಂದು ಬಿಟ್ಟಿತು.

ಈ ಪಾಣಿಗ್ರಹಣದ ಪೌರೋಹಿತ್ಯವನ್ನು ಸ್ವತಃ ಮೀರಾ ವಹಿಸಿದಳು. ಅವಳು ನೆರವೇರಿಸಿದ ಸಮಾರಂಭವು ಧಾರ್ಮಿಕವೂ ಅಲ್ಲ; ಸಾಮಾಜಿಕವೂ ಆಗಿರಲಿಲ್ಲ - ಅಥವಾ ಪರಂಪರಾಗತವಾದ ಯಾವ ರೂಢಿ ಅಥವಾ ಸಂಪ್ರದಾಯಕ್ಕೂ ಅನುಗುಣವಾದದ್ದಲ್ಲ. ತನ್ನ ಸ್ವಂತ ಗಂಟಿನೊಳಗಿಂದ ಒಂದು ಸುಂದರ ಜರತಾರೀ ಸೀರೆಯನ್ನು ಹೊರತೆಗೆದು, ಅದನ್ನು ಆರತಿಗೆ ಉಡಿಸಿದಳು. ಅನಂತರ ಅವಳನ್ನು ಸ್ವಯಂಭೂ ಪಶುಪತಿ ಶಿವಾಲಯಕ್ಕೆ ಕರೆದೊಯ್ದಳು. ಇನ್ನೂ ಸಂಪೂರ್ಣ ಗುಣವಾಗದ ನವೀಂದುವೂ ಅಲ್ಲಿಗೆ ಬಂದನು. ಇಬ್ಬರೂ ವಿಗ್ರಹದ ಸಮ್ಮುಖದಲ್ಲಿ ನಿಂತರು. ನವೀಂದುವು ಸ್ವತಃ ಆರತಿಯ ಲಲಾಟದಲ್ಲಿ ಮಂಗಲ ತಿಲಕವನ್ನಿಟ್ಟನು. ಮೀರಾ ಶಂಖವನ್ನೂದಿದಳು. ಇಷ್ಟಕ್ಕೆ ಈ ಲಗ್ನ ಸಮಾರಂಭವು ಮುಕ್ತಾಯವಾಯಿತು. ಅಲ್ಲಿಗೆ ಬಂದ ತನ್ನ ಇಬ್ಬರೂ ಚಿಕ್ಕ ಮಕ್ಕಳಿಗೆ ಎರಡು ಮಿಠಾಯಿಯ ಪುಡಿಕೆಗಳನ್ನು ಕೊಟ್ಟು ನವದಂಪತಿಗಳೊಡನೆ ಮೀರಾ ಮನೆಗೆ ಮರಳಿದಳು.

* * * "

ಹೀಗೆ ಈ ಹೊಸ ಸಂಸಾರವು ಸುರುವಾಯಿತು.

ತಮ್ಮ ಎಲ್ಲಾ ಆಪ್ತರು, ಇಷ್ಟರು, ಬಂಧು ಬಳಗ ಮೊದಲಾದವರಿಂದ ಅವರು ದೂರ ಸರಿದರು. ಸಾಪಕಾರ ಅದೂ ಅವಶ್ಯಂಭಾವಿಯಾದ ತಮ್ಮ ಆಧೋಗತಿಯ ದಿನವನ್ನು ನಿರೀಕ್ಷಿಸುತ್ತಿದ್ದ -ಎಲ್ಲ ಸಂಬಂಧಿಕರ ದೃಷ್ಟಿಪಥದಿಂದ ಮಾಯವಾದರು. ಆರತಿಗೆ ಸುವ್ಯವಸ್ಥಿತ ಸಂಸಾರಕ್ಕಿಂತ ಪ್ರಣಯವೇ ಮಿಗಿಲಾಗಿತ್ತು. ಅನ್ಯೋನ್ಯ ಗಾಢಾನುರಾಗದಿಂದ ಬದ್ಧರಾದ ಈ ಪ್ರಣಯಿಗಳು ಇಲ್ಲಿಯವರೆಗೆ ಅಗೋಚರವಾದ ನಂದನದ ಕಮನೀಯ ಕಂದರಗಳನ್ನೇ ಕಂಡರೂ, ಅಲ್ಲಿ ಸ್ವಚ್ಛಂದವಾಗಿ ವಿಹರಿಸಿದರು— ಆದರೆ ಅದು ಕೆಲವು ದಿನ ಮಾತ್ರ.

ಮಿದಿನಾಪೂರ ಜಿಲ್ಲೆಯ ಒಳಭಾಗದಲ್ಲಿ, ದೂರ ಒಂದು ಅಜ್ಞಾತ ಪಟ್ಟಣದಲ್ಲಿ ಈ ದಂಪತಿಗಳು ನೆಲೆಸಿದರು. ಅಲ್ಲಿ ಆರತಿಯು ಒಂದು ಪಾಠಾಧ್ಯಾಪಿಕೆಯ ಕೆಲಸವನ್ನೂ, ನವೀಂದುವು ಒಬ್ಬ ವಕೀಲನ ಕಾರಕೂನಿಕೆಯ ಕೆಲಸವನ್ನೂ ಕೈಕೊಂಡರು.ಅಲ್ಲಿಯ ರೇಲ್ವೆಸ್ಟೇಶನ್ ಮಾಸ್ತರನು, ಅವರ ಪಾಸಕ್ಕಾಗಿ ಒಂದು ಬಾಡಿಗೆಯ ಮನೆಯನ್ನು ಸಂಪಾದಿಸಿದನು. ಇಬ್ಬರ ಗಳಿಕೆಯು ಸೇರಿ ಸಾಧಾರಣ ಒಟ್ಟು ೫೫ ರೂಪಾಯಿಯಷ್ಟು ಆಗುತ್ತಿತ್ತು. ಇದು ಅವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚೇ ಎನ್ನಬಹುದು. ಆ ದೂರದ ಒಳನಾಡಿನಲ್ಲಿ ಜೀವನದ ವೆಚ್ಚವು ವಿಶೇಷವಾಗಿರಲಿಲ್ಲ. ಗಳಿಕೆಯಲ್ಲಿ ಸ್ವಲ್ಪ ಉಳಿತಾಯವೂ ಆಗುತ್ತಿತ್ತು.

ಆದರೆ ಒಂದು ವರ್ಷ ಮುಗಿಯುವದರೊಳಗಾಗಿ, ನವೀಂದುವು ಆ ಭಾಗದ ಡೆಪ್ಯೂಟಿ ಮ್ಯಾಜಿಸ್ಟ್ರೇಟನ ದೂರದ ರಕ್ತಸಂಬಂಧಿಕನೆಂಬುದು ಹೇಗೋ ಎಲ್ಲರಿಗೂ ವಿದಿತವಾಯಿತು. ಅವನ ಪೂರ್ವಾಪರಗಳನ್ನರಿಯಲು ಸ್ಥಳೀಯರು ಕುತೂಹಲಪಟ್ಟರು. ಅವರ ಜಾತಿ-ಬಾಹ್ಯ ವಿವಾಹವು ಆ ಮೇಲೆ ರಹಸ್ಯವಾಗಿ ಉಳಿಯಲಿಲ್ಲ. ಎಲ್ಲರೂ ಅವನ್ನು ಚರ್ಚಿಸುವವರೇ ! ಹೀಗಾಗಿ ಅವರು ಆ ಪಟ್ಟಣವನ್ನು ತೊರೆಯಬೇಕಾಗಿ ಬಂತು. ಇದಾದ ಸ್ವಲ್ಪೇ ದಿನದಲ್ಲಿ ಆರತಿಯು ಒಂದು ಹೆಣ್ಣು ಮಗುವನ್ನು ಹೆತ್ತಳು.

ಬಳಿಕ ಈ ಹೆಚ್ಚಿನ ಹೊಸ ಹೊಟ್ಟೆಯ ಭಾರ ಹೊತ್ತು ಈ ಯುಗ್ಮವು ತನ್ನ ದೈವ ತೆರೆದುಕೊಳ್ಳಲು ಎಲ್ಲೆಲ್ಲಿ ತೆರಳಿತು ಏನೇನು ಮಾಡಿತು ಎಂಬುದು ಅವರಿಗಷ್ಟೇ ಗೊತ್ತು, ಮಿಕ್ಕವರಾರೂ ಅದನ್ನು ಅರಿಯರು. ಆದರೆ ಇದಕ್ಕೆ ಒಂದು ಅಪವಾದ— ಅವರಾರೆಂದರೆ ಮೀರಾ.

ಈ ಘಟನೆಯಾದ ಸುಮಾರು ಒಂದು ವರುಷದ ತರುವಾಯ ಮೀರಾಳ ಕೈಗೆ ಒಂದು ಪತ್ರ ಬಂತು. ಅದರ ಮೇಲಿನ ಪತ್ತೆಯನ್ನು ಅನೇಕ ಸಲ ಹೊಡೆಯಲಾಗಿತ್ತು. ಇಪ್ಪತ್ತಾಲ್ಕು ಪರಗಣೆ ಜಿಲ್ಲೆಯಲ್ಲಿ ಒಂದು ಸಣಬಿನ ಗಿರಣಿಗೆ ಸಂಬಂಧಿಸಿದ ಕೂಲಿಕಾರ ವಸತಿ ವಿಭಾಗದಲ್ಲಿ ಆ ಗಂಡ-ಹೆಂಡಿರು ವಾಸಿಸುತ್ತಿದ್ದರೆಂದೂ, ಬಹು ಕಷ್ಟದಿಂದ ಕಾಲ ಕಳೆಯುತ್ತಿರುವುದಾಗಿಯೂ ಅವರಿಂದ ತಿಳಿದುಬಂದಿತು.

ಮೀರಾಗೆ ಇವರಿಂದ ವ್ಯಥೆಯಾಗಲಿ, ತಾನು ವಹಿಸಿದ ಪಾತ್ರಕ್ಕಾಗಿ ಪಶ್ಚಾತ್ತಾಪವಾಗಲಿ ಆಗಲಿಲ್ಲ. ಸಮಾಜದ ನಿಷ್ಠುರ ನಿಯಮಗಳನ್ನೂ ಅವುಗಳಿಂದ ಪಾರಾಗುವ ಅಸಾಧ್ಯತೆಯನ್ನೂ ಆರತಿಯು ಸಂಪೂರ್ಣ ಅರಿತಿದ್ದಾಳೆಂಬುದು ಅವಳಿಗೆ ಗೊತ್ತು. ಅವಳೇನು ಕೂಸಾಗಿರಲಿಲ್ಲ. ಆದರೂ, ಅವರ ಸಂಶಯ, ಅನುಮಾನ, ದೌರ್ಬಲ್ಯಗಳನ್ನು ಬದಿಗೊತ್ತಿ, ಇಬ್ಬರನ್ನೂ ಕೂಡಿಸಿದವಳು ತಾನು. ಪ್ರಣಯದ ಮುಂದಿನ

ಹೆಣ್ಣಿಯಂದರೆ ಪರಿಣಯವೇ ಸರಿ. ಸೋಕ್ಷವಾಗಲಿ, ಮೋಕ್ಷವಾಗಲಿ, ಅದನ್ನು ಅಂಗೀಕರಿಸುವುದೇ ಕರ್ತವ್ಯ. ಅನಂತರ ತೇಲುವುದಾಗಲಿ, ಮುಳುಗುವುದಾಗಲಿ ಅವರವರ ಶಕ್ತಿ ಸಾಮರ್ಥ್ಯವನ್ನವಲಂಬಿಸಿದೆ. ಅದರ ಹೊಣೆ ತನ್ನದಲ್ಲ. ಆದರೂ— " ದೇವರೆ, ಅವರು ಒಳ್ಳೆಯ ದಿನ ಕಾಣಲಿ" ಎಂಬುದು ಮೀರಾನ ಅಂತರಾಳದ ಮೊರೆಯಾಗಿತ್ತು.

* * * *

ಮೀರಾ ಬಹಳ ಸುವ್ಯವಸ್ಥಿತ ಹೆಣ್ಣುಮಗಳು. ಸುಶಿಕ್ಷಿತ ಸ್ತ್ರೀ ಹೇಗಿರಬೇಕೆಂಬುದಕ್ಕೆ ಅವಳೊಂದು ನಿದರ್ಶನ. ಓರಣ, ಅಚ್ಚು ಕಟ್ಟುತನ, ವ್ಯವಸ್ಥೆ ಇವು ಅವಳಲ್ಲಿ ಮನೆ ಮಾಡಿಕೊಂಡಿದ್ದುವು ಮಲಗುವ ಮೊದಲು ದಿನದ ಅನುಭವಗಳನ್ನು ತನ್ನ ದಿನಚರಿಯಲ್ಲಿ ನಮೂದಿಸಿದ ಹೊರತು ಅವಳಿಂದೂ ನಿದ್ದೆ ಹೋಗುತ್ತಿರಲಿಲ್ಲ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ದಿನಚರಿಯ ಅವತರಣಿಕೆಗಳು ಕೆಳಗಿನಂತಿವೆ:

"ಮದುವೆಯಾದ ಮೇಲೆ ನಾನವರನ್ನು ಕಂಡುದು ಮೂರೇ ಸಲ. ಮೊದಲ ಸಲ ನೋಡಿದಾಗ ಅವರಿಗೆ ಒಂದು ಗಂಡು ಹಾಗೂ ಎರಡು ಹೆಣ್ಣು ಮಗುಗಳಿದ್ದುವು. ಪತ್ರದ ಮೇಲಿಂದಲೇ ನಾನವರ ಪತ್ತೆ ಹಚ್ಚಿದ್ದು.

" ಹೊಲಸು ಕೂಲಿಕಾರರ ವಸತಿಯಲ್ಲಿ ಅವರ ನಿವಾಸವನ್ನು ಕಂಡುಹಿಡಿಯುವುದೊಂದು ನನಗೆ ಅಸಾಧ್ಯ ಕೆಲಸವಾಯಿತು. ಥೂ ! ಅದೆಂತಹ ನಾಚಿಕೆಗೇಡಿತನ ! ಇಷ್ಟು ಶಿಕ್ಷಣ ಸಂಸ್ಕೃತಿ ಇದ್ದೂ, ಜೀವನದಲ್ಲಿ ಅವರೆಷ್ಟು ಕೆಳಗಿಳಿದಿರುವರೆಂಬುದನ್ನು ನೋಡಿ ನಾನು ದಿಙ್ಮೂಢಳಾದೆ. ಪುಸ್ತಕದಿಂದ ಅವರು ಅನೇಕ ಪಾಠ ಕಲಿತಿದ್ದರು; ಆದರೆ ಜೀವನದಿಂದ ಒಂದೂ ಕಲಿಯಲಿಲ್ಲ. ಅವರಲ್ಲಿ ಗಾಢವಾದ ಪ್ರೇಮವಿತ್ತು; ಆದರೆ ಸಂಸಾರವನ್ನು ಹಿತಮಿತವಾಗಿ ನಡೆಸಿಕೊಂಡು ಹೋಗಲು ಪ್ರಯತ್ನಿಸಲಿಲ್ಲ. ಅವರ ಅಂತರಂಗ ಒಳಿತಾಗಿತ್ತು; ಆದರೆ ಜಾಣತನ ಏನೂ ಇರಲಿಲ್ಲ: ಕಲ್ಪನೆ ಉಚ್ಚ, ವ್ಯಾವಹಾರಿಕತೆ ಶೂನ್ಯ.

" ಅವರ ಆ ದಾರಿದ್ರ್ಯ ನೋಡಿ ನನ್ನ ಕಣ್ಣಲ್ಲಿ ಬೊಟ್ಟು ಚುಚ್ಚಿದಂತಾಯಿತು. ಮನ ಖತಿಗೊಂಡಿತು. ಸರಿಯಾಗಿ ಪೋಷಣೆಯಿಲ್ಲದೆ ಹೊರಗಿ ಸಾಯಲಾದ ಮೂರು ಬಡಕಲು ಮಕ್ಕಳು. ಅನೇನು ಮಗುಗಳೊ, ಕೋತಿಗಳೋ ಹೇಳಲು ಸಾಧ್ಯವಿಲ್ಲ. ಸಂಸಾರ ಹೇಗೆ ಮಾಡಬೇಕೆಂಬುದರ ಗಂಧ, ಇಬ್ಬರಲ್ಲಿ ಒಬ್ಬರಿಗೂ ಇರಲಿಲ್ಲ. ಯಾಕೆಂದರೆ, ಎಂತಹ ಬಡತನದಲ್ಲಿಯೂ ಸ್ವಚ್ಛತೆಯೆಂಬುದಾದರೂ ಇರುವುದಿಲ್ಲವೇ? ಕಬ್ಬಿಣದ ಎನಿಮಲ್ ಮಾಡಿದ ಪಾತ್ರೆಗಳು ಅಲ್ಲೊಂದು ಇಲ್ಲೊಂದು ತಿಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಮೂಲೆ ಮೂಲೆಗಳಲ್ಲಿ ಕಸ ಗುಂಪುಗೂಡಿತ್ತು. ಇವರ ಮನೆಗೆ ಹೊಂದಿ, ಅದೇ ಚಪ್ಪರದ ಕೆಳಗೆ, ಒಬ್ಬ ವೇಶ್ಯೆ ತನ್ನ ವ್ಯವಸಾಯವನ್ನು ಸಾಗಿಸಿದ್ದಳು.

" ನಾನು ಬಂದುದಕ್ಕೆ ಸಂತೋಷಗೊಂಡು ಆರತಿಯು ಬಳಿಯುಲ್ಲಿಯೇ ಕುಳಿತಳು. " ನಾವೀಗ ಒಳಿತಾಗಿದ್ದೇವೆ " ಎಂದು ಅವಳು ನುಡಿದಳು. " ಇದು ಒಳಿತೇ " ? ಎಂದು ನಾನು ತಡೆಯಲಾರದೆ ಉದ್ಗಾರ ತೆಗೆದೆ, " ಈಗ ನನೇಂದುವು ಯಾವ ಕೆಲಸ ಮಾಡುತ್ತಾನೆ?" ಎಂದೂ ಕೇಳಿದೆ.

" ಸಣಬಿನ ಕಾರಖಾನೆಯಲ್ಲಿ ಒಂದು ನೌಕರಿ ಹಿಡಿದಿದ್ದಾನೆ."

" ನೀನೇನು ಮಾಡುವಿ? "

" ನೋಡುತ್ತಲೇ ಇದ್ದೀಯಲ್ಲಾ ! "

—ಆದಷ್ಟು ಅವಳ ಮನ ನೋಯಿಸಬಾರದೆಂದೇ ಪ್ರಯತ್ನಿಸುತ್ತಿದ್ದೆ " ಸಂಸಾರವನ್ನು ಇದಕ್ಕೂ ಬೇರೆ ರೀತಿಯಿಂದ ಸಾಗಿಸುವುದು ಸಾಧ್ಯವಿರಲಿಲ್ಲವೇ ?" ಎಂದು ಮೆಲ್ಲಗೆ ಪ್ರಶ್ನಿಸಿದೆ. " ಆದರ ಅವಶ್ಯಕತೆಯಾದರೂ ಏನು ? ಎಲ್ಲಿ ನಾವಿಬ್ಬರೂ ಜೊತೆಯಾಗಿ ಇರಬಲ್ಲೆವೊ ಅದೇ ನಮಗೆ ಸ್ವರ್ಗ! "

"ನನಗೆ ಆ ಪತ್ರವನ್ನು ಏಕೆ ಬರೆದಿ? "

" ಪ್ರತಿವರ್ಷ ನಮ್ಮ ವಿವಾಹದಿನವನ್ನು ಆಚರಿಸುವೆವು. ಅಂದು ನಿನ್ನ ನೆನಪಾಗುವುದು. ನಮ್ಮ ಸಂಸಾರ ನೋಡಿ ನಿನಗೂ ಸಂತೋಷವಾಗುವುದೆಂದು ನನಗೆನಿಸಿತು."

" ನೀವು ಸುಖದಿಂದ ಬಾಳುತ್ತಿರುವಿರೆಂದು ನಾನು ಗ್ರಹಿಸಬಹುದೇ? "

" ಹಾಗಾದರೆ, ನಮ್ಮ ದಾರಿದ್ರ್ಯವನ್ನು ನೋಡಿ ಕಣ್ಣೀರು ಸುರಿಸಲಿಕ್ಕೆ ಬಂದಿರುವೆಯಾ ? "

ನಾನು ಕಟುಹಾಸ್ಯವನ್ನು ಬೀರಿ ನುಡಿದೆ; ಆರತಿ ನೀನಿದನ್ನೆಲ್ಲ ನುಡಿಯುತ್ತಿರುವುದು ಅಹಂಕಾರ ಮೂಲಕವಾಗಿ ಋಷಿ-ಮುನಿಗಳು ತಪವನ್ನಾಚರಿಸಲು ಉಟ್ಟ ಲಂಗೋಟಿಯನ್ನೂ ತಿರಸ್ಕರಿಸುತ್ತಾರೆ. ನಾನದನ್ನು ಬಲ್ಲೆ; ಆದರೆ ನೀನು ಸಂಸಾರಿ ! ಇದು ನಿನ್ನ ತಪೋಮುದ್ರೆಯೆಂದೇ ತಿಳಿಯಲೇ ? ಅಲ್ಲ, ಅತಿಥಿ-ಅಭ್ಯಾಗತರೆದುರು ಕೂಡ ಓರಣವಾಗಿ ಕಾಣಿಸಿಕೊಳ್ಳಬಾರದೆ? ಈ ನಿನ್ನ ಹರಕು ಬಟ್ಟೆಯನ್ನು ಆಗ ಕೂಡ ಬದಲಿಸಬಾರದೆ ? ಇದೆಂಥ ವಿಚಿತ್ರ !

ಆ ದಿನ ನನೇಂದುವನ್ನು ಕಾಣುವುದು ಸಾಧ್ಯವಾಗಲಿಲ್ಲ. ಕಂಡಿದ್ದರೆ ನಾನು ತಾಳ್ಮೆಯಿಂದ ವರ್ತಿಸುತ್ತಿದ್ದೆನೋ ಇಲ್ಲವೋ ! ಆದರೂ ಅವನೊಡನೆಯೂ ಸೈರಣೆಯು ಅವಶ್ಯವಿತ್ತು. ಯಾಕೆಂದರೆ, ಲಗ್ನ-ಪೂರ್ವದಲ್ಲಿ ಅವನೇ ಆಗ್ರಹ ಹಿಡಿದಿದ್ದನು: " ಮೀರಾ, ಈ ಮುದುನೆಯ ವಿಚಾರವನ್ನು ನಿನ್ನ ತಲೆಯಿಂದ ತೆಗೆದುಹಾಕು. ಭಗ್ನಹೃದಯವನ್ನು ಮುಂದೆ ಎಂದಾದರೂ ಹೊಂದಿಸುವುದು ಸಾಧ್ಯ. ಆದರೆ ಒಡೆದು ಚೂರಾದ ಜೀವನವನ್ನು ಒಂದುಗೂಡಿಸುವುದು ಸಾಧ್ಯವಿಲ್ಲ. ಆರತಿಯನ್ನು ನನ್ನಿಂದ ದೂರವಿರಿಸು. "

ನಾನು ಉತ್ತರಿಸಿದ್ದೆ: " ಹಾಗಾದರೆ, ನಿನ್ನ ಪ್ರೇಮವೆಲ್ಲ ಬರಿ ಟೊಳ್ಳೆ ?" ಅದಕ್ಕವನು ನಕ್ಕು ನುಡಿದಿದ್ದ: " ಇಂದಿನ ನಮ್ಮೀ ಉಚ್ಛೃಂಖಲ ಯುಗದಲ್ಲಿ ತಾರುಣ್ಯವೊಂದು ಪ್ರಜ್ವಲಿಸುವ ಉರಿ. ಆ ನಿನ್ನ ಕೋಮಲ ಕುಸುಮಮಂಜರಿಯನ್ನು ಅದರ ಸಮೀಪ ತರಬೇಡ. ಕಮರಿಹೋದೀತು. ಈ ಸ್ವಚ್ಛಂದ ಯುಗದಲ್ಲಿ ಒಂದಾದರೂ ನಿಷ್ಕಲಂಕ ಪ್ರೇಮವು ಅದರ ಝಳದಿಂದ ಬಾಡಿ ಬತ್ತದೇ ಉಳಿಯಲಿ; ಇದೇ ನನ್ನ ಹಾರೈಕೆ."

* * * *

ಮುಂದೆ ಕೆಲವು ಪುಟಗಳನಂತರ ಮೀರಾನ ಡೈರಿಯಲ್ಲಿ, ಈ ಮುಂದಿನ ಅವತರಣಿಕೆ ಕಂಡು ಬರುವುದು :

ನಾನು ಅವರನ್ನು ಮರೆಯಲು ಪ್ರಯತ್ನಿಸಿದೆ. ಆದರೆ ಆರತಿ ಹಾಗೆ ಮಾಡಗೊಡಲಿಲ್ಲ. ಆ ಭೆಟ್ಟಿಯನಂತರ ಎರಡು ವರುಷಗಳ ಕರುನಾಯ ಮತ್ತೊಂದು ಪತ್ರ ಬೇಲಘಾಟದ ಪತ್ತೆಯ ಮೇಲಿಂದ ಎಂದಿತು. ಅದರಲ್ಲಿ ಅವಳು ಬರೆದಿದ್ದಳು: " ಮೊದಲಿಗಿಂತ ನಾವೀಗ ಎಷ್ಟೋ ನೆಮ್ಮದಿಯಾಗಿದ್ದೇವೆ. ಯಾಕೆಂದರೆ ನಮ್ಮ ನಾಲ್ಕು ಮಕ್ಕಳಲ್ಲಿ ಎರಡು ಸಿಡುಬುಬೇನೆಗಿಂದ ತೀರಿಕೊಂಡುವು. ನಿನ್ನ ಭೆಟ್ಟಿಯಾದರೆ, ನನ್ನ ಎಷ್ಟೋ ಹೊಸ ಅನುಭವಗಳನ್ನು ಹೇಳಬಯಸುವೆ. ಆದರೆ ನಾನು ದುಃಖಿ ಎಂದು ತಿಳಿದು ಮಾತ್ರ ವ್ಯಥೆಪಡಬೇಡ."

" ಒಂದು ದಿನ ಬೇಲಘಾಟದಲ್ಲಿ ಅವರು ವಾಸವಾಗಿದ್ದ ಸ್ಥಳದಲ್ಲಿ ಸಾದಾರ್ಪಣ ಮಾಡಿದೆ. ನವೇಂದುವು ನನ್ನನ್ನು ಎದುರುಗೊಂಡನು. ಅವರೆ ನನಗವನ ಗುರುತೇ ಹತ್ತಲಿಲ್ಲ. ಮಂದಹಾಸದಿಂದ ನಾನೆಂದೆ: ' ಏಳು ವರುಷದ ನಂತರ ನೋಡಲ ಸಲ ನಮ್ಮ ಈ ಭೇಟಿಯಲ್ಲವೆ ? ನನ್ನ ಗುರುತು ಹತ್ತಿತೇ, ನವೇಂದು ?" ಅವನೂ ಮಂದಸ್ಮಿತವನ್ನು ಬೀರಿ ನುಡಿದ : " ನಿನ್ನನ್ನು ಗುರುತಿಸಬಲ್ಲವನೀಗ ಮಾಯವಾಗಿ ನ್ನಾನೆ, ನೀರಾ !"

" ಜೀವನಸಂಗ್ರಾಮದಲ್ಲಿ ಅವನು ಗೆದ್ದಿರುವನೋ ಅಥವಾ ಬಿದ್ದಿರುವನೋ ?"

" ಅದೇನು ನನಗೆ ಗೊತ್ತಿಲ್ಲ. ಗೊಂಬೆಗಳಿಗೆ ಸ್ವಾತಂತ್ರ್ಯವೆಲ್ಲಿ ? ಆ ನಿಯಾಮಕನು ಕುಣಿಸಿದಂತೆಯೇ ಅವು ಕುಣಿಯುತ್ತವೆ. ಆದರೂ, ಅವು ರಣಾಂಗಣದಲ್ಲಿ ಸತ್ತು ಬಿದ್ದಿದ್ದರೂ, ಜಯಶಾಲಿಗಳಾಗಿರ ಬಹುದು."

" ನವೇಂದು, ನೀನೀಗ ದೈವದ ಮಾತನಾಡುತ್ತಿರುವಿ. ಇದರಲ್ಲಿ ಪೌರುಷದ ಲವಲೇಶವೂ ಇಲ್ಲ."

" ಪೌರುಷವೆಂದೆಯಾ, ನೀರಾ ? ಒಳ್ಳೀದು, ಜೂಜಾಡಲಿಕ್ಕೆ ಕುಳಿತರೆ, ಮಹಾ ಮಹಾ ವೀರರೂ ಸೋಲುವುದಿಲ್ಲವೆ ?"

ಆದೇ ಕಾಲಕ್ಕೆ ಆರತಿಯು ಒಳಗಿಂದ ಕಾಲೆಳೆಯುತ್ತ ಬಂದು ನನ್ನ ಬಳಿಯಲ್ಲಿ ಕುಳಿತಳು.

ಹಿಂದೊಮ್ಮೆ ಧೃಷ್ಟ-ಪುಷ್ಟವಾಗಿದ್ದ ಆ ದೇಹ, ಈಗ ಎಲುವಿನ ಸಂವರವಾಗಿತ್ತು. ಒರಟಾವ ಕೂದಲುಗಳು ಮುಖದ ಮೇಲೆ ಅಸ್ತ-ವ್ಯಸ್ತವಾಗಿ ಬಿದ್ದಿದ್ದುವು. ಮೊದಲು ದುಂಡಾಗಿದ್ದ ಆ ಅಂದವಾದ ಮೊಗ ಈಗ ಬೇನೆಯಿಂದ ಇಳಿಬಿದ್ದಿತ್ತು. ಕಣ್ಣು ಗುಳಿಬಿದ್ದು ಒಳ-ನೆಟ್ಟಿದ್ದುವು. ಕನಿಕರದಿಂದ ತಬ್ಬಿಕೊಂಡು, ನಾನವಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಮೃದುವಾಗಿ ಅವಳ ಬೆನ್ನಮೇಲೆ ಕೈಯಾಡಿ ಸುತ್ತಿರುವಾಗ, ಎದೆ 'ಧಡ್' ಎಂದಿತು.

" ನಿನ್ನ ಬೆನ್ನ ಮೇಲೆ ಈ ಬಾರುಗಳೇಕೆ ? ಬಾವುಗಳೇಕೆ ?"

ಆದರೆ ಇದಕ್ಕೆ ಉತ್ತರ ನವೇಂದುವಿನಿಂದ ಬಂದಿತು:

" ಅದು ಈ ರಾಕ್ಷಸನ ಕೃತ !"

" ಬೆತ್ತದಿಂದಲೋ ಅಥವಾ ಕಟ್ಟಿಗೆಯಿಂದಲೊ ?"

" ಇಂಥದೇ ಎಂದು ನೆನಪಿಲ್ಲ. ಸಿಟ್ಟಿನ ಭರದಲ್ಲಿ ಕೈಗೆ ಸಿಕ್ಕದ್ದ ರಿಂದ."

" ಎಂದು ? ಯಾವಾಗ ?"

" ಪ್ರತಿದಿನ ಮೂರುಸಂಜೆಗೆ ಅವಳಿಗೆ ಜ್ವರ ಬರುವುದು. ನಾಲ್ಕು ತಾನು ಹೊದಲು ಈ ಕೃತಿ ಗೈದೆ."

ಒಳ್ಳೀದು, ಈ ಚಿತ್ರಹಿಂಸೆಯನ್ನು ಈ ಬಡಪಾಯಿಗೆ ಕೊಟ್ಟ ಕಾರಣ ?" ವಿಕಾರವಾಗಿ ನಕ್ಕು ನವೇಂದು ನುಡಿದ: " ಇದರ ಉತ್ತರ ಸರಳವಿದೆ. ಈ ಹೊಡೆತದ ಕಾರಣ ಕೇಳುವೆಯಾ, ನೀರಾ ? ಜೀವನಕಲಹದಲ್ಲಿ ನನಗೆ ಪದೇ ಪದೇ ದೊರೆತ ಹೊಡೆತಗಳೇ— ಸಂತತವಾದ ಎದೆಗುದಿ, ಈ ಕಡುಬಡತನ, ಎಡೆಬಿಡದೆ ಸ್ವಾಭಿಮಾನ-ಕ್ಕೊದಗುವ ಆಘಾತ, ಯಾವಾಗಲೂ ಭವಿಷ್ಯತ್ತಿನ ಬಗೆಗಿರುವ ಅನಿಶ್ಚಿ-ತತೆ, ಇವೇ-ಈ ಏಟುಗಳೇ-ನಾನವಳಿಗೆ ಕೊಟ್ಟ ಏಟುಗಳ ಕಾರಣಗಳು. ಇದಕ್ಕಿಂತ ಹೆಚ್ಚು ಏನು ಹೇಳಲಿ ?"

ಆರತಿಯ ಅಶ್ರುಗಳು ನನ್ನ ಪಕ್ಕೆಲುಬುಗಳ ಗುಂಟ ಧಾರಾಕಾರ ವಾಗಿ ಇಳಿಯುತ್ತಿದ್ದುವು. ಅವಳನ್ನು ಅಲುಗಿಸಿ ಕೇಳಿದೆ: " ಈ ತರದ ಅವಮಾನವನ್ನು ನೀನು ಹೇಗೆ ಸಹಿಸಿದೆ ?" "ಇದರಲ್ಲಿ ನನಗೆ ಅವ-ಮಾನವೇನೂ ಎನಿಸಲಿಲ್ಲ ! " ಕಟುವಾಗಿ ನಕ್ಕು ನಾನೆಂದೆ : "ಬೆನ್ನೆ-ಲುಬು ನುರಿದಿದ್ದರೂ ನಿನಗೇನೂ ಎನಿಸುತ್ತಿರಲಿಲ್ಲವೆ ?" " ನಾನದೆಲ್ಲ ವನ್ನೂ ಸಹಿಸುತ್ತಿದ್ದೆ. ಮರಣದ ಹೊಸ್ತಿಲಲ್ಲಿ ಕಾಲಿಟ್ಟವರನ್ನು ಹೊಡೆ ಯುವರಾರು ? ಹೇಳು."

ನೋವಿನಿಂದ ತಲೆ ತಗ್ಗಿಸಿ ನವೇಂದುವು ಹೊರಟು ಹೋದನು. ಅವನಿಗೆ ಅಲ್ಲಿ ನಿಲ್ಲುವುದಾಗಲಿಲ್ಲ.

" ಒಳ್ಳೀದು, ಆರತಿ, ನಾವೀಗ ಇಬ್ಬರೇ ಇರುವೆವು. ನಿನ-ಗೊಂದು ಪ್ರಶ್ನೆ ಕೇಳುವೆ; ಸ್ಪಷ್ಟವಾಗಿ ಹೇಳು. ನಾನು ಲಗ್ನ ಮಾಡಿ ದುದರಿಂದ, ನಿಮ್ಮ ಆಯುಷ್ಯವನ್ನು ಹಾಳುಮಾಡಿದೆನೆ ?"

"ಇಲ್ಲ! "ಎಂದು ಅವಳ ಸ್ಪಷ್ಟ ಉತ್ತರ.

" ಇದು ನಿಜವೇ ? "

ನಮ್ಮನ್ನು ಕೂಡಿಸುವುದರಲ್ಲಿ ನಿನ್ನ ಸದುದ್ದೇಶವನ್ನು ನಾನು ಮನಗಂಡಿದ್ದೇನೆ. ನನಗೆ ಅದೊಂದು ಅಬಾಧಿತ ಸತ್ತ್ವವಾಗಿದೆ."

" ನವೇಂದುವಿಗೆ ಅದು ಅಷ್ಟೇ ಸತ್ತ್ವವೆನಿಸುವುದೇ ?

"ಇಲ್ಲ. ಸ್ವಲ್ಪವೂ ಇಲ್ಲ. ಅದ್ದರಿಂದಲೇ ಅವನು ಅದರ ವಿರುದ್ಧ ಉರಿವೇಳುವನು, ಪೂತ್ಕರಿಸುವನು, ಹೆಡೆ ಅಪ್ಪಳಿಸುವನು. ಮತ್ತು ಆ ವಿಷದಂತಗಳ ಗುರುತನ್ನು ನನ್ನ ಬೆನ್ನಮೇಲೆ ಮೂಡಿಸುವನು "

"ಇದರಿಂದ ನನಗೆ ಸಮಾಧಾನವಿಲ್ಲ. ನಿನ್ನ ಮನವನ್ನು ಇನ್ನೂ ಬಿಚ್ಚಿ ಹೇಳು "

" ನನ್ನ ಮಟ್ಟಿಗೆ ಹೇಳಬೇಕಾದರೆ, ನಿನ್ನ ಉದ್ದೇಶ ನನಗೆ ಎಂದೂ ಅನ್ಯಥಾ ತೋರಿಲ್ಲ. ಎಂಥ ಕಷ್ಟ-ನಷ್ಟಗಳಲ್ಲಿಯೂ ನನಗೊಂದು

ಕೈ ದೀವಿಗೆಯಂತಿದೆ. ಮೀರಾ, ನಾನು ಹೇಳಿರುವುದನ್ನು ನಂಬು, ನನಗೆ ಎಳ್ಳಷ್ಟೂ ಪಶ್ಚಾತ್ತಾಪವಿಲ್ಲ. ತೀಕ್ಷ್ಣವಾದ ಎದೆಗುದಿಯಲ್ಲಿ ಅವನು ಹೊಡೆಯುತ್ತಿರುವಾಗ, ನನಗೆ ಏನೂ ಕೆಡುಕೆನಿಸುವುದಿಲ್ಲ. ಅದರೆ, ಅಕ್ಕಾ, ಅವನು ಬಳಲುವುದನ್ನು ನೋಡಿ ನಾನು ಸಹಿಸಲಾರೆ."

ಆಗ ಆರತಿಯು ತನ್ನ ಮುಖವನ್ನು ನನ್ನ ಬೆನ್ನ ಹಿಂದೆ ಮುಚ್ಚಿ ಕೊಂಡು ಗಟ್ಟಿಯಾಗಿ ಅಳಹತ್ತಿದಳು. ಕಣ್ಣೀರಿನ ಒಂದು ಹಂಡೆಯನ್ನೇ ಬರಿದುಮಾಡುತ್ತಿರುವಳೋ ಎನ್ನಿಸಿತು.

ಆ ದಿನ ಹೆಚ್ಚು ವೇಳೆ ನನಗೆ ಉಳಿಯುವುದಕ್ಕೆ ಸಾಧ್ಯವಿರಲಿಲ್ಲ. ಮುಂದೇನೂ ಮಾತನಾಡದೆ ಎದ್ದುನಿಂತೆ. ಅದರೆ ಉದ್ರೇಕವು ಕಂಠದಲ್ಲಿ ಉಕ್ಕಿಬಂದು ಮತ್ತೆ ಮಾತನಾಡಲು ಹಚ್ಚಿತು: "ಆರತೀ, ಕೊನೆಯದಾಗಿ ನಿನಗೆ ಇನ್ನೊಂದು ಪ್ರಶ್ನೆ ಕೇಳುವೆ. ನಿಚ್ಚಳವಾಗಿ ಉತ್ತರ ಕೊಡು. ನಿಮ್ಮ ದಾಂಪತ್ಯವು ಯಶಸ್ವಿಯಾಗಿದೆಯೆ?"

"ಅದರಲ್ಲಿ ಸಂಶಯವೇನು ?" ಆರತಿಯ ಧ್ವನಿಯಲ್ಲಿ ನಿಶ್ಚಿತತೆ ಇತ್ತು.

"ಆದರೆ, ನಾನು ನನ್ನ ಸೋಲನ್ನು ಒಪ್ಪುವೆ. ನೀನು ನಿನ್ನ ಸೋಲನ್ನು ಎಂದೂ ಒಪ್ಪುವುದಿಲ್ಲವೆ? "

ಇಲ್ಲ, ಇಲ್ಲ! ನನಗೆ ಸೋಲೆಂಬುದೇ ಇಲ್ಲ. ನಿಜವಾದದ್ದೇ ಹೇಳುವೆ ನಂಬು, ಮೀರಾ, ನೀನು ಮಾಡಿದುದಿಷ್ಟೇ: ಒಂದು ಕಗ್ಗತ್ತಲೆಯ ಗವಿಯ ಬಾಗಿಲಲ್ಲಿ ಹೆದರಿ ಅನುಮಾನಿಸುತ್ತ ನಿಂತಿದ್ದೆ. ನೀನು ಕುತ್ತಿಗೆಗೆ ಕೈಕೊಟ್ಟು ಒಳಗೆ ದಬ್ಬಿದಿ. ಅದರ ಆಚೆಯ ಬದಿಗೆ ನನಗೊಂದು ಬಂಗಾರದ ಕಣಿಯೇ ಸಿಕ್ಕಿತು. ಮೀರಾ, ನನ್ನ ಜೀವನ ಸಾರ್ಥಕವಾಯಿತು. "

ಏನೂ ಮಾತನಾಡದೆ, ಕೆಳಗೆ ರಸ್ತೆಗೆ ಇಳಿದುಬಂದೆ, ಆ ಗಲಿಚ್ಛ ವಸತಿಯ ಇಕ್ಕಟ್ಟಾದ ಸಂದಿಗೊಂದಿಗಳೊಳಗಿಂದ ಹಾಯ್ದು ನನ್ನ ಮೋಟರನ್ನು ತಲುಪಿದೆ. ಒಬ್ಬ ಮನುಷ್ಯನನ್ನು ವಧೆಗೈದು, ಅಪರಾಡವು ಸಿದ್ಧವಾಗಿ ಶಿಕ್ಷೆಗೆ ಗುರಿಯಾಡವನಂತೆ ನನಗೆ ಎನಿಸಹತ್ತಿತು. ಈ ಭಾವನೆಯು ಗಟ್ಟಿಯಾಗಿ ಕುತ್ತಿಗೆಯನ್ನು ಅದುಮಿ, ನನ್ನನ್ನು ಅಲ್ಲಿಂದ ಹೊರದೂಡಿದಂತಾಯಿತು.— ಅದರೂ, ಅವಳು ಆಡಿದುದು ನಿಜವಿರ ಬಹುದೇ ? ಛೆ, ಎಂದೂ ಸಾಧ್ಯವಿಲ್ಲ, ಅದು ಸಂಪೂರ್ಣ ಸತ್ಯವೆಂದೂ ಆಗಲಾರದು.

"ಮರಣದ ಬೀಜವು ಗೌಪ್ಯವಾಗಿ ಅವಳಲ್ಲಿ ಅಂಕುರಿಸುತ್ತಿಲ್ಲವೆ?"

* * * *

ಮೀರಾನ ಡೈರಿಯ ಮತ್ತೊಂದು ಪುಟ:

ಯುದ್ಧವು ಬಂದುಹೋಯಿತು. ಆ ಅಸಹ್ಯ ಹೊಲಸು ಕೊಳಚೆಯಿಂದ ನವೇಂದುವು ಮೇಲೆದ್ದಿದ್ದಾನೆ. ಈ ದುರ್ದೈವೀ ದಂಪತಿಗಳಿಗೆ ಅದೆಂಥ ಸುಖ-ಸಮಾಧಾನ! ಯುದ್ಧೋತ್ತರ ಮಹಾರ್ಘತೆ ಅವರಿಗೊಂದು ದೇವದತ್ತ ವರವಾಗಿ ಬಂದಿದೆ.

ನವೇಂದುವು ಸುಮಾರು ಒಂದು ಲಕ್ಷದಷ್ಟು ರೂಪಾಯಿ ಖರ್ಚು ಮಾಡಿ, ನನ್ನ ಮನೆಯ ಮಗ್ಗುಲಿಗಿರುವ ಆ ಮುರುಕು ಶಿವಾಲಯವನ್ನು ಜೀರ್ಣೋದ್ಧಾರ ಮಾಡಿದ್ದಾನೆ. ಅನೇಕ ವರ್ಷಗಳ ಹಿಂದೆ ಅವನು ಆರತಿಯ ಲಲಾಟದಲ್ಲಿ ಮಂಗಲತಿಲಕವನ್ನಿಟ್ಟುದು ಅಲ್ಲಿಯೇ. ಗುರುತು ಹತ್ತಲಾರದಷ್ಟು ಅದೀಗ ಬದಲಾಗಿದೆ. ವಿಶಾಲವಾದ ನರ್ತನಶಾಲೆ, ವಿವಿಧ ಪುಷ್ಪಲತೆಗಳಿಂದೊಡಗೂಡಿದ ಅವಾರ, ಪೂಜಾರಿಗಾಗಿ ಪ್ರತ್ಯೇಕ ವಾಸಗೃಹ, ನಿತ್ಯ ದೇವತಾರ್ಚನೆಗಾಗಿ ಪ್ರಭೂತ ಸಾಹಿತ್ಯ ಸಂಭಾರ ಬರಹೋಗುವ ಅತಿಥಿ-ಅಭ್ಯಾಗತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆ ಇವೆಲ್ಲದರಿಂದ ಅದೊಂದು ಆಕರ್ಷಕ ಯಾತ್ರಾಸ್ಥಳವಾಗಿದೆ.

ಹೇಗೋ ಪ್ರಯತ್ನಮಾಡಿ ಅವ ಇಂಪೋರ್ಟ್ ಎಕ್ಸಪೋರ್ಟ್ ಲೈಸೆನ್ಸ್ ಪಡೆದಿದ್ದ. ಶಾಖೋಪಶಾಖೆಯಾಗಿ ಹಬ್ಬಿದ ಅವನ ಆಯಾತ ನಿರ್ಯಾತ ವ್ಯಾಪಾರದ ಅನೇಕಮುಖಗಳಿಂದ ಅಗಣಿತ ಸಂಪತ್ತು ಕೋಡಿ ಕೋಡಿಯಾಗಿ ಅವನೆಡೆಗೆ ಹರಿದುಬರುತ್ತದೆ. ರಾಜಧಾನಿಯ ಉತ್ತರಭಾಗದಲ್ಲಿ ಮುಖ್ಯ ಬೀದಿಗೆ ಹೊಂದಿ, ತನಗೆ ತನ್ನ ವಾಸಕ್ಕಾಗಿ ಒಂದು ಭವ್ಯ ಸೌಧವನ್ನು ಕಟ್ಟಿಸಿದ್ದಾನೆ. ಅದರ ವಾಸ್ತು ಸಮಾರಂಭಕ್ಕೆ ನನಗೆ ಆಮಂತ್ರಣ ಬಂದಿದೆ. ನಿರಾಕರಿಸುವುದು ಅಶಕ್ಯ.

* * * *

ಮೀರಾನನ್ನು ಕರೆತರಲು ಒಂದು ಹೊಚ್ಚ ಹೊಸ ರೋಲ್ಸ್ ರಾಯಿಸ್ ಕಾರು ಅವಳ ಬಾಗಿಲಿಡೆ ಬಂದು ನಿಂತಿತು. ಹಾಯವಾಗಿ ಕುಣಿಯುವ ಮೆತ್ತನೆಯ ಆಸನದಲ್ಲಿ ಅವಳನ್ನು ಕುಳ್ಳಿರಿಸಿಕೊಂಡು, ನವೇಂದುವಿನ ನೂತನ-ನಿರ್ಮಿತ ವಾಸಗೃಹಕ್ಕೆ ಅದು ವಾಯುವೇಗದಿಂದ ಓಡುತ್ತಿರುವಾಗ, ಅವಳ ಹೃದಯವು ಅಸದೃಶ ಸಂತೃಪ್ತಿ-ಸಮಾಧಾನದಿಂದ ತುಂಬಿ ಹೊರಸೂಸುತ್ತಿತ್ತು. ಅಭ್ಯುದಯದಲ್ಲಿಯೂ ಆ ಪ್ರಣಯಿಗಳು ತನ್ನನ್ನು ಮರೆಯಲಿಲ್ಲ. ಈ ಸಮಾರಂಭಕ್ಕಾಗಿ ತಪ್ಪದೆ ಕರೆಸಿದ್ದಾರೆ. ಏನೇ ಆಗಲಿ, ಬಡತನದಲ್ಲಿ ಇಷ್ಟು ದಿನ ಬೆಂದು ಬೇಗುದಿಗೊಂಡು, ಕೊನೆಗೆ ತಮ್ಮ ದೈವ ತೆನೆದುಕೊಂಡರು. ಅವರ ಈ ಭಾಗ್ಯಪಲ್ಲಟವು ನಿಜವಾಗಿಯೂ ಇಂದ್ರಜಾಲವೇ ಸರಿ....

'ಕಿರ್ ' ಎಂದು ಬ್ರೇಕ್ ಸಪ್ಪಳ ಮಾಡಿದಾಗಲೇ ಮೀರಾ ಸುಖದ ಸಮಾಧಿಯಿಂದ ಎಚ್ಚತ್ತುದು; ನೋಡುತ್ತಾಳೆ. ಅದೆಂತಹ ಭವ್ಯ ಸುಂದರ ಸದನ ! ನವೇಂದುವಿನ ಕಾರ್ಯದರ್ಶಿಯು ಹಸನ್ಮುಖದಿಂದ ಕೆಳಗಿಳಿದು ಬಂದು ಅವಳನ್ನು ಸ್ವಾಗತಿಸಿದನು. ಐಷ್ ಆರಾಮದ ಅತ್ಯಾಧುನಿಕ ಸುಖ-ಸೌಕರ್ಯಗಳಿಂದೊಡಗೂಡಿದ ದಿವಾನ್ ಖಾನೆಗೆ ಅವಳನ್ನು ಕರೆದೊಯ್ದನು. ಅನಂತರ ಅನೇಕ ಸಾಲಂಕೃತ ಕೋಣೆಗಳೊಳಗಿಂದ ಹಾಯ್ದು ಅವರು ನವೇಂದುವಿನ ಶಯ್ಯಾಗೃಹದೆನುರು ಬಂದುನಿಂತರು. ಅದರ ಬಾಗಿಲು ಅರ್ಧ ತೆರೆದಿತ್ತು.

ಮೀರಾನ ಎದೆ ಧಸ್ಸೆಂದಿತು.

ನವೇಂದುವು ನಿತಿ ಮೀರಿ ಕುಡಿದು,-ಎಚ್ಚರವಪ್ಪಿ ವಿಶಾಲವಾದ ಪರ್ಯಂಕದ ಮೇಲೆ ಅಸ್ತವ್ಯಸ್ತವಾಗಿ ಬಿದ್ದಿದ್ದನು. ಪಕ್ಕದಲ್ಲಿ ಪುನಃ ಪ್ರಜ್ಞೆ ಬರುವಂತೆ ಉಪಚರಿಸುತ್ತ ಅವನ ಹೊಸ ಹೆಂಡತಿ ಕುಳಿತಿದ್ದಳು. ತೀಕ್ಷ್ಣ ಮಾದಕ ಪೇಯದ ಕಟು-ತಿಕ್ತ ವಾಸನೆಯು ಆ ಕೋಣೆಯ ಹವೆಯನ್ನೆಲ್ಲ ದೂಷಿತಗೊಳಿಸಿ ಹೊರಗೆ ಹರಿದು ಬರುತ್ತಿತ್ತು.

(೧೫೯ನೆಯ ಪುಟ ನೋಡಿರಿ)

ಕಾಲಿದಾಸನ ಭ್ರಮರ ವರ್ಣನೆ

ಲೇಖಕ: ಶ್ರೀ ಎನ್. ಭೀಮಭಟ್ಟರು

'ಸಾಹಿತ್ಯ ಶಿರೋಮಣಿ ಕನ್ಯಾನ.'

ಪ್ರಾಚೀನ ಕಾವ್ಯಗಳಲ್ಲಿ ಕಮಲ-ಭ್ರಮರಗಳ ವರ್ಣನಾಸಂದರ್ಭಗಳು ಬೇಕಾದಷ್ಟು ಸಲ ಬಂದಿರುವುವು. ಎಂತಲೇ ಕಮಲ-ಭ್ರಮರಗಳ ವರ್ಣನೆಗಳು ಇಂದಿನವರಿಗೆ ಕವಿಸಮಯವೆಂಬ ಬೇಸರಕ್ಕೆ ಕಾರಣವಾಗಿರಬಹುದು; ಆದರೆ ಕಾಲಿದಾಸನ ಕಮಲ-ಭ್ರಮರಗಳ ವರ್ಣನೆಗಳು ಒಂದು ವಿಶಿಷ್ಟ ವ್ಯಕ್ತಿತ್ವದಿಂದ ಕೂಡಿವೆ.

ಸಾಮಾನ್ಯವಾದ ಒಂದು ಹುಳುವಾದರೂ, ಮಹಾಕವಿಗಳ ರಸಭರಿತವಾಣಿಯಿಂದ ಅಮರವೆನಿಸಬಲ್ಲುದು ಎಂಬುದಕ್ಕೆ, ಕಾಲಿದಾಸನ ಭ್ರಮರವರ್ಣನೆಗಿಂತ ಮಿಗಿಲಾದ ಇನ್ನೊಂದು ನಿದರ್ಶನವನ್ನು ಹುಡುಕ ಬೇಕಾದ್ದಿಲ್ಲ. ಕಾಲಿದಾಸನು ತನ್ನ ಅಲೌಕಿಕ ಪ್ರತಿಭೆಯಿಂದಲೂ ಉತ್ತಮ ರಸಿಕತೆಯಿಂದಲೂ ಸಾಮಾನ್ಯವಾದ ಭ್ರಮರವನ್ನು ಸಹೃದಯಾದರಣೀಯವನ್ನಾಗಿಯೂ, ಅಮರವನ್ನಾಗಿಯೂ ಮಾಡಿದ್ದಾನೆ.

ಭ್ರಮರವನ್ನು ಕವಿಗಳು ಅನೇಕವಿಧದಿಂದ ವರ್ಣಿಸಿ ಹಣಿದಿದ್ದಾರೆ. ಕೇಶಪಾಶವನ್ನು ವರ್ಣಿಸುವಾಗ ಕವಿಗಳು ಅದನ್ನು ತುಂಬಿಗಳ ಗುಂಪಿಗೆ ಹೋಲಿಸಿದ್ದಾರೆ. ಮನ್ಮಥನ ಶಿಂಜಿನಿಯಾಗಿ ಭ್ರಮರ ಪಂಕ್ತಿಯನ್ನೇ ಕವಿಗಳು ಕಲ್ಪಿಸಿದ್ದಾರೆ. ಸ್ತನಾಗ್ರದಲ್ಲಿರುವ ಕಪ್ಪಿನ ಭಾಗವನ್ನು ಕವಿಗಳು ತುಂಬಿಯೆಂದು ಉತ್ಪ್ರೇಕ್ಷಿಸಿದ್ದಾರೆ. ಭ್ರಮರನೆಂದರೆ ವಿಲಾಸಿಪುರುಷನಿಗೆ ಸಮಾನನೆಂದೂ ವರ್ಣಿಸಿದ್ದಾರೆ. ತುಂಬಿಯು ಹೂವಿನಿಂದ ಹೂವಿಗೆ ಹಾರಿ ಮಕರಂದವನ್ನು ಸ್ವಾದಿಸುವಂತೆ, ನಿತ್ಯವೂ ವಿವಿಧ ಪ್ರೇಯಸಿಯರನ್ನು ಬೆಂಬತ್ತುವ ಕಾಮಿಗಳನ್ನು ಕವಿಗಳು ಭ್ರಮರಸದೃಶರೆಂದು ಹೇಳಿದ್ದಾರೆ. ಈ ವಿಧವ ವ್ಯಾಪಾರವನ್ನು ಭ್ರಮರವೃತ್ತಿಯೆಂದೂ ಕರೆದಿದ್ದಾರೆ. ಇನ್ನು ನಾರಿಯರ ನೋಟವನ್ನು ತುಂಬಿಗಳ ಸಾಲಿನೊಂದಿಗೆ ಹೋಲಿಸಿದ್ದಾರೆ. ಕಾಲಿದಾಸನು ಇವೆಲ್ಲ ವರ್ಣನೆಗಳನ್ನು ಮಾಡುವಾಗಲೂ ಭ್ರಮರಕ್ಕೆ ಪ್ರಜ್ಞಾಭರಿತತೆಯನ್ನೂ ರಸಿಕಶ್ರೇಷ್ಠತೆಯನ್ನೂ ದಯಪಾಲಿಸಿ ಇತರ ಕವಿಗಳಿಗಿಂತ ನಿಶಿಷ್ಟರೀತಿಯಲ್ಲಿ ವರ್ತಿಸಿದ್ದಾನೆ.

ಕಾಲಿದಾಸನು ಪ್ರಕೃತಿಪ್ರಿಯಕವಿ. ಆದುದರಿಂದ ಪ್ರಕೃತಿ ವರ್ಣನೆ ವಿಶೇಷ ಆಕರ್ಷಕವಾಗಿತ್ತೆನ್ನಬಹುದು. ಪ್ರೇಮ ಮತ್ತು ಪ್ರಕೃತಿ ಎರಡರ ಸುಂದರ ಸಮನ್ವಯವನ್ನು ಸಾಧಿಸುವಲ್ಲಿಯೂ ಕಾಲಿದಾಸನು ಭ್ರಮರವನ್ನು ಸುಂದರ ಮಾಧ್ಯಮವನ್ನಾಗಿ ಬಳಸಿರುವುದನ್ನು ಕಾಣುತ್ತೇವೆ.

ಅಭಿಜ್ಞಾನ ಶಾಕುಂತಲದಲ್ಲಿ ಕಾಲಿದಾಸನ—ಇಂತಹ ರಮ್ಯ ವರ್ಣನೆಯ ಪರಮಾವಧಿಯನ್ನು ನಾವು ಕಾಣಬಹುದು. ಮೊದಲಾಗಿ ಭ್ರಮರವು ಇಲ್ಲಿ ಅಸಾಮಾನ್ಯ ರಸಿಕನ ರೂಪದಲ್ಲಿ ವರ್ಣಿತವಾಗಿದೆ. ದುಷ್ಯಂತನು ಶಕುಂತಲೆಯನ್ನು ಕಂಡು ಮುಗ್ಧನಾಗಿ ಆಕೆಯನ್ನೇ ನೋಡುತ್ತ ಮರೆಯಲ್ಲಿ ನಿಂತುಕೊಂಡಿರುವಾಗ, ಪ್ರಕೃತಿರಮ್ಯವೂ ಫಲಪುಷ್ಪ ಸಮೃದ್ಧವೂ ಆದ ಆ ಪ್ರದೇಶದಲ್ಲಿ ತುಂಬಿಯೊಂದು ಹಾರಿ ಬಂದು, ಪ್ರಕೃತಿಸುಂದರಿಯಾದ ಶಕುಂತಲೆಯ ಮುಖದ ಮೇಲೆ ಕುಳಿತುಕೊಳ್ಳುತ್ತದೆ-ಮಾತ್ರವಲ್ಲದೆ-ಅದು ಶಕುಂತಲೆಗೆ ಕೊಡುತ್ತಿದ್ದ ತೊಂದರೆಯನ್ನು ದುಷ್ಯಂತನು ಹೀಗೆ ನಿರೂಪಿಸುತ್ತಾನೆ :

> " ಚಲಾಪಾಂಗಾಂ ದೃಷ್ಟಿಂ ಕ್ಷಿಪಸಿ ಬಹುಶೋ ವೇಪಥುಮತೀಂ,
> ರಹಸ್ಯಾಖ್ಯಾಯಾನ ಸ್ಪನಸಿ ಮೃದು ಕರ್ಣಾಂತಿಕ ಚರಃ |
> ಕರೌ ವ್ಯಾಧುನ್ವತ್ಯಾಃ ಪಿಬಸಿ ರತಿಸರ್ವಸ್ವಮಧರಂ,
> ವಯಂ ತತ್ತ್ವಾನ್ವೇಷಾನ್ಮಧುಕರ ಹತಾಸ್ತ್ವಂ ಖಲು ಕೃತೀ "

ಭ್ರಮರಬಾಧೆಯಿಂದ ಉಂಟಾಗುವ ತೊಂದರೆಗಳನ್ನೆಲ್ಲ ಇಲ್ಲಿ ಕವಿಯು ಶೃಂಗಾರಭಾವನಗಳಿಗೆ ಹೊಲಿಸಿದ್ದಾನೆ. ತುಂಬಿಯು ಮುಖದ ಮೇಲೆ ಹಾರಿ ಬಂದಾಗ ಆಕೆಯ ಚಂಚಲವಾದ ಭಯ-ಚಕಿತವಾದ ನೋಟದಲ್ಲಿ ನಡುಕ ತುಂಬಿರುತ್ತದೆ. ರತಿಕಾಲವಲ್ಲೂ ಇದೇ ಅನುಭವವನ್ನು ಕಾಣಬಹುದು. ಆ ತುಂಬಿ ಕವಿಯ ಬಳಿ ಸಂಚರಿಸುತ್ತಿರುವಾಗ, ಕವಿಯಲ್ಲೀನೋ ಗುಟ್ಟು ಹೇಳಲು ಹವಣಿಸುತ್ತಿರುವಂತೆ ಉತ್ಪ್ರೇಕ್ಷಿಸಲಾಗುತ್ತಿದೆ. ತುಂಬಿ ಶಕುಂತಲೆಯ ಚೆಂದುಟಿಗಳ ಬಳಿ ಸಾಗಿದಾಗ, ಆಕೆ ಕೈಗಳಿಂದ ನಿವಾರಿಸ ಬಯಸುವುದನ್ನು ಕವಿಯು ಅದರ ಪಾನನನ್ನು ಬಯಸುವ ಪ್ರಿಯತಮನನ್ನು ಪ್ರಿಯಲಜ್ಜೆಯಿಂದ ನಿವಾರಿಸುವುದಕ್ಕೆ ಹೋಲಿಸಿದ್ದಾನೆ. ತುಂಬಿಯ ವರ್ತನೆಯನ್ನು ರತಿರಸಾಸ್ವಾದಕ್ಕೆ ಹೋಲಿಸಿ, ತುಂಬಿಯ ಧನ್ಯತೆಯನ್ನು ಮುಷ್ಯಂತನ ಬಾಯಿಂದ ಕೊಂಡಾಡುವಂತೆ ಚಿತ್ರಿಸಲಾಗಿದೆ. ಇದು ಕಾಲಿದಾಸನ ಉತ್ಕೃಷ್ಟವಾದ ಭ್ರಮರವರ್ಣನೆ. ಇಲ್ಲಿ ಭ್ರಮರಬಾಧಾವರ್ಣನವೇ

ನಾಟಕದ ಸಮಗ್ರ ಶೃಂಗಾರಕ್ಕೆ ಪೋಷಕವಾಗಿದೆ. ದುಷ್ಯಂತ ಶಕುಂತಲೆಯರ ಪ್ರಥಮ ದರ್ಶನಕ್ಕೂ ಕವಿಯು ಇದೇ ಅವಕಾಶವನ್ನು ಕಲ್ಪಿಸಿರುವುದು ಗಮನಾರ್ಹವಾಗಿದೆ.

ಇನ್ನು ಶಕುಂತಲೆ ಗರ್ಭಿಣಿಯಾಗಿ ದುಷ್ಯಂತನ ಬಳಿಗೆ ಹೋದಾಗ, ಈಕೆ ತನ್ನ ಪ್ರಿಯೆ ಹೌದೋ ?-ಅಲ್ಲವೊ ?- ಎಂದು ಶಾಪ ಗ್ರಸ್ತನಾದ ದುಷ್ಯಂತನು ಗುರುತಿಸಲಾರದೆ ತನ್ನನ್ನು ಭ್ರಮರದ ಸರಿಸ್ಥಿತಿಗೆ ಹೋಲಿಸುವುದು ರಮ್ಯವಾಗಿದೆ :

" ಇನಮುಪನತಮೇನಂ ರೂಪಮುಕ್ಲಿಷ್ಟಕಾಂತಿ-
ಪ್ರಥಮಪರಿಗೃಹೀತಂ ಸ್ಯಾನ್ನವೇತಿ ವ್ಯವಸ್ಯನ್ |
ಭ್ರಮರ ಇವ ವಿಭಾತೇ ಕುಂದಮಂತಸ್ತುಷಾರಂ
ನ ಚ ಖಲು ಪರಿಭೋಕ್ತುಂ ನೈವ ಶಕ್ನೋಮಿ ಹಾತುಂ "

ಇಷ್ಟು ಸುಂದರವಾದ, ಬಾಗಿಲಿಗೆ ಬಂದ ರೂಪರಾಶಿಯು ತನ್ನ ಪ್ರಥಮಪರಿಗ್ರಹದ ವಸ್ತು ಹೌದೇ ಅಲ್ಲವೇ— ಎಂಬ ಚಿಂತೆ ದುಷ್ಯಂತನಿಗೆ ಹೆಚ್ಚಿದೆ. ಪ್ರಾತಃಕಾಲದಲ್ಲಿ ಒಳಗೆ ಹಿಮು ತುಂಬಿರುವ ಕುಂದ ಪುಷ್ಪವನ್ನು ಆಸ್ವಾದಿಸಲೂ ಸಾಧ್ಯವಿಲ್ಲದೆ, ಬಿಟ್ಟುಹೋಗಲೂ ಮನಸ್ಸಿಲ್ಲದೆ, ಪೇಚಾಟಕ್ಕೊಳಗಾದ ಭ್ರಮರದಂತೆ, ತಾನು ಶಕುಂತಲೆಯನ್ನು ಸ್ವೀಕರಿಸಲೂ ಸಾಧ್ಯವಿಲ್ಲ, ಬಿಡಲೂ ಮನಸ್ಸಿಲ್ಲದವನಾಗಿದ್ದೇನೆ— ಎಂದು ದುಷ್ಯಂತ ಹೇಳಿದ್ದಾನೆ. ಇಲ್ಲಿ ಸಾಮಾನ್ಯವಾದ ಭ್ರಮರಕ್ಕೆ ಹೋಲಿಸಿಕೊಂಡು ಧರ್ಮಸಂಕಟದ ಸರಿಸ್ಥಿತಿಯಲ್ಲಿ ಆ ಭ್ರಮರದ ಸ್ಥಾನವನ್ನೆತ್ತಿಹಿಡಿಯಲಾಗಿದೆ.

ವಿರಹನೇದನೆಯನ್ನನುಭವಿಸುತ್ತಿರುವ ದುಷ್ಯಂತನು ಪ್ರಥಮ ದರ್ಶನದ ಭ್ರಮರ ಬಾಧೆಯ ಚಿತ್ರವನ್ನು ರಚಿಸಿ ನೋಡಿ ಆನಂದಿಸುತ್ತಿದ್ದಾನೆ. ಅದೇ ವೇಳೆಗೆ ಅತನಿಗೆ ಅದು ಚಿತ್ರವೆಂಬುದು ಮರೆತುಹೋಗಿ, ತನ್ಮಯತೆಯಿಂದ ಮುಗ್ಧನಾಗಿ ಆತ ಭ್ರಮರದ ಅನ್ಯಾಯವನ್ನು ಖಂಡಿಸಿ, ಆವೇಶದಿಂದ ಮುಂದುವರಿಯುವುದು ಸುಂದರವಾಗಿದೆ :

" ಅಕ್ಲಿಷ್ಟ ಬಾಲತರುಪಲ್ಲವ ಲೋಭನೀಯಂ | ಪೀತಂ ಮಯಾ ಸದಯಮೇವರತೊತ್ಸುತೀಕ್ಷ್ಣಬಂಬಾಧರಂ ಸ್ಪೃಶಸಿ ಚೇದ್ ಭ್ರಮರಪ್ರಿಯಾಯಾಃ ತ್ವಾಂಕಾರಯಾಮಿ ಕಮಲೋದರ ಬಂಧನಸ್ಥಂ" ತಾನು ಅತ್ಯಂತ ಪ್ರೇಮದಿಂದಾಗೂ ದಯೆಯುಂದ, ನೋವಾಗಬಾರದೆಂದು ಚುಂಬಿಸುತ್ತಿದ್ದ ಈ ಅಧರವನ್ನು ತುಂಬಿ ನಿರ್ದಯವಾಗಿ ಚುಚ್ಚುವುದನ್ನು ಕಂಡು ರಾಜನಾದ ದುಷ್ಯಂತನು ಸಿಟ್ಟಾಗಿ ಅಪರಾಧಿಗೆ ತಕ್ಕದಂಡನೆನ್ನೀಯಲೆಂದು ಮುಂದುವರಿಯುತ್ತಾನೆ. ತುಂಬಿಗೆ ಶಿಕ್ಷೆ ಅಥವಾ ಕಾರಾಗೃಹ ವಾಸವೆಂದರೆ ತಾವರೆಯ ಒಳಗೆ ಇರುವಂತೆ ಮಾಡಿಬಿಡುವುದಂತೆ ! ಇಲ್ಲಿ ಪ್ರಕೃತಿಯ ರಮ್ಯ ನಿರೀಕ್ಷೆ, ಮತ್ತು ಭ್ರಮರಲೋಕದ ಸಹಜಚಿತ್ರಣವನ್ನು ಕಾಣಬಹುದು. ವಿರಹಕಾಲದಲ್ಲಿ ಇಂತಹ ಚಿತ್ರಣದಿಂದ ಶೃಂಗಾರದ ಪರಮಾವಧಿ, ಭಾವಾವೇಶಗಳ ರಮ್ಯ ನಿರೂಪಣೆ ಮಾಡಿದುದನ್ನು ಕಾಣಬಹುದು.

ಇನ್ನು ಭ್ರಮರ ದಂಪತಿಗಳ ಚಿತ್ರವೊಂದನ್ನು ನೋಡಿರಿ :

"ಏಷಾ ಕುಸುಮೆ ನಿಷಣ್ಣಾ ತೃಷಿತಾಪಿ ಸತೀ ಭವಂತಮನುರಕ್ತಾ.
ಪ್ರತಿಪಾಲಯತಿ ಮಧುಕರೀ ನ ಖಲು ಮಧು ವಿನಾತ್ಮಯಾ ಪಿಬತಿ "

ಹೆಣ್ಣು ತುಂಬಿಯು ಹೂವಿನಲ್ಲಿ ಕುಳಿತಿದ್ದರೂ, ಬಾಯಾರಿ ಹೋಗಿದ್ದರೂ, ಪ್ರಿಯನು ಬಾರದೆ ಮಧುಪಾನ ಮಾಡುವುದಿಲ್ಲವೆಂದು ಕಾದು ಕುಳಿತಿದೆಯಂತೆ ! ಇಲ್ಲಿ ಶೃಂಗಾರದ ಮಧುಪಾನದ ಚಿತ್ರಣವನ್ನು ಭ್ರಮರದಂಪತಿಗಳಿಗೆ ಹೋಲಿಸಿದ್ದಾನೆ. ವಿರಹಿಗೆ ಈ ದೃಶ್ಯವು ಉತ್ತೇಜಕವಾಗುವಂತೆ ಚಿತ್ರಿಸಲಾಗಿದೆ. ಆದುದರಿಂದ ಪ್ರಕೃತಕ್ಕೆ ಪೋಷಕವಾಗುವಂತೆ ಭ್ರಮರ ದಂಪತಿಗಳ ಮಧುರ ರಸಿಕತೆಯನ್ನು ಕವಿಯು ರಮ್ಯವಾಗಿ ನಿರೂಪಿಸಿದ್ದಾನೆ. ಅಚೇತನವಾದ ಜಗತ್ತಿಗೆ ಸಚೇತನತತ್ವವನ್ನು ಕಲ್ಪಿಸುವ, ಪಾಷಾಣದಿಂದ ಅಮೃತವನ್ನೇ ದ್ರವಿಸುವಂಥ ಕವಿಭಾರತಿ ಲೋಕೋತ್ತರವಾದುದು. ಇದನ್ನು ಭ್ರಮರದ ರಸಿಕತೆಯ ಚಿತ್ರಣದಲ್ಲಿ ಕಾಲಿದಾಸನು ಇನ್ನಷ್ಟು ಸ್ಪಷ್ಟಪಡಿಸಿದ್ದಾನೆ :

ಕುಮಾರಸಂಭವದಲ್ಲೂ ಇದೇ ಬಗೆಯ ವರ್ಣನೆಯಿದೆ :

" ಮಧುದ್ವಿರೇಫಃ ಕುಸುಮೈಕಪಾತ್ರೇ ಪಪೌ ಪ್ರಿಯಾಂ ಸ್ವಾಮನುವರ್ತಮಾನಃ "

ವಸಂತಕಾಲದಲ್ಲಿ ಭ್ರಮರವು ಹೂವಿನ ಪಾತ್ರೆಯಲ್ಲಿ ಪ್ರಿಯೆ ಕುಡಿದುಳಿದ ಮಧುವನ್ನು ಕುಡಿಯಿತಂತೆ ! ಇದೂ ಇನ್ನೊಂದು ರಸಿಕ ಚಿತ್ರಣ !

ಭ್ರಮರಸಂಕ್ತಿಯನ್ನು ಕಾಮದೇವನ ಶಿಂಜಿನಿಯೆಂದು ಕವಿಗಳೆಲ್ಲ ವರ್ಣಿಸಿದ್ದಾರೆ. ಕಾಲಿದಾಸನೂ ಆ ವರ್ಣನೆ ಮಾಡಿದ್ದಾನಾದರೂ, ಅದರಲ್ಲೊಂದು ಸೊಗಸಿದೆ. ಶಿವನು ಮನ್ಮಥನನ್ನು ದಹಿಸಿದಾಗ ರತಿ ವಿಲಪಿಸುತ್ತ ಹೀಗೆ ಹೇಳುತ್ತಾಳೆ :

" ಅಲಿಸಂಕ್ತಿರನೇಕಶಸ್ತ್ವಯಾ ಗುಣಕೃತ್ಯೇ ಧನುಷೋ ನಿಯೋಜಿತಾ |
ವಿರುತೈಃ ಕರುಣಸ್ಯನೈರಿಯಂ ಗುರುಶೋಕಾಮನುರೋದಿತೀವ ಮಾಂ "

ಗುಂಯ್‌ಗುಡುತ್ತಿರುವ ಆ ತುಂಬಿಗಳನ್ನು ನೋಡಿ, ಕಾಮನು ತೀರಿಕೊಂಡಾಗ ಬಿಲ್ಲಿನ ಹಗ್ಗವಾಗಿ ಜೋಡಿಸಿಕೊಳ್ಳತಕ್ಕ ಮಹಾನುಭಾವನಿಲ್ಲದೆ ಕಂಗೆಟ್ಟು ರತಿಯೊಂದಿಗೆ ವೇದನೆಪಡುತ್ತಿರುವಂತಿದೆ ಎಂಬ ವರ್ಣನೆಯೆಷ್ಟು ಮಾರ್ಮಿಕವಾಗಿದೆಯೆಂಬುದನ್ನು ನೋಡಿ ! ಭ್ರಮರಕ್ಕೆ ಕಾಲಿದಾಸನು ಕೇವಲ ಶೃಂಗಾರಪ್ರವೃತ್ತಿಯನ್ನು ಮಾತ್ರ ಕರುಣಿಸಿರುವುದಲ್ಲ ! ಕರುಣಾಪಸರದಲ್ಲಿ ಮಾನವಸಹಜವಾದ ಹೃದಯಾನುಭೂತಿಯನ್ನೂ ಅವನು ಕಲ್ಪಿಸಿರುವುದು ಮನೋಹರವಾಗಿದೆ.

ಶಿವನ ದಿಬ್ಬಣವು ಪರ್ವತರಾಜನಲ್ಲಿಗೆ ಬರುವಾಗ, ಹೆಂಗುಸರು ಸಾಲುಸಾಲಾಗಿ ಕಿಟಕಿಗಳೆಡೆಯಲ್ಲಿ ನಿಂತು ನೋಡುವಲ್ಲಿ, ಕವಿಯ ಚಪುತ್ಕಾರ ಪೂರ್ಣ ವರ್ಣನೆ ಹೀಗಿದೆ:

" ತಾಸಾಂ ಮುಖೈರಾಸವಗಂಧಗರ್ಭೈರ್ವ್ಯಾಪ್ತಾಂತರಾಃ
ಸಾಂದ್ರಕುತೂಹಲಾನಾಂ ।
ವಿಲೋಲನೇತ್ರಭ್ರಮರೈರ್ಗವಾಕ್ಷಾಃ ಸಹಸ್ರಪತ್ರಾಭರಣಾ
ಇವಾಸನ್ "

ಕುತೂಹಲ ಹಾಗೂ ಆಸವದ ಪರಿಮಳದಿಂದ ತುಂಬಿದ ಆ ಸ್ತ್ರೀಯರ ಮುಖಗಳಿಂದ ತುಂಬಿದ ಕಿಟಕಿಗಳಲ್ಲಿ ತಾವರೆಯ ಆಭರಣ ಗಳಿರುವಂತೆ ಕಂಡಿತಂತೆ. ಅವರ ಚಂಚಲ ಕಣ್ಣುಗಳು ಭ್ರಮರಗಳಂತಿ ದ್ದುವಂತೆ ! ಮುಖಗಳು ತಾವರೆಗಳಂತಿದ್ದರೆ ಕಣ್ಣುಗಳನ್ನು ತುಂಬಿ ಗಳಂತೆ ವರ್ಣಿಸುವುದೂ ಸಹಜ. ಆದರೆ ಮುಖವಲ್ಲಿ ಆಸವದ ಗಂಧ ತುಂಬಿರುವ ವರ್ಣನೆ ತುಂಬಿಗಳ ಮಟ್ಟಿಗೆ ಆಕರ್ಷಕವೂ ವಿಶಿಷ್ಟವೂ ಆಗಿದೆಯೆನ್ನಬಹುದು.

ವಿಕ್ರಮೋರ್ವಶೀಯದಲ್ಲಿ ಉರ್ವಶಿಯ ವಿರಹದಿಂದ ಸಂತಪ್ತ ನಾದ ವಿಕ್ರಮನು ಆಕೆಯನ್ನು ಹಡುಕುತ್ತ ಭ್ರಮರದೊಂದಿಗೆ ಆಕೆಯಲ್ಲಿ ಹೋದಳೆಂದು ಪೃಚ್ಛಿಸುತ್ತಾನೆ.

" ಮಧುಕರ ಮದಿರಾಕ್ಷ್ಯಾಃ ಶಂಸ ತಸ್ಯಾಃ ಪ್ರವೃತ್ತಿಂ
ವರತನುರಥವಾಸೌ ಸ್ಪೈವ ದೃಷ್ಟಾ ತ್ವಯಾ ಮೇ ।
ಯದಿ ಸುರಭಿಮುನಾಪ್ಯಸ್ತನ್ಮುಖೋಚ್ಛ್ವಾಸಗಂಧಂ,
ತವ ರತಿ ರಭವಿಷ್ಯತ್ಪುಂಡರೀಕೇ ಕಮಸ್ಮಿನ್ "

" ಎಲೈ ತುಂಬಿಯೆ, ನನ್ನ ಪ್ರಿಯೆಯೆಲ್ಲಾದರೂ ನಿನ್ನ ಕಣ್ಣಿಗೆ ಬಿದ್ದರೆ ನನಗೆ ತಿಳಿಸು. ಬಹುಶಃ ನೀನು ಕಂಡಿರಲಿಕ್ಕಿಲ್ಲ. ಒಂದು ವೇಳೆ ಕಂಡಿದ್ದರೆ ಆಕೆಯ ಮುಖದ ಪರಿಮಳವನ್ನು ಹೊಂದಿ ಅವ ಳೊಂದಿಗೆ ಓಡಿಬಿಡುತ್ತಿದ್ದೆ. ಈ ಕಮಲದಲ್ಲಿ ನಿನಗೆ ಪ್ರೀತಿಯುಳಿ ಯುತ್ತಿರಲಿಲ್ಲ." ಇಲ್ಲಿ ತುಂಬಿಯ ರಸಿಕತೆಯನ್ನು ಪುರೂರವನ ರಸಿ ಕತೆಯೊಂದಿಗೆ ಹೋಲಿಸುವ ಉದಾತ್ತತೆ ರಮ್ಯವಾದುದು !

ರಘುವಂಶದಲ್ಲಿ ಭ್ರಮರವನ್ನು ಕುಚಾಗ್ರಕ್ಕೆ ಹೋಲಿಸಿದ ವರ್ಣನೆ ಯಿದೆ :

" ದಿನೇಷು ಗಚ್ಛತ್ಸು ನಿತಾಂತಪೀವರಂ, ತದೀಯ ಮಾಸೀಲ-
ಮುಖಂ ಸ್ತನದ್ವಯಂ ।
ತಿರಶ್ಚಕಾರ ಭ್ರಮರಾಭಿಲೀನಯೋಃ, ಸುಜಾತಯೋಃ
ಪಂಕಜಕೋಶಯೋಃ ಶ್ರಿಯಂ "

ಸುದಕ್ಷಿಣೆ ಗರ್ಭಿಣಿ. ಆಕೆಯ ಸ್ತನಗಳು ಪೀವರವಾಗಿವೆ. ಆಗ ಅವುಗಳ ತುದಿಯಲ್ಲಿ ಕಪ್ಪುಬಣ್ಣವು ಹೊಳೆಯುತ್ತಿರುತ್ತದೆ. ಇದು ತುಂಬಿಗಳುಳ್ಳ ತಾವರೆಗಳ ಕಾಂತಿಯನ್ನು ಅಪಹರಿಸಿತು ಎನ್ನಲಾಗಿದೆ. ಸ್ತನಾಗ್ರವನ್ನು ಭ್ರಮರಕ್ಕೆ ಹೋಲಿಸುವುದು ಕವಿಸಮಯ ಪ್ರಸಿದ್ಧ ವಾದರೂ, ಕಾಲಿದಾಸನ ಪ್ರಯೋಗದಲ್ಲಿ ವೈಶಿಷ್ಟ್ಯವಿದೆ. ಗರ್ಭಿಣೀ ಸ್ತ್ರೀಯರ ಸ್ತನಗಳ ಕೃಷ್ಣವರ್ಣದ ವರ್ಣನೆಯಲ್ಲಿ ಕಾಮಶಾಸ್ತ್ರಕ್ಕೆ ಹಾಗೂ ಶಾರೀರ ಶಾಸ್ತ್ರಕ್ಕೆ ಸಂಬಂಧಿಸಿದ ಸೂಕ್ಷ್ಮ ಪರಿಜ್ಞಾನವಿದೆ.

ಭ್ರಮರಶೋಭೆಯ ವರ್ಣನೆ ರಘುವಂಶದಲ್ಲಿ ಅನೇಕ ಸಂದರ್ಭ ಗಳಲ್ಲಿ ಬರುತ್ತದೆ. ಹೂದೋಟದಲ್ಲಿ ಹೂಗಳಿಂದ ಮಧುವನ್ನು ಹೀರುವ ಸಲುವಾಗಿ ತುಂಬಿ ಪ್ರತಿಯೊಂದು ಹೂವಿನ ಬಳಿಗೂ ಹೋಗುತ್ತದೆ. ಆದರೆ ಹೂಗಳೆಲ್ಲ ಅರಳಿಲ್ಲ; ಆದುದರಿಂದ ತುಂಬಿಯು ಹೂಗಳನ್ನು ಲೆಕ್ಕ ಮಾಡುತ್ತಿರುವಂತೆ ವರ್ಣಿಸಲಾಗಿದೆ. ಹೀಗೆಯೇ ಎಷ್ಟೋ ವರ್ಣನೆ ಗಳನ್ನು ಆತನ ಕಾವ್ಯಗಳಲ್ಲಿ ಕಾಣಬಹುದು. ಆದರೆ ಮುಖ್ಯ ವಿಚಾರವೆಂದರೆ, ಕಾಲಿದಾಸನು ಪ್ರಕೃತಿ ಶೃಂಗಾರಗಳಿಗೆ ಪರಿಪೋಷಕ ವಾಗಿ, ರಸಿಕತೆ-ಸಹೃದಯತೆಗಳ ಉಚ್ಚಕೋಟಿಯಲ್ಲಿ ಭ್ರಮರ ವರ್ಣನೆ ಮಾಡಿದುದು. ಆದುದರಿಂದಲೇ ಆತನ ಭ್ರಮರವರ್ಣನೆ ಅನನ್ಯವಾಗಿದೆ ಯೆನ್ನಬಹುದು.

(೧೫೬ ನೆಯ ಪುಟದಿಂದ ಬಂದುದು.)

ಆ ನವಯುವತಿಯು ಎದ್ದು ಬಂದು ನೀರಾಗೆ ಹೇಳಿದಳು :

" ಹೋದಾಗಲೆಲ್ಲ ಹೀಗೆ ಏನಾದರೂ ಸೇವಿಸಿಯೇ ಬರುತ್ತಾರೆ. ಆಮೇಲೆ— ನೋಡಿದಿರಲ್ಲಾ ಈ ಆವಸ್ಥೆ.... ದಯವಮಾಡಿ ಆಸನವಲ್ಲಿ ಕುಳಿತುಕೊಳ್ಳಬಾರದೆ ?"

ಎದುರಿಗೆ ಗೋಡೆಯ ಮೇಲೆ ತೂಗುಬಿಟ್ಟ ಒಂದು ದೊಡ್ಡ ಫೋಟೋವ ಕಡೆಗೆ ನೀರಾಳ ದೃಷ್ಟಿ ಹರಿಯಿತು. ಅದೇ ಅರಳಿದ ಹೂಗಳಿಂದ ಅದನ್ನು ಅಲಂಕರಿಸಲಾಗಿತ್ತು.

" ಇವರು ಯಾರು ?" ಎಂದು ನೀರಾ ಕೇಳಿದಳು.

" ಓ, ಅವರೇ ? ನಮ್ಮ ಯಜಮಾನರ ಮೊದಲಿನ ಹೆಂಡತಿ."

" ಅವನಿಗೆ ಇಬ್ಬರು ಮಕ್ಕಳಿದ್ದರಲ್ಲ. ಅವರೀಗ ಎಲ್ಲಿ ?

" ಅವರನ್ನು ಕಾನ್ವೆಂಟ್ ಸ್ಕೂಲಿನಲ್ಲಿ ಇಟ್ಟಿದ್ದಾರೆ."

" ನಾನು ಮತ್ತೊಂದು ದಿನ ಬಂದು ನಿಮ್ಮ ಯಜಮಾನರನ್ನು ಕಾಣುವೆ. ಇದನ್ನು ದಯವಿಮಾಡಿ ಅವರಿಗೆ ಎಚ್ಚರಿಕೆ ಬಂದ ಮೇಲೆ ತಿಳಿಸಿರಿ."

" ಅಲ್ಲ, ಸ್ವಲ್ಪು ತಡೆಯಿರಲ್ಲ. ಹೀಗೇಕೆ ಗಡಿಬಿಡಿ ? ನಿಮ್ಮ ಬಗೆಗೆ ಅವರು ಪದೇ ಪದೇ ಹೇಳುತ್ತಿದ್ದರು. ಹುಡುಗರನ್ನು ಕರೆತರಲೂ ಕಾರು ಹೋಗಿದೆ. ಎಲ್ಲರನ್ನೂ ಕಂಡು ಮಾತನಾಡಿಸಿ ಹೋಗುವಿರಂತೆ."

" ಇಲ್ಲ, ನನಗೆ ಬೇರೆ ಕೆಲಸವಿದೆ. ಮತ್ತೊಂದು ಸಲ ನಿಶ್ಚಿತ ವಾಗಿ ಬರುವೆ ನ್ನನಿಸಿರಿ." ಎಂದು ನೀರಾ ತಟ್ಟನೆ ಎದ್ದು, ಆ ಸ್ಥಳ ದಿಂದ ಕದಲಿ,—ಪತುಃಶಾಲೆ, ಕೋಣೆ, ಪಡಸಾಲೆ, ಮೊದಲಾದುವು ಗಳೊಳಗಿಂದ ಹಾಯ್ದು ಲಗುಬಗೆಯಿಂದ ಸೋಪಾನಗಳನ್ನಿಳಿದಳು.

ಎರಡು ಕಣ್ಣುಗಳು ಬಹು ದೂರ ಅವಳನ್ನು ಹಿಂದಿನಿಂದ ಹಿಂಬಾ-ಲಿಸಿದುವು. ಅವು ಆ ಹೊಸ ಹೆಂಡತಿಯವಾಗಿರಲಿಲ್ಲ. ಗೋಡೆಯ ಮೇಲಿನ ಫೋಟೋದಿಂದ ಕೆಳಗಿಳಿದು, ಅವು ನಿಶ್ಯಬ್ದವಾಗಿ, ನಿಷ್ಪಂದ ವಾಗಿ, ಏನೇನೋ ಹೇಳಬೇಕೆಂದು ತವಕಿಸುತ್ತ, ಆದರೆ ಉಸುರಲು ಸಾಧ್ಯವಾಗದೆ, ಹಟದಿಂದ ಹಿಂಬಾಲಿಸುತ್ತಿದ್ದಂತೆ ಅವಳಿಗೆ ಭಾಸ ವಾಯಿತು. ●

ಸ್ನೇಹಸುರಿಗಿ*

ಡಿ. ಶಂಭರೀನಾಥಾಚಾರ್ಯ ಗಲಗಲಿ, ಧಾರವಾಡ

◆

೧

ಮಳೆಯು ಬಂತು ಇಳೆಯಾಶೆ ತಂತು, ಕಳೆಕಾಂತಿ ನಿಂತು ನೋಡು—
ಸಿಡಿಲು ಬಡಿದು ಮಿಂಚೊಡಲು ಒಡೆದು ಸುರಿಯುವದು ಗಗನಗೂಡು!
ರವಿಯ ಅಗ್ನಿಚುಂಬನಕೆ ಭುವಿಯ ಬಾಯ್ಬಿರಿಯೆ ಮರುಗಿ ಕರಗಿ
ಮುಗಿಲುಮಾತೆ ಧರೆ-ಗಿರಿಯ ಜೊತೆಗೆ ಎರೆಯುವಳು ಸ್ನೇಹಸುರಿಗಿ.

೨

ಬಿಸಿಲ ಬಿರಸುಕುಳ್ಳಿಯದು ಹಾರೆ ತಿರೆಹುಡಿಯು ಕೆಡಿಯನೂದಿ,
ಜಗವ ಪ್ರಾಣಪುಷ್ಕರಣಿ ಒಣಗಿ ನೆಲನಾಲಿಗೊಳಗೆ ಸೇದಿ,
ಗಾಳಿಗೊರಡು ನಭಸಾಣೆಗಲ್ಲಿ ತೊಯ್ದುಗ್ಗಿ ಗಂಧಲೇಪ—
ಗ್ರೀಷ್ಮ ಶಾಪದಗ್ಧೋರ್ವಿಗನ್ಯತನವರವೀವುದಿಂದ್ರಚಾಪ.

೩

ಬಾನಧೇನು ಸೊದೆಗೆಚ್ಚಲಿಂದ ಹಾಲ್‌ಜೇನು ಕರೆಯುತಿಹುದು—
ಗಗನಗಂಗೆ ನೀರೆತ್ತಿ ತಾರೆನೀರೆಯರು ಸುರಿಯುತಿಹರು—
ದಿಕ್ಕಿನಷ್ಟಮಹಿಯರು ಸಪ್ತಸಾಗರದ ನೀರು ತಂದು,
ಜಲದ ಜಾಲಜೀಕುಳಿಯ ತುಂಬಿ ಓಕುಳಿಯನಾಡುತಿಹರು.

೪

ಮುಗಿಲ ಸೋಲುಮಾಳಿಗೆಯು ತಾರೆತೂತೊಡೆದು ಸೋರುತಿಹುದು;
ದಿಕ್ಕಿನಾನೆ ಜಲಸೊಂಡೆಯೆತ್ತಿ ದಿವಿಲಕ್ಷ್ಮಿಗೆರೆಯುತಿಹವು.
ಮೃಡನ ಮುಡಿಯ ಜಡೆಗುಡಿಯನೊಡೆದು ಧೀಂಕಿಡುತಲಿಹಳು ಗಂಗೆ—
ಕಡಲು ಕುಡಿದ ಕೊಡಗುವರಸುಗಳುತಿಹನೆಲ್ಲ ನೀರ ಹಾಂಗೆ!

೫

ಗಗನ ಗಿರಿಯ ದರಿಕೊರೆಗಳಿಂದ ಝರಿ ತೊರೆಗಳಿಳಿಯುತಿಹವು;
ನೆಲದ ಆಶೆ ಗಿಡಗಂಟಿಗಳಲಿ ಕುಡಿಯೊಡೆದು ಬೆಳೆಯುತಿಹುದು.
ಮುಗಿಲು ಮೇಳೆಮುಖ ನೀಡಿ ನಾಡ ಮುದ್ದಿಡಲು ಬಗ್ಗುತಿಹುದು—
ಚಿಕ್ಕೆಕೊಕ್ಕೆ ಜಲಧಾರೆಮಾರ ಭುವಿ ಬಾನ ಜಗ್ಗುತಿಹುದು.

೬

ಮಿಂಚು-ಸೋಳೆ ಮುಟ್ಟಾಟ ಮಿಂಚ ವಂಚಿಸಲು ಮೋಡ ಹೊಂಚಿ
ಮಳೆಯಗುಂಟ ಇಳೆಗಿಳಿಯೆ, ಮಿಂಚು ಮುಗಿಲಂಚಿನ್ಹಿಂಚಿ ಮುಂಚೆ
ದುಡುಕಿ ಮಿಡುಕಿ ಹುಡುಕಾಡಿ ಓಡಿ ಕೆಡಿಕಟಿದು ನೋಡಿ ಕೊನೆಗೆ
ಸಿಟ್ಟಿನಿಂದ ಸಿಡಿಲೇರಿ ಬಂದು ಎರಗಿದಳು ಮಣ್ಣುಮನೆಗೆ.

೭

ತೊರೆಯ ತೆರೆಯ ತಾಳದಲಿ ತೀರ ತಂಬೂರಿ ತಂತಿ ನೀಟಿ
ಮೂಕವಿಪಿನದೆದೆಗುಂಭದಲ್ಲಿ ರಸಕುಂಭ ಮಂತ್ರ ಮಾಟ
ವನದ ಮನದ ಚಿರಮೌನಧ್ಯಾನ ಸುರಗಾನ ತಾನವಾಗಿ
ಹರಿಯುತಿಹುದು ಅಲೆಯಲೆಯ ಮಾಲೆ ಸ್ವರಲಹರಿ ಲೀಲೆಯಾಗಿ.

೮

ತರಣಿಕಿರಣ ಹುರುಪಳಿಸಿ ಹರಣ ಕುದಿಸಿದ್ದು ಬೇಡೆ ಧರಣಿ
ವರುಣ ಕರುಣ ಕಾರಂಜಿಕೋಟೆ ಪುಟಪುಟಿಯೆ, ಅಮೃತಭರಣಿ,
ಬಾಯಿಬಿಚ್ಚಿ ಗಂಧರ್ವರಮಣಿ ಬಗ್ಗಿಸಲು ಸೊದೆಯ ಬುಗ್ಗಿ
ಉಗ್ಗಿ ನುಗ್ಗಿ ತೆರೆಯುರವು ಹಿಗ್ಗಿ ಆನಂದ ಲಹರಿ ಸುಗ್ಗಿ.

೯

ಶ್ಯೋಮ ಭೂಮಿಗಳ ಮುಮತೆ ಮೈತ್ರಿಯೀ ಜಾತ್ರೆ ನೋಡಿ ಹರುಷ
ತುಂಬಿತುಳುಕಿದಾಕಾಶ ರಾಜನಾನಂದಬಾಷ್ಪ ವರುಷ
ಮೋಳೆ ಮಿಂಚಿನಾರತಿಯನೆತ್ತಿ ಶೋಭಾನ ಹಾಡುತಿಹುದು,
ತಾಳಗುಂಟ ಶಿತಿಕಂಠಗರಿಯು ತಾಂಡವವನಾಡುತಿಹುದು.

---

* ಮಂಗಲಕಾರ್ಯಗಳ ಪ್ರಾರಂಭದಲ್ಲಿ ಮಾಡಿಸುವ ಸ್ನೇಹಸ್ನಾನಕ್ಕೆ 'ಸುರಿಗಿ' ಎನ್ನುವರು.

ಡಾಕ್ಟರ್ ಜಾರ್ಜ್ ವಾಸಿಂಗಟನ್ ಕಾರ್ವರ್

(ವಿಜ್ಞಾನಿಯೊಬ್ಬನ ಜೀವನಸ್ಮೃತ್ತ)

ಶ್ರೀ. ಟಿ. ಆರ್ ನಾಡಗೀರ ಬಿ. ಎಸ್ಸಿ. (ಟೆಕ್) ಮುಂಬಯಿ

ತಾಯಿ-ತಂದೆಗಳಿಲ್ಲದ ತಬ್ಬಲಿ ಮಗು. ಕರಿಯ ಬಣ್ಣದ ಗುಲಾಮರ ಕೂಸು. ಸರಿಯಾಗಿ ಮಾತನಾಡಲು ಕೂಡ ಬಾರದ ಅರೆಮೂಕ. ಇಂತಹ ವಿಚಿತ್ರ ಪರಿಸ್ಥಿತಿಯಲ್ಲಿ ಹುಟ್ಟಿ ಬೆಳೆದ ಹುಡುಗನೊಬ್ಬ ಲೋಕವಿಖ್ಯಾತ ವಿಜ್ಞಾನಿಯಾಗಿ ನಿಂತುದದು ದೈವದ ಒಂದು ಪವಾಡವೇ ಸರಿ !

ಬೆಳ್ಳಿ ತಾನೇ ಮೂಡಿತ್ತಾಗ. ಜರ್ಮನ್ ಒಕ್ಕಲಿಗನೊಬ್ಬನು ಕೋಲಿನಿಂದ ಬಾಲಕನೊಬ್ಬನನ್ನು ತಿನಿಯುತ್ತಿದ್ದನು. ' ಏಯ್, ಳುತ್ತೀಯೋ ಅಥವಾ ನಾನೇ ಮೇಲೆ ಬರಲೋ?' ಭೀತಿಯನ್ನುಂಟು ನೂಡುವ ಸ್ವರದಲ್ಲಿ ಗುಡುಗಿದನು. ಅನಿವಾರ್ಯವಾಗಿ ಹೊದಿಕೆಯ ನ್ನಿಸೆಯಬೇಕಾಯಿತು ಆ ಬಾಲಕನಿಗೆ. ಆತನಿಗೆ ಆಗ ೬-೭ ವರುಷ ನೀರಬಹುದಷ್ಟೆ. ' ಹಸು ಕರೆಯಲು, ದನಕಾಯಲು, ತೋಟದಲ್ಲಿ ನುಡಿಗಳನ್ನು ಸರಿಮಾಡಲು ಸಾಕಷ್ಟು ವಯಸ್ಸು ' ಎಂದು ಭಾವಿಸಿದ್ದ ೨ ರೈತ. ಬಾಲಕನಿದ್ದುದೋ ಒಂದು ವಿಧ. ಪುಟ್ಟ ಕಾಲುಗಳು ಶಕ್ತಿ ಯುತವಾಗಿದ್ದವು. ಎಲುಬಿನ ಕೈಗೆ ಉದ್ದವಾದ ಬೆರಳುಗಳು. ಆ ಅಸ್ಪಷ್ಟ ಬೆಳಕಿನಲ್ಲಿ, ಆ ಪುಟ್ಟ ಕಣ್ಣುಗಳಲ್ಲಿ ಜ್ವಾಲಾಮುಖಿಯಿದ್ದು ನನ್ನು ಆ ರೈತ ಗಮನಿಸಲಿಲ್ಲ. ನಿನ್ನೆಯೇ ಆ ಬಾಲಕ ತೋಟದಲ್ಲಿಯ ಕಳೆಗಳನ್ನು ಹೊಡೆದೋಡಿಸಲೆಂದು ಕೂಗಿ ಕೂಗಿ ಗಂಟಲು ಕಳೆದು ಕೊಂಡಿದ್ದ. ದಣಿವಿನಿಂದಾಗಿ ಬೆನ್ನು ಬಾಗಿತ್ತು. ಆತನ ನಡಿಗೆಯಿಂದಲೇ ಅವನಿಗೆ ಅಪೂರ್ಣನಿದ್ರೆಯಾಗಿದೆಯೆಂದು ತಿಳಿದು ಬರುವಂತಿತ್ತು. ಆದರೂ ಅಟ್ಟದಿಂದ ಕೆಳಗಿಳಿದು ಬಂದ. ಕೆಳಗೆ ಶ್ರೀಮತಿ ಕಾರ್ವರ್ ಇನ್ನೂ ಹಾಸಿಗೆಯಲ್ಲಿದ್ದಳು. ' ಆತನನ್ನು ಈಗಲೇ ಹೊರಗೆ ಕಳಿಸ ಬೇಡಿರಿ. ನಿನ್ನೆ ಸಾಕಷ್ಟು ದಣಿದಿದ್ದಾನೆ. ಇನ್ನೂ ಚಿಕ್ಕವನು. ಬೇಕಾದರೆ ಮನೆಯಲ್ಲಿಯ ಕೆಲಸಮಾಡಲಿ' ಅಲ್ಲರಿದಳಾಕೆ. ಅಂತಹ ಅಂತಃಕರಣ ಳಿಕೆಗೆ ಆ ಬಾಲಕನ ಮೇಲೆ....ಆದರೆ ಆ ಒಕ್ಕಲಿಗ ವ್ಯಾವಹಾರಿಕ ಮನುಷ್ಯ, ' ನನಗೆ ಹೊಲದಲ್ಲಿ ಸಹಾಯ ಮಾಡುವವರಾರು ? ಎಂದು ಸಿಟ್ಟಿನಿಂದ ಕೂಗಿದ. 'ನಮ್ಮಲ್ಲಿ ಹಣವಿದೆಯೆ ? ಬೆಳೆ ಬೇರೆ ಹಾಳಾ ಗುತ್ತಲಿವೆ. ಹೀಗಾಗಿ ನಾವೂ ಸತ್ತು ಹೋಗುತ್ತೇವೆ; ಅವನೂ ಸತ್ತು ಹೋಗುತ್ತಾನೆ. '

' ಒಳಿತೆನ್ನಿರಿ ಮಹಾರಾಯರೆ! ದೇವರು ದೊಡ್ಡವನು, ಇನ್ನಷ್ಟು ದೊಡ್ಡವನಾಗಲಿ ಈತ. ಆ ಮೇಲೆ ನಿಮ್ಮ ತೋಟಕ್ಕೆ ಒಂದು ಹಕ್ಕಿಯೂ ಬಂದರೆ ನನ್ನಾಣೆ. ' ಆಕೆಯ ಅಭಿಮಾನಕ್ಕೆ ಬಾಲಕ ಏನು ತಾನೆ ಕೊಡಬಲ್ಲ ? 'ಹೂಂ ! ಇದೊಂದು ನಮ್ಮ ಪಾಲಿನ ಶನಿ. ಇಷ್ಟು ದಿನ ಒಂದು ಒಳ್ಳೆಯ ಕುದುರೆಯಾದರೂ ಇತ್ತು. ಈಗ.... ' ಬಾಲಕನನ್ನು ನುಂಗುವಂತೆ ನೋಡಿದನಾತ ' ಆ ಕುದುರೆಗೆ ಬದಲಾಗಿ ಈ ಕಪ್ಪು ಎಲುಬಿನ ಹಂದರ !' ತಾತ್ಸಾರ ತುಂಬಿತ್ತು ಆತನ ವದನಿಯಲ್ಲಿ. ಅಯ್ಯೋ ಯಾವುದನ್ನು ಯಾವುದಕ್ಕೆ ಹೋಲಿಸುತ್ತೀರಿ ?'

' ಸಾಕು ಮಾಡು ನಿನ್ನ ಪ್ರವಚನ ' ಎಂದನನೇ ಬಾಗಿಲನ್ನು ರಪ್ಪನೆ ಹಾಕಿಕೊಂಡು ಆತ ಹೊರಟನು. ಬಾಲಕ ಕಣ್ಣಿರು ಕರೆಯುತ್ತ ನಿಂತನು. ಮಾತುಬಾರದ ಆತನಿಗೆ ಎಾತ್ಸಲ್ಯದ ಹನಿಯಾದಳಾಕೆ. ' ಹೋಗಲಿ ಬಿಡು ಪುರಿ. ಏನೋ ಸಿಟ್ಟಿನಲ್ಲಿ ಒದರಾಡುತ್ತಾರೆ. ಅವರ ಸ್ವಭಾವವೇ ಹಾಗೆ. ಹೋಗು ಬೇಗ, ಒಲೆಯನ್ನು ಹೊತ್ತಿಸು. ಹೊಟ್ಟೆ ಗಿಷ್ಟು ಹಿಟ್ಟು ಬಿತ್ತೆಂದರೆ ಶಾಂತರಾಗುತ್ತಾರೆ. ' ಬಾಲಕ ತನ್ನ ಕೆಲಸಕ್ಕೆ ತೊಡಗಿದ.

ಈ ಹೊದಲು ಕಾರ್ವರನ ಮನೆಯಲ್ಲಿ ಮೇರಿ ಎಂಬ ಕೆಲಸದವ ಳಿದ್ದಳು. ಆಕೆಯ ಗಂಡ ಬಳಿಯ ತೋಟವೊಂದರಲ್ಲಿ ಗುಲಾಮನಾಗಿ ಸೇರಿಕೊಂಡಿದ್ದ. ಆಗ ದನಕ್ಕಿಂತ ಹೆಚ್ಚಿನ ಬೆಲೆ ಗುಲಾಮರಿಗಿತ್ತು. ಏಕೆಂದರೆ, ಗುಲಾಮರು ವ್ಯಕ್ತಿತ್ವವಿಲ್ಲದೇ ಜೀವನವಿಡಿ ದೇಹವನ್ನು ಕೊಂಡ ಧನಿಯ ಸೇವೆಯಲ್ಲಿ ಸವಿಸಬೇಕಾಗುತ್ತಿತ್ತು. ಅದೊಂದು ದಿನ ಮೇರಿಯ ಗಂಡ ಮಡಿದ ವಾರ್ತೆ ತಿಳಿದುಬಂದಿತು. ಕಾರ್ವರನ ಮನೆಗೆ ಅನತಿ ದೂರದಲ್ಲಿಯೇ ಮೇರಿ ಮಕ್ಕಳೊಂದಿಗೆ ಗುಡಿಸಲೊಂದ ರಲ್ಲಿ ವಾಸಿಸುತ್ತಿದ್ದಳು. ಓಝಾರಕದ ಅಕ್ಕ ಪಕ್ಕದಲ್ಲಿ ಗುಲಾಮ ರನ್ನು ಅಪಹರಿಸುತ್ತಿರುವುದಾಗಿ ದಟ್ಟ ವಾರ್ತೆ ಹಬ್ಬಿತು. ಅದೊಂದು ದಿನ ಮೇರಿಯ ಗುಡಿಸಲಿನಿಂದ ಕರ್ಕಶ ಕ್ರಂದನ ಕೇಳಬಂದಿತು. ಕಾರ್ವರ್ ಹೆಗಲಿಗೆ ಬಂದೂಕೇರಿಸಿ ಹೊರಬೀಳುವಾಗ, ವಾಸಗಳ್ಳರು ದಾಸರೊಂದಿಗೆ ಪಲಾಯನ ಬೆಳಿಸಿದ್ದರು. ಆ ಕಳ್ಳರನ್ನು ಹುಡುಕಲೆಂದು ಕಾರ್ವರ್ ಸಂಗಡಿಗರೊಂದಿಗೆ ಹೊರಟ. ಕೊನೆಗೂ ಮೇರಿವಕ್ಕಿಲಿಲ್ಲ ಇವರಿಗೆ. ಆ ಮಗುವಿಗೆ ಬದಲಾಗಿ ಕಾರ್ವರನ ಕುಮರೆ ಕಳ್ಳರ ಕೈಸೇ ರಿತು. ಜೀವನ್ಮರಣಾವಸ್ಥೆಯಲ್ಲಿರುವ ಮಗುವನ್ನು ಎದೆಗಪ್ಪಿಕೊಂಡಳು ಫ್ರಾವ್. ಬೆಚ್ಚನೆಯ ಅಪ್ಪುಗೆಯಿಂದ ಮಗುವು ಚೇತರಿಸಿಕೊಂಡಿತು. ಮೇರಿಯ ಈ ಮಗು ಬದುಕಬೇಕೆಂಬುದೇ ಆಕೆಯ ಮನೀಷೆ ಮತ್ತು ಬದುಕುವುದೆಂದೇ ದೃಢ ವಿಶ್ವಾಸ. ಕೆಲ ದಿನಗಳಲ್ಲಿ ಮಗು ಚೇತರಿಸಿ ಕೊಂಡಿತು, ನಡೆಯಲಾರಂಭಿಸಿತು. ಆದರೆ ಮಾತು ಮಾತ್ರ ಸರಿಯಾಗಿ ಬರಲಿಲ್ಲ. ಮಾತಿನ ಬದಲು ಕರ್ಕಶ ಧ್ವನಿ ಅಂಗಳದಲ್ಲಿ ಕುಣಿಯು ತ್ತಿತ್ತು. ದುರ್ದೈವದ ತೆಕ್ಕೆಯಲ್ಲಿ ಜನಿಸಿ ಇನ್ನೊಬ್ಬರ ಆಸರದಲ್ಲಿ ಬೆಳೆದ ಬಾಲಕನೇ ಜಾರ್ಜ್ ವಾಷಿಂಗಟನ್ ಕಾರ್ವರ್.

ಜಾರ್ಜನಿಗೆ ಚಿಕ್ಕಮಕ್ಕಳಿಗೆ ಸಲ್ಲದ ಆಸಕ್ತಿ ಇತ್ತು. ವನಮಧ್ಯದಲ್ಲಿ ಬೆಳೆಯುವ ವಿವಿಧ ಸಸಿಗಳನ್ನು ಹುಡುಕಿತಂದು ಕಾರ್ವರನ ತೋಟದಲ್ಲಿ ನೆಡುತ್ತಿದ್ದ, ಅಡವಿಯಲ್ಲಿ ಅಲೆದು ಕಣ್ಣಿಗೆ ಸುಂದರವಾಗಿ ಕಂಡ ವಿವಿಧ ಹೂಗಿಡಗಳನ್ನು ಎತ್ತಿ ಕಾರ್ವರನ ಮನೆಯಂಗಳದಲ್ಲಿ ನೆಡುವುದರಲ್ಲಿ ಆತನಿಗೆ ತೃಪ್ತಿ. ಮಾತುಬಾರದ ಆ ಬಾಲಕ ಪಕ್ಷಿಸಂಕುಲಗಳೊಂದಿಗೆ, ವನರಾಜಿಯೊಂದಿಗೆ ತನ್ನದೇ ಆದ ಭಾಷೆಯಲ್ಲಿ ಸಂಪರ್ಕ ಬೆಳೆಸಿದ್ದ ಆತನ ವಯಸ್ಸಿಗೆ ಮೀರಿದ ಜ್ಞಾನವಿತ್ತು. ಈತ ನೆಟ್ಟ ಸಸಿಗಳನ್ನು ಈತ ಮಮತೆಯಿಂದ ರಕ್ಷಿಸುತ್ತಿದ್ದ. ಅವುಗಳಿಗೆ ರೋಗ ಬಾಧೆಯಾಗದಂತೆ ನಕ್ಷತೆ ವಹಿಸುತ್ತಿದ್ದನಲ್ಲದೆ, ರೋಗನಿವಾರಣೋಪಾಯಗಳನ್ನು ನಿಯೋಜಿಸುತ್ತಿದ್ದ. ನೊಪಲಲ್ಲಿ ಕಾರ್ವರ್ ದಂಪತಿಗಳಿಗೇನೇ ಇವನ ಪ್ರತಿಭಾಶಕ್ತಿ ಗೊತ್ತಾಗಲಿಲ್ಲ. ಎಷ್ಟೋ ಬಾರಿ ಹುಚ್ಚು ಹವ್ಯಾಸನೆಂದು, ಅವಕ್ಕಾಗಿ ಅವೆಷ್ಟೋ ಬಾರಿ ಹೊಡೆತ ತಿಂದುಮುಂಟು. ಹಕ್ಕಿಗೆ ಗೂಡುಕಟ್ಟುವುದನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅಂತಹ ಗೂಡೊಂದನ್ನು ನಿರ್ಮಿಸಿದ್ದೆ ಕಾರ್ವರನ ತೋಟದಲ್ಲಿ . ಆ ಕೃತ್ರಿಮ ಗೂಡು ಹಕ್ಕಿಯದಲ್ಲವೆಂದು ಹೇಳಲು ಎಂಟೆದೆ ಬೇಕು. ಅಂತಹ ಸಾಮರಸ್ಯವಿತ್ತು ಆ ಗೂಡಿನ ನಿರ್ಮಾಣದಲ್ಲಿ. ತಂದೆಯೆಂಬ ವ್ಯಕ್ತಿಯನ್ನೇ ಕಾಣದ, ತಾಯಿಯ ಸ್ಮೃತಿ ಮಾತ್ರವುಳಿದ ಈ ಬಾಲಕ, ಫ್ರಾನಳ ಕೈಪಿಡಿಯಿಂದ ಮನುಷ್ಯನಾದ; ಈ ಪುಣ್ಯಪುರುಷನ ರಕ್ಷಣೆಯ ಹೊಣೆ ಆ ಮಹಾತಾಯಿ ಹೊತ್ತುಕೊಂಡಿದ್ದಳು. ಅವಳೇ ವಾತ್ಸಲ್ಯಕ್ಕೆ ಯಾವುದು ಸಾಟಿ ?

ಗುಲಾಮರಿಗೆಲ್ಲಿಯ ಪೂರ್ಣ ಹೆಸರು ? ಈ ಹುಡುಗನ ಸತ್ಯಸಂಧತೆ, ಪ್ರಾಮಾಣಿಕತೆಗಳನ್ನು ಗಮನಿಸಿದ ಫ್ರಾನ್. ಈತನಿಗೆ ಜಾರ್ಜ್ ವಾಶಿಂಗಟನ್‌ನೆಂದು ನಾಮಕರಣ ಮಾಡಿದಳು. ಕಾರ್ವರ್ ದಂಪತಿಗಳಿಂದ ಪಾಲಿತನಾಗಿದ್ದರಿಂದ ಜಾರ್ಜ್ ವಾಶಿಂಗಟನ್ ಕಾರ್ವರ್ ಎಂಬುದೇ ಈತನ ಪೂರ್ಣ ಹೆಸರಾಯಿತು. ಈ ನಾಮ ಕಾರಣಕ್ಕೂ ಅವೆಷ್ಟೋ ಜನ ಅಪಹ್ಹೆ ವ್ಯಕ್ತಪಡಿಸಿದರು. 'ಕರಿಯನಿಗೆ ಕೆಂಪಂಗಿ' ಎಂದು ಮೂಗುಬಿಳಿಸಿದವರು ಹಲವರು. ಯಾವುದೂ ಕಾಲಾಧೀನವಲ್ಲವೆ ? ೧೮೬೪ ರಲ್ಲಿ ಈತ ಜನಿಸಿದನೆಂದಿಟ್ಟುಕೊಳ್ಳಬಹುದು.

ಜಾರ್ಜನಿಗೆ ಸುಮಾರು ೧೦ ವರುಷಗಳಾಗಿರಬಹುದು. ಅದೊಂದು ದಿನ ಕೋಳಿ ಕೂಗುವ ಮುನ್ನ ಎದ್ದು, ತನ್ನ ಪ್ರೀತಿಯ ವನಿಕರುಗಳ ಸೇವೆಯನ್ನು ಮನಸಾರೆ ಮಾಡಿದ. ಅಂದು ನಿಯೋಷೋಕ್ಕೆ ಹೋಗುವುದಿದ್ದುದರಿಂದ ಕುದುರೆಯ ತಡಿಯನ್ನು ಜೆನ್ನಾಗಿ ಉಜ್ಜಿದ. ಹಾಗೆಯೇ ಕುದುರೆಗೆ ಕಡಲೆ ಇಟ್ಟು, ಬೆನ್ನು ಚಪ್ಪರಿಸಿದ. 'ಮಗು ಜೆನ್ನಾಗಿ ಈಗಲೇ ತಿನ್ನು, ಎಂದರೆ ಬೇಗನೆ 'ನಿಯೋಷೋ' ಸೇರುವೆವು' ಎಂದು ಕುದುರೆಗೆ ಹೇಳಿದ. ಹಾಗೆಯೇ ದ್ರಾಕ್ಷೆಯ ಹೆಬ್ಬಿದ ಬಳ್ಳಿಯಿಂದ ದ್ರಾಕ್ಷೆಯೊಂದನ್ನು ಬಾಯಿಗೆ ತೂರಿ 'ಪರವಾಗಿಲ್ಲ' ಎಂದು ಬಾಯಿ ಚಪ್ಪರಿಸಿದ. ಅಂದಿನ ಪ್ರಾತಃಕಾಲದ ವಾತಾವರಣ ಅವನಿಗೆ ನವಚೇತನವನ್ನಿತ್ತಂತಿತ್ತು. ಸಮೃದ್ಧಿಯಿಂದ ಶೋಭಿಸುವ ದ್ರಾಕ್ಷೆಯ ತೋಟ ಬಾಲಕ ಜಾರ್ಜನ ಪರಿಶ್ರಮದ ಫಲ. ಸ್ಕಾಟಿನ ಒಕ್ಕಲಿಗ ಹೆನ್ರಿಎಸ್ ಜೀಗರ್, ಬಹುಪ್ರಯಾಸದಿಂದ ದ್ರಾಕ್ಷೆ ಬೆಳೆಯಲು ಕಾರ್ವರನನ್ನು ಒಪ್ಪಿಸಿದ. ಇಲ್ಲಿಯ ನೆಲ, ಜಲ, ವಾಯು ಈ ಬೆಳೆಗೆ ಪೋಷಕವೆಂದು ಬಿಂಬಿಸಿದ. ಕೊನೆಗೆ ಜೀಗರನ ಬಲವಂತಕ್ಕೆ ಕಾರ್ವರ್ ದ್ರಾಕ್ಷೆ ಬೆಳೆಯಲು ಬಯಸಿದ. ಆದರೆ ಜೀಗರನ ಸಲಹೆಯಂತೆ ವರ್ತಿಸಿದವನು ಜಾರ್ಜನೆ. ಆತನ ಕೈಗುಣವೆಂಬಂತೆ ಅದೇ ಬಾರಿ ದ್ರಾಕ್ಷೆಯ ತೋಟ ಹಣ್ಣಿನಿಂದ ಬೀಗಿತು. ದ್ರಾಕ್ಷೆಯ ಗೊನೆಗಳಿಂದ ಶೋಭಿಸುವ ತೋಟವನ್ನು ನೋಡಿ ಕಾರ್ವರ್ ಹೆಮ್ಮೆಯಿಂದ ಬೀಗಿದ. ಹಾಗೆಯೇ ಕಾರುಣ್ಯದಿಂದ ಕರಿಯನನ್ನು ಅವಲೋಕಿಸಿದ. ದುರ್ದೈವವೆಂಬಂತೆ ಅದೇ ವರುಷ ಫ್ರಾನ್ಸ್‌ನದ ದ್ರಾಕ್ಷೆಗೆ ಹುಳು ಬೀಳಬೇಕೆ ? ಅಲ್ಲಿಯ ಮದ್ಯಾರ್ಕದ ಉದ್ದಿಮೆ ಕುಪ್ಪಳಿಸತೊಡಗಿತು. ಒಳ್ಳೂರಕದ ದ್ರಾಕ್ಷೆಯನ್ನು ಫ್ರಾನ್ಸಿನಲ್ಲಿ ನೆಟ್ಟರೆ. ಉತ್ತಮ ಫಲ ಬೊರೆಯುವುದಾಗಿ ಜೀಗರ್ ಸಂಚಿಸಿದ. ಈತನ ಸಲಹೆ ತ್ವರಿತವಾಗಿ ಸ್ವೀಕೃತವಾಯಿತು. ಕಾಡಿನ ದ್ರಾಕ್ಷೆ ನಾಡಿನಲ್ಲಿ ಬೆಳೆಯತೊಡಗಿತು. ಮೇಲಾಗಿ ರುಚಿಯೂ ಹೆಚ್ಚಿತು. ಇಂದು ಕಾರ್ವರ್ ಮತ್ತು ಜಾರ್ಜ್ ಹೊರಟಿದ್ದುದು ಆ ಜೀಗರ್ ಮಹಾಶಯನನ್ನು ಕಾಣಲೆಂದು.

ಜಾರ್ಜ್ ಸೂಕ್ಷ್ಮಮತಿ. 'ಎಳೆಸಿಕ್ಕಿದರೆ ಹೆಚ್ಚಡ ನುಂಗುವ ಜಾತಿ' ಎಂದು ಕಾರ್ವರ್ ತಿಳಿದುಕೊಂಡಿದ್ದ. ಆದರೆ ನಾಲಗೆ ಮಾತ್ರ ಸರಿಯಾಗಿ ಹೊರಳುತ್ತಿಲ್ಲವೆಂಬುದೇ ಆ ದಂಪತಿಗಳಿಗಿದ್ದ ಕೊರಗು. ಜಾರ್ಜ ಒಂದು ರೀತಿಯಲ್ಲಿ ಅಧಿಕಪ್ರಸಂಗಿ. ಹೆಲ್ಲು ಹಸಿರಿರುವುದೇಕೆ? ಚಿಟ್ಟೆ ಏಕೆ ಹಾರುವುದು ? ಕೆಲ ಹೂಗಳು ಬೆಳಗಿನಲ್ಲರಳಿ ಮಧ್ಯಾಹ್ನದಲ್ಲಿ ಬಾಡುವುದೇಕೆ ? ಮಳೆ ಬಿಲ್ಲು ರಚಿತವಾಗುವುದೆಂತು ? ಇಂಥವೇ ಈ ವಯಸ್ಸಿಗೆ ಶೋಭಿಸದ ಅತಿ ಜಾಣತನದ ಪ್ರಶ್ನೆಗಳು ಜಾರ್ಜನಿಗೆ. ಇವುಗಳಿಗೆ ಬಡ ಕಾರ್ವರ್ ಉತ್ತರ ಕೊಡುವುದೆಂತು ? ಜಾರ್ಜನ ಕುತೂಹಲ ನಿವಾರಣೆಯಾಗಲು ಫ್ರಾನಳು ತಾಸೆರೆತು ತಾಸು ಕಳೆಯಬೇಕಾಗುತ್ತಿತ್ತು. 'ಬೆಳೆವಣಿಗೆ ಮಾತ್ರ ಕುಂಠಿತವಾಗಿದೆ. ಬುದ್ಧಿ ಮಾತ್ರ ಚುರುಕು. ಅಂದ ಹಾಗೆ ಜಾರ್ಜನಿಗೆ ೯-೧೦ ವರುಷಗಳಾಗಿರಬೇಕಲ್ಲ ? ಆತನನ್ನು ಶಾಲೆಗೆ ಕಳಿಸಬೇಕಲ್ಲವೆ ? ನವಿರಾಗಿ ಒಂದು ದಿನ ಗಂಡನನ್ನು ಕೇಳಿದ್ದಳು. ಫ್ರಾನ್. 'ಹೊಂ ! ಕಪ್ಪು ಜನಕ್ಕೆ ಎಲ್ಲಿಯ ಶಾಲೆ ? ಮೇಲಾಗಿ ಪುಸ್ತಕದ ಓದಿನಿಂದ ನನಗೆ ಏನಾಗಬೇಕಾಗಿದೆ ?' ಕಾರ್ವರನ ಮರುಪ್ರಶ್ನೆ. 'ಹಾಗಲ್ಲ ಓದುಬರೆಯುವಷ್ಟಾದರೂ ಕಲಿಯಬೇಕಲ್ಲ ! ಕೊನೆಯಪಕ್ಷ ಬಾಯಬಲ್ ಓದುವಷ್ಟಾದರೂ ಕಲಿಯಬಾರದೆ ?' ಫ್ರಾನ್ ಸಲಹೆ ಇತ್ತಳು. 'ಸರಿ ಅಷ್ಟಾದರೆ ಸಾಕು' ಎಂದು ಕಾರ್ವರ್ ಹೆಂಡತಿಯ ಸಲಹೆ ತನಗೆ ಮಾನ್ಯ ಎಂಬಂತೆ ಹೇಳಿದನು. ಅಲ್ಲಿಗೆ ಅಂದಿನ ಸಂಭಾಷಣೆ ಮುಗಿದಿತ್ತು.

ಜೀಗರನ ಪ್ರಯೋಗಶಾಲೆಯನ್ನು ಜಾರ್ಜ್ ಮೈಯ್ಯೆಲ್ಲಾ ಕಣ್ಣಾಗಿಸಿ ನೋಡಿದ. ಆತನ ಕುತೂಹಲ ಜೀಗರನನ್ನು ಕೆರಳಿಸಿತು.

'ಮಗು, ನಿನಗೆ ಗಿಡಬಳ್ಳಿಗಳ ಬಗ್ಗೆ ಮಮತೆಯೇ ?'

ಹೌದೆಂದು ತನ್ನದೇ ಭಾಷೆಯಲ್ಲಿ ಹೇಳಿದ ಜಾರ್ಜ್. ಅಸ್ಪಷ್ಟವಾಗಿ ಅರ್ಥವಾಯಿತು ಜೀಗರನಿಗೆ.

'ಕಾರ್ವರ್, ನನಗೆ ಇಂದು ಅತ್ಯಾನಂದವಾಗಿದೆ. ಮಗು, ಬಾ ಇಲ್ಲಿ, ಎಲ್ಲಿ ನಿನ್ನ ಕೈಯನ್ನು ತಾ ಇತ್ತ, ಹೆಸ್ತನಾಮುದ್ರಿಕನಂತೆ ಆತನ

ಪ್ರಯನ್ನು ಅವಲೋಕಿಸಿದ. "ಓಹ್ ! ಮಗು ನಿನ್ನದು ತೋಟಗಸ ಕೈ. ನ್ನ ಕೈಯಲ್ಲಿ ಜೀವದಾನದ ರೇಖೆ ಇದೆ!" ಸಾಕಲ್ಲನೇ ಈ ಹೊಗಳಿಕೆ ಾರ್ವರನನ್ನು ಪ್ರಚೋದಿಸಲು ?

'ಹೌದು ಸಾರ್, ನನ್ನ ತೋಟದ ಬೆಳೆ ಈತನಿಗೆ ಸೇರಿದ್ದು' ಂದು ಹೇಳಿ ಜಾರ್ಜನ ಕರುಣ ಕಥೆಯನ್ನು ವಿವರಿಸಿದ. ಜೀಗರ್ ನ್ನ ಪ್ರಯೋಗ ಶಾಲೆಯಲ್ಲಿಯ ವಿವಿಧ ವನಸ್ಪತಿಗಳ ಬಗೆಗೆ ವಿವರವಾಗಿ ರಿಚಯ ಮಾಡಿಕೊಟ್ಟ ಜೀಗರನಲ್ಲಿ ಂದು ದೇವರನ್ನು ಕಂಡುಕೊಂಡ ಾರ್ಜ್. ಊರಿಗೆ ಮರಳುವ ಮುನ್ನ ಜೀಗರ್ ಜಾರ್ಜನಿಗೆ ಅದ್ಭುತ ಾಣಿಕೆಯನ್ನಿತ್ತ; ಸಜಲನಯನಗಳಿಂದ ಜಾರ್ಜ ಸ್ವೀಕರಿಸಿದ. ಜಾರ್ಜ, ಉಳಿದೆಲ್ಲರಿಗಿಂತ ನಿನಗೆ ಸಸ್ಯಶಾಸ್ತ್ರ ಹೆಚ್ಚು ಗೊತ್ತಿದೆ. ಂದು ದಿನ ನನ್ನೀ ಪುಸ್ತಕವನ್ನು ಓದುವ, ಅರ್ಥಮಾಡಿಕೊಳ್ಳುವ ದಿನ ರಬಹುದು. ಎಲ್ಲ ಪುಸ್ತಕಗಳನ್ನು ಮುನಃಪೂರ್ವಕ ನೀನು ಓದು ಂತಾಗು—ಎಂದರೆ ಆ 'ತಂದೆ' ದಾರಿ ತೋರುವನು.' ಹಾಗೆಯೇ ಾರ್ವರನನ್ನು ಜಾರ್ಜನನ್ನು ಶಾಲೆಗೆ ಸೇರಿಸುವಂತೆ ಮನವೊಲಿಸಿದ. ಂದು ಸಂಜೆ ಮನೆಗೆ ಮರಳಿದಾಗ ಕಾರ್ವರ್ ತಂದೆತಿಗೆ ಹೇಳಿದ: ಯೋಷೋದಲ್ಲಿ ನಿಗ್ರೋಗಳಿಗಾಗಿ ಶಾಲೆ ಇರುವುದಾಗಿ ಜೀಗರ್ ಹೇಳಿ ್ದಾನೆ. ಅಲ್ಲಿ ಹೋಗಲು ನನ್ನ ಆಭ್ಯಂತರವಿಲ್ಲ. ಫ್ರಾವಳಿಗೆ ಸಂತೋ ನವಾಯಿತು. ರೋಗಿ ಬಯಸಿದ್ದು ಹಾಲು-ಅನ್ನ, ವೈದ್ಯ ಹೇಳಿದ್ದು ನೇ !

ಜೀಗರನನ್ನು ಕಂಡ ವಾರವೊಂದರಲ್ಲಿ ಜಾರ್ಜ ಕಾಲ್ನಾಡಿಯ ಮೇಲೆ ನಿಯೋಷೋಕ್ಕೆ ಪ್ರಯಾಣ ಬೆಳೆಸಿದ. ಶಾಲೆಗೆ ಹೋಗಲೆಂದು ತ್ಯೇಕ ವೋಷಾಕು ಆವನಿಗಿದ್ದಿರಲಿಲ್ಲ. ಬಡವರ ಮಕ್ಕಳಿಗೆಲ್ಲಿ ಜರಿಯ ಟೊಪ್ಪಿಗೆ? ಮೇಲಾಗಿ ನಿಗ್ರೋ ಬಾಲಕ. ಫ್ರಾವ್ ಮತ್ತು ನರೆಯಾಕೆ ುಲ್ಲರ್ ತಕ್ಕಮಟ್ಟಿಗೆ ವಸ್ತ್ರವ್ಯವಸ್ಥೆ ಮಾಡಿದ್ದರು. ಹೊಚ್ಚ ಹೊಸ ಂದರೆ ಪಾದರಕ್ಷೆ ಮಾತ್ರ. ಎಂತಲೇ ಜಾರ್ಜ ಅದನ್ನು ಕಾಲಲ್ಲಿ ಟ್ಟುಕೊಳ್ಳದೆ ಹೆಗಲಿಗೇರಿಸಿದ್ದ. ಚಿಕ್ಕದಾದ ಗಂಟಿನಲ್ಲಿ ತ ಉಪ-ಯೋಗಿಸುತ್ತಿದ್ದ ಚಾಕು, ಜೀಗರ್ ದಯಪಾಲಿಸಿದ ಪವಿತ್ರ ಗ್ರಂಥ, ಂದೆರಡು ಸೇಬು ಮತ್ತು ಂದಿನಮಟ್ಟಿಗೆ ಆಹಾರ ಸೇರಿಕೊಂಡಿದ್ದುವು. ಚಿಕ್ಕಾಸು ಆವನ ಜೇಬಿನಲ್ಲಿ ಝಣಝಣಿಸುತ್ತಿತ್ತು. ಊರಿಗೆ ಹೊರಟು ನಿಂತಾಗ ಫ್ರಾವ್ ಹೇಳಿದಳು; "ಜಾರ್ಜ, ಯಾವುದಾದರೂ ದೊಡ್ಡ ನುಸಿಗೆ ಹೋಗಿ ಹೇಳು– ಅಗ್ಗಿಷ್ಟಿಕೆ ಹೊತ್ತಿಸಬಲ್ಲೆ, ಅಡಿಗೆ ಮಾಡಬಲ್ಲೆ ಬಟ್ಟೆ ಒಗೆಯಲು ಬಲ್ಲೆನೆಂದು!' ಕಾರ್ವರ್ ಹೇಳಿದ– 'ನೀನು ಸ್ವತಂತ್ರ ನೆಂಬುದನ್ನು ನೆನಪಿನಲ್ಲಿಡು. ನಿನಗೆ ಹಣ ಕೊಡಪೆ ಮಡಿಸಿಕೊಂಡರೆ ಆ ಮನೆ ತೊರೆದುಬಿಡು. ದೊರೆತ ಹಣಕ್ಕೆ ಸರ್ವಗಾವಲಿರಲಿ' ಎಂದು ಎಚ್ಚರಿಸಿದ್ದನು. ಫ್ರಾವ್ ಆತನ ಸೂಕ್ಷ್ಮ ಪ್ರಕೃತಿಯನ್ನರಿತಿದ್ದಳು. 'ನಗು ಜೋಕೆ; ಥಂಡಿ ಮಾಡಿಕೊಳ್ಳಬೇಡ ಈ ಶಾಲನ್ನು ಜೋವಾನ ಾಗಿಟ್ಟುಕೊಳ್ಳು' ನುಕ್ಕಳಿಲ್ಲನ ಆಕೆಗೆ ಕಂಠ ತುಂಬಿಬಂದಿತ್ತು. ಹತ್ತು ವರುಷದ ಹಸುಳೆ. ಏಕ್ಯೆಗಾಗಿ ಈ ಮನೆ ತೊರೆದು ಹೊರಟ ಕಪ್ಪು ಬಣ್ಣದ ನುಗುನಿನ ಮೇಲೆ ಕಕ್ಕುಲತೆ ಆ ತಾಯಿಗೆ. ೈತ ಕಾರ್ವರ್ ತನ್ನ ದುಃಖವನ್ನು ದಮನಿಸಬಲ್ಲ. ಆದರೆ ಫ್ರಾವ್ ? ಜಾರ್ಜ ನಿಗೂ ಅತೀವ ವೇದನೆಯಾಗಿತ್ತು. ಅನಾಥನಾದ ತನಗೆ ತಂದೆ–ತಾಯಿಗಳಾಗಿ ಈ ಪರಿ ತನ್ನ ಹಿತವನ್ನೇ ಕೋರುತ್ತಿರುವ ಆ ದಂಪತಿಗಳ ಋಣ ಹೇಗೆ ತೀರಿಸಬಲ್ಲೆ ? ಮನೆಬಟ್ಟು ನಡೆದು, ಬೀದಿ ಹೊರಳಿದಾಗ ಆ ಮನೆಯನ್ನು ಕಣ್ಣಲ್ಲಿ ತುಂಬಿಕೊಂಡು ಸಜಲನಯನನಾಗಿ ನಿಯೋ-ಷೋಕ್ಕೆ ತೆರಳಿದ' ಇಡೀ ಭೂಮಿ 'ಆತನದು' ಎಂಬ ತಿಳುವಳಿಕೆ ಆ ಚಿಕ್ಕ ವಿುಮಳಿನಲ್ಲಿತ್ತು. ನಿಯೋಷೋದಲ್ಲಿ ಶಾಲೆಯನ್ನು ಸೇರಿದಾಗ ಅಲ್ಲಿಯ ಮಕ್ಕಳು ಈತನನ್ನು ತಿರಸ್ಕಾರದಿಂದ ಸ್ವಾಗತಿಸಿದರು. ಈತನ ವನ್ಯ-ವಿನ್ಯಾಸವನ್ನು ಗೇಲಿಮಾಡಿದರು. ಶಾಲೆ ಬಿಟ್ಟ ಮೊದಲ ದಿನ ವರ್ಗದಲ್ಲಿಯೇ ಇನ್ನೂ ಕುಳಿತಿದ್ದರಿಂದ ಮಾಸ್ತರರು ಎಚ್ಚರಿಸಬೇಕಾ-ಯಿತು. 'ಏಯ್ ಶಾಲೆ ಬಿಟ್ಟಾಗಿದೆ, ಹೊರಗೆ ನಡೆ! ಎಂದರು. ಅನಿ-ವಾರ್ಯವಾಗಿ ಕಾಲುಕಿತ್ತಿ, ಆಶ್ರಯಕ್ಕಾಗಿ ಅಲೆದಾಡಬೇಕಾಯಿತು ಜಾರ್ಜ್.

ಮಾರ್ಟಿನ್ ದಂಪತಿಗಳ ಉದಾರಾಶ್ರಯದಿಂದ ನಿಯೋಷೋ-ದಲ್ಲಿಯ ಜಾರ್ಜನ ವಸತಿ, ಆಹಾರ ಮತ್ತು ಶಿಕ್ಷಣ ಸರಾಗವಾಗಿ ಸಾಗಿತು. ಆ ದಂಪತಿಗಳಿಗೆ ನಿಗ್ರೋಗಳ ಮೇಲೆ ಮುಮತೆ, ಎಂತಲೇ ಜಾರ್ಜನಿಗೆ ತಮ್ಮ ಮನೆಯಲ್ಲಿರಲು ಸ್ಥಳವೊದಗಿಸಿ, ಒರಗಲು ಕಾಟು ಕೊಟ್ಟು, ಅಭ್ಯಾಸದ ಸಕಲ ಸಾಮಗ್ರಿಗಳನ್ನು ಒದಗಿಸಿದರು. ಇವರೀ ಋಣವನ್ನು ಬಾಲಕ ತೀರಿಸಲೇ ಇರಲಿಲ್ಲ. ಕೆಲ ದಿನಗಳಲ್ಲಿಯೇ ಈತನ ಪಾಕಶಾಸ್ತ್ರ ಪ್ರಾವೀಣ್ಯ ಮೆಚ್ಚಿಗೆ ಪಡೆಯಿತು. ಮಾರ್ಟಿನರ ಮನೆಯ ಮುಂದೆ ಚಿಕ್ಕ ಕೈದೋಟ ತಲೆಯೆತ್ತಿತ್ತು.. ಸಂಕೋಚದ ಸ್ವಭಾವದ ಆ ದಂಪತಿಗಳಿಗೆ ಪ್ರತಿಫಲಕೊಡುವ ಯೋಗ್ಯತೆ ಇಲ್ಲದ್ದಕ್ಕಾಗಿ ವ್ಯಥೆಪಟ್ಟು, ಅನಕಾಲವಿರುವೆಡೆ ಹೋಗಲು ತಿಳಿಸಿದರು. ಆದರೆ ಜಾರ್ಜ ಎಂದೂ ಇವಕ್ಕೆ ಸೈಗುಡಲಿಲ್ಲ. ಭಾನುವಾರದ ಪ್ರಾರ್ಥನೆಯಿಂದಾಗಿ ಮರಿಯಾಳ ಪರಿಚಯ ಈತನಿಗೆ ದೊರೆಯಿತು. ಒಮ್ಮೆ ಶ್ರೀಮತಿ ಮಾರ್ಟಿನ್ ಜೇನು ಬಿದ್ದಾಗ, ಗೃಹ ವ್ಯವಸ್ಥೆಯನ್ನು ಜಾರ್ಜನು ಸ್ವಯಂಸ್ಫೂರ್ತಿ ಯಿಂದ ಹೊತ್ತುಕೊಂಡು, ಶಾಲೆಯ ಪಾಠಗಳನ್ನು ನಿರ್ಲಕ್ಷಿಸಿ ಯಶಸ್ವೀ ರೀತಿಯಿಂದ ನಿರ್ವಹಿಸಿದನು. ರೋಗಿಯ ಆರೈಕೆಯು ಈತನದೇ. ಈತನ ಕೈವಾಡವೆಂಬಂತೆ ಕೆಲದಿನಗಳಲ್ಲಿ ಶ್ರೀಮತಿ ಮಾರ್ಟಿನ್ ಸಾವಿನ ದವಡೆಯಿಂದ ಮುಕ್ತಳಾದಳು. ಮಾರ್ಟಿನ್ ರಾತ್ರಿಯಲ್ಲಿ ಜಾರ್ಜನಿಗೆ ಪಾಠ ಹೇಳುತ್ತಿದ್ದ. ಕೆಲದಿನಗಳಲ್ಲಿ ಮಾರ್ಟಿನ್ ದಂಪತಿಗಳಿಗೆ ಮುಗ್ಗಟ್ಟು ತಲೆದೋರಿ, ನಿಯೋಷೋವನ್ನು ಬಿಡಬೇಕಾಯಿತು. ತಾವು ಹೋಗುವಲ್ಲಿಗೆ ಜಾರ್ಜನನ್ನು ಕರೆದೊಯ್ಯಲು ಜೇಬಿನಲ್ಲಿ ಸಾಕಷ್ಟು ಹಣವಿರಲಿಲ್ಲ; ನಿರುಪಾಯರಾದರು ಆ ದಂಪತಿಗಳು. ಅವರ ನಿರ್ಗಮನ ದಿಂದ ಬಿಕೋ ಎನ್ನುತ್ತಿದ್ದ ಮನೆಯ ಮುಂಬಾಗಿಲಿಸಲ್ಲಲ್ಲಿ ಜಾರ್ಜ ಚಿಂತೆಯಲ್ಲಿ ಮುಳುಗಿ ಕುಳಿತಾಗ ಮರಿಯಾ ಅಲ್ಲಿಗೆ ಬಂದಳು. ಹೊಸ ಯೋಗವಿದ್ದರೆ ಯಾವುದು ಅಸಾಧ್ಯ ? ಮರಿಯಾ ಜಾರ್ಜನನ್ನು ಆತನ ಆಸ್ತಿಯೊಂದಿಗೆ ತನ್ನ ಮನೆಗೆ ಕರೆದೊಯ್ದಳು. ಈ ಮನೆಯಲ್ಲಿ ಬಹಳ ದಿನನಿರಲಿಲ್ಲ ಜಾರ್ಜ. ಕಾನ್ಸಾಸ್‌ದಲ್ಲಿಯ ಶಾಲೆಗಳಲ್ಲಿ ವರ್ಣ ದ್ವೇಷವಿರಲಿಲ್ಲವೆಂದು ಕೇಳಿ ತಿಳಿದಿದ್ದ. ಅಲ್ಲಿಯೇ ಶಿಕ್ಷಣಪಡೆಯಲು ಬಯಸಿದ. ಕಾನ್ಸಾಸ್ ಕೈಬೀಸಿ ಕರೆಯುತ್ತಿತ್ತು.

ಕಾನ್ಸಾಸಿಗೆ ಬಂದ ಕೆಲ ದಿನಗಳಲ್ಲಿಯೇ ಜಾರ್ಜನಿಗೆ ಸುಪ್ರಸಿದ್ಧ ಉಪಹಾರಗೃಹವಾದ ವಾಲ್ಡರ್ ಹೌಸ್ (Wilder house) ನಲ್ಲಿ ಮಾಣಿಯ ಕೆಲಸ ಸಿಕ್ಕಿತು. ಕಾರ್ಯಕುಶಲತೆ ಹಾಗು ಸೌಜನ್ಯ-ದಿಂದಾಗಿ ಅನೇಕ ಸೌಲಭ್ಯಗಳು ಈತನಿಗೆ ಮೊರೆತವು. ಕಾನ್ಸಾಸಿಗೆ ಬಂದ ತಿಂಗಳೆರಡು ತಿಂಗಳಲ್ಲಿ ಆ ಉಪಹಾರಗೃಹದ ಉಪಗೃಹದಲ್ಲಿ ಲಾಂಡ್ರಿಯನ್ನು ತೆರೆದ. ಆಗ ಇಂಥ ಲಾಂಡ್ರಿಯೇ ಹೊಸದು. ೧೩ ವರುಷದ ತೆಳ್ಳನೆಯ ಕಪ್ಪು ಬಾಲಕ, ಕ್ಷಣಾರ್ಧದಲ್ಲಿಯೇ ಬಟ್ಟೆಯ ಕಶ್ಮಲವನ್ನು ಹೊರಹಾಕುತ್ತಿರುವ ಬಗೆಯನ್ನು ಜನರು ಕುತೂಹದಿಂದ ನಿರೀಕ್ಷಿಸುತ್ತಿದ್ದರು. ಬಂದ ಹೊಸದರಲ್ಲಿಯೇ ಆ ಉಪಾಹಾರಗೃಹಕ್ಕೆ ಸೇರಿದವನಾದ. ಅಡುಗೆಯಾಕೆಗೆ ಈತನ ಮೇಲೆ ಮನುತೆ. ಗಿರಾಕಿಗಳು ಹೆಚ್ಚಾದಾಗ ಅವಳಿಗೆ ಅಡುಗೆ ಮಾಡುವುದರಲ್ಲಿ ನೆರವಾಗುತ್ತಿದ್ದ. ಸಹಕಾರಿಗಳು ಏಳುವ ಮೊದಲೇ ಎದ್ದು, ನೀರೊಲೆಯ ಬೂದಿ ತೆಗೆದು ಉರಿಮಾಡಿ ನೀರು ಕಾಯಿಸುತ್ತಿದ್ದ. 'ಮಗು ಇಷ್ಟೆಲ್ಲ ಕೆಲಸ ಮಾಡುತ್ತೀ ಆದರೆ ತಿನ್ನುವುದು ಮಾತ್ರ ಇಷ್ಟೇನೆ' ಎಂದು ವಾತ್ಸಲ್ಯದಿಂದ ಕೇಳು-ತ್ತಿದ್ದಳು ಅಡುಗೆಯಾಕೆ.

ಶಾಲೆ ಪ್ರಾರಂಭವಾಗುವ ಮುನ್ನವೇ ಜಾರ್ಜನಿಗೆ ಅಲ್ಲಿಯ ಶಿಕ್ಷಕ ರೊಬ್ಬರ ಪರಿಚಯವಾಗಿತ್ತು. ಆತ ಸೇರಿದ ಶಾಲೆ ವಿಶಾಲವಾಗಿತ್ತು. ಇಂಥ ವಿಶಾಲಮಂದಿರವನ್ನು ಆತ ಈ ಮೊದಲು ಕಂಡಿರಲಿಲ್ಲ ಎಂತಲೇ ಆ ಶಾಲೆಯನ್ನು ಪ್ರವೇಶಿಸಲು ಸಂಕೋಚಗೊಂಡ. ಇದನ್ನರಿತ ಉಪಾ-ಧ್ಯಾಯಿನಿ 'ಮಗು ಒಳಗೆ ಬರುವುದಿಲ್ಲವೆ ?' ಎಂದು ಕೇಳಿದಳು. ಆಕೆಯಲ್ಲಿ ಶ್ರೀಮತಿ ಪಾರ್ಟರ್ನಳ್ಳನ್ನು ಕಂಡುಕೊಂಡ. ಈತನ ಸಂಕೋಚ ವನ್ನರಿತ ಆಕೆ ಸ್ವಾಗತದ ನಗೆ ಬೀರಿದಳು. ಅದೆಷ್ಟೋ ಪುಕ್ಕಲು ಕಪ್ಪು ಮಕ್ಕಳನ್ನು ಆಕೆ ಕಂಡಿದ್ದುಂಟು; ಆದರೆ ಜಾರ್ಜನಂತೆ ಕೃಶವಾದ ಅಲ್ಪವಸ್ತ್ರಾಚ್ಛಾದಿತ ಕಪ್ಪುಮಕ್ಕಳನ್ನು ಕಂಡಿರಲಿಲ್ಲ. ಸಂಕೋಚ ದೊಂದಿಗೆ ಉದ್ವೇಗ ಬೆರೆತುದರಿಂದ, ಮೊದಲೇ ಉಗ್ಗುತ್ತಿದ್ದ ಜಾರ್ಜ ಈಗ ಇನ್ನಷ್ಟು ಉಗ್ಗಿ ಮಾತನಾಡಿದನು. ಈತನ ಮಾತನ್ನು ಅರ್ಥ ಮಾಡಿಕೊಂಡಳಾಕೆ. ಈತನ ಪ್ರತಿಭಾಸಂಪನ್ನತೆ ಪ್ರಕಾಶಕ್ಕೆ ಬರಲು ಬಹಳ ದಿನ ಬೇಕಾಗಿರಲಿಲ್ಲ. ಕೈಗೆ ಸಿಕ್ಕ ಹೊತ್ತಿಗೆಗಳನ್ನು ತಿರುವಿ ಹಾಕುತ್ತಿದ್ದ. ಯೋಗ್ಯ ಪುಸ್ತಕ ಲಭ್ಯವಾಗುವಂತೆ ದಕ್ಷತೆ ವಹಿಸು ತಿದ್ದಳಾ ಅಧ್ಯಾಪಕಿ. ಹಾಟೆಲ್ಲಿಗೆ ಬರುವ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ಆತ ಮಗುಚಿಹಾಕುತ್ತಿದ್ದ. ಮತ್ತು ಅಲ್ಲಿಗೆ ಬರುವ ಪ್ರವಾಸಿಕರ ನಡೆ-ನುಡಿಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದ. ಈತನ ಸ್ಮರಣಶಕ್ತಿ ಅದ್ಭುತವಾಗಿತ್ತು.

ಒಝಾರಕ ತಪ್ಪಲಿನ ಸನಿನೆನಪು ಈತನನ್ನು ಆಗಾಗ ಬಾಧಿಸು ತ್ತಿತ್ತು. ಹಾಗೆ ನೆನಪಾದಾಗಲೆಲ್ಲ ಹೂಡೋಟ ನಿರ್ಮಿಸಲು ಹಾತೊರೆಯು ತ್ತಿದ್ದನು. ಆದರೆ ಅದಕ್ಕೆ ಸವನಕಾಶ ಸಿಕ್ಕಿರಲಿಲ್ಲ. ಈ ಅತೃಪ್ತ ಬಯಕೆ ಯನ್ನು ಹಾಳೆಯಲ್ಲಿ ಚಿತ್ರ ಬರೆದು ಸ್ಫೂರಯಿಸಿಕೊಳ್ಳುತ್ತಿದ್ದನು. ಗಿಡ-ಬಳ್ಳಿ, ಮೃಗ-ಪಕ್ಷಿಗಳ ಚಿತ್ರಗಳಿಂದ ತನ್ನ ಆ ತಪ್ಪಲಿನ ಸ್ಮರಣೆಗೆ ಆಜ್ಯ ಹೊಯ್ಯುತ್ತಿದ್ದ. ಅದೊಂದು ದಿನ ಭೂಗೋಲದ ಪಾಠ ನಡೆಯುತ್ತಿ ದ್ದಾಗ, ಮಧ್ಯದಲ್ಲಿಯೇ ಜಾರ್ಜನನ್ನು ಅಧ್ಯಾಪಿಕೆ ಕೇಳಿದಳು: 'ಜಾರ್ಜ್ ವಾಸಿಂಗಟನ್, ನೀನೇನು ಮಾಡುತ್ತಿರುವೆ ?' ಏನು ಉತ್ತರ ಕೊಡಬೇಕೀತ ? ಪಾಠದಲ್ಲಿ ಗಮನವಿಲ್ಲದ್ದನ್ನು ಗಮನಿಸಿಯೇ ಕೇಳಿದ್ದಳಾಕೆ. ಈತನ ಲಕ್ಷ್ಯವೋ ಕಿಟಕಿಯ ಆಚೆಗಿತ್ತು. 'ಮ್ಯಾಡಮ್ ....' ಮುಗ್ಗುರಿಸಿದ. ಹುಡುಗಲೆಲ್ಲ ಖೊಳ್ಳನೆ ನಕ್ಕರು. ಆ ನಗೆ ಶಿಕ್ಷಿಕೆಯು ಕೋಪಕ್ಕೆ ಕಿಡಿ ಹಚ್ಚಿದಂತಾಯಿತು. 'ನಿನ್ನ ಬಳಯಲ್ಲಿರುವುದೇನು ?' ದನಿ ಕರ್ಕಶವಾಗಿತ್ತು. 'ನಾನು .....' ತಡವರಿಸಿದ ಜಾರ್ಜ್. 'ತಾ ಇಲ್ಲಿ ನಿನ್ನ ಹಾಳೆ' ಆಜ್ಞಾಪಿಸಿದಳು ಆಕೆ. ಆ ಹಾಳೆಯನ್ನು ಆಕೆಗೆ ತೋರಿಸುವುದು ಅನಿವಾರ್ಯವಾಯಿತು. ಆಮೂಲಾಗ್ರವಾಗಿ ಅವಲೋಕಿಸಿದಳಾಗ ಆ ಹಾಳೆಯನ್ನು. ಈ ಮೊದ ಲಿನ ಕೋಪ ಮಂಜಿನಂತೆ ಕರಗಿತ್ತು. ಆನಂದದ ಛಾಯೆ ಮುಖದ ಮೇಲಿತ್ತು. ರೌದ್ರಾವತಾರ ಸಂತಸಕ್ಕೆ ಪರಿವರ್ತಿತವಾದುದನ್ನು ನೋಡಿ, ಬೆಕ್ಕಸ ಬೆರಗಾದರು ಆ ಮಕ್ಕಳೆಲ್ಲರು. 'ಮಗು, ಈ ಗುಡ್ಡಗಳನ್ನು ಎಲ್ಲಿ ಕಂಡಿರುವೆ ?' ನವಿರಾಗಿ ಕೇಳಿದಳು. ಉತ್ತರ ತುಟಿಯಮೇಲಿತ್ತು. ಆದರೆ ಹೊರಬರಲು ಹಿಂದೇಟು ಹಾಡುತ್ತಿತ್ತು. ಕಡೆಗೆ ಹೇಳಿದ : 'ಒಝಾರಕವಲ್ಲಿ' 'ಹೌದು, ಈ ಗುಡ್ಡ ನಿನ್ನ ಮನೆಗೆ ಸಮೀಪವೆ ?' ಹೌದೆಂದು ಆತ ಗೋಣುಹಾಕಿದ. 'ಜಾರ್ಜ, ಇದು ಉತ್ತಮ ಚಿತ್ರ. ನಿಜವಾಗಿಯೂ ಉತ್ತಮಚಿತ್ರ' ಮೆಚ್ಚಿಗೆಯ ಉದ್ಗಾರವಿದು. 'ಈ ಪಾಠ ಮುಗಿದ ಮೇಲೆ ನನ್ನನ್ನು ಕಾಣು' ಎಂದು ಜಾರ್ಜನಿಗೆ ಹೇಳಿದಳು. ಏನು ಶಿಕ್ಷೆ ಕಾದಿದೆಯೋ ಎಂದು ಭೀತನಾದ ಜಾರ್ಜ್. ಈ ದಿನ ಗ್ರಹಚಾರ ನೆಟ್ಟಗಿಲ್ಲವೆಂದು ಸಹಪಾಠಿಗಳು ತರ್ಕಿಸಿದರು. ಕೆಲವೇಳೆಯಲ್ಲಿ ಪಾಠ ಮುಗಿ ಯಿತು 'ಜಾರ್ಜ್ ನಿನ್ನ ಬಳಯಲ್ಲಿ ಬೇರೆ ಚಿತ್ರಗಳಿವೆಯೆ ?' ಹಿತ ಚಿಂತಕರಂತೆ ಕೇಳಿದಳಾಕೆ. ಜಾರ್ಜ್ ತನ್ನ ಕಿರಿಯ ಪುಸ್ತಕವನ್ನು ಮುಂದು ಮಾಡಿದ. ಆಕೆ ಹೇಳಿದಳು: 'ಜಾರ್ಜ್, ನೀನು ಲಾಂಗಳ ಕಲಾ ವರ್ಗಕ್ಕೆ ಸೇರು. ನಾನು ಅವಳಿಗೆ ಹೇಳುತ್ತೇನೆ.' ವಿರಸ ಸರಸವಾದುದಕ್ಕೆ ಜಾರ್ಜ್ ನಕ್ಕ. 'ನಾಳೆ ನಿನ್ನ ಎಲ್ಲ ಚಿತ್ರಗಳನ್ನು ತೆಗೆದುಕೊಂಡು ಬಾ. ಅವುಗಳನ್ನು ಅವರಿಗೆ ತೋರಿಸುವೆ. ನಿನ್ನಂತಹ ವಿದ್ಯಾರ್ಥಿಯನ್ನು ನಿಜವಾಗಿ ಮೆಚ್ಚುವರು ಅವರು. ನಡೆ ಮನೆಗೆ ಹೋಗು ಮಗು.' ವಾತ್ಸಲ್ಯದಿಂದ ಹೇಳಿದಳಾಕೆ. ಅದೇ ವರುಷ ಕ್ರಿಸ್ತ್ಮಸ್ ರಜೆಯಲ್ಲಿ ಶ್ರೀಮತಿ ಲಾಂಗಳಿಂದ ಬಣ್ಣದ ಪೆಟ್ಟಿಗೆ ದೊರೆ ಯಿತು. ಬೇಸಗೆಯ ರಜೆಯಲ್ಲಿ ವೃದ್ಧ ಕಾರ್ವರ್ ದಂಪತಿಗಳನ್ನು ಕಾಣಲೆಂದು ಬಂದ. ಕಳೆದುಕೊಂಡ ನಿಧಿ ಕೈಗೆ ಸಿಕ್ಕಂತಾಯಿತು ಆ ದಂಪತಿಗಳಿಗೆ. ಈತನನ್ನು ಕಾಣಲೆಂದು ಸುತ್ತಮುತ್ತಲಿನವರ ಸೇರಿ ದರು. ಬೇಸಗೆಯ ರಜೆ ಮುಗಿದೊಡನೆ ಕಾನ್ಸಾಸಿಗೆ ತೆರಳಲು ಬಯ ಸಿದ ಜಾರ್ಜ್. 'ನನಗಿನ್ನೂ ಕಲಿಯುವದಿದೆ' ಎಂಬುದೇ ಅವನ ಸಲ್ಲವಿ. 'ಇನ್ನೇನು ಕಲಿಯುವುದಿದೆ ? ಓದು ಬರುತ್ತಿದೆ. ಬರೆಯಲು ಬರುತ್ತಿದೆ. ಗಣಿತ ಗೊತ್ತಾಗಿದೆ. ಪ್ರಪಂಚ ಸುತ್ತಿದೆ. ಇನ್ನೇನು ಕಡಿಮೆ ಮಗು ?' ತನ್ನ ಯೋಗ್ಯತೆಗನುಸರಿಸಿ ಮಾತ ನಾಡಿದ ಕಾರ್ವರ್ 'ಇವು ಅವಶ್ಯವೇ. ಕೇವಲ ಪ್ರಾರಂಭಿಕ ಪಾಠ

ಗಳು ಮಾತ್ರ. ನಾನು ಕಾಲೇಜಿಗೆ ಹೊಗುವೆ' ತನ್ನ ಇಂಗಿತವನ್ನು ಪೇಳಿದ ಜಾರ್ಜ್. ಈಗ ಫ್ರಾನ್ ಮುಂದೆ ಬಂದಳು. 'ಜಾರ್ಜ್, ನಿನ್ಗ್ರೋ ಕಾಲೇಜಿಗೆ ಹೋದುದುಂಟೆ? ಅಷ್ಟಾಗಿ ನಮಗೆ ಅದರಿಂದ ಪ್ರಯೋಜನವೇನು?'

'ಚಿಂತಿಸಬೇಡ ತಾಯಿ. ನಾನು ಕಾಲೇಜು ಸೇರಿ ಎಲ್ಲ ಪುಸ್ತಕಗಳನ್ನೋದುವೆ. ಗುರುಮುಖದಿಂದ ಕಲಿಯುವೆ. ಇಷ್ಟಾದ ಮೇಲೆ 'ಆತ' (ದೇವರು) ತನ್ನ ಗುಪ್ತನಿಧಿಯನ್ನು ತೋರಿಸುವ. ಅಂದಿನಿಂದ ನನಗೆ ಪೂರ್ಣ ಕೆಲಸ.'

'ಹೌದು, ಮಗು ಹೇಳುವುದೂ ಸರಿಯೇ. ಆತನ ಇಚ್ಛೆಯಂತಾಗಲಿ' ಫ್ರಾನ್ ಒಪ್ಪಿಗೆ ಸೂಚಿಸಿದಳು. ಊರು ಬಿಡುವ ಮುನ್ನ ತಾಯಿಯ ಪುಣ್ಯಸ್ಮರಣೆಯ ದ್ಯೋತಕವಂತಿದ್ದ ಕೈಗಾದಿಯನ್ನು ತೆಗೆದುಕೊಂಡನು. ಒಂದು ಮುಂಜಾನೆ ಕರ್ವರ್ ದಂಪತಿಗಳು ಜಾರ್ಜನನ್ನು ಭಾರವಾದ ಹೃದಯದಿಂದ ಬೀಳ್ಕೊಂಡರು. ಫ್ರಾನಳಕಣ್ಣಲ್ಲಿ ನೀರುಪುಟಿದಿತ್ತು; ಆದರೆ ಅಭಿಮಾನ ತೊಳಗುತ್ತಿತ್ತು. 'ಎಲ್ಲಿದ್ದಲ್ಲಿ ತನ್ನ ಪ್ರೀತಿಯ ಕಪ್ಪುಕಂದಮ್ಮ ಸುಖಿಯಾಗಿರಲಿ' ಎಂದು ದೇವರಲ್ಲಿ ಮೊರೆಯಿಟ್ಟಳು. — ಮತ್ತೆ ಕಾಣಲಿಲ್ಲ ಜಾರ್ಜ್ ಆ ದಂಪತಿಗಳನ್ನು. ಅದುವೇ ಅವರ ಕೊನೆಯ ದರ್ಶನ.

ಪ್ರಾಥಮಿಕ ಶಿಕ್ಷಣ ಪೂರೈಸಿದ ಮೇಲೆ ಜಾರ್ಜ್ ಕಾಲೇಜ ಸೇರಲು ಬಯಸಿದ. ಕಾನ್ಸಾಸಿನಲ್ಲಿಯ ಹಾಯಲ್ಯಾಂಡ್ ಕಾಲೇಜಿಗೆ ಪ್ರವೇಶಕ್ಕಾಗಿ ಕಂಪಿತ ಕರಗಳಿಂದ ಅರ್ಜಿಯನ್ನು ಬರೆದು ಹಾಕಿದ. ಕೆಲ ದಿನಗಳಲ್ಲಿಯೇ ಪ್ರವೇಶ ದೊರೆತುದಾಗಿಯೂ ಮತ್ತು ನಿಧ್ಯಾರ್ಥಿವೇತನ ಕೊಡಲಾಗುವುದೆಂದೂ ಸುವಾರ್ತೆ ಬಂದಿತು. ಹಿಗ್ಗುತ್ತ ಜಾರ್ಜ್ ಆ ಕಾಲೇಜಿನ ಪ್ರಿನ್ಸಿಪಾಲರನ್ನು ಕಾಣಹೊರಟ. ಆದರೆ? ನಿಗ್ರೋನನ್ನು ಕಂಡು ದಿಗ್ಭ್ರಾಂತರಾದರು ಪ್ರಿನ್ಸಿಪಾಲರು.

'ಜಾರ್ಜ್ ತಪ್ಪು ತಿಳಿವಳಿಕೆಯಿಂದ ನನಗೆ ಕೊಟ್ಟ ಪ್ರವೇಶವನ್ನು ರದ್ದುಗೊಳಿಸಿದ್ದೇವೆ.'

ಪ್ರಿನ್ಸಿಪಾಲರ ಈ ವಾಕ್ಯ, ಜಾರ್ಜ್‌ನ ಕಿವಿಗಲ್ಲಿ ಕುದಿಯುವ ಕಬ್ಬಿಣ ರಸ ಸುರಿದಂತೆ ಆಯಿತು. 'ಸಾರ್ .... ಇಂದು ಕ .... ಜೇ ದಿ .... ನ, ನಿಮ್ಮ ಪ .... ತ್ರ' ಕಡ ತುಂಬ ಧೈರ್ಯದಿಂದ ಉಗುತ್ತಲೇ ಬಿನ್ನವಿಸಿದ. ತಾನು ಸ್ವೀಕರಿಸಿದ ಪತ್ರವನ್ನೂ ಪ್ರಿನ್ಸಿಪಾಲರೆದುರಿಗೆ ಇಟ್ಟ. ಅಹುದು. ಹುಬ್ಬು ಏರಿಸಿ ಇನ್ನೊಮ್ಮೆ ನೋಡಿದರು. ತಮ್ಮದೇ ಹಸ್ತಾಕ್ಷರ. ಕುಶಾಗ್ರಬುದ್ಧಿಯ ವಿದ್ಯಾರ್ಥಿಗೆಂದು ಕೊಡಮಾಡಲಾದ ವಿದ್ಯಾರ್ಥಿವೇತನ— ಎಲ್ಲ ನಮೂದಿಸಲಾಗಿತ್ತು. ಈಗ ಉಭಯ ಸಂಕಟಕ್ಕೊಳಗಾದವರು: 'ನೀನು ಕಪ್ಪು ವರ್ಣದವನೆಂದು ಏಕೆ ನಮೂದಿಸಲಿಲ್ಲ?' ಇಲ್ಲದ ಕಾರಣವನ್ನು ಹುಡುಕಿದರು. 'ಸರ್- ಅದರಲ್ಲಿರುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದೇನೆ. ನನ್ನ ಪೇಸೂ ತಪ್ಪಿಲ್ಲ.'

'ಅದೇನೋ ಸರಿ. ನನಗೆ ನಿನ್ನ ಬಗ್ಗೆ ತುಂಬ ಸಹಾನುಭೂತಿ. ನಿನಗೆ ಪ್ರವೇಶಕೊಡಲು ನಮ್ಮ ಘಟನೆ ಅಡ್ಡಿ ಬರುತ್ತಿದೆ.' ಬ್ರಹ್ಮಾಸ್ತ್ರ ಉಪಯೋಗಿಸಿದರು ಪ್ರಿನ್ಸಿಪಾಲರು. ಜಾರ್ಜ್ ಏನು ಹೇಳಬಲ್ಲ? ಎಂಥ ಆಶೆಯನ್ನು ಹೊತ್ತುಕೊಂಡು ಬಂದ? ಅದೆಂಥ ಸುಂದರ ಸಾಮ್ರಾಜ್ಯವು ಮನೋರಂಗದಲ್ಲಿ ನಿರ್ಮಾಣವಾಗಿತ್ತು? ಆದರೆ ಈಗ ನಿರಾಶೆಯ ಪೇರು ಪರ್ವತವನ್ನು ಹೊತ್ತುಕೊಂಡು, ತೀವ್ರ ಆಶೆಯನ್ನು ಹೃದಯದಲ್ಲಿ ಹೊತ್ತಿಸಿ, ಕೇಳಲಾಗದ ಹೆಜ್ಜಗಳನ್ನು ಒತ್ತಾಯದಿಂದ ಎತ್ತಿ ಹಾಕುತ್ತ ನಡೆದ. ಪ್ರಿನ್ಸಿಪಾಲರಿಗೆ ಏನು ತೋರಿತೋ ಏನೋ! 'ಮಗು, ನಿನ್ನ ಕಾಲೇಜ ಸೇರಬೇಕೆಂಬ ಬಲವಾದ ಬಯಕೆಗೆ ಕಾರಣವೇನು? ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿರುವೆಯಲ್ಲ. ಸಾಕಷ್ಟು ನಿಮ್ಮ ಜನಾಂಗಕ್ಕೆ. ಕಾಲೇಜ ಶಿಕ್ಷಣದಿಂದ ನಿನಗಾಗುವ ಪ್ರಯೋಜನವಾದರೂ ಏನು? ನಿನಗೆ ದೊರೆಯುವ ಉದ್ಯೋಗಗಳಾದರೂ ಎಂಥವು? ನಿನ್ನ ಕಾಲೇಜ ಶಿಕ್ಷಣದಿಂದ ನಿನ್ನದೂ ನಮ್ಮದೂ ವೇಳೆಯ ಅಪವ್ಯಯ.' ಎಷ್ಟು ಸಹಜವಾಗಿ ಮಾತನಾಡಿದ್ದರು! ಜಾರ್ಜನ ಎದೆಯಲ್ಲಿ ಅಲಗಿಕ್ಕಿದಂತಾಯಿತು. 'ಸಾರ್, ಭವಿಷ್ಯವನ್ನು ಭೇದಿಸಿದವರು ಯಾರು? ನನ್ನ ಅಂತರಾತ್ಮ ಪೇಳುತ್ತಿದೆ — ಈ ಕಾಲೇಜ ವ್ಯಾಸಂಗದಿಂದ ತುಂಬ ಪ್ರಯೋಜನವಿದೆ ಎಂದು!' ಈ ಕಪ್ಪುಮನುಷ್ಯನ ಧೀಶಕ್ತಿಯನ್ನು ಕಂಡು ನಿಬ್ಬೆರಗಾದರವರು. ನಿರಾಶೆಯನ್ನು ಹೊತ್ತುಕೊಂಡು ಓರ್ಮೂರಕ್ಕೂ ತಿರುಗುವಂತಿರಲಿಲ್ಲ. ಅಲ್ಲಿಯೇ ಏನಾದರೂ ಮಾಡಿ ಪೆಣಗುವುದಾಗಿ ನಿಶ್ಚಯಿಸಿದನು ಜಾರ್ಜ್. ಅಯೋವಾದಲ್ಲಿಯ ವಿಂಟರ್ ಸೆಟ್ಟಗೆ (winterset) ತಲ್ಪಿ ಹಾಟೆಲ್ಲೊಂದರಲ್ಲಿ ಅಡಿಗೆಯ ಯವನಾದ. ಅಲ್ಲಿಯ ಚರ್ಚಿನಲ್ಲಿ ಸಂಗೀತ ಸೇವೆ ನಡೆದಾಗ, ಈತನ ಧ್ವನಿ ಅಲ್ಲಿಯ ವಾದ್ಯವೃಂದದವರನ್ನು ಆಕರ್ಷಿಸಿತು. ತತ್ಪರಿಣಾಮವಾಗಿ ಮಿಲ್ಲಹಾಲಂಡರ ಪರಿಚಯವಾಯಿತು. ಈತನ ಕಂಠಮಾಧುರ್ಯ, ಸಂಗೀತಪರಿಣತಿ ಶ್ರೀಮತಿ ಮಿಲ್ಲ ಹಾಲಂಡರನ್ನು ಆಕರ್ಷಿತು. ಎಂತಲೇ ಅವರು ಆತನಿಗೆ ತಮ್ಮಲ್ಲಿಗೆ ಬರಲು ಬಿನ್ನವಿಸಿದರು. ಅವರ ಬಿನ್ನಪಕ್ಕೆ ಮಾನ್ಯತೆ ಕೊಟ್ಟು ತನ್ನಲ್ಲಿಯ ಅತ್ಯುತ್ತಮ ವಸ್ತ್ರಗಳನ್ನು ಧರಿಸಿ ಅವರ ಮನೆ ಸೇರಿದ. ಆಕೆಯ ಸಂಗೀತ ಈತನಲ್ಲಿ ಆನಂದಾಶ್ರುಗಳನ್ನು ತರಿಸಿತು. ಅವರಿಂದ ಬೀಳ್ಕೊಳ್ಳುವ ಮುನ್ನ ತನ್ನ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಟ್ಟು, ಹಾಯಲ್ಯಾಂಡ್ ಕಾಲೇಜಿನಿಂದ ನಿರಾಶನಾಗುವರೆಗೆ ಹೇಳಿದ. ಅವರೊಂದಿಗೆ ವಿನಾ ಆವನ್ನು ಬೇರೆ ಯಾರೊಂದಿಗೂ ಅವನು ಮನಬಿಚ್ಚಿ ಮಾತನಾಡಿದುದಿಲ್ಲ. ಆ ದಂಪತಿಗಳು ಎಲ್ಲ ವಿಧದಿಂದ ಅವನಿಗೆ ಪ್ರವೇಶ ದೊರಕಿಸಲು ಪೆಣಗುವುದಾಗಿ ಆಶ್ವಾಸನವಿತ್ತರು. ಅವನೀ ಉಪಕಾರಕ್ಕೆ ವ್ಯತಿಯಾಗಿ ಸುಂದರ ಉಪವನವನ್ನು ರಚಿಸುವುದಾಗಿ ಹೇಳಿದನು. ಕೆಲ ದಿನಗಳಲ್ಲಿಯೇ ಜಾರ್ಜ್ ಅವರ ಆಪ್ತವರ್ಗಕ್ಕೆ ಸೇರಿದವನಾದ.

ಜಾರ್ಜನ ಸಂಗೀತಾಭ್ಯಾಸ ಶ್ರೀಮತಿ ಮಿಲ್ ಹಾಲಂಡರ ನೇತೃತ್ವದಲ್ಲಿ ನಡೆದಿತ್ತು. ಚಿತ್ರ ಬರೆಯುವುದೂ ಪ್ರಗತಿಪಥದಲ್ಲಿತ್ತು. ಯೋಗಾಯೋಗಕ್ಕೆ ಯಾರು ಹೊಣೆ? ಕಾಲಗತಿಯನ್ನು ಗುರುತಿಸುವುದೆಂತು? ಅದೊಂದು ದಿನ ಮಿಲ್ಲ ಹಾಲಂಡರರ ಮನೆಗೆ ಶ್ರೀಮತಿಯವರ ಸೋದರ ಡಾನ್ ಬ್ರೌನ್ ಬಂದ. ಪರ್ಯಾಯವಾಗಿ ಜಾರ್ಜನ ಬಗ್ಗೆ ಮಾತೂ ಬಂದಿತು. ಅಯೋವಾದಲ್ಲಿಯ ಇಂಡಿಯಾನೋಲಾ

ದಲ್ಲಿರುವ ಸಿಂಪ್ಸನ್ ಕಾಲೇಜಿನಲ್ಲಿ ಪ್ರವೇಶ ಸಿಗುವುದು ನಿಶ್ಚಿತವೆಂದು ಅತ ತಿಳಿಸಿದನು. ಮತ್ತೆ ಆಶಾಕುಸುಮವರಳಿತು ಜಾರ್ಜನಲ್ಲಿ. ಜಾರ್ಜ್ ಕಲಾವಿಭಾಗಕ್ಕೆ ಸೇರುವುದು ವಿಹಿತವೆಂದು ಶ್ರೀಮತಿ ಹಾಲಂಡ್ ಸಲಹೆ ಇತ್ತಳು. ಆಕೆಯ ಈ ಸಲಹೆಗೆ ಸಾಕ್ಷಿಯಾಗಿದ್ದುವು ಅವರ ಮನೆಯನ್ನು ಬೆಳಗಿನಿಂತಿದ್ದ ಚಿತ್ರಗಳು.

ಈ ಬಾರಿ ಮೋಸವಾಗಲಿಲ್ಲ. ಸಿಂಪ್ಸನ್ ಸ್ಕೂಲಿನಲ್ಲಿ ಜಾರ್ಜನಿಗೆ ಪ್ರವೇಶ ದೊರೆಯಿತು. ಉಪಜೀವನಕ್ಕಾಗಿ ಕಾಲೇಜಿನ ಹಾಸ್ಟೇಲ್ಲಿನ ಆವರಣದಲ್ಲಿ ಲಾಂಡ್ರಿಯೊಂದನ್ನು ತೆರೆದ. ವಸ್ತ್ರಗಳನ್ನು ನಿರ್ಮಲಗೊಳಿಸುವುದರೊಂದಿಗೆ ರಿಪೇರಿ ಕೆಲಸವನ್ನೂ ಇಟ್ಟುಕೊಂಡಿದ್ದ. ಕೆಲ ದಿನಗಳಲ್ಲಿಯೇ ವಿದ್ಯಾರ್ಥಿಗಳಿಗೆ ಮೆಚ್ಚುಗೆಯವನಾದರೆ, ಅಧ್ಯಾಪಕರಿಗೆ ಜಾಣನೆಂದು ತೋರಿದ. ಆ ಶಾಲೆಯಲ್ಲಿದ್ದಾಗ್ಗೆ ಕುಮಾರಿ ಬಡ್ಡಳ ನೇತೃತ್ವದಲ್ಲಿ ಜಾರ್ಜ್ ತೆಗೆದ ೭೭ ತೈಲ ಚಿತ್ರಗಳು ಇಗ್ಯೂ ಇವೆ. ಅವನ ಚಿತ್ರಗಳ ವೈಶಿಷ್ಟ್ಯವೆಂದರೆ ಸಜೀವತೆ ಹಾಗೂ ಸಾವಧ್ಯತೆ. ಎರಡು ವರ್ಷ ಆ ಶಾಲೆಯಲ್ಲಿ ಪೂರ್ಣಗೊಳಿಸುತ್ತಿದ್ದಂತೆ ಸಮಸ್ಯೆಯೊಂದು ಉದ್ಭವಿಸಿತು. ಅಲ್ಲಿ ಸಾಕಷ್ಟು ವೈಜ್ಞಾನಿಕ ಉಪಕರಣಗಳಿರಲಿಲ್ಲ. ಇಲ್ಲಿಯ ಕಲಾವಿಭಾಗದ ಮುಖ್ಯಾಧ್ಯಾಪಕರು ಜಾರ್ಜನಿಗೆ ಪ್ಯಾರಿಸ್ಸಿನ ಸುಂದರ ಸ್ವಪ್ನದರ್ಶನ ಮಾಡಿಸಿದರು. ಆದರೆ ವಿಜ್ಞಾನದಲ್ಲಿ ಕಲೆಗಿಂತ ಹೆಚ್ಚು ಆಸಕ್ತಿ ಜಾರ್ಜನಿಗೆ. ಕಡೆಗೆ ಗರ್ಲಾಂಡ್ ರಲ್ಲಿ Ames (ಎಮ್ಸ್) ನಲ್ಲಿಯ ಐಯೋವಾ ಸ್ಟೇಟ್ ಕಾಲೇಜನ್ನು ಸೇರಿದ; ಅಲ್ಲಿ ಸಸ್ಯಶಾಸ್ತ್ರ ಮತ್ತು ಒಕ್ಕಲತನ ಶಾಸ್ತ್ರದ ವಿಷಯ ವ್ಯಾಸಂಗ ದೊರೆಯುತ್ತಿತ್ತು. ಈಗ ಜಾರ್ಜನಿಗೆ ಸುಮಾರು ೨೭ ವರುಷಗಳಾಗಿರಬಹುದು. ಸಿಂಪ್ಸನ್ನಿನಿಂದ ಶಿಫಾರಸು ಪಡೆದ ಜಾರ್ಜನಿಗೆ ಪ್ರವೇಶ ಸುಲಭವಾಯಿತು. ಜೇಮ್ಸ್ ನಿಲ್ಸನ್ ತನ್ನ ಕಛೇರಿಯಲ್ಲಿಯೇ ಈತನಿಗೆ ವಸತಿಸೌಕರ್ಯ ಒದಗಿಸಿದ. ಇದಕ್ಕೆ ಪ್ರತಿಯಾಗಿ ಜಾರ್ಜ್ ಆತನ ಆಫೀಸನ್ನು ಶೃಂಗರಿಸಿದ.

ಗರ್ಲಾಂಡ್ ರಲ್ಲಿ ಜಾರ್ಜ್ ವಿಜ್ಞಾನದ ಪದವೀಧರನಾದ. ಕಸ್ತೂರಿಯ ಸುವಾಸನೆ ಹರಡಲು ಎಷ್ಟು ವೇಳೆ ? ಈಗಾಗಲೇ ಜಾರ್ಜನ ಪ್ರತಿಭಾಸಂಪನ್ನತೆ ಪ್ರಸಾರಗೊಂಡಿತ್ತು. ಈತನ ಕೆಲ ಚಿತ್ರಗಳು ಅಂತಾರಾಷ್ಟ್ರೀಯ ಪ್ರದರ್ಶನಗಳಲ್ಲಿ ಮೆಚ್ಚುಗೆ ಪಡೆದಿದ್ದುವು. ಪದವೀದಾನ ಸಮಾರಂಭ ಮುಗಿದ ಮೇಲೆ ಮೂಲಪ್ರಶ್ನೆ ಈತನನ್ನು ಮುತ್ತಿತು. ' ಸರಿ, ಬಹು ದಿನದ ಹಿರಿಯ ಬಯಕೆ ಇಂದು ಕೈಗೂಡಿತು. ಮುಂದೇನು ? ' ಎಂಬ ಸಮಸ್ಯೆ ಕಾಡುತ್ತಿತ್ತು. ಅಪೆಸ್ಟೋಜನ ಸಹೃದಯರು ಈತನ ಯಶಸ್ಸಿಗಾಗಿ ಅಭಿನಂದಿಸಿದ್ದರು. ಆದರೆ ಕಪ್ಪು ಬಣ್ಣವೊಂದಿದೆಯಲ್ಲ ! ನಿಷ್ಪ್ರಯೋಜಕತೆಯನ್ನಾಡಿ ತೋರಿಸಲು ! ಮನೆಗೆ ಬಂದವನೇ ಮಮತಾಮಯಿ ತಾಯಿಯು ನ್ಯಾರಕವಂತಿರುವ ರಾಟೆಯನ್ನು ಬಲವಾಗಿ ತಬ್ಬಿಕೊಂಡ. ಮಗನ ಅಭ್ಯುದಯವನ್ನು ಕಾಣಲಾರದೆ, ಹೆಸರಿಲ್ಲದೆ ಗತಿಸಿದ ಆ ಹೆತ್ತ ತಾಯಿಯ ಸ್ಮರಣೆ ಕಣ್ಣೀರಿನ ಕೋಡಿಯನ್ನು ಹರಿಸಿತು. ಈ ತಂದ್ರಾವಸ್ಥೆಯಲ್ಲಿರುವಾಗಲೇ ಕೂಗೊಂದು ಕೇಳುಬಂದಿತು; ಡಾಕ್ಟರ ನಿಲ್ಸನ್ ಬಂದಿದ್ದರಾಗ. ' ಜಾರ್ಜ್ ಈ ಕತ್ತಲೆಯ ಕೋಣೆಯಲ್ಲಿ ಏನು ಮಾಡುತ್ತಿದ್ದಿ ? ' ಆತನ ಕಂದಿದ ಮುಖವನ್ನು ನೋಡಿದರು : ' ಹುಚ್ಚಪ್ಪಾ, ನಿನಗಾಗಿ ನಾವು ಊಟಕ್ಕೆ ಕಾದಿದ್ದೇವೆ : ನಡೆ ಬೇಗ ! ' ಎಂಥ ವಾತ್ಸಲ್ಯ ಉಕ್ಕದು ? ದುಃಖದ ಅಂತ್ಯಾವಧಿಯಲ್ಲಿಯೇ ಸುಖ ಜನಿಸುವುದೇನೊ ! ಡಾಕ್ಟರ್ ನಿಲ್ಸನರ ಮನೆ ಸೇರುವಷ್ಟರಲ್ಲಿ ಅವರಿಂದಲೇ ಶುಭ ಸಮಾಚಾರ ತಿಳಿಯಿತು : ' ಜಾರ್ಜ, ನಿನಗೆ ಗೊತ್ತಿದೆಯೆ ? ಇನ್ನು ಮೇಲೆ ನೀನು ನಮ್ಮ ವ್ಯವಸಾಯ- ಬಂಧು ! ' ಜಾರ್ಜ್ ದಿಙ್ಮೂಢನಾದ. ' ನಿನಗೆ ನನ್ನ ಮೇಲೆ ವಿಶ್ವಾಸವಿಲ್ಲವೆ ? ಇಂದು ಮಧ್ಯಾಹ್ನವೇ ನಿನ್ನ ನಿಯಾಮಕದ ನಿರ್ಣಯವಾಗಿದೆ. ನೀನು ಸಸ್ಯಶಾಸ್ತ್ರವನ್ನು ಬೋಧಿಸಬೇಕು. ಆಗಲಿನ್ನು ಸಂತೋಷ ಸೂಚಕ ಕೂಟ ! ' ಎಂಥ ನಿಷ್ಕಲ್ಮಷ ಹೃದಯ ವಿಲ್ಸನ್ನರದು ! ಮುನ್ನಿನ ದುಗುಡ ಕರಣ ಉತ್ಸಾಹ ಕೋಡಿವರಿಯಿತು. ಕಪ್ಪು ಮನುಷ್ಯ ಕೂಡ ಪ್ರಾಧ್ಯಾಪಕನಾಗಬಲ್ಲನೆ !

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು ! ಪ್ರಾಮಾಣಿಕ ವ್ಯವಹಾರ !!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮೂಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

★ ಭಾರ್ಗವಿ ★

(ಪೌರಾಣಿಕ ಜೀವನರೂಪಕ)

ಶ್ರೀ ಎಂ. ಕೆ. ಜಯಲಕ್ಷ್ಮಿ, ಕರಗಡ

ಪಾತ್ರ ಪರಿಚಯ

ಅತ್ರಿಮಹರ್ಷಿ (ಒಬ್ಬ ಋಷಿ); **ಅನಸೂಯೆ** (ಋಷಿಯ ಪತ್ನಿ); **ಭಾರ್ಗವಿ** (ಋಷಿಯ ಪುತ್ರಿ)
ಸುಮಂತ (ಒಬ್ಬ ಋಷಿಕುಮಾರ) **ಆಕೆ** (ರೈತನ ಹೆಂಡತಿ) **ಶೀಲಾ** (ಭಾರ್ಗವಿಯ ಗೆಳತಿ)

[ಅತ್ರಿ ಮಹರ್ಷಿಗಳ ಆಶ್ರಮ. ಕೃಷ್ಣಾಜಿನದ ಮೇಲೆ ಕುಳಿತು ಅನಸೂಯೆ ಬತ್ತಿ ಮಾಡುತ್ತಿರುವಳು. ಪ್ರಶಾಂತವಾದ, ತಾಯ್ತನವು ಹೊರಸೂಸುವ ಮುಖ. ಕೆನ್ನೆಗಳಿಗೆ ಅರಿಸಿನ, ಆಗಲವಾದ ಕುಂಕುಮ. ಮಲ್ಲಿಗೆದಂಡೆ ಮುಡಿದು ನಾರುಸೀರೆ ಉಟ್ಟಿದ್ದಾಳೆ.]

ಅನಸೂಯೆ:—ಭಾರ್ಗವಿ ಏನೋ ಇನ್ನೂ ಬರಲಿಲ್ಲವಲ್ಲ! ಆಟದಲ್ಲಿ ಮಗ್ನಳಾಗಿದ್ದಾಳೋ ಅಥವಾ ಪಾಠಗಳನ್ನು ಕೇಳಲು ಹೋಗಿದ್ದಾಳೋ? ಮಹರ್ಷಿಗಳೂ ಇನ್ನೂ ಬರಲಿಲ್ಲವಲ್ಲ–ಬಹುಶಃ ಪಾಠಪ್ರವಚನಗಳು ಇನ್ನೂ ಮುಗಿದಿಲ್ಲವೇನೋ !

(ಹೊರಗಡೆಯಿಂದ ಆರ್ತಸ್ವರದಲ್ಲಿ ' ತಾಯೀ, ತಾಯಿ ' ಎಂದು ಕೂಗಿದ ಶಬ್ದ ಕೇಳುವುದು) ಯಾರು, ಏಕೆ ಕೂಗುವುದು ?....? ಬನ್ನಿ... ಬನ್ನಿ.... (ಎನ್ನುತ್ತಾ ಎದ್ದು ಬರುವಳು:)

[ಮಲಿನ ವಸ್ತ್ರ ಧರಿಸಿದ ಹೆಂಗುಸೊಬ್ಬಳು ಓಡಿಬಂದು ಅವಳ ಪಾದದಲ್ಲಿ ತಲೆಯಿಟ್ಟು ಬಿಕ್ಕುವಳು. ಅಸ್ತವ್ಯಸ್ತ ಕೇಶರಾಶಿ, ಕಳೆಗುಂದಿದ ಮುಖ, ರೈತನ ಪತ್ನಿಯಂತೆ ಕಾಣುವಳು.]

ಅನಸೂಯೆ:— (ಅತ್ಯಂತ ವಾತ್ಸಲ್ಯದಿಂದ) ಏಳು ಮಗಳೇ ಏಳು, ಏಕೆ ದುಃಖಿಸುವೆ? ಸಮಾಧಾನ ಮಾಡಿಕೋ. ಕಷ್ಟದಲ್ಲಿ ಧೈರ್ಯ ತಂದುಕೊಳ್ಳಬೇಕಮ್ಮಾ. ನಿನ್ನ ಸಂಕಟವೇನು ಹೇಳು ಮಗಳೇ !

ಆಕೆ :—(ಅತಿ ದುಃಖದಿಂದ) ತಾಯೆ, ನನ್ನಂತಹ ದುರ್ಭಾಗ್ಯೆ ಬೇರಿಲ್ಲ. ನನ್ನಂತವರು ಬದುಕಬಾರದು, ತಾಯಿ ಬದುಕಬಾರದು! ನಿಮ್ಮ ಹೆಸರು ಕೇಳಿ ನಿಮಗೆ ಶರಣುಬಂದಿದ್ದೇನೆ. ನೀವೇ ಕಾಪಾಡಿ. ಇಲ್ಲವೆ ನನಗೆ ಸಾವಿಗೆ ಅಪ್ಪಣೆಕೊಡಿ.

ಅನಸೂಯೆ:—ಸಮಾಧಾನ ಮಾಡಿಕೋ ಮಗಳೇ, ನಿನ್ನ ದುಃಖವೇನು ಹೇಳು.

ಆಕೆ : ಏನೆಂದು ಹೇಳಿಕೊಳ್ಳಲಿ ತಾಯಿ–ನನ್ನ ಪತಿ ಬೇರೆ ಲಗ್ನವಾಗಬೇಕೆಂದಿದ್ದಾನೆ–ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದೆ. ಹಗಲೂ ರಾತ್ರಿ ಅವರಿಗಾಗಿ ಜೀವ ತೆಯ್ದೆ. ಉಂಡ ಬಾಳೆಯಲೆಯಂತೆ ನನ್ನ ಕಡೆಗಣಿಸಿ, ಬೇರೆ ಹೆಣ್ಣು ತರುತ್ತಾರಂತೆ. ಮಕ್ಕಳಾಗದಿರುವುದೇ ನನ್ನ ಅಪರಾಧ, ತಾಯಿ! ಪುಣ್ಯವಿದ್ದರೆ ನಮಗೆ ಆಗುವುದೆಂದೂ ಸವತಿಯನ್ನು ತರುವುದು ಬೇಡೆಂದೂ ನಾನೆಷ್ಟೋ ವಿರೋಧಿಸಿದೆ. ನೋಡಿ ತಾಯಿ, ಅದಕ್ಕಾಗಿ ಬಿದ್ದಿರುವ ಲತ್ತೆಗಳನ್ನು –(ಕೈ ಮೈಗಳನ್ನು ತೋರಿಸುವಳು.)

ಅನಸೂಯೆ :— ಪಾಪ, ಪಾಪ, ನಿನ್ನ ತವರಿನ ಕಡೆ ಯಾರೂ ದಿಕ್ಕಿಲ್ಲನೇನಮ್ಮ ?

ಆಕೆ : ಇದ್ದಾರೆ ತಾಯಿಾ! ತಂದೆ ತಾಯಿ ಅಣ್ಣ ತಮ್ಮಂದಿರೆಲ್ಲ ಇದ್ದಾರೆ. ಆದರೆ ಬಾಳ್ಗಿಟ್ಟು ತವರನ್ನು ಸೇರಲೇ ತಾಯಿ ? ಇಲ್ಲ, ನನ್ನ ಅಭಿಮಾನಾನ ಬಿಡಲಾರೆ. ನಾ ಬಾಳಬೇಕು ಇಲ್ಲವೆ ಸಾಯಬೇಕು. ನೀನೇ ಶರಣು! ಹೇಗಾದರೂ ಕಾಪಾಡಿ.

ಅನಸೂಯೆ:—ಹೆಣ್ಣು ಗೊತ್ತಾಗಿದೆಯೇ ? ಲಗ್ನ ನಿಶ್ಚಯವಾಗಿದೆಯೇ ?

ಆಕೆ :— ಅಲ್ಲಿ ಇಲ್ಲಿ ನೋಡುತ್ತಿದ್ದಾರೆ ತಾಯಿ! ಬೇರೆ ಲಗ್ನ ನಿಶ್ಚಯವಾದ ಮೇಲೆ ನಾನೀಜೀವ ಇಟ್ಟುಕೊಂಡಿರುವದಿಲ್ಲ !

ಅನ:—ಶಾಂತಳಾಗಮ್ಮಾ ! ನಿನ್ನ ಪತಿ ಲೋಕರೂಢಿಯಂತೆ ನಡೆಯುತ್ತಿದ್ದಾನೆ. ಸವತಿಯನ್ನು ತಂಗಿಯಂತೆ ಕಂಡು ಕೂಡಿ ಬಾಳಲಾರೆಯಾ ?

ಆಕೆ:—ತಾಯಿ ಅದೊಂದು ಮಾತ್ರ ಸಾಧ್ಯವಿಲ್ಲ. ಕೋಸಲರಾಜ ಅಷ್ಟು ಮಂದಿಯನ್ನು ಲಗ್ನವಾದರೂ, ಯಜ್ಞ ಮಾಡುವವರೆಗೂ ಮಕ್ಕಳನ್ನು ಕಾಣಲಿಲ್ಲ. ತಾಯಿ, ನೀವು ಮಹಾ ಪತಿವ್ರತೆ. ನಿಮ್ಮ ಮಾತು ಹುಸಿಯಾಗದು. ನೀವು ನನ್ನ ಮೇಲೆ ಕರುಣೆ ಇಟ್ಟು ಹರಸಬೇಕು. ಅಲ್ಲಿಯವರೆಗೂ ನಿಮ್ಮ ಪಾದಾನೆ ಬಿಡೋದಿಲ್ಲ. [ಅನುಸೂಯೆಯ ಕಾಲುಗಳನ್ನು ಕಟ್ಟಿಕೊಳ್ಳುವಳು.]

ಅನ:—(ಕರುಣೆಯಿಂದ)ಏಳು ಮಗಳೇ, ದುಃಖಿಸಬೇಡ. ಒಂದು ವರ್ಷ ನಿತ್ಯವೂ ಗೌರೀ ಪೂಜೆ ಮಾಡು! ಸರ್ವಮಂಗಳೆ ನಿನ್ನಿಷ್ಟವನ್ನು ನೆರವೇರಿಸುವಳು. ನಿನ್ನ ಪತಿ ಲಗ್ನದ ಹಂಬಲವನ್ನೂ ಬಿಡುವನು.

ಆಕೆ :— (ಆನಂದದಿಂದ) ಧನ್ಯಳಾದೆ ತಾಯಿ ! ನಿಮ್ಮ ಹರಕೆ ಎಂದೂ ಹುಸಿಯಾಗದು.

ಅನ:— ಚಿಂತಿಸಬೇಡುಡ. ಸಂತೋಷವಾಗಿರಮ್ಮಾ !

ಆಕೆ:–ತಾಯಿ ನಿಮಗಾಗಿ ನನ್ನ ಬಡ ಕಾಣಿಕೆ ತಂದಿದ್ದೆ. ತೆಗೆದು ಕೊಳ್ಳಿ. (ಪಕ್ಕಕ್ಕೆ ಹೋಗಿ ಹಣ್ಣು ಹಂಪಲಿದ್ದ ಬುಟ್ಟಿ ತಂದಿಡುವಳು. ತಾಯಿ, ಅಲ್ಲಿ ಹುಲ್ಲೆಯೊಡನೆ ಆಡುತ್ತಿರುವಾಕೆ ಯಾರು ? ನಿಮ್ಮ ಮಗಳೇ ?ಎಷ್ಟು ಕಳೆಯಾಗಿದ್ದಾರೆ ತಾಯಿ! (ದೃಷ್ಟಿ ತೆಗೆದು) ನಾನಿನ್ನು ಬರಲೇ ತಾಯಿ!

ಅನ :— ಹೋಗಿ ಬಾಮ್ಮ. (ಅವಳು ಹೋಗುವಳು) ಆಹಾ, ಭಾರ್ಗವಿ ಎಂತಹ ತೇಜಸ್ವಿನಿ! ನಿಜಕ್ಕೂ ದೃಷ್ಟಿ ತಗಲುವಂತೆಯೇ ಇದ್ದಾಳೆ; ಅತ್ತಲೇ ನೋಡುತ್ತ ನೈಮರೆತು ನಿಲ್ಲುವಳು. [ಅತ್ತ ಕಡೆಯಿಂದ ಅತ್ರಿಮಹರ್ಷಿಗಳು ಪ್ರವೇಶಿಸುವರು. ಅನಸೂಯೆಯ ಅನ್ಯ ಮನಸ್ಕತೆ ಕಂಡು ಅವಳು ನೋಡುವೆಡೆಗೆ ತಾವೂ ನೋಡುವರು. ಅನಸೂಯೆ ನಿಧಾನವಾಗಿ ತಿರುಗುವಳು. ಲಜ್ಜೆಯಿಂದ ತಲೆ ತಗ್ಗಿಸುವಳು.]

ಅತ್ರಿ :– (ಪ್ರಸನ್ನರಾಗಿ) ಪುತ್ರಿಯ ಆಟ ನೋಡುತ್ತಾ ನೈಮರೆತಿದ್ದಿಯಾ ದೇವಿ ?

ಅನ:–ನೀವು ಅಷ್ಟು ನಿಶ್ಶಬ್ದವಾಗಿ ಬಂದರೆ ನನಗೆ ಹೇಗೆ ತಿಳಿಯಬೇಕು ? ಇಂದೇಕೆ ಇಷ್ಟು ತಡ ? ಪಾಠಪ್ರವಚನ ಮುಗಿಯಿತೇ ನಿಧಾನವಾಯಿತೇ ?

ಅತ್ರಿ :— (ಕೃಷ್ಣಾಜಿನದ ಮೇಲಿಕೂತು) ಹೌದು. ಗಹನ–ವೇದಾಂತದ ಚರ್ಚೆನಡೆಯಿತು. ಮುಕ್ತಿಗೆ ಜಗತ್ಯವಾದುದು ಭಕ್ತಿಯೋ ನಿರಭಿಮಾನವೋ– ಎಂಬ ಬಗ್ಗೆ ತುಂಬ ಚರ್ಚೆಯಾಯಿತು.

ಅನ :— ನಿಮ್ಮ ಅಭಿಮತ ಏನು ?

ಅತ್ರಿ :— ದೇವಿ, ಜ್ಞಾನದ ಅಂಧಕಾರಕ್ಕೆ ಅಭಿಮಾನದ ಗೋಡೆಯೇ ರಕ್ಷಣೆ. ಜ್ಞಾನದ ಬೆಳಕು ಒಳಹೋಗಲು ಅಸ್ಪದವೇ ಇರುವುದಿಲ್ಲ. ಪರಮಭಕ್ತನಾದರೂ ದೇಹಾಭಿಮಾನ ಬಿಡದಿದ್ದರೆ ಮಾಯೆಯ ಬಲೆಯಿಂದ ಪಾರಾಗಲಾರ. ರಾವಣಾದಿಗಳು ಭಕ್ತ-ರಾಪರೂ ಲೋಕಕಂಟಕರಾಗಿರಲಿಲ್ಲವೇ ? ಅಂತಹ ಭಕ್ತರನ್ನೂ ಸಹ ಲೋಕಕಲ್ಯಾಣಾರ್ಥ ಭಗವಂತ ನಿಗ್ರಹಿಸಬೇಕಾಗುತ್ತದೆ.

ಅನ :–ಋಷಿಗಳೆಲ್ಲ ದೇಹಾಭಿಮಾನ ತೊರೆದ ಮಹಾತ್ಮರಲ್ಲವೇ?

ಅತ್ರಿ :—ದೇಹಾಭಿಮಾನ ತೊರೆದ ಮಹಾತ್ಮರಲ್ಲ. ತೊರೆಯಲು ಯತ್ನಿಸುತ್ತಿರುವ ಸಾಧಕರು. ಸಾವಿರಕ್ಕೊಬ್ಬ ಮೋಕ್ಷಾಕಾಂಕ್ಷಿ. ಅಂತ ಹಸರಲ್ಲಿ ಲಕ್ಷಕ್ಕೊಬ್ಬ ಮೋಕ್ಷಸಾಧಕ. ಕಾಮಿತಕ್ಕಾಗಿ, ಕೀರ್ತಿಗಾಗಿ, ಸಿದ್ಧಿಗಾಗಿ ತಪಸ್ಸು ಮಾಡುವವರು ದಾರಿ ತಪ್ಪುತ್ತಾರೆ. ಆದರೆ ನಿರಭಿಮಾನಿಯಾದವನಿಗೆ ಭಕ್ತಿ ತಾನಾಗಿ ಬರುತ್ತದೆ. ಮೋಕ್ಷ ಸಹಜವಾಗಿ ಲಭಿಸುತ್ತದೆ.

ಅನ :— ಭಕ್ತಿ- ಮೋಕ್ಷಗಳೆರಡೂ ಲಭಿಸಿರುವ ಮಹರ್ಷಿಗಳು ನೀವು.

ಅತ್ರಿ :—(ಸ್ಮಿತಭಾವದಲ್ಲಿ) ಅದು ನಿನ್ನ ಪ್ರೇಮದ ದೃಷ್ಟಿಯಲ್ಲಿ. ದೇವಿ. ಪಾಪಿಯಲ್ಲೂ ಪುರುಷೋತ್ತಮನನ್ನು ಕಾಣುವುದು ಪ್ರೇಮ. ಅನಂತ ಬ್ರಹ್ಮಾಂಡದ ಸೃಷ್ಟಿಕರ್ತನ ಅಲ್ಪಭಕ್ತ ನಾನು.

ಅನ :—ನನಗೆ ಭಕ್ತಿ, ಮೋಕ್ಷಗಳೊಂದೂ ತಿಳಿಯದು. ನನ್ನ. ದೊಂದೇ ಹಂಬಲ : ನಿಮ್ಮ ಮನದಲ್ಲಿ ನನ್ನ ಮನ, ನಿಮ್ಮಾತ್ಮದಲ್ಲಿ ನನ್ನಾತ್ಮ ಲೀನವಾಗೆಲೆಂಬುದೊಂದೇ ಹಂಬಲ.

ಅತ್ರಿ:—ದೇವಿ ಇದು ತಪಸ್ಸಲ್ಲವೆಂದುಕೊಳ್ಳಬೇಡ. ನಿರಭಿಮಾನಿಯಾಗಿ, ಸ್ವಾರ್ಥದ ಸೋಂಕೂ ಇಲ್ಲದೆ, ಸದಾ ಸೇವೆಯಲ್ಲಿ ನಿರತಳಾಗಿದ್ದೀಯ. ಋಷಿಗಳ ಧ್ಯೇಯವಾದ ಸತ್ಯ-ಅಹಿಂಸೆಯನ್ನು ನಿತ್ಯಜೀವನದಲ್ಲಿ ಆಚರಣೆಗೆ ತಂದಿದ್ದೀಯ. ನಿನ್ನ ನಿರಭಿಮಾನವೇ ನಿನಗೆ ಭಕ್ತಿ, ಮೋಕ್ಷಗಳನ್ನು ದೊರಕಿಸುತ್ತದೆ.

ಅನ:–ನನಗೊಂದೂ ತಿಳಿಯದು, ಸ್ವಾಮಿ. ನೋವರನ್ನು ಕಂಡರೆ ನನಗೆ ನೋವಾದಂತಾಗುವುದು. ದುಃಖಿಗಳನ್ನು ಕಂಡರೆ ನನಗೆ ದುಃಖ ಉಕ್ಕುವುದು. ಎಲ್ಲರ ದುಃಖವನ್ನೂ ತೊಡೆಯುವುದಾದರೆ ಅವರೆಲ್ಲರ ದುಃಖವನ್ನು ನಾನು ಹೊತ್ತೇನು. ಯಜ್ಞಭಂಗ ಮಾಡಲು ಬಂದ ರಾಕ್ಷಸರನ್ನು ಹೊಡೆದುರುಳಿಸಿದ್ದಾಗ, ಅವರ ಯಾತನೆ ನೋಡಿ ನನಗೆ ಅತೀವ ವೇದನೆಯಾಯ್ತು. ದೇವರು ಅವರಿಗೂ ಸದ್ಬುದ್ಧಿಯಿತ್ತು ಸಹಕರಿಸುವಂತೆ ಏಕೆ ಮಾಡಬಾರದು ಎಂದು ಮೊರೆಯಿಟ್ಟೆ.

ಅತ್ರಿ:–(ಹರ್ಷಿತರಾಗಿ) ದೇವಿ, ಎಲ್ಲರೂ ನಿನ್ನಂತಿದ್ದರೆ ಲೋಕವೇ ನಾಕವಾಗುತ್ತಿತ್ತು, ಆದರೆ ಇತರರ ಕಷ್ಟಕಾರ್ಪಣ್ಯ ನೋಡಿ ಹರ್ಷ ಪಡುವ ರಾಕ್ಷಸಪ್ರವೃತ್ತಿ ದಿನದಿನಕ್ಕೆ ಹೆಚ್ಚುತ್ತಿದೆ. ಆದ್ದರಿಂದಲೇ ಈ ದೇಶಕ್ಷೋಭೆ, ಈ ಜನಕ್ಷೋಭೆ! ನಿನ್ನಂತಹ ಸಾಧ್ವಿಯರು ನಕ್ಷತ್ರ ಗಳಂತೆ ಅಲ್ಲೊಬ್ಬರು ಇಲ್ಲೊಬ್ಬರು ಬೆಳಕು ನೀಡುತ್ತಿದ್ದಾರೆ.

ಅನ:–ನಮ್ಮ ಆಶ್ರಮಗಳು ಶಾಂತಿಯ ಬೀಡಾಗಿಲ್ಲವೇ ?

ಅತ್ರಿ:–ನಿಜ. ಬಹುಮಟ್ಟಿಗೆ ನಿಜ. ಅದಕ್ಕೆ ಕಾರಣ ನಿನ್ನಂತಹ ಸಾಧ್ವಿಯರು. ಆದರ್ಶಸತಿ ಎಂದು ನಿನ್ನನ್ನು ಹೊಗಳುತ್ತಿದ್ದಾರೆ. ದೇವಿ, ಸತೀಧರ್ಮವನ್ನು ಜಗತ್ತಿಗೆ ಸಾರುತ್ತಿದೆ ನಿನ್ನ ಜೀವನ.ಪರಮಾತ್ಮನಾದರೋ ವರಿಪೂರ್ಣ. ಭಕ್ತ ಹೇಗೆ ಇಚ್ಛಿಸಿದರೆ ಹಾಗೆ ಪ್ರಕಟನಾಗುತ್ತಾನೆ. ಬೇಡಿದೊಡನೆ ತಪ್ಪುಗಳನ್ನೆಲ್ಲ ಮನ್ನಿಸುತ್ತಾನೆ. ಅವನಿಗಾಗಿ ಎಲ್ಲವನ್ನೂ ತ್ಯಾಗಮಾಡುವುದು ಹೆಚ್ಚಲ್ಲ. ಆದರೆ ಅಪೂರ್ಣನಾದ, ಸದಾ ತಪ್ಪನ್ನೇ ಹುಡುಕುವ ಮಾನವನನ್ನು ದೇವನೆಂದು ಭಾವಿಸಿ ಸತೀಧರ್ಮವನ್ನು ಪಾಲಿಸುವುದು ಸುಲಭಸಾಧ್ಯವಲ್ಲ.

ಅನ :—ಅದರಲ್ಲೇನು ವಿಶೇಷತೆ ? ನನ್ನ ಸ್ವಭಾವಸಹಜವಾಗಿ ನಡೆಯುತ್ತೇನೆ. ನೀವು ತೃಪ್ತಿಪಟ್ಟರೆ ನನ್ನ ಹೃದಯ ತುಂಬುವುದು. ನೀವು ಬಳಿಯಿದ್ದರೆ ಸುಖದ ಸ್ವರ್ಗವೇ ಬೊರೆತಂತೆ ಆನಂದವಾಗುವುದು. ನಿಮ್ಮ ಹೊರತು ಬೇರೆ ಧ್ಯಾನವೇ ಆಗದು. ಎದೆಯೊಲವು ನಡೆಸಿನಂತೆ ನಡೆಯುತ್ತಿದ್ದೇನೆ. ನನ್ನದೇನು ಹೆಚ್ಚಳಿಕೆ ? (ಬಾಗಿಲ ಬಳಿ ಸದ್ದಾಗುವುದು) ಯಾರದು, ಭಾರ್ಗವಿಯೇ ?

(ಹೊರಗಿನಿಂದ 'ಅಲ್ಲ, ತಾಯಿ, ನಾನು ನುಮಂತ. ಒಳಗೆ ಬರಬಹುದೆ ?' ಎಂಬ ಧ್ವನಿ ಕೇಳುವುದು. ಅತ್ರಿಋಷಿಗಳು ಬರಲು ಹೇಳೆಂದು ಸಂಜ್ಞೆಮಾಡುವರು) ನೀನೊ ! ಬಾರಪ್ಪಾ ಮಗೂ. (ಎದ್ದು ಉತ್ಸುಕಳಾಗಿ ನಿರೀಕ್ಷಿಸುವಳು.)

(ಸುಮಂತ ಒಳಗಡೆಗೆ ಬಂದು ಇಬ್ಬರಿಗೂ ವಂದಿಸುತ್ತಾನೆ. ಸುಮಂತ ಸುಂದರ ಯುವಕ. ಒಳ್ಳೆಯ ತೇಜಸ್ಸಿ. ಉಡಿಗೆ—ತೊಡಿಗೆ ಸಾಮಾನ್ಯವಾಗಿದೆ.)

ಅತ್ರಿ:— ಕ್ಷೇಮವೇ ಸುಮಂತಾ ? ಕಾಶೀಯಾತ್ರೆ ಮುಗಿಸಿ ಕೊಂಡು ಬಂದು ತುಂಬ ದಿನಗಳಾಯಿತೇ ?

ಸುಮಂತ :— ತಮ್ಮ ಆಶೀರ್ವಾದಿಂದ ಕ್ಷೇಮ. (ಅನಸೂಯೆ ಹಣ್ಣಿನ ಬುಟ್ಟಿಯನ್ನು ಒಳಕ್ಕೊಯ್ಯುವಳು.) ನಿಮ್ಮ ಪಾದದಡಿ ಪಾಠ ಕಲಿತ ನನಗೆ ಕಾಶೀಯಾತ್ರೆಯ ಆವಶ್ಯಕತೆಯೇ ಇರಲಿಲ್ಲ. ಏನೋ ಹೋಗಿ ಬಂದೆ. ಒಂದು ತಿಂಗಳಾಯಿತು.

ಅತ್ರಿ :— ಛೇ. ಹಾಗೆನ್ನಲಾದೀತೇ ? ಆಕಾಶದಂತೆ ಅನಂತ ವಾದುದು ಜ್ಞಾನ. ನನಗೆ ಎಲ್ಲ ತಿಳಿದಿದೆ ಎಂಬ ದುರಭಿಮಾನ ಬಂದು, ಜ್ಞಾನದಾಹ ತೀರಿದ ದಿನವೇ ಪ್ರಗತಿ ನಿಂತಂತೆ. ಕಾಶಿಯಲ್ಲಿ ಏನೇನು ಕಂಡೆ, ವಿವರಿಸು !

ಸುಮಂತ :— ಆಹಾ, ಜೀವನಪಾವನವಾದ ಕಾಶೀಕ್ಷೇತ್ರ. ವಿಮಲ ಜಾನ್ಹವಿಯಲ್ಲಿ ಪಾಪದ ಮಾಲಿನ್ಯ ತೊಳೆದುಕೊಂಡು, ವಿಶ್ವೇಶ್ವರನ ದರ್ಶನ ಮಾಡಿದೆ. ಪ್ರಕೃತಿಮಾತೆಯ ಕಲೆಯ ಸೊಬಗನ್ನು ಕಣ್ತುಣಿಯೆ ಕಂಡೆ. ಅಲ್ಲಿಯ ಆಧ್ಯಾತ್ಮ ರಸಾನುಭೂತಿಯಲ್ಲಿ ಮನ-ವಣಿಯೆ ಮಿಂದೆ. ಈಗಲೂ ಅಲ್ಲಿ ಕಳೆದ ಕಾಲವನ್ನು ನೆನೆದರೆ ಮೈನವಿರೇಳುತ್ತಿದೆ. ಮಂದಗಮನೆ ಗಂಗೆ ಲೀಲಾಹ್ಲಾದದಿಂದ ಕೈಬೀಸಿ ಕರೆ ವಂತಾಗುತ್ತದೆ. (ಅನಸೂಯೆ ಎರಡು ತಟ್ಟೆಗಳಲ್ಲಿ ಹಣ್ಣುಗಳನ್ನು ತಂದಿಟ್ಟು ಅಲ್ಲಿಯೇ ನಿಂತು ಆಲಿಸುವಳು.) ನನಗಂತೂ ಆ ಸ್ಥಳವನ್ನು ಬಿಡಲು ಮನಸ್ಸೇ ಆಗಲಿಲ್ಲ. ಅಲ್ಲೇ ನಿಂತುಬಿಡಲೇ ಎನ್ನಿಸಿತ್ತು.

ಅತ್ರಿ:— ವತ್ಸಾ. ಅಲ್ಲಿ ನಿಲ್ಲದಿದ್ದರೆ ತಾನೇ ಏನು ? ಗೂಗೆ ಗುಡಿಯಲ್ಲಿದ್ದಾಕ್ಷಣ ಪುಣ್ಯ ಗಳಿಸುವುದೇ ? ನಿನ್ನೆದೆಯಲ್ಲಿ ಕಟ್ಟು ಕಾಶಿಯನ್ನು ! ಪವಿತ್ರತೆಯೇ ಕಾಶೀಪಟ್ಟಣ-ಭಕ್ತಿರಸವೇ ತ್ರಿವೇಣಿ-ಆತ್ಮ ಜ್ಞಾನವೇ ವಿಶ್ವೇಶ್ವರಸಖ್ಯ. ಕರುಣೆಯೇ ಭುವನೇಶ್ವರಿಯ ಭಾವ. ದೇಹಾಭಿಮಾನದ ಪೊರೆಯನ್ನು ಕಳಚಿ ಭಕ್ತಿರಸದಲ್ಲಿ ಮಿಂದು ಎಲ್ಲೆಡೆಯೂ ತುಂಬಿರುವ ವಿಶ್ವೇಶ್ವರನನ್ನು ಸೇವಿಸು. ಆಗ ನಿನ್ನೊಡಲೇ ಪವಿತ್ರ ಕಾಶಿಯಾಗುವುದು.

ಸುಮಂತ :— ಗುರುಗಳೇ, ನಿಮ್ಮ ಮಾತು ಕೇಳಿದಷ್ಟೂ ಸಾಲದೆನ್ನಿಸುತ್ತದೆ. ಅಮೃತೋಪಮವಾಗಿದೆ.

ಅನ :— ಭಾರ್ಗವಿಯೇಕೋ ಇನ್ನೂ ಬರಲಿಲ್ಲವಲ್ಲಾ !.... (ಬಾಗಿಲತ್ತ ನೋಡುವಳು.)

ಸುಮಂತ :— ಶೀಲೆಯೊಡನಿದ್ದಳು, ತಾಯಿ ! (ಅವನ ಕಣ್ಣುಗಳು ಅದರದಿಂದ ಮಿಂಚುವುವು.)

ಅತ್ರಿ:— ಭಾರ್ಗವಿ ಬಹು ಸೂಕ್ಷ್ಮಗ್ರಾಹಿನಿ. ಅವಳ ಪ್ರತಿಭೆಗೆ ಹೆದರಿ, ವಟುಗಳು ಅವಳೆದುರು ವಾದಗ್ರಸ್ತ ವಿಷಯವನ್ನೆತ್ತಲು ಅಂಜುತ್ತಾರೆ !

ಅನ :— ಸದಾ ಯಾವುದೋ ಗಂಭೀರಚಿಂತನೆಯಲ್ಲಿರುತ್ತಾಳೆ. ವಿವಾಹಯೋಗ್ಯಳಾಗಿದ್ದಾಳೆ. ಈ ವರೆಗೂ ಕೇಳಲು ಬಂದವರಿಗೆಲ್ಲ ನಿರಾಶೆಯಾಯಿತು. ವಿಧಿ ಎಂದಿಗೆ ಅವಳ ಲಗ್ನ ಮುಹೂರ್ತವಿಟ್ಟಿದ್ದಾನೋ. (ಸುಮಂತ ಅಶಾಂತಿಯಿಂದ, ಸಂಕೋಚದಿಂದ ಮೇಲೇಳುವನು.) ಆಗಲೇ ಹೊರಟಿಯಾ ಸುಮಂತಾ ?

ಸುಮಂತ :— (ಕೈಮುಗಿದು) ಇನ್ನೊನ್ಮೆ ಬರುವೆ. ಈಗ ಅಪ್ಪಣೆಕೊಡಿ ತಾಯಿ. ನಮಸ್ತೇ ಗುರುಗಳೇ.

ಅನ-ಅತ್ರಿ:— (ಪ್ರತಿವಂದಿಸಿ) ಆಗಾಗ ಬರುತ್ತಿರು, ವತ್ಸಾ.

(ಸುಮಂತ ಹೊರಗಡೆ ಹೋಗಿ ಮರೆಯಲ್ಲಿ ನಿಲ್ಲುವನು.)

ಅತ್ರಿ:— ದೇವಿ, ನನಗೆ ಸುಮಂತನನ್ನು ನೋಡಿ ಒಂದು ಯೋಚನೆ ತಲೆದೋರಿದೆ. ನಮ್ಮ ಭಾರ್ಗವಿಯನ್ನು ಏಕೆ ಸುಮಂತನಿಗೆ ಕೊಟ್ಟು ಲಗ್ನ ಮಾಡಬಾರದು ? ಅವನಿಗೂ ಅವಳ ಬಗ್ಗೆ ತುಂಬ ಪ್ರೇಮವಿದೆ.

ಅನ :— ನಿನ್ನೊಡನೆ ಹೇಳಿದನೇನು ?

ಅತ್ರಿ:—ಬಾಯ್ಬಿಟ್ಟು ಆಡುತ್ತಾನೆಯೇ ? ಭಾರ್ಗವಿಯ ವಿಷಯ ವೆತ್ತಿದಾಗ, ಅವನ ಮುಖಭಾವವನ್ನು ನೀನು ನೋಡಲಿಲ್ಲವೇ? ಭಾರ್ಗವಿಯ ಮನಸ್ಸು ಹೇಗಿದೆ— ತಿಳಿದು, ಅನಂತರ ವಿಚಾರ ಮಾಡೋಣ.

(ಹೊರಗಡೆ ಸುಮಂತನ ಮುಖ ಅರಳುವುದು. ಭಾರ್ಗವಿ ಬರುವುದನ್ನು ಕಂಡು ನಿಷ್ಕ್ರಮಿಸುವನು.)

ಅನ :— ಭಾರ್ಗವಿ ಮದುವೆಯೇ ಬೇಡವೆನ್ನುತ್ತಾಳೆ. ಅವಳ ಮಾತೇ ನನಗೆ ಒಗಟಾಗಿದೆ !

ಅತ್ರಿ:— (ಆಶ್ಚರ್ಯದಿಂದ) ಹೌದೇನು ?

ಅನ :— ನನ್ನೊಡನೆ ವಾದಕ್ಕೇ ಪ್ರಾರಂಭಿಸುತ್ತಾಳೆ. ನಾನು ಸೋತು ಸುಮ್ಮನಾಗುತ್ತೇನೆ.

ಅತ್ರಿ:— (ಹೆಮ್ಮೆಯಿಂದ)ಚೆನ್ನಾಯಿತು ! ಅಷ್ಟು ಕಿರಿಯವಳೊಡನೆ ಮಾತನಾಡಲಾರೆಯಾ ?

ಅನ :— ಹಾಸ್ಯಮಾಡುತ್ತಿದ್ದೀರಷ್ಟೇ ? ಅದೋ, ಭಾರ್ಗವಿ ಬರುತ್ತಿರುವ ಸದ್ದು.

ಅತ್ರಿ:— ನನಗಾವ ಸದ್ದೂ ಕೇಳಿಸಲಿಲ್ಲವಲ್ಲ ? ಕವಿಗೆ ಅರಿವಾಗದಿದ್ದರೂ ನಿನ್ನ ಮಾತೃಹೃದಯಕ್ಕೆ ಅರಿವಾಗುವುದೇನೋ !

(ಭಾರ್ಗವಿ ಬಾಗಿಲ ಬಳಿ ನಿಂತು ಅನುಮಾನಿಸುವಳು. ಬಿಳಿಯ ಸತ್ತಲವುಟ್ಟಿದ್ದಾಳೆ. ಒಳ್ಳೆಯ ತೇಜಸ್ಸೀ ವ್ಯಕ್ತಿತ್ವ.)

ಅತ್ರಿ:—ಸಿಜ. ಭಾರ್ಗವಿಯೇ ! ಬಾರಮ್ಮಾ. ಆಡುತ್ತಿದ್ದೆಯಾ?

ಭಾರ್ಗವಿ :— (ವಿನಮ್ರಳಾಗಿ) ಶೀಲೆಯೊಡನೆ ಹೂ ಗಿಡಗಳಿಗೆ ನೀರೆರೆಯುತ್ತಿದ್ದೆ.

ಅತ್ರಿ:— (ಮೇಲೆದ್ದು) ಅಶ್ವತ್ಥವೃಕ್ಷದಡಿ ಇರುವಂತೆ ಶಿಷ್ಯರಿಗೆ ಹೇಳಿ ಬಂದಿದ್ದೆ. ಅವರೊಡನೆ ಮಾತನಾಡಿ ಬರುತ್ತೇನೆ. (ಹೋಗುವರು.)

ಅನ :— ಶೀಲಾ ಮನೆಗೆ ಹೋದಳೇ ?

ಭಾರ್ಗವಿ :— ಇಲ್ಲಮ್ಮಾ. ಹೂ ಬಿಡಿಸುತ್ತಿದ್ದಳು.

ಅನ :— (ಅವಳನ್ನು ತುಂಬುಗಣ್ಣುಗಳಿಂದ ನೋಡುತ್ತಾ ಹೇಗೆ ಮಾತೆತ್ತಬೇಕೆಂಬುದು ತಿಳಿಯದೆ ಚಡಪಡಿಸುವಳು.) ಈಗ ತಾನೇ ಸುಮಂತ ಬಂದಿದ್ದ....

ಭಾರ್ಗವಿ :— ಹೌದು. ನಾನೂ ನೋಡಿದೆ— ನಮ್ಮೆದುರೇ ಹಾದು ಹೋದ.

ಅನ:– ಮಗೂ, ನಿನ್ನ ತಂದೆಗೂ ನಿನ್ನ ವಿವಾಹದ ಚಿಂತೆ–ನಿನಗೆ ಯೋಗ್ಯ ವರನನ್ನು ಹುಡುಕಬೇಕೆಂದು ತುಂಬಾ ಯತ್ನಿಸುತ್ತಿದ್ದಾರೆ. ಈಗ.... (ಭಾರ್ಗವಿ ಸಂತಪ್ತಳಾಗಿ ಹುಬ್ಬು ಗಂಟಿಕ್ಕಿ ಮುಸುಗುಟ್ಟುವಳು) ಏಕೆ ಮಗು ?

ಭಾ :—ಅಮ್ಮಾ ದಯವಿಟ್ಟು ಆ ವಿಷಯವನ್ನು ನನ್ನ ಮುಂದೆ ಎತ್ತಬೇಡ. ನಾ ಖಂಡಿತ ಮದುವೆಯಾಗುವುದಿಲ್ಲ.

ಅನ :—(ದೀನಳಾಗಿ) ಮಗೂ ಭಾರ್ಗವಿ, ಹೀಗೇಕೆ ಹೇಳುತ್ತೀಯಾ ? ಕೇಳಿದವರಿಗೆ ಏನೆಂದು ಹೇಳೋಣ ?

ಭಾ:–(ದೃಢವಾಗಿ) ಅಮ್ಮಾ, ನಿನಗೆ ನೋವು ಕೊಡಬೇಕೆಂದು ನನ್ನಿಷ್ಟವಿಲ್ಲ. ನನ್ನ ಮನಸ್ಸನ್ನು ಅರ್ಥ ಮಾಡಿಕೋ; ಕೇಳಿದವರಿಗೆ ದೇವರೇ ನನ್ನ ಪತಿಯೆಂದು ಹೇಳು. ನಿನಗೂ ಭಾರವಾಗಿರುವುದು ತಪ್ಪು. ದೇವರ ಸ್ವತ್ತಾದ ಕಂದ-ಮೂಲಗಳನ್ನು ತಿಂದು ಕಾಲಹಾಕುವೆನು ನಾ....

ಅನ :— (ಆರ್ತಳಾಗಿ) ಭಾರ್ಗವಿ, ಎಂತಹ ಮಾತು! ಮರಕ್ಕೆ ಕಾಯಿ ಭಾರವೇ ? ಇಂತಹ ಮಾತಾಡಬಹುದೇ? (ಕಣ್ಣೊರಸಿಕೊಂಡು) ಹಿಂದೆ ಯಾರು ಹೀಗೆ ಮಾಡಿದ್ದಾರೆ ? 'ಹೆಣ್ಣಾಗಿ ಹುಟ್ಟಿ ಸಹಜವಿಕಾಸ ಪಡೆಯುವುದಕ್ಕೆ ಪತಿಧರ್ಮವೇ ಶ್ರೇಷ್ಠ!' ಎಂದು ನಿನ್ನ ತಂದೆ ಸಹ ಹೇಳುತ್ತಾರೆ. ನಾ ಇನ್ನೇನು ಹೇಳಲಿ ?

ಭಾ :–(ಯೋಚಿಸುತ್ತಾ) ಅಮ್ಮಾ, ಕ್ಷಮಿಸು. ನನ್ನ ಮಾತಿಗೆ ವಿವರೀತ ಅರ್ಥ ಕಲ್ಪಿಸಿಕೊಂಡು ಸಿಟ್ಟಾಗಬೇಡ. ಎಲ್ಲಿ, ನನ್ನ ನೋಡಿ ಒಮ್ಮೆ ನಗು-ಹಾಗೆ! ನಿನ್ನಲ್ಲಲ್ಲದೆ ಬೇರೆ ಯಾರಲ್ಲಿ ಹೇಳಿಕೊಳ್ಳಲಿ? ಮಾತ್ರ ಮತ್ತೆ ಕಣ್ಣೀರಿಳಿಸಬಾರದು !

ಅನ :— ನೀನೇನೆಂದರೂ ಏನು ಮಾಡಿದರೂ ನಿನ್ನ ಮೇಲಿನ ಮಮತೆ ರವೆಯಷ್ಟು ಕಡಿಮೆಯಾಗದಮ್ಮಾ ನೀನು ನಿನಗನುರೂಪನಾದ ವನನ್ನು ವರಿಸು ಸುಮಂತ ನಿನ್ನ ಬಗ್ಗೆ ತುಂಬಾ ವಿಶ್ವಾಸದಿಂದಿದ್ದಾನೆ.

ಭಾ :—ಅಮ್ಮಾ, ಆ ವಿಚಾರ ಎತ್ತಬೇಡ. ಸುಮಂತ ನನಗೆ ಸೋದರಸಮಾನ. ಜ್ಞಾನಾರ್ಜನೆಯೊಂದೇ ಬಾಳಗುರಿ.

ಅನ :–ಮಗೂ, ಜ್ಞಾನಾರ್ಜನೆಯೊಂದೇ ಬಾಳಗುರಿ, ನಿಜ. ಆದರೆ ಋಷಿಗಳು ತಪಸ್ಸು ಮಾಡಿ ಭಗವಂತನ ಕೃಪೆಯಿಂದ ಜ್ಞಾನ ಪಡೆದರೆ, ಪತಿಯರು ಸಂಸಾರವನ್ನಿಟ್ಟೇ ತಪಸ್ಸನ್ನಾಚರಿಸಿ ಜ್ಞಾನ-ಮೋಕ್ಷಗಳನ್ನು ಗಳಿಸಬಹುದು. ಮೋಕ್ಷವೇ ನರನು ಪುರುಷಾರ್ಥ. ಋಷಿಗಳದು ಜ್ಞಾನಮಾರ್ಗವಾದರೆ, ಪತಿಯರದು ಭಕ್ತಿಮಾರ್ಗ.

ಭಾ :—ಅಮ್ಮಾ, ಜ್ಞಾನಮಾರ್ಗ ಯಾರೊಬ್ಬರ ಹಕ್ಕೂ ಅಲ್ಲ. ಋಷಿಗಳಿಗಿರುವಂತೆ ಸ್ತ್ರೀಯರಿಗೂ ಜ್ಞಾನಮಾರ್ಗದಲ್ಲಿ ಹಕ್ಕಿದೆ.

ಅನ :— ನನಗೆ ಹಕ್ಕಿನ ವಿಷಯ ತಿಳಿಯದಮ್ಮಾ, ಪತಿ-ಧರ್ಮ ಯಾವುದಕ್ಕೂ ಕಡಮೆಯಲ್ಲ. ಈಶ್ವರ ಸರ್ವಾಂತರ್ಯಾಮಿ. ಅವನನ್ನು ಕಲ್ಲುಮಣ್ಣುಗಳಲ್ಲೇ ಸಾಕ್ಷಾತ್ಕರಿಸಿಕೊಳ್ಳಬಹುದಾದರೆ, ಚೇತನವುಳ್ಳ ಮಾನವನಲ್ಲಿ ದೇವನನ್ನು ಕಾಣುವುದು ಅಸಾಧ್ಯವೇ? ಇಹಪರವೆರಡನ್ನೂ ಒಟ್ಟಿಗೇ ಸಾಧಿಸಲು ಪತಿಧರ್ಮವೇ ಸುಲಭ-ಸಾಧನ. ಜ್ಞಾನಮಾರ್ಗ ಕಷ್ಟಸಾಧ್ಯ ಮಗೂ! ಇಂದ್ರಿಯಗಳನ್ನು ಗೆದ್ದು, ವಾಸನೆಯನ್ನು ನಿಗ್ರಹಿಸಿ, ಮನಸ್ಸನ್ನು ಮುರ್ದಿಸಿ, ಆತ್ಮವನ್ನು ತನ್ನಲ್ಲಿಯೇ ಕಾಣಬೇಕು. ಆದರೆ ಸ್ತ್ರೀಯನ್ನು ನೋಡು. ಕ್ಷಮೆ, ಪ್ರೇಮ ಅಹಿಂಸೆ ಅನಳಿಗೆ ಪ್ರಕೃತಿದತ್ತವಾದ ವರಗಳು ದೈವೀಪ್ರಕೃತಿ ಪಡೆದಿರುವ ಅವಳಿಗೆ ಮೋಕ್ಷ ಅತಿ ಸುಲಭ.

ಭಾ:— (ಗಂಭೀರಳಾಗಿ) ಅಮ್ಮಾ, ನನಗೆ ಈ ಬಂಧನದ ಬದುಕು ಬೇಡ.

ಅನ :— (ಉತ್ಸಾಹದಿಂದ) ಬಂಧನ ? ಮಗು, ಬಂಧನವೆಲ್ಲಿ ಬಂತು ? ಮನುಷ್ಯನ ಬಂಧನವೇ ಬಂಧನ! 'ನಾನು' ಎಂಬುದನ್ನು ಮರೆತು ಕರ್ತವ್ಯವೆಂದು ಧರ್ಮಮಾರ್ಗದಲ್ಲಿ ನಡೆದರೆ ಎಲ್ಲಿದೆ ಬಂಧನ? ಆಗ ಬಂಧನವೆಲ್ಲ ಬಯಲು.

ಭಾ :— ಹಾಗಾದರೆ ನನಗಿನ್ನೂ ನನ್ನ ಕರ್ತವ್ಯವೇನೆಂದು ತಿಳಿದಿಲ್ಲ. (ದೃಢವಾಗಿ) ನನ್ನ ನಿಶ್ಚಿತ ಅಭಿಪ್ರಾಯ ಗೊತ್ತೇ ? ಜ್ಞಾನವಿಲ್ಲದೆ ಮೋಕ್ಷವಿಲ್ಲ. ಪ್ರಪಂಚದ ಅರ್ಥವಾಗದ ವ್ಯವಹಾರ ನೋಡಿ ನನಗೆ ಬೇಸರಬಂದಿದೆ. ನನ್ನ ಆದ್ಯಕರ್ತವ್ಯ ಜ್ಞಾನಾರ್ಜನೆ. ಸತ್ಯಕ್ಕಾಗಿ ನನ್ನ ಹೃದಯ ಚೀರಿಡುತ್ತಿದೆ. ಜ್ಞಾನಪಿಪಾಸೆ ನನ್ನ ಮನಸ್ಸನ್ನು ದಹಿಸುತ್ತಿದೆ. ಶುಷ್ಕವೇದಾಂತ ನನ್ನನ್ನು ತಣಿಸದು; ರೂಢಿ–ರೀತಿಗಳು ತೃಪ್ತಿಪಡಿಸವು. ಈ ಜಗದ ರಹಸ್ಯವನ್ನು, ಅನಂತತೆಯ ಆಂತರ್ಯವನ್ನು ಅರಿಯದಿರುವೆನಲ್ಲಾ ಎಂದು ನನ್ನೆದೆ ಕುದಿಯುತ್ತಿದೆ. ಇಹ–ಪರಗಳ ವಿಷಯ ನನಗೆ ತಿಳಿಯದು, ಸತ್ಯಾರ್ಥಿಯಾಗಿ ಬಾಳಿದಲ್ಲಿ ಮಾತ್ರ ನನಗೆ ಸುಖ ಸಿಗಬಹುದು. (ಉದ್ವೇಗದಿಂದ ಧ್ವನಿ ಕಂಪಿಸುವುದು.) ಅಮ್ಮಾ, ನಿನ್ನ ಮನದಲ್ಲಿ ಎಂದೂ ಈ ಜ್ಞಾನಪಿಪಾಸೆ ವಿಪ್ಲವ ಮಾಡಿಲ್ಲವೇ ? ಈ ತೃಷೆಯು ಮಾತುಗಳಿಂದ ತಣಿಯದು, ಸೂತ್ರಗಳು ಹಿಂಗಿಸವು. ಜಿಜ್ಞಾಸೆಯೊಂದೇ ಇದಕ್ಕೆ ಆಹಾರ. ನನ್ನ ಮನಸ್ಸಿನ ತುಮುಲದ ತೀಕ್ಷ್ಣತೆ ನಿನಗೆ ಗೊತ್ತೇ ? ಕತ್ತಿಯಲಗಿನ ಮೇಲೆ ನಿಂತಂತಿದೆ, ನನ್ನ ಸ್ಥಿತಿ ! ಸತ್ಯಾನ್ವೇಷಣೆಯಲ್ಲಿ ನಾನು ಸತ್ತರೂ ಚಿಂತೆಯಿಲ್ಲ! ಅದಕ್ಕಿಂತಲೂ ಉತ್ಕೃಷ್ಟ ಸಾವು ಬೇರೆಯಿಲ್ಲ. ಅದರೆ ಈ ಬಂಧನ ಮಾತ್ರ ಖಂಡಿತ ಬೇಡ.

ಅನ:—(ಆಶ್ಚರ್ಯ–ವಾತ್ಸಲ್ಯಗಳಿಂದ ನೋಡುತ್ತಾ) ಭಾರ್ಗವಿ! ಮಗೂ, ಹೀಗೆ ಮಾತನಾಡಿದುದನ್ನು ನಾ ಕೇಳಿರಲೇ ಇಲ್ಲ. ಇಷ್ಟು ಮಾತುಗಳನ್ನು ಹೇಗೆ ಕಲಿತೆ ?

(ಹೊರಗಿನಿಂದ ಶೀಲಾ ಕೂಗುವಳು— ನಿನ್ನ ಹರಿಣಿ ಮುಳ್ಳಿನ ಪೊದೆಯಲ್ಲಿ ಸಿಕ್ಕಿಕೊಂಡಿದೆ, ಬೇಗ ಬಾ'— ಎಂದು.)

ಭಾರ್ಗವಿ :— (ಕರುಣೆಯಿಂದ) ಅಯ್ಯೋ, ಮುಳ್ಳಿನಲ್ಲೇ ? ಬಂಪೆ (ಓಡುವಳು.)

ಅನ :— (ಹೆಮ್ಮೆ–ವಾತ್ಸಲ್ಯದಿಂದ) ಆಹಾ ! ಎಷ್ಟು ಸೊಗಸಾಗಿ ಮಾತನಾಡಿದಳು ! ಅವಳ ತೇಜಸ್ಸನ್ನು ಕಂದು ಮಮತೆ ಉಕ್ಕಿ, ಅವಳ ಭಾಷೆ, ಸಂಗೀತದ ಆಲಾಪನೆಯಂತೆ ಭಾಸವಾಯಿತು. ಅವಳೇನು ಹೇಳಿದಳೋ ಮರೆತೇ ಹೋಯಿತು! ಓ, ಮಹರ್ಷಿಗಳು ಬಂದರಲ್ಲಾ– ಅವರಿಗೆ ನಿನು ಹೇಳಲಿ ? ಅಯ್ಯೋ ನನ್ನ ಮುಂಕುತನವೇ !

(ಅತ್ರಿ ಮಹರ್ಷಿಗಳು ಬರುವರು.)

ಅತ್ರಿ:— ದೇವಿ, ಏನೆಂದಳು ಭಾರ್ಗವಿ ? ಎಲ್ಲಿಗೆ ಹೋದಳು ?

ಅನ:— ಮುಳ್ಳಿನಲ್ಲಿ ಹರಿಣಿ ಸಿಕ್ಕಿಕೊಂಡಿದೆಯೆಂದು ಶೀಲಾ ಕೂಗಿದಳು. ನೋಡ ಹೋದಳು.

ಅತ್ರಿ:— ಅದಿರಲಿ. ನೀನೇಕೋ ವ್ಯಗ್ರಳಾಗಿರುವೆಯಲ್ಲಾ ?

ಅನ:— ಅಬ್ಬಾ ! ಇಷ್ಟು ಹೊತ್ತೂ ನಾಗ್ಯುದ್ಧವನ್ನೇ ಹೂಡಿದ್ದಳು. ಸತ್ಯಾನ್ವೇಷಣೆಯೇ ಬಾಳ ಗುರಿ – ಜ್ಞಾನಮಾರ್ಗದಲ್ಲಿ ಎಲ್ಲರಿಗೂ ಹಕ್ಕುಂಟು–ಎಂದೆಲ್ಲಾ ವಾದಿಸಿದಳು. ಇಷ್ಟು ಮಾತನ್ನು ಎಲ್ಲಿ ಕಲಿತಳೆಂದು ನನಗೆ ಬಹಳ ಆಶ್ಚರ್ಯವಾಯಿತು !

ಅತ್ರಿ:— ಹೋಗಲಿ, ನೀನೇನು ಹೇಳಿದೆ ಹೇಳು.

ಅನ:— ನನಗೆ ಪ್ರತಿ ಹೇಳಲು ತಿಳಿಯಲೇ ಇಲ್ಲ. ಆದರೆ ಇಷ್ಟು ನಿಜ – ನಿಮ್ಮಲ್ಲಿ ಅವಳಿಗೆ ತುಂಬಾ ಗೌರವ, ಭಕ್ತಿ. ನೀವೆಂದ ಮಾತಿಗೆ ಎದುರಾಡದೆ ಒಪ್ಪುತ್ತಾಳೆ. ನೀವೇ ಅಪ್ಪಣೆ ಮಾಡಿ.

ಅತ್ರಿ:— ಅದೇನೋ ನಿಜ. ಆದರೆ ಅವಳಿಗಿಷ್ಟವಿಲ್ಲದ ಕಾರ್ಯವನ್ನು ಮಾಡಲು, ಅಪ್ಪಣೆ ವಿಧಿಸಲು ನಾನು ರಾಕ್ಷಸನೇ ? ಹಾಗೆ ಮಕ್ಕಳ ಭಕ್ತಿ ಗೌರವವನ್ನು ದುರುಪಯೋಗ ಪಡಿಸಬಾರದು. ಅವಳು ತನ್ನ ಮನಸ್ಸಾಕ್ಷಿಗೆ ಸರಿಯಾಗಿ ನಡೆದರೆ ಸಾಕು.

ಅನ:— ಆದರೆ ಅವಳಿನ್ನೂ ಹುಡುಗಿ. ಅವಳಿಗೆ ಲೋಕವ್ಯವಹಾರ ತಿಳಿಯುವುದೇ ?

ಅತ್ರಿ:— ದೇವಿ, ತೇಜಸ್ವಿನಿಯಾದ ಅವಳ ವಿಷಯದಲ್ಲಿ ಆ ಮಾತು ಹೇಳಬೇಡ. ನಮ್ಮಿಷ್ಟದಂತೆಯೇ ಮಕ್ಕಳು ನಡೆಯಬೇಕೆಂಬ ಹಟಬೇಡ. ಅವರ ಬಾಳಿಗಾನ ಮನಸ್ಸಾಕ್ಷಿಯ ಶ್ರುತಿಗೆ ಹೊಂದಿ ನಡೆದರೆ ಸಾಕು. ಆದರೆ ನಿಶ್ಚಿಂತಳಾಗು. ಇಂದಲ್ಲ ನಾಳೆ ಭಾರ್ಗವಿ ನಿನ್ನಿಚ್ಛೆಯಂತೆ ನಡೆವಳು. ಸತೀಧರ್ಮವನ್ನು ನಿತ್ಯಾನುಷ್ಠಾನಕ್ಕೆ ತಂದಿರುವ ನಿನ್ನ ಉದಾಹರಣೆಯೇ ಅವಳನ್ನು ನಿನ್ನ ಮಾರ್ಗಕ್ಕೆ ಎಳೆವುದು.

ಅನ:— (ಹರ್ಷಾಶ್ಚರ್ಯದಿಂದ) ಹೌದೇ ? ನೀವೆನ್ನುವುದು ನಿಜವೇ ?

ಅತ್ರಿ:— ನಿಜ. ನೀನಾಡಿದ್ದು ಅವಳಿಗೆ ಒಪ್ಪಿಗೆಯಾಗದಿರಬಹುದು. ಆದರೆ ನಿನ್ನ ಆದರ್ಶವ್ಯಕ್ತಿತ್ವ ಅವಳೆದೆಯಲ್ಲಿ ಶಾಶ್ವತ ಮುದ್ರೆಯೊತ್ತಿದೆ.

ಅನ:— ನಿಮ್ಮ ಮಾತು ಕೇಳಿ ನನಗೆಷ್ಟೋ ನೆಮ್ಮದಿಯಾಯ್ತು ! ಇನ್ನು ಪೂಜಾಕಾರ್ಯಕ್ಕೆ ಅಣಿಮಾಡಲೇ ?

ಅತ್ರಿ:— ಅಲ್ಲಿ ನೋಡು ಅನಸೂಯಾ— ಸಂಜೆಯ ಸೊಬಗಿನ ಸೌತಣವನ್ನು ! ಮಣ್ಣಿಂದ ಹುಟ್ಟಿ, ಮಣ್ಣಿನಿಂದಲೇ ಬೆಳೆದು ಮಣ್ಣಲ್ಲಿ ಬಿಡುಗುವುದೀ ಕಾಯ. ಈ ನಶ್ವರ ದೇಹವನ್ನು ನೆಚ್ಚಿ, ನೆಲಕ್ಕಾಗಿ ಹೊಡೆದಾಡುವ ಮೂಢರಿಗೆ ಏನೆನ್ನುವುದು ? ನಮ್ಮದೆನ್ನುವುದೇ ಇಲ್ಲದೆ ಈಶ್ವರನಲ್ಲಿ ಸ್ಥಿರನಂಬಿಗೆಯಿಟ್ಟು ಬಾಳುವವರೇ ಭಾಸುರೋತ್ತಮರಲ್ಲವೇ ? ದೇವಿ, ದಿನಕರ ಕಣ್ಮರೆಯಾಗುತ್ತಿದ್ದಾನೆ. ಬಾಳಿನಲ್ಲಿ ದಿನವೊಂದು ಕಳೆಯಿತು. ಸಾರ್ಥಕವಾಗಿಯೇ ಕಳೆದಿರುವೆವಲ್ಲವೇ ?

[ತೆರೆ ಬೀಳುವುದು.]

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳು

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ನೀನು ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಬುದ್ಧ

" ರಂಜನ " ಭಟ್ಟ, ಮದ್ರಾಸು

ಸತ್ತವನ ಹೆಣ ಕಂಡು ಅವನಾದ ಬುದ್ಧ
ಬದುಕಿಯೂ ಸತ್ತಿಹೆವು ಲಕ್ಷೋಪಲಕ್ಷ–
ಆದರೂ ಬಾರದಿಹ ನನ್ನ ನಿನ್ನಯ ಬುದ್ಧ.
ಒಂದು ಸಾವಿಗೆ ಹೆದರಿ, ಇವನಾದ ಬುದ್ಧ.
ಲೆಕ್ಕವಿಲ್ಲದೆ ಸಾಯೆ ಇವನಾದ ಕಟುಕ.
ಮುಗಿಯದಂತಹ ಕತೆಗೆ ಮುಕ್ತಾಯವೇಕೆ ?

ಸತ್ತವನ ಹೆಣಕಂಡು ಅವನಾದ ಬುದ್ಧ;
ಸತ್ತವನ ಕೊಲೆಗೈದು ಇವನಾದ ಕಟುಕ.
ಸಾಯೆನೆಂದರು ಬಿಡದೆ ಕರುಳಬಗೆದನು ಭೀಮ.
' ಬದುಕಿರುವೆ ದಮ್ಮಯ್ಯ ' ಹೆಡೆಯೆತ್ತಿ ಕೇಳಿದರೂ
ವಿಷದ ಹಲ್ಲಿಗು ಬಂತು ತಪ್ಪಿರದ ಸಾವು–
ಜೀವಹೋದರೆ ಮಾತ್ರ ಸಾವು ಬಂದಿತೆ ತಾನೆ ?

ಜೀವಹಿಂಡದೆ ರಕ್ತ ಹೀರಬಹುದಯ್ಯ !
ನೊಣನುಂಗಿ ನೊಣ ಬದುಕೆ,
ಯಾರಿಲ್ಲಿ ಬದುಕಿಹರು ? ಯಾರಿಲ್ಲಿ ಸತ್ತಿಹರು ?
ನೂರು ರೀತಿಯ ಲೆಕ್ಕ ಒಂದೆನುಗ್ಗಿಯ ಅಂಕೆ–
ಅದರೂ ಮುಗಿಯದಿದೆ ಲೆಕ್ಕ ಚುಕ್ತಾಯ–

* * * *

ಸಾಯುವಂಹ ಜೀವಿ ಏಕೆ ಯಾತರ ಚಿಂತೆ ?
ನೀ ಸತ್ತು ನಿಂತಾಗ, ಯಾರೇಕೆ ಬೇಕು ?
ಬುದ್ಧ ಬಂದರೂ ಬರಲಿ, ಕ್ಷುದ್ರನಿದ್ದರೂ ಇರಲಿ,
ಸತ್ತು ಸಾಯ್ವುದು ನಿನ್ನ ಬದುಕ–ರೀತಿ.
ಸಾವೆ ಸತ್ಯ; ಮಸಣ ನಿತ್ಯ; ಉಳಿದುದೆಲ್ಲವೂ ಮಿಥ್ಯ.
ಸುತ್ತಲೂ ನಡೆದಿಹುದು ಸತ್ತವರ ಸಂತೆ;
ಬುದ್ಧನೂ ಬಿದ್ದಿಹನು ಸಂತೆಯೊಳಗಿನ ಕಂತೆ.
ಸತ್ತವನ ಹೆಣಕಂಡು ಅವನಾದ ಬುದ್ಧ–
ನಿತ್ಯವೂ ಸತ್ತಿಹೆವು ಬಾಗದೆಯೆ ಬುದ್ಧ– !

ಭಾರತದ ಸಂಪತ್ತು!

ಶ್ರೀ. ಆರ್. ಸ್ಹಿ. ಹೊರಡಿ. ಹಾನೇರಿ

೧

ಆ ಉಸಿರಿಡುವ ಬಡದೇಹ– ಭಾರತದ ಸಂಪತ್ತು
ಬರಗಾಲ ಭೂತ ! ಜೀವಂತ ಹೆಣ ! ಅಲ್ಲ; ಊಟ ಒಪ್ಪೊತ್ತು.
ಕಲುನಾಗರಕೆ ಹಾಲೆರೆಯುವದು ನಮ್ಮ ಲೋಕ-ಭಕ್ತಿ !
ಅಯ್ಯೋ, ದೈನ್ಯತೆಯ ಜೀವಮೂರ್ತಿ, ನಿತ್ರಾಣ; ತೃಣಶಕ್ತಿ !

೨

ಇರುವ ರಕ್ತವು ಸುಡುತಿಹುದು ಎಡೆಬಿಡದೆ ಒದರಿ ಕೂಗಿ-
ಕರೆವ ಮನೆಯಿಲ್ಲ; ಮಣಿದಿರಲು ಬೆನ್ನೆಲುವು ಬಲವು ಹೋಗಿ !
ಹರಕು ಚಿಂದಿಯ ಹೊದ್ದ,ಹೊಟ್ಟೆ-ಬೆನ್ನಿಗೆ ಬಂದ ಕಂಪಿಸುವ ಮೈ
ಚರ್ಮದಾವರಣದ, ಒರಟು ಪರಟೆಯ ಹಿಡಿವ ಇದ್ದೊಂದೆ ಕೈ

೩

ಕರ್ಣಕೊರೆಯುವ ಕ್ರಂದನ, ಹಾಕುತಿದೆ ಧನಿಕರಿಗೆ ಬಂಧನ.
" ಕೊಟ್ಟು ಸಾಗಿರಿ ಮುಂದೆ " ಇಂದು " ಬಿಟ್ಟು ಸ್ವಾರ್ಥವ
ಹಿಂದೆ " ಎಂದು.
ಜಗವು ಕರೆಯುವದಿವನನು ಹೆಸರಿಟ್ಟು– " ದುಡಿಯಲಾರದ
ತಿರುಕ ! "
ಜನಕಿಲ್ಲ ಮನ, ಮರುಕ, ತೊಡೆಯಬಲ್ಲರೇ, ತಡೆಯಲಾರದ
ನರಕ ?

೪

ಎದೆಕೊರೆವ ಚಳಿ, ಗಾಳಿ, ಮಳೆ,– ಸೃಷ್ಟಿ ಮಾಡಿದೆ ದಾಳಿ-
ನಿಂಚು ಹೊಡೆಯುತು ಹೊಂಚಿ, ಮೋಡಗಳ ನಡು ಸೀಳಿ !
ಧನಮದದಲಿ ಮೆರೆದು ದಣಿವ ಧನಿಕ ದಿವಾನರ ಸೊಲ್ಲು–
ಅತ್ತ, ಮೋಟಾರು ಸೈಕಲ್ಲು – ಬಡವರ ಹೊಟ್ಟೆಗೆ ಕಲ್ಲು !

೫

ಮುಸಕು ಬೆಳಕಿನ ನಸುಕಿನಲಿ ಆ ಬಡವ ಬರುವ.
ಉಸುಕು ಮನದವರ ಹೊಗಳಿ, ಹಿಂಡಿ ಹಣ ತರುವ.
ಅದೋ, ಇಲ್ಲ ಅಡ್ಡಿ, ಮೈಯೊಡ್ಡಿ ನಿಂತಿಹನು ಸ್ಥಿರವಾಗಿ ಜಗಕೆ.
ಇದೋ, ಕಡ್ಡಿ ಕೈಯೊಡ್ಡಿ ಬೇಡುತಿಹನಲ್ಲಿ ಹಣಕಾಗಿ ಜನಕೆ.

ಕಾಮಾಖ್ಯಾ ಮಂದಿರ. ೩.

(ನರಕಾಸುರನ ವೃತ್ತಾಂತ)

ಲೇ. ಪಿ. ವಿ. ಗುಡಿ, ಗೋಹಟ್ಟಿ (ಆಸಾಮು)

ಭಾರತದ ಪ್ರಾಚೀನ ಸಂಸ್ಕೃತಿಯ ಬಗೆಗೆ ಕುತೂಹಲವಿರುವ ಉತ್ಸಾಹಿಗಳು, ಎಲ್ಲಿಗೆ ಹೋದರೂ ಆ ಸಂಸ್ಕೃತಿಯ ಗಣಿಯನ್ನು ಅಗಿಯುತ್ತಿರುವರು. ನೀಲಾಚಲದ ಕಾಮಾಖ್ಯಾದೇವಿಯು ವಿಶೇಷ ವೃತ್ತಾಂತಗಳೇನು ? ಎಂಬುದನ್ನು ಲೇಖಕರು ಇಲ್ಲಿ ಸಂಗ್ರಹಿಸಿರುವರು.

ಮುಂಜಾನೆ ಕೋಗಿಲೆಗಳ ಮಧುರಧ್ವನಿಯನ್ನು ಕೇಳುತ್ತ ಎಚ್ಚರಗೊಂಡೆ. ಸಂಪಿಗೆ ಹೂಗಳ ಸುಗಂಧಪೂರಿತ ತಂಗಾಳಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತಿತ್ತು. ಅಂತೂ ೨-೩ ದಿವಸಗಳಲ್ಲಿಯೇ ಮನೆ ಹುಡುಕುವ ಸಮಸ್ಯೆ ಬಗೆಹರೆದದ್ದು ನನ್ನ ಸುದೈವವೆಂದೇ ಹೇಳಬೇಕು. ಹೋಟೆಲಿನಲ್ಲಿ ಇದೇ ಕೊನೆಯ ದಿನವೆನ್ನುವುದು ಮನಸ್ಸಿಗೆ ಸಮಾಧಾನವನ್ನುಂಟು ಮಾಡಿತ್ತು. ಆದರೂ ಮನೆ ಹುಡುಕುವುದಕ್ಕೆಂದು ಈ ೨-೩ ದಿವಸಗಳ ವರೆಗೆ ಅಡ್ಡಾಡಿದುದು ಸಾಕಷ್ಟು ಹೊಸ ಅನುಭವ ತಂದುಕೊಟ್ಟಿತ್ತು.

ಹಾಸಿಗೆಯಿಂದ ಎದ್ದು ಬಾಲ್ಕನಿಗೆ ಬಂದು, ಕೆಳಗೆ ರಸ್ತೆಯ ಕಡೆಗೆ ನೋಡಿದೆ. ಚಿಕ್ಕ ಬಾಲಕರು ಮೊದಲು ಮಾಡಿ ಎಷ್ಟೋ ಜನರು ಹೂಗಳನ್ನು ಒಯ್ಯುವುದು ಕಣ್ಣಿಗೆ ಬಿತ್ತು. ಮೊದಲನೆಯ ದಿವಸ ಇದನ್ನು ನೋಡಿದಾಗ, ಇಲ್ಲಿಯ ಜನರು ಸೌಂದರ್ಯ ಪ್ರೇಮಿಗಳೋ ಅಥವಾ ಧಾರ್ಮಿಕ ಜೀವಿಗಳೋ ಇದ್ದಿರಬೇಕು; ಆದುದರಿಂದಲೇ ಹೂಗಳೆಂದರೆ ಇವರಿಗೆ ತುಂಬಾ ಇಷ್ಟವಿದ್ದಿರಬೇಕೆಂದು ಅನಿಸಿತ್ತು. ಆದರೆ ಇಂದು ಅವರನ್ನು ನೋಡಿ ಒಂದು ತರದ ಜುಗುಪ್ಸೆ ಹುಟ್ಟಿತು. ನಿನ್ನೆ ಮುಂಜಾನೆ ನನ್ನ ಸಹೋದ್ಯೋಗಿ ಮಿತ್ರನೊಬ್ಬನ ಮನೆಗೆ ಹೋಗಿದ್ದೆ. ಅವನ ಮನೆ ಚಿಕ್ಕದಿದ್ದರೂ ಮನೆಯ ಮುಂದೆ ಹೂದೋಟ, ಹಿಂದಿನ ಮಗ್ಗಲು ಪಲ್ಲೆ-ಕಾಯಿ ಬೆಳೆದ ಹಿತ್ತಲು ನೋಡುವ ಹಾಗಿದ್ದುವು. ಇಲ್ಲಿಯದೊಂದು ವೈಶಿಷ್ಟ್ಯವೇ:— ಪ್ರತಿಯೊಂದು ಮನೆಯ ಮುಂದೆ ಹೂದೋಟ. ನಾನು ನನ್ನ ಮಿತ್ರನನ್ನು ಕೇಳಿದೆ. 'ಇಲ್ಲಿ Gardening ನ ಹುಚ್ಚು ಎಲ್ಲರಿಗೂ ಇದ್ದಂತಿದೆ ?'

ಅವನೆಂದ 'ಹೌದು ಅದರ Liking ನನಗೂ ಇದೆ; ಅದಕ್ಕಾಗಿಯೇ ನಾನಾತರದ ಹೂವಿನ ಗಿಡಗಳನ್ನು ತಂದು ಹಚ್ಚಿದ್ದೇನೆ. ಆದರೇನು ಫಲ ? ಆ ಹೂವುಗಳನ್ನು ನೋಡುವ ಭಾಗ್ಯವೇ ನನಗಿಲ್ಲ.'

ನನಗರ್ಥವಾಗಲಿಲ್ಲ. ಅವನು ಹೆಚ್ಚಿಗೆ ಸ್ಪಷ್ಟೀಕರಿಸಿದ : 'ನಾನೊಳ್ಳೇ ಜಾಗೃತಿಯಿಂದ ಗಿಡಗಳನ್ನು ಬೆಳೆಯಿಸುತ್ತೇನೆ. ಸಂಜೆಗೆ ಎಷ್ಟೋ ಸುಂದರ ಮೊಗ್ಗೆಗಳನ್ನೂ ನೋಡುತ್ತೇನೆ. ಆದರೆ ಮುಂಜಾನೆ ನಾನೆಷ್ಟು ಬೇಗನೆ ಎದ್ದರೂ, ಆ ಅರಳಿದ ಹೂಗಳು ಕಾಣುವುದೇ ಇಲ್ಲ. ಈ ಮುಳ್ಳುತಂತಿಯ ಬೇಲಿ ಹಾಕಿಸಿದೆ. ಆದರೂ ಉಪಯೋಗ ಬೀಳಲಿಲ್ಲ. ನನ್ನೊಬ್ಬನದೇ ಅಲ್ಲ. ಹೂದೋಟಗಳಿದ್ದ ಎಲ್ಲ ಜನರ ಹಣೆಯ ಬರೆಹವೂ ಹೀಗೇ !! ಗಿಡಗಳನ್ನು ಹಚ್ಚುವವರೊಬ್ಬರು ಹೂ ತೆಗೆದು ಕೊಂಡು ಹೋಗುವವರು ಮತ್ತೊಬ್ಬರು. ಮುಂಜಾನೆ ನಸುಕಿನಲ್ಲಿ ಎದ್ದು ನೋಡಿದರೆ, ಆ ಜನರನ್ನು— ಹೂ ತೆಗೆದುಕೊಂಡು ಹೋಗು ವವರನ್ನು ನೀವೂ ಕಾಣಬಹುದು.....

ನನಗೊಳ್ಳೇ ವಿಚಿತ್ರವೆನಿಸಿತು— ಈ ಜನರು ಇಷ್ಟು ನಸುಕಿನಲ್ಲಿ ಎದ್ದು ಬೇರೆಯವರ ತೋಟದೊಳಗಿನ ಹೂಗಳನ್ನು Loot ಮಾಡಿ ಕೊಂಡು ಹೋಗುವುದರ ಉದ್ದೇಶವೇನು ? ಈ ೨-೩ ದಿವಸಗಳಲ್ಲಿ ಇಡಿ ಊರನ್ನೇ ಮನೆ ಹುಡುಕುವುದಕ್ಕೋಸುಗ ಅಡ್ಡಾಡಿದ್ದೇನೆ. ಪೇಟೆಯಲ್ಲಿ ಹೂ ಮಾರುವುದನ್ನು ನೋಡಿಲ್ಲ; ಹೆಂಗುಸರು ಹೂಗಳನ್ನು ಮುಡಿಯುವುದಿಲ್ಲ (ಆದರೆ ನಾನಾತರದ ಬಣ್ಣದ ರಿಬನ್ನುಗಳನ್ನು ಮಾತ್ರ ಉಪಯೋಗಿಸುತ್ತಾರೆ); ಇನ್ನು ದೇವರಪೂಜೆಗಾಗಿ ಹೂಗಳನ್ನು ಉಪಯೋಗಿಸುತ್ತಾರೆನ್ನಬೇಕೇ ?— ಈ ರೀತಿಯಾಗಿ ಬೇರೆಯವರ ತೋಟದಲ್ಲಿ ಕಳವು ಮಾಡಿ ತಂದ ಹೂಗಳ ಮೇಲೆಯೇ ದೇವರಿಗೆ ಇಷ್ಟವೆ ? ಪ್ರಾಮಾಣಿಕತನದಿಂದ ದೊರಕಿಸಿದ್ದನ್ನು ಭಕ್ತಿಯಿಂದ ಅರ್ಪಿಸಿದರೆ ಮಾತ್ರ ದೇವರು ಪ್ರೀತನಾಗುತ್ತಾನೆಂಬದು ಎಲ್ಲರಿಗೂ ತಿಳಿದ ವಿಷಯ; ಅಥವಾ ಹೂಗಳನ್ನು ಮನೆಯಲ್ಲಿ ಚೆಂದಕ್ಕಾಗಿ ಉಪಯೋಗಿ ಸುತ್ತಾರೆನ್ನಬೇಕೇ ?— ಅದಕ್ಕಾಗಿ ಈ ಹೂಗಳೇಕೆ ? ಇವುಗಳಿಗಿಂತ ಸುಂದರವಾಗಿ ಕಾಣುವ ಕಾಗದದ ಹೂಗಳನ್ನು ಉಪಯೋಗಿಸುವುದು ಉತ್ತಮವಲ್ಲವೇ ? ಪ್ರತಿದಿನ ಮುಂಜಾನೆ ಎಲ್ಲರಿಗಿಂತ ಬೇಗನೆ ಎದ್ದು, ಬೇರೆಯವರ ತೋಟದೊಳಗಿನ ಹೂಗಳನ್ನು ತರುವುದಕ್ಕಿಂತ ಒಂದು ಸಾರೆ ಆ ಕಾಗದದ ಹೂಗಳನ್ನು ಕೊಂಡರಾಯಿತು.

ಪ್ರಶಾಂತವಾದ ಮುಂಜಾನಿನ ವಾತಾವರಣದಲ್ಲಿ ಈ ಹೂಗಳ ವಿಚಾರದಿಂದ ಮನಸ್ಸಿನ ಶಾಂತತೆ ಕದಡಿದಂತಾಯಿತು. ತಲೆ ಝಾಡಿಸಿ ಬ್ರಹ್ಮಪುತ್ರ ನದಿಯ ಕಡೆಗೆ ನೋಡಿದೆ. ನಂಡೆಯ ಮೇಲೆ ಅಲ್ಲಲ್ಲಿ ಹುಲ್ಲು ತಿನ್ನುತ್ತ ನಿಂತಿದ್ದ ಆಕಳುಗಳು ಕಣ್ಣಿಗೆ ಬಿದ್ದುವು. ಮೊದಲನೆಯ ದಿವಸ ನೋಡಿದಾಗ—ಎಡಬಲವಲ್ಲಿಯ ಗುಡ್ಡದ ಸಾಲುಗಳು, ಹಸುರು ಹುಲ್ಲಿನಿಂದ ತುಂಬಿದ ನದಿಯ ತೀರ, ಅಲ್ಲಿ ಮೆಲುಕಾಡಿಸುತ್ತ ನಿಂತಿದ್ದ

ಆಕಳುಗಳ ಹಿಂಡುಗಳು–ಇಲ್ಲಿಯೆ ಸೃಷ್ಟಿಸೌಂದರ್ಯವನ್ನು ನೂರ್ಮಡಿ ಹೆಚ್ಚಾಗಿಸಿದಂತೆ ಕಂಡಿತ್ತು. ಆದರೆ ಇವತ್ತು ನೋಡಿದೊಡನೆ,-ನಿನ್ನೆ ರಿಕ್ಷಾವಾಲಾ ಹೇಳಿದ ಮಾತೇ ನೆನಪಾಯಿತು— ನಿನ್ನೆ ಸಾಯಂಕಾಲ ಹೋಟೆಲಿಗೆ ಮರಳಿ ಬರುವಾಗ ಹೊತ್ತಾದ್ದರಿಂದ. ಬಸ್ಸುಗಳು ಸಿಗಲಿಲ್ಲ. ರಿಕ್ಷಾಮಾಡಿಕೊಂಡು ಬರಬೇಕಾಯಿತು. ದಾರಿಯಲ್ಲಿ ಅನೇಕ ಕಡೆಗೆ ಆಕಳುಗಳ ಹಿಂಡುಗಳು ನಿಂತುಬಿಟ್ಟಿವೆ. ಹೋಗಿ ಅವುಗಳನ್ನು ನುಗಿಸಿದರೂ ಅಲುಗಾಡಲಿಲ್ಲ. ಅಂತೂ ೧೫–೨೦ ನಿಮಿಷಗಳೆಲ್ಲಿ ೩–೬ ಕಡೆಗೆ ಇಳಿದು ಬರುವಂತಾಯಿತು. ಬಸ್ಸಿನಲ್ಲಿ ಬರುವಾಗಲೂ ಇದೇ ಹಣೆಯ ಬರೆಹವೇ. ಯಾವಾಗಲೂ ದಾರಿಯಲ್ಲಿ ನಡುವೆಯೇ (ರಸ್ತೆಗೆ ಅಡ್ಡನಾಗಿ) ನಿಂತ ಎಷ್ಟೋ ಆಕಳುಗಳನ್ನೂ ನೋಡಬಹುದು. ಅವುಗಳಿಗೆ ಪೆಪರಿಕೆ ಇರುವುದೇ ಇಲ್ಲ. ನನ್ನ Staff Carನ ಡ್ರೈವ್ಹರ ಚೇಷ್ಟೆಯಿಂದ ಹೇಳುತ್ತಿದ್ದ— 'ಡ್ರೈವ್ಹರಿಗೆ ಲೈಸೆನ್ಸ್ ಕೊಡುವಾಗ ಕೆಲವು ಸಲಹೆಗಳನ್ನು ಕೊಡುತ್ತಾರಂತೆ—

೧) ಮೋಟರು ಹೊಡೆಯುವಾಗ ಹುಡುಗರು ಅಡ್ಡಬಂದರೆ ಅವರ ಹಿಂದಿನಿಂದ ಮೋಟರು ಹೊಡೆದುಕೊಂಡು ಹೋಗಬೇಕಂತೆ. ಯಾಕೆಂದರೆ, ಅವರ ದೃಷ್ಟಿ ಯಾವಾಗಲೂ ಮುಂದೆಯೇ ಇರುತ್ತದಾದ್ದರಿಂದ ಅವರು ಮುಂದೆಯೇ ಓಡುತ್ತಾರೆ.

೨) ಮುದುಕರು ಅಡ್ಡಬಂದರೆ, ಅವರ ಮುಂದಿನಿಂದ ಹೊಡೆದುಕೊಂಡು ಹೋಗಬೇಕು. ಯಾಕೆಂದರೆ ಅವರಲ್ಲಿ ಚಟುವಟಿಕೆ ಕಡಿಮೆ ಇರುವುದರಿಂದ, ಅವರು ಹಿಂದಕ್ಕೆ ಸರಿಯುತ್ತಾರೆಯೇ ವಿನಾ ಮುಂದೆ ಹೋಗುವುದಿಲ್ಲ.

೩) ಎಮ್ಮೆ ಅಥವಾ ಕತ್ತೆ ಮುಂದೆ ಇದ್ದರೆ ಮೋಟರು ನಿಲ್ಲಿಸಿಯೇ ಬಿಡಬೇಕಂತೆ ಯಾಕೆಂದರೆ ಅವು ಎತ್ತಕಡೆಗೆ ತಿರುಗುತ್ತವೆಯೋ ಹೇಳಲಿಕ್ಕೆ ಬರುವುದಿಲ್ಲ.

ನಾನು ಯೋಚಿಸಿದೆ :— ಈ ಮೂರನೆಯ ಗುಂಪಿಗೆ ಗೌಹಾಟಿಯ ಆಕಳಗಳನ್ನು ಕೂಡ ಸೇರಿಸಬೇಕೆಂದು. ರಿಕ್ಷಾದವನು ಅನ್ನುತ್ತಿದ್ದ: 'ಈ ಆಕಳುಗಳು ರಸ್ತೆಗಳನ್ನೇ ತಮ್ಮ ಮನೆಯನ್ನಾಗಿ ಮಾಡಿಕೊಂಡಿವೆ. ನಾವು ಹೊದಲು ಇವುಗಳನ್ನು ದಾರಿಯಿಂದ ಆಚೆಗೆ ದಬ್ಬಬೇಕು' ಅನಂತರ ರಿಕ್ಷಾ ಹೊಡೆಯಬೇಕು. ಪಾಕಿಸ್ತಾನದಲ್ಲಿ ಆಡುಗಳನ್ನೆಲ್ಲ ಇಲ್ಲದಂತೆ ಮಾಡಬೇಕೆಂದು ಕಾಯಿದೆ ಮಾಡಿದ್ದಾರಂತೆ. ಇಲ್ಲಿಯೂ ಹಾಗೆಯೇ.....ಆದರೆ ! ನವ್ಯ ಧರ್ಮವೊಂದು ಇದೆ— ಆಕಳನ್ನು ತಾಯಿಯೆಂದು ತಿಳಿಯಬೇಕೆಂತೆ.....' ನನ್ನ ಕಡೆಗೆ ತಿರುಗಿ ಹೇಳಿದ: 'ನೋಡಿ, ನಮ್ಮ ಮನೆಯಲ್ಲಿ ಆಕಳುಗಳು ಇಲ್ಲದಿದ್ದರೂ ದಿನಾಲೂ ಮುಂಜಾನೆ ಎದ್ದ ಕೂಡಲೆ ಆಕಳ ಸಗಣಿ–ಕೆಲಸ ಮಾಡಬೇಕಾಗುತ್ತದೆ ನಮ್ಮ ಹಿತ್ತಲಿನಲ್ಲಿ ಬೆಳೆದ ಅಲ್ಪ ಸ್ವಲ್ಪ ಕಾಯಿಪಲ್ಯೆಯನ್ನು ಈ ಆಕಳುಗಳಿಂದ ಉಳಿಸಿಕೊಳ್ಳುವುದೂ ಅಸಾಧ್ಯವಾಗಿದೆ. ಎಲ್ಲಿಂದಲೋ ಯಾರವೋ ಆಕಳುಗಳು, ರಾತ್ರಿಯಲ್ಲಿ ಬಂದು, ಬೆಳೆದ ಕಾಯಿಪಲ್ಯೆಗಳನ್ನೆಲ್ಲ ತಿಂದು, ಮನೆಯ ಸುತ್ತಮುತ್ತಲೂ ಸಾಕಷ್ಟು ಸಗಣಿ ಹಾಕಿ ಹೋಗುತ್ತವೆ '

'ನಾನು ಮೊನ್ನೆ ಮೊದಲನೆಯ ಸಾರೆ ನೋಡಿದಾಗ, ನೋಡಿದುದೆಲ್ಲ ಸುಂದರವೆನಿಸಿತ್ತು. ಆದರೆ ಇಂದು ನೋಡಿದ್ದೆಲ್ಲ ವಿಪರೀತ ಭಾವನೆಯನ್ನೇ ಹುಟ್ಟಿಸುತ್ತಿದೆಯಲ್ಲ !! ' ಎಂದುಕೊಂಡು, ನೀಲಾಚಲದತ್ತ ತಿರುಗಿದೆ. ಕೂಡಲೆ ಪಂಡಿತಜಿಯವರ ನೆನಪಾಯಿತು. ಕಾಮಾಖ್ಯಾ ಮಂದಿರದ ಬಗ್ಗೆ ಮತ್ತು ಆ ಮಂದಿರವನ್ನು ಕಟ್ಟಿಸಿದ ನರಕಾಸುರನ ಬಗ್ಗೆ ಹೆಚ್ಚಿಗೆ ತಿಳಿಯಬೇಕೆಂಬ ಆಶೆ ಹೆಚ್ಚಾಯಿತು. ಮುಂಜಾನೆಯ ಫಲಾಹಾರ ಮುಗಿಸಿ ಅವರ ಕಡೆಗೆ ಹೋಗಬೇಕೆಂದು, ಪ್ರಾತರ್ವಿಧಿಗಳನ್ನು ತೀರಿಸುವುದಕ್ಕೆ ಹೊರಟೆ.

* * * *

ನಾನು ಪಂಡಿತಜಿಯವರಲ್ಲಿ ಹೋದಾಗ, ಅವರು ತಮ್ಮ ಸಿಬಿ ಮನೆಯಲ್ಲಿ ಕುಳಿತಿದ್ದರು. ನನ್ನನ್ನು ನೋಡಿ ಅಲ್ಲಿಂದಲೇ ಕರೆದರು. ಅವರು ಅಲ್ಲಿ ಕೈಮಗ್ಗದ ಮೇಲೆ ಏನೋ ನೇಯುತ್ತಿದ್ದರು. ಇಲ್ಲಿ ಇದೊಂದು ವಿಶೇಷದ ಸಂಗತಿ. ಎಷ್ಟೋ ಜನರ ಮನೆಯಲ್ಲಿ ಕೈಮಗ್ಗಗಳು ಕಂಡು ಬರುತ್ತವೆ. ಪಂಜಾಬದಲ್ಲಿ ಹೊಲಿಯುವ ರಾಟಗಳಿದ್ದಂತೆ ಇಲ್ಲಿ ಕೈಮಗ್ಗಗಳೆಂದು ಹೇಳಬಹುದು. ಅಲ್ಲಿಯ ಜನರು ಹೊಲಿಗೆ-ಹೆಣಿಕೆಗಳಲ್ಲಿ ನಿಷ್ಣಾತರಿದ್ದಂತೆ ಇಲ್ಲಿ ನೇಯುವುದರಲ್ಲಿ.

ನನ್ನನ್ನು ನೋಡಿ ' ಏನು ೨–೩ ದಿವಸ ಕಾಣಲೇ ಇಲ್ಲವಲ್ಲ ?' ಎಂದು ಕೇಳಿದರು. 'ಅಹುದು, ಮನೆಯ ವಿಚಾರ ಮುಗಿದಂತಾಯಿತು. Departmental Quarter allot ಆಗಿದೆ!' ಎಂದು ನಾ ಹೇಳಿದೆ.

' ಕಾಮಾಖ್ಯಾ ಮಂದಿರಕ್ಕೆ ಎಂದು ಹೋಗುವುದು ?' ಎಂದು ನಗುತ್ತ ಕೇಳಿದರು.

' ಅದರ ವಿಷಯವನ್ನೆಲ್ಲ ನಿಮ್ಮಿಂದ ತಿಳಿದುಕೊಂಡ ನಂತರವೇ' ಎಂದು ನಾನೂ ನಗುತ್ತಲೇ ಉತ್ತರಕೊಟ್ಟೆ.

' ನರಕಾಸುರನು ಪೂಜಿಸಿದ ದೇವತೆಯೆಂದ ಕೂಡಲೆ ಗಾಬರಿಯಾಯಿತೇ ? ಅಸುರನೆಂದು ಹೆಸರಿದ್ದರೂ ಅವನು ಶ್ರೀ ವಿಷ್ಣುವಿನ ಪುತ್ರನೆಂಬದನ್ನು ಮರೆಯಲಾಗದು. ' ಅವರೆಂದರು.

' ಅವನ ಜನ್ಮೇತಿಹಾಸವನ್ನೇ ಕೇಳಬೇಕಾಗಿದೆ.' ನಾನು ನುಡಿದೆ ಅವರು ಪ್ರಾರಂಭಿಸಿದರು:

' ನರಕಾಸುರನ ಜನ್ಮೇತಿಹಾಸ ಒಳ್ಳೇ Interesting ಇದೆ. ಆದರೆ ಅದರಲ್ಲಿಯ ಎಷ್ಟೋ ವಿಷಯ ನಂಬಲಸಾಧ್ಯವಾಗಿದೆ. ' ನಮ್ಮ ವೇದ-ಪುರಾಣಗಳಲಿಯ ಅನೇಕ ಸಂಗತಿಗಳಿಗೆ ನಿಜವಾದ ಅರ್ಥವೇ ಬೇರೆ, ತೋರಿಕೆಯದು ಮಾತ್ರವಲ್ಲ! ' ಎಂದು ಹೇಳುತ್ತಾರೆ. ಹಾಗೇನಾದರೂ ಇದ್ದರೆ ಇರಬಹುದು.

ಮಹಾಭಾರತದ ಯುದ್ಧದಲ್ಲಿ ಪ್ರಾಗ್ಜ್ಯೋತಿಷದ ಭಗದತ್ತನ ವಿಷಯ ಬರುತ್ತದೆ— ತುಂಬಾ ಮುದುಕ, ಆದರೆ ಬಹಳೇ ಶೂರ. ಅರ್ಜುನನಿಗೆ ಅವನನ್ನು ಸೋಲಿಸುವುದು ಅಸಾಧ್ಯವಾದುದರಿಂದ, ಶ್ರೀ ಕೃಷ್ಣನ ಯುಕ್ತಿಯ ಸಹಾಯ ಬೇಕಾಗುತ್ತದೆ. ಭಗದತ್ತನ ವಿಷಯವಾಗಿ ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ:— ' ಇವನು

ದೊಡ್ಡ ಪಂಡಿತ, ಶೂರಾಗ್ರಣಿ ಮತ್ತು ನಿನ್ನ ತಂದೆಯಾದ ಪಾಂಡುವಿನ ಕೇವಲ ಮಿತ್ರ .... ' ಭಗದತ್ತನ ಮಗಳಾದ ಭಾನುಮತಿಯನ್ನು ದುರ್ಯೋಧನನು ಲಗ್ನವಾದುದರಿಂದ, ಭಗದತ್ತನು ಯುದ್ಧದಲ್ಲಿ ತನ್ನ ಅಳಿಯನ ಪಕ್ಷವಹಿಸಬೇಕಾಯಿತು. ಈ ಭಗದತ್ತನೇ ನರಕಾಸುರನ ಮಗ. ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿ ಭಗದತ್ತನನ್ನು ಪ್ರಾಗ್ಜ್ಯೋತಿಷದ ಪಟ್ಟಕ್ಕೆ ಕೂಡಿಸಿದನಂತೆ. ಅಂದ ಬಳಿಕ ನರಕಾಸುರನು ದ್ವಾಪರಯುಗದಲ್ಲಿರಬೇಕಾಯಿತು. ಆದರೆ ನರಕಾಸುರನು ಭೂಮಿಯ ಮಗನಾದ್ದರಿಂದ ಭೌಮನೆಂದೂ ಹೆಸರಿದೆ. ವರಾಹಾವತಾರದಲ್ಲಿ ಶ್ರೀ ವಿಷ್ಣುವು ಪೃಥ್ವಿಯನ್ನು ತರುವಾಗ ಅದ ಸಂಪರ್ಕದಿಂದ, ಪೃಥ್ವಿಯ ಉದರದಿಂದ ನರಕಾಸುರನು ಹುಟ್ಟಿದನೆಂಬ ಉಲ್ಲೇಖವೂ ಇದೆ. ಅಂದ ಬಳಿಕ ವರಾಹಾವತಾರದ ಕಾಲಕ್ಕೆ ಹುಟ್ಟಿದ ನರಕಾಸುರ ದ್ವಾಪರ ಯುಗದ ವರೆಗೂ ಇದ್ದನೆಂಬುದು ಸಂಬಲಾಗದ ವಿಷಯ. ಆದರೂ ಕಾಲಿಕಾಪುರಾಣದಲ್ಲಿದ್ದಂತೆ ಅವನ ವಿಷಯ ನಿಮಗೆ ಹೇಳುತ್ತೇನೆ. ಐತಿಹಾಸಿಕ ದೃಷ್ಟಿಯಿಂದ ಚರ್ಚಿಸಲರ್ಹವಾದ ಕೆಲವು ವಿಷಯಗಳು ಅದರಲ್ಲಿ ಸಿಗುತ್ತದೆ.

ನರಕಾಸುರನ ವಿಷಯವಾಗಿ ನಮಗೆ ಗೊತ್ತಿದ್ದ ಕೆಲವು ವಿಷಯ ಗಳನ್ನೆಲ್ಲ ಕಲಿಹಾಕಿ ಒಂದು ಪೂರ್ಣ ಕತೆಯನ್ನು ಹೆಣೆದಂತಿದೆ– ಕಾಲಿಕಾ ಪುರಾಣದಲ್ಲಿ ಬರುವ ಅವನ ವಿಷಯ. ಅಥವಾ ಅದೇ ನಿಜ ವಾಗಿದ್ದು ನಮಗೇನೇ ಸಂಪೂರ್ಣ ಇತಿಹಾಸ ಗೊತ್ತಿಲ್ಲವೋ ಹೇಳಲಾ ಗದು.

ವರಾಹಾವತಾರದಲ್ಲಿ ಪೃಥ್ವಿಯ ಉದರದಲ್ಲಿ ನರಕಾಸುರನು ಜನಿಸಿ ದನಷ್ಟೆ ! ! ಆದರೆ ದೇವತೆಗಳೆಲ್ಲ ಗಾಬರಿಯಾದರು. ರಾವಣನೊಬ್ಬ ನಿಂದಲೇ ಪೃಥ್ವಿಯಲ್ಲಿ ಹಾಹಾಕಾರವೆದ್ದಿರುವಾಗ, ನರಕಾಸುರನೊಬ್ಬ ಹುಟ್ಟಿದರೆ ಭೂಮಿಯ ಮೇಲೆ ಹೆಚ್ಚು ಉಲ್ಲೋಲ ಕಲ್ಲೋಲವಾಗ ವಾಗಬಹುದೆಂದು ಅವರು ಆಗ ಅವನನ್ನು ಹುಟ್ಟಗೊಡಲಿಲ್ಲ. ರಾವಣನ ಸಂಹಾರವಾಗುವವರೆಗೂ ಅವನು ಪೃಥ್ವಿಯ ಉದರವಲ್ಲಿಯೇ ಉಳಿಯ ಬೇಕಾಯಿತು. ಅವನು ಹುಟ್ಟಿದ ನಂತರ (ರಾಮಾವತಾರದ ನಂತರ) ಜನಕ ಮಹಾರಾಜನೇ ಅವನ ಸಾಕುತಂದೆಯಾದ. ಪೃಥ್ವಿಯು ಕಾತ್ಯಾಯಿನಿಯೆಂಬ ಹೆಸರಿನಿಂದ ಜನಕಮಹಾರಾಜನ ದಾಸಿಯಾಗಿ ನರಕಾಸುರನ ಸಂರಕ್ಷಣೆಯಲ್ಲಿ ನಿಂತಳು. ಆರ್ಯಧರ್ಮಕ್ಕನುಸಾರ ವಾಗಿ ಅವನ ಉಪನಯನಾದಿ ಕರ್ಮಗಳು ಜರುಗಿ, ಕ್ಷತ್ರಿಯರಿಗನು-ರೂಪವಾದ ವಿದ್ಯಾಭ್ಯಾಸ ಪ್ರಾರಂಭವಾಯಿತು. ಪ್ರತಿಯೊಂದು ವಿಷಯದಲ್ಲಿಯೂ ನರಕಾಸುರನೇ ಹೆಚ್ಚು ಪ್ರಗತಿ ತೋರಿಸುತ್ತಿದ್ದುದ ರಿಂದ, ಉಳಿದ ರಾಜಪುತ್ರರೂ ಮತ್ತು ರಾಣಿಯರೂ ಅಸೂಯೆ ಪಡ ತೊಡಗಿದರು. ಇವನ್ನು ತಿಳಿದು ಕಾತ್ಯಾಯಿನಿಯು (ಪೃಥ್ವಿಯು), ನರಕಾಸುರನಿಗೆ ಯಾರಾದರೂ ಅಪಾಯ ಮಾಡಬಹುದೆಂದು ಹೆದರಿ, ಅಲ್ಲಿಂದ ಬೇರೆ ಕಡೆಗೆ ಹೋಗುವ ಯೋಚನೆ ಮಾಡತೊಡಗಿದಳು. ಕಡೆಗೆ ಕಾಶೀಯಾತ್ರೆಯ ನೆವಮಾಡಿ ನರಕಾಸುರನನ್ನು ತನ್ನ ರಕ್ಷಣೆ ಗೆಂದು ಕರೆದುಕೊಂಡು ಕಾಶಿಗೆ ಬಂದಳು. ಅಲ್ಲಿ ವಿಷ್ಣುವು ಅವರನ್ನು ಭೆಟ್ಟಿಯಾಗಿ ಪ್ರಾಗ್ಜ್ಯೋತಿಷಕ್ಕೆ ಅವರನ್ನು ಕರೆತಂದ. ಅಲ್ಲಿ ಕಾಮಾಖ್ಯಾ ದೇವಿಯ ಪ್ರತಿಷ್ಠಾಪಣೆ ಮಾಡಿ, ಅವಳ ಸೇವೆಗೆ ನರಕಾಸುರನನ್ನು ನೇಮಿಸಿದ. ನರಕಾಸುರನು ಪ್ರಾಗ್ಜ್ಯೋತಿಷವನ್ನು ಗೆದ್ದುಕೊಂಡು ಅಲ್ಲಿಯೇ ರಾಜನಾಗಿ ಕಾಮಾಖ್ಯಾ ಮಂದಿರವನ್ನು ಕಟ್ಟಿಸುತ್ತಾನೆ. ಪ್ರಾಗ್ಜ್ಯೋತಿಷವು ಮೊದಲು ಮ್ಲೇಚ್ಛರ ರಾಜ್ಯ. ನರಕಾಸುರನು ರಾಜನಾದ ಬಳಿಕ ಎಷ್ಟೋ ಆರ್ಯರು ಅಲ್ಲಿ ಬಂದು ನೆಲೆಸಲಿಕ್ಕೆ ಸಹಾಯಮಾಡುತ್ತಾನೆ.

ಅದೇ ನೀಳೆಯಲ್ಲಿ ನೆರೆಯ ಶೋಣಿತಪುರವಲ್ಲಿ (ಈಗಿನ ತೇಜ ಪುರ) ಬಾಣಾಸುರನು ರಾಜನಾಗಿದ್ದ– (ಇದೇ ಬಾಣಾಸುರನ ಮಗ ಳಾದ ಉಷೆಯ ಜೊತೆಗೆ ಕೃಷ್ಣನ ಮೊಮ್ಮಗ ಅನಿರುದ್ಧನ ಲಗ್ನ ವಾಯಿತು). ಬಾಣಾಸುರನು ಶಿವಭಕ್ತ; ತನ್ನ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ, ಅಗಾಧ ಶಕ್ತಿಯನ್ನು ಪಡೆದು ಎಲ್ಲ ಕಡೆಗೂ ತನ್ನ ಪ್ರಭಾವ ಬೀರಿದ್ದ. ಆರ್ಯಧರ್ಮದಲ್ಲಿಯೇ ಹುಟ್ಟಿ ಬೆಳೆದ, ಕಾಮಾಖ್ಯಾ ದೇವಿಯ ಪೂಜಕನಾದ ನರಕಾಸುರನು ಸಹ ಈ ಬಾಣಾಸುರನ ಪ್ರಭಾವದಲ್ಲಿ ಸಿಲುಕಿ, ಅವನ ಮಿತ್ರನಾದ; ಅನಂತರ ಕ್ರಮೇಣ ಆರ್ಯರ ಕಡೆಗೆ ನಿರ್ಲಕ್ಷ್ಯಭಾವನೆಯನ್ನು ತೋರತೊಡಗಿದ.

ಹೀಗಿರುವಾಗ ಒಂದು ದಿವಸ ವಸಿಷ್ಠ ಮುನಿಗಳು ಕಾಮಾಖ್ಯಾ ದೇವಿಯ ದರ್ಶನಕ್ಕೆಂದು ಅಲ್ಲಿಗೆ ಬಂದರು. ಆದರೆ ನರಕಾಸುರನು ಅವರಿಗೆ ಕಾಮಾಖ್ಯಾ ದರ್ಶನಕ್ಕೆ ಅನುಮತಿ ಕೊಡಲಿಲ್ಲ. ಆಗ ಅವರು ಸಿಟ್ಟಿಗೆದ್ದು ನರಕಾಸುರನಿಗೆ ಈ ರೀತಿಯಾಗಿ ಶಾಪಕೊಟ್ಟರು :

೧) ನೀನು ನನಗೆ ಕಾಮಾಖ್ಯಾದೇವಿಯ ದರ್ಶನಕ್ಕೆ ಅನು-ಮತಿ ಕೊಡದ್ದರಿಂದ ಅವಳು ಇಲ್ಲಿಂದ ಅದೃಶ್ಯಳಾಗುತ್ತಾಳೆ– ನಿನ್ನಿಂದ ದೂರವಾಗುತ್ತಾಳೆ.

೨) ನಿನ್ನ ಈ ಕೃತ್ಯದಿಂದ ಆರ್ಯಧರ್ಮಕ್ಕೇನೇ ನೀನು ಕಲಂಕಪ್ರಾಯನಾದ್ದರಿಂದ, ನಿನ್ನ ತಂದೆಯಿಂದಲೇ ನೀನು ಕೊಲ್ಲಲ್ಪ ಡುವೆ. ನಿನ್ನ ಮರಣದ ನಂತರವೇ ನಾನು ಕಾಮಾಖ್ಯಾ ದೇವಿಯ ದರ್ಶನಕ್ಕೆ ಬರುವೆ.

ಆನಂತರ ಅವರು ಅಲ್ಲಿಯೇ ೭-೮ ಮೈಲು ದೂರದಲ್ಲಿದ್ದ ಸಂಧ್ಯಾ ಚಲಕ್ಕೆ ಹೋಗಿ ತಪಸ್ಸಿಗೆ ಕುಳಿತರು. (ಈ ಸ್ಥಳ ಗೌಹಾಟಿಯಿಂದ ೭-೮ ಮೈಲು ದೂರದಲ್ಲಿದೆ; ವಸಿಷ್ಠಾಶ್ರಮವೆಂದೇ ಕರೆಯಲ್ಪಡುತ್ತದೆ).

ನರಕಾಸುರನು ವಸಿಷ್ಠರ ಶಾಪದಿಂದ ಗಾಬರಿಯಾಗಿ, ಕಾಮಾಖ್ಯಾ ಮಂದಿರಕ್ಕೆ ಓಡಿದ. ಆದರೆ ಆ ಸ್ಥಳ ಸ್ಮಶಾನದಂತೆ ಕಾಣುತ್ತಿತ್ತು. ಅಲ್ಲಿ ಕಾಮಾಖ್ಯಾದೇವಿಯ ಸುಳಿವೇ ಇರಲಿಲ್ಲ. ಇದರಿಂದ ಮತ್ತಷ್ಟು ಭಯಭೀತನಾಗಿ, ಉಪಾಯಗಾಣದೆ ನರಕಾಸುರನು ತನ್ನ ಮಿತ್ರ-ನಾದ ಬಾಣಾಸುರನನ್ನು ಹೊರೆಹೊಕ್ಕ. ಅವನ ಸಲಹೆಯ ಮೇರೆಗೆ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ, ಅಗಾಧಶಕ್ತಿಯನ್ನು ಪಡೆದ. ಈಗ ಅವನಿಗೆ ಆರ್ಯರ ಮೇಲಿನ ದ್ವೇಷ ನುತ್ತೂ ಹೆಚ್ಚಾಯಿತು. ದುರ್ಗಮವಾದ ಪರ್ವತ ಶಿಖರಗಳ ನಡುವ್ಯದಲ್ಲಿ ತನ್ನ ರಾಜಧಾನಿಯನ್ನು ಕಟ್ಟಿಕೊಂಡು ಜನರಿಗೆ ಚಿತ್ರ ಹಿಂಸೆಯನ್ನು ಕೊಡಲು ಪ್ರಾರಂಭಿಸಿದ. (ಆ ಸ್ಥಳದಲ್ಲಿ ನರಕಾಸುರಪುರವೆಂಬ ಹಳ್ಳಿ ಇನ್ನೂ ಇದೆ) ಎಷ್ಟೋ ಜನ

ಸುಂದರ ತರುಣಿಯರನ್ನು ಅಪಹರಿಸಿ ಕಾರಾಗೃಹದಲ್ಲಿಟ್ಟ. ಕೊನೆಗೆ ಇವನಿಂದ ಅನ್ಯಾಯ ಹಿಂಸೆ ಹೆಚ್ಚಾಗಲು, ಕೃಷ್ಣನು ದ್ವಾರಕೆಯಿಂದ ಬಂದು ಇವನನ್ನು ಯುದ್ಧದಲ್ಲಿ ಕೊಲ್ಲಬೇಕಾಯಿತು. ಆಗ ಕಾಮಾಖ್ಯಾ ದೇವಿಯು ಕೃಷ್ಣನ ಮಗ್ಗಿಲಲ್ಲಿಯೇ ನಿಂತುಕೊಂಡು, ಕ್ರೋಧಾವೇಶದಿಂದ ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ ತನ್ನೊಂದಿಗೆ ಯುದ್ಧ ಮಾಡುವುದು ನರಕಾಸುರನಿಗೆ ಕಂಡಿತಂತೆ.

ನರಕಾಸುರನನ್ನು ಕೊಂದನಂತರ ಕೃಷ್ಣನು ಅವನ ಮಗನಾದ ಭಗದತ್ತನಿಗೆ ಪಟ್ಟಕಟ್ಟಿ, ಕಾರಾಗೃಹದಲ್ಲಿದ್ದ ತರುಣಿಯರನ್ನೆಲ್ಲ ಮುಕ್ತಗೊಳಿಸಿ ದ್ವಾರಕೆಗೆ ಮರಳಿದನಂತೆ. (ಆ ದಿವಸವನ್ನು ನರಕಚತುರ್ದಶಿ-ಪೃಥ್ವಿಯನ್ನು ನರಕಾಸುರನ ಪೀಡೆಯಿಂದ ಮುಕ್ತಗೊಳಿಸಿದ ದಿನಸನೆಂದು ಇನ್ನೂ ಆಚರಿಸುತ್ತೀವೆ. ಇದೇ ದಿವಸನೇ ದೀಪಾವಳಿಗೆ ಪ್ರಾರಂಭ). ಇದೇ ಭಗದತ್ತನೇ ಪಾಂಡವರ ತಂದೆ—ಪಾಂಡುರಾಜನ ಮಿತ್ರನೆಂದು ಮೇಲೆ ಹೇಳಿದೆನಷ್ಟೆ! ಈತನು ಶೂರಾಗ್ರಣಿ; ತೀರ ನುಡುಕನಾಗಿದ್ದರೂ ಅರ್ಜುನನಿಗೆ ಇವನನ್ನು ಕೊಲ್ಲುವುದು ಅಸಾಧ್ಯನಾಯಿತು. ಕಡೆಗೆ ಕೃಷ್ಣನ ಯುಕ್ತಿಯ ಸಹಾಯವೇ ಬೇಕಾಯಿತು. - ಭಗದತ್ತನಿಗೆ ಬಹಳೇ ವಯಸ್ಸಾಗಿದ್ದುದರಿಂದ, ಅವನ ಹಣೆಯ ಮೇಲಿನ ನಿರಿಗೆಗಳು ಜೋತುಬಿದ್ದು ಕಣ್ಣು ಮುಚ್ಚಿಬಿಡುತ್ತಿದ್ದುವು. ಆದ್ದರಿಂದ ಯುದ್ಧದ ಕಾಲಕ್ಕೆ ಅವನು ಅರಿವೆಯಿಂದ ಹಣೆಯನ್ನು ಕಟ್ಟಿಕೊಂಡಿರುತ್ತಿದ್ದ. ಕೃಷ್ಣನ ಸಲಹೆಯ ಮೇರೆಗೆ ಮೊದಲು ಅರ್ಜುನನು ತನ್ನ ಬಾಣದಿಂದ ಆತನ ಹಣೆಗೆ ಕಟ್ಟಿದ ಅರಿವೆಯನ್ನು ಕತ್ತರಿಸಿದ. ಕೂಡಲೆ ಹಣೆಯ ಮೇಲಿನ ನಿರಿಗೆಗಳು ಜೋತುಬಿದ್ದು ಕಣ್ಣಿಗೆ ಪಡದೆ ಹಾಕಿದಂತಾಗಿ, ಅವನು ಯುದ್ಧ ಮಾಡಲಸಮರ್ಥನಾದ. ಆದೇ ವೇಳೆಗೆ ಆತನು ಅರ್ಜುನನ ಬಾಣದಿಂದ ಹತನಾದ ....'

'ಮಹಾಭಾರತದಲ್ಲಿಯೇ ಓದಿದಂತಿದೆ— ವಿಷ್ಣುವು ನರಕಾಸುರನಿಗೆ ವೈಷ್ಣವಾಸ್ತ್ರ ಕೊಟ್ಟಿದ್ದನೆಂದು ....' ಎಂದು ನಾನು ಕೇಳಿದೆ.

ಅವರು ಹೇಳಿದರು: 'ಅಹುದು. ಪೃಥ್ವಿಯು ತನ್ನ ಮಗನಾದ ನರಕಾಸುರನ ಹಿತಕ್ಕೋಸುಗ ವಿಷ್ಣುವನ್ನು ಪ್ರಾರ್ಥಿಸಿ ಅವನಿಂದ ವೈಷ್ಣವಾಸ್ತ್ರ ದೊರಕಿಸಿಕೊಂಡಿದಳು. ವೈಷ್ಣವಾಸ್ತ್ರ— ಅಂದರೆ ವಿಷ್ಣುವಿನ ಶಕ್ತಿ— ಅದೇ ಕಾಮಾಖ್ಯಾ ದೇವಿ ಇರಬಹುದು. ದುರ್ಗಾ— ಆದಿ ಶಕ್ತಿ— ಇದು ಆರ್ಯದೇವತೆ. ವಿಷ್ಣುವು ನರಕಾಸುರನನ್ನು ಕಾಮಾಖ್ಯಾ ದೇವಿಯ ಪೂಜಕನನ್ನಾಗಿ ಮಾಡಿದನೆಂಬದು ಇದೇ ಅರ್ಥದಲ್ಲಿರಬಹುದು. ಇನ್ನೂ ಒಂದು ವಿಷಯವೆಂದರೆ ಆ ವೈಷ್ಣವೀ ಶಕ್ತಿಯನ್ನು ದಯೆಪಾಲಿಸುವಾಗ, ವಿಷ್ಣುವು ಇವನಿಗೆ ಎಚ್ಚರಿಕೆ ಕೊಟ್ಟಿದ್ದನಂತೆ 'ನೀನು ದ್ವಿಜರಿಗೆ— ಆರ್ಯರಿಗೆ ವಿರೋಧವಾಗಿ ನಡೆದುಕೊಂಡರೆ, ಆ ಶಕ್ತಿಯು ನಿನ್ನಲ್ಲಿ ಇಲ್ಲದಂತಾಗುವುದು' ಎಂದು. ಅದೇ ರೀತಿಯಾಗಿ ನರಕಾಸುರನು ವಸಿಷ್ಠ ಮುನಿಗಳಿಗೆ ಅಪಮಾನ ಮಾಡಿದ ಕೂಡಲೆ, ಕಾಮಾಖ್ಯಾ ದೇವಿಯು ಅಲ್ಲಿಂದ ಅದೃಶ್ಯಳಾದಳು, ಮತ್ತು ವಸಿಷ್ಠರ ಶಾಪದ ಮೇರೆಗೆ ನರಕಾಸುರನು ತನ್ನ ತಂದೆಯಾದ ಕೃಷ್ಣನಿಂದಲೇ (ವಿಷ್ಣುವಿನ ಅವತಾರ) ಸಂಹರಿಸಲ್ಪಟ್ಟ.'

'ಐತಿಹಾಸಿಕ ದೃಷ್ಟಿಯಿಂದ ವಿವೇಚಿಸತಕ್ಕ ಸಂಗತಿಗಳು ಈ ವಿಷಯದಿಂದ ಏನು ಕಂಡು ಬರುತ್ತವೆ?' ಎಂದು ನಾನು ಕೇಳಿದೆ.

ಅವರು ಹೇಳಿದರು: 'ಈಗಿನ ಇತಿಹಾಸ ಸಂಶೋಧಕರು 'ಕಾಲಿಕಾ ಪುರಾಣ' ಇಲ್ಲವೆ 'ಯೋಗಿನೀ ತಂತ್ರ' ಗಳಲ್ಲಿ ಹೇಳಿದ್ದೆಲ್ಲವನ್ನೂ ನಂಬುವುದಿಲ್ಲ. ಅವೆರಡರಲ್ಲಿಯ ವಿಷಯಗಳನ್ನು ಕಲಿಹಾಕಿ ಅವುಗಳನ್ನು ಪುರಾತನ ಇತಿಹಾಸದ ಸಂಗತಿಗಳಿಗೆ ಹೋಲಿಸಿ, ಸಂಭವಿಸಿರಬಹುದಾದದ್ದನ್ನು ಊಹಿಸಿದ್ದಾರೆ.— "ನರಕಾಸುರನು ಬೆಳೆದದ್ದು ಜನಕಮಹಾರಾಜನ ಹೆತ್ತಿರ— ಆರ್ಯಸಂಸ್ಕಾರದಲ್ಲಿ. ಮ್ಲೇಚ್ಛರನ್ನು ಸೋಲಿಸಿ ಇಲ್ಲಿ ರಾಜನಾದದ್ದಲ್ಲದೆ, ಎಷ್ಟೋ ಜನ ಆರ್ಯರು ಇಲ್ಲಿ ನೆಲೆಸುವುದಕ್ಕೆ ಸಹಾಯ ಮಾಡುತ್ತಾನೆ. ಕಾಮಾಖ್ಯಾ ದೇವಿಯ ಪ್ರತಿಷ್ಠಾಪನೆ ನಡೆಯುತ್ತದೆ. ಆದಿ ಶಕ್ತಿ-ಆದಿಮಾತೆಯ ಮಂದಿರ, ಅವಳ ಪೂಜೆಗೆ ಉತ್ತೇಜನ (ಆದಿಮಾತೆ- ದುರ್ಗಾದೇವತೆ ಆರ್ಯ ದೇವತೆಯೆಂದು ಮಹಾಭಾರತದಲ್ಲಿ ಉಲ್ಲೇಖವಿದ್ದೆ; ಎಂದರೆ ಆರ್ಯರ ಸಂಸ್ಕೃತಿಯನ್ನು ಇಲ್ಲಿ ಹರಡಲಿಕ್ಕೆ ಪ್ರಯತ್ನಿಸುತ್ತಾನೆ. ಆದರೆ ದುರದೃಷ್ಟಕ್ಕನುಸಾರವಾಗಿ ಅವನು ಶಿವೋಪಾಸಕನಾದ ಬಾಣಾಸುರನ ಪ್ರಭಾವಕ್ಕೊಳಗಾಗಿ, ಆರ್ಯರನ್ನು ನಿರ್ಲಕ್ಷ್ಯಿಸಲು ಪ್ರಾರಂಭಿಸುತ್ತಾನೆ.'

'ಕ್ಷಮಿಸಿ ಒಂದು ವಿಷಯ.' ನಾನು ನುಡಿದೆ. 'ಕಾಮಾಖ್ಯಿ ದೇವಿಯ ಪ್ರತಿಷ್ಠಾಪನೆ ಮಾಡುವಾಗ, ದೇವಿಯ ಪ್ರತಿಮೆಯನ್ನು ಉಪಯೋಗಿಸಬಹುದಾಗಿತ್ತಲ್ಲ? ಆದರೆ ಪ್ರತಿಮೆಯ ಬದಲು ಯೋನಿ-ಮುದ್ರೆ-ಸ್ತ್ರೀ ಜನನೇಂದ್ರಿಯವನ್ನೇ ಏಕೆ ಪ್ರತಿಷ್ಠಾಪನೆ ಮಾಡಿದ್ದಾನೆ?

'ಇತಿಹಾಸಕಾರರು ಅದಕ್ಕೂ ಕಾರಣ ಕೊಡದೆ ಇರುವುದಿಲ್ಲ.' ಅವರು ನುಡಿದರು. 'ಶಿವೋಪಾಸಕರು ಶಿವಲಿಂಗವನ್ನು ಪೂಜಿಸುತ್ತಾರೆ. ಅದರಂತೆ Matriarchal systeem ಅನುಸರಿಸುತ್ತಿರುವ ಖಾಸಿ, ಗಾರೊ ಮುಂತಾದ (Khasi & Garo hill tribes) ಎಷ್ಟೋ ಪಂಗಡಗಳ ಜನರು ಅಸಾಮದಲ್ಲಿ ಇದ್ದಾರೆ. ಅವರು ಕೆಲವೊಂದು ಹೆಣ್ಣು ದೇವತೆಗಳನ್ನು ಪೂಜಿಸುತ್ತಾರೆ. ಆರ್ಯರು ಬರುವುದಕ್ಕೆ ಮೊದಲು ಇಲ್ಲಿ ಹಿಂಸಾಪೂರಿತವಾದ- (ನಾನಾ ತರದ ಬಲಿ ಕೊಡುವುದು)- ಶಿವಪೂಜೆಯು ಪ್ರಚಾರದಲ್ಲಿತ್ತು. ಅದನ್ನು ನಿಲ್ಲಿಸಿ ತಮ್ಮ ಆರ್ಯ ಸಂಸ್ಕೃತಿಯನ್ನು ಪ್ರಚಾರಗೊಳಿಸುವುದೇ ಆರ್ಯರ ಮುಖ್ಯ ಉದ್ದೇಶವಾಗಿತ್ತು. ಅದರೊಳಗೆ ದುರ್ಗಾಪೂಜೆಯು ಆಗಲೇ ರೂಢಿಯಲ್ಲಿ ಬಂದದ್ದರಿಂದ, Matriarchal system ಅನುಸರಿಸುತ್ತಿದ್ದ ಜನರನ್ನೆಲ್ಲ ಒಲಿಸಿಕೊಳ್ಳಲು ಈ ಉಪಾಯ ಹೂಡಿದರು. ಈ ಮೂಲ ನಿವಾಸಿಗಳು ಪೂಜಿಸುತ್ತಿದ್ದ ದೇವತೆಗಳೆಲ್ಲ (ಹೆಣ್ಣು ದೇವತೆ) ದುರ್ಗಾ-ಮಾತೆಯ ಬೇರೆ ಬೇರೆ ರೂಪಗಳು; ಸ್ತ್ರೀ ಜನನೇಂದ್ರಿಯವೇ ಈ ಜಗತ್ತಿನ Creative force ದುರ್ಗಾ ಆದಿಮಾತೆಯ symbol, ಚಿಹ್ನ (ಲಿಂಗವು ಶಿವನ symbol ಇದ್ದಂತೆ) ಎಂಬ ತತ್ತ್ವವನ್ನು ಉಪದೇಶಿಸುತ್ತ, ಆದರ ಪೂಜೆಯನ್ನು ಪ್ರಚಾರಗೊಳಿಸಿ, ಆ ಜನರನ್ನು ತಮ್ಮ ಕಡೆಗೆ ಒಲಿಸಿಕೊಂಡರು. ಆಗ ಇಲ್ಲಿಯ ಶಿವೋಪಾಸಕ ಮೂಲ ನಿವಾಸಿಗಳು ಸುಮ್ಮನೆ ಕೂಡಲಿಲ್ಲ. ನರಕಾಸುರನ ಶಕ್ತಿಪ್ರಾಬಲ್ಯ

● ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ ●

ಪ್ರತಿತಿಂಗಳ ೨೧ ನೆಯ ದಿನಾಂಕದಂದೇ ವಿಮರ್ಶೆಯ ಮೇಲಾಟದ ತೀರ್ಮಾನವಾಗುವುದು. ಆದುದರಿಂದ ೨೦ ನೆಯ ದಿನಾಂಕವನ್ನು ಮೀರಿ ಬಂದ ವಿಮರ್ಶೆಗಳನ್ನು ತೀರ್ಮಾನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಎಂತಲೇ ಕಳೆದ ತಿಂಗಳಲ್ಲಿ ಅವಧಿಯನ್ನು ಮೀರಿಬಂದ 'ನಾನು ಕೊಂದ ಹುಡುಗಿ' ಕಥೆಯ ೩ ವಿಮರ್ಶೆಗಳನ್ನೂ 'ಹಕ್ಕಿಯ ಏಳಿಗೆ' ರೂಪಕದ ೨ ವಿಮರ್ಶೆಗಳನ್ನೂ ತೀರ್ಮಾನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಆ ಆ ವಿಮರ್ಶಕರು ದಯವಿಟ್ಟು, ಅನಿವಾರ್ಯವಾದ ನಮ್ಮ ಅಡಚಣೆಯನ್ನು ಲಕ್ಷ್ಯಕ್ಕೆ ತಂದು ಕೊಂಡು, ನಮ್ಮನ್ನು ಕ್ಷಮಿಸಬೇಕು.

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, **ಈ** ಸಲದ ಮೇಲಾಟಕ್ಕೆ **'ಮಾನವತೆಗೆ ಒಡ್ಡು'** ಎಂಬ ಕಥೆಯನ್ನು ಕುರಿತ ವಿಮರ್ಶೆಗಳು ೧೧ ಜನರಿಂದ ಬಂದಿವೆ. ಮತ್ತೊಂದು ಅನುವಾದಿತ ಕಥೆ 'ಫೋಟೊ' ಎಂಬ ಕಥೆಯು ವಿಮರ್ಶೆ ಒಬ್ಬರಿಂದ ಮಾತ್ರ ಬಂದಿದೆ.

'ಮಾನವತೆಗೆ ಒಡ್ಡು' ಕಥೆಯ ವಿಮರ್ಶಕರು :

೧ ಶ್ರೀ. ಎಸ್. ಆರ್. ಪಾಟೀಲ ಬಿ. ಎ. (ಕೋಳಿವಾಡ), ಧಾರವಾಡ. ೨ ಶ್ರೀ. ಜಿ. ಎಂ. ಚೌಧರಿ ಬಿ. ಎ. I, ಕರ್ನಾಟಕ ಕಾಲೇಜ್, ಧಾರವಾಡ. ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ. ೪ ಶ್ರೀ. ಎಸ್. ಆರ್. ಪಾಡಿ, ಟೀಚರ್, ಕಲ್ಲಕಟ್ಟೆ. ೫ ಶ್ರೀ. ಉಮೇಶ ಭಕ್ತ, ಸರಕಾರಿ ಕಲಾಶಾಲೆ, ಕಾಸರಗೋಡು. ೬ ಶ್ರೀ. ಭೀ ವೆಂ. ತೊರಗಲ್ಲ, ಬೆಳಗಾಂವಿ. ೭ ಶ್ರೀಮತಿ ವನಮಾಲಾಬಾಯಿ C/o ಪ್ರೊ. ರಂಗನಾಥರಾವ್ ನಾಡಕರ್ಣಿ, ಧಾರವಾಡ. ೮ ಶ್ರೀ. ಎಸ್. ಬಿ. ಡೆಂಬಳ, ಕಾಸರಗೋಡು. ೯ ಶ್ರೀ. ಎಸ್. ಎಸ್. ಅಂಗಡಿ, ಪೆರಕಲ್ಲ. ೧೦ ಕುಮಾರಿ ಸಿ. ಎಚ್. ಲಕ್ಷ್ಮಿ, ಪಾಡಿ (ದ. ಕ). ೧೧ ಶ್ರೀ. ರಾ. ಹ. ಕುಲಕರ್ಣಿ, ಪಹಾಪುರ (ಬೆಳಗಾಂವ).

'ಫೋಟೊ' ಕಥೆಯ ವಿಮರ್ಶಕರು :

೧ ಶ್ರೀ. ಎಸ್. ಆರ್. ಪಾಡಿ, ಟೀಚರ್, ಕಲ್ಲಕಟ್ಟ.

'ಮಾನವತೆಗೆ ಒಡ್ಡು' ಕಥೆಯ ವಿಮರ್ಶಕರಲ್ಲಿ **ಶ್ರೀ. ಜಿ. ಎಂ. ಚೌಧರಿ** ಮತ್ತು ಶ್ರೀ. ಎಸ್. ಆರ್. ಪಾಟೀಲ ಇವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಎಸ್. ಆರ್. ಪಾಟೀಲರ ವಿಮರ್ಶೆ ತುಂಬ ದೀರ್ಘವಾಗಿದೆ. ಶ್ರೀಮತಿ ವನಮಾಲಾಬಾಯಿ, ಶ್ರೀ. ಎಸ್. ಬಿ. ಡಂಬಳ, ಕುಮಾರಿ ಸಿ. ಎಚ್. ಲಕ್ಷ್ಮಿ, ಪಾಡಿ ಇವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕವು ಸಾಮಾನ್ಯವಾಗಿವೆ.

'ಫೋಟೊ' ಕಥೆಯನ್ನು ಕುರಿತು ಬಂದ ಒಂದೆ ಒಂದು ವಿಮರ್ಶೆ ಒಳ್ಳೆಯದಾಗಿದೆ.

ವಿಮರ್ಶಕರು ಕೃತಿಕಾರನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಮರೆತು, ಕೃತಿಯನ್ನು ಕಣ್ಣಮುಂದಿರಿಸಿಕೊಂಡು ಅದರ ಗುಣಾವಗುಣಗಳನ್ನು ವಿಧಾಯಕ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸಬೇಕು. "ಓ, ನಮ್ಮ ನೆರೆಮನೆಯಲ್ಲಿ ಇರುವ 'ಮಾಸ್ತರು' ಇವರು; ಇವರೇನು ಕಥೆ ಬರೆಯುತ್ತಾರೆ!" ಎಂಬ ಪೂರ್ವಗ್ರಹವನ್ನು ಇರಿಸಿಕೊಂಡು ವಿಮರ್ಶೆಯನ್ನು ಬರೆಯಲು ಹೊರಟರೆ, ಅಲ್ಲಿ ಕೃತಿಯ ವಿಮರ್ಶೆಗಿಂತ, ಕೃತಿಕಾರನ ವಿಷಯಕವಾದ ಬೇಸರದ ಮಾತುಗಳೇ ಹೆಚ್ಚಾಗಿ ಬಂದುಬಿಡುವವು. ಇಂತಹ ವಿಮರ್ಶಕರು ಕೃತಿಯಲ್ಲಿರುವ ಗುಣವನ್ನೇ ಮರೆಯುತ್ತಾರೆ; ಇಷ್ಟೇ ಅಲ್ಲ; ಮಿಕ್ಕವರಿಗೆ ಗುಣವೆಂದು ತೋರಿದುದರಲ್ಲಿಯೂ ಇವರು ದೋಷವನ್ನು ಕಾಣುತ್ತಾರೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ **'ಜೂಜು'** ಎಂಬ ಅನುವಾದಿತ ಕಥೆಯನ್ನಾಗಲಿ, **'ಭಾರ್ಗವಿ'** ಎಂಬ ಪೌರಾಣಿಕ ರೂಪಕವನ್ನಾಗಲಿ, ವಿಮರ್ಶೆಗೆ ತೆಗೆದುಕೊಳ್ಳಬೇಕು.

— ಸಂಪಾದಕ

ಗಳನ್ನು ಆರಿತ ಅವರು, ಅವನನ್ನು ತಮ್ಮ ಕಡೆಗೆ ಎಳೆದುಕೊಳ್ಳಲು ಪ್ರಯತ್ನಿಸಿದರು. ಅವರದೇ ಕೈ ಮೇಲಾಗಿ ನರಕಾಸುರನು ಆರ್ಯರ ಕಡೆಗೆ ನಿರ್ಲಕ್ಷ್ಯಭಾವ ತಾಳಿದ. ಅನಂತರ ದ್ವಾರಕೆಯಿಂದ ಕೃಷ್ಣನು ಬಂದು ನರಕಾಸುರನನ್ನು ಕೊಂದು ಮತ್ತೆ ಆರ್ಯರ ಸ್ವಾಮಿತ್ವವನ್ನು ಇಲ್ಲಿ ಸ್ಥಾಪಿಸಿದ.'

'ಅಹುದು, ಇದು ನಂಬಬಹುದಾದ ಸಂಗತಿ ಆದರೆ ಈ ಕಾಮಾಖ್ಯಾದೇವಿಯ ಮಂದಿರದ ಬಗ್ಗೆ ನಾನು ಕೇಳಿದ ಸಂಗತಿಯೇ ಬೇರೆ; ನೀವು ಹೇಳುತ್ತಿರುವುದೇ ಬೇರೆ– ಇದು ಆದಿಮಾತೆ–ಆದಿ ಶಕ್ತಿಯ– Creative force symbol ಎಂದು ನಾನು ಕೇಳಿದ್ದೆಂದರೆ ದಕ್ಷಪ್ರಜಾಪತಿಯ ಯಜ್ಞ, ಸತಿಯ ಮೈತದೇಹವನ್ನು ವಿಷ್ಣುವು ಚಕ್ರದಿಂದ ಕತ್ತರಿಸಿದ್ದು ಮುಂತಾಗಿ. ಅದಕ್ಕೂ ಇದಕ್ಕೂ ಏನು ಸಂಬಂಧ?' ಎಂದು ನಾನು ಕೇಳಿದೆ.

ಅದರ ಬಗ್ಗೆಯೂ ಕಾಲಿಕಾ ಪುರಾಣವಲ್ಲಿ ಇದೆ. ಆದರೆ ಅದು ದೊಡ್ಡ ಕತೆ. ಅದನ್ನು ಈಗ ಹೇಳುತ್ತ ಕುಳಿತರೆ ಆಫೀಸು ಗೀಫೀಸು ಬಿಟ್ಟು ನೀವು ಇಲ್ಲಿಯೇ ಕುಳಿತುಕೊಳ್ಳಬೇಕಾಗಬಹುದು. ನಾಳೆಯ ರವಿವಾರ ಸಂಜೆಗೆ ಭೆಟ್ಟಿಯಾಗೋಣ; ಆಗ ಆ ವಿಷಯ ಹೇಳುತ್ತೇನೆ' ಎಂದು ಅವರು ನುಡಿದರು.

ಒಳ್ಳೆಯದೆಂದು ನಾನೂ ಹೋಟೆಲಿನ ಕಡೆಗೆ ಹೊರಟೆ. ●

ಮಾನವತೆಗೆ ಒಡ್ಡು

(ಸಣ್ಣ ಕಥೆಯ ವಿಮರ್ಶೆ)

ಶ್ರೀ ಜಿ. ಎಂ. ಚೌಧರಿ ಬಿ. ಎ. (೧),

ಕರ್ನಾಟಕ ಕಾಲೇಜ್, ಧಾರವಾಡ

ಆಧುನಿಕ ಸಮಾಜ ವ್ಯವಸ್ಥೆಯು ಉಚ್ಚವರ್ಗ, ಮಧ್ಯಮ ವರ್ಗ, ನೀಚವರ್ಗಗಳೆಂದು ಆರ್ಥಿಕ ರೀತಿಯಿಂದ ವಿಭಾಗಿಸಲ್ಪಟ್ಟಿದೆ. ಆದರೆ ಅದರ ಅಂತರಾವಸ್ಥೆಯಲ್ಲಿದ್ದ ಪರಸ್ಪರ ಸಹಕಾರ, ಸಹಾನುಭೂತಿಗಳು ಈಗ ಕಾಣುವುದು ದುರ್ಲಭ. ಇಂದಿನ ಪ್ರಜಾಸರಕಾರವೂ ವರ್ಗರಹಿತ ಸಮಾಜ ನಿರ್ಮಾಣವನ್ನೇ ತನ್ನ ಧ್ಯೇಯವನ್ನಾಗಿರಿಸಿಕೊಂಡಿದೆ; ಆದರೆ ಯಾವುದೇ ವರ್ಗವು ಮತ್ತೊಂದು ವರ್ಗಕ್ಕೆ ಹಾನಿಕರವಾದಂತೆ ಕಂಡುಬರುವುದಿಲ್ಲ. ಉಚ್ಚವರ್ಗದ ಜಮೀನುದಾರರಲ್ಲಿ ಕೆಲವರು ಕೆಟ್ಟವರಿರಬಹುದು; ಆದರೆ ಅವರಲ್ಲಿಯೂ ಕೆಲವರು ನೀಚವರ್ಗದ ವರನ್ನು ಮಕ್ಕಳಂತೆ ಕಂಡುದು ದುರ್ಲಭವೇನಲ್ಲ! ಇಂತಹ ಒಬ್ಬ ಜಮೀನದಾರರ ಮಗನಾದ ರಾಮಣ್ಣನು–ಸುಶಿಕ್ಷಿತನು–ಸುಸಂಸ್ಕೃತನು ಆದರ್ಶವಾದಿಯಾಗಿರುವುದು ಅಚ್ಚರಿಯೇನಲ್ಲ. ಅಂತೆಯೇ ಕಾಲೇಜಿನ ಉಚ್ಚಶಿಕ್ಷಣ ಮುಗಿಸಿ "ಹಳ್ಳಿಗೆ ಹಿಂದಿರುಗಿರಿ" ಎಂಬ ಗಾಂಧೀಜಿಯವರ ಸೂತ್ರದಂತೆ ಹಳ್ಳಿಯಲ್ಲಿ ಬಂದು ನೆಲೆಸಿದ.

ಆದರೆ ಕಾಲೇಜಿನ ಸುಖಮಯವಾದ ದಿನಗಳ— ಪಟ್ಟಣವಾಸದ ಸವಿಯ ನೆನಪು ಅವನನ್ನು ಹಳ್ಳಿಯನ್ನು ನಿಸ್ಸಾರವೆಂದು ತಿಳಿಯಲು ಹಚ್ಚಿತು. ಲೇಖಕರ ಮಾತಿನಂತೆ ಅದು ಅವನಿಗೆ 'ಉಪ್ಪಿಲ್ಲದ ಊಟವಾಗಿತ್ತು'. ಆದರೆ ಅವನ ಆದರ್ಶಭಾವನೆಯು ಪ್ರಬಲವಾಗಿ, ಅದರಲ್ಲಿ ರಸವನ್ನು ಕಂಡುಕೊಳ್ಳುವಂತೆ ಮಾಡಿತು. ಆತ ರಸವನ್ನು ಕಂಡುಕೊಂಡ; ಆದರೆ ಅದು ಕಹಿಯಾಗಿತ್ತೆಂಬುದನ್ನು ಕೊನೆಗೆ ತಿಳಿದುಕೊಂಡ! ಹಳ್ಳಿಯ (ಕೆಸರಳ್ಳಿಯ) ನೆಲವೆಲ್ಲ ಹಸುರಾಗಿ ಜನರೆಲ್ಲ ಸುಖವಾಗಿರಲೆಂಬ ಏಕ ಮಾತ್ರ ಧ್ಯೇಯದಿಂದ ಹಳ್ಳಕ್ಕೆ ಒಡ್ಡು ಹಾಕಿಸುವುದರಲ್ಲಿ ತನ್ನ ತನು, ಮನ, ಧನಗಳನ್ನು ಮೀಸಲಾಗಿರಿಸಿದ. ಅವನ ತಂದೆಯ ಎಚ್ಚರಿಕೆಯ – ಅನುಭವದ—ಮಾತುಗಳನ್ನು ಆದರ್ಶದ ಪ್ರವಾಹದಲ್ಲಿ ಹರಿಸಿಬಿಟ್ಟ. ಕೊನೆಗೆ ಆ ಒಡ್ಡು ತಯಾರಾಗಲು ಅಲ್ಲಿಯ ದೇಶಭಕ್ತನಿಂದ ಚುನಾವಣೆಗೆ ನಿಂತಿದ್ದರಿಂದ ಉದ್ಘಾಟನೆ ಮಾಡಿಸಲಾಯಿತು. ಅವನ ಭಾಷಣವು ಜಮೀನುದಾರರ ಸ್ವಾರ್ಥವನ್ನು ಕುರಿತು ಆಯಿತು. 'ಹಳ್ಳಿಯ ಒಡ್ಡು ಹಾಕಿಸಲು ಮಾಡಿದ ಸಹಾಯ ಜಮೀನುದಾರಿಕೆಯನ್ನು ಉಳಿಸಿಕೊಳ್ಳುವುದಕ್ಕಾಗಿಯೇ? ಎಂಬುದು ರಾಮಣ್ಣನಿಗೆ ದೇಶಭಕ್ತರಿಂದ ತಿಳಿಯಿತು! ಈ ಹೊಸ ಮಿಂಚು ಅವನನ್ನು ವಾಸ್ತವ ಪ್ರಪಂಚಕ್ಕೆ ತಂದಿಳಿಸಿತು. ಆಗಿನ ಅವನೊಳಗಿನ ಧ್ವನಿಯೇ ಅವನ ಆದರ್ಶವನ್ನು ಕುರಿತು ಅಂದಿರಬೇಕು: "ಇದು ಮಾನವತೆಗೆ ಒಡ್ಡು!" ಎಂದು; ಅದು ಸೂಚ್ಯವಾಗಿ ಬಂದರೂ ಸ್ಪಷ್ಟವಾಗಿ ಬಂದಿದೆ.

ಇಲ್ಲಿಯ ಆದರ್ಶದ ಮೂರ್ತಿಯಾದ ರಾಮಣ್ಣನೇ ಕಥೆಯ ಕೇಂದ್ರಬಿಂದು; ಅವನ ಸುತ್ತಲೇ ಎಲ್ಲ ಕಥೆಯು ಹಬ್ಬಿದೆ. ಅವನನ್ನು ನಾವು ಮೊದಲಿನಿಂದ ಕೊನೆಯವರೆಗೆ ಕಾಣುತ್ತೇವೆ. ಅವನ ತಂದೆಯ ವ್ಯಾವಹಾರಿಕವಾದ ಮಾತುಗಳನ್ನು ತಿರಸ್ಕರಿಸಿ ಹಳ್ಳಿಯ ಜನರಿಗೆ ತನ್ನ ಸೇವೆಯನ್ನು 'ಎತ್ತಿನಂತೆ' ಮುಡುಪಾಗಿಡಲು ನಿಶ್ಚಯಿಸಿದಾಗ, ತೀಕ್ಷ್ಣ ದೃಷ್ಟಿಯ ಓದುಗನಿಗೆ ರಾಮಣ್ಣನ ಬಗೆಗೆ ಅನುಕಂಪ ಹುಟ್ಟದಿರಲಾರದು. ಅವನು ಒಂದೊಂದಾಗಿ ಸಹಾಯ ಮಾಡಲು ಹತ್ತಿದಂತೆ ಅವು ಒಂದೊಂದಾಗಿ ಮಾಯವಾಗಹತ್ತುವ ಚಿತ್ರಣ, ಇಂದಿನ ಹಳ್ಳಿಗಳ ಪರಿಸ್ಥಿತಿಯ ಚಿತ್ರಣವೇ ಆಗಿದೆ. ಗಾಂಧೀಜಿಯವರ ಆದರ್ಶ ಹಳ್ಳಿಗಳನ್ನು ಇವು ಎಂತಹ ವಿಡಂಬನೆ ಮಾಡುತ್ತಿವೆ ಎಂಬುದನ್ನು ನೋಡಿ ವಿಷಾದವೆನಿಸುತ್ತದೆ.

ಇನ್ನು ಆ ಹಳ್ಳಿಯ ಹೆಸರಾದರೋ ಕೆಸರಳ್ಳಿ! ಆ ಹೆಸರಿನ ಆಯ್ಕೆಯು ಬಹಳ ಔಚಿತ್ಯಪೂರ್ಣವಾಗಿದೆ. ಕೆಸರಿನಲ್ಲಿ ಕಾಲಿಡುತ್ತ ಇಡುತ್ತ ಹೋಗಿ, ಕೊನೆಗೆ ರಾಮಣ್ಣ ಪೂರ್ಣವಾಗಿ ಮುಣುಗಿ ಹೋದಂತೆ ಎನಿಸುತ್ತದೆ. ಇಂತಹ ಹೆಸರನ್ನು ಆರಿಸುವುದರಲ್ಲಿ ಲೇಖಕರ ಸೂಕ್ಷ್ಮ ವ್ಯವಹಾರ ಪರಿಣತಿ ಕಂಡುಬರುತ್ತದೆ.

ಇನ್ನು ಸಣ್ಣ ಕಥೆಗಳಲ್ಲಿ ಪಾತ್ರಚಿತ್ರಣಕ್ಕಿರುವ ಮಹತ್ತ್ವವನ್ನು ಅವಲೋಕಿಸಿದಾಗ ಇದರಲ್ಲಿಯೂ ಲೇಖಕರ ಕುಶಲತೆ ತೋರದಿರದು. ರಾಮಣ್ಣನೇ ಜೀವಾಳವಾಗಿರುವ ಕಥೆಯಲ್ಲಿ, ಅವನ ಪಾತ್ರ ಪೋಷಣೆಯು ಅವನ ಮಾತು, ಕೃತಿಗಳಿಂದ ಚೆನ್ನಾಗಿ ಆಗಿಯೇ ಇದೆ. ಆದರೆ ಅವನ ತಂದೆಯ ಪಾತ್ರ ಅಷ್ಟು ಮುಖ್ಯವಲ್ಲದಿದ್ದರೂ ಕೇವಲ ವ್ಯಾವಹಾರಿಕವಾದ, ಅನುಭವದ ಒಂದೇ ಒಂದು ಮಾತಿನಿಂದ ಅವರ ಪಾತ್ರ ಜೀವಂತವಾಗಿ ಮಿಂಚಿಹೋಗುತ್ತದೆ. ಇನ್ನು ಪಂಚರ ಮುಖಂಡ ನುಲ್ಲಪ್ಪನ ಪಾತ್ರವು ಧೂರ್ತತೆಯ ಪ್ರತೀಪಿಸಿಸಿದೆ. ಉದ್ಘಾಟನೆಗಾಗಿ ಕರೆಸಿದ ದೇಶಭಕ್ತನ ಹಾರತುರಾಯಿಗಳಿಗಾಗಿ ಆವ ಖರ್ಚನ್ನು ಸಹ ರಾಮಣ್ಣನಿಂದ ಬಿಡಿಸಿಕೊಳ್ಳುವ ಸಲುವಾಗಿ ಆಡಿದ ನುಲ್ಲಪ್ಪನ ಮಾತುಗಳಲ್ಲಿ ಅವನ ಪಾತ್ರದ ಭಟ್ಟಿಯನ್ನೆ ಇಳಿಸಿದಂತಾಗಿದೆ. ಇನ್ನು ಚುನಾವಣೆಗೆ ನಿಂತ ಸಾಹುಕಾರ ಕರಿಯಪ್ಪನ ಪಾತ್ರ ನೋಡಿದಾಗ ಅದು ಸಜೀವವಾಗಿ ತೋರುತ್ತದೆ. ಈಗಿನ ಬಹುಸಂಖ್ಯ ಹಳ್ಳಿಯ ಪ್ರತಿನಿಧಿಗಳ ಪ್ರತಿನಿಧಿಯಂತೆ ಅವನು ತೋರುತ್ತಾನೆ. ಜನರ ಅಜ್ಞಾನದ

ಉಪಯೋಗ ಮಾಡಿಕೊಂಡು, ಅವರಿಗೆಲ್ಲ 'ನಿಮ್ಮದೇ ರಾಜ್ಯ'ವೆಂದು ಹೇಳುತ್ತ ಉತ್ಸಾಹ ತುಂಬುವ ಅವನ ಭಾಷಣ ಚುನಾವಣಾಭಾಷಣದ ಒಂದು 'ಶ್ರೇಷ್ಠ' ಮಾದರಿಯಾಗಿದೆ !

ಕಥೆಗಾಗಿ ಬಳಸಿಕೊಂಡ ಭಾಷೆ ದೇಸಿ ಆಗಿದ್ದು ಅದರಲ್ಲಿ ಸೊಬಗಿದೆ, ಜೀವಂತತೆ ಇದೆ. ಎಲ್ಲ ಪಾತ್ರಗಳಿಗೆ ಅನುಗುಣವಾದ ಯೋಗ್ಯ ಭಾಷೆಯನ್ನು ಲೇಖಕರು ಜಾಣ್ಮೆಯಿಂದ ಉಪಯೋಗಿಸಿದ್ದಾರೆ. ರಾಮಣ್ಣನ ಮಾತುಗಳು ಹಳ್ಳಿಯವರ ಮಾತುಗಳಂತೆಯೇ ಇದ್ದರೂ ಅದರಲ್ಲಿ ಸಂಸ್ಕೃತಿ ಒಡೆದು ಕಾಣುತ್ತದೆ. ಚುನಾವಣೆಯ ಹುರಿಯಾಳು, ಕಲ್ಲಪ್ಪನವರ ಚುನಾವಣಾಭಾಷಣ ಅವರ ಸಂಸ್ಕಾರಕ್ಕೆ ತಕ್ಕುದಾಗಿದೆ. ಉಳಿದೆಲ್ಲ ಹಳ್ಳಿಗರ ಮಾತುಗಳು ಸಜೀವತೆಯನ್ನು ತೋರಿಸುತ್ತವೆ.

ಅಲ್ಲದೆ, 'ಪಂಚರು ರಾಮಣ್ಣನಲ್ಲಿ ನಾಯಿಯ ನಂಬುಗೆಯನ್ನಿಟ್ಟಿದ್ದರು.' ಅವನ (ರಾಮಣ್ಣನ) ಬಾಳು 'ಎತ್ತು ರೈತನಿಗಾಗಿ ಹುಟ್ಟಿದಂತೆ' ಎಂಬ ಸಾದೃಶ್ಯಗಳ ಉಪಯೋಗದಲ್ಲಿ ಹಳ್ಳಿಗರಿಗೆ ಪರಿಚಿತವಾದ ಸರಳ ಸುಂದರ ಪ್ರಯೋಗ ಮಾಡಿದಂತೆ ಅನಿಸುತ್ತಿದೆ. 'ಅವನ (ರಾಮಣ್ಣನ) ಕರೆ ಇರುವೆಗಳಿಗೆ ಬೆಲ್ಲದಂತೆ ಇತ್ತು' ಎಂಬ ಮಾತಿನಲ್ಲಿ ಕೆಸರಳ್ಳಿಯ ಪಂಚರ ಮನೋಭಾವವನ್ನು ಸೂಕ್ಷ್ಮವಾಗಿ ತೋರಿಬಿಡಲಾಗಿದೆ ! ಇವೆಲ್ಲ ಭಾಷೆಯ ಸೊಬಗನ್ನು ಲೇಖಕರು ಬಳಸಬೇಕೆಂದೇ ಹೊರಡದೆ, ತಾವಾಗಿಯೇ ಪ್ರವಾಹದೊಡನೆ ಹರಿದು ಬಂದಿರುವುದು ಕಥನ ಕಲೆಗೆ ಯೋಗ್ಯವೆನಿಸಿದೆ !

ಇನ್ನು ಕಥೆಯ ಹೆಸರಿನ ಬಗ್ಗೆ ವಿಚಾರಿಸಿದರೆ, ಅದು ಕಥೆಗೆ ಬಹಳ ಯೋಗ್ಯವಿದೆ. ಮಾನವನಾಗಿ ಮಾನವನಂತೆ ವರ್ತಿಸಿದ ರಾಮಣ್ಣನನ್ನು ಕೊನೆಗೆ ಸ್ವಾರ್ಥಿಯೆಂದು ಕರೆಯುವ, ಹೆಸರಿಗೆ ಮಾತ್ರ ಮಾನವರಾದ ಪಂಚರು ಅವನಲ್ಲಿದ್ದ ಜನರ ಬಗ್ಗೆ ಪ್ರೀತಿ-ಸಹಾನುಭೂತಿಗಳಿಗೆ ಒಡ್ಡು ಹಾಕಿದ್ದಾರೆ. ತಾವೂ ತಮ್ಮ ಮಾನವತೆಗೆ ಒಡ್ಡುಪಾಕಿಕೊಂಡಿದ್ದಾರೆ ! ಇದರಿಂದ ರಾಮಣ್ಣನಲ್ಲಿಯ ಆದರ್ಶಪ್ರೇಮ, ಮಾನವತೆಯಿಂದ ಕೂಡಿದ ಪ್ರೇಮ ಸಿಂತುಬಿಟ್ಟಿದೆ. ಅವನು ತಿರುಗಿ ಯಂತ್ರವಾಗಲು ನೌಕರಿಗೆ ಅರ್ಜಿ ಹಾಕಿದ್ದಾನೆ. ಅಂದಮೇಲೆ ಪಂಚರು ಹಳ್ಳಕ್ಕೆ ಮಾತ್ರ ವಲ್ಲದೆ ಮಾನವತೆಗೂ ಒಡ್ಡು' ಎಂಬ ಹೆಸರು ಕಥೆಗೆ ಸೂಚ್ಯವಿದ್ದು, ಯೋಗ್ಯವಿನೆ.

ಒಟ್ಟಾರೆ—ಆದರ್ಶದ ಬಿಲಿ ಈಗಿನ ಪ್ರಪಂಚದಲ್ಲಿ ಎಷ್ಟರಮಟ್ಟಿಗೆ ಕಡಿಮೆಯಾಗಿದೆ ಎನ್ನುವುದನ್ನು ರಾಮಣ್ಣನ ಆದರ್ಶದ ಕೊಲೆಯ ಮರಂತ ಚಿತ್ರಣದಿಂದ ಇಲ್ಲಿ ಒಳ್ಳೆಯ ವಾಸ್ತವವಾಗಿ ಚಿತ್ರಿಸಲಾಗಿದೆ. ಇಂತಹ ಕಥೆಗಳು ಕೇವಲ ಕಥೆಗಳಾಗಿರದೆ ಜೀವನ ದರ್ಶನದ ಪಾಠವಾಗಿವೆಯೆನ್ನಲಡ್ಡಿಯಿಲ್ಲ. ಈ ಎಲ್ಲ ದೃಷ್ಟಿಗಳಿಂದ ಲೇಖಕರು ಅಭಿನಂದನಾರ್ಹರೆಂದು ಬೇರೆ ಹೇಳಬೇಕಾಗಿಲ್ಲ !

ಫೋಟೋ

(ಅನುವಾದಿತ ಕಥೆಯ ವಿಮರ್ಶೆ)

ಎಸ್. ಆರ್. ಹಾಡಿ

'ಫೋಟೋ'— ಎಂಬ ಹೆಸರನ್ನು ನೋಡಿದೊಡನೆಯೇ ಫೋಟೋದ ಗೀಳು ಅಂಟಿಕೊಂಡಿದ್ದ ನನ್ನ ಮನಸ್ಸಿನ ಕುತೂಹಲ ಕೆರಳಿತು. ಏನಿದೆಯೋ ನೋಡೋಣ ಎಂದು ಕತೆಯ ಮೇಲೆ ಕಣ್ಣೋಡಿಸಿದೆ. ಮೊದಲಾಗಿ ಕಂಡ 'ಕ್ಯಾಮರಾದವ'ನ ಹಿಂದೆಯೇ ಓಡಿದೆ. ಅವನು ತೆಗೆದ ಫೋಟೋಗಳನ್ನೆಲ್ಲಾ ನೋಡುತ್ತಾ ಮುಂದುವರಿದಾಗ ಜಮಾದಾರನನ್ನು ಕಂಡು ಒಮ್ಮೆಲೇ ವಿಚಾರ ಬದಲಾಯಿತು. ಅವನ ಸರಳ, ನಿರ್ಮಲ ಹೃದಯದ ಪರಿಚಯವಾಗಲು ಹೆಚ್ಚು ಸಮಯ ಬೇಕಾಗಿಲ್ಲ. ಸ್ವಾಭಿಮಾನ ತುಂಬಿದ ಅವನ ಮುಗ್ಧ ಹೃದಯದ ಭಾವನಾತರಂಗಗಳಲ್ಲಿ ತೇಲಿಹೋದೆ.

ಧನಿಕನಿರಲಿ, ಬಡವನಿರಲಿ ಪ್ರತಿಯೊಬ್ಬನಿಗೂ ಮಾನವ ಸಹಜವಾದ ಕೆಲವೊಂದು ಆಶೆ ಆಕಾಂಕ್ಷೆಗಳು ಇದ್ದೇ ಇರುತ್ತವೆ. ಆದರೆ ವ್ಯತ್ಯಾಸವಿಷ್ಟೇ–ಧನಿಕನು ಸುಲಭವಾಗಿ ತನ್ನ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಬಲ್ಲನಾದರೆ, ಬಡವನು ಅದಕ್ಕಾಗಿ ತನ್ನ ಜೀವನವನ್ನೇ ತೇಯಬೇಕಾಗುವುದು; ಎಷ್ಟೋ ವೇಳೆ ಅವನ ಆಶೆ ಕನಸಿನ ಗಂಟಾಗಿಯೇ ಉಳಿಯಬಹುದು–ಅಂತಹ ಸಂದರ್ಭವೇ ಹೆಚ್ಚು. ಜಮಾದಾರನು ಕಟ್ಟಿದ್ದ ಹೊಂಗನಸು ಕನಸಾಗಿಯೇ ಉಳಿದ ಕರುಣಾಜನಕವಾದೊಂದು ಮೇಲ್ಮಟ್ಟದ ಕತೆಯಾಗಿದೆ 'ಫೋಟೋ'

ಸದಾ ಕೈಯಲ್ಲಿ ಪೊರಕೆ ಮತ್ತು ಡಬ್ಬವನ್ನು ಹಿಡಿದು ಮನೆಮನೆಗಳಲ್ಲಿ ಕಸಗುಡಿಸಿ, ಕೊಳೆ ಕೆಸರುಗಳನ್ನು ತೆಗೆದು ಜನರ ಆರೋಗ್ಯ ರಕ್ಷಣೆ ಮಾಡುತ್ತಿರುವ ಈ 'ವೃದ್ಧ, ರೋಗಗ್ರಸ್ತ, ನಿರ್ವಿಕಾರ, ನಿರ್ಲಕ್ಷಿತ' ಜಮಾದಾರನ ಸೌಂದರ್ಯ ಬಾಹ್ಯವಲ್ಲ; ಅಂತರಂಗದ್ದು. ಕೆಸರಲ್ಲಿರುವ ಕಮಲದಂತೆ ಧೂಳಿನಿಂದ ಮುಚ್ಚಲ್ಪಟ್ಟ ರತ್ನದಂತೆ ಉತ್ತಮ ಗುಣಗಳು ನೆಲೆಸಿವೆ ಅತನಲ್ಲಿ. ಆದರೆ ಸಲಕಸಟಗಳಿಂದ ಕೂಡಿ ಬಾಹ್ಯಾಡಂಬರದ ರಂಗಿನ ಗುಂಗಿನಲ್ಲಿ ಮದೋನ್ಮತ್ತವಾಗಿ ಸೈಸುವೆದ ಜಗತ್ತಿನಲ್ಲಿ ಗುಣವನ್ನರಸುವ ಕಣ್ಣಾವರೂ ಎಲ್ಲಿದೆ ? ಎಲ್ಲರ ಮನೆಯ ಕೊಳೆಯನ್ನು ತೊಳೆದು ನಿರ್ಮಲವಾಗಿರಿಸಿ, ಜನರ ಆರೋಗ್ಯರಕ್ಷಕನಾಗಿರುವ ಈ ಸೇವಕ ಅನಾರೋಗ್ಯವನ್ನಲ್ಲಿ ನರಳಿ ಜೀವಂತ ಸಾಯುತ್ತಿರುವುದಿದು ಎಂತಹ ವಿಪರ್ಯಾಸ ! ಇಂತಹ ದುರ್ಭಾಗ್ಯ ಜೀವಿಯೊಬ್ಬ ಈ ಪ್ರಪಂಚದಲ್ಲಿ ಇದ್ದಾನೆನ್ನುವುದರ ಪರಿವೆಯಾವರೂ ಆ ಮನೆಯವರಿಗಿಲ್ಲ. ಸ್ವಚ್ಛತೆಯ ಕೆಲಸವಲ್ಲಿ ತೊಡಗಿದ ಜಮಾದಾರ ಮಕ್ಕಳನ್ನು ಎತ್ತಿಕೊಳ್ಳುವಂತೆ ಬಟ್ಟೆಯನ್ನು ತೆಗೆದುಕೊಳ್ಳುವಂತೆ ಕೆಲವೊಮ್ಮೆ ಕೂಗಿ-

ಕೊಂಡಾಗ ಮಾತ್ರ ಮನೆಯ ಹೆಂಗುಸರಿಗೆ ಇವನ ಜ್ಞಾಪಕ ಬರುತ್ತದೆ. 'ಅನಾಯಾಸವಾಗಿ ಮರುಕ್ಷಣವಲ್ಲಿಯೇ ಮರೆತುಬಿಡುತ್ತಾರೆ.' ಇದು ಅವನಿಗೆ ಅವರು ಕೊಡುವ ಬೆಲೆ! ಅವನ ಸೇವೆಗೆ ದೊರೆಯುತ್ತಿದ್ದ ಅಮೂಲ್ಯ ಪುರಸ್ಕಾರವೆಂದರೆ ಎಸೆದ ಒಣರೊಟ್ಟಿಯ ತುಣುಕು, ಹಳಸಿ ನಾರುವ ಎಂಜಲು ಅನ್ನ! ಅವರ ದೃಷ್ಟಿಯಲ್ಲಿ ಜಮಾದಾರನೆಂದರೆ ಸ್ವಚ್ಛತೆಯ ಕೆಲಸಮಾಡುವ ಒಂದು ಯಂತ್ರ ಅಷ್ಟೆ!

'ಮಕ್ಕಳು ಮರಿಗಳು ತಮಗೂ ಒಬ್ಬ ಅಪ್ಪ ಇದ್ದ' ಎಂದು ಜ್ಞಾಪಿಸಿಕೊಳ್ಳುವಂತೆ ತನ್ನ ಒಂದೇ ಒಂದು ಫೋಟೋ ತೆಗೆಯಿಸಿ ಗೋಡೆಯಲ್ಲಿ ತೂಗಹಾಕಬೇಕೆಂಬ ಹೆಬ್ಬಯಕೆಯುದಿಸಿದೆ ಜಮಾದಾರನಲ್ಲಿ. ಕೆರಳಿಸಿಂತ ಈ ಅವಮ್ಯವಾದ ಆಸೆಯನ್ನು ವಿನೀತನಾಗಿ ಪ್ರಕಟಿಸಿಕೊಂಡಾಗ ಕ್ಯಾಮರಾದವನು ಸಂತೋಷದಿಂದಲೇ ಒಪ್ಪುತ್ತಾನೆ. ಮುಂದೆ ಈ ಬಯಕೆ ತುಸು ಬಲವಾಗಿ-ಹೆಂಡತಿ ಮಕ್ಕಳೊಡನೆ ತನ್ನ ಫೋಟೋ-ಎಂದು ರೂಪುಗೊಂಡು ಬೆಳೆಯುತ್ತದೆ. ಮಗುವಿನ ನನ್ನ ಫೋಟೋ ತೆಗೆಯುವುದು ಹಿತವಿಲ್ಲವೆಂದು ಅಲಂಕರಿಸಲು ಹೋದರೆ ಯೋಗ್ಯವಾದ ಅಂಗಿ, ವಾಯಿಜಾಮದ ಅಭಾವ; ತನಗೂ ಹೆಂಡತಿಗೂ ಉತ್ತಮ ಬಟ್ಟೆಬರೆ ಇಲ್ಲದಿರುವುದು-ಈ ಎಲ್ಲ ಕಾರಣಗಳಿಂದ ಮುಂದು ವರಿಯುತ್ತದೆ ಫೋಟೋದ ಕಾರ್ಯಕ್ರಮ. ಮಗುವಿಗೆ ಕ್ಯಾಮರಾದವನ ಮನೆಯಿಂದ ದೊರೆತ ಅಂಗಿಹಾಕಿ ಫೋಟೋ ತೆಗೆಸಬಹುದೆಂಬಾಗ ಸ್ವಾಭಿಮಾನ ಅಡ್ಡಬಂದು, ಅತ ಒತ್ತಾಯಿಸಿದರೂ ಜಮಾದಾರ ಮಾತ್ರ ದಿನವನ್ನು ಮುಂದೂಡುತ್ತಾನೆ. ಕೊನೆಗೆ ತನ್ನ ಸ್ವಂತ ಪರಿಶ್ರಮದ ಸಂಪಾದನೆಯಿಂದ ಫೋಟೋ ತೆಗೆಯಲು ಸಿದ್ಧವಾಗಿ ನಿಂತರೆ, ನಿಧಿಯು ಬೇರೆಯೇ ಆಟವನ್ನು ಹೂಡಿ ಅವನ ಆಶೆಯ ಮೇಲೆ ತಣ್ಣೀರೆರಚಿತು. ಅವನ ಕರಿಯ ಮಗನನ್ನು 'ಕಾಲರಾ'ದ ಬಾಯಿಗೆ ಬಲಿಯಿತ್ತು ಮರೆಯಲ್ಲಿ ನಿಂತು ನಿಕಟವಾಗಿ ನಕ್ಕಿತು ಕ್ರೂರವಿಧಿ!

ಈ ಎಲ್ಲಾ ಚಿತ್ರಗಳೂ ಮನಃ ಪಟಲದಲ್ಲಿ ಒಂದೊಂದಾಗಿ ಹಾದುಹೋದವು. ಈ ಮುಮುಕನ ಸರಳ ಹೃದಯದಲ್ಲಿ ಜನಸಾಮಾನ್ಯರಲ್ಲಿರುವ ಸ್ವಾಭಾವಿಕವಾದ ಭಾವನೆಗಳಲ್ಲದೆ ಕೆಲವು ವಿಶಿಷ್ಟ ಭಾವ ತರಂಗಗಳೇಳುತ್ತಿರುವುದು ಕಂಡುಬಂತು. ಈ ಜನಸ್ಯ ಭಾವನೆಗಳೂ ತನ್ನ ಕಾಲಲ್ಲಿರೇ ನಿಲ್ಲಬೇಕೆಂಬ ಸ್ವಾಭಿಮಾನವೂ ಅವನ ಆಕಾಂಕ್ಷೆಯನ್ನು ಕನಸಾಗಿಯೇ ಇರಗೊಳಿಸಿತು-ಎಂದು ಯೋಚಿಸುತ್ತಿದ್ದಂತೆಯೇ ಒಳದನಿಯೊಂದು ನನ್ನನ್ನು ಪ್ರಶ್ನಿಸಿತು. ''ಕ್ಯಾಮರಾದವನು ಹಳೆಯ ಅಂಗಿಯನ್ನೀಯುವುದರ ಬದಲು ಹೊಸ ಬಟ್ಟೆಬರೆ ಕೊಂಡುಕೊಳ್ಳಲು ಸ್ವಲ್ಪ ಹಣ ಕೊಡುತ್ತಿದ್ದರೆ ಸಮಸ್ಯೆ ಬಗೆಹರಿಯುತ್ತಿತ್ತಲ್ಲವೇ?" ಎಂದು '' ಅವಗೇಕೋ ಆಲೋಚನೆ ಬರಲಿಲ್ಲ ನಿಜ. ಆದರೆ ಒಂದು ವೇಳೆ ಅವನು ಹಣಕೊಡಲು ಮುಂದಾದರೂ, ಸ್ವಂತ ಮಡಿಮೈಯುಂದಲೇ ಅಂಗಿ ಕೊಂಡುಕೊಳ್ಳಬೇಕೆಂದಿರುವ ಜಮಾದಾರನು ಅವನ್ನು ತೆಗೆದು-ಕೊಂಡಾನೇ?" ನನ್ನ ಮರುಪ್ರಶ್ನೆ. ಒಳದನಿ ಸುಮ್ಮನಾಯಿತು.

ಜಮಾದಾರನು ಕ್ಯಾಮರಾದ ಮುಂದೆ ಕೃತಾರ್ಥನಾದಂತೆ ನಿಲ್ಲುವುದು; ಪೊರಕೆ, ಶಬ್ದ ಎಲ್ಲಾ ಫೋಟೋದಲ್ಲಿ ಬರುತ್ತದೆಯೇ ಎಂದು ಕೇಳುವುದು ಅಶಿಕ್ಷಿತ ಹಳ್ಳಿಗರ ಮುಗ್ಧ ಮನಸ್ಸಿನ ಸ್ವೈಜ ಚಿತ್ರವಾಗಿದೆ. ಬಡಸಂಸಾರದಲ್ಲಿ ಗಂಡ ಹೆಂಡತಿಯೊಳಗಾಗುವ ವಾಗ್ಯುದ್ಧ ಕ್ಯಾಮರಾ ಕಂಡಾಗ ಹೆಳ್ಳಿಯಲ್ಲಿ ಜನ ಗುಂಪುಕೊಡುವುದು-ಇತ್ಯಾದಿ ವಿಷಯುಗಳನ್ನು ಸೂಚಿಸಿರುವುದು ಸ್ವಾಭಾವಿಕವಾಗಿದೆ. 'ನಮ್ಮಪ್ಪ ನಮಗೊಂದು ಅಂಗಿಯನ್ನು ಹೊಲಿಸಲಿಲ್ಲ ಅನ್ನೋಳ್ಪಿ;''ನಮ್ಮಪ್ಪ ಒಂದಂಗೀನೂ ಹೊಲಿಸಲಿಲ್ಲ, ಬೇರೆಯವರು ಕೊಟ್ಟ ಅಂಗಿಯನ್ನು ತೊಡಿಸಿ ಫೋಟೋ ತೆಗೆಯಿಸಿದ....ಇಷ್ಟೇ ಸ್ವಾಮಿ " ಎಂಬಿತ್ಯಾದಿ ಜಮಾದಾರನ ಹೃದಯದ ಬೇಗುದಿಯಿಂದ ಹೊರಬಿದ್ದ ಮಾತುಗಳು ನಮ್ಮ ಮನವನ್ನು ಮುಟ್ಟಿ ಹೃದಯವನ್ನು ಕಲಕುತ್ತವೆ. ಕೆಸರೆಂದು ಅಸಹ್ಯಪಟ್ಟುಕೊಳ್ಳದೆ ತನ್ನ ಕೆಲಸದಲ್ಲಿ ಜಮಾದಾರನು ತೋರಿಸುವ ನಿಷ್ಠೆ, ಕೆಲಸ ಮಾಡುತ್ತಿರುವಾಗ ಆ ಮನೆಯ ಮಕ್ಕಳ ಸಂರಕ್ಷಣೆಯ ಕುರಿತು ವಹಿಸುವ ಎಚ್ಚರಿಕೆ ಹಾಸಿದ್ದ ಬಟ್ಟೆಗಳ ವಿಷಯವಾಗಿ ತೆಗೆದುಕೊಳ್ಳುವ ಜಾಗ್ರತೆ ಅವನ ವ್ಯಕ್ತಿತ್ವದ ಒಂದು ಮುಖವನ್ನು ಚಿತ್ರಿಸಿದರೆ,—ಮನವ ಬಯಕೆಯನ್ನು ತೋಡಿಕೆಕಳ್ಳುವಾಗ ತೋರುವ ಸ್ವಾಭಾವಿಕವಾದ ವಿನಯ, ಲಜ್ಜೆ, ಭಯ ಮಿಶ್ರಿತ ನುಡಿ ಮತ್ತು ವಿವಿಧ ಭಾವನೆಗಳ ತಾಕಲಾಟದಿಂದ ಹೊರಬೀಳುವ ಆ ಬಡಪಾಯಿಯ ಪ್ರತಿಯೊಂದು ಮಾತೂ ಅವನ ಹೃದಯದ ಕಣಕಣವನ್ನು ಎಳೆ ಎಳೆಯಾಗಿ ಬಿಡಿಸಿತೋರಿದಂತಿದೆ.

ಈ ವಿಶಾಲ ವಿಶ್ವದಲ್ಲಿ ಉಪೇಕ್ಷಿತ ಜೀವಿಯಾಗಿ, ಆಸೆ ನಿರಾಶೆ, ಸ್ವಾಭಿಮಾನ-ದಾರಿದ್ರ್ಯಗಳ ತೂಗುಯ್ಯಾಲೆಯಲ್ಲಿ ಜೋಲಾಯಮಾನವಾಗಿ.ತೂಗುತ್ತಾ ಕೊನೆಗೆ ಶೂನ್ಯತೆಯ ಅನಂತ ಪಥದಲ್ಲಿ ದೃಷ್ಟಿಯನ್ನು ಹರಿಯಬಿಟ್ಟು ಮಾಯವಾದ ಜಮಾದಾರನ, ಅಲ್ಲ ಅವನಂತಹ ಸಾವಿರಾರು ಜಮಾದಾರರ-ಚಿತ್ರವನ್ನು ಚಿತ್ತ ಪಟಲದಿಂದ ಅಳಿಸುವುದು ಅಸಾಧ್ಯವಾಯಿತು. ನನಗರಿಯದಂತೆಯೇ ಹೃದಯದಿಂದ ನಿಟ್ಟುಸಿರೊಂದು ಹೊರಬಂತು. 'ಅಯ್ಯೋ ಒಂದು ಫೋಟೋ ತೆಗೆದು ಬಿಟ್ಟವರೆ' ಎಂದು ಕ್ಯಾಮರಾದವನೊಡನೆ ನಾನೂ ದನಿಗೂಡಿಸಿದೆ.

ನಿಮ್ಮ ವರ್ಗದ ದರಿದ್ರ ಜನಕೆ ವಾಸಿಸುವ ಕಲಕತ್ತಾದ ಗಲ್ಲಿಯೊಂದರ ಭೀಭತ್ಸವರ್ಣನೆ ಕಥೆಗಾರರ ಲೇಖನಿಯಿಂದ ಸ್ವಾಭಾವಿಕವಾಗಿ ಹರಿದು ಬಂದಿದೆ. ಜಮಾದಾರನ ಮಗನ ಮರಣವನ್ನು ಕೇಳುವವರೆ ಇಲ್ಲ, ಎಂಬುದನ್ನು ಹೇಳಿದ ರೀತಿ ಅತ್ಯಂತ ಮಾರ್ಮಿಕವಾಗಿದ್ದು ಗಮನಾರ್ಹವಾಗಿದೆ. ಕಲಕತ್ತಾದ ಈ ಕಥೆ ಪತ್ರಿಕೆಯಲ್ಲಿ ಪ್ರಕಟನೆಗೂ ಅರ್ಹವಲ್ಲ..... ಒಂದು ಕಾಗೆ ಕಪ್ಪಿನ ಮಗುವಿತ್ತು ಈ ಕೇರಿಯಲ್ಲಿ, ಈಗ ಇಲ್ಲಅಷ್ಟೆ!"

ಕಥೆ ಕುತೂಹಲವನ್ನು ಕೆರಳಿಸುತ್ತ ಮುಂದೆ ಸಾಗುತ್ತದೆ. ಸಂಭಾಷಣೆ ಉತ್ತಮವಾಗಿದ್ದು ಮನಮುಟ್ಟುವಂತಿದೆ. ಶೈಲಿಸರಳವೂ ಲಲಿತವೂ ಆಗಿ ಮನೋಹರವಾಗಿದೆ. ಆದುದರಿಂದ ಅನುವಾದಕರು ಮೂಲ ಕಥೆಯನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಿರುವರೆಂದರೆ ತಪ್ಪಾಗದು. ಕನ್ನಡಿಗರಿಗೆ ಅನ್ಯಭಾಷೆಯ ಇಂತಹ ಉತ್ತಮ ಕಥೆಗಳ ಪರಿಚಯವಾಗುವುದು ಅಗತ್ಯವಿದೆ. ಈ 'ಫೋಟೋ'ವನ್ನು ಜಯಂತಿಯ ಮೂಲಕ ಕನ್ನಡಿಗರ ಕೈಗಿತ್ತ ಲೇಖಕರನ್ನು ಮನವಾರೆ ಅಭಿವಂದಿಸುತ್ತೇನೆ.

— ———

ಸಾದರ ಸ್ವೀಕಾರ

೩೧. **ಧ್ಯಾನಭಾರತಿ.** (ಏಕಪಾತ್ರಾಭಿನಯ) ಬರೆದವರು ತಿರುಕ' ಪ್ರಕಾಶಕರು ಅನಾಥ ಸೇವಾಶ್ರಮ, ಪೋಸ್ಟ್ ಮಲ್ಲಾಡಿಹಳ್ಳಿ, ಹೊಳಲ್ಕೆರೆ ತಾಲ್ಲೂಕು. ಕ್ರೌ. ಅ. ೧೦ ಪುಟಗಳು. ಬೆಲೆ ೦೦.೫೫.

ನಾಡಿನಲ್ಲಿಯ ಇಂದಿನ ರಾಜಕೀಯ ದುರವಸ್ಥೆಗಾಗಿ ಭಾರತ ಮಾತೆ ನೊಂದು ನಿಟ್ಟುಸಿರಿಡುತ್ತ, ತನ್ನ ಅಂತರಂಗದ ಸಂತಾಪವನ್ನು ತೋಡಿಕೊಂಡಂತೆ, ಈ ಪುಟ್ಟ ರೂಪಕದಲ್ಲಿ ರೂಪಿಸಲಾಗಿದೆ. ಲೇಖಕರು ತಮ್ಮೆಯ ಉದ್ದೇಶವನ್ನಿರಿಸಿಕೊಂಡು ಈ ಕೃತಿಯನ್ನು ಬರೆದಿದ್ದಾರೆ.

೩೨. **ಗುಬ್ಬಿಯ ಹಾಡು** (ಮಕ್ಕಳ ಕವನಗಳ ಸಂಕಲನ, ನೆಯ ಆವೃತ್ತಿ). ಲೇಖಕರು ಶ್ರೀ. ಬಿ. ಬಿ. ಹಿಂಗಮಿರೆ, ಅಥಣಿ. ಪ್ರಕಾಶಕರು **ಹರಿಹರ** ಪ್ರಕಾಶನ, ಹರಿಹರ ಕ್ರೌ. ಅ. ೪೨ ಪುಟಗಳು, ಬೆಲೆ ೦೦. ೩೧.

ಮಕ್ಕಳ ಮನಸ್ಸಿಗೆ ರುಚಿಸುವಂತಹ ಕವನಗಳು ನಮ್ಮ ಉತ್ತರ ರ್ನಾಟಕದಲ್ಲಂತೂ ಇನ್ನೂ ಹುಟ್ಟಬೇಕಾಗಿದೆ. ಶ್ರೀ. ಹಿಂಗಮಿರೆ ಅವರ ಕವನ ಸಂಕಲನವಿದು ಅಂತಹ ಹುಟ್ಟಿನ ಆಶೆ ತೋರಿಸುವಂತಹ ರಾಗಿದೆ. ಇದರೊಳಗಿನ ಪ್ರತಿಯೊಂದು ಕವನವೂ ಚಿಕ್ಕಮಕ್ಕಳ ಮನಸ್ಸಿಗೆ ಮೆಚ್ಚಿಕೆಯಾಗುವಂತಿದೆ. ಆಯ್ದುಕೊಂಡ ವಸ್ತು, ಬೆಳೆಸಿದ ರೀತಿ, ಬಳಸಿದ ಭಾಷೆ ಎಲ್ಲವೂ ಶಿಶುಗೀತಗಳಿಗೆ ತಕ್ಕುವಾಗಿವೆ. ಇವರು ಮತ್ತೂ ಹೆಚ್ಚಾಗಿ ಇಂತಹ ಕವನಗಳನ್ನು ಬರೆಯಲಿ.

೩೩. **ನೆಲಸಂಪಿಗೆ** (ಕವನ ಸಂಕಲನ) ಲೇಖಕರು ಶ್ರೀ. ಬಿ.ಎ. ನದಿಯವರು. ಪ್ರಕಾಶಕರು ಸ್ನೇಹಪ್ರಕಾಶನ, ಶಮನೇನಾಡಿ, ಳಗಾಂವಿ ಜಿಲ್ಲೆ. ಕ್ರೌ. ಅ. ೫೮ ಪುಟಗಳು. ಬೆಲೆ ೧.೦೦.

೩೪. **ಪಂಚಾಂಗ ಪ್ರದೀಪ** (ಜ್ಯೋತಿಷ್ಯ ವಿಷಯಕ ಪುಸ್ತಕ) ಲೇಖಕರು ಶ್ರೀ. ಎನ್. ಕೆ. ಜೋಗಳೇಕರ, ಜ್ಯೋತಿಷ್ಯ ಕಾರ್ಯಾ-ಲಯ, ಜವಳೀಪೇಟೆ, ಧಾರವಾಡ. ಕ್ರೌ. ಅ. ೭೨ ಪುಟಗಳು. ಬೆಲೆ ೧.೦೦

ನಮ್ಮ ನಾಡಿನಲ್ಲಿ ಮನೆ-ಮನೆಗಳಲ್ಲಿಯೂ ಪಂಚಾಂಗ ಸೊಳೆಗೋ ಒಟಕ್ಕೋ ಜೋಲುಬಿದ್ದುದನ್ನು ನಾವು ಕಾಣುವೆವು. ಹೊಸ ವರ್ಷದ ಯುಗಾದಿಯ ಸಮಯದಲ್ಲಿ ಪಂಚಾಂಗಗಳ ಮಾರಾಟಕ್ಕೆ ಕಳೆಯೇರಿರುವುದು. ಯುಗಾದಿಯ ದಿನ ಪಂಚಾಂಗ ಜನರಿಂದ ಪೂಜೆ ಗೊಳ್ಳುವುದು. ಇದೆಲ್ಲ ನಿಜವಾದರೂ ಪಂಚಾಂಗದಲ್ಲಿರುವ ವಿಷಯದ ಸಂಪೂರ್ಣ ತಿಳುವಳಿಕೆಯುದ್ದು ಅದನ್ನು ಉಪಯೋಗಿಸುವರು ತೀರ ಕಡಮೆ ಜನರು ' ಜೋಯಿಸ ' ಎಂಬುದು ನಮ್ಮಲ್ಲಿ ಅನೇಕರಿಗೆ ಅಡ್ಡ ಹೆಸರು ಮಾತ್ರ ಇದ್ದಂತಿದೆ.

ಸಾಂಪ್ರದಾಯಿಕ ಜೀವನವನ್ನು ನಡೆಯಿಸಬೇಕೆನ್ನುವವರಿಗೆ, ಪ್ರತಿನಿತ್ಯವೂ ಪಂಚಾಂಗ ನೋಡಬೇಕಾದ ಅಗತ್ಯವಿರುತ್ತದೆ. ಅಂತಹ ಜನರಿಗೆ ಸುಲಭವಾಗಿ ಪಂಚಾಂಗಸ್ಥ ಸರ್ವವಿಷಯಗಳನ್ನೂ ಈ ಪುಸ್ತಕ ಪರಿಚಯ ಮಾಡಿ ಕೊಡಬಲ್ಲದು. ಇಂತಹದೊಂದು ಪ್ರಯೋಜನಕಾರಿಯಾದ ಪುಸ್ತಕವನ್ನು ಒದಗಿಸಿಕೊಟ್ಟದ್ದಕ್ಕಾಗಿ ಶ್ರೀ. ಜೋಗಳೇಕರರಿಗೆ ನಮ್ಮ ಧನ್ಯವಾದಗಳು.

೩೫ **ಯುಗಪುರುಷ** (ಮಾಸಪತ್ರಿಕೆಯ ದಸರಾ ವಿಶೇಷ ಸಂಚಿಕೆ) ಸಂಪಾದಕರು ಶ್ರೀ. ಕೊಡಮ್ತೂರು ಅನಂತ ಪದ್ಮನಾಭ ಉಡುಪಿ, ಕಿನ್ನಿಗೋಳಿ (ದ. ಕ.) ಕ್ರೌ. ಧಿದ ೧೦೮ ಪುಟಗಳು, ಬೆಲೆ ೧. ೫೦.

ಕನ್ನಡನಾಡಿನ ಬೇರೆ ಬೇರೆ ಭಾಗದ ಅನೇಕ ಜನ ಹಿರಿಯ—ತರುಣ ಲೇಖಕರ ಲೇಖನ – ಕವನ - ಕಥೆ - ಪ್ರಬಂಧಗಳು ಇದರಲ್ಲಿ ಅಚ್ಚಾಗಿವೆ. ನಮ್ಮ ವಿಶೇಷ ಸಂಚಿಕೆಗಳು ಇದುವರೆಗೂ ಹೊಸ ಕಾಲಕ್ಕೆ ತಕ್ಕಂತೆ ಸ್ವರೂಪದಲ್ಲಿ ಮಾರ್ಪಾಡನ್ನು ಮಾಡಿಕೊಂಡಿಲ್ಲ. ಇಪ್ಪತ್ತು ವರ್ಷಗಳ ಹಿಂದೆ ಹೊರಟ ವಿಶೇಷ ಸಂಚಿಕೆಗಳೂ ಹೀಗೆಯೇ ಚಿತ್ರವಿಚಿತ್ರ ಚಿತ್ರಾನ್ನದಂತೆ ಇರುತ್ತಿದ್ದವು.

೩೬. **ಮನೋಹರ** (ಮರಾಠೀ ಮಾಸಪತ್ರಿಕೆಯ ರಜತ ಮಹೋತ್ಸವ ವಿಶೇಷಾಂಕ) ಸಂಪಾದಕರು ಶ್ರೀ. ಮು. ಶಂ. ಕಿರ್ಲೋಸ್ಕರ, ಕಿರ್ಲೋಸ್ಕರ ಬಂಧು ಲಿ. ಪುಣೆ. ಕ್ರೌ. ಅ. ೧೪೪ ಪುಟಗಳು. ಬೆಲೆ ೧.೫೦.

ಮಹಾರಾಷ್ಟ್ರದ ಸಾಹಿತ್ಯ ಮತ್ತು ಲಲಿತಕಲೆಗಳ ಕಳೆದ ೫೦ ವರ್ಷಗಳ ಸಮಾಲೋಚನೆಗಳನ್ನು ಕುರಿತು ಅಧಿಕೃತ ಲೇಖಕರಿಂದ ಬರೆಯಿಸಿದ ಉತ್ತಮ ಲೇಖನಗಳು ಇದರಲ್ಲಿ ಚಿತ್ರಸಹಿತ ಪ್ರಕಟವಾಗಿವೆ. ಅಂತರಂಗ-ಬಹಿರಂಗ ಸೌಂದರ್ಯದಿಂದ ತುಂಬಿದ ವಿಶೇಷಸಂಚಿಕೆಯಿದು. ಸಂಪಾದಕರಿಗೆ ಧನ್ಯವಾದಗಳು.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ ! ಜಾನಪದ ಪ್ರೀತಿಗೀತಗಳು !!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣೆಯಾಕೆ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ನಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ–ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತ ಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವನನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತಳಗs — ಚೆಂದs ಗಂಧs ಹರಡೈತವ್ವಾ !

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ೮೦ ಪುಟಗಳು ಬೆಲೆ ರೂ. ೧. ೨೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು :

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Petgeri at Jayanti Office, Dharwar.

ಜಯಂತಿ

ಹಿರಣ್ಯಕಶಿಪು !

ಬಂದಿದೆ ಬರುತಲಿದೆ ಹಿರಣ್ಯಕಶಿಪುವಿನ ಆಡಳಿತ;
ಝಣ್ ಝಣ ಧಣ್ ಧಣ ಕುಣಿಯುತಲಿದೆ ಹಣದ ಭೂತ !
ಸೆರೆಹಿಡಿದು ಚೆಲ್ಲಿಬಿಟ್ಟಿದೆ ಸುರಲೋಕದ ದೇವತೆಗಳನೆಲ್ಲ–
ಮರೆಗೊಳಿಸಿ ಬಿಟ್ಟಿದೆ ರೂಢಿಯ ಋಷಿ-ಮುನಿಗಳನೆಲ್ಲ !

ಹಿರಣ್ಯಕನ ಸಿಂಹಾಸನವ ಹೊತ್ತು ನಿಂತಿದೆ ವೀರಕ್ಷಾತ್ರಕುಲ,
ಹಿರಣ್ಯಕಶಿಪುವಿನ ಗುಡಿಯನೆತ್ತಿ ಹಿಡಿದಿದೆ ಉದಾರ ವೈಶ್ಯಕುಲ !
ಕವಿಗಳು ಕೀರ್ತಿಸುವರಾ ಹಿರಣ್ಯಕನ ಕವನಂಗಳನು–
ಶಿಲ್ಪಿಗರು ಕಡೆವರಾ ದಾನವರಾಯನ ಭೀಕರಮೂರ್ತಿಯನು !

ಮಾನವನ ಹೃದಯವನು ಕಿತ್ತು ಬಿಸುಟಿದೆ ಹಿರಣ್ಯಕಶಕ್ತಿ,
ಮಾನವನ ಮನವ ತನ್ನೆಡೆ ಕೊಳ್ಳುತಿದೆಯಾತನ ಯುಕ್ತಿ !
ಮಾನವತೆಯ ಬಿಟ್ಟು ದಾನವನೃತ್ತಿಯ ಹಿಡಿದವಗೆ ಸಮೃದ್ಧಭುಕ್ತಿ,
ಮಾನವನಾಗಿ ಬಾಳಬೇಕೆನುವಾತ ಪಡೆವನು ಬೇಗ ಜೀವನ್ಮುಕ್ತಿ !

ಕಳವು–ಸುಲಿಗೆಗಳನೆ ಬಯಸುವಲ್ಲಿ ದಾನಬುದ್ಧಿಗೆಡೆಯಿಪ್ಪುದೆ ?
ಕೊಲೆಗಾರನಿಗೆ ವೀರಪಟ್ಟ ದೊರೆವಲ್ಲಿ ಕರುಣೆಗಾಸ್ಪದವಪ್ಪುದೆ ?
ಬಲುಮೆಯ ಕೈಚಳಕ ನಡೆದಿರುವಲ್ಲಿ ಸುಖ-ಶಾಂತಿಗಳು ಬದುಕಿಪ್ಪುವೆ ?
ಕಲೆಗಳೆಲ್ಲ ತಲೆಕೆಳಗಾಗಿ ನಿಂತಿರುವಲ್ಲಿ ಚೆಲುವು ಬಾಳಿಕೊಂಡಿಪ್ಪುದೆ ?

' ಅನ್ನಬೇಕು, ಅನ್ನಬೇಕೆಂಬ ಮೂಳನಾಯ್ಗಳನಾಚೆ ನೂಕು !
ಚಿನ್ನಬೇಕು, ಚಿನ್ನಬೇಕು; ಹಾಸಲು ಹೊದಿಯಲು ಚಿನ್ನಬೇಕು ! '
ಹಿರಣ್ಯಕವಾನವನ ರಾಜ್ಯದ ಒಂದೆ ಒಂದು ಶಾಶ್ವತಶಾಸನವಿದು !
ಪ್ರಹ್ಲಾದನ ನಲ್ನುಡಿಗಳನಾರೂ ಕೇಳರು ಕೇಳರಿಂದು !

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ.....

ಕನ್ನಡಿಗರಲ್ಲಿ ಕವಿಮಾತು (ಸಂಪಾದಕೀಯ)
ಸಂಪಾದಕರು ೧೪೧

ಭಗೀರಥ (ಕವನ)
'ರಂಜನ'ಭಟ್ಟ, ಮದ್ರಾಸ ೧೪೪

ಐವತ್ತೈದನೆಯ ನಂಬರಿನ ಮಂಚ (ಸಣ್ಣ ಕಥೆ)
ಶ್ರೀ ಜಿ. ಜೆ. ಹರಿಜಿತ್, ಮೈಸೂರು ೧೪೪

ನಾಳೆಯ ಭಾರತ (ಕವನ)
'ಆನಂದಕಂದ' ೧೯೦

ಡಾಕ್ಟರ್ ಜಾರ್ಜ್ ವಾಶಿಂಗಟನ್ ಕಾರ್ವರ್ (ಜೀವನವೃತ್ತ)
ಶ್ರೀ ಟಿ. ಆರ್. ನಾಡಗೀರ್ ಬಿ. ಎಸ್. ಸಿ.(ಟೆಕ್), ಮುಂಬಯಿ ೧೯೧

ಅಯ್ಯೋ ನಿನ ಕಥಿ ಸುಡ್ಲಿ (ವಿನೋದ ದೃಶ್ಯ)
ಶ್ರೀ ಬಿ. ಬಿ. ಹಿಂಗನಿರೆ, ಬಿ. ಎ. ಅಥಣಿ ೧೯೬

ದಿವ್ಯ ದೇವಾಲಯವು ಬೆಳಗುತಿಲ್ಲ (ಕವನ)
ಶ್ರೀ ಎಚ್. ಕೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೧೯೯

ಕಾಮಾಖ್ಯಾ ಮಂದಿರ (ಪ್ರದೇಶ ಪರಿಚಯ)
ಶ್ರೀ ಪಿ. ಗುಡಿ, ಗೋಹಟ್ಟಿ (ಆಸಾಮ) ೨೦೦

ರೋಮ್ಯಾಂಟಿಕ್ ಪೇಶಂಟ್ (ಸಣ್ಣ ಕಥೆ)
'ಆನಂದಕಂದ' ಧಾರವಾಡ ೨೦೩

ಶಿಕ್ಷಕನ ವ್ಯಕ್ತಿತ್ವದ ಬೆಳೆ (ಶೈಕ್ಷಣಿಕ)
ಶ್ರೀ ಅನ್ನದಾನೀಶ್ವರ ವಿರಕ್ತಮಠ ಬಿ. ಎ.; ಬಿ. ಟಿ. ಹುಬ್ಬಳ್ಳಿ ೨೦೪

ನಸುನಗುವ ನಾರಿ (ಕವನ)
ಮಾಲತೀಪ್ರಿಯ ೨೧೦

ವಿಕನಾದ (ಕವನ)
ಶ್ರೀ ಎ. ನಿ. ಸದಂಜೋಶಿ, ಚಿಕ್ಕೋಡಿ ೨೧೦

ಟೆಲಿಗ್ರಾಂ (ಸಣ್ಣ ಕಥೆ)
ಶ್ರೀ ಜೆ. ಎಂ. ಗಿರಿ, ಮೈಸೂರು ೨೧೧

ಸಾಹಿತ್ಯನಿರ್ಮಿತಿಯ ಶಿಕ್ಷಣರಂಗ
ಕುಮಾರಿ ಲಕ್ಷ್ಮಿ ಪಾಡಿ ಮತ್ತು ಶ್ರೀ ತೊರಗಲ್ಲ ೨೧೩

ಸಾದರಸ್ವೀಕಾರ ಕವರ್ ಒಳೆಯ ಪುಟ

ಜಯಂತಿ

ಸಂಪುಟ ೨೨] [ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಡಿ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೦ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕನ್ನಡಿಗರೊಂದಿಗೆ ಕಿವಿಮಾತು

ಇದೀಗ ಹೊಸವರ್ಷದ ಆರನೆಯ ಸಂಚಿಕೆ. ಇನ್ನು ಆರು ತಿಂಗಳುಗಳು ಕಳೆದರೆ, ಜಯಂತಿಯು ೨೨ ವರ್ಷಗಳು ಮುಗಿಯುವುವು. ಈ ಸಂದರ್ಭದಲ್ಲಿ ನಾನು ಕನ್ನಡಿಗರ ಕಿವಿಗೆ ಜಯಂತಿಯ ಕೆಲವು ಮರ್ಮದ ಮಾತುಗಳನ್ನು ತಲ್ಪಿಸಬೇಕೆಂದು ಸಂಕಲ್ಪಿಸಿಕೊಂಡಿದ್ದೇನೆ. ಜಯಂತಿಯ ವಿಷಯದಲ್ಲಿ ಕೊನೆಯವಾಗಿಯೆ ನಾನು ಕನ್ನಡಿಗರೆದುರು ಈ ಮಾತುಗಳನ್ನು ಆಡುತ್ತಿರುವೆನೆಂದು ಹೇಳಬಹುದು. ಏಕೆಂದರೆ ವಿಜ್ಞಾಪನೆ ಮಾಡಿಕೊಳ್ಳಬೇಕಾದವನಲ್ಲಿಯೂ ಒಂದು ಬಗೆಯ ಸ್ವಾಭಿಮಾನದ ಜಾಗೃತಿ ಇದ್ದೇ ಇರುವುದು. ಬಿನ್ನಹಕ್ಕೆ ಪ್ರತಿಯಾಗಿ ಜನತೆಯಿಂದ ಅಶ್ರದ್ಧೆ–ಔದಾಸೀನ್ಯಗಳೇ ದೊರೆಯತೊಡಗಿದರೆ, ಎಷ್ಟುಕಾಲ ಸಹಿಸಿಕೊಂಡಿರಲಿಕ್ಕೆ ಸಾಧ್ಯವಾದೀತು?

ಜಯಂತಿ ಬದುಕಿ ಕಾರ್ಯಮಾಡಬೇಕೆಂದು ಕನ್ನಡಜನತೆ ನಿಜವಾಗಿ ಅಪೇಕ್ಷಿಸುತ್ತಿದ್ದರೆ, ಅದಕ್ಕಾಗಿ ಬರಲಿರುವ ಆರು ತಿಂಗಳುಗಳ ಕಾಲವು ಪ್ರಯೋಗಕಾಲವಾಗಲಿ! ಈ ಆರು ತಿಂಗಳುಗಳ ಕಾಲದಲ್ಲಿ ಜಯಂತಿಯ ವಿಷಯಕವಾದ ಆತ್ಮೀಯತೆಯನ್ನು ತೋರಿ, ಅವಶ್ಯಕವಾದ ಆರ್ಥಿಕ ನೆರವನ್ನು ಜನತೆ ನೀಡದೆ ಹೋದಲ್ಲಿ, ಜಯಂತಿಯ ಭವಿಷ್ಯಜೀವನವನ್ನು ಕಾಲನ ತಲೆಯನೇಲೆ ಒಪ್ಪಿಸಬೇಕಾಗುವುದು.

ನಿಜವಾಗಿ ನೋಡಿದರೆ, ಜಯಂತಿಯ ವಿಷಯಕವಾದ ಪ್ರೀತಿ–ಮೆಚ್ಚಿಕೆಗಳು ಕನ್ನಡಿಗರಲ್ಲಿ ಇಲ್ಲದೆ ಇಲ್ಲ. ಅನೇಕ ಜನ ತರುಣ ಲೇಖಕರಿಗೆ ಜಯಂತಿ ಮಾತೃಸ್ಥಾನದಲ್ಲಿದೆ. ಉದಿತೋದಿತ ಲೇಖಕರು ಜಯಂತಿಯ ಮಡಿಲಲ್ಲಿ ಬೆಳೆಯಲು ಮನವಾರೆ ಬಯಸುತ್ತಲಿರುವರು. ಇವರೆಲ್ಲರಿಗೂ ಜಯಂತಿ ಬಹುಕಾಲ ಬದುಕಬೇಕೆಬ ಉತ್ಕಟವಾದ ಬಯಕೆ ಮಾತ್ರ ಇದೆ; ಆದರೆ, ಜಯಂತಿಯಂತಹ ಪತ್ರಿಕೆ ಬದುಕಬೇಕಾದರೆ, ಮೊದಲು ಬೇಕಾಗುವುದು ಹಣವೆಂಬುದರ ಕಡೆಗೆ ಇವರು ಲಕ್ಷ್ಯಕೊಟ್ಟಿರುವಂತಿಲ್ಲ. ತಾಯಿಯ ನಿಷ್ಕಾಮಪ್ರೀತಿ ಆಕೆ ಬದುಕಿ ಇರುವ ಕೊನೆಯ ಕ್ಷಣದ ವರೆಗೂ ಇವರಿಗೆ ದೊರೆತೀತು; ಆದರೆ ಬರಿಹೊಟ್ಟೆಯ ತಾಯಿ ಕೇವಲ ಇಚ್ಛಾಶಕ್ತಿಯ ಬಲದಿಂದ ಎಷ್ಟುದಿನ ಬದುಕಬಲ್ಲಳು?

ಜಯಂತಿಯು ಬಹುಕಾಲ ಬದುಕಿ ಕಾರ್ಯಮಾಡುತ್ತಿರಬೇಕೆಂಬ ಕೆಲವು ಜನ ಹಿತೈಷಿಗಳು ಆಗಾಗ ನನಗೆ ಹೇಳುತ್ತಿರುವರು.

'ನೀವು ನಾಡಿನಲ್ಲಿ ಸುತ್ತಾಡಿ, ಪ್ರತ್ಯಕ್ಷವಾಗಿ ಜನರನ್ನು ಕಂಡು ಕೇಳಿದರೆ ಯಾರೂ ಇಲ್ಲನ್ನೆರು. ಇದರಿಂದ ಜಯಂತಿಗೆ ಚಂದಾದಾರರು ಹೆಚ್ಚಾಗಿ, ನಿಶ್ಚಯವಾಗಿಯೂ ಅದರ ಜೀವನ ಭದ್ರವಾಗುವುದು!'

ಅವರು ಹೇಳುವ ಈ ನುಡಿ ಸತ್ಯವಿರಬಹುದು. ಆದರೆ ಅರುವತ್ತು ವರ್ಷಗಳ ವಯಸ್ಸನ್ನು ಸಮೀಪಿಸಲು ಬಂದಿರುವ ನನ್ನಲ್ಲಿ, ನಾಡಿನಲ್ಲಿ ಸುತ್ತಾಡುವ ಶಕ್ತಿ–ಉತ್ಸಾಹಗಳು ಉಳಿದಿಲ್ಲ; ಅಲ್ಲದೆ ಮೊದಲಿನಿಂದಲೂ ನನ್ನದೊಂದು ಆಶೆ: ಜಯಂತಿ ವ್ಯಕ್ತಿಯ ದಾಕ್ಷಿಣ್ಯದ ಬಲದ ಮೇಲೆ ಬದುಕದೆ, ತನ್ನ ಗುಣದ ಬಲದಿಂದ ಬದುಕಿದರೆ ಬದುಕಲಿ–ಎಂದು. ಈ ನನ್ನ ಆದರ್ಶವಾದ, ನನ್ನಿಂದ ಹಲವು ವರ್ಷ ಹಲವು ರೀತಿಯಲ್ಲಿ ಪ್ರಯೋಗ ಮಾಡಲು ಹಚ್ಚಿತು. ಈ ಪ್ರಯೋಗಗಳ ಮೂಲಕ ನಾನು ತನು–ಮನೋಧಗಳಿಂದ ಸೋತುಹೋಗಿದ್ದೇನೆ. ಅದರೂ ನನ್ನ ಆದರ್ಶವಾದನವನ್ನು ಬಿಡಲು ಮನಸ್ಸಿಲ್ಲದವನಾಗಿದ್ದೇನೆ. ದೈವವು ಶಕ್ತಿ–ಮನಸ್ಸುಗಳನ್ನು ಕೊಟ್ಟರೆ, ಇನ್ನೂ ಕೆಲವು ಕಾಲ, ನನ್ನ ಆದರ್ಶವಾದದಲ್ಲಿಯೆ ಜಯಂತಿಯನ್ನು ಮುಂದುವರಿಸಬಹುದು. ಈ ಧ್ಯೇಯಚ್ಯುತನಾಗಿ ಕನ್ನಡಿಗರ ಮೇಲೆ ನನ್ನ ವೈಯಕ್ತಿಕ ದಾಕ್ಷಿಣ್ಯದ ಹೊರೆಯನ್ನು ಹೊರಿಸಲು ನಾನೆಂದೂ ಸಿದ್ಧನಾಗಲಾರೆ.

ಆದರೂ ಜಯಂತಿಯ ಬಿನ್ನಹವನ್ನು ಎಲ್ಲ ಕನ್ನಡಿಗರಿಗೂ ತಲ್ಪಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿರುವೆನು. ಏಕೆಂದರೆ ಕರ್ನಾಟಕ ಸಾಹಿತ್ಯ-ಸಂಸ್ಕೃತಿಗಳ ಸಂವರ್ಧನೆ-ಪ್ರಚಾರಗಳ ಅವಶ್ಯಕತೆ, ಕಳವಳಗಳನ್ನು ಅರಿತ ನಾನು, ಜಯಂತಿಯಂತಹ ಪತ್ರಿಕೆ--ನಾನಿಲ್ಲದೆ ಹೋದರೂ-ಬೇರೆ ಇನ್ನಾರ ಆಶ್ರಯಪಡೆದಾದರೂ ಬದುಕಿಬಾಳಬೇಕೆಂದು ಹಾರಯಿಸುನೆನು. ಜಯಂತಿ ಬೇರೆಯವರ ಆಶ್ರಯಪಡೆದು ಬದುಕಬೇಕಾದರೂ ಆಗಲೂ ಜನತೆಯ ಸಹಾಯ-ಸ್ವಾಗತಗಳಿಲ್ಲದೆ ಅದು ಸಾಧ್ಯವಾಗದು, ಆದುದರಿಂದಲೇ ಸಮಸ್ತ ಜನತೆಯ ಹೃದಯದೆದುರು ಜಯಂತಿಯ ಕಷ್ಟ-ಕಾರ್ಪಣ್ಯಗಳ ಕಥೆಯನ್ನು ಇರಿಸುತ್ತಿರುನೆನು.

ಮಹಾಯುದ್ಧಕಾಲದಲ್ಲಿ ಜಯಂತಿ ಇಷ್ಟೊಂದು ಮಿಡುಕಬೇಕಾಗಲಿಲ್ಲ. ಅದರ ತರುವಾಯದ ಕೆಲವೊಂದು ಕಾಲಖಂಡದಲ್ಲಿಯೂ ಜಯಂತಿ ಇಷ್ಟೊಂದು ಹಣ್ಣಾಗಿರಲಿಲ್ಲ. ಇಷ್ಟೇ ಅಲ್ಲ, ಆ ಕಾಲಖಂಡದಲ್ಲಿ ಜಯಂತಿ ಭವಿಷ್ಯಕಾಲವನ್ನು ಉತ್ಕಟವಾದ ಆಶೆಯಿಂದ ನೋಡುತ್ತಲಿದ್ದಿತು. ಸ್ವಾತಂತ್ರ್ಯದ-ಸ್ವಾಯತ್ತ್ಯ ಪ್ರಾಂತೀಯತೆಯ ವಾತಾವರಣ,ಸುಖವಾಗಿ ತನ್ನನ್ನು ತೇಲಿಸಿಕೊಂಡು ಹೋಗಬಹುದೆಂದು ಇದು ಹಾರಯಿಸಿತ್ತು. ಆದರೆ ಸ್ವಾತಂತ್ರ್ಯ, ಸ್ವಾಯತ್ತತೆ ಎರಡೂ ಬಂದು, ನಿರೀಕ್ಷಿಸಿದ, ಶುಭವಾತಾವರಣವನ್ನು ತಲೆಕೆಳಗೆ ಮಾಡಿಬಿಟ್ಟು ವಿಕ್ಷಿಪ್ತ ವಾತಾವರಣವನ್ನು ತಂದು ನಿಲ್ಲಿಸಿರುವವು. ಇದರ ಪರಿಣಾಮವಾಗಿ, ಜಯಂತಿಯನ್ನು ಪೋಷಿಸುತಲಿದ್ದ ಬಹುಜನರು, ಗಾಬರಿಗೊಳ್ಳುವಂತಹ ಆರ್ಥಿಕ ಸಂಕಟಕ್ಕೆ ಸಿಕ್ಕಿಕೊಂಡರು; ಜಯಂತಿಯಂತಹ ಪತ್ರಿಕೆಗಳ ಅವಶ್ಯಕತೆಯನ್ನು ಅರಿಯದ ಬಹುಜನರು ಧನಪತಿಗಳಾಗಿ ಮೆರೆಯತೊಡಗಿದರು. 'ತಾನು ಉಣ್ಣುವ ದ್ರವ್ಯ ತಾಳ್ಯುದ್ದ ಇದ್ದರೇನು?'

ಜನತೆಯದಿಲ್ಲದೆ ಹೋದರೂ, ಜನತೆಯ ಹಿತವನ್ನು ಮಾಡಲು ಮುಂದೆಬಂದ ಸರಕಾರವಾದರೂ ಜಯಂತಿಯಂತಹ ಸಂಸ್ಕೃತಿ ನಿರ್ಝರಿಣಿಯ ಕಡೆಗೆ ಕಣ್ಣು ಬಿಡುವ ಲಕ್ಷಣಗಳೇನು ಕಾಣಲೊಲ್ಲವು. ಯಾವು ಯಾವುವೋ ಒಳದಾರಿಗಳಿಂದ ಹೋಗಿ, ಸರಕಾರದಿಂದ ಆರ್ಥಿಕ ಸಹಾಯ ಸಂಪಾದಿಸುವ ಚತುರರು ನಮ್ಮಲ್ಲಿ ಇಲ್ಲವೆಂತಲ್ಲ; ಅಂತಹ ಚಾತುರ್ಯವನ್ನು ಬಳಸುವುದು ಮಾತ್ರ ಜಯಂತಿಗೆ ಬೇಡವಾಗಿದೆ. ಸರಳ ಮಾರ್ಗದಿಂದ ನಡೆದು ಹೋಗಿ ಸರಕಾರದ ಬಳಿ ಕೇಳಿದರೆ, ಅದರಿಂದ ಜಯಂತಿಗೆ ದೊರೆಯುವ ಸಹಾಯವು ಶೂನ್ಯವೇ ಆಗಿದೆ.

ಯಾವ ರಾಜ್ಯದಲ್ಲಿ ನಿಜವಾದ ವಿದ್ಯಾವಂತನಿಗೆ ಹಸಿನೆಯಿಂದ ಬಳಲಬೇಕಾಗುವುದೋ, ಯಾವ ರಾಜ್ಯದಲ್ಲಿ ವಂಚಕನು ವಿದ್ಯಾವಂತನೆಂದು ನುನ್ನಣಿಗೆ ಪಾತ್ರನಾಗುವನೋ, ಎಲ್ಲಿ ನಿಜವಾದ ಕಲೆಗೆ ಬೆಲೆಯು ಸಿಕ್ಕದೆ, ತೇಪೆಯ ಕೆಲಸವೇ ಅತ್ಯುಚ್ಚಕಲೆಯೆಂದು ರಾಜಮರ್ಯಾದೆಯನ್ನು ಹೊಂದುವುದೋ-ಅಂತಹ ರಾಜ್ಯದ ಪತನದ ಭವಿಷ್ಯ ದೂರ ನಿರುವುದಿಲ್ಲ!' ಎಂದೊಬ್ಬ ಜೀವನವಿಜ್ಞಾನಿ ಜಗತ್ತಿಗೆ ಸಾರಿ ಹೇಳಿರುವನು. ನಮ್ಮ ಸರಕಾರ ಈ ಸಾರಿಕೆಯ ಕಡೆಗೆ ಕಿವಿಗೊಟ್ಟು ತನ್ನ ಸಹಾಯ ಸಹಕಾರಗಳು ಯೋಗ್ಯ ವ್ಯಕ್ತಿ ಯೋಗ್ಯ ಸಂಸ್ಥೆಗಳಿಗೆ ದೊರೆ. ತರೆ, ಜನತೆಗೂ ಒಳ್ಳೆಯದಾದೀತು; ಸರಕಾರಕ್ಕೂ ಒಳ್ಳೆಯ ಹೆಸರು ಬಂದೀತು.

ನಮ್ಮ ವಾಚಕವರ್ಗ ತನ್ನ ವಾಚನದ ಔಚಿತ್ಯಾನೌಚಿತ್ಯದ ಅರುಹಿನಿಂದ ಕೂಡಿದರೂ, ಜಯಂತಿಗೆ ಸ್ವಲ್ಪ ಉಸುರಾಡಿಸಲು ಅವಕಾಶ ದೊರೆತೀತು. ನಮ್ಮಲ್ಲಿ ಬಹಳ ಜನರಿಗೆ ಏನಾದರೂ ಓದಬೇಕೆಂಬ ಎಚ್ಚರ ಮೂಡಿದೆ ಹೊರತು, ಏನು ಓದಬೇಕೆಂಬ ವಿವೇಕ ಹೆಚ್ಚಾಗಿ ತಲೆದೋರಿಲ್ಲ. ಎಂತಲೇ ನಮ್ಮ ನಾಡಿನ ವಾಚನಾಲಯಗಳಲ್ಲಿ ತರಿಸುವ ಪತ್ರಿಕೆಗಳೆಂದರೆ, ಬಣ್ಣ ಬಣ್ಣದ ಚಿತ್ರದ ಪತ್ರಿಕೆಗಳು; ಕ್ಷಣಿಕ ಸಂವೇದನೆಗಳಿಂದ ಮನಸ್ಸನ್ನು ವಿಕೃತಿಗೊಳಿಸುವ ಪತ್ರಿಕೆಗಳು. ನಮ್ಮ ಬಹುಜನ ವಾಚಕವರ್ಗಕ್ಕೆ ಭವಿಷ್ಯದ ಆರೋಗ್ಯಸಂತಾನದ ಅಗತ್ಯದ ಯೋಚಯೇ ಇರುವಂತಿಲ್ಲ. ಎಂತಲೇ ಶುಭಭವಿಷ್ಯಕ್ಕಾಗಿ ಹಂಬಲಿಸುವ ಜಯಂತಿಯಂತಹ ಪತ್ರಿಕೆಗಳಿಗೆ ತಮ್ಮಲ್ಲಿ ಆಶ್ರಯಕೊಡುವ ಅಪರಾಧವನ್ನೇ ಅವು ಮಾಡುವುದಿಲ್ಲ.

ಆರ್ಥಿಕದಾರಿದ್ರ್ಯದ ಕಾರಣದಿಂದ ಜಯಂತಿಗೆ ವ್ಯಕ್ತಿಗಳ ಸಹಾಯ ಸಿಕ್ಕುವಂತಿಲ್ಲ; ಸಾಂಸ್ಕೃತಿಕ ದಾರಿದ್ರ್ಯದ ಮೂಲಕ ಇದಕ್ಕೆ ಸಂಸ್ಥೆ-ಸಂಘಗಳ ಸಹಾಯ ಸಿಕ್ಕುವಂತಿಲ್ಲ. ಹೀಗಿರುವಾಗ, ಜಯಂತಿ ಜೀವಿಸಬೇಕು ಹೇಗೆ? ಕೇವಲ ಆಶಾವಾದಿಯಾಗಿ ನಾನು ಇದು ವರೆಗೆ, ನನ್ನ ಬಾಯಲ್ಲಿಯ ತುತ್ತನ್ನು ಜಯಂತಿಗೆ ಕೊಟ್ಟು ಅದನ್ನು ಬದುಕಿಸಿಕೊಂಡು ಬಂದೆ. ಈಗ ನನಗದು ಸಾಧ್ಯವಿಲ್ಲದಂತಾಗಿದೆ. ಆದುದರಿಂದಲೇ ಜಯಂತಿಯ ಭವಿಷ್ಯದ ಭದ್ರತೆಗಾಗಿ, ಕನ್ನಡ ಜನತೆಗೆ ಈ ಮುಂದಿನ ಆರು ತಿಂಗಳುಗಳ ಅವಕಾಶವನ್ನು ಒಪ್ಪಿಸಿರುವೆನು. ಬೇಕಾದರೆ ಅವರು ಜಯಂತಿಗೆ ಹೊಸ ಜೀವನವನ್ನು ತಂಬಿ ಮುಂದುವರಿಸಲಿ; ಬೇಡವಾದರೆ ಇದರ ಅವತಾರದ ಕೊನೆಗೆ ಕಾರಣರಾಗಲಿ.

ಜಯಂತಿಗೆ ಸಹಾಯಕರು

ಮುಂಬಯಿ ಏರ್‌ಪೋರ್ಟ್‌ನಲ್ಲಿರುವ ಕನ್ನಡ ಗೆಳೆಯರು ಜಯಂತಿಗೆ ದೀಪಾವಳಿಯ ಕಾಣಿಕೆಯೆಂದು ೨೦ ರೂ. ಗಳನ್ನು ಕಳುಹಿಸಿರುವರು. ಅವರ ಆತ್ಮೀಯವಿಶ್ವಾಸಕ್ಕಾಗಿ ಜಯಂತಿ ತನ್ನ ಪ್ರೀತಿಯ ವಂದನೆಗಳನ್ನು ಸಲ್ಲಿಸುತ್ತದೆ.

—ಬೆಟಗೇರಿ ಕೃಷ್ಣಶರ್ಮ

ಭಾರ್ಗವಿ

[ಪೌರಾಣಿಕ ಜೀವನರೂಪಕದ ವಿಮರ್ಶೆ]

ಶ್ರೀ ಸತ್ಯನಾರಾಯಣ ಕೃ. ಹೊರಗಲ್ಲು, ನಿಪ್ಪಾಣಿ.

ವ್ಯಕ್ತಿತ್ವಗಳಿಗೆ ಕುಂದು ಬರದಂತೆ ಪರಿಸರದ ಆಭಾಸವಾಗದಂತೆ ಪೌರಾಣಿಕ ಶಬ್ದಚಿತ್ರವನ್ನು ಕೊಡುವುದು ಕಷ್ಟಸಾಧ್ಯವಾದ ಮಾತು. ಅದನ್ನು ಹೇಳುವ ರೀತಿಯಲ್ಲಿ ರಸವಿರಬೇಕು. ಚಿತ್ತಫಲಕದ ಮೇಲೆ ಆ ಚಿತ್ರ, ಆ ಮನೋಧರ್ಮ, ಶಾಶ್ವತ ಪರಿಣಾಮವನ್ನುಂಟುಮಾಡಬೇಕು.

ಇನ್ನುಳಿದ ವಿಷಯಗಳ ನಿರೂಪಣೆಯ ಪ್ರಾಕಾರ ತುಂಬ ವಿಶಾಲವಾದುದು; ಸಾಧಕರು ರಾಗಾಲಾಪ ಚತುರನಂತೆ ಬೈಕಾದಲ್ಲಿ ಹರಿದಾಡಿ ತನ್ನ ಗುರಿಯನ್ನು ಸೇಸಬಹುದು; ಆದರೆ ಪೌರಾಣಿಕರೂಪಕದ ಅವಕಾಶ ಸಂಕುಚಿತವಾದುದು. ಅಲ್ಲಿ ಸ್ವಚ್ಛಂದಕ್ಕೆಡೆಯಿಲ್ಲ. ಪಲ್ಲವಿಕಾರನಂತೆ ಒಂದು ನಿರ್ದಿಷ್ಟ ಎಲ್ಲೆಯಲ್ಲಿ ತನ್ನ ಕೌಶಲ್ಯ ಪ್ರದರ್ಶಿಸಬೇಕಾಗುವದು.

[ಹಿಂದಿನ ಪುಟದಿಂದ ಬಂದುದು]

ಅವತರಣಿಕೆಗಳಿಂದ ಅದನ್ನು ಪೂರಯಿಸಿದ್ದು ಕಥೆಯ ಸೌಂದರ್ಯವನ್ನು ವನ್ನು ಹೆಚ್ಚಿಸಿದ್ದು ಮಾತ್ರವಲ್ಲದೆ, ವೈಶಿಷ್ಟ್ಯಪೂರ್ಣವಾಗಿದೆ. ಓದಿ ಮುಗಿಸಿದಾಗ ಒಂದೆರಡು ನಿಮಿಷ ವಿವಿಧಭಾವನೆಗಳ ತಾಕಲಾಟದಿಂದ' ಸ್ತಂಭಿತಗೊಳ್ಳುವಂತಹ 'ರಸದೊಸರು ಜಿನುಗುತ್ತದೆ. ಶಿಖರವನ್ನು ಮುಟ್ಟಿದ ರೀತಿ ಚೆನ್ನಾಗಿದೆ.

' ಜೂಜು '—ಎನ್ನುವ ಶಬ್ದವನ್ನು ಕೇಳಿದಾಗ, ಅದರ ಹಿನ್ನೆಲೆಯಲ್ಲದೇನೋ ದುರಂತಮಯ ಚಿತ್ರ ಅಸ್ಪಷ್ಟವಾಗಿ ಓದುಗರ ಕಣ್ಣಮುಂದೆ ನಿಲ್ಲುತ್ತದೆ. ಪ್ರಸ್ತುತ ಕಥೆಗಿತ್ತ ಆ ಶಿರೋನಾಮವು ನಿಜವಾಗಿಯೂ ಬಹಳ ಅರ್ಥ ಪೂರ್ಣವಾಗಿದೆ ಎನ್ನುವುದಕ್ಕೆ ಸಂದೇಹವಿಲ್ಲ.

ಉತ್ತಮ ಗುಣಗಳನ್ನೊಳಗೊಂಡ ಈ ಕತೆ ಸಮಾಜಕ್ಕೆ ಉಪಕಾರಿ ಎನ್ನಲು ಸಂಶಯವಿಲ್ಲ. ಮೂಲದ ರಸ, ಭಾವ, ಸೌಂದರ್ಯಗಳಿಗೆ ಲೋಪಬಾರದಂತೆ ಅನುವಾದ ಮಾಡುವುದು ತುಂಬಾ ಹೊಣೆಗಾರಿಕೆಯ ಕೆಲಸ. ಆದ್ದರಿಂದ ಇತರ ಭಾಷೆಯ ಸಾಹಿತ್ಯವನ್ನು ಕನ್ನಡಿಗರೂ ಮನಸಾರೆ ಸವಿಯುವಂತೆ ಪರಿಪಕ್ವಗೊಳಿಸಿದ ಪ್ರಸ್ತುತ ಕಥಾಕರ್ತೃಗಳಾದ ಶ್ರೀ. ಗೋವರ್ಧನಾಚಾರ್ಯ ಅವರ ಯತ್ನವು ಶ್ಲಾಘನೀಯವೇ ಸರಿ.

ಹಾಗೆಯೇ ಲೇಖಕರಿಂದ—ಕನ್ನಡ ಸಾಹಿತ್ಯದೇವಿಯ ಚರಣಗಳಲ್ಲಿ ಇಂತಹ, ಇನ್ನೂ ಸುಂದರವಾದ, ಸುಗಂಧಯುಕ್ತವಾದ ಪುಷ್ಪಗಳು ಅರ್ಪಿತವಾಗಲಿ-ಎಂದು ಹಾರಯಿಸುತ್ತೇನೆ. ■

ಇಲ್ಲಿ ' ಭಾರ್ಗವಿ ' ಎಂಬ ಪೌರಾಣಿಕ ಜೀವನದ ರೂಪಕ, ಅತ್ರಿ ಮಹರ್ಷಿಯ ಪುತ್ರಿ ಭಾರ್ಗವಿಯ ಹಾಗೂ ಮುಕ್ತಿಗೆ ಮುಖ್ಯ ನಿರಭಿಮಾನವೇ ಇಲ್ಲವೆ ಭಕ್ತಿಯೇ ? – ಎಂಬ ವಿಷಯವನ್ನು ಆಳವಡಿಸಿಕೊಂಡಿದೆ. ಅನಸೂಯೆಯ ಸ್ವಾಗತದೊಂದಿಗೆ ಪ್ರಾರಂಭವಾಗಿ ಸಂಜೆಯ ಸೊಬಗಿನೌತಣದೊಂದಿಗೆ ಕೊನೆಗೊಳ್ಳುವ ಈ ರೂಪಕವು ಮನೋಹರವಾಗಿದೆಯೆನ್ನಲಡ್ಡಿಯಿಲ್ಲ.

ಉದ್ದೇಶಕ್ಕೆ ಭಂಗ ಬಾರದಿರಲು ಮೊದಲು ಲೇಖಕರು, ತಮ್ಮ ಉದ್ದೇಶವನ್ನು ಖಚಿತಪಡಿಸಿಕೊಂಡು, ಅದನ್ನು ಯಶಸ್ವಿಗೊಳಿಸಲು ಶ್ರಮಿಸಬೇಕು. ಈ ತತ್ತ್ವದ ಸಡಿಲತೆಯು ರೂಪಕದುದ್ದಕ್ಕೂ ಕಾಣಿಸಿಕೊಳ್ಳುತ್ತದೆ.

ಅತ್ರಿಮಹರ್ಷಿಯು ಮುಕ್ತಿಗೆ ಮುಖ್ಯ ನಿರಭಿಮಾನವೆಂದು ಅಭಿಪ್ರಾಯಪಡುತ್ತಿದ್ದರೆ– ಭಾರ್ಗವಿಯು " ಜ್ಞಾನವಿಲ್ಲದೆ ಮೋಕ್ಷವಿಲ್ಲ " ಎಂಬ ಮಾತನ್ನು ಸಮರ್ಥಿಸುತ್ತಾಳೆ. ಮಗುದೊಂದೆಡೆಯಲ್ಲಿ ಅನಸೂಯೆಯು " ಆದರೆ ಸ್ತ್ರೀಯರನ್ನು ನೋಡು ! ಕ್ಷಮೆ, ಪ್ರೇಮ, ಅಹಿಂಸೆ ಅವಳಿಗೆ ಪ್ರಕೃತಿದತ್ತವಾದ ವರಗಳು. ದೈನೀ ಪ್ರಕೃತಿ ಪಡೆದಿರುವ ಅವಳಿಗೆ ಮೋಕ್ಷ ಅತಿ ಸುಲಭ " ಎಂಬ ಭಾವ ವ್ಯಕ್ತಪಡಿಸುತ್ತಾಳೆ. ಹಾಗಾದರೆ ಮುಕ್ತಿಗೆ ಅವಶ್ಯವಾದುದು ನಿರಭಿಮಾನವೇ, ಜ್ಞಾನವೇ, ಇಲ್ಲವೆ ಕ್ಷಮೆ,-ಪ್ರೇಮ-ಅಹಿಂಸೆಗಳೆ ? ಕೊನೆಗೂ ನಿರ್ಣಯವಿಲ್ಲದೆ ಛಿನ್ನವಾಗುತ್ತವೆ. ಲೇಖಿಕೆಯರ ಡೋಲಾಯಮಾನ ಸ್ಥಿತಿ ಸ್ಫುಟವಾಗಿದೆ.

" ಆದರ್ಶಸತಿಯೆಂದು ಹೊಗಳುತ್ತಿದ್ದಾರೆ. ದೇವಿ, ಸತೀಧರ್ಮವನ್ನು ಜಗತ್ತಿಗೆ ಸಾರುತ್ತಿದೆ ನಿನ್ನ ಜೀವನ " ಎಂಬ ಮಾತುಗಳ ಪುಷ್ಟಿಗಾಗಿ, ಹಿನ್ನೆಲೆಗಾಗಿ ಅನಸೂಯೆಯು ಹಳ್ಳಿಯನಳಿಗೆ ಹರಸುವ ಸಂದರ್ಭ ತುಂಬ ಸಮಂಜಸವಾದರೂ, ಅಲ್ಲಿ ರೂಪಕಕಾರರು ಎಡವಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ರೈತನ ಪತ್ನಿಯ ಗೋಳಿನ ಕಥೆಯ ಕೊನೆಗೆ ಅನಸೂಯೆ ಪ್ರಶ್ನಿಸುತ್ತಾಳೆ : " ಪಾಪ ಪಾಪ, ನಿನ್ನ ತವರಿನ ಕಡೆ ಯಾರೂ ದಿಕ್ಕಿಲ್ಲವೇನಮ್ಮಾ ? ಈ ನುಡಿ ಅನಸೂಯೆಯ ಆದರ್ಶಸತೀತ್ವಕ್ಕೆ ಎಳ್ಳಷ್ಟೂ ಶೋಭೆಯನ್ನು ತರುವುದಿಲ್ಲ. ' ಗಂಡನಿಂದ ತೊಂದರೆಯಾದರೆ ತವರಿಗೆ ಹೋದರಾಯಿತು ' ಎಂಬ ಭಾವನೆ ಆದರ್ಶಸತಿಯಲ್ಲಿ ಅಂಕುರಿಸುವುದು ತೀರ ಅಸಮಂಜಸಕ್ಕೆಡೆಗೊಟ್ಟಿದೆ. ಸಂಭಾಷಣೆಯಲ್ಲಿಯೂ ಅಷ್ಟೇ. ಭಾಷಾಭೇದವಿಲ್ಲ. ಇಷ್ಟೆ ಅಲ್ಲ, " ಆಕೆ " ಯ ಮಾತುಗಳು ಅನಸೂಯೆಗೇ ಉಪದೇಶಪರವಾಗಿವೆ.

ಅತ್ರಿಋಷಿ ಹೇಳುತ್ತಾರೆ : " ದೇವಿ, ಎಲ್ಲರೂ ನಿನ್ನಂತಿದ್ದರೆ ಲೋಕವೇ ನಾಕವಾಗುತ್ತಿತ್ತು. ನಿನ್ನಂತಹ ಸಾಧ್ವಿಯರು ನಕ್ಷತ್ರಗಳಂತೆ ಅಲ್ಲೊಬ್ಬರು, ಇಲ್ಲೊಬ್ಬರು ಬೆಳಕು ನೀಡುತ್ತಿದ್ದಾರೆ " ಅನಸೂಯೆ ಅನ್ನುತ್ತಾಳೆ : "ಅದರಲ್ಲೇನು ವಿಶೇಷತೆ ? ನನ್ನ ಸ್ವಭಾವ-ಸಹಜವಾಗಿ ನಡೆಯುತ್ತೇನೆ " ಈ ಉಕ್ತಿಯ ಒಲವು ಆತ್ಮಪ್ರಶಂಸೆಯ ಕಡೆಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಇದೇನೂ ದೊಡ್ಡ ತಪ್ಪಲ್ಲದಿದ್ದರೂ ನಿರಭಿಮಾನದ ಬಗೆಗೆ ರೂಪಕದಲ್ಲಿ ಚರ್ಚಸಲ್ಪಟ್ಟಿದೆ.

ಲಗ್ನ ನಿರಾಕರಿಸುವ ಭಾರ್ಗವಿಯ, ವಿಚಾರಸರಣಿಯ ಅಂತ್ಯಕ್ಕೆ ಅನಸೂಯೆ ಆಶ್ಚರ್ಯದಿಂದ ಅನ್ನುತ್ತಾಳೆ : " ಮಗೂ, ಭಾರ್ಗವೀ, ಹೀಗೆ ಮಾತಾಡಿದುದನ್ನು ನಾನು ಕೇಳಿರಲೇ ಇಲ್ಲ. ಇಷ್ಟು ಮಾತುಗಳನ್ನು ಹೇಗೆ ಕಲಿತೆ? " ಇದಕ್ಕೂ ಮೊದಲು ಪತಿಯೊಡನೆ " ನನ್ನೊಡನೆ ವಾದಕ್ಕೆ ಪ್ರಾರಂಭಿಸುತ್ತಾಳೆ, ನಾನು ಸೋತು ಸುಮ್ಮನಾಗುತ್ತೇನೆ " ಎಂದು ಹೇಳುವ ಮಾತು ಶುದ್ಧ ಸುಳ್ಳೆಂದೆನಿಸುತ್ತದೆ.

ಮದುವೆಯ ಬಗೆಗೆ ಮೊದಲನೆಯ ಮಾತಿಗೆ " ನಿಮಗೂ ಭಾರವಾಗಿರುವುದು ತಪ್ಪು; ದೇವರ ಸ್ವತ್ತಾದ ಕಂದಮೂಲಗಳನ್ನು ತಿಂದು ಕಾಲಹಾಕುವೆನು " ಎಂದೂ, ಅನುಸೂಯೆಯ ಉಪದೇಶದನಂತರ " ಹಾಗಾದರೆ ನನಗಿನ್ನೂ ನನ್ನ ಕರ್ತವ್ಯಗಳೇನೆಂದು ತಿಳಿದಿಲ್ಲ " ಎಂದೆನ್ನುವ ಭಾರ್ಗವಿಯಲ್ಲಿ, ಸಿಡುಕು-ಚಂಚಲತೆಗಳು ಆವಿರ್ಭವಿಸಿದಂತಾಗಿವೆ.

ಸುಮಂತನು ಕಾಶೀಯಾತ್ರೆ ಮಾಡಿಬಂದ ಬಗ್ಗೆ ಗುರುಗಳ ಎದುರು " ಏನೊ ಹೋಗಿ ಬಂದೆ " ಎಂದು ಎಷ್ಟು ಅಲಕ್ಷ್ಯಿಸಿ ಹೇಳುತ್ತಾನೆಯೋ, ಅಷ್ಟೇ ಉತ್ಸಾಹ ಅವರು ' ವಿವರಿಸು ' ಎಂದಾಗ, ತೋರಿಸುವುದು ವಿಲಕ್ಷಣವಾಗಿದೆ. ಮುಂದುವರಿದು ಕೊನೆಗೆ " ನನಗಂತೂ ಆ ಸ್ಥಳವನ್ನು ಬಿಡಲು ಮನಸ್ಸೇ ಆಗಲಿಲ್ಲ " ಎಂದೆನ್ನುತ್ತಾನೆ. ಆಗ ಋಷಿಗಳು " ನಿಲ್ಲದಿದ್ದರೆ ತಾನೆ ಏನು ? ಗೂಗೆ ಗುಡಿಯಲ್ಲಿದ್ದಾಕ್ಷಣ ಪುಣ್ಯಗಳಿಸುವುದೇ ? " ಅನ್ನುವರು. ಎಂತಹ ವಿಪರ್ಯಾಸ ! ಲೇಖಕಿಯರ ಅಜಾಗರೂಕತೆಯ ಮೂಲಕ, ಉತ್ತಮ ಆಕ್ಷೇಪ ಹಾಸ್ಯವಾಗಿ ಪರಿಣಮಿಸಿದೆ. ನಗೆಯೊಂದಿಗೆ ರೂಪಕಕಾರ ವಿವೇಕವನ್ನು ಕುರಿತು ಶಂಕಿಸುವಂತಾಗಿದೆ.

ಭಾಷೆ ಪ್ರೌಢವಾದರೂ ಪುನರುಕ್ತಿಗಳಾಗಿರುವುದರಿಂದ ತೆರೆಯೆಳೆದಂತಾಗಿದೆ. ಪತಿಯಿಂದ ಪತ್ನಿಯ ಗುಣಗಾನ ಕೊಂಚ ಕಡಮೆಯಾಗಿದ್ದರೆ ಸೂಕ್ತವಾಗುತ್ತಿತ್ತೆನೋ. ಸೂಕ್ಷ್ಮವಾಗಿ ಪರಿಶೀಲಿಸಿದರೆ ' ರಾಕ್ಷಸ ', ' ಮಾತೃಹೃದಯ ', ಮುಂತಾದ ಇಂತಹ ಶಬ್ದಗಳು ಬಲವಂತದಿಂದ ಬಂದುವುಗಳೆಂದು ಗೊತ್ತಾಗುತ್ತದೆ. ರೂಪಕದ ಕೊನೆಗೆ ವಿಷಯಾಂತರವಾಗಿದೆ.

ಇಷ್ಟಿದ್ದರೂ ರೂಪಕವು ಆಕರ್ಷಕವಾಗಿದೆ. ಆಶ್ರಮದ ನೈಜ-ಚಿತ್ರವನ್ನೊದಗಿಸಲು ಅನೇಕ ಮಾತುಗಳು ತುಂಬಾ ಕುಶಲತೆಯಿಂದ ಬಂದು, ರೂಪಕಕಾರರ ಕಲ್ಪಕತೆಗೆ ತಲೆದೂಗಿಸುತ್ತವೆ. " ಪಾಪಿಯಲ್ಲೂ ಪುರುಷೋತ್ತಮನನ್ನು ಕಾಣುವುದು ಪ್ರೇಮ " ಇಂತಹ ವಿವೇಕ ಪೂರ್ಣವಾಕ್ಯಗಳು ಅಲ್ಲಲ್ಲಿ ಕಂಡು, ನಿರೂಪಣೆಗೆ ಕಳೆಯಿತ್ತಿವೆ. ಸುಮಂತನೆದುರು ಪತಿ-ಪತ್ನಿಯರು ಭಾರ್ಗವಿಯ ಬಗೆಗೆ ಮಾತಾಡಿದ್ದು ಉದ್ದೇಶಪೂರ್ವಕವಾಗಿ ಎಂದು ಹೇಳಲು, ಲೇಖಕಿಯರು ಬಳಸಿಕೊಂಡ ಭಾವ ಮೆಚ್ಚುವಂತಹದಾಗಿದೆ; ಸುಮಂತನ ಪಾತ್ರ ಚಿತ್ರಫಲಕದ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಭಾರ್ಗವಿಯನ್ನು ಬಾಳ-ಸಂಗಾತಿಯನ್ನಾಗಿ ಮಾಡಿಕೊಳ್ಳಲು ಆತ ಇಷ್ಟಪಡುವುದು ಸ್ಪಷ್ಟವಿದೆ.

ಇಂಥ ಶೈಲಿಸಂಪತ್ತುಳ್ಳ ರೂಪಕಕಾರರು ಇದಕ್ಕೂ ಚೆನ್ನಾಗಿ ಬರೆಯಲಿಲ್ಲವಲ್ಲಾ - ಎಂಬ ಕೊರಗು ಮಾತ್ರ ಉಳಿಯುವುದು.

ಭಗೀರಥ

" ರಂಜನ " ಭಟ್ಟ, ಮದ್ರಾಸ.

೧

ಬಿದ್ದ ಬೂದಿಗು ಅಮೃತ
ತಂದು ನೀಡುವೆನೆಂದ
ಕಾಲ ಬುಡದಲೆ ಕೊಳೆತು
ಕುಳಿತ ಬಾಳನು ಹಳಿದ.
ತನ್ನ ಕುಲವನೆ ನೆನೆದ,
ಮನುಕುಲವ ಮರೆತ.
ಜಡೆಕಟ್ಟಿ ನಡುಸುತ್ತಿ,
ಅದೊ ಅಲ್ಲಿ ಸಿದ್ಧನವ—
ಮನುಕುಲವ ಮರೆತವನೆ
ಭಲೆ ಭಗೀರರಥನಾದ—

೨

ಇಂದು ನಾನೂ ಹೊರಟೆ—
ನನ್ನವಳಿಗಾಪತ್ತು.
ಕಂಡುಕಾಣದ ಹಾಗೆ,
ಕೇಳಿ ಕೇಳದ ಹಾಗೆ
ಬಿಕ್ಕೆಬೇಡುವ ಬೀದಿ
ಹಾದಿ ತುಳಿದೇ ನಡೆದೆ.
ಅವರವರ ಉದ್ಧಾರ,
ಅವರವರ ಸುತ್ತಿಹುದು
ಅಂದಿಗಿಂದಿಗು ಒಂದೆ—

೩

ಹೇಳು ಓ ಮನುಕುಲವೆ,
ನಿನಗಾವ ಜಾತಿಕುಲ.
ಆಗ ಬರಬಹುದೇನೊ
ಮುಗಿಲಗಂಗೆಯೆ ಇಳಿದು!
ಅಲ್ಲಿವರೆಗೂ ಕಾಯಿ,
ಬಿದ್ದುಬೂದಿಯೆ ಆಗಿ—
ಬಿದ್ದಬೂದಿಗೂ ಅಮೃತ
ತಂದು ನೀಡುವೆನೆಂದ
ಕಾಲಬುಡದಲೆ ಕೊಳೆತು
ಕುಳಿತ ಬಾಳನು ಹಳಿದ.

ಐವತ್ತೈದನೆಯ ನಂಬರಿನ ಮಂಚ

ಶ್ರೀ ಜಿ. ಜಿ ಹಂಜೀತ್

ಮಹಾರಾಜಾ ಕಾಲೇಜು, ಮೈಸೂರು.

(ಅನುವಾದಿತ ಕಥೆ) *

ಮನಸ್ಸಿನ ಆಶೆಯ ಉತ್ಕಟತೆ, ಮನುಷ್ಯನನ್ನು ಎಂತೆಂತಹ ಘನರೋಗಗಳಿಂದಲೂ ಬದುಕಿಸಬಲ್ಲದು. ಅದೇ ಅವನಿಗಾಗ ಸಂಜೀವಿನಿಯಾಗುವುದು. ನಿರಾಶೆಯ ಆಘಾತ ಎಂತಹ ನಿರೋಗಿಯನ್ನೂ ಸಾವಿಗೆ ಗುರಿ ಮಾಡುವುದು. ಪಾಪ ಸಾಯಲಾದ ಅಮರ, ಯಮದೂತರನ್ನು ಹೋರಾಡಿ ಹಿಂದಕ್ಕಟ್ಟಿದ; ಆದರೆ....!

ಆಸ್ಪತ್ರೆಯ ಆ ವಾರ್ಡಿನ ಬಾಗಿಲಿನ ಬಳಿ ನೇತುಹಾಕಿದ್ದ ಹಲಗೆಯ ಮೇಲೆ 'ಸೀರಿಯಸ್ ಕೇಸಿಸ್' ಎಂದು ಬರೆಯಲಾಗಿತ್ತು. 'ಆ ವಾರ್ಡಿನೊಳಕ್ಕೆ ಹೋದ ರೋಗಿ ಅದೃಷ್ಟವಶದಿಂದಲೇ ಬದುಕಿ ಹೊರಬರಬೇಕು' ಎಂಬುದು ಗಾದೆಯ ಮಾತಾಗಿತ್ತು. ಕೊನೆಗಾಲ ಸಮೀಪಿಸಿದಾಗಲೇ ರೋಗಿಯನ್ನು ಆ ವಾರ್ಡಿನೊಳಕ್ಕೆ ತೆಗೆದು ಕೊಂಡು ಹೋಗಲಾಗುತ್ತಿತ್ತು. ಬಳಿಕ ಆ ರೋಗಿಯ ನಿಷ್ಪ್ರಾಣ ದೇಹ ಆ ವಾರ್ಡಿನೊಳಗಿಂದ ಹೊರಬರುತ್ತಿತ್ತು.

ಆ ವಾರ್ಡಿನಲ್ಲಿ ಐವತ್ತೈದನೆಯ ನಂಬರಿನದೊಂದು ಮಂಚ ವಿತ್ತು. ಆ ಮಂಚದ ಮೇಲಿದಿಂದ ಇದೀಗ ತಾನೇ ಒಂದು ಶರೀರ ವನ್ನು ತೆಗೆದುಕೊಂಡು ಹೋಗಲಾಯಿತು. ಆ ಶರೀರದಲ್ಲೀಗ ಚೈತನ್ಯ ವಿರಲಿಲ್ಲ. ಜಡವಾಗಿ ಬಿಟ್ಟಿತ್ತದು. ಯಾವನೋ ಬಡ ಭಿಕಾರಿ ಅವನು. ಅವನ ಶವವನ್ನು ಆಸ್ಪತ್ರೆಯವರು ಹೊರಗೆ ಕೊಂಡೊಯ್ಯುತ್ತಿದ್ದಾಗ, ಅದೇ ಬಾಗಿಲಿಂದ ಇನ್ನೊಬ್ಬ ರೋಗಿಯನ್ನು ಒಳಗೆ ಕರೆದುಕೊಂಡು ಬರುತ್ತಿದ್ದರು.

'ಸೀರಿಯಸ್ ಕೇಸಿಸ್'

ರೋಗಿಯ ಕಣ್ಣುಗಳು ಮುಚ್ಚಿಕೊಂಡಿದ್ದುದರಿಂದ, ಹಲಗೆಯ ಮೇಲಿನ ಅಕ್ಷರಗಳನ್ನು ಅವನು ಓದಲಿಲ್ಲ; ಆದರೆ ಡಾಕ್ಟರರಿಗೆ ಗೊತ್ತಿತ್ತು. ಅವರೊಂದು ಸಾರಿ ಒಳಗೆ ತರುತ್ತಿರುವ ರೋಗಿಯ ಕಡೆಗೆ ಮತ್ತು ಇದೀಗ ತಾನೆ ಕೊಂಡೊಯ್ಯಲಾದ ಆ ಶವದ ಕಡೆಗೆ ದೃಷ್ಟಿ ಬೀರಿದರು.

ಐವತ್ತೈದನೆಯ ನಂಬರಿನ ಮಂಚದ ಮೇಲೆ ರೋಗಿಯನ್ನು ಮಲಗಿಸಲಾಯಿತು. ಡಾಕ್ಟರರು ಅವನ ಕಡೆಗೆ ಕರುಣೆ ತುಂಬಿದ ದೃಷ್ಟಿಯಿಂದ ನೋಡಿ, ಬಳಿಕ ಅವನ ಕೈಯ್ಯನ್ನೆತ್ತಿ, ನಾಡಿಯನ್ನು ನೋಡಿ, ಇಂಜೆಕ್ಷನ್ ಕೊಡಲು ಸಿದ್ಧತೆಗಳನ್ನು ನಡೆಸಿದರು.

ಹತ್ತಿರ ನಿಂತಿದ್ದ ನರ್ಸ್ ತಲೆ ತಗ್ಗಿಸಿ ಅನ್ಯಮನಸ್ಕತೆಯಿಂದ ಇದೆಲ್ಲವನ್ನೂ ನೋಡುತ್ತಿದ್ದಳು.

ರಾತ್ರಿಯ ಹನ್ನೆರಡು ಗಂಟೆ ಹೊಡೆದಿತ್ತು. ಇಂಜೆಕ್ಷನ್ ಕೊಡುವ ಡಾಕ್ಟರರ ಡ್ಯೂಟಿ ಮುಗಿದುಹೋಗಿತ್ತು. ಇನ್ನೊಬ್ಬ ಡಾಕ್ಟರರಿಗೆ ಚಾರ್ಜ್ ಕೊಡುತ್ತಾ "ಈ ರೋಗಿ ಅದೃಷ್ಟವಿದ್ದರೇನೇ ಬೆಳಗಿನ ವರೆಗೂ ಬದುಕುವನು. ಇಂಜೆಕ್ಷನ್ ಕೊಟ್ಟುಬಿಟ್ಟಿದ್ದೇನೆ. ಆದರೂ....."ಎಂದು ತಿಳಿಸಿದನು.

ಹೊಸ ಡಾಕ್ಟರರು ಐವತ್ತೈದನೆಯ ನಂಬರಿನ ಮಂಚದ ರೋಗಿಯನ್ನು ಪರೀಕ್ಷಿಸಿ, ತಲೆ ಅಲ್ಲಾಡಿಸಿ, ತನ್ನ ಹಿಂದಿನ ಡಾಕ್ಟರರ ಅಭಿಪ್ರಾಯವನ್ನೇ ಸಮರ್ಥಿಸಿದರು.

ರಾತ್ರಿಯೆಲ್ಲಾ ನರ್ಸ್ ಆ ರೋಗಿಯನ್ನು ನೋಡಿಕೊಂಡಳು. ಅವಳು ನೋಡುನೋಡುತ್ತಿದ್ದಂತೆಯೇ ಯಾವಾಗ ಮತ್ತು ಯಾವ ರೀತಿ ರೋಗಿಯ ಪ್ರಾಣಪಕ್ಷಿ ಹಾರಿಹೋಗುತ್ತದೆಂಬುದನ್ನು ಅವಳು ನೋಡಬೇಕಾಗಿತ್ತು.

ವಾರ್ಡಿನಲ್ಲಿ ಅತ್ತಿತ್ತ ಅಡ್ಡಾಡಿ, ಕೊನೆಗೆ ನರ್ಸ್ ರೋಗಿಯ ಎದುರಿಗೆ ಕುರ್ಚಿಯಲ್ಲಿ ಕುಳಿತಳು.

ಆ ರೋಗಿಯ ಹೆಸರು ಅಮರ. ಅವನ ಹೆಸರು ಮಾತ್ರ ಅಮರ, ಆದರೆ ಇಂದಿನ ತನಕ ಅವನು ಜೀವನವನ್ನು ಸತ್ತು-ಸತ್ತು ಕಳೆದಿದ್ದ. ಜೀವನದಲ್ಲಿ ಕಷ್ಟ ಮತ್ತು ದುಃಖಗಳೆಂಬ ಎಷ್ಟು ರೋಗಗಳು ಈ ಪ್ರಪಂಚದಲ್ಲಿ ಇವೆಯೊ, ಅವೆಲ್ಲಾ

* ಗುಜರಾತಿಯ ಸುಪ್ರಸಿದ್ಧ ಕಥಾಲೇಖಕರಾದ ಶ್ರೀ ಹರೀಶ ನಾಯಕ ಅವರ ಕಥೆಯ ಅನುವಾದ.

ಹುಟ್ಟಿದಂದಿನಿಂದಲೇ ಅವನಿಗೆ ಅಂಟಿಕೊಂಡಿದ್ದುವು. ಹಸಿವು, ನಿರುದ್ಯೋಗ, ಬಡತನ, ಎಲ್ಲಾ ಬಗೆಯ ನಿರಾಧಾರತೆ, ನಿಸ್ಸಹಾಯತೆ ಮತ್ತು ನಿರಾಶೆ ಅವನ ಶಾಶ್ವತ ಗೆಳೆಯರಾಗಿದ್ದುವು. ಈ ಗೆಳೆಯರು, ಅವನ ಜೀವನದ ರಸವೆಲ್ಲಾ ಹೆಳಸಿ ಹಾರಿಹೋಗುವಷ್ಟು ಕರ್ತವ್ಯ ಶೀಲರಾಗಿದ್ದರು. ಪ್ರತಿ ಕ್ಷಣವೂ ಸಾಯಲಿಕ್ಕೆ ಸಿದ್ಧಪಡಿಸುವಷ್ಟು ಯಾತನೆಗಳನ್ನು ತನ್ನ ಬಾಳಿನಲ್ಲಿ ಅವನು ಅನುಭವಿಸಿದ್ದ.

ಈ ಪ್ರಪಂಚದಲ್ಲಿ ಅವನವರಾರೂ ಇರಲಿಲ್ಲ, ಸಂಬಂಧಿಗಳಿರಲಿಲ್ಲ, ಸಂಗಾತಿ ಅಥವಾ ಪರಿಚಿತರಿರಲಿಲ್ಲ. ಅವನಾವ ಸ್ಥಿತಿಯಲ್ಲಿದ್ದಾನೆ ಎಂಬುದನ್ನರಿಯುವ ಇಚ್ಛೆ ಯಾರಿಗೂ ಇರಲಿಲ್ಲ. ಅವನು ಬದುಕಿರುವನೆ, ಸತ್ತಿರುವನೆ ಎಂಬುದರ ಬಗ್ಗೆ ಯಾರಿಗೂ ಸಂಬಂಧವಿರಲಿಲ್ಲ.

ಅವನ ವಯಸ್ಸು ಇಪ್ಪತ್ತೆರಡು ವರ್ಷ. ಈ ವಯಸ್ಸೇ ಅವನಿಗೆ ಒಂದು ದೊಡ್ಡ ಆಶ್ಚರ್ಯವಾಗಿ ಬಿಟ್ಟಿತ್ತು! ಯಾರ ಆಸರೆಯೂ ಇಲ್ಲದೆ, ಯಾರ ಆಶ್ವಾಸನವೂ ಇಲ್ಲದೆ ಅವನು ಇಷ್ಟು ವರ್ಷ ಹೇಗೆ ಜೀವಿಸಿಕೊಂಡಿದ್ದ?

ತಾನೆಲ್ಲಿ ಹುಟ್ಟಿದೆನೆಂಬುದನ್ನರಿಯನು, ತನ್ನ ತಂದೆ-ತಾಯಿಗಳಾರೆಂಬುದನ್ನು ಅವನರಿಯನು. ಬಾಲ್ಯವೆಲ್ಲಿ ಕಳೆಯಿತು, ತಾರುಣ್ಯವೆಲ್ಲಿ ಲಭಿಸಿತು-ಎಂಬುದೂ ಅವನಿಗೆ ತಿಳಿಯದು. ಅವನಿಗೆ ಗೊತ್ತಿದ್ದುದೆಂದರೆ, ತನಗೆ ತಿಳಿವಳಿಕೆ ಬಂದಾಗಿನಿಂದ ತಾನೊಬ್ಬಂಟಿಗನಾಗಿಯೇ ಇದ್ದೇನೆಂಬುದು.

ಬೂಟ್‌ಪಾಲಿಶ್ ಮಾಡುವ ಹುಡುಗರಂತೆ ಅವನು ಅಲೆದಾಡಿದ್ದ. ಭಿಕ್ಷೆ ಬೇಡುವ ಗುಂಪಿನೊಂದಿಗೆ ಭಿಕ್ಷೆಯನ್ನೂ ಬೇಡಿದ್ದ. ಭಿಕ್ಷಾರೂಪದಲ್ಲಿ ಸಿಕ್ಕ ಹರಿದ-ಹಳೆಯ-ಬಟ್ಟೆಗಳನ್ನು ತೊಟ್ಟುಕೊಂಡು ಇಂದಿನ ತನಕ ಬದುಕಿದ್ದ. ಅವನು ಹೀಗೆಯೇ ಜೀವಿತನಾಗಿದ್ದ. ಹೀಗೆಯೇ ಅವನ ಜೀವನದ ನಿರರ್ಥಕ ವರ್ಷಗಳುರುಳಿದ್ದುವು. ಅವನ ಜೀವನವೇ ಒಂದು ನಿರರ್ಥಕ ವಸ್ತುವಾಗಿರಲಿಲ್ಲವೆ? ಎಷ್ಟೋ ಸಾರಿ ಅವನು ಈ ನಿರರ್ಥಕಜೀವನವನ್ನು ಕೊನೆಗಾಣಿಸುವ ಬಗ್ಗೆಯೂ ಯೋಚಿಸುತ್ತಿದ್ದ. ಅವನ ಜೀವನದ ಅರ್ಥವಾದರೂ ಏನು? ಜೀವನದಲ್ಲಾವ ಆಶೆಯೂ ಇಲ್ಲ, ಕಾವು ಇಲ್ಲ, ಆಕಾಂಕ್ಷೆಯಿಲ್ಲ, ಗತಿಯಿಲ್ಲ; ಅವನು ಬದುಕಬೇಕಾದುದಾದರೂ ಯಾರಿಗೋಸ್ಕರ? ಯಾರಿಗೋಸ್ಕರ ಬಾಳಬೇಕು.....ಯಾರಿಗೋಸ್ಕರ?

ಒಂದು ದಿನ ಅವನು ಫುಟ್‌ಪಾತಿನಲ್ಲಿ ಸಿಕ್ಕಿಹಾಕಿಕೊಂಡ. ನಗರದಲ್ಲಿ ಕ್ಷಯರೋಗ ಭಯಂಕರವಾಗಿ ಹರಡುತ್ತಿತ್ತು. ಭಿಕಾರಿಗಳಲ್ಲಿಯೇ ರೋಗ ಹೆಚ್ಚಾಗಿ ಹರಡಿತ್ತು. ಮ್ಯುನಿಸಿಪಾಲಿಟಿಯವರು ಈ ರೋಗಿಗಳನ್ನು ಆಸ್ಪತ್ರೆಗೆ ಕಳುಹುತ್ತಿದ್ದರು. ಅಮರನನ್ನೂ ಹಿಡಿದು ಆಸ್ಪತ್ರೆಗೆ ಹಾಕಲಾಯಿತು.

ಮೊದಲೇ ಅವನಿಗೆ ಬದುಕುವ ಇಚ್ಛೆಯಿರಲಿಲ್ಲ. ಅದರ ಜೊತೆಗೆ ಈ ಕ್ಷಯ ಬೇರೆ. ಅವನಿಗಿದು ಒಳ್ಳೆಯದೇ ಎನಿಸಿತು. ಅವನು ಸಾವನ್ನೆದಿರು ನೋಡತೊಡಗಿದ. ತಾನೀಗ ಈ ಜೀವನದಿಂದ ಬಿಡುಗಡೆ ಹೊಂದುವೆನೆನಿಸಿತ್ತವನಿಗೆ.

ರಾತ್ರಿಯೆಲ್ಲಾ ಅವನು ಕಣ್ಣು ಮುಚ್ಚಿಕೊಂಡೇ ಇದ್ದ. ಕರ್ತವ್ಯ ಶೀಲ ನರ್ಸ್ ಅವನಿಗೆ ಗಂಟೆಗೊಂದು ಸಾರಿ ಇಂಜೆಕ್ಷನ್ ಕೊಡುತ್ತಿದ್ದಳು.

ಬೆಳಗಿನ ಆರುಗಂಟೆ. ನರ್ಸ್ ಅವನ ನಾಡಿಯನ್ನು ಹಿಡಿದು ನೋಡಿದಳು. ನಾಡಿ ಈಗ ನಿಂತುಹೋಗಿರಬಹುದೆಂದುಕೊಂಡಿದ್ದಳು. ಆದರೆ ನಿಂತಿರಲಿಲ್ಲ, ಮಂದಗತಿಯಲ್ಲಿ ನಡೆಯುತ್ತಿತ್ತು. ಅವನ ನಡೆಯುತ್ತಿರುವ ನಾಡಿಯನ್ನು ನೋಡಿ ನರ್ಸ್‌ಗೆ ಆಶ್ಚರ್ಯವಾಯಿತು.

ದಿನದಂತೆ ಡಾಕ್ಟರರು ಬಂದು ಅವಳ ರಿಪೋರ್ಟನ್ನು ನೋಡಿದರು. ಮಂಚಕ್ಕೆ ಸಿಕ್ಕಿಸಿದ್ದ ಹಲಗೆಯನ್ನು ನೋಡಿ, ಇಷ್ಟು ಹೊತ್ತಿಗಾಗಲೇ ರೋಗಿ ಜಗತ್ತನ್ನು ಬೀಳ್ಕೊಟ್ಟಿದ್ದಾನೆಂದುಕೊಂಡಿದ್ದರು. ಆದರೆ ಅವನಿನ್ನೂ ಬದುಕಿರುವನೆಂದು ನರ್ಸ್ ಹೇಳಿದಾಗ, ಆಶ್ಚರ್ಯವಾಯಿತವರಿಗೆ.

ಅವರು ಮನಗೊಟ್ಟು ಅಮರನನ್ನು ಪರೀಕ್ಷಿಸಿದರು. "ಹ್ಞೂಂ, ಹ್ಞೂಂ. ಒಂದೆರಡು ಗಂಟೆಗಿಂತ ಹೆಚ್ಚು ಇರಲಾರ" ಎಂದರು.

ನರ್ಸ್ ಪುನಃ ಮೊದಲಿನಂತೆ ನಿರೀಕ್ಷಣೆಯಲ್ಲಿ ಕುಳಿತಳು.

ಏಳುಘಂಟೆ.

ಆಗೊಬ್ಬ ಜವಾನ ಬಂದು "ಐವತ್ತೈದನೆಯ ನಂಬರಿನ ಮಂಚದ ನರ್ಸ್ ನೀವೇನಾ?" ಎಂದು ಕೇಳಿದಳು.

ನರ್ಸ್ ತಲೆ ಅಲ್ಲಾಡಿಸಿ "ಹ್ಞೂಂ" ಎಂದಳು.

"ಯಾರೋ ಹೆಣ್ಣುಮಗಳು ನಿಮ್ಮನ್ನು ಕಾಣಲು ಬಂದಿದ್ದಾಳೆ."

ಜವಾನನೊಂದಿಗೆ ನರ್ಸ್ ಹೊರಗೆ ಹೋಗಿ, ಕೆಲವೇ ನಿಮಿಷಗಳಲ್ಲಿ ಹಿಂದಿರುಗಿ ಬಂದಳು. ಅವಳ ಕೈಯಲ್ಲೊಂದು ಪೋಸಂಬಿ ಹಣ್ಣಿತ್ತು. ಅವಳೊಂದು ಸಾರಿ ಪೋಸಂಬಿಯ ಕಡೆಗೆ ಮತ್ತು ಕಡೆಯುಸಿರೆಳೆಯುತ್ತಿದ್ದ ಅಮರನ ಕಡೆಗೆ ನೋಡಿದಳು. ಬಳಿಕ ನೆಲ್ಲಗೆ ಅಮರನ ಕೈಯನ್ನು ಅಲ್ಲಾಡಿಸಿದಳು.

ಸ್ವಲ್ಪ ಸಮಯದ ಬಳಿಕ, ಅಮರನು ತನ್ನ ಭಾರವಾದ ರೆಪ್ಪೆಗಳನ್ನು ಮೇಲಕ್ಕೆತ್ತಿದ. ಮಂಜುನೋಟದಲ್ಲಿ ತಾನಿನ್ನೂ ಇಹಲೋಕದಲ್ಲಿಯೇ ಇರುವುದನ್ನು ಕಂಡ.

ಸ್ವಲ್ಪ ಹೊತ್ತು ಕಣ್ಣೆರೆದೇ ಇದ್ದುದರಿಂದ, ಕಣ್ಣಿನ ಮಂಜು ಕಡಮೆಯಾಯಿತು. ದೃಷ್ಟಿ ಸ್ವಚ್ಛವಾಯಿತು. ಈಜುತ್ತಿದ್ದಂತೆ ಕಂಡುಬರುತ್ತಿದ್ದುದೆಲ್ಲಾ ಸ್ಥಿರವಾಯಿತು. ತನ್ನೆದುರಿಗೆ ಆಸ್ಪತ್ರೆಯ ನರ್ಸ್ ನಿಂತಿರುವುದನ್ನು ನೋಡಿದ. ಅವನ ಕಿವಿಗಳಿಗೆ ಅಲ್ಪ-ಸ್ವಲ್ಪ ಕೇಳಿಸುತ್ತಿತ್ತು. ಇದ್ದಬಿದ್ದ ಶಕ್ತಿಯನ್ನೆಲ್ಲಾ ಸೇರಿಸಿ, ನರ್ಸ್‌ಳ ಕಡೆ ನೋಡಲು ಮತ್ತು ಅವಳ ಮಾತುಗಳನ್ನು ಕೇಳಲು ಯತ್ನಿಸಿದ.

"ಈ ಪೋಸಂಬಿ...." ನರ್ಸ್ ಹೇಳುತ್ತಿದ್ದಳು.

ಅಮರನು ಪೋಸಂಬಿಯ ಕಡೆ ನೋಡಿದ. ಬಳಿಕ ಪುನಃ ಕಣ್ಣು ಮುಚ್ಚಿಕೊಳ್ಳುವಾಗ, ಪುನಃ ನರ್ಸ್‌ಳ ಧ್ವನಿ ಕೇಳಿಸಿತು. "ಯಾರೋ ಒಬ್ಬ ಸ್ತ್ರೀ ಈ ಪೋಸಂಬಿಯನ್ನು ಕೊಟ್ಟಿದ್ದಾಳೆ.

ಅವಳು ಹರಯದವಳು, ಚೆನ್ನಾಗಿದ್ದಳು. ನಿನ್ನ ಆರೋಗ್ಯದ ಬಗ್ಗೆ ಕೇಳುತ್ತಿದ್ದಳು...."

ನರ್ಸ್‌ಳ ಧ್ವನಿ ಮೆಲ್ಲ ಮೆಲ್ಲಗೆಯಾದರೂ ಸ್ಪಷ್ಟವಾಗಿ ಅವನ ಕಿವಿಗೆ ಕೇಳಿಸಿತು. ಅವನು ಪ್ರಶ್ನೆದುಂಬಿದ ನೋಟವನ್ನು ಅವಳ ಕಡೆಗೆ ಬೀರಿದ. ಅವಳ ಮಾತನ್ನು ವಿಶ್ವಸಿಸಲು ಅವನು ಸಿದ್ದನಾಗಿರ ಲಿಲ್ಲ. ಪ್ರಶ್ನ ಸೂಚಕ ಕಣ್ಣುಗಳಿಂದ " ನೀನು ಹೇಳುತ್ತಿರುವುದು ನನಗೆ?" ಎಂದು ಕೇಳಿದ.

ನರ್ಸ್ ಅವನ ನೋಟದಲ್ಲಿಯ ಪ್ರಶ್ನೆಯನ್ನು ಓದಿ " ಹೌದು ಅಮರ್. ನಿನಗೇ ನಾನು ಹೇಳುತ್ತಿರುವುದು. ಅವಳು ಐವತ್ತೈದ ನೆಯ ನಂಬರಿನ ಮಂಚದ ರೋಗಿಗೆ ಈ ಮೋಸಂಬಿಯನ್ನು ಕೊಡು ವಂತೆ ಹೇಳಿದಳು. ಈ ಮಂಚದ ಮೇಲೆ ನೀನೇ ಇರುವುದು. ಅವಳು ನಿನ್ನ ದೇಹಸ್ಥಿತಿಯನ್ನೂ ಕೇಳಿದಳು. ಈಗ ಉತ್ತಮ ಎಂದು ನಾನು ಹೇಳಿದ ಮೇಲೆ, ಸಂತೋಷಗೊಂಡು ಹೊರಟು ಹೋದಳು"ಎಂದಳು.

ಸ್ವಲ್ಪ ಹೊತ್ತು ಅಮರನು ಕಣ್ಣು ಮುಚ್ಚಿಕೊಂಡಿದ್ದ. ಬಳಿಕ ಅವನಿಗೆ ಎಲ್ಲಾ ಅರ್ಥವಾಯಿತು. ಯಾರೋ ಒಬ್ಬಳು ಅವನಿಗೆ ಮೋಸಂಬಿಯನ್ನು ಕೊಟ್ಟು ಹೋಗಿದ್ದಳು. ಅವನ ದೇಹಸ್ಥಿತಿ ಉತ್ತಮ ಎಂಬುದನ್ನು ಕೇಳಿ ಅವಳು ಸಂತೋಷಗೊಂಡಿದ್ದಳು.

ಇಂದಿನ ತನಕ ಅವನು ಎಷ್ಟೋ ಆಶ್ಚರ್ಯಜನಕ ಘಟನೆ ಗಳನ್ನು ನೋಡಿದ್ದ, ಸಂವೇದಿಸಿದ್ದ. ಆದರೆ ಈ ಘಟನೆಯ ಮುಂದೆ ಅವೆಲ್ಲಾ ನಿಲ್ಲಲಾರದೇ ಹೋದುವು.

ಅವನಿಗಾರೂ ಈ ಜಗತ್ತಿನಲ್ಲಿ ಗೊತ್ತಿರಲಿಲ್ಲ. ಅವನಿಗಾವ ಬಂಧು-ಬಳಗವೂ ಇರಲಿಲ್ಲ. ಮೋಸಂಬಿಯನ್ನು ಇತ್ತು ಹೋಗ ಬಹುದಾದಂತಹ ವ್ಯಕ್ತಿಯಂತೂ ಅವನ ಕಲ್ಪನೆಯಲ್ಲಿಯೇ ಪ್ರವೇಶಿ ಸಿರಲಿಲ್ಲ. ಎಂದಮೇಲೆ ಆ ಸ್ತ್ರೀ.... ಹರಯದವಳು.... ಚೆನ್ನಾಗಿರು ವಳು....

ಅವನು ನರ್ಸ್‌ಳ ಕೈಯಲ್ಲಿದ್ದ ಮೋಸಂಬಿಯ ಕಡೆ ನೋಡಿದ.

ನರ್ಸ್ ಮೋಸಂಬಿಯನ್ನು ಸುಲಿದು ಅವನಿಗೆ ತಿನ್ನಿಸತೊಡ ಗಿದಳು.

ಮೋಸಂಬಿಯ ರಸ ಸಿಹಿ ಎನಿಸಿತು, ಬಹಳ ಸಿಹಿಯಾಗಿದೆ ಎನಿಸಿತು. ರೆಪ್ಪೆಗಳ ಮೂಲಕ ಕೇಳಕೇಳಿ ಅವನು ಮೋಸಂಬಿಯ-ನ್ನೆಲ್ಲಾ ತಿಂದುಬಿಟ್ಟ.

ಎಂಟು ಘಂಟೆಗೆ ಪುನಃ ಡಾಕ್ಟರರು ಬಂದರು. ಅಮರನನ್ನು ಪರೀಕ್ಷಿಸಿದರು. ಅವನ ಮುಖದ ಮೇಲೆ ಹೊಸ ಕಳೆ ಮೂಡಿದಂತಿತ್ತು, ಅವನಲ್ಲಿ ಜೀವನ ಆಶಾಕಿರಣವೊಂದು ಹೊಳೆಯುತ್ತಿತ್ತು. ಕಣ್ಣು ಗಳಲ್ಲಿ ಹಗುರತೆಯಿದ್ದರೂ ಒಂದು ಹೊಸ ಹೊಳಪಿತ್ತು. ಅವನ ನಾಡಿ ಉತ್ಸಾಹದಿಂದ ನಡೆಯತೊಡಗಿತ್ತು.

" ವಂಡರ್‌ಫುಲ್!" ಡಾಕ್ಟರರೆಂದರು. " ಇಂತಹ ಕೇಸ-ನ್ನೆಂದೂ ನಾನು ನೋಡಲಿಲ್ಲ. ವಿಚಿತ್ರ ಕೇಸು!" ಬಳಿಕ ನರ್ಸ್‌ಗೆ ಕೇಳಿದರು: " ನೀನಿವನಿಗೆ ಏನನ್ನಾದರೂ ತಿನ್ನುವುದಕ್ಕೆ ಕೊಟ್ಟ-ದ್ದೆಯಾ, ಸಿಸ್ಟರ್?"

" ಹ್ಞೂ, ಒಂದು ಮೋಸಂಬಿಯನ್ನಿತ್ತಿದ್ದೆ."

" ಇವನದನ್ನು ತಿಂದನೆ?"

" ಹ್ಞೂ!"

ಕೈ ಅಲ್ಲಾಡಿಸುತ್ತಾ ಡಾಕ್ಟರರು ಹಿಂದಿರುಗಿದರು. ಮೋಸಂ-ಬಿಯ ರಸದಿಂದ ನವಜೀವನವನ್ನು ಪಡೆಯುವ ಕೇಸನ್ನವರು ನೋಡಿ ದುದು ಇದೇ ಮೊದಲು. ಆದರೂ ಅವರು 'ರೋಗಿ ಬಹಳ ಕಾಲ ಬದುಕುವುದಿಲ್ಲ' ಎಂದು ವಿಶ್ವಸಿಸಿದ್ದರು. ರೋಗಿ ಮೋಸಂಬಿಯನ್ನು ತೆಗೆದುಕೊಂಡಿದ್ದುದರಿಂದ ಅವನಿಗದು ಲಾಭಕರವಾಗಿ ಕಂಡಿತ್ತು. ನರ್ಸ್‌ಗೆ ಅವರು ಮೋಸಂಬಿಯನ್ನೇ ಕೊಡುತ್ತಿರುವಂತೆ ಹೇಳಿದರು. ಆಗ ನರ್ಸ್ ನಾಲ್ಕೈದು ಸಾರಿ ಮೋಸಂಬಿಯನ್ನಿಯಲು ಯತ್ನಿ ಸಿದಳು. ಆದರೆ ಅಮರನದನ್ನು ಸ್ವೀಕರಿಸಲಿಲ್ಲ. ಇದರಿಂದೇನೂ ಅವನ ಸ್ಥಿತಿಯಲ್ಲಿ ವಿಶೇಷ ಪರಿವರ್ತನೆಯಾಗಲಿಲ್ಲ.

ನರ್ಸ್ ಮತ್ತು ಡಾಕ್ಟರರು ಬದಲಾಗುತ್ತಿದ್ದರೂ ಆ ಕೇಸಿನ-ಲ್ಲಾವ ಪರಿವರ್ತನೆಯೂ ಉಂಟಾಗಲಿಲ್ಲ. ಪ್ರತಿಯೊಬ್ಬ ಡಾಕ್ಟರೂ ಇನ್ನೊಬ್ಬ ಡಾಕ್ಟರರಿಗೆ 'ಐವತ್ತೈದನೆಯ ನಂಬರಿನ ಮಂಚದವನ ಸ್ಥಿತಿಗೆ ಗಂಭೀರವಾಗಿದೆ' ಎಂದು ಹೇಳುತ್ತಿದ್ದರು. ಆದರೆ ಆ ಗಂಭೀರ ಸ್ಥಿತಿಗೆ ರೋಗಿಯ ಹೃದಯಸ್ಪಂದನ ನಿಂತುಹೋಗುವಷ್ಟು ಗಂಭೀರ ಯಾವಾಗಲೂ ಆಗಿರಲಿಲ್ಲ.

ಮಾರನೆಯ ದಿನ ಬೆಳಗಿನಲ್ಲಿ, ಹಿಂದಿನ ದಿನದಂತೆಯೇ, ಅದೇ ಸಮಯಕ್ಕೆ ನರ್ಸ್ ಡ್ಯೂಟಿಯ ಮೇಲಿದ್ದಳು.

ಅಮರ ಕಣ್ಣು ಮುಚ್ಚಿಕೊಂಡು ಬಿದ್ದಿದ್ದ. ನರ್ಸ್‌ಳ ಓಡಾಟ ಅಥವಾ ಸೀಸೆಗಳ ಶಬ್ದ ಅವನ ಶಾಂತಿಯನ್ನು ಭಂಗಗೊಳಿಸಲಿಲ್ಲ.

ಸ್ವಲ್ಪ ಸಮಯದ ಬಳಿಕ ಜವಾನ ನರ್ಸ್‌ಳ ಹತ್ತಿರ ಬಂದು " ನಿನ್ನನ್ನು ಕಾಣಲು ಯಾವಳೋ ಹೆಂಗುಸು ಬಂದಿದ್ದಾಳೆ" ಎಂದು ತಿಳಿಸಿದಳು.

" ಯಾರು?"

" ಅವಳೆ, ನಿನ್ನೆ ಐನತ್ತೈದನೆಯ ನಂಬರಿನವನಿಗೆ ಮೋಸಂಬಿ ಯನ್ನು ತಂದಿದ್ದವಳು."

ನರ್ಸ್ ಅವಳನ್ನು ನೋಡಲು ಹೊರಗೆ ಹೋದಳು. ಆ ಹೆಂಗುಸು ಬಹಳ ಬಡವಳಂತೆ ಕಾಣಿಸುತ್ತಿದ್ದಳು. ಬಹುಶಃ ಭಿಕ್ಷುಕಿಯಿರಬೇಕು. ಆದರೆ ಅವಳ ಬಳಿ ಆರೋಗ್ಯದ್ರವಿತ್ತು. ಮುಖ ಅರಳಿದ ಹೂವಿ ನಂತಿತ್ತು. ಆದರೆ ಅದರ ಮೇಲೆ ಚಿಂತೆಯ ರೇಖೆಗಳು ಮೂಡಿ ದ್ದುವು. ನರ್ಸ್‌ಳನ್ನು ನೋಡುತ್ತಲೇ ಅವಳು ಕೈ ಮುಂದೆ ಚಾಚಿ ದಳು ಅವಳೆಂದು ಎರಡು ಮೋಸಂಬಿಗಳನ್ನು ತಂದಿದ್ದಳು.

ನರ್ಸ್ ಮೋಸಂಬಿಯನ್ನು ತೆಗೆದುಕೊಂಡು, ಆವಳೇನಾದರೂ ಹೇಳುವಳೇನೋ ಎಂದು ಸ್ವಲ್ಪ ಹೊತ್ತು ಅಲ್ಲಿಯೇ ನಿಂತಳು, ಆದರೆ ಮೋಸಂಬಿ ತಂದವಳು ತಲೆ ತಗ್ಗಿಸಿ ಮೌನವಾಗಿ ಸುಮ್ಮನೇ ನಿಂತಳು.

ಕೊನೆಗೆ ನರ್ಸ್ ಹಿಂದಿರುಗತೊಡಗಿದಳು. ಆಗ ಆ ಸ್ತ್ರೀಯ ಬಾಯಿ ತೆರೆಯಿತು: " ಅಕ್ಕ....ಅಕ್ಕಾಜಿ!...." ಎಂದಳು. ಆದರೆ

ಅವಳ ಬಾಯಿಂದ ಈ ಧ್ವನಿ, ನರ್ಸಳ ಕಿವಿಗೆ ತಲುಪಲಾರದಷ್ಟು ಮೆಲ್ಲಗೆ ಹೊರಬಂದಿತ್ತು.

ನರ್ಸ್ ಮೆಲ್ಲಗೆ ಅಮರನನ್ನು ಎಬ್ಬಿಸಿದಳು. ಔಷಧಿಯನ್ನು ಕುಡಿಸಿದಳು. ಮೋಸಂಬಿಯನ್ನು ತೋರಿಸಿ, ಒಂದು ಮೋಸಂಬಿಯನ್ನು ಸುಲಿಯತೊಡಗಿದಳು. ಇನ್ನೊಂದು ಮೋಸಂಬಿಯನ್ನು ಮಡಿಲ ಮೇಲಿಟ್ಟುಕೊಂಡು ಅಮರನು ಯೋಚಿಸತೊಡಗಿದ 'ಅವಳಾರಾಗಿರಬಹುದು? ಮರೆಯಲ್ಲಿಯೇ ಪ್ರೇಮಿಸುವ ಅವಳು, ನನ್ನಂತಹ ದುಃಖಿಯೇ ಆಗಿರಬಹುದೇ?....ಆದರೆ ಅವಳೀಕೆ ನನ್ನನ್ನು ಪ್ರೀತಿಸುತ್ತಾಳೆ?....ಏಕೆ? ನನ್ನ ಬಳಿ ಇರುವುದಾದರೂ ಏನು?'

ಪ್ರೇಮ! ತಾರುಣ್ಯದಲ್ಲಿ ಯಾವ ಶಬ್ದದ ಉಚ್ಚಾರಣೆಯಿಂದ ಶರೀರವೆಲ್ಲಾ ಝುಣಝುಣವೆನ್ನುವುದೋ, ಆ ಶಬ್ದದಿಂದಲೇ ಅಮರನಲ್ಲಿ ಚೈತನ್ಯ ಉದಿಸಿತು.

ಅವನು ಯೋಜನಾಮಗ್ನನಾದ –'ನಾನಾರನ್ನೂ ಗುರುತಿಸಲಾರೆ, ಯಾವ ತರುಣಿಯೂ ಎಂದೂ ನನ್ನ ಕಣ್ಣುಗಳಿಗೆ ತನ್ನ ಕಣ್ಣನ್ನು ಸೇರಿಸಲಿಲ್ಲ. ಎಂದ ಮೇಲೆ ಪ್ರೇಮದ ಮಾತೇ ಇಲ್ಲ. ಎಲ್ಲಿಯೋ ತಪ್ಪಿರಬೇಕು .....' ಯೋಚಿಸುತ್ತ-ಯೋಚಿಸುತ್ತಲೇ ಅವನು ಮೋಸಂಬಿಯ ಕಡೆ ನೋಡಿ, ಪ್ರೀತಿಯಿಂದ ಅದನ್ನು ಚುಂಬಿಸಿದ.

ನರ್ಸ್ ಎರಡೂ ಮೋಸಂಬಿಗಳ ರಸವನ್ನು ತೆಗೆದು ಅವನಿಗೆ ಕುಡಿಸಿದಳು. ನೋಡಲು ಬಂದ ಡಾಕ್ಟರರಿಗೆ "He is improrving Doctor" ಎಂದಳು.

ಡಾಕ್ಟರರು ಅತ್ಯಧಿಕ ಆಶ್ಚರ್ಯದಿಂದ "ಏನು ಹೇಳುತ್ತಿರುವೆ ನೀನು?.....ನಿಜವೆ?" ನಿಜವಾಗಿಯೂ ಇವನು improve ಆಗುತ್ತಿದ್ದಾನೆ ನರ್ಸ್! ನೀನಿವನ ಡೇಲಿ ರಿಪೋರ್ಟನ್ನು ಎಚ್ಚರಿಕೆಯಿಂದ ಮಾಡುತ್ತಿರು. ಈ ಔಷಧಿಯ ಪ್ರಯೋಗ ಇವನ ಮೇಲೆ Success ಆದರೆ, ನಾವು ಬೇರೆಯ ರೋಗಿಗಳ ಮೇಲೂ ಪ್ರಯೋಗಿಸೋಣ" ಎಂದರು.

ಎರಡೆರಡು ಮೋಸಂಬಿಗಳು ನಿತ್ಯವೂ ಬರತೊಡಗಿದುವು. ನಿತ್ಯವೂ ನರ್ಸ್ ಅಮರನಿಗೆ ತಿನ್ನಿಸುತ್ತಿದ್ದಳು. ಅಮರನು ಬದುಕತೊಡಗಿದ.

ನರ್ಸ್‌ಗೆ, ತನ್ನ ನೇವೆ ರೋಗಿಯನ್ನು ಸಾವಿನ ಬಾಯಿಂದ ಹಿಂದಿರುಗಿಸುತ್ತಿದೆ–ಎನಿಸಿತು.

ಡಾಕ್ಟರರಿಗೆ ತನ್ನ ಪ್ರಯೋಗ ಸಫಲವಾಗುತ್ತಿದೆ ಎನಿಸಿತು.

ಅಮರನಿಗೆ ಮೋಸಂಬಿ ಮತ್ತು ಮೋಸಂಬಿಯನ್ನು ತರುವವಳ ಹೊರತು ಇನ್ನಾವ ವಿಷಯದಲ್ಲೂ ಆಸ್ಥೆಯಿರಲಿಲ್ಲ. ಒಂದಾನೊಂದು ಸಮಯದಲ್ಲಿ ಅವನು ತನ್ನ ಜೀವನದಿಂದ ನಿರಾಶೆ, ಉದಾಸೀನ ಮತ್ತು ಬೇಸರಗೊಂಡು ಯಾವಾಗಲೂ ಸಾವನ್ನು ಬಯಸುತ್ತಿದ್ದ. ಆದರಿಂದು ಅವನಿಗೆ ಆಶ್ವಾಸನೆ ಸಿಕ್ಕಿತ್ತು; ಬಾಳಲು ಒಂದು ಕಿರಣ, ಒಂದು ಅಲೌಕಿಕ ಪ್ರಕಾಶದ ದರ್ಶನವಾಗಿತ್ತು. ಅವನನ್ನು ಈ ಪ್ರಪಂಚದಲ್ಲಿ ಬಯಸುವವರಾರೂ ಇರಲಿಲ್ಲ. ಅವನ ಬಗೆಗೆ ಚಿಂತಿಸುವವರಾರೂ ಇರಲಿಲ್ಲ. ಆದರೆ ಈಗ ಸಿಕ್ಕಿದ ಆಶ್ವಾಸನೆಯ ಹುಲ್ಲು ಕಡ್ಡಿಯನ್ನು ಅವನು ಬಿಗಿಯಾಗಿ ಅಪ್ಪಿಕೊಂಡ. ಆ ಹುಲ್ಲುಕಡ್ಡಿಯೇ ಅವನನ್ನು ಸಾವಿನ ಸಾಗರದಿಂದ ಹೊರತಂದಿತು.

"ಅಕ್ಕಾಜಿ!" ನರ್ಸ್‌ಳನ್ನು ಅವನು ಕರೆದ. ಈಗವನು ಸ್ವಲ್ಪ ಸ್ವಲ್ಪ ಮಾತನಾಡಬಲ್ಲವನಾಗಿದ್ದ.

"ಇಲ್ಲಿಯೆ ಇದ್ದೇನೆ; ಏನು ಬೇಕು?"

"ನೀನವಳನ್ನೇಕೆ ಇಲ್ಲಿಗೆ ಕರೆತರುವುದಿಲ್ಲ ಸಿಸ್ಟರ್?"

"ಯಾರನ್ನು? ಮೋಸಂಬಿ ತರುವವಳನ್ನೆ?"

"ಹ್ಞೂ ಅವಳನ್ನೆ!"

"ನಾನೇನೋ ನಿನ್ನೆಯೇ ಒಳಗೆ ಬರಲು ಹೇಳಿದ್ದೆ."

"ಹಾಗಾದರೆ ಏಕೆ ಬರಲಿಲ್ಲ?"

"ಏಕೋ ಅವಳೇ ಬರಲಿಲ್ಲ. ನಿನ್ನ ಆರೋಗ್ಯವನ್ನು ವಿಚಾರಿಸಿ ಹೊರಟುಹೋದಳು. ನಿನಗೆ ಖಾಯಿಲೆ ಬಹಳವಿದ್ದರೆ, ನಿನ್ನನ್ನು ನೋಡಿ ಹೆದರಿಕೆಯಾಗುವುದಂತೆ ಅವಳಿಗೆ. ಅದಕ್ಕೆ ಅವಳಿಗೆ ಇಲ್ಲಿಯವರೆಗೂ ಬರುವ ಧೈರ್ಯವಿಲ್ಲ. ಆದರೆ ನಿನ್ನ ದೇಹಸ್ಥಿತಿ ಈಗ ಸುಧಾರಿಸುತ್ತಿದೆ ಎಂಬುದನ್ನು ಕೇಳಿ, ಅವಳು ಬಹಳ ಸಂತೋಷಗೊಳ್ಳುತ್ತಾಳೆ!"

ನರ್ಸ್ ಹೊರಗೆ ಹೊರಟುಹೋದಳು.

ಅಮರ ಯೋಚಿಸತೊಡಗಿದ: "ನನಗೆ ಬಹಳ ಖಾಯಿಲೆಯಾದರೆ, ಅವಳದನ್ನು ನೋಡಿ ಹೆದರಿಕೊಳ್ಳುವಳೆ! ಇಷ್ಟಕ್ಕೋಸ್ಕರವೇ ಅವಳು ಒಳಗೆ ಬರುವುದಿಲ್ಲವೊ! ನನ್ನ ಆರೋಗ್ಯವನ್ನು ವಿಚಾರಿಸಿ ಹೊರಟುಹೋಗುತ್ತಾಳೆ. ನಾನು ಸುಧಾರಿಸಿಕೊಳ್ಳುತ್ತಿದ್ದೇನೆ ಎಂಬುದನ್ನು ಕೇಳಿ ಅವಳು ಸಂತೋಷಗೊಳ್ಳುತ್ತಾಳೆ. ಹಾಗಾದರೆ.... ಹಾಗಾದರೆ ಇದು ಪ್ರೇಮವಲ್ಲದೆ ಇನ್ನೇನು?.... ಇದು ಪ್ರೇಮವೆ! ಆದರೆ ನನ್ನನ್ನು ಪ್ರೇಮಿಸುವವಳಾರು? ನನ್ನ ಈ ಸ್ಥಿತಿಯಲ್ಲಿ ಪ್ರೇಮಿಸುವವಳು, ಖಂಡಿತವಾಗಿಯೂ ಅಲೌಕಿಕಳಾಗಿರಬೇಕು!

ಇದಾದ ಮಾರನೆಯ ದಿನ, ನರ್ಸ್ ಆ ಸ್ತ್ರೀಯನ್ನು ಒಳಗೆ ಬರುವಂತೆ ಬಹಳ ಹೇಳಿದಳು. ಆದರೆ ಅವಳು ಒಳಗೆ ಬರಲಿಲ್ಲ. ಮೋಸಂಬಿಯನ್ನಿತ್ತು ಹೊರಟುಹೋದಳು.

ಅಮರನು ಇಲ್ಲಿಗೆ ಬಂದು ವಾರವಾಗಿತ್ತು. ಆ ವಾರ್ಡಿನಲ್ಲಿ ಯಾರೂ ಎಂದೂ ಒಂದೆರಡು ದಿನಗಳಿಗಿಂತ ಹೆಚ್ಚು ಕಾಲ ಬದುಕಿರಲಿಲ್ಲ. ಆದರೆ ಅವನು ಒಂದು ವಾರ ಕಳೆದಿದ್ದ. ಇಷ್ಟು ದಿನಗಳವರೆಗೆ ಬದುಕಿದ ರೋಗಿಗಳಲ್ಲಿ ಅವನೇ ಮೊಟ್ಟಮೊದಲನೆಯನಾಗಿದ್ದ.

ಮುಖ್ಯ ಡಾಕ್ಟರರು ಅವನನ್ನು ನೋಡಲು ಬಂದರು. ಅವನನ್ನು ನೋಡಿ ಅವರು "ಈಗವನು ಉತ್ತಮಗೊಳ್ಳುತ್ತಿದ್ದಾನೆ. ಈಗವನನ್ನು ಈ ವಾರ್ಡಿನಲ್ಲಿಡುವುದು ಅನಾವಶ್ಯಕ. ನಾಳೆಯೇ ಇವನನ್ನು ಜನರಲ್ ವಾರ್ಡಿಗೆ ಕಳುಹಿರಿ" ಎಂದರು.

ನರ್ಸ್ ತಲೆ ಹಾಕಿದಳು.

ಮೂರನೆಯ ದಿನ ಅವನನ್ನು ಆ ವಾರ್ಡಿನಿಂದ ಕೊಂಡೊಯ್ಯುವ ಸಿದ್ಧತೆಗಳಾಗತೊಡಗಿದುವು. ಆಗಲೇ ಜವಾನ ಬಂದಳು. ಅಮರ ತನಗೀಗ ಮೋಸಂಬಿಯನ್ನು ತರುವ ಸಮಯವಾಯಿತೆಂದು ಅರಿತ.

ನರ್ಸ್ ಜವಾನನಿಯೊಂದಿಗೆ ಹೊರಗೆ ಹೋಗತೊಡಗಿದಾಗ ಅವನು " ಅವಳನ್ನು ಇಂದು ಇಲ್ಲಿಗೆ ಕರೆದುಕೊಂಡು ಬರಲೇಬೇಕು ಅಕ್ಕಾ! ಅವಳಿಗೆ, ನಾನು ಮಂಚದಿಂದ ಮೇಲಕ್ಕೇಳದಿದ್ದರೂ ನನ್ನ ಆರೋಗ್ಯ ಉತ್ತಮಗೊಂಡಿದೆಯೆಂದು ತಿಳಿಸು. ನಾನವಳ ನ್ನೊಂದು ಸಾರಿ ನೋಡಬಯಸುವೆನೆಂದು ತಿಳಿಸು " ಎಂದ.

ನರ್ಸ್ ಮೋಸಂಬಿಯನ್ನು ತಂದ ಸ್ತ್ರೀಯನ್ನು ಭೇಟಿಮಾಡಲು ಹೊರಗೆ ಹೋದಳು. ಆಸ್ಪತ್ರೆಯ ಉಡುಗೆಯನ್ನು ಧರಿಸಿದ್ದ ಜವಾನರು ಅಮರನ ಚಕ್ರಗಳಿದ್ದ ಮಂಚವನ್ನು ಹೊರಗೆ ಕೊಂಡೊಯ್ಯತೊಡಗಿದರು. ವಾರ್ಡಿನ ಬಾಗಿಲ ಹತ್ತಿರಕ್ಕೆ ಮಂಚ ಬರುವ ವೇಳೆಗೆ ನರ್ಸ್ ಮೋಸಂಬಿಯನ್ನು ತಂದವಳೊಂದಿಗೆ ಒಳಗೆ ಬರತೊಡಗಿದಳು.

ಅಮರನ ಮಂಚ ಬಾಗಿಲಿನ ಮಧ್ಯಕ್ಕೆ ಸರಿಯಾಗಿ ಬಂದಿತ್ತು. ಬಾಗಿಲಿನ ಮೇಲೆ ' ಸಿರೀಯಸ್ ಕೇಸಿಸ್ ' ಎಂದು ಬರೆದಿದ್ದ ಹಲಗೆ ನೇತಾಡುತ್ತಿತ್ತು.

ಕೈಯಲ್ಲಿ ಮೋಸಂಬಿಯನ್ನು ಹಿಡಿದುಕೊಂಡು ನಾಚುತ್ತ ಹೆದರುತ್ತ ಆ ಯುವತಿ ಹತ್ತಿರ ಬಂದಳು. ಅಮರನ ಕಾಲ್ದೆಸೆಯಲ್ಲಿ ಮಂಚದ ನಂಬರ್ ಇತ್ತು–ಐವತ್ತೈದು. ನರ್ಸ್‌ಳಿಂದ ನಂಬರಿನ ಮಂಚವನ್ನರಿತು ಅವಳು ಸಂತೋಷಗೊಂಡು, ಮಂಚದ ಕಡೆಗೆ, ಭಾವಾವೇಶದಲ್ಲಿ ಓಡಿ ಬಂದಳು. ಅಮರನೂ ಆ ದಯಾಮೂರ್ತಿ ಯನ್ನು ನೋಡಲು ತಲೆಯೆತ್ತಿದ.

ಆದರೆ ಅಮರನ ತಲೆ ಮೇಲಕ್ಕೆತ್ತತ್ತಲೇ, ಮೋಸಂಬಿಯನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಯುವತಿ ತಟ್ಟನೆ ಇದ್ದಲ್ಲಿಯೆ ಸ್ತಂಭಿತ ಳಾಗಿ ನಿಂತಳು. ವಿಸ್ಮಯದಿಂದ ಅವಳು ಕಣ್ಣುಗಳನ್ನು–ಸೆದರಿದವಳಂತೆ ಅಥವಾ ಬೆಚ್ಚಿದವಳಂತೆ,–ಅರಳಿಸಿದಳು. ಅಮರನು ಅವಳ ಕಡೆಗೆ ಹುಚ್ಚನಂತೆ ನೋಡತೊಡಗಿದ.

ಅವಳು ಪುನಃ ಮಂಚದ ನಂಬರಿನ ಕಡೆ ನೋಡಿದಳು. ನರ್ಸ್ " ಐವತ್ತೈದನೆಯ ನಂಬರ್ " ಎಂದಳು.

ಕೊನೆಗವಳು ನರ್ಸ್‌ಗೆ " ನಾನು ದಿನವೂ ಕೊಡುತ್ತಿದ್ದ ಮೋಸಂಬಿಯನ್ನು ನೀವು ಇವನಿಗೇ ಕೊಡುತ್ತಿದ್ದುದು ? " ಎಂದಳು.

" ಹ್ಞೂ " ಎಂದಳು ನರ್ಸ್.

" ನಾನು ಹಸಿಮುಕೊಂಡು, ಬಿಕ್ಷೆಯಲ್ಲಿ ಸಿಕ್ಕ ಕಾಸುಗಳಿಂದ ಮೋಸಂಬಿಯನ್ನು ಕೊಂಡುಕೊಂಡು ಬಂದು ಕೊಡುತ್ತಿದ್ದೆ. ಅದನ್ನು ನೀವು ಇವನಿಗಾ ಕೊಡುತ್ತಿದ್ದುದು ? "

" ಹ್ಞೂ ! " ನರ್ಸ್ ಪುನಃ ಹೇಳಿದಳು ಏಕೆ? ಒಂದು ವಾರದ ಹಿಂದೆ ನೀನೇ ಹೇಳಿದ್ದೆ–ಈ ಮೋಸಂಬಿಯನ್ನು ಐವತ್ತೈದನೆಯ ನಂಬರಿನ ಮಂಚವನಸಿಗೆ ಕೊಡಬೇಕೂಂತ !

" ಅಯ್ಯೋ ! ಇವನಾರೊ, ಅದೇ ನನಗೆ ಗೊತ್ತಿಲ್ಲ. ನಾನಿವ ನನ್ನೆಂದೂ ನೋಡೇ ಇಲ್ಲ. ನನಗಿವನೊಡನಾವ ಸಂಬಂಧವೂ ಇಲ್ಲ! " ಎಂದು ಹೇಳಿ ನರ್ಸ್‌ಳ ಎರಡೂ ಕೈಗಳನ್ನು ಹಿಡಿದುಕೊಂಡು, ಕರುಣಾ ಸ್ವರದಲ್ಲಿ " ಇವನಿಗಿಂತ ಮುಂಚೆ ಇದ್ದ ರೋಗಿ ಎಲ್ಲಿ ? " ಎಂದಳು.

" ಅವನು .... ಅವನು .... " ನರ್ಸ್ ಹಿಂದೆ ಮುಂದೆ ನೋಡುತ್ತಾ ನುಡಿದಳು: " ಅವನು ಅಂದೇ ಸತ್ತುಹೋಗಿದ್ದ. ನೀನು ಮೋಸಂಬಿಯನ್ನು ತೆಗೆದುಕೊಂಡು ಬರುವುದಕ್ಕಿಂತ ಒಂದು ಘಂಟೆ ಮುಂಚೆ. ಅವನೀ ಮಂಚದ ಮೇಲೆ ಬದುಕಿದ್ದುದು ಒಂದೇ ಘಂಟೆ. ಒಂದು ಘಂಟೆಯ ಬಳಿಕವೇ ಈ ರೋಗಿ ಬಂದಿದ್ದ. ನೀನು ಹೇಳಿದಹಾಗೆ ನಾನು ಇವನಿಗೆ ಮೋಸಂಬಿಯನ್ನು...."

ತನ್ನ ಪ್ರಿಯತಮನ ಸಾವಿನ ಸುದ್ದಿಯನ್ನು ಕೇಳುತ್ತಲೇ ಅವಳು ಕರುಣಾಸ್ವರದಲ್ಲಿ ಚೀತ್ಕರಿಸಿ, ಮೋಸಂಬಿಯನ್ನಲ್ಲಿಯೆ ಎಸೆದು ಹೊರಗೆ ಓಡಿಹೋದಳು.

ಅವಳ ಚೀತ್ಕಾರವನ್ನು ಅಮರನೂ ಕೇಳಿದ. ಅವಳ ಮಾತು ಗಳೂ ಅವನ ಕಿವಿಗೆ ಬಿದ್ದಿದ್ದುವು— ' ಇವನಾರೊ, ನನಗದೇ ಗೊತ್ತಿಲ್ಲ, ನಾನಿವನನ್ನೆಂದೂ ನೋಡೇ ಇಲ್ಲ, ನನಗಿವನೊಡನಾವ ಸಂಬಂಧವೂ ಇಲ್ಲ....' ಅಮರನಿಗೆ ಸಿಕ್ಕಿದ್ದ ಬದುಕಿನ ಆಶ್ವಾಸನೆಯು ಈ ದನಿಯೊಂದಿಗೆ ಹೊರಟುಹೋಯಿತು.

ನರ್ಸ್ ಅವನ ನಾಡಿಯನ್ನು ಹುಡುಕಿದಳು. ಮರುಕ್ಷಣವೇ ಚೀತ್ಕರಿಸಿದಳು. "Doctor! Doctor! This patitent is sinking.....Please.....Please, come sharp!"

ಡಾಕ್ಟರರು ತತ್‌ಕ್ಷಣವೇ ಅವನ ನಾಡಿಯನ್ನು ನೋಡಿದರು. ನಾಡಿಯ ಗತಿ ಬಹಳ ಮಂದವಾಗಿ ಬಿಟ್ಟಿತ್ತು. ಅವನಿಗೆ ತತ್‌ಕ್ಷಣವೇ ಆಕ್ಸಿಜನ್ ಕೊಡಬೇಕೆಂದು ನಿಶ್ಚಯಿಸಿದರು. ಆದರೆ ಈಗ ಬಹಳ ತಡವಾಗಿ ಬಿಟ್ಟಿತ್ತು. ಯಾವ ಆಶ್ವಾಸನರೂಪೀ ಆಕ್ಸಿಜನ್‌ನಿಂದ ಅಮರನು ಬದುಕಿದ್ದನೊ, ಆ ಆಕ್ಸಿಜನ್ನಿನ ಕೋರ್ಸ್ ಏಕಾಏಕಿ ಮುಗಿದುಹೋಗಿತ್ತು. ಅವನಾವ ಬಗೆಯಲ್ಲಿ ಬದುಕಬಲ್ಲ ?

ಡಾಕ್ಟರರು ಕೈ ಕೊಡಹುತ್ತಾ " He is finished now, very peculiar case ! ಬದುಕಿದ್ದು ಅನಿರೀಕ್ಷಿತ, ಸತ್ತಿದ್ದೂ ಅನಿರೀಕ್ಷಿತ!" ಎಂದರು.

ಆ ವಾರ್ಡಿನೊಳಕ್ಕೆ ಹೋದ ರೋಗಿ ಅದೃಷ್ಟವಶದಿಂದಲೇ ಬದುಕಿ ಹೊರಬರಬೇಕೆಂಬ ಆಸ್ಪತ್ರೆಯ ಪ್ರಸಿದ್ಧ ಮಾತು ಸತ್ಯ ಸಿದ್ಧ ವಾಗಿಯೇ ಉಳಿಯಿತು. ಅಮರನ ಶವವನ್ನು ವಾರ್ಡಿನೊಳಗಿಂದ ಹೊರಗೆ ಕೊಂಡೊಯ್ಯುತ್ತಿರುವಾಗ, ಜವಾನನೊಬ್ಬನ ಕಾಲು ಆ ಮೋಸಂಬಿಗೆ ತಾಕಿತು. ಆ ಮೋಸಂಬಿ ಒಂದು ಕಡೆ ಉರುಳಿಕೊಂಡು ಹೋಯಿತು. ನರ್ಸ್ ಉರುಳಿ ಹೋಗುತ್ತಿದ್ದ ಮೋಸಂಬಿಯನ್ನೇ ನೋಡುತ್ತಿದ್ದಳು.

★ ನಾಳೆಯ ಭಾರತ ★

‹ ಆನಂದಕಂದ ›

ಇಂದಿನ ಜನತೆಯ ಗೆಯ್ಮೆಗಳಿಂದಲೆ
ನಾಳೆಯ ಭಾರತ ತೊಳಗಲಿದೆ— ದಿಟ !
ನಾಳೆಯ ಭಾರತ ಬೆಳಗಲಿದೆ !
ಇಂದಿನ ಜನತೆಯ ಕೆಯ್ಮೆಯೆ ನಾಳೆಯ
ಭಾರತದೆದೆಯನು ತುಳಿಯಲಿದೆ— ಸುಖ-
ಶಾಂತಿಯನೆಲ್ಲವನಳಿಯಲಿದೆ !
ಇಂದುಗಳೆಲ್ಲವು ನಿನ್ನೆಯ್ದು ಮಗುಗಳು,
ಇಂದಿನ ಹೆಸುಳೆಗಳೇ ನಾಳೆಗಳು—
ತಂದೆಯ ಗುಣ-ಕರ್ಮಗಳಿಗೆ ಕಂದನು
ಗುರಿಯಹನಿದು ಪ್ರಕೃತಿ;
ತಂದೆಯ ಕೃಷಿಯದು ಕಂದಗೆ ಫಲಗಳ
ನೀಡುವುದಿದು ನಿಯತಿ !
ಹಿಂದಣ ಹಿರಿಯರ ಕರ್ಮ-ಕೃಷಿಗಳವು
ಸ್ವಾತಂತ್ರ್ಯವ ನಮಗೊದವಿಸಿ ತಂದುವು;
ಇಂದಿನ ಭಾರತದೆಲ್ಲ ಸೂತ್ರಗಳು
ನಮ್ಮ ಕೈಯಲಿಹವು—
ಇದರ ಭವಿಷ್ಯದ ಸೋಲು-ಕೀಳುಗಳ
ನಾವೆ ಬರೆಯಲಿಹೆವು.

ನಮ್ಮದೇ ಹೊಲವು ಸರಿ, ಸುಮ್ಮಗೇ ಬೆಳೆವುದೇ ?
ಹಲಧರರು ನಾವಾಗಿ ಗೆಡೆ ಹೂಡಬೇಕು—
ಕಂಟಿ-ಕುತ್ತುರ ಕಡಿದು, ಕರುಕೆ-ಕಸಗಳನಾಯ್ದು
ತಗ್ಗು-ಹಿಗ್ಗುಗಳನ್ನು ಸಮ ಮಾಡಬೇಕು !
ಬೆದೆಗಾಲನನ್ನರಿತು ಹದದ ಬೀಜಗಳಿಂಬ
ಪೊಡವಿಯಮ್ಮನ ಉಡಿಯ ತುಂಬಬೇಕು—
ಮೊಳೆತು ಬೆಳೆದಾ ಪಯಿರು ನಾಳೆ ನಮಗೊಳ್ಳಣಿಸ
ಕೊಡುವುದೆಂಬಾ ತಾಳ್ಮೆಗಿಂಬು ಬೇಕು !
ನಮ್ಮದೆ ಹೊಲವಿದು, ಗೆಯ್ಮೆಯದೇತಕೆ ?
ಎನ್ನುತ ನಿಷ್ಕರ್ಮಿಗಳಾಗೆ—
ಹುಲ್ಲು-ಕಸ ಬೆಳೆದು ಮುಳ್ಳು ನುಳೆ ಬಲಿಯೆ
ಅನ್ನ ನಾಳೆ ದೊರೆವುದು ಹ್ಯೇಗೆ ?
ಮನಕೆ ಬಂದ ಬೀಜವ ಚೆಲ್ಲಿದರೆ—
ಬಯಸಿದ ಬೆಳೆ ಬರುವುದು ಹೇಗೆ ?
ಇಂದಿನ ಜನತೆಯ ಗೆಯ್ಮೆಗಳಿಂದಲೆ
ನಾಳೆಯ ಭಾರತ ಉಳಿಯಲಿದೆ – ದಿಟ
ನಾಳೆಯ ಭಾರತ ಬೆಳೆಯಲಿದೆ—

ಇಂದಿನ ಜನತೆಯ ಕೆಯ್ಮೆಯೆ ನಾಳೆಯ
ಭಾರತದೆದೆಯನು ತುಳಿಯಲಿದೆ— ಬಲ-
ತೇಜಗಳೆಲ್ಲವ ತೊಳೆಯಲಿದೆ !

ಇಂದಿನೀ ಜನಮನದ ಮುಗಿದ ಮೊಗ್ಗರಳಿದರೆ
ನಾಳೆಯವರಿಗೆ ದೊರೆವುದದರ ಗಂಧ,
ಇಂದಿನವರೆದೆಗಲ್ಲು ಕರಗಿ ಕೆಳೆ ಹರಿಸಿದರೆ
ನಾಳೆಯವರಿಗೆ ಅದುವೆ ಅಮೃತದಂದ !
ಇಂದಿನೆಲ್ಲರ ಕರ್ಮ ಧರ್ಮವೆಂದೆನಿಸಿದರೆ
ನಾಳೆಯವರಾ ಬಾಳು ಚೆಲುವು-ಚೆಂದ,
ಇಂದಿನೆಲ್ಲರ ಪ್ರಜ್ಞೆ ಹಿಂಗದೆಯೆ ಮಿರುಗಿದರೆ
ಮುಂದೆ ಜನಕಿರದು ಕಾರಿರುಳ ಬಂಧ !
ಯಜ್ಞ-ದಾನ-ತಪವಿಂದಿನ ಬಾಳಲಿ
ಎದ್ದುಕಾಣುತಿರಲಿ ....
ಕರುಣೆ-ಮೈತ್ರಿ-ಸಮ್ಮುದಗಳ ಮೇಳವು
ಹಗೆಯ ಮಾಣುತಿರಲಿ !
ನಾಳೆಯ ಭಾರತದೇಳಿಗೆ ಬೇಕೇ
ದುಡಿಯಬೇಕು ಇಂದಿನ ಜನತೆ—
ನಮ್ಮ ಕುನ್ನಿಗಳು ಮನ್ನೆಯರಾಗಲು
ಪಡೆಯಬೇಕು ಸ್ವಾತ್ಮದ ಘನತೆ !
ಇಂದಿನ ನಮ್ಮಯ ನಡೆ-ನುಡಿಯಿಂದಲೆ
ನಾಳೆಯ ಭಾರತ ಮಿರುಗಲಿದೆ— ಸಿರಿ
ಸೊಬಗನು ಲೋಕದಿ ತುರುಗಲಿದೆ !
ಇಂದಿನ ನಮ್ಮಯ ನಡೆ-ನುಡಿಯಿಂದಲೆ
ನಾಳೆಯ ಭಾರತ ಕೊರಗಲಿದೆ— ಜನ
ದೈನ್ಯ-ದುಃಖದಲಿ ಕರಗಲಿದೆ !

ಇಂದಿನೀ ಬರುಬುರುಡೆ ಸದ್ಭಾವಸಂಗೀತ-
ವಿಡಿವ ವೀಣೆಯ ರೂಪಗಳ ತಾಳಬೇಕು ....
ಇಂದಿನೀ ಬರಿಯೋಲೆ ಸತ್ಯಾನುಭವರಸದ
ಕೃತಿಗಳನು ನೈಮೇಲೆ ಬರೆದುಕೊಳಬೇಕು;
ಅಲ್ಲಲ್ಲಿ ಬಿದ್ದಿರುವ ಕಲ್ಲು-ಬಂಡೆಗಳೆಲ್ಲ
ಶಿಲ್ಪಿಗಳ ಶಿವಕಲೆಯನೆಲೆಯಾಗಬೇಕು ....
ನಾಳೆವರೆಗಿನಕಾಲ ಭಾರತದ ಜನವೆಲ್ಲ
ಇದೆ ಇದೇಕಾರ್ಯದಲಿ ದುಡಿಯುತಿರಬೇಕು !
ಇಂತಾಗೆ—
ಭಾರತವು ನಾಳೆ ಸುರಲೋಕವಾಗುವುದೋ ....
ಭಾರತೀಯರ ಕುಲವು ದೇವಕುಲವಹುದೋ
ದೇವಕುಲವಹುದು !

ಡಾಕ್ಟರ್ ಜಾರ್ಜ್ ವಾಶಿಂಗ್‌ಟನ್ ಕಾರ್ವರ್

(ವಿಜ್ಞಾನಿಯೊಬ್ಬನ ಜೀವನವೃತ್ತ—ಮುಂದುವರಿದುದು)

ಶ್ರೀ. ಟಿ. ಆರ್. ನಾಡಗೀರ್ ಬಿ. ಎಸ್‌ಸಿ, (ಟೆಕ್), ಮುಂಬಯಿ

'ಪುರುಷಸ್ಯ ಭಾಗ್ಯಂ ದೇವೋ ನ ಜಾನಾತಿ!' ಪರದೇಶಿ ಕೂಸು ಕಪ್ಪು ಕಾರ್ವರ್, ಹೇಗೋ ಬಾಳಿ ಸಾಯಬೇಕಾಗಿತ್ತು. ಆತನ ದೈವ ಅವನನ್ನು ಎಲ್ಲರಿಗಿಂತ ದೊಡ್ಡವನನ್ನಾಗಿ ಮಾಡಿತು. ಜನ-ಸಾಮಾನ್ಯರ ದೃಷ್ಟಿಯಲ್ಲಿ ಜಾರ್ಜ್ ಸುಖಜೀವಿಯಲ್ಲ; ಆದರೆ ಅವನ ಕಾರ್ಯ ಅಸೇಕರ ಸುಖ-ಜೀವನಕ್ಕೆ ಕಾರಣವಾಗಿ ನಿಂತಿದೆ.

ಅಯೋವಾ ಕಾಲೇಜಿನಲ್ಲಿ ಜಾರ್ಜ್ ಪ್ರಾಧ್ಯಾಪಕನಾಗಿ ಎರಡು ವರುಷಗಳಾಗಿರಬಹುದಷ್ಟೆ! ತನ್ನ ಕನಸಿನ ಚಿತ್ರವನ್ನು ನನಸಾಗಿ ಮಾಡಿ ಪ್ರತಿಷ್ಠೆಯನ್ನಿತ್ತ ಈ ಸಂಸ್ಥೆಗೆ ವಿದಾಯ ಹೇಳುವ ವಿಚಿತ್ರ ಸ್ಥಿತಿಯೊಂದು ಒದಗಿತು.

ಟಸ್ಕೇಜಿಯಲ್ಲಿ ಅಂದು ದಾರಿದ್ರ್ಯ ತಾಂಡವವಾಡುತ್ತಿತ್ತು. ಭೂಮಿಯೆಲ್ಲ ಮರುಭೂಮಿಯಾಗಿತ್ತು. ಮೇಲಾಗಿ ಬೇಸಾಯ ತೀರ ಪುರಾತನ ಕಾಲದ್ದು. ಅರೆಹೊಟ್ಟೆಯಿಂದ ಮಕ್ಕಳು ಶಾಲೆಗೆ ಬರುತ್ತಿದ್ದರು. ಅದೂ ಬೇಸಾಯವಿಲ್ಲದ ದಿನದಲ್ಲಿ. ಇಂಥಲ್ಲಿ ಶಾಲೆಯೊಂದನ್ನು ಜೀವಕ್ಕಿಂತ ಹೆಚ್ಚಾಗಿ ಪಾಲಿಸಿಕೊಂಡಿದ್ದನು, ಸಾಹಸಿ ಬೂಕರ್ ಟಿ. ವಾಶಿಂಗಟನ್. ಅವನಿಗೊಬ್ಬ ನಿಸ್ವಾರ್ಥ ಸಹಯೋಗಿಯ ಆವಶ್ಯಕತೆ ಇತ್ತು. ಕಣ್ಣೋಸಕರ್ಣವಾಗಿ ಜಾರ್ಜ್‌ನ ಹೆಸರನ್ನಾತ ಕೇಳಿದ್ದ. ಅಯೋವಾದಂತಹ ಪ್ರಸಿದ್ಧ ಕಾಲೇಜಿನಲ್ಲಿ ಉತ್ತಮ ವೇತನವದ್ದು ಪಡೆಯುತ್ತಿರುವ ಪುಣ್ಯಶಾಲಿ, ತನ್ನಲ್ಲಿಗೆ ಬಾರನೆಂದು ಭಾವಿಸಿದ್ದ. ನಿರಾಶೆಯ ಬೇಗುದಿಯಲ್ಲಿ ಬೆಂದು, ಕಡೆಗೊಂದು ದಿನ ಜಾರ್ಜನಿಗೆ ಓಲೆ ಬರೆದ. ಅದರಲ್ಲಿ ಸಂಸ್ಥೆ ಇದುವರೆಗೆ ಬೆಳೆದುಬಂದ ಬಗೆ, ಆ ಭಾಗದ ಹಿನ್ನೆಲೆ ಇವುಗಳನ್ನು ಬರೆದು, ಓಲೆಯನ್ನು ಇಂತು ಮುಕ್ತಾಯಗೊಳಿಸಿದ್ದ:- 'ನನ್ನಿಂದ ಹಣವಂತೂ ದೊರಕುವಂತಿಲ್ಲ. ಸ್ಥಾನಮಾನ ಮತ್ತು ಪ್ರತಿಷ್ಠೆಯೂ ದೂರದ ಮಾತು. ಸದ್ಯಕ್ಕೆ ನಿಮಗೆ ಇವೆಲ್ಲ ಲಭ್ಯವಿವೆ ಎಂಬುದನ್ನು ನಾನು ಬಲ್ಲೆ. ಇವಕ್ಕೆಲ್ಲ ತಿಲಾಂಜಲಿ ಕೊಡಿರೆಂದು ನಾನು ಕೇಳಿಕೊಳ್ಳುತ್ತೇನೆ. ನಿಮ್ಮ ಈ ತ್ಯಾಗಕ್ಕೆ ನಾನು ಏನು ಕೊಡುವೆನೆಂದಿರಿ? ಪರಿಶ್ರಮ, ಬಡತನ, ಪಶುಜೀವನದಲ್ಲಿರುವವರನ್ನು ಮಾನವರನ್ನಾಗಿಸುವ ಮಹಾ ಸಾಹಸದ ಕಾರ್ಯ!" ಈ ವಿಚಿತ್ರ ಕರೆಯ ನೀತಿಯನ್ನು ಓದಿದಂತೆ, ಜಾರ್ಜ್‌ನ ಮನಸ್ಸಿನಲ್ಲಿ ಕೋಲಾಹಲ ವೇಳುತ್ತಿತ್ತು. ಹೃದಯದಲ್ಲಿ ತಳಮಳವುಂಟಾಗುತ್ತಿತ್ತು. ಕಣ್ಣೆದುರು ಆ ಮಕ್ಕಳ ನಗ್ನ ಚಿತ್ರ ಕಟ್ಟುತ್ತಿತ್ತು. ಅದೆಷ್ಟೋ ದೂರದಿಂದ ಬರಿಗಾಲಿನಿಂದ ಬರುವ ಬಡಕಲು ಮಕ್ಕಳನ್ನು ಚಿಂದಿಯಲ್ಲಿ ಕಂಡ ಜಾರ್ಜ್, ವಿಚಾರ ಮಾಡಿದಂತೆ ಈ ಜನತೆಗೆ ಸೇವೆ ಸಲ್ಲಿಸುವುದು ತನ್ನ ಪ್ರಥಮ ಕರ್ತವ್ಯವೆಂದು ಅವನು ಬಗೆದ. ಆ ಭಾವನೆಯಲ್ಲಿಯೇ ನಾನು ಟಸ್ಕೇಜಿಗೆ ಬರುವೆನೆಂಬ ಮೂರು ಶಬ್ದಗಳ ಓಲೆಯನ್ನು ಬರೆದ. ಈ ವಿಚಾರವನ್ನು ಅದೆಷ್ಟೋ ದಿನ ಯಾರಿಗೂ ಹೇಳಲಿಲ್ಲ. ತನ್ನ ನಿರ್ಗಮನದಿಂದ ಅಯೋವಾ ಕಾಲೇಜಿಗೆ ತೊಂದರೆಯಾಗದಂತೆ ದಕ್ಷತೆ ವಹಿಸಲು ತನ್ನ ಸಹಕಾರಿಗೆ ಉಪಯುಕ್ತ ಸಲಹೆ ಸೂಚನೆಗಳನ್ನಿತ್ತ. ಈ ಸಂಸ್ಥೆಯಿಂದಲೇ ತಾನೊಬ್ಬ ಮನುಷ್ಯನೆಂದು ಗಣಿಸಲ್ಪಟ್ಟಿದ್ದನ್ನು ಜಾರ್ಜ್ ಮರೆಯುವಂತಿರಲಿಲ್ಲ; ಆದರೆ ಟಸ್ಕೇಜಿ ಆತನ ಹೃತ್ತಂತ್ರಿಯನ್ನು ಮಿಡಿದಿತ್ತು.

ಅದೊಂದು ಸಂಜೆ ಕಾರ್ವರ್ ತಾನು ಸಿದ್ಧಪಡಿಸಿದ ತ್ಯಾಗಪತ್ರವನ್ನು ಡಾ. ವಿಲ್ಸನ್ನರೆದುರು ಹಿಡಿದ. ಅವರಿಗೆ ಮಂಕುಕವಿದಂತಾಯಿತು. ಜಾರ್ಜನನ್ನೇ ಬಿಡುಗಣ್ಣಿಂದ ಪರೀಕ್ಷಿಸಿದರು.

'ಕ್ಷಮಿಸಿರಿ ಸರ್, ನನ್ನೀ ನಿರ್ಣಯ ಅನಿವಾರ್ಯವಾಗಿದೆ. ನನ್ನಿಂದ ಆಗಬಹುದಾದ ಸೇವೆಯು, ನನ್ನ ಅಧ್ಯಾಪಕರಿಂದ ಆಗುವಂತೆ ನೋಡಿಕೊಂಡಿದ್ದೇನೆ.

'ಜಾರ್ಜ್, ನಿನ್ನ ಸ್ಥಾನವನ್ನು ಯಾರೂ ಆಕ್ರಮಿಸುವಂತಿಲ್ಲ.'

ಎಂತಹ ನಿಶ್ವಾಸ ಕಾರ್ವರನ ಮೇಲೆ! ಎಂತಹ ಯೋಗ್ಯತೆ ಆತನದು! ಮಾರನೆಯ ದಿನ ಡಾ. ವಿಲ್ಸನರೊಂದಿಗೆ ಕಾಲೇಜಿನ ಪ್ರಿನ್ಸಿಪಾಲರನ್ನು ಕಂಡು, ತನ್ನ ತ್ಯಾಗಪತ್ರವನ್ನಿತ್ತಾಗ, ಅವರೂ ಗರಬಡಿದಂತಾದರು. 'ಜಾರ್ಜ್, ಇದೀಗ ತಾನೆ ಮಾಸ್ಟರ್ಸ್ ಪದವಿಯನ್ನು ಪಡೆದಿದ್ದೀರಿ. ಇಲ್ಲಿಯಂತಹ ಸುವರ್ಣಸಂಧಿಗಳು ನಿಮಗೆ ಎಲ್ಲಿಯೂ ದೊರೆಯಲಾರವು. ನಿಮ್ಮ ನಿರ್ಗಮನದಿಂದ ನಮಗಾಗುವ ಹಾನಿಯನ್ನೂ ನೀವು ಗಮನಿಸಬೇಕು' ಎಂದು ಉಪದೇಶಿಸಿದರು ಅವರು.

'ಸರ್, ಅದು ನಿಮ್ಮ ಔದಾರ್ಯದ ಹಾಗೂ ನನ್ನಲ್ಲಿಟ್ಟಿರುವ ವಿಶ್ವಾಸದ ದ್ಯೋತಕ. ಆದರೆ ನನ್ನೀ ನಿರ್ಣಯ ಅವಶ್ಯವಾಗಿದೆ!' ಜಾರ್ಜ್‌ನ ಕಂಠ ತುಂಬಿಬಂದಿತ್ತು. ಅಲಾಬಾಮಾದ ಟಸ್ಕೇಜಿ ಸಂಸ್ಥೆಯಿಂದ ಬಂದ ಓಲೆಯನ್ನು ಅವರಿಗೆ ತೋರಿಸಿದ. ಜಾರ್ಜ್‌ನ ತ್ಯಾಗಪತ್ರವನ್ನು ಭಾರವಾದ ಹೃದಯದಿಂದ ಸ್ವೀಕರಿಸಿ, ತಮಗಾಗಿರುವ ಅನುತಾಪವನ್ನು ವ್ಯಕ್ತಪಡಿಸಿದರು. ಆ ಹಿರಿಯರು 'ದೊಡ್ಡಿಸ್ತಿಕೆಯಿಂದ ದೂರ ಸರಿಯುವವರನ್ನು ನಾವು ಕಾಣೆವಿಂತು. ಹಣ, ಕೀರ್ತಿ ಮತ್ತು ಪ್ರತಿಷ್ಠೆಗೆ ತಿಲತರ್ಪಣ ಆತ ಕೇಳಿದ್ದು. ಅವಕ್ಕೆ ಪ್ರತಿಯಾಗಿ ಆತ ನಿಮಗೆ ಅಮರತ್ವ ನಯಪಾಲಿಸಿದ್ದಾನೆ.' ಬೀಳ್ಕೊಡಿಗೆ ಹೃದಯದ್ರಾವಕವಾಗಿತ್ತು. ಆ ಮುಪ್ಪಿನ ಪ್ರಿನ್ಸಿಪಾಲರ ಕಣ್ಣಲ್ಲಿ ನೀರು ಪುಟಿಯಿತು; ಧ್ವನಿ ನಡು

ಗಿತು. ಯಾರೊಬ್ಬರೂ ಸಲೀಲವಾಗಿ ಮಾತನಾಡುವಂತಿರಲಿಲ್ಲ. ಮೂಕಭಾವನೆಗಳೇ ಪರಸ್ಪರ ಸಂಭಾಷಿಸಿದುವು. ಕೊನೆಗೆ ಆ ವೃದ್ಧರು ಹೇಳಿದರು:– 'ಜಾರ್ಜ್, ದೇವರು ನಿನ್ನ ಕೈ ಬಿಡದಿರಲಿ!'

ಜಾರ್ಜ್ ಅಲಾಖಾಮಕ್ಕೆ ಬಂದ ಮೇಲೆ, ಸ್ವಪ್ರತಿಷ್ಠೆಯನ್ನು ಉಗ್ಗಡಿಸದೆ ಅಲ್ಲಿಯದೆಲ್ಲವನ್ನೂ ಪರಿಚಯ ಮಾಡಿಕೊಳ್ಳತೊಡಗಿದ. ಸಂಪೂರ್ಣ ಹೊಣೆಯನ್ನು ಬೂಕರನು ಇವನ ಮೇಲೆ ಹಾಕಿದನು. ಪರಸ್ಪರರಲ್ಲಿ ನೆಲಸಿದ ತಿಳಿವಳಿಕೆ, ಭಯಭಕ್ತಿ ಅನ್ಯಾದೃಶವಾಗಿದ್ದುವು. ಆದೆಷ್ಟೋ ಜನ, ಕಾರ್ವರನಿಗೆ ಉನ್ನತವಾದ ಮಾನದ ಆಮಿಷ ತೋರಿಸಿದರು; ಆದರೆ ಆತ ತನ್ನ ಕರ್ಮಭೂಮಿಯಿಂದ ಒಂದಂಗುಲ ಕೂಡ ಚಲಿಸಲಿಲ್ಲ. ಅಷ್ಟು ಆತ್ಮೀಯತೆ ಇತ್ತು ಜಾರ್ಜ್‌ನಿಗೆ ಟಸ್ಕೇಜಿ ಸಂಸ್ಥೆಯ ಮೇಲೆ. ಬೂಕರನ ಮರಣಾನಂತರ ಆ ಸಂಸ್ಥೆಯ ಹೊಣೆಯನ್ನು ಸಂಪೂರ್ಣವಾಗಿ ಜಾರ್ಜ್ ಹೊತ್ತುಕೊಂಡ. ಅಂಥ ಶ್ರದ್ಧೆ ಜಾರ್ಜನಿಗೆ ಬೂಕರನ ಆದರ್ಶದ ಬಗ್ಗೆ. ಜಾರ್ಜ್ ಟಸ್ಕೇಜಿಗೆ ಬಂದ ಹೊಸದರಲ್ಲಿ, ಒಂದು ಬಳ್ಳಿಯ ಪ್ರಯೋಗಶಾಲೆ, ಹಸಿರುವನೆ ಅಥವಾ ಶಾಲೆಗೆ ಸೇರಿದ ಉಪವನ ಇರಲಿಲ್ಲ. ಒಕ್ಕಲುತನವನ್ನು ಅಸಡ್ಡೆಯಿಂದ ಕಲಿಸಲಾಗುತ್ತಿತ್ತು. ಅಂದು ಶಾಲೆಗೆ ಬರುತ್ತಿದ್ದ ವಿದ್ಯಾರ್ಥಿಗಳಿಗೆ ಕುಶಲಕಲೆಗಳಲ್ಲಿ ಮಾತ್ರ ಆಸಕ್ತಿ. ಎಂತಹ ಶುಂಭನೂ ಒಕ್ಕಲತನ ಮಾಡಬಲ್ಲನೆಂಬ ಮಹಾಜ್ಞಾನ. ವರ್ಗದಲ್ಲಿ ವಿದ್ಯಾರ್ಥಿ ತಪ್ಪುಮಾಡಿದಾಗ, ಶಿಕ್ಷೆಯೆಂದು ಕೃಷಿ ಕೆಲಸಕ್ಕೆ ಹಚ್ಚುತ್ತಿದ್ದರು. ಕಾರ್ವರ್ ಈ ಹಿನ್ನೆಲೆಯನ್ನರಿತು ಮುಮ್ಮಲ ಮರುಗಿದನು. ಇಂತಹ ಶಾಲೆಯನ್ನು ವ್ಯವಸ್ಥಿತಗೊಳಿಸಿ, ಅಭಿವೃದ್ಧಿಗೆ ತರುವ ಮಹಾ ಸಾಹಸದ ಕೆಲಸವಿತ್ತು ಕಾರ್ವರನಿಗೆ. ಕಾರ್ವರ್ ವರ್ಗಕ್ಕೆ ಬಂದೊಡನೆ, ವಿದ್ಯಾರ್ಥಿಗಳೊಂದಿಗೆ ಪೊಟ್ಟ ಪೊದಲು ಅನೌಪಚಾರಿಕನಾಗಿ ಮಾತನಾಡಿ ಬೋಧಿಸುವ:– 'ಸೃಷ್ಟಿಯನ್ನು ಕಣ್ದೆರೆದು ನೋಡಿದರೆ, ನಿಮಗೆ ಅಸಂಖ್ಯ ನೋಟಗಳು ಕಾಣಬರುವುವು. ಕಿವಿದೆರೆದರೆ ಅಪ್ರತಿಮ ಸಂಗೀತ ಕೇಳಬರುವುದು. ತರುಣರೇ, ಈ ನಿಸರ್ಗರಮಣೀಯವನ್ನು ಕಣ್ತುಂಬ ನೋಡಿ, ಆ ಸೊಬಗನ್ನು ಪೆಲುಕು ಹಾಕಿರಿ. ಕಿವಿದೆರೆದು ಆಕೆಯ ದಿವ್ಯ ಸಂಗೀತವನ್ನು ಕೇಳಿರಿ. ಈ ಸೃಷ್ಟಿವನಿತೆ ನಿಮಗೆ ಅಗಣಿತ ಪಾಠಗಳನ್ನು ಕಲಿಸುವಳು. ಅಸಂಖ್ಯ ಸುಪ್ತ ಜೀವನದ ನಿಧಿ ಈ ಮಾತೆ!' ಆಗಾಗ್ಗೆ ಅಲ್ಲಲ್ಲಿಯ ಸೂಕ್ತಿಸುಧೆಗಳನ್ನು ಉದಹರಿಸುತ್ತಿದ್ದ. ಈ ನವೀನ ಬೋಧನೆ, ಹೊಸ ದೃಷ್ಟಿದರ್ಶನ, ವಿದ್ಯಾರ್ಥಿಗಳಲ್ಲಿ ನವೋತ್ಸಾಹವನ್ನುಂಟುಮಾಡಿತು. ಕಾರ್ವರನ ವಾಕ್ಯ ವೇದವಾಕ್ಯದಂತೆ ಪರಿಗಣಿಸಲ್ಪಟ್ಟಿತು: ಈ ಮೊದಲು ಒಕ್ಕಲುತನವ ಪಾಠವೆಂದರೆ ತಪ್ಪಿಸಿಕೊಳ್ಳುತ್ತಿದ್ದ ವಿದ್ಯಾರ್ಥಿಗಳು ಈಗ ತಪ್ಪಿಸುತ್ತಿದ್ದಿಲ್ಲ. ಇಂತಹ ಗಾರುಡಿಗ ಶಕ್ತಿ ಇತ್ತು ಆತನ ವಾಣಿಯಲ್ಲಿ. ಹೃದಯದಿಂದ ಹೊರಟ ಭಾವನೆ ಹೃದಯಕ್ಕೆ ತಟ್ಟಿತ್ತು. ಶಾಲೆಗಾಗಿ ಪ್ರಯೋಗಶಾಲೆಯನ್ನು ತೆರಿಯಲಿಂದು, ಅದೊಂದು ದಿನ ಕಾರ್ವರ್ ವಿದ್ಯಾರ್ಥಿಗಳನ್ನು ಊರಿನ ಮೂಲೆ ಮೂಲೆಯಲ್ಲಿಯ— ಉಪಯುಕ್ತವೆಂದು ತೋರಬಹುದಾದ ವಸ್ತುಗಳನ್ನು ಸಂಗ್ರಹಿಸಲು ಹೇಳಿದ. ಹಾಗೆಯೇ ಮನೆಮನೆಗೆ ಹೋಗಿ ಅವರಿಂದ ಮೂಲೆಗೊಗೆದ ವಸ್ತುಗಳನ್ನು ಕೇಳಿ ಪಡೆದುಕೊಂಡ. ನಿಷ್ಪ್ರಯೋಜಕವೆಂದು ಕಡೆಗಣಿಸಿದ ವಸ್ತುಗಳಿಂದ ಕಾರ್ವರನ ಮಾಂತ್ರಿಕ ಪ್ರಯೋಗಶಾಲೆ ಜನ್ಮತಾಳಿತು. ಆಗ ಸಂಗ್ರಹಿಸಲಾದುವುಗಳಲ್ಲಿ, ಒಂದು ದೊಡ್ಡ ಕಂದೀಲು, ಕೆಲ ಬಣ್ಣದ ಹೂಜೆಗಳು, ಇನ್ನೂ 'ಕಾರ್ವರ್ ವಸ್ತುಸಂಗ್ರಾಲಯದಲ್ಲಿ ಕಾಣಬರುತ್ತವೆ.

ಅನಂತರ ಒಕ್ಕಲುತನಕ್ಕೆ ಕೈ ಹಾಕಿದ ಕಾರ್ವರ್. ಈತನಿಗಾಗಿ ೨೦ ಎಕರೆಯಷ್ಟು ಭೂಮಿಯನ್ನು ಕೊಡಲಾಗಿತ್ತು. ಅದು ಬಂಜರು ಭೂಮಿ. ಇಂತಹ ಭೂಮಿಗಾಗಿ ಬೇಸಾಯಕ್ಕೆಂದು ದೊರೆತುದು, ಎರಡು ಕುದುರೆಗೆ ಹೊಂದುವ ನೇಗಿಲು. ಇಂತಹ ನೇಗಿಲು ಆ ವಿಭಾಗಕ್ಕೆ ಹೊಸದು. ಕಾರ್ವರ್ ಭೂಮಿಯನ್ನು ಮೊದಲು ಹಸನಾಗಿಸಿದ. ಸ್ವತಃ ನೇಗಿಲು ಹೂಡೆಯತೊಡಗಿದ. ಒಬ್ಬ ಮಾನ್ಯ ಅಧ್ಯಾಪಕ ನೇಗಿಲು ಹೊಡೆಯುತ್ತಿದ್ದುದು ಅಲ್ಲಿಯ ಒಕ್ಕಲಿಗರನ್ನು ಆಕರ್ಷಿಸುವುದರಲ್ಲಿ ಏನಾಶ್ಚರ್ಯ? ಹಸನಾಗಿಸಿದ ಆ ಭೂಮಿಯಲ್ಲಿ ಕಾರ್ವರ್ ಬಿತ್ತಿದುದು ಹತ್ತಿಯನ್ನಲ್ಲ—ಬಟ್ಟಗಡಲೆ. ದುರ್ದೈವದಿಂದ ಆ ಬಾರಿ ಬೆಳೆ ಕೈ ಬಿಟ್ಟಿತು; ಆದರೂ ಜಾರ್ಜ್ ನಿರಾಶನಾಗಲಿಲ್ಲ. ಮರುಬಾರಿ ಗೆಣಸು ಬೆಳೆದ. ಈ ಬಾರಿ ನಿಸರ್ಗ ಕೃಪೆದೋರಿತು. ಮೂರನೆಯ ಬಾರಿ ಅದೇ ಭೂಮಿಯಲ್ಲಿ ಹತ್ತಿಯನ್ನು ಬೆಳೆದ. ಓ! ಎಂತಹ ಬೆಳೆ ಅದು! ಸುತ್ತುಮುತ್ತಲಿನ ಜನ ನೋಡಿದಷ್ಟೂ ನೋಡಬಯಸಿದರು. ಇಂತಹ ಬೆಳೆಯನ್ನು ಅವರು ಕಂಡುದಿಲ್ಲ. ಮನಸಾರೆ ಹರಸಿತು, ರೈತಾಪಿ ವರ್ಗ ಕಾರ್ವರನನ್ನು. ಹೀಗೆ ಬಂಜರು ಭೂಮಿಯನ್ನು ಬೆಳೆಯುವ ಭೂಮಿಯನ್ನಾಗಿ ಮಾರ್ಪಡಿಸಿದ ಕಾರ್ವರ್.

ಆ ವರುಷ ಉತ್ತಮ ಹತ್ತಿಯ ಬೆಳೆ ಬರುವ ಲಕ್ಷಣ ತೋರುತ್ತಿತ್ತು. ಗೆಣಸು ಮತ್ತು ಬಟ್ಟಗಡಲೆ ಬೆಳೆದಾದ ಮೇಲೆ ಹತ್ತಿಯನ್ನು ಬಿತ್ತಲಾಗಿತ್ತು. ಆಗಲೋ, ಹತ್ತಿಯೇ ಪ್ರಧಾನ ಬೆಳೆ-ಪೇಟೆಯ ಪ್ರಪಂಚದಲ್ಲಿ ಪ್ರಾತಿನಿಧ್ಯದ ಸರಕದು. ಆ ವರುಷ ಹತ್ತಿ ರಾಶಿಯಾಗಿ ಬರುವುದೆಂದು ಜನರು ಹಿಗ್ಗಿದರು. ಆದರೆ ಆಶೆ ಅತಿಯಾದದ್ದು ನಿರಾಶೆಯ ನೋವನ್ನುಂಟುಮಾಡುವಂತಹದಿರುತ್ತದೆ. ಇನ್ನೂ ಬೆಳೆ ಕೈಗೆ ಬಂದಿರಲಿಲ್ಲ; ಅದೊಂದು ದಿನ ಹಿಗ್ಗಿನಿಂದ ಹತ್ತಿಯ ಹೊಲದಲ್ಲಿ ಹೊಕ್ಕರು, ಮಣ್ಣಿನ ಮುಕ್ಕಳು. ಅಲ್ಲಿ ಅವರು ಕಂಡುದೇನು? ಥಳಥಳಿಸುವ ಹತ್ತಿಯ ತೊಳೆಯನ್ನೇ? ಊಹೂಂ! ಹಾಯ್‌ದುರ್ವಿಧಿಯೇ! ನೂತನಾಡುವ ನಾಲಗೆ ಬಾಯ್ದಿರೆಯದಾಯಿತು. ಕೌತುಕದಿಂದ ನೋಡುವ ಕಣ್ಣು ನೀರಸಾಗರವಾಯಿತು. ಹಿಗ್ಗಿನಿಂದ ಹಾರುತ್ತಿದ್ದ ಎದೆ ಡವಗುಟ್ಟಲಾರಂಭಿಸಿತು. ಅವರೆಣಿಕೆ ತಲೆ ಕೆಳಗಾಗಿತ್ತು. ಎಲೆ ಹಳದೀ ಬಣ್ಣಕ್ಕೆ ತಿರುಗಿತ್ತು; ಹತ್ತಿಯ ಕಟ್ಟಿಗೆ ನಿಸ್ಸತ್ತ್ವವಾಗಿತ್ತು. ಅರ್ಧ ಇಂಚಿನ ಹುಳು ಅವರ ಆಶಾಜಾತಕವನ್ನು ನುಂಗಿ ನೀರು ಕುಡಿದಿತ್ತು. ಗೊಳೋ ಎಂದು ಹಲುಬಿದರು ಹೆಂಗಸರು. ಮುಕ್ಕಳು ಕಿಂಕರ್ತವ್ಯರಾದರು. ರೈತಾಪಿ ವರ್ಗ ದಿಙ್ಮೂಢವಾಯಿತು.

ಆದರೆ ಕಾರ್ವರನ ಫಾರ್ಮಿನಲ್ಲಿ ಹತ್ತಿಯ ಬೆಳೆ ಹಿಗ್ಗಿನಿಂದ ಮೆರೆಯುತ್ತಿತ್ತು. ಬಳಿಯಲ್ಲಿಯೆ ಬಟ್ಟಗಡಲೆ ಸೊಕ್ಕಿನಿಂದ ಬೆಳೆಯುತ್ತಿತ್ತು. ಬಹುಶಃ ಹತ್ತಿ ಮತ್ತು ಬಟ್ಟಗಡಲೆಗೆ ಪರಸ್ಪರ ಸಂಬಂಧವಿರುವುದಾಗಿ ಭಾವಿಸಿದ ಕಾರ್ವರ್. ಕೆಲದಿನಗಳಲ್ಲಿಯೇ ದೈವವಾಣಿಯಂತೆ ಕೇಳಬಂದಿತು ಕಾರ್ವರನ ಸಂದೇಶ:—ಹತ್ತಿಯ ಹೊಲದಲ್ಲಿ ಎಡೆ ಹೊಡೆದು

ವಿಷದ ತುಷಾರದಿಂದ ಪ್ರೋಕ್ಷಿಸಿ, ಕೆಲ ತಿಂಗಳನಂತರ ಬಟ್ಟಗಡಲೆಯನ್ನು ಬೆಳೆಯಿರೆಂದು. ಜನತೆಗೆ ಸಮಾಧಾನವೆನಿಸಲಿಲ್ಲ. '' ಹೆತ್ತಿಗೆ ಬದಲು ಬಟ್ಟಗಡಲೆ ಬೆಳೆಯಬೇಕೆ? ಇದು ಯಃಕಶ್ಚಿತ್ ವಸ್ತು, ಮಂಗಗಳ ಆಹಾರ" ಎಂದು ಮೂದಲಿಸಿದರು. ಆದರೆ ಹೆತ್ತಿ ಅವರನ್ನು ಹಿಂಡಿ ಹಿಪ್ಪೆಮಾಡಿತ್ತು. ಈಗಾಗಲೇ ಬಟ್ಟಗಡಲೆಯ ವಿವಿಧ ಪ್ರಯೋಜನಗಳನ್ನು ಕಾರ್ವರ್ ವಿವರಿಸಿದ್ದರಿಂದ, ರೈತರು ಬಟ್ಟಗಡಲೆಯನ್ನು ಬಿತ್ತಿದರು. ಬೆಳೆಯು ಸಮೃದ್ಧಿಯಾಗಿ ಬಂದಿತು. ಜನತೆಗೆ ಕೆಲ ಮಟ್ಟಿಗೆ ಉಸಿರಾಡಿಸುವಂತಾಯಿತು. ಇದರಿಂದಾಗಿ ಭೂಮಿಗೆ ಗೊಬ್ಬರ ದೊರೆತುದನ್ನು ಅವರೇನು ಬಲ್ಲರು ?

ಕೆಲ ದಿನಗಳಲ್ಲಿಯೇ ರೈತರು ಬಟ್ಟಗಡಲೆ ಬೆಳೆಯತೊಡಗಿದರು. ಬೆಳೆಯು ಹುಲುಸಾಗಿ ಬರುತ್ತಿತ್ತು. ಸಮೃದ್ಧಿಯಾದಾಗ ಬೆಲೆ ತಗ್ಗದೇನು ಮಾಡೀತು ? ಮೇಲಾಗಿ ಹೆತ್ತಿಯಂತೆ ಹೊನ್ನನ್ನು ಕೊಡಬಲ್ಲದೇ ಈ ಬೆಳೆ ? ಅದೆಷ್ಟೊ ಬಟ್ಟಗಡಲೆ ಪೇಟೆ ಮೊರೆಯದೆ ಕೊಳೆಯತೊಡಗಿತು. ಈ ಮೊದಲು ತಮ್ಮನ್ನು ರಕ್ಷಿಸಿದವನು ಕಾರ್ವರನೆಂದು ಕಪ್ಪು-ಬಿಳಿಯರು ಕೊಂಡಾಡುತ್ತಿದ್ದವರು, ಈಗ ಆತನನ್ನು ಶಪಿಸತೊಡಗಿದರು. ಮನುಷ್ಯಸ್ವಭಾವ ಎಷ್ಟು ವಿಚಿತ್ರ ! ವಿಧಿವಿಲಾಸವನ್ನು ಗುರುತಿಸಿದ ಕಾರ್ವರ್ ಕಸಿವಿಸಿಪಟ್ಟ. ಜನತೆಯಿಂದ ಕಾಣೆಯಾಗಿ ತನ್ನ ಪ್ರಯೋಗಶಾಲೆಯಲ್ಲಿ ಅಪಿತುಕೊಂಡು, ಬಹುಬೇಗ ನಿರ್ಣಯಕ್ಕೆ ಬಂದುದೇ ತಪ್ಪೆಂದು ಒಪ್ಪಿಕೊಂಡ. ಆದರೆ ಈ ತಪ್ಪಿಗೆ ಜನತೆ ಇತ್ತ ಬೆಲೆ ? ವಿಚಾರವಾಹಿನಿಯಲ್ಲಿ ಮುಳುಗಿದ. ೬ ದಿನ ಹಗಲಿರುಳು ತನ್ನ ಪ್ರಯೋಗ ಮುಂದಿರಿಸಲ್ಲಿ ದುಡಿದು, ಏಳನೆಯ ದಿನ ಹೊರಬಂದ. ತನ್ನ ಸಂಗಡಿಗರನ್ನು ತನ್ನ ಪ್ರಯೋಗ ಶಾಲೆಗೆ ಕರೆದುಕೊಂಡು ಹೋಗಿ, ಅಲ್ಲಿ ಹರಡಿದ ವಿವಿಧ ವಸ್ತುಗಳನ್ನು ತೋರಿಸಿದ. ಅವರು ಅಲ್ಲಿ ಕಂಡುದೇನು ? ಅನೇಕ ಬಾಟಲಿಗಳು. ' ಓಹ್ ! ಇಲ್ಲಿ ಹಾಲಿದೆ ! ಇಲ್ಲಿ ಗಿಣ್ಣ !' ಎಂದು ಆಶ್ಚರ್ಯಪಟ್ಟುಕೊಂಡರು. ಕಾರ್ವರ್ ಇವೆಲ್ಲ ಬಟ್ಟಗಡಲೆಯಿಂದ ತಯಾರಿಸಿದುವುಗಳೆಂದು ಅವರು ನಿಬ್ಬೆರಗಾದರು.

'' ಸರಿ, ಕೊನೆಗೂ ' ಆತ ' ತನ್ನ ಕೈಬಿಡಲಿಲ್ಲ "ಎಂದು ಆತನಿಗೆ ಮನಸ್ಸಿನಲ್ಲೆ ವಂದಿಸಿದ.ಬಟ್ಟಗಡಲೆಯಿಂದ ವಿವಿಧ ಖಾದ್ಯವಸ್ತುಗಳನ್ನು ತಯಾರಿಸುವ ಪಟ್ಟಿಯೊಂದಿಗೆ ಜನತೆಯ ಎದುರಿಗೆ ಬಂದ. ಈಗಾಗಲೇ ವಿದೇಶಿ ಬಟ್ಟಗಡಲೆ ಸ್ವದೇಶಿಯೊಂದಿಗೆ ಸ್ಪರ್ಧೆಗೆ ಬಂದಿತ್ತು. ಸ್ವದೇಶಿ ಕಡಲೆ ವಿದೇಶಕ್ಕಿಂತ ತುಟ್ಟಿಯಾಗಿತ್ತು. ಇದನ್ನು ತಡೆಗಟ್ಟಲು ವಿದೇಶೀ ಬಟ್ಟಗಡಲೆಗೆ ಸುಂಕ ಹಾಕುವುದು ಅಗತ್ಯವೆಂದು, ಬಟ್ಟಗಡಲೆಯ ಉತ್ಪಾದಕರು ಯೋಚಿಸಿದರು. ಆದರೆ ಈ ವಸ್ತುವಿನ ಯೋಗ್ಯಾಯೋಗ್ಯತೆಯನ್ನು ಕರಾಕರಣ ಸಮಿತಿಗೆ ಬಿಂಬಿಸುವುದು ಕಾರ್ವರನಿಗೆ ಸಾಧ್ಯವೆಂದು, ಆತನನ್ನು ತಮ್ಮ ಪರವಾಗಿ ಮಂಡಿಸಲು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯಂತೆ ಕಾರ್ವರ್, ಅದೊಂದು ದಿನ ವಾಶಿಂಗಟನ್ನಿಗೆ ಪ್ರಯಾಣ ಬೆಳೆಸಿದ. ಆ ಸಂದರ್ಭದಲ್ಲಿ ಒಂದು ವೇಗಿನ ಸಂಗತಿ ನಡೆಯಿತು:

೧೯೨೧ ರಲ್ಲೊಂದು ದಿನ ವಾಶಿಂಗಟನ್ ನಿಲ್ದಾಣದಲ್ಲಿ ಎತ್ತರವಾದ,-ಕೆಲ ಮಟ್ಟಿಗೆ ಬಾಗಿದ ಕಪ್ಪುಮನುಷ್ಯ ಕಾಣಿಸಿಕೊಂಡನು. ಆತನೊಂದಿಗೆ ಭಾರವಾದ ಕಟ್ಟಿಗೆಯ ಪೆಟ್ಟಿಗೆ ಇತ್ತು ಭಾರವನ್ನು ಇಳುಹಿದ್ದರಿಂದ ಬೆವರುಹನಿಗಳು ಮೂಡಿದ್ದುವು. ಆ ಹೊರೆಯನ್ನು ಹೊತ್ತುಕೊಳ್ಳುವವರನ್ನು ಅತ್ತಿತ್ತ ಹುಡುಕಾಡತೊಡಗಿದ. ಅನತಿದೂರದಲ್ಲಿ ಕೂಲಿಯೊಬ್ಬ ಕಾಣಬಂದ. ಆತನ ಕಣ್ಣುಗಳು ಭೂಮಿಯ ಮೇಲೆ ನೆಟ್ಟಿಂತಿರಲಿಲ್ಲ. 'ಅಯ್ಯಾ, ಈ ಹೊರೆಯನ್ನಷ್ಟು ಎತ್ತಬಹುದೆ?' ಎಂದಾಗ, ಆತ ಅವಲೋಕಿಸಿದ. ಡಗಲಿಯಂತಿರುವ ವೇಷ ಧರಿಸಿದ, ಮಣ್ಣುಮೆತ್ತಿದ ಮೊಚ್ಚೆಗಳನ್ನು ಹಾಕಿಕೊಂಡ ವ್ಯಕ್ತಿಯನ್ನಲ್ಲಿ ಕಂಡ ಆತ. ವೃತ್ತಿಗನುಸಾರವಾದ ದನಿಯಲ್ಲಿ ಹೇಳಿದ : ' ಕ್ಷಮಿಸಿರಿ, ನಾನೊಬ್ಬ ದೊಡ್ಡ ಮನುಷ್ಯನನ್ನು ಕಾಣಬೇಕಾಗಿದೆ. ಮಹಾವಿಜ್ಞಾನಿಯಾತ. ಟಸ್ಕೇಜಿಯಿಂದ ಆತ ಬರಲಿದ್ದಾನೆ. ಆತನನ್ನು ಕಾಣಲೆಂದೇ ನಾನು ಬಂದುದು ? ಎಂದು ಹೇಳಿದ. ಈ ವ್ಯಕ್ತಿಗೆ ನಗೆ ಬಂದಿತು. 'ಅಯ್ಯಾ ನಾ....ನೇ....' ಎಂದು ಹೇಳಬೇಕೆನಿಸಿತು. ಮುಂದೆ ಏನೋ ಹೇಳಬೇಕೆನ್ನುವಷ್ಟರಲ್ಲಿ ಆ ಕೆಂಪಂಗಿ ಕಣ್ಮರೆಯಾಗಿದ್ದ.ಆ ವ್ಯಕ್ತಿ, ಅನಿವಾರ್ಯವಾಗಿ ಹೊರಲಾರದ ಹೊರೆ ಹೊತ್ತು ಟ್ಯಾಕ್ಸಿಯನ್ನು ಹಿಡಿದು, ನಗರ ಸಂಚಾರಕ್ಕೆ ಹೊರಟಿತು. ಯಾರಿರಬಹುದು ಈ ವ್ಯಕ್ತಿ ?

ಇತ್ತ ಕರಾಕರಣಸಮಿತಿಯ ಎದುರು ಸಾಕ್ಷಿ ನುಡಿಯಲೆಂದು ' ಜಾರ್ಜ್ ವಾಶಿಂಗಟನ್ ಕಾರ್ವರ್ ' ಎಂದು ಕೂಗಲಾಯಿತು. ಕೆಲಹೊತ್ತು ಸ್ತಬ್ಧತೆ ಆವರಿಸಿತು. ಯಾರೂ ಮುಂದೆ ಬರುವಂತೆ ಕಾಣಲಿಲ್ಲ. ಆ ಸಮಿತಿಯ ಅಧ್ಯಕ್ಷರು ಅವನನ್ನರಸತೊಡಗಿದರು. 'ಸರಿ, ನನಗೆನಿಸುತ್ತದೆ. ಕಾರ್ವರ್ ಮಹಾರಾಯರು ಸಾಕ್ಷಿ ನುಡಿಯಲು ಬಂದಂತಿಲ್ಲ. ಮುಂದೆ....'ಎನ್ನುವಷ್ಟರಲ್ಲಿಯೇ ' ಕ್ಷಮಿಸಿರಿ ಸಾರ್ ' ಎಂಬ ಧ್ವನಿ ಕೋಣೆಯ ಹಿಂದುಗಡೆಯಿಂದ ಕೇಳಬಂದಿತು. ' ಈ ಪೆಟ್ಟಿಗೆ ತುಂಬ ಭಾರವಾಗಿದೆ. ಅದನ್ನು ನಿಮ್ಮಲ್ಲಿಗೆ ತರಬೇಕಾಗಿದೆ. ಕ್ಷಮಿಸಿರಿ.'ವಿನಯದಿಂದ ಸೂಚಿಸಿದ ಆ ಅತಿಥಿ ಜನರ ಲಕ್ಷವೆಲ್ಲ ಈ ವ್ಯಕ್ತಿಯಲ್ಲಿಯೇ ಕೇಂದ್ರಿತವಾಗಿತ್ತು. ಆಯೋಜನದ ಸದಸ್ಯರು ತೆಳ್ಳನೆಯ, ಹಸಿರು-ಕಪ್ಪು ಮಿಶ್ರಿತ ಅಲ್ಪಕಾ ಕೋಟು ಧರಿಸಿದ, ಕಂಕುಳಲ್ಲಿ ಟೊಪ್ಪಿಗೆಯನ್ನು ಹಿಡಿದ, ಬಹುಭಾರವಾದ ಪೆಟ್ಟಿಗೆಯನ್ನೆತ್ತಿ ಹಿಡಿದ ಕಪ್ಪು ಮನುಷ್ಯನನ್ನು ಕಂಡರು. ಅಧ್ಯಕ್ಷರಿಗೆ ವಿಸ್ಮಯವಾಯಿತು. ಕಣ್ಣಿಗೆ ಗಾಜುಗಳನ್ನೇರಿಸಿ ಹುಬ್ಬುಹಾರಿಸಿ, ಅಧಿಕಾರವಾಣಿಯಲ್ಲಿ ಉಗ್ಗಡಿಸಿದರು: ' ನೀನು ಯಾರು ?' ಎಂದು.

' ನಾನು ಜಾರ್ಜ್ ವಾಶಿಂಗಟನ್ ಕಾರ್ವರ್.'

' ಓಹೋ ಸರಿ. ಕರಾಕರಣೆಯ ಕುರಿತು ಮಾತನಾಡಲು ಬಂದಿರುವಿರಾ?' ವ್ಯಂಗ್ಯವಿತ್ತು. ಅಧ್ಯಕ್ಷರ ಪ್ರಶ್ನೆಯಲ್ಲಿ ಇವರ ಈ ವ್ಯಂಗ್ಯಕ್ಕೆ ಸದಸ್ಯರ ತಾತ್ಸಾರದ ನಗೆ ಬೆರೆತಿತ್ತು. ಇವರೆಲ್ಲ ಆ ಕಪ್ಪು ವ್ಯಕ್ತಿಯ ಕಂಗಳ ಕಾಂತಿಯನ್ನು ಕಾಣದಾದರು.

' ನಾನು ಬಟ್ಟಗಡಲೆಯ ಕುರಿತು ಮಾತನಾಡಲು ಬಂದಿದ್ದೇನೆ.'

' ಸರಿ. ಕಾರ್ವರ್, ಹೀಗೆ ಬನ್ನಿರಿ. ನಿಮಗೆ ಮಾತನಾಡಲು ಕೇವಲ ೧೦ ನಿಮಿಷಗಳ ಅವಕಾಶ ಕೊಡಲಾಗಿದೆ' ಹೇಗಾದರೂ ಈ ಪ್ರಶ್ನೆಯನ್ನು ಹೊರಹಾಕಬೇಕೆಂದು ಬಯಸಿದುದು ಆ ಸದಸ್ಯರೆಲ್ಲರು.

'ಆಗಬಹುದು ಸರ್ ಬಟ್ಟಗಡಲೆಯ ಬಹುವಿದ ಪ್ರಯೋಜನಗಳನ್ನು ಬಿಂಬಿಸಲೆಂದೇ ನಾನು ಬಂದಿದ್ದೇನೆ. ನಾನು ಬರುತ್ತಿರುವುದು ಟಸ್ಕೇಜಿಯಿಂದ ನಾನು ಇದುವರೆಗೆ ಕೈಕೊಂಡ ಪ್ರಯೋಗಗಳ ಆಧಾರದ ಮೇಲೆ ಎದೆ ತಟ್ಟಿ ಹೇಳಬಲ್ಲೆ. ಬಟ್ಟಗಡಲೆಯಷ್ಟು ಸತ್ತ್ವಯುಕ್ತ ಆಹಾರ ಇನ್ನೊಂದಿಲ್ಲ. ಆಹಾರದ ದೃಷ್ಟಿಯಿಂದ ಇವರಲ್ಲಿ ಅಡಕವಾಗಿರುವ ರಾಸಾಯನಿಕ ಘಟಕಗಳಿಂದ ಇದು ಅತ್ಯಮೂಲ್ಯ ವಸ್ತು!'

ಸದಸ್ಯರು ಮಾಂತ್ರಿಕ ಶಕ್ತಿಗೆ ಮಾರುಹೋದಂತೆ ಕಿವಿಯಗಲಿಸಿದರು. 'ಇದು ಸರಿ!' ಭಾರವಾದ ಪೆಟ್ಟಿಗೆಯು ಬೀಗ ತೆರೆದ, 'ಇಲ್ಲಿ ನೋಡಿರಿ. ಈ ಬಣ್ಣ ಬಾಟಲಿಗಳಲ್ಲಿ ನೀವು ನೋಡುವುದೇನು? ಯೋಚಿಸಿದ್ದೀರಾ? ಹತ್ತು ನಿಮಿಷಗಳ ಅಲ್ಪಾವಧಿಯಲ್ಲಿ ಹೆಚ್ಚಿಗೆ ಹೇಳಲಾಪೆ. ಸರ್, ಇದು ನೋಡಿರಿ, ಈ ಬಾಟಲಿಯಲ್ಲಿರುವುದು, ಗೆಣಸು ಮತ್ತು ಬಟ್ಟಗಡಲೆಯಿಂದ ನಾನು ತಯಾರಿಸಿದ ನಾಷ್ಟಾ. ಇದು ಜೀರ್ಣಿಸಲು ಸುಲಭ, ಆರೋಗ್ಯಕರವಾದುದು. ಇದರ ರುಚಿ ನೋಡುವಿರಾ?' ಸದಸ್ಯರೆಲ್ಲಾ ಬ್ಲೊಬ್ಬರಂತೆ ಎಲ್ಲರೂ ರುಚಿ ನೋಡಿ ನಾಲಗೆ ಚಪ್ಪರಿಸಿದರು.

'ಇಮ್ಮೊ, ಇಲ್ಲಿವೆ ನೋಡಿ, ಅಯಿಸ್‌ಕ್ರೀಮ್ ಹುಡಿ. ಬಟ್ಟಗಡಲೆಯಿಂದ ತಯಾರಿಸಿದುದು. ಈ ಹುಡಿಯನ್ನು ನೀರಿನಲ್ಲಿ ಹಾಕಿ ಕೈಯಾಡಿಸಿದರೆ ಸಾಕು! ಅಯಿಸ್‌ಕ್ರೀಮ್!' ಮತ್ತೆ ಅನೇಕ ಬಾಟಲಿಗಳು ಆ ಅಲ್ಪ ಮೇಜಿನ ಮೇಲೆ ತುಂಬಿಕೊಂಡುವು.

'ಇದೋ ನೋಡಿರಿ, ಬಟ್ಟಗಡಲೆಯಿಂದ ಅನುಗೊಳಿಸಿದ ಬಣ್ಣಗಳು. ಬಟ್ಟಗಡಲೆಯೊಂದರಲ್ಲಿಯೇ ೩೦ ಬಣ್ಣಗಳನ್ನು ಗುರುತಿಸಿದ್ದೇನೆ. ಇಲ್ಲಿವೆ ನೋಡಿರಿ; ಕ್ಹೈನೀನ್ ಬಂಧು-ಇದು ಬಟ್ಟಗಡಲೆಯ ವರದಾನ. ಇದೋ, ಇಲ್ಲಿ ನೋಡಿರಿ, ಪ್ರಾಣಿವರ್ಗಕ್ಕೆಂದು ತಯಾರಿಸಲಾದ ಆಹಾರ. ಇವೆಲ್ಲವೂ ಮಾತ್ರ ಆ ಬಟ್ಟಗಡಲೆ?' ಒಂದೊಂದಾಗಿ ಪೆಟ್ಟಿಗೆ ಬರಿದಾಗಿ ಟೇಬಲ್ಲು ತುಂಬಿತು.

'ಕ್ಷಮಿಸಬೇಕು ಸರ್, ನನ್ನ ವೇಳೆ ಮುಗಿಯುತ್ತ ಬಂದಿದೆ!' ಎಂತಹ ಸೌಜನ್ಯ ಕಾರ್ವರನ ಮಾತಿನಲ್ಲಿ! ಬಟ್ಟಗಡಲೆಯೊಂದರಿಂದಲೇ ನಿರ್ಮಿತವಾದ ವಿವಿಧ ವಸ್ತುಗಳನ್ನು ಕಣ್ಣಾರೆ ಕಂಡು ಎಲ್ಲರೂ ದಿಗ್ಭ್ರಾಂತರಾದರು. ಅಧ್ಯಕ್ಷರು ಅಪ್ಪಣೆ ಕೊಟ್ಟರು: 'ಕಾರ್ವರ್ ಮಹಾಶಯ, ನೀವು ನಮ್ಮನ್ನು ಕ್ಷಮಿಸಬೇಕು. ನಿಮಗೆ ಕೊಡಲಾಗುವ ವೇಳೆ ಅಮಿತವಿದೆ. ಬಟ್ಟಗಡಲೆಯ ರಹಸ್ಯವನ್ನೇ ನಮ್ಮೆದುರಿಗೆ ಇಡಿರಿ!'

ಕಾರ್ವರ್ ತನಗೆ ಗೊತ್ತಿದ್ದ ವಿವರಗಳನ್ನು ಆ ಮಂಡಲಕ್ಕೆ ಒಪ್ಪಿಸಿದ. ಕೇವಲ ಬಟ್ಟಗಡಲೆಯೊಂದರಿಂದಲೆ ೧೦೭ ವಸ್ತುಗಳನ್ನು ತಯಾರಿಸಿರುವುದಾಗಿ ಶ್ರುತಪಡಿಸಿದ. ಸಮಿತಿಯ ಸದಸ್ಯರು, ಅಮೂಲ್ಯ ವರದಿಯನ್ನು ಒಪ್ಪಿಸಿದ್ದಕ್ಕಾಗಿ ಕಾರ್ವರನಿಗೆ ಧನ್ಯವಾದಗಳನ್ನರ್ಪಿಸಿದರು. ಇನ್ನೊಂದು ಬಾರಿ ಬಂದಾಗ ಇನ್ನಿಷ್ಟು ಸ್ಯಾಂಪಲ್ ತರಲು ಮರೆಯಬೇಡಿರೆಂಬ ನಗೆಮಾತಿನಲ್ಲಿ ಪರಸ್ಪರರು ಬೀಳ್ಕೊಂಡರು. ಈ ಸಂದರ್ಶನದ ಫಲವಾಗಿ ವಿದೇಶೀ ಬಟ್ಟಗಡಲೆಯ ಮೇಲೆ ಸುಂಕ ಹೇರಲಾಯಿತು. ಸ್ವದೇಶದ ಬಟ್ಟಗಡಲೆಯ ಉತ್ಪಾದಕರು ಕಾರ್ವರನಿಗೆ ಅನಂತಋಣಿಗಳಾದರು.

ತನ್ನ ಸಂಸ್ಥೆಗಾಗಿ ಕಾರ್ವರ್ ಸಂಗೀತಸೇವೆಯನ್ನರ್ಪಿಸಿ, ಧನಸಂಗ್ರಹವನ್ನು ಮಾಡಿದ. ರೈತಾಪಿ ವರ್ಗಕ್ಕೆ ಉಪಯೋಗವಾಗಲೆಂದು, ಸಂಚಾರೀ ಪ್ರಯೋಗಶಾಲೆಯನ್ನು ಪ್ರಾರಂಭಿಸಿದ. ಈ ಸಂಚಾರೀ ಪ್ರಯೋಗಶಾಲೆಯಲ್ಲಿ, ವಿವಿಧ ಬೆಳೆಗಳು ಬೆಳೆಯುವ ಕ್ರಮ, ರೋಗ ನಿವಾರಣೆ ಇವುಗಳ ಕುರಿತು ಬೌದ್ಧಿಕಪಾಠಗಳನ್ನು ಕೊಡಲಾಗುತ್ತಿತ್ತು. ಹಾಗೆಯೇ ಆ ಶಾಲೆಗೆ ಸೇರಿದವರಾಗಿದ್ದರು-ಆರೋಗ್ಯ ಸಂವರ್ಧನೆ, ಶಿಶುಪಾಲನೆಯನ್ನರಿತು ಬೋಧಿಸಲೆಂದು ದಾದಿಗಳು.

ಕಾರ್ವರನ ವಿವಿಧಸೇವೆಯನ್ನು ಕೊಂಡಾಡಿ, ೧೯೧೬ ರಲ್ಲಿ ಬ್ರಿಟನ್ನಿನ ರಾಯಲ್ ಸೊಸಾಯಟಿಯು ಈತನಿಗೆ ಸದಸ್ಯತ್ವವನ್ನು ದಯಪಾಲಿಸಿ ಗೌರವಿಸಿತು. ಈ ಗೌರವಕ್ಕೆ ತಾನು ಅನರ್ಹನೆಂದು ನೂರೋಲೆ ಬರೆದ, ಮಹಾಮಹಿಮ ಕಾರ್ವರ್. ಎಂತಹ ವಿನಯ! ೧೯೨೩ ರಲ್ಲಿ ಈತನ ಅವ್ಯವಸ್ಥಿತವಾದ ಕೋಟನ್ನು 'ಸ್ಪಿಂಗಾರ್ನ್' ಪದಕ ಶೋಭಿಸಿತು. ಈಗ ಕಾರ್ವರ್ ಟಸ್ಕೇಜಿಯಲ್ಲಿ ರಾಕ್‌ಫೆಲರ್ ಕಟ್ಟಿಸಿದ ೨ ಕೋಣೆಯ ವಸತಿಗೃಹದಲ್ಲಿ ವಾಸಿಸುತ್ತಿದ್ದ. ಇದೇ ಆತನ ಅರಮನೆ. ಹಾಗೆ ನೋಡಿದರೆ, ಅದು ಒಂದು ಮಾದರಿಯ ವಸ್ತು ಸಂಗ್ರಹಾಲಯ, ವಾಚನಾಲಯ ಅಥವಾ ಆರ್ಟ್ ಗ್ಯಾಲರಿ ಎಂಬಂತೆ ತೋರುತ್ತಿತ್ತು. ನೆಲದಿಂದ ಛತ್ತಿನ ವರೆಗೆ ಮುಟ್ಟಿದ ಕಪಾಟುಗಳು, ಸಸ್ಯ – ರಾಸಾಯನಿಕ – ಭೌತ – ಖನಿಜೋಲ - ಭೂಗರ್ಭ– ಶಾಸ್ತ್ರಗಳ ಉದ್ಗ್ರಂಥಗಳು, ಇಂಗ್ಲಿಷ್, ಫ್ರೆಂಚ್, ಜರ್ಮನ್ ಭಾಷೆಗಳಲ್ಲಿರುವ ಆಗಾಗಿನ ಅಧಿವೇಶನಗಳ ವರದಿವಾಚನಗಳು—ಇತ್ಯಾದಿಗಳಿಂದ ತುಂಬಿಹೋಗಿದ್ದುವು. ಉಳಿದ ವಿಜ್ಞಾನಿಗಳ ಕುರಿತು ಜಾರ್ಜ್ ಅಪಜಾರದ ಮಾತನ್ನು ಆಡಿದ್ದಿಲ್ಲ. ಜೀವನಕ್ಕೆ ಪರಿಪೂರ್ಣಯೋಜನೆ ಅವಶ್ಯವೆಂದು ಅವನು ತನ್ನ ಶಿಷ್ಯರಿಗೆ ಬೋಧಿಸುತ್ತಿದ್ದ. ಸಾಯುವ ವರೆಗೂ ತಾನೊಬ್ಬ ವಿದ್ಯಾರ್ಥಿಯೆಂದೂ, ಸತ್ಯಾನ್ವೇಷಿಯೆಂದೂ ಭಾವಿಸಿದ್ದ. ಇಂದು ಇಂಥವರನ್ನು ನಾವು ಕಾಣಬಹುದೆ? ಅಲ್ಲಲ್ಲಿ ಶಿಲೆ, ಪ್ರಾಣಿಗಳ ಅವಶೇಷಗಳು, ವನಸ್ಪತಿಗಳು ಹರಡಿಕೊಂಡಿದ್ದುವು. ಅವನ ಮನೆಯನ್ನು ಪ್ರವೇಶಿಸಿದೊಡನೆ, ಮೊದಲಿಗೆ ಕಾಣುವುದು ಅವನ ತಾಯಿಯ ಕೈರಾಟೆ- ಇದರ ಮೇಲೆ ಧೂಳುಕೂಡದಂತೆ ಎಚ್ಚರವಹಿಸುತ್ತಿದ್ದನು; ಅವನ ಹಾಸಿಗೆಯ ಪಕ್ಕದಲ್ಲಿ ಪವಿತ್ರ ಗ್ರಂಥ ರಾರಾಜಿಸುತ್ತಿತ್ತು. ಬಿಡುವಿನ ವೇಳೆಯಲ್ಲಿ ಹೆಣಿಕೆ ಹಾಕುತ್ತಿದ್ದ. ಹೂಗಳ ಮೇಲೆ ಎಲ್ಲಿಲ್ಲದ ಮಮತೆ. ಆತನ ಕೋಟಿಗೆ ಯಾವಾಗಲೂ ಒಂದು ಹೂ ಇರಲೇಬೇಕು. ಅತನ ಉಡುಪು ಆತನ ಹಿತಚಿಂತಕರಿಗೆ ಹಿಡಿಸುತ್ತಿರಲಿಲ್ಲ. ತನ್ನನ್ನು ಒಕ್ಕಲಿಗನೆಂದು ಜನತೆ ಭಾವಿಸಿದರೆ ಸಾಕೆಂದು, ತನ್ನ ವೇಷ-ಭೂಷೆಯ ಬಗ್ಗೆ ಆತನ ವ್ಯಾಖ್ಯಾನ. ಸತ್ಕಾರಸಮಾರಂಭಗಳಲ್ಲಿ ಅನಾಸಕ್ತಿ. ೧೯೨೪ ರಲ್ಲಿ, ಈತನು ಕಲಿತು ಮುಂದೆ ಬಂದ ಸಿಂಪ್ಸನ್ ಕಾಲೇಜು D. Sc. ಪದವಿಯನ್ನು ದಯಪಾಲಿಸಿತು.

ಅದೇಷ್ಟೋ ಜನ ಅನೇಕ ಸೌಲಭ್ಯಗಳನ್ನು ವಿವರಿಸಿ, ಹೆಚ್ಚಿನ ವೇತನದ ಆಮಿಷ ತೋರಿಸಿದರು; ಆದರೆ ಕಾರ್ವರ್ ಟಸ್ಕೇಜಿಗೆ

ದ್ರೋಹ ಬಗೆಯಲಿಲ್ಲ. ಅವನಿಗೆ ಕೊಡಮಾಡಿದ ವೇತನ ೬ ಅಂಕೆ ಗಳನ್ನು ದಾಟಿತ್ತು. ಜೀವನಾಂಶಕ್ಕೆ ಸಾಕಾಗುವಷ್ಟು ಹಣವಿದ್ದರೆ ಸಾಕು, ಅಷ್ಟರಲ್ಲಿಯೇ ತೃಪ್ತಿ ಅತನಿಗೆ. ಕಾಂಚನ, ಕಾಮಿನಿ ಇವು ಈತನ ಬೆಂಬತ್ತಿದಂತೆ, ಈತ ಅದರಿಂದ ಅಲಿಪ್ತನಾಗುತ್ತ ನಡೆದ. ಟಸ್ಕೇಜಿ ಸಂಸ್ಥೆಯಲ್ಲಿಯೇ ಹೆಚ್ಚಿನ ವೇತನ ಕೊಡಮಾಡಿದಾಗಲೂ, ಸೌಜನ್ಯ ದಿಂದ ಅದನ್ನು ನಿರಾಕರಿಸಿದ. ಇಂತಹ ನಿಃಸ್ವಾರ್ಥಿಗಳು ಇಂದು ಎಷ್ಟಿರ ಬಹುದು ? ಟಸ್ಕೇಜಿ ಸಂಸ್ಥೆಯನ್ನು ಸೇರಿದಂದಿನಿಂದ ದೊರೆಯುತ್ತಿದ್ದ ವೇತನವನ್ನೇ ಇಂದೂ ಪಡೆಯುತ್ತಿದ್ದ. ಈತನ ಪ್ರಯೋಗಗಳ ಪ್ರಯೋಜನ ಪಡೆದ ಅದೆಷ್ಟೋ ಶ್ರೀಮಂತರು, ಶ್ರಮಾಂಶವೆಂದು ಚೆಕ್ಕು ಕಳಿಸುತ್ತಿದ್ದರು. ಅದನ್ನು ಈತ ನಿರಾಕರಿಸುತ್ತಿದ್ದ. ಅದನ್ನೇ ಅವರು ಸಂಸ್ಥೆಗೆ ಕೊಡಮಾಡಿದರೆ ಸಂತೋಷದಿಂದ ಸ್ವೀಕರಿಸುತ್ತಿದ್ದ. ತಾನು ಮಾಡುತ್ತಿರುವುದು ದೇವರ ಸೇವೆಯೆಂದೇ ಅತನ ದೃಢಮತ. ಹಣಕ್ಕೆ ಗುಣಕಟ್ಟುವವರು ಅಲ್ಪ ಮತಿಗಳೇ ! ಆದರೆ ಇಂದು ಹಣ ಕ್ಕಾಗಿ ಬಾಯಿ ಬಿಡದವರೇ ಇಲ್ಲವೆನ್ನಬಹುದು.

ಯುದ್ಧಕಾಲದಲ್ಲಿ ಜರ್ಮನಿಯಿಂದ ಬಣ್ಣಗಳು ದೊರೆಯುವುದು ದುರ್ಲಭವಾಯಿತು. ಆಗ ಕಾರ್ವರ್ ಅನೇಕ ಮೂಲಿಕೆ, ಎಲೆ, ಮುಗುಳುಗಳಿಂದ ೫೦೦ ಬಣ್ಣಗಳನ್ನು ನಿರ್ಮಿಸಿದ. ಆಕಸ್ಮಿಕವಾಗಿ, ಕುಬೇರನ ಉಪಪುತ್ರಸಂತಿರುವ ಹೆನ್ರಿ ಫೋರ್ಡನ ದರ್ಶನವಾಗಿ ಅದು ಮಿತ್ರತ್ವದಲ್ಲಿ ಪರಿಣಮಿಸಿತು. ಫೋರ್ಡನ ಫಾರ್ಮಿನಲ್ಲಿ ಬೆಳೆ ಯುತ್ತಿದ್ದ ಸೋಯಾಬೀನಿನಿಂದ ಪ್ಲಾಸ್ಟಿಕ್ ತಯಾರಿಸಿದ, ಇದನ್ನೇ ಫೋರ್ಡ್ ಪೇಟೆಂಟ್ ಪಡೆದು, ತನ್ನ ಮೋಟಾರಿಗೆ ಉಪಯೋಗಿಸಿದ. ಇವರ ಮಿತ್ರತ್ವದ ಗುರುತಾಗಿ, ನಿಗ್ರೋಗಳಿಗೆಂದು ಫೋರ್ಡ್‌ಪ್ರಭು, ಜಾರ್ಜಿಯಾದಲ್ಲಿ ಶಾಲೆ ಕಟ್ಟಿಸಿದ. ಅದಕ್ಕೆ ಕಾರ್ವರನ ಶುಭನಾಮ-ಕರಣ ಮಾಡಿದ. ತನ್ನ ಮಿತ್ರನಿಗೆ ಅರಮನೆ ಕಟ್ಟಲು ಬಯಸಿದ ಫೋರ್ಡ್; ಆದರೆ ಕಾರ್ವರ್ ಇದಕ್ಕೆ ಒಪ್ಪಲಿಲ್ಲ. ಸಾಮಾನ್ಯ ಕುಟೀರ ಸಾಕೆಂದು ಪ್ರಾರ್ಥಿಸಿದ. ಅಮೇರಿಕೆಯ ವಿವಿಧ ಪ್ರದೇಶಗಳಲ್ಲಿ ದೊರೆ ಯುವ ಅತ್ಯುತ್ತಮ ಕಟ್ಟಿಗೆಯಿಂದ ' ಕಾರ್ವರ್ ಹೌಸ್ ' ನಿರ್ಮಿತ ವಾಯಿತು.

ಕಾರ್ವರನಿಗೆ ವಯಸ್ಸು ಏರುತ್ತಿದ್ದಂತೆ, ಉತ್ಸಾಹ ಅದರೊಂದಿಗೆ ಪೈಪೋಟಿ ನಡೆಸಿತ್ತು. ತಾರುಣ್ಯದ ಕೆಚ್ಚು ಈಗಲೂ ಫಳಫಳಿಸುತ್ತಿತ್ತು. ಅವನ ಹಿತೈಷಿಗಳು ವಿಶ್ರಾಂತಿಯ ಸಲಹೆ ನೀಡಿದರು. ಆದರೆ ಸದಾ ಕ್ರಿಯಾಶೀಲನಾದ ಕಾರ್ವರ್ ಅವರೀ ಸಲಹೆಯನ್ನು ನಿರಾಕರಿಸಿದ.

ಪ್ರಸಿದ್ಧಿಪ್ರಿಯಲ್ಲ ಡಾಕ್ಟರ ಕಾರ್ವರ್. ಜನಸಂಪರ್ಕವನ್ನು ತೀರ ಆಕುಂಚನಗೊಳಿಸಿದ್ದ. ಅದೆಷ್ಟೋ ಜನ ಈತನನ್ನು ಕಾಣಲೆಂದೇ ಬರುತ್ತಿದ್ದರು. ತಾನಾಯಿತು, ತನ್ನ ಸಹೋದ್ಯೋಗಿಗಳಾಯಿತು; ತನ್ನ ಅಂತರಾತ್ಮನ ಸಲಹೆಯಂತೆ ಪ್ರಯೋಗಗಳನ್ನು ಕೈಕೊಳ್ಳುವನು– ಇದಿಷ್ಟೇ ಅತನ ಸೀಮಿತವಿಶ್ವ. ಮನಸ್ಸಿನಲ್ಲಿ ಟಸ್ಕೇಜಿಯ ಮಣ್ಣಿನ ಮಕ್ಕಳ, ನಿಗ್ರೋಗಳ ಉತ್ಕರ್ಷದ ಸಂಪೂರ್ಣಚಿತ್ರ. ವಿಶ್ರಾಂತಿ ದೊರೆ ತಾಗಲೆಲ್ಲ– ದೊರೆಯುವುದೇ ಕಡಮೆ– ಚೇಷ್ಟೆಮಾಡಿ ಮನತುಂಬ ನಕ್ಕು ನಲಿಯುತ್ತಿದ್ದ.

೧೯೪೦ ರಲ್ಲಿ ಸ್ಥಾಪತ್ಯ ಕೋವಿದರು, ಇಂಜನಿಯರರು, ಕೆಮಿಸ್ಟರು, ಯಂತ್ರವಿಶಾರದರು ಮೊದಲಾದವರ ಆಂತರರಾಷ್ಟ್ರೀಯ ಸಂಸ್ಥೆಯು, ಆ ವರ್ಷದ ಸನ್ಮಾನ್ಯವ್ಯಕ್ತಿಯೆಂದು ಕಾರ್ವರ್‌ನನ್ನು ಗೌರ ವಿಸಿತು. ಅತನ ಜೀವನಚಿತ್ರವನ್ನು ಚಿತ್ರಸಾಲೆಯ ಪ್ರಸಿದ್ಧ ನಿರ್ಮಾತೃ ಗಳು ಟಸ್ಕೇಜಿಗೆ ಬಂದಿಳಿದರು. ಆ ಚಿತ್ರೀಕರಣದಿಂದ ಬಂದ ಹಣ ಸಂಸ್ಥೆಗೆ ಸಂದಿತು.

ಅದೊಂದು ದಿನ ಡಿಸೆಂಬರ್ ತಿಂಗಳ ಚಳಿಯಲ್ಲಿ, ಎಂದಿನಂತೆ ಮುಂಜಾನೆ ಎದ್ದು ಕಾರ್ವರ್ ಹೊರಗೆ ಹೋಗುತ್ತಿದ್ದಂತೆ, ಹಿಮದ ಮೇಲೆ ಜಾರಿಬಿದ್ದ. ಈತನ ಆರ್ತಧ್ವನಿಯನ್ನು ಕೇಳಿದ ಕೋಣೆ ಯವರು ಹೊರಬಂದು, ಎತ್ತಿಕೊಂಡು ಕೋಣೆಗೆ ಒಯ್ಯಲು ಬಯಸಿ ದರು. ಕಾರ್ವರ್ ಇದಕ್ಕೆ ನಿರಾಕರಿಸಿದ. ಪ್ರಯೋಗಶಾಲೆಗೆ ಹೋಗಲೇ ಬೇಕೆಂದು ಹಟ ಹಿಡಿದ. ಹುಡುಗರಿಬ್ಬರ ಹೆಗಲ ಮೇಲೆ ಭಾರಹಾಕಿ ಪ್ರಯೋಗಕಾಲೆಗೆ ಬಂದ. ' ಸರಿ, ನೀವಿನ್ನು ಹೊರಡಿರಿ' ಎಂದು ಅಪ್ಪಣೆ ಕೊಟ್ಟ ಹುಡುಗರಿಗೆ. ಅಲ್ಲಿ ಕೆಲವು ಪಾತ್ರಗಳಿಗೆ ಒಕ್ಕಣಿಕೆ ಹೇಳಿದ; ಕೆಲವು ವಿಷಯಗಳನ್ನು ಪರಿಶೋಧಿಸಿದ. ಮಧ್ಯಾಹ್ನ ತನ್ನ ಕೋಣೆಗೆ ಮರಳಿದವ ತಿರುಗಿ ಬರಲಿಲ್ಲ. ಕಾರ್ವರ್ ಕರ್ಮಭೂಮಿಯಿಂದ ರುದ್ರ ಭೂಮಿಗೆ ತೆರಳಿದ. ಆ ಕಪ್ಪುದಿನ ೫ನೆಯ ಜಾನೇವರಿ ೧೯೪೩. ಡಾಕ್ಟರ್ ಜಾರ್ಜ್ ವಾಶಿಂಗ್‌ಟನ್ ಕಾರ್ವರ್ ಸತ್ತನಲ್ಲವೆ? ಅಹುದು. ಸತ್ತುದು ಅತನ ಅಸ್ಥಿಪಂಜರ. ಆತ್ಮ ಅವಿನಾಶಿ; ಸಂಶೋಧನೆ ಅವಿ ನಾಶಿ; ಸತ್ಯ ಅವಿನಾಶಿ. ಸತ್ಯಕ್ಕೆ ಸಾವುಂಟೆ ? ದೂರದೂರದಿಂದ ಈ ಅಪ್ಪಟ ಕಪ್ಪು ಮನುಷ್ಯನ ಕಳೇವರವ ಕೊನೆಯ ದರ್ಶನಕ್ಕೆಂದು ಟ್ರಕ್ಕುಗಳಿಂದ, ಮುರುಕು ವಾಹನಗಳಿಂದ, ಕಾಲ್ನಡಿಗೆಯಿಂದ, ಹುಡು ಗರು-ಮುದುಕರು-ಹೆಣ್ಣು ಗಂಡು-ಗುಂಪಾಗಿ ಬಂದರು. ಮೂಕ ಸಂತಾ ಪಕ್ಕೆ ಕಣ್ಣೀರಿನ ಪ್ರೋಕ್ಷಣೆ ಒದಗಿಸಿದರು. ಮರ್ತ್ಯರು ಇದಕ್ಕಿಂತ ಹೆಚ್ಚಿಗೆ ಏನು ಮಾಡಬಲ್ಲರು ? ಈ ಮೊದಲಿಲ್ಲದ ಸತ್ಕಾರ ಆ ಶವಕ್ಕೆ ದೊರೆಯಿತು. ಸೈನಿಕ ವಂದನೆಯೂ ಆ ನಿಗ್ರೋಶವಕ್ಕೆ ದೊರೆಯಿತು. ದೇಶಕ್ಕೆ ದೇಶವೇ ಕಣ್ಣೀರು ಕರೆಯಿತು. ಇನ್ನಿಲ್ಲ ಕಾರ್ವರ್. ಆದರೆ ಅದೋ ಅಲ್ಲಿ ಬರುತ್ತಿದೆ ನೋಡಿರಿ, ಲಿಬರ್ಟ ಹಡಗು....ಅಮೇರಿಕೆಯ ಸರಕಾರದ ಹಡಗು ! ಅದೋ, ಅದಕ್ಕೆ ಇಡಲಾಗಿದೆ ಮಹಾಮಹಿಮ ಕಾರ್ವರನ ಶುಭನಾಮ ! ಈ ಹಡಗು ಸಂಚರಿಸಿದಲ್ಲೆಲ್ಲ ಅತನ ದಿವ್ಯ ಸಂದೇಶ ಬೀರುತ್ತ ನಡೆಯಲಿದೆ. ಚಿರಾಯುವಾಗಿರಲಿ ಕಾರ್ವರ್ !

ಅಯ್ಯೋ, ನಿನ ಕಥೀ ಸುಡ್ಲೀ !

(ವಿನೋದ ದೃಶ್ಯ)

ಶ್ರೀ. ಬಿ. ಬಿ. ಹಿಂಗಮಿರೆ, ಬಿ. ಎ. ನ್ಯೂ ಹೈಸ್ಕೂಲ್, ಅಥಣಿ

[ಪಾತ್ರಗಳು :— ೧. ಗಂಡ ೨. ಹೆಂಡ್ತಿ ೩. ಮಗಳು]

ಹೆಂಡ್ತಿ:— ಹುಡಿಗ್ಗೆ ಹಾಲು ಕುಡಿಸಬ್ಯಾಡ್ರೀ ಅಂದ್ರೆ, ನೀನೆಲ್ಲಿ ಕೇಳ್ತೀರಿ. ತುಡುಗಿಲೆ ಹಾಲು ಕುಡಿಸೇ ಕುಡಿಸಿದ್ರಿ. ಅಯ್ತಿಲ್ಲೋ ಬೆಳದು ನಿಂಕಾಳ ನೋಡ್ರಿ ದೆವ್ವಿನ್ಹಾಂಗ! ಇನ್ನ ಇದಕ್ಕೇನ ಮಾಡ್ತೀರಿ ಮಾಡ್ರಿ ! ಹೇಳ್ಲಿಲ್ಲಾ ಕೇಳ್ಲಿಲ್ಲಾ ಅಂದೀರಿ ಮತ್ತ. ಈ ವರ್ಷದಾಗ, ಎಂಥಾವ್ನ ಕೊಳ್ಳಾಗಾದ್ರೂ ಕಟ್ಟಿಬಿಟ್ಟರ ಗುಣಾ !

ಗಂಡ:— ಏನ ಹಡ್ಚಿಯೇ ವಟಾವಟಾಂತ ? ದೆವ್ವಿನ್ಹಾಂಗ ಬೆಳದರ ಏನಾತು ? ವಯಸ್ಸು ನೋಡಬೇಕಲ್ಲಾ— ? ಅವರ ಕೂಡಾ ಅವಳಭ್ಯಾನಾನೂ ನೋಡಬೇಕು ಆ ಮ್ಯಾಗ ದೆವ್ವಾ—ಗಿವ್ವಾಂತ ಆನಬೇಕು.

ಹೆಂಡ್ತಿ:— ಅಂದ್ರ.... ನಮ್ಮ ಚಂದ್ರಿ ಇನ್ನೂ ಸಣ್ಣಾಕೇ ಅಂತೀರ್ಯಾ ? ಮುದ್ವಿ ಆಗಿದ್ದರ, ಇಷ್ಟೊತ್ತಿಗೆ ಮೂರ್ನಾಕು ಮಕ್ಕಳಾಗ ಕಿದ್ದೂ. ಮತ್ತ ಇನ್ನೂ....

ಗಂಡ:— ಯಾರರೇ ಕೇಳ್ಯಾರು ನಿನ್ನ ಮಾತು; ಸಾಕು ಬಾಯಿ ಮುಚ್ಚಿನ್ನ ! ಅವಳ ಚಿಂತೀ ನನಗ ಬಿಟ್ಟ ಬಿಡು. ನಾ ನೋಡಿಕೋತೇನಿ.

ಹೆಂಡ್ತಿ:— ಏನ ಬಿಟ್ಟ ಬಿಡಂತೀರಿ ? ಹೀಂಗ ಹ್ಯಾಂಗಾರೆ ಮಾತಾಡ್ತಿರೀ ಅಂತೀನಿ. ನಿನಗ ಇನ್ನೂ ಯಾತರದೂ ಬಿಸೀ ಹತ್ತಿಲ್ಲಂತ, ಇಷ್ಟ ಜಗಿದಾಡ್ಲಾಕ ಹತ್ತೀರಿ. ನೆರಿಮನಿ ಹುಡಿಗೀ ಸುದ್ದೀ—ಕಿವೀಲೆ ಕೇಳೀರಿ.... ಕಣ್ಣೀಲೆ ನೋಡೀರಿ; ಅದ್ರೂ ಕೈಕಟ್ಟಿ ಕೊಂಡು ಕುಂತೀರಲ್ರೀ.... ? ನೆರಿಮನೀ ತಾರಿ ಬಾವೀ ಬಿದ್ದಾಗಿಂದs ನಸ್ನ ಎದೀ ಡವ ಡಣಾ ಅನ್ತಿರಕೈತಿ. ಮತ್ತ....

ಗಂಡ:— ನನಗ ಎಲ್ಲಾs ಗೊತ್ತೈತಿ ಸುಮ್ನಾಗs! ನಾನೂ ಅದs ಚಿಂತೀ ಮಾಡ್ತಿದ್ದೀನಿ. ನಿನ್ನೆ ಒಬ್ರು ಹೇಳ್ಯಾರು:— ಇಲ್ಲೇ ಶಾರದಾಗ, ಒಂದ ವರಾ ಐತ್ಯಂತ. ಉಪ್ಪನ್ನಾನೂ ಸಾಕಷ್ಟು ಐತ್ಯಂತ. ಮನ್ಯಾಗ ಒಂದs ಮುದ್ದಿ....ಮತ್ತ ಒಂದs ಮಗಾಂತ !

ಹೆಂಡ್ತಿ:— ಅಯ್ಯ. ಮತ್ತ ಕೊಟ್ಟುಬಿಡರಲ್ರಿ. ಏನ ಕೆಲ್ಸಾ ಮಾಡ್ತಾರಂತ ಅವರು ? ಒಕ್ಕಲ್ತನಾನೋ, ನೋಕರೀ ಧಂದೇನೊ..?

ಗಂಡ:— ಅವ್ಯಾವೊ ಅಲ್ಲ ! ವ್ಯಾಪಾರಂತ. ಕಿರಾಣೀ ಅಂಗಡಿ ಐತ್ಯಂತ; ಅದಲ್ಲದs ಸರಾಫೀ ಅಂಗಡಿನೂ ಐತ್ಯಂತ ಒಂದು.

ಹೆಂಡ್ತಿ:— ಅಯ್ಯ, ಖರೇ ಹೇಳ್ತಿರೇನ್ರಿದು .... ? ಸರಾಫೀ ಅಂದ್ರ, ಬೆಳ್ಳೀ ಬಂಗಾರ ಮಾರೂದs ಹೌಂದಲ್ರೀ .... ?

ಗಂಡ:— ಹೌದs ಹೌದು. ಆದರ ....

ಹೆಂಡ್ತಿ:— ಇನ್ನ ಆದರ—ಪಾದರ ಅನಬ್ಯಾಡ್ರಿ! ಅಲ್ರೀ, ಇಂಥಾ ಮನೀ ಐತಿ ಅಂದಮ್ಯಾಗ, ಮತ್ಯಾನ ಕೇಳೋದು ? .... ಕಣ್ಮುಚ್ಚಿ ಸುಮ್ಮನs ಕೂಟ್ಟಬಿಡ್ರಿ. ಜೋಡಿ. ನಾ ಮುದ್ವೀ ಮಾಡ್ಕೊಳ್ಳೂ ಕಾಲಕ್ಕ ಇಂಥಾದು ಒಂದು ಮನೀನೂ ಗಂಟುಬಿಳಲಿಲ್ಲ ನಂಗ.

ಗಂಡ:— ಏನ ಬೊಗಳಾಕಹತ್ತೀಯೇ ? .... ನಿನ್ನ ಏನಾದ್ರೂ ಅಕ್ಲಾ—ಬುದ್ದಿ ಐತ್ಯೋ ಇಲ್ಲೋ....? ಏನೆಲ್ಲಾ ಮಾರಿಬಿಟ್ಟೀಯೋ..?

ಹೆಂಡ್ತಿ:— ಬೇಕಾದಾಂಗ ತಿಳಕೊಳ್ರಿ. ಇದ್ದರs ಐತ್ಯಂತ ತಿಳೀರಿ; ಇಲ್ದಿದ್ರ ಮಾರೀನಿ ಅಂತ ತಿಳಕೊಳ್ರಿ. ಮತ್ತ ಅವಗ ಮನೀ—ಹೊಲಾ ಯಾನಾರೂ ಐತ್ಯಂತ ಏನ್ರೀ .... ?

ಗಂಡ:— ಮನೀ ಸಾಕಷ್ಟು ಅದಾವಂತ. ಹೊಲಾ ಮಾರಿ, ಹಣಾ ಎಲ್ಲಾ ಬ್ಯಾಂಕಿನ್ಯಾಗ ಇಟ್ಟಾರಂತ !

ಹೆಂಡ್ತಿ:— ಅಯ್ತು ಬಿಡ್ರೀ. ಮುಸ್ತ ಸುಟ್ಟರೂ ಸುಡಬಾರ್ದಷ್ಟು ಇದ್ದಾಂಗ ಆಯ್ತು; ಅಂದಮ್ಯಾಗ ಹೊಲಾ ತಗೊಂಡಾರೇ ಏನ ಮಾಡೂದು .... ?

ಗಂಡ:— ಅದೆಲ್ಲಾ ಸಾಕಷ್ಟು ಐತೇ; ಆದರ. ಆ ಹುಡ್ಗನ ವಯಸ್ಸು ಐನತ್ತರ ಸನೆ—ಸನೇಕ ಐತ್ಯಂತ, ಇದಕ ಹ್ಯಾಂಗಂತೀ....?

ಹೆಂಡ್ತಿ:— ಅಂದರ ಯಾಡ್ಡಿಪ್ಪತ್ತರ ಹತ್ತೂ .... ?

ಗಂಡ:— ಹ್ಞೂಂನೇ ....

ಹೆಂಡ್ತಿ:— ಮತ್ತ ಇರವೊಲ್ಲದು— ಮಾಡೂದೇನು ? ಚಂದ್ರೀ ನಶೀಬದಾಗ ಇದ್ದಂಗ ಆಗ್ತೈತಿ. ಆದರೂ ಚಂದ್ರಿ ಸುಕದಾಗ ಬಿಳ್ತಾಳೂ— ಅಂದ್ಮ್ಯಾ.

ಗಂಡ:— ಮುದ್ಯನ ಕೂಡ ಏನ ಸುಖದಿಂದಿರ್ತಾಳs .... ? ಹೀಂಗ ಮಾಡಿ ಹುಡ್ಗೀನ ಕೊಲಬೇಕಂತೀಯೇನು .... ?

ಹೆಂಡ್ತಿ:— ಇಪ್ಪತ್ತರ ವ್ಯಾಗ ಮೂರು ವರ್ಸಾದ್ರೂ, ಇನ್ನೂ ಚಂದ್ರಿಗೆ ಹುಡಿಗೆಂತs ಅಂತೀರೆಲ್ರಿ ! ಇನ್ನ ಹೆಚ್ಚಿಗೆ ಇಚಾರ ಮಾಡ್ದs, ಶಾರಕ್ಕ ಹೋಗಿ, ಹುಡ್ಗೀನ ನೋಡಾಕ ಬರ್ರೆಂತ ಹೇಳಿ ಬರ್ರಿ.

ಗಂಡ:— ಇದೆಲ್ಲಾ ಆಯ್ತು; ಮಾಡಿಕೊಳ್ಳಾವ್ರು ಯಾರs ? ನೀನೊ....?

ಹೆಂಡ್ತಿ:— ಅದರ ಚಿಂತೀ ಬಿಡ್ರಿ ನೀವು. ಮೊದ್ಲು ಗಟ್ಟಿಮಾಡಿ ಬರ್ರಿ; ಅವ್ಯಾಗ ನೋಡೂಣಂತ. ತನಗ ಗಂಡ ಬೇಕಾದರ ಮಾಡಿ ಕೋಳ್ಳಿ; ಇಲ್ದಿದ್ರ ಬಿಡ್ಲಿ.

ಗಂಡ:—ಅಂತೂ ಆ ಮುದುಕನ ಕೊಳ್ಳಾಗs ಕಟ್ಟಿ ಬಿಡಕಂತಿ ಅನ್ನು.

ಹೆಂಡ್ತಿ:— ಏನಾರೇ ಅಂದಕೋರ್ರಿ! ಲಗ್ನ ಮನ್ಯಾಗಿನ ಪೀಡಾರೇ ಹೊಂಟು ಹೋಗ್ಲಿ. ಸುಡ್ಲೀ, ಇದರ ಕಾಲಾಗ ನನಗ ಒಂದ ದಿನಾನೂ ಕೂಳ ಸಂನೀ ಹತ್ತೂದಿಲ್ಲ.

ಗಂಡ:— ಹಾಂಗಿದ್ರ ಹೆಡೀತಿದ್ದಿ ಯಾಕ ಮತ್ತ—? ಈಗ ನೆಳ್ಳಲಿಕ್ಕೆ ಹತ್ತೀದೀ ? ಚಂದ್ರಿ ಹುಟ್ಟೂಕೆಂತಾ ಮೊದಲ, ಎಷ್ಟು ಹಾರಾಡತಿದ್ದಿ ಅಲ್ಲಾ. ಮಕ್ಕಳಾಗ್ಲೀ-ಮಕ್ಕಳಾಗ್ಲೀ-ಅಂತ !

ಹೆಂಡ್ತಿ:— ಹೌಂದ ಹೌಂದ ಬಿಡ್ರಿ ! ನಾ ಅಷ್ಟs ಹಾರ್ಯಾಡತಿದ್ನಿ; ನೀವ್ಯಾನಿಲ್ಲಾ. ಮಕ್ಕಳನ ತೊಗೊಂಡು ನಿಮಗೇನ ಮಾಡೋದು ? ಅಲ್ಲಾ ?

ಗಂಡ:— ಅಲ್ಲ ಅಲ್ಲ, ಅಂಗಡ್ಯಾಗಿನ ಬೆಲ್ಲ ! ತಿಳೀತs ? ನಾ ಎಲ್ಲಿ ನೆಳ್ಳಲಿಕ್ಕೆ ಹತ್ತೀನಿ ನಿನ್ನಹಂಗ....?

ಹೆಂಡ್ತಿ:— ಇದೆಲ್ಲಾ ಇರ್ಲಿ. ಈಗೇನ ಮಾಡಬೇಕಂತೀರಿ ಹೇಳ್ರಿ.

ಗಂಡ:— ಮಾಡಿಕೊಳ್ಳಾವರು ನಾವೇನಲ್ಲಾ. ಅದ್ಯ ಹುಡಿಗ್ಗೆ ಹಿಂಗ್ಹಿಂಗ ಅದ-ಅಂತ ಎಲ್ಲಾ ಹೋಳೋಣು ! ಬೇಕಾದ್ರ ಮಾಡಿ ಕೊಳ್ಳಿ, ಬಾಡಾದ್ರ ಬಿಡ್ಲಿ. !

ಹೆಂಡ್ತಿ:— ಅದಕೇನ ತಿಳೀತದರಿ ಪೋಡಿಗೇ ? ಎಂದಾದ್ರೂ ಬಾಯಿಬಚ್ಚಿ ಹೇಳೀತೇನ್ರಿ? ಮೊದ್ಲs ಗಂಡಂದರ ನಾಚಿ ಸಾಯತದ ಅದು !

ಗಂಡ:— ಇರ್ಲಿ ಬಿಡು, ನಾ ಎಲ್ಲಾ ಹೇಳತೀನಿ ಆಕೀಗೆ !

ಹೆಂಡ್ತಿ:— ಗಂಡಸರಾಗಿ, ನೀವ್ಯಾನ ಹೇಳ್ತೀರಿ ? ನಾನs ಹೇಳ್ತೀನಿ.

ಗಂಡ:— ಎಲ್ಲಿ ಹೋಗ್ಯಾಳೀಗ....?

ಹೆಂಡ್ತಿ:— ಇಲ್ಲೇ, ಎಲ್ಲಿ ಗೆಣ್ತೀಮನಿಗೆ ಹೋಗಿ ಬರ್ತೀಸಂತ ಹೇಳಿ ಹೋಗ್ಯಾಳು. ತಾಸಾಗತs ಬಂತು ಹೋಗಿ. ಬಂದಳೇನು ನೋಡ್ರೆತ್ತ ?

ಗಂಡ:—(ಹೊರಗೆ ಕಣ್ಣುಚೆಲ್ಲಿ) ಇಲ್ಲ, ಎಲ್ಲಿ ಕಾಣಿಸೂದಿಲ್ಲ....

ಹೆಂಡ್ತಿ:— ಸರೀರತ್ತ, ನೋಡ್ತಿನಿ ನಾ. ನೋಡ್ರಿತ್ತ ಬರ್ಲಿಕ್ಕೆ ಹತ್ಯಾಳ....ಅಱಿ.... ಚಂದ್ರೀಗುಡಾ ಅವನ್ಯಾರ್ರೀ ಹುಡ್ಗಾ....ಇಬ್ಬರೂ ಮಾತಾಡ್ತs ಬರ್ತಾ ಇದ್ದಾರಲ್ರಿ ! ಅಯ್ಯೋ, ಇದೇನ ನೋಡ್ಲಿಕ್ಕೆ ಹತ್ತೀನ್ರಿ ನಾ....?

ಗಂಡ:— ಎಲ್ಲಿ ಸರೀ.... ನೋಡ್ತೀನಿ.... ಅವನೋ, ನಮ್ಮ ಕಾಂತೂ....

ಹೆಂಡ್ತಿ:— ಆ ಕಾಂತ್ಯಾ—? ಅವನ್ಯಾಕ್ರಿ ಚಂದ್ರೀಗುಡಾ....?

ಗಂಡ:— ಸ್ವಲ್ಪ ಬಾಯ್ಗಿ ಕೇಲೀಹಾಕೇ. ಇಲ್ಲಿ ಬಂದಾದ್ರೂ ಬರ್ಲೀ.

ಹೆಂಡ್ತಿ:— ನೋಡ್ಯಾರೇ ನೋಡ್ರೆಲ್ಲಾ; ಹೆಂಗ ನಗ್ತಾ ನಗ್ತಾ ಬರ್ತಾರ.

ಗಂಡ:—ಮತ್ತ ಆಳ್ತಾ ಬರಬೇಕೇನs? ಏನಾದ್ರೂ ಇರಬೇಕು ನಗೀ ಬರುವಂಥಾ ಮಾತು.... ಅದಕ್ಕ ನಗ್ತಿರಬೇಕು.

ಹೆಂಡ್ತಿ:—ಅದಲ್ರೀ ನಾ ಅನ್ನೋದು ! ಆ ಹುಡ್ಗನ ಜೋಡೀಲಿ ಯಾಕs ಅಂತ ! ಮುಂದಿಗಿ ಮುಖಾದs ಹೆಂಗ ತೋರ್ಸಲಿ ನಾ ಇನ್ನ !

ಗಂಡ:—ಮುಖಾ ಯಾಕ ತೋರ್ಸತೀ? ಮೂಗು ತೋರ್ಸಲ್ಲಾ. ಹುಡಿಗೇರು ಹುಡುಗರ ಜೋಡಿ ಮಾತಾಡಬಾರದೇನು—?

ಹೆಂಡ್ತಿ:— ಮಾತಾಡ್ಲಿ ಯಾರ ಬ್ಯಾಡಂತಾರು ! ಆದರ ಹಿಂಗ—? ಓಣ್ಯಾಗಿಂದs ಬರೂಹೊತ್ತಿನ್ಯಾಗ. ?

ಗಂಡ:— ಅಂದರ ಕೈಗೆ ಕೈ ಹಿಡಕೊಂಡು ಮಾತಾಡವ್ವೊಲ್ಲರ್ಯಾಕ, ಅಂತಿಯೇನು ?

ಹೆಂಡ್ತಿ:— ಗಂಡ್ಸರ್ಗೆ ತಲೀ ಇಲ್ಲಾಂತ ಇದಕ್ಕs ಅನ್ನೋದು.

ಗಂಡ:—ನಾ ಅಂತೀನಿ ಹೆಂಗ್ಸರ್ಗೀ ತಲಿ ಇಲ್ಲಾಂತ. ತಲೀನೂ ಇಲ್ಲಾ-ಬುದ್ಧಿನೂ ಇಲ್ಲಾ.

(ಚಂದ್ರಿ ಪ್ರವೇಶಿಸುವಳು)

ಹೆಂಡ್ತಿ:— ಚಂದ್ರೀ—ಭೇಟ್ಟಿ ಆದಳಾ ನಿನ್ನ ಗೆಣ್ತಿ—?

ಚಂದ್ರಿ:— ಇಲ್ಲಮ್ಮಾ ಅವಳು ಇದ್ದಿದ್ದಿಲ್ಲ. ಆದರ ಅವಳ ಅಣ್ಣ ಭೆಟ್ಟಿ ಆದ್ರೂ.

ಹೆಂಡ್ತಿ:— ಯಾರು ಯಾರಂದೀ ? ಆ ಕಾಂತ್ಯಾನ—?

ಚಂದ್ರಿ:— ಹೌದಮ್ಮಾ ಅವರೇ. ನಾನೂ-ಅವರೂ ಕೂಡೇ ಬಂದಿವಿ. ಅವರು ಇದೇ ಈಗ ಇಲ್ಲಿಂದ ಹೋದ್ರೂ !

ಹೆಂಡತಿ:— ಜೋದ್ರs ? ಚೆಲೋ ಆತು. ಇಬ್ಬರೂ ನಕ್ಕೊಂತ ಬರ್ತಿದ್ದಿರೆಲ್ಲಾ— ಏನಿತ್ತು ಅಂಥಾದ್ದು---?

ಚಂದ್ರಿ:— ಏನಿಲ್ಲಮ್ಮಾ,ನೊನ್ನೆ ಪೇಪರಿನ್ಯಾಗ ನಂದೊಂದು ಕತೀ ಛಾಪ ಆಗಿತ್ತಲ್ಲಾ ! ಅವನ್ನ ಓದಿ ಅವರು ಬಹಾಳ ನಕ್ಕರಂತ. ಅದನ್ನs ಹೇಳ್ತಾ, ಕತೀ ಬಹಾಳ ಚೆನ್ನಾಗ್ಯದs ಅಂತ ಹೇಳಿದ್ರು.

ಗಂಡ:— ಇಲ್ಲಿ ಕೇಳೇ, ಅವನೂ ಒಬ್ಬ ಕತೆಗಾರ. ಅಷ್ಟs ಯಾಕ-ಅಂವ ಹಾಡು, ನಾಟ್ಯಾನೂ ಬರೀತಿರ್ತಾನಂತ. ಯಾವ ಪೇಪರನ್ಯಾಗ ನೋಡಿದ್ರೂ ಅವ್ನ ಹೆಸರು ಇದ್ದs ಇರ್ತsದ.

ಹೆಂಡ್ತಿ:— ಅಯ್ಯ ಹೌಂದ ? ನಮ್ಮ ಚಂದ್ರೀಕಿಂತಾ ಛೆಲೋ ಬರೀತಾನೇನು- ಅಂವ ?

ಚಂದ್ರಿ:— ಹೌದಮ್ಮಾ, ನನಗೇನು ಬರತದ ಅಂತೀ ! ಅವರೇನೋ ಮೊದ್ಲಿನಿಂದ ನನಗ-ಹಾಗೆ ಬರೀ, ಹೀಗೆ ಬರೀ ಅಂತ ಹೇಳ್ತಾ ಬಂದರಂತ ನಾ ಬರೀಲಿಕ್ಕೆ ಹತ್ತೀನಿ.

ಹೆಂಡ್ತಿ:— ಅಂದ್ರ ನೊಂದ್ಲಿಂದನ ನೀನೂ-ಅವನೂ-ಕೂಡಿ ಇರ್ತೀರೇನು ?

ಚಂದ್ರಿ:— ಹೌದಮ್ಮಾ, ಇವರ ತಂಗೀ ನಾನು ಇಬ್ಬರೂ ಕೂಡೇ ನೂತಾಡ್ತಿರತೀವಿ, ಬರೀತೀನಿ.

ಹೆಂಡ್ತಿ:— ಹ್ಞಂ ! ಗೊತ್ತಾಯ್ತು ಬಿಡೂ. ದಿನಾ ಹೋಗೂದು ಅವ್ರ ಮನೀಗೇ ಏನು ?

ಚಂದ್ರಿ:— ಹೌದು !

ಹೆಂಡ್ತಿ:— ದಿನಾ ಪುಸ್ತಕ ಬ್ಯಾರೆ ತರ್ತೀಯಲ್ಲಾ-ಅವು ಎಲ್ಲೀವು— ?

ಚಂದ್ರಿ:— ಅವೂ ಅಲ್ಲೀವ.

ಹೆಂಡ್ತಿ:— ಕೇಳ್ರಿ, ನಿಮ್ಮ ಮಗಳ ಕತೀ ಕಿವಿತುಂಬಾ! ನೀವೂ ಬರೀತಿದ್ದರ ಬರೀರಿ ಬೇಕಾದ್ರ ಮಗಳ್ನ ಮುಂದ ಕುಂಡ್ರಿಸಿಕೊಂಡು.

ಚಂದ್ರಿ:— ನಾನೇ ಬರೀಲಿಕ್ಕೆ ಹತ್ತೀನಮ್ಮಾ.

ಹೆಂಡ್ತಿ:— ಏನೇ, ಏನು ಬರೀಲಿಕ್ಕೆ ಹತ್ತೀದಿ— ?

ಚಂದ್ರಿ:— ನನ್ನ ಕಥೀನ ....

ಹೆಂಡ್ತಿ:— ಹ್ಞಂ ! ನಿನ್ನ ಕಥೀ— ?

ಚಂದ್ರಿ:— ಹೌದಮ್ಮಾ!

ಹೆಂಡ್ತಿ:— ಡಾಂಗಾದ್ರ ಏನು ಬರ್ದೀಯೇ, ಸುಳ್ಳೊಂದು ಸೊಟ್ಟೊಂದು ಕೂಡ್ಸೀದಿ ಇಲ್ಲೋ ಮತ್ತ— ?

ಚಂದ್ರಿ:— ಸುಳ್ಳಿಲ್ಲಮ್ಮಾ— ನಾ ಖರೇ ಇದ್ದದ್ದ ಬರೀತೀನಿ.

ಹೆಂಡ್ತಿ:— ಹೇಳ್ಯಾಳಲ್ಲ ಹೇಳೇ, ಏನಾರೇ ಬರ್ದೀ ಅದು— ?

ಚಂದ್ರಿ:— ಅವ್ವಾ- ?

ಗಂಡ:— ಹೇಳ ಚಂದ್ರೂ ಹೇಳು ! ಏನಿದ್ದರೂ ಧೈರ್ಯವಾಗಿ ಹೇಳು !

ಚಂದ್ರಿ:— ಅವ್ವಾ, ನನ್ನಂಥಾ ಒಬ್ಬ ಹುಡ್ಗೀ; ನಿನ್ನಂಥಾ ಒಬ್ಬಾಕಿ ತಾಯಿ; ಅಪ್ಪನಂಥಾ ತಂಧೆ ! ಅವಳಿಗೊಬ್ಬಳು ಗೆಳತಿ-ಗೆಳೆಯ. ದಿನಾಲೂ ಹುಡ್ಗಿ-ಅವರ ಮನೀಗೆ ಹೋಗ್ತಿರೋದು. ಎಲ್ಲಾರೂ ಕೂಡಿ ಆಡೋದು, ನಗೋದು. ಓದೋದು, ಬರಿಯೋದು ಹೀಗೆ ದಿನಾ ಕಳೆದೇ ಕಳ್ತಿರೋದು .... (ಮೌನ)

ಹೆಂಡ್ತಿ:— ಮುಂದೇನಾತು- ?

ಗಂಡ:— ಮುಂದೇನಾಗ್ತದ- ? ಇಬ್ಬರ್ದೂ ಲಗ್ನ ಆಗ್ತಿರ ಬೇಕು. ಹೌದಲ್ಲ ಚಂದ್ರೂ- ?

ಚಂದ್ರಿ:— ಹೌದಪ್ಪಾ !

ಹೆಂಡ್ತಿ:— ಅಯ್ಯೋ, ನಿನ ಕಥೀ ಸುಡ್ಲಿ ಒಯ್ದು ....! ನಮ್ಮನ್ನೀ ಹೆಸರು ಕೆಡಸಲಿಕ್ಕೆ ನಿಂತಿ ಅಲ್ಲೇ.

ಗಂಡ:— ಏಯ್, ಸಾಕು, ಬಾಯಿ ಮುಚ್ಚು ನೀ ಇನ್ನು ಚಂದ್ರೂ, ಆ ಕಾಂತೂ ನಿನ್ನ ಲಗ್ನಾಗಲಿಕ್ಕೆ ತಯಾರಿದ್ದಾನೊ .... ?

ಚಂದ್ರಿ:—ನಾನೇನು ಹೇಳ್ಲೀಪ್ಪಾ. ಇದು ನನ್ನ ಕತೀ. ಇನ್ನು ಮುಂದ ಆಗೋದ್ನ ಹೀಂಗ ಕಲ್ಪಿಸಿ ಬರಿದೀನಿ.

ಗಂಡ:— ಆಗ್ಲಿ ಚಂದ್ರೂ, ನಾನೇ ಕೇಳಿ ನೋಡ್ತೀನಿ, ಆ ಕಾಂತೂನ್ನ !

ಹೆಂಡ್ತಿ:— ಮತ್ತ ಆ ಸರಾಫೀ ಅಂಗಡ್ಯಾವರ್ಗಿ ಏನ ಹೇಳ್ತೀರಿ?

ಗಂಡ:— ಎಲ್ಲೀ ಸರಾಫೇ, ಸುಮ್ನಾಗು. ಹುಚ್ಚುಚ್ಚಾರ ಮಾಡ ಬ್ಯಾಡಾ. ನಾನೆಲ್ಲಾ ಮಾಡ್ತೀನಿ. ರೊಟ್ಟೀ ಬಡಕೊಂತ ಸುಮ್ನ ಕೂತಿರನ್ನೀ.

[ತೆರೆ]

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾ ರ ವಾ ಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು ! ಸ್ವಾಮಾಣಿಕ ವ್ಯವಹಾರ !!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ದಿವ್ಯದೇವಾಲಯವು ಬೆಳಗುತಿಲ್ಲ!

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್

೧

ಗಿಡಗಂಟಿ ಮರಬಳ್ಳಿ ಕಾಡುಗುಡ್ಡಗಳಿರದ
ಮಹಾರಾಷ್ಟ್ರ ಪ್ರಾಚೀನ ಭೂಮಿಭಾಗ–
ಆ ಹಿರಿಯ ಬಯಲಿನಲಿ ದೇವನದಿಯೊಲು ದಿವ್ಯ
ಮಹಿಮೆಯನು ಸೆರೆದಿಹಳು ಚಂದ್ರಭಾಗಾ.

೨

ನದಿಯ ತೀರದಲಿಹರು ಸಂತ ಸುಜ್ಞಾನಿಗಳು
ಭಕ್ತವರ ತುಕ ಮತ್ತೆ ಜ್ಞಾನದೇವ–
ವಿಮಲ ಜ್ಞಾನದ ಎಡೆಗೆ ಭಕ್ತಿಪಾಯಸ ಬಡಿಸಿ,
ಹರಿಸಿಹರು ಜನಮನದ ದೈನ್ಯ ಭಾವ.

೩

ಭವದಿ ತಾಪದಿ ಬೆಂದು, ಕಹಿಕಷ್ಟಗಳನುಂಡು
ಭವಿ ತುಕಾರಾಮ ನವ ಭಕ್ತಬಂಧು–
ಭವದ ಬೆಂಗಾಡಿನಲಿ ಭಕ್ತಿಸುಧೆ ಹರಿಸಿರಲು
ಭುವಿಯೆ ನಂದನವಾಗಿ ನಲಿಯಿತಂದು.

೪

ಕರಿದಾದ ಗೊಪುರದ ಗುಡಿಯ ಗರ್ಭದಲಿಹನು.
ಜರದ ಮಂಡಾಸದಾ ಹರಿವಿಠ್ಠಲ–
ಟೊಂಕದಲಿ ಕೈಯಿಟ್ಟು ಬಿಂಕದಲಿ ನಿಂತಿಹನು.
ಕಿಂಕರರ ಸಲಹಿರ್ದ ಜನವತ್ಸಲ.

೫

ಹಿಂಡಾಗಿ ಭಕುತ ಜನ ಪಾಂಡುರಂಗನ ಅಡಿಗೆ
ದಿಂಡು ಬೀಳುತ ಕಾಡಿ ಬೇಡುತಿಹರು,
ಪಂಢ ಪೂಜಾರಿಗಳು ಹಿಂಡಿ ಭಕುತರ ಜೀವ
ಉಂಡುಟ್ಟು ಸುಖವಾಗಿ ಬಾಳುತಿಹರು.

೬

ಹಣೆಯಲ್ಲಿ ಎಳೆನಾಮ, ಮುಖದಲ್ಲಿ ಹರಿನಾಮ
ಕೈಯಲ್ಲಿ ಕಾವಿಯಾ ಬಾವುಟಗಳು–
ಕುಲಜ ಪಂಚಮ ದೀನ ಧನಿಕರೆಂಬುದು ಇಲ್ಲ
ಎಲ್ಲರೂ ವಿಠ್ಠಲನ ಒಕ್ಕಲುಗಳು.

೭

ಅದೆ ಪುರಾತನ ಕ್ಷೇತ್ರ, ಅದೆ ಹಿರಿಯ ದೈವತವು
ಅದೆ ನೆಲವು ಅದೆ ಜಲವು ಪುಣ್ಯ ಪರಿಸರವು.
ದ್ವಾರದಲಿ ನುಗ್ಗುತಿಹ ಭಕುತಜನಕರೆಯಿಲ್ಲ–
ವಾದರೂ ಉಳಿದಿಲ್ಲ ಪೂರ್ವವೈಭವವು.

೮

ಜ್ಞಾನದೇವನ ತತ್ತ್ವ ಸೌರಭದ ಸುಳಿವಿಲ್ಲ
ತುಕನಭಂಗದ ಭಕ್ತಿಯಾಲಾಪವಿಲ್ಲ,
ಶ್ರದ್ಧೆ ಸತ್ತ್ವಕೆ ನಲಿದ ವರದ ದೈವತವಿದ್ದು
ಭಾವುಕರ ಹೃದಯದಲಿ ಭಕ್ತಿಯೊಲನಿಲ್ಲ.

೯

'ಸಕಲವೂ ಹರಿಸೇವೆ' ಎಂಬ ಗುರುಬೋಧೆಯನು
ಒರೆದ ಪುರಂದರದಾಸರೊಸಗೆನುಡಿಯಿಲ್ಲ,
ಮಹಾರಾಷ್ಟ್ರದಲಿ ನಿಂದ ಹಳೆಯ ಕನ್ನಡ ದೇವ–
ನೊಲುಮೆ ಉಭಯರ ಬಾಳ ತುಂಬಿಬಂದಿಲ್ಲ.

೧೦

ದಿವ್ಯಲೀಲೆಯ ಮೂರ್ತಿ ಶೃಂಗಾರತಿಲೆಯಾಗಿ
ಪೂಜೆ ಉತ್ಸವ ಹಣದ ಸುಲಿಗೆಯಾಗಿ
ನಾಡಿನಲಿ ದೈವಿಕತೆ ಭಾವುಕತೆ ಮರೆಯಾಗಿ
ಭಕ್ತಿ ಭಾವವು ಧನದ ಕಲೆಯದಾಗಿ–

೧೧

ಹಳೆಸಿದ್ಧಿ ಉಳಿದಿಲ್ಲ, ಹೊಸ ಶ್ರದ್ಧೆ ಬೆಳೆದಿಲ್ಲ
ಬಾಳು ಬರಿ ಭೌತಿಕವು ಲೌಕಿಕವು ಎಲ್ಲ,
ಭಕ್ತಿಯೋಗದ ನೆಲೆಯ ಚಿನ್ಮೋದ ಬೋಧಗಳ
ದಿವ್ಯ ದೇವಾಲಯವು ಬೆಳಗುತಿಲ್ಲ.

೧೨

ಮತ್ತೆ ಮೂಡಲಿ ನಾಡ ಹೊಂಬಾನಿನಲಿ ಹೊಳೆದು
ಜ್ಞಾನಭಕ್ತಿಯ ಆಚಲ ಸಂಕಲ್ಪರವಿಯು,
ಕಾಯಕದಿ ದೈವಿಕತೆ ಧಾರ್ಮಿಕತೆ ಪಡಿಮೂಡಿ
ಮತ್ತೆ ಪಂಢರಪುರಿಯು ಬ್ರಹ್ಮಪುರಿಯು!

★ ಕಾಮಾಖ್ಯಾ ಮಂದಿರ ೪ ★

(ಕಾಲಿಕಾ ಪುರಾಣದಲ್ಲಿ ಕಾಮಾಖ್ಯಾದೇವಿ)

ಶ್ರೀ ಪಿ. ವಿ. ಗುಡಿ, ಗೌಹಟ್ಟಿ (ಅಸಾಮು)

ನಮ್ಮ ದೇಶದ ಪ್ರಾಚೀನ ದೇವಾಲಯಗಳಲ್ಲಿಯ ದೇವ-ದೇವತೆಗಳ ಬಗೆಗೆ ಒಂದೊಂದು ಪುರಾಣದಲ್ಲಿ ಒಂದೊಂದು ಬಗೆಯ ಆಖ್ಯಾಯಿಕೆ ವರ್ಣಿತವಾಗಿರುವುದು. ಒಂದು ಪುರಾಣದಲ್ಲಿ ಕಾಮಾಖ್ಯಾದೇವಿ ಶ್ರೀಕೃಷ್ಣನ ಸಹಜಾತೆ; ಇನ್ನೊಂದು ಪುರಾಣದಲ್ಲಿ ಶಿವನ ಸತಿ ಪಾರ್ವತಿ! ಇವುಗಳನ್ನು ನಾವು ಹೇಗೆ ನಂಬಬೇಕು?

[ಅಸಾಮುವು ಪ್ರಕೃತಿ ಸೌಂದರ್ಯದಾಗರ. ಈ ಪ್ರಾಂತ ರಾಮಾಯಣ ಮಹಾಭಾರತ ಕಾಲದಲ್ಲಿ ಪ್ರಾಗ್ಜ್ಯೋತಿಷವೆಂದೂ, ಅನಂತರ ಕಾಮರೂಪವೆಂದೂ ಹೆಸರಾಗಿತ್ತು. ಮೊದಲು ಇದು ಮ್ಲೇಚ್ಛರ ರಾಜ್ಯವಿದ್ದಿತು. ವಿದೇಹಿಯ ನರಕಾಸುರನು ಇದನ್ನು ಗೆದ್ದುಕೊಂಡು ಇಲ್ಲಿ ಆರ್ಯರ ವಸಾಹತು ಸ್ಥಾಪಿಸಿದ ಕ್ರಮೇಣ ಅವನು ಶೋಣಿತಪುರದ ಬಾಣಾಸುರನ ಪ್ರಭಾವದಲ್ಲಿ ಸಿಕ್ಕುಬಿದ್ದು, ಆರ್ಯರ ಹಿಂಸೆಗೆ ಪ್ರಾರಂಭಿಸಿ ವಸಿಷ್ಠ ಋಷಿಗಳಿಗೆ ಅಪಮಾನ ಮಾಡಿದ. ಸಾವಿರಾರು ಸುಂದರ ತರುಣಿಯರನ್ನು ಬಂಧಿಸಿ ತನ್ನ ಅರಮನೆಯಲ್ಲಿ ಸೆರೆಯಾಗಿರಿಸಿದ. ಅನಂತರ ದ್ವಾರಕೆಯ ಕೃಷ್ಣನು ಇವನನ್ನು ಯುದ್ಧದಲ್ಲಿ ಸಂಹರಿಸಿದ.

ಕಾಮರೂಪದ ಆರಾಧ್ಯ ದೇವತೆ ಕಾಮಾಖ್ಯದೇವಿ. ಕಾಲಿಕಾ ಪುರಾಣದಲ್ಲಿ ಹೇಳಿದಂತೆ ವಿಷ್ಣುವಿನಿಂದ ಪ್ರತಿಷ್ಠಾಪಿಸಲ್ಪಟ್ಟ, ನರಕಾಸುರನಿಂದ ಪೂಜಿಸಲ್ಪಟ್ಟ ದೇವಕಿ. ಜಗನ್ಮಾತೆಯ-ದುರ್ಗೆಯ ಅವತಾರ. ಕಾಮಾಖ್ಯಾ ದೇವಿಯಿಂದಲೇ ಈ ಪ್ರದೇಶಕ್ಕೆ ಕಾಮರೂಪವೆಂದು ಹೆಸರು ಬಂದಿದೆ. ಯೋಗಿನೀತಂತ್ರದಲ್ಲಿ ಹೇಳಿದಂತೆ ಆದಿಮಾತೆ - ಜಗನ್ಮಾತೆಯು ಸೃಷ್ಟಿಶಕ್ತಿಯ ಚಿಹ್ನೆಯೇ ಸ್ತ್ರೀಜನನೇಂದ್ರಿಯ. ಜಗನ್ಮಾತೆಯು ಈ ಚಿಹ್ನೆಯನ್ನು ಕಾಮರೂಪದಲ್ಲಿ ಜನರ ಕಲ್ಯಾಣಕ್ಕಾಗಿ ಇಟ್ಟಿದ್ದಾಳೆ. ಅವಳ ಆಜ್ಞೆಯ ಮೇರೆಗೆ ಬ್ರಹ್ಮನು ಸಹ ಇದನ್ನು ಧ್ಯಾನಿಸಿದ ನಂತರವೇ ಜಗತ್ತನ್ನು ಸೃಷ್ಟಿಸುತ್ತಾನೆ]

ಅಸಾಮುಕ್ಕೆ ಬಂದು ಎರಡು ತಿಂಗಳಾಗುತ್ತ ಬಂದಿತು. ಎಲ್ಲವೂ ಹೊಂದಿಕೊಂಡಂತಾಗಿದೆ. ಅಸಾಮುದಲ್ಲಿ ಮಳೆ ಹೆಚ್ಚೆಂದು ಕೇಳಿದ್ದೆ. ಆದರೆ ಈ ಎರಡು ತಿಂಗಳುಗಳಲ್ಲಿ (ಬೇಸಗೆಯಲ್ಲಿ) ಒಂದು ಸಾರೆ ಕೂಡ ಮಳೆಯಾಗಿರಲಿಲ್ಲ. ಇಷ್ಟೇ ಅಲ್ಲ, ಸಾಕಷ್ಟು ಸೆಕೆ ಬೇರೆ. ಇಲ್ಲಿಯದು Damp Climate ಆದುದರಿಂದ, ಯಾವಾಗಲೂ ಗಮ್ಮು ಕುಚ್ಚುತ್ತಿರುತ್ತದೆ; ಬೆವರು ಹರಿಯುತ್ತವೆ. ಯಾವಾಗ ಬೇಸಗೆ ಮುಗಿಯುವುದೋ ಎಂದೆನಿಸಿತ್ತು. ಇಲ್ಲಿಯ ಬೇಸಗೆ ಮುಂಬಯಿಯಲ್ಲಿಯ ಅಕ್ಟೋಬರ ತಿಂಗಳ ಜ್ಞಾಪಕ ತರುತ್ತದೆ.

The persons you dont like most are your neighbours ಎಂಬ ಗಾದೆಯ ಮಾತೊಂದಿದೆ. ಇದು ನೆರೆಹೊರೆಯ ಮನೆಯ ಜನರಿಗಷ್ಟೇ ಸಂಬಂಧಿಸುವುದಿಲ್ಲ; ನೆರೆಹೊರೆಯ ಪ್ರಾಂತ-ದೇಶಗಳಿಗೆ ಸಹ ಅನ್ವಯಿಸುತ್ತದೆ. ಎಲ್ಲರಿಗೂ ಗೊತ್ತಿದ್ದ ಉದಾಹರಣೆಗಳೆಂದರೆ ಕರ್ನಾಟಕ-ಮಹಾರಾಷ್ಟ್ರ, ಆಂಧ್ರ-ಕರ್ನಾಟಕಗಳಲ್ಲಿ ನಡೆದಿರುವ ನ್ಯಾಯ. ಈ ಸಾಧಾರಣ ನಿಯಮಕ್ಕೆ ಹೊರತಾಗಿದ್ದ ಭಾರತ-ಚೀನಗಳು ಸಹ ಈಗ ತಮ್ಮ ತಪ್ಪು ಒಪ್ಪಿಕೊಂಡಂತಿವೆ. ಇದೇ ಸಾಧಾರಣ ನಿಯಮಕ್ಕನುಸಾರವಾಗಿ, ಅಸಾಮುದ ಜನರ ನಡೆ ನುಡಿಗಳೆಲ್ಲ ಬಂಗಾಲಿಯವರಂತೆ ಇದ್ದರೂ, ಬಂಗಾಲಿಯವರನ್ನು ಕಂಡರೆ ಅಸಾಮಿಯರಿಗೆ ಆಗುವುದಿಲ್ಲ.

ಇಲ್ಲಿಯ ಇನ್ನೊಂದು ವಿಶೇಷನೆಂದರೆ, ಇಲ್ಲಿಯ ಬಹುಮನೆಗಳೆಲ್ಲ ಕಟ್ಟಿಗೆ ಬಿದಿರುಗಳಿಂದ ಕಟ್ಟಿದುವುಗಳು. ಆದರೆ ಎಲ್ಲಿಯಾದರೂ ದೊಡ್ಡ ಕಾಂಕ್ರೀಟ್ ಮನೆಗಳನ್ನೋ ಇಲ್ಲವೆ ದೊಡ್ಡ ಅಂಗಡಿಗಳನ್ನೋ ನೋಡಿದರೆ, ಅವು ಮಾರವಾಡಿಯವರವೆಂದು ನಿಶ್ಚಿತವಾಗಿ ಹೇಳಬಹುದು. ಇಲ್ಲಿ ಸಾಕಷ್ಟು ಶ್ರೀಮಂತರೆಂದರೆ ಅವರೇ. ಇಲ್ಲಿಯ ದೊಡ್ಡ ದೊಡ್ಡ ವ್ಯಾಪಾರ ಉದ್ಯಮಗಳೆಲ್ಲ ಅವರ ಕೈಯಲ್ಲಿಯೇ ಇವೆ. ಮಾರವಾಡಿ ಫಂಡಿನಿಂದ ನಡೆಯುವ ಶಾಲೆಗಳೂ, ದವಾಖಾನೆಗಳೂ ಇಲ್ಲಿ ಇವೆ. ಇಲ್ಲಿ ಇರುವ ಮಾರುತಿ ಮತ್ತು ರಾಧಾಕೃಷ್ಣರ ಗುಡಿಗಳೆಲ್ಲ ಮಾರವಾಡಿಗಳೇ ಕಟ್ಟಿಸಿದುವು, ಅವುಗಳನ್ನೆಲ್ಲ ಅವರೇ ಯೋಗ್ಯ ರೀತಿಯಿಂದ ನಡೆಯಿಸಿಕೊಂಡು ಬಂದಿದ್ದಾರೆ. ಇಷ್ಟೆಲ್ಲ ಮಾಡಿದರೂ, ಅವರ ಬಗ್ಗೆ ಅಸಾಮಿಯರಲ್ಲಿ ಸದಭಿಪ್ರಾಯವಿಲ್ಲ, ಆದರವಿಲ್ಲ. ಅವರ ಕಾರಣ ಗೊತ್ತಾಗಲಿಲ್ಲ. ಬಂಗಾಲೀ ಜನರು ಸಾಧಾರಣವಾಗಿ ನೌಕರದಾರರು.

ಆಫೀಸಿನ ಕೆಲಸ ಮುಗಿಸಿಕೊಂಡು ಮನೆಯ ಕಡೆಗೆ ಹೊರಟಾಗ ಸಂಜೆ ೫॥ ಗಂಟೆಯಾಗಿತ್ತು. ಮರುದಿವಸ ಬಿಡುವು ಇದ್ದುದರಿಂದ, ಯಾವುದಾದರೊಂದು ಸ್ಥಳ ನೋಡಲಿಕ್ಕೆ ಹೋಗೋಣವೆ-ಎಂದು ಯೋಚಿಸುತ್ತಿದ್ದೆ. ಬೇರೆ ಯಾವುದು? ಮೊದಲು ಕಾಮಾಖ್ಯಾ

ಮುಂದಿರಕ್ಕೆ ಹೋಗದೆ, ಉಳಿದ ಸ್ಥಳಗಳ ಬಗ್ಗೆ ವಿಚಾರಿಸುವ ಕಾರಣವೇ ಇಲ್ಲ. ಕೂಡಲೇ ನೆನಪಾಯಿತು. ಪಂಡಿತಜಿಯವರ ಭೆಟ್ಟಿಯಾಗದೆ ತಿಂಗಳ ಮೇಲಾಗಿತ್ತು. ಕಾಮಾಖ್ಯಾದ ಬಗ್ಗೆ ಅವರು ಇನ್ನೂ ಹೇಳುತ್ತೇನೆಯೆಂದಿದ್ದರು. ಅದನ್ನು ಕೇಳಿಕೊಂಡೇ ನಾಳೆಯ ದಿವಸ ಕಾಮಾಖ್ಯಾ ಮಂದಿರಕ್ಕೆ ಹೋದರಾಯಿತು–ಸಾಧ್ಯವಾದರೆ ಅವರನ್ನೂ ಕರೆದುಕೊಂಡು–ಎಂದು, ಅವರ ಮನೆಯ ಕಡೆಗೆ ಹೊರಟೆ.

ಪಂಡಿತಜಿಯವರು ಬೀಸಣಿಕೆಯಿಂದ ಗಾಳೀ ಬೀಸಿಕೊಳ್ಳುತ್ತ ಬಂಕದಲ್ಲಿ ಕುಳಿತಿದ್ದರು. ನಾನು ಹೋಗಿ ನಮಸ್ಕರಿಸಿ ಕುಳಿತುಕೊಂಡೆ.

'ಏನು ಬಹಳ ದಿವಸಗಳ ನಂತರ ಭೆಟ್ಟಿಯಾಯಿತು? ಮನೆಯಲ್ಲಿ ಎಲ್ಲವೂ ಸೌಖ್ಯವೇ ? ಮನೆ ಜಿನ್ನಾಗಿದೆಯೇ?' ಎಂದು ಕೇಳಿದರು.

'ಎಲ್ಲವೂ ಚೆನ್ನಾಗಿದೆ. ಆದರೆ ಈ ವಿಪರೀತ ಸೆಕೆಯಿಂದ ಸಾಕಾಗಿ, ಮಳೆಗಾಲವೆಂದು ಪ್ರಾರಂಭವಾಗುವುದೋ ಎಂದೆನಿಸಿದೆ' ಎಂದು ನಾನು ಉತ್ತರಿಸಿದೆ.

'ಈಗ ಬೇಸಗೆಯಿಂದ ಸಾಕೆನಿಸಿದೆ. ಆನಂತರ ಮಳೆಗಾಲದಿಂದ ಸಾಕೆನಿಸುತ್ತದೆ. ಮನುಷ್ಯನಿಗೆ ಯಾವುದರಿಂದಲೂ ತೃಪ್ತಿ ಇಲ್ಲ' ಎಂದು ಅವರು ನಗುತ್ತ ನುಡಿದರು.

' ನಾಳೆ ಆಫೀಸಿಗೆ ಬಿಡುವಿದೆ; ಕಾಮಾಖ್ಯಾಮಂದಿರಕ್ಕೆ ಹೋಗಬೇಕೆಂದು ಯೋಚಿಸಿದ್ದೆನೆ. ನೀವೂ ಬರಲಿಕ್ಕೆ ಸಾಧ್ಯವಾದರೆ..' ಎಂದು ನಾನು ಕೇಳಿದೆ.

' ಅದಕ್ಕೇನು! ಬರುತ್ತೇನೆ. ನಾಳೆ ಬೆಳಗಿನಲ್ಲಿ ಹೋಗೋಣವೇ ?' ಎಂದು ಅವರು ಕೇಳಿದರು.

' ಒಳ್ಳೆಯದು, ಆದರೆ ನೀವು ಹೋದ ಸಲ ಕಾಲಿಕಾಪುರಾಣದ ವಿಷಯ ಹೇಳುತ್ತೇನೆಂದು ಅಂದಿದ್ದಿರಲ್ಲ!" ಎಂದು ನಾನು ಕೇಳಿದೆ.

' ಓಹೋ! ಅದನ್ನು ಕೇಳಬೇಕಾಗಿದೆಯೇ?' ಎಂದು ಅವರು ಪ್ರಾರಂಭಿಸಿದರು: ' ನಾನು ನಿಮಗೆ ಹೋದಸಾರಿ ಹೇಳಿದ್ದೇನೆ–ಮಿಥಿಲೆಯ ನರಕಾಸುರ ಮ್ಲೇಚ್ಛರಾಜ್ಯವಾದ ಪ್ರಾಗ್ಜ್ಯೋತಿಷದಲ್ಲಿ ವಿಷ್ಣು–ಶಕ್ತಿಯಾದ ಜಗನ್ಮಾತೆಯ ಮಂದಿರವನ್ನು ಸ್ಥಾಪಿಸಿ ಇಲ್ಲಿ ಆರ್ಯರ ವಸಾಹತು ಸ್ಥಾಪಿಸಿದ. ಆ ಮಂದಿರವೇ ಕಾಮಾಖ್ಯಾಮಂದಿರ. ಅನಂತರ ವಸಿಷ್ಠ ಋಷಿಯ ಶಾಸದ ಮೂಲಕ ಇಲ್ಲಿಂದ ಕಾಮಾಖ್ಯಾ ದೇವಿ ಅವ್ಯಶ್ಯಳಾದಳು. ಇದಾದನಂತರ ಕಾಲಿಕಾ ಪುರಾಣದಲ್ಲಿ ಇದರ ಬಗೆಗೆ ಏನೂ ಉಲ್ಲೇಖವಿಲ್ಲ.

" ಅಂದರೆ! ಕಾಮಾಖ್ಯಾಮಂದಿರದ ಬಗೆಗೆಯೇ ಏನೂ ಉಲ್ಲೇಖವಿಲ್ಲವೇ ?" ಎಂದು ನಾನು ಕೇಳಿದೆ.

' ಅಲ್ಲ, ಕಾಮಾಖ್ಯಾ ಮಂದಿರದ ಬಗೆಗೆ ಸಾಕಷ್ಟಿದೆ ?' ಎಂದು ಅವರು ನುಡಿದರು. ಆದರೆ ಈ ಕಾಮಾಖ್ಯಾದೇವಿಗೂ ಮತ್ತು ನಾನು ಈ ಮೊದಲು ಹೇಳಿದ ಆದಿಶಕ್ತಿಯಾದ ಜಗನ್ಮಾತೆಗೂ ಏನೂ ಸಂಬಂಧವಿಲ್ಲ. ಈ ಕಾಮಾಖ್ಯಾ ಪಾರ್ವತಿಯ ಅವತಾರ; ಕಾಮಾತುರಳಾಗಿ ನೀಲಾಚಲದಲ್ಲಿ ಗುಪ್ತವಾಗಿ ಬಂದು ಪ್ರಿಯನಾಗಮನವನ್ನು ಪ್ರತೀಕ್ಷಿಸುತ್ತ ಕುಳಿತ ಶಿವನ ಮನದನ್ನೆ. ಕಾಲಿಕಾ ಪುರಾಣದಲ್ಲಿ ಹೇಳಿದಂತೆ, ಶಿವನ ಕುಟೀರಗಳು ಆರು (೬). ಅವುಗಳಲ್ಲಿ ಮಧ್ಯದಲ್ಲಿರುವುದೇ ಈ ನೀಲಾಚಲ. ಆದುದರಿಂದ ಪಾರ್ವತಿಯು ಗುಪ್ತವಾಗಿ ಇಲ್ಲಿಗೇ ಬಂದು ಅವನ ಬರುವನ್ನೇ ಹಾರೈಸುತ್ತಿರುತ್ತಾಳೆ, ಕಾಮಾಪೇಕ್ಷಿಯಾಗಿ ಅವಳು ಇಲ್ಲಿಗೆ ಬಂದಿರುವುದರಿಂದ, ಅವಳ ಹೆಸರು ಕಾಮಾಖ್ಯಾ' ಎಂದಾಗಿದೆ.

ಇನ್ನೂ ಒಂದು ವಿಶೇಷವೆಂದರೆ, ನೀವು ಕಾಮದಹನದ ವಿಷಯ ಕೇಳಿರಬಹುದು. ಆದರೆ ಅದು ಇವೇ ಪ್ರದೇಶದಲ್ಲಿ ಜರುಗಿದ ಸಂಗತಿಯೆಂಬುದು ನಿಮಗೆ ತಿಳಿದಿರಲಿಕ್ಕಿಲ್ಲ. ಎಲ್ಲ ದೇವತೆಗಳ ಆಗ್ರಹಕ್ಕೆ ಒಳಗಾಗಿ, ಮನ್ಮಥನು ಶಿವನ ತಪಸ್ಸನ್ನು ಕೆಡಿಸುವುದಕ್ಕಾಗಿ ಪಂಚಬಾಣಗಳನ್ನು ಸಜ್ಜುಗೊಳಿಸಿಕೊಂಡು ಬರುತ್ತಾನೆ; ಆದರೆ ಆದರ ಪರಿಣಾಮ ಬೇರೆಯೇ ಆಗುತ್ತದೆ. ಶಿವನು ಕ್ರೋಧಾವೇಶದಿಂದ ತನ್ನ ಮೂರನೆಯ ಕಣ್ಣನ್ನು ತೆರೆದು, ತನ್ನ ತಪಸ್ಸಿಗೆ ಭಂಗ ತಂದ ಮನ್ಮಥನನ್ನು ಸುಟ್ಟು ಭಸ್ಮ ಮಾಡುತ್ತಾನೆ. ಆ ಬೂದಿ ಬಿದ್ದ ಸ್ಥಳವೇ ಭಸ್ಮಕೂಟ; ನೀಲಾಚಲದ ಹತ್ತಿರವೇ ಇದೆ. ಇಲ್ಲಿ ಊರ್ವಶಿಯ ಗುಡಿ ಇದೆ. ಅವರ ಬಗ್ಗೆ ಆನಂತರ ಹೇಳುತ್ತೇನೆ.

ಅಂತೂ ದೇವತೆಗಳ ಉದ್ದೇಶ ಈಡೇರಿತು. ಶಿವನ ತಪಸ್ಸು ಭಂಗವಾಗಿ ದೇವತೆಗಳಿಗೆ ಅವನನ್ನು ಸಮೀಪಿಸುವುದಕ್ಕೆ ಮಾರ್ಗವು ದೊರೆಯಿತು. ಪಾರ್ವತಿಯನ್ನು ಶಿವನು ಲಗ್ನವಾಗಿ ಜಗತ್ಕಲ್ಯಾಣಕ್ಕೆ ಅನುಕೂಲವಾಯಿತು. ಆದರೆ ಇವುಗಳ ಜೊತೆಗೆ ಕಾಮದಹನವೂ ಆಗಿ, ಮದನನ ಮಡದಿ ರತಿಯದು ಮಾತ್ರ ವಿಪರೀತ ಸ್ಥಿತಿಯಾಯಿತು. ಅವಳು ಗೋಳೋ ಎಂದು ಅಳುತ್ತ ಬಂದು ಶಿವನ ಕಾಲಿಗೆ ಬಿದ್ದು ಪತಿದಾನಕೇಳಿದಳು. 'ಜಗತ್ಕಲ್ಯಾಣವಾಗುವುದೆಂದು ಎಲ್ಲರೂ ಸಂತೋಷದಿಂದಿರುವಾಗ, ನಾನು ರೋದಿಸುತ್ತ ಕುಳಿತುಕೊಳ್ಳಬೇಕೇ' ಎಂದು ಅಂಗಲಾಚಿದಳು. ತಪಸ್ವೀ ಶಿವನ ಕಠಿಣಹೃದಯ, ಈಗ ಪಾರ್ವತಿಯ ಸಹವಾಸದಲ್ಲಿ ಮೃದುವಾಗಿತ್ತು. ' ನಿನ್ನ ಪತಿ ನಿನಗೆ ದೊರೆಯುತ್ತಾನೆ' ಎಂದು ಅವಳನ್ನು ಅನುಗ್ರಹಿಸಿದ. ಕಾಮನು ಮತ್ತೆ ರೂಪಧಾರಣ ಮಾಡಿ ಬಂದ ಪ್ರದೇಶವೇ ಈ ಆಸಾಮ—ಅದೇ ಕಾರಣದಿಂದ ಇದಕ್ಕೆ ಕಾಮರೂಪವೆಂಬ ಹೆಸರು ಪ್ರಾಪ್ತವಾಯಿತು.

ಸ್ವತಃ ಮನ್ಮಥನೇ ನಿಂತು ಶಿವ–ಪಾರ್ವತಿಯರಲ್ಲಿ ಪ್ರೇಮಬೀಜ ಬಿತ್ತಿದ; ಆನಂತರ ಶಿವನೇ ಅವನಿಗೆ ಜೀವದಾನ ಮಾಡಿದನೆಂದ ಬಳಿಕ ಅವನು ಶಿವ–ಪಾರ್ವತಿಯರ ಬಗ್ಗೆ Special interest ತೋರಿಸಬೇಡವೇ ? ಈ ಕಾರಣದಿಂದ ಶಿವ–ಪಾರ್ವತಿಯರಲ್ಲಿಯ ಪ್ರೇಮ ಸಲ್ಲಾಪ ಜಿಲ್ಲಾಟಗಳಿಗೆ ಮೇರೆಯೇ ಇಲ್ಲ. ಈ ನೀಲಾಚಲ ಅವರ Secret meetng place. ಈ ಪ್ರೇಮಿಗಳಿಗೆ-ಊರ್ವಶಿಯೂ ಸಹಾಯ ಮಾಡುತ್ತಾಳೆ. ನೀಲಾಚಲಕ್ಕೆ ಪಾರ್ವತಿಯು ಬಂದಾಗ, ಭಸ್ಮಕೂಟದಲ್ಲಿರುವ ಊರ್ವಶಿಯು ಅವಳಿಗೆ ಅಮೃತವನ್ನು ತಂದುಕೊಡುತ್ತಾಳಂತೆ. ಅದರಿಂದಲೇ ಊರ್ವಶಿಯ ಸಂರಕ್ಷಣೆಯ ಸಂಪೂರ್ಣ ಹೊಣೆಯನ್ನು ಶಿವನು ಹೊತ್ತಿದ್ದಾನೆ.

ಆಧುನಿಕ ಪ್ರೇಮಿಗಳು (Modern Romeos) ಇವರನ್ನು ನೋಡಿ ನಾಚಬೇಕು. ಶಿವನಿಗೆ ಪ್ರೇಮಸಲ್ಲಾಪದಿಂದ ಮಾತ್ರ ತೃಪ್ತಿ ಇಲ್ಲ. ಪಾರ್ವತಿಗೆ ನಾನಾತರದ ಬಂಗಾರದ ಆಭರಣಗಳನ್ನು ಇಡಿಸಿ, ಅವಳ ಮೈಗೆ ಗಂಧ ಲೇಪನಮಾಡಿ, ಅವಳ ಸೌಂದರ್ಯ ಸವಿಯಬೇಕೆಂಬ ಇಚ್ಛೆ ಅವನಿಗೆ ನಾಕಷ್ಟಿದೆ. ದಿನಾಲೂ ಪಾರ್ವತಿಯು ಮುಂಜಾನೆ ಸ್ನಾನಮಾಡುವಾಗ, ನದಿಯಲ್ಲಿ ಬಂಗಾರದ ಆಭರಣಗಳನ್ನು ತೊಳೆದ, ಗಂಧ ಮಿಶ್ರಿತ ನೀರು ಕಂಡುಬರುತ್ತಿತ್ತಂತೆ. ಅದೇ ಕಾರಣದಿಂದ ನದಿಯ ಪ್ರವಾಹವೆಲ್ಲ ಹಳದಿ ಬಣ್ಣವನ್ನೇ ತಾಳಿತಂತಿ. ಅದೇ ' ಸುವರ್ಣ ಶ್ರೀ ' ನದಿ, ಈಗಲೂ ಈ ನದಿಯ ನೀರು ಹಳದೀ ಬಣ್ಣದ್ದೇ ಇರುತ್ತವೆ. (ಈಗ ಈ ನದಿಗೆ ' ಸುಬನ ಸಿರಿ ' ಎಂದು ಕರೆಯುತ್ತಾರೆ.)

ಇಂತಹ ಕಾಮಾಖ್ಯಾ ದೇವಿಯೇ ಈ ಪ್ರದೇಶದ ಅಧಿದೇವತೆ; ಅಷ್ಟೇ ಅಲ್ಲ, ಈ ಪ್ರದೇಶವೇ ಕಾಮರೂಪ-ಕಾಮನು ರೂಪಧಾರಣ ಮಾಡಿ ಬಂದ ಸ್ಥಳ. ಅಂದ ಬಳಿಕ, ಇಂದ್ರಿಯ ನಿಗ್ರಹಕ್ಕೆ ಇಲ್ಲಿ ಅಷ್ಟು ಮನ್ನಣೆ ಇಲ್ಲದಿರಬಹುದು; ಜೀವನದಲ್ಲಿ ಒಳ್ಳೇ ಕಟ್ಟುನಿಟ್ಟುಗಳಿರ ಕೂಡದೆಂಬುದು ಇಲ್ಲಿಯ ಮುಖ್ಯ ತತ್ತ್ವವಾಗಿರಬೇಕು. ಈಗ ಪ್ರಚಾರದಲ್ಲಿದ್ದ ಅನೇಕ ಕತೆಗಳು ಸಹ ಇದನ್ನೇ ಆಧಾರವಾಗಿಟ್ಟು ಕೊಂಡಂತಿವೆ. ನರಕಾಸುರನ ಬಗೆಗೂ ಒಂದು ಕತೆ ಹೇಳುತ್ತಾರೆ:— ನರಕಾಸುರನು ಕಾಮಾಖ್ಯಾ ದೇವಿಯ ಅಸಾಧಾರಣ ಸೌಂದರ್ಯಕ್ಕೆ ಮೋಹಿತನಾಗಿ, ಆರಿವುಗೆಟ್ಟು ಅವಳನ್ನು ಲಗ್ನವಾಗಲಿಕ್ಕೆ ಕೇಳಿದನಂತೆ. ಅವಳು ಇವನ ಮೂರ್ಖತನಕ್ಕೆ ಮನಸ್ಸಿನಲ್ಲಿಯೇ ನಕ್ಕು ಅವನಿಗೆ ಹೇಳಿದಳಂತೆ: ' ಕೆಳಗಿನಿಂದ ಗುಡ್ಡದ ಮೇಲೆ, ನನ್ನ ಗುಡಿಗೆ ಬರಲಿಕ್ಕೆ ಕಲ್ಲಿನ ರಸ್ತೆಯನ್ನು ಒಂದೇ ರಾತ್ರಿಯಲ್ಲಿ ಮಾಡಿದರೆ, ನಿನ್ನನ್ನು ಲಗ್ನವಾಗುತ್ತೇನೆ ' ಎಂದು. ನರಕಾಸುರ ಅದನ್ನೇ ನಿಜವೆಂದು ನಂಬಿ ಕಲ್ಲುಗಳನ್ನು ಹೊತ್ತು ತಂದು ರಸ್ತೆಯನ್ನು ಪ್ರಾರಂಭಿಸಿದ. ಅದು ಮುಗಿಯಲಿಕ್ಕೆ ಬಂದಾಗ ಇನ್ನೂ ರಾತ್ರಿ ಇತ್ತು. ಆದರೆ ಕಾಮಾಖ್ಯಾದೇವಿಯ ಮಾಯೆಯಿಂದ ಅರ್ಧರಾತ್ರಿಯಲ್ಲಿಯೇ ಕೋಳಿ ಕೂಗಿತು. ರಸ್ತೆ ಮುಗಿಯುತ್ತ ಬಂದಿದ್ದರೂ ನರಕಾಸುರನ ಮನಸ್ಸು ಕನಸಾಗಿಯೇ ಉಳಿಯಿತು— ಈಗ ನಾವು ಕಾಮಾಖ್ಯಾ ಮಂದಿರಕ್ಕೆ ನಡೆಯುತ್ತ ಹೋಗುವ ದಾರಿಯನ್ನೇ ನರಕಾಸುರನು ಕಟ್ಟಿದ್ದೆಂದು ಹೇಳುತ್ತಾರೆ.

ಇನ್ನೊಂದು ಕತೆ ಕೂಥ (ಈಗಿನ ಕೂಥಬಿಹಾರ) ಅರಸರಿಗೆ ಸಂಬಂಧಿಸಿದ್ದು— ಕಾಮಾಖ್ಯಾ ದೇವಿಯು ಅಪೂರ್ವ ಸುಂದರಿಯೆಂದೂ, ದಿನಾಲೂ ರಾತ್ರಿ ಮಂದಿರದಲ್ಲಿ ನೃತ್ಯ ಮಾಡುತ್ತಾಳೆಂದೂ ಎಲ್ಲ ಕಡೆಗೂ ಸುದ್ದಿ ಇತ್ತು; ಆದರೆ ಆ ವೇಳೆಯಲ್ಲಿ ಅಲ್ಲಿ ಹೋಗಲಿಕ್ಕೆ ಎಲ್ಲರಿಗೂ ಪ್ರತಿಬಂಧವಿತ್ತು. ಈ ಸುದ್ದಿ ಕೂಥದ ಅರಸನಿಗೂ ಗೊತ್ತಾಗಿ, ಈ ನೃತ್ಯ ಮಾಡುತ್ತಿರುವ ಸುರಸುಂದರಿಯನ್ನು ನೋಡಬೇಕೆಂಬ ಪಟ್ಟದಿಂದ, ಎಲ್ಲರ ಹಿತವಚನಗಳನ್ನು ಲೆಕ್ಕಿಸದೆ, ಬಾಗಿಲ ಸಂದಿನೊಳಗಿಂದ ಮಂದಿರದೊಳಗೆ ಇಣುಕಿ ನೋಡಿದ. ಇದು ದೇವಿಯ ದೃಷ್ಟಿಗೆ ಬೀಳುವುದೊಂದೇ ತಡ, ಅವನು ನಿಂತಲ್ಲಿಯೇ ಶಿಲೆಯಾಗಿ ಬಿದ್ದ—ಅವನ ಕಲ್ಲಿನ ಮೂರ್ತಿ ಇನ್ನೂ ಅಲ್ಲಿಯೇ ಇದೆ. ದೇವಿಯು ಸಿಟ್ಟಿಗೆದ್ದು ಅವನ ವಂಶಜರನ್ನೇ ಶಪಿಸಿದಳು— ಅವನ ವಂಶಜರಲ್ಲಿ ಯಾರಾದರೂ ಕಾಮಾಖ್ಯಾ ಮಂದಿರದ ಕಡೆಗೆ ನೋಡಿದರೆ ಕೂಡಲೇ ಅವರು ಕಲ್ಲಾಗುತ್ತಾರೆಂದು, ಈಗಲೂ ಕೂಥ ಬಿಹಾರದ ರಾಜ ಮನೆತನದವರು ಈ ಮಾರ್ಗವಾಗಿ ಹೋಗುವಾಗ, ಮೋರೆ ಮುಚ್ಚಿಕೊಂಡೋ ಅಥವಾ ವಿರುದ್ಧ ದಿಕ್ಕಿಗೆ ಮೋರೆ ತಿರುವಿಕೊಂಡೋ ಹೋಗುತ್ತಾರೆ.

ಕಾಲಿಕಾ ಪುರಾಣದಲ್ಲಿ ಹೇಳಿದಂತೆ—ಪ್ರೇಮಮುಗ್ಧರಾದ ಶಿವ-ಪಾರ್ವತಿಯರು ಇಲ್ಲಿಯ ಸುತ್ತುಮುತ್ತಲಿನ ಸೃಷ್ಟಿಸೌಂದರ್ಯದಿಂದ ಪ್ರಸನ್ನಚಿತ್ತರಾಗಿ, ಇಲ್ಲಿಯ ಜನರ ಸೇವೆಯಿಂದ ಸುಪ್ರೀತರಾಗಿ, ಈ ಪ್ರದೇಶದ— ಕಾಮರೂಪದ ಜನರನ್ನೆಲ್ಲ ಅನುಗ್ರಹಿಸಿದರಂತೆ— ಪ್ರತಿಯೊಬ್ಬ ಸ್ತ್ರೀಯಲ್ಲಿ ಕಾಮಾಖ್ಯಾ ದೇವಿಯ ಮತ್ತು ಪ್ರತಿಯೊಬ್ಬ ಪುರುಷನಲ್ಲಿ ಶಿವನ ಅಂಶವು ಇರಲೆಂದು, ' ಹಾಗಾದರೆ ಇದರ ಮುಂದಿನ ಪರಿಣಾಮ ?' ಎಂದು ನಾನು ಕೇಳಿದೆ.

' ಅದೂ ಒಳ್ಳೆ ಮೋಜಿದೆ. ಇದರಿಂದ ಕಾಮರೂಪದಿಂದ ಎಲ್ಲರೂ ಸ್ವರ್ಗಕ್ಕೇನೇ ಹೋಗುತ್ತಿದ್ದು,ಯಮನು ನರಕರ ಬಾಗಿಲನ್ನು ಮುಚ್ಚುವ ಪ್ರಸಂಗವೇ ಬಂದಿತು. ಇದಕ್ಕೆ ದೇವತೆಗಳು ಹೂಡಿದ ಉಪಾಯ, ಅದರಿಂದ ಹುಟ್ಟಿಕೊಂಡ ವಾಮಾಚಾರ ಪೂಜೆ (ದೇವಿಯ) ಇವುಗಳನ್ನು ಕುರಿತು ನಿಮಗೆ ಮುಂದಿನ ಸಾರೆ ಹೇಳುತ್ತೇನೆ. ಅಥವಾ ನಾಳೆ ಬೆಳಗ್ಗೆ ಕಾಮಾಖ್ಯಾ ಮಂದಿರಕ್ಕೆ ಹೋಗುತ್ತೇವೆಯಲ್ಲವೇ ? ದಾರಿಯಲ್ಲಿ ಹೇಳುತ್ತೇನೆ' ಎಂದು ಪಂಡಿತಜಿ ಹೇಳಿದರು.

ನಾನು ಅಲ್ಲಿಂದ ಮನೆಯ ಕಡೆಗೆ ಹೊರಟೆ.

● ರೊಮ್ಯಾಂಟಿಕ್ ಪೇಶಂಟ್ ●

(ಸಣ್ಣ ಕಥೆ)

'ಆನಂದಕಂದ' ಧಾರವಾಡ

ಪ್ರೇಮದ ಮುಖಪರಿಚಯವೇ ಇಲ್ಲದ ಕಾಮುಕಿಶಾಚಿಯ ಕೈಯಲ್ಲಿ ಸಿಕ್ಕ ಸೌಂದರ್ಯಸುಮವೊಂದ ಜೀವನದ ಕಥೆಯಿದು. ಕುಸುಮಮಾಲೆಗೆ, ತಾನೆಂದೂ ಕಂಡರಿಯದ ನಿಷ್ಕಾಮಪ್ರೇಮದ ಪರಿಚಯವಾಯಿತು. ಆಕೆ ಅದರ ಆಶ್ರಯ ಬಯಸಿದಳು.

ನಮ್ಮ ಆಸ್ಪತ್ರೆಯ ಜನರಲ್ ವಾರ್ಡಿಗೆ ಆ ರೋಗಿಯನ್ನು ತಂದು ಸೇರಿಸಿದಾಗ, ಅವಳು ಹೆಚ್ಚು ದಿನ ಬದುಕಬಹುದೆಂದು ನಾನೇನೂ ಭಾವಿಸಿರಲಿಲ್ಲ. ಮುಖ್ಯ ಡಾಕ್ಟರು ಕೂಡ ಆ ಹೆಣ್ಣುಮಗಳನ್ನು ಎಲ್ಲ ರೀತಿಯಿಂದಲೂ ಪರೀಕ್ಷಿಸಿ, ಸಂಪೂರ್ಣ ನಿರಾಶೆಯನ್ನೇ ವ್ಯಕ್ತಪಡಿಸಿದ್ದರು. ಸಾಮಾನ್ಯ ಜನರಲ್ಲಿಯ ರೋಗಿಯಾದ್ದರೆ, ಅಂತಹ ಅವಸ್ಥೆಯಲ್ಲಿ, ನಮ್ಮ ಆಸ್ಪತ್ರೆಯಲ್ಲಿ ಪ್ರವೇಶವೇ ದೊರೆಯುತ್ತಿರಲಿಲ್ಲ; ಆದರೆ ಆಕೆ ಒಬ್ಬ ಪೋಲಿಸ್ ಇನ್‌ಸ್ಪೆಕ್ಟರನ ಹೆಂಡತಿ. ಆತನು ಕಲಿಕ್ಟರ ಕಡೆಯಿಂದ ನಮ್ಮ ಮುಖ್ಯ ಡಾಕ್ಟರಿಗೆ ಪತ್ರವನ್ನು ಬೇರೆ ತೆಗೆದುಕೊಂಡು ಬಂದಿದ್ದ. ಹಾಗೆ ನೋಡಿದರೆ ನಮ್ಮ ಆಸ್ಪತ್ರೆಗೆ ಸರಕಾರದ ಸಂಬಂಧವೇನೂ ಇರಲಿಲ್ಲ; ಕೇವಲ ಜನತೆಯ ಕಲ್ಯಾಣಕ್ಕಾಗಿ, ಜನಸಾಮಾನ್ಯರ ಉದಾರಾಶ್ರಯದಿಂದಲೇ ಇದು ನಡೆಯುವುದು. ಆದರೂ ಸರಕಾರೀ ಅಧಿಕಾರಿಗಳು, ಅವರ ಸಂಬಂಧಿಗಳು ರೋಗಿಗಳಾಗಿ ಇಲ್ಲಿಗೆ ಬಂದಾಗ, ಮಿಕ್ಕವರಿಗಿಂತ ಅವರಿಗೆ ಹೆಚ್ಚಿನ ಸೌಕರ್ಯಗಳು ದೊರೆಯುವುವು.

ಮುಂದೆ ಆಗುವುದೆಲ್ಲ ಇಂದೆಯೆ ನಮಗೆ ತಿಳಿಯುತ್ತಿದ್ದರೆ, ಮಾನವ ಜೀವನದ ನಾಟಕ ಇಷ್ಟೊಂದು ವಿವಿಧ ರಸಪೂರ್ಣವಾಗಿ ಪರಿಣಮಿಸುತ್ತಿರಲಿಲ್ಲ. ವಿಶಾಲವಾದ ಮಾನವಲೋಕದ ಮಾತೇಕೆ – ಒಂದೆ ಒಂದು ವ್ಯಕ್ತಿ ಕೂಡ ವರ್ತಮಾನ ಕ್ಷಣವನ್ನು ಬಿಟ್ಟು ಮುಂದಿನ ಕ್ಷಣದಲ್ಲಿ ಏನಾದೀತೆಂಬುದನ್ನು ಗ್ರಹಿಸಲಾರ. ಅದನ್ನು ತಿಳಿದುಕೊಳ್ಳುವುದಕ್ಕಾಗಿಯೇ ತರ್ಕ, ವೇದಾಂತ, ಜ್ಯೋತಿಷ್ಯ, ಕಾಲಜ್ಞಾನ ಇವೆಲ್ಲ ಹುಟ್ಟಿಕೊಂಡುವಂತೆ; ಆದರೆ ಮಾನವನ ಮನಸ್ಸು ಇವೆಲ್ಲವುಗಳನ್ನೂ ಸುಳ್ಳು ಮಾಡಿ, ತನ್ನದೇ ಆದ ಬೇರೆ ರೀತಿಯ ಭವಿಷ್ಯವನ್ನು ನಿರ್ಮಿಸುವ ಸಾಮರ್ಥ್ಯದಿಂದ ಕೂಡಿರುವುದು. ಈ ಮನಸ್ಸಿನ ಪವಾಡದ ರಹಸ್ಯ ತಿಳಿಯದಂತಾದಾಗ, ಆ ಪರಿಣಾಮವ ಕಾರಣ 'ದೈವ' ಎಂದು ತಿಳಿಯುವ ಸಂಪ್ರದಾಯ ನಮ್ಮಲ್ಲಿ ಬೆಳೆದುಬಂದಿರಬಹುದು.

ರೋಗಿ–ಹೆಣ್ಣುಮಗಳನ್ನು ಆಕೆಯ ಗಂಡನೇ ಆಸ್ಪತ್ರೆಗೆ ಕರೆದು ತಂದಿದ್ದ. ಆಗಿನ ಅವನ ಕಂಗೆಟ್ಟ ಅವಸ್ಥೆಯನ್ನು ನೋಡಿದರೆ, ಅವ ನೊಬ್ಬ ಪೋಲೀಸ್ ಇನ್‌ಸ್ಪೆಕ್ಟರಾಗಿ ಇರಬಹುದೆಂದು ಯಾರಿಗೂ ಎನಿಸುತ್ತಿರಲಿಲ್ಲ. ಕೇವಲ ದುಃಖದ ಪ್ರತಿಪೆಯಂತೆ ಕಾಣುತ್ತಿದ್ದ. ಮುಖ್ಯ ಡಾಕ್ಟರರೆದುರು ಅವನು ಆಡಿದ ಮಾತುಗಳನ್ನು ಕೇಳಿದವರಿಗೆ, ರೋಗಿ–ಹೆಂಡತಿ ಒಂದು ವೇಳೆ ಸತ್ತುಹೋದರೆ, ಈತನೇನೂ ಜೀವಿಸಿ ಉಳಿಯಲಾರ–ಎನಿಸುವಂತಿದ್ದ. ತಾರುಣ್ಯ, ಸೌಂದರ್ಯ ಯಾವುದರ ಕುರುಹೂ ಇಲ್ಲದ ಆ ಎಲುಬಿನ ಹಂದರದ ಬಗೆಗೆ ಆತನ ಆಸ್ಥೆಯೆಷ್ಟು .... ಪ್ರೀತಿಯೆಂತಹದು! ನೋಡಿ, ಆ ಮನುಷ್ಯನ ವಿಷಯದಲ್ಲಿ ನನಗೆ ತುಂಬ ಮರುಕವುಂಟಾಯಿತು. 'ಅಯ್ಯೋ ಪಾಪ! ಈತನ ಉತ್ಕಟ ಪ್ರೇಮಕ್ಕಾಗಿಯಾದರೂ ಈ ರೋಗಿ ಬದುಕಬೇಕು' ಎಂದು ನನ್ನಲ್ಲಿ ನಾನೇ ನುಡಿದುಕೊಂಡೆ.

ರೋಗಿಯ ಹೆಸರು ಕುಸುಮಮಾಲಾಬಾಯಿ. ಹೆಸರನ್ನು ಕೇಳಿದಾಗ ಒಂದು ಬಗೆಯ ಮರುಕದ ಮೆಲುನಗೆ ನನ್ನ ಮುಖದಲ್ಲಿ ಸುಳಿಯದೆ ಇರಲಿಲ್ಲ. ಆಕೆಯ ಗಂಡ ಪ್ರಥಮಪ್ರಣಯದ ಭರದಲ್ಲಿ ಮನಃಪೂರ್ವಕವಾಗಿ ಈ ಹೆಸರನ್ನು ಇರಿಸಿರಬೇಕು; ಆದರೆ ಇಂದು ಕುಸುಮ–ಮಾಲೆಯ ಒಂದು ಲಕ್ಷಣವೂ ಆಕೆಯ ದೇಹದಲ್ಲಿ ಉಳಿದಿರಲಿಲ್ಲ. ಮಾಲೆಯ ಎಲ್ಲ ಕುಸುಮಗಳೂ ಬಾಡಿ ಬತ್ತಿ ಒಣಗಿಹೋಗಿದ್ದುವು. ಆದರೂ ಆಕೆ ಕಣ್ಣರಳಿಸಿ ಗಂಡನನ್ನು ದೈನ್ಯಭಾವದಿಂದ ನೋಡುತ್ತಿರುವಾಗ, ಅಲ್ಲಿ ಎಂತಹವೋ ಹೂಗಳೆರಡು ಮೂಡಿ ಮಾಯವಾಗುತ್ತಿದ್ದುವು. ಪತಿಯ ವಿಷಯದಲ್ಲಿ ಆ ಸತಿಗೆ ತುಂಬ ಪ್ರೀತಿಯಿರಬೇಕೆಂಬುದನ್ನು – ಆ ಕಣ್ಣುಗಳನ್ನು ನೋಡಿದವರು– ಯಾರೂ ಒಪ್ಪಬಹುದಾಗಿತ್ತು. ಆಕೆಯು ಆ ನೋಟಗಳೂ ನನ್ನ ಹೃದಯದಲ್ಲಿ ಕಳವಳವನ್ನು ಹುಟ್ಟಿಸಿದುವು.

ಕುಸುಮಮಾಲಾಬಾಯಿ ಜನರಲ್ ವಾರ್ಡಿನ ಮಂಚವೊಂದರ ಮೇಲೆ ಮಲಗಿಕೊಂಡಳು .... ಎಂದರೇನು? ಪರಿಚಾರಕರು ಅವಳನ್ನು ತಂದು ಅಲ್ಲಿ ಮಲಗಿಸಿದರು. ನಾನು ಆ ವಾರ್ಡಿನ ಹೆಡ್‌ನರ್ಸ್–ಮುಖ್ಯ ಡಾಕ್ಟರು ನನಗೆ ಆ ರೋಗಿಯನ್ನು ವಿಶೇಷರೀತಿಯಿಂದ ನೋಡಿಕೊಳ್ಳಲು ಎಚ್ಚರವಿತ್ತರು. ನಾನೂ ಈ ಮಾತನ್ನು ನಿಕ್ಕ ನರ್ಸ್; ಗಳಿಗೂ ದಾದಿಯರಿಗೂ ಆಳುಗಳಿಗೂ ಹೇಳಿದೆ. ಮುಖ್ಯ ಡಾಕ್ಟರರ ದಾಕ್ಷಿಣ್ಯದ ರೋಗಿಯೆಂದ ನೋಲೆ, ಕುಸುಮಮಾಲಾಬಾಯಿಗೆ ಅಲ್ಲಿ ಸೇವೆ–ಶುಶ್ರೂಷೆಗಳ ಕೊರತೆ ಆಗಬಹುದೆ? ವಾರ್ಡ್ ಡಾಕ್ಟರು, ನರ್ಸುಗಳು, ಕಾಂಪಾವುಂಡರು, ದಾದಿಯರು–ಎಲ್ಲರೂ ಅವಳ ಯೋಗ–ಕ್ಷೇಮುಗಳನ್ನು ವಿಚಾರಿಸುವವರೆ!

ಟಿ. ಬಿ. ರೋಗದ ರೀತಿಯೊ, ನಮ್ಮ ಆಸ್ಪತ್ರೆಯ ಉಪಚಾರದ ಗುಣವೊ– ಎಂತಹ ಕಠಿಣಪರಿಸ್ಥಿತಿಯಲ್ಲಿರುವ ರೋಗಿಯನ್ನು ಇಲ್ಲಿ ತಂದು ಹಾಕಿದರೂ— ಪ್ರಾರಂಭದ ದಿನಗಳಲ್ಲಿ, ರೋಗ ಗುಣವಾಗ

ಬಹುದೆಂಬ ಆಶೆಯು ಉಂಟಾಗದೆ ಇರದು. ತಿಂಗಳ ಕೊನೆಗೆ ಕುಸುಮ-ಮಾಲೆಯ ಗಂಡ ಅವಳನ್ನು ನೋಡಲು ಬಂದಾಗ, ಹೆಂಡತಿಯ ಪ್ರಕೃತಿಯಲ್ಲಿ ಎಷ್ಟೋ ಸುಧಾರಣೆಗಳಾಗಿರುವುದನ್ನು ಕಂಡು, ಮುಖದ ತುಂಬ ಸಂತೋಷವನ್ನು ವ್ಯಕ್ತಪಡಿಸಿಕೊಂಡ. ಮುಖ್ಯ ಡಾಕ್ಟರಿಗೂ ನಮಗೂ ಅಭಿನಂದನೆಗಳನ್ನು ಸಲ್ಲಿಸಿದ. ಕುಸುಮಮಾಲೆ ಕೂಡ ಒಣಗಿದ ಕಣ್ಣುಗಳ ನಗೆನೋಟಗಳಿಂದ ಗಂಡನನ್ನು ನೋಡಿದಳು. ಬೇಗನೆ ತನಗೆ ಗುಣವಾಗುವುದೆಂಬ ಆಶೆಯನ್ನೂ ವ್ಯಕ್ತಪಡಿಸಿದಳು. ಆತ ಭಾವಪರವಶನಾಗಿ, ನಾನೆಲ್ಲರೂ ಅಲ್ಲಿಯೆ ನಿಂತಿರುವಾಗಲೆ, ಆಕೆಯ ಕೆನ್ನೆಗಳ ಮೇಲೆ ಕೈಯಾಡಿಸಿದ, ಕುರುಳುಗಳನ್ನು ನೇವರಿಸಿದ. ಮುಖ್ಯ ಡಾಕ್ಟರ ಅನುಜ್ಞೆಯಂತೆ ನಾನು ಆಗಲೇ ದಾದಿಗೆ ಹೇಳಿ, ಕ್ರಿಮಿನಾಶಕ ವಿಶ್ರಾಣವನ್ನೂ ಬಿಸಿನೀರನ್ನೂ ತರಿಸಬೇಕಾಯಿತು. ಮುಖ್ಯ ಡಾಕ್ಟರರ ಹೇಳಿಕೆಯಂತೆ ಆತ ಕ್ರಿಮಿನಾಶಕ ವಿಶ್ರಾಣವನ್ನು ಕೈಗೆ ಲೇಪಿಸಿಕೊಂಡು, ಸಬುಕಾರ ಹಚ್ಚಿ ಜೈತೊಳೆದುಕೊಂಡ. ಕುಸುಮಮಾಲೆ ಅದನ್ನು ನೋಡಿ. ಮುಖ ಮುರುರಿಸಿದಳು, ನೀಳವಾದ ಉಸಿರೊಂದನ್ನು ಹೊರಗೆ ಹಾಕಿದಳು. ಅವಳ ವತಿಯು ಅನಿವಾರ್ಯಭಾವನೆಯನ್ನು ಅವಳ ಕಡೆಗೆ ಸೂಸಿ ಹೊಟ್ಟುಹೋದ.

ಎರಡನೆಯ ತಿಂಗಳಲ್ಲಿ ಆ ರೋಗಿಯ ಜ್ವರವನ್ನು, ನಮ್ಮ ಆಸ್ಪತ್ರೆಯ ಔಷಧೋಪಚಾರ ಸ್ವಲ್ಪ ತಗ್ಗಿಸಿತು. ಎಂತಲೇ ಆಕೆಯ ಹಸ್ಯ ಪ್ರಮಾಣವೂ ಸ್ವಲ್ಪ ಹೆಚ್ಚಾಯಿತು. ಕೊಟ್ಟಷ್ಟು ಹಾಲು ಹಣ್ಣು ಸೇವಿಸತೊಡಗಿದಳು; ಉಟದ ತುಕ್ಕುಗಳ ಸಂಖ್ಯೆಯೂ ಬೆಳೆಯಿತು. ಎರಡನೆಯ ತಿಂಗಳ ಕೊನೆಗೆಂದರೆ, ಆ ಮಾಲೆಯ ಕುಸುಮದ ಗುರುತುಗಳು ಒಡೆದು ತೋರತೊಡಗಿದುವು. ಸುಕ್ಕುಗಟ್ಟಿ ಬಿಳಿಚಿಕೊಂಡಿದ್ದ ಕೆನ್ನೆಗಳು ನಡುವೆ ತುಂಬಿಕೊಂಡು, ಜೊಂಬಣ್ಣದ ಛಾಯೆಯಿಂದ ಕೂಡಿದ್ದುವು. ಕಣ್ಣಲ್ಲಿ ಕಳೆಯು ಜರಿವಾಡತೊಡಗಿತ್ತು. ಒಣಗಿದ ಮೈ ಗರಿಗರಿಕೆಯು ಬಣ್ಣಕ್ಕೆ ತಿರುಗತೊಡಗಿತ್ತು. ನಾನು ಹೋದಾಗಲೆಲ್ಲ ಅವಳನ್ನು ನೋಡುವುದರಲ್ಲಿ ಕೆಲವು ನೀಳಿಯುಸ್ನು ಕಳೆಯುತ್ತಿದ್ದೆ. ಬರು ಬರುತ್ತ ನನಗೆ ಹೀಗೆ ಎನಿಸತೊಡಗಿತು : 'ಈಕೆಯ ಪತಿ ಇವಳಿಗೆ ಕುಸುಮಮಾಲೆ ಎಂದು ಹಸರಿಟ್ಟುದರಲ್ಲಿ ಅಸ್ವಾಭಾವಕನೇನೂ ಇರಲಾರದು !

ಎರಡನೆಯ ತಿಂಗಳ ಕೊನೆಯಲ್ಲಿಯೂ ಕುಸುಮಮಾಲೆಯ ಗಂಡ ಆಕೆಯನ್ನು ನೋಡಿಹೋಗಲು ಬಂದ. ಡಾಕ್ಟರೊಂದಿಗೆ ಅವನು ಹೆಂಡತಿಯ ಬಳಿಗೆ ಬಂದಾಗ, ಬಾಯಿಗೆ ವಸ್ತ್ರವನ್ನು ಮರೆಮಾಡಿ ಆಕೆ ಕೆಮ್ಮುತ್ತಿದ್ದಳು.ಕೆಮ್ಮಿ ಕೆಮ್ಮಿ ಬಾಯಲ್ಲಿ ಬಂದ ಲಾಗುಳನ್ನು ಪಾತ್ರೆಯಲ್ಲಿ ಉಗುಳಿದಳು. ಆಗ ಪತ್ತಿರ ಹೋಗಲು ಮುಂದಾಗಿದ ಆತನನ್ನು ಡಾಕ್ಟರರು ಕೈಹಿಡಿದು ನಿಲ್ಲಿಸಿದರು. ಹೆಂಡತಿಯ ಮುಖದಲ್ಲಾದ ಬದಲಾವಣೆಯು ಆತನ ದೇಹದಲ್ಲಿ ಪುಂಜಿನ್ನು ಹರಿದಾಡಿಸಿತು; ಮನಸ್ಸಿನಲ್ಲಿ ಒಂದು ಬಗೆಯ ಆವೇಗವನ್ನು ಹುಟ್ಟಿಸಿತು. ಗಂಡನ ಆ ಅವಸ್ಥೆಯನ್ನು ನೋಡಿ ಕುಸುಮಮಾಲೆಗೆ ಹೆದರಿಕೆಯೆನಿಸಿತೇನೋ; ಆಕೆ ಭಯವು ಬೆರೆತ ನೋಟಗಳಿಂದ ಗಂಡನನ್ನು ನಿಟ್ಟಿಸಿ ನೋಡಿದಳು; ಬಳಿಕ ಹೇಳಿದಳು :

"ನಾನೀಗ ಚೆನ್ನಾಗಿ ಇದ್ದೇನೆ. ಜ್ವರಬರುವುದು ಕಡಮೆಯಾಗಿದೆ. ಊಟದಲ್ಲಿ ಸ್ವಲ್ಪು ರುಚಿಯೂ ಬಂದಿದೆ. ಬೇಗನೆ ನಾನು ಗುಣಹೊಂದಿ ಮನೆಗೆ ಬರಬಹುದು !"

ಮಾತಿನ ಕೊನೆಯೊಂದಿಗೆ ಕುಸುಮಮಾಲಾ ಮತ್ತೆ ಕೆಮ್ಮತೊಡಗಿದಳು. ಆಕೆಯ ಗಂಡ ಮುಖ್ಯ ಡಾಕ್ಟರರ ಮುಖದ ಕಡೆಗೆ ನೋಡತೊಡಗಿದ; ಮುಖ್ಯ ಡಾಕ್ಟರೂ ಇವನನ್ನು ನೋಡತೊಡಗಿದರು. ಇಬ್ಬರ ಮುಖದಲ್ಲಿಯೂ ನಿರಾಶೆಯ ರೇಖೆಗಳು ಮಾಡಿ ನಿಂತಿದ್ದುವು. ಬಹುಶಃ ಮಾರ್ಡಿಗೆ ಬರುವುದಕ್ಕಿಂತ ಸೊದಲು, ಅವರಲ್ಲಿ ಏನಾದರೂ ಮಾತು-ಕಥೆಗಳು ನಡೆದಿರಬಹುದು.

ಕುಸುಮಮಾಲಾಬಾಯಿ, ತನ್ನ ಪತಿ ಹಿಂದಿನಂತೆ ತನ್ನ ಮೈದಡವಿ ಹೋಗಬಹುದೆಂದು ನಿರೀಕ್ಷಿಸಿದ್ದಳೋ ನೋ; ಆದರೆ ಆತ ಹಾಗೆ ಮಾಡದೆ, ಬರೀ ಒಂದು ಸಲ ಬಿರುಗಣ್ಣಿಂದ ನೋಡಿ, ಮುಖ್ಯ ಡಾಕ್ಟರರ ಜೊತೆಗೆ ಹೊರಟುಹೋದ. ರೋಗಿ ದೀರ್ಘವಾಗಿ ಒಂದು ಉಸಿರನ್ನು ಜಲ್ಲಿ, ಮಗ್ಗಿಲನ್ನು ಬದಲಿಸಿ ಮಲಗಿಕೊಂಡಳು. ಅಂದು ಸಂಜೆ ಅವಳಿಗೆ ಮತ್ತೆ ಜ್ವರವು ಏರಿತು.

ಕುಸುಮಮಾಲಾಬಾಯಿಯದು ಸಂಪೂರ್ಣವಾಗಿ ಬಲಿತ ಬೇನೆ. ಪಕ್ಷಕ್ಕೊಮ್ಮೆ ನಡೆಯುವ 'ಸ್ಕ್ರೀನಿಂಗ್'ನಲ್ಲಿಯೂ ತಿಂಗಳಿಗೊಮ್ಮೆ ನಡೆಯುವ ಎಕ್ಸರೇ ಚಿತ್ರಪರೀಕ್ಷೆಯಲ್ಲಿಯೂ, ಯಾವ ಬದಲಾವಣೆಯೂ ಕಂಡುಬರುತ್ತಿರಲಿಲ್ಲ. ನಾಲ್ಕು ದಿನ ಹಾಗೆ— ನಾಲ್ಕು ದಿನ ಹೀಗೆ— ಈ ರೀತಿಯಲ್ಲಿ ಆಶೆ-ನಿರಾಶೆಗಳ ಉಯ್ಯಲೆಯನ್ನಾಡುತ್ತಲೇ ಆಕೆ ಆಸ್ಪತ್ರೆಯಲ್ಲಿ ದಿನಗಳನ್ನು ಕಳೆಯತೊಡಗಿದಳು. ತಿಂಗಳ ಕೊನೆಗೆ, ಗಂಡನ ಕಡೆಯಿಂದ ಆಸ್ಪತ್ರೆಯ ಕಾರ್ಯಾಲಯದಲ್ಲಿ ಹಣದ ಸಲುವಳಿಯಾಗುವುದು. ಇಂತಹ ರೋಗಿ ಆಸ್ಪತ್ರೆಯಲ್ಲಿ ಇರುವುದರಿಂದ, ಆಸ್ಪತ್ರೆಯ ಸಂಚಾಲಕರಿಗೆ ಬೇಸರವಾದರೂ ಏಕೆ ಆಗಬೇಕು ? ಇಂತಹ ರೋಗಿಗಳನ್ನೇ ಅಲ್ಲವೇ ಅವರು ಮನವಾರೆ ಬಯಸುವುದು ! ಆಸ್ಪತ್ರೆಗೆ ಬಂದ ರೋಗಿ ಬೇಗನೆ ಗುಣಹೊಂದಿ ಮನೆಗೆ ಮರಳಿದರೂ ಅವರಿಗೆ ಪ್ರಯೋಜನವಿಲ್ಲ; ಬೇಗನೆ ಸತ್ತುಹೋದರೂ ಪ್ರಯೋಜನವಿಲ್ಲ. ಆಸ್ಪತ್ರೆಯ ಸಂಚಾಲಕರ ಈ ಧನಲಾಲಸೆ ಬಡಪಳ ಸಲ ನನಗೆ ಕಳವಳವನ್ನು ಉಂಟುಮಾಡುವುದು; ಈ ಕೆಲಸ ಬಿಟ್ಟು ಬೇರೆ ಕಡೆಗೆ ಹೋಗಬೇಕೆಂದೂ ಎನಿಸುವುದು. ಆದರೆ ಯಾರ ಮನೆಗೆ ಹೋದರೂ ದೋಸೆಗೆ ತೂತು ಇದ್ದೇ ಇರುವುವು— ಎಂಬ ವ್ಯವಹಾರಬುದ್ಧಿಯ ಮಾತನ್ನು ಕೇಳಿ, ಇಲ್ಲಿಯೆ ಇದ್ದುಬಿಟ್ಟೆವ್ವೇನೆ— ಆಯಿತು.

ಕುಸುಮಮಾಲಾ ಬಂದು ಆರು ತಿಂಗಳು ಕಳೆದುವು. ಆಕೆಯ ಪ್ರಕೃತಿಯಲ್ಲಿ ಯಾವ ಸುಧಾರಣೆಗಳೂ ಇದುವರೆಗೆ ಕಂಡುಬರಲಿಲ್ಲ. ವಿಶೇಷವೆಂದರೆ, ನಮ್ಮ ಆಸ್ಪತ್ರೆಯ ಔಷಧೋಪಚಾರ, ಅವಳನ್ನು ಇಲ್ಲಿಯ ತನಕ ಸಾಯಗೊಟ್ಟರಲ್ಲವಷ್ಟೆ. ಕುಸುಮಮಾಲೆಯ ಗಂಡ, ಮೂರನೆಯ ತಿಂಗಳಿಂದಲೂ ಅವಳನ್ನು ಕಾಣಲು ಇಲ್ಲಿಗೆ ಬರುತ್ತಿರಲಿಲ್ಲ. ಪತ್ರ ಬರೆದು ನೂರಾರು ಕಾರ್ಯಭಾರಗಳ ನೆವವನ್ನು ತಿಳಿಸುತ್ತಿದ್ದ. ಪತ್ರ ಬಂದ ಮೂರು ನಾಲ್ಕು ದಿನಗಳವರೆಗೂ ರೋಗಿಯ

ಅಸ್ವಾಸ್ಥ್ಯ ಹೆಚ್ಚುತ್ತಿತ್ತು. ಮೈಯಲ್ಲಿ ಉಷ್ಣತಾಮಾನ ಬೆಳೆಯುತ್ತಿತ್ತು.

ರೋಗಿ ಆಗಾಗ ತನ್ನ ಬಾಳನ್ನು ಕುರಿತು ಹೇಳುತ್ತಿದ್ದಳು: ತಾಯಿ-ತಂದೆಗಳಿಗೆ ತಾನೊಬ್ಬಳೇ ಮಗಳು. ತಂದೆ ಮೊದಲಿನಿಂದಲೂ ಸೆರೆಗುಡುಕ. ಮನೆಯ ಕಡೆಗೆ ಲಕ್ಷ್ಯವೇ ಇರದು. ಇದ್ದ ಹೊಲ-ನೆಲ ಆತನ ವ್ಯಸನಕ್ಕಾಗಿ ವರ್ಷ-ವರ್ಷವೂ ಕರಗತೊಡಗಿತ್ತು. ತಾಯಿ ಸುಶೀಲಳು. ಇದ್ದುದರಲ್ಲಿಯೇ ತನ್ನನ್ನು ಅಚ್ಚುಕಟ್ಟಾಗಿ ಬೆಳೆಯಿಸಿದಳು; ಹೈಸ್ಕೂಲಿನ ಐದನೆಯ ತರಗತಿಯ ವರೆಗೆ ಓದಿಸಿದಳು. ತನ್ನ ಜೀವನವಿಕೆಗೆ ಮೆಚ್ಚಿ, ಯಾವ ಆಶೆಯನ್ನೂ ಮಾಡದೆ, ಪೋಲಿಸ್ ಸಬ್ ಇನ್‌ಸ್ಪೆಕ್ಟರ್ ಮಾಲೋಜಿರಾಯ ತನ್ನನ್ನು ಮದುವೆ ಮಾಡಿಕೊಂಡ. ಒಳ್ಳೆಯ ಗಂಡನ ಕೈಯನ್ನು ಮಗಳು ಹಿಡಿದಳೆಂದು ತಾಯಿ ಹಿರಿಹಿರಿ ಹಿಗ್ಗಿದಳಾದರೂ, ಆ ಹಿಗ್ಗನ್ನು ಅನುಭವಿಸಲು ಬಹುಕಾಲ ಬದುಕಿ ಉಳಿಯಲಿಲ್ಲ, ಮದುವೆಯಾದ ಆರನೆಯ ತಿಂಗಳಲ್ಲಿಯೆ ಟೈಫಾಯ್ಡಿನಿಂದ ಅವಳು ಸತ್ತುಹೋದಳು. ತಂದೆ ಇದುವರೆಗೂ ಬದುಕಿ ಇದ್ದಾನೆ. ಆದರೆ ವ್ಯಸನಾಧೀನನಾದ ಅವನು ಇದ್ದರೂ ತನ್ನ ಪಾಲಿಗೆ ಸತ್ತಂತೆ....

ಗಂಡನ ರೀತಿ-ನಡತೆಗಳ ವಿಷಯದಲ್ಲಿ ಅವಳೆಂದೂ ನನ್ನೆದುರು ಮಾತನಾಡುತ್ತಿರಲಿಲ್ಲ. ಚಿಕ್ಕಪ್ರಾಯ; ಸಂಕೋಚವೋ ಏನೋ! ದಾಂಪತ್ಯ ಜೀವನದ ಪರಿಚಯವೇ ಇಲ್ಲದ ನಾನಾದರೂ ಅವಳನ್ನು ಆ ವಿಷಯದಲ್ಲಿ ಏಕೆ ಕೆದಕಿ ಕೇಳಬೇಕು? ಆದರೂ ಇಷ್ಟು ಮಾತ್ರ ಹೇಳಬಲ್ಲೆ; ಗಂಡನ ವಿಷಯದಲ್ಲಿ ಆಕೆಗೆ ಪ್ರೀತಿ ತುಂಬ ಇದ್ದಿತು; ತುಂಬ ಜ್ವರವು ಏರಿದಾಗ ಅವಳು ಆಗಾಗ ಕನವರಿಸುತ್ತಿದ್ದಳಂತೆ:

" ಅಯ್ಯೋ! ಮೈಯಲ್ಲಿ ಜ್ವರ! ನನ್ನನ್ನೀಗ ಬಿಟ್ಟುಬಿಡಿ!"

ಈ ಬಡಬಡಿಕೆಯನ್ನು ನಾನೂ ಒಂದೆರಡು ಸಲ ಕೇಳಿದ್ದೆ. ದಾದಿಯರು ಅನೇಕ ಸಲ ಕೇಳಿದ್ದರು. ಮುಖ್ಯ ಡಾಕ್ಟರರೆದುರು ನಾನು ಈ ವಿಷಯವನ್ನು ಹೇಳಿದಾಗ, ಅವರು ಮುಖವನ್ನು ಮುದುಡಿಸಿ, ಗಟ್ಟಿಯಾಗಿ ನಕ್ಕುಬಿಟ್ಟರು. ರೋಗಿಯ ಈ ಬಡಬಡಿಕೆಯ ಅರ್ಥ ಅವರಿಗೇನಾದರೂ ಆಗಿರಲೇಬೇಕು.

ಏಳನೆಯ ತಿಂಗಳು ಅರ್ಧ ಕಳೆದಿರಬಹುದು. ಒಂದು ಬೆಳಗಿನಲ್ಲಿ ಕುಸುಮಾಮಾಲೆಯ ಗಂಡ ಮಾಲೋಜಿರಾಯ, ಸೆರೆಗುಡುಕ ತಂದೆ ಪರಸಪ್ಪ ವಾರ್ಡಿನಲ್ಲಿ ಬಂದರು; ರೋಗಿಯ ಬಳಿಯಲ್ಲಿ ಕುಳಿತುಕೊಂಡರು. ತಂದೆ ಪರಸಪ್ಪ ಮಗಳಿಗಾಗಿ ಕಂಬನಿಸುರಿಸಿದ. ಇದುವರೆಗೆ ಬಂದು ನೋಡದಿದ್ದುದಕ್ಕಾಗಿ ತನ್ನನ್ನು ತಾನೇ ಬೈದುಕೊಂಡ. ಮಾಲೋಜಿರಾಯನೂ ಮುಖದಲ್ಲಿ ಕಳವಳವನ್ನು ತುಂಬಿಕೊಂಡು, ರೋಗಿಯ ಕಡೆಗೆ ನೋಡುತ್ತ ನಿಂತುಕೊಂಡಿದ್ದ. ಹಿಂದೆ ಬಂದಾಗ ತಾನು ನೋಡಿದುದಕ್ಕಿಂತ ರೋಗಿಯ ದೇಹಸ್ವಾಸ್ಥ್ಯ ಈಗ ಬಹಳ ಕೀಳುದೆಸೆಗೆ ಇಳಿದಿತ್ತು. ಕುಸುಮಮಾಲೆಯೂ ಕಂಬನಿ ಬತ್ತಿದ ಒಣಕಲು ನೋಟದಿಂದ ಗಂಡನನ್ನೊಮ್ಮೆ ತಂದೆಯನ್ನೊಮ್ಮೆ ನೋಡುತ್ತಲಿದ್ದಳು. ಆಗ ತಂದೆ ದುಃಖ ಬೆರೆತ ಧ್ವನಿಯಲ್ಲಿ ನುಡಿದ:

" ತಂಗೀ, ಕುಸುಮಾ! ಈ ಕಾಗದದ ಮೇಲೆ ಸಹಿಮಾಡು. ಆಸ್ಪತ್ರೆಯ ಡಾಕ್ಟರರಿಗೆ ನಿನ್ನ ಅಕ್ಷರಗಳನ್ನೂ ಪರೀಕ್ಷೆ ಮಾಡುವುದಿದೆಯಂತೆ!"

ಕುಸುಮಮಾಲೆ ನಡುಗುವ ಕೈಗಳಿಂದ ಕಾಗದ-ಪೆನ್ನುಗಳನ್ನು ತೆಗೆದುಕೊಂಡಳು. ತಂದೆ ತೋರಿಸಿದ ಸ್ಥಳದಲ್ಲಿ ಹೇಗೋ ಹೇಗೋ ಅಂಕಿತ ಹಾಕಿ ಕೊಟ್ಟಳು. ಆ ಕಾಗದದ ಮೇಲ್‌ಬದಿಯಲ್ಲಿ ಏನು ಬರೆದಿದೆಯೆಂಬುದನ್ನು ವಿಚಾರ ಮಾಡುವಷ್ಟು ಕುತೂಹಲವೂ ಆ ನಿತ್ರಾಣ-ರೋಗಿಯಲ್ಲಿರಲಿಲ್ಲ. ತಂದೆ, ಗಂಡ ಬಂದು ಸಹಿ ಮಾಡಿಸಿಕೊಳ್ಳುತ್ತಿರುವಾಗ, ಅದೇನೆಂದೂ ಅದೇಕೆಂದೂ ನಾವಾದರೂ ಏತಕ್ಕಾಗಿ ಕೇಳಬೇಕು? ಆಕೆ ಸಹಿಮಾಡಿ ಕೊಟ್ಟಾಗ, ಅವರಿಬ್ಬರ ಮುಖದಲ್ಲಿಯೂ ಸಮಾಧಾನದ ನಗೆ ಮಿಂಚಿದಂತಾಯಿತು. ಕೈಗೆ ಕಾಗದ ಬಂದವೇಲೆ, ಅವರು ಬಹಳ ಹೊತ್ತು ಅಲ್ಲಿ ನಿಲ್ಲಲಿಲ್ಲ. ತಂದೆ ಮೊದಲು ಮುಂದೆ ಹೆಜ್ಜೆಯಿರಿಸಿದ; ಗಂಡ ರೋಗಿಯನ್ನು 'ನೋಡುತ್ತ 'ನಾನು ಮತ್ತೆ ಬರುತ್ತೇನೆ' ಎಂದು ನುಡಿದು ಮಾನವನನ್ನು ಹಿಂಬಾಲಿಸಿದ. ದೈನ್ಯ ತುಂಬಿದ ನೋಟಗಳಿಂದ ಆಕೆ, ಅವರಿಬ್ಬರೂ ಹೋಗುವುದನ್ನು ನೋಡುತ್ತಿದ್ದಳು.

ಏಳನೆಯ ತಿಂಗಳು ಮುಗಿಯಿತು. ಎಂದಿನಂತೆ ಕುಸುಮಾಲೆಯ ಗಂಡನಿಂದ ಹಣವು ಬರಬೇಕಾದುದು ಈ ಸಲ ಬರಲಿಲ್ಲವೆಂದು ಕಾರ್ಯಾಲಯದಲ್ಲಿ ಮಾತನಾಡುತ್ತಿದ್ದರು. ವೇಳೆಗೆ ಸರಿಯಾಗಿ ಹಣವು ಬಾರದೆ ಹೋದರೆ, ಆಸ್ಪತ್ರೆಯ ಔಷಧೋಪಚಾರ, ಊಟ-ಉಪಾಹಾರ, ಎಲ್ಲವನ್ನೂ ನಿಲ್ಲಿಸಿಬಿಡಬೇಕೆಂದು ಇಲ್ಲಿಯ ಕಾನೂನು. ಆದರೆ ರೋಗಿಯ ಗಂಡ ಸರಕಾರಿಯ ಅಧಿಕಾರಿಯೆಂಬ ದಾಕ್ಷಿಣ್ಯದಿಂದಲೋ, ರೋಗಿಯ ಪರಾಧೀನತೆಯ ವಿಷಯಕವಾದ ಕರುಣೆಯಿಂದಲೊ, ಕಾರ್ಯಾಲಯದವರು ಕುಸುಮಮಾಲೆಯ ವಿಷಯದಲ್ಲಿ, ಈ ನಿಯಮವನ್ನು ಕೂಡಲೆ ಅಮಲಿನಲ್ಲಿ ತರಲಿಲ್ಲ. ನಾಲ್ಕೈದಿನ ಕಳೆಯುವುದರಲ್ಲಿಯೇ ಕುಸುಮಮಾಲೆಗೊಂದು ಪತ್ರ ಬಂದಿತು. ಅದು ಅವಳ ಗೆಳತಿಯ ಪತ್ರ. ರೋಗಿಯ ಹೇಳಿಕೆಯಂತೆ ನಾನೇ ಕವರನ್ನು ಒಡೆದು, ಒಳಗಿನ ಕಾಗದವನ್ನು ಆಕೆಯ ಕೈಯಲ್ಲಿ ಕೊಟ್ಟೆ. ಕಂಪಿಸುವ ಕೈಗಳಿಂದ ಅದನ್ನು ಹಿಡಿದುಕೊಂಡು, ಕಳೆಯಳಿದ ಕಣ್ಣುಗಳಿಂದ ಅದನ್ನು ಓದತೊಡಗಿದಳು. ಓದುವುದು ಮುಗಿದೊಡನೆ, ಬಲದ ಕೈಯಿಂದ ಎದೆಯನ್ನು ಹೊಡೆದುಕೊಂಡು 'ಅಯ್ಯೋ!' ಎಂದು ಕೆರುಚಿದಳು. ನಾನು ಗಾಬರಿಗೊಂಡವನಾಗಿ ಕೇಳಿದೆ:

" ಏಕೆ ತಾಯಿಾ, ಏನಾಯಿತು?"

ರೋಗಿ ಮಾತನೇನೂ ಆಡಲಿಲ್ಲ. ಎಲ್ಲಿಯ ಶಕ್ತಿ ಬಂದಿದ್ದಿತೋ! ರಭಸದಿಂದ ಕಾಗದವನ್ನು ಎತ್ತಿ ನನ್ನ ಕೈಗೆ ಕೊಟ್ಟಳು. " ನಾನಿದನ್ನು ಓದಬಹುದೇ?" ಎಂದೆ. ಆಕೆ ಮಾತನಾಡದೆ, ಸನ್ನೆಯಿಂದ ತನ್ನ ಒಪ್ಪಿಗೆಯನ್ನು ಸೂಚಿಸಿದಳು; ನಾನು ಕಾಗದ ಓದಿಕೊಂಡೆ:

" ಪ್ರಿಯಸಖಿ ಕುಸುಮಾ,

ನೀನು ಹೋಗಿ ಎಷ್ಟೋ ದಿನಗಳಾದುವು. ಇನ್ನೂ ನಿನ್ನ ಆರೋಗ್ಯ ಸರಿಯಾಗಲಿಲ್ಲವೇ ? ಅಲ್ಲಸೇ ಹುಚ್ಚಿ ! ಎಂತಹ ತಿಳಿಗೇಡಿ ನೀನು? ನಿನ್ನ ಗಂಡನಿಗೆ ಬೇರೆಯ ಮದುವೆ ಮಾಡಿಕೊಳ್ಳಲು ನೀನು ಸಮ್ಮತಿ ಪತ್ರ ಬರೆದುಕೊಡಬೇಕೆ ? ತನ್ನ ಮಗಳೇ ಒಪ್ಪಿ ಸಹಿಮಾಡಿದ್ದಾಳೆಂದು ನಿಮ್ಮ ತಂದೆಯೂ ಆ ಸಮ್ಮತಿಪತ್ರದ ಕೆಳಗೆ ಬರೆದುಕೊಟ್ಟಿದ್ದಾನಂತೆ. ಅವನದೇನು ಬಿಡು ! ನಾಲ್ಕು ದಿನದ ಕುಡಿತದ ವೆಚ್ಚ ಕೈಗೆ ಸಿಕ್ಕಿರಬಹುದು. ನೀನೇಕೆ ನಿನ್ನ ಜೀವನದ ಬಗ್ಗೆ ಇಷ್ಟೊಂದು ನಿರಾಶೆಯನ್ನು ತೋರಿಸಿದೆ ? ರೋಗ ಗುಣವಾಗಿ ನೀನು ಮರಳಿ ಬಂದರೆ, ಮೊದಲಿನ ದಾಂಪತ್ಯಸುಖ ನಿನಗೆ ದೊರೆತೀತೆ? ನಿನ್ನ ಪತಿ ನೊನ್ನೆಯ ದಿನವೇ ಒಬ್ಬ ಶ್ರೀಮಂತ ಕನ್ಯೆಯನ್ನು ಮದುವೆಮಾಡಿಕೊಂಡ. ಮುಂದೆ ನಿನ್ನ ಗತಿಯೇನೆಂದು ಪಗಲಿರುಳೂ ನಾನೂ ಚಿಂತಿಸುತ್ತಿದ್ದೇನೆ. ಸಮ್ಮತಿಪತ್ರವನ್ನು ಕೊಟ್ಟು ನೀನು ಒಳ್ಳೆಯದೇನೂ ಮಾಡಲಿಲ್ಲ.

ನಿನ್ನ ಗೆಳತಿ

....

ಪತ್ರವನ್ನು ಓದಿ ನನ್ನ ಎದೆಯೂ ನಡಗುತ್ತಿತು. ಸ್ವಲ್ಪ ನೇಳೆ ಕಂಗೆಟ್ಟು ನಿಂತುಕೊಂಡೆ. ಆ ದಿನ ತಂದೆ ಗಂಡ ಬಂದು ಕಾಗದದ ಮೇಲೆ ರೋಗಿಯ ಸಹಿಮಾಡಿಸಿಕೊಂಡುದರ ರಹಸ್ಯದ ಮೇಲೆ ಈಗ ಬೆಳಕು ಬಿದ್ದಂತಾಯಿತು. ನಾನು ನನ್ನ ಕರುಣಾದೃಷ್ಟಿಗಳನ್ನು ರೋಗಿಯ ಕಡೆಗೆ ಹೊರಳಿಸಿದೆ. ಎಲ್ಲಿಯ ರಕ್ತ ಬಂದು ಒಟ್ಟುಗೂಡಿದ್ದಿತೋ, ರೋಗಿಯ ಮುಖ ಸಂತಾಪದಿಂದ ಜೆಂಬಣ್ಣನನ್ನು ಹೊಂದಿದ್ದಿತು. ಈ ಆಘಾತವನ್ನು ಸಹಿಸಿ ಇನ್ನೇನು ಈ ರೋಗಿ ಬದುಕುತ್ತಾಳೆ– ಎಂಬ ವಿಚಾರ, ಆಗ ನನ್ನ ತಲೆಯಲ್ಲಿ ಬಾರದೆಹೋಗಲಿಲ್ಲ. ಆದರೂ ಅಕೆಗೆ ಸಮಾಧಾನದ ಮಾತುಗಳನ್ನು ಹೇಳಿ, ನನ್ನ ಕೆಲಸಕ್ಕೆ ನಾನು ಹೊರಟುಹೋದೆ.

ಆಸ್ಪತ್ರೆಯಲ್ಲಿ ಮುಖ್ಯ ಡಾಕ್ಟರನ್ನು ನೋದಲು ನಾಡಿ ಎಲ್ಲರಿಗೂ ಈ ಮರುಮದುವೆಯ ವಿಷಯ ತಿಳಿಯಿತು. ಗಂಡನಿಗೆ ಬೇಡವಾದ ಹೆಣ್ಣು ಗುಂಡುಕಲ್ಲಿಗೂ ಬೇಡವಾಗುವುದಂತೆ. ಆಸ್ಪತ್ರೆಯ ಎಲ್ಲ ಜನರಲ್ಲಿಯೂ ಅವಳನ್ನು ನೋಡುವ ದೃಷ್ಟಿಯೇ ಬದಲಾಯಿತು. ಕಾರ್ಯಾಲಯದವರು ಕೂಡಲೆ ಹಣ ಕಳುಹಬೇಕೆಂದು ರೋಗಿಯ ಗಂಡನಿಗೆ ಬರೆದರೆ, ಅವನಿಂದ ಉತ್ತರವೇ ಬರಲಿಲ್ಲ. ಇನ್ನು ಮುಂದೆ ಏನುಮಾಡಬೇಕೆಂಬ ವಿಚಾರ ಕಾರ್ಯಾಲಯದ ಅಧಿಕಾರಿಗಳ ಮುಂದೆ ಬಂದು ನಿಂತಿತು.

ಜನರಲ್ ವಾರ್ಡಿನ ರೋಗಿಗಳಿಗೆ ಪ್ರತಿನಿತ್ಯವೂ ಔಷಧಿ–ಅನುಪಾನಗಳನ್ನು ಒದಗಿಸುವ ಕಾರಕೂನನ ಹೆಸರು ಮಂಜುನಾಥ ಎಂದು. ವಯಸ್ಸು ಮೂವತ್ತೈದರ ಹತ್ತಿರ ಬಂದಿದ್ದರೂ ಇನ್ನೂ ಅವನು ಅವಿವಾಹಿತ. ಜನರಲ್ ವಾರ್ಡಿನಲ್ಲಿ ಬಂದಾಗ, ಎಲ್ಲ ರೋಗಿಗಳಂತೆ ಕುಸುಮಮಾಲೆಯನ್ನೂ ನಿಂತು ನೋಡಿ ಹೋಗುತ್ತಿದ್ದನು. ಈಗ ಅವಳಿಗೊದಗಿದ ದುಃಸ್ಥಿತಿಯ ವರ್ತಮಾನವನ್ನು ಕೇಳಿ, ಆತನಿಗೆ ಏನೆನಿಸಿತೋ ಏನೋ! ಆಕೆಯ ಗಂಡ ತನ್ನ ಹೆಸರಿನಿಂದ ಹಣವನ್ನು ಕಳುಹಿದ್ದಾನೆ– ಎಂದು ಹೇಳಿ, ಕಾರ್ಯಾಲಯದ ಬಾಕಿಯನ್ನು ತುಂಬಿಬಿಟ್ಟನಂತೆ. ಸರಿ ! ಕಾರ್ಯಾಲಯದವರ ಸದ್ಯದ ಸಮಸ್ಯೆ ಬಗೆಹರಿಯಿತು. ರೋಗಿ ಆಸ್ಪತ್ರೆಯಲ್ಲಿಯೇ ಉಳಿಯುನಂತಾಯಿತು.

ಪತ್ರವು ಬಂದ ದಿನದಿಂದ ರೋಗಿಯ ಮನಃಸ್ಥಿತಿಯೇ ವಿಚಿತ್ರವಾಯಿತು. ಮುಂದೆ ಮೂರುದಿನಗಳ ವರೆಗೆ ಒಂದೆ ಸವನೆ ಜ್ವರವು ಕಾಯಿಸಿತು. ಜ್ವರದ ಮೈಮರೆವಿನಲ್ಲಿ ಆಗಾಗ ಅವಳು ನುಡಿಯುತ್ತಿದ್ದಳು :

" ಉಹುಂ ! ನಾನು ಸಾಯುವುದಿಲ್ಲ! ಬದುಕೆಯೇ ಬದುಕುವೆನು!"

" ಆತನಿಗೆ ಮತ್ತೆ ಮದುವೆ ! ನನಗೇಕೆ ಬೇಡ ? "

" ನನ್ನ ಜೀವನದಲ್ಲಿ ನನಗೆ ನಿರಾಶೆಯಿಲ್ಲ; ತುಂಬ ಆಶೆಯಿದೆ ! ಅದಕ್ಕಾಗಿಯೆ ನಾನು ಸಾಯುವುದಿಲ್ಲ."

ಮೂರನೆಯ ದಿನದ ಸಂಜೆ ಜ್ವರ ಇಳಿಯಿತು. ರೋಗಿ ಮೈಮೇಲೆ ಎಚ್ಚರಬಂದು ಮಾತನಾಡತೊಡಗಿದಳು. ಹಾಲು–ಕಾಫಿಗಳನ್ನೂ ತೆಗೆದುಕೊಂಡಳು. ಮಂಜುನಾಥ ಪುನಃ ಪುನಃ ಬಂದು ಅವಳನ್ನು ನೋಡಿ ನೋಡಿ ಹೊಗುತ್ತಿದ್ದ. ಅವಳ ಜ್ವರ ಇಳಿದುದನ್ನು ಕಂಡು, ಸಮಾಧಾನದ ಮುಗುಳುನಗೆ ನಕ್ಕು ಹೊರಟುಹೋದ.

ದಿನಗಳು ಕಳೆದಂತೆ ರೋಗಿಯ ಆರೋಗ್ಯ ಸುಧಾರಣೆ ಹೊಂದುತ್ತಿರುವಂತೆ ಕಾಣತೊಡಗಿತು. ಕೈಕಾಲುಗಳ ನಡುಕ ಕಡಮೆಯಾಗಹತ್ತಿತು. ತಿಂಗಳ ಕೊನೆಗೆ ಎಕ್ಸ್‌ರೇ ಫೋಟೊ ತೆಗೆದು ಪರೀಕ್ಷಿಸಿದಾಗ, ಪುಪ್ಪುಸಗಳ ದೋಷ ಕಡಮೆಯಾಗುತ್ತಿರುವಂತೆ ಕಂಡಿತು. ಮುಖ್ಯ ಡಾಕ್ಟರಿಗೆ ತುಂಬ ಆಶ್ಚರ್ಯ, ' ಯಾವ ಔಷಧಿ ಇವಳ ಮೇಲೆ ಇಷ್ಟೊಂದು ಸುಪರಿಣಾಮ ಮಾಡಿರಬಹುದು ? ' ಎಂದು, ಆಕೆಯ ಪ್ರಿಸ್ಕ್ರಿಪ್ಷನ್ ಕಾಗದವನ್ನು ತರಿಸಿ, ಸಂಶೋಧನೆ ಮಾಡತೊಡಗಿದರು.

ಮರುತಿಂಗಳ ಪ್ರಾರಂಭದಲ್ಲಿ ಮಂಜುನಾಥ ಮತ್ತೆ ಅವಳಗಾಗಿ ಹಣವನ್ನು ಕಟ್ಟಿದ. ರೋಗಿಗೆ ವ್ಯವಸ್ಥಿತವಾಗಿ ಔಷಧೋಪಚಾರ ನಡೆಯತೊಡಗಿತು. ದಿನದಿನಕ್ಕೆ ಆಕೆಯ ರೋಗ ಹಿಮ್ಮೆಟ್ಟತೊಡಗಿತು. ತಿಂದ ಆಹಾರ ರಕ್ತವಾಗತೊಡಗಿತು. ಮೈಯಲ್ಲಿ ಮಾಂಸ ಬೆಳೆಯತೊಡಗಿತು. ಮುಖ್ಯ ಡಾಕ್ಟರು ಕೂಡ ಸಂಜೆ ಮುಂಜಾವು ಬಂದಾಗ, ಅವಳ ಬಳಿಯಲ್ಲಿ ಬಂದು, ನಿಂತು ನಿಂತು ಅವಳನ್ನು ನೋಡಿ ಮಾತನಾಡಿಸಿ ನಕ್ಕು ಹೋಗಹತ್ತಿದರು. ಮಾಲೆಯ ಕುಸುಮಗಳು ಅರಳಿ ನಗತೊಡಗಿದುವು. ಕುಸುಮದ ವಾಸನೆಗೆ ಭ್ರಮರಗಳು ಸುಳಿದಾಡಹತ್ತಿದುವು.

ಆ ತಿಂಗಳ ಕೊನೆಯಲ್ಲಿ ತೆಗೆದ ಎಕ್ಸ್‌ರೇ ಫೋಟೊ ನಿಚ್ಚಳವಾಗಿದ್ದಿತು. ಆದರೂ ಇನ್ನೂ ಎರಡು ಮೂರು ತಿಂಗಳು ಆಸ್ಪತ್ರೆಯಲ್ಲಿಯೇ ಇರಬೇಕೆಂದು ಮುಖ್ಯ ಡಾಕ್ಟರು ಅಭಿಪ್ರಾಯ ಪಟ್ಟರು. ವಾರ್ಡ್ ಡಾಕ್ಟರಿಗೂ ಇದು ಬೇಡವಾದ ವಿಷಯವೇನೂ ಆಗಿರಲಿಲ್ಲ. ಹೆಣ್ಣಿಗೆ ತಾರುಣ್ಯ ಜೆಲುವು ಇವೆರಡೂ ದೊಡ್ಡ ಬಂಡವಾಳ. ಕುಸುಮಮಾಲೆ ಇದುವರೆಗೆ ಆ ಬಂಡವಾಳವನ್ನು ಕಳೆದುಕೊಂಡಿದ್ದಳು. ಈಗ ಅವುಗಳನ್ನು ಮರಳಿ ಸಂಪಾದಿಸಿದ್ದಾಳೆ. ಸರಕಾರೀ ಅಧಿಕಾರಿಯ ಹೆಂಡತಿಯಾದಾಗಿಗಿಂತಲೂ ಹೆಚ್ಚಿನ ಶ್ರದ್ಧೆಯಿಂದ ಮುಖ್ಯಡಾಕ್ಟರು ಕುಸುಮಮಾಲೆಯನ್ನು ಉಪಚರಿಸತೊಡಗಿದರು. ಕಾರ್ಯಾಲಯದವರು ಇವಳ

ಹಣಕ್ಕಾಗಿ ವಿಶೇಷ ಪೀಡೆಕೊಡಬಾರದೆಂಬ ಸಹಾನುಭೂತಿಯನ್ನು ಕೋರಿಸಬೇಕೆಂದರೂ, ಮಂಜುನಾಥನಿಂದ ಪ್ರತಿತಿಂಗಳೂ ತಪ್ಪದೆ ಹಣದ ಸಂದಾಯವಾಗುತ್ತಿತ್ತು.

ಮಂಜುನಾಥ ಆ ಜನರಲ್ ವಾರ್ಡಿಗೆ ನಿತ್ಯದಂತೆ ಬಂದುಹೋಗುತ್ತಿದ್ದನೇ ಹೊರತು, ಕಣ್ಣುಕಿಸುರಾಗುವಂತೆ ಯಾರ ಬಳಿಯಲ್ಲಿಯೂ ನಡೆದುಕೊಳ್ಳುತ್ತಿರಲಿಲ್ಲ. ಒಂದೊಂದು ಸಲ ಮಾತ್ರ ತನ್ನನ್ನು ತಾನೇ ಮರೆತವನಾಗಿ ಕುಸುಮಮಾಲೆಯನ್ನು ನೋಡುತ್ತ ನಿಲ್ಲುವನು. ಅವಳೊಂದಿಗೆ ಮಾತನಾಡಬೇಕೆಂದು ಮನಸ್ಸು ಹಾತೊರೆಯುವುದು; ಆದರೆ ಸಂಯಮದಿಂದ ಅದನ್ನು ಸುಮ್ಮಗಿರಿಸುತ್ತಿದ್ದ.

ತನಗಾಗಿ ಆಸ್ಪತ್ರೆಗೆ ಹಣವು ತನ್ನ ಗಂಡನಿಂದಲೇ ಬರುವುದೆಂದು ಕುಸುಮಮಾಲೆ ಮೊದ-ಮೊದಲು ಭಾವಿಸಿದ್ದಳು. ಆತನ ಹಣವನ್ನು ಪಡೆಯಬಾರದೆಂದು ಮನಸ್ಸು ರೊಚ್ಚಿಗೆದ್ದರೂ, ಅವಳಿಗಾಗ ಏನನ್ನೂ ಮಾಡಲು ಬಾರದಂತಾಗಿತ್ತು. ಹೀಗೆಯೇ ಒಂದು ದಿನ ಮಾತನಾಡುತ್ತ ಕುಳಿತಾಗ, ನಾನು ಅಕೆಗೆ ವಾಸ್ತವಸಂಗತಿಯನ್ನು ತಿಳಿಸಿದೆ. ನೂರು ರೂಪಾಯಿ ಸಂಬಳದ ಕಾರಕೂನ, ಯಾವುದೇ ಪ್ರತಿಫಲವನ್ನು ಬಯಸದೆ, ಅವಳಿಗಾಗಿ ಮಾಡಿದ ತ್ಯಾಗವನ್ನು ಬಣ್ಣಿಸಿದೆ. ಕುಸುಮಮಾಲೆ ಆಚ್ಚರಿಯಿಂದ ಮಾತಿಲ್ಲದವಳಾದಳು. ಅವಳ ಕಣ್ಣುಗಳಲ್ಲಿ ಕೃತಜ್ಞತಾಭಾವ ತುಂಬಿ ಸೂಸತೊಡಗಿತು. ಮಂಜುನಾಥನ ನಿಷ್ಕಾಮ ಬುದ್ಧಿಯ ನೆರವಿಗಾಗಿ ಅವಳು ಪ್ರತಿಯಾಗಿ ಏನು ಕೊಡಬೇಕು ?

ಅಂದಿನಿಂದ ಕುಸುಮಮಾಲೆ ಮಂಜುನಾಥನನ್ನು ನೋಡುವ ನೋಟಗಳಲ್ಲಿ ತುಂಬ ಮಾರ್ಪಾಡಾಯಿತು. ಎಲ್ಲ ಗಂಡುಸರಂತೆ ಇವನೂ ಒಬ್ಬ ಗಂಡುಸು— ಎಂದಿರುವ ಅವಳ ಉಪೇಕ್ಷೆಯ ಸ್ಥಳದಲ್ಲಿ, ಏನೋ ಒಂದು ಅಪೇಕ್ಷೆ ನೆಲೆಯೂರಿತು. ಅವನು ವಾರ್ಡಿಗೆ ಬಂದಾಗ, ಇಬ್ಬರ ನೋಟಗಳೂ ಬೆರೆಯತೊಡಗಿದುವು. ಮಂಜುನಾಥನ ನೋಟದಲ್ಲಿ ಸಹಾನುಭೂತಿಯ ಪ್ರೀತಿ ಕಾಣುತ್ತಿದ್ದರೆ, ಕುಸುಮಮಾಲೆಯ ನೋಟದಲ್ಲಿ ಕೃತಜ್ಞತೆಯ ಕೆಳೆ ಕುಣಿಯುತ್ತಲಿತ್ತು. ಮೊದ-ಮೊದಲಿನ ಮೌನದ ನೋಟ ಬರುಬರುತ್ತ ಇಬ್ಬರ ಮುಖದಲ್ಲಿಯೂ ನಗೆಮುಗುಳನ್ನು ಮೂಡಿಸತೊಡಗಿತು.

ಇದನ್ನು ಕಂಡ ವಾರ್ಡಿನ ಸ್ತ್ರೀರೋಗಿಗಳು, ತಮ್ಮ-ತಮ್ಮಲ್ಲಿಯೇ ಕಿಸಿಮಾತನ್ನು ಆಡತೊಡಗಿದರು. ಮಂಜುನಾಥ ಸುಂದರ ರೂಪದ ತರುಣ. ಕುಸುಮಮಾಲೆ ತನ್ಮೆಲ್ಲರನ್ನೂ ಮೀರಿಸುವ ಜೆಲುವೆ. ಹೆಣ್ಣಿನ ಅಶಕ್ತ ಮನದಲ್ಲಿ ಸ್ಪರ್ಧೆ-ಮತ್ಸರಗಳು ಹುಟ್ಟಿ ಬೆಳೆಯುವುದಕ್ಕೆ ಇವಕ್ಕಿಂತ ಹೆಚ್ಚಿನ ಕಾರಣ ಇನ್ನೇನು ಬೇಕು ?

ಸೂಕ್ಷ್ಮಬುದ್ಧಿಯ ಹೆಣ್ಣಿಗೆ, ತನ್ನನ್ನು ಯಾರು ಎಂತಹ ದೃಷ್ಟಿಯಿಂದ ನೋಡುವರೆಂಬುದನ್ನು ತಿಳಿದುಕೊಳ್ಳಲು ಬಹಳಕಾಲ ಬೇಕಾಗುವುದಿಲ್ಲ. ಎಂತಲೇ ಅವಳು ಮುಖ್ಯ ಡಾಕ್ಟರೊಂದಿಗೂ ವಾರ್ಡ್ ಡಾಕ್ಟರೊಂದಿಗೂ ಮನಸ್ಸೊಲ್ಲದೆ ಎಣಿಕೆಯ ಮಾತುಗಳನ್ನು ಆಡತೊಡಗಿದಳು. ಅವರು ವಿನೋದವಾಡಿ ಸಕ್ಕಾಗ ಅವಕೆಂದೂ ನಗುತ್ತಿರಲಿಲ್ಲ.

ಕುಸುಮಮಾಲೆ-ಮಂಜುನಾಥರ ವಿಷಯಕವಾದ ವಾರ್ಡಿನ ಸ್ತ್ರೀರೋಗಿಗಳ ಕಿವಿಮಾತು, ಆಸ್ಪತ್ರೆಯ ಆವಾರದ ಬಯಲುಮಾತೂ ಆಯಿತು. ಮುಖ್ಯ ಡಾಕ್ಟರು ಮಂಜುನಾಥನನ್ನು ಕರೆಯಿಸಿ 'ಸ್ತ್ರೀಯರ ವಾರ್ಡಿನಲ್ಲಿ ನೀನು ರೋಗಿಗಳ ಮನಸ್ಸನ್ನು ಕೆರಳಿಸುವಂತೆ ನಡೆದುಕೊಳ್ಳುತ್ತಿರುವೆ .... ಎಚ್ಚರಿಕೆ ! ' ಎಂದು ಗದ್ದರಿಸಿದರಂತೆ.

ಮಂಜುನಾಥ ತಿರಸ್ಕಾರದ ನಗೆಯೊಂದನ್ನು ನಕ್ಕನಂತೆ. ಮಾತ ನೇನೂ ಆಡದೆ ಮರಳಿ ಕೋಣೆಗೆ ಬಂದು, ಅಂದೆಯೇ ತನ್ನ ಕೆಲಸಕ್ಕೆ ರಾಜೀನಾಮೆ ಪತ್ರವನ್ನು ಬರೆದು, ಆಸ್ಪತ್ರೆಯ ಸಂಚಾಲಕರ ಕಡೆಗೆ ಕಳುಹಿದನಂತೆ.

ಅಂದು ಆಸ್ಪತ್ರೆಯನ್ನು ಬಿಟ್ಟು ಹೊರಡುವ ಮೊದಲು, ಮಂಜುನಾಥ ಕುಸುಮಮಾಲೆಯ ಬಳಿಗೆ ಹೋಗಿ ಸ್ನೇಹಯುಕ್ತ ಸ್ವರದಲ್ಲಿ ಹೇಳಿದ :

" ನಾನು ಇಲ್ಲಿಯ ಕೆಲಸವನ್ನು ಬಿಟ್ಟುಕೊಟ್ಟಿ. ಇಂದೆಯೆ ನಾನು ಇಲ್ಲಿಂದ ಹೊರಡುವೆನು.

ಕುಸುಮಮಾಲೆಯ ಎದೆಗೆ ಸಿಡಿಲು ಹೊಡೆದಂತಾಯಿತು. ಅವಳು ಕಳ್ಳುಬಿಕ್ಕಾದ ಧ್ವನಿಯಲ್ಲಿ ಕೇಳಿದಳು :

" ನೀವು ಒಬ್ಬರೇ ಹೋಗುವಿರಾ ? "

" ನಾನು ಒಬ್ಬನೇ ಒಬ್ಬ ! ನನಗೆ ಯಾರೂ ಇಲ್ಲ. ಎಂತಲೇ ಲೋಕವನ್ನೆಲ್ಲ ನನ್ನದೆಂದು ಭಾವಿಸಿದ್ದೇನೆ."

ಕುಸುಮಮಾಲೆಯೆಂದಳು :

" ನಾನೂ ಒಬ್ಬಳೇ ಒಬ್ಬಳು. ನನಗೂ ಯಾರೂ ಇಲ್ಲ. ನಿಮ್ಮ ಲೋಕದಲ್ಲಿ ನನಗೂ ಒಂದು ಸ್ಥಳ ದೊರೆಯಬಹುದಲ್ಲವೆ ? "

ಮಂಜುನಾಥ ನುಡಿದ :

" ಲೋಕ ವಿಶಾಲವಾಗಿದೆ. ಎಲ್ಲರಿಗೂ ಅಲ್ಲಿ ಇರಲು ಸ್ಥಳವಿದೆ."

" ಹಾಗಾದರೆ ನಾನೂ ನಿನ್ನೊಂದಿಗೆ ಬರಲೆ ? "

" ಅದರಿಂದ ನಿಮಗೆ ಒಳ್ಳೆಯದಾಗುವುದೆಂಬ ವಿಶ್ವಾಸವಾವಿದ್ದರೆ, ಅವಶ್ಯವಾಗಿ ಬರಬಹುದು ! "

" ಒಳ್ಳೆಯದಾಗುವುದೆಂಬ ವಿಶ್ವಾಸದಿಂದ ರಾಕ್ಷಸನನ್ನು ನಂಬಿ ನೋಸಹೋವೆ. ನಿಮ್ಮ ಜೊತೆಯಲ್ಲಿ ಅಂತಹ ಮೋಸಕ್ಕೆ ಆಸ್ಪದವಿಲ್ಲ. ನಾನೂ ನಿನ್ನೊಂದಿಗೆ ಬರುತ್ತೇನೆ."

ಆಗಲೆ ಮಂಜುನಾಥ ಕಾರ್ಯಾಲಯಕ್ಕೆ ಹೋದ. ತುಂಬ-ಬೇಕಾದ ಹಣವನ್ನು ತುಂಬಿ, ಕುಸುಮಮಾಲೆಯ ಡಿಸ್‌ಚಾರ್ಜ್ ಪತ್ರವನ್ನು ಪೊರೆಕಿಸಿದ. ವಾರ್ಡಿನಿಂದ ಹೊರಬಿದ್ದ ಕುಸುಮಮಾಲೆ ಮಂಜುನಾಥನೊಂದಿಗೆ ಹೊರಹೊರಟಿರುವುದನ್ನು, ಆಸ್ಪತ್ರೆಯ ಜನರೆಲ್ಲರೂ ಬೆರಗಾಗಿ ನೋಡುತ್ತಿದ್ದರು.

ತಮ್ಮ ಆಫೀಸಿನಲ್ಲಿ ಕುಳಿತ ಮುಖ್ಯ ಡಾಕ್ಟರು, ತಮ್ಮ ಪಕ್ಕದ ಕುಳಿತ ಇನ್ನೊಬ್ಬ ಡಾಕ್ಟರಿಗೆ ಹೇಳಿದರಂತೆ :

" ಅಯ್ಯೊ ನೋಡಿ ! ನಮ್ಮ ಆಸ್ಪತ್ರೆಯ ಪೊಮ್ಮಾಂಟಿಕ್ ಪೇಶಂಟ್ ನಮ್ಮನ್ನು ಬಿಟ್ಟುಹೊರಟಿತು ! "

★ ಶಿಕ್ಷಕನ ವ್ಯಕ್ತಿತ್ವದ ಬೆಳೆ ★

ಶ್ರೀ. ಅನ್ನದಾನೀಶ್ವರ ವಿರಕ್ತಮಠ ಬಿ. ಎ., ಬಿ. ಟಿ. ಹೆಡ್‌ಮಾಸ್ತರ್
ಮಹಿಳಾ ವಿದ್ಯಾಪೀಠ ಹಾಯಸ್ಕೂಲ್, ಹುಬ್ಬಳ್ಳಿ.

❋

ಸಮಾಜದ ಧಾರಣೆಗೆ ಅತ್ಯಗತ್ಯವಾಗಿರುವ ಸುಸಂಸ್ಕೃತ ಮೂರ್ತಿಗಳನ್ನು ನಿರ್ಮಾಣಮಾಡುವವರು ಶಿಕ್ಷಕರು. ಆದರೆ ಸುಸಂಸ್ಕೃತಿಯೆಂದರೇನೆಂಬುದನ್ನು ಕಂಡರಿಯದ ಶಿಕ್ಷಕರಿಂದ ಇಂತಹ ಮಹಾಕಾರ್ಯ ಹೇಗೆ ಸಾಧ್ಯವಾದೀತು? ಕೇವಲ ಸಾಕ್ಷರತೆಯೆಂದರೆಯೇ ಶಿಕ್ಷಣವೆಂದು ಭಾವಿಸಿದ ಲೌಕಿಕಬುದ್ಧಿ, ಇಂದು ಎಂತೆಂತಹರನ್ನೂ ಶಿಕ್ಷರರ ಗದ್ದುಗೆಗೆ ಏರಿಸುತ್ತಿದೆ.

ಶಿಕ್ಷಕನು ವಿದ್ಯಾರ್ಥಿಸಂಚದಲ್ಲಿ ಪ್ರಿಯನಾಗಬೇಕಾದದ್ದು ಶಿಕ್ಷಣರಂಗದ ಉನ್ನತಿಗೆ ಅತ್ಯಾವಶ್ಯಕವೂ ಇಷ್ಟವೂ ಆಗಿದೆ. ಮಕ್ಕಳ ವಿಕಾಸದ ದೃಷ್ಟಿಯಿಂದಂತೂ ಈ ವಿದ್ಯಾರ್ಥಿ-ಪ್ರಿಯತೆಯು ಅತ್ಯಗತ್ಯವಾಗಿದೆ. ರಾಸ್ ಎಂಬ ಮನೋವೈಜ್ಞಾನಿಕ ಶಿಕ್ಷಣತಜ್ಞನು ಹೇಳಿರುವುದೇನೆಂದರೆ:-

"ಮಕ್ಕಳು ಶಿಕ್ಷಕನನ್ನು ದ್ವೇಷಿಸಿದರೆ, ಅವನು ಕಲಿಸುವ ವಿಷಯವನ್ನು ದ್ವೇಷಿಸಲುವಕ್ರಮಿಸುತ್ತಾರೆ; ಶಿಕ್ಷಕನನ್ನು ಪ್ರೀತಿಸಿದರೆ ಅವರೆ ವಿಷಯವನ್ನೂ ಪ್ರೀತಿಸುತ್ತಾರೆ!"

ಶಿಕ್ಷಕನು ಮಕ್ಕಳಿಗೆ ನೆಚ್ಚುಗೆಯಾಗುವಂತೆ ಹರ್ಷಭರಿತ ಮುಖಮುದ್ರೆಯುಳ್ಳವನಾಗಿರಬೇಕು. ಸಹಜಸುಮುಖವು ತಪಸ್ಸಿಲ್ಲದೆ ಬರಲಾರದು. ಶ್ರೀನಿಜಗುಣಶಿವಯೋಗಿಗಳು ಶಿವಶಕ್ತಿಗೆ "ಸಹಜ-ಸುಮುಖಿ" ಎಂಬ ಹೆಸರು ಕೊಟ್ಟಿರುವರು. ಶಿವಶಕ್ತಿ ಸಂಪನ್ನನಿಗೆ ಮಾತ್ರ ಸಹಜ ಸುಮುಖತೆಯು ಉಂಟಾಗುವುದು' ಶಿವಶಕ್ತಿಯೆಂದರೆ ಮಂಗಲಮಯವು ವಾದ ಶಕ್ತಿ. ಈ ಶಿವಶಕ್ತಿಸಂಪನ್ನತೆಗೆ ತ್ರಿವಿಧ ತಪಸ್ಸು ಮಾಡಬೇಕೆಂದು ಶ್ರೀನಿಜಗುಣಶಿವಯೋಗಿಗಳು ಹೇಳಿರುವರು. ಆ ಮಹಾಯೋಗಿಗಳು ಹೀಗೆ ಹೇಳಿರುವರು:-

"ಪಂಚ ಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯಗಳನ್ನು ಆಂಕಿತವಲ್ಲಿಟ್ಟುಕೊಳ್ಳಬೇಕು. ಮನಸ್ಸನ್ನು ವಶದಲ್ಲಿಟ್ಟುಕೊಳ್ಳಬೇಕು; ವಿವೇಕಬುದ್ಧಿಯು ಜಾಗೃತವಾಗಿರಬೇಕು. ದಯೆಯಿರಬೇಕು. ಆತ್ಮ ವಿಶ್ವಾಸವನ್ನು ಪಡೆಯಬೇಕು. ಇದು ಮಾನಸಿಕ ತಪಸ್ಸು."

ಮನೋನಿಗ್ರಹವಿಲ್ಲದವನು ಶಿಕ್ಷಕನಲ್ಲ. ಮನಸ್ಸಿನ ಕೈಯಲ್ಲಿ ಸಿಕ್ಕವನು ಮಂಗನು. ವಿವೇಕವಿಲ್ಲದವನು ಮಾನವನಲ್ಲ. "ವಿನಯ ದಿಂದ ಮಾತನಾಡಬೇಕು. ಹಿತ ವಚನಗಳನ್ನು ಆಡಬೇಕು. ಅಪ-ಶಬ್ದಗಳನ್ನು ಪಯೋಗಿಸಬಾರದು. ಮಂತ್ರದಂತಹ ಪವಿತ್ರ ಶಬ್ದ ಗಳನ್ನು ಆಡಬೇಕು. ದಿನಕ್ಕೊಂದು ಹೊಂದದಿಂದ ನಾಲಗೆಯನ್ನು ಕುಣಿಸಬಾರದು. ಜಿಹ್ವಾಚಾಪಲ್ಯಕೂಡದು. ತರ್ಕದ ಮಾತುಗಳನ್ನೇ ಆಡಬಾರದು. ಅಚಲಿತ ಅರ್ಥ ಬರುವಂತೆ ಸ್ಪಷ್ಟವಾಗಿ ಮಾತಾಡ ಬೇಕು. ಇದು ವಾಚಿಕ ತಪಸ್ಸು."

ಆತ್ಮಸಂಯಮನವನ್ನು ಸಾಧಿಸಿದ ಮಾನವನು, ನಾಲಗೆಯ ಮೇಲಿನ ನಿಯಂತ್ರಣವನ್ನು ಪಾಲಿಸಬಲ್ಲನು. ಆತ್ಮಸಂಯಮವಿಲ್ಲದ ಅವಿವೇಕಿಯು ಸಿಕ್ಕಂತೆ ಮಾತಾಡಿ ದುಃಖಕ್ಕೀಡಾಗುವನು.

"ಇಂದ್ರಿಯಗಳಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತಿರ ಬೇಕು. ಪ್ರಾರ್ಥನೆ ಮಾಡಬೇಕು. ಆಸನಗಳನ್ನು ಹಾಕಬೇಕು. ಧ್ಯಾನ ಮಾಡಬೇಕು. ಇದು ಶಾರೀರಕ ತಪಸ್ಸು."

ಮಾನಸಿಕ, ವಾಚಿಕ ತಪಸ್ಸು ಸಾಧಿಸಿದವನಿಗೆ ಶಾರೀರಿಕ ತಪಸ್ಸು ಸುಲಭಸಾಧ್ಯ. ಈ ಪ್ರಕಾರ ಕಾಯಾ, ವಾಚಾ, ಮನಸಾ ತ್ರಿಕರಣಶುದ್ಧಿಯುಳ್ಳಾತನು ನಿಜವಾದ ಮಾನವನು.

ಶಿಕ್ಷಕನು ನಿಜವಾದ ಮಾನವನು ಎನಿಸಬೇಕು. ಅದಕ್ಕಾಗಿ ಅವನು ದಿನಾಲು ಮನೆಯಲ್ಲಿ ತಪಸ್ಸು ಮಾಡಬೇಕಾಗುವುದು. ಗರ ಡಿಯ ಮನೆಯಲ್ಲಿ ಅಥವಾ ವ್ಯಾಯಾಮಶಾಲೆಯಲ್ಲಿ ಜಟ್ಟಿಯು ಶರೀರ ಸಾಧನಮಾಡುವಂತೆ, ಶಿಕ್ಷಕನು ಮೊದಲು ಕುಟುಂಬದಲ್ಲಿ ಸಹಜ-ಸಾಧನ ಮಾಡಬೇಕು. ಕುಟುಂಬವಿಲ್ಲದ ಶಿಕ್ಷಕನಿಗೆ ಈ ಸಾಧನ ಮಾರ್ಗವು ಕಠಿಣವಾಗಬಹುದು. ಆದರೆ ಅವನು ತನ್ನ ನೆರೆಹೊರೆ ಯವರೊಡನೆ ಮಿತ್ರರೊಡನೆ ಸಾಧನಮಾಡಬೇಕಾಗಬಹುದು. ಆನಂದ-ಮಯ ಸಹಜ ಮುಖಮುದ್ರೆಯು ಯೋಗಿಗಳ ಸೊತ್ತು. ಶಿಕ್ಷಕನಿಗೂ ಇಂತಹದರ ಅಗತ್ಯವಿದೆ. ಸತ್ಯವಾದ ಜ್ಞಾನವ, ಆನಂದಮಯ ವಸ್ತುಗಳಲ್ಲಿ ಯಾವಾತನ ಮನವು ಲೀನವಾಗಿರುವುದೋ, ಅವನು ಯೋಗಿಯು. ಈ ದೃಷ್ಟಿಯಿಂದ ಶಿಕ್ಷಕನೂ ಒಬ್ಬ ಯೋಗಿಯೆನಿಸ ಬೇಕು. ಇಂತಹ ಯೋಗಿಶಿಕ್ಷಕನು ಸಹಜಸುಮುಖವುಳ್ಳವನಿರು ವನು, ಅವನ ಮುಖವು ತೆರೆಯಡಗಿದ ಸಾಗರದಂತೆ ಪ್ರಶಾಂತ ಗಂಭೀರವಾಗಿರುವುದು.

ಶಿಕ್ಷಕರು ನಿತ್ಯವೂ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವರು; ಆದರೆ ಬೇರೆ ದೃಷ್ಟಿಯಿಂದ ನೋಡಿದರೆ ಫಲವಿಲ್ಲ, ಕನ್ನಡಿಯಲ್ಲಿ ನೋಡುವುದೇತಕ್ಕೆ ? ಮುಖದ. ನೋಟದ, ಶರೀರದ, ಬಟ್ಟೆಗಳ ಲೋಪದೋಷಗಳು ಇಲ್ಲದಂತೆ ಆಗಿ, ಸಹಜವೃತ್ತಿಯೂ ಆನಂದ ಮಯ ಪ್ರವೃತ್ತಿಯೂ ಬೆಳೆಯಲೆಂದು! ಮುಖವು ಮನಸ್ಸಿನ, ಮನದ ಹಿನ್ನೆಲೆಯ ವಿಷಯಸೂಚಿಯು. ಮನದಲ್ಲಿ ಚಿಂತೆ–ಸಂತಾಪಗಳಿದ್ದರೆ ಅವು ಮುಖದಲ್ಲಿ ಮೂಡುತ್ತವೆ. ಆನಂದಮಯತೆ ಸಮರಸತೆಗಳಿದ್ದರೆ ಅವೂ ಮುಖಕಮಲದಲ್ಲಿ ಕಂಗೊಳಿಸುತ್ತವೆ. ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ತೊಂದರೆ ಕೋಟಲೆಗಳಿದ್ದರೆ, ಶಿಕ್ಷಕರು ಚಿಂತೆಯಿಂದ ಬಾಗಿಹೋಗುವರು. ಚಿಂತೆಯು ಜೀವಕ್ಕೆ ಗಂಟುಬಿದ್ದ ಮರಣವೇ ಸರಿ. " ಚಿಂತೆಯೇ ಮುಪ್ಪು ಸಂತೋಷವೇ ಯೌವನ." ಎಂಬ ಗಾದೆಯ ಮಾತು ಸತ್ಯವಾದದ್ದು. ಶಿಕ್ಷಕರು ಸಾಧನಮಾರ್ಗದಿಂದ ಚಿಂತೆಯನ್ನು ಜಯಿಸಲು ಕಲಿಯಬೇಕು. ಸರಕಾರದವರು, ಖಾಸಗೀ ಮ್ಯಾನೇಜ್‌ಮೆಂಟಿನವರು ಶಿಕ್ಷಕರಿಗೆ ಆರ್ಥಿಕ ಕೋಟಲೆಗಳುಂಟಾಗದಂತೆ ನೋಡಿಕೊಂಡರೆ, ಶಿಕ್ಷಕರ ವ್ಯಕ್ತಿತ್ವಕ್ಕೆ ಕಳೆಯೇರುವುದರಲ್ಲಿ ಸಂಶಯವಿಲ್ಲ. ಕುಟುಂಬದಲ್ಲಿ ಹೆಂಡತಿಯು ಬಲು ಕುಶಲಳಾಬೇಕು. ಗಂಡನು ಶಿಕ್ಷಣಕಾರ್ಯದಲ್ಲಿ ಯಶಸ್ಸುಗಳಿಸುವಂತೆ ಸಹಾಯ ಮಾಡುತ್ತಿರಬೇಕು. ಸಮಾಜದ ಮುಂದಾಳುಗಳು ಸಾಮಾಜಿಕರು ಶಿಕ್ಷಕರಿಗೆ ತೋರಿಕೆಯ ಗೌರವ ಮರ್ಯಾದೆ ಕೊಡದೆ, ಅಂತರಂಗದಿಂದ ಆದರಿಸಬೇಕು, ಸನ್ಮಾನಿಸಬೇಕು. ಸಾಮಾಜಿಕ ಸ್ಥಾನಕೊಡಬೇಕು. ಹೆಡ್ ಮಾಸ್ತರರು, ಶಿಕ್ಷಣಾಧಿಕಾರಿಗಳು, ಚೀರ್‌ಮನ್ನರು ಶಿಕ್ಷಕರಿಗೆ ಹೆದರಿಕೆಯ ಕೇಂದ್ರವಾಗದೆ, ಪ್ರೀತಿಯ ಸಹಾನುಭೂತಿಯ ಕೇಂದ್ರವಾಗಬೇಕು. ಇಷ್ಟೆಲ್ಲ ಅನುಕೂಲತೆಯಿದ್ದರೂ ಶಿಕ್ಷಕನ ಸ್ವಂತ ಪ್ರಯತ್ನವಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಶಿಕ್ಷಕರು ಆತ್ಮನಿಶ್ವಾಸದಿಂದ ಸಂತೋಷದಿಂದ, ಸಹಜಸ್ವಭಾವದಿಂದ ವರ್ತಿಸಬೇಕು. ಆಂದರೆ ಶಿಕ್ಷಣ ಕಾರ್ಯವು ಸುಲಭವಾಗಿ ಸಾಗುವುದು. ●

ಇದೀಗ ಪ್ರಕಟವಾಗಿದೆ !

ರಾಯರ ಸೋಲು

(ದೃಶ್ಯ ಸಂಕಲನ)

ಲೇಖಕರು: **ಬಿ. ಆರ್ ವಾಡಪ್ಪಿ,** ಎಂ. ಎ., ಬಿ. ಟಿ.

ಡಾಕ್ಟರ್— **ರಂ. ಶ್ರೀ. ಮುಗಳಿ** ಅವರ ವಿಚಾರಪರ

ಮುನ್ನುಡಿಯೂ ಇದೆ. ರಂಗಭೂಮಿಗೆ ತಕ್ಕ ದೃಶ್ಯಗಳು

ಕೂಡಲೇ ಬರೆಯಿರಿ

ಬೆಲೆ : ೧. ೬೨ ನ. ಪೈ.

ಮಾರಾಟಗಾರರು:–

ಮನೋಹರ ಗ್ರಂಥಭಾಂಡಾರ, ಧಾರವಾಡ

ಸಮಾಜ ಪುಸ್ತಕಾಲಯ, ಭಗತಸಿಂಗಬೀದಿ, ಧಾರವಾಡ

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು : (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀನು ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

• ನಸುನಗುವ ನಾರಿ •

‘ ಮಾಲತೀಪ್ರಿಯ ’

ಹೊರಗಣ್ಣ ನೋಟಕ್ಕೆ ಅವಳು ಸುಂದರಿಯಲ್ಲ
ಬೇರೆ ಹಲವಾರು ಹೆಣ್ಣುಗಳ ತೆರದೆ–
ಅವಳ ಚೆಲುವಿಕೆಯನ್ನು ಅರಿತವನು ನಾನಲ್ಲ
ಎನ್ನ ಕಂಡವಳು ನಸುನಕ್ಕ ವರೆಗೆ.

ಗಂಡು ಜಾತಿಯನೆಲ್ಲ ಕಣ್ಣಿನಿಂದಲೆ ಕರೆದು
ಮರುಳು ಮಾಡುವ ಜಾಲ ಕೈಯ ತುಂಬೆಲ್ಲ–
ವರುಷ ಹದಿನೆಂಟಹುದು, ಎಳೆಯತನ ಕುಂದಿಲ್ಲ;
ತುಂಟತನ ಮಿಂಚುತಿದೆ ಮುಖದ ಮೇಲೆಲ್ಲ.

ನೀಳವಾಗಿಹ ದೇಹ ನಸುಗೆಂಪು ನೈಬಣ್ಣ
ನೈಕಟ್ಟು ಅಷ್ಟೇನು ಮಾಟವಾಗಿಲ್ಲ;
ಒಮ್ಮೆ ನೋಡಿದರೆ ಇನ್ನೊಮ್ಮೆ ನೋಡುವ – ಎಂಬ
ಮನಸು ಬರುವುದು; ಏನು ಪರವೆಯಿಲ್ಲ;

ಕುಡಿಗಣ್ಣೊಳೊಂದು ಸಲ ಎಡೆಬಿಡದೆ ನೋಡಿದರೆ
ಕರಗದಿಹನವ ಗಂಡುಸೆಂಬ ಜೀವಿ —
ಕಣ್ಣಿನಲೆ ಹಲವಾರು ಮಾತ ನುಡಿವಳು ಚದುರೆ
ಕಡುಜಾಣೆಯವಳಹುದು, ಬಹಳ ವೈಯಾರಿ !

ಸರಸ ಸಲ್ಲಾಪವನು ನಸುನಗುತ ಮಾಡುವಳು
ಎಲ್ಲರಂತಲ್ಲಲ್ಲ ನಮ್ಮ ಮಾಲಿ.!
ಹೆಚ್ಚೇನು ಕಲಿತಿಲ್ಲ, ತಿಳಿದಿಹಳು ಎಲ್ಲವನು;
ಎಷ್ಟೆಂದರೂ ಹೆಣ್ಣುಜಾತಿ ನೋಡಿ !

ಒಲುಮೆ ತೋರಿದೊಡಗ್ಗ ತೋರದಿರ್ದೊಡೆ ಗರ್ವ
ಎನ್ನವಳು ಕೊರಳನ್ನು ಕೊಂಕಿಸುತ್ತೆ :
ನಸುನಗುವಿಗಿಂತಲೂ ಕೆರಗೋಪ ತುಸುವೇಲು
ಎನಿಸುವುದು ಅವಳ ಕಡೆ ದೃಷ್ಟಿಸುತ್ತೆ–

‘ ಹೊರಗಣ್ಣ ನೋಟಕ್ಕೆ ಅವಳು ಸುಂದರಿಯಲ್ಲ
ಒಳಗಣ್ಣ ನೋಟಕ್ಕೆ ಮಿಗಿಲಾಕೆಗಿಲ್ಲ–
ಸ್ನೇಹ ತುಂಬಿದ ಹೃದಯ ಪ್ರೇಮಸೂಸುವ ಮನಸು–
ಇವಳು ಸುಂದರವಾಗಿ ದೇಹವಿಲ್ಲ !

‘ ಅವಳ ಚೆಲುವಿಕೆಯನ್ನು ಅರಿತವನು ನಾನಲ್ಲ,
ಎನ್ನ ಕಂಡವಳು ನಸುನಕ್ಕ ವರೆಗೆ ’
ನಸುನಗುವ ನಾರಿಯನು ಮರೆಯಲುಂಟೇ ದಾರಿ ?
ಮನಸಿನಲಿ ಮಸುಕು ಕವಿದಿರುವ ವರೆಗೆ !

• ಏ ಕ ನಾ ದ •

ಶ್ರೀ. ಎ. ವಿ. ಸದರಜೋಶಿ, ಚಿಕ್ಕೋಡಿ

೧

ಮುಗಿಲ ಹನಿಗಳು ಕೂಡಿ ಕಲೆಯುತ
ಭೂಮಿಗಿಳಿಯುತಿರೆ !
ಎಲೆಗಳೆಲ್ಲವು ಬೆರೆತು ಕೊರಡನು
ಗಿಡವ ಮಾಡುತಿರೆ !

ಕಿರಣಗಳು ಒಂದಾಗಿ ಬೆಳಕನು
ಭುವಿಗೆ ನೀಡುತಿರೆ !
ಎನಿತೊ ತಾರೆಗಳಾಗಸವ ತಮ–
ದಲ್ಲಿ ಬೆಳಗುತಿರೆ !

ಮಳೆ ನೀರೇ ಜನಕಾಧಾರ;
ಸಸ್ಯವೆ ಸೃಷ್ಟಿಯ ಸಾಕಾರ.
ಬೆಳಕೇ ನೆಲಕ್ಕೆ ಇರುವೊಂದುಸಿರು.!
ತಾರೆಯಾಗಸದ ಚೆಲುವಿನ ಬಸಿರು !

ಸೃಷ್ಟಿಯು ಸಾರುತಲಿರೆ ಸಹಕಾರ
ಸಹಕಾರದಿ ಒಲವೆನಿತು ?
ಏಕತೆಯಿಂದಲಿ ಆಗದುದಿಲ್ಲ,
ಸಹಕಾರದ ಒಲವಿನಿತು !

೨

ಕಲಿಸುತಿಹುದನು ಕಲಿಯದಿದ್ದರೆ
ನಾಗರಿಕರೆ ನಾವ್ ಮನುಜರೆ ?
ಒಳಿತನೊಡನೆಯೆ ಬಿಡದೆ ಕಲಿಯದೆ
ನಾವು ಋಷಿಗಳ ತನುಜರೆ ?

ಜಾತಿಮತಗಳ ಭೇದವು;
ಭಾಷೆ ಪ್ರಾಂತ ವಿರೋಧವು.
ಏಕೆ ಈ ಸಂಕುಚಿತ ವೃತ್ತಿಯು!
ಸುತ್ತ ನುತ್ತಿರೆ ಅರಿಯ ಕತ್ತಿಯು !

ಏನೆ ಬಂದರು ಐಕ್ಯವೊಂದಿರೆ
ಗುಡುಗು ಗುಡುಗಿತದೊ !
ಏಕನಾದವು ಮೊಳಗುತಿರಲು
ಧರೆಯು ನಡುಗಿತದೊ !

ಸಾಗು ಮುಂದಕೆ ತೆರೆದ ಮನದಲೇ
ನಿನಗೆ ಗೆಲುವಿಹುದು !
ಐಕ್ಯದಲಿ ಆಗಸದ ತಾರೆಯ
ತರುವ ಒಲವಿಹುದು !

ಟೆಲಿಗ್ರಾಂ

(ವ್ಯಂಗ್ಯ ಕಿರುಗತೆ)

ಶ್ರೀ ಜೆ. ಎಂ. ಗಿರಿ, ಮೈಸೂರು,

ರಾಜಕೀಯದಲ್ಲಿಯ ಚುನಾವಣೆ–ಜೂಜುಗಾರರಲ್ಲಿ ಮನುಷ್ಯತ್ವವೆಂಬುದೆ ಉಳಿದಿಲ್ಲ. ಈ ಜೂಜಿನಲ್ಲಿ ವಿಜಯಶಾಲಿಗಳಾದವರಿಗಂತೂ ದಯೆ, ದಾಕ್ಷಿಣ್ಯ, ಬಾಂಧವ್ಯ ಆತ್ಮೀಯತೆ–ಯಾವುದರ ಪರವೆಯೂ ಇರುವುದಿಲ್ಲ. ತಾಯಿಯ ಸಾವನ್ನೂ ಗಣಿಸದಿರುವ ಈ ಸ್ವಾರ್ಥ, ತಾಯ್ನಾಡಿನ ಹಂಬಲಕ್ಕೆ ಕವಿಗೊಡಬಲ್ಲದೆ ?

ಹಲವರಿಗೆ ಕುತೂಹಲ, ಕೆಲವರಿಗೆ ಉತ್ಸಾಹ. ಇನ್ನು ಕೆಲವರಿಗೆ ಉದ್ವೇಗ, ಮತ್ತೆ ಕೆಲವರಿಗೆ ಬೇಗುದಿ; ಆದರೆ ಹೆಚ್ಚು ಜನರು ನಿಶ್ಚಿಂತರು. ನಾಳೆ ಅಸೆಂಬ್ಲಿಯಲ್ಲಿ ಮುಖ್ಯಮಂತ್ರಿಗಳು ಯಾರೆಂಬ ಘೋಷಣೆ. ಕಾಂಗ್ರೆಸ್ಸೇ ಅಸೆಂಬ್ಲಿಯಲ್ಲಿ ಬಹುಮತ ಗಳಿಸಿದ ಮೇಲೆ, ಪಕ್ಷದ ಬಗ್ಗೆ ಸಂಶಯವಾಗಲಿ, ಕುತೂಹಲವಾಗಲಿ, ಇರಲಿಲ್ಲ. ಆದರೆ ಕಾಂಗ್ರೆಸ್ ಪಕ್ಷದಲ್ಲೇ ಮೂವರು ಪ್ರತಿಸ್ಪರ್ಧಿಗಳು!

ನಾಳೆ ಚುನಾವಣೆ. ಇಂದು ಸಂಜೆ? ಓಹ್! ನಾಡಿನಾದ್ಯಂತ ವಿದ್ಯಾವಂತರೆನಿಸಿಕೊಂಡವರ ಗಡಿಬಿಡಿಯೋ ಗಡಿಬಿಡಿ. ಹಲವರು ಬಿಸಿಬಿಸಿಯಾಗಿ ಚರ್ಚಿಸುತ್ತಿದ್ದರು, ಒಬ್ಬೊಬ್ಬರು ಒಬ್ಬೊಬ್ಬರ ಪಕ್ಷ ವಹಿಸಿ. ಇನ್ನೂ ಕೆಲವರು ಎಲ್ಲ ಬಲ್ಲ ಪ್ರವಾದಿಯಂತೆ ಇಂತಹವರೇ ಚುನಾಯಿತರಾಗುತ್ತಾರೆಂದು ಘೋಷಿಸುತ್ತಿದ್ದರು. ಅದಕ್ಕೆದುರಾಗಿ ಮತ್ತೆ ಕೆಲವರು ಬೇರೊಬ್ಬನನ್ನು ತಂದು ನಿಲ್ಲಿಸಿ ಅವನ ಹಣೆಯನ್ನು ಉಜ್ಜಿ ತೋರಿಸುತ್ತಿದ್ದರು.

ಸಂಜೆಯ ಪತ್ರಿಕೆಗಳು ನಗರದಲ್ಲಿ ಮತ್ತು ನಾಡಿನ ಸಣ್ಣಪುಟ್ಟ ಪಟ್ಟಣಗಳಲ್ಲಿ ಹೊರಬಿದ್ದಾಗ, ಎಲ್ಲರೂ ಏನಾದರೂ ಸುಳಿವು ಸಿಕ್ಕೀ ತೆಂದು ಮೇಲೆ ಬಿದ್ದು ಓದಿದರು; ಎಷ್ಟೋ ಜನ ಕೊಂಡುಕೊಂಡೂ ಬಿಟ್ಟರು ಆಕಸ್ಮಾತ್, ಇನ್ನೆಷ್ಟೋ ಜನ ಹಣಕೆದರು–ವ್ಯವಹಾರ ಚತುರರು, ಕೈಯಿಂದ ಕೈಗೆ, ಈಚೆಯಿಂದ ಆಚೆಗೆ. ಕೊನೆಗೆ, ಕೊಂಡವನಿಂದ ಪತ್ರಿಕೆ ಮಂಗಮಾಯ. ನಷ್ಟವೇನು?– ಪಕ್ಕದ ಗುಂಪಿನ ನುಡ್ಯೆ ತಲೆತೂರಿಸಿದ.....ಅಲ್ಲಲ್ಲಿ ಗುಸುಗುಸು ಮಾತು. ಊರಿಗೆಲ್ಲ ಗೊತ್ತಿದ್ದ ವಿಷಯವನ್ನೇ ಎಲ್ಲರೂ ಗುಟ್ಟಾಗಿ ಮಾತನಾಡಿದರು, ಗುಟ್ಟಾಗಿಯೇ ಉಳಿದಿದೆಯೆಂದ ನಂಬಿದರು. ರಾಜ್ಯದ ಹುಳುಕು ರಾಜಕೀಯವೆಲ್ಲ ಕರಗತವಾದವರಂತೆ ಹಲವರು ಹಲವು ಸಂದಿಗಳಲ್ಲಿ ಸಿಸುಗುಟ್ಟುತ್ತ ನಿಂತರು. ಪ್ರಾದಿಥಾರಿಗಳು ವಿಚಾರಗಂಭೀರ ಮುಖ–ಮುದ್ರೆಯಿಂದ, ಜವಾಬ್ದಾರಿಯೆಲ್ಲಾ ತಮ್ಮ ಮೇಲೆ ಬಿದ್ದಿದೆಯೋ ಎಂಬಂತೆ ತಿರುಗಾಡಿದರು. ಸೋಷಿಯಲಿಸ್ಟರು ನಾಳೆ ತಮ್ಮ ಪಕ್ಷದವನೇ ಮುಖ್ಯಮಂತ್ರಿಯಾದಾನೋ–ಎಂಬಂತೆ ತಿರುಗಾಡಿದರು–ಬಿದ್ದರೆ ಮೂಗೆಲ್ಲಿ ತಾಗಿದೆ–ಎಂದು. ಪ್ರಜಾ ಸೋಶಿಯಲಿಸ್ಟರಿಗೆ ಪ್ರಜೆಗಳಿಗೆ ಜೀವವಿದೆಯೆಂಬ ವಿಷಯದಲ್ಲಿ ನಂಬಿಕೆ ಹೋಯಿತು.

ಹಳ್ಳಿಗಳಲ್ಲೇನು ಕಡಮೆ? ಅರೆವಿದ್ಯಾವಂತರು ಬಡಬಡಿಸಿದರು, ಭವಿಷ್ಯ ಹೇಳಿದರು. ಪೂರ್ತಿ ವಿದ್ಯಾವಂತರು–ಒಬ್ಬಿಬ್ಬರು ಕವಿ ಮುಚ್ಚಿಕೊಂಡರು, ವಿದ್ಯೆಯಿಲ್ಲದ ಪರಿಪೂರ್ಣರು ಹ್ಞೂಗುಟ್ಟಿದರು. ಜಗುಲಿಯ ಈ ಗೊಂದಲ ಹರಕುಮುರುಕಾಗಿ ಅಡಿಗೆಮನೆಯನ್ನು ತಲುಪಲು, ಅಲ್ಲಿದ್ದವರು ನಾಳೆಯೇನೋ ಅನಾಹುತವಾಗಲಿದೆಯೆಂದು ನಂಬಿದರು.

* * * *

ಇನ್ನು ರಾಜಧಾನಿಯಲ್ಲೋ....! ಪಿಸಿ–ಪಿಸಿ ಮಾತು, ಬಿಸಿ–ಚರ್ಚೆ, ಖಾರವಾದ ಚರ್ಚೆ, ಒಣ ಒಣ ಹರಟೆ.... ಗಂಟಿಕ್ಕಿದ ಹುಬ್ಬು–ಕೆದರಿಹೋದ ತಲೆ–ಎಲ್ಲೆಲ್ಲೂ ಭರ್ರನೆ ಓಡುವ ಕಾರು.... ಇದು ಬಿಡಿ ಸಾಮಾನ್ಯ ವಿಷಯ. ಆದರೆ.... ಯಾವ-ಯಾವ ಸಂದಿಯಲ್ಲೋ ಗಲ್ಲಿಯಲ್ಲೋ ಯಾರು ಯಾರದೋ ಕಾರು ಓಡಿತು. ಯಾರು ಯಾರೋ ಯಾರ್ಯಾರನ್ನೋ ಕಂಡರು. ಏನೇನೋ ಮಾತು ಕತೆ. ಏನೇನೋ ಭರವಸೆ. ಎಂಥದೋ ನಂಬಿಕೆ. ಎಲ್ಲೋ ಕೊಂಚ ಅಳುಕು. ಒಮ್ಮೆ ಒತ್ತರಿಸಿ ಬರುವ ನಿರಾಶೆ. ಇನ್ನೊಮ್ಮೆ ಹುಚ್ಚು ಧೈರ್ಯ. ಬಿಡುವಿಲ್ಲದ ತಿರುಗಾಟ. ಊಟನಿಲ್ಲ–ನಿದ್ದೆಯಿಲ್ಲ. ಸ್ನಾನವಂತೂ ಇಲ್ಲವೇ ಇಲ್ಲ– (ಬೇಕಾಗಿಯೂ ಇಲ್ಲ.) ಒಟ್ಟಿನಲ್ಲಿ ನಾಳೆ ಮೂಡಲಿರುವ ಹೊಸ ವ್ಯವಸ್ಥೆಯಾಗಿ ಇಂದು ಎಂದೂ ಇಲ್ಲದ ಅವ್ಯವಸ್ಥೆ. ಅಥವಾ ಇಂದಿನದೇ ವ್ಯವಸ್ಥೆಯೋ ಏನೋ! ನಾಳೆಯದು....!

ಯಾರು, ಯಾರು ? ನಾಳೆ ಯಾರು ಏನೇನಾದಾರು ?

* * * *

ಯಾರು ಯಾರು ಎಂಬ ಪ್ರಶ್ನೆಗೆ ತಾನು ತಾನು ಎಂಬುದಲ್ಲದೇ ಬೇರೆ ಉತ್ತರವೇ ರಾಜಯ್ಯನವರಿಗೆ ಸಿಗುತ್ತಿರಲಿಲ್ಲ. ತಮ್ಮ ಅವಿರತವಾದ ಇಪ್ಪತ್ತು ವರ್ಷಗಳ ಸೇವೆಯನ್ನು ನೆನಸಿಕೊಂಡಾಗಲೆಲ್ಲಾ ರಾಜಯ್ಯನವರಲ್ಲಿ ಧೈರ್ಯ ಮೂಡುತ್ತಿತ್ತು. ಆದರೆ ಇತ್ತೀಚೆಗೆ ಲಿಂಗದೇವಯ್ಯನವರ ವರ್ಚಸ್ಸು ಹೆಚ್ಚಿದ್ದನ್ನು ನೋಡಿ ಕೊಂಚ ಗಾಬರಿಯಾಗಿದ್ದರು. ಅದ್ದರಿಂದಲೇ ರಾಜಯ್ಯನವರು ಸುಮ್ಮನೇ ಕುಳಿತುಕೊಳ್ಳುವುದು ಹೋಗಲಿ, ನಿಮಿಷವೂ ಕುಳಿತುಕೊಳ್ಳಲಿಲ್ಲ. ಒಮ್ಮೆ ಜಯಲಭಿಸಿದ ಮೇಲೆ ಇದ್ದೇ ಇದೆಯಲ್ಲ— ಕುಳಿತುಕೊಳ್ಳೋದು ?— ಹಗಲಿರುಳೆನ್ನದೆ ರಾಜಯ್ಯನವರ ಕಾರು ತಿರುಗಿತು. ಹೋಗಬಾರದ ಸಂದಿಯಲ್ಲೆಲ್ಲಾ ನುಗ್ಗಿತು. ಕಾಣಬಾರದವರನ್ನೆಲ್ಲಾ ಕಂಡರು. ಆಡಬಾರದ ಮಾತನ್ನೆಲ್ಲಾ ಆಡಿದರು. ಮಾಡಬಾರದ ಕೆಲಸವನ್ನಂತೂ ಈಗ ಹೊಸದಾಗಿ ಮಾಡಬೇಕಾಗಿರಲಿಲ್ಲ– ಅದನ್ನು ಇಪ್ಪತ್ತು ವರ್ಷದಿಂದ ಮಾಡುತ್ತಲೇ ಬಂದಿದ್ದರು— ಮುಂದೆ

ಮಾಡಲೆಂದೇ ಇಂದು ಇಷ್ಟೆಲ್ಲ ಕಷ್ಟವನ್ನನುಭವಿಸುತ್ತಿದ್ದರು. ಕಾರು ಧೂಳಾಯಿತು, ತಲೆಕೆದರಿತು, ನಿದ್ದೆಯಿಲ್ಲದೆ ಕಣ್ಣು ಕೆಂಪಾಯಿತು. ಮೈಮನಸ್ಸು ಮತ್ತಷ್ಟು ಹೊಲಸನ್ನು ಲೇಪಿಸಿಕೊಂಡಿತು. ಆಗ ಅವರಿಗೆ ಸಿದ್ಧತೆಯೆಲ್ಲಾ ಮುಗಿಯಿತೆಂದೆನಿಸಿತು. ಓ– ನಾಳೆ !

ರಾತ್ರಿ ಹನ್ನೊಂದು ಗಂಟೆಗೆ ಮನೆಗೆ ಬಂದ ರಾಜಯ್ಯನವರು, ತಮಗಾಗಿ ಊಟಕ್ಕೆ ಕಾಯುತ್ತಿದ್ದ ಹೆಂಡತಿಗೆ ಅಷ್ಟು ಬೈದು, ಊಟ ಬೇಡವೆಂದು ಹೇಳಿ ಮುಸುಗಿಕ್ಕೆ ಮಲಗಿದರು. ಮಲಗಿದ ಹತ್ತು ನಿಮಿಷದಲ್ಲಿ ಪುನಃ ಎದ್ದರು. ಎದ್ದು ಯಾರಿಗೋ ಫೋನ್ ಮಾಡಿದರು. ೪–೬ ನಿಮಿಷ ತಗ್ಗಿದ ದನಿಯಲ್ಲಿ ಮಾತಾಡಿದರು. ಟೇಬಲ್ ಲ್ಯಾಂಪ್ ಹಚ್ಚಿ ಏನೇನೋ ಬರೆದರು. ಕಣ್ಣು ತುಂಬಿದ ನೀರನ್ನು ಹಿಂಡುತ್ತ ಹಾಸಿಗೆಯೇರಿದ ಹೆಂಡತಿಯತ್ತ ದುರುಗುಟ್ಟಿ ನೋಡಿ ಮುಸುಗಿಟ್ಟಿದರು ಮತ್ತೆ.

* * * *

ಮರುದಿನ ಸಂಜೆ ರಾಜಯ್ಯನವರ ಮನೆಯಲ್ಲಿ ಸಂಭ್ರಮ, ಹುಚ್ಚು ಸಂತೋಷ. ಹಾಲ್‌ನಲ್ಲಿ ರಾಜಯ್ಯ ಅಚ್ಚುಕಟ್ಟಾಗಿ ಬಟ್ಟೆ ಧರಿಸಿ ಆರಾಮವಾಗಿ ಕುಳಿತಿದ್ದರು. ಸುತ್ತ ಹತ್ತಾರು ಜನ ಆತ್ಮೀಯರು, ಯಶಸ್ಸಿಗಾಗಿ ಶ್ರಮಿಸಿದವರು. ಹಲವರು ಗೆಳೆಯರೂ, ಬಂಧುಗಳೂ, ಸಹೋದ್ಯೋಗಿಗಳೂ (ಪುಡಾರಿಗಳು) ಎಂ. ಎಲ್. ಏ. ಗಳೂ ಬಂದು ಬಂದು ಅಭಿನಂದನೆಗಳನ್ನರ್ಪಿಸಿ ಹೋಗುತ್ತಿದ್ದರು. ರಾಜಯ್ಯನವರು ಮುಖದ ಮೇಲೆ ಭವ್ಯವಾದ (!) ಮುಗುಳುನಗೆಯನ್ನು 'ಧರಿಸಿ' ಕುಳಿತಿದ್ದರು—ನಾಟಕೀಯವಾಡ ಗಾಂಭೀರ್ಯದಲ್ಲಿ ಪಕ್ಕದಲ್ಲಿ ಕುಳಿತ ಸೆಕ್ರೆಟರಿಯನ್ನು ವಿಚಾರಿಸಿದರು :

" ಸಂಜೆಯ ಪತ್ರಿಕೆಯಲ್ಲಿ ಪ್ರಕಟವಾಗಿದೆ ತಾನೆ ? "

" ಓಹೋ, ಮಧ್ಯಾಹ್ನದ ರೇಡಿಯೋ ನ್ಯೂಸ್‌ನಲ್ಲೇ ಪ್ರಚುರಗೊಳಿಸಲಾಯ್ತು. ಎಲ್ಲಾ ಸಂಜೆಯ ಪತ್ರಿಕೆಗಳಲ್ಲೂ ಪ್ರಕಟವಾಗಿದೆ" ಸೆಕ್ರೆಟರಿ ಹೇಳಿದ; ರಾಜಯ್ಯನವರಿಗೆ ತೃಪ್ತಿಯಾಯಿತು. ಮತ್ತೆ ಮಳ್ಳುನಗೆ.

ರಾತ್ರಿ ಒಂಭತ್ತು ಘಂಟೆಯ ಹೊತ್ತಿಗೆ ತೀರ ಆತ್ಮೀಯರು ಮಾತ್ರ ಉಳಿದಾಗ, ಫೋಸ್ಟ್‌ಮ್ಯಾನ್ ಬಂದು ತುಂಬಾ ವಿನಯದಿಂದ ರಾಜಯ್ಯನವರ ಮೇಜಿನ ಮೇಲೆ ಟೆಲಿಗ್ರಾಂಗಳನ್ನು ಸೇರಿಸಿದ. ರಾಜಯ್ಯನವರ ಮುಖ ಮತ್ತಷ್ಟು ಅರಳಿತು. ಸೆಕ್ರೆಟರಿ ಸಂಭ್ರಮದಿಂದ ಬಂದ. ಓದಿಹೇಳಲು ಆಜ್ಞಾಪಿಸಿ ರಾಜಯ್ಯ ಆರಾಮವಾಗಿ ಕೈಕಾಲು ಚಾಚಿ ಕುಳಿತರು.

ಓಓ ಓ– ಅದೆಷ್ಟು ಟೆಲಿಗ್ರಾಂಗಳು ! ಹಿತವಾಗಿತ್ತು ರಾಜಯ್ಯನವರಿಗೆ ಅದನ್ನು ಕೇಳಲು ! ಪ್ರಶಂಸೆಗಳು ಮತ್ತು ಅಭಿನಂದನೆಗಳೇ ತುಂಬಿದ ಟೆಲಿಗ್ರಾಂಗಳನ್ನೆಲ್ಲಾ ಕಾರ್ಯದರ್ಶಿ ಓದಿ ಹೇಳುತ್ತಿರುವಾಗ, ರಾಜಯ್ಯನವರಿಗೆ ಜನ್ಮಸಾರ್ಥಕವಾದ ಅನುಭವವಾಯಿತು.

ಆ ಮೇಲೆ ಭೋಜನಕೂಟ. ತೀರ ಆತ್ಮೀಯರು ಹಾಗು ಒಳಗಿಂದೊಳಗೇ ತೀರ ರಾಜಯ್ಯನವರ ದ್ವೇಷಿಗಳಿಗೆ ಅಂದು ರಾತ್ರಿ ಸಿಹಿಯೂಟ. ರಾಜಯ್ಯನವರ ಜಯ! ಗೆಳೆಯರ ಧ್ವನಿ ಒಮ್ಮೆಲೇ ಬದಲಾಯಿಸಿತ್ತು. ಮಾತಿನಲ್ಲಿ ವಿನಯ ಹಣುಕುತ್ತಿತ್ತು. ರಾಜಯ್ಯ ಮಾತ್ರ ತುಂಬಾ ಋಷಿಯಿಂದ, ಆತ್ಮೀಯತೆ(?)ಯಿಂದ, ಸಲಿಗೆಯಿಂದ (!) ಎಲ್ಲರೊಡನೆ ಮಾತನಾಡಿದರು.

ಮತ್ತೊಮ್ಮೆ ಅಭಿನಂದನೆಗಳನ್ನು ಹೇಳಿ, ಕೈಕುಲುಕಿ ಒಬ್ಬೊಬ್ಬರಾಗಿ ಹೊರಟು ಹೋಗಿ ಸೆಕ್ರೆಟರಿ ಮಾತ್ರವೇ ಉಳಿದಾಗ ರಾಜಯ್ಯ ಉಸಿರೆಳೆದರು.

" ಅಂತೂ ಆಯ್ತಲ್ಲಪ್ಪ. "

" ಆಗದೇ ಉಂಟೇ ಸ್ವಾಮಿ–? ತಾವು–" ಸೆಕ್ರೆಟರಿ ಹೆಲ್ಲು ಕಿರಿದ. ಅಷ್ಟರಲ್ಲಿ ಕಾಲಿಂಗ್‌ಬೆಲ್ ಶಬ್ದ ಮಾಡಿತು. ಬೇಸರವಾದರೂ ರಾಜಯ್ಯ ಬಾಗಿಲು ತೆರೆಯಲು ಸನ್ನೆ ಮಾಡಿದರು. ಸೆಕ್ರೆಟರಿಯೊಂದಿಗೆ ಒಳಗೆ ಬಂದ ಪೋಸ್ಟ್‌ಮ್ಯಾನ್ ಮತ್ತಷ್ಟು ಟೆಲಿಗ್ರಾಂಗಳನ್ನು ಕೊಟ್ಟು ಸಹಿ ಹಾಕಿಸಿಕೊಂಡು ಹೋದ. ದೂರದ ಊರಿಂದ ಬಂಧುಗಳೂ ಮಿತ್ರರೂ ಕಳಿಸಿರಬೇಕು....ರಾಜಯ್ಯನವರ ಕಣ್ಣು ಏಕೋ ಮುಚ್ಚಿಕೊಳ್ಳುತ್ತಿತ್ತು.

ಸುಸ್ತಾಗಿದ್ದ ಸೆಕ್ರೆಟರಿ ಕೇಳಿದ: " ಈಗಲೇ ಒಡೆಯಲೇ ಸ್ವಾಮಿ ?"

ರಾಜಯ್ಯ ಕಣ್ಣು ತೆರೆದು ಹೇಳಿದರು: " ಯಾಕೋ ತುಂಬಾ ನಿದ್ದೆ ಬರ್ತಿದೆ. ನಾಳೆ ಟೈಮಾದರೆ ಓದಿದರಾಯಿತು. ಹೇಗಿದ್ದರೂ ಅವುಗಳಲ್ಲಿರೋದು ಗೊತ್ತೇ ಇದೆ–ಅಭಿನಂದನೆಗಳು ! ನೀನು ಹೋಗಿ ಮಲಗು. "

ಆ ರಾತ್ರಿ ರಾಜಯ್ಯನವರಿಗೆ ತುಂಬಾ ನಿದ್ದೆ....ಆ ಮನೆಯಲ್ಲಿ ನಿದ್ದೆ ಮಾಡದ ಒಂದೇ ಒಂದು ಜೀವವೆಂದರೆ ರಾಜಯ್ಯನವರ ಹೆಂಡತಿ.

* * * *

ಮರುದಿವಸ ಬೆಳಿಗ್ಗೆ ಎದ್ದು ಎಲ್ಲೆಲ್ಲೂ ಸುತ್ತಿದರು ರಾಜಯ್ಯ. ಕೊನೆಯ ಬಾರಿಗೆ ಅವರ ಕಾರು ಮತ್ತೆ ಎಲ್ಲೆಲ್ಲೂ ತಿರುಗಿ, ಮಧ್ಯಾಹ್ನಕ್ಕೆ ಮನೆಗೆ ಬಂತು.

ಮಧ್ಯಾಹ್ನ ಪುಷ್ಕಳವಾದ ಸಿಹಿಯೂಟಮಾಡಿ ಹಾಗೇ ಆರಾಮ ಖುರ್ಚಿಯಲ್ಲಿ ಮೈಯ್ಯೊರಗಿಸಿದಾಗ, ರಾಜಯ್ಯನವರಿಗೆ ಹಿಂದಿನ ದಿವಸದ ಟೆಲಿಗ್ರಾಮುಗಳ ನೆನಪಾಯಿತು. ಹತ್ತಿರದಲ್ಲೇ ನೆಲದ ಮೇಲೆ ರಾಜಯ್ಯನವರ ಕಣ್ಸೂಚನೆಗಾಗಿ ಕಾಯುತ್ತ ಕುಳಿತ ಸೆಕ್ರೆಟರಿಗೆ ಹೇಳಿದರು:

" ಎಲ್ಲಿ— ನಿನ್ನೆ ಕೊನೆಗೆ ಬಂದ ಆ ಟೆಲಿಗ್ರಾಂಗಳನ್ನೆಲ್ಲ ತೆಗೆ."

ಸೆಕ್ರೆಟರಿ ತೆಗೆದ. ಹೆಮ್ಮೆಯಿಂದ, ತೀವ್ರತೆಯಿಂದ ಮಿತಿಮೀರಿದ ಹಿಗ್ಗಿನಿಂದ ಒಂದೊಂದೇ ಟೆಲಿಗ್ರಾಮನ್ನು ಒಡೆದು, ಓದುತ್ತಾ ಹೋದ ಸೆಕ್ರೆಟರಿ.... ಒಂದಾಯಿತು, ಹತ್ತಾಯ್ತು. ಕೊನೆಕೊನೆಗೆ ಓದುಯಾಂತ್ರಿಕವಾಯಿತು. ಅರ್ಥ ಮರೆಯಾಯಿತು. ಒಂದು ಟೆಲಿಗ್ರಾಂ ಬಿಡಿಸಿದವನೇ ಸೆಕ್ರೆಟರಿ ಹಿಂದೆ ಮುಂದೆ ಯೋಚಿಸದೆ, ದೊಡ್ಡ ದನಿಯಲ್ಲಿ ಓದಿದ:

" your mother died start immediatly "

" ಏನು ಏನು " ಎಂದು ರಾಜಯ್ಯ ಆರಾಮು ಖುರ್ಚಿಯಲ್ಲೆ ಮಿಸುಕಿ ಕೇಳಿದರು.

ಸೆಕ್ರೆಟರಿ ಮತ್ತೊಮ್ಮೆ ಇನ್ನೂ ಸ್ಪುಟವಾಗಿ, ನಿಧಾನವಾಗಿ ದನಿಯೇರಿಸಿ ಓದಿ ಹೇಳಿದ: ರಾಜಯ್ಯ ಥಟ್ಟನೆ ಉತ್ತರಿಸಿದರು.

" ಛೀ ಇದೆಲ್ಲಿ ಅಪಸ್ವರ. ಆಚೆಗೆ ಬಿಸಾಕು ಅದನ್ನ. ಮುಂದಿದನ್ನೋದು."

ಸೆಕ್ರೆಟರಿ ಮುಂದಿನದನ್ನೆತ್ತಿಕೊಂಡ. ರಾಜಯ್ಯನವರ ಮುಖ ಮೊದಲಿನಂತೆ ಅರಳಿತು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, **'ಜೂಜು'** ಕತೆಯನ್ನು ವಿಮರ್ಶಿಸಿ ೧೦ ಜನರಿಂದಲೂ **'ಭಾರ್ಗವಿ'** ರೂಪಕವನ್ನು ವಿಮರ್ಶಿಸಿ ೫ ಜನರಿಂದಲೂ ಲೇಖನಗಳು ಬಂದಿವೆ. ಈ ಸಲ ಹೆಚ್ಚು ಜನರು ಈ ಮೇಲಾಟದಲ್ಲಿ ಭಾಗವಹಿಸಿದುದು, ಆಶಾದಾಯಕ ವಿಷಯವಾಗಿದೆ.

'ಜೂಜು' ಕಥೆಯ ವಿಮರ್ಶಕರು :

೧ ಶ್ರೀ. ಎಸ್. ಜಿ. ಘಟಪಣಡಿ, ಲಿಂಗರಾಜ ಕಾಲೇಜ್, ಬೆಳಗಾಂವಿ. ೨ ಶ್ರೀ. ನ. ನಾ. ನರಗುಂದ ಬಿ. ಎ. ಬಾಗಲಕೋಟೆ, ೩ ಕುಮಾರಿ ಸಿ. ಎಚ್. ಲಕ್ಷ್ಮಿ-ಸಾಡಿ, ಮುಟ್ಟತ್ತೋಡಿ (ದ. ಕ.) ೪ ಶ್ರೀ. ಎ. ಎಂ. ಗಿರಿಯಪ್ಪ, ಜಿ. ಟಿ. ಸಿ. ಎಂ. ಧಾರವಾಡ. ೫ ಕುಮಾರಿ ಕೆ. ಎಸ್ ಲಲಿತಾ, ಮಾಳಮಡ್ಡಿ-ಧಾರವಾಡ. ೬ ಶ್ರೀ. 'ಬಾಲಕೃಷ್ಣ' ಕಾಸರಗೋಡು. ೭ ಎಂ. ಗಂಗಾಧರ ಭಟ್ಟ, ನೀರ್ಚಾಲು (ದ. ಕ.) ೮ ಶ್ರೀ. ಪೂವಪ್ಪ ಪರಕಜೆ, ಕನ್ಯಾನ (ದ. ಕ.) ೯ ಶ್ರೀ. ಪುಂಡಲೀಕ ಹಿರೇಬೆಳ್ಳಕಟ್ಟಿ, ಉಪಗುರು, ಹಿರೆ ಬಾಗೇವಾಡಿ. ೧೦ ಶ್ರೀ. ಎನ್. ಕೆ. ಈಶ್ವರಭಟ್ಟ, ಕನ್ಯಾನ (ದ. ಕ).

'ಭಾರ್ಗವಿ' ರೂಪಕದ ವಿಮರ್ಶಕರು :

೧ ಶ್ರೀ. ಜಿ. ಎಂ. ಚೌಧರಿ, ನ್ಯೂ ಬ್ಲಾಕ್ ಹಾಸ್ಟೆಲ್, ಧಾರವಾಡ. ೨ ಶ್ರೀ. ಸತ್ಯನಾರಾಯಣ ಕೃ. ತೊರಗಲ್ಲು, ನಿಪ್ಪಾಣಿ. ೩ ಶ್ರೀಮತಿ ವನಮಾಲಾ, ಕೆ. ಎಚ್. ಕೆ. ಇನ್ಸ್ಟಿಟ್ಯೂಟ್, ಧಾರವಾಡ. ೪ ಒಬ್ಬ ಅನಾಮಿಕ, ಸಿದ್ದಾಪುರ. ೫ ಶ್ರೀ. ಎಸ್. ಎಂ. ಬಿರಾದಾರ ಬಿ. ಎ. II, ವಿಜಯ ಮಹಾವಿದ್ಯಾಲಯ, ವಿಜಾಪೂರ.

*　　*　　*　　*　　*　　*

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕ ಮಂಡಲಿಯವರು ನೋಡಿ, ಪರೀಕ್ಷಿಸಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ :

'ಜೂಜು' ಕಥೆಯನ್ನು ಕುರಿತು ಬಂದ ವಿಮರ್ಶೆಗಳಲ್ಲಿ, **ಕುಮಾರಿ ಸಿ. ಎಚ್. ಲಕ್ಷ್ಮಿ-ಸಾಡಿ** ಅವರದು ಅತ್ಯುತ್ತಮವಾಗಿದೆ. ಶ್ರೀ. ಪೂವಪ್ಪ ಪರಕಜೆ, ಕುಮಾರಿ ಕೆ. ಎಸ್. ಲಲಿತಾ, ಇವರಿಬ್ಬರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. 'ಬಾಲಕೃಷ್ಣ', ಶ್ರೀ. ನ. ನಾ. ನರಗುಂದ, ಶ್ರೀ. ಎಸ್. ಕೆ. ಈಶ್ವರಭಟ್ಟ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುನೆಲ್ಲ ಸಾಮಾನ್ಯವಾಗಿವೆ.

'ಭಾರ್ಗವಿ' ರೂಪಕವನ್ನು ಕುರಿತು ಬಂದ ವಿಮರ್ಶೆಗಳಲ್ಲಿ **ಶ್ರೀ. ಸತ್ಯನಾರಾಯಣ ಕೃ. ತೊರಗಲ್ಲು** ಮತ್ತು **ಶ್ರೀಮತಿ ವನಮಾಲಾ** ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಮಿಕ್ಕ ಮೂವರ ವಿಮರ್ಶೆಗಳು ಉತ್ತಮವಾಗಿವೆ. ಈ ರೂಪಕವನ್ನು ಕುರಿತು ಬಂದ ವಿಮರ್ಶೆಗಳೆಲ್ಲವೂ ಒಳ್ಳೆಯ ವಿಮರ್ಶೆಗಳಾಗಿ ಬಂದುದು ಒಂದು ವಿಶೇಷ. ಹೀಗೆಯೆ ನಮ್ಮ ತರುಣರಲ್ಲಿ ವಿಮರ್ಶಕಶಕ್ತಿ ಬೆಳೆಯಬೇಕೆಂಬುದೇ ಈ ಶಿಕ್ಷಣರಂಗದ ಗುರಿಯಾಗಿದೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **'೫೫ ನೆಯ ನಂಬರಿನ ಮಂಚ'** ಎಂಬ ಕಥೆಯನ್ನಾಗಲಿ, **'ರೊಮ್ಯಾಂಟಿಕ್ ಪೇಕಂಟ್'** ಎಂಬ ಕಥೆಯನ್ನಾಗಲಿ, ವಿಮರ್ಶೆ ಮಾಡಿ ಕಳುಹಬೇಕು. ಮೇಲಾಟಕ್ಕಾಗಿ ಬರುವ ಎಲ್ಲ ವಿಮರ್ಶೆಗಳು ೨೦ ನೆಯ ದಿನಾಂಕದ ವರೆಗೆ ಕಾರ್ಯಾಲಯಕ್ಕೆ ಬರಬೇಕು. ವಿಲಂಬವಾಗಿ ಬಂದುವುಗಳನ್ನು ಮೇಲಾಟಕ್ಕೆ ಸೇರಿಸಿಕೊಳ್ಳಲಿಕ್ಕೆ ಅನನುಕೂಲವಾಗುವುದು.

— ಸಂಪಾದಕ

ಜೂ ಜು

(ಅನುವಾದಿತ ಸಣ್ಣಕತೆಯ ವಿಮರ್ಶೆ)

ಕುಮಾರಿ ಸಿ. ಹೆಚ್. ಲಕ್ಷ್ಮಿ-ಪಾಡಿ ಕಾಸರಗೋಡು (ದ. ಕ.)

ಪ್ರಾಸಂಚಿಕ ಆಗುಹೋಗುಗಳಲ್ಲಿ ಶಿರಃಪ್ರಾಯವಾದುದೆಂದರೆ ಸಂಸಾರ-ಅದರ ನಿರ್ವಹಣೆ. ಪ್ರತಿಯೋರ್ವ ಮಾನವಜೀವಿಯ ಹೋರಾಟವೂ, ವ್ಯವಹಾರವೂ ತತ್ಪ್ರೇರಣೆಯಿಂದಲೇ ನಡೆಯುತ್ತವೆಯೆಂದರೆ ಹೆಚ್ಚಲ್ಲ. ಸಂಸಾರವಲ್ಲಿ ಅಡಕವಾಗಿರತಕ್ಕ ಅವಶ್ಯಕತೆಗಳೇನು ಒಂದೆರಡಲ್ಲ-ಹಲವಾರು. ಅದಕ್ಕಾಗಿಯೇ ಅದನ್ನು 'ಪಾಶ' 'ಮಹಾಸಾಗರ' ಎಂಬಿತ್ಯಾದಿ ವಿಶೇಷಣಗಳನ್ನು ಹಚ್ಚಿ ಕರೆಯುತ್ತಾರೆ. ಮೊತ್ತ ಮೊದಲಾಗಿ ಸಂಸಾರವನ್ನು ನಿರೂಪಿಸಲು ಅತ್ಯಾವಶ್ಯಕವಾದ ಸಾಧನವೇ ಪ್ರೇಮ-ಸಂಸಾರ ಶಕ್ಟದ ಎರಡು ಗಾಲಿಗಳಂತಿರುವ ಗಂಡ-ಹೆಂಡಿರೊಳಗಿನ ಗಾಢವಾದ ಹೊಂದಿಕೆ. ಅಷ್ಟರಿಂದಲೇ ಸಂಸಾರದಲ್ಲಿ ನೆಲೆಗೊಳಿಸಲು ಸಾಧ್ಯವಿಲ್ಲವೆಂಬುದು ಒಪ್ಪತಕ್ಕ ವಿಷಯ. ಎಂತಹ ಅಮರಪ್ರೇಮವಿದ್ದರೂ ಮನುಷ್ಯರಿಗೆ ಅತಿ ಅಗತ್ಯವಾದ 'ಹೊಟ್ಟೆ-ಬಟ್ಟೆ' ಇವುಗಳ ಪರಿಹಾರಕ್ಕಾಗಿ ಯಾವದೂ ಭೌತಿಕ ಪದಾರ್ಥಗಳ ಅರ್ಥಾತ್ ಹಣದ ಆವಶ್ಯಕತೆಯಿರುತ್ತದೆ. ಅದುವರಿಂದಲೇ ದರಿದ್ರನಾದ ಮನುಷ್ಯನು ತನ್ನ ಆಸೆ, ಆಕಾಂಕ್ಷೆ, ಆದರ್ಶಗಳು ಏನಿದ್ದರೂ, ಅವನ್ನು ಈಡೇರಿಸಿಕೊಳ್ಳಲಾರದೆ ಅಧೀರನಾಗುವುದು. 'ಧನಪಿಶಾಚಿ' ಹಿಡಿದ ಇಂದಿನ ಹಣದ ಯುಗಕ್ಕಲ್ಲದೆ ಮತ್ತಾವುದಕ್ಕೆ ಹೊಂದಿಕೆಯಾದೀತು ? ಪ್ರೇಮದ ಕುರುಡು ವಿಶ್ವಾಸದಿಂದ ದಟ್ಟದರಿದ್ರರೂ, ಜಾತಿ-ವಿಜಾತಿಯವರೂ ಆದ ಯುವಕ-ಯುವತಿಯರು ಸಮಾಜವಿರೋಧವನ್ನು ಅಲಕ್ಷಿಸಿ, ವಿವಾಹವಾಗುವುದರಿಂದ, ಸಮಾಜದ ಸಹಾಯ ದೃಷ್ಟಿಯಿಂದ ಹೇಗೆ ವಂಚಿತರಾಗಿ ನೋವಿಗೆ ಗುರಿಯಾಗುವರು, ನಿರಂತರವಾದ ಒಳ್ಳೇ ಬೇಗುದಿಯಿಂದ ವಿಹ್ವಲಚಿತ್ತರಾಗಿ ಎಂತಹ ದುರಂತ ಪರಿಸ್ಥಿತಿಗೀಡಾಗುವರು ಎಂಬುದನ್ನು ಬೆಂಬಿಸುವ ಮುಕುರ-'ಜೂಜು'

ಆರತಿ-ನವೇಂದು—ಇವರ ಪ್ರಣಯ, ವಿವಾಹ, ಜೀವನ ದುರಂತ ಇವೇ ಇದರೊಳಗಿನ ಕಥಾವಸ್ತು.

ಬಡವಳೂ ಗತಿಹೀನಳೂ ಆಗಿದ್ದು, ದೂರದಸಂಬಂಧಿಕರ ಆಶ್ರಯದಲ್ಲಿ ಕಾಲೇಜ್ ಶಿಕ್ಷಣ ಪಡೆಯುತ್ತಿದ್ದ ಆರತಿ, ಪ್ರಣಯಕಲಾಪದಲ್ಲಿ ತೊಡಗಿದಳೆಂದರಿತು, ಅವಳನ್ನು ಕಠಿಣ ವಚನಗಳಿಂದ ಮನನೋಯಿಸಿ ಮನೆಯಿಂದ ಹೊರಡಿಸುವುದು, ಇದರಿಂದಾಗಿ ಅವಳು ಕಾಲೇಜನ್ನು ಬಿಡಬೇಕಾಗಿ ಬಂದುದೇ ಪ್ರಾರಂಭದ ಕಥಾಭಾಗ. ಅವಳಿಗೆ ಅವೆಲ್ಲಕ್ಕಿಂತ ಪ್ರೇಮವೇ ಹೆಚ್ಚಾಗಿದ್ದುದರಿಂದ ಅವನ್ನೆಲ್ಲ ಸಹಿಸಲೇಬೇಕಾಗಿತ್ತು.

ನವೇಂದುವಿಗೂ ಆಶ್ರಯದಾತಳಾಗಿದ್ದ-ಆರತಿಯ 'ಜೀವದ ಗೆಳತಿ ಹಾಗೂ ಸಹಾಯಕಳಾದ-ಮಿರಾಳ ಪತ್ರದ ಮೇರೆಗೆ ಆರತಿ ಅವಳ ಮನೆಗೆ ಆಗಮಿಸುತ್ತಾಳೆ. ನವೇಂದು ಅಲ್ಲಿರುವನೆಂಬುದನ್ನು ಮೀರಾಳಿಂದ ಕೇಳಿ, ಬೆಚ್ಚಿ, ನೊಂದು, 'ಒಂದೇ ಕೋಣೆಯ ಏಕಾಂತ'ದಲ್ಲಿ ಅದೂ ಹಾಸಿಗೆಯಲ್ಲಿದ್ದ ಅವನ ಆರಯಿಕೆಯ ಅಧಿಕಾರ ತನಗಿಲ್ಲವೆಂದು, ನಿರಾಕರಿಸಿದರೂ, ಮೀರಾಳ ಒತ್ತಾಯಪೂರ್ವಕ ಪ್ರೇರಣೆಯಂತೆ 'ಎಂಟುದಿನ ಮೊದಲೇ ಹಾಸಿಗೆ ಹಿಡಿದಿದ್ದ' ನವೇಂದುವಿನ ಆರೈಕೆಗಾಗಿ ಮುಂದೆ ಬರುತ್ತಾಳೆ. ಅವಳು ಕೇಳಿದ ಪ್ರಶ್ನೆಗಳಿಗೆಲ್ಲ ಅವನಿಂದ ದೊರೆಯುವ ಉತ್ತರ-ಅಸಹಾಯಕತೆಯ, ಆತ್ಮನಿಂದೆಯ ಕೊರೆತವನ್ನು ಹೊತ್ತ ಕೂರಲಗಿನಂತಹವುಗಳು. ಆರತಿಯಿಂದ ಅದಕ್ಕೆ ಪ್ರತಿಮಾತು.

ಇಬ್ಬರನ್ನೂ ಗಾಢವಾದ ಪ್ರೇಮಪಾಶವು ಒಂದುಗೂಡಿಸಲು ಹವಣಿಸುತ್ತಿದ್ದರೂ—ದರಿದ್ರನಾದ ನವೇಂದುವು ಮುಂದೊದಗುವ ಹಾನಿಗಳನ್ನು ನೆನೆಸಿ, ವ್ಯಾವಹಾರಿಕ ದೃಷ್ಟಿಯ ಕಠಿಣಶಿಲೆಯಿಂದ ಪ್ರೇಮದ ಸೆಲೆಯನ್ನು ಅದುಮಿಟ್ಟು ಆ ಪಾಶದಿಂದ ಕೊಸರಿಕೊಳ್ಳಲು ಯತ್ನಿಸುತ್ತಾನೆ. ಆರತಿಯೊಡನೆ ಕಟುವಾಗಿ ನುಡಿದು, ಮೀರಾಳ ತರ್ಕಪೂರ್ಣವಾದ ಉಪದೇಶಗಳನ್ನು ಅಲ್ಲಗಳೆಯುತ್ತಾನೆ. ಅವನ ನೋಟಗಳು ಮೇಲ್ನೋಟಕ್ಕೆ ಕಹಿಯಾಗಿಯೂ, ಕಠೋರವಾಗಿಯೂ ತೋರಿದರೂ, ಅದರ ಅಂತರಾಳದಲ್ಲಿ – ದರಿದ್ರದ್ವಯರಾದ ತಾವು ವಿವಾಹಪಾಶವನ್ನು ಬಿಗಿದುಕೊಂಡು, ಅಡಿಗಡಿಗೆ ಕಾಡುವ ಸಮಸ್ಯೆಗಳ ನೋವಿನ ವಿಷಮಣಿಸನ್ನುಣ್ಣುವುದಕ್ಕಿಂತ-ದೂರ ದೂರವಾಗಿದ್ದು ಪರಸ್ಪರರ ಹಾದಿಯನ್ನು ಸ್ವತಂತ್ರವಾಗಿ ಕಂಡುಕೊಳ್ಳುತ್ತಾ' ಎಂದೆಂತೂ ಅನಿರ್ಮಲವಾದ ಪ್ರೇಮದ ಸವಿಯೂಟನನ್ನು ಮನದಲ್ಲಾದರೂ ಸವಿಯಬಹುದಲ್ಲಾ ಎಂಬ ಸದ್ಭಾವನೆಯಿರುವುದು ಸ್ಪಷ್ಟವಾಗುತ್ತದೆ. 'ತಾರುಣ್ಯದ ಪ್ರಜ್ವಲಿಸುವ ಉರಿಯಲ್ಲಿ' ಆರತಿಯ ನಿಷ್ಕಲಂಕ, ಕುಸುಮಕೋಮಲ ಪ್ರೇಮವು ಬಲಿಯಾಗದೆ, ಆದೊಂದು ಪ್ರೀತಿಯಾದರೂ ಚಿರಂತನವಾಗಿ ನಿಲ್ಲಲೆಂಬ ಆದರ್ಶಮನೋಭಾನದಿಂದ ಮದುವೆಯ ಕ್ಷಣಿಕಸುಖವನ್ನು ನಿರಾಕರಿಸುತ್ತಿದ್ದ.

ಆದರೂ ಯಾವುದೋ ಸದುದ್ದೇಶವನ್ನಿಟ್ಟುಕೊಂಡ ಮೀರಾ ತನ್ನ ಕಾರ್ಯ ಸಾಧಿಸಿ, ಅವರನ್ನು ದಾಂಪತ್ಯಕ್ಕೆ ಹಚ್ಚುತ್ತಾಳೆ. ಅಲ್ಲಿಂದ ತೊಡಗಿದ ಅವರ ಸಂಸಾರಜೀವನ ವಿಧವಿಧದ ಬವಣೆಗಳನ್ನು ಎದುರಿಸಿ, ಕರುಣಾಜನಕನಾಗಿ ಸಾಗಿತೆಂಬುದರ ಹೆಚ್ಚಿನಂಶವು ಕಥೆಯಲ್ಲಿ ಪರೋಕ್ಷವಾಗಿ-ಮೀರಾಳ ದಿನಚರಿಯ ನಾಕ್ಯಗಳ ಮೂಲಕ ನಿರೂಪಿಸಲ್ಪಟ್ಟಿದೆ. ಮೀರಾಳ ಡೈರಿಯ-ನವೇಂದು-ಆರತಿಯರ ಮುಕ್ಕಳ ವರ್ಣನೆಗಳಿಂದ ಅವರ ಬಡತನದ ಕರುಣಾಜನಕ ಚಿತ್ರ ಕಣ್ಣ ಮುಂದೆ ನಿಲ್ಲುವಂತೆಯೇ, ಅವರ ವಸತಿ, ಅಲ್ಲಿಯ ಅನೈರ್ಮಲ್ಯತೆಯ ಕುರಿತಾದ ವಾಕ್ಯಗಳಿಂದ— ಅವರ ಕೊಳಕು ಜೀವನ, ಜಾಣತನವರಿಯದ ಸಂಸಾರನಿರ್ವಹಣಕ್ಕಿಂತಲೂ ಹೆಚ್ಚಾಗಿ— ನೊಂದ ಆ ಬಡ-ದಂಪತಿಗಳ ಮನಸ್ಸಾದರೂ ಅದೇ ರೀತಿ ಅವ್ಯವಸ್ಥಿತವಾಗಿರಬಹುದೆಂದು ಚೆನ್ನಾಗಿ ಮನವರಿಕೆಯಾಗುತ್ತದೆ.

ಕಥಾನಾಯಕಿ ಆರತಿ,–ಈ ಎಲ್ಲಾ ಪರಿಸ್ಥಿತಿಗಳನ್ನು ಎದೆಗೊಟ್ಟು ತಾಳಿ, ಮೀರಾಳೊಡನೆ "ಒಳಿತಾಗಿದ್ದೇನೆ" ಎಂದು ನಗು ಮುಖದಿಂದ ನೂತಾಡುವ, ಪ್ರೇಮಕ್ಕಾಗಿ ಸಕಲವನ್ನು ನುಂಗಿಕೊಂಡ ಕಪ್ಪಜೀವಿ ಹಾಗೂ ತ್ಯಾಗಿನಿ. ಮುಖದಲ್ಲಿ ಪ್ರಯತ್ನಪೂರ್ವಕವಾಗಿ ನಗು ತೇಲಿಸಿದರೂ, ಮಾತಿನಲ್ಲಿ ಸಂತಸವನ್ನು ಸೂಸಿದರೂ, ಕರಾಳ ಬಡತನದ ಹೊಡೆತ ಅವಳನ್ನು ಎಷ್ಟರಮಟ್ಟಿಗೆ ನೋಯಿಸಿರುವುದೆಂಬುದನ್ನು — "ಮೊದಲಿಗಿಂತ ನಾವೀಗ ಎಷ್ಟೋ ನೆಮ್ಮದಿಯಾಗಿದ್ದೇವೆ. ಯಾಕೆಂದರೆ ನಮ್ಮ ನಾಲ್ಕು ಮಕ್ಕಳಲ್ಲಿ ಎರಡು ಸಿಡುಬುಬೇನೆಯಿಂದ ತೀರಿಕೊಂಡುವು" - ಎಂದು ಅವಳು ಮೀರಾಳಿಗೆ ಬರೆದ ಪತ್ರದ ಒಂದೇ ಒಂದು ಮಾತಿನಲ್ಲಿ ಹುದುಗಿದ ಭಾವದಿಂದ ಅರ್ಥ ಮಾಡಿಕೊಳ್ಳಬಹುದು, ಮಕ್ಕಳ ಮರಣಕ್ಕಾಗಿ ಮಾತೃಹೃದಯ ನೆಂದಾದರೂ ಹರ್ಷಿಸುವುದು, ನೆಮ್ಮದಿಹೊಂದುವುದು ಸಂಭವವೆ? ಅಂತಹವಳು ಮಾನವನಿಯಲ್ಲ, ಜನ್ಮತಃ ರಕ್ಕಸಿಯಾಗಿರಬಹುದು! ಆದರೆ ಆರತಿಯೆದು ಶಬ್ದದಲ್ಲಿ ಮಾತೃ ನೆಮ್ಮದಿ; ಹಾರ್ದಿಕವಾದುದಲ್ಲ; ಭರಿಸಲಾವ ಹೃದಯ ಬೇಗುದಿಯನ್ನು ಯಾವ ರೀತಿಯಲ್ಲಿ ಹೊರ ಗೆಡವಬೇಕೆಂಬುದು ತಿಳಿಯದಾದ ವಿಕಟಭಾವನೆಯಿಂದ ಭೋರ್ಗರೆಯುವ ಒಂದು ತೆರೆ-ಅಷ್ಟೆ, ಮೀರಾಳಿಗೆ ವ್ಯಥೆ ಕೊಡಬಾರದೆಂಬುದು ಇನ್ನೊಂದು ಉದ್ದೇಶ.

ಮುಂದೆ ಅವರು ಬೇಲಘಾಟದಲ್ಲಿ ವಾಸವಾಗಿರುವರು. ನವೇಂದುವಿನ ಜೀವನವು ನೀಚತಮವಾದ ಮಟ್ಟಕ್ಕಿಳಿದು, ಕುಡಿತ ಜೂಜುಗಳಿಂದ ಆಕರ್ಷಿಸಲ್ಪಟ್ಟಿರುತ್ತಾನೆಂದು ಅವನು ಸಿಟ್ಟಿನಭರದಲ್ಲಿ ಕೈಗೆ ಸಿಕ್ಕವುಗಳಿಂದ ಹೆಂಡತಿಗೆ ಹೊಡೆಯುತ್ತಾನೆ, ಯಾವುದರಿಂದ ಲೆಂಬುದು ಅವನಿಗೆ ನೆನಪಿಲ್ಲ, ಮೀರಾಳಿಗೆ ಅವನೀಯುವ ಉತ್ತರ-ಇತ್ಯಾದಿಗಳ ಹಿನ್ನೆಲೆಯಿಂದ ಊಹಿಸಬಹುದು. ಅವುಗಳ ಕಾರಣವನ್ನು ಲೇಖಕರು ಅವನ ಬಾಯಿಂದಲೇ ಸ್ಪಷ್ಟವಾಗಿ ಹೊರಡಿಸಿರುವರು.

ಅವನ ಹಿಂಸೆಯಿಂದ ಆರತಿಯಲ್ಲಿ ಮರಣದ ಛಾಯೆ ಮೂಡಿರುತ್ತದೆ. ಆದನ್ನು ಮೀರಾ ಕಂಡುಕೊಳ್ಳುತ್ತಾಳೆ. ಆದರೂ ವಿಚಿತ್ರ! ಮೀರಾಳ ಪ್ರಶ್ನೆಗೆ ಅವಳೀಯುವ ಉತ್ತರದಲ್ಲಿ ಪಶ್ಚಾತ್ತಾಪ, ನೋವು ಮೀರಾಳ ಕೃತಿಯ ಬಗ್ಗೆ ಅಸಮಾಧಾನ-ಒಂದನ್ನೂ ತೋರಿಸುವುದಿಲ್ಲ. ಬದಲಾಗಿ ಆ ನೋವಿನಲ್ಲೂ ಸಂತೋಷದಿಂದ ಮೀರಾಳ ಧನ್ಯತೆಯನ್ನೆರ್ಪಿಸುತ್ತಾಳೆ. ಆದರೂ ಅವಳ ಪ್ರೇಮಮೂರ್ತಿಯ ಬಗ್ಗೆ ಅವಳಲ್ಲಿದ್ದ ಮರುಕ ಕಟ್ಟೆಯೊಡೆದು ಹರಿಯಿತು. ಬಾಳನಲ್ಲಿ ಆದಿಯಿಂದ ಅಂತ್ಯದ ತನಕ ಸಂತತವಾಗಿ ನೊಂದರೂ, ಸೋಲನ್ನಪ್ಪದೆ, ಪಶ್ಚಾತ್ತಾಪಪಡದೆ, ಅದಾವುದೋ ಒಂದು ಅಗೋಚರವಾದ ಬೆಳಕಿನ ತುಣುಕನ್ನು ಕಂಡುಕೊಂಡಂತೆ ಅವಳ ಮಾತುಗಳಿಂದ ವ್ಯಕ್ತವಾಗುತ್ತದೆ.

ಸಹೃದಯೆಯಾದ ಮೀರಾ, ಸದುದ್ದೇಶದಿಂದ 'ಪ್ರಣಯಿಗಳಾಗಿದ್ದ ಅವರಿಗೆ' ಬಲವಂತದಿಂದ 'ಪರಿಣಯ' ಮಾಡಿಸಿದ್ದಳು; ಆದರೆ ಅವಳು ಕಟ್ಟಿಕೊಂಡ ಭಾವನೆಯೆ ಕನಸಿನ ಗಂಟಾಗಿಯೇ ಉಳಿದು ತದ್ವಿಪರೀತವಾಗಿ–ನವೇಂದು–ಆರತಿಯರ ಬಾಳು ದುರಂತದ ಹೆಂತವನ್ನು ಹತ್ತಿ ತುತ್ತತುದಿ ಮುಟ್ಟಿತು! ಆ ನೋವಿನಿಂದ ಅವಳಿಗೆ ಆರತಿಯನ್ನು ಬೀಳ್ಕೊಂಡು ಹೊರಟಾಗ ತಾನು ಕೊಲೆಪಾತಕಗೈದವರಂತಹ ಮಹಾಅಪರಾಧಿನಿಯೆಂಬಂತೆ ಭಾಸವಾಗುತ್ತದೆ. ಸರಳ ಸಹೃದಯವಂತಿಯಾದ ಆಕೆಯಲ್ಲಿ ಅಂತಹ ಅಖಂಡ ಪಶ್ಚಾತ್ತಾಪ ಪ್ರಜ್ವಲಿಸಿದ್ದು ಆಶ್ಚರ್ಯವೇನಲ್ಲ. ಸ್ವಭಾವಕ್ಕೆ ತಕ್ಕಹಾಗಿದೆ.

ಯುದ್ಧ ಬಂದ ಮೇಲೆ ನವೇಂದುವು ಆಯಾತ-ನಿರ್ಯಾತದ ಲೈಸೆನ್ಸ್ ಪಡೆದು, ವ್ಯವಹಾರ ನಡೆಸಿ ಆಪಾರ ಹಣ ಸಂಪಾದನೆ ಮಾಡಿ, ಆರತಿಯ ಹಣೆಗೆ ಕುಂಕುಮ ತಿಲಕವಿಡಿಸಿ ವಿವಾಹವಾದ ಅದೊಂದು ಶಿವಾಲಯದ ಜೀರ್ಣೋದ್ಧಾರವನ್ನು ಶ್ರದ್ಧೆಯಿಂದ ಮಾಡಿಸಿದ್ದಾನೆ. ನಿವಾಸಕ್ಕೆ ಭವ್ಯ ಸೌಧ ಕಟ್ಟಿಸಿದ್ದಾನೆ. ಆದರೆ ತನ್ಮಧ್ಯೆ ಆರತಿ ತೀರಿಕೊಂಡಿದ್ದಾಳೆ ಎಂಬ ವಿಚಾರ ಸಂಪೂರ್ಣವಾಗಿ ವೇದ್ಯವಾಗುವುದು ಕಥಾಶಿಖರವನ್ನು ಮುಟ್ಟಿದ ಮೇಲೆಯೇ.

ಸೌಧದ ವಾಸ್ತುಸಮಾರಂಭಕ್ಕೆ ಆಮಂತ್ರಿಸಿ, ಮೀರಾಳನ್ನು ಕರೆದೊಯ್ಯಲು ನವೇಂದು ಕಡೆಯಿಂದ ಕಾರ್ ಬಂದಿತ್ತು. ತನ್ನ ಗೆಳತಿಯ–ನವೇಂದುವಿನ ಅಭಿವೃದ್ಧಿಯಾಗಿದೆಯೆಂಬ ಭಾವ, ಅವಳಲ್ಲಿ ಹರ್ಷೋತ್ಕರುಷಕ್ಕೆಡೆಗೊಟ್ಟಿತ್ತು. ಕಾರಿನಲ್ಲಿ ಓಡುತ್ತಿದ್ದ ಅವಳು–ಆನಂದದ ಭಾವನಾಹರ್ಮ್ಯದಲ್ಲಿ ರಮಿಸುತ್ತಾಳೆ. ಕಾರಿನಿಂದಿಳಿದಾಗ 'ಜೀವದ ಗೆಳತಿ'ಯನ್ನಿದಿರುಗೊಳ್ಳಲು ಆರತಿಯೇ ಬಾರದೆ ಕಾರ್ಯದರ್ಶಿ ಬರುವಾಗಲೇ, ಅವಳು ತೀರಿಹೋಗಿದ್ದಾಳೇನೋ ಎಂಬುದಕ್ಕೆ ಮುನ್ಸೂಚನೆಯಾಗುತ್ತದೆ. ನವೇಂದುವಿನ ಶಯ್ಯಾಗ್ರಹದೆದುರು ಬಂದಾಗ ಮೀರಾಳ ಕಲ್ಪನಾಸೌಧ ಕುಸಿಯುತ್ತದೆ. ಕುಡಿದು ಮತ್ತುನಾಗಿ ಬಿದ್ದ ಅವನ ಅವಸ್ಥೆ ಭಯಾನಕವಾಗಿ ತೋರುತ್ತದೆ. ಅಲ್ಲಿ ಅವನ ಹೊಸ ಹೆಂಡತಿಯ ಆವತರಣಿಕೆಯಾಗುವುದರಿಂದ ವಾಚಕರಲ್ಲಿ ಉಂಟಾದ ಆರತಿಯ ಕುರಿತಾದ ಸಂದೇಹಕ್ಕೆ ಮತ್ತೂ ಪುಷ್ಟಿ ದೊರೆಯುತ್ತದೆ.

ಆ ಯುವತಿ ಕುಳಿತುಕೊಳ್ಳ ಹೇಳಿದರೂ ಕುಳಿತುಕೊಳ್ಳದೆ, ಅಲ್ಲಿರುವ ದೊಡ್ಡ ಫೋಟೋದ ವಿಚಾರ ಕೇಳಿ, ಆರತಿ ಮಡಿದುಹೋದ ಳೆಂಬುದನ್ನರಿತು ಮನನೊಂದು ಅಲ್ಲಿ ನಿಲ್ಲಲಾರದೆ ಹೊರಟು ನಡೆಯುತ್ತಾಳೆ. ತಾನೇ ಅವಳ ಏಕಮಾತ್ರ ಆತ್ಮೀಯಳಾಗಿದ್ದು, ಅವಳ ತಾಯಿಯ ಹೊಣೆ ಹೊತ್ತವಳಾದ್ದರಿಂದ, ಏನಿದ್ದರೂ ಎಲ್ಲವನ್ನೂ ಆರತಿ ತನ್ನಲ್ಲಿ ಹೇಳಿಯೇ ಹೇಳುತ್ತಾಳೆಂಬ ನಂಬುಗೆ ಮೀರಾಳಿಗೆ–ಅದು ಯಥಾರ್ಥವು ಆಗಿತ್ತು. ಆದುದರಿಂದಲೇ ಅಲ್ಲಿಂದ ಹಿಂತಿರುಗಿದ ಅವಳಿಗೆ — ಫೋಟೋದಿಂದ ಇಳಿದು ಬಂದ ಎರಡು ಕಣ್ಣುಗಳು ತನ್ನನ್ನು ಹಿಂಬಾಲಿಸುವಂತೆ ಭಾಸವಾಗುವುದು— ಭಾವನಾಪೂರ್ಣವಾಗಿದೆ.

ಕಥಾವಸ್ತುವು ಸಂಭವನೀಯವಾಗಿದ್ದು ಉತ್ತಮವಾಗಿದೆ. ವ್ಯಾವಹಾರಿಕ ಜಗತ್ತಿನಲ್ಲಿ ಬರೀ ಪ್ರೇಮದ ಆದರ್ಶದಿಂದ ನೆಮ್ಮದಿಯಾಗಿ ಬಾಳಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಆ ಜಾಡಿನ್ನೇ ಹಿಡಿದು ಸಮಾಜವನ್ನು ವಿರೋಧಿಸಿದವರಿಗೆ, ಸಮಾಜ-

ಬಾಹಿರತೆ, ಅಸಹನೀಯ ಕಷ್ಟಗಳು, ಜೀವನದುರಂತತೆಗಳೇ ಕಟ್ಟಿಟ್ಟ ಗಂಟು ಎಂಬುದನ್ನು ಮನಗಾಣಿಸುವ ಯತ್ನ — ನವೇಂದು-ಆರತಿಯರ ಪಾತ್ರಗಳ ಮೂಲಕ ಕತೆಯುದ್ದಕ್ಕೆ ನಡೆದಿದೆ. ಜಗತ್ತಿನಲ್ಲಿ ಎಂತಹವರಿಗೂ ಒಬ್ಬಿಬ್ಬರಾದರೂ ಹಿತರಿಲ್ಲದೇ ಇರುವುದು ಅಪರೂಪ. ಅಂತೆಯೇ ಆ ದರಿದ್ರ ಪ್ರಣಯಿಗಳಿಗೆ ಮೀರಾ ಒಬ್ಬಳಾದರೂ ಹಿತ-ಚಿಂತಕಳಿದ್ದಳು. ಆದರೆ ಒಬ್ಬಳ ಸಹಾಯದಿಂದ ಒಂದು ಸಂಸಾರ ವೆನ್ನತ್ತಲು ಅಸಾಧ್ಯವೆಂದು ಬೇರೆ ಹೇಳಬೇಕಾಗಿಲ್ಲ. ಅದರ ನಿರೂಪಣೆ ಮೀರಾಳ ಪ್ರಯತ್ನ ವಿಫಲತೆಯಲ್ಲಿದೆ.

ಕಥೆಯ ಅಸ್ತಿತ್ವವು ನವೇಂದು-ಆರತಿಯರ ಪಾತ್ರದ್ದಾದರೂ, ಸೂತ್ರಚಾಲಕಳಾದ ಮೀರಾಳ ಪಾತ್ರವು ಪ್ರಾಮುಖ್ಯತೆ ಹಾಗೂ ಅನಿವಾರ್ಯವುಳ್ಳದ್ದಾಗಿದೆ. ಹಣಿಕೆಣಿಕೆ ಆಚೀಚೆ ತಲೆಯಿತ್ತುವ ಇತರ ಪಾತ್ರಗಳು ಕಥಾಪೋಷಣೆಗೆ ಸಹಾಯವಿದ್ದುದರಿಂದ ಅವಶ್ಯಕವಾಗಿವೆ.

ಅನುವಾದಿತ ಕತೆಯಾದ್ದರಿಂದ ಕೆಲವಡೆಯಲ್ಲಿ ಒಂದೊಂದು ವಾಕ್ಯಗಳು ಫಕ್ಕನೇ ಅರ್ಥಮಾಡಿಕೊಳ್ಳಲಾರದಂತಿದ್ದು, ಓದಿನ ಓಟಕ್ಕೆ ಕಿಂಚಿತ್ತು ತೊಡಕನ್ನುಂಟುಮಾಡುವುವು.

ಅಲ್ಲದೆ— ಮೀರಾ, ಹೆಚ್ಚುಕಡಿಮೆ ತನ್ನ ಪ್ರಾಯದ ಮಟ್ಟಕ್ಕೆ ಬರಬಹುದಾದ ಪ್ರೌಢೆ ಆರತಿಯನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಸಂತೈಸಿಸುವುದು ತುಸು ಅಸಹಜವಾಗಿ ತೋರುತ್ತದೆ. ಮತ್ತು — ಅವರಿಬ್ಬರ ವಿವಾಹಬಂಧಕ್ಕೆ ಪ್ರೇರಕಳಾದ ಮೀರಾ, ತಾನು ಮಾಡಿದ್ದೆಲ್ಲ ಅನ್ಯಾಯವಾಯಿತೋ ?- ಎಂದು ಪ್ರಶ್ನಿಸಿರುವಾಗ ಅದಕ್ಕೆ ಆರತಿಯ ಉತ್ತರ ಇಂತಿದೆ: ಒಂದು ಕಗ್ಗತ್ತಲೆಯ ಗವಿಯ ಬಾಗಿಲಲ್ಲಿ ಅನುಮಾನಿಸುತ್ತ ನಿಂತಿದ್ದೆ. ನೀನು ಕುತ್ತಿಗೆಗೆ ಕೈಕೊಟ್ಟು ಒಳಗೆ ದಬ್ಬಿದಿ. ಅದರಾಚೆ ನನಗೆ ಬಂಗಾರದ ಕಣಿಯೇ ಸಿಕ್ಕಿತು"-ಇದರಲ್ಲಿ ''ಕುತ್ತಿಗೆಗೆ ಕೈಕೊಟ್ಟು ಒಳಗೆ ದಬ್ಬಿದಿ" ಎನ್ನುವುದು ಆ ಸಂದರ್ಭಕ್ಕೆ ಅನುಗುಣವಾಗಿಲ್ಲ; ಅವಳ ಭಾವನೆಗೂ ಪೋಷ ಬರುತ್ತಿದೆ; ಫಕ್ಕನೆ ಓದುವಾಗ ಅವಹೇಳನ ಮಾಡುವುದೋ ಎನಿಸುತ್ತದೆ. 'ಬಂಗಾರದ ಕಣಿ' ಸಿಕ್ಕಿದಾಕೆ ಹಾಗೆ ನುಡಿಯುವುದಕ್ಕಿಂತ ''ಪ್ರೋತ್ಸಾಹಿಸಿದಿ" ಎಂಬರ್ಥದಲ್ಲಿ ನುಡಿದಿದ್ದರೆ ಸಮಂಜಸವಾಗಿತ್ತು. ಅಲ್ಲೊಂದು, ಇಲ್ಲೊಂದು ಇಂತಹ ಅನುಚಿತತೆಗಳು ಕಂಡುಬರುತ್ತವೆ.

ವಾಸ್ತು ಸಮಾರಂಭಕ್ಕೆ ಬರುವ ಮೊದಲು ಮೀರಾಳಿಗೆ ಆರತಿಯ ಮರಣ ತಿಳಿದಿಲ್ಲವೆಂಬುದು ಸ್ಪಷ್ಟವಾಗಿದೆ. ತಮ್ಮ ದಾಂಪತ್ಯಕ್ಕೆ ಸಹಾಯಕಳಾದ ಹಿತಚಿಂತಕಿ ಮೀರಾಳಿಗೆ ನವೇಂದು ಆ ವಿಷಯವನ್ನು ಯಾಕೆ ತಿಳಿಸಲಿಲ್ಲವೆಂಬ ಪ್ರಶ್ನೆ ಉದ್ಭವಿಸಲೆಡೆಯಿದೆ 'ಮರಿ-ತಿರಬಹುದೇ' ಎಂದರೆ ವಾಸ್ತು ಸಮಾರಂಭಕ್ಕೆ ಆಮಂತ್ರಿಸಿದ್ದಾನೆ. ಆದರೂ ಅದಕ್ಕೊಂದು ರೀತಿಯ ಸಮಾಧಾನವೆಂದರೆ – ಪೊರ-ನೋಟಕ್ಕೆ ಅವನು ಅಭಿವೃದ್ಧಿಗೊಂಡಿದ್ದರೂ, ಅಂತರಂಗದ ವಿಶೇಷವಾದ ಬಿರುಗಾಳಿಗೆ ಬರೆಯಲ್ಪಟ್ಟ, ವಿಕಲ್ಪಹೃದಯಿಯಾಗಿ ಕರ್ತವ್ಯ ಪೆಡೆಗೆ ಕಣ್ಣಿಲ್ಲದೆ ಹಾಗೆ ಮಾಡಿರಬಹುದು-ಎಂಬುದು.

ಗಂಡುಸು ಸುಖವನ್ನು ಅತಿಯಾಗಿ ಹಾರೈಸುತ್ತಿದ್ದರೂ, ಆರ್ಥಿಕ ಬಲವಿಲ್ಲದೆ ಒಂದಾಗುವ ಕಷ್ಟಪೋಷಣೆಯ ಹೊಣೆಗಾರಿಕೆ ನೆನೆದಾಗ ಆ ಆಸೆಗಳನ್ನು ಬದಿಗೊತ್ತುತ್ತಾನೆ - ಎಂಬುದಕ್ಕೆ ನವೇಂದುವೇ ಉತ್ತಮ ನಿದರ್ಶನ.

ಇಬ್ಬರೊಳಗೂ ಗಾಢವಾದ ಪ್ರೇಮವಿತ್ತೆಂದರೂ ನವೇಂದುವಿನಿಂದ ಅದು ಹೊರಗೆ ಅಚ್ಚಾಗಿ ಪ್ರಕಟವಾಗುವುದಿಲ್ಲ. ಅದೂ ಅಲ್ಲದೆ ಅಂತಹ ಪ್ರಣಯಾರಾಧ್ಯಮೂರ್ತಿಯನ್ನೇ ಮದುವೆಯಾದ ಆತನಿಗೆ ಇತರ ತೊಂದರೆ ಹೊಡೆತಗಳೇನೂ ಬಂದರೂ, ತುಸುವಾಗಿ ನೆಮ್ಮದಿಯಾಗಿ ಸಂಸಾರ ಸಾಗಿಸಬಹುದಾಗಿತ್ತು. ಹಾಗಿದ್ದರೂ ಮನಸ್ಸನ್ನು ಕೆಡಿಸಿಕೊಂಡು ವಿಪರೀತವಾಗಿ ವರ್ತಿಸುವುದು ಆಶ್ಚರ್ಯಕರ. ಅವನ ಗಾಢವಾದ ಪ್ರೇಮದ ಬೆಲೆ ಹರಿಹೆಂಚಾಗಿದೆ. ಆ ವಿಭಾಗದಲ್ಲಿ ಆರತಿ ಯಶಸ್ವಿಯಾಗಿದ್ದಾಳೆ. ಎಂತಹ ನೋವನ್ನಂತರೂ ಪ್ರೇಮದಲ್ಲಿ ಕಡೆಯತನಕ ಕಾಯ್ದುಕೊಂಡಿದ್ದಾಳೆ. ವಿರಸಕ್ಕೆ ಅವಳು ಕಾರಣಳಾಗಲಿಲ್ಲ.

ಕತೆಯಲ್ಲಿ ನವೇಂದು ದರಿದ್ರನೆಂಬುದನ್ನು ಮಾತ್ರವಲ್ಲದೆ ಅವನ ವಿದ್ಯೆ, ರೂಪ, ಪ್ರತಿಭೆ, ಎಷ್ಟು ಎಂತಹದೆಂಬ ಸಂಕೇತವಿಲ್ಲ. ಕಾಲೇಜ ವಿದ್ಯಾರ್ಥಿನಿಯಾದ ಆರತಿ - ವಿದ್ವತ್ತು, ರೂಪ, ಮೇಧಾವಿತನ, ಸಾಮಿಪ್ಯ - ಇವಾವುದರ ಹೆಚ್ಚಳವೂ ಇಲ್ಲದೊರ್ವ ದರಿದ್ರದಲ್ಲಿ ಅಷ್ಟೊಂದು ಪ್ರೇಮವನ್ನು ನೆಟ್ಟಳೆಂದರೆ ಅದೊಂದು ವಿಧಿ ಸಂಯೋಜಿತ ಸಲಿತವೆಂದೇ ಸಮಾಧಾನ.

ಮೀರಾ-ನವೇಂದು – ಇವರೊಳಗಿನ ಸಂಬಂಧ ಎಂತಹದೆಂದು ಸ್ಪಷ್ಟವಿಲ್ಲ. ಅನ್ಯ ಯುವಕನನ್ನು ಆಕೆ ಅಷ್ಟು ವಾತ್ಸಲ್ಯದಿಂದ ನೋಡಬೇಕಾದರೆ–ಸಂಬಂಧಿಕನೋ, ಕೇವಲ ಪರಿಚಿತನೋ ಏನೆಂದು ತಿಳಿದುಬಂದಿದೆ.

ಪ್ರಥಮದಲ್ಲಿ ಆರತಿ ಮನೆಯಿಂದ ಹೊರಡುವಾಗ ಅವರಾಡುವ ಮಾತುಗಳು – ಇತರರನ್ನು ಜರೆಯಲು ಹೇಗೆ ಎಲ್ಲರೂ ಒಂದಾಗಿ ಮುಂದಾಗುವರೆಂಬುದರ ವಾಸ್ತವಿಕ ಚಿತ್ರಣ. ಅವಳಲ್ಲಿ ನೋವಿತ್ತು. ಪಶ್ಚಾತ್ತಾಪವಿರಲಿಲ್ಲ. ಎಂದುದು ಅವಳ ಭಾವನೆಯನ್ನು ಎತ್ತಿ ತೋರಿದಂತಿದೆ.

ಶೈಲಿಯು ವಿಶೇಷ ಆಕರ್ಷಕನಾಗಿಲ್ಲದಿದ್ದರೂ, ಸರಳವಾಗಿ ಮನಮುಟ್ಟುವಂತಿದೆ. ಪಾತ್ರಗಳು ಉಚಿತ ರೀತಿಯಿಂದ ಹಿತಮಿತವಾಗಿ ಪೋಣಿಕೆಗೊಂಡಿವೆ. ಶುದ್ಧವಾದ ಭಾಷೆ ಹಾಗೂ ಮಾತುಗಳನ್ನೇ ಕತೆಯಲ್ಲಿ ಬಳಸಿದೆ. 'ಸಂನ್ಯಾಸಿಯನ್ನು ಅಸ್ಪಿದರೆ ಮೈಯೆಲ್ಲಾ ಬೂದಿ' 'ಊಟಸಿಕ್ಕರೆ ನವರಾತ್ರಿ ಇಲ್ಲದಿದ್ದರೆ ಶಿವರಾತ್ರಿ' ಮೊದಲಾದ ನಾಣ್ನುಡಿಗಳೂ, ಹುಚ್ಚುನಾಯಿಯನ್ನೋಡಿಸುವಂತೆ'— ಇಂತಹ ಉಪಮೆಗಳು ಸಂದರ್ಭಕ್ಕನುಸಾರವಾಗಿ, ಅರ್ಥಪೂರ್ಣವಾಗಿ ಪೋಣಿಸಲ್ಪಟ್ಟಿರುವುವು.

ಸಂಭಾಷಣೆಗಳ ಕ್ರಮ ಚೆನ್ನಾಗಿದೆ. ಕತೆಹೇಳುವ ರೀತಿಯಲ್ಲಿ ಬೆಳೆವಣಿಗೆಯನ್ನು ಮಾಡದೆ, ಮೀರಾಳ ಡೈರಿಯಿಂದ ಉದ್ಧರಿಸಿದ

[III ನೆಯ ಪುಟ ನೋಡಿರಿ]

ಸಾದರ ಸ್ವೀಕಾರ

೩೭. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ

(ವಿವೇಚನಾತ್ಮಕ ಪುಸ್ತಕ) ಬರೆದವರು ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಅವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಪ್ರಚಾರೋಪನ್ಯಾಸಮಾಲೆಯ ಪ್ರಕಾಶನ ಕ್ರೂ. ಆ. ೯೦ ಪುಟಗಳು ಬೆಲೆ: ೦೦-೫೫.

ಪುಸ್ತಕವು ಚಿಕ್ಕದಾಗಿದ್ದರೂ, ಪ್ರತಿಯೊಬ್ಬ ಸಾಮಾಜಿಕನೂ ಇಂದು ಅವಶ್ಯವಾಗಿ ಅರಿತುಕೊಳ್ಳಬೇಕಾದಂತಹ ಮಹತ್ವದ ವಿಷಯಗಳಿಂದ ಕೂಡಿದೆ. ಪ್ರಾಚೀನ ಸಮಾಜ ಶಾಸ್ತ್ರಜ್ಞನಾದ ಮನು ಮಹರ್ಷಿ, ಎಷ್ಟೋ ಸಾವಿರ ವರ್ಷಗಳ ಹಿಂದೆ ಬದುಕಿ ಬಾಳಿದವನಾದರೂ ಆತನು ಹೇಳಿದ ಮಾನವ ಜೀವನಶಾಸನಗಳು ದೇಶ-ಕಾಲಗಳ ವ್ಯತ್ಯಾಸ ವನ್ನರಿಯದೆ ಸರ್ವರಿಗೂ ಶಾಶ್ವತ ಕಲ್ಯಾಣಕಾರಿಯೆನಿಸುವಂತಹವಾಗಿವೆ. ನಮ್ಮ ಸಮಾಜ ಇಷ್ಟೊಂದು ಪತನಹೊಂದಿರುವದಕ್ಕೆ ಕಾರಣ, ಮನುವಿನ ಧರ್ಮಶಾಸನಗಳ ಕಡೆಗೆ ನಮ್ಮ ಜನತೆ ದುರ್ಲಕ್ಷಿಸುತ್ತ ಬಂದುದೇ ಆಗಿದೆ, ಮನುವು ಎಂತಹ ತ್ರಿಕಾಲಜ್ಞನಿದ್ದನೆಂಬುದನ್ನು, ಈ ಪುಸ್ತಕದಿಂದ ನಮ್ಮ ಜನ ತಕ್ಕಮಟ್ಟಿಗಾದರೂ ತಿಳಿದುಕೊಳ್ಳ ಬಹುದು.

೩೮. ಸಂಗ್ರಹ ರಾಮಾಯಣ

(ಮೂಲ ಸಂಸ್ಕೃತ ಗ್ರಂಥದ ಕನ್ನಡ ರೂಪ) ಲೇಖಕರು ಶ್ರೀಮಾನ್ ಬನ್ನಂಜೆ ಗೋವಿಂದಾಚಾರ್ಯರು, ಉಡುಪಿ, ಧಾರವಾಡದ ಮಿಂಚಿನಬಳ್ಳಿಯ ೨೨ನೆಯ ವರ್ಷದ ೧೩ನೆಯ ೨೩ನೆಯ ಕುಡಿ. ಕ್ರೌ. ಆ. ೨೫೨ ಪುಟಗಳು ಬೆಲೆ ಉತ್ತಮ ಪ್ರತಿಗೆ ೪ರೂ; ಸಾಮಾನ್ಯ ಪ್ರತಿಗೆ ಮೂರು ರೂಪಾಯಿ.

ಶ್ರೀಮನ್ಮಧ್ವಾಚಾರ್ಯರ ಶಿಷ್ಯ ಪರಂಪರೆಗೆ ಸೇರಿದ ಶ್ರೀಮನ್ನಾರಾಯಣ ಪಂಡಿತಾಚಾರ್ಯರು, ಮೂಲ ರಾಮಾಯಣದ ಮಹಾ ಕೃತಿಯನ್ನು, ಸಂಸ್ಕೃತ ಭಾಷೆಯಲ್ಲಿಯೇ ಹದವರಿತು ಸಂಗ್ರಹಿಸಿದ್ದಾರೆ. ಆ ಗ್ರಂಥದ ವಿಷಯಗಳನ್ನು ಪ್ರಮಾಣವಾಗಿ ಇರಿಸಿಕೊಂಡು, ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಕನ್ನಡದಲ್ಲಿ ಇದನ್ನು ಬರೆದಿದ್ದಾರೆ. ಲೇಖಕರೇ ತಮ್ಮ ಮುನ್ನುಡಿಯಲ್ಲಿ "ಇದು ಸಂಗ್ರಹ ರಾಮಾಯಣ'ದ ಅನುವಾದ ಎನ್ನುವುದಕ್ಕಿಂತ, ಅದನ್ನು ಆಧರಿಸಿ ಬರೆದ ಕೃತಿ-ಎಂದಿಷ್ಟೇ ಹೇಳುವದು ಜೆನ್ನು" ಎಂದಿದ್ದಾರೆ. ಹೀಗೆ ಮಾಡುವುದಕ್ಕಿಂತ ಮೂಲದ ಸಂಪೂರ್ಣ ಅನುವಾದ ಮಾಡಿದ್ದರೆ ಹೆಚ್ಚು ಚೆನ್ನಾಗುತ್ತಿದ್ದಿತು. ಪ್ರಾಚೀನ ಪಂಡಿತರೊಬ್ಬರ ಸಂಪೂರ್ಣ ಕೃತಿಯನ್ನು ಕನ್ನಡದಲ್ಲಿ ಇಳಿಸಿದಂತಾಗುತ್ತಿತ್ತು. ಅದರಿಂದ ಈ ಪುಸ್ತಕಕ್ಕೊಂದು ವಿಶೇಷ ಮಹತ್ವ ಬರುತ್ತಿತ್ತು. ಈಗ ಹಾಗಾಗಿಲ್ಲವೆಂದು ಲೇಖಕರೇ ಒಪ್ಪಿಕೊಂಡಿರುವದನ್ನು ನೋಡಿದರೆ ರಾಮಾಯಣದ ಕಥೆಯನ್ನು ಹೇಳುವುದಕ್ಕೆ ಈ ಮೊದಲೇ ಕನ್ನಡದಲ್ಲಿ ಬಂದಿರುವ ಪುಸ್ತಕಗಳ ಸಾಲಿನಲ್ಲಿ ಇದನ್ನೂ ಒಂದು ಇರಿಸಬೇಕಾಗುವದು.

೩೯. ಬಸವರಾಜ ವಾಚನಾಲಯ ಗದಗ

(೫೯ನೆಯ ವರ್ಷದ ವರದಿ ಲೆಕ್ಕಪತ್ರ) ಗೌ.ಸ. ಶ್ರೀ. ಸದಾಶಿವ ವಿ. ಬಡಿಗಣ್ಣವರ, ಪೂ. ಕ್ಯಾ. ೧೭ ಪುಟಗಳು.

ಗದಗಿನ ಶಹಾಪೂರ ಪೇಟೆಯ ವೀರಶೈವ ತರುಣ ಸಂಘದಿಂದ ಸ್ಥಾಪಿತವಾದ ಈ ವಾಚನಾಲಯವು ೫೯ ವರ್ಷದಿಂದ ನಡೆದುಕೊಂಡು ಬಂದುದೇ ಒಂದು ಸಂತೋಷದ ಸಂಗತಿ. ಮುಂದೆಯೂ ಇದು ಬಹುಕಾಲ ಬಾಳಿ, ಕನ್ನಡಿಗರಲ್ಲಿ ಸಂಸ್ಕೃತಿ ಸಂವರ್ಧನೆಯ ಕಾರ್ಯ ಮಾಡುತ್ತಿರಲೆಂದು ಹಾರೈಕೆ.

೪೦. ಕರ್ಮವೀರ

(ವಾರಪತ್ರಿಕೆಯ ದೀಪಾವಳಿಯ ವಿಶೇಷ ಸಂಚಿಕೆ) ಸಂಪಾದಕರು ಶ್ರೀಮಾನ್ ಹ. ರಾ. ಪುರೋಹಿತ ಎಂ. ಎ. ಅವರು 'ಕರ್ಮವೀರ' ಕಾರ್ಯಾಲಯ, ಹುಬ್ಬಳ್ಳಿ. ಡೆ. ೧೭ ೨೦೦ ಪುಟಗಳು. ಬೆಲೆ: ೧. ೫೦.

ನಾಡಿನಲ್ಲಿಯ ಹಿರಿಯ ಸಾಹಿತ್ಯಕರಿಂದ ಬರೆಯಿಸಿದ ವಿವಿಧ ವಿಷಯಕ ಲೇಖನ ಪ್ರಬಂಧಗಳೂ, ಕಥೆ-ನಾಟಕ-ಕವಿತೆಗಳೂ ಇದರಲ್ಲಿ ಪ್ರಕಟವಾಗಿವೆ, ಪದ್ಧತಿಯಂತೆ ವರ್ಷಭವಿಷ್ಯವನ್ನೂ ಇದರಲ್ಲಿ ಕೊಡಲಾಗಿದೆ. ಈ ಸಂಚಿಕೆಯ ಅಂತರಂಗವೆಲ್ಲವೂ ಬೆಲೆಬಾಳುವಂತಹದಾಗಿದ್ದು, ಎಲ್ಲರ ಸಂಗ್ರಹದಲ್ಲಿಯೂ ಇರಲೇಬೇಕೆನಿಸುವಂತಹ ವಿಶೇಷ ಸಂಚಿಕೆ ಯಿದಾಗಿದೆ.

೪೧. ವೀರಶೈವ ಜನರಲ್ ಲಾಯಬ್ರರಿ ಗದಗ

(೩೮ನೆಯ ವರ್ಷದ ವರದಿ) ಗೌ. ಕಾರ್ಯದರ್ಶಿಗಳು ಶ್ರೀ ಎಸ್. ಎನ್. ಗದಗ. ಕ್ರೌ. ಆ. ೪೨ ಪುಟಗಳು.

ಈ ಸಂಸ್ಥೆಯ ಕಾರ್ಯ ತುಂಬ ಉತ್ಸಾಹದಿಂದ ನಡೆದಿದಯೆಂಬುದಕ್ಕೆ ವರದಿಯ ಪ್ರತಿಯೊಂದು ಪುಟವೂ ಸಾಕ್ಷ್ಯ ನುಡಿಯುತ್ತಲಿದೆ. ಈ ಲೈಬ್ರರಿಯನ್ನು ಪ್ರಮಾಣಗ್ರಂಥ ಸಂಗ್ರಹಾಲಯವನ್ನಾಗಿಸುವಂತಹ ಆರ್ಥಿಕ ಅನುಕೂಲತೆಯಿದಕ್ಕಿದೆ. ಸಂಚಾಲಕರು ಆ ದಿಶೆಯಲ್ಲಿ ಕಾರ್ಯಮಾಡಿ, ಗದುಗಿನಲ್ಲಿಯ ಹೆಚ್ಚಿನ ಅಭ್ಯಾಸಿಗಳಿಗೆ ಸರಿಯಾದ ಅವಕಾಶ ಸಿಕ್ಕುವಂತೆ ಮಾಡಬೇಕು, ಗ್ರಂಥಗಳ ಸಂಪತ್ತಿಯಿಂದಲೇ ಗ್ರಂಥಾಲಯಗಳ ಬೆಲೆ ಹೆಚ್ಚುವುದು.

೪೨. ಚಾಣಕ್ಯ

(ಕನ್ನಡ ಮಾಸಪತ್ರಿಕೆ), ಸಂಪಾದಕರು ಶ್ರೀ ಸಿ. ಎಂ. ದೇವೇಂದ್ರನಾಯಕ, ಚಾಣಕ್ಯ ಪಬ್ಲಿಕೇಶನ್, 'ಕಾವ್ಯಕುಟೀರ' ಎಲೆಗಾರ ಓಣಿ, ಧಾರವಾಡ. ಕ್ರೌ. ೧೭ ೨೮ ಪುಟಗಳು ವಾ. ಚಂ. ೫-೫೦.

ಕಳೆದ ತಿಂಗಳಿಂದಲೇ ಪ್ರಾರಂಭವಾಗಿರುವ ಈ ಮಾಸಪತ್ರಿಕೆಯು ಇನ್ನೂ ಹಸುಮಗು. ಆರೋಗ್ಯವಾಗಿ ಬೆಳೆದು ಬಾಳಿ, ಸಂಪಾದಕರ ಸಂಕಲ್ಪದಂತೆ, ಸಾಹಿತ್ಯ ಸೇವೆಯನ್ನು ಮಾಡಲಿ!

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕೆ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ನಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳವು. ಅರ್ಥ–ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತಳಗs — ಚೆಂದs ಗಂಧs ಹರಡೈತವ್ವಾ!

ಎಂಬ ಆನಂದಾನುಭವವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಆ. ೮೦ ಪುಟಗಳು ಬೆಲೆ ರೂ. ೧. ೨೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.